ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೨೫

ಕಾವ್ಯ ಸಾಹಿತ್ಯ : ಭಾಗ-2



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೨೫ : ಕಾವ್ಯ ಸಾಹಿತ್ಯ : ಭಾಗ-೭

❖

- ಕೊಮಾರ ರಾಮಯ್ಯನ ಚರಿತ್ರೆ
- ಬಾಲರಾಮನ ಸಾಂಗತ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಹನುಮಂತ ಮೇಲಿನಮನಿ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI

VOLUME - 25 : KAVYA SAHITY : BHAGA-7

Edited by : Dr. Hanumant Melinamani, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2020
Pages : xxxvi + 1178=1214

Copies: 1000
Price Rs: 600/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : **The Print Point**, No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೫-ಕಾವ್ಯ ಸಾಹಿತ್ಯ : ಭಾಗ-೭

ಸಂಪಾದಕರು : ಡಾ. ಹನುಮಂತ ಮೇಲಿನಮನಿ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xxxvi + ೧೧೭೮=೧೨೧೪

ಪ್ರತಿಗಳು: ೧೦೦೦
ಬೆಲೆ ರೂ: ೬೦೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ
ಡಾ. ವೀರಣ್ಣ ರಾಜೂರ, ಧಾರವಾಡ
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ
ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ
ಡಾ. ಎಂ.ಎಸ್. ಮದಭಾವಿ, ವಿಜಯಪುರ
ಡಾ. ಎಸ್.ಕೆ. ಕೊಪ್ಪಾ, ಇಂಡಿ
ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ
ಡಾ. ಕೆ. ರವೀಂದ್ರನಾಥ, ಹಂಪಿ
ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ
ಡಾ. ವಿ. ಎಸ್. ಮಾಳಿ, ಹಾರೂಗೇರಿ
ಡಾ. ಪಿ. ಕೆ. ರಾಠೋಡ, ಧಾರವಾಡ
ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ
ಶ್ರೀ ಶಶಿಧರ ತೋಡ್ಕರ, ಧಾರವಾಡ
ಡಾ. ವಿ. ಡಿ. ಐಹೊಳ್ಳಿ, ವಿಜಯಪುರ
ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ-ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ,

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸ[illegible]ಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ

೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಲಿಂಗ ಕಾಪಸೆ

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ –ಸಂ. ಡಾ. ವೀರಣ್ಣ ರಾಜೂರ

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ –ಸಂ. ಡಾ. ವೀರಣ್ಣ ರಾಜೂರ

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ –ಸಂ. ಡಾ. ವೀರಣ್ಣ ರಾಜೂರ

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ –ಸಂ. ಡಾ. ವೀರಣ್ಣ ರಾಜೂರ

೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ-ವಿಶ್ವಾಸ-ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.

❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಹನುಮಂತ ಮೇಲಿನಮನಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಹನುಮಂತ ಮೇಲಿನಮನಿ

ಡಾ. ಎಂ. ಎಂ. ಕಲಬುರ್ಗಿಯವರು ಸ್ಥಳೀಯ ಚರಿತ್ರೆಯ ಆಕರಶೋಧಕರಲ್ಲಿ ಪ್ರಮುಖರು. ಕನ್ನಡ ನಾಡಿನ ವೀರಮೌಲ್ಯ, ಸಂಸ್ಕೃತಿಯನ್ನು ಪ್ರಸಾರಮಾಡಿದ 'ವ್ಯಕ್ತಿ ಚರಿತ್ರೆ'ಗೆ ಇಮ್ಮಡಿ ಚಿಕ್ಕಭೂಪಾಲ, ಸಿರುಮಣ ನಾಯಕ, ನಿಂಬಸಾಮಂತ, ಕುಮಾರರಾಮನಂಥವರು ವಸ್ತುವಾಗಿ ಪರಿಣಮಿಸಿದ್ದಾರೆ. ಇವರೆಲ್ಲ ಕಾಲನ ಗರ್ಭದಲ್ಲಿ ಕಳೆದು ಹೋಗಬಾರದೆಂಬ ಆಶಯದ ಹಿನ್ನೆಲೆಯಲ್ಲಿ ಇವನ ಕುರಿತು ರಚನೆಯಾದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ(೧೯೭೭), ನಿಂಬಸಾಮಂತ ಚರಿತೆ(೧೯೮೧), ಸಿರುಮಣನಾಯಕನ ಸಾಂಗತ್ಯ(೧೯೮೩), ಸಿರುಮನ ಚರಿತೆ(೧೯೯೧), ಗೊಲ್ಲ ಸಿರುಮನ ಚರಿತೆ(೧೯೯೪), ಹೊಸ ಕುಮಾರರಾಮನ ಸಾಂಗತ್ಯ(೨೦೦೦), ಕೊಮಾರರಾಮಯ್ಯನ ಚರಿತೆ(೨೦೦೧), ಬಾಲಕುಮಾರರಾಮನ ಸಾಂಗತ್ಯ(೨೦೦೭), ಹಳೆಯ ಕುಮಾರರಾಮನ ಸಾಂಗತ್ಯ(೨೦೦೮)ಕೃತಿಗಳನ್ನು ಡಾ. ಕಲಬುರ್ಗಿಯವರು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಸ್ಥಳೀಯ ಸಾಹಿತ್ಯದ ಬಗ್ಗೆ ಆಸ್ತಕಿ ತಾಳುವ ಮೂಲಕ, ಕರ್ನಾಟಕದ ರಾಜಕೀಯ ಇತಿಹಾಸದ ಕಂದರವನ್ನು ಬಹುಮಟ್ಟಿಗೆ ತುಂಬಲು ಪ್ರಯತ್ನಿಸಿದ್ದಾರೆ.

'ಅಲಕ್ಷಿತ ಸಾಹಿತ್ಯ'ವನ್ನು 'ಲಕ್ಷಿತ ಸಾಹಿತ್ಯ'ವನ್ನಾಗಿಸುವಲ್ಲಿ, ಸ್ಥಳೀಯ ಉಪೇಕ್ಷಿತ ಸಾಹಿತ್ಯದ ಬಗೆಗೆ ಅವರ ಪ್ರಯತ್ನ ವಿಶೇಷವಾಗಿತ್ತು. ಈ ಕೆಲಸಕ್ಕಾಗಿ ನಾಡಿನ ಅನೇಕ ಹಸ್ತಪ್ರತಿಗಳನ್ನು ಅವರು ಶೋಧಿಸಿ–ಸಂಪಾದಿಸಿ–ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಅಂತಹ ಮಹತ್ವದ ಕೃತಿಗಳಲ್ಲಿ ೧. ಕೊಮಾರ ರಾಮಯ್ಯನ ಚರಿತ್ರೆ, ೨. ಬಾಲರಾಮನ ಸಾಂಗತ್ಯ ಪ್ರಮುಖವಾದವು. ಅವುಗಳ ವಿವರ ಹೀಗಿದೆ :

ಕುಮಾರರಾಮ ವೀರನಾಗಿ ಹುಟ್ಟಿ, ವೀರನಾಗಿ ಬೆಳೆದು, ವೀರನಾಗಿ ಮಡಿದ. ಈತ ಕನ್ನಡಿಗರ ಮನಸ್ಸಿನಲ್ಲಿ ಸಾಂಸ್ಕೃತಿಕ ವೀರನಾಗಿ ಬದುಕಿದ್ದಾನೆ. ಈತನ ಚರಿತ್ರೆಗೆ ಸಂಬಂಧಿಸಿ ಐದು ಕೃತಿಗಳು ರಚನೆಗೊಂಡಿವೆ. ಅವು ಹೀಗಿವೆ :

೧. ಹಳೆಯ ಕುಮಾರರಾಮನ ಸಾಂಗತ್ಯ – ಪಾಂಚಾಳ ಗಂಗ

೨. ಹೊಸ ಕುಮಾರರಾಮನ ಸಾಂಗತ್ಯ – ಅನಾಮಧೇಯ ಕವಿ – ೧

೩. ಕೊಮಾರ ರಾಮಯ್ಯನ ಚರಿತ್ರೆ – ಅನಾಮಧೇಯ ಕವಿ – ೨

೪. ಬಾಲರಾಮನ ಸಾಂಗತ್ಯ – ಮಹಾಲಿಂಗಸ್ವಾಮಿ

೫. ರಾಮನಾಥ ಚರಿತೆ – ನಂಜುಂಡ

ಈ ಐದು ಕೃತಿಗಳಲ್ಲಿ ನಾಲ್ಕು ಕೃತಿ(ರಾಮನಾಥ ಚರಿತೆಯನ್ನು ಹೊರತುಪಡಿಸಿ)ಗಳನ್ನು ಡಾ. ಕಲಬುರ್ಗಿಯವರು ಸಂಪಾದಿಸಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈ ಎಲ್ಲ ಕಾವ್ಯಗಳ ಕಥಾ ವಸ್ತು ಒದೇ ಆಗಿದ್ದರೂ ನಿರೂಪಣೆಯಲ್ಲಿ ವ್ಯತ್ಯಾಸವಿದ್ದು, ಎಲ್ಲವೂ ಸ್ವತಂತ್ರ ಕೃತಿಗಳಾಗಿಯೇ ಮೂಡಿಬಂದಿರುವುದು ವಿಶೇಷ.

***

ಕೊಮಾರ ರಾಮಯ್ಯನ ಚರಿತ್ರೆ :

ಕುಮಾರರಾಮ ರಾಜಕೀಯ ಕ್ಷೇತ್ರದ ವ್ಯಕ್ತಿ; ಸಾಂಸ್ಕೃತಿಕ ಮೌಲ್ಯ ಸಾರಿದ ವೀರ. ಈತ ಬದುಕಿದ್ದು ವೀರಮೌಲ್ಯ ಪ್ರಸಾರವಾಗುತ್ತಿದ್ದ ಕಾಲದಲ್ಲಿ(೧೨೧೩). ಆ ಕಾಲದಲ್ಲಿ ಸಾಹಿತ್ಯದ ಶ್ರೇಷ್ಠತೆಯ ಮೇಲಿನ ಒತ್ತು ಕಡಿಮೆಯಾಗಿ, ಅದು ಮೌಲ್ಯಪ್ರಸಾರ ಮತ್ತು ಜನಪ್ರಿಯತೆಗಳ ಕಡೆಗೆ ಸರಿಯಿತು.

ಪ್ರಾಚೀನ ಕರ್ನಾಟಕದಲ್ಲಿ ಪುರಾಣ, ಚರಿತ್ರೆ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಇತ್ಯಾದಿ ಸಾಹಿತ್ಯಿಕ ಪ್ರಯೋಗಗಳು ಉದ್ದಕ್ಕೂ ನಡೆದುಬಂದಿವೆ. ಆದಿಪುರಾಣವು ಪುರಾಣ, ವಿಕ್ರಮಾರ್ಜುನ ವಿಜಯವು ಪುರಾಣದ ಚರಿತ್ರೀಕರಣ, ಕಂಠೀರವ ನರಸರಾಜ ವಿಜಯವು ಚರಿತ್ರೆ, ಸಿದ್ಧರಾಮ ಚರಿತೆಯು ಚರಿತ್ರೆಯ ಪುರಾಣೀಕರಣ. ಈ ಅಂಶವನ್ನು ಗಮನಿಸಿ ಹೇಳುವುದಾದರೆ ಕುಮಾರರಾಮನ ಕಥೆಯು ಗಂಗ, ಅನಾಮಧೇಯ ಕವಿ–೧ ಇವರಲ್ಲಿ ಚರಿತ್ರೆಯಾಗಿ, ನಂಜುಂಡ, ಅನಾಮಧೇಯ ಕವಿ–೨, ಮಹಾಲಿಂಗಸ್ವಾಮಿಗಳಲ್ಲಿ ಚರಿತ್ರೆಯ ಪುರಾಣೀಕರಣವಾಗಿ ಹುಟ್ಟು ಪಡೆದಿದೆ. ಅಂದರೆ ಕುಮಾರರಾಮನನ್ನು ಮಹಾಲಿಂಗಸ್ವಾಮಿಯಲ್ಲಿ ಪರಶುರಾಮನೊಂದಿಗೆ, ನಂಜುಂಡನಂತೆ ಈ ಅನಾಮಧೇಯ ಕವಿ–೨ರಲ್ಲಿ ಅರ್ಜುನನೊಂದಿಗೆ ಸಮೀಕರಿಸಲಾಗಿದೆ. ಇದರಿಂದ ಕನ್ನಡಿಗರ ಮನಸ್ಸಿನಲ್ಲಿ ಕುಮಾರರಾಮ 'ಲೌಕಿಕ ವೀರನಾಗಿ' ಹುಟ್ಟಿ, 'ಪುರಾಣವೀರನಾಗಿ' ಬೆಳೆದುದು ಸ್ಪಷ್ಟವಾಗುತ್ತದೆ ಎಂದು ಡಾ. ಕಲಬುರ್ಗಿಯವರು ಹೇಳಿದ್ದಾರೆ.

೨೦೦೧ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾದ 'ಕೊಮಾರ ರಾಮಯ್ಯನ ಚರಿತೆ'ಯಲ್ಲಿ ೨೬ ಸಂಧಿ, ೨೮೦೩ ಪದ್ಯಗಳಿವೆ. ಈ ಕೃತಿ, ಗಾತ್ರ ದೃಷ್ಟಿಯಿಂದ ಈ ಕಡೆ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಆ ಕಡೆ ಬಾಲರಾಮನ ಸಾಂಗತ್ಯ, ರಾಮನಾಥ ಚರಿತೆಗಳ ಮಧ್ಯೆ ನಿಲ್ಲುತ್ತದೆ. ಕಥೆಯ ಕ್ರಮ ಸಾಮಾನ್ಯವಾಗಿ ಎಲ್ಲ ಕೃತಿಗಳಂತೆ ಮುಂದುವರಿದಿದ್ದರೂ ಸುರಿತಾಳ ಕಾಣಿಕೆ ಕೇಳಿ ಪಾದುಕೆ ಕಳಿಸಿದುದು, ಗುತ್ತಿಯ ಜಗದಪ್ಪನ ಅಧಿಕಾರಿಗಳು ಕಾಣಿಕೆ ಕೇಳಿ ಕಂಪಿಲನನ್ನು ನಡುದಾರಿಯಲ್ಲಿ ತಡೆದು ನಿಲ್ಲಿಸಿದುದು, ಕೊಮಾರ ರಾಮಯ್ಯನ ಮದುವೆ, ಕೊಮಾರರಾಮಯ್ಯನಿಗೆ ಪಟ್ಟಗಟ್ಟಿದುದು, ಜಟ್ಟಂಗಿ ರಾಮೇಶ್ವರನ ದರ್ಶನ–ಇವು ಈ ಕಾವ್ಯದ ಹೊಸ ಸೇರ್ಪಡೆಯಾಗಿವೆ.

ಜಗದಪ್ಪನ ಮಗಳು ರಾಮಕ್ಕ, ಮಂಚಣ್ಣನ ಮಗಳು ಕಾಮಕ್ಕ, ಚಾರಮರಾಯನ ಮೊಮ್ಮಕ್ಕಳಾದ ಸೋಮಾಯಿ, ಭೀಮಾಯಿ, ಬೈಚಪ್ಪನ ಮಗಳು ತಿಮ್ಮಾಯಿ – ಹೀಗೆ ೫ ಜನ ಕನ್ಯೆಯರೊಂದಿಗೆ ಕುಮಾರರಾಮನ ಮದುವೆ ಇಲ್ಲಿ ಜರುಗುತ್ತದೆ. ಚಾರಮರಾಯನಿಗೆ ಮಧುಸೂದನ, ವೆಂಕಟರಾಯ ಹೆಸರಿನ ಮಕ್ಕಳಿರುವುದು, ಹುಳಿಯಾರ ಮಾರಭೂಪಾಲನಿಗೆ ಕಲ್ಲರಸ ಹೆಸರಿನ ಮಂತ್ರಿ, ಹೊಯ್ಸಳ ಬಲ್ಲಾಳನಿಗೆ ನರಸಿಂಗರಾಯನೆಂಬ ಮಂತ್ರಿ ಇರುವುದು, ಜಗದಪ್ಪನ ಮಗ ಉತ್ತುಂಗರಾಯ, ಕಾಟಣ್ಣನ ಹೆಂಡತಿ ಕಂಚಲಮ್ಮ – ಇವೆಲ್ಲ ಹೊಸ ಸಂಗತಿಗಳು ಇಲ್ಲಿವೆ. ಕುಮಾರರಾಮನ ಮದುವೆ ಮಾಘ ಶುದ್ಧ ತದಿಗೆ ಗುರುವಾರ ಅಮೃತ ಸಿದ್ಧಿಯೋಗದಲ್ಲಿ, ಸೂರ್ಯೋದಯವಾದ ೧೦ ಗಳಿಗೆಯಲ್ಲಿ ಜರುಗಿದ ಸೂಚನೆ ಇಲ್ಲಿದೆ.

ಇವೆಲ್ಲವುಗಳಿಗಿಂತ ಅವಶ್ಯ ಗಮನಿಸಬೇಕಾದ ಸಂಗತಿಯೆಂದರೆ ರಾಮಯ್ಯನ 'ಚರಿತ್ರೆ'ಯನ್ನು 'ಪುರಾಣ' ಶಿಲ್ಪದಲ್ಲಿ ಅಳವಡಿಸುವ ಪ್ರಯತ್ನ ಮಾಡಿದುದು. 'ಆಧಾರವಿಡಿದು ಪೇಳಿದನಾಗ ಗಂಗಯ್ಯ' ಎಂಬ ಪದ್ಯದ ಮೂಲಕ ಈ ಧೋರಣೆಯನ್ನು ಸ್ಪಷ್ಟಪಡಿಸಿದ್ದಾನೆ. ಕೈಲಾಸದಲ್ಲಿ ಪಾರ್ವತಿಗೆ ಅಗೌರವ ತೋರಿದ ಅರ್ಜುನ ಗಣನಾಥನು ಕುಮಾರರಾಮನಾಗಿ, ರಂಭೆಯು ರತ್ನಾಜಿಯಾಗಿ ಜನಿಸಿದ 'ಸಮಸ್ತೀಕರಣ' ಪ್ರಯೋಗವಿಲ್ಲಿದೆ. ಪಾರ್ವತಿಯ ಆದೇಶದ ಮೇರೆಗೆ, ರಂಭೆಯು ಕುಮಾರರಾಮನ ಪರನಾರಿ ಸೋದರವ್ರತ ನಾಶಪಡಿಸಲು ರತ್ನಾಜಿಯಾಗಿ ಹುಟ್ಟಿದಳೆಂಬ ಕಲ್ಪನೆಯು, ಪ್ರಭುಲಿಂಗಲೀಲೆಯ ಮಾಯಾದೇವಿಯ ಜನನದ ಅನುಕರಣೆಯಾಗಿದೆ. ಅದೇನೇ ಇದ್ದರೂ ಲೌಕಿಕ ವೀರನೊಬ್ಬನನ್ನು ಪುರಾಣವೀರನನ್ನಾಗಿಸುವ ಪ್ರಯತ್ನವಿಲ್ಲಿದೆ.

ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ ಮತ್ತು ಕೊಮಾರ ರಾಮಯ್ಯನ ಚರಿತ್ರೆಗಳಲ್ಲಿ ಸುಮಾರು ೩೦೦ ಪದ್ಯಗಳು ಸಮಾನವಾಗಿವೆ. ಇದಕ್ಕೆ ಸಹೃದಯರಿಗಿಂತ ಸೃಜನಶೀಲ ಕವಿಗಳೇ ಕಾರಣ. ಹೀಗಾಗಿ ಈ ಮೂರು ಕೃತಿಗಳು ಶೂನ್ಯಸಂಪಾದನೆಯಂತೆ ಪರಿಷ್ಕಾರಗೊಂಡು ಸ್ವತಂತ್ರಕೃತಿ ರೂಪ ಪಡೆದಿವೆ.

***

ಈ ಕೃತಿಯನ್ನು ಸಂಪಾದಿಸಿ, ಪರಿಷ್ಕರಿಸಲು ಡಾ. ಕಲಬುರ್ಗಿಯವರು ಎರಡು ಹಸ್ತಪ್ರತಿಗಳ ಸಹಾಯವನ್ನು ಪಡೆದುಕೊಂಡಿದ್ದಾರೆ. ಅವುಗಳ ವಿವರ ಹೀಗಿದೆ :

ಪ್ರೊ. ಬಿ. ರಾಜಶೇಖರಪ್ಪ ಅವರ ಪ್ರತಿ : ಚಿತ್ರದುರ್ಗದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಬಿ. ರಾಜಶೇಖರಪ್ಪ ಅವರ ಹತ್ತಿರ ಇದ್ದ ತಾಳೆ ಪ್ರತಿ. ಈಗ ಇದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದಲ್ಲಿದೆ. ಆಕಾರ ೧೮"x೨". ಪ್ರತಿಯ ಅಂಚು ಅಲ್ಲಲ್ಲಿ ಮುರಿದಿವೆ. ಲಿಪಿಕಾರ ಅವಸರದಲ್ಲಿ ಪದ್ಯಗಳನ್ನು ಅಪೂರ್ಣರೂಪದಲ್ಲಿ ಬರೆದಿದ್ದಾನೆ. ಕೆಲವೊಮ್ಮೆ ಸಾಲುಗಳು ಪುನರುಕ್ತವಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರತಿ : ಇದು ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ ಸಿಕ್ಕಿದ್ದ ಕಾಗದ ಪ್ರತಿಯ ನಕಲು. ಮೂಲತಃ ಈ ನಕಲು ಡಾ. ಜಿ.

ವರದರಾಜರಾವ್ ಅವರಿಗೆ ಸಂಬಂಧಿಸಿದುದು. ಇದರ ಝೆರಾಕ್ಸ್ ಪ್ರತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. 'ನಾಗಸಂಗಯ್ಯ ರಚಿತವೆಂದು ಸೂಚಿಸಿರುವ ಪ್ರತಿಯಲ್ಲಿ ೨೫ ಸಂಧಿಗಳು ಸಮಗ್ರವಾಗಿವೆ. ಈ ವೇಳೆಗಾಗಿಯೇ ಪದ್ಯಗಳ ಸಂಖ್ಯೆಯನ್ನು ೨೫೭೩ ಎಂದು ಸೂಚಿಸಲಾಗಿವೆ. ಇಲ್ಲಿಗೆ ಕಾಟಣ್ಣನ ಮರಣ ಪ್ರಸಂಗ ಪೂರ್ಣವಾಗುತ್ತದೆ. ೨೬ನೆಯ ಸಂಧಿಯ ಮಂಗಳ ಪದ್ಯವು ಮಾತ್ರ ಉಲ್ಲೇಖಿತವಾಗಿ ಪ್ರತಿ ಇಲ್ಲಿಗೇ ನಿಲ್ಲುತ್ತದೆ.'

ಬಾಲರಾಮನ ಸಾಂಗತ್ಯ :

ಜೀವಿತ ಕಾಲದಲ್ಲಿ ವೀರನಾಗಿ ಬಾಳಿ, ಮರಣೋತ್ತರ ಕಾಲದಲ್ಲಿ ಸಾಂಸ್ಕೃತಿಕ ವೀರನಾಗಿ, ಕೊನೆಗೆ ಪುರಾಣ ವೀರನಾಗಿ, ದೇವರಾಗಿ ಬೆಳಗಿದವ, ಬಾಲರಾಮ. ಮಹಾಲಿಂಗಸ್ವಾಮಿ ಈತನ್ನು ಕುರಿತು ಕಾವ್ಯ ರಚಿಸಿದ್ದಾನೆ. ಕವಿಯ ಊರು ಹಂಪೆ. ೧೮ನೆಯ ಶತಮಾನದಲ್ಲಿ ಈ ಕಾವ್ಯ ರಚನೆಗೊಂಡಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಸುದೀರ್ಘ ಪ್ರಸ್ತಾವನೆಯಲ್ಲಿ ಹಸ್ತಪ್ರತಿಗಳ ವಿವರ, ಕುಮಾರರಾಮನ ಕುರಿತ ಕೃತಿಗಳ ಸಂಖ್ಯೆ, ಮಹಾಲಿಂಗಸ್ವಾಮಿಯ ಬಾಲರಾಮನ ಸಾಂಗತ್ಯ, ಕೃತಿ ಮಹತ್ವ, ಕೊರಳಿಗೆ ಕೊರಳು, ಕುಮಾರ(ಸ್ವಾಮಿ)ರಾಮ–ಮೊದಲಾದ ವಿಷಯಗಳನ್ನು ಕುರಿತು ವಿವರಿಸಿದ್ದಾರೆ.

೨೦೦೭ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟವಾದ ಈ ಕೃತಿ, ಈಗಾಗಲೇ ಪ್ರಕಟವಾದ, ಹೊಸ ಕುಮಾರರಾಮನ ಸಾಂಗತ್ಯ(೨೦೦೦), ಕೊಮಾರ ರಾಮಯ್ಯನ ಚರಿತ್ರೆ(೨೦೦೧)ಗಳಿಗಿಂತ ಭಿನ್ನವಾಗಿದೆ. ಈಗ ಕುಮಾರರಾಮನನ್ನು ಕುರಿತು ಐದು ಕಾವ್ಯಕೃತಿಗಳನ್ನು ಡಾ.ಎಂ.ಎಂ.ಕಲಬುರ್ಗಿಯವರು ಗುರುತಿಸಿದ್ದಾರೆ. ನಾಲ್ಕೂ ಕೃತಿ(ರಾಮನಾಥ ಚರಿತೆ ಹೊರತುಪಡಿಸಿ)ಗಳನ್ನು ಅವರೇ ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಎಲ್ಲ ಕೃತಿಗಳ ವಸ್ತು ಒಂದೇ ಆದರೂ ಕೃತಿ ಸ್ವರೂಪ, ಕಥಾನಿರೂಪಣೆಯಲ್ಲಿ ವ್ಯತ್ಯಾಸಗಳಿವೆ. ಇವೆಲ್ಲ ಕಾವ್ಯಗಳು ಪಾಠಾಂತರಗಳೆನ್ನದೆ, ರೂಪಾಂತರ ಎಂದು ಕರೆದು, ಇವುಗಳಿಗೆ ಶೂನ್ಯಸಂಪಾದನೆಗಳಂತೆ ಸ್ವತಂತ್ರ ಸ್ಥಾನ ಕೊಡುವುದೇ ಸೂಕ್ತವೆನಿಸುತ್ತದೆ ಎಂದು ಡಾ. ಕಲಬುರ್ಗಿಯವರು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ.

***

ಏಕೈಕ ಹಸ್ತಪ್ರತಿಯಿಂದ ಸಂಪಾದನೆಗೊಂಡ ಈ ಕೃತಿಯಲ್ಲಿ ೨೦ ಸಂಧಿ, ೪, ೨೯೪ ಪದ್ಯಗಳಿವೆ. ಡಾ. ಜಿ.ವರದರಾಜರಾವ್ ಅವರ ಹತ್ತಿರವಿದ್ದ ಪ್ರತಿ(=ಅ ಪ್ರತಿ) ಹಾಗೂ ಶ್ರೀ ಎಸ್. ಶಿವಣ್ಣ ಅವರಿಂದ ದೊರೆತ ನಕಲು ಪ್ರತಿ(=ಬ ಪ್ರತಿ)ಗಳ ಸಹಾಯದಿಂದ 'ಬಾಲರಾಮನ ಸಾಂಗತ್ಯ'ವನ್ನು ಪರಿಷ್ಕರಿಸಿ ಸಂಪಾದಿಸಿದ್ದಾರೆ. ಒಂದೂವರೆ ಕಾಗದದ ಪ್ರತಿಯ ಮೂಲಕ ಸಂಪಾದನೆಗೊಂಡ ಇದು ಚರಿತ್ರೆಯ ದೃಷ್ಟಿಯಿಂದ ಮಹತ್ವದ ಕಾವ್ಯವಾಗಿದೆ. ರಾಜ್ಯದ ಬೇರೆ ಬೇರೆ ಹಸ್ತಪ್ರತಿಭಾಂಡಾರಗಳಲ್ಲಿ ಬಾಲರಾಮನ ಕುರಿತು ಹಸ್ತಪ್ರತಿಗಳು ಸಂಪಾದಕರಿಗೆ ಲಭ್ಯವಾಗಿಲ್ಲ. ಈ ಅಸಹಾಯಕತೆಯ ಹಿನ್ನೆಲೆಯಲ್ಲಿಯೇ ಕೃತಿಯನ್ನು ಸಂಪಾದಿಸಿಕೊಟ್ಟಿರುವುದು ಡಾ. ಕಲಬುರ್ಗಿಯವರ ಇತಿಹಾಸ ಮತ್ತು ಚರಿತ್ರೆಯ ಮೇಲಿರುವ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

***

"ಡಾ. ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ"ಯ ಅಡಿಯಲ್ಲಿ 'ಡಾ. ಎಂ.ಎಂ.ಕಲಬುರ್ಗಿಯವರ ಸಮಗ್ರ ಸಾಹಿತ್ಯ-ಸಂಪುಟ: ೨೫, ಕಾವ್ಯ ಸಾಹಿತ್ಯ-ಭಾಗ: ೭'ನ್ನು ಸಂಪಾದಿಸುವ ಅವಕಾಶ ದೊರೆತಿರುವುದು ನನ್ನ ಭಾಗ್ಯವೆಂದು ಭಾವಿಸುತ್ತೇನೆ. ಈ ಸಂಪುಟವನ್ನು ಸಂಪಾದಿಸಲು ಅವಕಾಶ ನೀಡಿದ 'ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ'ಯ ಗೌರವ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ, ಅಧ್ಯಕ್ಷರಾದ ಶ್ರೀ ಜಿ.ಕೆ.ಪಾಟೀಲ, ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ, ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ, ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ, ಡಾ. ಸರಸ್ವತಿದೇವಿ ಶಂ. ಭಗವತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಎಲ್ಲ ಸದಸ್ಯರನ್ನು ಪ್ರೀತಿಯಿಂದ ನೆನೆಯುತ್ತೇನೆ. ಈ ಸಂಪುಟದ ಅಕ್ಷರ ದೋಷಗಳನ್ನು ಸರಿಪಡಿಸುವಲ್ಲಿ ನೆರವಾದ ನನ್ನ ಸಂಶೋಧನ ವಿದ್ಯಾರ್ಥಿಮಿತ್ರರಾದ ಶ್ರೀ ರಾಮಚಂದ್ರ ಪಡೆಸೂರ, ಶ್ರೀ ಸಂಗಮೇಶ ಕಜ್ಜಿಡೋಣಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

❖❖

*

ಪರಿವಿಡಿ

ಕೊಮಾರ ರಾಮಯ್ಯನ ಚರಿತ್ರೆ

ಸಂಪಾದಕ
ಎಂ. ಎಂ. ಕಲಬುರ್ಗಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
೨೦೦೧

*

ಪ್ರಸ್ತಾವನೆ

ಪ್ರಾಚೀನ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕಂಪಿಲರಾಜ್ಯದ ನಾಶ, ವಿಜಯನಗರ ಸಾಮ್ರಾಜ್ಯದ ನಿರ್ಮಾಣ-ನಾಶಗಳು ತುಂಬ ಇಕ್ಕಟ್ಟಿನ ಸಂದರ್ಭಗಳೆನಿಸಿವೆ. ಇಂಥ ಸಂದರ್ಭಗಳನ್ನು ನಿಯಂತ್ರಿಸುವಲ್ಲಿ ಕಾಲ ಮತ್ತು ದೇಶಗಳು ಮಹತ್ವದ ಪಾತ್ರವಹಿಸುತ್ತವೆ.

'ಕಾಲ' ದೃಷ್ಟಿಯಿಂದ ಹೇಳುವುದಾದರೆ ೧೩ನೆಯ ಶತಮಾನದಲ್ಲಿ ದೇವಾಲಯ ನಾಶ-ಮತಾಂತರಗಳಂಥ ಚಟುವಟಿಕೆಗಳನ್ನೊಳಗೊಂಡ ಮುಸಲ್ಮಾನರ ಹೊಸಬಗೆಯ ಆಕ್ರಮಣ ಕೇವಲ ರಾಜಕೀಯ ದಾಳಿಯಾಗಿ ಉಳಿಯದೆ, ಸಾಂಸ್ಕೃತಿಕ ದಾಳಿಯಾಗಿ ಬೆಳೆಯಿತು. ಉತ್ತರದಿಂದ ಆರಂಭವಾದ ಈ ದಾಳಿಗೆ ದಕ್ಷಿಣದ ಚಕ್ರವರ್ತಿಗಳಾದ ಈಗಿನ ಮಹಾರಾಷ್ಟ್ರದ ದೇವಗಿರಿ ಯಾದವರು ೧೩೦೭ರಲ್ಲಿ, ಆಂಧ್ರಪ್ರದೇಶದ ಕಾಕತೀಯರು ೧೩೦೯ರಲ್ಲಿ, ಕರ್ನಾಟಕದ ಹೊಯ್ಸಳರು ೧೩೧೧ರಲ್ಲಿ ಸೋತು ಶರಣಾಗತರಾದರು. ಇಂಥ ಅರಕ್ಷಕ ಸ್ಥಿತಿಯ ಇಕ್ಕಟ್ಟಿನಲ್ಲಿ ಕಂಪಿಲರಾಜ್ಯ ಕನ್ನಡಿಗರ ಏಕೈಕ ರಕ್ಷಣೆಯಾಗಿ ನಿಂತಿತು. ಆ ಕಡೆ ಎಲ್ಲ ಹಿಂದೂ ರಾಜ್ಯಗಳು ಹಾಳಾದ, ಈ ಕಡೆ ಹಿಂದೂ ರಾಜ್ಯವಾದ ವಿಜಯನಗರ ಹುಟ್ಟದ ಸಂಧಿಕಾಲದಲ್ಲಿ ಮುಸಲ್ಮಾನರನ್ನು ಎರಡು ಸಲ ಸೋಲಿಸಿ, ಕೊನೆಯ ಮೂರನೆಯ ಯುದ್ಧದಲ್ಲಿ ದುರಂತಕ್ಕೆ ಗುರಿಯಾಯಿತು. ಈ ದುರಂತ ಸಂಭವಿಸಿದುದು ೧೩೨೬ರಲ್ಲಿ. ಮುಂದೆ ವಿಜಯನಗರ ಸಾಮ್ರಾಜ್ಯ ಹುಟ್ಟಿದುದು ೧೩೩೬ರಲ್ಲಿ. ಅಂದರೆ ಕಾಲದೃಷ್ಟಿಯಿಂದ ಕೇವಲ ೧೦ ವರ್ಷಗಳ ಅಂತರದಲ್ಲಿಯೇ ಕಂಪಿಲರಾಜ್ಯದ ನಾಶದಲ್ಲಿ ವಿಜಯನಗರ ಸಾಮ್ರಾಜ್ಯ ನಿರ್ಮಾಣವಾಯಿತು.

'ದೇಶ' ದೃಷ್ಟಿಯಿಂದ ಹೇಳುವುದಾದರೆ ಕಂಪಿಲರಾಜ್ಯದ ರಾಜಧಾನಿ ಕುಮ್ಮಟದುರ್ಗ, ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ-ಇವುಗಳ ನಡುವಿನ ಅಂತರ ಕೇವಲ ೧೦ ಮೈಲು. ಹೀಗಾಗಿ ಕಂಪಿಲ ರಾಜ್ಯದ ನಾಶವನ್ನು ಕಣ್ಣಾರೆ ಕಂಡಿದ್ದ, ಮತ್ತು ಅಲ್ಲಿ ಭಂಡಾರಿಯಾಗಿ ರಜಕೀಯ ತರಬೇತಿ ಪಡೆದಿದ್ದ ಹುಕ್ಕ-ಬುಕ್ಕರಿಗೆ ವಿಜಯನಗರ ಸಾಮ್ರಾಜ್ಯದ ನಿರ್ಮಾಣ ಸಾಧ್ಯವಾಯಿತು. ಈಗ ಕಂಪಿಲ ರಾಜ್ಯದ ಮರುಸ್ಥಾಪನೆಯೆಂಬಂತೆ ಅಲ್ಲಿ ಪಡೆದ ಅನುಭವದ ಅವಶೇಷಗಳಿಂದಲೇ ವಿಜಯನಗರ ಸಾಮ್ರಾಜ್ಯದ ನಿರ್ಮಾಣವಾಯಿತೆನ್ನಬಹುದು. ಅಥವಾ ೧೦ ವರ್ಷಗಳ ಹಿಂದೆ ಕಿವಿಯಾರೆ ಕೇಳಿದ್ದ, ೧೦ ಮೈಲುಗಳ ಅಂತರದಲ್ಲಿ ಕಣ್ಣಾರೆ ಕಂಡಿದ್ದ ಕಂಪಿಲರಾಜ್ಯದ ಮುಂದುವರಿಕೆಯೇ ವಿಜಯನಗರ ಸಾಮ್ರಾಜ್ಯವೆನ್ನಬಹುದು.

ಹೀಗೆ ನಿರ್ಮಾಣಕ್ಕೆ ಕಾರಣವಾದಂತೆ ನಾಶಕ್ಕೂ 'ದೇಶ' ಕಾರಣವಾಗುವುದಕ್ಕೆ ಈ ಮನೆತನಗಳೇ ಉದಾಹರಣೆಯೆನಿಸಿವೆ. ಈ ಎರಡೂ ರಾಜ್ಯಗಳು ಅಸ್ತಿತ್ವಕ್ಕೆ ಬಂದುದು ಕರ್ನಾಟಕದ ಗಡಿ ಪ್ರದೇಶದಲ್ಲಿ, ಈ ಪ್ರದೇಶಕ್ಕೆ ಹೊಂದಿಕೊಂಡಿರುವ ತೆಲುಗನಾಡಿನ ತೆಲುಗರ ಪಾತ್ರವನ್ನು ಇಲ್ಲಿ ಕಡೆಗಣಿಸುವಂತಿಲ್ಲ. ಇದಕ್ಕೆ ನಿದರ್ಶನವೆಂಬಂತೆ ತೆಲುಗರ ಬೆಂಬಲದಿಂದ ಕರ್ನಾಟಕ ಮೂಲದ ಕುಮಾರರಾಮನ ರುಂಡ ಕತ್ತರಿಸಿದ ಮುಸಲ್ಮಾನರು ಕನ್ನಡಿಗರ ಬೆಂಬಲದಿಂದ, ತೆಲುಗುಮೂಲದವನಾಗಿ ಕನ್ನಡ ರಾಜ್ಯವನ್ನಾಳುತ್ತಲಿದ್ದ ರಾಮರಾಯನ ರುಂಡ ಕತ್ತರಿಸಿದರು. ಅಂದರೆ ದಿಲ್ಲಿ ಮುಸಲ್ಮಾನರನ್ನು ಬಳಸಿಕೊಂಡು ಒಮ್ಮೆ ತೆಲುಗರು ಕನ್ನಡಿಗರ ನಾಶಕ್ಕೆ ಕಾರಣವಾದರೆ, ಇನ್ನೊಮ್ಮೆ ವಿಜಾಪುರ ಮುಸಲ್ಮಾನರನ್ನು ಬಳಸಿಕೊಂಡು ಕನ್ನಡಿಗರು ತೆಲುಗರ ನಾಶಕ್ಕೇ ಕಾರಣರಾದರು. ಆದುದರಿಂದ ಬಾಹ್ಯದಲ್ಲಿ ಹಿಂದೂ-ಮುಸಲ್ಮಾನ ಯುದ್ಧಗಳಂತೆ ತೋರಿದರೂ ಇವು ಅಂತರ್ಯದಲ್ಲಿ ಕನ್ನಡಿಗರ ಮತ್ತು ತೆಲುಗರ ಯುದ್ಧಗಳೆ ಆಗಿವೆ. ಇವುಗಳಲ್ಲಿ ಒಮ್ಮೆ ಹೊರಗಿನ ತೆಲುಗರು ಒಳಗಿನ ಕನ್ನಡಿಗರ ವಿಷಯವಾಗಿ ನಡೆದುಕೊಂಡುದು ಅನ್ಯಾಯ ರೂಪದ್ದು. ಇನ್ನೊಮ್ಮೆ ಒಳಗಿನ ಕನ್ನಡಿಗರು ವಿಯಷವಾಗಿ ನಡೆದುಕೊಂಡುದು ಅನ್ಯಾಯ ರೂಪದ್ದು, ಇನ್ನೊಮ್ಮೆ ಒಳಗಿನ ಕನ್ನಡಿಗರು ಹೊರಗಿನ ತೆಲುಗರ ವಿಷಯವಾಗಿ ನಡೆದುಕೊಂಡುದು ಅನಿವಾರ್ಯ ರೂಪದ್ದೆಂದು ತೀರ್ಮಾನಿಸಬಹುದಾಗಿದೆ. ಇದರಿಂದ ಗಡಿನಾಡಿನವರ ವಿಷಯದಲ್ಲಿ ನೆರೆನಾಡಿನವರ ವರ್ತನೆ ಯಾವ ಕಾಲಕ್ಕೂ ತೂಗುವ ಖಡ್ಗ ಮಾದರಿಯದೆಂದೇ ಹೇಳಬಹುದುದಾಗಿದೆ. ಇದನ್ನು ಗಮನಿಸಿದರೆ ಕಂಪಿಲ ರಾಜ್ಯ, ವಿಜಯನಗರ ಸಾಮ್ರಾಜ್ಯಗಳು ಗಡಿನಾಡಿಗೆ ಬದಲು ಒಳನಾಡಿನಲ್ಲಿ ಸ್ಥಾಪಿತವಾಗಿದ್ದರೆ ಇವು ಬೇಗೆ ನಾಶವಾಗುತ್ತಿರಲಿಲ್ಲವೇನೋ ಅಥವಾ ಇವುಗಳ ನಾಶ ಬೇರೆ ರೀತಿಯಲ್ಲಿ ಘಟಿಸಬಹುದಿತ್ತೇನೋ ಎನ್ನಿಸುತ್ತದೆ.

ಮುಸಲ್ಮಾನರ ದೈತ್ಯದಾಳಿಯನ್ನು ದಕ್ಷಿಣ ಭಾರತದಲ್ಲಿ, ಏಕಾಂಗ ವೀರನಾಗಿ ತಡೆಗಟ್ಟಿದ, ಮಲತಾಯಿಯ ಮೋಹ ನಿರಾಕರಣೆಯಲ್ಲಿ ನಲುಗಿದ, ಕೊನೆಗೂ ಮಾದಗಿತ್ತಿಯೆಂಬ ಹೆಣ್ಣಿನ ಕೈಯ್ಯಲ್ಲಿ ಹತನಾದ ಈ ಎಲ್ಲ ವಿಶಿಷ್ಟ ಘಟನೆಗಳು ಕಾರಣವಾಗಿ ಬಾಲವೀರ ಅಭಿಮನ್ಯುವಿನಂತೆ ಕುಮಾರರಾಮ ಕನ್ನಡಿಗರ ಮನಸ್ಸಿನಲ್ಲಿ ಅಂದಿನಿಂದ ಇಂದಿನ ವರೆಗೂ ಜೀವಂತವಾಗಿದ್ದಾನೆ. ಮಯೂರವರ್ಮ, ಪುಲಿಕೇಶಿ, ವಿಕ್ರಮಾದಿತ್ಯ, ವಿಷ್ಣುವರ್ಧನ, ಏಕೆ ಕೃಷ್ಣದೇವರಾಯನಂಥ ಪ್ರಸಿದ್ಧ ಅರಸರ ಹೆಸರನ್ನು ಮರೆತ ಕನ್ನಡ ಜನಸಮುದಾಯ ಕುಮಾರರಾಮನನ್ನು ಮರೆಯದೆ ಒಬ್ಬ ಸಾಂಸ್ಕೃತಿಕ ವೀರನನ್ನಾಗಿ ಬೆಳೆಸಿಕೊಂಡು ಬಂದರು. ಇದರ ಫಲವಾಗಿ ಇವನ ವಿಷಯದಲ್ಲಿ ಕಾಲಕಾಲಕ್ಕೆ ಭೌತಿಕ, ಅಭೌತಿಕ ಆಕರಸಾಮಗ್ರಿ ಅಪಾರ ಪ್ರಮಾಣದಲ್ಲಿ ಹುಟ್ಟಿಕೊಂಡಿತು. ರಾಜಕೀಯ, ಸಾಮಾಜಿಕ, ಆಚರಣಾತ್ಮಕ, ಭಾಷಿಕ ಅವಶೇಷಗಳು ನೂರಾರು ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಸಮಕಾಲೀನಗೊಳ್ಳುತ್ತಲೂ ಬಂದವು. ಸಾಲದುದಕ್ಕೆ ತೆಲುಗು, ತಮಿಳು, ತುಳು ಭಾಷೆಗಳಲ್ಲಿಯೂ ಆಕರಗಳು ಸೃಷ್ಟಿಯಾಗುತ್ತ ಬಂದವು.

ರಾಜಕೀಯ ಅವಶೇಷಗಳನ್ನು ಕುರಿತು ಹೇಳುವುದಾದರೆ ಇಂದಿಗೂ ಕುಮ್ಮಟದುರ್ಗದಲ್ಲಿ ಕೋಟೆ, ರಾಮನ ಡೊಣೆ, ಕಾಟಪ್ಪನ ಗುಡ್ಡ, ಬೊಲ್ಲನ ಗುಂಡು, ಬಾದೂರನ ಬಂಡೆ, ಮಾದಿಗ ಹಂಪಯ್ಯನ ಗುಡ್ಡಗಳನ್ನು, ಹೊಸಮಲೆದುರ್ಗದಲ್ಲಿ (ಇಂದಿನ ರಾಮಗಡ) ಕೋಟೆ, ಬೊಲ್ಲನ

ಬಂಡೆ, ಟಗರಿನ ಬಯಲು, ಬೊಲ್ಲನ ಹೆಜ್ಜೆ, ಕಾಟಣ್ಣ ಶಿಲ್ಪ, ಕುಮಾರರಾಮನ ಹಟ್ಟಿ, ಮಾದಿಗ ಹಂಪಯ್ಯನ ಕಲ್ಲು, ಹರಿಯಾಲದೇವಿ ಬಚ್ಚಲು, ರತ್ನಾಜಿ ಮಡಿಲು ಇತ್ಯಾದಿ ಸ್ಮಾರಕಗಳು ಸಿಗುತ್ತವೆ. ಹೊಳಲಗುಂದಿ (ಅದವಾನಿ ತಾಲೂಕು)ಯ ಸಿದ್ಧೇಶ್ವರ ದೇವಾಲಯದ ಗೋಡೆಯ ಮೇಲೆ ಕುಮಾರರಾಮನ ಚೆಂಡಿನಾಟದ ಬಣ್ಣದ ಚಿತ್ರ ಬಿಡಿಸಲಾಗಿದ್ದು, ಇದರ ಕೆಳಗೆ 'ರಾಮಣ್ಣ' ಎಂಬ ಬರಹವೂ ಇದೆ. ಇದು ೧೮ನೆಯ ಶತಮಾನದ ಕಲಾಕೃತಿಯಾಗಿದೆ. ಸಾಲದುದಕ್ಕೆ ಕುದುರೆಯ ಮೇಲೆ ಕುಳಿತ ಕುಮಾರರಾಮನ ಶಿಲ್ಪಗಳು ಅಲ್ಲಲ್ಲಿ ಸಿಗುತ್ತವೆ.

ಸಾಮಾಜಿಕವಾಗಿ ಹೇಳುವುದಾದರೆ ರತ್ನಾಜಿ ಪರಂಪರೆಯ 'ದೊಂಬರು' ಹೆಸರಿನ ಒಂದು ಜನಾಂಗವೇ ಶಿವಮೊಗ್ಗ ಜಿಲ್ಲೆಯಲ್ಲಿ ಕಂಡು ಬರುತ್ತದೆ. ಬೇಡರು ಮೊದಲಾದ ಹಿಂದುಳಿದ ವರ್ಗದವರು ಇವನನ್ನು ಅಭಿಮಾನದಿಂದ ಆರಾಧಿಸುತ್ತಾರೆ.

ಆಚರಣೆಗೆ ಬಂದರೆ ಕುಮ್ಮಟ ಮತ್ತು ಹೊಸಮಲೆದುರ್ಗಗಳಲ್ಲಿ ಕುಮಾರರಾಮನ ಗುಡಿಗಳಿವೆ. ದರೋಜಿ ಸಮೀಪದ ರಾಮಪುರ ಮತ್ತು ಕುಮ್ಮಟದುರ್ಗಗಳಲ್ಲಿ ಕುಮಾರ ರಾಮನ ಜಾತ್ರೆ, ಅನೇಕ ಬಿಡಿ ಆಚರಣೆಗಳು ಕಂಡುಬರುತ್ತವೆ. ಕುಮಾರರಾಮನ ರುಂಡದ ಮೆರವಣಿಗೆ, ಪೂಜೆ, ಯುದ್ಧದ ಅಣುಕು ಇತ್ಯಾದಿಗಳು ಇಲ್ಲಿ ಇನ್ನೂ ಜೀವಂತವಾಗಿದೆ. ನಾಡಿನ ಅನೇಕ ಕಡೆಗಳಲ್ಲಿ ರಾಮಸ್ವಾಮಿ, ಕುಮಾರ ರಾಮದೇವರು, ರಾಮೇಶ್ವರ ಹೆಸರುಗಳಿಂದ ಈತ ಪೂಜೆಗೊಳ್ಳುತ್ತಲಿದ್ದಾನೆ.

ಭಾಷಿಕ ರಚನೆಗಳು ಅಂದಿನಿಂದ ಇಂದಿನ ವರೆಗೂ ಹುಟ್ಟುತ್ತಲಿವೆ. ಇದು ಮೌಖಿಕ ಮತ್ತು ಲಿಖಿತವೆಂದೂ, ಮೌಖಿಕದಲ್ಲಿ ವದಂತಿಕ, ಸಾಹಿತ್ಯಕವೆಂದೂ, ಲಿಖಿತದಲ್ಲಿ ದಾಖಲಾತ್ಮಕ, ಸಾಹಿತ್ಯಿಕವೆಂದೂ ಬಿಚ್ಚಿಕೊಂಡಿದೆ. ಮೌಖಿಕ ವಲಯದ ವದಂತಿಗೆ ಸಂಬಂಧಪಟ್ಟಂತೆ ಅಲ್ಲಲ್ಲಿ ಅನೇಕ ಹೇಳಿಕೆಗಳು ಕೇಳಿ ಬರುತ್ತಿದ್ದರೆ, ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ನೂರಾರು ಜನಪದ ಹಾಡುಗಳು ಸಿಗುತ್ತವೆ. ಲಿಖಿತ ವಲಯದ ದಾಖಲೆಗಳಿಗೆ ಸಂಬಂಧಪಟ್ಟಂತೆ ಕೈಫಿಯತ್ತು, ಶಾಸನಗಳು ಲಭ್ಯವಿದ್ದರೆ, ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಸಾಂದರ್ಭಿಕ ಉಲ್ಲೇಖಗಳೂ, ಸ್ವತಂತ್ರ ಕಾವ್ಯಗಳೂ ಸಿಗುತ್ತವೆ. ಈ ಎಲ್ಲ ಶಾಖೋಪಶಾಖೆಗಳ ಶೋಧ, ಸಂಗ್ರಹ, ಅಧ್ಯಯನಗಳ ಸಮಗ್ರ ಯೋಜನೆಯೊಂದು ಅಸ್ತಿತ್ವಕ್ಕೆ ಬರಬೇಕಾಗಿದೆ. ಈ ಸಮಗ್ರದ ಒಂದು ಭಾಗವೆಂಬಂತೆ ಕುಮಾರರಾಮನನ್ನು ಕುರಿತು ಲಿಖಿತ ಸಾಹಿತ್ಯ ಕೃತಿಗಳು ಹೀಗೆ ಹುಟ್ಟಿಕೊಂಡಿವೆ:

ಕುಮಾರರಾಮನನ್ನು ಕುರಿತ ಲಿಖಿತ ಸಾಹಿತ್ಯ

ಕುಮಾರರಾಮನನ್ನು ಕುರಿತು ಪ್ರಾಸಂಗಿಕ ಉಲ್ಲೇಖದ ಕಾವ್ಯಗಳೂ, ಸ್ವತಂತ್ರ ಕಾವ್ಯಗಳೂ ಕಂಡುಬರುತ್ತವೆ. ಚೆನ್ನಬಸವ ಪುರಾಣ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನವರತ್ನ ಮಾಲಿಕೆ ಮೊದಲಾದ ಕೃತಿಗಳಲ್ಲಿ ಕುಮಾರರಾಮನ ಪ್ರಾಸಂಗಿಕ ಪ್ರಸ್ತಾಪ ಬರುತ್ತದೆ.

ನೇರವಾಗಿ ಕುಮಾರರಾಮನನ್ನು ಕುರಿತು ಹುಟ್ಟಿದ ಸ್ವತಂತ್ರ ಕಾವ್ಯಗಳ ಸಂಖ್ಯಾನಿರ್ಣಯ ಇನ್ನೂ ಚರ್ಚೆಯ ವಸ್ತುವಾಗಿ ಉಳಿದಿದೆ. ಈ ವಿಷಯವಾಗಿ ಮೊದಲು ತಲೆ ಕೆಡಿಸಿಕೊಂಡವರು ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು. ಅವರ ಪ್ರಕಾರ ಈತನನ್ನು ಕುರಿತು ಕಾವ್ಯ ಬರೆದವರು

೫ ಜನ. ೧. ನಂಜುಂಡ, ೨. ಪಂಚಾಳಗಂಗ, ೩. ಗಂಗ, ೪. ನಾಗಸಂಗಯ್ಯ, ೫. ಮಹಾಲಿಂಗಸ್ವಾಮಿ. ಈ ಸಮಸ್ಯೆಯನ್ನು ಪಿಎಚ್.ಡಿ. ಅಧ್ಯಯನದ ಮೂಲಕ ಸಮಗ್ರವಾಗಿ ಕೈಗೆತ್ತಿಕೊಂಡ ಡಾ. ವರದರಾಜರಾವ್ ಅವರು, ಪಾಂಚಾಳಗಂಗ, ಗಂಗ, ನಾಗಸಂಗಯ್ಯ ಹೆಸರಿನಲ್ಲಿರುವ ಕೃತಿಗಳು ಒಂದೇ ಪಠ್ಯದ ವಿಸ್ತೃತ, ಸಂಕೋಚ ಆವೃತ್ತಿಗಳೆಂದು ಹೇಳುತ್ತ, ಇವುಗಳ ಸಂಖ್ಯೆಯನ್ನು ೫ ರಿಂದ ೩ಕ್ಕೆ ಇಳಿಸಿದ್ದಾರೆ.

ಇಂಥ ಸಂದರ್ಭದಲ್ಲಿ ಈ ಸಮಸ್ಯೆಗೆ ಕೈಹಾಕಿದ ನಮಗೆ ಮೇಲುಕೋಟೆಯ 'ಸಂಸ್ಕೃತ ಸಂಶೋಧನ ಸಂಸತ್'ದಲ್ಲಿ 'ಹಳೆಯ ಕುಮಾರರಾಮನ ಸಾಂಗತ್ಯ'[೧] ಹೆಸರಿನ ತಾಳೆಗರಿ ಪ್ರತಿ, ಕಂಪಲಿಯ ಶ್ರೀ ದೊಡ್ಡನಗೌಡರ ಮನೆಯಲ್ಲಿ 'ಹೊಸ ಕುಮಾರರಾಮನ ಸಾಂಗತ್ಯ'[೨] ಹೆಸರಿನ ಕಾಗದ ಪ್ರತಿ ಲಭ್ಯವಾದವು. ಇವು ಲಿಪಿಕಾರರು ಬರೆದ ಹೆಸರುಗಳಾಗಿದ್ದು, ಇವೆರಡರ ಸಂಧಿ, ಪದ್ಯ ಸಂಖ್ಯೆ ಮತ್ತು ಅಂತರ್ಗತ ವಿಷಯ ಹೀಗಿದೆ:

ಹಳೆಯ ಕುಮಾರರಾಮನ ಸಾಂಗತ್ಯ

(ಮೇಲುಕೋಟೆ ಸಂಸ್ಕೃತ ಸಂಶೋಧನ ಸಂಸತ್ ಪ್ರತಿ)

ಸಂಧಿ	**ಪದ್ಯ ಸಂಖ್ಯೆ**
೧. ಹೊಸಮಲೆದುರ್ಗ ವರ್ಣನೆ	೯೩
೨. ಕುಮ್ಮಟದುರ್ಗ ವರ್ಣನೆ	೮೦
೩. ಬಹಾದೂರನು ಕುಮ್ಮಟಕೆ ಬಂದುದು	೮೦
೪. ನೇಮಿಯ ಕಾಳಗ	೧೪೩
೫. ಓರುಗಲ್ಲು ಯುದ್ಧ	೨೫೬
೬. ನೀರಾಟ–ಚಂಡಿನಾಟ–ರತ್ನಾಜಿ ವ್ಯಾಮೋಹ	೪೪೩
೭. ನೆಲಮಾಳಿಗೆಯಲ್ಲಿ ಕುಮಾರರಾಮ	೨೦೮
೮. ನೇಮಿಯ ಕಾಳಗ–ಸೋಲು	೧೬೩
೯. ಮಾದಿಗಿತ್ತಿ ಕಾಳಗ	೧೮೦
೧೦. ತೆಲುಗರ ಸಂಚು–ರಾಮನ ಮರಣ	೧೫೪
ಒಟ್ಟು	**೧೮೦೦**

---

೧. ಈ ಹಸ್ತಪ್ರತಿಯ ಆರಂಭದಲ್ಲಿ "ಹಳೆ ಕುಮಾರರಾಮನ ಚರಿತ" ಎಂಬ ಪಾಠವಿದೆ. ಇದನ್ನು ನಾವು "ಹಳೆಯ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

೨. ಈ ಹಸ್ತಪ್ರತಿಯ ಅಂತ್ಯದಲ್ಲಿ 'ಹೊಸ ರಾಮ ಸಾಂಗತ್ಯ", 'ಹೊಸ ರಾಮನ ಸಾಂಗತ್ಯ" ಎಂಬ ಪಾಠಗಳಿವೆ. ಇದನ್ನು ನಾವು 'ಹೊಸ ಕುಮಾರರಾಮನ ಸಾಂಗತ್ಯ" ಎಂದು ಇಟ್ಟುಕೊಂಡಿದ್ದೇವೆ.

ಹೊಸ ಕುಮಾರರಾಮನ ಸಾಂಗತ್ಯ

(ಕಂಪಲಿ ಶ್ರೀ ದೊಡ್ಡನಗೌಡರ ಪ್ರತಿ)

ಸಂಧಿ	ಪದ್ಯ ಸಂಖ್ಯೆ
೧. ದೇವಗಿರಿ ಯಾದವರಲ್ಲಿ ಮುಮ್ಮಡಿಸಿಂಗ	೯೯
೨. ರಾಯದುರ್ಗದಲ್ಲಿ ಮುಮ್ಮಡಿಸಿಂಗ – ಕಂಪಿಲ	೧೦೨
೩. ಕುಮಾರರಾಮನ ಜನನ – ಹೊಸಮಲೆಯಲ್ಲಿ ಕಂಪಿಲ	೧೦೩
೪. ಗುತ್ತಿಯ ಜಗದಪ್ಪನೊಡನೆ ಕಾಳಗ	೮೯
೫. ಓರುಗಲ್ಲ ಪ್ರವೇಶ	೧೪೭
೬. ಓರುಗಲ್ಲ ಯುದ್ಧ	೧೩೭
೭. ಶೂಲದ ಹಬ್ಬ – ರತ್ನಾಜಿ ವ್ಯಾಮೋಹ	೧೧೨
೮. ಕುಮ್ಮಟದುರ್ಗ ನಿಮಾಣ	೧೦೦
೯. ನೀರಾಟ – ಚೆಂಡಿನಾಟ – ರತ್ನಾಜಿ ವ್ಯಾಮೋಹ	೫೪೦
೧೦. ನೆಲಮಾಳಿಗೆಯಲ್ಲಿ ಕುಮಾರರಾಮ	೨೮೫
೧೧. ನೇಮಿಯ ಕಾಳಗ – ಸೋಲು	೪೬೨
೧೨. ಮಾದಗಿತ್ತಿ ಕಾಳಗ – ರಾಮನ ವೀರಮರಣ	೩೧೩
ಒಟ್ಟು	೨೪೮೯

ಈ ಎರಡೂ ಯಾದಿಯಿಂದ ಇವುಗಳ ವ್ಯತ್ಯಾಸ ತಕ್ಕಮಟ್ಟಿಗೆ ಸ್ಪಷ್ಟವಾಗುತ್ತದೆ. ಹಳೆಯ ಕುಮಾರರಾಮನ ಸಾಂಗತ್ಯದ ಕಥೆ ನೇರವಾಗಿದೆ. ಹೊಸ ಕುಮಾರರಾಮನ ಸಾಂಗತ್ಯದ ಆರಂಭದಲ್ಲಿ ಮುಮ್ಮಡಿಸಿಂಗ ದೇವಗಿರಿ ಯಾದವರಲ್ಲಿ ರಾಜಸೇವೆಗೆ ನಿಂತನೆಂಬ, ಅಲ್ಲಿಂದ ಮಲೆಪಲ್ಲಿ ದೇಶದ ರಾಯದುರ್ಗದಲ್ಲಿ ಆಳಿದನೆಂಬ ಎರಡು ಸಂಧಿಗಳನ್ನು ಹೊಸದಾಗಿ ಸೇರಿಸುವ ಮೂಲಕ ಕಥೆಯನ್ನು ಒಂದಿಷ್ಟು ಹಿಂದಕ್ಕೆ ಒಯ್ಯಲಾಗಿದೆ. ಬಾದೂರನು ಕುಮ್ಮಟದುರ್ಗಕ್ಕೆ ಬಂದ ವಿವರವನ್ನು, ನೇಮಿಯ ಮೊದಲನೆಯ ಕಾಳಗವನ್ನು ಕೈಬಿಟ್ಟು, ಶೂಲದ ಹಬ್ಬದ ವಿವರವನ್ನು ಹೊಸದಾಗಿ ಸೇರಿಸಲಾಗಿದೆ. ಕುಮ್ಮಟದುರ್ಗದ ವರ್ಣನೆ ಹಳೆಯ ಕುಮಾರರಾಮನ ಸಾಂಗತ್ಯದಲ್ಲಿ ೨ನೆಯ ಸಂಧಿಯಾಗಿ ಬಂದರೆ, ಹೊಸ ಕುಮಾರರಾಮನ ಸಾಂಗತ್ಯದಲ್ಲಿ ೮ನೆಯ ಸಂಧಿಯಷ್ಟು ದೂರ ಬಂದಿದೆ. ಇನ್ನು ಕೆಲವು ಸಣ್ಣ ಪುಟ್ಟ ಘಟನೆಗಳನ್ನು (ರಾಮದೇವರಾಯನ ಆಸ್ಥಾನದಲ್ಲಿ ಚಾಮಿದೇವನ ಡೊಂಬರಾಟ, ರತ್ನಾಜಿಯ ತವರು ಮನೆ ವಿವರ ಇತ್ಯಾದಿ) ಅಲ್ಲಲ್ಲಿ ಹೆಚ್ಚಿಗೆ ಸೇರಿಸಲಾಗಿದೆ. ಸುಮಾರು ೩೦೦ ಪದ್ಯಗಳು ಎರಡರಲ್ಲಿಯೂ ಸಮಾನವಾಗಿದೆ. ಹೀಗಿದ್ದೂ ಕೃತಿಶಿಲ್ಪ, ಹೊಸಪದ್ಯಗಳ ಪ್ರಮಾಣ ಇತ್ಯಾದಿಗಳನ್ನು ಗಮನಿಸಿದರೆ ಇವೆರಡೂ ಸ್ವತಂತ್ರ ಕೃತಿಗಳೇ ಆಗಿವೆಯೆಂಬುದು ಸ್ಪಷ್ಟವಾಗುತ್ತದೆ.

ಈ ಎರಡೂ ಕೃತಿಗಳಿಗೆ ಕವಿ ಇಟ್ಟ ಹೆಸರೇನು? ಎಂಬುದು ಈಗ ಬಗೆಹರಿಯದ ಸಮಸ್ಯೆಯಾಗಿದೆ. ಆದರೆ ಪ್ರಾಚೀನ ಕಾಲದಲ್ಲಿ ಒಂದನ್ನು 'ಹಳೆಯ', ಇನ್ನೊಂದನ್ನು 'ಹೊಸ' ವಿಶೇಷಣದಿಂದ ಕರೆಯುವುದು ರೂಢಿಯಲ್ಲಿದ್ದಿತೆಂಬುದು ಕುತೂಹಲದ ಸಂಗತಿಯಾಗಿದೆ.

ಹೀಗೆ ಈ ಕೃತಿಗಳ ನಿಜನಾಮದಂತೆ, ಇವುಗಳ ಕವಿನಾಮವೂ ಚರ್ಚೆಗೆ ಎಡೆಮಾಡಿಕೊಡುತ್ತದೆ. ಎರಡರಲ್ಲಿಯೂ

ಕನ್ನಡ ದೇಶಕ್ಕೆ ರನ್ನದ ಪದಜಾತಿ
ಇನ್ನು ಮುನ್ನಿನ ಪಾಂಚಾಳ ।
ಚೆನ್ನ ಭುಜಂಗನ ಪುತ್ರ ಗಂಗಯ್ಯ ಸಂ
ಪನ್ನ ಹೇಳಿದನೀ ಕೃತಿಯ ॥

ಎಂಬ ಪದ್ಯವಿದೆ. ಇದು, ಈ ಎರಡರಲ್ಲಿ ಮೂಲತಃ ಯಾವ ಕೃತಿಗೆ ಸಂಬಂಧಿಸಿದೆ? ಎಂಬುದು ಇಲ್ಲಿಯ ಮುಖ್ಯ ಪ್ರಶ್ನೆ. ಈ ವರೆಗೆ ವಿದ್ವಾಂಸರು ಭಾವಿಸಿದಂತೆ, ಈ ಪದ್ಯದಿಂದ ಇದನ್ನೊಳಗೊಂಡ ಕಾವ್ಯದ ಕರ್ತೃ ಪಾಂಚಾಳಗಂಗನೆಂಬ ಅರ್ಥ ಹೊರಡುವುದಿಲ್ಲ. ಈ ಮೊದಲು ಪಾಂಚಾಳಗಂಗನೆಂಬುವನು ಈ (ವಸ್ತುವನ್ನು ಕುರಿತು) ಕೃತಿಯನ್ನು ಹೇಳಿದ್ದಾನೆ ಎಂಬ ಅರ್ಥ ಹೊರಡುತ್ತದೆ. ('ಇನ್ನು ಮುನ್ನಿನ' ಗಮನಿಸಿರಿ. ಕೆಲವು ಪ್ರತಿಗಳನ್ನು 'ಇನ್ನು ಮುನ್ನಿನಲಿ' ಎಂದು ಸ್ಪಷ್ಟವಾಗಿಯೇ ಇದೆ.) ಆದುದರಿಂದ ಇದು ಹೊಸ ಕುಮಾರರಾಮನ ಸಾಂಗತ್ಯಕ್ಕೆ ಸಂಬಂಧಿಸಿದ ಪದ್ಯವೆಂದು ನಮ್ಮ ಭಾವನೆ. ಹಾಗಿದ್ದಲ್ಲಿ ಹಸ್ತಪ್ರತಿಗಳಲ್ಲಿ ಗಂಗನನ್ನು ಪ್ರಸ್ತಾಪಿಸುವ

ಪದ ಜಾತಿಗೆ ಪಾಂಚಾಳ ಗಂಗಯ್ಯನು
ಮುದದಿ ಪೇಳಿದನು ಈ ಕೃತಿಯ ।
ಸುಧೆಯ ಸೋನೆಯೊ ಮಾನಿತ ಮಂತ್ರದೇಳಿಗೆಯೊ
ಚದುರ ಸೊಬಗಿನಾ ಗರುವ ॥

ಗರಿಯಿಲ್ಲದಂಬನು ಐನೂರು ಎಚ್ಚರೆ
ಗುರಿಯ ತಾಕುವದೆ ಲೋಕದೊಳು ।
ಗರಿಗಣೆ ಸುದ್ದ ರಾಮನ ಕೃತಿಬಾಣದಿ
ಉರವಿಯೊಳೆಚ್ಚ ಗಂಗಯ್ಯ ॥

ಈ ಪದ್ಯಗಳು ಮಾತ್ರ ಪಾಂಚಾಳ ಗಂಗಯ್ಯ ಬರೆದ ಹಳೆಯ ಕುಮಾರರಾಮನ ಸಾಂಗತ್ಯಕ್ಕೆ ಸಂಬಂಧಿಸಿವೆಯೆಂದು ಹೇಳಬಹುದಾಗಿದೆ. ಈ ವರೆಗಿನ ಚರ್ಚೆಯಿಂದ ಹಳೆಯ ಕುಮಾರರಾಮನ ಚರಿತ್ರೆಯ ಕರ್ತೃ ಪಾಂಚಾಳಗಂಗ, ಹೊಸ ಕುಮಾರರಾಮನ ಸಾಂಗತ್ಯದ

ಕರ್ತೃ ಗೊತ್ತಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.[೩] ಅದೇನೇ ಇದ್ದರೂ, ಬಹುಶಃ ಪಾಂಚಾಳ ಗಂಗನನ್ನು ಹೊರತುಪಡಿಸಿ ಎಲ್ಲ ಕವಿಗಳೂ ವೀರಶೈವರಾಗಿರುವುದು ಒಂದು ವಿಶೇಷ. 'ಪಾಂಚಾಳ' ಎಂಬುದಕ್ಕೆ ಪಾಠಾಂತರಗಳಿರುವುದರಿಂದ, ಶೈವವಾತಾವರಣ ತುಂಬಿಕೊಂಡಿರುವುದರಿಂದ ಗಂಗನ ಕೃತಿಯೂ ಅದರ ಕರ್ತೃ ವೀರಶೈವನೆಂಬ ಸೂಚನೆ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಹೊಸ ಕುಮಾರರಾಮನ ಸಾಂಗತ್ಯದ ಕರ್ತೃವೂ ವೀರಶೈವವೆನ್ನಬೇಕಾಗುತ್ತದೆ.

ಈ ಎರಡು ಕೃತಿಗಳ ಬಗೆಗೆ ಸ್ಪಷ್ಟಮಾಡಿಕೊಂಡು ಮುಂದುವರಿಯುವಲ್ಲಿ ಚಿತ್ರದುರ್ಗದ ಪ್ರೊ. ಬಿ. ರಾಜಶೇಖರಪ್ಪ ಅವರಿಂದ ಕುಮಾರರಾಮನನ್ನು ಕುರಿತ ಒಂದು ತಾಳೆಗರಿ ಹಸ್ತಪ್ರತಿ ನಮಗೆ ಲಭಿಸಿತು. ಇದು ಈ ಹಿಂದೆ ಹುಲ್ಲೂರು ಶ್ರೀನಿವಾಸ ಜೋಯಿಸರು ಹೆಸರಿಸಿದ ನಾಗಸಂಗಯ್ಯನ ಕೃತಿ ಸಂತಾನವೇ ಆಗಿದೆ. ಜೋಯಿಸ ಅವರಿಗೆ ಸಿಕ್ಕಿದ ಕಾರದ ಪ್ರತೀಯ ನಕಲು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ನಮ್ ಹತ್ತಿರದ ಕಾಗದ ಪ್ರತಿಯಲ್ಲಿಯ

ಆಧಾರವಿಡಿದು ಹೇಳಿದ ನಾಗಸಂಗಯ್ಯ
ಈ ಧರೆಯ ವಿದ್ವಾಂಸರೊಳಗೆ
ಸಾಧಿಸಿ ಅವರ ಸೇವಕನಾಗಿ ಪೇಳ್ವೆನು
ಯಾದವಸಖ ಪಾರ್ಥ ಕಥೆಯ ॥

ಎಂಬ ಪದ್ಯವನ್ನು ಗಮನಿಸಿ ಹುಲ್ಲೂರ ಅವರು, ಇದು ಸ್ವತಂತ್ರ ಕೃತಿಯೆಂದೂ, ಇದರ ಕರ್ತೃ ನಾಗಸಂಗಯ್ಯನೆಂದೂ ಪ್ರಚುರಪಡಿಸಿದ್ದಾರೆ. ಆದರೆ ಇದು ಗಂಗನ ವಿಸ್ತೃತ ಪಾಠವೇ ಹೊರತು ಸ್ವತಂತ್ರ ಕೃತಿಯಲ್ಲವೆಂದು ಡಾ. ವರದರಜರಾವ್ ಹೇಳುತ್ತಾರೆ. ಇಲ್ಲಿ ಒಂದಿಷ್ಟು ಚರ್ಚೆ ಅವಶ್ಯ. ಪ್ರೊ. ರಾಜಶೇಖರಪ್ಪ ಅವರಿಂದ ಬಂದ ತಾಳೆ ಪ್ರತಿಯಲ್ಲಿ 'ಆಧಾರವಿಡಿದು ಹೇಳಿದ ನಾಗಸಂಗಯ್ಯ' ಎಂಬುದಕ್ಕೆ ಬದಲು 'ಆಧಾರವಿಡಿದು ಪೇಳಿದನಾಗ ಗಂಗಯ್ಯ' ಎಂಬ ಪಾಠವಿದೆ. ಗಂಗಯ್ಯನೆಂಬುವನು (ಐತಿಹಾಸಿಕ) ಆಧಾರಗಳನ್ನವಲಂಬಿಸಿ ಪೂರ್ವ ಕಾಲದಲ್ಲಿ ಕೃತಿಯೊಂದನ್ನು ಬರೆದಿರುವನೆಂದು ಈ ಪದ್ಯ ಸೂಚಿಸುವಂತಿದೆ. ಆತ ಪಾಂಚಾಳ ಗಂಗನೇ ಆಗಿದ್ದಾನೆ. 'ಅವರ ಸೇವಕನಾಗಿ ಪೇಳ್ವೆನು' ಅಂದರೆ ನಾನು ಆ ಪಾಂಚಾಳ ಗಂಗನ ಸೇವಕನಾಗಿ ಈ ಕೃತಿ ಬರೆಯುತ್ತೇನೆ –ಎಂಬುದು ಇಲ್ಲಿಯ ಆಶಯ. ಇವನ ಹೊಸತನವೆಂದರೆ, ಇದರಲ್ಲಿ ಪ್ರಾರ್ಥನ ಕಥೆಯನ್ನು ಸಮೀಕರಿಸುತ್ತೇನೆ–ಎಂಬುದು. ಈ ಹೇಳಿಕೆಯಂತೆ ಅರ್ಜುನನೇ ಕುಮಾರರಾಮನಾಗಿ, ರಂಭೆಯೇ ರತ್ನಾಜಿಯಾಗಿ ಹುಟ್ಟಿದಳೆಂಬ ತಂತ್ರ ಬಳಸಿ ತನ್ನ ಕಾವ್ಯವನ್ನು ಈತ ಬರೆದಿದ್ದಾನೆ. ಈ ವಿವರಣೆಯ ಹಿನ್ನೆಲೆಯಲ್ಲಿ ಶ್ರೀ ಹುಲ್ಲೂರ ಅವರು ಒಪ್ಪಿಕೊಂಡ ನಾಗಸಂಗಯ್ಯನ ಹೆಸರನ್ನು ಕೈ ಬಿಡಬೇಕಾಗುತ್ತದೆ.

---

೩. ಶ್ರೀ. ಎಸ್. ಆರ್. ಕೂಡ್ಲಿಗಿ ಅವರು ಇದರ ಕರ್ತೃ ಗಂಗಾಧರ ಎಂದು ಹೇಳುತ್ತಾರೆ. (ಜಯಕರ್ನಾಟಕ, ಜೂನ್ ೧೯೪೨). ಇದಕ್ಕೆ ಆಧಾರ ಕೊಟ್ಟಿಲ್ಲ. ಗಂಗ ಎಂಬುದನ್ನೇ ಗಂಗಾಧರ ಎಂದು ಸುಧಾರಣೆ ಮಾಡಿರುವರೇ?

ಕುಮಾರರಾಮನ ಸಾಂಗತ್ಯವನ್ನು ಕುರಿತು ಹುಲ್ಲೂರ ಶ್ರೀನಿವಾಸ ಜೋಯಿಸರು ವಾಗ್ಭೂಷಣದಲ್ಲಿ (೧೯೪೮) ಲೇಖನ ಬರೆದಿರುವರೆಂದೂ, ಇದರಲ್ಲಿ ೮ ಸಂಧಿ, ೧೮೮೫ ಪದ್ಯಗಳಿದ್ದು, ಇದನ್ನು ಬೂದಿಹಾಳ ಗಂಗ ಬರೆದಿರುವನೆಂದೂ ಹೇಳಿರುವರೆಂದು ತಿಳಿದುಬರುತ್ತದೆ. ಗಂಗಾಧರ ಮತ್ತು ಬೂದಿಹಾಳ ಇವೆರಡೂ ಪರಿಶೀಲನಾರ್ಹವಾಗಿದೆ.

ಆದರೆ ಈ ಕವಿ ತನ್ನ ಹೆಸರನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಸದ್ಯ ಕಾಲ, ದೇಶಗಳ ವಿಷಯವಾಗಿ ಏನೂ ಹೇಳುವಂತಿಲ್ಲ. ಕೃತಿನಾಮವನ್ನೂ ನಿರ್ದಿಷ್ಟವಾಗಿ ಉಲ್ಲೇಖಿಸಿಲ್ಲ. ಲಿಪಿಕಾರ ಸೂಚಿಸಿದ 'ಕೊಮಾರ ರಾಮಯ್ಯನ ಚರಿತ್ರೆ' ಎಂಬುದನ್ನು ನಾವು ಸ್ವೀಕರಿಸಿದ್ದೇವೆ.

ಈ ಮೂರು ಕೃತಿಗಳಲ್ಲದೆ ಹಂಪೆಯ ಮಹಾಲಿಂಗಸ್ವಾಮಿ ಬೇರೊಂದು ಕೃತಿ ಬರೆದುದು (ವರದರಾಜರಾವ್ ಪ್ರಕಾರ ಇದರ ಹೆಸರು 'ಬಾಲ ಕೊಮಾರರಾಮನ ಸಾಂಗತ್ಯ') ಎಲ್ಲರಿಗೂ ಗೊತ್ತು. ಇವುಗಳಲ್ಲದೆ ಕುಮಾರರಾಮನನ್ನು ಕುರಿತು ನಂಜುಂಡ ಬರೆದ 'ರಾಮನಾಥ ಚರಿತೆ' ಸರ್ವಶ್ರುತ. ಆದುದರಿಂದ ಮೇಲೆ ವಿವೇಚಿಸಿದಂತೆ ಈವರೆಗೆ ಕುಮಾರರಾಮನನ್ನು ಕುರಿತು ಹೀಗೆ ೫ ಕೃತಿಗಳು ಹುಟ್ಟಿವೆ:

೧. ಹಳೆಯ ಕುಮಾರರಾಮನ ಸಾಂಗತ್ಯ – ಪಾಂಚಾಳ ಗಂಗ

೨. ಹೊಸ ಕುಮಾರರಾಮನ ಸಾಂತ್ಯ – ಅನಾಮಧೇಯ ಕವಿ – ೧

೩. ಕೊಮಾರರಾಮಯ್ಯನ ಚರಿತ್ರೆ – ಅನಾಮಧೇಯ ಕವಿ – ೨

೪. ಬಾಲ ಕೊಮಾರ ರಾಮನ ಸಾಂಗತ್ಯ – ಮಹಾಲಿಂಗಸ್ವಾಮಿ

೫. ರಾಮನಾಥ ಚರಿತೆ – ನಂಜುಂಡ

ಈ ಐದರಲ್ಲಿ ನಂಜುಂಡನ ಕೃತಿ ಮಾತ್ರ ಪ್ರಕಟವಾಗಿದ್ದಿತು. ಕಳೆದ ವರ್ಷ ಅನಾಮಧೇಯ ಕವಿಯ 'ಹೊಸ ಕುಮಾರರಾಮನ ಸಾಂಗತ್ಯ' ನನ್ನಿಂದ ಪರಿಷ್ಕರಿಸಲ್ಪಟ್ಟು ಪ್ರಕಟವಾಗಿದ್ದು, ಈಗ ಇನ್ನೊಬ್ಬ ಅನಾಮಧೇಯ ಕವಿಯ 'ಕೊಮಾರ ರಾಮಯ್ಯನ ಚರಿತ್ರೆ' ಬೆಳಕು ಕಾಣುತ್ತಲಿದೆ.

ಕೊಮಾರ ರಾಮಯ್ಯನ ಚರಿತ್ರೆ

ಮೇಲೆ ವಿವರಿಸಿದಂತೆ ಈ ಕವಿಯ ಹೆಸರಾಗಲೀ, ಕೃತಿಯ ಹೆಸರಾಗಲೀ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಶ್ರೀ ಹುಲ್ಲೂರ ಅವರು ಹೆಸರಿಸಿರುವ 'ನಾಗಸಂಗಯ್ಯ' ಎಂಬುದು ಲಿಪಿಕಾರರು ಸೃಷ್ಟಿಸಿದ ಪಾಠಭೇದದಿಂದ ಮತ್ತು ವಿದ್ವಾಂಸರು ತಪ್ಪಾಗಿ ಓದುವುದರಿಂದ ಹುಟ್ಟಿದುದಾಗಿದೆ. ಆದುದರಿಂದ ಕನ್ನಡದ ಅನೇಕ ಕೃತಿಗಳಂತೆ ಈ ಕೃತಿ ಕರ್ತೃವಿನ ಹೆಸರೂ ಅಜ್ಞಾತವೆಂದು ಹೇಳಬಹುದಾಗಿದೆ. ಹೀಗೆ ಕರ್ತೃನಾಮ ನಮೂದಿಸದೇ ಇರುವುದಕ್ಕೆ ಗದುಗಿನ ಭಾರತ, ಪ್ರಭುಲಿಂಗಲೀಲೆ ಕರ್ತೃಗಳ ಧೋರಣೆಗಿಂತ, ಜನಪದ ಕೃತಿಕರ್ತೃಗಳ ಧೋರಣೆ ಕಾರಣವಾಗಿರುವಂತಿದೆ. ಆದುದರಿಂದ ಜನಪದ ಕೃತಿಯ ಕವಿನಾಮ ಜೀವಿತ ಕಾಲಗಳಂತೆ ಈ ಕೃತಿಯ ಕವಿನಾಮ ಜೀವಿತಕಾಲ ಸಿಗುವುದಿಲ್ಲವೆಂದೇ ತೋರುತ್ತದೆ. ಕವಿನಾಮ ಬಿಟ್ಟರೂ ಕಾಲ ವಿಷಯವಾಗಿ ಆಂತರಿಕ ಆಧಾರಗಳೂ ಸಿಗುವುದಿಲ್ಲ. ಆರಂಭದ 'ಶ್ರೀ ಗಿರಿಜಾಸ್ಯಾಂಬುಜ ದಿನನಾಯಕ' ಎಂಬ ಪದ್ಯ ಹಳೆಯ ಕುಮಾರರಾಮನ ಸಾಂಗತ್ಯ, ಬಾಲ ಕುಮಾರನಸಾಂಗತ್ಯಗಳನ್ನು ಹೊರತುಪಡಿಸಿ ಮಿಕ್ಕ ಮೂರರಲ್ಲಿಯೂ ಅಂದರೆ ರಾಮನಾಥ ಚರಿತೆ, ಕೊಮಾರರಾಮಯ್ಯನ ಚರಿತ್ರೆಗಳ ಎಲ್ಲ ಸಂಧಿಗಳ ಆದಿಯಲ್ಲಿ, ಹೊಸ ಕುಮಾರರಾಮನ ಸಾಂಗತ್ಯದ ಕೆಲವು ಸಂಧಿಗಳ ಆದಿಯಲ್ಲಿ ಕಂಡುಬರುತ್ತದೆ. ಹೀಗಾಗಿ ಮೂಲತಃ ಈ ಪದ್ಯ ಯಾರದು? ಸ್ಪಷ್ಟವಾಗುವುದಿಲ್ಲ. ನಂಜುಂಡನದೆನ್ನಬೇಕೆಂದರೆ ಅವನ ಕೃತಿಯ ಕೆಲವು ಹಸ್ತಪ್ರತಿಗಳಲ್ಲಿಯೂ ಕೆಲವೊಮ್ಮೆ ಈ ಪದ್ಯ

ಕಂಡುಬರುವುದಿಲ್ಲ. ಹೀಗಾಗಿ ಇವರಲ್ಲಿ ಯಾರು ಮೊದಲು, ಯಾರು ಆಮೇಲೆ ಎಂದು ನಿಕರವಾಗಿ ನಿರ್ಣಯಿಸುವುದು ಕಷ್ಟ. ಹೀಗಿದ್ದೂ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಚರಿತ್ರೆ, ರಾಮನಾಥ ಚರಿತ್ರೆ ಎಂದು ಕಾಲಕ್ರಮವನ್ನು ಹೇಳಬಹುದಾದರೂ, ಮಹಾಲಿಂಗಸ್ವಾಮಿ ಈ ಕ್ರಮದಲ್ಲಿ ಎಲ್ಲಿ ನಿಲ್ಲುವನೆಂಬುದು ಸ್ಪಷ್ಟವಾಗುವುದಿಲ್ಲ. ಕೊನೆಯ ಪಕ್ಷ ಎಲ್ಲರಿಗೂ ಮೂಲವಾಗಿರುವ ಗಂಗನ ಕಾಲವೂ ಗೊತ್ತಾಗುವುದಿಲ್ಲ. ಇದೇ ರೀತಿ ಈ ಕವಿಯ ಸ್ಥಳವಾಗಲೀ, ಮಿಕ್ಕ ವಿವರಗಳಾಗಲೀ ಸಿಗುವುದಿಲ್ಲ.

ಕೃತಿ–ಆಕೃತಿ–ಸಂಸ್ಕೃತಿ

ಜೀವನವೆನ್ನುವುದು ಕ್ರಿಯಾ ಸರಣಿಯಾಗಿರುವುದರಿಂದ ಪ್ರತಿಯೊಬ್ಬನ ಜೀವನ ಬೃಹತ್ 'ಕೃತಿ' ಎನಿಸುತ್ತದೆ. ಶಾಸನಗಳಲ್ಲಿ ಕುಮಾರರಾಮನ 'ಜೀವನಕೃತಿ'ಗೆ ಸಂಬಂಧಪಟ್ಟ ವಿವರಗಳು ಕಡಿಮೆ. ಜನಪದ ಸಾಹಿತ್ಯದಲ್ಲಿ ಒಂದಿಷ್ಟು ವಿವರಗಳಿದ್ದರೂ ಅದು ಬಾಯಿಯಿಂದ ಬಾಯಿಗೆ ಬದಲಾಗುತ್ತ ಬಂದ ಪಾಠ. ಆದುದರಿಂದ ಕವಿಯ ಕಾಲದಷ್ಟು ಹಿಂದೆ ದಾಖಲಾಗಿರುವ ಮತ್ತು ತುಂಬ ವಿವರಣಾತ್ಮಕವಾಗಿರುವ ಕಾವ್ಯಗಳಲ್ಲಿ ಮಾತ್ರ ಅದು ವಿಸ್ತಾರವಾಗಿ ಮೂಡಿರುತ್ತದೆ.

ಕೃತಿ : ಕುಮಾರರಾಮನನ್ನು ಕುರಿತು ಹುಟ್ಟಿರುವ ಐದು ಕಾವ್ಯಗಳಲ್ಲಿ ಚರಿತ್ರೆಯ ಚಿತ್ರಣ ಒಂದಿಷ್ಟು ವಿಭಿನ್ನವಾಗಿದೆ. ಕಾವ್ಯವಾಗಿರುವ ಕೊಮಾರ ರಾಮಯ್ಯನ ಚರಿತ್ರೆ ತನ್ನ ಅಳವಿಗೆ ಸಿಕ್ಕಷ್ಟು, ನಿಲವಿಗೆ ತಕ್ಕಷ್ಟು ಸೆರೆಹಿಡಿದಿರುವ ಇವನ 'ಜೀವನಕೃತಿ' ಹೀಗಿದೆ.

ಸಂಧಿ : ೧

ಶಿವ, ಪಾರ್ವತಿ, ವೀರಭದ್ರ, ಕೃಷ್ಣ – ಇವರಿಗೆ ಶರಣು ಸಮರ್ಪಿಸಿ, ಈ ಕಥೆಯನ್ನು ಆರಂಭಿಸುತ್ತೇವೆ.

ಅರ್ಜುನನ್ನು ಕರ್ನಾಟಕದಲ್ಲಿ ಹುಟ್ಟಿ, ಪರನಾರೀ ಸಹೋದರನಾಗಿ ಮೆರೆದ ಕಥೆಯನ್ನು ವಿವರಿಸುತ್ತೇನೆ. ಈ ಹಿಂದೆ (ಐತಿಹಾಸಿಕ) ಆಧಾರಗಳನ್ನು ಆಧರಿಸಿ ಗಂಗಯ್ಯನೆಂಬುವನು ಈ ಕಥೆಯನ್ನು ಹೇಳಿದನು. ಆತನಿಗೆ ವಿನೀತನಾಗಿ, ಕುಮಾರರಾಮನನ್ನು ಅರ್ಜುನನೊಂದಿಗೆ ಸಮೀಕರಿಸಿ, ನಾನು ಮತ್ತೆ ಆ ಕಥೆಯನ್ನು ಈಗ ವಿವರಿಸುತ್ತೇನೆ.

ಪೊವಲಿ ಮನೆತನದ ಮುಮ್ಮಡಿ ಸಿಂಗನು ಕಂಪಣವೊಂದಕ್ಕೆ ಅರಸನಾಗಿದ್ದನು. ಇವನ ಹೆಂಡತಿ ಮಂಚಕ್ಕ. ಈಕೆ ಮನೆದೈವ ಕಂಪಿಲದೇವರಿಗೆ ಪುತ್ರಭಿಕ್ಷೆ ಬೇಡಿದಳು. ಬಿಲ್ಲ ಮೇಲಿನ ಪುಷ್ಪವನ್ನು ವರವಾಗಿ ಪಡೆದು, ಮಗನನ್ನು ಹಡೆದು, ಕಂಪಿಲರಾಯನೆಂದು ಹೆಸರಿಟ್ಟಳು.

ಮುಮ್ಮಡಿಸಿಂಗ ವೃದ್ಧಾಪ್ಯ ಕಾರಣವಾಗಿ ಮಡಿದನು. ಬರಗಾಲ ಬಂದಿತು. ಆಗ ವಿಧವೆ ಮಂಚಕ್ಕ ನಾಲ್ಕಾರು ಬೇಡ ಕುಟುಂಬ ಸಹಿತ ಮಗನೊಂದಿಗೆ ಜಟ್ಟಂಗಿ ರಾಮೇಶ್ವರ ಬೆಟ್ಟಕ್ಕೆ ವಲಸೆ ಬಂದಳು. ಕಾಲ ಗತಿಸಿತು. ಈ ಬೇಡ ಕುಟುಂಬಗಳು ಬೇಟೆಯಾಡುತ್ತ ಲೋಹಾರಿ ಗಿರಿಗೆ ಬಂದವು. ಅಲ್ಲಿಯ ಕೋಟೇಶ್ವರ (ಷಣ್ಮುಖ)ನಿಗೆ ನಮಸ್ಕರಿಸಿ, ಮುಂದೆ ಸಾಗಿ, ಹೊಸಮಲೆಗೆ ಬಂದು, ಶಾಶ್ವತ ನೆಲೆಯೂರಿದವು.

ಸಂಧಿ : ೨

ಜಗತ್ತಿನಲ್ಲಿಯೇ ಶ್ರೇಷ್ಠವಾದುದು ಕರ್ನಾಟಕ. ಅಲ್ಲಿಯ ವಿದ್ಯಾನಗರದ ದಕ್ಷಿಣಕ್ಕೆ ಹೊಸಮಲೆಯಿದೆ. ಇಲ್ಲಿ ವಾಸವಾಗಿದ್ದ ಕಿರಾತನಾದ ಕಂಪಿಲರಾಯನು ದಾರಿ ಸುಲಿದು, ಗುತ್ತಿಯ ಜಗದಪ್ಪನಿಗೆ ಕಪ್ಪನಿತ್ತು, ಹತ್ತೆಂಟು ಗ್ರಾಮಗಳನ್ನಾಳುತ್ತಿದ್ದನು. ಕಂಪಿಲರಾಯ ಹೊಸಮಲೆಯಲ್ಲಿ ದುರ್ಗ ಕಟ್ಟಿಸಿದ. ಅಗುಳು, ಆಳ್ವೇರಿ, ಜಿಡ್ಡಿ, ಕೊತ್ತಳ, ಹುಲಿಮುಖ, ಕೋಟೆಯ ತೆನೆಗಳಿಂದ; ಸೋಮವೀಧಿ, ಸೂರ್ಯವೀಧಿ, ಉಪ್ಪರಗುಡಿ, ನವಿಲುಯ್ಯಲೆ, ಅಂಗಡಿ, ರಂಗಮಂಟಪ, ಕೆಂಡದೋಕುಳಿಗಳಿಂದ ಅದು ಶೋಭಿಸುತ್ತಿದ್ದಿತು.

ಹೀಗಿರಲು ಗುಜ್ಜಾರಿಯನ್ನಾಳುತ್ತಿದ್ದ ಅರೆಯ ಚಾರಮರಾಯ ರಾಜ್ಯಭ್ರಷ್ಟನಾಗಿ ವರುಣನ ನದಿಯೆಂಬ ಕೃಷ್ಣೆಯನ್ನು ದಾಟಿ ಕಂಪಿಲನ ಹತ್ತಿರ ಬಂದನು. ಮಗಳು ಹರಿಯಲದೇವಿಯನ್ನು ಕಂಪಿಲನಿಗೆ ಧಾರೆಯೆರೆದು, ಅವನಿಂದ ಪಡುವಣರಾಜ್ಯ ಪಡೆದು, ಅಲ್ಲಿಯೇ ಉಳಿದನು.

ಕಂಪಿಲರಾಯ, ಹರಿಯಲದೇವಿ ಸುಖದಲ್ಲಿದ್ದರು. ಆಗ ಕೈಲಾಸದಲ್ಲಿ ಒಂದು ಘಟನೆ ಜರುಗಿತು: ಶಿವನ ಒಡ್ಡೋಲಗದಲ್ಲಿ, ಅರ್ಜುನ ಗಣನಾಥ ಕುಳಿತಿದ್ದನು. ಆಗ ಪರಿವಾರದೊಂದಿಗೆ ಬಂದ ಪಾರ್ವತಿಯನ್ನು ಅವನು ಕಣ್ಣೆತ್ತಿಯೂ ನೋಡಲಿಲ್ಲ. ಇದನ್ನು ಗಮನಿಸಿದ ಆಕೆ, ಅರ್ಜುನನಿಗೆ ಅಹಂಕಾರವನ್ನು ಆರೋಪಿಸಿದಳು. ಆಗ ಶಿವ 'ಇದು ಅಹಂಕಾರವಲ್ಲ. ಪರನಾರೀ ಸಹೋದರ ಭಾವನೆಯವನಾಗಿರುವುದರಿಂದ ಹೀಗೆ ವರ್ತಿಸಿದ' ಎಂದು ಹೇಳುತ್ತಲೇ, ಪಾರ್ವತಿ 'ಹಾಗಿದ್ದರೆ ರಂಭೆಯ ಮೂಲಕ ಇವನ ವ್ರತ ಪರೀಕ್ಷಿಸುತ್ತೇನೆ' ಎಂದಳು. 'ಈ ನನ್ನ ಅರ್ಜುನ ಮತ್ತು ಆ ನಿನ್ನ ರಂಭೆ ಭೂಲೋಕದಲ್ಲಿ ಜನಿಸಲಿ' ಎಂದು ನುಡಿದ ಶಿವನ ಆದೇಶದಂತೆ, ಅವರು ಮರ್ತ್ಯದಲ್ಲಿ ಹುಟ್ಟಬೇಕಾಯಿತು.

ಹರಿಯಲದೇವಿ ಪುತ್ರನನ್ನು ಬಯಸಿ ಜಟ್ಟಂಗಿ ರಾಮೇಶ್ವರನನ್ನು ಪ್ರಾರ್ಥಿಸಿದಳು. ದೇವರಿಗೆ ಮೀಸಲ ಹಾಲು, ತುಪ್ಪ, ಬಾಳೆಹಣ್ಣು, ಸಣ್ಣಕ್ಕಿ, ಬೇಳೆ ಕಳಿಸಿದಳು. ಸ್ವೀಕರಿಸಿದ ಪೂಜಾರಿ ದೇವರ ವರಪೆಂದು ಬಾಳೆಹಣ್ಣು, ಹೂವು ಕೊಟ್ಟು ಕಳಿಸಿದ, ಹರಿಯಲದೇವಿ ಅಂದು ನಿದ್ರೆಯಲ್ಲಿ ದೇವರು ಹೂವು ಕೊಟ್ಟ ಸ್ವಪ್ನ ಕಂಡಳು. ಅರ್ಜುನ ಮಗನಾಗಿ ಹುಟ್ಟುವನೆಂದು ಹೇಳಿದಂತಾಯಿತು. ಒಂಬತ್ತು ತಿಂಗಳು ತುಂಬಿ ಗಂಡುಮಗನಿಗೆ ಜನ್ಮನೀಡಿದಳು ಇದೇ ಕಾಲಕ್ಕೆ ರಾಣಿ ತಿಂದು ಎಸೆದು ಹಣ್ಣಿನ ಸಿಪ್ಪೆ ಸೇವಿಸಿದ ದಾಸಿ, ಕಳ್ಳರಾಮನಿಗೆ ಜನ್ಮನೀಡಿದಳು. ಹರಿಯಲದೇವಿ ಮಗನಿಗೆ ರಾಮ ಎಂದು ಹೆಸರಿಟ್ಟಳು. ಅರಳೆಲೆ, ಮಾಗಾಯಿ, ಬೆರಳಹೊನ್ನುಂಗುರ, ಕೊರಳ ಮುತ್ತಿನ ಹಾರ, ಸರಪಳಿ ಗೆಜ್ಜೆ, ಹೊನ್ನುಡಿದಾರದಿಂದ ಮಗುವನ್ನು ಅಲಂಕರಿಸಿದರು. ಓದು, ಸಾಧನೆ, ಕಾದಾಡುವ ರೀತಿ, ಗಜ–ತುರಗ ಹೋರಾಟ, ವಾದಗಳಲ್ಲಿ ಪರಿಣತನಾಗಿ ಮಗ ಬೆಳೆದನು.

ಸಂಧಿ : ೩

ಇತ್ತ ಸಾಲ್ಗುಂದಿ ಮುಕ್ಕುಂದಿ ಗ್ರಾಮದ ದೇವಿರೆಡ್ಡಿ – ಎಲ್ಲಮ್ಮ ದಂಪತಿಗಳ ಗರ್ಭದಿಂದ ರಂಭೆ ರತ್ನಾಜಿಯಾಗಿ ಹುಟ್ಟಿದಳು. ಅರಳೆಲೆ, ಮಾಗಾಯಿ, ಮೂರುಡಿಯ ಸರಪಳಿ, ಕೊರಳ

ರತ್ನಹಾರ, ಹರಳುಂಗುರ, ಕಾಲಕಡೆ, ಪೆಂಡೆಯದಿಂದ ಮಗುವನ್ನು ಅಲಂಕರಿಸಿದರು. ಮಗಳು ಯುವತಿಯಾಗಿ ಬೆಳೆದಳು.

ಬೇಟೆಗೆ ಬಂದ ಕಂಪಿಲರಾಯ, ಈ ಯುವತಿಯ ರೂಪಕ್ಕೆ ಮರುಳಾದ. ಕನ್ಯೆಯನ್ನು ಕೇಳಿ ಅವಳ ತಂದೆ ತಾಯಿಯಲ್ಲಿಗೆ ಚರನನ್ನು ಕಳಿಸಿದ. ಕಿರಾತನಿಗೆ ಕನ್ಯೆ ಕೊಡಲು ಅವರು ನಿರಾಕರಿಸಿದರು. ಕೊನೆಗೆ ಕನ್ನೆಯನ್ನೇ ಕೇಳಿ, ಒಪ್ಪಿಗೆ ಪಡೆದು, ಸಾಲಗುಂದಿ ಅರಮನೆ, ಎರಡು ಗ್ರಾಮ ನೀಡಿ ಅವಳನ್ನು ಕರೆದುಕೊಂಡು ಬಂದನು.

ಈ ಸುದ್ದಿ ಕೇಳಿ ಹರಿಯಲದೇವಿ ದುಃಖಿತಳಾದಳು. ಮಗ ರಾಮನೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿ 'ಮಾಗಿಯ ಕೋಗಿಲೆ'ಯಂತೆ ಮೌನತಾಳಿದಳು.

ಸಂಧಿ : ೪

ರಾಮಯ್ಯ 'ಕೋಮಲೆಯರ ಕಣ್ಣ ಬೇಟಕ್ಕೆ ಸಿಲುಕದ' ವ್ರತ ಹಿಡಿದ. ಮೇಘವಾಹನಾ ಚಾರಿಯನ್ನು ಕರೆಯಿಸಿ, 'ಪರನಾರಿ ಸಹೋದರ' ಹೆಸರಿನ ನವರತ್ನ ಖಚಿತ ಬಿರುದ ಮಾಡಿಸಿ, ಎಡಗಾಲಿನಲ್ಲಿ ಧರಿಸಿದ. ಬೇಟೆಗಾಗಿ ಹಂಪಿಯ ಮಾರ್ಗದಲ್ಲಿ ನಡೆದ ರಾಮಯ್ಯ ಕಾಟಣ್ಣ ಮೊದಲಾದವರು ದುರ್ಗವೊಂದನ್ನು ಕಂಡರು. 'ರಾಮನ ಕುಮ್ಮಟ'ವೆಂದು ಅದಕ್ಕೆ ಹೆಸರಿಟ್ಟು, ಹೊಸಮಲೆಗೆ ಬಂದರು. 'ರಾಯರ ಗರ್ಭದೊಳ್ ಜನಿಸಿದ ಬಳಕಿನ್ನು ಕಾಯದಾಸೆಯ ಬಿಡಬೇಕು' ಎಂಬ ಧ್ಯೇಯದ ರಾಮಯ್ಯ, ಕುಮ್ಮಟದುರ್ಗ ನಿರ್ಮಿಸುವ ವಿಚಾರವನ್ನು ತಂದೆಗೆ ಹೇಳಿದನು. ದುರ್ಗ ನಿರ್ಮಾಣ ಆರಂಭವಾಯಿತು. ಕೋಟೆ, ಅರಮನೆ ಎದ್ದು ನಿಂತವು. ಎಮ್ಮೆ, ಆಕಳ ಹಿಂಡು ನೆರೆದವು. ಕೋಟೆ, ಕೊತ್ತಳ, ಅಗುಳು, ತೋಟ, ವನ, ಕೆರೆ, ಬಾವಿ, ರಾಜಬೀದಿ, ಪೇಟೆಸಾಲು, ಉಪ್ಪರಿಗೆ ಮನೆ, ಕಾಟಣ್ಣನ ಅರಮನೆ, ಅಂಗಡಿ ಬೀದಿ, ರಂಗ ಮಂಟಪ, ಸೂಳೆಗೇರಿ, ದೊಡ್ಡ ಅರಮನೆ, ಚಿಕ್ಕ ಅರಮನೆ, ಆನೆಸಾಲು ಬೀದಿ, ಜಿಡ್ಡಿ, ಬಾಗಿಲು, ಹೊರಕೋಟೆ, ಶೃಂಗಾರ ತೋಟ, ರತ್ನಿಯ ಅರಮನೆ, ನಾಟಕ ಶಾಲೆ, ಕುದುರೆಲಾಯ, ಆಟ–ಪಾಟ ನೋಡುವ ಚಾವಡಿ, ಮಹಾನೌಮಿ ಮಂದಿರ, ರಾಮಯ್ಯನ ಅರಮನೆ, ಬೈಚಪ್ಪನ ಅರಮನೆ, ಮನ್ನೆಯರ ಕೇರಿ, ಕಾರಾಗ್ರುಹ, ಐದಾಯಿಗಳ ಬಾಜಾರ, ಹಾರೋರ ಕೇರಿ, ಹರದರ ಕೇರಿ, ಚಾರಮರಾಯನ ಅರಮನೆ, ಮಾರೆಮ್ಮ – ಸಿಂಗಮ್ಮಗಳ ಅರಮನೆ, ಹೊಸಬರ – ಹಳಬರ – ಅಗಸರ ಕೇರಿ, ಮೊಸರು ಮಾರುವ ಬಾಜಾರ, ಶಿಶುವಿಗೆ ಹಾಲ್ಪೆಣ್ಣೆ ಮನೆ, ಛತ್ರದ ಮನೆ ನಿರ್ಮಾಣವಾದವು.

ದುರ್ಗಕ್ಕೆ ಕುರಿ ಕೋಣಗಳ ಬಲಿಶಾಂತಿ, ಬ್ರಾಹ್ಮಣರಿಗೆ ಅನ್ನಶಾಂತಿ ಜರುಗಿತು. ಮಲ್ಲೇಶನ ಗುಡಿಯ ಮುಂದೆ ಪಟ್ಟಣ ಬೆಳೆದು ನಿಂತಿತು. ಹೊಸಮಲೆದುರ್ಗವನ್ನು ಬಿಟ್ಟು ಎಲ್ಲರೂ ಕುಮ್ಮಟದುರ್ಗಕ್ಕೆ ಬಂದರು. 'ಅನ್ನುಂಟು ಆಳಿಲ್ಲ, ಹೊನ್ನುಂಟು ಕುದುರಿಲ್ಲ.' ಈ ಕೊರತೆಯನ್ನು ತುಂಬಿಕೊಳ್ಳುವದಕ್ಕಾಗಿ ಬಾಬೋಜಿ ಮಲ್ಲನನ್ನು ಅತ್ತಿತ್ತ ಕಳಿಸಿ, ಸೈನ್ಯ ಸಂಗ್ರಹಿಸಲಾಯಿತು. ಕುಮ್ಮಟದಲ್ಲಿ ಬೇಡರ ಪಡೆ ನಿರ್ಮಾಣವಾಯಿತು. ಎಪ್ಪತ್ತು ಮಂದಿ ಮನ್ನೆಯರನ್ನು ಆಮಂತ್ರಿಸಿ, ಹೊನ್ನ ಹಂಚಲಾಯಿತು. ಮೇಚ (ಬೇಡ)ರಿಗೆ ಹೊನ್ನು ಜವಳಿ ಉಡುಗೊರೆ ನೀಡಲಾಯಿತು. ಚಾರಮರಾಯನ ಮಕ್ಕಳ ಆರುನೂರು ಕುದುರೆ, ತನ್ನ ಲಾಯದ ಮುನ್ನೂರು ಕುದುರೆ, ಕಾಟಣ್ಣನ ಹನ್ನೊಂದು ಸಾವಿರ ಕುದುರೆ ನೆರೆದವು.

ಸುತ್ತಲಿನ ರಾಜ್ಯಗೆದೆಯಲು ರಾಮಯ್ಯ ಸಿದ್ಧನಾದ. ಹಾನ್ಗಲ್ಲ ಸೀಮೆ ಮತ್ತು ನಾನಾ ರಾಜ್ಯಗಳನ್ನು ಸುಲಿಯಲಾಯಿತು. ನೀಲನನ್ನೇರಿ ರಾಮ ಬಾದಾಮಿ ತನಕ ನಡೆದ. ಕರಿಯ ಹೊಳೆದಾಟ ಮುನ್ನಡೆದು, ಕುಮ್ಮಟಕ್ಕೆ ಮರಳಿ ಬಂದ.

ಸುತ್ತಲಿನ ಪಾಳೆಗಾರರು ಒಂದೆಡೆ ಸೇರಿ, ತಮ್ಮ ಅರಸು ಹೊಯ್ಸಳ ಬಲ್ಲಾಳನಿಗೆ ರಾಮಯ್ಯನ ಬಗ್ಗೆ ದೂರು ಹೇಳಿದರು: 'ಕುಮಾರರಾಮ ನೇಮಿಯ ಎದುರು ದಂಡು ಸಿದ್ಧಪಡಿಸಿದ, ಹಳ್ಳಿ ಪಳ್ಳಿ ಊರು ಸೀಮೆ ಸುಟ್ಟ, ದೊಡ್ಡ ದೊಡ್ಡ ಗ್ರಾಮಗಳನ್ನು ಕಟ್ಟಿಸಿದ. ಈತನ ಖಡ್ಗಕ್ಕೆ ಎದುರಾಗಿ ನಿಲ್ಲುವವರು ಇಲ್ಲ'ವೆಂದು ದೂರಿದರು. ಬಲ್ಲಾಳ ಇವರೆಲ್ಲರಿಗೆ ಅಭಯ ನೀಡಿದನು.

ಈ ಪಾಳೆಯಗಾರರು ಗುತ್ತಿಯ ಜಗದಪ್ಪನಲ್ಲಿಗೂ ಹೋಗಿ, 'ಕಂಪಿಲನು ರಾಮನ ಮೂಲಕ ನೆರೆಯ ರಾಜ್ಯಗಳನ್ನು ಮತ್ತು ಕೋಟೆಗಳನ್ನು ವಶಪಡಿಸಿಕೊಳ್ಳುತ್ತಲಿದ್ದಾನೆ' ಎಂದು ನಿವೇದಿಸಿದರು. ಅವರಿಗೆ ಜಗದಪ್ಪ ಸಮಾಧಾನ ಹೇಳಿದನು. ರಾಮನ ಈ ಎಲ್ಲ ಚಟುವಟಿಕೆ ದಿಲ್ಲಿ ಸುರಿತಾಳನ ಕಿವಿಗೆ ಮುಟ್ಟಿತು. ಸುರಿತಾಳನ ಮಗಳು ಪರಾಕ್ರಮಿಯೂ ಚೆಲುವನೂ ಆಗಿದ್ದ ರಾಮನನ್ನು ಮದುವೆಯಾಗ ಬಯಸಿದಳು.

ಸಂಧಿ : ೫

ಸುರಿತಾಳನು ಮಗಳು ಬಾಬಮ್ಮನ ಮದುವೆ ಬಗ್ಗೆ ಯೋಚಿಸಿದ. ದೇಶದೇಶದ ಖಾನ ವಜೀರರನ್ನು ಕರೆಸಿದ. ಬಾಬಮ್ಮ ಒಪ್ಪಲಿಲ್ಲ. ಅಷ್ಟರಲ್ಲಿ ಕಾಶಿ-ರಾಮೇಶ್ವರ ಯಾತ್ರೆ ಮುಗಿಸಿಕೊಂಡು ಬ್ರಾಹ್ಮಣರು ಡಿಳ್ಳಿಗೆ ಬಂದರು. ಸೇನಾಪತಿ ನೇಮಿಖಾನ ಅವರಿಗೆ ಸ್ವಯಂಪಾಕಕ್ಕಾಗಿ ತುಪ್ಪ, ಅಕ್ಕಿ, ಬೇಳೆ, ಸಕ್ಕರಿ, ಗೋಧಿಹಿಟ್ಟು ವ್ಯವಸ್ಥೆ ಮಾಡಿದ. 'ಬಾದಶಹನ ಮಗಳಿಗೆ ಯೋಗ್ಯನಾದ ವರವನ್ನು ನೀವು ಎಲ್ಲಿಯಾದರೂ ಕಂಡಿರಾ?' ಎಂದು ಕೇಳಿದ. ಮುನ್ನೂರ ಅರವತ್ತು ಗಾವುದ ದೂರದಲ್ಲಿ ಕುಮ್ಮಟದುರ್ಗವಿದೆ. ಅಲ್ಲಿಯ 'ಚೆನ್ನಿಗ ರಾಮ ಕಾಮನ ರೂಪಿಗತಿ ಚೆಲ್ವ' ಎಂದು ಹೇಳಿದರು. ಸುರಿತಾಳನೂ ಬ್ರಾಹ್ಮಣರನ್ನು ಕರೆಸಿ ಕೇಳಿದ. 'ನಳನೋ, ಜಯದ್ರಥನೋ, ನಳಿನನಾಭನೋ, ಮನ್ಮಥನೋ ಎಂಬಂಥ ರೂಪ. ಖಡ್ಗದಲ್ಲಿ ಸಮರ್ಥ' ಎಂದೆಲ್ಲ ಹೇಳಿದರು. ಇದನ್ನು ಕೇಳಿ 'ರಾಮನಲ್ಲದೆ ಬೇರೆಲ್ಲರು ನನಗೆ ತಂದೆ ಸಮಾನ' ಎಂದು ಬಾಬಮ್ಮ ಹಟಹಿಡಿದಳು. ಅವನಿಗೆ ಸೂನಿತ ಮಾಡಿ ಅಳಿಯನನ್ನಾಗಿಸಿಕೊಳ್ಳಲು ಸುರಿತಾಳ ಯೋಚಿಸಿದ. ನೇಮಿಯ ಸೂಚನೆಯಂತೆ, ದೇಶ ದೇಶದ ರಾಜರಿಂದ ಕಪ್ಪಕಾಣಿಕೆ ತರಲು, ರಾಮನನ್ನು ವಶಪಡಿಸಿಕೊಂಡು ಬರಲು ಪಗುದಿಯಖಾನ, ಆಕಾಶಖಾನ, ಅಬ್ದುಲಖಾನ, ಖಂಡೆಯಖಾನರು ಸಜ್ಜಾದರು. "ಐವತ್ತಾರು ದೇಶ ಸುತ್ತಿರಿ. ಮೈಲಾಪುರಿ, ಮಲೆಯಾಳ, ಕೊಂಕಣ, ಐಗಾರರೆಡ್ಡಿ ಇತ್ಯಾದಿ ಪಾಳ್ಯಗಳಿವೆ. ಕರ್ನಾಟಕದಲ್ಲಿ ಚಿಕ್ಕ ಪಾಳ್ಯಗಳಿವೆ. ಮಿಕ್ಕ ಪಾಳೆಯಗಾರರು ಜಗದಪ್ಪನ ವಶದಲ್ಲಿದ್ದಾರೆ. ಐಗಾರ ರೆಡ್ಡಿಯನ್ನು ಸುಲಿಯಿರಿ. ಇವರೆಲ್ಲರಿಂದ ಸಂಗ್ರಹಿಸಿದ ಕಪ್ಪ ಕಾಣಿಕೆಯನ್ನು ದಿಲ್ಲಿಗೆ ಕಳಿಸಿ, ಕುಮ್ಮಟದುರ್ಗಕ್ಕೆ ಹೋಗಿರಿ. ಒಮ್ಮನ ಹೊನ್ನ ಕೇಳಿರಿ, ಕೊನೆಗೆ ಕೊಟ್ಟಷ್ಟು ಪಡೆದು, ಕುಮಾರರಾಮನ ರೂಪ ಸಾಮರ್ಥ್ಯಗಳ ವಿವರ ತಿಳಿಯಿರಿ. ಅವನನ್ನು ಇಲ್ಲಿಗೆ ಕರೆದು ತನ್ನಿರಿ. ಬರದಿದ್ದರೆ ಆಮೇಲೆ ನಾನು ಹಿಡಿತರಿಸುತ್ತೇನೆ" ಎಂದು ಹೇಳಿ ಖಾನರನ್ನು ಕಳುಹಿಸಲಾಯಿತು. ಸುರಿತಾಳನ ಪಾದುಕೆ ಇಟ್ಟ

ಪಲ್ಲಕ್ಕಿಯನ್ನು ಹೊತ್ತು ಪಾರಸಿ, ಪರಮಾನೆ, ಮುದ್ರೆಗಳೊಂದಿಗೆ ಅವರು ಪ್ರಯಾಣ ಬೆಳೆಸಿದರು. ದಕ್ಷಿಣಕ್ಕೆ ಸಾಗಿ ಚಿಕ್ಕಡಿಳ್ಳಿ (ದೇವಗಿರಿ)ಗೆ ಬಂದರು. ಅಂಗ, ಕಳಿಂಗ, ಕಾಶ್ಮೀರ, ಕಾಂಬೋಜ, ಕೊಂಗಾಳ, ಸೌರಾಷ್ಟ್ರ, ಬಂಗಾಳ, ಕೇರಳ, ಸಿಂಹಳ, ಕರಾಡ, ವಂಗದೇಶಗಳಿಂದ ಕಪ್ಪ ಕಾಣಿಕೆ ಪಡೆದು, ಗುತ್ತಿ ಜಗದಪ್ಪನಲ್ಲಿಗೆ ಬಂದರು.

ಜಗದಪ್ಪ ಎದುರು ಬಂದು ಹಿಡಿ ಹೊನ್ನ ಕಾಣಿಕೆ ನೀಡಿ, ಪಲ್ಲಕ್ಕಿಯಲ್ಲಿಯ ಪಾದುಕೆಗೆ ಅಡ್ಡಬಿದ್ದು, ಬಂದವರಿಗೆ ವಸತಿ ವ್ಯವಸ್ಥೆಮಾಡಿದ. ಈ ವರೆಗೆ ಸಂಗ್ರಹಿಸಲಾಗಿದ್ದ ಹೊನ್ನ ಜಾಳಿಗೆಗಳನ್ನು ವಜೀರರು ದಿಲ್ಲಿಗೆ ಕಳುಹಿಸಿದರು. ಪಾದುಕೆಯನ್ನೊಳಗೊಂಡ ಪಲ್ಲಕ್ಕಿ ಕುಮ್ಮಟದುರ್ಗಕ್ಕೆ ನಡೆಯಿತು. ಚರರು ಈ ಸುದ್ದಿಯನ್ನು ಕಂಪಿಲನಿಗೆ ಹೇಳಿದರು. ಬೈಚಪ್ಪ ಅವರನ್ನು ಒಂದು ಮನೆಯಲ್ಲಿ ಇಳಿಸಿ, ಉಲುಪೆ ಉಡುಗೊರೆ ಕೊಟ್ಟು, ಅವರೊಂದಿಗೆ ಸಮಾಲೋಚಿಸಿ, ಕಂಪಿಲನಲ್ಲಿಗೆ ಬಂದನು. ಬಂದ ವಜೀರರು ಬಳ್ಳದ ತುಂಬ ಹೊನ್ನ ಬಯಸುವುದನ್ನು ಕೇಳಿ ಕಂಪಿಲ ಚಿಂತಾಕ್ರಾಂತನಾದ.

ಮರುದಿನ ಮುಂಜಾನೆ ಕಂಪಿಲ, ಬೈಚಪ್ಪ, ರಾಮ, ವಜೀರರ ಹತ್ತಿರ ಹೋದರು. 'ಬಳ್ಳದ ತುಂಬ ಹಣ ಕೊಡುವ ಶಕ್ತಿ ನನಗಿಲ್ಲ. ಅಡವಿಯ ಸೀಮೆಗೆ ತಕ್ಕಂತೆ ಹೊನ್ನ ಕೊಡುವೆ'ನೆಂದು ಕಂಪಿಲ ಹೇಳಿದ. ವಜೀರರು ರಾಮನ ರೂಪಕ್ಕೆ ಮಾರುಹೋದರು. 'ಹೊನ್ನ ಕೊಡಲು ಸಾಧ್ಯವಿಲ್ಲದಿದ್ದರೆ ಮಗನಾದ ರಾಮನನ್ನು ನಮ್ಮೊಂದಿಗೆ ಕಳಿಸು, ಸುರಿತಾಳನ ದರ್ಶನಮಾಡಿಸಿ ಹಿಂದಿರುಗಿಸುತ್ತೇವೆ' – ಎಂದರು. ಕಂಪಿಲ ಇದಕ್ಕೆ ಒಪ್ಪಲ್ಲಿಲ್ಲ ಹೊನ್ನಕೊಡುವಂತೆ ನಟಿಸಿ, ರಾಮ ಒಪ್ಪಿದ. ವಂದನೆಮಾಡಿ ಕಾಣಿಕೆ ಸಲ್ಲಿಸುವುದಕ್ಕೋಸುಗ ಪಲ್ಲಕ್ಕಿಯಲ್ಲಿರುವ ಪಾದುಕೆ ತೋರಿಸಲು ಹೇಳಿದ. ಖಾನರು ಅವುಗಳನ್ನು ಹೊರ ತೆಗೆಯುವುದೇ ತಡ, ಅವುಗಳನ್ನು ಮೆಟ್ಟಿ 'ಇವು ನನ್ನ ಪಾದಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತವೆ. ನನ್ನ ಅಣ್ಣನ ಪಾದಕ್ಕೆ ಹೊಂದಿಕೆಯಾಗುವ ಇನ್ನೊಂದು ಜೋಡು ತರಿಸಿಕೊಟ್ಟರೆ, ಇನ್ನೂ ಹೆಚ್ಚು ಹೊನ್ನ ಕೊಡುವೆ' ಎಂದು ನುಡಿದ. ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟರು, ಮುಂಗೈ ಕಚ್ಚಿಕೊಂಡರು. ಬೊಬ್ಬೆಯಿಟ್ಟು ಬೆರಗಾದರು. 'ನಿನ್ನ ಕುಮ್ಮಟ ಹಾಳಾಯಿತು, ನಿನ್ನ ತಲೆಗೆ ವ್ಯಾಳ್ಯೆಬಂತು' ಎಂದು ಅರಚಿದರು. 'ಮಕ್ಕಳಾಟಿಕೆ ಮಾಡಿದೆ ರಾಮಯ್ಯ, ಸಿಕ್ಕಿದೆ ತುರುಕರ ಸೆರೆಗೆ' ಎಂದು ಕಂಪಿಲ ನುಡಿದ. ಪಾದುಕೆ ಬಿಟ್ಟು ದೂರ ಸರಿಯಲು ಒತ್ತಾಯಿಸಿದ. 'ಎಂದಿದ್ದರೀ ಕಾಯ ಉಳಿವುದೆ ಜಗದೊಳೊ?' ಎನ್ನುತ್ತ, 'ಸುರಿತಾಳನ ಸೈನ್ಯಕ್ಕೆ ನಾನಂಜಲಾರೆ' ಎಂದು ಮಾರ್ನುಡಿದ. 'ಮಂಜು ಮುಸುಕೀತೆ ತರುಗಿರಿಯ ? ಕುಂಜರದಾನೆಗೆ ಜಂಬುಕ ಬಲ್ಲುದೆ?' ಎಂದು ವಾದಿಸಿದ. 'ಹನ್ನೊಂದನೆಯ ವರ್ಷಕ್ಕೆ ಕನ್ನೆ ಹುಯ್ಯಲು ಕೈಕೊಳ್ಳಲು ಯೋಚಿಸುತ್ತಿದ್ದೆ, ಕೈಗೂಡಿತು' ಎಂದು ನುಡಿದ. ಮಂತ್ರಿ ಬೈಚಪ್ಪ ಬಂದವರಿಗೆ ಒಂದಿಷ್ಟು ಕಾಣಿಕೆ ನೀಡಿ ಕಳಿಸಿದ. ಅವರು ಗುತ್ತಿಗೆ ಹೋಗಿ, ಸುರಿತಾಳನ ಪರವಾಗಿ ರಾಮನ ಮೇಲೆ ಯುದ್ಧಮಾಡಲು ಜಗದಪ್ಪನಿಗೆ ಹೇಳಿದರು. ಆರೇಳು ತಿಂಗಳು ಪ್ರಯಾಣಿಸಿ, ಸುರಿತಾಳನಿಗೆ ಎಲ್ಲ ವಿವರ ನೀಡಿದರು. ರಾಮನ ರೂಪವನ್ನು ಕೊಂಡಾಡಿದರು. 'ಕತ್ತಿಗೆ ಅಳುಕುವನಲ್ಲ, ಕರ್ನಾಟದೊಳ್ ಉತ್ತಮ ಪುರುಷ ಪುಟ್ಟಿಹನು' ಎಂದು ಹೇಳುತ್ತಲೇ, ಸುರಿತಾಳ ನೇಮಿಯನ್ನು ಕರೆಸಿದನು. ಸಿಟ್ಟಿಗೆದ್ದು, ರಾಮನ ಮೇಲೆ ದಂಡೆತ್ತಿ ಹೋಗಲು ಆಜ್ಞಾಪಿಸಿದನು. ಇದನ್ನ ಕೇಳಿ ಮಗಳು ಬಾಬಮ್ಮ 'ನನ್ನ ಮುತ್ತೈದೆತನ ಉಳುಹು' ಎಂದು ಬೇಡಿಕೊಂಡಳಲ್ಲದೆ, 'ನಿನ್ನ ಅಳಿಯನಿಗೆ ಪಾದಕೆ ಕೊಟ್ಟೆನೆಂದು ಭಾವಿಸು' ಎಂದು ಹೇಳಿದಳು.

ಸಂಧಿ : ೬

ಹರಿಯಲದೇವಿ ಬೈಚಪ್ಪನನ್ನು ಕರೆಸಿದಳು. 'ರಾಮ ಮಾಡಿದ ಕಥೆ ಬರೆದೋದಿ ಕೇಳಿದರೆ ತೀರದು' ಎಂದು ಮರುಗಿದಳು. 'ರಾಮ ಸಾಮಾನ್ಯನಲ್ಲ, ಶ್ರೀಕೃಷ್ಣ ನಿನ್ನ ಗರ್ಭದಲ್ಲಿ ಜನಿಸಿರುವ'ನೆಂದು ಇತ್ತ ಬೈಚಪ್ಪ ಸಮಾಧಾನ ಪಡಿಸುವಷ್ಟರಲ್ಲಿ, ಅತ್ತ ಗುತ್ತಿಯ ಜಗದಪ್ಪನ ಸೇವಕರು ಕುಮ್ಮಟಕ್ಕೆ ಬಂದು ಕಪ್ಪಕಾಣಿಕೆ ಕೇಳಿ, ಬೀದಿಯಲ್ಲಿಯೇ ಕಂಪಿಲನನ್ನು ತಡೆದು ನಿಲ್ಲಿಸಿದರು. ಅಷ್ಟರಲ್ಲಿ ತನ್ನ ಐದು ಜನ ವಿಶ್ವಾಸಿಕರೊಂದಿಗೆ ಬಂದ ರಾಮಯ್ಯ, ಅಲ್ಲಿ ತಾನು ನಿಂತುಕೊಂಡು, ಕಂಪಿಲನನ್ನು ಮನೆಗೆ ಕಳಿಸಿದನು. ಆಮೇಲೆ ಗುತ್ತಿಯವರನ್ನು ಕತ್ತು ಹಿಡಿದು ನೂಕಿಸಿ, ಮನೆಗೆ ಬಂದನು.

ಇದನ್ನು ಕೇಳಿದ ಜಗದಪ್ಪ ಸಿಟ್ಟಿಗೆದ್ದು, ಸುತ್ತಲಿನ ಪಾಳಿಯಗಾರರಿಗೆ ಓಲೆ ಬರೆದು 'ಲಾಳ, ಕೊಂಕಣ, ಮಲೆಯಾಳ, ಸಿಂಗ, ಬಂಗಾಳ ದೇಶಗಳ ಸೈನಿಕರೆಲ್ಲ ಒಟ್ಟಾಗಿರಿ, ಕುಮ್ಮಟದ ಮೇಲ ದೊಡ್ಡ ದಾಳಿ ಮಾಡೋಣ' ಎಂದು ತಿಳಿಸಿದ. ವೀರ ಕನ್ನೋಜಿ, ಕರಾಳ, ಸಿಂಧು, ಮಹಾರಾಷ್ಟ್ರದ ಬಲ ಒಂದುಗೂಡಿತು. ಜಗದಪ್ಪ ಕಮ್ಮಟದುರ್ಗ ಮುತ್ತಿದ. 'ಧರೆಯ ರಾಯನ ಗಂಡ' ಎಂಬ ಬಿರುದು ಧರಿಸಿ, ಕುದುರೆ ಏರಿ, ರಾಮಯ್ಯ ರಣರಂಗವನ್ನು ಪ್ರವೇಶಿಸಿದ. ಮನ್ನೂಲ ಮಾಚ, ಬೂಟಲ ಬೊಮ್ಮ, ಮನ್ನುಲ ಚಿನುಮಾದ, ಬುಕ್ಕನ ಪಾಲ, ಮುದುಗೊಂಡ್ಲ ಮೂಗ, ರಾಹುತ ಮಲ್ಲಣ್ಣ ಜೊತೆಗೂಡಿ ಹೋರಾಟ ಮುಂದುವರಿಸಿದರು. 'ಸ್ವಾನೆಯ ಮಳೆಯಂತೆ ಸುರಿದವಂಬಿನ ಮಳೆ.' ಆಗ ಕಾಮಗೇತಿಯ ತಿಮ್ಮ ಬೋನಗುರಿಯಂತೆ ಆನೆಗಳನ್ನು ಸೆರೆ ಹಿಡಿದು, ರಾಮನಿಗೆ ಒಪ್ಪಿಸಿದ. ಬೆಟ್ಟದ ಸಿಂಹ ಸಮಾನರಾದ ಕೊಟ್ಟದ ಬೇಡರು, ಮರಳೆ ಪಾಪನವರು, ಚಾಮರಾಯನ ಮಕ್ಕಳು, ಕಾಟಣ್ಣ ಸೇರಿ ಮಾಳವ, ಮಗಧ, ಪಾಂಚಾಲ ನಾಯಕರನ್ನು ಕೊಂದರು. ಗಡಿಯಂಕ ಚೆನ್ನನು ಯುದ್ಧವಿಜಯದ ಸುದ್ದಿ ಹೇಳಿ 'ಧರ್ಮಗಾಳೆಯ' ನುಡಿಸಲು ಸೂಚಿಸಿದನು. ಜಯಶಾಲಿಗಳಾಗಿ ಎಲ್ಲರೂ ಅರಮನೆಗೆ ಮರಳಿದರು.

ಜಗದಪ್ಪ, ಸೋಲಿನ ಸುದ್ದಿ ಕೇಳಿದ. ರಾಮನ ಸಾಹಸಕ್ಕೆ ಬೆರಗಾದ. ಐದು ಕುದುರೆ ಮತ್ತು ಮಗಳನ್ನು ನೀಡುವುದಾಗಿ ತಿಳಿಸಿ, ಒಪ್ಪಂದ ಮಾಡಿಕೊಂಡ. ಕಂಪಿಲರಾಯ ಮಗನ ಪರಾಕ್ರಮಕ್ಕೆ ಮೆಚ್ಚಿ, ಮುತ್ತಿನ ತುರಾಯಿ ಕೊಟ್ಟ, ಹರಿಯಲದೇವಿ ಆರತಿ ಬೆಳಗಿ, ನಿವಾಳಿ ತೆಗೆದಳು. ಎಲ್ಲರೂ ಸೇರಿ ಸಕ್ಕರೆ, ಚಿನಿಪಾಲು ತುಪ್ಪ, ಮೃಷ್ಟಾನ್ನ, ಕಡಬು, ಕಜ್ಜಾಯ ಊಟ ಮಾಡಿದರು.

ಮರುದಿನ ಮುಂಜಾನೆ ಕಂಪಿಲ ಆಸ್ಥಾನವನ್ನಲಂಕರಿಸಿ, ಗುತ್ತಿ ಯುದ್ಧದಲ್ಲಿ ಹೋರಾಡಿದ ಯೋಧರನ್ನು ಕರೆಸಲು ರಾಮಯ್ಯನಿಗೆ ಹೇಳಿದ. ಬಣವೆಯ ಹುಲ್ಲು ಬಸವಗೆ ಕೊಟ್ಟಂತೆ ರಾಮಯ್ಯ ಯೋಧರಿಗೆ ಊಟ ಮಾಡಿಸಿದ. ಬಳಿಕ ಕಾಲಗಗ್ಗರಿ, ತೋಳಬಾಪುರಿ ಮೋಹನ್ಮಾಲೆ, ಚೌಕುಳಿ, ತಿಸರ, ಕಾಲಸರ, ಹೊನ್ನಗಂಟೆ, ಪುಲಿಚರ್ಮ, ಚೌರಿ, ತೊಡರು, ಬಾಪುರಿಗಳನ್ನು ಕೊಟ್ಟನು. ಊರು ಉಂಬಳಿ, ಉಡಾಸ, ನಾರಂಜಿ, ತೋಪಿ, ಹಗಲು ದೀವಟಿಗೆ, ಜಲ್ಲಿ, ಜಗಜಂಪಿ, ಸತ್ತಿಗೆ ವಸ್ತ್ರ, ಮುತ್ತಿನೊಂಟಿ, ಆಯುಧ, ಆನೆ, ಕುದುರೆ, ಸೇನೆ, ಭಂಡಾರ ಕೊಟ್ಟನು. ಅವರ ಮದುವೆಗೆ, ಬೋನಕ್ಕೆ ಗದ್ದೆ-ಹೊಲ ಮಾನ್ಯ ನೀಡಿದನು.

ತೊಡರು, ಬಾಪುರಿ, ನಡುವಿನೊಡ್ಯಾಣ, ಉಡಿದಾರ, ವಂಕುಡಿ ಕೊಟ್ಟನು. ಬಡವರಿಗೆ ಹಣಹೊನ್ನು ಕೊಟ್ಟನು. ಗಾಯದವರಿಗೆ ಬಾಯಿತುಂಬ ಹೊನ್ನ, ಉಡುಗೊರೆ, ಗಾಯದಾರೈಕೆಗೆ

ಹಿಡಿಹೊನ್ನ ನೀಡಿದನು. ಸತ್ತವರ ಮಕ್ಕಳನ್ನು ಕರೆಸಿ, ಮುತ್ತು ಬಂಗಾರ ಕೊಟ್ಟು, ಹೆತ್ತ ತಂದೆಯ ಮರೆಯದಂತೆ ನಡೆದುಕೊಳ್ಳಲು ಹೇಳಿದನು.

ಮಗನ ಶ್ರೇಯಸ್ಸನ್ನು ನೋಡಿ ಕಂಪಿಲ ಹರ್ಷಿತನಾದ. 'ಕನ್ನೆ ಹುಯ್ಯಲು ಕಡಿದು ಬಂದ ರಾಮಯ್ಯಗೆ ಕನ್ನೆವೆಣ್ಣುಗಳೈದು' ತಂದು ಮದುವೆಮಾಡಲು ಬೈಚಪ್ಪನೊಡನೆ ಆಲೋಚಿಸಿದ. ಭಾವ ಮಂಚಣ್ಣನ ಮಗಳು (ಕಾಮಕ್ಕ), (ಜಗದಪ್ಪನ ಮಗಳು) ರಾಮಲದೇವಿ, ಮಾವ ಚಾರಮರಾಯನ ಇಬ್ಬರು ಮೊಮ್ಮಕ್ಕಳು (ಸೋಮಾಯಿ, ಭೀಮಾಯಿ), ಬೈಚಪ್ಪನ ಮಗಳು (ತಿಮ್ಮಾಯಿ) – ಹೀಗೆ ಐದು ಜನರನ್ನು ನಿಶ್ಚಯಿಸಿದರು. 'ಕನ್ಯೆ ಹುಯ್ಯಲ ಕಡಿದು, ಹೆಣ್ಣುಗಳ ಮದಿವ್ಯಾದ ಚೆನ್ನಿಗ ರಾಮಯ್ಯ' ಎಂಬ ಕೀರ್ತಿ ಪಸರಿಸಿತು.

ಸಂಧಿ : ೭

ಉದಯಕಾಲದಲ್ಲಿ ಕಂಪಿಲರಾಯ ಆಸ್ಥಾನವನ್ನಲಂಕರಿಸಿದ. ಸುರಿತಾಳನ ಮನಸ್ಸನ್ನು ತಿಳಿದುಕೊಳ್ಳಲು ರಹಸ್ಯಭೇದಕರಾದ 'ಕಳಭಂಟ'ರನ್ನು ಕಳುಹಿಸಿದ. ಅಷ್ಟರಲ್ಲಿ ಗುತ್ತಿಯ ಚರರು ಬಂದು, ಕೊಟ್ಟ ಮಾತಿನಂತೆ ಜಗದಪ್ಪನು ಮಗಳನ್ನು ಕಳಿಸಿಕೊಡಲು ಸಿದ್ಧನಾಗಿರುವ ವಿಷಯ ತಿಳಿಸಿದರು. ಕಂಪಿಲ ಸಮ್ಮತಿಸಿದ. ಚರರು ನುಡಿದ ಸಕ್ಕರೆ ಸವಿಯಂಥ ಸುದ್ದಿಯಿಂದ ಜಗದಪ್ಪ ಸಂತುಷ್ಟನಾಗಿ, ಮಂತ್ರಿ ತಿಮ್ಮರಸ ಮತ್ತು ಮಗ ಉತ್ತುಂಗರಾಯನೊಂದಿಗೆ ಮಗಳನ್ನು ಕಳಿಸಿದ. ಮಗಳಿಗೆ ಮುತ್ತು, ಬಂಗಾರ, ಬಗೆಬಗೆಯ ಆಭರಣ, ಉಂಬಳಿಯಾಗಿ ಐದೂರು ನೀಡಿದ. ಅಳಿಯನಿಗೆ ಐದು ಕುದುರೆ, ಬಳುವಳಿಯಾಗಿ ಆಕಳ ಹಿಂಡು, ಸೆಳೆಮಂಚ, ಕರೆವ ಎಮ್ಮೆಹಿಂಡು ಕೊಟ್ಟ. ಶೋಭನ ಹಾಡಿನೊಂದಿಗೆ ಸೊಗಸಾದ ದಿಬ್ಬಣ ಹೊರಟಿತು. ನಲವತ್ತು ಜನ ಊಳಿಗದ ಹೆಣ್ಣು ಮಕ್ಕಳು, ಕಳಸ–ಚವರಿ–ಕನ್ನಡಿಯೊಂದಿಗೆ ಹಡಪದ ಸ್ತ್ರೀಯರು ನಡೆದರು. ಮಂತ್ರಿಮನ್ನೆಯರು, ಅರಸು ಮಕ್ಕಳು, ವೇದಪಾಠಕರು, ಜೋಯಿಸರು, ವಿದ್ವಾಂಸರು, ಹಿರಿಯರು, ಸಾವಿರ ಕುದುರೆ ಸವಾರರು ಜೊತೆಗೂಡಿದರು.

ಬೀಗರು ಬರುವ ಸುದ್ದಿ ಕುಮ್ಮಟಕ್ಕೆ ತಲುಪಿತು. ಕಾಟಣ್ಣನು ಹಂಪರಾಜ, ಕಂಪರಾಜ, ಸಂಗಮದೇವ ಮೊದಲಾದ ದೊರೆ ಮಕ್ಕಳೊಂದಿಗೆ ಬೀಗರನ್ನು ಎದುರುಗೊಳ್ಳಲು ಹೋದನು. ಉತ್ತುಂಗರಾಯ ಆನೆಯ ಮೇಲೆ, ಮುತ್ತಿನ ಸತ್ತಿಗೆ ಕೆಳಗೆ, ಶೋಭಿಸುತ್ತ ಬಂದನು. ಕನ್ನೆ ನಗಾರಿ, ಚಿನ್ನಗಾಳೆ, ಪಲ್ಲಕ್ಕಿ ಸಾಲುಗಳಲ್ಲಿ ರಾಮಲದೇವಿ ಬಂದಳು.

ಶೃಂಗಾರವನಕ್ಕೆ ರಾಮನನ್ನು ಕರೆದುಕೊಂಡು ಬಂದರು. ಕಂಪಿಲನೂ ಅಲ್ಲಿಗೆ ಬಂದ. ಅಲ್ಲಿ ಉತ್ತುಂಗರಾಯ ಮೊದಲಾದ ಬೀಗರನ್ನು ಸ್ವಾಗತಿಸಿ, ಬಿಡದಿಯ ಮನೆಗೆ ಅವರೆಲ್ಲರನ್ನು ಕರೆತಂದರು. ಬಾಗಿಲಲ್ಲಿ ಎರಡು ಕುರಿ ಕಡಿದು ನಿವಾಳಿ ತೆಗೆದರು. ರಾಮಯ್ಯನಿಗಾಗಿ ತಂದ ಉಡುಗೊರೆಯನ್ನು ಕಂಪಿಲನಿಗೆ ವಿವರಿಸಿದರು. ರಾಮಕ್ಕ ಮಾವನಿಗೆ ವಂದಿಸಿದಳು. ಮಾಘ ಶುದ್ಧ ತದಿಗೆಯ ಗುರುವಾರ ಅಮೃತಸಿದ್ಧಿಯೋಗ, ಸೂರ್ಯೋದಯ ಹತ್ತುಗಳಿಗೆಗೆ ಜೋಯಿಸರು ಮೂಹೂರ್ತ ತೆಗೆದುಕೊಟ್ಟರು. ಅಂದಿನಿಂದ ಐದು ದಿನ ಪ್ರಶಸ್ತವೆಂದು ಹೇಳಿದರು. ರಾಮಕ್ಕ ಮದಲಗಿತ್ತಿಯಾಗಿ, ರಾಮಯ್ಯ ಮದಲಿಂಗನಾಗಿ ಶೋಭಿಸಿದರು.

ಕಂಪಿಲರಾಯ ಬೈಚಪ್ಪರು ಮಂಚಣ್ಣನ ಮನೆಗೆ ಬಂದು, ಮಗಳು ಕಾಮಕ್ಕನನ್ನು ವಧುವಾಗಿ ಕೊಡಲು ಕೇಳಿದರು. "ಬಡವರ ಮಗಳು ರಾಜರಿಗೆ ಉಚಿತವೇ?" ಎಂದು ಮಂಚಣ್ಣ ನುಡಿದು, ಒಪ್ಪಿಕೊಂಡನು. ಅಲ್ಲಿಂದ ಅರೆಯ ಚಾರಮರಾಯನ ಮನೆಗೆ ಹೋದರು. 'ನೀವು ನಮಗೆಲ್ಲ ಹಿರಿಯರು. ನಿಮ್ಮ ಇಬ್ಬರು ಮೊಮ್ಮಕ್ಕಳನ್ನು ರಾಮನಿಗೆ ಕೊಡಬೇಕು' ಎಂದು ಬೈಚಪ್ಪ ಬಿನ್ನವಿಸಿದ. 'ಜಾತಿಭೇದಗಳುಂಟು ನಮಗೂ ನಿಮಗೂ' ಎಂದು ಚಾರಮರಾಯ ನುಡಿದ. 'ರಾಮ, ನಿಮ್ಮ ಮಗಳು ಹರಿಯಲದೇವಿಯ ಮಗನಲ್ಲವೆ?' ಎಂದು ಬೈಚಪ್ಪ ನುಡಿಯುತ್ತಲೇ, ಚಾಮರಾಯ ತನ್ನ ಮಕ್ಕಳಾದ ವೆಂಕಟರಾಯ, ಮಧೂಸೂದನರಾಯರ ಅಭಿಪ್ರಾಯ ಕೇಳಿದ. ಅವರೂ ಒಪ್ಪಿದರು.

ಕನ್ಯೆಗಳನ್ನು ಕರೆತರಲು ಕಂಪಿಲ ಪಲ್ಲಕ್ಕಿ ಕಳಿಸಿದ. ಅಕ್ಕ ಮಾರಮ್ಮ – ಸಿಂಗಮ್ಮ ರಾಮಯ್ಯನಲ್ಲಿಗೆ ಬಂದರು. ಅರಿಷಿಣ – ಎಣ್ಣೆ – ಶ್ರೀಗಂಧ ಲೇಪಿಸಿ, ಜಾಜಿಯ ಪೂಮಾಲೆ ತೊಡಿಸಿದರು. ಬಳಿಕ ಎಣ್ಣೆ ಮಜ್ಜನ ಮಾಡಿಸಿ, ಉಡುಗೊರೆ ಕೊಟ್ಟು ಅರಿಷಿಣ ಕಾರ್ಯ ಪೂರೈಸಿದರು. ಹರಿಯಮ್ಮ ಕರ್ಪೂರದಾರತಿ ಬೆಳೋಗಿಸಿ, ಶಾಶೆಯಿಡಿಸಿ, ಪಲ್ಲಕ್ಕಿ ಏರಿ, ಮಂತ್ರಿ ಬೈಚಪ್ಪನ ಮನೆಗೆ ನಡೆದಳು. ಅವನ ಮಗಳು ತಿಮ್ಮಾಯಿಯನ್ನು ಮಗನಿಗೆ ಬೇಡಿ ಪಡೆದಳು. ಮಂಚಣ್ಣನ ಮನೆಗೆ ಹೋಗಿ, ಕನ್ನೆಗೆ ಎಣ್ಣೆ ಅರಿಷಿಣ ನೀಡಿ, ತಂದೆ ಚಾರಮರಾಯನ ಮನೆಗೆ ಬಂದಳು. ಅವನ ಮೊಮ್ಮಕ್ಕಳು ಸೋಮಾಯಿ ಭೀಮಾಯಿಗಳನ್ನು ಪ್ರೀತಿಯಿಂದ ಮಾತನಾಡಿಸಿ, ರಾಮಕ್ಕನಲ್ಲಿಗೆ ಬಂದು, ಉಡುಗೊರೆ ನೀಡಿ, ಅರಮನೆಗೆ ಮರಳಿದಳು.

ಹಂದರ ಹಾಲಗಂಬ ಹಾಕಿದರು. ಜೋಯಿಸರು, ಬ್ರಾಹ್ಮಣರು, ಅವಧಾನಿಗಳು ಆಗಮಿಸಿದರು. ಅಮೃತಸಿದ್ಧಿಯೋಗ ಸಮೀಪ ಬರುತ್ತಲೇ ಊರೊಳಗಿನ ಮಂತ್ರಿ, ಅರಸುಮಕ್ಕಳು, ಮನ್ನೆಯ ಮಾಂಡಲಿಕರನ್ನು ಕರೆಸಿದರು. ಶೆಟ್ಟಿ ವರ್ತಕರು ಪಟ್ಟಣವನ್ನು ಶೃಂಗರಿಸಿದರು. ಹಟ್ಟಿಕಾರರು, ಹಳ್ಳಿಕಾರರು, ಕರಣಿಕರು ಬಂದರು. ನೌಬತ್ತು, ನಗಾರಿ, ಸಾನಾಯಿ, ಮೃದಂಗ, ಡಿಂಡಿಮ, ಚಿನ್ನಾಳೆ ಧ್ವನಿ ಮೊಳಗಿತು. ರಾವುತ ರಾಣಿಯರು, ಗುರಿಕಾರರು, ಎಕ್ಕಟಿಗರು ಆಗಮಿಸಿದರು.

ನಮ್ಮೆಲ್ಲರಿಗೆ ಹಿರಿಯ ಚಾರಮರಾಯ. ಅವನನ್ನು ಕರೆತರಬೇಕೆಂದು ಕಂಪಿಲರಾಯ ಕಾಟನಿಗೆ ಹೇಳಿದ. ಪಲ್ಲಕ್ಕಿ, ಕುದುರೆಯೊಂದಿಗೆ ಕರೆಯಲು ಹೋದನು. ಚಾರಮರಾಯ ಮೊಮ್ಮಕ್ಕಳೊಡನೆ ಬಂದನು. ಮಂಚಣ್ಣ, ಬೈಚಪ್ಪರ ಮನೆಗೂ ಕಾಟಣ್ಣನನ್ನು ಕಳಿಸಿದನು. ಅವರೂ ವಧುಗಳೊಂದಿಗೆ ಬಂದರು. ಕಾಟಣ್ಣ ರಾಮಕ್ಕನನ್ನು ಕರೆಯಲು ಮುತ್ತಿನ ಅಂದಣ, ಪಲ್ಲಕ್ಕಿ, ಕರಿಯ ಕುದುರೆ, ಸತ್ತಿಗೆ, ಸಕಲ ವಾದ್ಯಗಳೊಂದಿಗೆ ಹೋದನು. ರಾಮಕ್ಕ ಅಂದಣವನ್ನೇರಿದಳು. ಮಂದಗಮನೆಯವರು ಶೋಭನ ಹಾಡುತ್ತ ಹಿಂಬಾಲಿಸಿದರು. ಜೊತೆಗೆ ಉತ್ತುಂಗರಾಯನೂ ಬಂದನು. ಹರಿಯಲದೇವಿ ಮದುವೆಗೆ ಬಂದ ಎಲ್ಲ ಮಹಿಳೆಯರನ್ನು ಮನ್ನಿಸಿ ಕುಳ್ಳಿರಿಸಿದಳು. ಯುವತಿಯರು ಆರತಿಯೊಂದಿಗೆ ಎದ್ದು ನಿಂತರು. ಜೋಯಿಸರು ರಾಮನ ಕೈಯಲ್ಲಿ, ಐದು ಜನ ಕನ್ಯೆಯರ ಕೈಯಲ್ಲಿ, ಅಕ್ಷತೆ ಕೊಟ್ಟರು. ಐವರೂ ರಾಮಯ್ಯನ ಮಂಡೆಯ ಮೇಲೆ, ರಾಮಯ್ಯ ಐವರ ಮಂಡೆಯ ಮೇಲೆ ಪರಸ್ಪರ ಅಕ್ಷತೆ ಹಾಕಿದರು. ಐವರೂ ಹೂಮಾಲೆ ಹಾಕಿ ರಾಮಯ್ಯನಿಗೆ ಆರತಿ ಎತ್ತಿದರು. ಕಂಪಿಲ ಸೊಸೆಯಂದಿರಿಗೆ ಆಭರಣವನ್ನಿತ್ತನು. ಮಗನಿಗೆ ಒಂದೊಂದು ಬಿರುದಿಗೂ ಒಂದೊಂದು ಆಭರಣ ಕೊಟ್ಟನು. ಬಂದ ಬೀಗರಿಗೆ ಉಡುಗೊರೆ, ವೀಳ್ಯ ಕೊಡಲಾಯಿತು.

ಮನೆತುಂಬಿಸುವ ಕಾರ್ಯ ನೆರವೇರಿಸಿದರು. ಮನ್ನೆಯರು ಖಾನ ವಜೀರರು ಶೆಟ್ಟಿ ಮಹಾನಾಡುಗಳು ರಾಮಯ್ಯನಿಗೆ ಉಡುಗೊರೆ ನೀಡಿದರು.

ರಾಮಯ್ಯನಿಗೆ ಗುತ್ತಿಯ ಉತ್ತುಂಗರಾಯ ಮುತ್ತಿನ ತುರಾಯಿಯನ್ನು, ಚಾರಮರಾಯ ಆರು ರತ್ನ ಹಾರವನ್ನು ನೀಡಿದರು. ಬೈಚಪ್ಪನ ಮಗಳಿಗೆ ಸಂಚಿಯ ತುಂಬ ಹೊನ್ನ, ಪಂಚವಣ್ಣಿಗೆ ಐಸಾಲೆ ಉಡುಗೊರೆ, ಕೈಬಳೆ, ಮುರುಡಿ ಸರಪಳಿ ಕೊಟ್ಟನು. ಮಂಚಣ್ಣ ಮಗಳಿಗೆ, ಅಳಿಯನಿಗೆ ಪಂಚವಣ್ಣಿಗೆ ಉಡುಗೊರೆ ನೀಡಿದನು.

ಸಣ್ಣ ಗಂಬಳಿಹಾಸಿ ಮುತ್ತಿನ ಹಸೆ ಬರೆದರು. ಮಾರಮ್ಮ ಸಿಂಗಮ್ಮ ಅಣ್ಣನನ್ನು ಕರೆದುಕೊಂಡು ಬಂದು, ಅರಿಷಿಣ ಎಣ್ಣೆ ಹಚ್ಚಿದರು. ಊಟಕ್ಕಾಗಿ ಎಲ್ಲರೂ ಸಾಲು ಸಾಲಾಗಿ ಕುಳಿತರು.

ಬಾಲೆವೆಣ್ಣುಗಳು ಕಾಯಿ ಸೊಪ್ಪು ಬಡಿಸಿದರು. ಹಾಲಗುಂಬಳಕಾಯಿ, ಸಕ್ಕರೆಗುಂಬಳಕಾಯಿ, ಚಿಣಿಯ ಕಾಯಿ, ಹಾಗಲ, ಹೀರೆಕಾಯಿ, ಕೋಗುಲೆ ಸೆಂಬೆಯಕಾಯಿ, ಪಡುವಲಕಾಯಿ, ಬದನೆಕಾಯಿ, ಬಿಳಿಯ ಚೆಳ್ಳವರೆಕಾಯಿ, ಬಾಳೆಕಾಯಿ, ಹಲಸಿನಕಾಯಿ, ಗೆಣಸು, ಹರಲೆಸೊಪ್ಪು, ಬಸಲೆಸೊಪ್ಪು, ಮೆಂತೆಸೊಪ್ಪು, ಪರಮಾನ್ನ, ಮಾಲದಿ, ಶಾವಿಗೆ, ಬಟ್ಟುವೆ, ಪರಡಿ, ತಾಲಿ, ಹಾಲಿನ ಪರಮಾನ್ನ, ಹೂರಿಗೆ, ಗಾರಿಗೆ, ಹೋಳಿಗೆ, ಒಡೆ, ಹೂರಣಗಡಬು, ಕಜ್ಜಾಯ, ಅಪ್ಪಾಲು, ಅತಿರಸ, ಕರಜಿಗಿಕಾಯಿ, ಎಣ್ಣೂರಿಗೆ, ಬೀಸುಹೂರಿಗೆ, ಎಣ್ಣೆ ಮಂಡಲಿ, ಚಕ್ಕುಲಿ, ಸೂಸಲ, ಮಂಡಿಗೆ, ಕಡಬು, ದೋಸೆ, ಸಕ್ಕರೆ ಮಂಡಿಗೆ, ತೊಗರಿತೋವೆ, ಅಲಸಂದಿ ತೋವೆ, ಕಡಲೆಯ ತೋವೆ, ಸಣ್ಣಗೆಂಬತ್ತಿಗೆ, ಸರಮುತ್ತಿನಕ್ಕಿಯ ಚಿನ್ನದಾರಿ, ಚೊಕ್ಕಟಿ, ಅರಸರದಾನಿ, ರಾಜಾನ್ನ, ತೊಗರಿ ಕಟ್ಟು, ಕಡಲೆಯ ಕಟ್ಟು, ಹುರುಳಿ ಕಟ್ಟನಾಂಬ್ರ, ಮಜ್ಜಿಗೆಸಾರು, ಹುಳಿಸಾರು, ಆಕಳತುಪ್ಪ, ಎಮ್ಮೆಯ ತುಪ್ಪ, ಕುರಿಯ ತುಪ್ಪ, ಮೇಕೆಯ ತುಪ್ಪ, ಜೇನತುಪ್ಪ, ಕಚ್ಚಡಿ, ಹಿಂಡಿ, ಹುಳಿಗಾಳು, ಉಪ್ಪಿನಕಾಯಿ, ಮಾವಿನಹಿಂಡಿ, ನೆಲ್ಲಿಯ ಚಟ್ಟು, ಹಲಸಿನ ಹಣ್ಣು, ಮಾವಿನ ಹಣ್ಣು, ರಸದಾಳಿ, ಬಾಳೆಯ ಹಣ್ಣು ಬಡಿಸಿದರು. ಎಲ್ಲರೂ ಉಂಡು ಕೈತೊಳೆದರು. ಕಾಟಣ್ಣ ಎಲ್ಲರಿಗೂ ವೀಳ್ಯ ನೀಡಿದರು.

ಮದುಮಕ್ಕಳಿಗೆ ಹಸೆಯ ಮೇಲೆ ಕುಳ್ಳಿರಿಸಿ, ಮಲ್ಲಿಗೆ ಮುಡಿಸಿ, ಅರಿಷಿನೆಣ್ಣೆಯ ನೆರವೇರಿಸಿ ಕೊನೆಯ ದಿನ ನಾಗೋಲೆ ಮಾಡಿದರು. ಓಕುಳಿಯಾಡಿದರು. ಕಾಟಣ್ಣ ಬೀಗರನ್ನು ಗ್ರಾಮದ ವರೆಗೆ ಬೀಳ್ಕೊಟ್ಟು ಬಂದನು.

ಸಂಧಿ : ೮

ಕುಮಾರರಾಮ ಗೆದ್ದು ತಂದ ಕುದುರೆಗಳನ್ನು, ಕಂಪಿಲರಾಯ ತನ್ನ ಐದು ಜನ ಮಕ್ಕಳಿಗೆ ಕೊಟ್ಟನು. ಸಿಟ್ಟಿಗೆದ್ದ ರಾಮ ಐವರನ್ನೂ ಗಾಸಿಗೊಳಿಸಿದ. ಅವರು ತಂದೆಗೆ ಚಾಡಿ ಹೇಳಿದರು. ಕಂಪಿಲ ರಾಮಯ್ಯನನ್ನು ಕರೆಯಿಸಿ 'ನಿನ್ನಲ್ಲಿ ಸಾಮರ್ಥ್ಯವಿದ್ದರೆ ಓರುಗಲ್ಲ ರುದ್ರನ ಮಗ ಎಪ್ಪತ್ತಿರಾಜನ ಕುದುರೆ ಬೊಲ್ಲನನ್ನು ಗೆದ್ದು ತಾ' ಎಂದು ಮೊದಲಿಸಿದ. ಭೇರಿ, ಮೃದಂಗ, ಕೈತಾಳ, ಕಾಳೆ, ಕೊಂಬು, ಢಮಾಮಿ ವಾದ್ಯಗಳೊಂದಿಗೆ ರಾಮ ಓರಗಲ್ಲಿಗೆ ಸನ್ನದ್ಧನಾದ. ತಾಯಿ ಹರಿಯಲದೇವಿ ಆರತಿ ಎತ್ತಿದಳು. ಮನ್ನೆಯರೊಂದಿಗೆ ರಾಮಯ್ಯ ಪ್ರಯಾಣ ಬೆಳೆಸಿದ.

ಎಕ್ಕಟಿಗ ಸಿಂಗ, ಮೀನಿಗರ ಲಕ್ಕ, ಚಿಕ್ಕ ತಮ್ಮುಗ, ಗುಜ್ಜಲೋಬ, ರಕ್ಕಸ ಮಾದ, ಕರವೂರ ತಿಪ್ಪ, ಬೊಕ್ಕ ಬೋಳುಗ, ಓಬುಗ – ಹೀಗೆ ೭೨ ಮನ್ನೆಯರು ಶಿವದೇವಾಲಯದ ಎದುರು ಸೇರಿದರು. ಕುಮ್ಮಟದಿಂದ ಪ್ರಯಾಣ ಬೆಳೆಸಿ, ಕಂಪಲಿಗೆ ಬಂದು ಸೋಮಯ್ಯನಿಗೆ ವಂದಿಸಿ, ಎಮ್ಮಿಗನೂರು ದಾಟಿದರು. ಬಳಿಕ ಹೊಸಮಲೆಯಿಂದ ದೊಡ್ಡ ಬಸವನ ಕುರುಗೋಡು ಮಾರ್ಗವಾಗಿ ಕರಡಿಕಲ್ಲು ಹತ್ತಿರ ಹೊಳೆದಾಟಿ, ಯಾದವಗಿರಿಗೆ ಬಂದರು. ಮಜ್ಜನ, ಊಟ, ನಿದ್ರೆ ಮುಗಿಸಿ ಅದವನ್ನಿ, ರೊಳ್ಳಿ, ಗೊನಗೆಂದಿ ಮೂಲಕ ಕಲ್ಲೂರಿಗೆ ಬಂದರು. ತುಂಗಭದ್ರೆಯನ್ನು ದಾಟಿ ಉದ್ಯಾವಾರಣ್ಯಕ್ಕೆ, ಅಲ್ಲಿಂದ ಸಿದ್ಧವಟ್ಟಕ್ಕೆ, ಅಲ್ಲಿಂದ ಉದ್ದಗಿರಿಗೆ ಆಗಮಿಸಿದರು. ಇನಗೊಂಡೆ, ಶರಣಪುರ, ಇಂದ್ರಕೀಲ ದಾಟಿ, ಆಂಧ್ರಪ್ರದೇಶ ಸೀಮೆಗೆ ಬಂದು, ಅಲ್ಲಿಂದ ಲಾಳದೇಶ ಪ್ರವೇಶಿಸಿದರು.

ಒಳ್ಳೆಯ ದಿನ ಶುಭಲಗ್ನದಲ್ಲಿ ಹಗಲು ಹುಟ್ಟಿದ್ದ ಕುದುರೆ ಬೊಲ್ಲನನ್ನು ಮುಂಗುಲಿರಾಯನಿಂದ ಲಕ್ಷ ಹಣಕೊಟ್ಟು ಎಪ್ಪತ್ತಿರಾಜ ಖರೀದಿಸಿದ್ದ. ನೆಲಮಾಳಿಗೆಯಲ್ಲಿಟ್ಟು ಉಕ್ಕಿನ ಕಡಲೆ ಮೇಯಿಸುತ್ತಿದ್ದ. ಈ ಕುದುರೆ ತರಲು ಹೊರಟಿದ್ದ ಕುಮಾರರಾಮ ಇಂದ್ರಕೀಲದಿಂದ ರಹುದ್ರೇಕಪುರಕ್ಕೆ, ಆಮೇಲೆ ಕಂದರ, ಮಾಳ, ಕರಾಳ ದೇಶಗಳಿಗೆ, ಮಾದ್ರಿಗಿರಿಗೆ ಬಂದನು. ಅಲ್ಲಿಂದ ರುದ್ರನಗಿರಿ, ಮೈಲಾಪುರ, ಧರ್ಮಾವತಿ ಮಾರ್ಗವಾಗಿ ನಲ್ಲೂರಪುರ, ಉದ್ದುರಪುರಗಳಿಗೆ ಬಂದು, ಅಲ್ಲಿಯ ಶರಣರ ಮಠ ಸೇರಿ, 'ಬೊಲ್ಲ ಕೈ ಸೇರಿದರೆ ಶೂಲದ ಹಬ್ಬ ಮಾಡಿಸುವೆ' ಎಂದು ಅಲ್ಲಿಯ ಗುಂಡ ಬ್ರಹ್ಮಯ್ಯದೇವರಿಗೆ ಹರಕೆ ಹೊತ್ತನು. ಅಲ್ಲಿಂದ ಮುಂದೆ ಬರುವಷ್ಟರಲ್ಲಿ ಓರುಗಲ್ಲ ಪಟ್ಟಣಶೆಟ್ಟಿ ದೇವಿಶೆಟ್ಟಿಲಿಂಗನ ಭೇಟಿಯಾಯಿತು, ಇಬ್ಬರೂ ಸ್ನೇಹಿತರಾದರು. ರಾಮ ತನ್ನ ಆಗಮನದ ಉದ್ದೇಶ ಹೇಳಿದ. ಸಹಕರಿಸುವುದಾಗಿ ಲಿಂಗ ಸಮ್ಮತಿಸಿದ. ತಂದೆಯೊಡನೆ ಮುನಿದು ಕುಮಾರರಾಮ ಬಂದುದನ್ನು ಕೇಳಿ, ಪ್ರತಾಪರುದ್ರ ಓಲಗಕ್ಕೂ ಬರಲು ತಿಳಿಸಿದ. ರಾಮನು ಲಿಂಗನೊಡನೆ ಪ್ರತಾಪರುದ್ರನ ಓಲಗಕ್ಕೆ ಹೊರಟ. ಓರುಗಲ್ಲ ಸ್ತ್ರೀಯರು ಇವನ ರೂಪಕ್ಕೆ ಸೋತುಹೋದರು. ಎತ್ತಿದ ಮಕ್ಕಳ ಕೆಳೆಯಕೆ ಬಿಟ್ಟರು. ನೆತ್ತಿಯ ಕೊಡಗಳ ಬಿಟ್ಟು ಕೈಮರೆದರು. ಹಡೆದ ತಾಯಂದಿರು ಮಗನನ್ನು ನೋಡುತ್ತಲಿರುವರೆಂದು ಭಾವಿಸುತ್ತ, ರಾಮಯ್ಯ ಮುನ್ನಡೆದ. ಹುಳಿಯೇರ (ಗಳಿಯಾರ?) ಬಾಗಿಲ ದಾಟಿ ಆಸ್ಥಾನ ಪ್ರವೇಶಿಸಿದ. ಎಡ ಬಲದಲ್ಲಿ ರಾಜರು, ರಾಜಕುಮಾರರು, ಮಂತ್ರಿ, ರಾಹುತರು ತುಂಬಿದ್ದರು. ಕುಮಾರರಾಮ ರುದ್ರರಾಜನಿಗೆ ಕಾಣಿಕೆ ಸಲ್ಲಿಸಿ, ನಮಸ್ಕರಿಸಿದ. ಅವನೂ ಉಡುಗೊರೆ ನೀಡಿದ. ಸಭೆಯಿಂದ ರಾಮ ನಿರ್ಗಮಿಸುತ್ತಲೇ ಅವನ ಭಟ್ಟರು 'ಮಣಿವ ರಾಯರ ಗಂಡ, ಮಲೆವ ರಾಯರ ಗಂಡ, ನರಪತಿ – ಗಜಪತಿ – ಅಶ್ವಪತಿಗಳೆಂಬ ಅರಸುಗಳಿಗೆ ಗಂಡ' ಎಂದು ಬಿರುದು ಘೋಷಿಸಿದರು. ಇದನ್ನು ಕೇಳಿ ರುದ್ರ ಕಾಲರುದ್ರನಾದ. ಲಿಂಗನನ್ನು ಆಸ್ಥಾನಕ್ಕೆ ಕರೆಸಿ, 'ಇಂಥವನನ್ನು ಕರೆದುಕೊಂಡು ಬಂದುದು ಸರಿಯಲ್ಲ'ವೆಂದು ಅಬ್ಬರಿಸಿದ. ಲಿಂಗ ರಾಮನಿಗೆ ವಿವರ ಹೇಳಿದ. ರುದ್ರನನ್ನು ಎದುರಿಸಲು ಇಬ್ಬರೂ ಒಟ್ಟಾದರು. ರಾಜಧಾನಿಯಲ್ಲಿ ಇರಲು ತನಗೆ ಇನ್ನು ಸಾಧ್ಯವಿಲ್ಲವೆನಿಸಿ, ಲಿಂಗ ತನ್ನ ಮೇಲುಪ್ಪರಿಗೆ, ಚಾವಡಿ, ಪಟ್ಟಾವಳಿ, ಬತ್ತದ ಕಣಜ ಸುಡಿಸಿದ. ಹೆಣ್ಣು ಮಕ್ಕಳಿಗೆ ಕಾಲ ಕುಪ್ಪಸಕೊಟ್ಟು ಕರೆದುಕೊಂಡು ರಾಮನೊಂದಿಗೆ ಹೊರಹೊರಟ.

ಇದನ್ನು ಕೇಳಿ ರುದ್ರ ಸೈನ್ಯ ಕಳಿಸಿದ. ಯುದ್ಧ ಏರ್ಪಟ್ಟಿತು. ರಾಮಯ್ಯ, ಲಿಂಗ, ಕಾಟಣ್ಣರನ್ನು ಎದುರಿಸದೆ ರುದ್ರನ ದಂಡ ಸೋತಿತು. ರುದ್ರನ ಮಗ ಎಪ್ಪತಿರಾಜ ಯುದ್ಧಕ್ಕೆ ಸಿದ್ಧನಾದ. ಮಲ್ಲಯ್ಯ

ಸಾಹಣಿ ತಂದು ನಿಲ್ಲಿಸಿದ ಬೊಲ್ಲನನ್ನು ಹೂವು ಗಂಧಗಳಿಂದ ಪೂಜಿಸಿದರು. ಹಕ್ಕರಿಗೆ ಜೋಡು, ಹೊಕ್ಕುಳ ಗಂಟೆ, ಎಡಬಲದಲ್ಲಿ ಬಿಲ್ಲು, ಅಂಬು, ಸಿಂಗಾಡಿ, ಪಕ್ಕದಲ್ಲಿ ರಂಚಿಕೆ, ಕಡಿವಾಣ, ಉಕ್ಕಿನ ಜಲ್ಲೆಯ, ವಂಕಿ, ಕೈಯಂಬು, ಬಿರುದುಗಳಿಂದ ಬೊಲ್ಲನನ್ನು ಸಜ್ಜುಗೊಳಿಸಿದರು. ಎಪ್ಪತಿರಾಜ ಮೈಜೋಡು ತೊಟ್ಟು, ತಲೆಗೆ ಠೌಳಿ ಧರಿಸಿದ, ವೀರಜಡೆ ಹೆಣೆಸಿ ಕುದುರೆ ಏರಿದ. ತುಡುಮು, ತಮ್ಮಟೆ, ಭೇರಿ, ಗಿಡಿಬಿಡಿ, ನಿಸ್ಸಾಳ, ಚಿನ್ನಗಹಳೆ, ಬುರುಗು, ನೌಬತ್ತು ಮೊಳಗಿದವು. ರಾಮ ನೀಲನನ್ನೇರಿ ಎದುರಿಸಿದನು. ನಿಕರ ಕಾಳಗ ಏರ್ಪಟ್ಟಿತು. ಎಪ್ಪತ್ತಿರಾಜ ಕೆಳಗೆ ಬೀಳುತ್ತಲೇ ಬೊಲ್ಲ ಕುಮಾರರಾಮನಿಗೆ ಬೆನ್ನುಕೊಟ್ಟಿತು. ಅವನು ಕುದುರೆಯನ್ನು ಕೋಟೆ ಗೋಡೆಯಿಂದ ನೆಗೆಸಿದ ಭರದಲ್ಲಿ, ಅದರ ಎದೆಯ ಚರ್ಮದ ಬಾರ ಹರಿದು ಹೋಯಿತು. ತಕ್ಷಣ ಮಾದಿಗ ಹಂಪ ತನ್ನ ಒಳದೊಡೆ ಚರ್ಮ ತೆಗೆದು, ಎದೆ ಬಾರವನ್ನು ಹೊಂದಿಸಿದ. ಬಳಿಕ ಏರಿಬಂದ ಪ್ರತಾಪರುದ್ರನೂ ಸೋತುಹೋದ. ನೀಲನನ್ನೇರಿ ರಾಮಯ್ಯ ಕುಮ್ಮಟಕ್ಕೆ ಹಿಂದಿರುಗಿದ. ದಾರಿಯಲ್ಲಿ ನೆಲ್ಲೂರಿಗೆ ಬಂದು, ವೀರಶರಣರ ದ್ವಾರವಾಟಕ್ಕೆ ಆಗಮಿಸಿದ. ಮಧ್ಯದಲ್ಲಿ ಬೊಲ್ಲನನ್ನು ಬಿಡಿಸಿಕೊಳ್ಳಲು ಬಾಬಾಜಿ ಏರಿಬಂದು, ಸೋತು ಹಿಂದಿರುಗಿದ. ಕೊಳ್ಳಿಯ ನಾಗಣ್ಣ, ಗುಜ್ಜಲ ಓಬ, ಚಿಗತಮ್ಮ, ಚಿನುಮಾದ, ಕೋಟಿಗರ ದ್ಯಾವ, ಮರುಳಿ ಪಾಪಯ್ಯ, ಬೂಟಕ ಬೊಮ್ಮ ರಾಮನಿಗೆ ಈ ಯುದ್ಧದಲ್ಲಿ ನೆರವಾದರು. ದಾರಿಯಲ್ಲಿ ಕಾಶ್ಮೀರರಾಜ ಬೊಲ್ಲನನ್ನು ಬಿಡಿಸಿಕೊಳ್ಳಲು ಹೋರಾಡಿ ಸೋತುಹೋದನು. ರಾಮನ ಪರಿವಾರ ಸಿದ್ಧವಟದಲ್ಲಿ ತಂಗಿ, ರಟ್ಟಿನ ಹೊಳೆ ದಾಟಿ, ಯಾದವಗಿರಿ ದುರ್ಗ, ಅದವನ್ನಿ, ಕುರುಗೋಡು ಮಾರ್ಗವಾಗಿ ಕಂಪನಿಗೆ ಬಂದು ಸೋಮೇಶ್ವರನಿಗೆ ಪೂಜೆ ಸಲ್ಲಿಸಿತು. ಅಲ್ಲಿಗೆ ಬಂದ ಕಂಪಿಲರಾಯನಿಗೆ ವಂದಿಸಿ, ಲಿಂಗ, ಮಾದಿಗರ ಹಂಪ ನೀಡಿದ ನೆರವನ್ನು ರಾಮಯ್ಯ ವಿವರಿಸಿದ. ಇವರಿಬ್ಬರನ್ನೂ ಉಡುಗೊರೆಯಿಂದ ಸನ್ಮಾನಿಸಿದ. ಬಳಿಕ ಹೊಸಮಲೆಗೆ ಬರಲು, ಹರಿಯಲದೇವಿ ಆರತಿ ಎತ್ತಿದಳು. ಮಿಕ್ಕ ಪರಿವಾರವಾದರೂ ಎದುರುಗೊಂಡರು. ರಾಮಯ್ಯ ಅರಮನೆಗೆ ನಡೆದ.

ಸಂಧಿ : ೯

ಹೊಯ್ಸಳ ಪಾಳೆಗಾರನಾದ ಹುಳಿಯಾರ ಮಾರಭೂಪಾಲನು ರಾಮನೊಡನೆ ಕಾಳಗ ಮಾಡಲು ಹವಣಿಸಿದನು. ಇದನ್ನು ಕೇಳಿದ ರಾಮಯ್ಯ 'ಹುಳಿಯಾರ ಮಾರಿಗೊಂಡನ ಗಂಡ' ಎಂಬ ಪದಕ ಧರಿಸಿ ಹೊರಟು, ಗಂಡಿಬಾಗಿಲ ಮುಂದೆ ದಂಡು ಸಂಗ್ರಹಿಸಿ, ಉಜ್ಜುಣಿ ಬಯಲಿಗೆ ಬಂದನು. ಬಳಿಕ ಕೊಡಲಿಗೆ, ಕಣಜದ ಹಳ್ಳಿ, ಮರಿವುಂಟ್ಲ, ಬೂದಿಹಾಳ ಮಾರ್ಗವಾಗಿ ಹಳಿಯಾರಿಗೆ ಬಂದನು. ಮಾರಭೂಪಾಲನು ಹಿರಿಯೂರ ನರಸ, ಕರುಸಾಣಿ ಬಾಗೂರ ಕಟ್ಟೆಯ ನಾಯ್ಕ, ಗೋವಿಂದ, ಸಣ್ಣಕ್ಕಿ ಬಾಗೂರನಾಳುವ ನಾಯಕರನ್ನು ಒಳಗು ಮಾಡಿಕೊಂಡು ಯುದ್ಧಕ್ಕೆ ಸಿದ್ಧನಾದನು. ಅಸಗೋಡ ನಾಯಕ, ಬಾಗೂರ ಓಬಯ್ಯ, ಬಾಗೂರ ತಿಪ್ಪ, ಹುಳಿಯೇರ ನಂದರಾಯನಪಾಲ, ರಾಯಪಾಲ, ಮನ್ನೂಲ ಮಾರ, ಕಂಪಿಲಿಯ ಸೋಮುಗ, ಹೊನ್ನೂರ ಇರುಪಯ್ಯ, ಸೋಮಗ, ನಡಗೂರ ಬಸವ, ಬಸವಾಪುರ ಬೊಮ್ಮಲಿಂಗ, ಕಾದಲೆ ಗಿರಿಯ, ಮುರುಡಿಯ ಚನ್ನಸೋಮ, ಮನ್ನೂಲ ಮಾಚ, ಕನ್ನ, ಬೂಟಕ ಚಿನ್ನ, ಮರುಳೆಯ ಪಾಪಯ್ಯ, ಮೀನಿಗರ ಲಕ್ಕ, ಮುದ್ದು ಬಸವಯ್ಯ ಸ್ಪರ್ಧೆಯಿಂದ ವೀಳ್ಯ ಹಿಡಿದರು. ಯುದ್ಧ ಆರಂಭವಾಯಿತು. ಮಾರಭೂಪಾಲನ ಸೈನ್ಯ

ಮುರಿಯಿತು. ಅವನು ಮತ್ತೆ ಕಟ್ಟಿ ನಿಲ್ಲಿಸಿಯೂ ಸೋತುಹೋದ. ಮಂತ್ರಿ ಕಲ್ಲರಸನ ಮುಖಾಂತರ ಜಿಂದಿಗೆ ಹೊಸ್ನು, ಐದೂರು, ಅರಗಿಳಿ ಕೊಟ್ಟು ಸಂಧಿ ಮಾಡಿಕೊಂಡ. ರಾಮಯ್ಯ ಕಣಗಿನಹಳ್ಳಿ ಮಾರ್ಗವಾಗಿ ಮರಳಿದ. ಮಗನನ್ನು ಮಧ್ಯ ಮಾರ್ಗದಲ್ಲಿಯೇ ಕಂಪಿಲ ಎದುರಗೊಂಡ. ಹರಿಯಮ್ಮ, ಮಾರಮ್ಮ, ಸಿಂಗಮ್ಮ ರಾಮನನ್ನು ಆರತಿ ಎತ್ತಿ ಸ್ವಾಗತಿಸಿದರು. ರಾಮಯ್ಯ ಪರಿವಾರವನ್ನು ಮನೆಗೆ ಕಳುಹಿಸಿದ.

ಸಂಧಿ : ೧೦

ರಾಮಯ್ಯ ಸುತ್ತಲಿನ ರಾಜ್ಯಗಳನ್ನು ಒತ್ತಿ ಆಳುತ್ತಲಿರುವ ಸಂದರ್ಭದಲ್ಲಿ ದಿಳ್ಳಿ ಸುರಿತಾಳನಿಗೂ ಅವನ ಸರದಾರ ಬಹದ್ದೂರನಿಗೂ ವಿರಸ ಹುಟ್ಟಿತು. ಬಹದ್ದೂರ ಅಲ್ಲಿಂದ ತಪ್ಪಿಸಿಕೊಂಡು ಮುಂಗುಲಿರಾಯನ ಹತ್ತಿರ ಆಶ್ರಯ ಕೇಳಿದನು. ನೇಮಿಗೆ ಅಂಜಿ ಅವನು ಆಶ್ರಯ ನಿರಾಕರಿಸಲು, ಬಹದ್ದೂರ ಓರುಗಲ್ಲಿಗೆ, ಅಲ್ಲಿಂದಲೂ ನಿರಾಕೃತನಾಗಿ ಗುತ್ತಿ ಜಗದಪ್ಪನಲ್ಲಿಗೆ, ಅಲ್ಲಿಂದಲೂ ನಿರಾಕೃತನಾಗಿ 'ಬೆದರಿದ ಹುಲ್ಲೆ'ಯಂತೆ ಕುಮ್ಮಟಕ್ಕೆ ಬಂದನು. ರಾಮಯ್ಯ 'ಮೊರೆಹೊಕ್ಕ ಖಾನರ ಕೊಡೆ'ನೆಂಬ ಬಿರುದು ಧರಿಸಿ, ಅವನಿಗೆ ಆಶ್ರಯ ನೀಡಿದನು. ಉಂಬಳಿಯಾಗಿ ಒಂದು ಗ್ರಾಮವನ್ನೂ ಮುನ್ನೂರು ವರಹಗಳನ್ನೂ ಕೊಟ್ಟನು.

ಬಹದ್ದೂರ ತಲೆಮರೆಸಿಕೊಂಡು ಹೋದುದನ್ನು ಕೇಳಿದ ಸುರಿತಾಳ ಸಿಟ್ಟಿಗೆದ್ದು, ಚರರನ್ನು ಕಳಿಸಿದ. ಅವರು ಅಂಗ, ಕಳಿಂಗ, ಕಾಶ್ಮೀರ, ಬರ್ಬರ, ಬಂಗಾಳ, ತೆಲುಗು, ಕಾಂಬೋಜ ದೇಶಗಳನ್ನು ಸುತ್ತಿ, ಕರ್ನಾಟಕದ ಗುತ್ತಿಗೆ ಬಂದು, ಅವನು ಕುಮ್ಮಟದಲ್ಲಿರುವುದನ್ನು ಜಗದಪ್ಪನಿಂದ ತಿಳಿದುಕೊಂಡರು. ಸುದ್ದಿ ತಿಳಿದ ಸುರಿತಾಳ, ಅವನನ್ನು ಹಿಡಿತರಲು ನೇಮಿಖಾನನ್ನು ದಂಡಿನೊಂದಿಗೆ ಕಳಿಸಿದನು. ರಾಮನನ್ನು ಜೀವ ಸಹಿತ ತರಲು ಬಾಬಮ್ಮ ಹೇಳಿದಳು. ಆಗ ಅಂಬರಖಾನ, ತುಂಬರಖಾನ, ಅಬ್ದುಲ್, ಶಂಬರಖಾನ, ಶೇರ್ಖಾನ, ಡೊಂಬಿಸಾಹೇಬ ಖಾನ, ಅಲ್ಲಿಯಖಾನ, ಶಂಭಾರಿಖಾನ, ಜಲ್ಲಿಖಾನ, ಯಕಲಾಸಖಾನ, ಯಕ್ಕಟಿಖಾನ, ಸೈದ್ರಲ್ಲಿ, ಬಕರಿಯ ಖಾನ, ಬಲೆಖಾನ, ಮಕರಂಕಖಾನ, ಮಾಮುದ್ದು ಬಕರಿಯಖಾನ, ಶಕುನಾದಖಾನ, ಬಿಬ್ಬಖಾನ, ಬಿಜ್ಜಾರಿಖಾನ, ಗುಜ್ಜಾರಿಖಾನ, ಮೀರಲ್ಲಿ, ರಾಜಖಾನ, ತುಂಬುರಖಾನ, ಲುಜ್ಜಖಾನರೆಲ್ಲ ಒಂದಾದರು. ಎಪ್ಪತ್ತು ಸಾವಿರ ಕುದುರೆ ವಜೀರನಾದ ಎಪ್ಪತ್ತಿಖಾನ, ಕುಪ್ಪಳಿಸುತ ಅರಿಬಲದೊಳು ತೋರುವ ಅಪ್ಪಾಜಿಖಾನ, ಮೂವತ್ತು ಸಾವಿರ ಕುದುರೆ ವಜೀರನಾದ ಮೀರ ಅಬ್ದುಲ್‌ಖಾನ, ಸುರಿತಾಳನ ಹುಜರಿನಲ್ಲಿರುವ ಮಾವೀ ಹಳದಿಖಾನ, ಐವತ್ತು ಸಾವಿರ ಕುದುರೆ ಮಾಜೀರನಾದ ಸೈದಾಲಖಾನ, ಮೈಜೋಡು, ಸಿಂಗಾಡಿ, ತರ್ಕಾಸ, ಕೈಯಂಬುಗಳ ಸೈದಲಖಾನ, ಅರವತ್ತು ಸಾವಿರ ಕುದುರೆ ವಜೀರನಾದ ತರುವೋಲಿಖಾನ, ಬರುದಲೆ ಬಾಬಾಜಿಖಾನ, ಎಪ್ಪತ್ತು ಸಾವಿರ ಕುದುರೆ ವಜೀರನಾದ ಮಜರಲ್ಲಿ ಖಾನ ಬಂದು ಸೇರಿದರು. ಎಲ್ಲರೂ ಹೊರಟು ಗಂಗಾಸಾಗರಕ್ಕೆ ಬಂದರು. ಭಂಗಿಯ ಹೇರು, ಕಡಲೆ, ಮೀಠಾಯಿ, ಜಾಜಿಕಾಯಿ, ಜಾಪತ್ರೆ, ಬೇಯಿಸಿದ ರೊಟ್ಟಿ, ಅಕ್ಕಿ, ಬೇಳೆ, ಸಕ್ಕರೆ, ಗೋಧಿಹಿಟ್ಟು, ತುಪ್ಪದ ಹೇರು ಸಾಗಿದವು. ಹಸಿರು ಕೆಂಪಿನ ಗುಡಿ, ಸಾಳುಪಟ್ಟೆದ ಗುಡಿ, ಹಸುರಂಜಿ ಬಿಳಿದಿನ ಗುಡಿ, ಬಿಸಿಲು ಗುಡಾರ ಸಹಿತ ಹೊರಟು, ಚಿಕ್ಕಡಿಳ್ಳಿ (ದೇವಗಿರಿ) ಮಾರ್ಗವಾಗಿ ಮುನ್ನಡೆದರು. ಭಾಗೀರಥಿ ದಾಟಿ ಸುರಿತಾಳಪುರ, ಧನಂಜಯ ಪಟ್ಟಣ, ವಾರಣಾಸಿ, ಚಿತ್ರಕೂಟ ಮಾರ್ಗವಾಗಿ ಯಮುನೆಯ

ತೀರಕ್ಕೆ ಬಂದರು. ಸೊಲ್ಲಾಪುರದಿಂದ ವಿಜಾಪುರಕ್ಕೆ ಬಂದುನಿಂತರು. ಮಗುದಿಯಖಾನನನ್ನು ಐದು ಜನ ಕುದುರೆ ಚರರೊಂದಿಗೆ ಕುಮ್ಮಟಕ್ಕೆ ನೇಮಿ ಕಳಿಸಿದನು. "ದಂಡು ಮಿರಜಿ ವರೆಗೆ ಬಂದಿದೆ, ಒಪ್ಪಂದ ಮಾಡಿಕೊಳ್ಳಬೇಕೆಂದು" ಕಂಪಿಲನಿಗೆ ಚರರು ಹೇಳಿದರು. 'ಕುರಿಯಟ್ಟಿಯ ಹೊಕ್ಕರೆ ಕುರುಬ ಕೊಡನು ತನ್ನ ಮೊರೆಹೊಕ್ಕ ಪೋರನ.' ಹೀಗಿರುವಾಗ ನಾನು ಬಾಹದೂರರನ್ನು ಬಿಟ್ಟುಕೊಡಲಾರೆ, ಎಂದು ರಾಮಯ್ಯ ಹೇಳಿ ಚರರನ್ನು ಮರಳಿಸಿದ.

ತಂದೆಯಿಂದ ಒಂದು ಬಿಂದಿಗೆ ಹೊನ್ನಪಡೆದು ಎಲ್ಲರಿಗೂ ಹಂಚಿ, ರಾಮಯ್ಯ ಯುದ್ಧಕ್ಕೆ ಸಿದ್ಧನಾದ. ರಾಮನ ಸೀಮೆ ಗಡಿವಾಡಕ್ಕೆ ನೇಮಿಯ ದಂಡು ಬಂದಿತು. ಅಲ್ಲಿಂದ ಯುದ್ಧವಾಡುತ್ತಲೇ ಕುಮ್ಮಟವನ್ನು ಸಾರಿತು. ಮುಖ್ಯ ದಂಡು ಮಿರಜೆ, ತೊರಗಲ್ಲು, ಬದಾಮಿ, ನರಗುಂದ ನದಿಮಾರ್ಗವಾಗಿ ಕುಮ್ಮಟವನ್ನು ತಲುಪಿತು. ಮಾವ ಗುತ್ತಿ ಜಗದಪ್ಪ ಸೈನ್ಯ ಸಹಾಯ ಕಳಿಸುವುದಾಗಿ ರಾಮನಿಗೆ ಹೇಳಿದ. ಸುರಿತಾಳನೊಂದಿಗೆ ಬಳಕೆಯಾಡುವ ನಿಮ್ಮ ನೆರವು ನ್ಯಾಯ ಸಮ್ಮತವಲ್ಲವೆಂದು ರಾಮ ಉತ್ತರ ಕಳಿಸಿದ.

ಸಂಧಿ : ೧೧

ನೇಮಿಯ ದಂಡು ಕುಮ್ಮಟವನ್ನು ಮುತ್ತಿತು. ಮರಬಿಲ್ಲು, ಕತ್ತಿ, ಈಟಿ, ಬಾಣ, ಪೆಟ್ಟಿಲು, ಬರುಚಿ, ಕಠಾರಿ, ಕೈಯಂಬು, ಆನೆ, ಕುದುರೆ, ಕಾಲ್ಬಲದೊಂದಿಗೆ ರಾಮ ಯುದ್ಧಕ್ಕೆ ಸಿದ್ಧನಾದ. ಚಾರಮರಾಯನ ಇಬ್ಬರು ಮಕ್ಕಳು ವೈರಿಯ ದಾರಿಕಟ್ಟಿದರು. ಗುನುಗನು ಮುನ್ನೂರು ಸೈನಿಕರು, ಹನ್ನೊಂದು ಆನೆಗಳನ್ನು ಸೆರೆಹಿಡಿದು, ರಾಮನಿಗೆ ಒಪ್ಪಿಸಿದ. ಗಡಿಯ ಕಾವಲ ಕಾಯುವ ಕಾಟನಾಯಕ ಕಡೆಯಕಲ್ಲ ಹತ್ತಿರ ವೈರಿಗಳನ್ನು ಎದುರಿಸಿ, ಕುದುರೆಗಳನ್ನು ಸೆರೆಹಿಡಿದು, ರಾಮನಿಗೆ ಒಪ್ಪಿಸಿದ. ಮಲೆಯ ಕಾವಲ ಕಾಯುವ ಹೊಲೆಯರ ಹೊನ್ನುಗ ಕೋಡುಗಲ್ಲನ್ನೇರಿ, ವೈರಿಗಳನ್ನು ಕೊಂದು, ಆನೆ ಕುದುರೆ ಸೆರೆಹಿಡಿದು, ರಾಮಯ್ಯನಿಗೆ ಒಪ್ಪಿಸಿದ. ಬೆಟ್ಟದ ಸಿಂಗನೆಂಬವನ್ನು ಹಿರಿಯ ಕಣಿವೆಯಲ್ಲಿ ಆವಿನ ಹಿಂಡನ್ನು ಬೆದರಿಸಿದಂತೆ ತುರುಕರನ್ನು ಬೆದರಿಸಿ, ಓಡಿಸಿದ. ೯೦ ಕುದುರೆ ಹಿಡಿತಂದು ರಾಮಯ್ಯನಿಗೆ ಒಪ್ಪಿಸಿದ. ಮಾಚನು ಗೊಂದಿಯ ಕಣಿವೆಯನ್ನು ವೈರಿಗಳನ್ನು ಕೊಂದು, ಇನ್ನೂರು ಕುದುರೆಗಳನ್ನು ಸೆರೆಹಿಡಿದು ತಂದು, ಒಪ್ಪಿಸಿದ. ಗುಜ್ಜಲ ಓಬನೂ ಇಲ್ಲಿ ನೆರವಾದ. ಎಮ್ಮೆಗುಡ್ಡಕ್ಕೆ ಬಂದ ವೈರಿಗಳನ್ನು ಕೊಲ್ಲಲಾಯಿತು. ಮನ್ನಾಲ ಮಾಚ, ಒಕ್ಕಲಿಗರ ಮುದ್ದ ಹೋರಾಡಿದರು. ಆನೆಯಕಲ್ಲಿನ ಹತ್ತಿರ ಅಡಗಿ, ಮೀನಿಗರ ಲಕ್ಕ ತುರುಕರನ್ನು ತುಂಡರಿಸಿದ. ರಕ್ಕಸಮಾದ, ಬುಕ್ಕನ ಪಾಲ, ಮಾದಿಗರ ಹಂಪ, ಕೋಟಿಗರ ದ್ಯಾವ, ಆದವನ್ನಿಯ ಗಿರಿಯ ಸೇರಿ ಅಸಂಖ್ಯಾತ ವೈರಿಗಳನ್ನು ಕೊಂದರು. ೩೦೦ ಕುದುರೆ, ೩೦ ಆನೆ, ೧೧ ಜನ ರಾವುತರು ಸೆರೆಸಿಕ್ಕರು. ಗೋದಿಕಣಿವೆ ಕಟ್ಟಿ, ತಮ್ಮ ಸೈನ್ಯವನ್ನು ವೈರಿಗಳು ನಾಶಗೊಳಿಸಿದ್ದಕ್ಕಾಗಿ ನೇಮಿ ಚಿಂತಿಸಿದ.

ಮುಂಜಾನೆ ರಾಮ ಬೊಲ್ಲನಲ್ಲಿಗೆ ಬಂದು, ಪೂಜಿಸಿ, ಸಜ್ಜುಗೊಳಿಸಿದ, ಬೈಚಪ್ಪನ ಮಕ್ಕಳನ್ನು ಕರೆಸಿದ. ದೇವಿಶೆಟ್ಟಿಯಲಿಂದ, ಬೇವಿನ ಸಿಂಗ, ಕೋಟಿಗರ ದ್ಯಾವ, ಮಾವ ಮಂಚಣ್ಣ, ಬಾದುರಖಾನ, ಮಹಿಮೆಯಖಾನ, ಬಾಣದ ಬಸವ, ಆದವನ್ನಿಯ ಅರಸು ಮಕ್ಕಳು, ಬಾದಾಮಿ ಬಸವರಾವುತರನ್ನು ನೆರೆಸಿ, ರಾಮಯ್ಯ ಸೈನ್ಯದೊಂದಿಗೆ ಮಾವಿನ ಮರದ ಹತ್ತಿರ ಹೋದ. ಅತ್ತ ಸುರಿತಾಳನೂ ದಂಡು ಸಿದ್ಧಪಡಿಸಿದ. ಎಲ್ಲರೂ ಬಗಲಿಗೆ ರೊಟ್ಟಿಕಟ್ಟಿ ಹೊರಟರು. ಗುಡ್ಡಕ್ಕೆ ಮಂಜು ಮುಸುಕುವಂತೆ

ಸೈನ್ಯವನ್ನು ಮುಸುಕಿದರು. ಕಲ್ಲುಕೋಟೆಯ ಚಿಕ್ಕ – ಕಾಮಗೇತಿಯ ತಿಮ್ಮ, ಜಲ್ಲಿಬಿಲ್ಲಿನ ಬುಕ್ಕಿನಾಯ್ಕ ಸೇರಿ ರಹುಡೆಖಾನನ್ನು ಕೆಡವಿದರು. ಸಂಜೆಯಾಯಿತು. ಬಾದುರಖಾನ ಸೈನ್ಯದೊಂದಿಗೆ ಚೋರಗಂಡಿ ಇಳಿದು, ನೇಮಿಖಾನನ ಡೇರಿ ಮುತ್ತಿ, ನಾಶಮಾಡಿದ. ಮುಂಜಾನೆ ಮತ್ತೆ ನೇಮಿಖಾನನ ಸೈನ್ಯ ಕುಮ್ಮಟವನ್ನು ಮುತ್ತಿ ಹೊರಪೇಟೆ ಲೂಟಿ ಮಾಡಿತು. ಬಳಿಕ ಒಳ ಬೀದಿಗೆ ಇಳಿದು, ಬೇಡ ಪಡೆಯನ್ನು ನಾಶಮಾಡಿತು. ಆಗ ಸ್ವತಃ ರಾಮನೇ 'ಮಾಗಿದ ಹಣ್ಣಿಗೆ ಕೋಲು ಸೆಳೆಗಳೇಕೆ' ಎನ್ನುತ್ತ, ತನ್ನ ಮಂದಿಗೆ ಹರಿಯಲದೇವಿ ಕೈಯಿಂದ ಊಟ ಮಾಡಿಸಿದ. 'ಸುರಿತಾಳ ನೇಮಿಯ ಗಂಡ'ನೆಂಬ ಕೊರಳ ಪದಕ, 'ಧರೆಯೊಳಗುಳ್ಳ ರಾಯರಗಂಡ' ನೆಂಬ ಬೆರಳ ಹೊನ್ನುಂಗುರ. 'ಉತ್ತುಂಗರಾಯನ ಗಂಡ'ನೆಂಬ ಮುತ್ತಿನ ಚೌಕುಳಿ, 'ಮುಂಗುಲಿರಾಯನ ಗಂಡ'ನೆಂಬ ಉಂಗುರ – ಪಚ್ಚೆಕಡಗ, 'ಹುಳಿಯೇರ ಮಾರಿಗೊಂಡನ ಗಂಡ'ನೆಂಬ ಉಳಿಯ ಸರಪಳಿ ಧರಿಸಿ, ತಾಯಿಗೆ ತಂದೆಗೆ ನಮಿಸಿ, ಬೈಚಪ್ಪನ ಮಕ್ಕಳನ್ನು ಕರೆಯಿಸಿದ, ಬೊಲ್ಲನನ್ನು ತರಿಸಿದ. ಬಾದೂರಖಾನ, ಮಹಿಮೆಖಾನ, ಸಾಧನೆ ಬಸವರಾಜಯ್ಯ, ದೇವಿಶೆಟ್ಟಿಯ ಲಿಂಗ, ಬೇವಿನ ಸಿಂಗಯ್ಯ, ಕೊಳ್ಳಿನಾಗ, ಚಾರಮನ ಮಕ್ಕಳನ್ನು ಕರೆಸಿ, ಸನ್ನೆಗಾಳೆ ಹಿಡಿಸಿದ. ಸೈನ್ಯ ದುರ್ಗವನ್ನಿಳಿದು, ಹೊರಬಾಗಿಲ ದಾಟಿ, ಮುಂದಣ ಬಯಲಿಗೆ ಬಂದಿತು. ಇದನ್ನು ನೋಡಿ ಸುರಿತಾಳನ ಸೈನ್ಯವೂ ಸಜ್ಜಾಯಿತು.

ಸಂಧಿ : ೧೨

ರಾಮಯ್ಯ ಗುಡಿಗೆ ಬಂದು ರಾಮೇಶನಿಗೆ ವಂದಿಸಿದ. ಕಾಟಣ್ಣನಿಗೆ ಬೇರೊಂದು ಪೌಜು ಮಾಡಿ, ಅವನನ್ನು ಚಾರಮರಾಜನ ಮಕ್ಕಳು; ಹೊಸಮಲೆದುರ್ಗದ ಹಳೆಯ ಮಂದಿ, ಗಡಿವಾಡದ ಮಂದಿಯೊಂದಿಗೆ ಕಳಿಸಿದ. ತಾನೂ ಒಂದು ಪೌಜ ಮಾಡಿಕೊಂಡು ನಡೆದ. ನಬಿಯಖಾನ ರಣರಂಗದಲ್ಲಿ ಮಡಿದ. ಬೊಲ್ಲ ಎಲ್ಲರನ್ನೂ ತುಳಿದುಹಾಕಿತು. ಮನ್ನೂಲ ಮಾಚ ತಲೆ ತಂದೊಪ್ಪಿಸಿದ. ಬಾಣದ ಬಸವಯ್ಯ ಮುನ್ನೂರು ಕುದುರೆ ಕೊಂದ. ಬೂಟಕ ಬೊಮ್ಮಯ್ಯ, ಗುತ್ತಿಯಖಾನ, ಯನುಮಾಲ ಚಿತ್ತ, ಯರಬೇತು ಗಂಗಮ ಚಿನುಮದ ಚಿಕ್ಕ ತಮ್ಮುಗ, ಪೆನುಗೊಂಡೆ ಪಾಪನಾಯಕರೆಲ್ಲ ಸೇರಿ, ರಣಧೂಲಖಾನನ್ನು ಕೊಂದರು.

ಕಬ್ಬಿಲ ನಾಗ, ಹೆಬ್ಬುಲಿ ಚಿಕ್ಕ ಬೈಯಣ್ಣ, ಅಬ್ಬಯ್ಯನಾಯಕರು ಅಬ್ದುಲಖಾನನ್ನು ಕೊಂದರು. ಅಸಗೊಡ ಬಸವ, ಅಕ್ಕಸಾಲೆರ ಚಿಕ್ಕ, ಬುಕ್ಕನ ಪಾಲ, ಸಿಂಗ, ಬೆಂಗಳೂರು ಚಿಕ್ಕ, ಗಾಣಿಗ ಬೊಮ್ಮ, ಕಾಮಗೇತಿಯ ತಿಮ್ಮ, ಒಕ್ಕಲಿಗರ ಮುದ್ದ, ರಕ್ಕಸ ಮಾದ, ನಲ್ಲೂರ ನಲ್ಲ, ನಿಡಿಗಲ್ಲ ಕಾಮ, ಬಿಲ್ಲ ಪೆನ್ನ ದ್ಯಾವ, ಮಾದಿಗ ಹಂಪ, ಹೊಲೆಯರ ಹೊನ್ನುಗರು ನೇಮಿಯ ಸೈನ್ಯವನ್ನು ಮುತ್ತಿದರು. ರಾಮನ ಏಟಿನಿಂದ ಮುಂಗುಲಿಖಾನ ಎರಡು ತುಂಡಾದ. ನೇಮಿಯ ದಂಡು ಜೋಳದ ಸೊಪ್ಪೆ ಹೊಲದೊಳು ಬಿದ್ದಂತೆ ಹಾಳಾಯಿತು. ಭೂತಗಳು ಹೆಣವನ್ನುಂಡು ಕುಣಿದವು. ರಾಮಯ್ಯ ವೈರಿಗಳನ್ನು ತೊರೆಯ ಹತ್ತಿರದ ಬಾದಾಮಿ ತನಕ ಓಡಿಸಿ, ಧರ್ಮಗಹಳೆ ಹಿಡಿಸಿದ. ಮಗನ ವಿಜಯವಾರ್ತೆ ಕೇಳಿ ಕಂಪಿಲ ಹರ್ಷಿತನಾದ. ಹರಿಯಮ್ಮ ಆರತಿ ಬೆಳಗಿದಳು. ಅಕ್ಕ ಮಾರಮ್ಮ ಸಿಂಗಮ್ಮ ಹರಸಿದರು. ಸೋತ ನೇಮಿಖಾನನು ವೀರ ಬಲ್ಲಾಳ, ಮಾರಿಗೊಂಡ, ಓರುಗಲ್ಲರಸು, ಮುಂಗಲಿರಾಯ, ಗುತ್ತಿ ಜಗದಪ್ಪ ಇವರಿಗೆ, ಇನ್ನೊಮ್ಮೆ ನಾವೆಲ್ಲ ಸೇರಿ ರಾಮನನ್ನು ಮುತ್ತುವ ಬಗ್ಗೆ ಪತ್ರ ಬರೆದು, ಚಿಕ್ಕದಿಲ್ಲಿ ಮಾರ್ಗವಾಗಿ ದಿಲ್ಲಿಗೆ ಹೋದ.

ಸಂಧಿ : ೧೩

ಕಂಪಿಲರಾಯ ಮತ್ತು ರಾಮಯ್ಯ ಹಜಾರದಲ್ಲಿ ಬಂದು ಕುಳಿತು, ಯುದ್ಧದಲ್ಲಿ ಹೋರಾಡಿದವರನ್ನೆಲ್ಲ ಕರೆಸಿದರು. ದೊರೆಮಕ್ಕಳಿಗೆ ಮುರುಡಿಯ ಸರಪಳಿ, ಪದಕ, ರಾವುತರಿಗೆ ಪರಿಪರಿಯ ವಸ್ತ್ರ, ಬಿರುದು ಬಾವಲಿ, ತಂದೆಮಕ್ಕಳಿಗೆ ಹೊನ್ನು, ಬಣ್ಣದ ಉಡುಗೊರೆ, ಗಾಯದವರಿಗೆ ಜಾಳಿಗೆ ಹೊನ್ನ, ನಾಯಕವಾಡಿಗಳಿಗೆ ಉಡುಗೊರೆ ನೀಡಿದರು.

ಈ ಸಂದರ್ಭದಲ್ಲಿ ರಾಮನ ಕೀರ್ತಿವಾರ್ತೆ ಕೇಳಿ ಅಸೂಯೆಗೊಂಡ ಹೊಯ್ಸಳ ಬಲ್ಲಾಳರಾಯನು ನೇಮಿಖಾನನ ಪತ್ರದಿಂದ ಪ್ರಚೋದಿತನಾಗಿ, ಯುದ್ಧದ ಯೋಚನೆ ಮಾಡಿದ. ಓರುಗಲ್ಲಿಗೆ ಹೋಗಿ ವಿವರ ತಿಳಿದುಕೊಂಡು ಬರಲು ಮಂತ್ರಿ ನರಸಿಂಗರಾಯನನ್ನು ಕಳಿಸಿದ. ಸುದ್ದಿ ತಿಳಿದುಕೊಂಡು ಬಂದು ಬಲ್ಲಾಳನಿಗೆ ವಿವರ ಒಪ್ಪಿಸಿದರು. ಬಲ್ಲಾಳ ಎಲ್ಲರಿಗೂ ಓಲೆ ಕಳಿಸಿದ. ಚಿಪ್ಪಗಿರಿಯಿಂದ ಮೊಗಲ, ಲಾಳ–ಮಾಳವ ರಾಯರು, ಮಲೆಯಾಳ–ಕೊಂಕಣ ರಾಯರು, ಓರಗಲ್ಲ ಪ್ರತಾಪರುದ್ರ ಸೈನ್ಯಸಮೇತ ಬಂದರು. ಮುಂಗುಲಿರಾಯನ ಮಗ ಸಿಂಗಯ್ಯನೂ ಇವರನ್ನು ಕೂಡಿದ. ರಾಮನ ಸೀಮೆಯನ್ನು ಸುಡುತ್ತ ಮುಂದುವರಿದು, ಗಡಿಯನ್ನು ಮುತ್ತಿದರು. ಗಡಿದುರ್ಗದಲ್ಲಿದ್ದ ಕಾಟ ರಾಮನಿಗೆ ಈ ಸುದ್ದಿ ತಿಳಿಸಿದ. ರಾಮಯ್ಯ ಮಜ್ಜನಮಾಡಿ ವೀರಜಡೆ ಹೆಣಿಸಿ, ತಾಯಿ–ತಂದೆಗೆ ವಂದಿಸಿದ. ಬೈಚಪ್ಪ, ಮಂಚಣ್ಣ, ಚೇರಮರಾಯನ ಮಕ್ಕಳು, ಹಂಪರಾಜ, ಕಂಪರಾಯ, ಕಾಟಣ್ಣ ಸೇರಿದರು. ಪೂಜೆಮಾಡಿ ಬೊಲ್ಲನನೇರಿ ಪ್ರಯಾಣ ಬೆಳಸಿದರು. ಕಾಟಣ್ಣ ಒಂದು ಪೌಜನ್ನು ರೂಪಿಸಿಕೊಡಲಾಯಿತು. ನಾಲ್ಕು ಬಗೆಯ ವೈರಿಗಳಿದ್ದ ಕಾರಣ ಪೌಜನ್ನು ನಾಲ್ಕು ಭಾಗವಾಗಿಸಿ, ಗುಜ್ಜಲೋಬನೊಡನೆ ಕಳಿಸಲಾಯಿತು. ರಾಮ ನರಗುಂದ ಹೊಳೆಯ ಹತ್ತಿರ ಬಂದನು. ಕಳ್ಳಬಂಟ (ಗುಪ್ತಚಾರ)ರನ್ನು ಸುದ್ದಿ ಸಂಗ್ರಹಕ್ಕಾಗಿ ಕಳಿಸಲಾಯಿತು. ಮುನವಳ್ಳಿಯಲ್ಲಿ ಗುಜ್ಜಲೋಬ ಮೊದಲಾದವರನ್ನು ಕರೆಯಿಸಿದ. ಅಲ್ಲಿಂದ ದಂಡು ಮುಂದೆ ಸಾಗಿತು. ಬಲಕ್ಕೆ ಬಹದ್ದೂರ, ಎಡಕ್ಕೆ ಕಾಟಣ್ಣ, ಕಡೆಯಲ್ಲಿ ಚಾರಮರಾಜನ ಮಕ್ಕಳು, ಮುಂದೆ ದೇಮಯ್ಯ ನಡೆದರು. ಯುದ್ಧ ಆರಂಭವಾಯಿತು. ರಾಮನನ್ನು ಸೆರೆ ಹಿಡಿಯುವ ಬಗ್ಗೆ ಬಲ್ಲಾಳ – ರುದ್ರದೇವ ಮಾತನಾಡಿಕೊಂಡರು. ಅಷ್ಟರಲ್ಲಿ ರಾಮಯ್ಯ ಮಿಸಮಿಲ್ಲಖಾನನನ್ನು ಕೊಂದನು. ರುದ್ರರಾಯರಿಗೆ ಗಾಯವಾಯಿತು. ಸಿಂಗ ಹಿಮ್ಮೆಟ್ಟಿದ, ವೈರಿಗಳು ಸೋತುಹೋದರು. ರಾಮಯ್ಯ ಧರ್ಮಗಹಳೆ ಹಿಡಿಸಿದ. ಹಾನಗಲ್ಲ ಹತ್ತಿರ ಅವನ ದಂಡು ಬೀಡುಬಿಟ್ಟಿತು. ಅಂಜಿದ ಬಲ್ಲಾಳನು ಮಂತ್ರಿ ನರಸಿಂಗನನ್ನು ಮುಂದಿಟ್ಟುಕೊಂಡು, ಒಂದು ಬಿಂದಿಗೆ ಹೊನ್ನು, ಪಚ್ಚೆವರ್ಣದ ಶಾಲು, ಎರಡು ಹಿಡಿತೇಜಿ ಕೊಟ್ಟು ಒಪ್ಪಂದ ಮಾಡಿಕೊಂಡ. ಬಾದೂರಖಾನ, ಭಾವಸಂಗಮ, ದೇವಿಶೆಟ್ಟಿಲಿಂಗ, ಕೊಟಗರ ದ್ಯಾವ ಇವರಿಗೆ ಹುಸಿಗಾಯಗಳಾದವು. ಕಂಪಿಲ ಮಗನನ್ನು ಎದುರುಗೊಂಡ. ಪಂಪಾವಿರೂಪಾಕ್ಷನಿಗೆ ವಂದಿಸಿ, ಕುಮ್ಮಟಕ್ಕೆ ಬಂದರು. ರಾಮೇಶನಿಗೆ ನಮಸ್ಕರಿಸಿದರು. ಹರಿಯಲದೇವಿ ಆರತಿ ಎತ್ತಿದಳು.

ಸಂಧಿ : ೧೪

ಕಂಪಿಲರಾಯನೊಂದಿಗೆ ಬೇಟೆಗೆ ಹೋಗದೆ ರಾಮ ಅರಮನೆಯಲ್ಲಿಯೇ ಉಳಿದ. ನೀರಾಟವಾಡಲು ಬಯಸಿ ಹಂಪಿಯ ಹೊಳೆಗೆ ಹಂಪರಾಜ, ಕಂಪರಾಗ, ಸಂಪಿಗೆರೆಯ ಸಿಂಗರಾಜ, ಹಡಪದ ಬೊಲ್ಲುಗ, ಗಂಗಯ್ಯ, ಕಾಟಣ್ಣ, ಬೈಚಪ್ಪನ ಮಕ್ಕಳು, ಮಂಚಣ್ಣನ ಮಕ್ಕಳು, ಭಾವಸಂಗಮದೇವ,

ಕಾಟನಾಯಕನ ಮಕ್ಕಳು, ದೇವಿಶೆಟ್ಟಿಲಿಂಗ, ಚಾರಮರಾಯನ ಮಕ್ಕಳು, ಸಾರಂಗ, ಗೊಲ್ಲರ ಗುಜ್ಜಯ್ಯರೊಂದಿಗೆ ಬಂದನು. ಎಲ್ಲರೂ ಹರಿಗೋಲನ್ನೇರಿದರು. ಕಾಟಣ್ಣನ ಪರಿವಾರ ಮತ್ತು ರಾಮನ ಪರಿವಾರ ಅಂಡೆ, ಜೀರ್ಕೊಳವಿ ಹಿಡಿದು ಪರಸ್ಪರರ ಮೇಲೆ ನೀರು ತೂರಿ ನಲಿದರು. ಮಲೆನಾಡ ಸೋನೆ ಸುರಿವಂತೆ ನೀರಾಟ ಜರುಗಿತು. ನಂತರ ವಿರೂಪಾಕ್ಷನ ಗುಡಿಗೆ ಬಂದು ನಮಸ್ಕರಿಸಿ, ಅರಮನೆಗೆ ಮರಳಿದರು.

ಸಂಧಿ : ೧೫

ಹರಿಯಲದೇವಿಯ ವಶದಲ್ಲಿರುವ ಚೆಂಡನ್ನು ತರಬೇಕೆಂದೂ, ನಾವೆಲ್ಲ ಆಡೋಣವೆಂದೂ ಕಾಟಣ್ಣ ರಾಮನಿಗೆ ಹೇಳಿದ. ರಾಮ ಸಿಂಗರಿಸಿಕೊಂಡು ತಾಯಿಯ ಮನೆಗೆ ಬಂದ. ಮಗನ ಆಗಮನ ನೋಡಿ ಹರಿಯಲದೇವಿ ಹಿಗ್ಗಿದಳು. "ನೆತ್ತ, ಪಗಡೆ, ಜೂಜು ಆಡಿದೆವು. ಹೊತ್ತು ಹೋಗುತ್ತಿಲ್ಲ, ಆಡವಾಡಲು ಮುತ್ತಿನ ಚೆಂಡ ಕೊಡು" ಎಂದು ತಾಯಿಯನ್ನು ಕೇಳಿದ. ತಾಯಿಗೆ ಅಸಮಾಧಾನವಾಯಿತು. "ಇದು ಸಾಮಾನ್ಯ ಚೆಂಡಲ್ಲ, ಕೃಷ್ಣ, ಅಭಿಮನ್ಯು, ಮುಮ್ಮಡಿಸಿಂಗ ಇದನ್ನು ಆಡಿ ಕೆಟ್ಟರು. ಆಟ ಸಂದರ್ಭದಲ್ಲಿ ಯುವತಿಯರ ಮನೆಯಲ್ಲಿ ಬಿದ್ದರೆ, ನಿನ್ನ ನಾಶಕ್ಕೆ ಕಾರಣವಾಗುತ್ತದೆ" ಎಂದು ಹೇಳಿದಳು. "ಪರಸ್ತ್ರೀಯರು ನಿನ್ನ ಸಮಾನ, ಸೋದರಿ ಮಾರಮ್ಮ ಸಿಂಗಮ್ಮರ ಸಮಾನ" ಎಂದು ರಾಮಯ್ಯ ಉತ್ತರಿಸಿದ.

'ಬೇಡ, ರಾಮುಗ ನಿನ್ನ ನೋಡಿದ ಸತಿಯರು ಮಾಡರು ಮನೆಗೆಲಸಗಳ, ಊಡರು ತಮ್ಮ ಕಂದಗೆ ಮೊಲೆಹಾಲನು, ಕೂಡರು ತಮ್ಮ ಪುರುಷರ' ಎಂದು ಹೇಳಿದಳು. ಕೃತಯುಗದಲ್ಲಿ ಇದು ಕಾರ್ತವೀರ್ಯನನ್ನು, ದ್ವಾಪರದಲ್ಲಿ ದ್ರೌಪದಿಯನ್ನು ಅಡವಿಗೆ ಅಟ್ಟಿತು. ಕೀಚಕನನ್ನು ಕೊಲ್ಲಿಸಿತು. ಹರಿಶ್ಚಂದ್ರನನ್ನು ರಾಜ್ಯ ಬಿಡಿಸಿತು – ಏನೆಲ್ಲ ಹೇಳಿದರೂ ಕೇಳದೆ ಕಾಡಿದ. ಬೇಸತ್ತ ಹರಿಯಲದೇವಿ, ಪ್ರಾಣಿಬಲಿಕೊಟ್ಟು ತೆಗೆದುಕೊಂಡು ಹೋಗೆಂದಳು. ಬಲಿ ಕೊಟ್ಟು ಒಯ್ಯುವಾಗ ಮಗನಿಂದ 'ಪರನಾರಿ ಸೋದರ' ಪ್ರತಿಜ್ಞೆ ಮಾಡಿಸಿದಳು.

ಸ್ನೇಹಿತರೆಲ್ಲ ಸೇರಿ ಆಟಕ್ಕೆ ಆಳು ಹಂಚಿದರು. ಗಾಣಿಗ ಬೆಮ್ಮ, ಕುಂಬಾರ ಸೋಮ, ಇರುಪ, ನೆಲಗತ್ತಿಕಾಮ, ಭಟ್ಟರ ಭೀಮ, ಚಿಕ್ಕಯ್ಯ, ಒಕ್ಕಲಿಗರ ಮುದ್ದ, ಅಕ್ಕಸಾಲೆಯ ಚಿಕ್ಕ ಮೀನಿಗ ಬೊಮ್ಮ, ಕೊಳ್ಳಿಯ ನಾಗ, ಯನುಮಲ ಚಿತ್ತ, ಯರಬೇತು ಗಂಗ, ಮನ್ನೂಲ ಚಿನ್ನ, ಬೂಟಕ ಬೊಮ್ಮ, ಮಿಡಿಗೇಸಿ ನಲ್ಲ, ರವಳಿಯ ಹನುಮ, ಅರಸು ಮಕ್ಕಳಾದ ಹಂಪರಾಜ, ಕಂಪರಾಜ, ಮನ್ನಾಲ ಮಾಚ, ಮುದುಕೊಂಡ ಲೋಬ, ಕೊಟಿಗರ ದೇವ, ಬುಕ್ಕನಪಾಲ, ಹೊಳಕೆಯ ಕೆಂಚ, ರಕ್ಕಸ ಚಿನುಮಾದ, ಬಾದೂರಖಾನ, ಮಹಿಮೆಯ ಖಾನ, ಸಾಧನೆ ಬಸವಯ್ಯ, ಮಣಿಹದ ಮಲ್ಲ, ಕರಿಸಿದ್ದ, ಹಳದಿಯ ತಿಪ್ಪ, ಬಾನಿಯ ಮಲ್ಲ, ರಕ್ಕಸ ಮಾದ, ಇವರೆಲ್ಲ ಸೇರಿದರು. ರತ್ನಾಜಿ ಅರಮನೆಯ ಬಯಲಿಗೆ ಹೋದರು. ಚಿನ್ನದ ಏಳು ಲೆಗ್ಗೆ, ಬೆಳ್ಳಿಯ ಏಳು ಲೆಗ್ಗೆ ಹೂಡಿದರು.

ಚಂಡಿನಾಟ ನೋಡಲು ಸೂಳೆ ಹಂಪಾಜಿ, ಹೊಳೆಹೊನ್ನೂರ ರಾಮಾಜಿ, ಗುರುಮುಕುಂಡದ ಸೋಮಿ, ಇಕ್ಕೇರಿ ದುರ್ಗಾಯಿ, ಪಾಳೇದ ಪಾಪಾಜಿ, ಹಳೆಯ ಬೀಡಿನ ಹಂಪಾಜಿ, ಬಾಣವಾರದ ಭದ್ರಿ, ಕೊಟ್ಟೂರ ಕಾಮಾಜಿ, ಬಾದಾಮಿ ಬಸವಿ, ಕುಂದುರ್ಪೆ ಕೊಂಡಾಜಿ, ಬೇಲೂರ ಬೆನಕಾಜಿ,

ಆದವನ್ನಿಯ ನಾಗಾಜಿ, ಕುಂಭಕೋಣದ ವೀರಾಜಿ, ಚೆನ್ನಪಟ್ಟಣದ ಚೆನ್ನಾಜಿ, ಚಂದ್ರಗಿರಿಯ ಚೆನ್ನೆ, ಹೊಸಪ್ಯಾಟಿ ಜಂಬುಲಿಂಗಿ, ವಸವಂತಪುರದ ಮಲ್ಲಾಜಿ – ಈ ಸೂಳೆಯರೆಲ್ಲ ಅಲ್ಲಿ ನೆರೆದರು.

ಸಂಧಿ : ೧೬

ಚಂಡಿನಾಟದ ಗದ್ದಲ, ಕೂಗು ರಾಜಧಾನಿಯಲ್ಲಿ ಪ್ರತಿಧ್ವನಿಸಿತು. ರತ್ನಾಜಿಯ ಸೂಚನೆಯಂತೆ ಸಂಗಿ ಹೊರ ಬಂದು ನೋಡಿ, ಒಡತಿಗೆ ರಾಮನ ಆಟದ ಸುದ್ದಿ ಹೇಳಿದಳು. ಹೊರ ಬಂದು ಅವನನ್ನು ನೋಡಬೇಕೆಂದು ರತ್ನಾಜಿ ಸಿಂಗಾರವಾಗತೊಡಗಿದಳು. ಕಾಲುಂಗರ, ಪಿಲ್ಲೆ, ಹೊನ್ನುಡಿದಾರ, ತೋಳ ಬಾಪುರಿ, ಭುಜಕೀರ್ತಿ, ಸಾಲ ಮುತ್ತಿನ ಸರ, ಕೊರಳ ಚಿಂತಾಕ, ಬೆರಳ ಹೊನ್ನುಂಗುರ, ಕೊರಳ ಮುತ್ತಿನ ಹಾರ, ಹರಳ ತೆತ್ತಿಸಿದ ಸೂಡಂಗ, ಚಿನ್ನದ ಸರ, ಹೊನ್ನ ಹೂವು, ಮುತ್ತಿನ ಕೊಪ್ಪ ಧರಿಸಿದಳು.

ಬಾಚಿ ಬೈತಿಲ ತೆಗೆದು, ನುಣ್ಣನೆ ತಿರುಬನಿಕ್ಕಿದಳು. ಕಣ್ಣಿ ಕಪ್ಪನೆ ಹಚ್ಚಿ, ಕಸ್ತೂರಿ ತಿಲಕವನ್ನು ಹಣೆಗೆ ಹಚ್ಚಿಕೊಂಡಳು. ಉಟ್ಟ ಉಡುಗೆ, ಕಟ್ಟಿದ ಸರಪಳಿ ಗೆಜ್ಜೆ, ತೊಟ್ಟ ಮುತ್ತಿನ ರವಿಕೆ, ಇಟ್ಟ ಮೂಗುತಿಗಳಿಂದ ಚೆಂದವಾದಳು. ಹಣೆಯಲ್ಲಿ ಮುತ್ತಿನ ಬೊಟ್ಟು ಇಟ್ಟುಕೊಂಡಳು. ಕಸ್ತೂರಿ ತಿಲಕ ಹಣೆಗೆ ಹಚ್ಚಿಕೊಂಡು, ಪಟ್ಟಾವಳಿ ಉಟ್ಟಳು. ಕಟ್ಟಿದ ನಿಲುಗನ್ನಡಿಯ ಮುಂದೆ ನಿಂತು ಕಟ್ಟಾಳು ರಾಮನಿಗೆ ತಾನು ತಕ್ಕವಳು – ಎಂದು ನಕ್ಕಳು. ಹೀಗೆ ಸಿಂಗರವಾಗಿ ನಾಗಿ, ಸಂಗಿರೊಡನೆ ಉಪ್ಪರಿಗೆ ಏರಿದಳು. ರಾಮನನ್ನು ವಶಮಾಡಿಕೊಳ್ಳುವುದರ ಸಲುವಾಗಿ ಚಿತ್ತಜ ಜಯತು, ತ್ರಿಯಂಬುಕ ಜಯತು – ಎಂದು ಪ್ರಾರ್ಥಿಸಿದಳು. ರಾಮ ವಶವಾದರೆ ಊರ ಮುಂದಣ ಮಾರಮ್ಮಗೆ ಮುನ್ನೂರು ಕೋಣ ಬಲಿಕೊಡುವೆ, ಬೋನಗುರಿಯ ಹೊಯ್ಸುವೆ, ಹಾರುಗೋಳಿಯ ಬಿಡುವೆ, ಗುತ್ತಿಯ ಎಲ್ಲಮ್ಮಗೆ ಹಬ್ಬವ ಮಾಡಿ ಕೋಣ ಬಲಿಕೊಟ್ಟು ಮೂರು ಮಾಣಿಕದ ಆರತಿ ಎತ್ತುವೆ. ಹುಲಿಗೆ ಹೊಸೂರಮ್ಮನಿಗೆ ಹಿಡಿಹೊನ್ನ ಕಾಣಿಗೆ ನೀಡುವೆ, ಒಪ್ಪತ್ತಿನೂಟ ಹಿಡಿಯುವೆ. ಕಂಪಲಿಸ್ವಾಮಿಗೆ ಮುಡುಪಿನ ಮುಂದಲೆ ಕೊಡುವೆ. ರಾಮನ ಸಂಭೋಗದಿಂದ ಒಂದು ಕೂಸು ಹುಟ್ಟಿದರೆ ತಿರುಮಲದೇವನಿಗೆ ತಿರುಮುಡಿ ಮಾಡಿಸುವೆ, ಹುಲಿಗೆರೆಯರಸ್ಯ ಸೋಮನಾಥನಿಗೆ ಸೋಮವಾರ ಉಪವಾಸವಿರುವೆ. ಶ್ರೀಶೈಲಕ್ಕೆ ಬಂಗಾರದ ಕಳಸ ಕೊಡುವೆ, ಹೊನ್ನ ಕಳಸ ಅರ್ಪಿಸುವುದಲ್ಲದೆ ಉಪ್ಪರಿಗೆ ಕಟ್ಟಿಸುವೆ, ಎಪ್ಪತ್ತೇಳು ಕಪಿಲೆಗಳನ್ನು ಬಿಡುವೆ. ಹಂಪೆಯಾಳ್ದನಿಗೆ ಹಣ್ಣು ಹಂಪಲ ಸೇವೆ ಮಾಡುವೆ. ಹೊಸಪೇಟೆಯ ಜಂಬುಲಿಂಗಗೆ ವಸಂತವನ್ನಾಡುವೆ. ನಂದಿಗೆ ಹೊಕ್ಕಳುಗಂಟೆ ಸರಪಳಿ ಸಲ್ಲಿಸುವೆ. ಗಂಗಾಧರನಿಗೆ ತಿಂಗಳ ಉಪವಾಸವಿದ್ದು ಮಂಗಳಾರತಿ, ಕಪಿನಿಪತಿ ನಂಜುಂಡಗೆ ಕರ್ಪುರದಾರತಿ ಎತ್ತುವೆ ಎಂದು ಹರಕೆ ಹೊತ್ತಳು. 'ಕಂಪಿಲರಾಯ, ಈ ಹರಕೆಗಳಿಗೆ ಕಾರಣ ಕೇಳಿದರೆ ಏನೆಂದು ಉತ್ತರ ಕೊಡುವೆ?' ಎಂದು ಸಂಗಿ ಪ್ರಶ್ನಿಸಿದಳು. 'ನೀನು ಬೇಟೆಯಿಂದ ಮರಳಿ ಬರಲು ತಡಮಾಡಿದ ಕಾರಣ, ಹಿಂಸ್ರ ಪ್ರಾಣಿಗಳು ನಿನಗೆ ಅಪಾಯ ಮಾಡದಿರಲೆಂದು ಹರಕೆ ಹೊತ್ತನೆಂದು ಉತ್ತರಿಸುತ್ತೇನೆ' ಎಂದಳು ರತ್ನಾಜಿ.

ಹಡಪದ ಸಂಗಿಯೊಡನೆ ರತ್ನಾಜಿ ಏಳುನೆಲೆಯ ಉಪ್ಪರಿಗೆ ಹತ್ತಿದಳು. ಒಡೆಯರಾರು, ಬಂಟರಾರು ಎಂಬುದು ಗೊತ್ತಾಗದಷ್ಟು ಆಟಗಾರರ ದಟ್ಟಣೆ ಇದ್ದಿತು. ಈಗ ರತ್ನಾಜಿ ಅವನಾರು?

ಇವನಾರು? ಎಂದು ಕೇಳುತ್ತ ಹೋದಳು. ಇದಕ್ಕೆ ಉತ್ತರವಾಗಿ ಸಂಗಿ ತಳವಾರ ಹರಿಯ, ಬಾದೂರಖಾನ, ಹಾವಳಿ ಲಿಂಗ, ಗುಜ್ಜಲ ಹರಿಯ, ಕುಂಬಾರ ಕಲ್ಲ, ಒಕ್ಕಲಿಗರ ಮುದ್ದ, ಕಬ್ಬಲಿಗರ ನಾಗ, ಜಂಗಮರ ಬಸವ, ಮಡಿವಾಳ ಮಾಚ, ಅಸಗೋಡ ಬಸವ, ಕಂಚಗಾರ ಕಾಳ, ಗಂಡಿಕೋಟೆ ಗಂಗರಾಜ, ಪಾಂಡುರಂಗದೇಶದ ರಾಯ, ತುಳುವರ ಗಿರಿಯ, ಮುಚ್ಚಾಲ ಹನುಮ, ತೊರಗಲ್ಲ ಬಾದಾಮಿ–ಅರಸು, ಮಿಡಿಗೇಸಿ ನಾಗ, ಹೊಳಲಕೆರೆಯ ಸಂಗ, ಚಂದ್ರಗಿರಿಯ ಸಿದ್ಧ, ಪಂಚಮರ ಬಸವ, ಉದ್ದಗಿರಿಯ ಸಿದ್ಧರಾಜನ ಮಗ, ಪೆನಗುಂಡೆಯ ಸೋಮ, ಏಕಾಂಗಿ ವೀರ ಬಸವ, ರಾವುತ ಸಿದ್ಧ, ಅಕಳಂಕ ಸಿದ್ಧ, ಮಿಡಿಗೇಸಿ ನಾಗ, ನಿಡುಗಲ್ಲ ಕಾಮ, ಕುಂದುರ್ಪೆ ತಮ್ಮ, ರಾಯದುರ್ಗದ ವೀರ, ಬೋಗಾರ ಮಲ್ಲ, ಕುಂಭಕೋಣೆಯ ಕಲ್ಲ, ಉತ್ಸಂಗಿದುರ್ಗದ ಪಡುವಲದೇಶದ ಮತ್ತ ಕೋಕಿಲ, ಗಡಿಕೋಟೆಯ ದೇವ, ಗೊಲ್ಲರ ಗುಜ್ಜಯ್ಯ, ಮಾದಿಗ ಹಂಪ, ದಳಧೂಳಿ ಮಾದ, ಮನ್ನೂಲ ಮಾಚ, ಕುರುಗೋಡ ಸಂಗಮ, ಚಿನ್ಮೂಲಗಿರಿ ದೊಡ್ಡ, ಮೀನಿಗರ ಲಕ್ಕ, ಉಚ್ಚಂಗಿದುರ್ಗದ ಪಾಲ, ವಸದಾರಿ ಬಸವ, ತೊರಗಲ್ಲ ಜಾಯಿಶೆಟ್ಟಿ ಬಸವ, ಬಳ್ಳಾರಿ ಹನುಮ, ದೇವಿಶೆಟ್ಟಿ ಲಿಂಗ, ಸಾಲ್ಗುಂದಿ ಚೆನ್ನ, ಕಂಪಿಲನ ಅಳಿಯ, ಕಾಟಣ್ಣ, ಮಂತ್ರಿ ಬೈಚಪ್ಪನ ಮಗ, ಕಲ್ಲಕೋಟೆಯ ಚಿತ್ತ, ಕೊಪ್ಪಳದ ತಿಮ್ಮ ಎಂದು ಪರಿಚಯಿಸಿದಳು. ಇದರಿಂದ ಬೇಸತ್ತ ರತ್ನಾಜಿ 'ಬೇರೆಯವರನ್ನು ತೋರಬೇಡ, ಸಾಕು, ನನ್ನ ಸೂರೆಗೊಂಬ ರಾಮನನ್ನು ತೋರು. ನಿನ್ನ ಬಾಯಿತುಂಬ ಬಂಗಾರ ಕೊಡುವೆ' ಎಂದಳು. ಸಂಗಿ, ರಾಮನನ್ನು ತೋರಿಸುತ್ತಲೇ ರತ್ನಿಯಲ್ಲಿ ಕಾಮ ಕೆರಳಿತು. 'ರಾಮನು ಸ್ತ್ರೀಯರ ತನುದುರ್ಗವ ಇರದೆ ಮುತ್ತಿಗೆ ಮಾಡಬಂದ' ಎಂದು ಮನಸ್ಸಿನಲ್ಲಿ ನುಡಿದಳು. ಕನ್ನಡ ಜಾಣ ರಾಮನ ಕಂಡು ಮನಸೋತಳು, ವಿರಹದಲ್ಲಿ ಬುಡಬುಡನೆ ಹೊರಳಿದಳು, ಭೂಮಿಯಲ್ಲಿ ಉರುಳಿದಳು. ಆಗ ಸಂಗಿ ನೀರು ಸಿಂಪಡಿಸಿ ರತ್ನಿಗೆ ಎಚ್ಚರ ಹುಟ್ಟುವಂತೆ ಮಾಡಿದಳು. ಎದ್ದು ನಿಲ್ಲಿಸಿ ರಾಮನನ್ನು ಮತ್ತೆ ತೋರಿಸಿದಳು. 'ಕಪ್ಪು ಹತ್ತಿದ ಮೀಸೆ, ಕಸ್ತೂರಿ ತಿಲಕ, ಬಲ್ಲಿನ ಚಿಮ್ಮುರಿ ಸುತ್ತಿ'ದ್ದ ರಾಮನನ್ನು ನೋಡಿದಳು. 'ಒತ್ತಿ ಬರುವ ಮೀಸೆ, ಕನ್ನೆ ಕುಮರ ಗಡ್ಡ'ದ ರಾಮನನ್ನು ಬಯಸಿದಳು.

ಕಾಟಣ್ಣ ಚೆಂಡು ಎಸೆಯಲಾಗಿ ಸರಗೋಲು ಮುರಿದು, ಲೆಗ್ಗೆಯ ಹಲ್ಲೆ ನುಗ್ಗೆದ್ದು ಹೋಯಿತು. 'ಹೂಡಿರೋ ಲೆಗ್ಗೆಯ, ನೀಡಿರೋ ಚೆಂಡನು. ಓಡಿರೋ ನಾಲ್ಕು ದಿಕ್ಕಿನಲಿ' ಎಂಬ ಧ್ವನಿ ಎಲ್ಲೆಡೆ ತುಂಬಿಕೊಂಡಿತು. 'ರಾಮನಿಡಲು ಚೆಂಡು ಭೂಮಿಯಾಕಾಶಕ್ಕೆ ನೆಗೆಯಿತು.' ವಾಯುದೇವ ಅದನ್ನು ರತ್ನಾಜಿ ಅಂಗಳಕ್ಕೆ ಹಾಕಿದ. ರತ್ನಾಜಿ ಉಟ್ಟ ಉಡುಗೆಯೊಂದಿಗೆ ಚೆಂಡಿನ ಮೇಲೆ ಬಿದ್ದು, ಅರಮನೆಯ ಒಳಗೆ ಒಯ್ದು, ಪನ್ನೀರ ಚಿಮುಕಿಸಿ, ಈ ಚೆಂಡು ರಾಮನ ಸಮವೆಂದು ಎದೆಗೆ ಒತ್ತಿಕೊಂಡಳು. ಅದರ ಮೇಲೆ ಬಿದ್ದು ಹೊರಳಾಡಿದಳು, ನಖರೇಖೆ ಒತ್ತಿದಳು, ದಶವಸ್ತ್ರ ಹಾಕಿದಳು. ಎದಿಗೊತ್ತಿ ಬದಿಗೊತ್ತಿಕೊಂಡಳು. ಮುದದಿ ಮುದ್ದಿಸಿ ಮುಂಡಾಡಿದಳು. ಪುನುಗು ಜವಾದಿ ಕಸ್ತೂರಿ ಲೇಪಿಸಿದಳು. ಪಟ್ಟೆ ದೇವಾಂಗ ಸುತ್ತಿ, ಗಂಧಕಸ್ತೂರಿ ತಿಲಕವಿಟ್ಟಳು. ಮುತ್ತಿನಾರತಿ ಎತ್ತಿದಳು. ಒಸಗೆ ಪಾಡಿದಳು. ಚಿನ್ನದ ಗದ್ದುಗೆ ಮಾಡಿ, ಮಂಚದ ಮೇಲಿಟ್ಟು ಪೂಜಿಸತೊಡಗಿದಳು. ಹೊರಗೆ ಕಾವಲಿರುವಂತೆ ಸಂಗಿಗೆ ಹೇಳಿದಳು.

ಸಂಧಿ : ೧೭

ಚೆಂಡು ತರಲು ಕಾಟಣ್ಣನನ್ನು ಕಳಿಸಿದರು. ಅವನು ಹೋಗಿ, ಚೆಂಡನ್ನು ಕೊಡಲು ಸಂಗಿಯನ್ನು ಕೇಳಿದನು. 'ನಾನು ನೋಡಿಯೇ ಇಲ್ಲ' ಎಂದು ಉತ್ತರಿಸಿದಳು. 'ಗಂಡನಿಲ್ಲದ ಅರಮನೆಗೆ ಬಂದವರಾರು?' ಎಂದು ರತ್ನಾಜಿ ನುಡಿದು, ಅವನನ್ನು ನೂಕಿಸಿದಳು. ನಿಮ್ಮೊಂದಿಗೆ ನನ್ನ ಸಖಿಯರು ಆಡಲು ಬಂದಿದ್ದರೆ? ಎಂದು ಪ್ರಶ್ನಿಸಿದಳು. 'ರಾಮನಿಟ್ಟ ಚೆಂಟು' ನೆಗೆದು ಇಲ್ಲಿಗೆ ಬಂದಿತು ಎನ್ನಲು, ರತ್ನಾಜಿ ಶೃಂಗಾರ ತೋಟದಲ್ಲಿ ಹುಡುಕಿದಂತೆ ನಟಿಸಿದಳು. ಮಲ್ಲಿಗೆ, ಪಚ್ಚೆ, ಸಂಪಗೆ, ನಿಂಬೆಗಳ ಅಡಿಯಲ್ಲಿ ಸುತ್ತಾಡಿ ಬಂದು ಕಾಟಣ್ಣನಿಗೆ ಉಪಚಾರದ ಮಾತುಗಳನ್ನಾಡಿ, 'ಕಂದನಾದ ರಾಮನನ್ನು ನೋಡುವ ಬಯಕೆಯಾಗಿದೆ. ಕಳಿಸಿಕೊಡು, ಬಂದು ಚೆಂಡನ್ನೊಯ್ಯಲಿ, ಅವನ ಚೆಂಡನ್ನು ನಿನಗೆ ಕೊಟ್ಟರೆ ಇಬ್ಬರಲ್ಲಿ ದ್ವೇಷ ಹುಟ್ಟೀತು' ಎಂದು ತಿಳಿಹೇಳಿ, ಕಾಟನನ್ನು ಮರಳಿಸಿದಳು. ಈಗ ಹಳಬನಾದ ಬಲ್ಲುಗನನ್ನು ಕಳುಹಿಸಿದರು. ಅವನಿಗೂ ಅದೇ ಉತ್ತರ ಹೇಳಿದಳು. ಚೆಂಡು ತರಲು ರಾಮನೇ ಹೊರಟ. 'ಶೃಂಗಾರವನ್ನು ತೆಗಿ ತಮ್ಮ' ಎಂದು ಕಾಟ ಕೇಳಿದ. ರಾಮ ಹಾರವನ್ನು ತೆಗೆದ, ಹೆಸರುಳ್ಳವರಾಯರಗಂಡ ಬಿರುದಿನ ಕುಸುರಿನ ಪೆಂಡೆಯ ತೆಗೆದ, 'ಭೂಮಿಯೊಳುಳ್ಳ ರಾಯನ ಗಂಡ' ಎಂಬ ಕೊರಳಪದಕ ತೆಗೆದ, 'ಅಷ್ಟದಿಕ್ಕಿನ ರಾಯರ ಗಂಡ' ಎಂಬ ಬಾಪುರಿಯನ್ನು ತೆಗೆದ, 'ಸುತ್ತಣ ರಾಯರ ಗಂಡ'ನೆಂಬ ಸುತ್ತಿದ ಚಿಮ್ಮುರಿ ತೆಗೆದ, 'ಕನ್ನೋಜಿ ರಾಯರಗಂಡ'ನೆಂಬ ಹೊನ್ನುಂಗುರವನ್ನು ತೆಗೆದ, 'ಮನ್ನೆಯ ಮಗಧರಾಯರ ಗಂಡ'ನೆಂಬ ರನ್ನದ ಪದಕವ ತೆಗೆದ, 'ದಂಡೆತ್ತಿಬರುವ ರಾಯರ ಗಂಡ, ಎಂಬ ಕಾಲ ಪೆಂಡೆಯವನ್ನು ತೆಗೆದ, ಕಂಠಮಾಲೆ, ದಂಡೆ ಹಾರ, ರನ್ನದ ಕಡಗ, ಚಿನ್ನದ ಸರ, ನಡುವಿನುಡುದಾರ ತೆಗೆದ, ಕಂಠಮಾಲೆ, ದಂಡೆ ಹಾರ, ರನ್ನದ ಕಡಗ, ಚಿನ್ನದ ಸರ, ನಡುವಿನುಡುದಾರ ತೆಗೆದ, 'ಪಡುವಣ ರಾಯರ ಗಂಡ'ನೆಂಬ ತೊಡರು ಪೆಂಡೆಯವನ್ನು ತೆಗೆದ, 'ಗಡಿಯಂಕ ಮನ್ನೆಯರ ಗಂಡ'ನೆಂಬ ಕುಡುಕು ಚೌಕಳಿಯನ್ನು ತೆಗೆದ, 'ಬಂಗಾಳ ರಾಯರ ಗಂಡ'ನೆಂಬ ಬೆರಳುಂಗುರವನ್ನು ತೆಗೆದ, 'ಪಿಂಗಾಳ ರಾಯರ ಗಂಡ'ನೆಂಬ ಅಂಗದಾಭರಣವ ತೆಗೆದ. ಕಾಲೊಳುಲಿವ ಸರಪಳಿಗಳನ್ನೂ ತೆಗೆದುಕೊಟ್ಟು, ಮಂಡೆ ಒತ್ತಿ ಎಣ್ಣೆಗಂಟು ಬಿಗಿದ. ಹೊನ್ನ ನಾಮವನ್ನು ತೆಗೆಯುತ್ತ, ರನ್ನದ ಕಡೆಯವನ್ನು ಕಳಚಿದ. ಪರನಾರಿ ಸೋದರನೆಂಬ ಕಡೆಯವನ್ನು ಎಡದ ಕಾಲೊಳಗೆ ಧರಿಸಿ, ರತ್ನಾಜಿಯ ಬಾಗಿಲಿಗೆ ಬಂದ. ಬಾಗಿಲ ಗೊಲ್ಲರು, ಎಕ್ಕಟಿಗರು ಎದ್ದು ಕೈಮುಗಿದರು.

ಪಂಜರದೊಳಗಿದ್ದ ಗಿಳಿ 'ಕಂಪಿಲರಾಯನಿಲ್ಲದ ಅರಮನೆಗೆ ಬಂದವನಾರೆಲೆ ಪಾಪಿ' ಎಂದು ಕೇಳಿತು. 'ಹುಳಿಯೇರ ಮಾರಿಗೊಂಡನನ್ನು ಸೋಲಿಸಿ, ನಿನ್ನನ್ನು ತಂದ ರಾಮನು ನಾನೆಂಬುದನ್ನು ಮರೆತೆಯೊ' ಎಂದು ನೆನಪಿಸಿದ. ತಾನು ಬಂದ ಕಾರಣ ಹೇಳಿದ. ಹಿಂದಿರುಗಲು ಗಿಳಿ ಬಿನ್ನವಿಸಿದರೂ ಕೇಳದೆ ರಾಮ ಒಳಗೆ ಬಂದ. ಸಂಗಿ ದಂಡಪ್ರಣಾಮ ಮಾಡಿದಳು. 'ಚೆಂಡು ರತ್ನಾಜಿಯ ಹತ್ತಿರ ಇದೆ' ಎಂದು ಹೇಳಿದಳು. ರಾಮ ರತ್ನಾಜಿಗೆ ನಮಸ್ಕರಿಸಿ, ಚೆಂಡು ಕೇಳಿದನು. 'ಆಟವಾಡಿ ದಣಿದಿರುವೆ, ಬಾ ಕುಳ್ಳಿರು'–ಎಂದಳು. ರಾಮ ನಿರಾಕರಿಸಿದ. 'ಚೆಂಡು ಒಳಗೆ ಮಂಚದ ಮೇಲಿದೆ, ತೆಗೆದುಕೋ' ಎಂದು ಹೇಳುತ್ತಲೇ ರಾಮಯ್ಯ ಒಳಗೆ ಹೋದ. ಬೆನ್ನುಹಿಂದೆಯೇ ಬಂದ ರತ್ನಾಜಿ ಅವನ ಮುಂದಲೆ ಹಿಡಿದು 'ಮನಸೋತೆ, ನೆರೆದುಳುಹು' ಎಂದಳು, ತಬ್ಬಿಕೊಂಡಳು.

'ನೀನು ಹರಿಯಮ್ಮನ ಸಮಾನ' ಎಂದು ನುಡಿದು ಬಿಡಿಸಿಕೊಳ್ಳಲು ಪ್ರಯತ್ನಿಸಿದ. 'ಬಾಲೆ ಹೆಣ್ಣು ಬಯಸಿ ಬಂದು ಹಿಡಿದರೆ ಒಲ್ಲೆನೆಂಬುದು ಗುಣವೇನೋ' ಎಂದು ಕೇಳಿದಳು. 'ನಿನಗೆ ಮುತ್ತು ಮಾಣಿಕ ನವರತ್ನ ಬಂಗಾರ ಕೊಡುವೆ' ಎನ್ನುತ್ತ ಗಟ್ಟಿಮೊಲೆಗಳನ್ನು ತೋರಿಸಿದಳು. 'ಹೊಸಮಲೆದುರ್ಗವನ್ನು ನಿನ್ನ ವಶಮಾಡುವೆ. ವಿಷವಿಕ್ಕಿ ಮುದಿ ಕಂಪಿಲನನ್ನು ಕೊಂದು, ನಿನಗೆ ಪಟ್ಟಕಟ್ಟುವೆ'ನೆಂದು ನುಡಿದಳು. ರಾಮ ಒಪ್ಪಲಿಲ್ಲ. 'ಕೊಂದು ಹೋಗೆಲೋ ರಾಮ ನಿಂದು ಸೈರಿಸಲಾರೆ, ಮುಂದುಗೆಟ್ಟೆನೊ ವಿರಹದಲಿ, ಒಂದು ಗಳಿಗೆ ಭೋಗವನಿತ್ತು ಸೈರಿಸು' ಎಂದು ಬೇಡಿಕೊಂಡಳು. 'ನನ್ನನ್ನು ಹೆಂಡತಿಯನ್ನಾಗಿ ಮಾಡಿಕೊಳ್ಳು' ಎಂದಳು. 'ಪರಸತಿಗೆ ಮೋಹಿಸಿದವನು ಹೊಲೆಯನೇ ಸರಿ' ಎಂದು ರಾಮ ಬುದ್ಧಿ ಹೇಳಿದ. 'ಕಥೆಯನೋದವರೆಲ್ಲ ವ್ರತಗೆಟ್ಟು ಹೋದರೋ', 'ಸತಿಗೊಳಗಾಗದವರಾರೋ' ಎಂದಳು. 'ಮಳೆಗಾಲದಲ್ಲಿ ಮಲ್ಲಿಗೆ ಕಾತ ತೆರನಂತೆ ಅಳಿವೆನೋ ಮುದಿ ಕಂಪಿಲಗೆ' ಎಂದು ಹಲುಬಿದಳು. 'ನಿನಗಾಗಿ ಕಂಪಿಲ ನನ್ನನ್ನು ತಂದು, ತಾನೇ ಮದುವೆಯಾದ. ನಾನು ನಿನಗೆ ಹೆತ್ತತಾಯಿಯಲ್ಲ, ಸೋದರತ್ತೆಯ ಮಗಳೋ ರಾಮಯ್ಯ' ಎಂದಳು. 'ತಂದೆಯ ಹೆಂಡತಿಯೊಂದಿಗೆ ಕೂಡುವುದು ನ್ಯಾಯವೇ?' ಎಂದರೆ 'ತಂದೆ ಏರುವ ಪಲ್ಲಕ್ಕಿಯ ಕಂದ ಏರುವುದಿಲ್ಲವೇ?' ಎಂದು ವಾದಿಸಿದಳು. 'ಕಲ್ಯಾಣದಲ್ಲಿ ರಾಮನಾಯಕನ ಹೆಂಡತಿ ಚಿಕ್ಕಯ್ಯನನ್ನು ಪ್ರೀತಿಸಿದಳು. ಅವನು ನಿರಾಕರಿಸಿ ತಲೆ ಕಳೆದುಕೊಂಡ. ಹಾಗಾದೀತು ಎಚ್ಚರಿಕೆ' ಎಂದಳು. 'ನಾನು ಬಾಸಿಂಗ ಕಟ್ಟಿಕೊಂಡು ಮದುವೆಯಾದವಳಲ್ಲ. ದೊರೆಯ ಊಳಿಗದವಳು' ಎಂದು ಏನೇನೋ ಅಲಾಪಿಸುತ್ತಲೇ, ರಾಮ ಅವಳನ್ನು ನೂಕಿದರೆ, ಮುರಿಮುರಿದು, ಮತ್ತೆ ಮತ್ತೆ ತೊಡರಿದಳು. ಈ ಸೆಣಸಾಟದಲ್ಲಿ ಓಲೆ ಸಡಿಲಿತು, ಮುತ್ತು ಹರಿದು ಬಿದ್ದವು, ರತ್ನದ ಹಾರ ಹದಿನಾರು ತುಂಡಾಯಿತು, ಬಳೆಗಳು ಒಡೆದವು, ಮಾಣಿಕ ಸಿಡಿದವು, ತೊಡಿಗೆಗಳು ಬೆಸುಗೆ ಬಿಚ್ಚಿದವು, ಬಾಯ ತಾಂಬೂಲ ಪುಡಿ ಪುಡಿಯಾಯಿತು, ಕೂದಲು ಕಿತ್ತು ತಲೆ ತರಗಾಯಿತು. ರಾಮಯ್ಯ ಬಿಡಿಸಿಕೊಂಡು ಹೊರಗೆ ಬಂದು, ಆಟದ ಮನ್ನೆಯರನ್ನು ಮನೆಗೆ ಕಳಿಸಿದ. ಇದನ್ನು ಶಿವ ಮೆಚ್ಚಿದ. 'ಅರ್ಜುನನ ಅವತಾರವಾದ ರಾಮನನ್ನು ರಂಭೆಯ ಅವತಾರವಾದ ರತ್ನಾಜಿಯು ಸೋಲಿಸಲಿಲ್ಲ' ಎಂಬ ಶಿವನ ಮಾತಿಗೆ ಪಾರ್ವತಿ ಸಮ್ಮತಿಸಿದಳು.

ಸಂಧಿ : ೧೮

ರತ್ನಾಜಿ ಗಾಯುಗೊಂಡ ಹುಲಿಯುಂತಾಗಿ 'ರಾಮನ ಕೊರಳ ಕೊಯಿಸದೆ ಊಟಮಾಡಲಾರೆ, ಹಾಗೆ ಮಾಡದಿದ್ದರೆ ನಾನು ಹೊತ್ತುವು ಮೊಲೆಗಳೇ ಅಲ್ಲ' ಎಂದು ಪ್ರತಿಜ್ಞೆ ಮಾಡಿದಳು, ರತ್ನಾಜಿ. ಹಾರ ಹರಿದು, ಸೀರೆ ಸೀಳಿ, ತೋಳು ತೊಡೆಗಳಿಗೆ ಚೂರುಗಾಯ ಮಾಡಿಕೊಂಡು, ಅಗ್ಗಷ್ಟಿಗೆ ಮಗ್ಗುಲಿಟ್ಟುಕೊಂಡು ಮದನಗೃಹದಲ್ಲಿ ಮಲಗಿದಳು. ಕಂಪಿಲರಾಯ ಬೇಟೆಯಿಂದ ಮರಳಿದ. ಅರಮನೆಯ ಸ್ತ್ರೀಯರು ಆರತಿ ಎತ್ತಿದರು. ಈ ಸಮಯದಲ್ಲಿ ರತ್ನಾಜಿ ಇಲ್ಲದುದನ್ನು ಗಮನಿಸಿದ ಕಂಪಿಲ, ಅವಸರದಿಂದ ಅವಳ ಮಂದಿರಕ್ಕೆ ಬಂದ. 'ಮುತ್ತಿನ ಹಾರ ಹರಿದಿದೆ, ಕೂದಲು ಅಸ್ತವ್ಯಸ್ತವಾಗಿವೆ, ಕೈಬಳೆ ಒಡೆದಿವೆ, ಮೈಮೇಲೆ ನಖರೇಖೆ ಮೂಡಿವೆ, ಇದಕ್ಕೆ ಕಾರಣವೇನು?' ಎಂದು ಕೇಳಿದ. 'ನಿನ್ನ ಮಗ ರಾಮ ಆಟದ ಚೆಂಡು ಕೇಳುವ ನೆವದಿಂದ ಒಳಗೆ ಬಂದು, ಬಂಡು ಮಾಡಿದನು ಮೈಗೆಡಿಸಿ. ತಂದೆ ಮಗನಿಗೆ ಒಬ್ಬಳಾದೆ. ನಿನಗೆ ಹೆಂಡತಿ, ನಿನ್ನ ಮಗನಿಗೂ ಹೆಂಡತಿಯಾದೆ. ನನ್ನನ್ನು ನಿನ್ನ ಮಗನಿಗೆ ಒಪ್ಪಿಸು, ಇಲ್ಲವೆ ಅವನ ತಲೆ ಹಾರಿಸು.

ಇಲ್ಲದಿದ್ದರೆ ವಿಷ ತೆಗೆದುಕೊಳ್ಳುತ್ತೇನೆ' ಎಂದೆಲ್ಲ ಹೇಳಿ ಅವನ ಮನಸ್ಸನ್ನು ಕೆಡಿಸಿದಳು. ಕಂಪಿಲರಾಯ ಭಂಡಾರಿ ಬುಕ್ಕನನ್ನು ಕರೆಸಿ ವಿವರ ಹೇಳಿ, ಬೈಚಪ್ಪನನ್ನು ಕರೆತರಲು ತಿಳಿಸಿದ. ಬಂದ ಬೈಚಪ್ಪನಿಗೆ ಕಂಪಿಲರಾಯ ಎಲ್ಲವನ್ನೂ ವಿವರಿಸಿ, 'ಕೊಂದು ರಾಮನ ಅಂಗವ ತಾರದಿದ್ದರೆ ನಿಂದೆಯ ನೀನೆ ಮಾಡಿಸಿದೆ' ಎಂದು ಭಾವಿಸುತ್ತೇನೆ – ಹೀಗೆ ನಿಷ್ಠುರ ನುಡಿದ. ಆಣೆಯನ್ನು ಇಟ್ಟ. ಅರಸನ ಅಪ್ಪಣೆ ಪಡೆದು ಮನೆಗೆ ಬಂದ ಬೈಚಪ್ಪ 'ಹುಲಿಯಡಗಿದ ಮೆಳೆಯಂತಿರ್ದ ರಾಮನ ಕೊಲುವರೆ ಕೈಯೇಳದು ಎಂದು' ಚಿಂತಿಸಿದ. 'ರಾಮ ಸತ್ತರೆ ಏರಿ ಬರುವ ದಿಳ್ಳಿಯ ದಂಡನ್ನು ಎದುರಿಸುವರಾರು' ಎಂದೂ ಚಿಂತಿಸಿದ, ರಾಮನನ್ನು ಮುಚ್ಚಿಡುವ ಯೋಚನೆ ಮಾಡಿದ.

ಸಂಧಿ : ೧೯

'ಹೆಣ್ಣಿನಿಂದ ವಾಲಿ–ಸುಗ್ರೀವರು ಕೆಟ್ಟರು, ಹೆಣ್ಣಿನಿಂದ ಕೀಚಕ ಕೆಟ್ಟ' ಎಂದು ಬೈಚಪ್ಪ ಕಂಪಿಲನಿಗೆ ತಿಳಿಹೇಳಿದ. 'ರಾಮನನ್ನು ಕೊಲ್ಲದಿದ್ದರೆ ನಿನ್ನನ್ನೇ ಕೊಲ್ಲಿಸುವೆ, ಕಲ್ಲಗಾಣಕ್ಕೆ ಹಾಕಿಸುವೆ' ಎಂದು ಗರ್ಜಿಸಿದ. ನಿರುಪಾಯನಾಗಿ ಬೈಚಪ್ಪ ರಾಮನ ಹತ್ತಿರ ಬಂದು, ಎಲ್ಲ ವಿವರ ಹೇಳಿದ. ಕೇಳುತ್ತಲೇ ಅಪವಾದದಿಂದ ಕುಗ್ಗಿಹೋದ ರಾಮಯ್ಯ 'ಕೊಲ್ಲು ಪ್ರಧಾನಿಗಳರಸ' ಎಂದು ನುಡಿದ. ಪ್ರಧಾನಿ ಇದಕ್ಕೆ ಒಪ್ಪದೆ, ಉಪ್ಪಲಿಕರ ಸಿಂಗಯ್ಯನನ್ನು ಕರೆದು, ಜಟ್ಟಂಗಿರಾಮೇಶ್ವರ ಗುಡಿಯ ಹತ್ತಿರ ನೆಲಮಾಳಿಗೆ ಮಾಡಿಸಿದ. ಏಳು ತಿಂಗಳವರೆಗೆ ಸಾಲುವಷ್ಟು ಅಕ್ಕಿ, ಕಡಲೆ, ಗೋಧಿ, ಬೇಳೆ, ಬೆಲ್ಲ, ದೀಪದ ಎಣ್ಣೆ, ತೂಗುಮಂಚ, ಉಪ್ಪು, ಮೆಣಸು, ಅಡಕೆ, ಬಿಳಿಯೆಲೆ, ಸುಣ್ಣ ಸಂಗ್ರಹಿಸಿ ನೆಲಮಾಳಿಗೆಯಲ್ಲಿ ಇಟ್ಟು, ರಾಮನ ಜೊತೆಗೆ ದೇವಿಶೆಟ್ಟಿಯ ಲಿಂಗ, ಕೊಳ್ಳಿಯ ನಾಗ, ಭಾವ ಸಂಗಮ, ಗುಜ್ಜಲೋಬ, ಕೋಟಿಗರ ದ್ಯಾವ, ಮಾದಿಗರ ಹಂಪ, ಹಾವಳಿಕಾರ ಹನುಮ, ಲಿಂಗ, ಕಾಟಣ್ಣ, ನಲ್ಲನಾಯಕ, ಮುಮ್ಮಡಿ, ಸಿಂಗಯ್ಯ – ಹೀಗೆ ಹನ್ನೆರಡು ಜನರನ್ನೂ ಆ ನೆಲಮಾಳಿಗೆಯಲ್ಲಿ ಇರಿಸಿದ.

ಸೆರೆಮನೆಯಲ್ಲಿದ್ದ, ರಾಮಯ್ಯನ ಪ್ರತಿರೂಪವೆನಿಸಿದ್ದ, ಕಳ್ಳರಾಮನ ಹತ್ತಿರ ಬಂದು, ಎಲ್ಲ ವಿವರಿಸಿ, ರಾಮಯ್ಯನಿಗೆ ಪ್ರತಿಯಾಗಿ ನಿನ್ನ ತಲೆ ಕೊಡುವುದೆಂದು ಒಪ್ಪಿಸಿದ. ಮೀಸೆ ಒತ್ತಿಸಿ, ಬವರಿ ತಿದ್ದಿ, ಕಸ್ತೂರಿ ತಿಲಕವನ್ನಿಟ್ಟು ಮುತ್ತಿನ ಕಡುಕ ಇಕ್ಕಿ, ವೀರಜಡೆ ಹೆಣೆಸಿ, ರಾಮಯ್ಯನ ಹಾಗೆ ರೂಪಗೊಳಿಸಿ, ಬೈಚಪ್ಪ ಕಳ್ಳರಾಮನ ತಲೆಕತ್ತರಿಸಿದ. ಜೊತೆಗೆ ಸೆರೆಯಲ್ಲಿದ್ದ ಬೇರೆ ಹನ್ನೆರಡು ಜನರ ತಲೆಯನ್ನು ಕತ್ತರಿಸಿ, ಕಂಪಿಲನೆದುರಿಗೆ ತಂದ. ರಾಮನ ತಲೆ ಕತ್ತರಿಸಲು ಅವಕಾಶ ಕೊಡದ ಕಾರಣ, ಈ ಮಿಕ್ಕ ಹನ್ನೆರಡು ಜನರ ತಲೆ ಕತ್ತರಿಸಿದೆನೆಂದು ಸುಳ್ಳು ಹೇಳಿ ನಂಬಿಸಿದ. ರತ್ನಾಜಿ ನಗುತ್ತ ಬಂದು ರಾಮನ ತಲೆಯನ್ನು ದಿಟ್ಟಿಸಿ ನೋಡಿದಳು. ಈ ಕೊಲೆಗೆ ಕಂಪಿಲ ಮರುಗಿದ. 'ಏಳೇಳು ಜನ್ಮಕ್ಕೆ ಕಂಪಿಲ ತಂದೆಯಾಗಲಿ, ರತ್ನಾಜಿ ತಾಯಿಯಾಗಲಿ' ಎಂದು ರಾಮಯ್ಯ ಹಾರೈಸಿದನೆಂದು ಮಂತ್ರಿ ಹೇಳಿದ. ಹರಿವಾಣದಲ್ಲಿಟ್ಟ ತಲೆಯನ್ನು ರತ್ನಾಜಿ ಮೆಟ್ಟಿನಿಂತಳು. ಹರಿಯಲದೇವಿ ದುಃಖಿಸಿದಳು. ಬಲಗೈಯ ಕಂಕಣ ಮುರಿದ, ಬೊಲ್ಲ ನೆಲದ ಮೇಲೆ ಬಿದ್ದ ದುಃಸ್ವಪ್ನ ತಾನು ಕಂಡುದಾಗಿ ಗೋಳಿಟ್ಟಳು. 'ಶೂಲದ ಹಬ್ಬಕ್ಕೆ ನಮ್ಮನ್ನು ಯಾರು ಕರೆಸುವರು?' ಎಂದು ಸಿಂಗಮ್ಮ ಮಾರಮ್ಮ ದುಃಖಿಸಿದರು. ಸಿಂಗಮ್ಮ ನೆಲದಲ್ಲಿ ಹೊರಳಿದಳು. ವಾಲೆ ಹರಿದವು, ಕೀಲು ಕಂಕಣ ಸಡಿಲಿದವು, ಸಾಲು ಮುತ್ತಿನ ಸರ ಹರಿದವು. ಸುಡು ಸಂಸಾರ, ಎಂದು ಹರಿಯಮ್ಮ ಹಲುಬಿದಳು.

ಅರಮನೆಯಲ್ಲಿ ರಾಮನ ಪತ್ನಿಯರು ತಾವು ಕಂಡ ದುಃಸ್ವಪ್ನವನ್ನು ಪರಸ್ಪರ ಹೇಳಿಕೊಂಡು ಹೌಹಾರಿದರು. ನಮ್ಮ ಅರಮನೆ ಹೆಗ್ಗಂಬ ಮುರಿದ, ನಮ್ಮ ತಾಯಿ ಕಳಿಸಿದ್ದ ಕರಬಾನ ಕೆಡೆದು ಬಿದ್ದ ಕನಸ ಕಂಡೆನೆಂದು ರಾಮಲದೇವಿ ಹೇಳಿದಳು. ನನ್ನ ತುರುಬಿಗೆ ಬೆಂಕಿ ಹತ್ತಿದ ಕನಸು ಕಂಡುದಾಗಿ ಕಿರಿಯಾಕೆ ಹೇಳಿದಳು. ನನ್ನ ಕೊರಳ ಮುತ್ತಿನಹಾರ ಕತ್ತರಿಸಿ ಬಿದ್ದ ಕನಸು ಕಂಡುದಾಗಿ ತಿಮ್ಮಾಜಿ, ರಾಮನ ಸತ್ತಿಗೆ ಮುರಿದ ಮತ್ತು ನಾನಿಟ್ಟ ವಾಲೆ ಭೂಮಿಗೆ ಬಿದ್ದ ಕನಸು ಕಂಡದನ್ನು ಕಾಮಾಯಿ ಹೇಳಿದಳು. ರಾಮನೇರುವ ಬೊಲ್ಲ ಸತ್ತ ಕನಸು ಕಂಡುದಾಗಿ ಭೀಮಾಯಿ ಹೇಳಿದಳು. ಅಷ್ಟರಲ್ಲಿ ಅಲ್ಲಿಗೆ ಬಂದ ಅತ್ತೆ ಹರಿಯಮ್ಮನಿಂದ ನಿಜ ಸಂಗತಿ ತಿಳಿದ ಸೊಸೆಯಂದಿರು ಹೌಹಾರಿ, ಮಾವನ ಹತ್ತಿರ ಕಿಚ್ಚು ಕೇಳಲು ನಡೆದರು.

ದುಕೂಲವ ಸಣ್ಣ ನಡುವಿಗಿಟ್ಟು, ನವರತ್ನಖಚಿತದಾಭರಣವಿಟ್ಟು, ಬಲಗೈಯಲ್ಲಿ ಕಠಾರಿ ಹಿಡಿದು, ಎಡಗೈಯಲ್ಲಿ ಕನ್ನಡಿ ಲಿಂಬೆ ಹಿಡಿದು, ಕಂಪಿಲರಾಯನ ಓಲಗಕ್ಕೆ ಹೊರಟರು. ಕನ್ನಡಿ ನೋಡುತ್ತ, ನಲಿದಾಡುತ್ತ, ರಾಮನ ಸದ್ಗುಣ ಪಾಡುತ್ತ ಬಂದರು. ಎಳೆಮೀಸೆ ಕೊನೆಮೀಸೆ ಬರುವಂಥ ಭೂಮಿಯ ದಳಪತಿ ರಾಯರ ಗಂಡ, ಕಳೆಯುಳ್ಳ ಚೆಲುವ ಚೆನ್ನಿಗರಾಮ, ಭೀಮ ಪರಾಕ್ರಮ ರಾಮ, ಬಿಟ್ಟಗಲುವರೆ ನಿಸ್ಸೀಮ, ಖಾನವಜೀರರ ಮೇಲೆ ದಂಡೆತ್ತಿ ಹೋಗದೆ ನಮ್ಮನ್ನು ಅಗಲಿದರೆ ನಾವು ನಿನ್ನ ಬೆನ್ನಬಿಡೆವು – ಎಂದು ದುಃಖಿಸಿದರು. ಆವ ಠಾಣ್ಯಕ್ಕೆ ರಾಮನ ಕಳುಹಿದೆ ಮಾವ, ಬಲ್ಲಾಳನ ಮೇಲೆ ಕಳುಹಿದೆಯಾ, ಪ್ರತಾಪರುದ್ರನ ಮೇಲೆ ಕಳುಹಿದೆಯಾ, ಜಗದಪ್ಪರಾಯನ ಠಾಣ್ಯಕ್ಕೆ ಮುತ್ತಿಗೆ ಹಾಕಲು ಕಳುಹಿದೆಯಾ, ಹುಳಿಯಾರ ಮಾರಿಗೊಂಡನ ಮೇಲೆ ಕಳುಹಿದೆಯಾ ಎಂದು ಅತ್ತರು. ಅಂಬಲಿಗಾಗಿ ಅಮೃತಾನ್ನ ಚೆಲ್ಲಿದೆ, ಕಂಬಳಿಗಾಗಿ ದೇವಾಂಗ ಬಿಸುಟೆ – ಎಂದು ಅತ್ತರು. ಅಂಬಲಿಗಾಗಿ ಅಮೃತಾನ್ನ ಚೆಲ್ಲಿದೆ, ಕಂಬಳಿಗಾಗಿ ದೇವಾಂಗ ಬಿಸುಟೆ – ಎಂದು ಅಳಲಿದರು. ರಾಮನನ್ನು ಕೊಲ್ಲಲು ಕೈಗಳಾದರೂ ಹೇಗೆ ಎದ್ದವು, ಕಿಚ್ಚು ದಯಪಾಲಿಸು – ಎಂದು ಮೊರೆ ಇಟ್ಟರು. ನಾಡ ಹಂಚಿಕೊಡುವೆ, ನಿಮ್ಮ ಅತ್ತೆಯ ಜೊತೆ ಇದ್ದು ಬಿಡಿರಿ – ಎಂದು ಕಂಪಿಲ ಹೇಳಿದ. ರಾಜ್ಯ ಪಡೆದು ರಂಡೆಯಾಗಿ ಬಾಳಲಾರೆವು – ಎಂದು ಹಟ ಹಿಡಿದರು. ಇದಕ್ಕೊಂದು ಉಪಾಯ ಮಾಡಲು ಮಂತ್ರಿಗೆ ರಾಜ ಹೇಳಿದ. ಮಂತ್ರಿ ಅವರನ್ನು ಕರೆದುಕೊಂಡು ಬಂದು "ನೀವು ಸತಿ ಹೋದರೆ ರಾಮನು ಸತ್ತ ಸುದ್ದಿ ಇನ್ನೂ ಖಚಿತವಾಗಿ, ಸುರಿತಾಳ ದಂಡೆತ್ತಿ ಬರುತ್ತಾನೆ. ಆರು ತಿಂಗಳು ತಡೆಯಿರಿ" ಎಂದು ತಿಳಿಹೇಳಿದನು.

ಸಂಧಿ : ೨೦

ಕುಮಾರ ರಾಮ ಸತ್ತ ಸುದ್ದಿ ದಿಳ್ಳಿಗೆ ತಲುಪಿತು. ಕಾಳಗ ಕೈಕೊಳ್ಳಲು ನೇಮಿಗೆ ಸುರಿತಾಳ ಆಜ್ಞೆ ನೀಡಿದ. ನೇಮಿ ಈ ಸುದ್ದಿ ನಂಬಲಿಲ್ಲ. ಗುಪ್ತಾಚಾರರನ್ನು ಕಳಿಸಿ, ಸತ್ತ ಸುದ್ದಿ ಖಚಿತಪಡಿಸಿಕೊಂಡನು. ನೇಮಿಯ ನೇಮಿಯ ನೇತೃತ್ವದಲ್ಲಿ ಸೈನ್ಯ ಕುಮ್ಮಟಕ್ಕೆ ತೆರಳಿತು. ಭೇರಿ, ತಮ್ಮಟೆ, ಗಿಡಿಬಿಡಿ, ನಿಸ್ಸಾಳ, ಕೊಂಬು, ವೀರವಾದ್ಯ ಮೊಳಗಿದವು. ಖಾನ ಮಲುಕ, ಗುಜ್ಜರಾಹುತ, ಅರೆಯ ದೊರೆ, ಗೌಳಗುಜ್ಜರ ರಾವುತ, ಲಾಳದೇಶದ ಮರಾಳ ಖಾನರೆಲ್ಲ ಸೇರಿದರು. ಕನ್ನೋಜಿ ಕೂಡಿಕೊಂಡನು. ಸಿಂಧುಮರಾಳ, ಮಗಧ, ಮಾಳವರಾಜರು ಸೇರಿದರು. ದುರ್ಜಟಿಖಾನ, ಬಬ್ಬಿರಖಾನ, ಸೈದ್ರಲ್ಲಿ, ಬಿಜ್ಜಾಟ ಹರಟೆಖಾನ, ಜಂಬಾರಖಾನ, ಲುಬ್ಬಖಾನ, ರಾರಾಜಿಖಾನ,

ರಾಜೆಯಖಾನ, ಮಾಮುದ್ದು ಸಾಹೇಬಖಾನ, ಎಕಲಾಸಖಾನ, ಎದ್ದೂಲಖಾನ, ಮಖರಂಕಖಾನ, ರುಕುಮಸಖಾನ, ಬಾಬಾಜಿಖಾನ, ಮುಸಲಖಾನ, ಸಾಹೇಬಖಾನ, ಸಕಲಾತಿಖಾನ, ಹೈದರಖಾನ ಮೊದಲಾದವರು ಸೈನ್ಯದೊಂದಿಗೆ ನಡೆದರು.

ತಿತ್ತಿ ಸಜ್ಜುಮಾಡಿಕೊಂಡರು, ಸಾರಾಯಿ ತುಂಬಿಸಿದರು. ಭೇರಿಯ ಸನ್ನೆಯ ಮೇರೆಗೆ ಸೈನ್ಯ ಮುನ್ನಡೆಯಿತು. ಜಾಯಿಕಾಯಿ, ಜಾಪತ್ರಿ, ಬೇಯಿಸಿದ ರೊಟ್ಟಿ ಮೊದಲಾದ ಆಹಾರ ಸಂಗ್ರಹಿಸಿ ಗಂಗಾಸಾಗರಕ್ಕೆ, ಅಲ್ಲಿಂದ ಚಿಕ್ಕಡಿಲ್ಲಿಗೆ (ದೇವಗಿರಿ) ಬಂದರು. ಭಾಗೀರಥಿ ದಾಟಿ, ಮಿರುಜೆ, ಅರುಣಾವತಿಗೆ ಬಂದರು. ದಾರಿಯಲ್ಲಿ ಶಕುನ ನೋಡಲು ಶಾಸ್ತ್ರಿಗಳನ್ನು ಕರೆಸಿದರು. ಟಗರು, ಕೋಳಿ ಕಾಳಗ ಏರ್ಪಡಿಸಿದರು. ರಾಮನ ಹೆಸರಿಟ್ಟುವು ಗೆದ್ದು, ನೇಮಿ ಹೆಸರಿಟ್ಟುವು ಸೋತವು. ನೇಮಿ ಅಧೀರನಾದ. ಹಿಂದಿರುಗಿದರೆ ಸುರಿತಾಳ ಕೊಂದುಹಾಕುವನೆಂಬ ಭೀತಿಯಿಂದ ಮುಂದೆ ನಡೆದ. ತೊರಗಲ್ಲು, ಬಾದಾಮಿ, ಗಲಗಲಿ, ವಿಜಯಪುರಕ್ಕೆ ಸೈನ್ಯ ಬಂದಿತು.

ಕಾಡಮೊಲ್ಲೆಯ ಸೊಪ್ಪನ್ನು ಓಡಿಲಿ ಹುರಿದು ತಿನ್ನುವ ಬೇಡರು, ಕೈಯಲ್ಲಿ ನಾಯಿ, ಬಡಿಕೋಲು, ನೆತ್ತಿಯ ಮೇಲೆ ಮೊಟ್ಟೆಗಂಟು, ಹಸ್ತದ ಮೇಲೆ ಗಿಡುಗ, ಹೆಗಲಿನ ಎರಡೂ ಕಡೆಗೆ ಹಕ್ಕಿಯ ಗೂಡು ಸಹಿತ ಗೂಳೆ ನಡೆದರು.

ಹೆಬ್ಬಲೆ, ಕಿರುವಲೆ, ಮೊಲವಲೆ, ಕಾಲ್ವಲೆ, ಗುಬ್ಬಯ ಬಲೆ, ಹಕ್ಕಿಯ ಬಲೆಗಳೊಂದಿಗೆ ಮೃಗದ ಬೇಟೆಯಾಡುತ್ತ ಕಬ್ಬೇರು ಗೂಳೆಯ ನಡೆದರು. ಕುರಿಯ ಹಿಂಡುಗಳನ್ನು ಹೊಡೆದುಕೊಂಡು, ಮರಿಗಳನ್ನು ಹೊತ್ತುಕೊಂಡು, ಮರುಗುವ ಹೆಂಡಿರ ಕೈಹಿಡಿದುಕೊಂಡು, ಗೊಲ್ಲರು ಗೂಳೆ ನಡೆದರು. ಗಟ್ಟಣಿಗೆ, ಕೊಡತಿ ಹೆಗಲಮೇಲಿಟ್ಟುಕೊಂಡು ಅಗಸರು ಗೂಳೆ ನಡೆದರು. ಓದುಗ ಹಲಗೆ, ಕಡತ, ಬಳಪ, ವೇದದ ಪೆಟ್ಟಿಗೆಯೊಡನೆ ಓದಿಸುವಣ್ಣಗಳೂ, ಅವರ ಹೆಂಗಸರೂ ಗೂಳೆ ನಡೆದರು. ಪಟ್ಟಸ್ವಾಮಿಗಳೊಂದಿಗೆ ಸೆಟ್ಟರು ಗೂಳೆಯ ನಡೆದರು. ಅಡಿಗಲ್ಲು, ತಿದಿಮುಟ್ಟು, ಇಕ್ಕಳ, ಕೆತ್ತುವ ಉಳಿ, ಬಾಚಿ, ಕೊಡತಿಗಳೊಂದಿಗೆ ಬಡಗಿ ಕುಂಬಾರರು ಗೂಳೆ ನಡೆದರು. ಅಚ್ಚ ಕುಂಚಿಗೆ, ಹಚ್ಚಡ ಕುಂಚಿಗೆ, ರಚ್ಚು ಹೊರುವ ಮಕ್ಕಳನೆತ್ತಿಕೊಳ್ಳುತ್ತ ಜಾಡರು ಗೂಳೆಯ ನಡೆದರು. ಚಿಪ್ಪಿಗ, ಉಪ್ಪಾರ, ಕುಂಬಾರ, ಡೊಂಬ, ಬ್ರಾಹ್ಮಣ, ಉಪಾಧ್ಯೆ, ಜೋಯಿಸ, ನಾಯಿದ ಮೊದಲಾದ ಜಾತಿಗಳ ಜನರು ಗೂಳೆಯ ನಡೆದರು.

ತೊರಗಲ್ಲು ಬಾದಾಮಿ ಮುಂದೆ ಕದನ ಏರ್ಪಟ್ಟು, ಏಳು ತಿಂಗಳಿಗೆ ದಂಡು ಕುಮ್ಮಟಕ್ಕೆ ಬಂದಿತು. ಐದು ಜನ ಕುದುರೆ ಏರಿ ಕುಮ್ಮಟಕ್ಕೆ ಬಂದು ಅಟ್ಟಳೆಯ ಮೇಲೆ ಕಾಗದ ಇಟ್ಟು, ತಾವು ಬಂದ ಸುದ್ದಿ ಕಂಪಿಲನಿಗೆ ತಿಳಿಸಿದರು. ಬೆಟ್ಟವ ನಂಬಿ ಕೆಡಬೇಡ, ಈಗ ಕೊಟ್ಟದ ರಾಮುಗನಿಲ್ಲ. ಬಾದೂರನನ್ನು ಒಪ್ಪಿಸು ಎಂದು ಕಂಪಿಲನಿಗೆ ಕೇಳಿದರು. ಮೊರೆಹೊಕ್ಕ ಖಾನರ ಕೊಡೆನೆಂಬ ಬಿರುದು ಸಾರ್ಥಕವಾಗುವಂತೆ ವೈರಿಗಳನ್ನು ಹೆದ್ದೊರೆಯ ತನಕ ಓಡಿಸುವೆ – ಎಂದು ಕಂಪಿಲ ಉತ್ತರಿಸಿದ. ಮಗನ ಅಗಲಿಕೆಗೆ ಮರುಗಿದನಾದರೂ ಹುಡೆಯ, ಹುಲಿಮುಖ, ಕೊತ್ತಳಗಳಿಗೆ ಪೆಟಲು ಬಾಣ ಸಜ್ಜುಗೊಳಿಸಿದ. ಹೆಬ್ಬಾಗಿಲು, ಚೋರಗಂಡಿಗಳಿಗೆ ರಣಬಲಿ ಇಕ್ಕಿಸಿದ. 'ರತ್ನಿಯನ್ನು ಕರೆಯಿಸು, ಕಾದಲಿ' ಎಂದು ಬೈಚಪ್ಪ ಹಂಗಿಸಿದ. ಬಹಾದ್ದೂರ ಮೊದಲಾದವರು ವೀಳ್ಯೆ ಹಿಡಿದು ಸಜ್ಜಾದರು. ಚೋರಗಂಡಿ ಇಳಿದು, ರಾತ್ರಿ ವೈರಿಪಾಳೆಯದಲ್ಲಿ ಕಗ್ಗೊಲೆ ನಡೆಸಿದರು. ಕುದುರೆ, ಆನೆ ಸೆರೆಹಿಡಿದು ಕಂಪಿಲನ ಜನ ಕುಮ್ಮಟಕ್ಕೆ ಮರಳಿದರು.

ಮರುದಿನ ತುರುಕರ ಸೈನ್ಯ ಕುಮ್ಮಟವನ್ನು ಸುತ್ತುವರಿಯಿತು. ಮಗನಿಗಾಗಿ ಕಂಪಿಲ ಹಳಹಳಿಸಿದ. ಮೃತ್ಯು ನುಂಗಿದ ತುತ್ತು ಬಹುದೇ? ಎಂದು ಬೈಚಪ್ಪ ಸಮಾಧಾನಪಡಿಸಿದ. ಮಗನ ಹಂಬಲ ಬಿಟ್ಟು ಸೈನ್ಯಕ್ಕೆ ಸಂಪತ್ತು ಹಂಚು ಎಂದು ಹೇಳಿದ.

ಸಂಧಿ : ೨೧

ಕುಮ್ಮಟ ಕಮಲಪತ್ರದ ಜಲಬಿಂದುವಿನಂತೆ ತಲ್ಲಣಿಸಿತು. ಒಂದು ಸುತ್ತಿನ ಕೋಟೆಯನ್ನು ವೈರಿಗಳು ವಶಪಡಿಸಿಕೊಂಡರು. ಬೈಚಪ್ಪ ಕಂಪಿಲನಿಗೆ ಧೈರ್ಯ ಹೇಳಿ, 'ಈಗ ಹೆದ್ದೊರೆತನಕ ವೈರಿಗಳನ್ನು ಓಡಿಸುತ್ತೇನೆ, ನೋಡು' ಎಂದು ಅವನನ್ನು ಉಪ್ಪರಿಗೆ ಏರಿಸಿದ. ರಾಮೇಶನ ಗುಡಿಗೆ ಬಂದು ನಮಸ್ಕರಿಸಿ, ಬಲಿ ನೀಡಿದ. ನೆಲ ಮಾಳಿಗೆ ಹತ್ತಿರ ಬಂದು 'ತಳಮಳಗೊಂಡು ದುರ್ಗ ಕಣುಗೆಡುತಿದೆ, ಏಳು' ಎಂದು ಕೂಗಿ ರಾಮನನ್ನು ಕರೆದ. ಚದುರಂಗ ಪಗಡೆಯಾಟದಲ್ಲಿ ತೊಡಗಿದ್ದ ರಾಮ 'ಅಂದೇ ಕಂಪಿಲ ನನ್ನನ್ನು ಕೊಂದಿದ್ದಾನೆ. ಇಂದೇಕೆ ನಿಮಗೆ ನಮ್ಮಾಸೆ. ಸಾಕು ಬೈಚಪ್ಪ ಸಂಸಾರದ ಸುಖ ದುಃಖ. ಬೇಕಿಲ್ಲ ದೊರೆತನ ನಮಗೆ' ಎಂದು ನೊಂದು ನುಡಿದ. 'ತುರುಕರು ನಿಮ್ಮ ತಂದೆಯ ಜೀವ ಕಳೆವೆವೆನ್ನುತ್ತ ನಿಂದಿಹರು, ಏಳು' ಎಂದು ಬೈಚಪ್ಪ ಒತ್ತಾಯಿಸಿದ. 'ತಂದೆ ತಾಯಿಗಳಿಲ್ಲ. ಬಂಧು ಬಳಗವಿಲ್ಲ, ಹಿಂದು ಮುಂದಾರು ಎನಗಿಲ್ಲ. ಕಂದರ್ಪಹರ ಜಟ್ಟಿಂಗ ಲಿಂಗನ ಪಾದ ಹೊಂದುವುದು ಲೇಸು' ಎಂದು ರಾಮ ನೆಂದು ನುಡಿದ. 'ಕಾಳಮೇಘದ ಹಾಗೆ ಕವಿದು ತುರುಕರ ದಂಡ ಹಾಳುಮಾಡುವ ಧೀರ ಏಳೋ' ಎಂದು ಬೈಚಪ್ಪ ಒತ್ತಾಯಿಸಿದ. 'ಏಳದಿದ್ದರೆ ಕಂಪಿಲನಾಣೆ, ಕುಲಗುರುವಿನ ಆಣೆ, ತಾಯಿ ಹರಿಯಮ್ಮನ ಆಣೆ' ಎಂದು ಒತ್ತಾಯಿಸಿದ. ರಾಮ ತನ್ನ ಜನರೊಂದಿಗೆ ಹೊರ ಬಂದ. ಸ್ತ್ರೀಯರು ಆರತಿ ಎತ್ತಿದರು. ಬೊಲ್ಲನನ್ನು ಕಾಲ ಗಗ್ಗರ, ಕೊರಳಗೆಜ್ಜೆ, ಮಾಣಿಕದ ಹಲ್ಲಣ, ತಳಪು, ರನ್ನದ ಪಟ್ಟೆ, ಮುತ್ತಿನ ಬಾಸಿಂಗ, ಹಕ್ಕರಿಕೆಯ ಮೇಲೆ ಇತ್ತರದಲಿ ಝುಲ್ಲಿ, ಕಕ್ಕಸ ಭಲ್ಲೆಗಳಿಂದ ಸಜ್ಜುಗೊಳಿಸಿದರು. ರಾಮಯ್ಯನಿಗೆ ಜೋಡು ವಜ್ರಾಂಗಿ, ರಾಗವಳಿಯ ಠೌಳಿ ತೊಡಸಿದರು. ರಾಯರಾಹುತ ಎಂದು ಬೈಚಪ್ಪ ಹೊಸ ಹೆಸರಿಟ್ಟು, 'ಈತ ಕಲ್ಯಾಣದಿಂದ ಬಂದವ'ನೆಂದು ಪ್ರಚಾರ ಮಾಡಿದ. ದೇವಿಶೆಟ್ಟಿ ಲಿಂಗ, ಬೇವಿನ ಸಿಂಗಯ್ಯ, ಭಾವ ಸಂಗಮ, ಹಾರೋ ಲಿಂಗ, ಕೊಟಗರ ದ್ಯಾವ, ಇರುಪ, ಹಾವಳಿಕಾರ ಹಂಪಯ್ಯ, ಮಾದಿಗ ಹಂಪ, ಮುದಗೊಂಡ ಲೋಬ, ಸಾಧನೆ ಬಸವಯ್ಯ, ಬಾದೂರಖಾನ, ಎನುಮಾಲ ಚಿತ್ರ, ಎರಬೊತು ಗಂಗ, ಬೆಟ್ಟದ ಸಿಂಗ, ಮರುಳೆಯ ಪಾಪ, ಬೂಟಕ ಬೊಮ್ಮ, ಕೊಳ್ಳಿಯ ನಾಗ ಇವರೆಲ್ಲ ಸೇರಿದರು. ಅಬ್ದುಲ್‌ಖಾನ ಮುಂದಾಗಿ ನಡೆದ. ಬಾದೂರಖಾನ ವೈರಿಗಳ ಮೇಲೆ ಎರಗಿದ. ರಾಮನಾಥ ಸೈನ್ಯ ಸವರುತ್ತ ನಡೆದ. ಈ ರಭಸ ನೋಡಿ, ಇವನು ರಾಮಯ್ಯನೇ ಇರಬಹುದೆಂದು ಕೆಲವರು ಅನುಮಾನಿಸಿದರು. ನೇಮಿ ಸೈನ್ಯದಲ್ಲಿ ತುಂಬುರಖಾನ ಅಳಿದ. ಭೂತಗಳಿಗೆ ಹಬ್ಬವಾಯಿತು. ತುರುಕರ ಸೈನ್ಯ ಹೆದ್ದೊರೆ ತನಕ ಓಡಿಹೋಯಿತು. ಬಾದೂರಖಾನ ಬಾದಾಮಿ ತೊರಗಲ್ಲ ತನಕ ಸೈನ್ಯ ಓಡಿಸಿದ. ಉಪ್ಪರಿಗೆ ಮೇಲಿನಿಂದ ಇದನ್ನೆಲ್ಲ ನೋಡಿದ ಕಂಪಿಲ, ಬೈಚಪ್ಪನ ಮೂಲಕ ಹೊಸ ರಾಯರಾಹುತನನ್ನು ಕರೆಸಿದ. ರಾಮ ಕಂಪಿಲನಿಗೆ ನಮಸ್ಕರಿಸಿ ತಲೆಯ ಠೌಳಿ, ವಜ್ರಾಂಗಿ ತೆಗೆಯುತ್ತಲೇ ಅವನು ಮಗನನ್ನು ಗುರುತಿಸಿ ಅಪ್ಪಿಕೊಂಡನು. ರಕ್ತಕಾಯವನ್ನು ತೊಳೆಸಿ, ಉತ್ತಮ ವಜ್ರಾಂಗಿ ತೊಡಿಸಿ, ದಾನಧರ್ಮಮಾಡಿ, ಮುತ್ತು ನಿವಾಳಿ ಚೆಲ್ಲಿಸಿದನು.

ಹರಿಯಮ್ಮ ಹರಿದು ಬಂದಳು. ಅಕ್ಕ ಮಾರಮ್ಮ, ತಂಗಿ ಸಿಂಗಮ್ಮ ಓಡಿಬಂದರು. ರಾಮಲದೇವಿ ಸವತಿಯರೊಂದಿಗೆ ಬಂದು ರಾಮನಿಗೆ ನಮಸ್ಕರಿಸಿದಳು. ಈ ಸಡಗರದ ಗದ್ದಲ ಕೇಳಿ, ತಿಳಿದುಕೊಂಡು ಬರಲು ರತ್ನಾಜಿ ಸಂಗಿಯನ್ನು ಕಳಿಸಿದಳು. ಸಂಗಿ ಹೇಳಿದ ಸಂಗತಿ ಕೇಳಿ ಬೆರಗಾಗಿ, ಉರುಲುಹಾಕಿಕೊಂಡು ಸತ್ತಳು. ಸಂಗಿ ಕಠಾರಿಯಿಂದ ಇರಿದುಕೊಂಡು ಸತ್ತಳು. ಈ ಸುದ್ದಿ ಕೇಳಿದ ಕಂಪಿಲ 'ಹೆಣವನ್ನು ಆನೆಕಾಲಿಗೆ ಕಟ್ಟಿ ಎಳೆಸಿರಿ' ಎಂದು ಆಜ್ಞಾಪಿಸಿದ. ಮಂತ್ರಿ ಎಳೆದು ಅಗುಳಿಗೆ ಹಾಕಿಸಿದ.

ಸಂಧಿ : ೨೨

ರಾಮಯ್ಯನಿಗೆ ರಾಜಪಟ್ಟ ಕಟ್ಟಲು ನಿರ್ಧರಿಸಲಾಯಿತು. ಜೋಯಿಸರು, ಹಳಬರು, ಮಾನ್ಯರು, ಅರಸು ಮಕ್ಕಳು ನೆರೆದರು. ರಾಮನಿಗೆ ಪಟ್ಟಾಭಿಷೇಕವಾಯಿತು. ಪಟ್ಟಣ ಸಿಂಗರಿಸಿ, ಆನೆಯ ಮೇಲೆ ಸಕ್ಕರೆ ಹಂಚಿದರು. ಬ್ರಾಹ್ಮಣರಿಗೆ ದಕ್ಷಿಣೆ, ಮಿಕ್ಕವರಿಗೆ ಗಂಧವೀಳ್ಯ ಕೊಡಲಾಯಿತು. ರಾಮಯ್ಯ ಹರಿಯಲದೇವಿ ಪಾದಕ್ಕೆ ನಮಿಸಿದ. ಅವನಿಗೆ ಮುತ್ತಿನಾರತಿ ಎತ್ತಿದರು. ಮರುದಿನ ಮುಂಜಾನೆ ಚಾವಡಿಗೆ ಬಂದು ಸಿಂಹಾಸನದಲ್ಲಿ ರಾಮ ಕುಳಿತ. ಮನ್ನೆಯ ರಾಹುತರನ್ನು, ಕರಣಿಕ ಲಿಂಗನನ್ನು ಕರೆಸಿದ. ಮನ್ನೆಯರು ತಮ್ಮ ಸೈನ್ಯದೊಂದಿಗೆ ಬಂದರು. ನೂರಾರು ಮಂದಿಯೊಂದಿಗೆ ಬಂದ ಬೂಟಕ ಬೊಮ್ಮನಿಗೆ ಪಟುನೂಲ ಕೊರಳ ಪದಕ ಕೊಟ್ಟ. ಇನ್ನೂರು ಆಳುಗಳೊಂದಿಗೆ ಬಂದ ಮನ್ನಾಲ ಮಾಚನಿಗೆ ಹೊನ್ನ ಸರಪಳಿಕೊಟ್ಟ. ನೂರಾಳು ಸಹಿತ ಬಂದ ಗಡಿಯಕೋಟೆಯ ದೇವನಿಗೆ ಕಡುಕು ಕಂಠಮಾಲೆಯನ್ನು ಕೊಟ್ಟ, ಬಂಟರೈವತ್ತು ಜನರೊಂದಿಗೆ ಬಂದ ಯನುಮಾಲ ಚಿತ್ತನಿಗೆ ಕನಕ ಮಣಿ ಕೊಟ್ಟ. ಅರುವತ್ತು ಬಿಲ್ಲ ಮಂದಿಯೊಂದಿಗೆ ಬಂದ ಮರುಳೆಯ ಪಾಪನಿಗೆ ಸರಮುತ್ತು ಚೌಕುಳಿಕೊಟ್ಟ. ಬರುಚಿಯ ನೂರು ಮಂದಿಯೊಂದಿಗೆ ಬಂದ ಎರಬೋತು ಕಾಮನಿಗೆ ಬಿರುದು ಬಾವಲಿ ಸರಪಳಿಕೊಟ್ಟ. ಇನ್ನೂರು ಜನ ಒಳಕಾವಲ ಮಂದಿಯನ್ನು ಕರೆದುಕೊಂಡು ಬಂದ ತುಳುವರ ಹಿರಿಯನಿಗೆ ಹಳದಿಯ ಬಿರುದು, ಮುತ್ತಿನೊಂಟಿ, ಕಡೆಗಳನ್ನು ಕೊಟ್ಟ. ಇನ್ನೂರು ಜನ ಹೊಣಕೆಯ ಮಂದಿಯನ್ನು ಕರೆದುತಂದ ನೆಲಗತ್ತಿ ತಿಮ್ಮನಿಗೆ ಹಳದಿಯ ಬಿರುದು, ಮುತ್ತಿನೊಂಟಿ, ಕಡೆಗಳನ್ನು ಕೊಟ್ಟ. ಮೀಟಾದ ಮುನ್ನೂರು ಹರಿಗೆಯ ಜನರೊಂದಿಗೆ ಬಂದ ಕೊಟಗರ ದೇವನಿಗೆ ಕುಟುಕು ಮುರುಡಿ ಸರಪಳಿ ಕೊಟ್ಟ. ನೂರು ಮುಕ್ಕಣ್ಣಬಲ್ಲೆ ಸಹಿತ ಬಂದ ಒಕ್ಕಲಿಗರ ಮುದ್ದನಿಗೆ ಹೊಕ್ಕುಳ ಗಂಟೆಯನ್ನು ಕೊಟ್ಟ. ಮಾದಿಗ ಹಂಪನಿಗೆ ಐದುನೂರು ಉಮ್ಮಳಿಕೊಟ್ಟ. ಇನ್ನೂರು ಹೊಸ ಕಟ್ಟಿನ ಈಟಿ ತಂದ ಅಸಗೋಡ ಬಸವನಿಗೆ ಜವಳಿ ಕೊಟ್ಟ. ಉಕ್ಕುವ ಬಾಣ ಮುನ್ನೂರು ಹಿಡಿದು ತಂದ ಅಕ್ಕಸಾಲಿಗೆ ಚಿಕ್ಕನಿಗೆ (ಉಡುಗೊರೆ ಕೊಟ್ಟ). ಮುನ್ನೂರು ಹಳೆಯ ಮಂದಿಯೊಂದಿಗೆ ಬಂದ ಮಲೆಯ ಕಾವ ಕಾಟಿನಾಯಕನಿಗೆ ಉಡುಗೊರೆ ಕೊಟ್ಟ. ನೂರು ಬಾಣದ ಮಂದಿಯೊಂದಿಗೆ ಬಂದ ಬಾಣದ ಬಸವನಿಗೆ ಹಿಡಿ ಹೊನ್ನಕೊಟ್ಟ. ಒಳಕಾವಲ ನೂರು ಮಂದಿಯೊಂದಿಗೆ ಬಂದ ದಳಧೂಳಿ ಮಾದನಿಗೆ ಬಳೆಯನ್ನು ಕೊಟ್ಟ. ಮುನ್ನೂರು ಮುಕ್ಕಣ್ಣ ಬರುಚಿ ಸಹಿತ ಬಂದ ಬುಕ್ಕನ ಪಾಲನಿಗೆ ಲೆಕ್ಕವಿಲ್ಲದಷ್ಟು ಹೊನ್ನ ಕೊಟ್ಟ. ಮುನ್ನೂರು ಗಾಜಿನ ಮಂದಿಯೊಂದಿಗೆ ಬಂದ ಗುಜ್ಜಲ ಓಬನಿಗೆ ಬಾಪುರಿಕೊಟ್ಟ. ಮುನ್ನೂರು ಮುಕ್ಕಣ ಬಲ್ಲೆಯದೊಂದಿಗೆ ಬಂದ ರಕ್ಕಸ ಮಾದನಿಗೆ ಪಚ್ಚೇದ ಕಡಗಕೊಟ್ಟ, ಮುನ್ನೂರು ಕಂಬಿಮರ ಬಿಲ್ಲಿನೊಂದಿಗೆ ಬಂದ ಕುಂಭಕೋಣೆಯ ವೀರನಿಗೆ

ಜಾಳಿಗೆ ಹೊನ್ನು ಕೊಟ್ಟ. ನೂರು ಜನ ಬಿಲ್ಲುಗಾರರೊಂದಿಗೆ ಬಂದ ಹಗ್ಲಾದ ಮಾದನಿಗೆ ಹುದ್ದಿ ತುಪ್ಪಕ್ಕೆ ಊರಕೊಟ್ಟ. ನೂರು ಜನ ಬಿಲ್ಲ ಮನ್ನೆಯರನ್ನೊಳಗೊಂಡು ಬಂದ ನಲ್ಲೂರ ನಲ್ಲನಿಗೆ (ಕಾಣಿಕೆಕೊಟ್ಟ). ನೂರಾಳು ಮನ್ನೆಯರೊಂದಿಗೆ ಬಂದ ಕುಂದುರ್ಪಿ ಪಾಲನಿಗೆ ಚಂದ್ರಾವಿಯ ಬಿರುದ ಕೊಟ್ಟ. ಕಾಲ ಸರದ ನೂರು ಮಂದಿಯೊಂದಿಗೆ ಬಂದ ರಾಯದುರ್ಗದ ರಾಮನಿಗೆ ಹೊನ್ನು, ಜವಳಿ ಉನ್ನತ ವಸ್ತ್ರಾಭರಣ ಕೊಟ್ಟ. ಎಪ್ಪತ್ತು ಏಳು ಮಾನ್ಯರಿಗೆ ವೀಳ್ಯವ ಕೊಟ್ಟ.

ಕುದುರೆಯ ಫೌಜು, ಆನೆಯ ಫೌಜು ತರಬೇಕೆಂದು ರಾಮ ಆದೇಶ ನೀಡಿದ. ಆಗ ಆರೇರ ಚಾರಮರಾಯನ ಮಕ್ಕಳು, ದೇವಿಶೆಟ್ಟಿಯ ಲಿಂಗ, ಭಾವ ಸಂಗಮದೇವ, ಜೀವರತ್ನದ ಮಲ್ಲಿದೇವ, ಅಣ್ಣ ಕಾಟಣ್ಣ ಕುದುರೆ ಫೌಜು ತಂದರು. ಇವರೆಲ್ಲರಿಗೆ ರಾಮಯ್ಯ ಉಡುಗೊರೆ ವೀಳ್ಯ ಕೊಟ್ಟ. ಕರಣಿಕ ಲಿಂಗನ ಕರೆದು ಸೈನ್ಯದ ಲೆಕ್ಕ ಕೇಳಿದ. ಸೈನ್ಯ ಸಾಲುವುದಿಲ್ಲ, ಹೆಚ್ಚಿನ ಸೈನ್ಯ ಸಂಗ್ರಹಿಸಲು ಬೈಚಪ್ಪನಿಗೆ ಹೇಳಿದ.

ಅಂದು ಬೈಗಿನ ಸಮಯದಲ್ಲಿ ರಾಮಯ್ಯ ಮತ್ತೆ ಆಸ್ಥಾನಕ್ಕೆ ಬಂದು ಆಸೀನನಾದ. ಶೆಟ್ಟಿ, ಮಾನ್ಯರು, ಗೌಡ, ಒಕ್ಕಲುಗಳು ಬಂದು ಪಟ್ಟದುಡುಗೊರೆ ಕೊಟ್ಟರು. ಪ್ರಜೆಗಳು ಬಂದು ಹೊನ್ನಡಿದಾರ ಕೊಟ್ಟರು. ರಾಮಯ್ಯ ಅವರಿಗೆ ವಂದಿಸಿ 'ನಿಮ್ಮಿಂದ ನಮ್ಮ ದೊರೆತನವು' ಎಂದು ನುಡಿದು, ಗಂಧವೀಳ್ಯ ನೀಡಿದ. ಬೈಚಪ್ಪನನ್ನು ಬರಮಾಡಿಕೊಂಡು ಸುತ್ತಣ ಗೌಡರ ಕರೆಸಲು ಸೂಚಿಸಿದ. ಓಲೆಗೆ ಮನ್ನಣೆಯಿತ್ತು, ಹುಕ್ಕೇರಿ ಸೀಮೆಯ ಗೌಡ ಕುಲಕರಣಿಗಳು ಬಂದು ಒಕ್ಕುಳ ಹೊನ್ನು, ಉಡುಗೊರೆ, ಹಣ್ಣು, ಫಲ ಅರ್ಪಿಸಿದರು. ಇಕ್ಕೇರಿ ಸೀಮೆಯ ಗೌಡರು ಲಕ್ಷದ ಮೇಲೆ ಹನ್ನೊಂದು ಸಾವಿರ ಕಾಣಿಕೆ ನೀಡಿದರು. ಕಲ್ಯಾಣ ಕಲಬುರಗಿ ಮೊದಲಾದ ಸೀಮೆಗಳ ನಾಡಿಗರು ಐದು ಲಕ್ಷ ಹೊನ್ನು ನೀಡಿದರು. ಸಾಗರ ಸೀಮೆಯ ಶೆಟ್ಟಿ ಪ್ರಜೆ ಗೌಡ – ಕುಲಕರಣಿಗಳು ಐದು ಲಕ್ಷ ಹೊನ್ನ ಸಲ್ಲಿಸಿದರು. ತೊರಗಲ್ಲು ಬಾದಾಮಿ ಸೀಮೆಯ ಗೌಡರಾದ ಮರಿಗೌಡ, ಮುದಿಗೌಡರು ಎರಡು ಸಾವಿರ ಹೊನ್ನು ಉಡುಗೊರೆ ನೀಡಿದರು. ಸೀರ್ಯದ ಸೀಮೆಯ ಸಾರನಗೌಡ, ನಾಗಗೌಡ ಆರು ಲಕ್ಷ ಹೊನ್ನ ಉಡುಗೊರೆ ಸಲ್ಲಿಸಿದರು. ಬಸವಪಟ್ಟಣದ ಮುದ್ದನಗೌಡ ಐವತ್ತು ಸಾವಿರ ಹೊನ್ನು ನೀಡಿದರು. ಆದವನ್ನಿ ಸೀಮೆ ರೆಡ್ಡಿ ಕುಲಕರ್ಣಿಗಳು ಹದಿನೆಂಟು ಸಾವಿರ ಹೊನ್ನ ಸಲ್ಲಿಸಿದರು. ಉಮ್ಮಳಿದಾರರು, ಪರವರ್ಗದವರು ಒಮ್ಮನ ಹೊನ್ನ ಸಲ್ಲಿಸಿದರು. ಬಂದವನಿಗೆ ಗೌರವಿಸಿ ರಾಮಯ್ಯ ತಂದೆಗೆ ವಂದಿಸಿದ. ಮಾವನಾದ ಗುತ್ತಿಯ ಜಗದಪ್ಪನು ಅಳಿಯ ರಾಮನಿಗೆ ಪಟ್ಟಣ ಉಡುಗೊರೆ, ಪೆಟ್ಟಿಗೆ ಬಂಗಾರವನ್ನೂ ಕಂಪಿಲನಿಗೆ ಪಟ್ಟಾವಳಿ ಮುತ್ತಿನಾಭರಣವನ್ನೂ ಕಳಿಸಿದ. ಮಗಳು ರಾಮಕ್ಕಗೆ ಮುತ್ತಿನಾಭರಣ, ಐದೂರು ಜೀಬಿ ನಾಣ್ಯ ಕೊಟ್ಟನು.

ಸಂಧಿ : ೨೩

ರಾಮಯ್ಯ ಮಂತ್ರಿಯನ್ನು ಕರೆಯಿಸಿ ಜಟ್ಟಂಗಿ ರಾಮೇಶ್ವರನ ದರ್ಶನಕ್ಕೆ ಹೋಗುವ ಬಗ್ಗೆ ಹೇಳಿದ. ಅಕ್ಕಿ, ಬೇಳೆ, ಗೋಧಿಹಿಟ್ಟು, ಸಂಬಾರ, ಸಕ್ಕರೆ, ಬೆಲ್ಲ, ಸಣ್ಣಕ್ಕಿ ಹೇರು ಸಿದ್ಧವಾದವು. ಅಡಕೆ, ಬಿಳಿ ಎಲೆ, ಕರ್ಪೂರ, ಮಾದಾಳ, ಖರ್ಜೂರ, ಹಾಲು, ಮೊಸರು, ಆಲೆ, ರಸದಾಳಿ, ಕ್ಷೀರಗಳು ನೈವೇದ್ಯಕ್ಕೆ; ಜವಳಿ, ರೊಕ್ಕ ಹೊನ್ನು ಪಾದಗಾಣಿಕೆಗೆ ಸಿದ್ಧವಾದವು. ಕಟ್ಟಿಗೆಕಾರರು ಇವೆಲ್ಲವನ್ನು ಸಾಗಿಸಿದರು. ಕಂಪಿಲ ಬಂಧುಬಳಗದೊಂದಿಗೆ ಪಲ್ಲಕ್ಕಿ ಏರಿ ನಡೆದ. ಹಿರಿಯ ಸೊಸೆ

ಕಂಚಲವ್ವ ಸಹಿತ ಎಲ್ಲ ಅರಸುವೆಣ್ಣುಗಳು ನಡೆದು ಹಂಪಿಯ ವಿರೂಪಾಕ್ಷನ ದರ್ಶನ ಪಡೆದರು. ಜಂಗಮಕೆ ಪರ್ವಮಾಡಿ, ಬ್ರಾಹ್ಮಣರಿಗೆ ಸಮಾರಾಧನೆ ಮಾಡಿ ಮುನ್ನಡೆದರು. ಕಂಪಲಿಯ ಸೋಮೇಶನಿಗೆ ಮಹಾಪರುವ ಮಾಡಿ ಮುಂದಕ್ಕೆ ಸಾಗಿ, ಜಟ್ಟಂಗಿ ರಾಮನ ಗುಡಿಗೆ ಬಂದರು. ಅಲ್ಲಿ ದೇವಸಮುದ್ರವೆಂಬ ಕೆರೆಯುಂಟು, ಬಾವಿ ಪೋದೋಟ ವನವುಂಟು, ಕಾವಲ ಮಲೆಯುಂಟು, ಕಸ್ತೂರಿಮೃಗವುಂಟು. ಸ್ನಾನಮಾಡಿ ಎಲ್ಲರೂ ಮಲ್ಲಿಕಾರ್ಜುನನ, ಜಟ್ಟಂಗೇಶನ ಗುಡಿಗಳಿಗೆ ಬಂದರು. ರಾಮಯ್ಯ ಪೂಜೆಮಾಡಿ ಬ್ರಾಹ್ಮಣರಿಗೆ, ಜಂಗಮರಿಗೆ ದಕ್ಷಿಣೆ ನೀಡಿದರು. ದೊರೆ ಮಕ್ಕಳಿಗೆ ಕರಣಿಕ ಲಿಂಗನ ಮೂಲಕ ಉಲುಪೆಕೊಡಿಸಿದನು. 'ನರಜನ್ಮದೊಳಗೆನ್ನನೇಕೆ ಪುಟ್ಟಿಸಿದಯ್ಯ, ಧರಿಸಿದ ಬಿರಿದ ದಕ್ಕಿಸಿ ರಣರಂಗದಿ ಕರೆದೊಯ್ಯಬೇಕೆನ್ನ ನೀನು' ಎಂದು ಬೇಡಿಕೊಂಡ. 'ಎಂದಿದ್ದರೀ ಕಾಯ ಎನಗೆ ನಂಬಿಗೆಯಿಲ್ಲ, ಕಂದನ ಮೇಲೆ ದಯಮಾಡೋ' ಎಂದು ಪ್ರಾರ್ಥಿಸಿದ. ಜಟ್ಟಂಗಿ ರಾಮೇಶ್ವರ ಮೆಚ್ಚಿ ಮಲ್ಲಿಗೆ ಪುಷ್ಪದ ವರವನ್ನಿತ್ತ. ರಾಮಯ್ಯ ಕುಮ್ಮಟಕ್ಕೆ ಮರಳಿ, ತಂದೆ ತಾಯಿಗಳಿಗೆ ನಮಸ್ಕರಿಸಿದ. ಸುರಿತಾಳನ ಮಗಳು, ತನ್ನನ್ನು ಹಿಡಿತರಿಸಿ ಮದುವೆಯಾಗ ಬಯಸಿದ ಸಂಗತಿಯನ್ನು ಅವರಿಗೆ ಹೇಳಿ, ಈ ವಿಷಯದಲ್ಲಿ 'ಪರನಾರಿ ಸಹೋದರ'ನಾಗುವೆನೆಂದು ಸಾರಿದ.

ಮರುದಿನ ಬೈಚಪ್ಪನೊಡನೆ ಹೊಸಮಲೆದುರ್ಗಕ್ಕೆ ಹೋಗಿ, ಬಿದ್ದ ಕೋಟೆಗಳನಿಕ್ಕಿಸಿ, ಬೊಕ್ಕಸ ಪರೀಕ್ಷಿಸಿ, ಒಕ್ಕಲುಗಳಿಗೆ ಬುದ್ಧಿಯ ಹೇಳಿ, ಗಡಿಗಳನ್ನು ನೋಡಲು ಹೊರಟ. ಗಡಿಗಳನ್ನು ಭದ್ರಮಾಡಿ, ಕಣಜ ಬೊಕ್ಕಸ ಬಲಿಸಿ, ಕೆರೆ ಹೂದೋಟ ನಿರ್ಮಿಸಿ, ಸೆರೆಯಲ್ಲಿದ್ದವರನ್ನು ಬಿಡಿಸಿ, ಹಸಿದು ಬಂದವರಿಗೆ ಅನ್ನವ್ಯವಸ್ಥೆ ಮಾಡಿದ. ಎಲ್ಲ ಕಡೆ ಕೆರೆ, ಕಾಲುವೆ, ಬಾವಿ, ತೋಪು, ವನ, ಮಲ್ಲಿಗೆ ಶೃಂಗಾರ ತೋಟ, ಮಂಟಪಗಳನ್ನು ರಾಮಯ್ಯ ನಿರ್ಮಿಸಿದ. ಅನ್ನಛತ್ರ, ಅರವಟ್ಟಿಗೆ, ಮಠಮಾನ್ಯ, ಅಗ್ರಹಾರಗಳನ್ನು ರಚಿಸಿದ. ರಾಮನ ಕೀರ್ತಿ ದಿಳ್ಳಿಗೆ ತಲುಪಿತು. ನೇಮಿಯನ್ನು ಕಳಿಸಿ ರಾಮನನ್ನು ಬೇಗ ಹಿಡಿತರಿಸಲು ಮಗಳು ಸುರಿತಾಳನಿಗೆ ಹೇಳಿದಳು. 'ಮುಪ್ಪಾಗಿ ಹೋದೆನಯ್ಯಯ್ಯೋ' ಎಂದು ವ್ಯಥೆ ಪಟ್ಟಳು.

ಸಂಧಿ : ೨೪

ಮಂತ್ರಿ ನೇಮಿಖಾನ ಕುಮಾರರಾಮನ ಚಿತ್ರಪಟವನ್ನು ಸುರಿತಾಳನ ಮಗಳಿಗೆ ಕಳಿಸಿದ. ನೋಡುತ್ತಲೇ ಆಕೆ ಮೂರ್ಛೆಹೋದಳು. ಸುರಿತಾಳ ಕಾರಣ ಕೇಳುತ್ತಲೇ "ಹಿಂದಣ ಜನ್ಮದಲ್ಲಿ ನಾನು ದ್ರೌಪದಿಯಾಗಿದ್ದೆ, ಕುಮಾರರಾಮ ಅರ್ಜುನನಾಗಿದ್ದ" ಎಂದು ಹೇಳುವಷ್ಟರಲ್ಲಿ 'ಎಲ್ಲಿಗಾದರೂ ನನ್ನನ್ನು ಯುದ್ಧಕ್ಕೆ ಕಳುಹು. ಬಲ್ಲಿದ ರಾಮನ ಮೇಲೆ ಬೇಡ' ಎಂದು ನೇಮಿ ನುಡಿದನು. ಕಳಹು ಗುಜರಾತಿಯ ಮೇಲೆ, ತೆಲುಗರ ಮೇಲೆ, ಕಳುಹು ಮಲೆಯಾಳದ ಮೇಲೆ, ಕಳುಹು ಮಗಧ ವಡ್ಡದೇಶದ ಮೇಲೆ, ಕಳಹಿಸಬೇಡ ಕುಮ್ಮಟದ ಮೇಲೆ – ಎಂದು ಮತ್ತೆ ನುಡಿದ. ಅಷ್ಟರಲ್ಲಿ ಮಾದಿಗಿತ್ತಿ ಬಂದು 'ರಾಮನನ್ನು ನಾನು ಹಿಡಿದಿರುತ್ತೇನೆ' ಎಂದು ವೀಳ್ಯ ಹಿಡಿದಳು. ನೇಮಿಖಾನನೂ ಒಳಗೊಂಡಂತೆ ಸೈನ್ಯ ಸಜ್ಜಾಯಿತು. ತೆಂಕಣದೇಶದ ಮಧ್ಯದಿ ಮಾತಂಗಿಯ ದಂಡು ಬೀಡು ಬಿಟ್ಟಿತು. ಮುನ್ನೂರು ಅರುವತ್ತು ಗಾವುದ ನಡೆದು ಬಂದ ದಂಡ ಕುಮ್ಮಟವನ್ನು ತಲುಪಿತು. ರಾಮಯ್ಯ ಕಡೆಯಕಲ್ಲನ್ನು ಹತ್ತಿ ವೈರಿಸೈನ್ಯ ನೋಡಿದ. 'ದುರ್ಗಕ್ಕೆ ತನಗೆ ಮದುವೆ'ಯೆಂದು ನುಡಿದ. ಕಂಪಿಲರಾಯ ಹೊಸಮಲೆದುರ್ಗಕ್ಕೆ ಹೋದ. ಭಂಡಾರವನ್ನು ಅಲ್ಲಿಗೆ ಸಾಗಿಸಲಾಯಿತು.

ರಾಮಯ್ಯ ವೈರಿಸೈನ್ಯದ ಮೇಲೆ ಎರಗಿ ಭೂತಗಳಿಗೆ ಹೆಣಗಳನ್ನು ಉಣಬಡಿಸಿದ. ಹರಿಯಲದೇವಿ ಎರಡು ಖಂಡುಗ ಹಣ ಕಳಿಸಿದಳು. ಕತ್ತಲಾಗುತ್ತಲೇ ಕುಮ್ಮಟದುರ್ಗದಲ್ಲಿ ಕೈದೀವಿಗೆ ಬೆಳಗಿದವು. ಮುಂಜಾನೆ ಮನ್ನೆಯರನ್ನು ಕರೆಸಿ ಆಭರಣ ಉಡುಗೊರೆ ಕೊಟ್ಟು, ದುರ್ಗವನ್ನಿಳಿದು ಹೋರಾಟ ಮಾಡಿದ. ವೈರಿಸೈನ್ಯ ಓಡಿಹೋಯಿತು. 'ಕಲ್ಲೊಳು ಕಾದಬಹುದು, ರಾಮನ ಕೊಡೆ ನಿಲ್ಲಬಾರದು' ಎಂದು ತುರುಕ ಸೈನ್ಯ ತಮ್ಮ ತಮ್ಮಲ್ಲಿ ಮಾತನಾಡಿತು. ಮಾತಂಗಿ ಸೋತು ಒಂದು ಗಾವುದ ಹಿಂದೆ ಸರಿದಳು.

ಆಗ ರಾಮನ ಸೈನ್ಯದ ತೆಲುಗ ಮಾನ್ಯರೆಲ್ಲ ಸಭೆಸೇರಿ, 'ನವಲಕ್ಷ ತೆಲುಗರ ಗಂಡ' ಎಂಬ ರಾಮನ ಬಿರುದು ನಮಗೆ ಅಪಮಾನ. ಕಾರಣ ಇವನನ್ನು ಕೊಲ್ಲಿಸಬೇಕೆಂದು ತೀರ್ಮಾನಿಸಿ, 'ಹಿಂದಿರುಗಿ ಬಂದರೆ ಬಾಗಿಲ ತೆಗೆದುಕೊಡುವೆ'ವೆಂದು ಮಾದಿಗಿತ್ತಿಗೆ ಪತ್ರ ಕಳಿಸಿದರು.

ಸಂಧಿ : ೨೫

ಓಡಿಹೋದ ಮಾತಂಗಿ ತಿರುಗಿ ಬಂದಳು. 'ತೆಲುಗರ ಸಂಚಿನಿಂದಾಗಿ ಒಳಕೋಟೆ ಹೋಯಿತು. ಲೆತ್ತ ಬಿಟ್ಟು ಏಳು' ಎಂದು ರಾಮನಿಗೆ ಕಾಟಣ್ಣ ಹೇಳಿದ. ರಾಮಯ್ಯ ಈ ಅನಿರೀಕ್ಷಿತ ಬೆಳವಣಿಗೆಗೆ ಬೆರಗಾಗಿ, ಅರಮನೆಗೆ ಹೋದ. 'ಕಿಚ್ಚುಕಂಡು ಅಂಜಬೇಡಿರಿ. ನನ್ನೊಡನೆ ಸ್ವರ್ಗಕ್ಕೆ ಬನ್ನಿರಿ' ಎಂದು ಹೆಂಡಿರಿಗೆ ಹೇಳಿ, ತಾಂಬೂಲಕೊಟ್ಟು, ಯುದ್ಧಕ್ಕೆ ನಡೆದ. ಹೆಂಡತಿ ಬಂಗಾರದ ಬಟ್ಟಲಲ್ಲಿ ತಂದ ಅನ್ನವನ್ನು ಕಾಟಣ್ಣನೊಡನೆ ಒಟ್ಟಿಗೆ ಉಂಡ. ಮನ್ನೆಯರಿಗೆ ವೀಳ್ಯಕೊಟ್ಟು, ಬಿಲ್ಲು ಹಿಡಿದು ದ್ವಾರವಾಟಕ್ಕೆ ನಡೆದ. ಅಷ್ಟರಲ್ಲಿ ನಲ್ಲನಾಗುವ ಬಿದ್ದ, ಬಿಲ್ಲ ಪೆನ್ನನು ಬಿದ್ದ, ಮೀನಿಗ ಸಿಂಗ ಬಿದ್ದ, ಜಲ್ಲಿಬಿಲ್ಲಿಯ ಬುಕ್ಕಿನಾಯಕ ಬಿದ್ದ, ಕಲ್ಲಿಕೋಟೆಯ ಚಿಕ್ಕ ಬಿದ್ದ, ಅಕ್ಕಸಾಲೆರ ಚಿಕ್ಕ ಬಿದ್ದ, ರಕ್ಕಸ ಮುನಿಯ ಬಿದ್ದ, ಕೊಳ್ಳಿಯ ನಾಗ ಬಿದ್ದ, ಬೇವಿನ ಸಿಂಗ ಬಿದ್ದ, ಹೊಲೆಯರ ಹಳ್ಳುಗ ಬಿದ್ದನೆಂಬ ವಾರ್ತೆ ಕೇಳಿ ರಾಮಯ್ಯ ದುರ್ಗವನ್ನಿಳಿದ. ತುರುಕರು ಬೆದರಿದರು. ಬೊಲ್ಲನನ್ನೇರಿ ಬಂದ ರಾಮನನ್ನು ಆನೆಯನ್ನೇರಿ ಬರುತ್ತಲಿದ್ದ ಮಾತಂಗಿ ಎದುರಿಸಿದಳು. ವೈರಿ ಸೈನ್ಯವನ್ನು ಕತ್ತರಿಸಿ ಹಾಕಿದ ಕುಮಾರರಾಮ ಮಾದಿಗಿತ್ತಿಯ ವೀರಜಡೆ ಹಿಡಿದೆಳೆದ. 'ಸಂಗ್ರಾಮದಲಿ ಹೆಂಗಸ ಕೊಂದರೆ ದುಸ್ಸಂಗ ತಪ್ಪದು ಸ್ವರ್ಗದಲಿ' ಎನ್ನುತ್ತ ಅವಳ ಮುಂದಲೆ ಬಿಡುವುದೇ ತಡ, ಆಕೆ ಸಿಂಗಾಡಿಯಿಂದ ಹೊಡೆದು, ಬಾಣದ ಮಳೆಸುರಿದಳು. ರಾಮ ತನ್ನೆದೆಯ ಬಾಣಗಳನ್ನು ಕಿತ್ತಿಹಾಕಿದನು. ಅಷ್ಟರಲ್ಲಿ ಬಾಣದ ಬಸವ ಸತ್ತ, ವೈರಿಗಳು ರಾಮನನ್ನು ಸುತ್ತಲೂ ಮುತ್ತಿದರು. ರಾಮಯ್ಯ ಗೂಗೆಗಲ್ಲಿನ ಮೇಲೆ ನಿಂತನು. ದೂರದಿಂದ ರಾಮನ ಸ್ಥಿತಿ ನೋಡಿದ ಕಾಟ ಕಾದುತ್ತ ಸಮೀಪ ಬಂದನು. 'ನಮ್ಮ ಸೈನ್ಯ ಹಾಳಾಯಿತು, ನೀನು ಮನೆಗೆ ಹೋಗಿ ಹೆಂಡಂದಿರಿಗೆ ಕಿಚ್ಚುಕೊಟ್ಟು ಬಾ. ನನ್ನ ಗಾಯ ಹೆಚ್ಚಿತು. ತಾಯಿಗೆ ನನ್ನ ಕಡೆಯವನ್ನು ಒಪ್ಪಿಸಿ ಬಾ' ಎಂದು ಕಾಟಣ್ಣನಿಗೆ ಹೇಳಿದ.

ಸುಣ್ಣ ಸಾಸಿವೆ ಒಡಲಲ್ಲಿ ಹೊಯ್ದಂತೆ, ಕಣ್ಹೋದ ಮರಿಯಂತೆ ಕಾಟಣ್ಣ ದುಃಖಿಸಿದ. 'ನಿನ್ನೊಡನೆ ಸಾಯುವೆ ತಮ್ಮ' ಎಂದು ಹಲುಬಿದ. 'ಮನ್ನಿಸೋ ನಿನ್ನ ಪ್ರಾಣವನೊಂದು ಗಳಿಗೆ. ನಾನೂ ನಿನ್ನೊಂದಿಗೆ ಅಳಿಯುತ್ತೇನೆ' ಎಂದು ನುಡಿದ. 'ನಾನು ಹೋಗಿ ಬರುವ ವರೆಗೆ ವೈರಿಗೆ ಅಂಗವ ಕೊಡಬೇಡ' ಎಂದು ಹೇಳಿ, ಕಾಟಣ್ಣ ಉರಿಗೊಂಡ ಕರ್ಪುರದಂತೆ ಹೊಸಮಲೆಗೆ

ಓಡಿಬಂದು, ಕಂಪಿಲ ಹರಿಯಮ್ಮನಿಗೆ ಹೇಳಿದ. ತಿರುಗಿ ಕುಮ್ಮಟಕ್ಕೆ ಬಂದು ರಾಮನ ಮಡದಿಯರಿಗೆ ಶೃಂಗಾರ ಮಾಡಿಸಿದ. ದುಃಖಿಸಿದ ಅವರು ಆಡುತ್ತ ಪಾಡುತ್ತ ರಾಜಬೀದಿಯಲ್ಲಿ ಬಂದರು. ಮಳಲಗೌರಿಯನ್ನು ಪೂಜಿಸಿ, 'ಏಳೇಳು ಜನ್ಮದಲ್ಲಿ ನೀನೇ ಗಂಡನಾಗೆ'ಂದು ನುಡಿದು ಓಡಿಬಂದು, ಕೊಂಡದ ಕಟ್ಟೆಯನ್ನು ಹತ್ತಿ, ರಾಮಯ್ಯನನ್ನು ಪಾಡುತ್ತ ಕೊಂಡದಲ್ಲಿ ಧುಮುಕಿದರು. ತನ್ನ ಮನೆಗೆ ಬಂದ ಕಾಟನಿಗೆ 'ತಡಬೇಡ ಎನ್ನನು ಕಡಿ' ಎಂದು ಹೆಂಡತಿ ಕೈಗೆ ಖಡ್ಗ ಕೊಟ್ಟಳು. ಕಡಿದ ಕಾಟ ಹೆಂಡತಿಯ ಬಾಯಲ್ಲಿ ಬಾಯಿ ಇಟ್ಟು, ಅವಳ ಹೆಣವನ್ನು ಭೂಮಿಯ ಮೇಲೆ ಒರಗಿಸಿ, ರಾಮಯ್ಯನಿದ್ದಲ್ಲಿಗೆ ಬಂದನು. 'ಊರು ಹೋಯಿತು, ಒಳಹೊಕ್ಕರು ತುರುಕರು' ಎಂದು ನಿಶ್ಚಯಿಸಿಕೊಂಡ. ಅಷ್ಟರಲ್ಲಿ ದೇವಿಶೆಟ್ಟಿಯ ಲಿಂಗ ಹೋರಾಡುತ್ತ ಸತ್ತ. ಏರಿಬಂದ ಬಾಣ ನಟ್ಟು, ಕುದುರೆ ಮೇಲಿನಿಂದ ರಾಮ ಬೀಳುತ್ತಲೇ ನೇಜೆಯೂರಿ ಮೂರ್ಛೆಯಲ್ಲಿ ನಿಂತ. ಇದನ್ನು ನೋಡಿದ ಕಾಟ ಮಾದಿಗಿತ್ತಿಯನ್ನು ಕೊಲ್ಲಲು ಧಾವಿಸಿದ. ಅಷ್ಟರಲ್ಲಿ ಬಾಣ ತಾಗಿ ಉರುಳಿದ.

ಸಂಧಿ : ೨೬

ಮಾದಿಗಿತ್ತಿ ತಿರುಗಿಬಂದು ರಾಮನ ಮೇಲೆ ಬಾಣಗಳನ್ನು ಸುರಿದಳು. ಬೊಟ್ಟು ಊರಲೂ ಜಾಗವಿಲ್ಲದಂತೆ ಮೈತುಂಬ ನೆಟ್ಟವು. ಮಿಕ್ಕವರು ಮುತ್ತಿದರು. ರಾಮಯ್ಯ ಪ್ರಾಣಬಿಟ್ಟ. ಆತನ ಮೇಲೆ ಕಾಗೆ ಕುಳಿತುದನ್ನು ಕಂಡು, ಸತ್ತುದನ್ನು ಖಚಿತ ಮಾಡಿಕೊಂಡ ವೈರಿ ಸೈನಿಕರು ಸಮೀಪ ಬಂದರು. ಮಾತಂಗಿ ರಾಮನನ್ನು ಎಳೆದು ಹಾಕಿದಳು. ಅಷ್ಟರಲ್ಲಿ ಜೀವ ಮರುಕಳಿಸಲು ಎಲ್ಲರೂ ಅಂಜಿ ನಮಸ್ಕರಿಸಿದರು. ಸುರಲೋಕದ ಅಪ್ಸರೆಯರು ಎತ್ತಿಕೊಳ್ಳಲು ಬಂದರೆ 'ಪರನಾರಿ'ಯರೆಂದು ರಾಮ ಹಿಂದೆ ಸರಿದನು. ಮತ್ತೆ ಮೇಲೆ ಕಾಗೆ ಕುಳಿತುಕೊಳ್ಳಲು ಸತ್ತುದನ್ನು ಖಚಿತಪಡಿಸಿಕೊಂಡು, ಅವನನ್ನು ಒತ್ತಿ ತಿವಿದು ನೂಕಿದರು. ಮಾತಂಗಿ ಹತ್ತಿರ ಬಂದು ತಲೆಗೊಯ್ದಳು. ಬೊಲ್ಲನನ್ನು ಹಿಡಿಯಲು ತುರುಕರು ಸರಪಳಿ ತಂದರು. ಪಕ್ಷಿಯಂತೆ ಆಕಾಸಕ್ಕೆ ಹಾರಿ ಭೂಮಿಗೆ ಬಿದ್ದಿತು. ರಾಮನ ಬಾಯಿಯಲ್ಲಿ ಮುತ್ತು ಮಾಣಿಕ ಚಿನ್ನ ತುಂಬಿ, ತಲೆಗೆ ದೇವಾಂಗ ಸುತ್ತಿದರು. ಗಂಧ ಕಸ್ತೂರಿ ಕುಂಕುಮ ಜಾಜಿ ಮಲ್ಲಿಗೆ ಸಂಪಗೆಗಳಿಂದ ಅಲಂಕರಿಸಿ, ಕೊಯ್ದ ತಲೆಯನ್ನು ಸುರಿತಾಳನೆಡೆಗೆ ಕಳಿಸಿದರು. ಸುರಿತಾಳ ಮಗಳೊಂದಿಗೆ ಬಂದು ತಲೆಯನ್ನು ನೋಡಿದ. 'ರಾಮನನ್ನು ಜೀವಂತ ತರಲು ಹೇಳಿದೆ, ಹೀಗಾಯಿತೇ' ಎಂದು ಮರುಗಿದ. 'ಪ್ರಾಣಸಹಿತ ತರುವರೆಂದು ನಿರೀಕ್ಷಿಸಿದ್ದೆ' ಎಂದು ಮಗಳು ಅತ್ತಳು. 'ರಾಮನನ್ನು ಬಿಡಲಾರೆ'ನೆಂದು ಅವನ ಜಡೆಯ ಮುತ್ತಿನ ಗೊಂಡೆ ತೆಗೆದು ತನ್ನ ಮುಡಿಯಲ್ಲಿ ಇಟ್ಟುಕೊಂಡಳು. ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ನೋಡದಳು. ಉಡಿಯಲ್ಲಿ ಕಟ್ಟಿಕೊಂಡು ಕಿಚ್ಚಿನಲ್ಲಿ ಬೀಳಲು ಸಿದ್ಧಳಾದಳು. ಸುರಿತಾಳ, ಅಪಕೀರ್ತಿಗೆ ದಾರಿಮಾಡಿಕೊಡಬೇಡೆಂದು ಮಗಳಿಗೆ ಬುದ್ಧಿಹೇಳಿ ಬಿಡಿಸಿದ.

ಊಳಿಗದವರು ರುಂಡವನ್ನು ದಿಳ್ಳಿಯ ಸುರಹೊನ್ನೆ ಮರದ ರೆಂಬೆಗೆ ಕಟ್ಟಿದರು. ರಾತ್ರಿ ರಾಮನ ಬೊಬ್ಬೆಗೆ ನಡುಗಿ ಜನ ಭಯಭೀತರಾದರು. ಆಗ ಆ ತಲೆಯನ್ನು ಕೋಟೆಯ ಅಗುಳಿಗೆ ಹಾಕಿದರು. ಆಗಲೂ ರಾಮನ ಧ್ವನಿ ಕೇಳಿ ಜನ ಪ್ರಾಣನೀಗತೊಡಗಿದರು. ಆಗ ಸುರಿತಾಳನ ಆಜ್ಞೆಯಂತೆ ಒಬ್ಬ ಭಟ್ಟನು ಕಂಪಿಲನಲ್ಲಿಗೆ ಬಂದು, ರಾಮನ ತಲೆ ಒಯ್ಯಲು ಹೇಳಿದ. ಕಪಿಲ ಭಟ್ಟರ ರೂಪಿದೇವಯ್ಯನನ್ನು ಡಿಳ್ಳಿಗೆ ಕಳುಹಿಸಿದ. ಸುರಿತಾಳನನ್ನು ಕಂಡ. ರಾತ್ರಿ ಮಲಗಿದ

ರೂಪಿದೇವಯ್ಯನ ಕನಸಿನಲ್ಲಿ ಬಂದು, 'ದಿಳ್ಳಿ ಸುರಿತಾಳನ ಗಂಡ' ಎಂದು ಬಿರುದು ಉಗ್ಘಡಿಸಿದರೆ ಮಾತ್ರ ಬರುವೆ ಎಂದು ರಾಮಯ್ಯ ಹೇಳಿದ. ಮುಂಜಾನೆ ರುಂಡದ ಹತ್ತಿರ ಸುರಿತಾಳ, ಆರತಿ ಹಿಡಿದು ಅವನ ಮಗಳು ನಿಂತರು. ರೂಪಿದೇವಯ್ಯ ಬಿರುದು ಹೊಗಳಿದ. ಕೈಗೆ ಬಂದ ರುಂಡದೊಂದಿಗೆ ಕುಮ್ಮಟಕ್ಕೆ ಮರಳಿದ. ದಾರಿಯಲ್ಲಿ ರುಂಡ ನೆಲದ ಮೇಲಿಟ್ಟು ರೂಪದೇವಯ್ಯ ವಿಶ್ಯಾಲ್ಯ(?)ಕ್ಕೆ ಹೋದ. ಅಷ್ಟರಲ್ಲಿ ಅದು ಮರವನ್ನೇರಿತು. ;ಅಡಗದೆ ನಿನ್ನ ಪರಾಕ್ರಮ ಕೀರ್ತಿ' ಎನ್ನುತ್ತ ಹೋಗಿ ರುಂಡವನ್ನು ಹಿಡಿಯಲು, ಪ್ರಾಣ ಅಳಿಯಿತು. ರೂಪಿದೇವಯ್ಯ ರುಂಡದೊಂದಿಗೆ ಕುಮ್ಮಟಕ್ಕೆ ಬಂದ. ಕಂಪಿಲ, ಹರಿಯಮ್ಮ, ಒಡಹುಟ್ಟಿದವರು, ಪ್ರಜಾ ಪರಿವಾರ ಗೋಳಿಟ್ಟಿತು. ಹರಿಯಮ್ಮ ಈ ರೀತಿ ಹಣೆಯ ಬರಹವನ್ನು ಬರೆದ ಬ್ರಹ್ಮನನ್ನು, ಮಿಕ್ಕ ದೇವರನ್ನು ಶಪಿಸಿದಳು. ಕಂಪಿಲನ ಆಜ್ಞೆಯಂತೆ ರಾಮನ ತಲೆಯನ್ನು ಕಾಸಿಗೆ ತೆಗೆದುಕೊಂಡು ಹೋದರು. ಇತ್ತ ಶಿವ, ರಾಮನ ಮುಂಡವನ್ನು ಕೈಲಾಸಕ್ಕೆ ತರಿಸಿದ. ಗಂಗಾನದಿಗೆ ರುಂಡವನ್ನು ಹಾಕುವಷ್ಟರಲ್ಲಿ ಗರುಡಬಂದು ಕೈಲಾಸಕ್ಕೆ ಒಯ್ದು ಬಿಟ್ಟಿತು. ರುಂಡ ಮುಂಡ ಕೂಡಿಸಿ ಶಿವ ದೇಹದಲ್ಲಿ ಪ್ರಾಣ ಪ್ರತಿಷ್ಠಾಪಿಸಿದ. 'ನನ್ನ ಜೂಜ ಗೆಲಿಸಿದೆ'ಯೆಂದು ರಾಮಯ್ಯನನ್ನು ಶಿವ ಹೊಗಳಿದ. ನನ್ನ ರಂಭೆ ನಿನ್ನ ಅರ್ಜುನನ್ನು ಗೆಲ್ಲಲಿಲ್ಲವೆಂದು ಪಾರ್ವತಿ ನುಡಿದಳು. ಆಗ ಶಿವನ ಆಜ್ಞೆಯಂತೆ ಅರ್ಜುನ ವಿಷ್ಣು ಗರುಡವನ್ನೇರಿ ವೈಕುಂಠಕ್ಕೆ ಹೋದರು.

ಆಕೃತಿ

ಕವಿಯೊಬ್ಬ, ಜೀವನವೆಂಬ 'ಕೃತಿ'ಯನ್ನು ಒಂದು 'ಆಕೃತಿ' ವಿನ್ಯಾಸದಲ್ಲಿ ಕಟ್ಟಿಕೊಡುತ್ತಾನೆ. ಈ ಆಕೃತಿ ಪದ್ಯವಾಗಿದ್ದ ಪಕ್ಷದಲ್ಲಿ, ಅದು ಕಥಾವಿನ್ಯಾಸದ ಜೊತೆಗೆ ಛಂದೋವಿನ್ಯಾಸವನ್ನೂ ಒಳಗೊಳ್ಳುತ್ತದೆ, ಒಂದು ಪದ್ಯ ಕಲಾಕೃತಿಯಾಗಿ ನಿಲ್ಲುತ್ತದೆ.

ಕುಮಾರರಾಮ ರಾಜಕೀಯ ಕ್ಷೇತ್ರದ ವ್ಯಕ್ತಿ. ಈ ಹೊತ್ತಿಗೆ ಕರ್ನಾಟಕದ ಸಾರ್ವಭೌಮತ್ವ ಬಿರುಕುಬಿಟ್ಟು, ರಾಜರನ್ನು ಕುರಿತು ಮಹಾಕೃತಿ ನಿರ್ಮಾಣಮಾಡುವ ವಾತಾವರಣ ನಾಶವಾಗಿದ್ದಿತು. ಈ ಕಡೆ ಎತ್ತರ ಪ್ರತಿಭೆಯ ಭಕ್ತಕವಿಗಳೂ ದೈವತ್ವಕ್ಕೆ ಮುಖಮಾಡಿ, ರಾಜತ್ವಕ್ಕೆ ಬೆನ್ನು ತಿರುಗಿಸಿದ್ದರು. ಇಂಥ ಪರಿಸ್ಥಿತಿಯಲ್ಲಿ ರಾಜರ ಮೇಲೆ ಸಾಮಾನ್ಯ ಕವಿಗಳ ಗಮನ ಮಾತ್ರ ಕೇಂದ್ರೀಕೃತವಾಯಿತು. ಇದಲ್ಲದೆ ಸಾಹಿತ್ಯಕ್ಕೆ ಸಾಮಾನ್ಯರೇ ಸಹೃದಯರಾಗಿದ್ದ ಮತ್ತು ಅವಸರದಿಂದ ವೀರಮೌಲ್ಯ ಪ್ರಸಾರಮಾಡಬೇಕಿದ್ದ ಕಾಲವದು. ಹೀಗಾಗಿ ಸಾಹಿತ್ಯದ ಶ್ರೇಷ್ಠತೆಯ ಮೇಲಿನ ಒತ್ತು ಕಡಿಮೆಯಾಗಿ, ಅದು ಮೌಲ್ಯಪ್ರಸಾರ ಮತ್ತು ಜನಪ್ರಿಯತೆಗಳ ಕಡೆಗೆ ಸರಿಯಿತು.

ಇಷ್ಟು ಹಿನ್ನೆಲೆಯಲ್ಲಿ ಕಥಾವಿನ್ಯಾಸವನ್ನು ಕುರಿತು ಹೇಳವುದಾದರೆ, ಪ್ರಾಚೀನ ಕರ್ನಾಟಕದಲ್ಲಿ ಪುರಾಣ, ಚರಿತ್ರೆ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಇತ್ಯಾದಿ ಸಾಹಿತ್ಯಿಕ ಪ್ರಯೋಗಗಳು ಉದ್ದಕ್ಕೂ ನಡೆದುಬಂದಿವೆ. ಆದಿಪುರಾಣವು ಪುರಾಣ, ವಿಕ್ರಮಾರ್ಜುನ ವಿಜಯವು ಪುರಾಣದ ಚರಿತ್ರೀಕರಣ, ಕಂಠೀರವ ನರಸರಾಜ ವಿಜಯವು ಚರಿತ್ರೆ, ಸಿದ್ಧರಾಮ ಚರಿತೆಯು ಚರಿತ್ರೆಯ ಪುರಾಣೀಕರಣ. ಈ ಅಂಶವನ್ನು ಗಮನಿಸಿ ಹೇಳುವುದಾದರೆ ಕುಮಾರರಾಮನ ಕಥೆಯು ಗಂಗ, ಅನಾಮಧೇಯ ಕವಿ–೧ ಇವರಲ್ಲಿ ಚರಿತ್ರೆಯಾಗಿ, ನಂಜುಂಡ, ಅನಾಮಧೇಯ ಕವಿ–೨, ಮಹಾಲಿಂಗಸ್ವಾಮಿಗಳಲ್ಲಿ ಚರಿತ್ರೆಯ ಪುರಾಣೀಕರಣವಾಗಿ ಹುಟ್ಟು ಪಡೆದಿದೆ. ಅಂದರೆ

ಕುಮಾರರಾಮನನ್ನು ಮಹಾಲಿಂಗಸ್ವಾಮಿಯಲ್ಲಿ ಪರಶುರಾಮನೊಂದಿಗೆ, ನಂಜುಂಡನಂತೆ ಈ ಅನಾಮಧೇಯ ಕವಿ-೨ರಲ್ಲಿ ಅರ್ಜುನನೊಂದಿಗೆ ಸಮೀಕರಿಸಲಾಗಿದೆ. ಇದರಿಂದ ಕನ್ನಡಿಗರ ಮನಸ್ಸಿನಲ್ಲಿ ಕುಮಾರರಾಮ 'ಲೌಕಿಕ ವೀರನಾಗಿ' ಹುಟ್ಟಿ, 'ಪುರಾಣವೀರನಾಗಿ' ಬೆಳೆದುದು ಸ್ಪಷ್ಟವಾಗುತ್ತದೆ. ಇಷ್ಟು ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಯ ಕಥಾವಿನ್ಯಾಸವನ್ನು ಚರ್ಚಿಸಬಹುದು.

ಕುಮಾರರಾಮನನ್ನು ಕುರಿತ ೫ ಕಾವ್ಯಗಳಲ್ಲಿ ೨೬ ಸಂಧಿ ೨೭೭೬ ಪದ್ಯಗಳ ಈ ಕೃತಿ, ಗಾತ್ರ ದೃಷ್ಟಿಯಿಂದ ಈ ಕಡೆ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಆ ಕಡೆ ಬಾಲ ಕುಮಾರರಾಮನ ಸಾಂಗತ್ಯ, ರಾಮನಾಥ ಚರಿತೆಗಳ ಮಧ್ಯೆ ನಿಲ್ಲುತ್ತದೆ. ಕಥೆಯ ಕ್ರಮ ಸಾಮಾನ್ಯವಾಗಿ ಎಲ್ಲ ಕೃತಿಗಳಂತೆ ಮುಂದುವರಿದಿದ್ದರೂ ಸುರಿತಾಳ ಕಾಣಿಕೆ ಕೇಳಿ ಪಾದುಕೆ ಕಳಿಸಿದುದು, ಗುತ್ತಿಯ ಜಗದಪ್ಪನ ಅಧಿಕಾರಿಗಳು ಕಾಣಿಕೆ ಕೇಳಿ ಕಂಪಿಲನನ್ನು ನಡುದಾರಿಯಲ್ಲಿ ತಡೆದು ನಿಲ್ಲಿಸಿದುದು, ಕೊಮಾರ ರಾಮಯ್ಯನ ಮದುವೆ, ಕೊಮಾರರಾಮಯ್ಯನಿಗೆ ಪಟ್ಟಗಟ್ಟಿದುದು, ಜಟ್ಟಂಗಿ ರಾಮೇಶ್ವರನ ದರ್ಶನ-ಇವು ಈ ಕಾವ್ಯದ ಹೊಸ ಸೇರ್ಪಡೆಯಾಗಿವೆ.

ಜಗದಪ್ಪನ ಮಗಳು ರಾಮಕ್ಕ, ಮಂಚಣ್ಣನ ಮಗಳು ಕಾಮಕ್ಕ, ಚಾರಮರಾಯನ ಮೊಮ್ಮಕ್ಕಳಾದ ಸೋಮಾಯಿ, ಭೀಮಾಯಿ, ಬೈಚಪ್ಪನ ಮಗಳು ತಿಮ್ಮಾಯಿ – ಹೀಗೆ ೫ ಜನ ಕನ್ನೆಯರೊಂದಿಗೆ ಕುಮಾರರಾಮನ ಮದುವೆ ಇಲ್ಲಿ ಜರುಗುತ್ತದೆ. ಚಾರಮರಾಯನಿಗೆ ಮಧುಸೂದನ, ವೆಂಕಟರಾಯ ಹೆಸರಿನ ಮಕ್ಕಳಿರುವುದು, ಹುಳಿಯಾರ ಮಾರಭೂಪಾಲನಿಗೆ ಕಲ್ಲರಸ ಹೆಸರಿನ ಮಂತ್ರಿ, ಹೊಯ್ಸಳ ಬಲ್ಲಾಳನಿಗೆ ನರಸಿಂಗರಾಯನೆಂಬ ಮಂತ್ರಿ ಇರುವುದು, ಜಗದಪ್ಪನ ಮಗ ಉತ್ತುಂಗರಾಯ, ಕಾಟಣ್ಣನ ಹೆಂಡತಿ ಕಂಚಲಮ್ಮ – ಇವೆಲ್ಲ ಹೊಸ ಸಂಗತಿಗಳು ಇಲ್ಲಿವೆ. ಕುಮಾರರಾಮನ ಮದುವೆ ಮಾಘ ಶುದ್ಧ ತದಿಗೆ ಗುರುವಾರ ಅಮೃತ ಸಿದ್ಧಿಯೋಗದಲ್ಲಿ, ಸೂರ್ಯೋದಯವಾದ ೧೦ ಗಳಿಗೆಯಲ್ಲಿ ಜರುಗಿದ ಸೂಚನೆ ಇಲ್ಲಿದೆ.

ಇವೆಲ್ಲವುಗಳಿಗಿಂತ ಅವಶ್ಯ ಗಮನಿಸಬೇಕಾದ ಸಂಗತಿಯೆಂದರೆ ರಾಮಯ್ಯನ 'ಚರಿತ್ರೆ'ಯನ್ನು 'ಪುರಾಣ' ಶಿಲ್ಪದಲ್ಲಿ ಅಳವಡಿಸುವ ಪ್ರಯತ್ನ ಮಾಡಿದುದು. 'ಆಧಾರವಿಡಿದು ಪೇಳಿದನಾಗ ಗಂಗಯ್ಯ' ಎಂಬ ಪದ್ಯದ ಮೂಲಕ ಈ ಧೋರಣೆಯನ್ನು ಸ್ಪಷ್ಟಪಡಿಸಿದ್ದಾನೆ. ಕೈಲಾಸದಲ್ಲಿ ಪಾರ್ವತಿಗೆ ಅಗೌರವ ತೋರಿದ ಅರ್ಜುನ ಗಣನಾಥನು ಕುಮಾರರಾಮನಾಗಿ, ರಂಭೆಯು ರತ್ನಾಜಿಯಾಗಿ ಜನಿಸಿದ 'ಸಮಸ್ತೀಕರಣ' ಪ್ರಯೋಗವಿಲ್ಲಿದೆ. ಪಂಪ ರನ್ನರ ಮಾದರಿ ಅನುಸರಿಸಿದ್ದರೂ, ಆ ಕೃತಿಗಳಲ್ಲಿಯಂತೆ ಈ ಪ್ರಯೋಗ ಇಲ್ಲಿಯೂ, ಒಂದು ತೇಪೆಯಾಗಿ ನಿಂತಿದೆ. ಪಾರ್ವತಿಯ ಆದೇಶದ ಮೇರೆಗೆ, ರಂಭೆಯು ಕುಮಾರರಾಮನ ಪರನಾರಿ ಸೋದರವ್ರತ ನಾಶಪಡಿಸಲು ರತ್ನಾಜಿಯಾಗಿ ಹುಟ್ಟಿದಳೆಂಬ ಕಲ್ಪನೆಯು, ಪ್ರಭುಲಿಂಗ ಲೀಲೆಯ ಮಾಯಾದೇವಿಯ ಜನನದ ಅನುಕರಣೆಯಾಗಿದೆ. ಅದೇನೇ ಇದ್ದರೂ ಲೌಕಿಕ ವೀರನೊಬ್ಬನನ್ನು ಪುರಾಣವೀರನನ್ನಾಗಿಸುವ ಪ್ರಯತ್ನವಿಲ್ಲಿದೆ.

ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ ಮತ್ತು ಕೊಮಾರ ರಾಮಯ್ಯನ ಚರಿತ್ರೆಗಳಲ್ಲಿ ಸುಮಾರು ೩೦೦ ಪದ್ಯಗಳು ಸಮಾನವಾಗಿದೆ. ಇದಕ್ಕೆ

ಸಹೃದಯರಿಗಿಂತ ಸೃಜನಶೀಲ ಕವಿಗಳೇ ಕಾರಣ. ಹೀಗಾಗಿ ಈ ಮೂರು ಕೃತಿಗಳು ಶೂನ್ಯಸಂಪಾದನೆಯಂತೆ ಪರಿಷ್ಕಾರಗೊಂಡು ಸ್ವತಂತ್ರಕೃತಿ ರೂಪ ಪಡೆದಿವೆ.

ಛಂದೋವಿನ್ಯಾಸ ದೃಷ್ಟಿಯಿಂದ ಹೇಳುವುದಾದರೆ, ಸಾವಿರ ವರುಷಗಳ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ವಿದ್ವಜ್ಜನ ಸಮುದಾಯದಿಂದ ಜನ ಸಮುದಾಯದತ್ತ ಸಾಗಿಬಂದಿದೆ. ಈ ಪ್ರಕ್ರಿಯೆ ಕಾರಣವಾಗಿ ಅದು ವಾಚನಪಾತಳಿಯಿಂದ ಶ್ರವಣಪಾತಳಿಗೆ ನಡೆಯುತ್ತ ಬಂದಿತು. ಈಗ ಸಹಜವಾಗಿಯೇ ಸಾರ್ವಜನಿಕರು ಕೇಳಲು ಯೋಗ್ಯವಾದ ಗೇಯಬಂಧಗಳನ್ನು ಹುಡುಕುತ್ತ ಬರಲಾಯಿತು. ಇದರ ಫಲವೆಂಬಂತೆ ವಾರ್ಧಕ, ಭಾಮಿನಿಗಳು ಬಿಚ್ಚಿಕೊಂಡವು. ಇನ್ನೂ ಗೇಯತೆಯನ್ನು ಬಯಸಿದಾಗ ಸಾಂಗತ್ಯ ಸಾಕಾರಗೊಂಡು, ನೂರಾರು ಕೃತಿಗಳು ಸೃಷ್ಟಿಯಾದವು. ಒಂದು ನಾಟಕ ಕೃತಿಯನ್ನು ಕಣ್ಣಿನಿಂದ ಓದುವುದು ಬೇರೆ, ರಂಗದ ಮೇಲೆ ನೋಡುವುದು ಬೇರೆ. ಹಾಗೆಯೇ ಒಂದು ಗೇಯ ಬಂಧವನ್ನು ಕಣ್ಣಿನಿಂದ ಓದುವುದು ಬೇರೆ, ಕಿವಿಯಿಂದ ಕೇಳುವುದು ಬೇರೆ. ಅಂದರೆ ಗೇಯ ಬಂಧಗಳನ್ನು ಓದುವುದಕ್ಕಿಂತ ಕೇಳುವುದೇ ಈ ಕೃತಿಗಳಿಗೆ ಒದಗಿಸುವ ಸರಿಯಾದ ನ್ಯಾಯವೆನಿಸುತ್ತದೆ. ಈ ಕೇಳುವ ಪರಂಪರೆಯಲ್ಲಿ ಸಿರುಮನನ್ನು ಕುರಿತು ೩ ಕೃತಿಗಳು, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಕಂಠೀರವ ನರಸರಾಜ ವಿಜಯಗಳಂತೆ, ಕುಮಾರರಾಮನನ್ನು ಕುರಿತು ೫ ಕೃತಿಗಳು ಕನ್ನಡದಲ್ಲಿ ಹುಟ್ಟಿಕೊಂಡವು.

ವೀರ, ಪ್ರಾಚೀನ ಕಾಲದಲ್ಲಿ ಬಹುಮುಖ್ಯ ಮೌಲ್ಯವಾಗಿದ್ದಿತು. ವೀರನೊಬ್ಬ ಯುದ್ಧದಲ್ಲಿ ಮಡಿಯುತ್ತಲೇ ಒಂದೆಡೆ ವೀರಗಲ್ಲ ಪೂಜೆ ನಡೆದರೆ, ಇನ್ನೊಂದೆಡೆ ಸಾಹಿತ್ಯ (ಶಿಷ್ಟ/ಜಾನಪದ) ಮಾಧ್ಯಮದಲ್ಲಿ ಅವನ ಕೀರ್ತಿ ಪ್ರಸಾರಕಾರ್ಯ ನಡೆಯುತ್ತಿದ್ದಿತು. ಚಕ್ರವರ್ತಿಗಳಿಲ್ಲದ ಕರ್ನಾಟಕದಲ್ಲಿ ಸಂಭವಿಸಿದ ಚಿಕ್ಕಪುಟ್ಟ ಪಾಳೆಯಗಾರರ ಪರಸ್ಪರ ಘರ್ಷಣೆ ಮತ್ತು ಮುಸಲ್ಮಾನರ ಆಕ್ರಮಣಗಳಿಂದಾಗಿ ಈ ವೀರ ಮತ್ತು ಅದರ ಪ್ರಸಾರ ಇನ್ನೂ ಮಹತ್ವ ಪಡೆದವು. ಸಾಮಾನ್ಯವಾಗಿ 'ವೀರನ ಸಾವು ಕತೆಯಾಗಿ ಪರಿದುದು' ಎಂಬ ಶಾಸನ ಮಾತಿನಂತೆ ಸಾವನ್ನು ಸಾಹಿತ್ಯ ಮಾಡುವ ಮತ್ತು ಅದನ್ನು ಸಮಾಜದ ತುಂಬ 'ಪರಿಯಿಸುವ' ಸಲುವಾಗಿ ಚಾರಣ ಕವಿಗಳು, ಜಾನಪದ ನೀಲಗಾರರು (ಲಾವಣಿಕಾರರು) ಹುಟ್ಟಿಕೊಂಡರು.

ಹೀಗಾಗಿ ಕುಮಾರರಾಮನನ್ನು ಕುರಿತ ಎಲ್ಲ ಕೃತಿಗಳು ಸಾಂಗತ್ಯದಲ್ಲಿಯೇ ಹೆಪ್ಪು ಗಟ್ಟಿದವು. ಇವುಗಳಲ್ಲಿ ನಂಜುಂಡನದು ವಿದ್ವತ್ತು ಕಾರಣವಾಗಿ ಭಾಷಾಲಯ ಒಂದು ಕಡೆ, ಛಂದೋಲಯ ಇನ್ನೊಂದು ಕಡೆ ನಡೆದು, ಬಹಳಷ್ಟು ಸಲ ಹಿತವಾದ 'ಸಾಂಗತ್ಯಪಾಕ' ಅಲ್ಲಿ ಸಿದ್ಧವಾಗಲಿಲ್ಲ. ಮಿಕ್ಕವರು ಜಾನಪದ ಪ್ರಜ್ಞೆಯ ಕವಿಗಳಾದ ಕಾರಣ, ಜಾನಪದ ನೆಲೆಯ ಸಾಂಗತ್ಯದಲ್ಲಿ ಭಾಷಾಲಯ – ಛಂದೋಲಯಗಳು ಬಹುಮಟ್ಟಿಗೆ ಕೈಹಿಡಿದು ನಡೆಯಲು ಸಾಧ್ಯವಾಯಿತು. ಈ ಮಾತು ಕೊಮಾರರಾಮಯ್ಯನ ಚರಿತ್ರೆಗಿಂತ ಹಳೆಯ, ಹೊಸ ಕುಮಾರರಾಮನ ಸಾಂಗತ್ಯಗಳಿಗೆ ಹೆಚ್ಚು ಅನ್ವಯಿಸುತ್ತದೆ. ಕೆಲವೊಮ್ಮೆ ಆಶುಕವಿತ್ವದಂತೆ ಸಾಂಗತ್ಯಪದ್ಯಗಳು ರೂಪುಗೊಳ್ಳುತ್ತ ಹೋಗುತ್ತಲಿರುವುದು ಇಲ್ಲಿಯ ವಿಶೇಷತೆಯಾಗಿದೆ.

ಸಾಮಾನ್ಯವಾಗಿ ಕಾವ್ಯರಚನೆ ಮಾರ್ಗದಿಂದ ದೇಶಿಗೆ ಹೊರಳುತ್ತ ಹೋದಷ್ಟು ಏನು ಹೇಳಬೇಕು ಎಂಬುದು ಮುಖ್ಯವಾಗಿ, ಹೇಗೆ ಹೇಳಬೇಕೆಂಬುದು ಅಮುಖ್ಯವಾಗುತ್ತದೆ. ಆಗ

ಅದರ ಕಲಾತ್ಮಕತೆ ಗೌಣಸ್ಥಾನಕ್ಕೆ ಸರಿಯುತ್ತದೆ. ಈ ಮಾತಿಗೆ ಪ್ರಸ್ತುತ ಕೃತಿಯನ್ನು ಉದಾರಣೆಯಾಗಿ ಹೇಳಬಹುದು. ಇಲ್ಲಿ ಕಥಾನಿರೂಪಣೆಯೇ ಪ್ರಧಾನವಾಗಿ, ಕೆಲವೊಮ್ಮೆ ಮಾತ್ರ ಸಂದರ್ಭ ಇಲ್ಲವೆ ಪದ್ಯಗಳು ಸುಂದರ ಘಟಕಗಳಾಗಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಈ ಕೃತಿಯಲ್ಲಿಯ ಕುಮಾರರಾಮಯ್ಯನ ಮದುವೆಯ ಸಂದರ್ಭ ನಿದರ್ಶನವೆನಿಸಿದೆ. ಆಡಂಬರ, ವೈಭವಗಳೇನೂ ಇಲ್ಲದೆ, ಸ್ವಭಾವೋಕ್ತಿರೂಪದಲ್ಲಿ ಬಿಡಿಸಿದ ಮದುವೆ ಮುಂತಾದ ಆಚರಣೆ, ಜಾನಪದ ಮನಸ್ಸು – ಸಂಸ್ಕೃತಿಗಳು ಇಲ್ಲಿ ತುಂಬ ಸೊಗಸಾಗಿವೆ. ಇಂಥದೇ ಇನ್ನೊಂದು ಸಂದರ್ಭ ರತ್ನಾಜಿಯ ಮೋಹ. ಈ ಉತ್ಕಟ ಸನ್ನಿವೇಶವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ ಉತ್ತಮ ಪದ್ಯಗಳು ಅಲ್ಲಲ್ಲಿ ಕಾಣಸಿಗುತ್ತವೆ. ರಾಮಯ್ಯನ ಮರಣಕ್ಕಾಗಿ, ತಾಯಿ–ಅಕ್ಕ–ತಂಗಿಯರು ವ್ಯಕ್ತಪಡಿಸಿದ ಶೋಕ ಪ್ರಸಂಗವೂ ಇಂಥ ಇನ್ನೊಂದು ಉದಾಹರಣೆಯಾಗಿದೆ.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಬಹುದಾಗಿದೆ. ಸಾಹಿತ್ಯಕೃತಿಯ ಆಸ್ವಾದನೆ, ವಿಮರ್ಶೆಗಳು ನಮ್ಮಲ್ಲಿ ಸತ್ಯದಿಂದ ಒಂದಿಷ್ಟು ದೂರ ಸರಿದಂತೆ ಕಾಣುತ್ತವೆ. ದೃಶ್ಯ, ಶ್ರವ್ಯ ಎರಡೂ ಸಾಹಿತ್ಯಗಳನ್ನು ಆಯಾ ಮಾಧ್ಯಮಗಳಲ್ಲಿಯೇ ಆಸ್ವಾದಿಸಿದಲ್ಲಿ, ವಿಮರ್ಶಿಸಿದಲ್ಲಿ ಅವುಗಳಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಇಂದು ಅವುಗಳನ್ನು ವಾಚನಪಾತಳಿಗೆ ತಂದು ಆಸ್ವಾದಿಸುವ ವಿಮರ್ಶಿಸುವ ಸಂಪ್ರದಾಯ ಇತ್ತೀಚೆ ಹೆಚ್ಚು ಬೆಳೆದಿದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಸಾಂಗತ್ಯ ನಿಜಸ್ವರೂಪದಲ್ಲಿ ಕಾಣಿಸಿಕೊಳ್ಳುವುದು ಶ್ರವ್ಯಪಾತಳಿಯಲ್ಲಿವೇ. ಕೊಮಾರರಾಮಯ್ಯನ ಚರಿತ್ರೆಯ ಮೌಲ್ಯನಿರ್ಣಯಿಸುವಾಗ ಈ ಮಾತನ್ನು ಗಮನದಲ್ಲಿಡಬೇಕೆಂದು ಕಾಣುತ್ತದೆ.

ಸಂಸ್ಕೃತಿ

ಸಾಹಿತ್ಯವೆನ್ನುವುದು ಸಮಕಾಲೀನ ವಾಸ್ತವ, ಸಾರ್ವಕಾಲೀನ ಆದರ್ಶಗಳ ಪ್ರಸಾರಮಾಧ್ಯಮವಾಗಿದೆ. ಸಾಮಾನ್ಯವಾಗಿ ಎಲ್ಲ ಕೃತಿಗಳಲ್ಲಿ ಸಾರ್ವಕಾಲೀನ ಆದರ್ಶ ಚಿತ್ರಿತವಾಗಿದ್ದರೆ, ಕೆಲವು ಕೃತಿಗಳಲ್ಲಿ ಮಾತ್ರ ಸಮಕಾಲಿನ ವಾಸ್ತವ ದಾಖಲಾಗಿ, ಅವು ಸಾಂಸ್ಕೃತಿಕ ಮಹತ್ವ ಪಡೆಯುತ್ತವೆ. ಇಂಥ ಕೃತಿಗಳೆಂದರೆ ವಡ್ಡಾರಾಧನೆ, ಪಂಪಭಾರತ, ಬಸವಣ್ಣನವರ ವಚನ, ಹರಿಹರನ ರಗಳೆ, ಬ್ರಹ್ಮಶಿವನ ಸಮಯ ಪರೀಕ್ಷೆ ಇತ್ಯಾದಿ. ಈ ಮಾಲಿಕೆಯಲ್ಲಿ ಕೊಮಾರ ರಾಮಯ್ಯನ ಚರಿತ್ರೆ ತಪ್ಪದೇ ಸೇರಿಕೊಳ್ಳುತ್ತದೆ.

ಸಂಸ್ಕೃತಿಯೆನ್ನುವುದು ಸಮೂಹ ಸಮ್ಮತ ಜೀವನಪದ್ಧತಿಯಾಗಿದೆ. ಸಾಮಾನ್ಯವಾಗಿ ಇದು ಪ್ರಕ್ರಿಯಾತ್ಮಕವಾಗಿದ್ದು, ತನ್ನ ಕಾಲದ ಆದರ್ಶ–ವಾಸ್ತವಗಳ ನಿರಂತರ ಕ್ರಿಯೆಯಾಗಿದೆ. ಇದು ಈ ಕೃತಿಯಲ್ಲಿ ಧಾರ್ಮಿಕ, ಆಚರಣಾತ್ಮಕ, ಸಾಮಾಜಿಕ, ರಾಜಕೀಯ ಮೊದಲಾದ ಕ್ಷೇತ್ರಗಳನ್ನು ವ್ಯಾಪಿಸಿದೆ.

ಧರ್ಮಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಕಂಪಿಲ ಸೋಮೇಶ್ವರ, ಜಟ್ಟಂಗಿ ರಾಮೇಶ್ವರ ಈ ಮನೆತನಕ್ಕೆ ಮುಖ್ಯದೇವತೆಗಳೆನಿಸಿದ್ದರು. ಹೀಗಾಗಿ ಈ ಕಾವ್ಯದ ತುಂಬ ಹೆಚ್ಚಾಗಿ ಶಿವಭಕ್ತಿವಾತಾವರಣವೇ ತುಂಬಿದೆ. ಕಂಪಿಲ ಸೋಮೇಶ್ವರನ ಪ್ರಸಾದದಿಂದ ಕಂಪಿಲರಾಯ, ಜಟ್ಟಂಗಿ ರಾಮೇಶ್ವರನ ಪ್ರಸಾದದಿಂದ ಕುಮಾರರಾಮ ಹುಟ್ಟಿದರೆಂಬುದು ಮಕ್ಕಳ ಜನನದ ಬಗೆಗೆ ಜನರಿಗಿದ್ದ ನಂಬಿಕೆಯನ್ನು ದ್ಯೋತಿಸುತ್ತದೆ. ಕ್ಷುದ್ರದೇವತೆಗಳಿಗೆ ಕುರಿ ಕೋಳಿ ಕೋಣಗಳನ್ನು ಬಲಿ ಕೊಡುವುದು

ಇಲ್ಲಿ ಅನೇಕ ಬಾರಿ ಗೋಚರಿಸುತ್ತದೆ. ಇಷ್ಟಾರ್ಥ ಸಾಧನೆಗಾಗಿ ರತ್ನಾಜಿ ಹಲವು ದೈವಗಳನ್ನು ಹಲವು ಬಗೆಯಲ್ಲಿ ಬೇಡಿಕೊಳ್ಳುವುದು ಇಲ್ಲಿ ಕಂಡು ಬರುತ್ತದೆ. ರಾಜಪರಿವಾರ ಜಟಂಗಿ ರಾಮೇಶ್ವರನ ದರ್ಶನಕ್ಕಾಗಿ ಹೋಗುವಾಗಿನ ವ್ಯವಸ್ಥೆ, ಆ ಕ್ಷೇತ್ರದಲ್ಲಿ ಜರುಗಿಸಿದ ವಿವಿಧ ಆಚರಣೆಗಳು, ಕುಮಾರರಾಮಯ್ಯನ ಮದುವೆಯಲ್ಲಿ ನಡೆದ ಮಂಗಲಕಾರ್ಯಗಳು ಆ ಕಾಲದ ಚಿತ್ರವನ್ನು ಢಾಳವಾಗಿ ತೋರಿಸುತ್ತದೆ.

ರಾಜಧರ್ಮಕ್ಕೆ ಬಂದರೆ ಅಂದಿನ ರಾಜಸತ್ತಾಯುಗದ ಚಿತ್ರ ಇಲ್ಲಿ ಸ್ಪಷ್ಟವಾಗಿ ಮೂಡಿದೆ. 'ವೀರಭೋಜ್ಯಾ ವಸುಂಧರಾ' ಎಂಬಂತೆ ತೋಳ್ಬಲದ ಮೇಲೆ ಅಂದಿನ ರಾಜ್ಯಭಾರ ನಡೆದಿದ್ದಿತು. ಸಣ್ಣಪುಟ್ಟ ಪಾಳೆಯಗಾರರನ್ನು ಕಂಪಿಲ ಅರಸು ಸೋಲಿಸಿದುದು, ದಿಲ್ಲಿ ಸುರತಾಳ-ಕಂಪಿಲರಾಯ-ಕಾಕತೀಯ ಪ್ರತಾಪರುದ್ರ-ಹೊಯ್ಸಳ ವೀರಬಲ್ಲಾಳರು ತಮ್ಮ ಪ್ರಭುತ್ವವಕ್ಕಾಗಿ ಮೇಲಾಟ ನಡೆಸಿದುದು, ಸಮಕಾಲೀನ ಪ್ರಭುಶಕ್ತಿ ಸ್ಪರ್ಧೆಗೆ ನಿದರ್ಶನವೆನಿಸಿವೆ. 'ರಾಯರ ಗರ್ಭದೊಳ್ ಜನಿಸಿದ ಬಳಿಕಿನ್ನು । ಕಾಯದಾಸೆಯ ಬಿಡಬೇಕು ॥ ಆಯತವಾಗಿ ರಣಾಗ್ರದೊಳ್ ಕಡಿದಾಡಿ । ಸಾಯಬೇಕು ಯುಕ್ತಿಗಳುಂಟು' ಎಂಬ ನೀತಿ ಅಂದು ಬೆಲೆ ಪಡೆದಿದ್ದ ಕಾರಣ, ಅನೇಕ ಯೋಧರ ವೀರಮರಣ ಇಲ್ಲಿ ಚಿತ್ರಿತವಾಗಿದೆ. ವೀರಪತ್ನಿಗೆ ನಿದರ್ಶನವೆಂಬಂತೆ ಸ್ತ್ರೀಯರು 'ಮಾಸ್ತಿ'ಯಾಗಯವ ವಿವರಗಳು ಇಲ್ಲಿ ದಟ್ಟವಾಗಿ ಮೂಡಿವೆ. ಇಲ್ಲಿ ಎರಡು ಸಲ ಇಂಥ ದೃಶ್ಯಗಳಿವೆ. ಕೈಯಲ್ಲಿ ಕನ್ನಡಿ, ಲಿಂಬೆಹಣ್ಣು, ಕಠಾರಿ, ಮಳಲ ಗೌರಿಯನ್ನು ಪೂಜಿಸುವುದು, ಗಂಡನ ಗುಣಗಾನ ಮಾಡುವ ಕಿಚ್ಚನ ಸುತ್ತ ಕುಣಿಯುವುದು, ಕಟ್ಟೆಯೇರಿ ಕಿಚ್ಚಿನಲ್ಲಿ ಧುಮುಕುವುದು ಇತ್ಯಾದಿ ಅಪೂರ್ವ ಚಿತ್ರಗಳು ಇಲ್ಲಿವೆ. ಸೋಲಿನ ಕೊನೆಯ ಹಂತದಲ್ಲಿ ಕಾಟಣ್ಣ ತನ್ನ ಹೆಂಡತಿಯನ್ನು ಕಠಾರಿಯಿಂದ ಇರಿಯುವುದೂ, ಸುರತಾಳನ ಮಗಳು ರಾಮಯ್ಯನ ರುಂಡವನ್ನು ಉಡಿಯಲ್ಲಿ ಇಟ್ಟುಕೊಂಡು ಚಿತಾಪ್ರವೇಶಕ್ಕೆ ಸಿದ್ಧಳಾಗುವುದು, ಗಮನಿಸತಕ್ಕ ಸಂಗತಿಯಾಗಿದೆ. ಕಳ್ಳರಾಮನ ಪ್ರಸಂಗವಂತೂ ವೇಳಿವಾಳಿ ಸಂಪ್ರದಾಯವನ್ನು ನೆನಪಿಸುತ್ತದೆ. ಹೊಸ ರಾಜಧಾನಿಯ ನಿರ್ಮಾಣಸ್ವರೂಪ ಮತ್ತು ಅದರ ಬೇರೆ ಬೇರೆ ಭಾಗಗಳ ಚಿತ್ರ ಕುಮ್ಮಟ ದುರ್ಗ ಸಂಧೀಯಲ್ಲಿ ದಟ್ಟವಾಗಿ ಮೂಡಿ ನಿಂತಿವೆ.

ಯುದ್ಧಕ್ಕೆ ಸಂಬಂಧಪಟ್ಟ ಕೋಟೆ, ಕೊತ್ತಳ, ಅಗಳು, ಅನೇಕ ಬಗೆಯ ಆಯುಧಗಳು, ಪೆಟಲು ಹೆಸರಿನ ಮದ್ದು ಉಪಯೋಗಿಸುವ ಬಂದೂಕು, ಯುದ್ಧದ ಪೂರ್ವಸಿದ್ಧತೆ, ಯುದ್ಧರಂಗ, ಸೈನ್ಯಸಂಗ್ರಹ ರೀತಿ, ಸೈನಿಕರ ಪೋಷಣೆ ಇತ್ಯಾದಿಗಳು ಸಮಕಾಲೀನ ಯುದ್ಧ ಜೀವನದ ಚಿತ್ರವನ್ನೀಯುತ್ತವೆ. ದಾಳಿ ಸಂದರ್ಭದಲ್ಲಿ ಸಾಮಾನ್ಯ ಕುಟುಂಬಗಳು ಅನುಭವಿಸುತ್ತಲಿದ್ದ ಬವಣೆ, ಗುಳೆ ಹೋಗುತ್ತಲಿದ್ದ ರೀತಿ ದಟ್ಟವಾಗಿ ಮೂಡಿದೆ. ಕುಮಾರರಾಮನ ಪಟ್ಟಾಭಿಷೇಕ ಸಂಧಿಯಲ್ಲಿ ರಾಜ್ಯಾಡಳಿತದ ವಿವರಗಳು, ಆಸ್ಥಾನದ ಶಿಷ್ಟಾಚಾರಗಳು ದಾಖಲವಾಗಿವೆ.

ಮೊರೆ ಹೊಕ್ಕವರ ಕಾಯ್ವುದು ರಾಜಸತ್ತಾಯುಗದ ಮುಖ್ಯ ಲಕ್ಷಣ. ಕುಮ್ಮಟದುರ್ಗದ ಯುದ್ಧಕ್ಕೆ ಮುಖ್ಯ ಕಾರಣ, ಮೊರೆ ಹೊಕ್ಕ ಬಹಾದ್ದೂರ (ಬಹಾವುದ್ದೀನ)ನಿಗೆ ಕುಮಾರರಾಮ ರಕ್ಷಣೆ ಕೊಟ್ಟುದು. ಈ ಒಂದು ವಿಷಯ ದಿಲ್ಲಿ ಸುಲ್ತಾನನ್ನು ಎದುರುಹಾಕಿಕೊಳ್ಳುವಂತೆ ಮಾಡಿತು. ಒಂದಲ್ಲ, ಎರಡಲ್ಲ, ಮೂರು ಸಲ ಯುದ್ಧವೇರ್ಪಟ್ಟು, ಅಭೇದ್ಯ ಕುಮ್ಮಟ ದುರ್ಗದ ನಾಶಕ್ಕೆ ಇದು ಕಾರಣವಾಯಿತು.

ರಾಜಸತ್ತಾಯುಗದ ಶೌರ್ಯಮೌಲ್ಯಕ್ಕೆ ಮೆರಗು ಬರುವುದು, ಪರಸ್ತ್ರೀ ವಿಷಯದ ಶುಚಿತ್ವದಿಂದ ಎಂದು ನಂಬಿದ್ದ ಕಾಲವದು. ಹೀಗಾಗಿ ಈ ಪೂರ್ವದ ರಾಜರ ಶೌರ್ಯಘಟನೆಗಳಿಗಿಂತ ಶುಚಿಘಟನೆಯನ್ನೂ ಒಳಗೊಂಡ ಕುಮಾರರಾಮನ ಜೀವನ ಕವಿಗಳಿಗೆ ಹೆಚ್ಚು ಇಷ್ಟವಾಯಿತು, ಜನತೆಗೆ ಆದರ್ಶವಾಯಿತು. ಕುಮಾರರಾಮನ ಜೀವನದಲ್ಲಿ ಹೆಣ್ಣು ಮೂರು ರೂಪಗಳಲ್ಲಿ ಕಾಡಿದೆ. ಕಂಪಿಲನ ಕಿರಿಯ ರಾಣಿ ರತ್ನಾಜಿ 'ಮುನಿದರೆ ಮಾರಿಯಾಗಿ', ಸುರಿತಾಳನ ಮಗಳು ಬಾಬಮ್ಮ 'ವಿಫಲ ಪ್ರೇಮಿಯಾಗಿ', ಏರಿಬಂದ ಮಾದಿಗಿತ್ತಿ 'ಜೀವಹಂತಕಿಯಾಗಿ' ಅವನ ಸುತ್ತ ಪಾತ್ರವಾಡಿದ್ದಾರೆ.* ಇವರಲ್ಲಿ ಮೊದಲಿನ ಇಬ್ಬರ ವಿಷಯದಲ್ಲಿ ಅವನು ಶುಚಿಮೌಲ್ಯವನ್ನು ಮೆರೆದು, ತನ್ನ 'ಪರನಾರಿ ಸೋದರ' ಬಿರುದಿಗೆ ಅರ್ಥ ತುಂಬಿದ್ದಾನೆ.

ಈತನ ಹೆಸರು ರಾಮ. 'ಕುಮಾರ'ವೆನ್ನುವುದು ವಿಶೇಷಣ. ಇದು ಷಣ್ಮುಖನ ಹೆಸರು. ಬ್ರಹ್ಮಚಾರಿಯಾಗಿರುವ ಷಣ್ಮುಖ ಶುಚಿಯೂ ಹೌದು, ಶೂರನೂ ಹೌದು. ಹೀಗಾಗಿ 'ಕುಮಾರ' ವಿಶೇಷಣವನ್ನು ರಾಮನಿಗೆ ಅಂಟಿಸಲಾಯಿತು. ಕರ್ನಾಟಕದಲ್ಲಿ ಈ ಪರಂಪರೆಗೆ ಕುಮಾರರಾಮನೇ ಮೊದಲಿಗನಾದ. ಇದರ ಮುಂದುವರಿಕೆಯೆಂಬಂತೆ ಸಿರುಮನ ಸಾಂಗತ್ಯದಲ್ಲಿ ಕುಮಾರಮಲ್ಲ, ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಕುಮಾರ ತೋಂಟದರಾಯ ಎಂಬ ಹೆಸರುಗಳು ಕಾಣಿಸಿಕೊಳ್ಳುವುದನ್ನು ಅವಶ್ಯ ಗಮನಿಸಬೇಕು.

ರಾಜರ ಇನ್ನೊಂದು ಲಕ್ಷಣ 'ಶೃಂಗಾರ ಜೀವನ.' ಕುಮಾರರಾಮನ ಸಾಂಗತ್ಯದಲ್ಲಿ ಕಂಪಿಲರಾಯನು ಹರಿಯಲದೇವಿಯನ್ನು ಹೊರತುಪಡಿಸಿ, ಇನ್ನೂ ಹಲವರನ್ನು ಮದುವೆಯಾದುದು, ಹೆಚ್ಚಿನದಾಗಿ ತಾನು ವಯೋವೃದ್ಧನಾಗಿದ್ದರೂ ಯುವತಿ ರತ್ನಾಜಿಯನ್ನು ಮನದನ್ನೆಯಾಗಿ ಕರೆತಂದುದು, ಇಲ್ಲಿಯ ಮುಖ್ಯ ಅಂಶವೆನಿಸಿವೆ. ರತ್ನಾಜಿ ಕುಮಾರ ರಾಮನನ್ನು ಪ್ರೇಮಿಸಿದ ಪ್ರಸಂಗವಂತೂ ಈ ಕಾವ್ಯದ ಮುಖ್ಯ ಆಕರ್ಷಣೆಯೆನಿಸಿದೆ. ಇದಲ್ಲದೆ ಬೇಟೆ, ಜೂಜು, ಚೆಂಡಿನಾಟ ನೋಡಲು ಬಂದ ಸೂಳೆಯರ ವರ್ಣನೆಗಳು ಇಲ್ಲಿಯ ಶೃಂಗಾರ ವಿಲಾಸ ಜೀವನದ ಇನ್ನೊಂದು ಮುಖವೆನಿಸಿವೆ.

ಹೀಗೆ ಮಧ್ಯಕಾಲೀನ ಕರ್ನಾಟಕದ ವೀರಜೀವನವನ್ನು, ಅದಕ್ಕೆ ಪೂರಕವಾದ ಎಲ್ಲ ಮುಖಗಳನ್ನು ಚಿತ್ರಿಸುವ ಮಹತ್ವದ ಕೃತಿಯಾಗಿದೆ, 'ಕೊಮಾರ ರಾಮಯ್ಯನ ಚರಿತ್ರೆ.'

ಪರಿಷ್ಕರಣ

ಕುಮಾರರಾಮನನ್ನು ಕುರಿತ ೫ ಕೃತಿಗಳಲ್ಲಿ ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯ, ಕೊಮಾರರಾಮಯ್ಯನ ಚರಿತ್ರೆ ಈ ಕೃತಿಗಳು ಪಾಠಾಂತರ ಸ್ವರೂಪದಿಂದ ರೂಪಾಂತರ ಸ್ವರೂಪಕ್ಕೆ ಹೊರಳುವ ಪ್ರಮಾಣದಲ್ಲಿ ಆಕಾರ ಪಡೆದುಕೊಂಡಿವೆ. ಸಾಲದುದಕ್ಕೆ ಹಾಡುವುದರಿಂದ ಉಂಟಾಗುವ ಹ್ರಸ್ವದೀರ್ಘ ವ್ಯತ್ಯಾಸಗಳೂ ಇಲ್ಲಿ ತಲೆಹಾಕಿವೆ.

---

* ಈ ಮಾದಿಗಿತ್ತಿಯು ಸಗರದಲ್ಲಿ ನೆಲೆ ಸಿಂತಿದ್ದ ಶೇಖ ಸೂಫಿ ಸರಮಸ್ತ ಎಂಬುವನ ಮಗಳೆಂದು ಈಟನ್ ಅವರು ತಮ್ಮ 'ಸೂಫೀಜ್ ಆಫ್ ಬಿಜಾಪುರ' ಪುಸ್ತಕದಲ್ಲಿ (ಪುಟ ೨೨-೨೭) ಹೇಳಿದ್ದಾರೆ.

ಇಂಥ ಸಂದರ್ಭದಲ್ಲಿ ನಿಯತ ಭಿನ್ನಪಾಠಗಳಿಂದ ಕೂಡಿದ ಮಾರ್ಗಕಾವ್ಯಗಳ ಸಂಪಾದನೆಗೆ ಬಳಸುವ ನಿಯಮಗಳನ್ನೇ ಇಂಥ ದೇಶೀಕಾವ್ಯಗಳಿಗೆ ಬಳಸುವುದು ಸರಿಯಲ್ಲವೆಂದು ತೋರುತ್ತದೆ. ಹೀಗಾಗಿ ದೇಶೀಕಾವ್ಯ ಸಂಪಾದನೆಯನ್ನು ಕುರಿತು ಒಂದು ಮಾತು : ಮಾರ್ಗಕಾವ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದಷ್ಟೂ ಪಾಠ ಹೆಚ್ಚು ಶುದ್ಧವಾಗುತ್ತದೆ. ದೇಶೀಕಾವ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದ್ದಷ್ಟೂ ಪಾಠ ಹೆಚ್ಚು ಅಶುದ್ಧವಾಗುತ್ತದೆ. ಈ ಸತ್ಯವನ್ನು ಅರ್ಥಮಾಡಿಕೊಳ್ಳದೆ ಈವರೆಗೆ ಸಂಪಾದಿಸಿದ ನಂಬಿಯಣ್ಣನ ರಗಳೆ, ಸೋಮನಾಥ ಚಾರಿತ್ರ ಮೊದಲಾದ ದೇಶೀ ಕಾವ್ಯಗಳ ಸಂಪಾದನೆ ಮಿಶ್ರಪಾಠಕ್ಕೆ ಗುರಿಯಾಯಿತೆಂದೇ ಹೇಳಬೇಕು. ಆದುದರಿಂದ ಇನ್ನು ಮೇಲೆ ಈ ಹಾದಿಯನ್ನು ಬಿಟ್ಟು ಕಾಲದೃಷ್ಟಿಯಿಂದ ಪ್ರಾಚೀನ, ಭಾಷಾದೃಷ್ಟಿಯಿಂದ ಶುದ್ಧ, ಪ್ರತಿದೃಷ್ಟಿಯಿಂದ ಪೂರ್ಣ, ಕಥೆಯ ದೃಷ್ಟಿಯಿಂದ ಸಮಗ್ರವಾಗಿರುವ ಒಂದು ಪ್ರತಿಯನ್ನು ಮಾತ್ರ ಆಯ್ದುಕೊಂಡು, ಸಾಧ್ಯವಿದ್ದಲ್ಲಿ ಲಿಪಿಕಾರನ ಭಾಷಾದೋಷಗಳನ್ನು ನಿವಾರಿಸಿ, ಅವಶ್ಯವಿದ್ದಲ್ಲಿ ಮಾತ್ರ ಬೇರೆ ಒಂದೋ ಎರಡೋ ಉತ್ತಮ ಪ್ರತಿಗಳಿಂದ ಶುದ್ಧಪಾಠ ಸ್ವೀಕರಿಸಬಹುದು. ತೀರ ಅನಿವಾರ್ಯ ಪ್ರಸಂಗದಲ್ಲಿ ಊಹೆ ಮಾಡಬಹುದು. ಇದು ದೇಶೀಕಾವ್ಯ ಸಂಪಾದನೆಯ ಸರಿಯಾದ ಕ್ರಮ. ಇದರಿಂದ ಕೃತಿ ಮಿಶ್ರಪಾಠಕ್ಕೆ ಗುರಿಯಾಗುವುದನ್ನು ತಪ್ಪಿಸಿ, ಕೊನೆಯ ಪಕ್ಷ ಒಂದು ಪ್ರತಿಯನ್ನಾದರೂ ಶುದ್ಧವಾಗಿ ಉಳಿಸಿಕೊಟ್ಟಂತಾಗುತ್ತದೆ.

ಈ ದೃಷ್ಟಿಯಿಂದ ನಾವು ಚಿತ್ರದುರ್ಗದ ಪ್ರೊ. ಬಿ. ರಾಜಶೇಖರಪ್ಪ ಅವರು ಪೂರೈಸಿದ ತಾಳೆಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಅವಶ್ಯವೆನಿಸಿದಲ್ಲಿ ಅಂದರೆ ಪಾಠ ಅರ್ಥವಾಗದಲ್ಲಿ, ಮತ್ತು ತ್ರುಟಿತವಾಗಿದ್ದಲ್ಲಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಕಾಗದ ಪ್ರತಿಯ ನೆರವು ಪಡೆದಿದ್ದೇವೆ. ಹಳೆಯ ಕುಮಾರರಾಮನ ಸಾಂಗತ್ಯ, ಹೊಸ ಕುಮಾರರಾಮನ ಸಾಂಗತ್ಯಗಳ ಸುಮಾರು ೩೦೦ ಪದ್ಯಗಳು ಇಲ್ಲಿರುವುದರಿಂದ, ಆ ಕಾವ್ಯಗಳ ಪಾಠವನ್ನೂ ಗಮನಿಸಿದ್ದೇವೆ. ಹೀಗೆ ಪಡೆದ ಸಹಾಯದ ಸೂಚನೆಗಾಗಿ ಯಾವ ಚಿಹ್ನೆಯನ್ನೂ ಬಳಸಿಲ್ಲ. ಇಷ್ಟಾಗಿಯೂ ತೃಪ್ತಿ ಸಿಗದ ಪಕ್ಷದಲ್ಲಿ ಊಹೆಗೆ ಶರಣುಹೋಗಿ, ಚೌಕಕಂಸದಲ್ಲಿ ಅದನ್ನು ನಮೂದಿಸಿದ್ದೇವೆ. ಇದನ್ನು ಮೀರಿಯೂ ಕೆಲವು ಪಾಠಸಮಸ್ಯೆಗಳು ಉಳಿದುಕೊಂಡಿವೆಯೆಂದು ತಿಳಿಸಬಯಸುತ್ತೇವೆ.

ಹಸ್ತಪ್ರತಿ ವಿವರ

ಪ್ರೊ. ಬಿ. ರಾಜಶೇಖರಪ್ಪ ಅವರ ಪ್ರತಿ : ಚಿತ್ರದುರ್ಗದ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಬಿ. ರಾಜಶೇಖರಪ್ಪ ಅವರ ಹತ್ತಿರ ಇದ್ದ ತಾಳೆ ಪ್ರತಿ. ಈಗ ಇದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿದೆ. ಆಕಾರ ೧೮" x ೨". ಪ್ರತಿಯ ಅಂಚು ಅಲ್ಲಲ್ಲಿ ಮುರಿದಿವೆ. ಲಿಪಿಕಾರ ಅವಸರದಲ್ಲಿ ಪದ್ಯಗಳನ್ನು ಅಪೂರ್ಣರೂಪದಲ್ಲಿ ಬರೆದಿದ್ದಾನೆ. ಕೆಲವೊಮ್ಮೆ ಸಾಲುಗಳು ಪುನರುಕ್ತವಾಗಿದೆ.

ಆದಿ: ಶ್ರೀ ಗುರುವೆ ಗತಿ. ಶ್ರೀ ವಿಜಯಭ್ಯುದಯ ಶಾಲಿವಾಹನ ಸಖಾಬ್ದ ೧೭೩೩ನೇ ವಿರೋಧಿ ಸಂವತ್ಸರದ ಚೈತ್ರ ಬಹುಳ ೯ ಸೋಮವಾರ ದಿವ್ಸ ಪ್ರಥಮಾರಂಭವಂ ಮಾಡಿ ಕೊಮರ ರಾಮಯ್ಯನ ಚರಿತ್ರವ ಬರವುದಕ್ಕೆ ಶುಭಮಸ್ತು ಶೋಭನಮಸ್ತು ಆಯುರಾರೋಗ್ಯ

ಐಶ್ವರ್ಯ ಮಸ್ತು. ನಿರ್ವಿಘ್ನಮಸ್ತು. ಶ್ರೀ ವಿನಾಯಕ ಮಂಗಳಂ ಬವತಂತುತೆ. ಬಿಳಿಜೋಡು ಮುಖ್ಯ ಪ್ರಾಣಯ ನಮಃ ಶ್ರೀ ಗಿರಿಜೇಶ್ವರಯ ನಮಃ. ರಾಗ ತಮ್ಮಿಚ್ಚೆ. ಶ್ರೀ ಗಿರಿಜಾಶಂಬು ಜಗದೀಶನಾಯಕ ಭೋಗಿಭೂಷಣ ಭಾಳನೇತ್ರ.

ಅಂತ್ಯ : ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷಂಗಳು ೧೭೨೩ನೆ ವಿರೋಧಿ ಸಂವತ್ಸರ ಜೇಷ್ಠ ಶು ೧೨ ಮಂದವಾರದ ಗಳಿಗೆ ೧೬ರೊಳಗೆ ಪರನಾರಿ ಸೋದರನಾದಂತ ಕೊಮಾರ ರಾಮಯ್ಯನ ಚಾರಿತ್ರ ಸಂಪೂರ್ಣವಾಗಿ ಮುಗಿಯಿತು ಶ್ರೀ. ಈ ಪುಸ್ತಕವ ಬರದಾಥ ಥ ಥ ಥ ಈರಣ್ಣನ ಕುಮಾರನಾದಂತ ಸಣ್ಣಮಲ್ಲಪ್ಪ ತನ್ನ ಕುಮಾರನಾದಂತ ಸ್ತಿರಂಜೀವಿ ಮಲ್ಲಪ್ಪಗೆ ಧನ ಕನಕ ವಸ್ತು ವಾಹನವಾಗಿ ಸಂತೋಷದಿಂದ ಓದಿಕೊಳ್ಳುವುದಕ್ಕೆ ಬರಕೊಟ್ಟಾತ ಬಿಳಿಜೋಡ ಓದಿಸುವ ಭೀಮಪ್ಪ ಬರದುಕೊಟ್ಟದು. ಬಿಳಿಜೋಡ ಮುಖ್ಯಃ ಪ್ರಾಣಾಯ ನಮಃ. ಕಣೆಕಲ್ಲ ಸಿದ್ದೇಶಾಯ ನಮಃ ಶ್ರೀ ಶ್ರೀ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರತಿ : ಇದು ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ ಸಿಕ್ಕಿದ್ದ ಕಾಗದ ಪ್ರತಿಯ ನಕಲು. ಮೂಲತಃ ಈ ನಕಲು ಡಾ. ಜಿ. ವರದರಾಜರಾವ್ ಅವರಿಗೆ ಸಂಬಂಧಿಸಿದುದು. ಇದರ ಝೆರಾಕ್ಸ್ ಪ್ರತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ದುರ್ದೈವದ ಸಂಗತಿಯೆಂದರೆ ಈ ಝೆರಾಕ್ಸ್ ಪ್ರತಿಗೆ ಮೂಲವಾಗಿದ್ದ ಕನ್ನಡ ಅಧ್ಯಯನ ಸಂಸ್ಥೆಯ ಕಾಗದ ಪ್ರತಿಯೂ ಇಂದು ಅಲ್ಲಿ ಸಿಗುತ್ತಿಲ್ಲ. ಮತ್ತೂ ದುರ್ದೈವದ ಸಂಗತಿಯೆಂದರೆ ಈ ಕಾಗದ ಪ್ರತಿಗೆ ಮೂಲವಾಗಿದ್ದ ಹುಲ್ಲೂರ ಅವರು ದೊರಕಿಸಿಕೊಂಡಿದ್ದ ಕಾಗದ ಪ್ರತಿ ಎಂದೋ ಕಳೆದುಹೋಗಿದೆ. ಹೀಗಾಗಿ ಈಗ ಡಾ. ವರದರಾಜರಾವ್ ಅವರು ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ಕೊಟ್ಟಿರುವ ಹುಲ್ಲೂರ ಅವರ ಪ್ರತಿಯ ಪರಿಚಯ ಕೊಡುವುದೇ ಇಲ್ಲಿ ನಮಗೆ ಅನಿವಾರ್ಯವಾಗಿದೆ. 'ನಾಗಸಂಗಯ್ಯ ರಚಿತವೆಂದು ಸೂಚಿಸಿರುವ ಪ್ರತಿಯಲ್ಲಿ ೨೫ ಸಂಧಿಗಳು ಸಮಗ್ರವಾಗಿವೆ. ಈ ವೇಳೆಗಾಗಿಯೇ ಪದ್ಯಗಳ ಸಂಖ್ಯೆಯನ್ನು ೨೫೭೩ ಎಂದು ಸೂಚಿಸಲಾಗಿವೆ. ಇಲ್ಲಿಗೆ ಕಾಟಣ್ಣನ ಮರಣ ಪ್ರಸಂಗ ಪೂರ್ಣವಾಗುತ್ತದೆ. ೨೬ನೆಯ ಸಂಧಿಯ ಮಂಗಳ ಪದ್ಯವು ಮಾತ್ರ ಉಲ್ಲೇಖಿತವಾಗಿ ಪ್ರತಿ ಇಲ್ಲಿಗೇ ನಿಲ್ಲುತ್ತದೆ.'

ಕೃತಜ್ಞತೆ

ಕುಮಾರರಾಮನನ್ನು ಕುರಿತ ಅಪ್ರಕಟಿತ ನಾಲ್ಕು ಕೃತಿಗಳ ಪರಿಷ್ಕರಣ ಶ್ರೇಣಿಯ ಈ ಎರಡನೆಯ ಸಂಪುಟಕ್ಕೆ ಹಸ್ತಪ್ರತಿಯನ್ನು ಪೂರೈಸಿದ ಪ್ರೊ. ಬಿ. ರಾಜಶೇಖರಪ್ಪ (ಚಿತ್ರದುರ್ಗ), ಪ್ರೊ. ಸಿ. ಸಿ. ಸಿದ್ಧಾಶ್ರಮ (ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು) ಅವರಿಗೆ, ಸೂಕ್ತ ನೆರವು ನೀಡಿದ ಶ್ರೀಮತಿ ವೈ. ಸಿ. ಭಾನುಮತಿ ಅವರಿಗೆ ಕೃತಜ್ಞತೆಗಳು.

ಈ ಕೃತಿ ಪ್ರಕಟಣೆಗೆ ಅವಕಾಶ ಮಾಡಿಕೊಟ್ಟ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೂ, ಪ್ರಸಾರಾಂಗದ ಮಾಜಿ ನಿರ್ದೇಶಕರಾದ ಪ್ರೊ. ಎ. ವಿ. ನಾವಡ ಅವರಿಗೂ ವಂದನೆಗಳು.

ಈ ಕೃತಿಯ ಮುದ್ರಣಕಾರ್ಯದಲ್ಲಿ ನೆರವಾದ ಶ್ರೀ ಕೆ. ಎಲ್. ರಾಜಶೇಖರ್, ಅಚ್ಚುಕಟ್ಟಾಗಿ ಮುದ್ರಿಸಿದ ಕೈಲಾಸ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಎಂ. ರಾಜಶೇಖರ್ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ನೆನೆಕೆಗಳು ಸಲ್ಲುತ್ತದೆ.

–ಎಂ. ಎಂ. ಕಲಬುರ್ಗಿ

❖❖

*

ಪರಿವಿಡಿ

❖❖

ಸಂಧಿ : ೧

❖

ಮುಮ್ಮಡಿ ಸಿಂಗ–ಕಂಪಿಲರ ವೃತ್ತಾಂತ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ಶ್ರೀ ಗೌರಿ[ಯರ್ಧಾಂ]ಗ ಭಾ[ಗೀ]ರಥೀಮೌಳಿ ।
ನಾಗಭೂಷಣ ಪರಮೇಶ ।
ಆಗಮಾತೀತ ಪರಮಋಷಿಮುನಿವಂದ್ಯ
ಬೇಗದಿಂ ಕೊಡು ಮತಿಗಳನು ॥೨॥

[ದು]ಷ್ಟಾರಿಮದಭಂಗ ದುರಿತಸಂಹರ[ಶೃಂಗ]
ಸೃಷ್ಟಿಗಧಿಕ ಶಂಭುಲಿಂಗ
ಅಷ್ಟದಿಕ್ಪಾಲಕರೊಡೆಯ ಗೌರೀಶನೆ
ಸೃಷ್ಟಿಸು ಮತಿಗೆ ಮಂಗಳವ ॥೩॥

ಸತಿಯರೊಳಗೆ ರೂಪವತಿಯ ಹೆಚ್ಚಿನ ಪುಣ್ಯ
ವತಿಯಾದಳಾ ಪಾರ್ವತಿಯ ।
ಕ್ಷಿತಿಯ ಜನರಿಗೆಲ್ಲ ಮತಿಯ ಕೊಡುವ ಮಾನ್ಯ
ವತಿಯುಮೆದೇವಿಯ ನೆನೆವೆ ॥೪॥

ಇಂದು ಪಾರ್ವತದೇವಿಗೆರಗಿ ಶ್ರೀ ಲೋಕೇಶ
ಗೊಂದಿಸಿ ವರಗಳ ಪಡೆದು ।

ಚಂದದಿಂದಲಿ ಉಮೆಯಳ ನಾನು ಭಜಿಸಿ ಆ
ನಂದದಿ ಪೇಳ್ವೆನೀ ಕಥೆಯ ॥೫॥

ಲೇಪಾಕ್ಷಿಪುರವಾಸ ಲೀಲಾವಿಲಾಸನೆ
ಪಾಪಸಂಹರನೆ ಕರುಣಿಸು ।
ಮಾಪತಿಯಾವಾಸ ಭದ್ರಕಾಳೀಶನೆ ಉ
ಮಾಪತಿ ಕುವರ ವೀರೇಶ ॥೬॥

ಹರನ ಮೋಹದ ಪುತ್ರ ಹರಿನೀಲಗಾತ್ರನೆ
[ಉರು]ತರಗುಣ [ಮ]ಹಾವೀರ ।
ಪರಮಭಕ್ತರ ಪೋಷ ಕರುಣದಿಂದೆಮಗೆ ನೀ
ವರವ ಪಾಲಿಸು ಚೆನ್ನವೀರ ॥೭॥

ಕಾಮನ ಪೆತ್ತನೆ ಕಮಲಲೋಚನ ಸತ್ಯ
ಭಾಮೆಯರರಸ ಶ್ರೀಕೃಷ್ಣ ।
ಈ ಮಹಿಯೊಳಗೆ ನಾನಾ ಜೀವಾತ್ಮನೆ
ಕಾಮಿತ ಫಲದಾಯಕನೆ ॥೮॥

ಕಲಿಯುಗದೊ[ಳ]ಗೆ ಕರ್ನಾಟದೊಳರ್ಜುನ
ಹಲವು ಶಾಪಗಳಿಂದ ಜನಿಸಿ ।
ಬಲವಂತನಾಗಿನ್ನು ತಾ ಪುಟ್ಟಿ ಬರುವಂಥ
ಗೆಲುವಿನ ಕಥೆಯ ಪೇಳುವೆನು ॥೯॥

ಅಂದಿನ ಪಾರ್ಥ [ತಾ] ಇಂದಿನ ನಾಯಕ
ಬಂದು ಜನಿಸುವಂಥ ಬಗೆಯ ।
ಚಂದದಿಂದೊರೆದು ಪೇಳುವೆನು ಈ ಕಥೆಯನು
ಚಂದ್ರಶೇಖರನ ವರದಿಂದ ॥೧೦॥

ಓದಿದ ಓದೆಲ್ಲ ಮೇದ ಕಬ್ಬಿನ ಹಿಪ್ಪೆ
ಓ[ದಿ]ದಡಲಿ ತಿಳಿದಂತೆ ।
ಈ ಧರೆಯೊಳಗೆಲ್ಲ ಪರನಾರಿ[ಯರಿ]ಗೆ ತಾ
ಸೋದರನೆಂಬಂಥ ಕಥೆಯ ॥೧೧॥
ಆಧಾರವಿಡಿದು ಪೇಳಿದನಾ ಗಂಗಯ್ಯ

ಈ ಧರೆಯ ವಿದ್ವಾಂಸರೊಳಗೆ ।
ಸಾಧಿಸಿ ಅವರ ಸೇವಕನಾಗಿ ಪೇ[ಳ್ವೆ]ನು
ಯಾದವಸಖ ಪಾರ್ಥ ಕಥೆಯ । ।೧೨॥

ಕುಲದಲ್ಲಿ ಪೊವಲಿ ಮುಮ್ಮಡಿಸಿಂಗನು
ಬಲವಂತನಾಗೊಬ್ಬ ಶಬರ ।
ಹಲವು ಕಾಲದೊಳು ಕಂಪಳಕೆ ತಾನರಸಾಗಿ
ಇಳೆಯನಾಳುತ ಇರುತಿಹನು ॥೧೩॥

ನೂರಾರು ಮಂದಿ ಕಿರಾತರ[ನೊಡಗೊಂಡು]
ಅರಣ್ಯ ಅಡವಿಯೊಳ್ ತಾನು ।
ಕಾರುಣ್ಯನಿಧಿಯೆ ಕಂಪಿಲದೇವರೆಂಬುತ
ಮಾರಹರನ ಪೂಜೆಯಿಂದ ॥೧೪॥

ಸತಿಪುರುಷರು ತಾವು ಅತಿ ಹರುಷದೊಳಿರೆ
ಮತಿವಂತೆ ಮಂಚಕ್ಕನವಳು ।
ಗತಿಯಿಲ್ಲ ಮುಂದೆ ಕಂಪಳಕೆಂದು ಪುತ್ರನ
ಅತಿ ಹರುಷದೊಳು ಬೇಡಿದಳು ॥೧೫॥

ಕೊಟ್ಟನು ಬಿಲ್ಲಿನ ಮೇಲಣ ಪುಷ್ಪವ
ಇಟ್ಟನು ಮುಂದಕ್ಕೆ ಹೂವ ।
ಕಟ್ಟಿಕೊಂಡಳು ಸೆರಗಿಗೆ ಪ್ರಸಾದವ
ಅಷ್ಟರೊಳ್ ಗರ್ಭ ಸೂಚಿಸಲು ॥೧೬॥

ಉದಿಸಿದನೊರ್ವ ಕುಮಾರಕ ಜನಿಸಿದ
ಪೊಡವಿಯನಾಳ್ವಂತನಾಗಿ ।
ಸುದತಿಯೊರ್ವಳ ಕೂಡಿ ಸುತ[ನು] ಸಾಹಸವಾಗಿ
ಸದರನೇರುವ ಮುಂದೆ ಇವನು ॥೧೭॥

ಇಂತಪ್ಪ ಪುತ್ರನುದಿಸಲು ಕಂಪಿಲನೆಂದು ।
ಕಾಂತೆ ಪೆಸರನಿಟ್ಟಳಾಗ ।
ಸಂತೋಷದಲ್ಲಿ ಬಾಳುತಲಿರೆ [ಕಂಪಿಲ]
ಕಂತುಹರನ ಕರುಣದಿಂದ ॥೧೮॥

ದಿನಕೊಂದು ಚೆಂದದಿ ಬೆಳೆದು ದೊಡ್ಡವನಾಗಿ
ಮನೆಯೊಳು ತಾನಿರುತಿಹನು ।
ವಿನಯದಿ ಸೋದರತ್ತೆಯ ಮಗಳನು ತಂದು ಜನಕ
ಮದುವೆಯ ಮಾಡಿದನು ॥೧೯॥

ತಮ್ಮ ಮಕ್ಕಳು ತಾವು ಕೂಡಿ ಸಂತೋಷದಿ
ಹೊಂದಿದ ಶಬರರು ಸಹಿತ ।
ಕಂದರ್ಪದಹ ಪರಮಾತ್ಮನ ಕೃಪೆಯಿಂದ
ಚೆಂದದಿ ಬಾಳುತ್ತಲಿಹರು ॥೨೦॥

ಕೆಲವು ಕಾಲವು ಹೋದ ಬಳಿಕ ಮುಮ್ಮಡಿಸಿಂಗ
ಅಳಿದು ಹೋದನು ವೃದ್ಧನಾಗಿ ।
ಬಳಿಕ ಕಂಪಿಲ ತಾನು ಹತ್ತೆಂಟು ವರುಷಾಗಿ
ಬಲವಂತನಾಗಿರುತಿರ್ದ ॥೨೧॥

ತಂದೆ ಮುಮ್ಮಡಿಸಿಂಗ ಸಂದುಹೋದ ಬಳಿಕ
ಬಂದಿತು ಬರಗಾಲ ದಿವಸ ।
ಕಂದನ ಹಿಡಿಯಲಾರದೆ ಮಂಚಕ್ಕನು
ಬಂದಳು ಆ ಸ್ಥಲ ಬಿಟ್ಟು ॥೨೨॥

ಮೂಡಣದೆಸೆಯಿಂದ ಪಡುವಣ ದೇಶಕ್ಕೆ
ಕಾಡರಸಿ [ತಾ]ವಾಗ ಬರಲು ।
ಕೂಡ್ಯೊಂದು ನಾಲ್ಕೆಂಟು ಮನೆಯ ಕಿರಾತರು
ಕೂಡಿ ಬಂದರು ಬಂದುಬಳಗ ॥೨೩॥

[ಜಟ್ಟಂಗಿ] ರಾಮನ ಗಿರಿಗಾಗಿ ಬಂದರು
ಕೋಟಾಳೆ ಕಂಪಳ ಸಹಿತ ।
ಕೋಟೀಶ್ವರನ ಪಾದವ ಕಂಡು ಪಡೆದರು
ಕಾಟಣ್ಣನೆಂಬಂಥ ಮಗನ ॥೨೪॥

ಮನೆದೈವವಾದನು ಜಟ್ಟಂಗಿ ರಾಮೇ[ಶ]
ಮನೆ ದೊಡ್ಡದಾ[ಯ್ತು] ಕಂಪಿಲನ ।
ವನದೊಳು ಹಟ್ಟಿಯ ಹಾಕಿ ಕೆಲವು ಕಾಲ
ದಿನಗಳೆದರು ಅರ್ತಿಯಿಂದ ॥೨೫॥

ನಡುಮಲೆ ಮುಚ್ಚಾದ ಗುಡ್ಡದ ಮರೆಗಾಗಿ
ಒಡನೆ ಕಂಪಳ ಎದ್ದು ಹೋಗಿ ।
ಅಡವಿಯೊಳ್ ಹಟ್ಟಿಯ ಹಾಕಿಕೊಂಡೆಲ್ಲರು
ಬಡತನದೊಳು ಇರುತಿಹರು ॥೨೬॥

ಬೇಟೆಯನಾಡುತ ಬಂದರು ಮಲೆಯೊಳು
ಮೀಟಾದ ಲೋಹಾರಿ ಗಿರಿ[ಯ]
ದಾಟುತ ಕಂಡರು ತಾರಕಸಂಹಾರಿ
ಕೋಟೀಶ್ವರನ ಪಾದವನು ॥೨೭॥

ಕಂಡಡ್ಡ ಬಿದ್ದು ಕಾಣಿಕೆಯಿಕ್ಕಿ ಫಲಗಳ
ಕಾಂಡ ಗೆಣಸು ಜೇನತುಪ್ಪ ।
ಲಂಡ ಕಿರಾತರು ಕಂಪಿಲ ಸಹವಾಗಿ
ಖಂಡುಗ ಹರಕೆಯನಾಂತು ॥೨೮॥

ಅಲ್ಲಿಂದ ನಡೆದರು ಹೊಸಮಲೆ ಕಣಿವೆಗ
ಳೆಲ್ಲವ ತಾವು ನೋಡುತಲಿ ।
ಬಲ್ಲಿದರಾಗಿ ಬರಲು ಬಹು ಮಲೆಯೊಳು
ಬಲ್ಲಂತೆ ಮಾತನಾಡಿದರು ॥೨೯॥

ಸುತ್ತಣ ಅಡವಿ ಅರಣ್ಯವ ನೋಡುತ
ಒತ್ತಿ ಬೇಂಟೆಯನಾಡುತವರು ।
ಕತ್ತಲೆಯೊಳು ತಮ್ಮ ಕಂಪಳಕೆ ಬಂದರು
ಹೊತ್ತು ತಂದರು ಮೃಗಗಳನು ॥೩೦॥

ಈ ರೀತಿಯಲಿ ತಾವು ಹಟ್ಟಿಯ ಮಾಡಿನ್ನು
ಸೇರಿಕೊಂಡರು ಹೊ[ಸ]ಮಲೆಯ ।
ಕಾರಣ ಇವರಿಂದ ಪುಟ್ಟುವದು ಮುಂದೆ
ಪೂರಾಯವಾಯಿತ್ತು ಸಂಧಿ ॥೩೧॥

ಅಂತು ಸಂಧಿ ೧ಕ್ಕಂ ಪದನು ೩೧ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨

❖

ಕೊಮಾರ ರಾಮಯ್ಯನ ಜನನ ವೃತ್ತಾಂತ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ । ॥೧॥

ನಾಗಕಂಕಣ ನಿಗಮಾಗಮ ಜಗದೀಶ
ಭಾಗೀರಥಿಯ ಮನೋಪ್ರಿಯನೆ ।
ಯೋಗಿ ಪೀತಾಂಬರಧರಸಖಚೂಡನೆ
ಆಗಮ[ತತಿ] ವಂದಿತನೆ ॥೨॥

ಜಗದೊಳಧಿಕ ಕರ್ನಾಟಕಕೊಪ್ಪುವ ವಿದ್ಯಾ
ನಗರ [ದಕ್ಷಿಣ]ಭಾಗದಲ್ಲಿ ।
[ಅಗ]ಜಾಧಿಪತಿ [ಇಹ] ಮೇರುಗಿರಿ[ಗು] ದೊಡ್ಡ
ಸೊಗಸೆನಿಸುವ ಹೊಸಮಲೆಯ ॥೩॥

ಗಿರಿಯಲ್ಲಿ ಬಹು ಬೇಂಟೆಕಾರನಾಗಿ[ಯೆ] ತಾನು
ಇರುವನು ಕಿರಾತನೊರ್ವ ।
ಪರಿವೇಷ್ಟಿಸಿ ದಾರಿಯ ಕಟ್ಟಿ ಸುಲಿಕೊಂಡು
[ಅ]ರ[ಸನಾಗಿಯೆ] ಕಂಪಿಲನು ॥೪॥

ದಾರಿದಾರಿಯ ಜನರನೆಲ್ಲ ಸುಲಿದು ತಾನು
ಇರುವನು ಕಿರಾತನೊರ್ವ ।

ಊರು ಗ್ರಾಮಗಳನು ಹಿಡಿದು ವೀರದಿ ಉಬ್ದ
ಅರ[ಸಾಗಿ] ಆಳ್ವ ಹೊಸಮಲೆಯ ॥೫॥

ಈ ಪರಿಯಿಂದಿರುತಿರೆ [ತಾ]ನಾ ರಾಜ್ಯಕ್ಕೆ
ಭೂಪನಾಗಿಹನು ಕಂಪಿಲನು ।
ತಾ ಪಿರಿದೆನಿಸಿ ಹತ್ತೆಂಟು ಗ್ರಾಮಗಳನು-
ಮಾಪತಿ ಕೃಪೆಯಲಾಳುವನು ॥೬॥

ಭೂಪತಿ ಗುತ್ತಿಯನಾಳ್ವ ರಾಯನು ಜಗ
ದಪ್ಪ ಕಪ್ಪವ ಬೇಡಿ ಕಳಯಹೆ ।
ಈ ಪರಿಯಿಂದ ಕಪ್ಪವನಿತ್ತು ಕಂಪಿಲ
ಕೋಟಾರಣ್ಯ ಮಧ್ಯದೊಳಿಹನು ॥೭॥

ಅಷ್ಟ ದಿಕ್ಕಿನ ರಾಯರಿಗೆ ಕಪ್ಪವನಿತ್ತು
ಪಟ್ಟಾಭಿಷೇಕಿತನಾಗಿ ।
ಕೊಟ್ಟದ ಬೇಡರ ತಡೆದು ಆ ಗಿರಿಯೊಳು
ಸೃಷ್ಟೀಶನಾಗಿರುತಿಹನು ॥೮॥

ಸೃಷ್ಟಿಗಧಿಕ ಹೊಸಮಲೆಯೊಳು ದುರ್ಗವ
ಕಟ್ಟಿ ಆಳುವನು ಕಂಪಿಲನು ।
ಕೊಟ್ಟ ಸಂಬಳ ಭಕ್ಷಪಡಿಗಳ ನಡೆಸಿ ಬಲು
ದಿಟ್ಟ ಈ ಬೇಡನೆಂದೆನಿಸಿ ॥೯॥

ಅಗುಳು ಆಳ್ವೇರಿಯು ಮಿಗೆ ಜಿಡ್ಡಿ ಕೊತ್ತಳ
ಜಗಳಕ್ಕೆ ಭಾರಿ ಹುಲಿಮುಖವು ।
ನೆಗಳಿಹ ಕೋಟೆಗೆ ಫಣಿಪನಂತೆಸೆದಿಹ
ಅಗಣಿತ ತೆನೆಗಳೊಪ್ಪಿದವು ॥೧೦॥

ಸೋಮವೀಧಿಯು ಸೂರ್ಯವೀಧಿ ಉಪ್ಪರಗುಡಿ
[ಕಾರ್ಮುಕ]ಜನರರ್ತಿಜನರು ।
ಪ್ರೇಮದಿ ನವಿಲುಯ್ಯಲೆಯ ನರ್ತನಗಳು
ಸ್ತೋಮದೊಳೆಸೆದೊಪ್ಪುತಿಹವು ॥೧೧॥

ಅಂಗಡಿ ವೀಧಿಯು ರಂಗಮಂಟಪಗಳು
ಶೃಂಗರಿಸಿದ ಕೆಂಡೋಕುಳಿಯು ।
ಅಂಗಳ ಚಳೆಯಾಗಿ ಮಂಗಳ ಪಳುಕವು
ಅಂಗನೆಯರ ಕೇರಿಯೊಳು ॥೧೨॥

ಇತ್ತ ಈ ಪುರವನಾಳುತಲಿರೆ ಕಂಪಿಲ
ಅತ್ತ ಗುಜ್ಜಾರಿಯನಾಳ್ವ ।
ಉತ್ತುಮ ಆರೆಯ ರಾಯ ರಾಜ್ಯವು ಕೆಟ್ಟು
ಮತ್ತೆ ಗೂಳೆಯವೆದ್ದು ಬಂದ ॥೧೩॥

ವರುಣನ ನದಿಯೆಂಬ ಕೃಷ್ಣನದಿಯ ದಾಟಿ
ತೊರಗಲ್ಲು ಬಾದಾವಿಲಿಳಿದು ।
ಸಾರಿದ ಕುಮ್ಮಟ ತುಂಗಭದ್ರೆಯ ದಾಂಟಿ
ಧೀರ ಕಂಪಿಲನಿದ್ದೆಡೆಗೆ ॥೧೪॥

ಧಾರುಣಿಯನು ಆಳ್ವ ಕಂಪಿಲರಾಯಗೆ ಕು
ಮಾರಿಯೊರ್ವಳನು ಕಾಣಿಕೆಯ ।
ಓರಣದಲಿ ಇತ್ತು ಕಂಡನರಸನು ಭೂ
ಚಾರಮನೆಂಬ ಆರೆಯನು ॥೧೫॥

ಕಾಣಿಕೆಯನು ಇತ್ತು ಆರೆಯ ಚಾರ[ಮ]ಗೆ
ನಾಣ್ಯ ಬಂಗಾರ ವಸ್ತ್ರಗಳ ।
ಊಣ್ಯವಿಲ್ಲದೆ ತಿರುಗಿಸಿ[ದ] ಹಿಂದಕೆ ಪಡು
ವಣರಾಜ್ಯ[ವಿತ್ತು] ಕಂಪಿಲನು ॥೧೬॥

ಪಡುವಣ ರಾಜ್ಯವನಿತ್ತವನಿಗೆ ಭೂಪ
ತಡೆದನು ಆರೆಯ ದೊರೆಯ ।
ಸಡಗರದಿಂದಲಿ ಕಂಪಿಲರಾಯನು
ನಡೆವಳಿಗುಂಟಾಗಿ ಇಹನು ॥೧೭॥

ಬಂದ ಆರೆಯರಾಯ ನಿಂದ ಬಲ್ಲಿದನಾಗಿ
ನಿಂದನು ಅರಸು ಕಂಪಿಲನು ।

ಚಂದ್ರವದನೆ ಹರಿಯಲದೇವಿಯು ಬಲು
ಚಂದದಿಂದಾರೈವುತಿರಲು ॥೧೮॥

ಸತಿ ಪುರುಷರು ಈ ಪರಿಯೊಳು ಇರುತಿರೆ
ಅತಿಶಯ ಕೈಲಾಸದೊಳಗೆ ।
ಪೃಥ್ವಿಗೀಶ್ವರನ ವಾಲಗ ನೆರೆದಿರೆ ಗಣ
ತತಿಯು[ಮಾ]ದೇವಿಯರೊಲಿದು ॥೧೯॥

ವಾಲಗಗೊಟ್ಟು ಈಶ್ವರ ಕುಳಿ[ತಿರೆಯುಮೆ]
ಬಾಲೆ ಜಾಹ್ನವಿ ಗಣತತಿಯು ।
ಲೀಲೆಯಿಂದಲಿ ಬಂದ[ರ]ಷ್ಟವಧಾನದಿಂ
ದಾಲಿಸಿ ಗಣಸ್ತೋತ್ರಮವೆರಸಿ ॥೨೦॥

ತೆತ್ತೀಸಕೋಟಿ ದೇವರ್ಕಳೆಲ್ಲರು ಕೂಡಿ
ಇತ್ತಲಗಜೆಯೊಳು ನೆರೆದು ।
ಮೃತ್ಯುಂಜಯನ ವಾಲಗಕೈದು ಬಂದರು
ಸಮಸ್ತ ಗಣರು ತಿಂಥಿಣಿಯು ॥೨೧॥

ಎಂಟು ದಿಕ್ಕುಗಳ ನೋಡುತ ಉಮೆ [ನೋ]ಟದಿ
ಗಂಟಿಕ್ಕಿ[ದ] ಮೊಗವ ನೋಡಿದಳು ।
ಉಂಟು ದ್ವಾಪರರಾಯ[ರೈವರಲಿ] ಕೃಷ್ಣ[ನ]
ನಂಟನರ್ಜುನನುಮೆದೇವಿ ॥೨೨॥

ದೇವಸಭೆಯು ಹರಿಬ್ರಹ್ಮರುಮವರೆದ್ದು
ಭಾವಿತ ನಮಿತರು ಸಹಿತ ।
ದೇವಿಯ ಕಾಣಲೊಡನೆ ಎದ್ದು ಕೈಮುಗಿ[ಯೆ ಸ]
[ದ್ಭಾವೆ] ಪರಬ್ರಹ್ಮ[ನೊ]ಡನೆ ॥೨೩॥

ಇವಗಿಷ್ಟು ಗರ್ವಿಕೆ ಯಾಕೆ ಮಾನವನೆಂದು
ಭುವನೇಶನರ್ಧಾಂಗಿ ನುಡಿಯೆ ।
ದಿವಿಜಾರಿಗಿಂದ ವೆಗ್ಗಳ ಕಾಣೆ
ಪಾರ್ವತಿ [ನವೆವ]ನರ್ಜುನ ಪರಸತಿಗೆ ॥೨೪॥

ಧರೆಯೊಳಗಿವನ ಕುರುಹ ನೊಡಬೇಕೆಂದು
ಪರನಾರಿಯರ ಬಿರಿದುಗಳ ।
ಪರೀಕ್ಷಿಸಿ ನಾ ನೋಡಿದಲ್ಲದೆ ಬಿಡೆನೆಂದು
ವರ ರಂಭೆಯನು ತಾನಟ್ಟಿದಳು ॥೨೫॥

ಆದರೆ ಕೇಳು ಗೌರಾಯಿ ಮಾ[ತ]ನದೊಂದು
ಈ ಧರೆಯೊಳಗೆ ಈತನನು ।
ಸಾಧಿಸಿ ವೆಗ್ಗಳವಾದರೆ ನಿನ್ನ ರಂಭೆಗೆ
ಮೇದಿನಿಯೊಳಗೆ ಸರಿಯುಂಟೆ ॥೨೬॥

ಶಂಭುವರ್ಧಾಂಗಿವಾದಿಗಳಿತ್ತ ಧರೆಯೊಳು
ರಂಭೆ ಅರ್ಜುನ ಸಹವಾಗಿ ।
ಬೆಂಬಳಿಯಿಂದಲೀರ್ವ[ರ]
ಧರಣಿಗೆ ಕಳುಹೆ ಸಂಭ್ರಮ ಕೈಲಾಸವಿಳಿದು ॥೨೭॥

ಬಂದರಿರ್ವರು ಕೈಲಾಸವನಿಳಿಯುತ
ನಿಂದರು ಧರೆಯ ಮಧ್ಯದಲಿ ।
ಕುಂದ[ದಿಳೆ]ಯೊಳು ಉದಿಸಬೇಕೆನುತಲಿ
ಅಂದವರು ಉಮೆ ಈಶ ರಚಿಸೆ ॥೨೮॥

ಇತ್ತ ಕಂಪಿಲನರಸಿ ಹರಿಯಾಲದೇವಿಯು
ಪುತ್ರರಿಲ್ಲೆನುತ ಮನದೊಳಗೆ ।
ಮತ್ತೆ ಜಟಿಂಗ ರಾಮೇಶನ ವರಗಳ
ಅರ್ತಿಯಿಂದ ಸಂಭಾಳಿಸಿದಳು ॥೨೯॥

ಪಾರ್ವತಿರಮಣನೆ ಉರ್ವಿಗೆ ಒಡೆಯನೆ
ನಿರ್ವಾಣಮುನಿಗಳೊಂದಿತನೆ ।
ಸರ್ವಜೀವರ ಸಲಹುವ ಸೂತ್ರಧಾರನೆ
ಗರ್ವದಲ್ಲಣನೆ ಕೊಡು ಸುತನ ॥೩೦॥

ಇಂತಪ್ಪ ಭಕ್ತಿಯೊಳು ಚಿಂತಾಯಕನ ಸ್ತುತಿಸುವ
ಕಾಂತೆ ಇಹಳು ತನ್ನ ಮನದಿ ।

ಅಂತು ಸಂತೋಷದಿಂದಲಿ ಮೀಸಲಗಳನು
ಕಂತುಹರಗೆ ಕಳುಹಿದಳು ॥೩೧॥

ಮೀಸಲ [ಕೊಡ] ಹಾಲು ತುಪ್ಪ ಕದಳಿಯ ಫಲ
ಸೂಸಲು ಸಣ್ಣಕ್ಕಿ ಬೇಳೆ ।
[ಭಾ]ಸುರ ತೇಜನ ಬಲಗೊಂಡು ಬನ್ನೆಂದು
ಆ ಸಖಿಯರ ಕೂಡೆ ಕಳುಹೆ ॥೩೨॥

ಗಿರಿಜೆಯ ರಮಣಗೆ ವಂದಿಸಿ ಮೀಸಲೊಪ್ಪಿಸಿ
ಪರಮಾತ್ಮ ಕೊಡು ಇಷ್ಟಾರ್ಥವನು ।
ದೊರೆಗಳ ಅರಸಿ ಹರಿಯಲದೇವಿಗೆ ಒಬ್ಬ
ವರಪುತ್ರನೆಂಬಂಥ ಮಗನ ॥೩೩॥

ವರಗಳ ಬೇಡಲು ಹರುಷದಿಂ ಪೂಜಾರಿ
ಕರೆದು ಕೊಟ್ಟನು ಪುಷ್ಪಗಳನು ।
ಹರಿಯಲದೇವಿಗೆ ಕೊಡಿರೆಂದು ಕದಳಿಯ
ಪರಿಪರಿ ಹಣ್ಣು ಪುಷ್ಪಗಳ ॥೩೪॥

ಸೋಮವಾರದ ದಿನ ಆ ಮಹಾದೇವನ
ಪ್ರೇಮದಿಂದಲಿ ಪೂಜೆಮಾಡಿ ।
ಕೋಮಲೆ ಹರಿಯಲದೇವಿಗೆ ಕಳುಹಿದರು
ಕಾಮಿತ ಫಲವಾಗಲೆನುತ ॥೩೫॥

ಬಂದರು ಪ್ರಸಾದ ಹಣ್ಣು ಪುಷ್ಪಗಳನು
ತಂದರು ಹರಿಯಮ್ಮನ ಬಳಿಗೆ ।
ಗಂಧ ಪ್ರಸಾದ ಕದಳಿಯ ಫಲಂಗ[ಳ]
ಮುಂದಿಕ್ಕಿ ಕೈಯ ಮುಗಿದರು ॥೩೬॥

ಉಂಡುಟ್ಟು ಮಲಗಲು ಕಂಡಳು ಕನಸನು
ಪುಂಡರೀಕ ಪುರುಷೋತ್ತಮನ ।
ಖಂಡುಗ ಪೂವಿನೊಳಗೆ [ಒಂದು] ಬಹು ದೊಡ್ಡ
ದುಂಡು ಮಲ್ಲಿಗೆ ಅರಳ ಕೊಟ್ಟ ॥೩೭॥

ಕೊಟ್ಟೆನು ಸುತನ ಹರಿಯಲದೇವಿ ಕೇಳಿನ್ನು
ಪಟ್ಟಾಭಿಷೇಕ[ನು] ಎನಿಸಿ ।
ಕೊಟ್ಟದ ರಾಮನೆನಿಸಿ ಅರ್ಜುನ ಬಂದು
ಪುಟ್ಟುವನು ನಿನ್ನಾತ್ಮದೊಳಗೆ ॥೩೮॥

ಬಂದು ಜನಿಪ ಪಾಂಡವರೊಳಗೊರ್ವ ಮು
ಕುಂದನ ಮೈದುನ ನಿನ್ನ ।
ಕಂದನಾಗಿಯೆ ಪುಟ್ಟಿ ರಾಯ ರಾಜ್ಯವನೆಲ್ಲ
ಬಂಧಿಸಿ ಪಿಡಿ[ವ] ದೊರೆಗಳ ॥೩೯॥

ಇಂತಪ್ಪ ಮಗನು ಪುಟ್ಟುವನೆಂದು ಸ್ವಪ್ನದೊಳ್
ಕಂತುಹರನು ಶಿವ ನುಡಿದ ।
ಸಂತೋಷದಿಂ ನಿದ್ರೆ ತಿಳಿದೆದ್ದು ಹರಿಯಮ್ಮ
ಚಿಂತಾಯಕನ ಕರುಣದಲಿ ॥೪೦॥

ನವಮಾಸ ತುಂಬಿತು ಹರಿಯಲದೇವಿಗೆ
ಭವಹರ ರುದ್ರನ ದಯದಿ ।
ಶಿವನ ಅನುಜ್ಞೆಯಿಂ ಪಡೆದಳು ಗಂಡು
ಕುವರನ ಹರಿಯಲದೇವಿ ॥೪೧॥

ದೇವ ಜಟ್ಟಂಗ ರಾಮೇಶನ ವರದಿಂದ
ಭಾವಕಿ ಪಡೆದಳು ಮಗನ ।
ಕೋವಿದ ರಾಮ ಜನಿಸಲಿತ್ತಲತ್ತಲಾ
ದೇವೇಂದ್ರನ ವರ ರಂಭೆ ॥೪೨॥

ತೆಗೆದು ಬೀಸಾಟೆ ಸಿಪ್ಪೆಯನುಂಬ ದಾದಿಯು
ಅಘಹರನೇ ಗತಿಯೆಂದು ।
ಜಗಿದು ನುಂಗಿದಳು ಏಕಭಕ್ತಿಯಿಂದವಳು
ಮಗ ಬಂಟ [ಕಳ್ಳ]ರಾಮ ಪುಟ್ಟೆ ॥೪೩॥

ರಾಮನೆಂಬ ಪೆಸರಿಟ್ಟು ಕಂಪಿಲ ತನ್ನ
ಕುಮಾರನ ಅತಿ ಮೋಹದಿಂದ ।

ಭೂಮಿಯೊಳತಿ ಚೆಲ್ವನಿಗೆ ಬಾಲದೊಡಿಗೆಯ
ಭೂಮೀಶ ತರಿಸಿದನಾಗ ॥೪೪॥

ಅರಳೆಲೆ ಮಾಗಯಿ ಬೆರಳ ಹೊನ್ನುಂಗುರ
ಕೊರಳಿಗೆ ಮುತ್ತಿನ ಹಾರ ।
ಸರಪಳಿ ಗೆಜ್ಜೆ ನಡುವಿಗೆ ಹೊನ್ನುಡಿದಾರ
ದೊರೆ ರಾಮಗಳವಡಿಸಿದರು ॥೪೫॥

ಓದು ವಿದ್ಯವು ಸಾಧನೆಯ ಕಲಿತು ರಾಮ
ಕಾದುವ ಸಾಮ ಶಕ್ತಿಯನು ।
ಭೇದಿಸಿ ಗಜ ತುರಗದೇರಾಟವನು ರಾಮ
ವಾದಿವಾದಿಗಳ ಗೆಲ್ವುದನು ॥೪೬॥

ಈ ರೀತಿಯಲಿ ರಾಮ ಬೆಳೆವುತಿರಲು ಇತ್ತ
ಕಾರಣದೊಳು ಮತ್ತೆ [ಇವಳು] ।
ಊರ್ವಶಿ ರಂಭೆಯು ಪು
ಟ್ಟುವ ಕ್ರೀಯದು ಕಾರಣಿಕದ ಸಂಧಿ ಮುಂದೆ ॥೪೭॥

ಅಂತು ಸಂಧಿ ೨ಕ್ಕಂ ಪದನು ೭೮ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೩

❖

ರತ್ನಾಜಿಯ ಜನನ ವೃತ್ತಾಂತ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣಾರ್ಥಿ ॥೧॥

[ಪಾವನ] ಚರಿತೆ ಪಾರ್ವತಿದೇವಿ ವರದಿಂದ
ಭಾವಕಿಪಡೆದಳು ಮಗನ ।
ಜೀವರಾಶಿಯೊಳು ಜನಿಸಿದಳು ಊರ್ವಶಿ
ರಂಭೆ ಮೋಹದ ಕುವರಿ ಮರ್ತ್ಯದೊಳು ॥೨॥

[ಭೂವಳಯದಿ] ಸುರಸತಿಯು ತಾ ಜನಿಸಿ[ದಳ್]
ದೇವರ ವರದಿಂದಲಾಗ ।
ತಾವವತರಿಸಿ ಸಾಲ್ಗುಂದಿ ಮುಕ್ಕುಂದಿಯ
ದೇವಿರಡ್ಡಿಯ ಪುತ್ರಿಯಾಗಿ ॥೩॥

ಬಂದಳು ರಂಭೆ ರತ್ನಾಜಿ ಪೆಸರ ತಾಳ್ದು
ನಿಂದು ಸಾಲ್ಗುಂದಿ ಮುಕ್ಕುಂದಿಯಲಿ ।
ಚಂದನಗಂಧಿ ಯಲ್ಲಮ್ಮನ ಗರ್ಭದಿ
ಚಂದ್ರವದನೆ ಜನಿಸಿದಳು ॥೪॥

ಇತ್ತ ರಂಭೆಯು ಜನಿಸಲು ಭೂಲೋಕದ
ಉತ್ತುಮ ಜನರು ಕಣ್ಗೆಟ್ಟು ।

ಮತ್ತೆ ಸತಿಯರನುಳಿದು ಅವಳೊಳು ದೃಷ್ಟಿಯಿಸಿ
ಚಿತ್ತದಿ ನೋಡುತಲಿಹರು ॥೫॥

ಭೂಲೋಕಕತಿ ಚೆಲ್ವೆ ಬಾಲೆ ರತ್ನಾಜಿಯು
ಬಾಲಲೀಲೆಯೊಳಾಡುತಿರಲು ।
ಬಾಲದೊಡಿಗೆ ತೊಡಿಸಿ ತಂದೆತಾಯಿಗಳಾಗ
ಲೀಲೆಯಿಂದಲಿ ಸಲಹುತಲಿ ॥೬॥

ಅರಳೆಲೆ ಮಾಗಾಯಿ ಮೂರುಡಿಯ ಸರಪಳಿ
ಕೊರಳೊಳು ರತ್ನದ ಹಾರ ।
ಹರಳುಂಗುರ ಕಾಲಕಡೆಯ ಪೆಂಡೆಯನಿಟ್ಟು
ತರಳೆ ಒಪ್ಪಿದಳು ರತ್ನಾಜಿ ॥೭॥

ಈ ಪರಿಯಲಿ ಬೆಳೆದು ಹತ್ತೆಂಟು ವರುಷವು ।
ರೂಪದೋರುತ ಇರುತಿಹಳು ।
ಭೂಪಾಲ ಕಂಪಿಲರಾಯ ಬೇಂಟೆ ಮಾರ್ಗದಿ ಬಂದು
ಚಾಪಲಾಕ್ಷಿಯ ಕಂಡನಾಗ ॥೮॥

ಕಾಣುತಲಂಗಜ ಬಾಣದಿ ಸೊರಗಿದ
ತ್ರಾಣಗುಂದಿದನು ವಿರಹದಲಿ ।
[ಏಣ]ಲೋಚನೆಯು ಇಳಾಪುತ್ರಿಯು ಎಂದು
ಮಾಣದೆ ಚರರ ಕೇಳಿದನು ॥೯॥

ಕೇಳು ಕಂಪಿಲ ಭೂಪ ದೇವಿರಡ್ಡಿಯವರ
ಬಾಲೆ ರತ್ನಾಜಿಯೆಂಬವಳು ।
ಕೇಳಿ ಬನ್ನಿರೊ ಅವಳ ತಂದೆತಾಯಿಗಳನೆಂದು
ಹೇಳಿದನವರ್ಗೆ ಕಂಪಿಲನು ॥೧೦॥

ಹೇಳಲಾ ಮಾತ ಕೇಳುತ ಆ ಕ್ಷಣದಲ್ಲಿ
ತೂಳದಿಂದಲಿ ಪೋಗಿ ಚರರು ।
ಕೇಳಲು ಅವರೊಳು ಪೇಳಿದ ಅವರಪ್ಪ
ಕೀಳು ಕುಲದವರಿಗೆ ಕೊಡೆವು ॥೧೧॥

ಚಿತ್ತೈಸು ಅರಸ ಕಂಪಿಲರಾಯ ಕೇಳ್ದೆವು
ಹೆತ್ತ ತಂದೆಗಳು ಆಡಿದುದ ।
ಪೃಥ್ವಿ ಕಿರಾತಗೆ ಕೊಡೆನೆಂದು ಮಗಳನು
ಉತ್ತುಮ ಕುಲದವರ್ಗೆ ಕೊಡುವೆ ॥೧೨॥

ಇತ್ತಲಾ ಚರರು [ಆ]ಡಿದ ನುಡಿಗಳ ಕೇಳಿ
ಮತ್ತೆ ಕಂಪಿಲರಾಯ ನುಡಿದ ।
ಒತ್ತಿ ಕೋಪದಿ ನಡೆದನವರ ಮನೆಗೆ
ಮೃತ್ಯುವಿನಂತೆ ಗರ್ಜಿಸಿದ ॥೧೩॥

ಆದರೆ ಕೇಳು ನೀ ರಾಯ ಕೋಪಗಳ್ಯಾಕೆ
ಭೇದಿಸಿ ಬಾಲೆಯ ನುಡಿಯ ।
ಮೂದಲಿಸಿ ಕೇ[ಳ್ವೆ] ಹೇಳೆ ನಾನೆಂಬುದ
ಕ್ರೋಧವ್ಯಾತಕೆ ಕಂಪಭೂಪ ॥೧೪॥

ಬಾಲೆಯ ಕರೆದು ಕೇಳಿದಳು ಅವರ ತಾಯಿ
ಪೇಳು ನಿನ್ನ ಮನದೊಳುಳ್ಳುದನು ।
ಹಾಳು ಮಾಡುವನು ಕಂಪಿಲರಾಯ ಬಿಡನೆಂದು
ಹೇಳಿದ ಅವರಪ್ಪ ಒಲಿದು ॥೧೫॥

ಮುನ್ನ ಪೂರ್ವದೊಳೆನ್ನ ಪಣೆಯ ಬರಹದ
ಪುಣ್ಯ ಚೆನ್ನಾಗಿದ್ದರೆ ಕಾಯ್ದಪು[ದು] ।
ಇನ್ನು ನೀ ಮಾಡುವುದೇನು ನಾನೇನೆಂಬೆ
ತನ್ನ ಮನಸಿನಲ್ಲಿದ್ದಂತೆ ॥೧೬॥

ಮನ್ನಿಸಿ ಮಾತನಾಡಿ[ದಳು] ಕಂಪಿಲನೊಳು
ರನ್ನದೊಡಿಗೆಯ ಬೇಡಿದಳು ।
ಚೆನ್ನನ ಸರ ಹೊನ್ನ ಹೂವು ಮುತ್ತಿನ ಕೊಪ್ಪ
ರನ್ನದುಂಗುರ ಭುಜಕೀರ್ತಿ ॥೧೭॥

ನೀಳಾಂಬಕಿಯು ಆಡಿದಳು ಕಂಪಿಲನೊಳು
ಸಾಲಗುಂದಿಯ [ಅ]ರಮನೆಯ ।

ಬಾಲಕಿ [ಕೊ]ಡಿಸೇನೆಂದೆಂಬ ಭಾಷೆಯ
ನಾಳೆ ಕಳುಹಲೇನು ನಿನ್ನೊಡನೆ ॥೧೮॥

ಹಾಗೆಂದ ಮಾತ ಕೇಳುತ ಕಂಪಿಲರಾಯ ಚೆ
ನ್ನಾಗಿ ತೆರಳ್ದ ಕುಮ್ಮಟಕೆ ।
ಬೇಗದಿಂದೆರಡು ಗ್ರಾಮವ ದೇವಿರಡ್ಡಿಗೆ
ಆಗಲಿತ್ತರಸು ತೆರಳಿದನು ॥೧೯॥

ಹೊನ್ನಂದಣವನೇರಿಸಿ ಕಂಪಿಲರಾಯ
ಚೆನ್ನಾಗಿ ತೆರಳ್ದ ಕುಮ್ಮಟಕೆ ।
ಪನ್ನಂಗಗವಿದು ಸತಿಯಳ ತಾನೊಡಗೊಂಡು
ತನ್ನರಮನೆಯನು ಪೊಕ್ಕ ॥೨೦॥

ಇತ್ತ ಕಂಪಿಲರಾಯ ಬಂದ ಸುದ್ದಿಯ ಕೇಳಿ
ಚಿತ್ತದಿ ಹರಿಯಲದೇವಿ ।
ಮತ್ತೆ ಚರರುಗಳನು ಕರೆಸಿ ಕೇಳಿದಳಾ
ಹೊತ್ತ ದುಗುಡದ ಸುದ್ದಿಯನು ॥೨೧॥

ಹೇಳುವೆನಮ್ಮಾಜಿ ಸಾಲಗೊಂದಿಯ ವರ
ಬಾಲೆಯ ನಿನ್ನ ವಲ್ಲಭನು ।
ಲೀಲೆಯಿಂ [ತಂದ] ತಂದೆಗೆ [ಸಾಲ]ಗೊಂದಿಯ
ಲೋಲನುಮ್ಮಳಿಯನು ಇತ್ತು ॥೨೨॥

ಭೂ[ಪನ] ಸುದ್ದಿಯ ಕೇಳಿದಾಕ್ಷಣದಲ್ಲಿ
ಕೋಪದಿ ಹರಿಯಲದೇವಿ ।
ಶ್ರೀಪತಿ ಕರು[ಣು]ಳ್ಳವ ರಾಮನೊಡನಿಂತು
ತಾ ಪೇಳಿದಳು ಹರಿಯಮ್ಮ ॥೨೩॥

ತಂದುಕೊಂಡನು ಒಬ್ಬ ಸತಿಯಳನೆನಲಿತ್ತ
ಕಂದ ರಾಮಯ್ಯ ಕೇಳಿದನು ।
ಹಿಂದಳ ಹಗೆಯ ತೀರಿಸಿಕೊಳ ಬಂದಳು
ಸಂದೇಹವೇಕೆಲೆ ತಾಯೆ ॥೨೪॥

ರಾಜೀವಲೋಚನೆ ಚಿಕ್ಕಮ್ಮ ಬಂದಳೆಂ
ಬೋಜೆಯ ಮಗಗೆ ಹೇಳಿದಳು ।
ಮೂಜಗದೊಳು ರಾಮ ಪರಸತಿಯೆಂಬ ಸಂ
ವಾಜಕ್ಕೆ ಒಳಗಾಹನಲ್ಲ ॥೨೫॥

ಹಾಗೆಂಬ ನುಡಿಯ ಕೇಳುತ ರತ್ನಾಜಿಯು
ಬೇಗದಿ ಮನದಲ್ಲಿ ಭೀತಿಯ ।
ತೂಗಿ ಹಿಡಿದು ಮಾಗಿಯ ಕೋಗಿಲಂದದಿ
ಜಾಗಿಸಿದಳು ತನ್ನ ಮನವ ॥೨೬॥

ಇವರಿರ್ವರು ಸಂವಾದದೊಳಿರಲಿತ್ತ
ಭುವನೇಶ ಕಂಪಿಲರಸನ ।
ಹವಣಿಸಿ ನೋಡಿ ಮುಂದಣ ರಾಜಕಾರ್ಯವ
ವಿವರಿಸ ಬಂದ ರಾಮಯ್ಯ ॥೨೭॥

ಮುಂದೆ ರಾಮಯ್ಯ ತಾನೊಂದು ದಿವಸದೊಳು
ಚಂದದಿ ಬೇಂಟೆ ಮಾರ್ಗದೊಳು ।
ಅಂದದಿ ಕುಮ್ಮಟದುರ್ಗವ ರಚಿಸುವ
ನಂದದ ಕಥೆಯು ಮುಂದುಂಟು ॥೨೮॥

ಇದು ರಾಮನಾಥ ಪದಕೃತಿಯೊಳಗೊರ್ವ
ಚದು[ರಾನನನು] ಪುಟ್ಟಿಸಿದ ।
ಸುದತಿ ರಂಭೆಯು ಕಲಿಯುಗಕೆ ತಾ
ಬಂದಂಥ ಪದಗಳು ಪೂರಾಯವಾಯ್ತು ॥೨೯॥

ಅಂತು ಸಂಧಿ ೩ಕ್ಕಂ ಪದನು ೧೧೭ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೪

❖

ಕೊಮಾರ ರಾಮಯ್ಯನಿಂದ ಕುಮ್ಮಟದುರ್ಗ ನಿರ್ಮಾಣ

ಶ್ರೀ ಗಿರಿಜಾ[ಸ್ಯಾಂಬುಜ ದಿನನಾಯಕ]
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣಾರ್ಥಿ ॥೧॥

ಜಗದೊಳಗೀ ಕೃತಿಯ ಹವಣಿಸಬೇಕೆಂದು
ಅಗಜೆಯರಸನ ನೆನೆದು ।
ತಗಡೂರ ಕಟ್ಟೆಲಿ ನೆಲಸಿ ವರವನೀವ
ಮಿಗಿಲು ರೂಪಿನ ವಿಘ್ನರಾಜ ॥೨॥

ಸುರಲೋಕದಿಂದ ಊರ್ವಶಿ ರಂಭೆ ಶಾಪದೊಳು
ನರಕಲೋಕದೊಳಗೆ ತಾ ಜನಿಸಿ ।
ಪರಪುರುಷರ ವ್ರತಗೆಡಿಸಿ ಹೋಗುವೆನೆಂದು
ಭರದಿಂದ ತಾ ಪುಟ್ಟಿ ಬಂ[ದು] ॥೩॥

ಕಾಮನ ಗೆಲುವಂತೆ ಕ್ಷೇಮವ ನುಡಿಸಿ
ರಾಮಯ್ಯ ಮನದೊಳು ಗುಣಿಸಿ ।
ಕೋಮಲೆಯರ ಕಣ್ಣ ಬೇಟಕ್ಕೆ ಸಿ[ಕ್ಕ]ದ
ನೇಮವ ಕೈಕೊಂಡ ರಾಮ ॥೪॥

ಆಗಲೆ ಕರೆಸಿದ ಮೇಘವಾಹನಾಚಾರಿಯ
ಈ ಗಳಿಗೆಯಲೊಂದು ಬಿರಿದ ।

ಬೇಗದಿ ಮಾಡೀಕ್ಷಣದೊಳು ತಂದುಕೊಡು ಎಂದು
ತ್ಯಾಗ ಉಡುಗೊರೆ ಕೊಟ್ಟ ರಾಮ ॥೫॥

ನವರತ್ನ ಖಚಿತದಿಂ ರಚಿಸಿ ಆಚಾರಿಯು
ಭುವನೇಶ ರಾಮಗೆ ಕೊಡಲು ।
ಭವಹರ ಮೃತ್ಯುಂಜಯ ಜಯ ಜಯವೆಂದು
ತವೆ ಧರಿಸಿದನು ಕಾಲೊಳಗೆ ॥೬॥

ಪರನಾರಿಯರ ಸಹೋದರನೆಂಬ ಬಿರಿದನು
ಧರಿಸಿದ ಎಡದ ಕಾಲೊಳಗೆ ।
ಹರಿಯಲದೇವಿಯಮ್ಮಾಜಿ ಪಾದಕೆ ಬೀಳೆ
ಹರಸಿ ಎತ್ತಿದಳಾಗ ಮಗನ ॥೭॥

ಗರಡಿಯ ಮನೆಗಾಗಿ ಬಂದನು ರಾಮಯ್ಯ
ಪರಿಪರಿ ಸಾಮಸಾಧನೆಯ ।
ಪರೀಕ್ಷಿಸಿ ಮಾಡಿ ಮಾದವಗೆ ತಾ ವಂದಿಸಿ
ಅರಮನೆಗಾಗಿ ತಾ ಬಂದ ॥೮॥

ಉದಯದ ಊಟವ ಮಾಡಿ ರಾಮಯ್ಯನು
ಚದುರಂಗದಾಟವ ಮುಗಿಸಿ ।
ಕುದುರೆಗಳನು ಏರಿ ನಡೆದರಣತಮ್ಮಗಳು
ಒದಗಿತು ಮಂದಿ ಮಾನ್ಯೆಯರು ॥೯॥

ಬೇಂಟೆಯ ಮಾರ್ಗದಿ ಹೊರಟನು ರಾಮಯ್ಯ
ದಾಂಟಿದ ಹಂಪಿಯ ಹೊಳೆಯ ।
ಕಾಟಣ್ಣ ಮನ್ನೆಯರು ಸಹವಾಗಿ ಕಂಡರು
ಮೀಟಾದ ದುರ್ಗವನವರು ॥೧೦॥

ಒಮ್ಮೆ ರಾಮಯ್ಯನ ಪೆಸರಿನ ದುರ್ಗವ
ನಿರ್ಮಿಸಬೇಕು ಎಂದೆನುತ ।
ಉಮ್ಮಯವಾಗಿ ಕಾಟಣ್ಣ ಮನ್ನೆಯರೆಲ್ಲ
ಗಮ್ಮನೆ ಪೆಸರಿಟ್ಟರಾಗ ॥೧೧॥

ರಾಮನ ಕುಮ್ಮಟವೆನುತ ಪೆಸರನಿಟ್ಟು
ಆ ಮಹಾ ಮನ್ನೆಯರೆಲ್ಲ ।
ಕ್ಷೇಮದಿ ಹಿಂದಕ್ಕೆ ತಿರುಗಿ ಬೇಂಟೆಯನಾಡಿ
ಆ ಮಹ ಹೊಸಮಲೆಗಾಗಿ ॥೧೨॥

ತಂದೆಯ ಬಳಿಗೆ ಬಂದರು ಅಣ್ಣತಮ್ಮಗಳು
ವಂದಿಸಿ ಚರಣಕ್ಕೆರಗಿದರು ।
ಕಂದ ರಾಮಯ್ಯನ ಎತ್ತಿ ಮುದ್ದಾಡುತ
ಬಂದಿರಾ ಬೇಂಟೆಗಳಾಡಿ ॥೧೩॥

ದೊರೆಗಳ ಗರ್ಭದೊಳ್ ಜನಿಸಿದ ಬಳಿಕಿನ್ನು
ಧುರದೊಳು ಅಂಜದಿರಬೇಕು ।
ಮರೆಯ ಹೊಕ್ಕವರ ಮರಳಿ ಕೊಡದಿರಬೇಕು
ಅರಿಗಳ ಹೊಕ್ಕಿರಿಯಬೇಕು ॥೧೪॥

ರಾಯರ ಗರ್ಭದೊಳ್ ಜನಿಸಿದ ಬಳಿಕಿನ್ನು
ಕಾಯದಾಸೆಯ ಬಿಡಬೇಕು ।
ಆಯತವಾಗಿ ರಣಾಗ್ರದೊಳ್ ಕಡಿದಾಡಿ
ಸಾಯಬೇಕು ಮುಕ್ತಿಗಳುಂಟು ॥೧೫॥

ಹತ್ತೆಂಟು ವರುಷಕ್ಕೆ ಹುಯ್ಯಲ ಮಾಡ್ಬೇಕು
ಮತ್ತಾಳಬೇಕು ರಾಜ್ಯವನು ।
ಸುತ್ತಣ ರಾಯರಿಗೆ ಕಪ್ಪವನ್ಯಾಕೆ ಕೊಡಬೇಕು
ಹತ್ತಿ ಬಲಿಸು ಕುಮ್ಮಟವ ॥೧೬॥

ಹುಟ್ಟುತ ಸಣ್ಣದು ಬೆಳವುತ [ದೊಡ್ಡದು]
ಕಟ್ಟಿಸು ಕೋಟೆಕೊತ್ತಳವ ।
ಮುಟ್ಟಿಸೊ ಹಣ ಹೊನ್ನು ಮಂದಿಗೆ ಜೀತವ
ಕೊಟ್ಟದ ಬೇಡರ ನಿಲಿಸೊ ॥೧೭॥

ದಿನಕೊಂದು ಚಂದದಿ ದುರ್ಗವ ಬಲಿಸೊ ನೀ
ಅನುವಾದ ಮಂದಿಯ ನಿಲಿಸೊ ।

ಮನಬಂದ ಕಾರ್ಯಕ್ಕೆ ನಮ್ಮ ನೀ ಕಳುಹಿಸೊ
ಜನಕ ನಮ್ಮ ಮಾತ ನಡೆಸೊ ॥೧೮॥

ಕಂದನ ಮಾತನು ಕೇಳಿ ಕಂಪಿಲರಾಯ
ಒಂದಾರು ಭುಜವಾದನಾಗ ।
ಒಂದು ಹಿಡಿ ಹೊ[ನ್ನ] ದಿನ ಒಂದಕ್ಕೆ ಕೊಡುವಂತೆ
ಕಂದಗೆ ಕಟ್ಟು ಮಾಡಿಸಿದ ॥೧೯॥

ಮಗನ ಮಾತನು ಕೇಳಿ ಮಿಗೆ ಹರುಷವ ತಾಳಿ
ಸೊಗ[ಸಿಂ]ದ ಕಂಪಿಲರಾಯ ।
ಅಗಣಿತವಾದ ಕುಮ್ಮಟದುರ್ಗವನು ತಾನು
ಜಗದೊಳಗತಿ ಪ್ರಿಯನೆನಿಸಿ ॥೨೦॥

ಕುಮ್ಮಟದುರ್ಗ[ದ] ಕೋಟೆಯ ಬಲಿಸಿದ
ತಮ್ಮರಮನೆಗಳ ರಚಿಸಿ ।
ಎಮ್ಮೆಯ ಹಿಂಡು ಆಕಳ ಹಿಂಡು ಕುರಿಗಳ
ಗಮ್ಮನೆ ಹೊಡೆಸಿ ಕಂಪಳವ ॥೨೧॥

ಕೋಟೆ ಕೊತ್ತಳ ಅಗುಳು ತೋಟ ವನ ಕೆರೆ ಬಾವಿ
ಮೀಟಾದ ರಾಜಬೀದಿಗಳು ।
ಪೇಟೆಯ ಸಾಲು ಉಪ್ಪರಿಗೆಯ ಮನೆಗಳು
ಕಾಟಣ್ಣನರಮನೆ ಸಹಿತ ॥೨೨।

ಅಂಗಡಿ ಬೀದಿಯು ರಂಗಮಂಟಪಗಳು
ಶೃಂಗಾರ ವಿಟರ ಕೇರಿಗಳು ।
ಹೊಮಗೆಲಸದ ಅರಮನೆಯುಪ್ಪರಿಗೆಯು
ಸಂಗ್ರಾಮಧೀರಗೆ ರಚಿಸಿ ॥೨೩॥

ದೊಡ್ಡರಮನೆಯು ಚಿಕ್ಕರಮನೆ ಪೇಟೆಯು
ದೊಡ್ಡಾನೆ ಸಾಲು ಬೀದಿಗಳು ।
ಜಿಡ್ಡಿಯು ಊರ ಬಾಗಿಲು ಹೊರಕೋಟೆಯು
ವಡ್ಡರು ರಚಿಸಿದರಾಗ ॥೨೪॥

ರಂಗಮಂಟಪಗಳು ರಮಣಿಯರ ಕೇರಿಗಳು
ಶೃಂಗಾರದೋಟದ ಮನೆಯು ।
ಅಂಗಳಕೇರಿಯು ರತ್ನಿಯ ಅರಮನೆಯು
ಶೃಂಗಾರವಾಗಿ ಒಪ್ಪಿದವು ॥೨೫॥

ಕಾಟಣ್ಣನರಮನೆ ನಾಟಕಸಾಲೆಯು
ಮೀಟಾದ ಕುದುರೆಯ ಲಾಯ ।
ಆಟಪಾಟಗಳ ನೋಡುವರ್ತಿಯ ಚಾವಡಿ
ನೋಟವಾದವು ಪುರದೊಳಗೆ ॥೨೬॥

ಆನೆಯ ಸಾಲು ವಾಜಿಯ ಸಾಲು ಬೊಕ್ಕಸ ಮ
ಹರ್ನೌಮಿ [ರಸ್ತೀ]ನರಮನೆಯು ।
ಜ್ಞಾನಿ ರಾಮಯ್ಯನ ಅರಮನೆ ಮೇಲೊಂದು
ನೂನವಿಲ್ಲದೆ ರಚಿಸಿದರು ॥೨೭॥

ಮಂತ್ರಿ ಬೈಚಪ್ಪಗೆ ಮತ್ತೊಂದು ಅರಮನೆ
ಅಂತು ಮನ್ನೆಯರ ಕೇರಿಗಳು ।
ಕಂತುಕೇಳಿಯ ಮನೆ ಐದಾಯಿಗಳ ಬಾಜಾರ
ಎಂತು ಪೇಳುವೆನು ಶೃಂಗಾರ ॥೨೮॥

ಹಾರೋರ ಕೇರಿ ಹರದರ ಕೇರಿಗಳು
ಸಾರಿ ಕಟ್ಟಿದವು ಕುಮ್ಮಟದಿ ।
ಆರೆಯ ಚಾರಮರಾಯನ ಅರಮನೆ
ಮಾರ್ಯಮ್ಮ ಸಿಂಗಮ್ಮನರಮನೆಯು ॥೨೯॥

ಹೊಸಬರ ಹಳಬರ ಅಸಗರ ಕೇರಿಯು
ಮೊಸರ ಮಾರುವರ ಬಾಜಾರ ।
ಶಿಶುವಿಗೆ ಪಾಲ್ಬೆಣ್ಣೆ ಛತ್ರದ ಮನೆಗಳು
ಹಸನಾದವು ನಗರದೊಳಗೆ ॥೩೦॥

ಕುರಿ ಕೋಣ ಬಲಿಗಳ ಕೊಡಿಸಿದ ದುರ್ಗಕೆ
ಪರಿಪರಿ ಶಾಂತಿ ಮಾಡಿಸಿದ ।

ಬರಹೇಳಿ ಬ್ರಾಹ್ಮರ ತೃಪ್ತಿಪಡಿಸಿದ ಲಕ್ಷ
ಪರಿಯಲಿ ಅನ್ನ ಶಾಂತಿಯನು ||೩೧||

ಈ ಪರಿ ಪಟ್ಟಣ ರೂಪಿಸಿ ತುಂಬಿತು
ಮಾಪತಿಯ ದಯ ಕರುಣದಿಂದ ।
ಪಾಪರಹಿತ ಮಲ್ಲೇಶನ ಗುಡಿ ಮುಂದೆ
ಆ ಪಟ್ಟಣದ ಶೃಂಗಾರ ||೩೨||

ಹೊಸಮಲೆದುರ್ಗವ ಬಿಟ್ಟು ಸಮಸ್ತರು
ವಾಸವಾದರು ಕುಮ್ಮಟಕೆ ।
ಹೊಸಪರಿಯರಮನೆಯೊಳು ತಾವು ಇಳಿದರು
ದೆಸೆವಂತ ಕಂಪಿಲ ರಾಮ ||೩೩||

ಆಡಿದ ಸಂಬಳವ ಕೊಡದೆ ಉಳಿಹಿಕೊಂಬ
ನಾಡ ಮನ್ನೆರ ಗಂಡ ರಾಮ ।
ಮಾಡಿದ ಜೀತವ ಕೊಡದೆ ನಿಲಿಸುವಂಥ
ಖೋಡಿ ರಾಯರ ಗಂಡನೆಂದು ||೩೪||

ಅನ್ನುಂಟು ಆಳಿಲ್ಲ ಹೊನ್ನುಂಟು ಕುದುರಿಲ್ಲ
ವೆನ್ನುತ ಸಾರಿ ಕುಮ್ಮಟದಿ ।
ಬನ್ನಿ ಮನ್ನೆಯ ಬಲವಂತ ರಾಹುತರು
[illegible]ಗೆನ್ನುತ ಕರೆದನು ರಾಮ ||೩೫||

[illegible]ಗಾಸೆಯ ಮಾಡಿ ರಣದೊಳು ಜುಣುಗುವ
ರಣಹೇಡಿ ರಾಯರ ಗಂಡ ।
ಹೊಣಕೆಯಮಾಡಿ ಜೇಡಿದ ಬಿರಿದ ಕೊ[ಡದಂ]ಥ
ಬಣಗು ರಾಯರ ಗಂಡನೆಂದ ||೩೬||

ಬರಗಾಲ ಬಂದರೆ ಬಂಟರ ಜೀತವ
ಕರಮು ಕೊಡದೆ ನಿಲಿಸಿಕೊಂಬ ।
ಅರಸುಗಳ ಗಂಡನೆಂದೆಂಬ ಬಿರಿದನು
ಇರದೆ ಕೊಂಡಾಡಿದರಾಗ ||೩೭||

ಈ ಬಗೆಯಲ್ಲಿ ಬಿರಿದುಗಳ ಕೊಂಡಾಡಿಸಿ
ಬಾಬೋಜಿ ಮಲ್ಲನ ಕರೆಸಿ ।
ಲೋಭಿಮಾನ್ಯರ ಗಂಡ
ನೆಂಬಂಥ ರಾಮಯ್ಯ ಆಗ ಪೇಳಿದ ಅವ[ನೊ]ಡನೆ ॥೩೮॥

ದೇಶದೇಶಂಗಳ ನೋಡಿ ಹುಡುಕಿ ಜೀವ
ದಾಶೆ ಇಲ್ಲದ ಮಾನ್ಯರುಗಳ ।
ಭಾಷೆಯ ಕೊಟ್ಟು ನೀ ಕರಕೊಂಡು ಬಾರೆಂದು
ಲೇಸಿನಿಂದಲಿ ಅವಗುಸುರೆ ॥೩೯॥

ನಾನಾ ರಾಜ್ಯವನೆಲ್ಲ ನೋಡೆ ಬಾಬೋಜಿ ಮಲ್ಲ
ಆನಂದ ಹರುಷದೊಳ್ ತಾನು ।
ನಾನಾ ಬಗೆಯ ಕಿರಾತರ ಕುಲ ಬೇಡರು
ಆನಂದದಿಂದ ಕೂಡಿದರು ॥೪೦॥

ಕೊಟ್ಟದ ಬೇಡರು ಕೂಡಿ ಬಂದರು ಒಳ್ಳೆ
ಹಟ್ಟಿಕಾರರು ಹರಿಗೆಯರು ।
ದಿಟ್ಟ ಬೇಡರ ಪಡೆಗೂಡಿ ಕುಮ್ಮಟದೊಳು
ಕಟ್ಟಿತು ಕೇರಿಕೇರಿಗಳ ॥೪೧॥

ಬೂಟಕ ಬೊಮ್ಮನು ಮುದುಗೊಂಡ ಲೋಭನು
ಬೇಟಬ ಸಿಂಗನೆಂಬವನು ।
[ಕ]ಟ್ಟ ಬಿಲ್ಲಿನ ಮಂದಿ ಕೂಡಿತು ಕುಮ್ಮಟ
ಕೊಟ್ಟವಾಯಿತು ಲೋಕದೊಳಗೆ ॥೪೨॥

ಬಂಧಂಥ ಕುದುರೆ ಮಂದಿಯನೆಲ್ಲ ನಿಲಿಸಿದ
ಹಿಂದೂವ ರಾಮಯ್ಯ ತಾನು ।
ಮುಂದಣ ರಾಜಕಾರ್ಯವ ನೋಡಿ ಮನದೊಳು
ಮಂದಿಯ ಕೂಡಲಿಕ್ಕಿದನು ॥೪೩॥

ಕೊಟ್ಟದ ಬೇಡರ ಕರೆಸಿದ ರಾಮಯ್ಯ
ಕಟ್ಟಿದ ಮನ್ನೆಯರನೆಲ್ಲ ।

ಇಟ್ಟನು ನಾನಾ ದೇಶದಲಿಂದ ಬಂದವರ
ದಿಟ್ಟರ ನೋಡಿ ರಾಮಯ್ಯ ॥೪೪॥

ಎಪ್ಪತ್ತು ಮಂದಿ ಮನ್ನೆಯರನು ಕೂಡಿಸಿ
ಎಪ್ಪತ್ತು ಸಾವಿರ ಹೊನ್ನ ।
ಒಪ್ಪದಿ ಹಂಚಿಕೊಟ್ಟೆಲ್ಲರ ಮನ್ನಿಸಿ
ರೊಪ್ಪದ ಮೇಚರ ಕರೆಸಿ ॥೪೫॥

ಅವರಿಗೆ ಕೊಟ್ಟನು ವಿವರಿಸಿ ಹೊನ್ನುಗಳ
ಆವಳಿ ಉಡುಗೊರೆಯ ವಸ್ತ್ರಗಳ ।
ಕವಿದು ಮೇಚರ ಪಡೆ ಕೂಡಿತು ಶಬರರ
ವಿವರವನೇನ ಬಣ್ಣಿಸುವೆ ॥೪೬॥

ಆರೇಯ ಚಾರಮರಾಯನ ಮಕ್ಕಳ ಆ
ನ್ನೂರು ಕುದುರೆಯ ಪೌಜು ।
ಸಾರಿ ಕುಮ್ಮಟದೊಳು ಕೂಡಿಸಿ ಕಂಪಿಲ
ಧೀರನಾಗಿರ್ದ ಲೋಕದೊಳು ॥೪೭॥

ತನ್ನ ಲಾಯದ ವಾಜಿ ಮುನ್ನೂರು ಸಾವಿರ
ಹನ್ನೊಂದು ಸಾವಿರ ಬಲವು ।
ಚೆನ್ನರಾಮಯ್ಯ ಕಾಟಣ್ಣನು ಸಹವಾಗಿ
ಮನ್ನೆಯರನು ಕೂಡಿಕೊಂಡು ॥೪೮॥

ಸುತ್ತಣ ರಾಜ್ಯಕ್ಕೆ ದಾಳಿಯನಿಕ್ಕುತ
ಎತ್ತ ನೋಡಿದಡತ್ತ ಗುಲ್ಲ ।
ಹತ್ತಿಸಿ ಹಳ್ಳಿಪಳ್ಳಿಗಳ ಠಾಣ್ಯಗಳನು
ಒತ್ತಿ ಬಲಿಸಿದನು ರಾಮಯ್ಯ ॥೪೯॥

ಹಾನ್ಗಲ್ಲ ಸೀಮೆಯನೆಲ್ಲವ ಕಟ್ಟುತ
ನಾನಾ ರಾಜ್ಯವನು ಸುಲಿಸುತ ।
ತಾನು ನೀಲನ ಏರಿ ನಡೆವುತ ರಾಮಯ್ಯ
ಮೋನಾದಿ ಬಾದಾವಿ ತನಕ ॥೫೦॥

ಕರಿಯ ಹೊಳೆಯ ದಾಟಿ ಕಟ್ಟಿದ ಸೀಮೆಯ
ಭರದಿಂದ ಠಾಣ್ಯವ ನಿಲಿಸಿ ।
ಮರಳಿ ತಿರಿಗಿ ಬಂದು ಕುಮ್ಮಟವನು ಹೊಕ್ಕು
ಇರುತಿರ್ದ ಸಂತೋಷದಲಿ ॥೫೧॥

[ತೊ]ಟ್ಟನು ಮುತ್ತಿನಾಭರಣವ ರಾ[ಮುಗ]
ಇಟ್ಟನು ದೊಡ್ಡ ಚವುಕುಳಿಯ ।
ಕಟ್ಟಿದ ಹೊನ್ನುಡಿದಾರ ಚೆನ್ನನ ಸರ
ಉಟ್ಟನು ಪಟ್ಟಾವಳಿಗಳನು ॥೫೨॥

ಕಡುಕು ಉಂಗುರ ತೊಟ್ಟ ತೊಡಕು ಸರಪಳಿ ತೊಟ್ಟ
ಬಿಡಿ ಮುತ್ತಿನ ಸರವನೆ ತೊಟ್ಟ ।
ಕಡೆಯಾಣಿ ಚಿನ್ನದ ಬಳೆ ಸರಪಳಿ ತೊಟ್ಟ
ಸಡಗರವೇನ ಪೇಳುವೆನು ॥೫೩॥

ಸುತ್ತಣ ಸಣ್ಣ ಪಾಳೆಯಗಾರರೆಲ್ಲರು
ಮೊತ್ತದಿ ತಾವ್ಕೂಡಿಕೊಂಡು ।
ಅತ್ತಲು ತಮ್ಮನಾಳುವ ಬಲ್ಲಾಳಗೆ
ಇತ್ತಣ ರಾಜಕಾರ್ಯವನು ॥೫೪॥

ಕೊಟ್ಟದ ಕಂಪಿಲರಾಯನ ಮಗ ರಾಮ
ಜಿಟ್ಟನು ನೇಮಿಗೆ ದಂಡ ।
ಸುಟ್ಟನು ಹಳ್ಳಿಪಳ್ಳಿಯ ಊರು ಸೀಮೆಯ
ಕಟ್ಟಿದ ದೊಡ್ಡ ಗ್ರಾಮಗಳ ॥೫೫॥

ಅವನ ಕತ್ತಿಗೆ ಇದಿರಾಗಿ ನಿಲ್ಲುವರಾರು
ಭುವನೇಶ ನೀನಲ್ಲದಿಲ್ಲ ।
ತವಕ ಬೇಡವು ಸುಮ್ಮನಿರಿ ಕುಮ್ಮಟವನು
ಕವಿದು ಮುತ್ತಿಗೆಯ ಮಾಡು[ವೆ]ನು ॥೫೬॥

ರಾಮನ ಕೈಸೆರೆ ಹಿಡಿವೆನು ಕಂಪಿಲ
ನಾ ಮಾನ ಕೆಡಿಸಿ ನಾ ಬಿಡುವೆ ।

ಕೋಮಲೆಯರಸ ತಾ [ನುಡಿದ] ಬಲ್ಲಾಳನು
ಆ ಮಹಾ ರುದ್ರಕೋಪದಲಿ ॥೫೭॥

ದಕ್ಷಿಣ ಸೀಮೆಯ ರಾಯರೆಲ್ಲರು ಕೂಡಿ
ಆ ಕ್ಷಣದೊಳು ತಾವು ಪೋಗಿ ।
ಶಿಕ್ಷೆಯ ಮಾಡುವರಿಲ್ಲ ಕಂಪಿಲಗೆಂದು
ಲಕ್ಷಾಧಿಪತಿಗೆ ಹೇಳಿದರು ॥೫೮॥

ಸುತ್ತಣ ರಾಯ ರಾಜ್ಯಕ್ಕೆ ಧಣಿಯಾದ
ಗುತ್ತಿಯ ಜಗದಪ್ಪ ಅರಸೇ ।
ಎತ್ತಿ ಬಂದನು ಕಂಪಿಲ ನಮ್ಮ ಸೀಮೆಯ
ಕತ್ತಿಯೊಳ್ ಬಲ್ಲಿದನೆನುತ ॥೫೯॥

ಮಗ ರಾಮನ ಬಿಟ್ಟು ಜಗವನೆಲ್ಲ ಸುಟ್ಟು
ಅಗಣಿತವಾದ ಕೋಟೆಗಳ ।
ಮಿಗೆ ಠಾಣ್ಯ ಬಲಿದು ಮಂದಿಯ ಹಾಕಿ ಹೋದನು
ಜಗಳಕ್ಕೆ ಇದಿರಿಲ್ಲವೆನುತ ॥೬೦॥

ಕಳ್ಳ ಬೇಡನು ಇಷ್ಟು ಕಾರ್ಯವ ಮಾಡಿದ
ಒಳ್ಳಿತಾಯಿತು ಸುಮ್ಮಗಿರಿ ।
ಬಳ್ಳದ ಹೊನ್ನ ಕಪ್ಪವ ತರಿಸುವೆನವನ
ಮಿಳ್ಳಾಟವ ಬಿಡಿಸುವೆನು ॥೬೧॥

ನಾನಾ ರಾಜ್ಯದ ದೊರೆಗಳನೆಲ್ಲ ರಾಮಯ್ಯ
ಕಾನರ್ಝುಂಗೆಯ ಮಾಡಿಕೊಂಡು ।
ಆನಂದ ಅರ್ತಿಯೊಳಿರುತಿರೆ ಡಿಳ್ಳಿಯ
ಖಾನನು ತಾನು ಕೇಳಿದಳು ॥೬೨॥

ಸುರಿತಾಳ ಪಾಚ್ಛನ ಮಗಳೊಲಿದು ರಾಮಗೆ
ಕರೆಸುವ ಕಾರಣಿಕರನು ।
ಅರುಪುವೆ ಜಗದೊಳು ಇಲ್ಲಿಗೆ ಈ ಸಂಧಿ
ಹರುಷದೊಳ್ ಪೂರಾಯವಾಯ್ತು ॥೬೩॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಪದುಳದಿಂದ ಪೇಳುವೆ ಖಾನ ವಜೀರರ
ಕದನ ಪುಟ್ಟುವುದ ಕುಮ್ಮ[ಟದಿ] ॥೬೪॥

ಅಂತು ಸಂಧಿ ೪ಕ್ಕಂ ಪದನು ೧೭೧ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೫

❖

ಕೊಮಾರ ರಾಮಯ್ಯನು ಸುರಿತಾಳನ ಪಾದುಕೆ ಮಟ್ಟಿದುದು

ಶ್ರೀ ಗಿರಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ನಮೋಯೆಂಬೆ ॥೧॥

ಇತ್ತ ಕುಮ್ಮಟರಾಮ ರಾಜ್ಯವನಾಳೆ
ಅತ್ತ ಸುರಿತಾಳನು ಮಗಳ ।
ಕತ್ತಿಯ ಖಾನರ ಕರೆಸಿ ಕೊಡುವೆನೆಂಬ
ಅರ್ತಿಯ ಮನದೊಳ್ಯೋಚಿಸಿದ ॥೨॥

ಪ್ರಾಯದ ಚೆಲುವ ಚೆನ್ನಿಗ ವಜೀರರ
ಬಾಯೆಂದು ಕರೆಸಿದನವರ ।
ಕೋಯೆಂದು ಕೊಡುವೆ ಮಗಳು ಒಪ್ಪಿದವರಿಗೆ
ಆಯುಧ ಊರ ಉಮ್ಮಳಿಯ ॥೩॥

ಮಗಳು ಬಾಬಮ್ಮನ ಕರೆದು ತೋರಿದನವರ
ಸೊಗಸಿನ ಖಾನಖಾನರನು ।
ಮೊಗ ನೋಡ್ಯವರ ಒಲ್ಲೆನೆಂದು ನುಡಿದಳಾಗ
ಸೊಗಸದು ಮನಕೆಂದಳವಳು ॥೪॥

ಇಂತಪ್ಪ ಚೆಲುವರೊಳಗೆ ಒಬ್ಬರೋರ್ವನು
ಕಾಂತೆ ನಿನಗೆ ಸರಿಬರನೆ ।

ಪಂಥ ಯಾರ ಮೇಲೆ ಇದೆ ಕರೆಸುವೆನೆಂದು
ಚಿಂತೆಯೊಳಿರುತಿರ್ದನವನು ॥೫॥

ಭೂಮಿಯೊಳುಳ್ಳ ಖಾನರನೆಲ್ಲ ಕರೆಸಿದ
ಕೋಮಲೆ ತನೊಲ್ಲೆನೆಂದು ।
ಆ ಮಹ ಕಾಶಿ ರಾಮೇಶ್ವರಕೆ ತಿರುಗುವ
ಬ್ರಾಹ್ಮ[ರು] ಕಾಡೊ[ಳು] ಬರಲು ॥೬॥

ನೇಮಿಯಖಾನನ ಬಳಿಗೆ ತಾ ಬಂದಾಗ
ಸ್ವಾಮಿ ನಮಗೆ ಸ್ವಯಂಪಾಕವ ।
ಪ್ರೇಮದಿ ಕೊಡಿಸು ಉಂಡು ನಾವು ಪೋದೇವು
ಆ ಮಹಾ ಸಂತೋಷದಿಂದ ॥೭॥

ತುಪ್ಪ ಅಕ್ಕಿಯು ಬೇಳೆ ಸಕ್ಕರೆ ಗೋಧಿಯ ಹಿಟ್ಟು
ತಪ್ಪದೆ ಕೊಡಿಸಿದ ಬೇಗ ।
ತಪ್ಪದೆ ತಿರಿಗಿ ಬಂದಿರಿ ರಾಜ್ಯವನೆಲ್ಲ
[ಒ]ಪ್ಪಾದ ಡಿಳ್ಳಿಗೆ ನೀವು ॥೮॥

ನಮ್ಮ ಪಾಚ್ಛವನ ಮಗಳಿಗೆ ತಕ್ಕಂಥ
ಕಮ್ಮಗೋಲನ ರೂಪಿನವನ ।
ಇಮ್ಮಡಿ ಕಾಮನ ಪೋಲ್ವಂಥ ಚೆಲ್ವನ
ರುಮ್ಮಿಯ ತನಕ ನೋಡಿದಿರೆ ॥೯॥

ನೀವು ತಿರುಗಿಬಂದ ರಾಜ್ಯದೊಳಲ್ಲಲ್ಲಿ
ಆವ ದೇಶದೊಳೊರ್ವ ಕುವರ ।
ಜೀವರತ್ನಗಳಂತೆಸೆವಂಥ ಚೆಲುವನ
ನೀವು ಕಂಡವನ ಪೇಳೆಮಗೆ ॥೧೦॥

ಮುನ್ನೂರು ಅರವತ್ತುನಾಲ್ಕು ಗಾವುದ[ದೊ]ಳೊಂದು
ಹೊನ್ನ ಕುಮ್ಮಟ ಉಂಟು ಅಲ್ಲಿ ।
ಚೆನ್ನಿಗ ರಾಮ ಕಾಮನ ರೂಪಿಗತಿ ಚೆಲ್ವ
ಮನ್ಮಥನಂತೆಸೆವನವನು ॥೧೧॥

ಇಂತಪ್ಪ ಸುದ್ದಿಯ ಕೇಳುತ ನೇಮಿಯು
ಅಂತರಿಸದೆ ತಾನು ಪೋಗಿ ।
ಚಿಂತೆಯಾತಕೆ ಸುರಿತಾಳ ಚೆನ್ನಿಗನೊಬ್ಬ
ಕಾಂತೆಗೆ ತಕ್ಕಂತ ವರ[ನು] ॥೧೨॥

ಕಾಶಿಯ ಜೋಯಿಸರ ಕರೆಸಿ ಕೇಳಲಿ ಬೇಕು
ಹಾಸ್ಯವ ನೀವ್ಮಾಡಬೇಡಿ ।
ದೇಶವ ತಿರುಗಿ ಬಂದವರು ಪೇಳುವಂಥ
ವಾಸೆ ಮಾತುಗಳ ನೀವ್ಕೇಳಿ ॥೧೩॥

ಕರೆಸಿದ ಕಾಶಿಯ ಬ್ರಾಹ್ಮಣರ ಸುರತಾಳ
ಅರಿಕೆ ಮಾಡಿದರು ವಿಸ್ತರದಿ ।
ಬಿರಿದಂಕ ಚೆಲುವ ಚೆನ್ನಿಗ ರಾಮನ ಸುದ್ದಿಯ ವಿ
ಸ್ತರಿಸಿ ಪೇಳಿದರಾಗ ಅವರು ॥೧೪॥

ನಳನೊ ಜಯದ್ರಥನೊ ನಳಿನನಾಭನೊ ದೊಡ್ಡ
ಕಳೆಯಲ್ಲಿ ಕಾಮ ಮನ್ಮಥನೋ ।
ಇಳೆಯೊಳು ಅಂತಪ್ಪ ಚೆಲುವನಿಲ್ಲವು ಎಂದು
ಬೆಳೆಸಿ ಪೇಳಿದರು ಜೋಯಿಸರು ॥೧೫॥

ಕತ್ತಿಲಿ ಸಮರಂತ ಸುತ್ತಣ ರಾಯರು
ಮತ್ಯಾರು ಇದಿರಿಲ್ಲ ಅವಗೆ ।
ಪುತ್ರರೊಳು [ಚೆನ್ನ] ಕುವರನ ರೂಪಿಂಗೆ
ಎಂತಪ್ಪ ಸತಿಯು ಸೋಲುವರು ॥೧೬॥

ಬಂದ ಬ್ರಾಹ್ಮಣರಿಗೆ ಉಡುಗೊರೆಗಳ ಕೊಟ್ಟು
ವಂದಿಸಿ ಕಳುಹಿದನವರ ।
ಮುಂದೇನೊ ನೇಮಿಯೆ ಮಗಳನವನಿಗೆ ಕೊಟ್ಟು
ಚೆಂದದಿ ಮದುವೆ ಮಾಡುವೆ[ನೆ?] ॥೧೭॥

ಮಗಳ ಮೂರ್ಖತ್ವಕ್ಕೆ ಜಗದೊಡೆಯನು ತಾನು
ನಗುತ ಈ ಮಾತನಾಡಿದನು ।

ಅಘಹರನಾಣೆ ಅವನಲ್ಲದೆ ಮತ್ತೊಬ್ಬ
ಜಗದೊಳು ನಾ ಒಲ್ಲೆನೆಂದು ॥೧೮॥

ಪರಪುರುಷರು ನನಗೆ ನಿನ್ನ ಸಮಾನರು
ಬರಿಯ ಮಾತಲ್ಲ ಈ ಭಾಷೆ ।
ಸ್ಥಿರವಾಯಿತೇ ನಿನ್ನ ವಾಕ್ಯವು ಭೂಪ ನೀ
ಕರೆದು ತರಿಸು ಅವನ ಬೇಗ ॥೧೯॥

ನಗೆಗೆ ನಾನೆಂದರೆ ಹಗರಣವ್ಯಾಕಮ್ಮ
ಜಗದೊಳು ಅಪಕೀರ್ತಿಯುಂಟೆ ।
ಅಗಣಿತ ಬೇಡರ ಕುಲದಲ್ಲಿ ಹುಟ್ಟಿದ
ಮಗನಂತೆ ಕೇಳು ನೀ ಮಗಳೆ ॥೨೦॥

ಸೂನಿತವನು ಮಾಡಿ ನಮ್ಮ ಕುಲಕೆ ತಂದು
ಆನಂದ ಹರುಷದೊಳ್ ನೀನು ।
ಜ್ಞಾನಿಯಲ್ಲವೆ ? ಅವನಲ್ಲದೆ ಮತ್ತೊರ್ವ
ಮಾನವನ ಕೊಡುವಳಲ್ಲ ॥೨೧॥

ಇಂತಪ್ಪ ಪಂಥವನಾಡಿ[ದಳು] ಮಗಳಿಂದು
ಚಿಂತೆಯಾತಕೊ ನೇಮಿಖಾನ ।
ಕಾಂತೆಯ ಮನಸಿನ ಬಯಕೆಯ ಇದ
ಕೆಂತು ಉಪಾಯ ಪೇಳೆನಗೆ ॥೨೨॥

ಛಪ್ಪನ್ನೈವತ್ತಾರು ದೇಶದ ದೊರೆಗಳು
ಕಪ್ಪವ ಕೊಡಬೇಕು ಎಲ್ಲ
ಅಪ್ಪಂತ ಖಾನರ ಕಳುಹಿಸಿ ಕೊಡುವೆನು
ತಪ್ಪದೆ ಪ್ರಯಾಣವ ಮಾಡಿ ॥೨೩॥

ಕರೆಸಿದ ಪಗುದೀಯಖಾನ ಆಕಾಶಖಾನ
ಕರೆಸಿದ ಅಬ್ದೂಲಖಾನ ।
ಕರೆಸಿದ ಖಂಡೇಯಖಾನ ಮಲುಕರನು
ಕರೆಸಿದ ಸುರಿತಾಳನೆಡೆಗೆ ॥೨೪॥

ಇಂದು ನಿಮಗೆ ಪ್ರಯಾಣವೆಂದು ಪೇಳಿದ ನೇಮಿ
ಸಂದೇಹವಿಲ್ಲದೆ ಹೊರಡಿ ।
ಬಂದರು ಖಾನರು ನಿಂದು ಕೈಮುಗಿದರು
ವಂದಿಸಿದರು ಸುರಿತಾಳಗೆ ॥೨೫॥

ಐವತ್ತು ಆರು ದೇಶದ ರಾಯರ ಕೂಡ
ಸೈಮಾಡಿಕೊಂಡು ಪಗುದಿಯನು ।
ಮೈಲಾಪುರಿ ಮಲೆಯಾಳ ಕೊಂಕಣದೇಶ
ಐಗಾರರಡ್ಡಿಯ ಹೊನ್ನ ॥೨೬॥

ಚಿಕ್ಕಪಾಲ್ಯಗಳುಂಟು ಕರ್ನಾಟದೊಳಗೆಲ್ಲ
ಲೆಕ್ಕವೆಷ್ಟಿದ್ದರೆ ಇರಲಿ ।
ಮಿಕ್ಕ ಪಾಳೆಯಗಾರರು ಜಗದಪ್ಪನೊಳ
ಗೊಕ್ಕಲು ಅಹರೆಲ್ಲ ಅವಗೆ ॥೨೭॥

ಗುತ್ತಿಯ ನಾಡಿಗೆ ಅಯಿಗಾರರಡ್ಡಿಯ
ಅರ್ತೀಯ ಹೊಡೆದು ತಕ್ಕೊಳ್ಳಿ ।
ಸುತ್ತಣ ಸಣ್ಣ ಪಾಳೆಯಗಾರರಿಗೆಲ್ಲ ಅದ
ರರ್ತು ತಕ್ಕೊಳ್ಳುವರ ಕೂಡೆ ॥೨೮॥

ಬಂದ ಧನವನೆಲ್ಲ ಒಂದು ಜಾಳಿಗೆ ಮಾಡಿ
ಮುಂದಾಗಿ ಕಳುಹಿಸಿ ಕೊಡಿರಿ ।
ಇಂದು ನಾಳೆನ್ನದೆ ಸಾಗಿಸಿ ಡಿಳ್ಳಿಗೆ
ನಿಂದು ಒಪ್ಪಿಸುವಂತೆ ಮಾಡಿ ॥೨೯॥

ಕುಮ್ಮಟದರಸು ಕಂಪಿಲನ ಬಳಿಗೆ ಹೋಗಿ
ಒಮ್ಮನ ಹೊನ್ನ ನೀವು ಕೇಳಿ ।
ಸುಮ್ಮನೆ ಕೊಟ್ಟಷ್ಟು ಸಯಿ ಮಾಡಿಕೊಂಡು
ನೀವು ಗಮ್ಮನೆ ಬರಬೇಕು ಎಂದ ॥೩೦॥

ಕಂಪಿಲರಾಯನ ಮಗನು ರಾಮಯ್ಯ[ನ]
ಸಂಪಿನಿಂದಲಿ ನೀವು ನೋಡಿ ।

ಇಂಪಾದ ಪ್ರಾಯದ ರೂಪು ರೇಖೆಯ ನೀವು
ಸೊಂಪನೆಲ್ಲವ ತಿಳಿದುಕೊಳ್ಳಿ ॥೩೧॥

ಕಳೆ ಚೆಲ್ವು ರೂಪು ಕಾಮಗೆ ಮಿಗೆ ಚೆಲ್ವಂತೆ
ಕಳೆಯಂತೆ ಪೇಳಿದನವರ್ಗೆ ।
ಇಳೆಯೊಳು ಹೋಗಿ ಬಂದವರ ಸುದ್ದಿಯ ಕೇಳಿ
ನಳಿನಾಕ್ಷಿ ಮನಸೋತಳವಗೆ ॥೩೨॥

ಇದ ಪರೀಕ್ಷೆಯನೆಲ್ಲ ತಿಳಿಕೊಂಡು ಬನ್ನಿಂದು
ಮುದದಿಂದಲವನ ಕರೆಸುವೆನು ।
ಬೆದರಿ ಬಾರದೆ ಇರಲು ಭಾಷೆಯ [ತೊ]ಟ್ಟೆ[ನು]
ಕದಲಿಸಿ ತರು[ವೆ] ರಾಮುಗನ ॥೩೩॥

ಈ ಬಗೆಯಲ್ಲಿ ಬುದ್ಧಿಯ ಪೇಳಿ ಖಾನರಿಗೆ
ಬೇಗ ಪ್ರಯಣ ಸಿದ್ಧಮಾಡಿ ।
ಆಗಲೈವತ್ತು ಕುದುರೆಯ ಪ್ರಧಾನರ
ಸಾಗಿಸಿದನು ನೇಮಿಖಾನ ॥೩೪॥

[ಪಾರಸಿ] ಪರಮಾ[ನೆ] ಬರೆಸಿ ಕಾಗದಗಳ
ಓರಣದಲಿ ಮುದ್ರೆ ಇಟ್ಟು ।
ಬೇರೊಂದು ಪಲ್ಲಕ್ಕಿಯೊಳಗೆ ಪಾವುಗೆಗಳ
ಆರಿಸಿ ಜೋಡನಿಕ್ಕಿದರು ॥೩೫॥

ನವರತ್ನಖಚಿತವಾದಂಥ ಪಾವುಗೆಗಳ
ಅವ ತಂದು ಪಲ್ಲಕ್ಕಿಯೊಳಗೆ ।
ತಾವೆ ನಿತ್ಯ ಪೂಜೆ ಮಾಡಲ್ಕೆ ಒಬ್ಬರ
ಯುವತಿಯ ಕೊಟ್ಟರಾಗ ॥೩೬॥

ಹಾಗೆಂದು ಅಪ್ಪಣೆ ಕೊಡಲು ಪ್ರಧಾನರು
ಆಗ ಖಾನರ ಕೂಡಿಕೊಂಡು ।
ಸಾಗ್ಯಡ್ಡಬಿದ್ದು ಸುರಿತಾಳಗೆ ವಂದಿಸಿ
ಸಾಗಿಯಾ ದಿನದಲ್ಲಿ ಅವರು ॥೩೭॥

ಹಳ್ಳಿಪಳ್ಳಿಗಳೊಳಿರದೆ ಮುಂದಕೆ ಸಾಗಿದರು
ಎಲ್ಲ ಗ್ರಾಮಗಳ ದಾಂಟಿ ಬಂದು ।
ನಿಲ್ಲದೆ ಸಾಗಿ ಬಂದರು ಪಯಣದಿ ಚಿಕ್ಕ
ಡಿಳ್ಳಿಗೆ ಬಂದು ಇಳಿದರು ॥೩೮॥

ಅಂಗ ಕಾಳಿಂಗ ಕಾಶ್ಮೀರ ಕಾಂಬೋಜ
ಕೊಂಗಾಳ ಮಿಗೆ ಸೌರಾಷ್ಟ್ರ ।
ಬಂಗಾಳ ಕೇರಳ ಸಿಂಹಳ ಕರಾಡ
ವಂಗದೇಶಂಗಳನೆಲ್ಲ ॥೩೯॥

ಸುತ್ತಿ ಛಪ್ಪನ್ನಾರು ದೇಶದ ಕಪ್ಪವ
ಒತ್ತಿ ತೆಗೆದುಕೊಂಡು ಬಂದು ।
ಗುತ್ತಿಯ ನಾಡ ಜಗದಪ್ಪನ ಬಳಿಗಾಗಿ
ಅರ್ತಿಲಿ ಬಂದರು ಅವರು ॥೪೦॥

ಬಂದವರಿದಿರ್ಗೊಂಡು ಗುತ್ತಿ ಜಗದಪ್ಪನು
ತಂದು ಹಿಡಿ ಹೊನ್ನ ಕಾಣಿಕೆಯ ।
ಮುಂದಿಟ್ಟ ಪಾವುಗೆಗಳಿಗಡ್ಡ ಬಿದ್ದನು
ವಂದನೆ ಮಾಡಿ ಕೈಮುಗಿದು ॥೪೧॥

ತಂದಂಥ ಪಾರಸಿ ಪರಮಾ[ನೆ] ಓದಿಸಿ
ಅಂದವರನು ಕರಕೊಂಡು ।
ಒಂದು ಮನೆಯನು ಬಿಡಾರ ಮಾಡಲು [ಪೇಳಿ]
ಅಂದಚಂದದಲಿ ಕಳುಹಿದನು ॥೪೨॥

ಬೆಳಗೆದ್ದು ಕುಳಿತು ಕರೆಸಿದ ಖಾನಖಾನರ
ಒಳಿತಾಗಿ ಮಾತನಾಡಿದನು ।
ಕುಳಿತು ಅವರ ಕಪ್ಪದ ಹೊನ್ನ ಕಟ್ಟಿಸಿ
ಉಳಿಕೆ ಇನ್ನೇನೆಂದು ಕೇಳೆ ॥೪೩॥

ಎಲ್ಲ ಆಯಿತು ರಾಯ ನಿಲ್ಲದೆ [ಬಂ]ದೆವು
ಇಲ್ಲಿಂದ ಡಿಳ್ಳಿಗೆ ಹೊನ್ನ ।

ಬಲ್ಲಿದ ಸುರಿತಾಳ[ಪಾಚ್ಛಾನ] ಬಳಿಗೆ
ನಿಲ್ಲದೆ ಕಳುಹಬೇಕೆನಲು ॥೪೪॥

ಹಾಗಾಗಲಿ ಎಂದು ಒಂದೆ ಜಾಳಿಗೆ ಮಾಡಿ
ಸಾಗಿಸಿ ಕಳುಹಿದರಾಗ ।
ಹೋಗಿರ್‍ಯೆ ಸಂಗಾತ ಐದು ಸಾವಿರ ವಾಜಿ
ಸಾಗಿಸಿಕೊಟ್ಟ ಜಗದಪ್ಪ ॥೪೫॥

ಬಂದವರೊಳಗೆ ಸಂದ ಒಬ್ಬರಿಬ್ಬರು
ಹಿಂದಕ್ಕೆ ತಿರುಗಿದರವರು ।
ಮುಂದುಳಿದವರು ಪಲ್ಲಕ್ಕಿಯ ಸಹವಾಗಿ
ಚೆಂದದಿ ಪ್ರಯಾಣ ಕುಮ್ಮಟಕೆ ॥೪೬॥

ಬಂದವರಿಗೆಲ್ಲ ಉಡುಗೊರೆ ಹೊನ್ನುಗಳ
ಅಂದಚೆಂದದಿ ವಸ್ತುಗಳನು ।
ಕುಂದದೆ ಕೊಟ್ಟು ಭೂಷಣಮಾಡಿ ಜಗದಪ್ಪ
ಮುಂದಕ್ಕೆ ಕೊಟ್ಟು ಕಳುಹಿದನು ॥೪೭॥

ಸುರಿತಾಳ [ಪಾಚ್ಛಾನು] ಕುಮ್ಮಟವನು ಹೊಕ್ಕು
ಬರಹೇಳಿ ನಮ್ಮ ಕಳುಹಿದನು ।
ಅರಸು ಜಗದಪ್ಪ ದಾರಿಯಕಾರರಿಬ್ಬರ
ಕರೆಸಿಕೊಂಡು ನಮ್ಮ ಸಂಗಡಲೆ ॥೪೮॥

ಅಲ್ಲಿಂದ ಚರರೋಡಿ ಬಂದರು ಬಾಗಿಲ
ಗೊಲ್ಲರ ಕರೆದು ಹೇಳಿದರು ।
ಬಲ್ಲಿದ ಡಿಳ್ಳಿಯ ಸುರಿತಾಳ ಕಳುಹಿದ
ನಿಲ್ಲದೆ ಹೇಳೆ ಕಂಪಿಲಗೆ ॥೪೯॥

ಕೇಳುತ ಬಾಗಿಲ ಗೊಲ್ಲರೋಡಿ ಬಂದು
ಹೇಳಿದರು ಕಂಪಿಲನೊಡನೆ ।
ಕೇಳು ಚಿತ್ತೈಸು ಅರಸೆ ಡಿಳ್ಳಿ ಖಾನನ
ಈಳಿಗದವರು ಬಂದಹರೆ ॥೫೦॥

ಬಂದವರನು ಆಗ ಕರೆಸೆ ಕಂಪಿಲರಾಯ
ನಿಂದರು ಬಂದು ಕೈಮುಗಿದು ।
ಇಂದ್ಯಾಕೆ ಬಂದಿರಿ ಬಂದ ಕಾರ್ಯಗಳೇನು
ಎಂದು ಕೇಳಿದನು ಕಂಪಿಲನು ॥೫೧॥

ಪಾರಸಿ ಪರಮಾನೆ ಖಾನ ವಜೀರರು
ಧರೆಯ ಕಷ್ಟಗಳನೆಲ್ಲ ಕೊಂಡು ।
ಭರದಿಂದ ನಿಮ್ಮ ಪವುದಿಯ ಕೇಳಬಂದೆವು
ಅರಸೆ ಕೇಳೆನ್ನ ಬಿನ್ನಪವ ॥೫೨॥

ಹೋಗು ಬೈಚಪ್ಪ ನೀ ಬೇಗ ವಿಚಾರಿಸು
ಸಾಗಿಸಿಕೊಂಡವರ ಬಾರೊ ।
ಶೀಘ್ರದಿ ಬೀದಿಯ ಮನೆಯಲ್ಲಿ ಇಳುಹಿಸಿ
ಸಾಗಿಸೊ ಉಲುಪೆ ಉಡುಗೊರೆಯ ॥೫೩॥

ಎಂದ ಮಾತನು ಕೇಳಿ ಬಂದನು ಬೈಚಪ್ಪ
ಚೆಂದದೊಳವರ ಭೇಟಿಯನು ।
ಮುಂದುಡುಗೊರೆ ಕೊಟ್ಟು ವೊಂದಿಲಿ ಅವರನು
ಬಂದನು ಕರಕೊಂಡು ಮನೆಗೆ ॥೫೪॥

ಚೆಂದಚೆಂದದ ಉಲುಪೆಯನು ಕೊಡಿಸಿ ಅವ
ಬಂದುದು ಏನೆಂದು ಕೇಳೆ ।
ಸಂದೇಹವಿಲ್ಲದೆ [ನ]ಮ್ಮರಸಿ[ಗೆ ಕೊಡಿ]
ಸಂಧಿಸಿ ಕಪ್ಪವನೆನಲು ॥೫೫॥

ಪಾವುಗೆಗಳಿಗೆ ಕಾಣಿಕೆ ಇಟ್ಟು ವಂದಿಸಿ
ಆವಾಗ ಕೊಡುವಂಥ ಹೊನ್ನ ।
ಭಾವ ಶುದ್ಧದೊಳು ಬಳ್ಳದ ಹೊನ್ನನಳಕೊಟ್ಟು
ಸಾವಧಾನದೊಳೆಮ್ಮ ಕಳುಹಿ ॥೫೬॥

ಎಂದ ಮಾತನು ಕೇಳಿ ಬಂದನು ಬೈಚಪ್ಪ
ತಂದೆ ಮಕ್ಕಳ ಕೂಡೆ ಹೇಳೆ ।

ಕಂದಿದ ಕಂಪಿಲ ಮನದೊಳಾಳಾಪದಿ
ಬಂದೀತು ಕಂಟಕವೆನುತ ॥೫೭॥

ಬಳ್ಳದ ಹೊನ್ನ ನಾನೆಲ್ಲಿಂದ ಕೊಡಬೇಕು
ಬಲ್ಲಿದ ಸುರಿತಾಳನೊಡನೆ ।
ನಿಲ್ಲದೆ ಕಾದುವ ಶಕ್ತಿ ನಮಗಿಲ್ಲವೊ
ಬಲ್ಲಂತೆ ಪೇಳೊ ಮಂತ್ರೀಶ ॥೫೮॥

ಹೇಳುವುದೇನು ಕೇಳುವುದೇನು ಅಪ್ಪಾಜಿ
ನಾಳೆ ನಾವಿಬ್ಬರು ಹೋಗಿ ।
ಬಾಳುವ ತೆರನ ಮಾಡಿದರೆ ಸರಿ
ಇಲ್ಲವೆ ಕಾಳಗ ಬಂತು ಕುಮ್ಮಟಕೆ ॥೫೯॥

ಬಂದರೆ ಬರಲಿ ನೋಡುವೆನೆಂದ ರಾಮಯ್ಯ
ತಂದೆಗೆ ಎದ್ದು ಕೈಮುಗಿದ ।
ಸಂದೇಹವ್ಯಾತಕೆ ಮುಂದಾಗುವಂಥದ
ಕಂದುಗೊರಳ ಶಿವ ಬಲ್ಲ ॥೬೦॥

ಬಲ್ಲಿದನಹುದೆಂದು ನೋಡಿ ಭಾಸ್ಕರ ತಾನು
ನಿಲ್ಲದೆ ಪಡುವಣಾದ್ರಿಯೊಳು ।
ಮೆಲ್ಲನೆ ಇಳಿದು ತಾ ಪೋದನು ಬೇಗದಿ
ಎಲ್ಲರು ಮನೆಗೆ ಐದಿದರು ॥೬೧॥

ಬೆಳಗೆದ್ದು ತಂದೆ ಮಕ್ಕಳು ಬೈಚಪ್ಪನು
ಉಳಿಯದೆ ಹೋಗಿ ತಾವೆಲ್ಲ ।
ಕಳೆಯುಳ್ಳ ಖಾನ ಹೇಜೀಬರ ಕಂಡೀಗ
ಒಳಿತಾಗಿ ಮಾತನಾಡಿದರು ॥೬೨॥

ಬಂದಂಥ ಖಾನ ಹೇಜೀಬರನೆಲ್ಲರ
ಸಂದರುಶನ ಮಾಡಿಕೊಂಡು ।
ಎಂದಿಗೆ ಇಲ್ಲದೆ ಇಂದಿಗೇತಕೆ ನೀವು
ಬಂದದ್ದು ಏನೆಂದು ಕೇಳೆ ॥೬೩॥

ಡಿಳ್ಳಿಯನಾಳ್ವ ಸುರಿತಾಳನು ಕಳುಹಿದ
ವೀಳ್ಯವ ಕೊಟ್ಟು ನಿಂ ಬಳಿಗೆ ।
ಹಳ್ಳಿಪಳ್ಳಿಗಳ ಬಡಿದು ದೊಡ್ಡರಸಾದ
ಬಳ್ಳದ ಹೊನ್ನ ಕಪ್ಪವನು ||೬೪||

ಬಡವರ ವೀಳ್ಯಕ್ಕೆ ಬಳ್ಳದ ಹೊನ್ನುಂಟೆ
ಕೊಡುವೆವು ನೀವು ಬಂದುದಕೆ ।
ಅಡವಿಯ ಸೀಮೆಗೆ ತಕ್ಕಂಥ ಹೊನ್ನನು
ಕೊಡುತೇವೆ ನೀವು ಕೊಂಡ್ಹೋಗಿ ||೬೫||

ಖಾನ ಹೇಜೀಬರು ನೋಡಿ ರಾಮಯ್ಯನ
ಆನಂದ ಹರುಷದೊಳ್ ತಾವು ।
[ಮೌ]ನದಿ ತಮ್ಮೊಳು ತಾವೆ ಮಾತಾಡಿದರು
ಜ್ಞಾನಿ ಬಾಬಮ್ಮಗೇನಹುದು ||೬೬||

ಮಿಗೆ ಹೊನ್ನ ಕೊಡಲಾರದಿದ್ದರೆ ಕಂಪಿಲ
ಮಗ ರಾಮನ ಕೊಟ್ಟು ಕಳುಹೊ ।
ಅಗಣಿತ ಪಾಚ್ಛನ ಸುರಿತಾಳನ ಕಾಣಿಸಿ
ಮಿಗೆ ಹರುಷದಿ ಕಳುಹುವೆನು ||೬೭||

ಮಗನ ಕೊಟ್ಟವರುಂಟೆ ಜಗದೊಳೆಲ್ಲಾದರು
ಜಗಳಕ್ಕೆ ಬಂದಿರಿ ನೀವು ।
ಸೊಗಸದು ಈ ಮಾತು ಸಟೆ ಹೊನ್ನ ಕೊಡುವೆವು
ಮಗ ರಾಮನ ಕೊಟ್ಟುದುಂಟೆ ||೬೮||

ಚೆನ್ನಿಗ ರಾಮನು ನಗುತ ಮಾತಾಡಿದ
ಪನ್ನಂಗದೊಳಗಿರುವಂಥ ।
ಹೊನ್ನ ಪಾವುಗೆಗಳ ನೋಡಿ ವಂದಿಸಿ ನಾನು
ಹೊನ್ನ ಕಪ್ಪಗಳ ಕೊಡುವೆನು ||೬೯||

ಪನ್ನಂಗ ತಗೆಯಿರೊ ಪಾವುಗೆಗಳ ನೋಡಿ
ಹೊನ್ನು ಕಾಣಿಕೆನಿಟ್ಟು ಮುಂದೆ ।

ಉನ್ನತ ಭಕ್ತಿಲಿ ವಂದಿಸಿ ಕಪ್ಪವ
ಹೊನ್ನ ಕಟ್ಟಿಸಿ ಕಳುಹುವೆನು ॥೭೦॥

ಹಾಗೆಂದ ಮಾತನು ಕೇಳುತ ಖಾನರು ತಾವು
ಬೇಗದಿ ಪನ್ನಂಗ ತೆಗೆಯೆ ।
ಜಾಗಿಸಿ ನೋಡಿ ಕಣ್ಣಿಟ್ಟು ಪಾವುಗೆ ಮೇಲೆ
ಮಾಗಿ ಕೋಗಿಲೆಯಂತೆ ಆದ ॥೭೧॥

ನವರತ್ನ ಖಚಿತ ಪಾವುಗೆಗಳ ರಾಮಯ್ಯ
ವಿವರಿಸಿ ನೋಡಿದನಾಗ ।
ತವಕದಿ ಹೋಗಿ ಕಾಲಿಟ್ಟು ಮೆಟ್ಟಿದನಾಗ
ವಿವರವ ಮುಂದೆ [ಕೇಳೆಂದ] ॥೭೨॥

ನನಗೆ ಇವು ಸರಿಯಾದವು ನಮ್ಮಣ್ಣಗೆ
ಅನುವಾದವಿನ್ನೊಂದು ಜೋಡ ।
ಮನೆ ಮನುಷರ ಕೈಯ್ಯ ತರಿಸಿ ನೀವು ಕೊಟ್ಟ[ರೆ]
ಮನಬಂದ ಹೊನ್ನ ಕೊಡುವೆನು ॥೭೩॥

ಮೂಗಿಲಿ ಬೆರಳಿಟ್ಟು ಮುಂಗೈಯ್ಯ ಕಡಕೊಂಡು
ಕೂಗಿ ಒರೆದು ಬೊಬ್ಬೆನಿಟ್ಟು ।
ನಿನ್ನ ಕುಮ್ಮಟದುರ್ಗ ಹಾಳಾಗಿ ಹೋಯಿತು
ನಿನ್ನ ತಲೆಗೆ ವ್ಯಾಳ್ಯಾ ಬಂತು ॥೭೪॥

ಇಂತಪ್ಪ ಬುದ್ಧಿಯು ಯಾತಕೆ ರಾಮಯ್ಯ
ಪಂಥವೆ ಸುರಿತಾಳನೊಡನೆ ।
ಕಾಂತೆ ಹರಿಯಮ್ಮನು ಕೈಸೆರೆ ಹೋದಳು
ಇಂತು ಸುರಿತಾಳ ಕೇಳಿದರೆ ॥೭೫॥

ಮಕ್ಕಳಾಟಿಕೆ ನೀನು ಮಾಡಿದೆ ರಾಮಯ್ಯ
ಸಿಕ್ಕಿದೆ ತುರಕರ ಸೆರೆಗೆ ।
ಕಕ್ಕುಲಾತಿಯ ಎಣಿಸದೆ ನಿನ್ನ ಮನದೊಳಗೆ
ಒಕ್ಕಲ ಕೆಡಿಸಿದೆ ಮಗನೆ ॥೭೬॥

ತರುವಲಿ ಬುದ್ಧಿಯ ಮಾಡಿದೆ ರಾಮಯ್ಯ
ದೊರೆತನವನು ಕಳಕೊಂಡೆ ।
ಸೆರೆಯಾದ ಕಂಪಿಲರಾಯನು ತುರುಕರಿಗೆ
ಬರುವುದು ನವಲಕ್ಷ ಕುದುರೆ ॥೭೭॥

ಬಿಡುಬಿಡು ಪಾವುಗೆಗಳನು ನೀ ರಾಮಯ್ಯ
[ಕೆಡಬೇಡ] ಸುರಿತಾಳನೊಡನೆ ।
ಹೆಡಗೈಯ್ಯ ಕಟ್ಟಿಕೊಂಡೊಯ್ವರು ಡಿಳ್ಳಿಗೆ
ಬಡವಾ ನಿನಗ್ಯಾಕೆ ಈ ತಳ್ಳಿ ॥೭೮॥

ಹೇಳಿದ ಮಾತನು ಕೇಳದೆ ರಾಮಯ್ಯ
ಕೋಳ ಹೋಯಿತು ಕುಮ್ಮಟವು ।
ಹಾಳಾಗಿ ಹೊಸಮಲೆದುರ್ಗವು ಮುಂದಿನ್ನು
ಬಾಳುವ ತೆರನಿಲ್ಲ ಮುಂದೆ ॥೭೯॥

ಎಂದಿದ್ದರೀ ಕಾಯ ಉಳಿವುದೆ ಜಗದೊಳು
ಬಂದರೆ ಬರಹೇಳೊ ದಂಡ ।
ಕಗ್ಗೊಲೆಯನು ಮಾಡುವೆ [ನಾನು] ರಣದೊಳು
ಸಂದೇಹವೇಕೆ ಹೋಗೆಂದ ॥೮೦॥

ಒತ್ತಿ ಖಾನರನೆಲ್ಲ ಕಡಿವೆನು ರಣದೊಳು
ಸುತ್ತಿಕೊಂಡವರ ತಲೆಗಳನು ।
ಮೊತ್ತವ ಮಾಡಿ ಕಳಿಸುವೆ ಯಮಪುರಿಗಾಗಿ
ಕತ್ತಿಯ ಮೊನೆಯ ನೋಡೆಂದ ॥೮೧॥

ಅಂಜುವರಾರಿಲ್ಲ ನಂಜುಗೊರಳನೆ ಬಲ್ಲ
ಮಂಜು ಮುಸು[ಗೀತೆ] ತರುಗಿರಿಯ ।
ಕುಂಜರದಾನೆ[ಗೆ] ಜಂಬುಕ ಬಲ್ಲುದೆ ಹೋಗು
ಪಂಜು ಹಿಡಿದರೆ ಕೈಯ ಸುಡದೆ ॥೮೨॥

ಬಂದವರೆಲ್ಲರು ಒಂದಾಗಿ ಹೋಗಿರೊ
ಕುಂದದೆ ನಿಮ್ಮರಮನೆಗೆ ।

ವಂದನೆ ಮಾಡಿ ಸುರಿತಾಳಗೆ ಪೇಳಿರೊ
ಬಂದರೊಳ್ಳಿತು ದಂಡು ನಮಗೆ ॥೮೩॥

ಹನ್ನೊಂದು ವರುಷಕ್ಕೆ ಕನ್ನೆ ಹುಯ್ಯಲು ಬೇಕು
ಎನ್ನುತಿ[ರ್ದೆ]ನು ಮನದೊಳಗೆ ।
ಚೆನ್ನಾಗಿ ಕೊಟ್ಟ ಶಿವ ಕರುಣಿಸಲ್ ನಮಗೆ
ಇನ್ಯಾಕೆ ಬಿಡಲಿ ನಾನೆಂದ ॥೮೪॥

ಹೋಗಲಿ ಕೊಡಿಸಯ್ಯ [ಪಡಿಪೊನ್ನ] ವೆಚ್ಚಕ್ಕೆ
ಹಾಗೆ ಕಳಸಬೇಡ ಮಂತ್ರಿ ।
ಹೋಗಲಿ ಸಾಗಿಸು ಅವರನು ಮನ್ನಿಸಿ
ಬೇಗ ಬಾರೆಂದರಮನೆಗೆ ॥೮೫॥

ಹೋಗೆಂದು ಹೇಳಿ ಉಡುಗೊರೆ ವೀಳ್ಯಗಳನಿತ್ತು
ಆಗ ಕಂಪಿಲ ತಾನು ಸಹಿತ ।
ಸಾಗಿ ಬಂದರು ಸದರು ಚಾವಡಿಯಲಿ ಕುಳಿತು
ಬೇಗ ಹೊಕ್ಕರು ಅರಮನೆಯ ॥೮೬॥

ಬಂದವರೆಲ್ಲರು ಒಂದಾಗಿ ಮಾತಾಡಿ
ಸಂದೇಹವೇಕಿನ್ನು ನಮಗೆ ।
ಮುಂದಣ ಕಾರ್ಯವ ಬಲ್ಲನು ಸುರಿತಾಳ
ಇಂದು ನಾವು ತೆರಳಬೇಕೆಂದು ॥೮೭॥

ಇತ್ತಲಿ [ಪಡಿಪೊನ್ನ] ಹೊನ್ನನು ತಕ್ಕೊಡು
ಗುತ್ತಿಯ ಜಗದಪ್ಪನೆಡೆಗೆ ।
ಮತ್ತೆ ಸಂಗಡ ಬಂದ ಮನುಷರ ಕರಕೊಂಡು
ಹತ್ತಿದರವರು ದಾರಿಯನು ॥೮೮॥

ಜಗದಪ್ಪ ರಾಯಗೆ ಹೇಳಿ ಈ ಮಾತನು
ಅಗಣಿತವಾದ ಸುದ್ದಿಯನು ।
ಮಿಗೆ ರಾಮನ ಮೇಲೆ ಕಾರ್ಯವ ಮಾಡೆಂದು
ಬಗೆಯಿಂದ ಹೇಳಿದರವಗೆ ॥೮೯॥

ಪಾಚ್ಚಾವನ ಕೂಡೆ ಖಾನರ್ಝುಂಗೆಯ ಮಾಡಿ
ರಚ್ಚೆಗಿಕ್ಕಿದನು ರಾಮುಗನು ।
ಹುಚ್ಚಾದ ನೇಮಿಖಾನ ಬಂದರೆ ನಾಳೆ
ಫಜ್ಜೀತಿಯ ಮಾಡದೆ ಬಿಡನು ॥೯೦॥

ಆ ರಾತ್ರಿಯೊಳಿದ್ದು ಬೆಳಗೆದ್ದು ಹೋದರು
ಸಾರಿಕೊಳ್ಳುತ ಡಿಳ್ಳಿ ತನಕ ।
ಆರೇಳು ತಿಂಗಳ ದಾರಿ ಶೀಘ್ರದಿ ಹೋಗಿ
ಸೇರಿದರು ಡಿಳ್ಳಿಯನು ॥೯೧॥

ಹೋದರು ಸುರಿತಾಳ ಖಾನರಾಯನ ಬಳಿಗೆ
ಆದ ವೃತ್ತಾಂತವೆಲ್ಲವನು ।
ಭೇದವಿಲ್ಲದೆ ಪೇಳಿದರೊಂದು ವಿನಯದಿ
ಕಾದಲು ಬಲು ಗಟ್ಟಿ ರಾಮ ॥೯೨॥

ರೂ[ಪಿ]ಗೆ ಚೆಲುವನು ಎಳೆಯ ಯೌವನ ಪ್ರಾಯ
ಕೋಪವು ನೋಡು ಅರ್ಜುನನು ।
ಮಾಪತಿ ವರದ ಕುಮಾರನಲ್ಲದೆ ಬೇರೆ
ಈ ಪರಿ ರಾಯರೊಳಗಿಲ್ಲ ॥೯೩॥

ಅಷ್ಟು ದಿಕ್ಕನು ನೋಡಿ ಬಂದೆವು ನಾವಿನ್ನು
ಅಷ್ಟರೊಳಗೆ ಕಾಣಲಿಲ್ಲ ।
ಸೃಷ್ಟಿಯೊಳಗೆ ಇಲ್ಲ ಇಂತಪ್ಪ ಪುರುಷನು
ಕೃಷ್ಣನ ರೂಪಿಗೆ ಸಮನು ॥೯೪॥

ಕಾಮನ ಪೋಲ್ವಂತ ರೂಪಿನ ಚೆಲ್ವನು
ರಾಮಗೆ ಸಾಟಿ ಯಾರಿಲ್ಲ ।
ಭೂಮಿಯನೆಲ್ಲ ತಿರಿಗಿದರಿಲ್ಲ ಅವನಂಥ
ಕೋಮಲಕಾಯ ಸನ್ನಿಭನು ॥೯೫॥

ಕರೆಸಿದ ಬಹುಮಾನದಲಿ ನಮ್ಮನೆಲ್ಲರ
ಇರಿಸಿದನೊಂದು ಮನೆಯೊಳಗೆ ।

ಸರಸದಿಪ್ಪುಲುಪೆ ಉಡುಗೊರೆಯು ಹೊನ್ನುಗಳನು
ಹೊರಿಸಿ ಕಳುಹಿದ ಇದ್ದ ಬಳಿಗೆ ॥೯೬॥

ಬೆಳಗೆದ್ದು ತಂದೆ ಮಕ್ಕಳು ಕೂಡಿ ಬಂದರು
ಇಳುಹಿದ ಪಲ್ಲಕ್ಕಿಯ ತೆಗೆಸಿ ।
ಒಳಗಿರ್ದ ಪಾವುಗೆಗಳ ನೋಡಿ ಮೆಟ್ಟಿದ
ವೈರಿಯ ಗಂಡ ನಾನೆಂದು ॥೯೭॥

ಆಡಿದ ಮಾತಿಗೆ ಆಡಿದ ಹತ್ತೆಂಟು
ಜೋಡಿಸಿದನು ಆರ್ಭಕತನವ ।
ಕಾಡದೆ ಹೋಗಿ ಸುರಿತಾಳಗೆ ಪೇಳೆಂದು
ನೋಡಿ ನಗುತಲಿರ್ದ ರಾಮ ॥೯೮॥

ಕತ್ತಿಗೆ ಅಳುಕುವನಲ್ಲ ಕರ್ನಾಟಕದೊಳ್
ಉತ್ತಮಪುರುಷ ಪುಟ್ಟಿಹನು ।
ಚಿತ್ತೈಸು ಸುರಿತಾಳ ಪಾಚ್ಛಾನೆ ಹೋಗಿ ಬಂ
ದರ್ತಿಯನೆಲ್ಲ ಪೇಳಿದೆವು ॥೯೯॥

ಬಂದ ಕಪ್ಪದ ಹೊನ್ನ ಮುಂದಕ್ಕೆ ಕಳುಹಿದೆವು
ಹಿಂದಾಗಿ ನಾವು ಹೊಕ್ಕು ನೋಡಿ ।
ಚಂದದಿ ಅದರ ವರ್ತಮಾನವನೆಲ್ಲ
ಕುಂದದೆ ಬಿನ್ನೈಸಿದೆವು ॥೧೦೦॥

ಕೇಳಿದ ಸುರಿತಾಳ ಕರೆಸಿದ ನೇಮಿಯ
ಬಾಳ ಕೋಪವ ತಾಳಿ ಮನದಿ ।
ಸಾಳುವನಹುದೊ ಕರ್ನಾಟದೊಳ್ ಕೀರ್ತಿಯ
ಬೀಳು ಮಾಡಿದ ನಮ್ಮ ಬಿರಿದ ॥೧೦೧॥

ಉರಿದೆದ್ದು ಸುರಿತಾಳ ಕರೆಸಿದ ನೇಮಿಯ
ಮರೆಮಾತೆ ಹೊರಡೊ ನೀ ದಂಡ ।
ಬಿರಿದ ನುಂಗಿದನು ರಾಮನ ಹಿಡಿತರುವರೆ
ಕರಸಿದೆವಯ್ಯ ನಾವ್ನಿಮ್ಮ ॥೧೦೨॥

ತಂದೆಯ ಸಿಟ್ಟನು ಕಾಣುತ ಮಗಳೆದ್ದು
ವಂದಿಸಿ ಪಾದಕ್ಕೆ ಬಿದ್ದು ।
ಇಂದೆನ್ನ ಮುತ್ತೈದೆತನವ ನೀನುಳುಹೆಂದು
ತಂದೆಗೆ ಬಿನ್ನೈಸಿದಳು ॥೧೦೩॥

ಇಂತಪ್ಪ ಬುದ್ಧಿಯ ಮಾಡಬಹುದೆ ? ರಾಮ
ಎಂತು ಪೇಳಲು ಕೇಳಿದಿಲ್ಲ ।
ಚಿಂತೆಯಾತಕೆ ನಿನ್ನಳಿಯಗೆ ನೀ ಕೊಟ್ಟೆ
ಅಂತರಂಗದಿ ನೋಡಲಿಕೆ ॥೧೦೪॥

ನಕ್ಕನು ಸುರಿತಾಳ ಮಗಳ ಮಾತನು ಕೇಳಿ
ರಕ್ಕಸ ಸಿಟ್ಟನು ಬಿಟ್ಟ ।
ಅಕ್ಕನ ಕರಕೊಂಡು ನೇಮಿಗಪ್ಪಣೆ ಕೊಟ್ಟು
ಹೊಕ್ಕನು ತನ್ನರಮನೆಯ ॥೧೦೫॥

ಇಲ್ಲಿ ಸಂತೋಷದೊಳಿರಲತ್ತಲಿತ್ತ
ಬಲ್ಲಿದ ಕಂಪಿಲರಾಯ ।
ನಿಲ್ಲದೆ ರಾಮ ಮಾಡಿದ ಮಾಟಂಗಳ
ಎಲ್ಲವ ಕಂಡೆಲೊ ಮಂತ್ರಿ ॥೧೦೬॥

ರಾಮನು ಮಾಡಿದ ಮಹತ್ಕಾರ್ಯ ಮುಂದಿಟ್ಟು
ಭೂಮಿ ತೂಕದ ದಂಡುಬಹದೆ ।
ಸ್ವಾಮಿ ಜಟ್ಟಂಗಿ ರಾಮೇಶನೆ ಗತಿಯೆಂದ
ಆ ಮಹಾದೇವನೆ ಕಾಯ್ವ ॥೧೦೭॥

ಸುರಿತಾಳ ಕಳುಹಿದ ಪವುದಿ ಪಾವುಗೆಗಳ
ದೊರೆ ರಾಮ ಮೆಟ್ಟಿದನೆಂದು ।
ಧರೆಯೆಲ್ಲ ಕೇಳಿತು ಮುಂದೆ ಹುಟ್ಟುವಂಥ
ನರರಿಗೆ ಆಶ್ಚರ್ಯವಾಯ್ತು ॥೧೦೮॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।

ಚದುರ ರಾಮಯ್ಯ ಮಾಡಿದ [ವೀರ]ರಸಗಳ
ಕದನದ ಕಥೆಯು ಸಂಪೂರ್ಣ ॥೧೦೯॥

ಅಂತು ಸಂಧಿ ೫೬ಕ್ಕಂ ಪದನು ೨೮೮೦ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೬

❖

ಗುತ್ತಿಯ ಜಗದಪ್ಪನೊಂದಿಗೆ ಕೊಮಾರ ರಾಮಯ್ಯನ ಕಾಳಗ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ಅಘಹರ ಭವಹರ ಮಿಗೆ ಮೂರು ಕಣ್ಣುಳ್ಳ
ಜಗದೀಶ್ವರ ರುದ್ರರೂಪ ।
ಜಗಕೆಲ್ಲ ಕರ್ತೃ ಶಂಭುವೆ ತ್ರಾಹಿ ಗಿರಿಜೇಶ
ಸೊಗಸಿಂದ ಕೊಡು ಮತಿಗಳನು ॥೨॥

ಕರೆಸಿ[ದಳ್] ಮಂತ್ರಿಯ ಹರಿಯಲದೇವಿಯು
ದೊರೆ ರಾಮ ಮಾಡಿದ ಕಥೆಯ ।
ಬರೆದೋದಿ ಕೇಳಿದರೆ ತೀರದೊ ಮಂತ್ರೀಶ
ಸರಸವೆ ಸುರಿತಾಳನೊಡನೆ ॥೩॥

ಇಂತಪ್ಪ ಬುದ್ಧಿಯು ಹುಟ್ಟಿತೆ ರಾಮಗೆ
ಚಿಂತಾಯಕ ತಾನೆ ಬಲ್ಲ ।
ಪಂಥವ ಗೆಲ್ಲದೆ ಬಿಡನು ರಾಮಯ್ಯನು
ಚಿಂತೆ ಯಾತಕೆ ತಾಯೆ ನಮಗೆ ॥೪॥

ಅಪ್ಪಾಜಿ ರಾಮಯ್ಯ ಮೆಟ್ಟಿದ ಮೇಲಿನ್ನು
ಸೊಪ್ಪುಂಟು ಕಸವ ತೆಗೆವರೆ ।

ಒಪ್ಪವ ಮಾಡಿ ಪೇಳುವೆ ಮಂತ್ರಿ ಬೈಚಪ್ಪ
ಮುಪ್ಪಾಯಿತು ಕುಮ್ಮಟವು । ॥೫॥

ಮತ್ತೆ ರಾಮನ ಮೇಲೆ ಚಿಂತೆಗಳ್ಯಾತಕೆ
ಕರ್ತೃ ಹರನು ಶಿವ ಬಲ್ಲ ।
ಅ[ರ್ತಿಯೆ] ನೋಡಿ ಪುಟ್ಟಿಸಿದ ಜಗದೊಳು
ಮರ್ತ್ಯದ ದೊರೆಯೆ ಕೇಳಮ್ಮ ॥೬॥

ನಾಳೆ ಸುರಿತಾಳನ ದಂಡು ಬಂದರೆ ಮಂತ್ರಿ
ಕೋಳುಹೋಗದೆ ಕುಮ್ಮಟವು ।
ಹೇಳುವ ಮಾತಲ್ಲ ಕೇಳಮ್ಮ ಜಗದೊಳು
ಏಳುಕೋಟಿಗೆ ದೊರೆಯವನು ॥೭॥

ಎಲ್ಲರಂತಲ್ಲವೊ ಡಿಳ್ಳಿಯ ಸುರಿತಾಳ
ಎಲ್ಲ ರಾಜ್ಯಕೆ ಪಾಚ್ಛವ ।
ಮಲ್ಲೇಶ್ವರನ ದಯವುಂಟು ರಾಮಯ್ಯಗೆ
ಬಲ್ಲಿದನವನು ಅಂಜುವನೆ ॥೮॥

ಯಾಕಿಷ್ಟು ಮಾಡಿದನರಿಯನೆ ಹರಿಯಮ್ಮ
ನಾಕಜರುಂಟು ಅವನಲ್ಲಿ ।
ಲೋಕದ ದೊರೆಯಲ್ಲ ಜನಿಸಿದ ಧರಣಿಗೆ
ಶ್ರೀ ಕೃಷ್ಣ ನಿನ್ನ ಗರ್ಭದೊಳು ॥೯॥

ಇವರೀರ್ವರು ಸಂಹರುಷದೊಳಿರೆ
ಭುವನೇಶ ಕಂಪಿಲನ[ನ]ರಸಿ ।
ಹವಣಿಸಿ ಗುತ್ತಿಯ ಜಗದಪ್ಪನವರು ಬಂದು
ನವಲಕ್ಷ ಹೊನ್ನ ಬೇಡಿದರು ॥೧೦॥

ಕಪ್ಪದ ಹೊನ್ನ ತಾರೆನ್ನುತ ಕಂಪಿಲನ
ಬಪ್ಪ ಬೀದಿಯಲಿ ನಿಲ್ಲಿಸಲು ।
ಕಪ್ಪುಗೊರಳನ ವರದಲ್ಲಿ ತನ್ನೊಡ[ನೊಡ]
[ನಿ]ಪ್ಪ ಬಾಲಕರೈವರೊಡನೆ ॥೧೧॥

ಬರುತ ಬರತಲಿ ಕಂಡನು ರಾಮನಾಥನು
ದೊರೆಯು ಕಂಪಿಲನ ತರುಬಿದುದ ।
ನೆರೆದು ಕೇಳಿದನು ಇವರ್‍ಯಾಕೆ ಬೀದಿಯೊಳಿನ್ನು
ತರುಬಿಕೊಂಡಿಹರಿವರ್‍ಯಾರು ॥೧೨॥

ಜಗದಪ್ಪ ಗುತ್ತಿಯ ರಾಯನ ಚ
ರರ್ಗಳು ಕಪ್ಪವ ಕೊಡಹೇಳಿ ಕಳುಹೆ ।
[ತ]ಗಹಿಂದ ತಮ್ಮ ಪೊನ್ನುಗಳಿಗೆ ನಿಲಿಸಿದರು
ಅಘಹರ ಚೆನ್ನಿಗರಾಮ ॥೧೩॥

ನೀನು ಬಾಹನಕ ನಾನಿಲ್ಲಿಹೆ ಪೋ[ಗೆನೆ]
ಭಾನುಸಖನ ಮುಖದವ[ನು] ।
ಜ್ಞಾನಿ ರಾಮನ ನಿಲಿಸಿದನು ಕಂಪಿಲರಾಯ
ತಾನರಮನೆಗೆ ಐತಂದ ॥೧೪॥

ಅವರಿಗವನನಿತ್ತು ಭವನಕ್ಕೆ ನಡೆತಂದು
ನವಯೌವನೆಯಳ ಕರೆ[ಯೆ] ।
ತವಕದೊಳುದಕವ ಅರಸಗೆ ತಂದಿಕ್ಕೆ
ಭುವನೇಶ ತಾನು ಕೈಕೊಂಡ ॥೧೫॥

ಕೈಕಾಲು ಮುಖದೊಳೆದು ಕಂಪಿಲರಾಯನು
ಗಮ್ಮನೆ ಪೊಕ್ಕ ತಾ ಗೃಹವ ।
[ಕೈ]ಯಿಟ್ಟು ಕುಳಿತು ಊಟವ ಮಾಡಲಂಗನೆ
ಕರದಲ್ಲಿ ತಾಂಬೂಲವಿಡಿದು ॥೧೬॥

ಅತ್ತ ಕಂಪಿಲ ತನ್ನ ಅರಮನೆ ಹೆಂಗಳ
ಅರ್ತಿಯಿಂ[ದಿರೆ] ಇತ್ತ ರಾಮ ।
ಗುತ್ತಿಯ ಸ್ಥಾನಪತಿಗಳ ಪ್ರಧಾನರ ಹಿಡಿ
ದತ್ತ ನೂಕಿಸಿದ ಪೋಗೆನುತ ॥೧೭॥

ಹೊತ್ತ ಹಣವನು ಕೊಡದೆ ರಾಮನಾಥನು
ಕತ್ತನು ಹಿಡಿದು ನೂಕಿಸಿದ ।

ಗುತ್ತಿಯ ಜಗದಪ್ಪರಾಯ ಕೋಪವ ತಾಳಿ
ಮತ್ತೆ ಮನ್ನೆಯರನು ಕಳುಹಿ ॥೧೮॥

ಇತ್ತ ವಾಲಗವಿತ್ತು ಜಗದಪ್ಪರಾಯನು
ಮೊತ್ತದ ಮಂತ್ರಿ ಮನ್ನೆಯರು ।
ಸುತ್ತಣ ರಾಯರಿಗೋಲೆಯ ಬರೆಸಿದ
ಮತ್ತೆ ಕಳುಹಿದನು ಚರರುಗಳ ॥೧೯॥

ಚರರೋಡೆ ದಿಕ್ಕುದಿಕ್ಕಿನ ರಾಯರಿಗೆಲ್ಲ
ಇರದೆ ವಾಲೆಗಳ ಕಳುಹಿದನು ।
ಕರದೊಳು ವಾಲೆಯ ಪಿಡದೋ[ದೆ] ಕರಣಿಕರ್
[ಉರು]ತರ ಮಾತು ನೀತಿಗಳ ॥೨೦॥

ಶ್ರೀಮನ್ಮಹಾರಾಯ ಮಂಡಲೇಶ್ವರ ಭೂಪ
ಭೀಮ ವಿಕ್ರಮನ ಪ್ರತಾಪ ।
ರಾಮಾಭಿರಾಜಿತ ಜಗದಪ್ಪರಾಯನು
ಪ್ರೇಮದಿ ಕಳುಹಿದ ಕಾರ್ಯ ॥೨೧॥

ಲಾಳ ಕೊಂಕಣ ಮಲೆಯಾಳ ಸಿಂಗ ಬಂಗಾಳ
ದಾಳು ನೆರೆದು [ಏಳಿ] ಭೂಪ ।
ಕಾಳೆಯ ಹಿಡಿಸಿ ಭೂಪಾಲರೇಳಿರಿ ದೊಡ್ಡ
ದಾಳಿಯು ನಡೆವ ಸಂಭ್ರಮವು ॥೨೨॥

ವೀರ ಕನ್ನೋಜಿ ಕರಾಳ ಮನ್ನೆಯ ಸಿಂಧು ಮ
ಹಾರಾಷ್ಟ್ರ ಬಲವೆಲ್ಲ ಸಹಿತ ।
ದೂರದೈವತ್ತಾರುದೇಶದ ಅರಸುಗಳು
ಸಂಗ್ರಾಮಕ್ಕಾಗಿ ನಡೆದರು ॥೨೩॥

ಕೊಟ್ಟದ ಬೇಡರು ಹಟ್ಟಿಕಾರರು ಸಹ
ನೆಟ್ಟನೆ ಏಳು ಸಾವಿರವು ।
ಬಿಟ್ಟರು ಪಾಳ್ಯೆಯ ಗುತ್ತಿಯ ಜಗದಪ್ಪ
ಸೃಷ್ಟಿಪ ರಾಯನ ಮುಂದೆ ॥೨೪॥

ಸುತ್ತಣ ಮನ್ನೆಯರ ಕೂಟವು ನೆರೆದಿದೆ
ಗುತ್ತಿಯ ಜಗದಪ್ಪನೊಡನೆ ।
ಎತ್ತಿ ಸಾರುವ ಕಹಳೆ ಭೇರಿ ಮೃದಂಗವು
ಮೊತ್ತದ ಧ್ವನಿಗೂಡಿ ನಡೆಯೆ ॥೨೫॥

ವಾರುಧಿಯಂತೆ ಕೂಡಿತು ಒಂದು ಲಕ್ಷವು
ವಾರುವನಾರು ಸಾವಿರವು ।
ಧೀರ ಮನ್ನೆಯರೇಳು ಲಕ್ಷವು ಸಹವಾಗಿ
ಧೀರ ನಡೆದನು ಕುಮ್ಮಟಕೆ ॥೨೬॥

ದಂಡೆತ್ತಿ ನಡೆದರು ಮಂಡಲಿಕರು ಕೂಡಿ
ಡಂಡಾಮ ಡಂಮೆಂದು ನಡೆಯೆ ।
ದಿಂಡ ಕಂಪಿಲನು ಸೆಣಸಿ ತೋರಿದ ತನ್ನ
ಗಂಡಾಳುತನದ ರೀತಿಯನು ॥೨೭॥

ಬೇಡ ಸಾರಿದೆನು ಕಪ್ಪವ ಕೊಡು ಕಂಪಿಲ
ರೂಢಿಗೆ ಹೊಸತು ಮಾಡಿ[ದೆ]ನು ।
ಮಾಡದ ಮಾಟವ ಮಾಡಿ ಕೊಲ್ಲುವನೆಂದು
ನಾಡೊಡೆಯನು ಮಾತಾಡಿದನು ॥೨೮॥

ಆಡಲ್ಯಾತಕೆ ಕಂಪಿಲನಿನ್ನು ಬಿಡುವನೆ
ದಾಳಿಯ[ನಿ]ಡುವೆ ಕುಮ್ಮಟಕೆ ।
ರೂಢೀಶ ಜಗದಪ್ಪರಾಯ ರಾಜ್ಯದ ಕೊಂಡು
ಹೂಡಿದ ಕದನಕಾಯುಧವ ॥೨೯॥

ಬಂದು ಬಿಟ್ಟನು ಕುಮ್ಮಟಕೆ ಉರವಣಿಯಿಂದ
ಮಂದಿ ಮಾರ್ಬಲವೆಲ್ಲ ಸಹಿತ ।
ನೊಂದನೂರೊಳಗೆ ಕಂಪಿಲನು ಠಾಣ್ಯ[ವ] [ಮುತ್ತಿ]
ಬಂದು ಹಿಡಿದರು ಕಾಳಗವ ॥೩೦॥

ಊರ ಹತ್ತಿರಕ್ಹೋಗಿ ಸಾರಿ ಹುಯ್ಯಲ ತೆಗೆದು
ಆರೇಳು ಸಾವಿರ ಬಿಲ್ಲು ।

ಭೂರಿ ಜಗಳದೊಳು ಏರಿ ತಾವ್ಕಡಿವುತ
ತೂರಿದ ಶಿರ ಲೆಕ್ಕವಿಲ್ಲ ॥೩೧॥

ಒಂದೆಸೆ ಲಾಕಾಳು ಒಂದೆಸೆ ತುರಗವು
ಒಂದೆಸೆಯಲಿ [ಆ]ನೆ ಪಡೆಯು ।
ಒಂದೆಸೆಯಲಿ ಸರ್ವ ದಂಡೇರಿ ಕಡಿಯಲು
ನೊಂದರು ಕಂಪಿಲನವರು ॥೩೨॥

ನೊಂದ ದಂಡ ಸಂತೈಸುತ ರಾಮಯ್ಯ
ಬಂದು ಹಿಡಿದನು ಕಾಳಗವ ।
ಸಂದೇಹವ್ಯಾತಕೆ ಪರಬಲದೊಳು ರಾಮ
ಕೊಂದುಹಾಕೊಡನೆ ತಾನಿರಿದ ॥೩೩॥

ಪರಬಲಮಸ್ತಕಶೂಲನೆಂದೆನಿಸುವ
ಬಿರಿದನು ಹೊಗಳಿಸಿ ರಾಮ ।
ಧರೆಯ ರಾಯರ ಗಂಡನೆಂಬ ಕಡೆಯವನಿಟ್ಟು
ಧುರಧೀರ ನಡೆದನರ್ತಿಯಲಿ ॥೩೪॥

ಸಾರಿ ಬಿರಿದನೆಲ್ಲ ಮಾರಿ ಹೆಗ್ಗಾಳೆಯು
ಚೀರುವ ಚಿನ್ನಗಾಳೆಗಳು ।
ಧೀರ ಕೊಮಾರ ರಾಮಯ್ಯ ಮುಂಗಾಳಗಕೆ
ಭೋರನೆ ತನ್ನೈವರೊಡನೆ ॥೩೫॥

ಗುತ್ತಿಯನಾಳ್ವ ಜಗದಪ್ಪರಾಯನ ಗಂಡ
ಸುತ್ತಣ ರಾಯರ ಮಿಂಡ ।
ಉತ್ತರಿಗೆಯ[ನು]ಟ್ಟು ನಡೆದನು ರಾಮಯ್ಯ
ಅರ್ತಿಯಿಂದಲಿ ಮುಂಗಾಳಗಕೆ ॥೩೬॥

ವಾರುವನೇರಿ ದುವ್ವಾಳಿಸಿ ರಾಮಯ್ಯ
ಸಾರ ಕನ್ನೋಜಿ ನಾಯಕರು ।
ಭೂರಿ ದಳವ ಕೂಡಿಕೊಂಡವರ ಶಿರಗಳ
ಹಾರಿಸಿದನು ಯಮಪುರಿಗೆ ॥೩೭॥

ಮುಂದಣ ತಲೆಯನು ಮನ್ನೂಲ ಮಾಚನು
ತಂದನು ರಾಮಯ್ಯನೆಡೆಗೆ ।
ವಂದಿಸಿ ಕರಗಳ ಮುಗಿದು ಬೂಟಲ ಬೊಮ್ಮ
ಮುಂದಕ್ಕೆ ನಡೆಯಬೇಕೆಂದ ॥೩೮॥

ಮನ್ನುಲ ಚಿನಮಾದ ವಂದಿಸಿ ರಾಮಗೆ
ಕನ್ನೆ ಹುಯ್ಯಲರಸ ನೀ ನೋಡು ।
ಮುನ್ನೂರು ಮೊನೆ ಈಟಿ ಹೊಕ್ಕಿರಿದನು ಅವ
ಹನ್ನೊಂದು ಸಾವಿರ ಪೌಜ ॥೩೯॥

ಬುಕ್ಕನಪಾಲನು ಹೊಕ್ಕನು ರಣದೊಳು
ಒಕ್ಕಲಿಕ್ಕುವ ಅರಿಬಲವ ।
ಮಿಕ್ಕು ಬಂದವರನು ಮುದುಗೊಂಡ್ಲ ಮೂಗನು
ಕುಕ್ಕೂತ ಮುನ್ನೂರು ಈಟಿ ॥೪೦॥

ಕನಕ ತಪ್ಪಟೆಯನು ಹೊಯ್ಸುತ ಬಂದನು
ಚಿನುಕ ರಾಹುತನು ಮಲ್ಲಣ್ಣ ।
ಅನುವಾದವೈದತ್ತು ರಾಜಯೊಳ್ ಕೈರತ್ತು
ಅನುವಾದವು ರಾಮನ ಮುಂದೆ ॥೪೧॥

ಮದಗಜ ಹಿಂಡು ಮುತ್ತಲು ರಾಮಯ್ಯನು
ಕುದುರೆಯ ಹಾರಿಸಿ ಕಡಿಯೆ ।
ಒದಗಿತು ಮೂರು ಸಾವಿರ ಬಿಲ್ಲು ಅಂಬಿನ
ಹೊದೆಗಳು ತೀರಿದವಲ್ಲಿ ॥೪೨॥

ಸ್ವಾನೆಯ ಮಳೆಯಂತೆ ಸುರಿದವಂಬಿನ ಮಳೆ
ಆನೆಯ ಹಿಂಡಿನ ಮೇಲೆ ।
ಮೌನದಿ ಮುಗಿಲನ್ನಕ ಹೊಕ್ಕಿರಿದನು
ಆನೆಯ ಹಿಡಿದ ಕೈಸೆರೆಯ ॥೪೩॥

ಕಾಮಗೇತಿಯ ತಿಮ್ಮನ ಮಂದಿ ಸಹವಾಗಿ
ಆನೆಯ ಹಿಂಡಿನ ಮೇಲೆ ।

ಬೋನಗುರಿಯ ಹಿಡಿದು ತಂದಂತೆ ಹತ್ತೆಂಟು
ಜ್ಞಾನಿ ರಾಮಯ್ಯಗೆ ಒಪ್ಪಿ ॥೪೪॥

ಕೊಟ್ಟದ ಬೇಡರು ಬೆಟ್ಟದ ಸಿಂಹರು
ಕಟ್ಟಿನ ಬಿಲ್ಲು ಮುನ್ನೂರು ।
ಪಟ್ಟೆದ ಮಂದಿ ಮರುಳೆ ಪಾಪನವರಿನ್ನು
ದಿಟ್ಟ ರಾಮಯ್ಯನೆಡಬಲದಿ ॥೪೫॥

ಚಾರಮರಾಯನ ಮಕ್ಕಳು ಮುನ್ನೂರು
ವಾರುವ ಕಾಟಣ್ಣ ಸಹಿತ ।
ಬ್ಯಾರೊಂದು ಕಡೆಯೆ ಕಡಿದಾಡುತಲಿರ್ದರು
ಧೀರ ಮಾನ್ಯರ ಕೂಡಿಕೊಂಡು ॥೪೬॥

ಮಾಳವ ಮಗಧ ಪಾಂಚಾಲ ನಾಯಕರನು
ಬೀಳಲಿ ಹೊಯ್ದು ಕೆಡಹಿದರು ।
ತಾಳಿ ಕೋಪವನು ಗುತ್ತಿಯನಾಳ್ವ ರಾಯನ
ಚೂಣಿಯ ಮುರಿಯಲಿಕ್ಕಿದರು ॥೪೭॥

ಇರಿದು ತರಿದು ಶಿರಗಳನು ಉತ್ತರಿಸುತ
ಕೊರೆದು ಕೊರಳನು ಕತ್ತರಿಸಿ ।
ಭರದಿಂದ ಬಲವ ಮುರಿಯಲೊದೆದ ರಾಮಯ್ಯ
ದೊರೆಮಗ ಕಂಪಿಲನೆಡೆಗೆ ॥೪೮॥

ಕಾಡ ಬೇಡರ ಪಡೆಗೂಡಿತು ರಣಕಂಜಿ
ಓಡುವ ರಾಯರ ಗಂಡ ।
ಮೂಡಲ ಪೌಜಿಗೆ ಕುದುರೆಯ ಹಾಕಿದ
ಕಾಡ ಬೇಡರು ಬೊಬ್ಬೆಯಿಡುತ ॥೪೯॥

ಮೂಡಲ ಪೌಜನು ಮುರಿಯಲಿಕ್ಕಿದ ರಾಮ
ನೋಡಿದ ತನ್ನ ಎಡಬಲವ ।
ಓಡಿಹೋದನು ರಾಯ ಆರೆಯರ [ದ]ಳನೆಲ್ಲ
ಕೂಡಿ ಬಂದಿತು ನಮ್ಮ ಬಲವು ॥೫೦॥

ಕಡೆಯ ಕಾಳಗ ಮಾಡಿ ಗಡಿಯಂಕ ಚೆನ್ನನು
ಒಡೆಯಗೆ ಬಂದು ಕೈಮುಗಿದ ।
ಹಿಡಿಸು ರಾಮಯ್ಯ ಧರ್ಮಗಾಳೆಯನಿನ್ನು
ನಡೆಯಿನ್ನು ಹೋಗುವ ತಿರುಗು ॥೫೧॥

ರಂಗುಮೊಟ್ಟೆಯ ಕಟ್ಟಿದವರುಂಟೆ ಲೋಕದೊಳು
ಸಂಗ್ರಾಮಧೀರ ವಜೀರ ।
ಮುಂಗಡೆಯಲಿ ಬಂದು ಕಾಟಣ್ಣ ಕೂಡಿದ
ಸಂಗಾತ ಅಣ್ಣತಮ್ಮಗಳು ॥೫೨॥

ಹಿಡಿಯೆಂದ ಧರ್ಮಗಾಳೆಯನು ರಾಮಯ್ಯನು
ಹಿಡಿಸಿ ಮುಂದಕೆ ನಡೆಸಿದನು ।
ಒಡನೈದು ಮಂದಿ ಮನ್ನೆಯರು ತಾ ಸಹವಾಗಿ
ಕಡುಗಲಿ ಹಿಂದಕ್ಕೆ ತೆರಳಿ ॥೫೩॥

ತನ್ನೊಡನಿದ್ದೈವರು ಬಿಲ್ಲುಕಾರರು
ಮನ್ನೆಯ ಮಕುಟವರ್ಧನರು ।
ಸನ್ನುತವನು ಮಾಡಿ ಕಡಿದೊಟ್ಟಿ ರಣದೊಳು
ತನ್ನರಮನೆಗಾಗಿ ತಿರುಗಿ ॥೫೪॥

ಅರಮನೆಗೈದರು ಆ ಕ್ಷಣ[ದ]ಲತ್ತವು
ಘುರಧೀರ ಜಗದಪ್ಪನೊಡನೆ ।
ಮುರಿದೋಡಿಹೋಗಿ ಪೇಳ್ದರು ತಮ್ಮರಸಗೆ
ಧುರಧೀರ ರಾಮನ ಬಿರಿದ ॥೫೫॥

ಬಿರಿದ ಕೇಳಿದನಾಗ ಜಗದಪ್ಪರಾಯನು
ಭರದಿ ವಾಜಿಗಳೈದ ನೋಡಿ ॥೫೬॥

ಮಗಳ ಕಪ್ಪವನಿತ್ತು ಜಗದಪ್ಪರಾಯನು
ನಗುತ ವಾರುವನೈದ ನೋಡಿ ।
ಸೊಗಸಿನ ತೇಜಿಯು ಸಹ ಕನ್ನೆಯ ಬೇಗ
ಮಿಗೆ ಕೊಟ್ಟು ಒಂದಾದನಾಗ ॥೫೭॥

ಮಂತ್ರಿಗಳೆರಡು ಮಾತಾಡಲು ರಾಮಯ್ಯ
ನಂತವನೆಲ್ಲಿ ಪುಟ್ಟುವನು ।
ಕಂತುಹರನ ವರದಿಂದ ಪುಟ್ಟಿದನವ
ನೆಂತೆಂದು ನೋಡಲಿಬ್ಯಾಡ ॥೫೮॥

ಬಿರಿದಂಕನಾದ ಕಾರಣದಿಂದ ಡಿಳ್ಳಿಯ
ಸುರಿತಾಳನವರ ಪಾವುಗೆಯ ।
ಧರೆಯೊಳು ಮೆಟ್ಟಿ ದಕ್ಕಿಸಿಕೊಂಡನಲ್ಲದೆ
ಮರುಳರಾದರಿಗೆ ದಕ್ಕುವುದೆ ॥೫೯॥

[ದ್ವಾಪರದ]ಲ್ಲಿ ತಾ ಪಾರ್ಥನು ಜನಿಸಿದ
ಭೂಪ ಕಂಪಿಲನ ಗರ್ಭದಲಿ ।
ಈ ಪರಿ ಬಿರಿದನು ಪೊಗಳಿಸಿ ನಡೆದಂತು
ಮಾಪತಿ ದಯವುಂಟು ಅವಗೆ ॥೬೦॥

ಪರನಾರಿಯ ಸಹೋದರನೆಂಬ ಬಿರಿದನು
ಧರಿಸಿದನಂತೆ ಕಾಲೊಳಗೆ ।
ಧರೆಯೊಳು ಈ ಬಿರಿದ ದಕ್ಕಿಸಿಕೊಂಬಂಥ
ದೊರೆಯುಂಟೆ ಮೂರು ಲೋಕದೊಳು ॥೬೧॥

ಸುರರೊಳು ನರರೊಳು ನಾರಿಗೆ ಸೋಲದ
ಪುರುಷರಿನ್ನುಂಟೆ ಲೋಕದೊಳು ।
ಪರನಾರಿ ಶಾಪವು ಮುನ್ನುಂಟು ಪಾರ್ಥಗೆ
ಪರಿಹರಿಸಿಕೊಂಬರೆ ಬಂದು ॥೬೨॥

ಅದ ಕಾರಣದಿ ಮಗಳ ಕೊಟ್ಟೆ ಮಂತ್ರೀಶ
ಚದುರ ರಾಮಯ್ಯಗೆ ನಾನು ।
ಮದುವೆಯ ಮಾಡಿಕೊಂಡು ನೀ ಬಾರೈ ಚಂದ್ರ
ವದನೆ ರಾಮಲದೇವಿಯನು ॥೬೩॥

ಇತ್ತ ಜಗದಪ್ಪನು ಮದುವೆಯ ಸಂಭ್ರಮ
ಅತ್ತ ಕಂಪಿಲರಾಯ ಮಗನ ।

ಎತ್ತಿ ಮುದ್ದಾಡಿ ಮಗನ ಮುಖವನು ನೋಡಿ
ಮುತ್ತಿನ ತುರಾಯವ ಕೊಟ್ಟ ॥೬೪॥
ಅರ್ತಿಯಿಂದಾರತಿಗಳ ತಂದು ಹರಿಯಮ್ಮ
ಮೊತ್ತದ ಹೆಮ್ಮಕ್ಕಳೊಡನೆ ।
ಎತ್ತಿಸಿ ನಾನಾ ಪರಿಯ ನಿವಾಳಿಯ
ಮತ್ತೆ ತೆಗಸಿ ಕಾಡಿಗಿಡಿಸಿ ॥೬೫॥

ತಂದೆತಾಯಿ ಪಾದಕೆ ಬಿದ್ದನು ರಾಮಯ್ಯ
ವಂದಿಸಿದನು ಭಕ್ತಿಯಲಿ ।
ಇಂದಾದ ರಾಜ್ಯವನೆಲ್ಲವ ಕೇಳುತ
ತಂದೆ ಮಕ್ಕಳು ಹರುಷದಲಿ ॥೬೬॥

ಸಕ್ಕರೆ ಚಿನಿಪಾಲು ತುಪ್ಪ ಮೃಷ್ಟಾನ್ನವು
ಚೊಕ್ಕಟ ಕಡುಬು ಕಜ್ಜಾಯ ।
ಅಕ್ಕರದಿಂದ ಮಗನ ಕರೆದು ಕೂಡುಂಡು
ಚಿಕ್ಕರಮನೆಗಾಗಿ ನಡೆದ ॥೬೭॥

ಉದಯದೊಳೆದ್ದು ಊಟವ ಮಾಡಿ ಕಂಪಿಲ
ಸದರಿನೊಳಗೆ ಬಂದು ಕುಳಿತ ।
ಚದುರ ರಾಮಯ್ಯನ ಕರೆಸಿ ರಣಾಗ್ರದ
ಹದನ ಕೇಳುತ ಅರ್ತಿಯಿಂದ ॥೬೮॥

ನಿನ್ನೆ ರಣಾಗ್ರದೊಳ್ ಕಡಿದಾಡಿ ಬಂದಂಥ
ಮನ್ನೆಯರೆಲ್ಲರ ಕರೆಸು ।
ಚೆನ್ನಾಗಿ ನೋಡಿ ಮಾಡಿದಂಥ ಕಷ್ಟವ
ಮನ್ನಿಸು ರಾಮಯ್ಯನೆನುತ ॥೬೯॥

ಬೊಕ್ಕಸದೊಳಗಿಂದ ತರಿಸಿದ ಹಣ ಹೊನ್ನ
ಚೊಕ್ಕಟ ಒಡವೆ ವಸ್ತುಗಳ ।
ಅಕ್ಕರ ಮಿಗೆ ಜವಳಿಯ ಜೇಬಿ ನಾಣ್ಯವ
ಇಕ್ಕಿದ ರಾಮಯ್ಯನೊಡನೆ ॥೭೦॥

ಕರೆಸಿದ ರಾಮಯ್ಯ ರಾಣುವೆ ಮಂದಿ ಮಕ್ಕಳ
ಧುರಧೀರ ಮನ್ನೆಯರುಗಳ ।
ದೊರೆಯ ಮಕ್ಕಳು ರಾಹುತರು ಕುಮಾರರ
ಮರೆಯದೆ ಕರೆಸಿದ ರಾಮ ॥೭೧॥

ರಣರಂಗದೊಳು ಹೊಕ್ಕು ಹೆಣಗಿದ ಬಂಟರನು
ಎಣಿಕೆಯ ಮಾಡಿಸಿ ರಾಮ ।
ಬಣವೆಯ ಹುಲ್ಲ ಬಸವಗೆ ಕೊಟ್ಟ ತೆರನಂತೆ
ಉಣಿಸಿದ ಮಂದಿ ಮಕ್ಕಳನು ॥೭೨॥

ಕಾಲಗಗ್ಗರ ಕೊಟ್ಟ ತೋಳಬಾಪುರಿ ಕೊಟ್ಟ
ಮೇಲಾಗಿ ಕೊಟ್ಟ ಚೌಕುಳಿಯ ।
ಸಾಲು ಮೋಹನ್ಮಾಲೆ ಸರಗಳ ಕೊಟ್ಟನು
ಕಾಲಸರವ ಕೊಟ್ಟ ರಾಮ ॥೭೩॥

ಹೊನ್ನ ಗಂಟೆಯ ಕೊಟ್ಟ ಪುಲಿಯ ಚರ್ಮವ ಕೊಟ್ಟ
ಮನ್ನಿಸಿ ಕೊಟ್ಟ ಚೌರಿಗಳ ।
ಚೆನ್ನನ ಸರ ಮುತ್ತು ತೊಡರು ಬಾಪುರಿಗಳ
ಚೆನ್ನಾಗಿ ಕೊಟ್ಟ ರಾಮಯ್ಯ ॥೭೪॥

ಊರು ಉಮ್ಮಳಿ ಕೊಟ್ಟ ಭಾರಿ ನಿಗಳವ ಕೊಟ್ಟ
ಹಾರುವ ಉಡಾಸವ ಕೊಟ್ಟ ।
ನಾರಂಜಿ ತೋಪಿಗಳ ಕೊಟ್ಟನು ರಾಮಯ್ಯ
ಮೀರಿದ ಬಿರಿದುಗಳ ಕೊಟ್ಟ । ।೭೫॥

ಹಗಲು ದೀವಿಟಿಗೆ ಕೊಟ್ಟ ಮಿಗೆ ಜಲ್ಲಿಗಳ ಕೊಟ್ಟ
ಜಗಜಂಪಿನ ಸತ್ತಿಗೆಗಳನು ।
ಮಿಗಿಲು ವಸ್ತ್ರವ ಕೊಟ್ಟ ಮುತ್ತಿನೊಂಟಿಯ ಕೊಟ್ಟ
ಜಗಳಕ್ಕೆ ಕೊಟ್ಟ ಆಯಧವ ॥೭೬॥

ಆನೆ ಕುದುರೆ ಕೊಟ್ಟ ಸೇನೆ ಭಂಡಾರ ಕೊಟ್ಟ
ಮಾನನಿಧಿ ಮದುವೆಗೆ ಕೊಟ್ಟ ।

ಬೋನಕ್ಕೆ ಕೊಟ್ಟ ಗದ್ದೆಯು ಹೊಲ ಮಾನ್ಯವ
ಆನಂದ ಅರ್ತಿಲಿ ರಾಮ ॥೭೭॥

ತೊಡ[ರು] ಬಾಪುರಿ ಕೊಟ್ಟ ನಡುವಿನೊಡ್ಯಣ ಕೊಟ್ಟ
ಉಡಿದಾರ ವಂಕುಡಿ ಕೊಟ್ಟ ।
ಬಡತನವನು ನೋಡಿ ಹೊನ್ನು ಹಣಗಳ ಕೊಟ್ಟ
ಎಡರಿಲ್ಲದಂತೆ ರಾಮಯ್ಯ ॥೭೮॥

ಗಾಯಾದವರಿಗೆ ಕೊಟ್ಟ ಬಾಯಿತುಂಬ ಹೊನ್ನ
ಆಯತವಾದ ಉಡುಗೊರೆಯ ।
ಗಾಯದಾರ್ಯೆಕೆಗೆ ಕೊಟ್ಟನು ಹಿಡಿ ಹೊನ್ನ
ಆಯತವಾಗಿ ರಾಮಯ್ಯ ॥೭೯॥

ಸತ್ತವರ ಮಕ್ಕಳ ಕರೆಸಿದ ರಾಮಯ್ಯ
ಮುತ್ತು ಬಂಗಾರವ ಕೊಟ್ಟ ।
ಹೆತ್ತ ತಂದೆಯ ಮರೆಯದೆ ನಡೆವಂತೆ
ಒತ್ತಿ ಹೇಳಿದನು ಕಂಪಿಲನು ॥೮೦॥

ಈ ಪರಿಯಲಿ ರಾಮ ಮಂದಿ ಮಕ್ಕ[ಳಿಗೆ]ಲ್ಲ
ಭೂಪತಿ ಸಮದಾಸಿ ಕೊಟ್ಟ ।
ಅಪಾರವಾಗಿ ಉಡುಗೊರೆ ಗಂಧ ವೀಳ್ಯವ
ಭೂಪ ಕೊಡಿಸಿದನೆಲ್ಲರಿಗೆ ॥೮೧॥

ಮೊತ್ತದ ವೀಳ್ಯವ ಕೊಡಿಸಿದ ರಾಮಯ್ಯ
ಇತ್ತನೆಲ್ಲರಿಗೆ ಅಪ್ಪಣೆಯ ।
ಹೆತ್ತ ತಂದೆಯ ಪಾದಕೆ ಬಿದ್ದು ರಾಮಯ್ಯ
ಒತ್ತಿ ನಡೆದನರಮನೆಗೆ ॥೮೨॥

ಮಗನ ಸಂತೋಷವ ಮಿಗೆ ನೋಡಿ ಕಂಪಿಲ
ಮುಗುಳು ನಗೆಯಲ್ಲಿ ನಗುತಿರ್ದ ।
ಬಗೆಯೇನೊ ಮಂತ್ರಿ ರಾಮಯ್ಯನೆದ್ದು ಪೋದ
ಸೊಗಸು ತಿಳಿಯದು ನಮಗೆಂದ ॥೮೩॥

ಕನ್ನೆ ಹುಯ್ಯಲ ಕಡಿದುಬಂದ ರಾಮಯ[ಗೆ]
ಇನ್ನೇನ ಕೊಡಬೇಕು ಮಂತ್ರಿ ।
ಕನ್ನೆವೆಣ್ಣುಗಳೈದು ಧಾರೆಯೆರೆಯಲಿ ಬೇಕು
ಉನ್ನತ ಹರುಷದೊಳ್ ನಾವು ॥೮೪॥

ಬಿರುದಿಗೆ ಒಂದೊಂದು ಒಡವೆಯ ಕೊಡಬೇಕು
ಮರೆಯ ಮಾತಿನ್ಯಾಕೆ ರಾಯ ।
ಧರೆಯ ರಾಯರಗಂಡನೆಂದು ಹೊಗಳಿಸುವನು
ಅರಿಕೆಯಿಲ್ಲವೆ ನಿನ್ನ ಮನಕೆ ॥೮೫॥

ಹಿರಿಯ ನೀ ಬೈಚಪ್ಪ ಹೇಳಿದ ಮಾತಿಗೆ
ಅರೆಮರೆಯುಂಟೆ ನಮ್ಮೊಳಗೆ ।
ದೊರೆತನ ರಾಮಗೆ ಮಾಡುವೆ ನಾ ಮುಂದೆ
ಬರಿಯ ಮಾತಲ್ಲವೊ ಮಂತ್ರಿ ॥೮೬॥

ಭಾವ ಮಂಚಣ್ಣನ ಮಗಳೊಂದು ನೀ ನೋಡು
ಭಾವೆ ರಾಮಲದೇವಿಯೊಡನೆ ।
ಮಾವ ಚಾರಮನ ಮೊಮ್ಮಕ್ಕಳು ಇಬ್ಬರ
ಭಾವಿಸಿ ನೋಡು ಬೈಚಪ್ಪ ॥೮೭॥

ಇನ್ನೊಂದು ಕನ್ನಿಕೆ ನಿನ್ನಲ್ಲಿ ನೀ ನೋಡು
ಕನ್ನೆವೆಣ್ಣುಗಳೈದ ಮಾಡೊ ।
ಜೊನ್ನಿನ ಕಳೆ ರೂಪು ಲಕ್ಷಣಂಗಳ ನೋಡಿ
ಚೆನ್ನಾಗಿ ಮದುವೆಯ ಮಾಡು ॥೮೮॥

ಕನ್ನೆ ಹುಯ್ಯಲ ಕಡಿದು ಹೆಣ್ಣುಗಳ ಮದಿವಾದ
ಚೆನ್ನಿಗ ರಾಮಯ್ಯನೆಂದು ।
ಉನ್ನತ ಕೀರ್ತಿಯ ಪಡೆದನು ಜಗದೊಳು
ಕನ್ನೆ ಜಗಳದ ಸಂಧಿ ಮುಗಿಯೆ ॥೮೯॥

ಇದು ಪರನಾರಿ[ಸೋ]ದರ ರಾಮನಾಥನ
ಪದ[ಕೃತಿಯೊ]ಳಗೊಂದು ಪದನು ।

ಕದನವ ಗೆಲಿದು ರಾಮಲದೇವಿಯನು
ತಂದ ಕದನದ ಸಂಧಿ ಸಂಪೂರ್ಣ ||೯೦||

ಅಂತು ಸಂಧಿ ೬ಕ್ಕಂ ಪದನು ೩೭೦ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೭

❖

ಕೊಮಾರ ರಾಮಯ್ಯನ ಮದುವೆ

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ॥
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೧॥

ನಂದಿವಾಹನರೂಢ ನಾಗಭೂಷಣ [ಹ]ರ
ಕಂದುಗೊರಳ ಸದಾಶಿವನೆ ।
ಇಂದುಧರನೆ ಈಶ ಪರಮೇಶ ಉಮೆಯರಸ
ಚಂದ್ರಮೌಳೀಶ ಕೊಡು ಮತಿಯ ॥೨॥

ಉದಯಕಾಲದೊಳೆದ್ದು ಸದರಿಗೆ ಬಂದು ಕಂಪಿಲ
ಮುದದಿಂದ ಮಂತ್ರಿಯ ಕೂಡ ।
ಹದನೇನೊ ಮುಂದೆ ಕಾರ್ಯಂಗಳು ಬೈಚಪ್ಪ
ಒದಗೀತು ಮುಂದೆ ಕಾಳಗವು ॥೩॥

ಡಿಳ್ಳಿಯ ಖಾನ ವಜೀರರು ಬಂದಿನ್ನು
ತಳ್ಳಿಯ ಮಾಡಿ ಪೋದುದನು ।
ಒಳಿತಾಗಿ ನೀನು ಕಣ್ಣಿಲಿ ಕಂಡೆಲ್ಲ[ವೆ]
ಕಳಬಂಟರ ನೀನು ಕಳುಹೋ ॥೪॥

ಒಳಹೊಕ್ಕು ಹೋಗಿ ಪಟ್ಟಣದೊಳು ಸುದ್ದಿಯ
ಒಳಿತಾಗಿ ತಿಳಿದು ತಾ ಬರಲು ।

ಇಳೆಗೆ ಪಾಚ್ಛಾವ ಸುರಿತಾಳನ ಮನಸನು
ತಿಳಿಯಬೇಕೆಂದನು ರಾಯ ॥೫॥

ಇತ್ತ ಮಂತ್ರಿಯ ಕೂಡ ಮಾತಾಡುತಿರಲಾಗ
ಗುತ್ತಿಯ ರಾಯನ ಚರರು ।
ಮತ್ತೋಡಿ ಬಂದು ಬಾಗಿಲ ಗೊಲ್ಲರ ಕೂಡೊಂದು
ಅರ್ತಿಯ ಸುದ್ದಿಯ ಪೇಳೆ ॥೬॥

ಬಾಗಿಲ ಗೊಲ್ಲರು ಬಂದಡ್ಡ ಬಿದ್ದರು
ಈಗ ಬಂದರು ಗುತ್ತಿ ಚರರು ।
ಸೋಗೆಗಣ್ಣರಸ ರಾಮಯ್ಯನ ಮದುವೆಗೆ
ಸಾಗಿ ಬರುತಾರಂತೆ ರಾಯ ॥೭॥

[ಬಂದಿಹ ಚರರ] ಕರೆಸಿಕೊಂಡನು ರಾಯ
ಇಂದ್ಯಾಕೆ ಬಂದಿರೆಂದೆನುತ ।
ಚೆಂದಾಗೆ ಜಗದಪ್ಪ[ನಿಂ]ದ ಸುದ್ದಿಗಳೇನು
ವೊಂದಿಲಿ ಪೇಳಿ ನೀವೆನಲು ॥೮॥

ಮಗಳು ರಾಮಕ್ಕನ ಕೊಡತಕ್ಕ ಮಾತಿಗೆ
ಜಗದೊಳು ತಪ್ಪುವರುಂಟೆ ।
ಸೊಗಸಿಂದ ನಾಳೆ ಕೇಳು[ವ] ಸುದ್ದಿಯ [ಇಂದು]
ಜಗದಪ್ಪ ಕಳುಹಿದನರಸೆ ॥೯॥

ಸಂತೋಷದ ಸುದ್ದಿಯ ಕೇಳುತ ರಾಮನ
ಪಂಥವ ನೋಡೊ ಬೈಚಪ್ಪ ।
ಬಂದವರಿಗೆ ಉಡುಗೊರೆಯನು ಕೊಡಿಸಿದ
ಅಂದವರನು ಕಳುಹಿದನು ॥೧೦॥

ಹಿಂದಕ್ಕೆ ಚರರೋಡಿ ಬಂದು ಜಗದಪ್ಪಗೆ
ವಂದಿಸಿ ಕರಗಳ ಮುಗಿದು ।
ಹೊಂದಿಕಾಯಿತು ನಿಮ್ಮ ಅವರಂತರಂಗವು
ಕುಂದಿಲ್ಲ ಅವರಲ್ಲಿ ಅರಸೆ ॥೧೧॥

ಸಕ್ಕರೆ ಸವಿದಂಥ ಸುದ್ದಿಯ ಕೇಳುತ
ಹೊಕ್ಕನು ಹರುಷ ಸಾಗರವ ।
ಅಕ್ಕರೆ ಕುವರ ಉತ್ತುಂಗರಾಯನ ಕರೆದು
ಅಕ್ಕನ ಕೂಡೆ ಹೋಗೆಂದ ॥೧೨॥

ಮಗಳಿಗೆ ಕೊಟ್ಟನು ಮುತ್ತು ಬಂಗಾರವ
ಬಗೆಬಗೆ ಆಭರಣಗಳ ।
ಅಗಣಿತವಾದ ಐದೂರು ಉಮ್ಮಳಿಯನು
ಮಗಳ ಮೈದೊಡಿಗೆ ವಸ್ತುಗಳ ॥೧೩॥

ಅಳಿಯಗೆ ಕೊಟ್ಟನು ಮಿಗೆ ಐದು ತೇಜಿಯ
ಬಳುವುೞಿ ಕೊಟ್ಟಾಕಳ ಹಿಂಡ ।
ಸೆಳೆಮಂಚ ಕರೆವೆಮ್ಮೆ ಹಿಂಡನೆ ಹೊಡೆಸಿದ
ಒಳಿತಾಗಿ ಕೊಟ್ಟ ಜಗದಪ್ಪ ॥೧೪॥

ಮಗನು ಮಂತ್ರಿಯು ತಿಮ್ಮರಸನ ಕೂಡಿಸಿ
ಜಗದೊಳು ಅತಿ ಪ್ರೀತಿಯಿಂದ ।
ಸೊಗಸಾಗಿ ನಿಬ್ಬಣ ಸೋಬನವ ಪಾಡುತ
ಮೃಗನೇತ್ರೆ ನಡೆದ[ಳ]ರ್ತಿಯಲಿ ॥೧೫॥

ತಂದೆಯ ಪಾದಕ್ಕೆ ತಾಯಿ ಪಾದಕ್ಕೆ ಬಿದ್ದು
ವಂದಿಸಿ ಕರಗಳ ಮಗಿ[ಯೆ] ।
ಸಂದೇಹವ್ಯಾಕಮ್ಮ ತಮ್ಮನು ಬರುತಾನೆ
ಎಂದನು ಜಗದಪ್ಪರಾಯ ॥೧೬॥

ಊಳಿಗದ ಹೆಂಗಳು ನಾಲ್ವತ್ತು ಮಂದಿಯು
ಕಳಸ ಚೌರಿಗಳು ಕನ್ನಡಿಯು ।
ಮೇಳವಿಸಿದ ಗಿಂಡಿ [ಹಡಪದ] ಸ್ತ್ರೀಯರ
ಕಳೆಯನಾನೆಂತು ಪೇಳುವೆನು ॥೧೭॥

ಮಂತ್ರಿ ಮನ್ನೆಯರು ಅರಸುಮಕ್ಕಳು ಸಹ
ತಂತ್ರ ವೇದಾಂತ ಪಾಠಕರು ।

ಅಂತು ಜೋಯಿಸರು ಸಕಲ ವಿದ್ವಾಂಸರು ಆ
ನಂತ ಕಾಲದ ಹಿರಿಯರುಗಳು ॥೧೮॥

ಸಂಗಾತ ಸಾವಿರ ಕುದುರೆ ಮಂದಿಯ ಕೊಟ್ಟು
ತ್ತುಂಗ[ದ] ತೇಜಿಯ ಕೊಟ್ಟ ।
ಶೃಂಗಾರವ ಮಾಡಿ ಕಳುಹಿ ಕೊಟ್ಟನು ಬೇಗ
ಮಂಗಳ ಶುಭಕರವೆನುತ ॥೧೯॥

ಸಾಗಿ ಕಳುಹಿಸಿದನು ಗಾವುದ ದಾರಿಯನು
ಝಾಗಿಸಿ ಹಿಂದಕ್ಕೆ ತಿರುಗಿ ।
ಸಾಗಿತು ಪ್ರಯಾಣ ಉತ್ತುಂಗರಾಯನು
ಬೇಗದಿ ನಡೆದ ಕುಮ್ಮಟಕೆ ॥೨೦॥

ಮುಂದಾಗಿ ಚರರನು ಕಳುಹಿಸಿ ಕೊಟ್ಟನು
ಹಿಂದಾಗಿ ಬರುತೆವೆಂದೆನುತ ।
ಸಂಧಿಸಿ ಸುದ್ದಿಯ ಪೇಳಿರಿ ನೀವೆಂದು
ಮುಂದಾಗಿ ಆಳ ಕಳುಹಿದನು ॥೨೧॥

ಬಂದ ಸುದ್ದಿಯ ಕೇಳಿ ಕಂಪಿಲ ಕಾಟಣ್ಣ
ಬಂದನು ಹೊಸ ಚಾವಡಿಗೆ ।
ಮಂದಿ ಮನ್ನೆಯರು ಕುದುರೆಯ ಪೌಜ ಕರೆಸಿದ
ವೊಂದಿಲಿ ಅರಸುಮಕ್ಕಳನು ॥೨೨॥

ಹಂಪರಾಜನು ಕಂಪರಾಜ ಸಂಗಮದೇವ
ಇಂಪಾದ ದೊರೆಯ ಮಕ್ಕಳನು ।
ಸಂಪಿಲಿ ವಂದಿಸಿ ಕರಕೊಂಡು ಕಾಟಣ್ಣ
ಹೊಂಪುಳಿಯಿಂದ ತಾ ಹೊರಟ ॥೨೩॥

ಅರಸುಮಕ್ಕಳು ತಾನು ಆನೆಯನೇರಿ[ಯೆ]
ಪರಿಪರಿ ವಾದ್ಯಗಳಿಂದ ।
ಕರಕೊಂಡು ಬರುವ ಸಂಭ್ರಮದಲ್ಲಿ ಕಾಟಣ್ಣ
ಹರುಷದಿ ಹರಿದಾರಿಗಿದಿರ ॥೨೪॥

ಗುತ್ತಿಯ ಉತ್ತುಂಗರಾಯನ ಭೇಟಿಯ
ಅರ್ತಿಲಿ ತಕ್ಕೊಂಡ ಕಾಟ ।
ಮತ್ತುಡುಗೊರೆ ಮಾಡಿ ಆನೆಯನೇರಿಸಿ
ಒತ್ತಿಲಿ ಕರೆತಂದನವರ ॥೨೫॥

ಸತ್ತಿಗೆ ಸತ್ತಿಗೆ ಸಾಲಿಟ್ಟು ಬರುವಾಗ
ಮುತ್ತಿನ ಸತ್ತಿಗೆ ಕೆಳಗೆ ।
ಉತ್ತುಂಗರಾಯನು ಬರುವಂಥ ಸಂಭ್ರಮ
ಅರ್ತಿಯ ನೋಡುತ ಜನರು ॥೨೬॥

ಕನ್ನೆ ನಗಾರಿಯು ಚಿನ್ನಾಳೆ ವಾದ್ಯದ
ಉನ್ನತ ರಭಸಗಳಿಂದ ।
ಮನ್ನೆಯರು ಮಂದಿ ಕುದುರೆ ಎಡಬಲದಲ್ಲಿ
ಚೆನ್ನಾಗಿ ನೋಡುತ ಜನರು ॥೨೭॥

ಪಲ್ಲಕ್ಕಿ ಪಲ್ಲಕ್ಕಿ ಸಾಲಿಟ್ಟು ಬರುವಾಗ
ಎಲ್ಲ ಹೆಂಗಳು ಕೂಡಿಕೊಂಡು ।
ನಿಲ್ಲದೆ ರಾಮಲದೇವಿ ತಾ ಬರುವಂಥ
ಉಲ್ಲಾಸವನು ಕಂಡ ಜನರು ॥೨೮॥

ಬಂದನು ಕಾಟಣ್ಣ ಕರಕೊಂಡು ರಾಮಯ್ಯನ
ಮುಂದಣ ಶೃಂಗಾರವನಕೆ ।
ಬಗೆಬಗೆ ರತ್ನಪೀಠಂಗಳ ಕಾಟಣ್ಣ ತಂದು
ಇಳುಹಿದನು ಕೋಟೆಗಳ ॥೨೯॥

ಎಂದ ಮಾತನು ಕೇಳಿ ಎದ್ದನು ಕಂಪಿಲ
ಬಂದವರಿಗೆ ಇದಿರ ತಾನು ।
ಮಂದಿ ಮಕ್ಕಳ ಕೂಡಿಕೊಂಡು ತಾ ನಡೆದನು
ಬಂದನುತ್ತುಂಗನ ಬಳಿಗೆ ॥೩೦॥

ಎದ್ದ ಉತ್ತುಂಗರಾಯನ ತಬ್ಬಿಕೊಂಡನು
[ಮುದ್ದಾಡಿ] ಮೋಹದಿ ಕುಳಿತು ।

ಇದ್ದಂಥ ಕ್ಷೇಮ ವಾರ್ತೆಗಳನೆಲ್ಲವ ಕೇಳಿ
ಎದ್ದನು ಬೇಗ ಕಂಪಿಲನು ॥೩೧॥

ಉಡುಗೊರೆಯನು ಕೊಟ್ಟು ಉತ್ತುಂಗರಾಯಗೆ
ಒಡೆನೆದ್ದು ಗಂಧ ಪರಿಮಳವ ।
ಕೊಡುವಂತೆ ಮಾಡಿ ಎಬ್ಬಿಸಿಕೊಂಡು ಬಂದನು
ಬಿಡಿದಿಯ ಮನೆಗಾಗಿ ಸಾಗಿ ॥೩೨॥

ಬಂದರು ಬಿಡಿದಿಯ ಮನೆಗಾಗಿ ಕರಕೊಂಡು
ನಿಂದೆರಡು ಕುರಿಯ ಬಾಗಿಲಿಗೆ ।
ಬಂಧಿಸಿ ಕಡಿಸಿ ನಿವಾಳಿಯ ತೆಗೆಸಿದ
ಹಿಂದೆ ಹೊಕ್ಕರು ಬಿಡದಿ ಮನೆಯ ॥೩೩॥

ಅಲ್ಲಿ ಕುಳಿತು ಸಮೆದನು ರಾಯರಾಯನು
ಎಲ್ಲ ಉಲುಪೆಗಳ ತರಿಸಿದನು ।
ಬಲ್ಲಿದ ಕಂಪಿಲರಾಯಗೆ ಉಡುಗೊರೆ
ವೀಳ್ಯವ ಕೊಟ್ಟ ಉತ್ತುಂಗ ॥೩೪॥

ಬಂದಳು ರಾಮಕ್ಕ ತಂದಳು ಬಳುವುಲಿಯ
ಒಂದಾನೆ ವಾಜಿಗಳೈದು ।
ಮುಂದೊಂದು ಹಿಡಿ ತೇಜಿ ಬಲ್ಲೆಯವಂ ಕೂಡಿ
ತಂದೆವು ರಾಮಯ್ಯಗೆನಲು ॥೩೫॥

ಆಕಳ ಹಿಂಡು ಎಮ್ಮೆಯ ಹಿಂಡು ಸೆಳೆಮಂಚ–
ಗೋಕುಲವಾದುವೈದೂರು ।
ಏಕಾಂತ [ಸೆ]ಳೆಮಂಚ ಲೇಪು ಸುಪ್ಪತ್ತಿಗೆ
ಶ್ರೀಕಾಂತೆ ರಾಮಕ್ಕ ಸಹಿತ ॥೩೬॥

ತಂದೆವು ನಿಮ್ಮ ಬಳಿಗೆ ನಾವು ಮಾವಾಜಿ
ತಂದೆ ಜಗದಪ್ಪ ಕಳುಹಿದನು ।
ಹಿಂದುವರಾಯ ರಾಮಯ್ಯನ ಮದುವೆಗೆ
ಬಂದೆವು ಕಂಪಿಲ ಮಾವಾ ॥೩೭॥

ಸೊಸೆಯು ರಾಮಕ್ಕನು ವಂದಿಸಿ ಮಾವಗೆ
ಮುಸುಕ ತೆಗೆದು ಅಡ್ಡಬೀಳೆ ।
ಸೊಸೆಯಳ ಮಂಡೆಯೊಳ್ ಕೈಯಿಟ್ಟು ಹರಸಿದ
ಹಸುಮಕ್ಕಳನು ಪಡೆಯೆನುತ ॥೩೮॥

ಕರೆಸಿದನಾಗ ವಿದ್ವಾಂಸ ಜೋಯಿಸರ
ಕರೆಸಿದ ವೇದ ಪಾಠಕರ ।
ಕರೆಸಿದ ಶಾಸ್ತ್ರ ಪುರಾಣ ಅವಧಾನಿಗಳ
ಕರೆಸಿದ ಮಾನ್ಯ ಹಿರಿಯರ ॥೩೯॥

ಬಂದ ಶಾಸ್ತ್ರಿಗಳು [ಪಾಠಕರು] ನೀವೆಲ್ಲರು
ಒಂದು ಲಗ್ನವನು ನಿಶ್ಚೈಸಿ ।
ಕಂದ ರಾಮಯ್ಯಗೆ ಶುಭ ಮೂಹೂರ್ತದೊಳ್ನೀವು
ನಿಂದುಧಾರೆಯನೆರೆಯಿರೆಂದ ॥೪೦॥

ಎಲ್ಲರು ಗುಣಿಸಿಕೊಂಡರು ಲಗ್ನವ ತಾವು
ಒಳ್ಳೆಯ ಬಲುಮೆಯ ದಿನದಿ ।
ಎಲ್ಲ ದೋಷಂಗಳ ಕಳೆದು ಉಳಿದದೊಂದು
ಬಲ್ಲಿದ ಲಗ್ನವನಿಟ್ಟು ॥೪೧॥

ಮಾಘ ಶುದ್ಧ ತದಿಗೆಯ ಗುರುವಾರವು
ಯೋಗ ಅಮೃತಸಿದ್ಧಿ ದಿನವು ।
ಯೋಗ ಭಾಸ್ಕರ ಉದಿಸಿದ ಹತ್ತು ಗಳಿಗೆಯ
ಸಾಗಿಸೊ ರಾಯ ನೀನೆನಲು ॥೪೨॥

ಇಂದಿಗೈದು ದಿನ ಬಂದಿತು ಲಗ್ನವು
ಚೆಂದದಿ ಮದ[ಲ]ಗಿತ್ತಿಯನು ।
ಮುಂದಾಗಿ ಮಾಡಿಸಿ ಎನುತ ಜೋಯಿಸರಿಗೆ
ನಿಂದು ಪೇಳಿದನಾಗ ರಾಯ ॥೪೩॥

ಎಲ್ಲರ ಮನ್ನಿಸಿ ಎದ್ದನಾ ಕಂಪಿಲ
ತನ್ನರಮನೆಗಾಗ ನಡೆದ ।

ಬಲ್ಲಿದ ಮಂತ್ರಿ ಬೈಚಪ್ಪನ ಕರಕೊಂಡು
ಉಲ್ಲಾಸದಿಂದಿಬ್ಬರು ಕೂಡಿ ॥೪೪॥

ಮದಲಿಂಗನಾಗಲಿ ರಾಮಯ್ಯನೆನುತಲಿ
ಮದುವೆ ಇಂದಿಗೆ ಐದು ದಿನವು ।
ಒದಗಾಗಿ ಏಳೆಂದು ಹರಿಯಲದೇವಿಗೆ ಹೇಳಿ
ಕದಲಿದರು ಮಂಚಣ್ಣನ ಮನೆಗೆ ॥೪೫॥

ಬಂದ ರಾಯನ ಕಂಡು ವಂದಿಸಿ ಮಂಚಣ್ಣ
ಇಂದೇನು ಪ್ರಸ್ತವೆಂದೆನಲು ।
ಬಂದೆವು ನಿನ್ನ ಮಗಳ ಕಾಮಕ್ಕನ
ಕಂದ ರಾಮಗೆ ಕೊಡಬೇಕು ॥೪೬॥

ಎಂದ ಮಾತನು ಕೇಳಿ ಬಡವರ ಮಕ್ಕಳ
ತಂದುಕೊಂಬುವರೆ ದೊರೆಗಳು ।
ಇಂದ್ಯೆದು ಹೆಣ್ಣು ಮಾಡಲಿಬೇಕು ರಾಮಯ್ಯಗೆ
ಸಂದೇಹವ್ಯಾಕೊ ಮಂಚಣ್ಣ ॥೪೭॥

ಆಗಲಿ ರಾಯ ಒಳಿತಾಯಿತು ನಿಮ್ಮ
ಯೋಗವಿದ್ದಂತೆ ಮಾಡೆನಲು ।
ಹಾಗಲ್ಲವೆಂದರೆ ಬಿಡುವನೆ ರಾಮಯ್ಯ
ಸಾಗಿಸಿ ಪ್ರಸ್ತವನೆಂದ ॥೪೮॥

ಅಲ್ಲಿಂದ ವೀಳ್ಯವ ಕೊಟ್ಟು ತಾವು ನಡೆದರು
ಮೆಲ್ಲನೆ ಆರೆಯ ದೊರೆಯು ।
ಬಲ್ಲಿದ ಚಾರಮರಾಯನ ಅರಮನೆಗೆ
ನಿಲ್ಲದೆ ಬಂದರು ಆಗ ॥೪೯॥

ರಾಯ ಬಂದುದ ಕಂಡು ಆಲಯ ಬಾಲಯ
ಆಯತದಲಿ ಅಪ್ಪಿಕೊಂಡು ।
ಬಾಯೆಂದು ಕರೆದು ಸಾದರಮಾಡಿ ಕುಳಿತಾಗ
ರಾಯರೆ ಬಂದಿರಿಂದ್ಯಾಕೆ ॥೫೦॥

ಹೇಳಯ್ಯ ಮಂತ್ರಿ ನಾವ್ಬಂದಂಥ ಕಾರ್ಯವ
ಕೇಳಲಿ ಚಾರಮರಾಯ ।
ಭಾಳ ಪಂಥದಲಿರ್ದ ಜಗದಪ್ಪರಾಯನು
ಮಗಳನು ಕಳುಹಿದನವನು ॥೫೧॥

ಮಗಳು ರಾಮಕ್ಕನ ಮಿಗೆ ಐದು ಕುದುರೆಯ
ಜಗದಪ್ಪರಾಯ ಕಳುಹಿದನು ।
ಜಗದೊಳಗೈದು ಹೆಣ್ಣುಗಳ ರಾಮಯ್ಯಗೆ
ಸೊಗಸಿಂದ ನಾವ್ಮಾಡಬೇಕು ॥೫೨॥

ನಿಮ್ಮ ಹೆಮ್ಮಕ್ಕಳ ಇಬ್ಬರ ರಾಮಗೆ
ಮನ್ನಿಸಿ ನೀವ್ಕೊಡಬೇಕು ।
ಉನ್ನತ ಹರುಷದಿ ವಿವಾಹ ಮಾಡಲಿಬೇಕು
ಮುನ್ನಿನ ಹಿರಿಯರು ನೀವು ॥೫೩॥

ಜಾತಿ ಭೇದಗಳುಂಟು ನಮಗು ನಿಮಗು ಮಂತ್ರಿ
ಯಾತರ ಮಾತುಗಳಯ್ಯ ।
ನೀತಿದಪ್ಪುವರೆ ನೀವು ದೊರೆಗಳು ಬೈಚಪ್ಪ
ಕಾತರ ಮಾತುಗಳ್ಯಾಕೆ ॥೫೪॥

ನಿಮ್ಮ ಬೆಳಸು ನಿಮ್ಮ ಮಗಳ ಮಗ ರಾಮ
ಸುಮ್ಮನಲ್ಲವೊ ಸೋದರಿಕೆ ।
ಕಮ್ಮಗೋಲನ ರೂಪ ದೊರೆ ರಾಮಯ್ಯಗೆ
ಒಮ್ಮನದಲಿ ಕೊಡಬೇಕು ॥೫೫॥

ಮಕ್ಕಳ [ಕರೆ]ದನು ಚಾರಮರಾಯನು
ನಕ್ಕನು ಮುಗುಳುನಗೆಯನು ।
ಮಿಕ್ಕ ಮಾತುಗಳೇನು ಚೆಲುವ ರಾಮಯ್ಯನು
ಮಕ್ಕಳ ಕೊಡಬೇಕು ನೀವು ॥೫೬॥

ಹಿರಿಯರ ಮಾತಿಗೆ ಕಿರಿದು ಮಾಡುವರುಂಟೆ
ಹಿರಿ ಮಗ ವೆಂಕಟರಾಯ ।

ಕಿರಿಯ ಮಗನು ಮಧುಸೂದನರಾಯನು
ಧರೆಯನಾಳುವ ರಾಮಯಗೆ ॥೫೭॥

[ಹಿ]ಂದುವ ರಾಮಗೆ ಒಂದೆ ಮನಸಿನೊಳು
ತಂದೆಯ ಮಾತನು ಕೇಳಿ ।
ಬಂದ ಮಾತಿಗೆ ಮಾತ ಕೊಟ್ಟೆವು ಬೈಚಪ್ಪ
ಇಂದು ಪ್ರಸ್ತವ ಮಾಡಿಕೊಳ್ಳಿ ॥೫೮॥

ವೀಳ್ಯವ ಕೊಟ್ಟು ಒಳ್ಳೆಯ ಮಾತ ಕೈಕೊಂಡು
ನಿಲ್ಲದೆ ಬಂದರು ಮನೆಗೆ ।
ಮೆಲ್ಲನೆ ಮದ[ಲ]ಗಿತ್ತಿಯ ಮಾಡುವುದಕ್ಕೆ
ಎಲ್ಲರ ಕಳುಹಿದ ರಾಯ ॥೫೯॥

ಮಕ್ಕಳ ಕರಕೊಂಡು ಬರಹೇಳಿ ರಾಯನು
ಪಲ್ಲಕ್ಕಿಯ ಕಳುಹಿದ ಬೇಗ ।
ಅಕ್ಕ ಮಾರಮ್ಮ ಸಿಂಗಮ್ಮನವರು ತಾವು
ಗಕ್ಕನೆ ರಾಮಯ್ಯನೆಡೆಗೆ ॥೬೦॥

ಬಂದ ಮಕ್ಕಳ ತಬ್ಬಿಕೊಂಡಳು ಹರಿಯಮ್ಮ
ವಂದನೆ ಮಾಡಿದರವರು ।
ಕಂದ ರಾಮಯ್ಯನ ಅರಿಷಿಣ ಎಣ್ಣೆ ಶ್ರೀ
ಗಂಧ ಜಾಜಿಯ ಪೂಮಾಲೆಗಳು ॥೬೧॥

ಅಣ್ಣ ರಾಮಯ್ಯನ ಕರೆದು ಅಕ್ಕರದಿಂದ ಕ
ಮ್ಮೆಣ್ಣೆ ಮಜ್ಜನಗಳ ಮಾಡಿ ।
ಬಣ್ಣ ಶೃಂಗಾರದುಡುಗೊರೆ ಕೊಟ್ಟು ರಾಮಗೆ
ಎಣ್ಣೆ ಅರಿಷಿಣವ ಪೂಸಿದರು ॥೬೨॥

ಕರ್ಪೂರದಾರತಿ ಬೆಳಗಿಸಿ ಹರಿಯಮ್ಮ
ಒಪ್ಪದಿ ಶಾಶೆಯನಿಡಿಸಿ ।
ಕಪ್ಪುಗೊರಳಸ್ವಾಮಿ ಕರುಣಿಸೊ ರಾಮಗೆ
ಒಪ್ಪಾದ ಹರಕೆಯನಿತ್ತು ॥೬೩॥

ಪಲ್ಲಕ್ಕಿಯನೇರಿ ನಡೆದಳು ಹರಿಯಮ್ಮ
ಮೆಲ್ಲನೆ ಮಂತ್ರಿಯ ಮನೆಗೆ ।
ಎಲ್ಲರು ಎದ್ದು ವಂದಿಸಿ ಹರಿಯಮ್ಮಗೆ
ಕುಳ್ಳಿರಿ ನೀವು ಎಂದೆನುತ ॥೬೪॥

ಬಂದ ಪ್ರಸ್ತಗಳೇನು ಇಂದೆಮ್ಮ ತಾಯಿ ಮನೆಗೆ
ಕಂದ ರಾಮಯ್ಯಗೆ ಮಗಳ ।
ಒಂದೆ ನೀತಿಯಲಿ ಕೊಡಬೇಕು ತಿಮ್ಮಾಯಿ
ಎಂದು ಕೇಳಿದಳು ಹರಿಯಮ್ಮ ॥೬೫॥

ನಿನ್ನ ಮಾತಿಗೆ ನಾವು ಬದಲುಂಟೆ ಹರಿಯಮ್ಮ
ಕನ್ನೆಯ ಮನದ ನೀತಿಯನು ।
ಇನ್ನು ನೀ ಮಾಡಿಕೊ ಹೋಗೆಂದು ಬೈಚಪ್ಪ
ಚೆನ್ನಾಗಿ ಪೇಳಿದನಾಗ ॥೬೬॥

ಮದಲಗಿತ್ತಿಯ ಮಾಡಿ ವೀಳ್ಯ ಉಡುಗೊರೆ ಇತ್ತು
ಕದಲಿ ಮಂಚಣ್ಣನ ಮನೆಗೆ ।
ಸುದತಿಗರಿಷಿಣ ಎಣ್ಣೆ ತೀಡಿ ಉಡುಗೊರೆ ಕೊಟ್ಟು
ಒದಗಿ ಬಂದಳು ಚಾರಮನೆಡೆಗೆ ॥೬೭॥

ತಂದೆಯ ಪಾದಕ್ಕೆ ವಂದಿಸಿ ಹರಿಯಮ್ಮ
ನಿಂದಳು ಅತಿ ಹರುಷದಲಿ ।
ಕಂದ ರಾಮಯ್ಯಗೆ ಕೊಡು ಮೊಮ್ಮಕ್ಕಳ
ನೆಂದು ಕೇಳಿದಳು ಹರಿಯಮ್ಮ ॥೬೮॥

ಕರೆದನು ಮಮಕಾರದಲ್ಲಿ ಮೊಮ್ಮಕ್ಕಳ
ಪರನಾರಿ ಸೋದರನೆಂಬ ।
ಬಿರಿದು ಧರಿಸಿದ ರಾಮ ಸೋಮಾಯಿ ಭಿಮಾಯಿ
ಇರಬೇಕ ಸತಿ[ಯ]ರೊಂದಿಗೆ ॥೬೯॥

ಕನ್ನೆರೈವರು ನೀವು ಚೆನ್ನಾಗಿ ಇರಬೇಕು
ಮುನ್ನ ಮಾಡಿದ ಫಲವೈಸೆ ।

ಉನ್ನತ ಸೇವೆಯ ಮಾಡಿ ಮೆಚ್ಚಿಸಬೇಕು
ಚೆನ್ನಿಗ ರಾಮಯ್ಯನೊಡನೆ ॥೭೦॥

ಇಷ್ಟು ಪ್ರಕಾರದಿ ನಗೆಗಳ ಮಾಡುತ
ಕೊಟ್ಟನು ತನುಜೆಯ ಕೈಗೆ ।
ಇಟ್ಟನು ಒಡವೆ ವಸ್ತುಗಳಾಭರಣವ
ಪೆಟ್ಟಿಗೆ ಜವಳಿ ಪೆಂಡಿಗಳ ॥೭೧॥

ಮದಲಗಿತ್ತಿಯ ಮಾಡಿ ಹೊರಟಳು ಅಪ್ಪಗೆ
ಚದುರೆ ಕೈಮುಗಿದಳಾಕ್ಷಣದಿ ।
ಒದಗಿಂದ ಹಿರಿಯ ಸೊಸೆ ರಾಮಕ್ಕನ ಕಂಡು
ಮದ[ಲ]ಗಿತ್ತಿಯನು ಮಾಡಿ[ದಳು] ॥೭೨॥

ಕೊಟ್ಟ ಪಟ್ಟೆಗಳಾಭರಣ ಮುತ್ತುಗಳನು
ಇಟ್ಟಳು ಗಂಧ ಪರಿಮಳವ ।
ನೆಟ್ಟನೆ ಉಡುಗೊರೆ [ತೊ]ಟ್ಟು ಬಂದಳು ಬೇಗ
ಸೃಷ್ಟೀಶ ಕಂಪಿಲನೊಡನೆ ॥೭೩॥

ಹಂದರ ಹಾಲಗಂಬಗಳ ಹಾಕಿದರಾಗ
ಚೆಂದಚೆಂದದಲಿ ಶೃಂಗರಿಸಿ ।
ಬಂದು ಕುಳಿತು ಕಂಪಿಲರಾಯ ಕರೆಸಿದ
ಅಂದು ಲಗ್ನಕ್ಕೆ ಎಲ್ಲರನು ॥೭೪॥

ಬಂದರು ಜೋಯಿಸ ಬ್ರಾಹ್ಮರು ಆಗಲೆ
ಬಂದವಧಾನಿ ಶಾಸ್ತ್ರಿಗಳು ।
ಬಂದರು ವೇದಪಾರಾಣಾಯತರೆಲ್ಲ
ನಿಂದರು ರಾಯನ ಹುಜುರ ॥೭೫॥

ಬಂದಿತು ಅಮೃತದ ಸಿದ್ಧಿಯೋಗಂಗಳು
ಬಂದವು ಶುಭಮೂಹೂರ್ತಗಳು ।
ಎಂದು ರಾಮಯ್ಯನ ಕೂಡೆ ಪೇಳಿದರಾಗ
ವಂದಿಸಿ ಜೋಯಿಸರು ತಾವು ॥೭೬॥

ಕರೆಸಿದ ಊರೊಳಗಣ ಮಂತ್ರಿಗಳನು
ಕರೆಸಿದ ಅರಸುಮಕ್ಕಳನು ।
ಕರೆಸಿದ ಮನ್ನೆಯ ಮಾಂಡಲಿಕರನು
ಬಿರಿದಂಕ ಕಂಪಿಲರಾಯ ॥೭೭॥

ಪಟ್ಟಣದೊಳಗುಳ್ಳ ಶೆಟ್ಟಿ ವರ್ತಕರೆಲ್ಲ
ಪಟ್ಟಣವೆಲ್ಲ ಶೃಂಗರಿಸಿ ।
ಹಟ್ಟಿಕಾರರು ಹಳ್ಳಿಕಾರರು ಕರಣಿಕರು
ನೆಟ್ಟನೆ ತಾವೆಲ್ಲ ಬಂದು ॥೭೮॥

ನಾನಾ ವಾದ್ಯಗಳು ನೌಬತ್ತು ನಗಾರಿಯು
ಸಾನಾಯಿ ಮೃದಂಗ ಡಿಂಡಿಮವು ।
ಆನಂದದಿಂದ ಭೋರಿಡುವ ಚೆನ್ನಾಗಳೆಯು
ಏನ ಹೇಳಲಿ ಅರ್ತಿಯನು ॥೭೯॥

ರಾಹುತ ರಾಣೆಯ ಗುರಿಕಾರರೆಕ್ಕಟಿಗರು ಭಾವ
ದಿ ಹರುಷದೊಳ್ಬಂದು ।
ಕೋವಿದ ರಾಮನ ಮದುವೆ ಸಂಭ್ರಮಗಳ
ತಾವು ನೋಡಲಿ ಬಂದರೈಸೆ ॥೮೦॥

ಸಕಲರು ನೆರೆದು ಸದರಾಗಿ ಕುಳಿತು ರಯ
ಸುಕುಮಾರ ಕಾಟನ ಕರೆದು ।
ಸಕಲರೊಳಗೆ ನಮಗೆ ಹಿರಿಯ ಚಾರಮರಾಯ
ಭಕುತಿ ಕರಕೊಂಡು ಬಾರೊ ॥೮೧॥

ಪಲ್ಲಕ್ಕಿ ವಾಜಿಯನೆಲ್ಲವ ಕಳುಹಿದ
ಬಲ್ಲಿದ ಚಾರಮರಾಯ ।
ನಿಲ್ಲದೆ ಮಕ್ಕಳು ಮೊಮ್ಮಕ್ಕಳ ಕರಕೊಂಡು
ಮೆಲ್ಲನೆ ಮದುವೆಗೆ ಬಂದ ॥೮೨॥

ಹೋಗೊ ನೀ ಕಾಟಣ್ಣ ಬೇಗದಿ ಮಂಚಣ್ಣ
ಸಾಗಿ ಬರಲು ಕರೆದುಕೊಂಡು ।

ಹಾಗೆ ಬೈಚಪ್ಪನ ಮಕ್ಕಳು ಕುಟುಂಬ
ಬೇಗದಿ ಕರೆತಾರೊ ನೀನು ॥೮೩॥

ಬಂದರು ಮಂತ್ರಿಯ ಹೆಂಡಿರು ಮಕ್ಕಳು
ನಿಂದರು ಕನ್ನಿಕೆ ಸಹಿತ ।
ಒಂದಾಗಿ ಮಂಚಣ್ಣ ಮಗಳ ಕರೆದುಕೊಂಡು
[ಹಿಂ]ದೂವ ರಾಮನ ಬಳಿಗೆ ॥೮೪॥

ಮತ್ತೆ ಬೈಚಪ್ಪನ ಕಾಟಣ್ಣ ಕರೆಕೊಂಡು
ಗುತ್ತಿಯ ಜಗದಪ್ಪ ಮಗಳ ।
ಉತ್ತುಂಗರಾಯ ಬಂದ ನಿಬ್ಬಣವನು
ಮೊತ್ತದಿ ಕರಕೊಂಡು ಬಾರೋ ॥೮೫॥

ಮುತ್ತಿನಂದಣವು ಪಲ್ಲಕ್ಕು ಕರಿಯ ವಾಜಿ
ಸತ್ತಿಗೆ ಸಕಲ ವಾದ್ಯಗಳು ।
ಒತ್ತರಿಸುವ ಮಂದಿ ಮಕ್ಕಳು ಸಹವಾಗಿ
ಒತ್ತಿ ಬಂದರು ಬಿಡದಿ ಮನೆಗೆ ॥೮೬॥

ಬಂದ ರಾಮಕ್ಕನ ಅಂದಣವೇರಿಸಿ
ಮಂದಗಮನೆಯರು ಸಹಿತ ।
ಚೆಂದದಿಂದಲಿ ಸೋಬನವ ಪಾಡುತ ಬಂದು
ನಿಂದರು ರಾಮಯ್ಯನೆಡೆಗೆ ॥೮೭॥

ಬಂದ ಉತ್ತುಂಗರಾಯನನಾಗ ತಬ್ಬಿಸೆ
ಚೆಂದದಿಂದಲಿ ಕಂಪಿಲನು ।
ಅಂದಲ್ಲಿ ಮದುವೆ ಸಂಭ್ರಮದಲ್ಲಿ ಉತ್ತುಂಗ
ವೊಂದಿಲಿ ಕುಳಿತನಾಕ್ಷಣದಿ ॥೮೮॥

ಸಕಲ ಹೆಮ್ಮಕ್ಕಳ ಹರಿಯಮ್ಮ ಮನ್ನಿಸಿ
ಯುಕುತಿಲಿ ಕುಳ್ಳಿರಿಸಿದಳು ।
ಮುಕುರವದನೆಯರು ಮುತ್ತಿನಾರತಿಗಳ
ಭಕುತಿಲಿ ಪಿಡಿದು ನಿಂದಿಹರು ॥೮೯॥

ಎಲ್ಲ ಸೋಪಸ್ಕಾರಂಗಳ ತಂದರು
ನಿಲ್ಲದೆ ಚೆಂದದಿ ಮಂತ್ರಿ ಬೈಚಪ್ಪ।
ಉಲ್ಲಾಸದಿಂದ ಸಾಗಲಿ ಲಗ್ನವೆಂದನು
ಮೆಲ್ಲನೆ ಜೋಯಿಸರಿಗೆ ಪೇಳ್ದ ॥೯೦॥

ಮಂತ್ರಾಕ್ಷತೆಯನು ಕೈಲಿ ಪಿಡಿದುಕೊಂಡು
ತಂತ್ರದ ಬ್ರಾಹ್ಮರು ತಾವು।
ನಿಂತು ಧಾರೆಯ ನೆರೆ ಪಿಡಿಕೊಂಡು ಬ್ರಾಹ್ಮರು
ಪಂಥಗಾರನೆ ರಾಮ ಬಾರೊ ॥೯೧॥

ಪಿರಿಯಾಕೆ ರಾಮಕ್ಕ [ಕಡೆಯ] ನಾಲ್ವರ ಕೈಗೆ
ಸೆರೆಯಕ್ಕಿಗಳನು ತಾವು ಕೊಟ್ಟು।
ಮರೆಯದೆ ರಾಮನ ಕೈಗೆ ಬೊಗಸಕ್ಕಿಯ
ಪರಿತಂದು ಕೊಟ್ಟರಾಕ್ಷಣದಿ ॥೯೨॥

ವೇದಘೋಷಣೆಯನು ಓದುತ ಬ್ರಾಹ್ಮರು
ಸಾಗಿಸಿ ಲಗ್ನವ ಮಾಡಿ।
ಮೇದುನಿಯಾಳ್ವ ರಾಮಯ್ಯನ ಮಂಡೆಯೊಳು ವಿ
ನೋದದಿ ಅಕ್ಕಿಯ ತಳಿದು ॥೯೩॥

ಐವರ ಮಂಡೆಯೊಳು ಅಕ್ಕಿಯ ತಳೆದನು
ಸಯ್ಮಾಡಿಕೊಂಡ ಹೆಣ್ಣುಗಳ।
ಜಯವಂತನಾಗೆಂದು ಬ್ರಾಹ್ಮರಕ್ಷತೆಗಳ
ಜಯ್‌ಸಿರಿಗಳನೆಂದು ತಳೆದು ॥೯೪॥

ಗಂಧರ್ವ ವಿವಾಹ ಮಾಡಿಕೊಂಡೊಯ್ದಾರ
ಒಂದೆ ಸಮುಹೂರ್ತದಲವರು।
ಸಂದರುಶನ ಮಾಡಿ ಸ[ವೆ]ದ ಮೂಹೂರ್ತಂಗಳ
ಗಂಧ ಪೂಮಾಲೆ ಹಾಕಿದರು ॥೯೫॥

ಮುತ್ತುಗಳಿಂದ ಶಾಸ್ವೆಯನಿಟ್ಟು ಐವರು
ಅರ್ತಿಲಿ ಗಂಧ ಪರಿಮಳವ।

ಪೃಥ್ವೀಶ ರಾಮಗೆ ವಂದಿಸಿ ಐವರು
ಮುತ್ತಿನಾರತಿಯನೆತ್ತಿದರು ॥೯೬॥

ಐವರು ಸೊಸೆಗಳಿಗೆಲ್ಲ ಕಂಪಿಲರಾಯ
ವೈಭೋಗದೊಡವೆಯ ಕೊಟ್ಟ ।
ಐದೈದು ತೊಡಿಗೆ ಬಂಗಾರವ ಕೊಟ್ಟನು
ಐದು ಮೈದೊಡಿಗೆ ವಸ್ತ್ರವನು ॥೯೭॥

ಮಗನಿಗೆ ಕೊಟ್ಟನು ಮುತ್ತಿನ ಹಾರ ರಾ
ಮೈಗೆ ಬಳೆ ಮುರುಡಿ ಸರಪಳಿಯ ।
ಜಗದೊಳು ಎತ್ತಿದ ಬಿರಿದಿಗೆ ಒಂದೊಂದು
ಅಗಣಿತವಾದ ಭೂಷಣವ ॥೯೮॥

ಬಂದ ಬೀಗರಿಗೆಲ್ಲ ಉಡುಗೊರೆಗಳ ಕೊಟ್ಟು
ಗಂಧ ಪರಿಮಳ ವೀಳ್ಯಗನು ।
ವೊಂದಿದ ಹಿರಿಯರು ಮಂದಿ ಮಕ್ಕಳಿಗೆಲ್ಲ
ಚೆಂದದಿ ವೀಳ್ಯವ ನಡೆಸಿ ॥೯೯॥

ಮನೆಯ ತುಂಬಿಸುವಂಥ ಪ್ರಸ್ತಕೆ ಕಂಪಿಲ
ಜನಕನ ಅರಮನೆಗೈದು ।
ಮನಬಂದಂತೆ ಸಂಭ್ರಮಮಾಡಿ ಎಲ್ಲರು
ಮನೆದುಂಬಿಸಿದರು ಅರ್ತಿಯಲಿ ॥೧೦೦॥

ಮನ್ನೆಯರೆಲ್ಲರು ಒಂದುಡುಗೊರೆಗಳ
ಹೊನ್ನ ಕಾಣಿಕೆಗಳನಿಟ್ಟು ।
ಚೆನ್ನಿಗ ರಾಮೈಗೆ ಬಂದಡ್ಡ ಬಿದ್ದರು
ಮನ್ನಿಸಿದನು ರಾಮನವರ ॥೧೦೧॥

ಖಾನ ಹೇಜಿಬರು ತಂದರು ಉಡುಗೊರೆಯ
ನಾನಾ ದಿನಿಸಿ ಪರಿಮಳವ ।
ಆನಂದ ಹರುಷ ಕೈಕೊಂಡು ರಾಮಯ್ಯ
ಮಾನನಿಧಿಯವರ ಮನ್ನಿಸಿದ ॥೧೦೨॥

ಸೆಟ್ಟಿ ಮಹನಾಡುಗಳು ತಂದರುಡುಗೊರೆಯ
ಪಟ್ಟೆಪಟ್ಟಾವಳಿ ಸಹಿತ ।
ಕೊಟ್ಟು ಕೈಮುಗಿಯೆ ರಾಮಯ್ಯನದ ಕೈಕೊಂಡು
ಕೊಟ್ಟುಕೊಂಡವರ ಮನ್ನಿಸಿದ ॥೧೦೩॥

ಗುತ್ತಿಯ ಉತ್ತುಂಗರಾಯನು [ರಾ]ಮಗೆ
ಮುತ್ತಿನ ತುರಾಯ ಉಡುಗೊರೆಯ ।
ಅತ್ಯಂತ ಹರುಷದಿ ಕೊಟ್ಟು ತಬ್ಬಿಕೊಂಡು
ಮತ್ತೆ ರಾಯನ ರಾಮನಪ್ಪಿ ॥೧೦೪॥

ಚಾರಮರಾಯ[ನು] ಮೊಮ್ಮಗ ರಾಮಗೆ
ಸಾರವಳಿಯು ಸರಪಣಿಯು ।
ಆರು ರತ್ನದ ಹಾರ ಕೊರಳಿಗೆ ಹಾಕಿದ
ಮಾರಸನ್ನಿಭ ರಾಮ[ನು]ರದಿ ॥೧೦೫॥

ಬೈಚಪ್ಪ ಕೊಟ್ಟನು ಮಗಳಿಗೆ ಆಕ್ಷಣ
ಸಂಚಿಯ ತುಂಬ ಹೊನ್ನುಗಳ ।
ಪಂಚವಣ್ಣಿಗೆ ಐಸಾಲೆ ಉಡುಗೊರೆಯ
ಕೈಬಳೆ ಮುರಡಿ ಸರಪಳಿಯ
ಮೈಜೋಡಿನಂಗಿಯು ಶಿಲೆಯ ಭಕ್ತರಗಳ
ಬೈಚಪ್ಪ ಕೊಟ್ಟನರ್ತಿಯಲಿ ॥೧೦೬॥

ಮಂಚಣ್ಣ ಕೊಟ್ಟನು ಮಗಳಿಗೆ ಆಕ್ಷಣ
ಸಂಚಿಯ ತುಂಬ ಹೊನ್ನುಗಳ ।
ಪಂಚವಣ್ಣಿಗೆ ಉಡುಗೊರೆಗೊಟ್ಟು ಅಳಿಯಗೆ
ಮಂಚಣ್ಣ ಕರೆವೆಮ್ಮೆ ಉಂಗುರವ ॥೧೦೭॥

ಎಲ್ಲ ಉಡುಗೊರೆಗಳ ಕೈಕೊಂಡು ರಾಮಯ್ಯ
ಉಲ್ಲಾಸದೊಳು ಮನದೊಳಗೆ ।
ನಿಲ್ಲದೆ ಎದ್ದು ಕೈಮುಗಿದು ವಂದಿಸಿದನು
ಎಲ್ಲರ ಹರಕೆಯನಾಂತು ॥೧೦೮॥

ಸಣ್ಣಗಂಬಳಿ ಹಾಸಿ ಮುತ್ತಿನ ಹಸೆಗಳ
ಬಣ್ಣವ ಬರೆದಂತೆ ರಚಿಸಿ ।
ಅಣ್ಣನ ಕರೆದು ಮಾರಮ್ಮ ಸಿಂಗಮ್ಮನು
ನುಣ್ಣಿಸಿ ಅರಿಷಿನೆಣ್ಣೆಯನು ॥೧೦೯॥

ಎಲ್ಲರು ಕೂಡಿ ಒಂದರ್ತಿಲಿ ರಾಮನ
ನಲ್ಲೆಯದ್ದೈದು ಮಂದಿಯನು ।
ಉಲ್ಲಾಸದಲಿ ರಾಮಗೆ ಹರಕೆಯ ಕೊಟ್ಟರು
ನಿಲ್ಲದ್ಯೆದರು ಅರಮನೆಗೆ ॥೧೧೦॥

ಅಲ್ಲಿದ್ದ ಸ್ತ್ರೀಯರು ಪನ್ನೀರಂಗಳ ಕೊಟ್ಟು
ಎಲ್ಲರು ಪಂಕ್ತಿಲಿ ಕುಳಿತರು ॥೧೧೧॥

ಅರಸುಮಕ್ಕಳು ಎಲ್ಲ ಸರಸದಿ ಹರಿಯಮ್ಮ
ದೊರೆದೊರೆಗಳ ಪಂಕ್ತಿ ಬೇರೆ ।
ಅರಿತು ಕುಳಿತರಾಗ ಸಾಲುಸಾಲನೆ ಹಿಡಿದು
ಸರಸವನೇನ ಬಣ್ಣಿಸುವೆ ॥೧೧೨॥

ಬಾಲೆವೆಣ್ಣುಗಳು ತಂದರು ಕಾಯಿ ಸೊಪ್ಪುಗಳ
ಸಾಲುಸಾಲನೆ ಹಿಡಿದುಕೊಂಡು ।
ಹಾಲುಗುಂಬಳಕಾಯಿ ಸಕ್ಕರೆಗುಂಬಳಕಾಯಿ
ಮೇಲೊಂದ ಚಿಣ್ಣೆಯಕಾಯಿ ॥೧೧೩॥

ಹಾಗಲ ಹೀರೆಯ ಕೋಗುಲೆ ಸೆಂಬೆಯ
ತೂಗುವ ಪಡವಲಕಾಯಿ ।
ಬೀಗಿ ಬೆಳೆದ ಬದನೆಯಕಾಯಿ ತಾಳಿಲ
ಸೋಗೆಗೆಂಗಳೆರು ತಂದರಾಗ ॥೧೧೪॥

ಬಿಳಿಯ ಚೆಳ್ಳವರೆಯಕಾಯಿ ಬಾಳೆಯಕಾಯಿ
ದಳವುಳ್ಳ ಹಲಸಿನಕಾಯಿ ।
ಒಳಿತಾಗಿ ಬೆಳೆದ ಸುಲಿಗೆಣಸಿನ ತಾಳಿಲ
ನಳಿನಾಕ್ಷಿಯರು ತಂದು ನೀಡಿದರು ॥೧೧೫॥

ಚೊಕ್ಕಟ ಹರಿವೆಯಸೊಪ್ಪು ಗೋಣಿಯಸೊಪ್ಪು
ಚಕವಂತ ಬಸಲೆಯಸೊಪ್ಪು ।
ಮಿಕ್ಕ ಚಿಲಿತೆಯ ಮೆಂತೆಯ ಸೊಪ್ಪುಗಳನು
ಲೆಕ್ಕವಿಲ್ಲದೆ ತಂದರೆಡೆಯ ॥೧೧೬॥

ಪರಮಾನ್ನ ಮಾಲದಿ ಶಾವಿಗೆ ಬಟ್ಟುವೆ
ಪರಡಿ ತಾಲಿಯು ಪರಮಾನ್ನ ।
ಪರಿಪರಿ ಹಾಳಿನ ಪರಮಾನ್ನವ ಬೇಗ
ಹರದೇರು ತಂದು ನೀಡಿದರು ॥೧೧೭॥

ಹೂರಿಗೆ ಗಾರಿಗೆ ಹೋಳಿಗೆ ಒಡೆಗಳ
ಹೂರಣಗಡಬು ಕಜ್ಜಾಯ ।
ಮಾರನ ರೂಪಿನ ಅಬಲೆಯರು ತಂದು
ವಾರಣದಲ್ಲಿ ನೀಡಿದರು ॥೧೧೮॥

ಅಪ್ಪಾಲು ಅತಿರಸ ಒಪ್ಪಾದ ಕಜ್ಜಾಯ
ತುಪ್ಪದ ಮನೋಹರಗಳನು ।
ಕಪ್ಪಾದ ಕರಜಿಯಕಾಯಿ ಎಣ್ಣೂರಿಗೆ
ಒಪ್ಪವನೇನ ಬಣ್ಣಿಸುವೆ ॥೧೧೯॥

ಬೀಸುಹೂರಿಗೆ ಎಣ್ಣೆಮಂಡಲಿ ಚಕ್ಕುಲಿ
ಸೂಸಲ ಮಂಡಿಗೆ ಕಡಬು ।
ದೋಸೆಯು ಸಕ್ಕರೆ ಮಂಡಿಗೆ ಮೊದಲಾದ
ಲೇಸಿಂದ ತಂದು ನೀಡಿದರು ॥೧೨೦॥

ತೊಗರಿಯ ತೊವೆ ಅಲಸಂದೆಯ ತೊವೆಗಾಳು
ಅಗಣಿತ ಕಡಲೆಯ ತೊವೆಯ ।
ಸೊಗಸುವೆಣ್ಣುಗಳು ತಂದು ಸಾಲಲಿ ನೀಡಿ
ಬಗೆಬಗೆಯಲಿ ಬಡಿಸಿದರು ॥೧೨೧॥

ಸಣ್ಣಗೆಂಬತ್ತಿಗ ಸರಮುತ್ತಿನಕ್ಕಿಯ
ಚಿನ್ನದಾರಿಯ ಚೊಕ್ಕಟಿಯ ।

ಬಣ್ಣವರಿದ ಅರಸರದಾನಿ ರಾಜಾನ್ನವ
ಹೆಣ್ಣುಗಳ್ ತಂದು ನೀಡಿದರು ॥೧೨೨॥

ತೊಗರಿಯ ಕಟ್ಟು ಕಡಲೆಯ ಕಟ್ಟು ಹುರುಳಿಯ
ಬಗೆಬಗೆ ಕಟ್ಟಿನಾಂಬ್ರಗಳ ।
ಸೊಗಸಾದ ಮಜ್ಜಿಗೆಸಾರು ಹುಳಿಸಾರುಗಳ
ಸೊಗಸಿಂದ ತಂದು ನೀಡಿದರು ॥೧೨೩॥

ಆಕಳತುಪ್ಪ ಎಮ್ಮೆಯತುಪ್ಪ ಕುರಿತುಪ್ಪ
ಮೇಕೆಯತುಪ್ಪ ಜೇನುತುಪ್ಪ ।
ಬೇಕೆಂಬಷ್ಟು ತಂದು ನೀಡಿದರು ಬೇಗದಿ
ಏಕಚಿತ್ತದಲಿ ನಾರಿಯರು ॥೧೨೪॥

ಕಚ್ಚಡಿ ಹಿಂಡಿಯು ಮೆಚ್ಚಿನ ಹುಳಿಗಾಳು
ಹೆಚ್ಚಿನ ಉಪ್ಪಿನಕಾಯಿ ।
ಬಚ್ಚಿಟ್ಟ ಮಾವಿನಹಿಂಡಿ ನೆಲ್ಲಿಯಕಟ್ಟು
ಅಚ್ಚಾಳು ತಂದು ನೀಡಿದರು ॥೧೨೫॥

ಹಲಸಿನಹಣ್ಣು ಮಾವಿನಹಣ್ಣು ರಸದಾಳಿ
ಸುಲಿದ ಬಾಳೆಯಹಣ್ಣುಗಳನು ।
ಒಳಿತಾಗಿ ತಂದು ನೀಡಿದರು ಬಾಲೆಯರೆಲ್ಲ
ಕಲೆತು ಪಂಕ್ತಿಗೆ ನೀಡಿದರು ॥೧೨೬॥

ಉಂಡರು ಚೊಕ್ಕ ಭೋಜನಗಳ ಬೀಗರು
ಉಂಡು ಕೈದೊಳೆದು ಬೇಗದೊಳು ।
ಚಂಡವಿಕ್ರಮ ಕಾಟ ವೀಳ್ಯವ ನಡೆಸಿದ
ಉಂಡಂಥ ಬೀಗರಿಗೆಲ್ಲ ॥೧೨೭॥

ಸಣ್ಣಗಂಬಳಿ ಹಾಸಿ ಮುತ್ತಿನ ಹಸೆಗಳ
ಬಣ್ಣವ ಬರೆದಂತೆ ರಚಿಸಿ ।
ಅಣ್ಣನ ಕರೆದು ಮಾರಮ್ಮ ಸಿಂಗಮ್ಮನು
ನುಣ್ಣಿಸಿ ಅರಿಷಿನೆಣ್ಣೆಯನು ॥೧೨೮॥

ಎಲ್ಲರು ಕೂಡಿ ಒಂದರ್ತಿಲಿ ರಾಮನ
ನಲ್ಲೆಯರೈದು ಮಂದಿಯನು ।
ಉಲ್ಲಾಸದಲಿ ಹಸೆ ಮೇಲೆ ಕುಳಿತರು ತಾವು
ಮಲ್ಲಿಗೆಯ ಹೂವ ಸೂಡಿದರು ॥೧೨೯॥

ಪರಿಪರಿ ವಿಧದಲ್ಲಿ ಅರಿಷಿನೆಣ್ಣೆಯ ಮಾಡಿ
ಸರಸದಿ ಗಂಡಹೆಂಡರಿಗೆ ।
ಪರಿಮಳ ವೀಳ್ಯವ ಕೊಟ್ಟು ಕೈಮುಗಿಸಿದರು
ಬಿರಿದಂಕ ರಾಮಯ್ಯನೆಂದು ॥೧೩೦॥

ನಾರೆರೆಲ್ಲರು ಕೂಡಿ ಅರಿಷಿಣಕಸ್ತೂರಿಯ
ಸಾರ ಪರಿಮಳವ ಪೂಸಿದರು ।
ವೀರ ರಾಮಯ್ಯ ಪೂಮಾಲೆ ಸರಗಳ ಹಾಕಿ
ಧೀರ ಮುಡಿಸಿದನವರ ಮುಡಿಗೆ ॥೧೩೧॥

ಅರಿಷಿನೆಣ್ಣೆಯ ಮಾಡಿ ಅರ್ತಿಲಿ ಬೀಗರು
ಸರಸದಿ ರಾಮಯ್ಯನೆಡೆಗೆ ।
ಹರುಷದಿ ಹಾರವ ಹಾಕ್ಯಡ್ಡ ಬಿದ್ದರು
ಸರಸಿಜಮುಖಿಯರೊಂದಾಗಿ ॥೧೩೨॥

ಎರಡು ನಾಲ್ಕು ದಿನ ಸವಿದುಂಡು ಬೀಗರು
ಮರುದಿವಸ ನಾಗೋಲೆ ಮಾಡಿ ।
ಕರೆಸಿ ಮಾಮನೆಗೆ ಕಂಪಿಲರಾಯನವರಿಗೆ
ಸರಿ ಊಟಗಳನುಣಿಸಿದರು ॥೧೩೩॥

ಓಕುಳಿ ಅರ್ತಿಯ ಮಾಡಿ ರಾಮಯ್ಯನು ಅ
ನೇಕಿ ಹರುಷದಿಂದ ತಾನು ।
ಸಾಕು ಕಾಟಣ್ಣ ನೀ ಹೋಗು ಬೀಗರ ಕೂಡೆ
ಜೋಕೆಲಿ ಕಳುಹಿಸಿ ಬಾರೊ ॥೧೩೪॥

ಮಂದಿ ಮನ್ನೆಯರ ತಾ ಕರಕೊಂಡು
ಅಂದವರನು ಕಳುಹುತಲಿ ।

ಸಂದುದು ಗಾವುದ ದಾರಿಯಾಗಿ ಕಳುಹಿ
ಹಿಂದಕ್ಕೆ [ತಿ]ರುಗಯ್ಯ ಕಾಟ ॥೧೩೫॥

ಬಂದಡ್ಡ ಬಿದ್ದು ಕಂಪಿಲರಾಯಗೊಂದಿಸಿ
ಅಂದಾಗಿ ಸುದ್ದಿಯ ಪೇಳಿ ।
ಇಂದುವ ರಾಮಗೆ ಅರಿಕೆ ಮಾಡಿಸಿ ತನ್ನ
ಮಂದಿರವನು ಒಳಪೊಕ್ಕ ॥೧೩೬॥

ಇತ್ತ ತನ್ನರಮನೆಯೊಳು ರಾಮ ಸುಖವಿರೆ
ಅರ್ತಿಯ ನೋಡುತ ರಾಯ ।
ಹೆತ್ತ ತಾಯಿ ಹರಿಯಮ್ಮ ಸಂತಸದೊಳು
ಅರ್ತಿಯೊಳಿರುತಿರ್ದರವರು ॥೧೩೭॥

ಕನ್ನೆಗಾಳಗವ ಜಗದಪ್ಪನೊಳ್ ಮಾಡಿ ತಾ
ಮಾನ್ಯಮಾನ್ಯೆಯರನು ಗೆಲಿದು ।
ಭಿನ್ನವಿಲ್ಲದೆ ಐದು ಕನ್ನೆವೆಂಗಳ ಗೆದ್ದ ಪ್ರ
ಸನ್ನ ಕಾಳಗ ಸಂಧಿ ಮುಗಿಯೆ ॥೧೩೮॥

ಇದು ಪರನಾರಿ ಸೋದರನೆಂಬ ರಾಮನ
ಪದಕೃತಿಯೊಳಗೊಂದು ಕಥೆಯ ।
ಚದುರ ರಾಮಯ್ಯನು ಮದಿವ್ಯಾದ ಸುದ್ದಿಯ
ಪದಗಳು ಮುಗಿದು ಪೂರಾಯ್ತು ॥೧೩೯॥

ಅಂತು ಸಂಧಿ ೭ಕ್ಕಂ ಪದನು ೫೯೯ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೮

❖

ಓರುಗಲ್ಲಿನಿಂದ ಬೊಲ್ಲನನ್ನು ತಂದುದು

ಶ್ರೀಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ತಂದೆ ಕುದುರೆಗಳ ರಾಮಯ್ಯಗೆ ತೋರದೆ
ಅಂದೆ ಕುಮಾರರಿಗಿತ್ತ ।
ಯೆಂದು ಬಗೆ[ದು ಇಂ]ತು ಕಂದ ರಾಮಯ್ಯ ।
ಮುಂದೆ ವೈಹಾಳಿ ಬಯಲಲ್ಲಿ ॥೨॥

ಬಂದನು ಇದಿರಲಿ ರಾಮನಾಥನು ಆಗ
ಕುಂದದೈವರು ಕುಮಾರಕರ ।
ಕೊಂದು ಗೋಳಾಡಿಸಿ ತುರಂಗಗಳ ತಂದು
ಅಂದು ಕಟ್ಟಿದ ಲಾಯದೊಳಗೆ ॥೩॥

ತುರಗವೈದನು ಕೊಂಡು ಹೋದ[ನೆ]ನುತ ಬಂದು
ವರದ ಐವರು ಕುಮಾರಕರು ।
ಪುರಜನವರಿಯೆ ಒಯ್ದನು ತುರುಗವನೆಂದು
ನೆರೆದು ಹೇಳಿದರು ಕಂಪಿಲ[ಗೆ] ॥೪॥

ಹೇಳಿದ ಸುದ್ದಿಯ ಕೇಳಿ ಕಂಪಿಲರಾಯ
ತಾಳಿದ ಮನದಿ ಕೋಪವನು ।

ಊಳಿಗದವರ ಕೈಲಿ ಹೇಳಿ ಕಳುಹಿಸಿ ತನ್ನ
ಬಾಲರಾಮಯ್ಯನ ಕರೆ[ಸೆ] ॥೫॥

ಏನು ಕಾರಣ ನಮ್ಮ ಕರೆಸಿದೆ ಕಂಪಿಲ
ಏನು ಊಳಿಗವು ಹೇಳೆನಲು ।
ಏನ ಹೇಳಲಿ ರಾಮ ಕುವರರೈವರ ಕೊಂದು
ನೀನು ಒಯ್ದೆಂತೆ ತೇಜಿಯನು ॥೬॥

ಚಿಕ್ಕವರನು ಕೊಂದು ಕುದುರೆಯನೊಯಿವರೆ
ತಕ್ಕುದೆ ನಿನಗೆ ಈ ಬುದ್ಧಿ ।
ಮಿಕ್ಕ ಮಾತೇನು ಮಕ್ಕಳ ಕೈಯಿನೊಯಿದಂತೆ
ಅಕ್ಕರಿಂದಲಿ ತಾ ಬೊಲ್ಲನನು ॥೭॥

ಎಪ್ಪತ್ತಿರಾಜನ ಬೊಲ್ಲನ [ತಾಯೆಂ]ದು
ಒಪ್ಪದಿ ಕಂಪಿಲ ನುಡಿಯೆ ।
ಅಪ್ಪಾಜಿ ನೀನಾಡಿದರೇನಾಯಿತು
ತಪ್ಪದೆ ತಹೆನು ಬೊಲ್ಲನನು ॥೮॥

ಭೇರಿ ಮೃದಂಗ ಕೈತಾಳ ತಾಳೆಯ ಕೊಂಬು
ವೀರಜಡೆಯು ಢಮಾಮಿ ।
ಭೂರಿ ವಾದ್ಯಗಳ ಗಡಾಣದಿ ರಾಮಯ್ಯನು
ಧೀರ ನಡೆದನರ್ತಿಯಿಂದ ॥೯॥

ರಾಮಯ್ಯ ಬರುವ ಸಂಭ್ರಮ ಕಂಡು ಹರಿಯಮ್ಮ
ಪ್ರೇಮದಿಂದಪ್ಪಿ ಮುಂಡಾಡಿ ।
ಕೋಮಲೆಯರು ಆರತಿಯನೆತ್ತಿದರು ನಿ
ಸ್ಸೀಮನು ರಾಮನಾಥನಿಗೆ ॥೧೦॥

ಮುಂದೆ ಪೇಳುವೆನು [ಓರುಗಲ್ಲ] ಪ್ರತಾಪನ
ಕಂದ ಎಪ್ಪತ್ತಿನರಾಜನನು ।
ಚೆಂದದಿ ಬೊಲ್ಲನ ತರುವಂಥ ಸುದ್ದಿಗೆ
ಇಂದೊದಗಿದವು ಪ್ರಯಾಣಗಳು ॥೧೧॥

ಓರುಗಲ್ಲಿಗೆ ಪ್ರಯಾಣ ಸಾರಿ ರಾಮಯ್ಯನು
ಸಾರಿಸಿ ಮಾನ್ಯರಿಗೆಲ್ಲ ।
ಧೀರರ ಬೇಗ ಬರಹೇಳೆಂದು ಚರರನು
ಭೋರನಟ್ಟಿದನು ಕರೆಯಲ್ಕೆ ॥೧೨॥

ಎಕ್ಕಟಿಗ ಸಿಂಗನು ಮೀನಿಗರ ಲಕ್ಕನು
ಚಿಕ್ಕ ತಮ್ಮುಗ ಗುಜ್ಜಲೋಬ ।
ರಕ್ಕಸ ಮಾದನು ಕರುವೂರ ತಿಪ್ಪನು
ಬೊಕ್ಕ ಬೋಳುಗ ಓಬುಗನು ॥೧೩॥

ಕರೆಯಲಾ ಅರಸು ರಾಮನಾಥನ ಮಾನ್ಯರು
ನೆರೆದರು ದೊರೆಯ ಇದಿರಿನಲಿ ।
ತರಹೇ[ಳಿ] ನೀಲನ್ನ ಬರಹೇಳೆಕ್ಕಟಿಗರ
ದೊರೆಯು ಹೇಳಿದ [ಮ]ರುಮಾತ ॥೧೪॥

ಎಪ್ಪತ್ತು [ಎರಡು] ಮನ್ನೆಯರು ಸಹವಾಗಿ
ಒಪ್ಪದಿಂದೂರ ಹೊರಗಣ ।
ಮುಪ್ಪುರವೈರಿಯ ಗುಡಿಯ ಮುಂದಿಳಿದರು
ಒಪ್ಪುವ ರಾಮಯ್ಯ ಸಹಿತ ॥೧೫॥

ಕುಮ್ಮಟದಿಂದ ಹೊರಟುಬಂದರು ಬೇಗ
ಗಮ್ಮನೆ ಕಂಪಲಿಯ ಬಳಿಗೆ ।
ಉಮ್ಮಯದಿಂದ ಸೋಮೇಶಗೆ ಶರಣೆಂದು
ಎಮ್ಮಿಗನೂರ ದಾಂಟಿದರು ॥೧೬॥

ಬರುತ ಕಂಡರು ಹೊ[ಸ]ಮಲೆಯ ದುರ್ಗವ
ಉರುತರ ದೊಡ್ಡ ಬಸವನ ।
ಪುರ ಕುರುಗೋಡ ಪಯಣಗತಿಯೊಳು ರಾಮಯ್ಯ
ಭರದಿಂದ ತನ್ನ ಮನ್ನೆಯರ ॥೧೭॥

ಕರೆದು ವೀಳ್ಯವನಿತ್ತು ಹರುಷದಿ ರಾಮಯ್ಯ
ನೆರೆಗಲಿಗಳನು ಸಂತೈಸಿ ।

ಪರಿವಾರವನೆಲ್ಲ ಇರದೆ ಬೋಳೈಸುತ
ಕರೆದು ವೀಳ್ಯಗಳ ತಾ ಕೊಡಿಸಿ ॥೧೮॥

ಧರೆಯು ಭೋರೆಂಬಂತೆ ದಾರಿ ಪ್ರಯಾಣವ
ಸಾರಿ ತೆರಳಿದನು ಆ ಕ್ಷಣಕೆ ।
ಗುರುವೆ ಜಟ್ಟಂಗಿ ರಾಮೇಶನೆ ಗತಿಯೆಂದು
ಗುರುವ ರಾಮಯ್ಯ ವಂದಿಸಿದ ॥೧೯॥

ಕುರುಗೋಡನುಳಿದು ಮುಂದಕೆ ದಾಂಟಿ ನಡೆದರು
ಕರ[ಡಿ]ಕಲ್ಲೂರ ಮುಂದಿಳಿದು ।
ಹರಿವ ನದಿಯ ದಾಂಟಿ ಬಂದನು ರಾಮಯ್ಯ ನಿ
ಬ್ಬರದಲಿ ತಾನು ನಡೆದನು ॥೨೦॥

ತೆರಳಿ ಬಂದನು ರಾಮ ಯಾದವಗಿರಿಗಾಗಿ
ಮರಳಿ ಪಾಳ್ಯವ ತಾನಿಳಿದು ।
ಇರದೆ ಮಜ್ಜನಮಾಡಿ ಉಂಡು ರಾಮಯ್ಯನು
ಹರುಷದಿ ಸುಖನಿದ್ರೆಗೈದ ॥೨೧॥

ನಿದ್ರೆಗೈದೆದ್ದು ರಾಮಯ್ಯ ಜಟ್ಟಂಗಿಯ
ರುದ್ರನ ನೆನೆದು ಮನದೊಳಗೆ ।
ಕ್ಷುದ್ರರಾಯರ ಗಂಡ ತೆರಳಿ ಮುಂದಕೆ [ಬ]ರೆ
ಭದ್ರವನೇನ ಪೇಳುವೆನು ॥೨೨॥

ಆದವನ್ನಿಯ ದಾಂಟಿ ಅತ್ತ ಮುಂದಕೆ ನಡೆದ
ಮೇದಿನಿ ಅರಸರನೆಲ್ಲ ।
ಸಾಧಿಸೇನೆಂಬ ಬಿರುದಿನ ಕಡೆಯವನಿಟ್ಟು
ಮೂದಲಿಸುತ ತಾ ನಡೆದ ॥೨೩॥

ಅಲ್ಲಿಂದ ಮುಂದಕ್ಕೆ ನಡೆದು ಬಂದನು ಬೇಗ
ರೊಳ್ಳೆಯ ಗೊನಗೊಂದಿಗಾಗ ।
ಚೆಲ್ಲವರಿದು ನಡೆದರೆಲ್ಲರೊಂದಾಗಿ
ಕಲ್ಲೂರ ಮುಂದೆ ಇಳಿದರು ॥೨೪॥

ಮಜ್ಜನ ಭೋಜನಂಗಳ ಮಾಡಿ ರಾಮಯ್ಯ
ಗುಜ್ಜರಿ ಮಂಚದ ಮೇಲೆ ।
ಸಜ್ಜನ ಜನದಿಂದ ನಿದ್ರಾಂಗನೆಯೊಳು
ಬೆಜ್ಜಾರಕೆಚ್ಚರಿಕೆಯಲಿ ॥೨೫॥

ಎದ್ದನು ಮುಂದಕ್ಕೆ ತುಂಗಭದ್ರೆಯ ದಾಂಟಿ
ಉದ್ಯಾವಾರಣ್ಯಕ್ಕೆ ಬಂದ ।
ಸಿದ್ಧವಟ್ಟವ ದಾಂಟಿ ಬಂದಿಳಿದನು ಬೇಗ
ಉದ್ದಗಿರಿಯ ದುರ್ಗದಲಿ ॥೨೬॥

ಇಳಿದರು ಇನಿಗೊಂಡೆದ ಪಾಳ್ಯದ ಮುಂದೆ
ಗಳಿಲನೆ ಜಾಗುಜಾಗೆನುತ ।
ಭಳಿರೆ ಎನ್ನುತ ರಾಮ ಶರಣಪುರದ ಕೈಯ್ಯ
ಇಳಿದನು ಇಂದ್ರಕೀಲದಲಿ ॥೨೭॥

ಇಂದ್ರಕೀಲವ ದಾಂಟಿ ಮುಂದಕ್ಕೆ ನಡೆದನು
ಆಂಧ್ರಪ್ರದೇಶ ಗಡಿಗಾಗಿ ।
ಬಂದನು ಗಡಿಯ ದಾಂಟುತ ಲಾಳದೇಶಕ್ಕೆ
ಮುಂದುವರಿದು ರಾಮನಾಥ ॥೨೮॥

ಈ ಪರಿಯಲಿ ರಾಮನಾತನು ಬರಲತ್ತ
ಭೋಪನೋರ್ಗಲ್ಲ ಅರಸಿನ ।
ಚಾಪನ ಕುವರ ತಾನೆಪ್ಪತ್ತಿರಾಜನು ಲಕ್ಷ
ಹೊಂಗಳ ಕಟ್ಟಿಕೊಂಡು ॥೨೯॥

ಭೂಪತಿ ಮುಂಗುಲಿರಾಯನಲ್ಲಿಗೆ ಹೋಗಿ
ಮಾಪಾ ವಾಜಿಗಳು ಲಕ್ಷಗ[ಳ] ।
ನಾ ಪರೀಕ್ಷಿಸಿ ತಾಹೆನೆನುತ ಎಪ್ಪತಿರಾಜ
ಕೂಪ ವಾರುವಗಳ ನೋಡೆ ॥೩೦॥

ಲಕ್ಷ ಕುದುರೆ ಲಾಯಗ[ಟ್ಟೆ] ಮುಂಗುಲಿರಾಯ
ದಿಕ್ಕನೆ ಈ ಬೊಲ್ಲನಿರುವ ।

ಲೆಕ್ಕವಿಲ್ಲ[ದ] ತೇಜಿಯ ನೋಡಿ ಮನವನು
ಇಕ್ಕಿದ ಬೊಲ್ಲನ ಮೇಲೆ ॥೩೧॥

ಕೇಳಿದ ಎಪ್ಪತ್ತಿರಾಜ[ನು] ಬೊಲ್ಲನ
ಹೇಳೆಂದು ಮುಂಗುಲಿಯೊಡನೆ ।
ಪೇಳುವೆನಿದರ ವೃತ್ತಾಂತವ ನೀ ಕೇಳು
ಮೇಳವಿಸಿದ ಮನಸಿನಲಿ ॥೩೨॥

ಒಳ್ಳೆಯ ಶುಭಲಗ್ನದಲ್ಲಿ ಜನಿಸಿತು ಬೊಲ್ಲ
ಹೊಲ್ಲೆಯ ದಿನ ಶುದ್ಧ ಹಗಲೆ ।
ಬಲ್ಲಿದ ಎಪ್ಪತ್ತಿರಾಜ ಲಕ್ಷವ ಕೊಟ್ಟು
ನಿಲ್ಲದೆ ತಂದ ಬೊಲ್ಲನನು ॥೩೩॥

ಬೊಲ್ಲನ ಏರಿದ ಎಪ್ಪತ್ತಿರಾಜ ಭೂ
ವಲ್ಲಭ ಪ್ರತಾಪ ದೊರೆಗೆ ।
ಉಲ್ಲಾಸಮಂ ತೋರಿ ನೆಲಮಾಳಿಗೆಯೊಳಿಟ್ಟು
ಮೇಲೆ ಉಕ್ಕಿನ ಕಡಲೆಯನು ॥೩೪॥

ಇಂದ್ರಕೀಲವ ದಾಂಟಿ ಬಂದನು ರಾಮಯ್ಯ
ನಿಂದನು ರಹುದ್ರೇಕಪುರದಿ ।
ಕಂದರ ಮಾಳ ಕರಾಳದೇಶವ ದಾಂಟಿ
ಬಂದಿಳಿದನು ಮಾದ್ರಿಗಿರಿಗೆ ॥೩೫॥

ಐವತ್ತು ಆರು ದೇಶವ ದಾಂಟಿ ರಾಮಯ್ಯ
ಒಯ್ಯನೆ ನಡೆದನರ್ತಿಯಲಿ ।
ಒಯ್ಯನಿಳಿದು ರುದ್ರನಗಿರಿಯನು ದಾಂಟಿ
ಮೈಲಾರಪುರವ ದಾಂಟಿದನು ॥೩೬॥

ಎದ್ದನು ಅಲ್ಲಿಂದ ಧರ್ಮಾವತಿಯೆಂಬೂರ
ಹೊದ್ದಿ ಸಾರಿದನು ರಾಮಯ್ಯ ।
ನಿರ್ಧಾರದಲಿ ಬಂದು ನಲ್ಲೂರಪುರವನು
ಉದ್ದುರಪುರ ಹೊಕ್ಕರೊಡನೆ ॥೩೭॥

ಶರಣರ ಮತವನು ಸೇರಿದ ರಾಮಯ್ಯ
ಉರತರ ಹರಕೆಯನಾಂತು ।
ಪುರದೋರುಗಲ್ಲ ಪ್ರತಾಪರುದ್ರನ ತೇಜಿ
ಭರದಿಂದಲೆನ್ನ ಸೇರಿದರೆ ॥೩೮॥

ದೊರೆ ರಾಮನಾತನು ಗುಂಡಬ್ರಹ್ಮಯ್ಯಗೆ
ಉರುತರವಾದ ಶೂಲವನು ।
ಸರಿಮಿಗಿಲಪ್ರತಿ ಹರುಷದಿ ಪೂಜೆಯ
ಧರೆಯೊಳಪ್ರತಿ ಮಾಡಿಸುವೆನು ॥೩೯॥

ಕಳುಹಲವರ ಕೈಯ್ಯ ಕಳುಹಿಸಿಕೊಂಡನು
[ತ]ಳುಹದೆ ರಾಮಯ್ಯ ಹೊರಟ ।
ಘಳಿಲನೆ ಬೇಟೆವಿಡಿದು ಬಾಹನಿದಿರಿಗೆ
ಸುಳಿದನು ದೇವಿಶೆಟ್ಟಿಯ ಲಿಂಗ ॥೪೦॥

ದಾರಿಯೊಳಿದಿರು ತಾನಾಗಿ ಮಾತಾಡುತ
ಆರು ನೀನೆಂದ ಲಿಂಗಣ್ಣ ।
ಧಾರುಣಿಯೊಳು ಹೊಸಮಲೆಯ ಕಂಪಿಲನ
ಕುಮಾರ ಚೆನ್ನಿಗೆ ರಾಮನೆನಲು ॥೪೧॥

ಏನು ಕಾರಣ ಬಂದೆ ಚೆನ್ನಿಗ ರಾಮಯ್ಯ
ಭಾನುಸಖನ ಮುಖದವನೆ ।
ನಾನು ಕಂಪಿಲನೊಳು ಮುನಿದು ಬಂದೆನು ಎಂದು
ಮೌನದಿಂದವನೊಳು ನುಡಿದ ॥೪೨॥

ನೀನಾರು ನಿನ್ನ ಹೆಸರೇನು ನೀನಾವೂರು
ಊನ್ಯವಿಲ್ಲದೆ ಹೇಳೆನಗೆ ।
ನಾನೋರುಗಲ್ಲ ಪಟ್ಟಣಸೆಟ್ಟಿ ಲಿಂಗಣ್ಣ
ಮಾನವಪತಿ ರಾಮ ಕೇಳು ॥೪೩॥

ಇಬ್ಬರೊಂದಾಗಿ ಏಕಾಂತವನಾಡುತ
ತಬ್ಬಿಕೊಂಡರು ಹರುಷದಲಿ ।

ನಿರ್ಧಾರದಲ್ಲಿ ಬಂದ ಕಾರಣವೇನು
ಒಬ್ಬನೆ ಬೆರಗಾಗಿ ಕೇಳೆ ॥೪೪॥

ತಂದೆ ಕಂಪಿಲನೊಳು ಪಂಥವನಾಡಿ ಬಂದೆನು
ಇಂದು ಬೊಲ್ಲನ ತಾಹೆನೆನುತ ।
ಸಂದೇಹವ್ಯಾತಕೆ ರಾಮಯ್ಯ ನಾ ನಿನ್ನೊಳ
ಗೆಂದನು ದೇವಿಸೆಟ್ಟಿ ಲಿಂಗ ॥೪೫॥

ಬಂದು ರಾಮ ಓರ್ಗಲ್ಲದುರ್ಗದ ಮುಂದೆ
ನಿಂದಿರಿಸಿದ ನದಿಯ ತಡಿಯ ।
ತಂದೆ ಕಂಪಿಲನೊಳು ಮುನಿದು ರಾಮಯ್ಯನು
ಬಂದನು ನಿಮ್ಮನೋಲೈಸಿ ॥೪೬॥

ಹಾಗೆಂದು ಪೇಳೆ ಪ್ರತಾಪರುದ್ರನು ಕೇಳಿ
ಬೇಗದಲವನ ಕರೆಸೆನಲು ।
ಹಾಗೆಂದ ಮಾತನು ಕೇಳುತಲಿರ್ದಂತೆ
ಹೇಳಿದ ರಾಮಯ್ಯನೊಡನೆ ॥೪೭॥

ಹಸ್ತಿನಿ ಚಿತ್ತಿನಿ ಪದ್ಮಿನಿ ಶಂಕಿನಿ
ಮೊತ್ತದ ಸತಿಯರೊಗ್ಗಿನಲಿ ।
ಮತ್ತು ಮಾಣಿಕ ದಿವ್ಯಾಭರಣ ಹೊನ್ನೋಲೆಯು
ಒತ್ತಿಲಿ ಎಸೆವ ಪೆಂಡೆಯವು ॥೪೮॥

ನೋಡಿ ರಾಮನ ರೂಪ ಹೆರೆ ಹಿಂಗಲಾರದೆ
ಕೂಡುವ ಪರಿಯು ಹ್ಯಾಗೆನುತ ।
ಗೋಡೆಯ ಚಿತ್ರದ ಪರಿಯಂತೆ ನಿಂದರು
ಗಾಡಿಕಾತಿಯರು ಸಂಚಲದಿ ॥೪೯॥

ಎತ್ತಿದ ಮಕ್ಕಳ ಕೆಳೆಯಾಕೆ ಬಿಟ್ಟರು
ಹತ್ತಿದ ವಿರಹ ತಾಪದಲಿ ।
ನೆತ್ತಿಯ ಕೊಡಗಳ ಬಿಟ್ಟು ಕೈಮರೆದರು
ಚಿತ್ತದಿ ಭ್ರಮಿಸಿ ನಾರಿಯರು ॥೫೦॥

ಕಾಮನ ಕಳೆಗೆ ವೆಗ್ಗಳ ಪುಟ್ಟದನಿವ
ಭೂಮಿಯ ಚೆಲುವರ ಗಂಡ ।
ಸಾಮಜಗಮನೆ ಪೆತ್ತವಳಾರೊ ಎನುತಲಿ
ಕೋಮಲೆಯರು ಕೊಂಡಾಡಿದರು ॥೫೧॥

ಮತ್ತೊಬ್ಬ ಸತಿಯು ರಾಮನ ಕಂಡು ಭ್ರಮಿಸಿಯೆ
ಚಿತ್ರದ ಬೊಂಬೆಯಂದದಲಿ ।
ಚಿತ್ತವ ಕೈಸೆರೆವಿಡಿದನವನ ಕಂಡು
ಮೂರ್ಚೆಯಾದಳು ತಾಪದಲ್ಲಿ ॥೫೨॥

ಪಡೆದ ತಾಯಿಗಳು ಮಕ್ಕಳ ನೋಡುವಂದದಿ
[ಒ]ಡಹುಟ್ಟಿದವರು ತಮ್ಮಂದಿರನು ।
ಕಡುಗಲಿ ರಾಮನ ಕಂಡು ಭ್ರಮಿಸಿಯೆ ಆಗ
ದೃಢವುಳ್ಳ ಪತಿವ್ರತೆ ಹೆಣ್ಣು ॥೫೩॥

ನೋಡಿ ಕಂಡನು ರಾಮ ವಿರಹದ ಹೆಣ್ಣನು
ಆಡಿದ ತನ್ನೊಳು ತಾನು ।
ರೂಢಿಗೀಶ್ವರ ಬಲ್ಲ ಹರಿಯಮ್ಮನಿವರೆಂದು
ಕೂಡೆ ಕಹಳೆಗಳ ಹಿಡಿಸಿದನು ॥೫೪॥

ಪರನಾರಿಯರ ಸೋದರರನು ಚೆನ್ನಿಗರಾಮ
ಪರದಳ ರಣಭಯಂಕರ ।
ಪರರಾಯದಲ್ಲಣನೆಂದು ನುಡಿಯ ಕೇಳಿ
ಬಿಡದೆತ್ತಿ ಹಲವು ಪರಿಯಲ್ಲಿ ॥೫೫॥

ಒಂದೊಂದು ಪರಿ ಚಂದ್ರಸಾಲೆ ಉಪ್ಪರಿಗೆಯ
ಚಂದವ ಲಿಂಗ ತೋರುತಲಿ ।
ಮಂದಿ ಕುದುರೆ ಸಂದೋಹ ಸಂಭ್ರಮದಲ್ಲಿ
ಕಂದರ್ಪರೂಪ ನೋಡುತಲಿ ॥೫೬॥

ಇತ್ತರದಂಗಡಿಯುಪ್ಪರಿಗೆ ಸಾಲುಗಳಿಂದ
ಮೊತ್ತದ ಶೃಂಗಾರಗಳನು ।

ಚಿತ್ರದ ಮುಗಿಲು ಮಂದಿರಗಳ ನೋಡುತ
ಮತ್ತೆ ಬಂದರು ಅರಮನೆಗೆ ॥೫೭॥

ಹುಳಿಯೇರ ಬಾಗಿಲ ಹೊಕ್ಕನು ರಮಯ್ಯ
ಒಳೆಯಾಕ ನಡೆದನಾದಕ್ಷಣದಿ ।
ಇಳಿದನು ಕುದುರೆಯ ಕನ್ನಡಿ ಮೋರೆಯ
ತಳುಹದೆ ನಡೆದನೋಲಗಕೆ ॥೫೮॥

ಧುರಗಲಿ ವೀರ ಪ್ರತಾಪರುದ್ರನೋಲಗ
ದಿರುವನು ಏನು ಬಣ್ಣಿಸುವೆ ।
ಬಿರಿದುಳ್ಳ ಮನ್ನೆಯ ಮಕುಟವರ್ಧನರನು
ಅರಸು ರಾಮಯ್ಯ ನೋಡಿ ಕಂಡ ॥೫೯॥

ಎಡವಂಕ ಬಲವಂಕ ರಾಯರ ವಾಲಗ
ಕಡುಗಲಿ ರಾಜಕುವರರು ।
ದೃಢವುಳ್ಳ ಮಂತ್ರೀಶ ರಾಯ ರಾಹುತರೆಲ್ಲ
ಮೊಡವಿಪಾಲಕನೋಲಗದಿ ॥೬೦॥

ಮುತ್ತಿನ ಗದ್ದುಗೆಯಲಿ ರುದ್ರರಾಯನು
ಚಿತ್ತಜ ಕಳೆವೊಪ್ಪುತಿರಲು ।
ಇಂತಪ್ಪ ವಾಲಗದೊಳಗೆ ಚೆನ್ನಿಗರಾಮ
ಅರ್ತಿಯಿಂದಲಿ ನಡೆತಂದ ॥೬೧॥

ತಾರಕಿಯೆಡೆಗೆ ಚಂದ್ರಮನು ಬಂದ ತೆರನಂತೆ
ತೆರನಂತೆ ಹಾರದೆಡೆಗೆ ಜೀವರತ್ನ ।
ಓರುಗಲ್ಲರಸು ರುದ್ರರಾಯನೋಲಗದೊಳು
ಮಾರಸನ್ನಿಭ ರಾಮನೆಸೆದ ॥೬೨॥

ಕಟ್ಟಳಿಲ್ಲದ ಮನ್ನೆಯ ಮಂಡಳಿಕರು
ದಿಟ್ಟ ರಾಮನ ರೂಪ ನೋಡಿ ।
ನೆಟ್ಟನೆ ಬೆರಗಾಗತಿ ತಮತಮಗೆಲ್ಲರು
ಬೊಟ್ಟನೊಲಿದು ಕೊಂಡಾಡಿದರು ॥೬೩॥

ವಂದನೆಮಾಡಿ ರಾಮನು ರುದ್ರರಾಯಗೆ
ತಂದು ಕಾಣಿಕೆಯನಿಕ್ಕಿದನು ।
ಚಂದ್ರನ ಕಳೆಯ ಕುಮಾರ ಕುಳ್ಳಿರು ಎಂದು
ಅಂದು ರಾಯನು ಸಂತೋಷದಲಿ ॥೬೪॥

ನೋಡಿದ ರಾಯನ ಮಂದಿ ಕುದುರೆಯನು
ಮಾಡಿದ ಮನವ ಸಂತಸವ ।
ಕೂಡಿದರೆಪ್ಪತ್ತಿರಾಜನ ರಾಮನಿಗೆ
ಬೇಡಿದ ಸೀಮೆಯ ಕೊಡುವೆ ॥೬೫॥

ಬುದ್ಧಿನಿತಿಲ್ಲವೊ ಕಂಪಿಲರಾಯಗೆ
ಮುದ್ದು ಮುಖದ ರಾಮನನು ।
ಎದ್ದು ಮುನಿಸುಗುಟ್ಟಿ ಬರಲಿಬಹುದೆ ಎಂದು
ರುದ್ರ ಮಂತ್ರಿಯೊಳು ಪೇಳಿದನು ॥೬೬॥

ಇತ್ತನು ಕಂಠಮಾಲೆಯ ಉಡುಗೊರೆಯನು
ಅರ್ತಿಯಿಂದಲಿ ರಾಮನಿಗೆ ।
ಉತ್ತುಮ ಪಡಿಬಿಡಾರವ ಕೊಡುವೆನುಯೆಂದು
ಮತ್ತೆ ಲಿಂಗಗೆ ಹೇಳಿದನು ॥೬೭॥

ಕಳುಹಿಸಿಕೊಂಡು ರಾಮಯ್ಯನಾಕ್ಷಣದಲ್ಲಿ
ಇಳಿದ ರುದ್ರನ ಚಾವಡಿಯ ।
ನಳಿನನಾಭನೆ ಗತಿಯೆನುತಲಿ ರಾಮಯ್ಯ
ಕಳವಳಿಸುತ ನಡೆತಂದ ॥೬೮॥

ಆ ಸಮಯದಿ ಭಟ್ಟರು ಕೊಂಡಾಡಿದರು
ಸಾಸಿರ ಕಳೆಯ ರಾಮುಗನ ।
ದೇಶದೊಳಗೆ ರಾಯರಗಂಡ ರಾಮನು
ಆಸೆಗೊಳ್ಳನು ಪರಸತಿಗೆ ॥೬೯॥

ಮಂಡಲದೊಳು ಜಟ್ಟಂಗಿರಾಮೇಶನ
ಪಿಂಡದ ನಿಜಸುತ ನಡೆದ ।

ಹಿಂಡ ವೈರಿಯಗಂಡ ಸಿಂಹ ರಾಮಯ್ಯನು
ಕೊಂಡಾಡೆ ಮುಂದೆ ಪಾಠಕರು ॥೭೦॥

ಮುಂದಕ್ಕೆ ರಾಮನು ಅಡಿಯಿಟ್ಟು ನಡೆವಾಗ
ಮುಂದೆ ಬಿರಿದುಗಳ ಸಾರುತಲಿ ।
ಸಂದೇಹವಿಲ್ಲದೆ ಜೀವದಾಸೆ ಮಾಡುವ
[ಹಂ]ದೆ ರಾಯರಗಂಡ ರಾಮ ॥೭೧॥

ಮುಗಿಲ ಕೆಳಗೆ ಬಹು ತೋಳ ಬೀಸಿ ನಡೆವಂಥ
ಅಗಣಿತ ರಾಯರಗಂಡ ।
ಜಗದಪ್ಪ ಮೊದಲಾದ ರಾಯರಗಂಡನೆಂದು
ಅಗಣಿತ ಕಹಳೆ ಸಾರಿದವು ॥೭೨॥

ಆಸೆಯ ಮಾಡಿ ದೇಶವನಾಳಬೇಕೆಂಬ
ಭಾಷೆಹೀನರಗಂಡ ರಾಮ ।
ಕೂಸ ಹಾಸಿಗೆಯೊಳು ಮಲಗಿಸುವರ ಗಂಡ
ರಾಸಿ ಮಾಂಡಲಿಕರ ಗಂಡ ॥೭೩॥

ಕಳ್ಳತನದಿಂದ ಬಿರಿದ ಹೊಗಳಿಸಿಕೊಂಬ
ಅಳ್ಳೆದೆ ರಾಯರಗಂಡ ।
ಡಿಳ್ಳಿಯ ಗಂಡ ಡಿಳ್ಳಿ ಸುರಿತಾಳನ ಮಿಂಡ
ಬಲ್ಲಿದ ನೇಮಿಯ ಗಂಡ ॥೭೪॥

ಎತ್ತಣ ಗಾಳಿ ಬೀಸಿದರತ್ತ ಮಲೆತಿಹ
ಮೊತ್ತದ ರಾಯರ ಗಂಡ ।
ಸತ್ತಿಗೆ ನರಳಲ್ಲಿ ಬಹ ಮಾಂಡಲಿಕರ
ನೆತ್ತಿಯ ಶೂಲ ರಾಮಯ್ಯ ॥೭೫॥

ಕೊಟ್ಟ ಹಣವ ಗಂಟ ಕಟ್ಟಿಕೊಂಬರ ಗಂಡ
ಇಷ್ಟಲಿಂಗವು ಜಟ್ಟಂಗೇಶ ॥೭೬॥

ಮಣಿವ ರಾಯರಗಂಡ ಮಲೆವ ರಾಯರಗಂಡ
ರಣದಿ ಮಚ್ಚರಿಪರಗಂಡ ।

ಢಣಢಣಿಸುವ ಗಂಟೆಗಳುಲಿಯಲು ಆಕ್ಷಣ
ಕಣಕಾಲಿನಲಿ ರಾಮಯಗೆ ॥೭೭॥

ನರಪತಿ [ಗಜ]ಪತಿ ಅಶ್ವಪತಿಗಳೆಂಬ
ಅರಸುಗಳಿಗೆ ಗಂಡನೆಂಬ ।
ಬಿರಿದ ಪೊಗಳಲು ಭಟರು ರಾಮನಾಥನ
ಭರದಿ ಕೇಳಿದ ರುದ್ರರಾಯ ॥೭೮॥

ಬಿರಿದ ಕೇಳುತ ರುದ್ರ ಉರಿದೆದ್ದು ಕೋಪದಿ
ತರಹರಿಸದೆ ಮನದೊಳಗೆ ।
ಹರುಷವಡಗಿ ಕಾಲರುದ್ರನಂತವನಾಗ
ಇರದೆ ಕೋಪವನು ತಾಳಿದನು ॥೭೯॥

ಕಡೆಗಣ್ಣು ಕಿಡಿಸೂಸೆ ಕುಡಿಮೀಸೆ ಕುಣಿದಾಡೆ
ಬಿಡದೆ ಗಂಟಿಕ್ಕಿ ಹುಬ್ಬುಗಳು ।
ಒಡನೆ ನುಡಿದನು ಮಂತ್ರಿಯ ಕೂಡೆ ರೋಷದಿ
ಕಡು ಬೇಗದೊಳು ಇಂತೆಂದ ॥೮೦॥

ಕಟ್ಟಾಣಿಲ್ಲದ ಬಿರಿದನು ರಾಮಯ್ಯ[ನ]
ಭಟ್ಟರು ಕೊಂಡಾಡಿದರು ।
ಸೃಷ್ಟಿಪಾಲಕ ರಾಯ ಕೇಳಿ ಕೋಪವ ತಾಳಿ
ಮುಟ್ಟಿ ಮಂತ್ರಿಯೊಳಿಂತೆಂದ ॥೮೧॥

ನಮ್ಮ ಬಳಿಗೆ ರಾಮನೋಲೈಸಲು ಬಂದು
ಹಮ್ಮಿನ ಬಿರಿದನಿಕ್ಕಿದನೆ ।
ಗಮ್ಮನೆ ಮಂಡಲಿಕರು ಗಜಬಜಿಸುತ್ತ
ಇಮ್ಮಡಿ ತಿಟ್ಟವಿಕ್ಕಿದರು ॥೮೨॥

ನಿಮ್ಮ ಸಮಾನದಿ ಕುಳಿತನಾದರೆ ಜಾತಿ
ಧರ್ಮವ ಬಿಡುವನೆ ಅವನು ।
ನಿಮ್ಮ ಪಾದವನು ಕಾಣಿಸಿದಂದವು
ನಮ್ಮೆಲ್ಲರ ಗಂಡನೆಂದೆಂಬ ॥೮೩॥

ಘುಡಿಘುಡಿಸುತ ರುದ್ರಾರಾಯ ಕೋಪವ ತಾಳಿ
ಹಿಡಿತನ್ನಿ ಲಿಂಗನ ಬೇಗ ।
ಒಡನೆ ಕಳುಹೆ ಕಂಚುಕಿಯರು ಬೇಗದಿ
ನಡೆದು ಬಂದರು ಲಿಂಗನೆಡೆಗೆ ॥೮೪॥

ಪರಿಪರಿ ಬಿಡಾರ ರಾಮಗೆ ಲಿಂಗಣ್ಣ
ಅರಿದೆನಿಸುತ ಮಾಡುತಿರಲು ।
ಕರ ಬೇಗ ರಾಯ ನಿನ್ನನ್ನು ಬರಹೇಳಿದ
ಧುರಧೀರ ಲಿಂಗ ಬಾರೆನಲು ॥೮೫॥

ನಡೆದು ಬಂದನು ಲಿಂಗರಾಹುತ ವಹಿಲದಿ
ಒಡೆಯ ರುದ್ರನ ಕಂಡು ನಮಿಸೆ ।
ಕಿಡಿಗೆದರುತ ರಾಯ ಕೋಪದಿ ಉರಿದೆದ್ದು
ಜಡಿದು ಗರ್ಜಿಸಿದ ಲಿಂಗನನು ॥೮೬॥

ಕೊಟ್ಟದ ಬೇಡನ ಕರೆತಂದೆ ಇಲ್ಲಿಗೆ
ಮುಟ್ಟಿ ಬಿರಿದನು ಹೊಗಳಿಸಿದೆ ।
ಸೃಷ್ಟಿಯ ರಾಯರಗಂಡನು ತಾನಂತೆ
ಇಷ್ಟುವುಳ್ಳವ ಬರಬಹುದೆ ॥೮೭॥

ಬಂದನ್ಯಾತಕೆ ರಾಮನೋಲೈಸಲಿಲ್ಲಿಗೆ
ಗೊಂದಣ ಬಿರುದುಳ್ಳ ಬಂಟ ।
ಹಿಂದಣ ಪಂಥವನೆಲ್ಲ ಬಿಟ್ಟಿರ ಹೇಳೊ ಇಲ್ಲ
ದಿರ್ದಡೆ ಹೋಗ ಹೇಳೊ ॥೮೮॥

ಬಲ್ಲಿದಗಲ್ಲದೆ ಬಿರಿದು ದೇವರೆ ಕೇಳು
ತಲ್ಲಣಿಸುವ ಹೇಡಿಗುಂಟೆ ।
ನಿಲ್ಲದೆ ಗುತ್ತಿಯ ಜಗದಪ್ಪ ಮೊದಲಾದ
ಎಲ್ಲ ಮಾನ್ಯರ ಗೆದ್ದ ರಾಮ ॥೮೯॥

ಹಳೆಯಬೀಡಾಳುವ ಬಲ್ಲಾಳನ ಗೆಲಿದನು
ಚೆಲುವುಳ್ಳ ರಾಯ ಚಿತ್ತೈಸು ।

ಭಲದಿಂದ ಹಳಿಯೇರ ಮಾಡಿಗೊಂಡನ ಗೆಲಿದ
ಬಲವುಳ್ಳ ನೇಮಿಯ ಮುರಿದ ॥೯೦॥

ಬಿರಿದ ಬಿಟ್ಟರೆ ರಾಮನಿರಲಿ ಕೇಳೊ ಲಿಂಗಾ
ಭರದಿಂದ ಪಂಥವಾಡಿದರೆ ।
ಮುರಿವೆನು ತನ್ನಯ ಬಲುಹನೆಲ್ಲವನು ತಾ
ಸೆರೆಯಮನೆಯ ಕೂಡಿಸುವೆನು ॥೯೧॥

ದುಗುಡವ ತಾಳಿದ ದೇವಿಶೆಟ್ಟಿಯಲಿಂಗ
ವಿಗಡ ರಾಮನ ಬಳಿಗೈದ ।
ಅಗಣಿತ ಬಿರಿದ ಬಿಟ್ಟರೆ ಇರಹೇಳಿದ
ಸುಗುಣ ರಾಮಯ್ಯ ಚಿತ್ತೈಸು ॥೯೨॥

ಅಬ್ಬರಿಸುತ ರಾಮ ಕೋಪವ ತಾಳಿದ
ಉಬ್ಬಿ ಕಾಟಣ್ಣನಿಂತೆಂದ ।
ಕಂಪಿಲರಾಯನ ಸುತನು ರಾಮಯ್ಯನು
ಹಬ್ಬಿದ ಬಿರಿದ ಬಿಡುವನೆ ॥೯೩॥

ಕಟ್ಟಳಿಲ್ಲದ ದಂಡ ಕಡಿದು ಕುಪ್ಪೆಯನೊಟ್ಟಿ
ಸುಟ್ಟು ಬೊಟ್ಟಿಡುವೆ ಪಟ್ಟಣವ ।
ಮುಟ್ಟಿ ಕಾದಲು ರುದ್ರರಾಯನ ಹಿಡಿವೆನು
ದಿಟ್ಟ ಲಿಂಗಣ್ಣ ಕೇಳ್ಬಿರಿದ ॥೯೪॥

ಭಂಡಾರ ಬೊಕ್ಕಸ ಹೆಂಡಿರು ಮಕ್ಕಳು
ತಂಡತಂಡದಿ ಪ್ರಯಾಣಮಾಡಿ ।
ದಂಡೆತ್ತಿ ರುದ್ರರಾಯನು [ಬ]ರೆ ಕೊಡೆ ನಿನ್ನ
ಗಂಡಾಳು ಲಿಂಗ ಹೋಗೆಂದ ॥೯೫॥

ಬಂದು ಲಿಂಗಣ ದೇವಿಶೆಟ್ಟಿ[ಯರಿಗೆ] ಪೇಳೆ
ಅಂದು ರಾಯನ ಜಗಳವನು ।
ಇಂದು ಇಲ್ಲಿದ್ದರೆ ಕೆಡುವೆವು ನಾವೆಲ್ಲ
ಸಂದೇಹ ಬೇಡವೇಳೆಂದ ॥೯೬॥

ಮುತ್ತು ಮಾಣಿಕ ನವರತ್ನ ಭಂಡಾರವ
ಮತ್ತೆ ಪೆಟ್ಟಿಗೆ ತುಂಬಿಸಿದನು ।
ಉತ್ತಮ ಹೊನ್ನು ಹಣದ ಜಾಳಿಗೆಗಳ
ಇತ್ತನೆಕ್ಕಟಿಗರಿಗೆಲ್ಲ ॥೯೭॥

ಕಾಲುಕುಪ್ಪಸವ ತೊಡಿಸಿ ಹೆಣ್ಣುಗಳಿಗೆಲ್ಲ
ಆಲಸ್ಯವಿಲ್ಲದೆ ಬೇಗ ।
ಮೇಲು ಹಕ್ಕರಿಕೆಯ ಮುಸುಕನು ತೇಜಿಯ
ಸಾಲುಸಾಲಿನಲಿ ಶೃಂಗರಿಸಿ ॥೯೮॥

ತಡೆಯದೆ ಹೋಗಿ ಚಾವಡಿಗೆ ನಡೆದುಬಂದು
ಕರೆಸಿದ ತನ್ನ ರಾಹುತರ ।
ಭರದಿ ಕಾಲಾಳು ಮೇಲಾಳುಗಳನು ಕರೆಸಿ ॥೯೯॥

ಸುಟ್ಟನು ಪಟ್ಟಾವಳಿಯ ಪೆಂಡಿಗಳನು
ಸುಟ್ಟನುಪ್ಪರಿಗೆ ಚಾವಡಿಯ ।
ಸುಟ್ಟನು ಭತ್ತದ ಕಣಜ ಲಾಯಗಳನು
ಸುಟ್ಟು ಲಿಂಗನು ಹೊಟರನು ॥೧೦೦॥

ಅತ್ತ ಹೋಗಲು ಲಿಂಗ ಇತ್ತ ಮನ್ನೆಯರೆಲ್ಲ
ಒತ್ತಿ ಚಾಡಿಯನು ಹೇಳಿದರು ।
ಚಿತ್ತೈಸು ಸ್ವಾಮಿ ರಾಮನ ಲಿಂಗ ಪೊಗಳಿದ
ಅತ್ಯಂಶ ಸ್ವಾಮಿದ್ರೋಹಿಕೆಯ ॥೧೦೧॥

ಹೇಳಿದ ಚಾಡಿಯ ಕೇಳಿದ ರುದ್ರನು
ತಾಳಿದ ಕಡುಗೋಪವನು ।
ಬೀಳುಕೊಟ್ಟನು ಮನೆಯ ಮುದ್ರಿಸೆಂದಾಗಲೆ
ಊಳಿಗದವರನು ಕಳುಹೆ ॥೧೦೨॥

ಹೆಡಕ ಹಿಡಿದು ನೂಕುನೂಕೆಂದು ಲಿಂಗನು
ಒಡೆಯ ರುದ್ರನು ನನಗಲ್ಲ ।
ಸುಡುವೆ ಪಟ್ಟಣವನು ದಂಡೆತ್ತಿ ಬಂದರೆ
ಕಡಿವೆ ಮನ್ನೆಯರನೀಕ್ಷಣದಿ ॥೧೦೩॥

ಕಟ್ಟಿಗೆಕಾರರು ಹೇ[ಳೆ] ರಾಯನ ಕೂಡೆ
ದಿಟ್ಟ ಲಿಂಗಣ್ಣ ಕೋಪಿಸಿದ ।
ಸೃಷ್ಟಿಪಾಲಕ ನೀನೊಡೆಯನು ಅಲ್ಲವೆಂದು
ಬಿಟ್ಟೋಡುತಾನೆ ಪಟ್ಟಣವ ॥೧೦೪॥

ಬೆರಸಿ ಚೂಣಿಯ ಹುಯ್ಯ[ಲ] ಮಾಡಿ ನಿಮುಷದಿ
ಕರ ಬೇಗ ಕಾಡಿದಾಡಿದರು ।
ತುರುಗ ತುರಗ ಕೂಡಿ ಕಡಿದಾಡಿ ರಾಹುತರೆಲ್ಲ
ಇರಿದಾಡಿದರು ಹೊಳಕೆಯಲಿ ॥೧೦೫॥

ಕಂಡ ದೂರದಲಿಂದ ದೇವಿಶೆಟ್ಟಿಯಲಿಂಗ
ಹಿಂಡು ತುರಗ ರಾಹುತರ ।
ಗುಂಡಿಗೆ ಒಡೆದಂತೆ ಲವುಡಿಕೆ ಹೊಡೆಯೆನುತಲಿ
ಮುಂಡಗಳುರುಳೆ ಭೂಮಿಯಲಿ ॥೧೦೬॥

ಅಂಡಮಂಡೆಯ ರಾಸಿ ಕಂಡಗರುಳ ಸಂತೆ
ತಂಡತಂಡದಲಿ ಮುರಿದೋಡೆ ।
ಮಂಡಲಪತಿ ರುದ್ರರಾಯಗೆ ಪೇಳ್ದರು
ಕಂಡ ಗಜವನು ಕಳುಹಿದನು ॥೧೦೭॥

ದಿಕ್ಕಿದಿಕ್ಕಿನ ಬಾಗಿಲಲಿ ಹೊರಹೊಂಟರು
ಲೆಕ್ಕವಿಲ್ಲದೆ ಮಂದಿ ಕುದುರೆ ।
ಕಕ್ಕಸದಲಿ ಮಂದಿ ಮಾನ್ಯರು ಕಡಿದಾಡಿ
ಒಕ್ಕಲಿಕ್ಕಿದರು ರಾಹುತರ ॥೧೦೮॥

ಮತ್ತೆ ರಾಮಯ ತನ್ನ ಪರಿವಾರವೆಲ್ಲಕೆ
ಮತ್ತೆ ಬೆಸನಯಿತ್ತು ಕಳುಹೆ ।
ಕತ್ತಿ ಕಠಾರಿ ಮನ್ನೆಯರ ಮಾರ್ಬಲವೆಲ್ಲ
ಮುತ್ತಿತು ರುದ್ರನ ದಂಡ ॥೧೦೯॥

ಮುಂದಲೆ ಮುಂದಲೆ ಇರಿದಾಡಿ ಪರಿವಾರ
ಬಂದು ರಾಮನ ಪರಿವಾರ ।

ಕುಂದದೆ ಕುದುರೆಯ ಕಡಿಕಡಿದು ಬೇಗದಿ
ಕಂಡದಲೊರಸಿ ಕತ್ತಿಗಳ ॥೧೧೦॥

ಚೆಲ್ಲಿತು ರುದ್ರನ ಬಲ ನಿಮುಷದೊಳಗೆ
ಭಲ್ಲೆವು ಚಕ್ರ ತೋಮರದಿ ।
ಜಲ್ಲಿಸಿ ಕುದುರೆಯ ಪೌಜ ಹಾಕಿರಿದರು
ಬಲ್ಲಿದ ರಾಮನ ಭಟರು ॥೧೧೧॥

ಎಡಬಲದಲಿ ಕೆಲಕಡೆಯ[ಲೆ]ಲುಬೆಯಾಗಿ
ಜಡಿದು ರುದ್ರನ ದಂಡ ಕಡಿದು ।
ಸಿಡಿಲು ಪರ್ವತಕೆ ಮುಸುಕುವಂತೆ ಮುಸುಕಿತು
ಕಡುಗಲಿ ರಾಮನ ಪೌಜ ॥೧೧೨॥

ಹೊಕ್ಕು ಕಾಲಾಳು ಮೇಲಾಳುಗಳೆಲ್ಲರ
ನಿಕ್ಕಡಿಯಾಗಿ ಕಡಿಯೆ ಬಾಣದಲಿ ।
ಕಕ್ಕಸದಲ್ಲಿ ಕಡಿದು ರಾಮನ ದಂಡ
ಒಕ್ಕಲಿಕ್ಕಲು ಹಿಮ್ಮೆಟ್ಟಿದರು ॥೧೧೩॥

ಹಿಮ್ಮೆಟ್ಟಿ ಬರುವ ಪೌಜನು ಕಂಡು ರಾಮಯ್ಯ
ಸುಮ್ಮಾನದಲಿ ನಸುನಗುತ ।
ಹಮ್ಮು ಮುರಿ[ವೆ] ರುದ್ರರಾಯನ ದಂಡನು
ಒಮ್ಮೆ ಲಿಂಗಣ್ಣ ನೀ ನೋಡು ॥೧೧೪॥

ಎಡವಂಕ ಬಲವಂಕ[ಕೋ]ಡಿ ರಾಮಯ್ಯನು
ನಡೆದನು ಕೂಡೆ ವಹಿಲದಲಿ ।
ನುಡಿದವು ಬಿರಿದಿನ ಕಹಳೆ ತಮ್ಮಟ ಭೇರಿ
ಪೊಡವಿರಾಯರ ಗಂಡನೆಂದು ॥೧೧೫॥

ಬಲ ಒದಗಿತು ರುದ್ರನ ಮನ್ನೆಯರು ಬೇಗ
ಬಂದು ಜಗಳವನು ಮಾಡಿದನು ।
ಕಾಟಣ್ಣ ದೇವಿಶೆಟ್ಟಿಯಲಿಂಗ ರಾಮಯ್ಯ
ಮೀಟುಳ್ಳ ಪರಿವಾರವೆಲ್ಲ ॥೧೧೬॥

ಕತ್ತರಿ ಬೋಳಯ್ಯ ಒತ್ತಿ ಮೆಟ್ಟಿ ಸೀಳಲು
ಮತ್ತೆ ತುರಗ ಕಡಿದಾಡಿ ।
ರಕ್ತದ ಹಳ್ಳ ಹರಿಯೆ ಧರಣಿಯ ಮೇಲೆ
ಸುತ್ತಗರುಳು ಸುರಿಸುರಿಯೆ ॥೧೧೭॥

ದೆಸೆ ಬಾಯದೆರೆಯದೆನುತ ರುದ್ರನ ದಂಡು
ಬಿಸಿಯ ರಕ್ತವ ಸುರಿವುತಲಿ ।
ಅಸಮಸಾಹಸ ರಾಮ ಬೆನ್ನಟ್ಟಿ ಬರುತಿರೆ
ಮುಸುಕಿಲಿ ಹಾಯೆ ಪಟ್ಟಣಕೆ ॥೧೧೮॥

ಕೇಳಿದ ದಂಡು ಮುರಿದ ಸುದ್ದಿಯ ರಾಯ
ತಾಳಿದ ಕಡುಗೋಪವನು ।
ಕೋಳಾಹಳವ ಮಾಡಿ ಕಡಿವೆ ರಾಮನ ದಂಡ
ದಾಳಿ ಮಾಡುವೆ ಹೊಸಮಲೆಗೆ ॥೧೧೯॥

[ಇದ್ದೆ] ದೆಸೆಯ ಮಗುಟವರ್ಧನರ ನೋಡಿ ರಾಯ
ಗದ್ದುಗೆಯಿಂದೇಳುತಿರಲು ।
ಬಿದ್ದು ಚರಣದಿ ಕೊಮಾರ ಎಪ್ಪತ್ತಿರಾಜ
ರುದ್ರ ಬೆಸನ ಪಾಲಿಸೆಂದ ॥೧೨೦॥

ಮನ್ನೆಯ ಮಂಡಲಿಕರು ಹೋಗಿ ರಾಮಗೆ
ಬೆನ್ನ ಕೊಟ್ಟರು ಕೇಳು ಕಂದ ।
ನಿನ್ನ ಹವಣೇನು ? ಸಮರಂಗ ಬಲ್ಲದೆ ರಾಯ
ಇನ್ನು ತೆಗದೇನು ಚಿತ್ತೈಸು ॥೧೨೧॥

ಪೊಡವಿಯೊಳಗೆ ಸುರಿತಾಳ ತಾ ಬಂದರೆ
ನಡೆಯಬೇಕಲ್ಲದೆ ಬೇಗ ।
ಜ[ಡ]ದೇಹಿ ಮಾನ್ಯರ ಮೇಲೆ ಛಲವನಿತ್ತು
ಒಡನೆ ನೀ ಕಳುಹು ಕಾಳಗಕೆ ॥೧೨೨॥

ದಾಳಿಯ ಮಾಡಿ ರಾಮನ ಹಿಡಿಯಾಳ ಹಿಡಿವೆನು
ಜೋಡಿಸಿ ಕಡಿವೆ ಮನ್ನೆಯರ ।

ಗೂಳೀವ ತೆಗೆಸುವೆ ಹೊಸಮಲೆದುರ್ಗವ
ಹೇಳ್ವರೆ ಹೆಸರ ಕೆಡಿಸುವೆನು ॥೧೨೩॥

ಎಪ್ಪತ್ತಿರಾಜನ ನುಡಿಗೇಳಿ ರುದ್ರನು
ಅಪ್ಪಿಕೊಂಡನು ಸಂತೋಷದಲಿ ।
ಒಪ್ಪಿಸಿದನು ಮನ್ನೆಯ ಮಾಂಡಲಿಕರ
ಒಪ್ಪದಿ ಪ್ರಯಾಣ ಮಾಡಿದನು ॥೧೨೪॥

ಸರ್ಪಭೂಷಣ ಕಡಿದಾಡಿ ರಣದೊಳು
ಒಪ್ಪುವ ರಾಮನ ಹಿಡಿವೆ ।
ಅಪ್ಪಣೆಯನು ಕೊಟ್ಟು ಕಳುಹಯ್ಯ ಬೇಗದಿ
ತಪ್ಪದೆ ತರಿಸು ಬೊಲ್ಲನನು ॥೧೨೫॥

ಬೊಲ್ಲನ ತರಹೇಳಿ ಮಲ್ಲಯ್ಯ ಸಾಣಿಯ
ನಲ್ಲಿ ರುದ್ರನು ಕಳುಹಿದನು ।
ಬಂದ ಬೊಲ್ಲಗೆ ಗಂಧ ಪುಷ್ಪ ಪರಿಮಳವನು
ತಂದು ಒಪ್ಪಿಸಿ ನೈವೇದ್ಯಗಳ ॥೧೨೬॥

ಒಂದು ಖಂಡುಗ ರಾಶಿ ಉಕ್ಕಿನ ಕಡಲೆಯ
ತಂದು ಕಟ್ಟಿದರು ಕವಣವನು ।
ಇಂದೇರಿಸಿದ ಕಂಪಿನ ಹೂವು ಗಂಧಕ್ಷತೆಯ
ನಂದು ಬೊಲ್ಲಗೆ ನೀರ್ಗುಡಿಸಿ ॥೧೨೭॥

ಹಕ್ಕರಿಕೆಯ ಜೋಡು ಹೊಕ್ಕುಳ ಗಂಟೆಯು
ಇಕ್ಕೆಲದಲ್ಲಿ ಬಿಲ್ಲುಗಳ ।
ಇಕ್ಕಿದ ಕರ್ಕಸ ಅಂಬು ಸಿಂಗಾಡಿಯು
ಪಕ್ಕೆಲಿ ಬಿಗಿದ ರಂಚಿಕೆಯು ॥೧೨೮॥

ಇಕ್ಕಿದ ಕಡಿವಾಣ ಉಕ್ಕಿನ ಭಲ್ಲೆವು
ಕಕ್ಕಡ ವಂಕಿ ಕೈಯ್ಯಂಬು ।
ಎಕ್ಕಲ ಕೋರೆಯು ರಕ್ಕಸ ಬೊಲ್ಲಗೆ
ಇಕ್ಕೆಲದಲಿ ಬಿರುದುಗಳು ॥೧೨೯॥

ಬೊಲ್ಲನ ಶೃಂಗರಿಸಿ ಎಪ್ಪತ್ತಿರಾಜನು
ನಿಲ್ಲದೆಲ್ಲರ ಕರೆಸಿದನು ।
ಸಲ್ಲೀಲೆಯಿಂದ ಮೈಜೋಡನಂಗಕೆ ತೊಟ್ಟು
ಬಲ್ಲೈಸಿದ ತಲೆ ಠೌಳಿ ॥೧೩೦॥

ವೀರಜಡೆಯ ಹೆಣೆಸಿದ ಎಪ್ಪತಿರಾಜ
ಧೀರ ಬಂದನು ಬೊಲ್ಲನೆಡೆಗೆ ।
ಸಾರಿ ಅರ್ಚಿಸಿ ಧೂಪ ದೀಪ ನೈವೇದ್ಯವ
ವೀರವಿಕ್ರಮ ಗೆಲ್ಲೆನುತ ॥೧೩೧॥

ಹಚ್ಚ ಕೆಚ್ಚನೆ ಆರತಿಯೆ[ತ್ತಿ] ಬೊಲ್ಲಗೆ
ಮಚ್ಚರಿಸಿದ ವೈರಿ ಗೆಲ್ಲು ।
ಪಚ್ಚೆಯ ಜೋಡು ಹಕ್ಕರಿಕೆ ಹಲ್ಲಣ ಗುಬ್ಬಿ
ಗಚ್ಚಿನ ಮುಖರಂಬವೆಸೆಯೆ ॥೧೩೨॥

ಹೆಚ್ಚಿನ ಬೊಲ್ಲಗೆ ಶರಣೆಂದು ಎಪ್ಪತಿರಾಜ
ಉತ್ಸಾಹದಲಿ ಏರಿದನು ।
ಅಚ್ಚಾಳು ಕುದುರೆ ಐವತ್ತು ಸಾವಿರ ಸಹ
ನಿಶ್ಚೈಸಿದ ರಾಮನ ಮೇಲೆ ॥೧೩೩॥

ತುಡುಮು ತಂಬಟ ಭೇರಿ ಗಿಡಿಬಿಡಿ ನಿಸ್ಸಾಳ
ಬಿಡದೊದರುವ ಚಿನ್ನಗಹಳೆ ।
ಒಡನೆ ಬುರುಗು ನೌಬತ್ತು ಅಬ್ಬರದಿಂದ
ನಡೆದನು ಪಡೆ ಬೆದರ್ವಂತೆ ॥೧೩೪॥

ಅರಿರಾಯದಲ್ಲಣಮರ್ದನ ಬಿರಿದನು
ಸಾರಿಸುತಲಿ ಧೀರ ನಡೆದ ।
ಮರೆಯದಿರೆಪ್ಪತ್ತಿರಾಜ ಈ ಮಾತನು
ಬರಿಗೈವೆನು ನಿನ್ನ ಬಲವ ॥೧೩೫॥

ತೋರು ಸಾಹಸವ ಎನ್ನೊಳಗಿದಿರಾಗೆಂದು
ಮೀರಿ ಹೊಯ್ದನು ಖಡ್ಗದಲಿ ।

ಬೆನ್ಹತ್ತಿ ಕಡಿವುತ ಬರುವರ ರಾಮಯ್ಯ
ಚೆನ್ನಾಗಿ ಕಣ್ಣಿಲಿ ಕಂಡ ॥೧೩೬॥

ಇನ್ನು ಜಗಳ [ಹೆ]ಚ್ಚಿತು ನೋಡಿ ನೀವೆಂದು
ಮಾನ್ಯರಿಗಪ್ಪಣೆ ಕೊಟ್ಟ ।
ದೃಢದಲಿ ರಾಮಯ್ಯ ನಡೆದು ದುವ್ವಾಳಿಸಿ
ಜಡಿದನು ವಜ್ರದಾಯುಧವ ॥೧೩೭॥

ಏರಿ ಇಕ್ಕೆಲದಲಾಗುವ ಬೊಬ್ಬೆಯ ಕೇಳಿ
ತೋರಿದ ರಾಮ ಕೈಗುಣವ ।
ಧಾರುಣಿಯೊಳು ಇದಿರಾದರ ಸೀಳುತ
ತೂರಿದ ಗಾಳಿಯ ಮಾಡಿ ॥೧೩೮॥

ವಾರುವನೇರಿಸಿ ಕರುಳ ತರಿದನಾಗ
ಸೇರಿಸಿದನು ಯಮಪುರಿಗೆ ।
ತೋರಿದ ಸಾಹಸವೇರಿ ಬೊಲ್ಲನ ರಣ
ಭಾರಿಯ ಮುರಿಯಲೇರಿದನು ॥೧೩೯॥

ಹೊಕ್ಕನು ರಣವ ನಿರಾಕರಿಸಿ ಬಲವನು
ಒಕ್ಕಲಿಕ್ಕಿಯೆ ತುಳಿಸಿದನು ।
ಸೊಕ್ಕಮುರಿದು ಪ್ರತಾಪರುದ್ರನ ದಂಡ
ಲೆಕ್ಕವಿಲ್ಲದೆ ತರಿದೊಟ್ಟಿ ॥೧೪೦॥

ರಕ್ಕಸ ನೀಲನ ಏರಿ ರಾಮಯ್ಯನು
ಇಕ್ಕಡಿ ಮಂಡಲಿಕರನು ।
ಹೊಕ್ಕರೀ ಬಲವ ಮನ್ನೆಯರು ಸಂಹರಿಸುತ
ಮುಕ್ಕಿಸಿದರು ರಕ್ತವನು ॥೧೪೧॥

ಆದಡೀ ಗಾಯವ ನೋಡೆಂದು ಹೊಯ್ದನು
ಮೇದುನಿಪತಿಯು ರಾಮಯ್ಯ ।
ಭೇದಿಸಿ ಮೈಜೋಡು ಕತ್ತರಿಸಿ ಬಲು
ನಾದದಿಂದ್ಹೊಯ್ದು ಖಡ್ಗದಲಿ ॥೧೪೨॥

ಜೋಡು ಕತ್ತರಿಸಲು ರೂಢೀಶ ಕೋಪದಿ
[ಓ]ಡಿದೆಪ್ಪತ್ತಿರಾಜನನ ।
ನೋಡಿ ಅಂತರಿಸದೆ ಓಡಿ ನಿಂದವರೆಲ್ಲ
ಹೇಡಿಗೊಂಡಿಹ ವ್ಯಾಳ್ಯದೊಳಗೆ ॥೧೪೩॥

ಹಲವು ಬಗೆಯ ಸಾಹಸವ ತೋರಿದೆ ವೀರ
ಭಲರೆ ಭಾಪುರೆ ಜಗಜಟ್ಟಿ ।
ಛಲದಂಕನಹುದೆಂದು ತಲೆಯ ಠೌಳಿಗೆ ಹೊಯ್ಯೆ
ಒಲಿದು ಬಿದ್ದನು ರಣದೊಳಗೆ ॥೧೪೪॥

ಬೀಳಲೊಡನೆ ಹಿಂಗಾಲು ಮುಂಗಾಲಿಂದ
ಏಳಲೀಸದೆ ಬಂದು ಬೆನ್ನ ।
ಕಾಳಗದೊಳು ರಾಮನಾಥಗೆ ಬೊಲ್ಲನಂ
ದೇಳಿಗೆಯಲಿ ಬೆನ್ನನಿತ್ತು ॥೧೪೫॥

ಬೊಲ್ಲ ತನಗೆ ಸಾಧ್ಯವಾಗಲು ರಾಮಯ್ಯ
ನಿಲ್ಲದೆ ಕೋಟೆಯ ನೆಗೆಸಿ ।
ಗಲ್ಲದ ಬಾರಲ್ಲಿ ಜಲ್ಲನೆ ಹರಿಯಲು
ಅಲ್ಲಿ ಮಾದಿಗ ಹಂಪ ತನ್ನ ॥೧೪೬॥

ಒಳದೊಡೆ ತೊಗಲ ತೆಗೆದು ಎದೆಬಾರನು
ಗೆಲವಿಂದಲದಕೆ ಹೊಂದಿಸಲು ।
ಸಲಹುವೆ ನಿನ್ನ ಪ್ರಾಣಕೆ ಎನ್ನ ಜೀವವ
ನೊಲಿದೀವೆ ಹಂಪ ನೀ ಕೇಳು ॥೧೪೭॥

ಗೆಲಿದೂರ ಹೊರಟು ಚರರ ಕಳುಹಿದ ರಾಮ
ಒಲಿದು ಲಿಂಗನ ಕರೆಯೆನುತ ॥
ನಲಿದೋಡಿ ಚರರಿತ್ತ ಭರದಿಂದ ಬಂದರು
ಉಲುಹನಾರಿಸುತ ಊರೊಳಗೆ ॥೧೪೮॥

ಧುರದೊರಗಿದ ಜಾಳಿ ಹರಿದು ಎಪ್ಪತಿರಾಜ
ಅರೆಗಣ್ಣ ತೆರೆದು ಎಚ್ಚತ್ತು ॥೧೪೯॥

ನೆರೆದಿರ್ದ ಮನ್ನೆಯರ ಕಳುಹಿದನು ತಾನು
ಅರಮನೆಗೈದಿದನಾಗ ।
ಸಾರಿದವರ ಕಾಯ್ವ ಮೀರಿದವರ ಕೊಲ್ವ
ನೋರುಗಲ್ಲಿಗೆ ಕೋಳಾಹಳ ॥೧೫೦॥

ನರಪತಿ ವೀರಪ್ರತಾಪ[ನ] ಕೊಮಾರ ಹೊಕ್ಕನು
ಊರ ಹೊರಗೆ ದುಗುಡದಲಿ ।
ಹರುಷದಿಂದಲಿ ದೇವಿಶೆಟ್ಟಿಲಿಂಗನು ಆಗ
ಭರದಿಂದ ಊರ ಹೊರಟನು ॥೧೫೧॥

ವೀರಪ್ರತಾಪ[ನ] ದುಗುಡವ ಕಂಡು ರಾಮಯ್ಯ
ಭೇರಿಯ ಹೊಯ್ಸಿದನಾಗ ।
ಊರ ಹೊರಗೆ ಇಹ ಪೌಜಿಗೆ ಇದಿರಾಗಿ
ಏರಿ ಮನ್ನೆಯರುಗಳೆಲ್ಲ ॥೧೫೨॥

ಸಾವಿರ ಕುದುರೇ[ಳು] ಸಾವಿರ ಕಾಲಾಳು
ಸಾವಿರ ಮನ್ನೆಯರ ತುರಗ ।
ಭಾರಿಯ ನಿಗಳದ ಪರಿವಾರ ಕೂಡಿ[ತಾ]
ವೀರ ರಾಮನ ಇದಿರಿನಲಿ ॥೧೫೩॥

ಹುಯ್ಯಲ ಹಿಡಿದು ರಾಮನ ಹೋಗಲೀಸದೆ
ಕೈಯ್ಯ ಆಯುಧವ ಝಳಪಿಸುತ ।
ಹೊಯ್ಯುಹೊಯ್ಯೆನುತ ಮೂದಲಿಸಿ ಏರಿದರಾಗ
ಒಯ್ಯನೆ ವೀರ ಪರಿವಾರ ॥೧೫೪॥

ಎರಡು ಬಲವು ಕೂಡಿ ತಗರಂದದಿ ತಾಕ್ಯಾಡಿ
ದೊರೆದೊರೆಗಳ ನೇಮದಲಿ ।
ತುರುಗಕೆ ತುರುಗವು ಕರಿಗಳಿಗೆ ಕರಿಗಳು
ಹರಿಗೆ ಹರಿಗೆ ಬಿಲ್ಲಿನವರು ॥೧೫೫॥

ವೀರ ರಾಮನು ಹೊಕ್ಕ ಸಾ[ರ]ದಿ ತನ್ನೊಡನೆ ಮು
ನ್ನೂರು ಕುದುರೆಯು ಎಪ್ಪತ್ತು ।

ಭೋರನೆ ಇರಿದು ಸಾವಿರ ಶೂಲಗಳಲಿ
ಧೀರ ಪ್ರತಾಪನ ಇದಿರ ॥೧೫೬॥

ಶರಣರ ಸೂಲವು ಇರಿದು ನೂಕುತ [ಬರೆ]
ಮುರಿದೋಡಿ ತಮತಮಗಲ್ಲಿ ।
ಪರಿವಾರ ಪುರಜನ ಬಂದೋಡಿ ಹೊಕ್ಕರು
ಪುರ್ವೋರ್ಗಲ್ಲ ಪಟ್ಟಣವ ॥೧೫೭॥

ಹಿಂದುಮುಂದೆಲ್ಲ ರಾಮನ ಬಲ ಕೂಡಿತು
ಸಂದಣಿಸಿತು ಮನ್ನೆಯರ ।
ಮುಂದುವರಿದು ರಾಮ ಊರ ಹೊಗಿಸಿ ತಾನು
ಹಿಂದಕ್ಕೆ ತಿರುಗಿದ ಬೇಗ ॥೧೫೮॥

ಧರ್ಮಗಾಳೆಯ ಹಿಡಿಸಿದ ರಾಮಯ್ಯನು
ನಿರ್ಮಳದೊಳು ಲಿಂಗನೊಡನೆ ।
ಪೆರ್ಮೆಯೊಳೊಂದಾಗಿ ಮಾತುಗಳನಾಡುತ
ವರ್ಮವಿಲ್ಲದೆ ಮನದೊಳಗೆ ॥೧೫೯॥

ಓರುಗಲ್ಲನು ಹೊಕ್ಕರು ತಾವಾಗಲೆ
ವೀರ ರಾಮಯ್ಯ ನೆಲ್ಲೂರ ।
ಸಾರಿ ವನವನು ಹೊಕ್ಕು ವೀರ ಶರಣರು ಇಹ
ದ್ವಾರವಾಟವನೊಳಪೊಕ್ಕ ॥೧೬೦॥

ಹೊಕ್ಕು ಶರಣರ ಅಡಿಗೆರಗಿದ ರಾಮಯ್ಯ
ಗಕ್ಕನೆ ಹೊರಟ ಬೇಗದಲಿ ।
ಅಕ್ಕರಿಂದಲಿ ಬಹ ದಳವನು ಕಾಣುತ
ಹೊಕ್ಕು ಬಾಬಾಜಿ ನಿಲ್ಲೆನುತ ॥೧೬೧॥

ಬಿಡು ನಮ್ಮ ಎಪ್ಪತ್ತಿರಾಜ ಬೊಲ್ಲನನೆಂದು
ನುಡಿಯಲು ಕೇಳಿ ರಾಮಯ್ಯ ।
ಖಡ್ಗವನುಚ್ಚಿ ಕೋಪದಿ ಘುಡಿಘುಡಿಸುತ
ಹೊಡೆದು ಬಾಬಾಜಿಯ ಬಲವ ॥೧೬೨॥

ಬೊಲ್ಲನ ಏರಿ ದುವ್ವಾಳಿಸಿ ರಾಮಯ್ಯ
ನಿಲ್ಲದೆ ಹೋಗುತಿರಲೊಡನೆ ।
ಬಲ್ಲಿದ ಕೊಳ್ಳಿಯ ನಾಗಣ್ಣನೊಳಪೊಕ್ಕು
ಬಿಲ್ಲಿನ ಮಂದಿ ತಾ ಸಹಿತ ॥೧೬೩॥

ಗುಜ್ಜಲ ಓಬನು ಚಿಗತಮ್ಮ ಚಿನುಮಾದ
ಮಜಬಾಪುರೆ ರಾಮನೆಡೆಗೆ ॥೧೬೪॥

ಮುಂದಣ ಪೌಜಿಗೆ ಕೋಟಿಗರ ದ್ಯಾವನು
ಮಂದಿಯ ನೋಡೆ ಹಾಯ್ಸಿಕೊಂಡು ।
ಹಿಂದಕ್ಕೆ ಮರಳೆ ಪಾಪಯ್ಯನು ಮೂಗನು
ಅಂದು ಹಾಕಿದನು ಕುದುರೆಯನು ॥೧೬೫॥

ಕುದುರೆಯ ಹಾಕಲು ಒಡನೈದು ಮಂದಿಯು
ಕದುಬಿ ತಮ್ಮಯ ಮಂದಿ ಸಹಿತ ।
ಒದಗಿತು ಬೂಟಕ ಬೊಮ್ಮನ ಮಂದಿಯು
ಚದರದೆ ರಾಮಯ್ಯನೊಡನೆ ॥೧೬೬॥

ಕಡಿದು ಕತ್ತರಿಸಿ ಖಂಡ್ರಿಸಿ ತುಂಡುಮಾಡಿದ
ವದನ ಒತ್ತರಿಸಿ ನಡೆ ಚಿನ್ನ ।
ಸಿಡಿಲು ಹೊಡೆದಂತಾಗೆ ನಡುಗಿ ಹೋದರೆಲ್ಲ
ಅಡವಿ ಗಿಡಕೆ ಒಬ್ಬರಾಗಿ ॥೧೬೭॥

ಅತ್ತಲವರನಟ್ಟಿ ಇತ್ತಲೀ ರಾಮಯ್ಯ
ಒತ್ತಿ ನಡೆದನು ಮುಂದೆಸೆಯ ॥೧೬೮॥

ಮುತ್ತಿನಂದಣವೇರಿ ದೇವಿಸೆಟ್ಟಿಯ ಲಿಂಗ
ಹತ್ತಿ ವಾರುವನು ಹಾರಿಸುತ ।
ಒತ್ತಿಲಿ ಮಾದಿಗ ಹಂಪ ಸಂಪಯ್ಯನು
ಸುತ್ತಲೈವರು ಮನ್ನೆಯರು ॥೧೬೯॥

ಚಿತ್ತಜ ಸಮರೂಪ ರಾಮಯ್ಯ ಅರ್ತಿಲಿ [ಬರೆ]
ಮೊತ್ತವ ಕಂಡು ಕಾಶ್ಮೀರ ।

ಹೊತ್ತ ನ್ಯಾಜ್ಯವು ಹನ್ನೆರಡು ಸಾವಿರ ಮಂದಿ
ಮುತ್ತಿ ಮುಸುಕಿತು ಆ ಬಲವ ॥೧೭೦॥

ಬಿಡು ರುದ್ರರಾಯನ ಮಗನ ತೇಜಿ[ಯ] ಎಂದು
ತಡೆದನು ಕಾಶ್ಮೀರ [ಭೂ]ಪ ।
ಜಡಿದು ಖಡ್ಗವನೆತ್ತಿ ಹೊಡೆದು ನೂಕಿತು ಬಲ
ಅಡೆಯೆದ್ದು ಮುರಿದು ಓಡಿದರು ॥೧೭೧॥

ಓಡದಿರೆಲೊ ಹೇಡಿ ಮಾಡು ಹುಯ್ಯಲನೆಂದು
ನೋಡಿ ಭಲ್ಲೆಯದವರು ತಿವಿಯೆ ।
ಮೂಡಿದ ಗಾಯವು ಪೌಜೆಲ್ಲ ಹೊರಬಿಚ್ಚಿ
ಓಡಿತು ಅಡವಿ ಪಾಲಾಗಿ ॥೧೭೨॥

ರೂಢಿಗೀಶ್ವರನ ಕೃಪೆಯುಂಟವನಿಗೆ
ನಾಡಾಡಿ ಮನ್ನೆಯರೆಲ್ಲ ।
ಜೋಡುಂಟೆ ಅವನಿಗೆ ಈ ನಾಡಿನೊಳಗೆಂದು
ಓಡಿಹೋದರು ತಮತಮಗೆ ॥೧೭೩॥

ಓಡಲತ್ತಲು ರಾಮ ಕೂಡಿ ಎಕ್ಕಟಿಗರು
ಬೀಡ ಬಿಟ್ಟರು ವಹಿಲದಲಿ ।
ಅಲ್ಲಿಂದ ಮುಂದಕ್ಕೆ ನಡೆದು ಮೂಗಾವುದ
ಬಂದರು ಸಿದ್ಧವಟಕಾಗಿ ॥೧೭೪॥

ಕೆಂಧೂಳು ಮುಸುಕೆ ನಡೆದ ರಾಮನಾಥನು
ಕುಂದದೆ ಸಿದ್ಧವಟ್ಟದಲಿ ।
ಇರುಳ ಕಳೆದು ನಿದ್ರೆಯೊಳೊರಗಿರ್ದು
ತೆರಳಿ ಮುಂದಕ್ಕೆ ನಡೆದಾಗ ॥೧೭೫॥

ರಟ್ಟಿನ ಹೊಳೆಯ ದಾಂಟಿಸಿ ಕಡಿದು ಬಂದು
ಬಿಟ್ಟನು ಬೆಳಗಿನೇಳ್ಯದಲಿ ॥೧೭೬॥

ಅಲ್ಲಿಂದ ತೆರಳಿ ಯಾದವಗಿರಿದುರ್ಗಕ್ಕೆ
ಬಲ್ಲಿದ ವೀರ ರಾಮಯ್ಯ ।

ಬೊಲ್ಲನ ಏರಿ ದುವ್ವಾಳಿಸುತಲಿ ಬಂದು
ನಿಲ್ಲದೆ ಹೊಳೆಯ ದಂಡೆಯಲಿ ॥೧೭೭॥

ಅಡಿಗೆಯ ಮಾಡುಂಡು ಒಡನೆ ಎದ್ದನು ರಾಮ
ನಡೆದನು ಬೆಳ್ಳಬೆಳ[ತನ]ಕ ।
ಅಡಗಿದ ಬೇಡರು ಅಡೆಯೆದ್ದು ಹೋದರು
ನಡೆದನು ಮುಂದಕ್ಕೆ ರಾಮ ॥೧೭೮॥

ಅದವನ್ನಿಗಾಗಿ ನಡೆದನು ರಾಮಯ್ಯ ವಿನೋ
ದದಿ ಹೊಳೆಯ ದಂಡೆಯಲಿ ।
ಸಾಧಿಸಿ ಸ್ನಾನಪಾನವ ಮಾಡಿ ಉಂಡುಟ್ಟು
ಆ ದಿನಗಳೆದನು ಅಲ್ಲಿ ॥೧೭೯॥

ಅಲ್ಲಿಂದ ಮುಂದಕ್ಕೆ ಆದವನ್ನಿ [ಬಿಟ್ಟು]
ಬಲ್ಲಿದ ವೀರ ರಾಮಯ್ಯ ।
ಬೊಲ್ಲನ ಏರಿ ದುವ್ವಾಳಿಸುತ ಬಂದನು
ಮೆಲ್ಲನೆ ಕುರುಗೋಡ ಬಳಿಗೆ ॥೧೮೦॥

ಮೂರು ದಿವಸ ತನಕ ನಿಲದಂಡ ನಿಲಿಸಿದ
ಚಾರುತನದ ವಾಣಿಯಲಿ ।
ಭೂರಿಯ ಚರರುಗಳು ಇತ್ತ ಕಮ್ಮಟದೊಳು
ಮತ್ತೆ ಕಂಪಿಲನೊಳು ಉಸುರೆ ॥೧೮೧॥

ಕುರುಗೋಡ ಬಳಿಗೆ ಬಂದನು ರಾಮನಾಥನು
ದೊರೆಗಳ ದೇವ ಕೇಳೊಲಿದು ।
ಧರೆಯೊಳಗುಳ್ಳ ರಾಯರು ನಿಮ್ಮ ಕಂದಗೆ
ಸರಿಯಾರೊ ಕಂಪಿಲರಾಯ ॥೧೮೨॥

ಓರುಗಲ್ಲವನ ಬೊಲ್ಲನ ತರಹೇಳಿದೆ
ವೀರ ರಾಮಯ್ಯಗವನಿದುರೆ ।
ಹಾರಲೊದ್ದವನ ಎಪ್ಪತಿರಾಜನ ಗೆದ್ದು
ಸಾರಿ ತಂದನು ಬಿರಿದುಗಳ ॥೧೮೩॥

ಇತ್ತ ರಾಮಯ್ಯ ಪಾಳ್ಯವನಿಳಿದುದ ಕೇಳಿ
ಮತ್ತೆ ಬಂದನು ಕಂಪಿಲಿದಿರ ॥೧೮೪॥

ಕುರುಗೋಡ ಬಿಟ್ಟು ನಡೆಯ ಮುಂದಕಲ್ಲಿಂದ
ಹರುಷದಿಂದಲಿ ರಾಮನಾಥ ।
ಇರದೆ ಕಂಪಿಲಿಯ ಸೋಮೇಶನೆಡೆಗೆ ಬಂದು
ಧುರಗಲಿ ರಾಮ ತಾನಿಳಿದ ॥೧೮೫॥

ಇಳಿದು ಸೋಮೇಶಗೆ ಥಳಥಳಿಸುವ ವಸ್ತ್ರ
ವಿಳಿವಿಡಿಸಿದನು ರಾಮಯ್ಯ ।
ಭಾಳಲೋಚನ ಭವಪಾಪನಾಶನೆ ತ್ರಿ
ಶೂಲಧರನೆ ಜಯಜಯತು ॥೧೮೬॥

ಜಯ ಪಾಪನಾಶನೆ ಜಯ ಶಿರಕರಧರ
ಜಯತು ಜಯತು ಸೋಮೇಶ ॥೧೮೭॥

ಭೇರಿ ಮೃದಂಗ ತಪ್ಪಟೆ ಗಿಡಿಬಿಡಿ ಕೊಂಬು
ಭೋರು ಮೊರೆವ ನಾಗಸರವು ।
ಭೋರೆಂಬ ವಾದ್ಯ ಘೀಳಿಡೆ ಬಂದ ಕಂಪಿಲ
ವೀರ ರಾಮಯ್ಯನಿದ್ದೆಡೆಗೆ ॥೧೮೮॥

ಬಂದ ಕಂಪಿಲರಾಯಗೊಂದಿಸಿ ರಾಮಯ್ಯ
ಬಂದು ಅಪ್ಪಿದನು ಭುಜತುಂಬ ।
ಕಂದ ನೀ ಬಲ್ಲಿದನಹುದೊ ಬೊಲ್ಲನ [ತಾ]
ರೆಂದ ಮಾತಿಗೆ ಹೋಗಬಹುದೆ ॥೧೮೯॥

ಈತನಾರೆಂದು ಕೇಳಿದ ಭೂಪನಂದು
ಹೇಳಿದ ರಾಮನಾಥ ।
ಕುಂದದೆ ಓರ್ಗಲ್ಲ ಪಟ್ಟಣಸೆಟ್ಟಿಯು
ದೇವಿಸೆಟ್ಟಿ ಲಿಂಗಣ್ಣ ॥೧೯೦॥

ಓರುಗಲ್ಲರಸಿನ ಬಲಕೆ ಬಲ್ಲಿದನಿವ
ಕಾರಮಿಂಚಾಗಿ ಹೊಳೆವನು ।

ವೀರ ಮಾದಿಗ ಹಂಪ ಭಾರಿ ಏಕ್ಕಟಿಗ[ನು]
ಧಾರುಣಿಗಧಿಕ ಸಮರ್ಥ ॥೧೯೧॥

ಇವರಿರ್ವರಿಂದ ತಂದೆನು ಬೊಲ್ಲನ
ಬವರಕ್ಕೆ ನಿಶ್ಯಂಕರಹುದು ।
ಭುವನದೊಳಿವರ ಸಾಮರ್ಥ್ಯಕ್ಕೆ ಇದಿರುಂಟೆ
ತ್ರಿವಿಧ ಲೋಕದೊಳು ಕಾಣೆನೆಂದ ॥೧೯೨॥

ಹೋದೆ ನೆಲ್ಲೂರಪುರದ ಗುಂಡಬ್ರಹ್ಮಯ್ಯಗೆ
ಆದಿ ಶರಣರ ಮಠಕೊಲಿದು ।
ಭೇದವಿಲ್ಲದೆ ಮುಂದಕ್ಕಡಿಯಿಟ್ಟು ಹೋಗಲು
ಹಾದಿಲಿ ಕಂಡಿದಿರಾಗಿ ॥೧೯೩॥

ಆರು ನೀನಾವೂರು ಆರ ಮಗನು ಎಂದು
ಹಾರು ಮಾತಿಂದ ಕೇಳಿದರೆ ।
ಧೀರ ಕಂಪಿಲನ ಕುಮಾರನೆಂದುಸುರಲು
ಭೋರನವನು ಎನ್ನನೆತ್ತಿ ॥೧೯೪॥

ಏನು ಕಾರಣ ಬಂದೆ ಚೆನ್ನಿಗ ರಾಮಯ್ಯ ಅ
ದೇನು ಹೇಳಾ ಎನ್ನೊಡನೆ ।
ನಾನುಸುರಿದೆನು ಬೊಲ್ಲನ ತಾಹರೆ ಬಂದೆ
ಮಾನವೇಶ್ವರ ಕೇಳಿ ನುಡಿಯೆ ॥೧೯೫॥

ನಂಬಿ ಬೊಲ್ಲನ ಕೊಂಡುಬಂದೆವೀ ತೆರದಿಂದ
ಉನ್ನತ ಹರುಷದೊಳ್ ನಾವು ॥೧೯೬॥

ಬೊಲ್ಲನ ತರಿಸಿ ನೋಡಿದನಾಗ ಕಂಪಿಲ
ಉಲ್ಲಾಸದಿಂದ ಹರುಷದಲಿ ।
ಬಲ್ಲಿದ ರಾಮಗೆ ತಕ್ಕಂಥ ವಾಜಿಯು
ಒಲಿದು ಕೊಟ್ಟನು ಜಟ್ಟಂಗೀಶ ॥೧೯೭॥

ದೇವಿಸೆಟ್ಟಿಯ ಲಿಂಗಣ್ಣಗೆ ರಾಮಯ್ಯ
ಭಾವದಿ ಉಡುಗೊರೆಗಳನು ।

ಕೋವಿದ ರಾಮಗೆ ಗೆಲ್ಲಿಸಿ ಕರೆತಂದೆ
ಆವ ಜಲ್ಮದ ಗೆಣೆತನವೊ ॥೧೯೮॥

ಸೆಟ್ಟಿ ಲಿಂಗಣ್ಣಗೆ ಕೊಟ್ಟನು ನೀಲನ
ಪಟ್ಟುಪಟ್ಟಾವಳಿಗಳನು ।
ಇಟ್ಟನು ಹುರುಮಂಜ ಒಂಟಿಗಳನು ಆಗ
ಕೊಟ್ಟನು ಪದಕ ಸರಪಳಿಯ ॥೧೯೯॥

ಮನ್ನೆಯ ಮಾದಿಗ ಹಂಪಗೆ ಕೊಟ್ಟನು
ಉನ್ನಂತ ದಟ್ಟಿ ಕಬಾಯಿ ।
ಹೊನ್ನ ಬಳ್ಳದ ಹತ್ತೆಕಟ್ಟು ಸರಪಳಿಯನು
ಮನ್ನಿಸಿ ಕೊಟ್ಟನುಡುಗೊರೆಯ ॥೨೦೦॥

ಜಗಳವ ಗೆದ್ದು ಬೊಲ್ಲನ ತಂದು ಮುಂದಿಟ್ಟು
ಸೊಗಸಿಂದಲವರು ಕೈಮುಗಿಯೆ ॥೨೦೧॥

ಬಂದಿರ ನಿರ್ಮಳದೊಳಗೆ ನೀವೆಲ್ಲರು
ಇಂದೆಮ್ಮ ರಾಮಯ್ಯನೊಡನೆ ।
ಸಂದೇಹವ್ಯಾತಕೆ ಗುಜಲೋಬ ಚಿನುಮಾದ
ಮುಂದಾದ ಸುದ್ದಿಯನುಸುರೆ ॥೨೦೨॥

ಇಲ್ಲಿಂದ ಹೊರಟು ಹೋದೆವು ಓರ್ಗಲ್ಲಿಗೆ
ಎಲ್ಲ ಮನ್ನೆಯರನು ದಾಂಟಿ ।
ಬಲ್ಲಿದ ಪ್ರತಾಪರುದ್ರ ತಾ ಕರೆಸಲು
ಅಲ್ಲಿಗೆ ಹೋದೆವೆಂದ್ಯೆಸೆ ॥೨೦೩॥

ರಾಮ ಹೋಗಲು ಎದ್ದು ಕುಳಿತನು ಪ್ರತಾಪ
ತಾನು ಮಾಡಿದನು ಉಡುಗೊರೆಯ ।
ನೂನವಿಲ್ಲದೆ ಬಿಡಿದಿಯ ಮನೆಯ ಕೊಡಿಸಿದ
ಆನಂದದಲಿ ಹೋಗಿರೆಂದ ॥೨೦೪॥

ಎದ್ದು ಬರುತ ರಾಮಯ್ಯನ ಬಿರಿದುಗಳ
ನಿರ್ಧರದಲಿ ಭಟಹೊರ್ಗಳೆ ।

ಇದ್ದಂತೆ ಕೊಂಡಾಡಲು ಕದನ ಹುಟ್ಟಿತು
ಬಿದ್ದರು ನಮ್ಮ ಮೇಲವರು ॥೨೦೫॥

ಹೆಣಮಯ ರಣಮಯವಾಯಿತು ಊರೊಳು
ರಣಕೇರಿ ಬಂದ ಬೊಲ್ಲನನು ।
ಸೆಣಸಲು ರಾಮಯ್ಯ ಕಡಿದೇರಿ ಕೊಂದನು
ಅಣಕವನೆಂತು ಪೇಳುವೆನು ॥೨೦೬॥

ಈ ಬಗೆಯಲ್ಲಿ ಕುದುರೆಯನೆತ್ತಿಕೊಂಡು
ಬೇಗ ಹೊರಟು ಬಂದೆವೆನುತ ।
ಹೋಗಿ ಬಂದಂಥ ಸುದ್ದಿಯ ಕೇಳಿ ಕಂಪಿಲ
ಆಗ ಸಂತಸಗೊಂಡ ರಾಯ ॥೨೦೭॥

ಮಾನ್ಯರಿಗೆಲ್ಲ ಉಡುಗೊರೆಗಳ ಕೊಟ್ಟು
ಹೊನ್ನು ಹಣವ ಹಂಚಿ ಕೊಟ್ಟು ।
ಉನ್ನಂತ ಹರುಷದಿ ಬಿರಿದು ಬಾವುಲಿ ಕೊಟ್ಟು
ಮನ್ನಿಸಿದನು ರಾಯನವರ ॥೨೦೮॥

ಮೂರು ಸಾವಿರ ಬಲ ಮುನ್ನೂರು ವಾಜಿಯು
ಸಾರಿ ರಾಮಯ್ಯನ ಕೂಡೆ ।
ಭೇರಿಯ ಹೊಯ್ಯುತ ಬಂದು ಕೈಮುಗಿದರು
ಧಾರುಣಿಪತಿಯು ಕಂಪಿಲಗೆ ॥೨೦೯॥

ತೆರಳಿ ಅಲ್ಲಿಂದ ಮುಂದಕ್ಕೆ ಹೊಳೆಯ ದಾಂಟಿ
ಉರವಣಿಯಲಿ ಹೊಸಮಲೆಗೆ ।
ಧುರಧೀರ ಬಾಹದ ಕಂಡು ಹರಿಯಲದೇವಿ
ಹರಿವಾಣದಾರತಿಯ ಪಿಡಿದು ॥೨೧೦॥

ವೀರ ರಾಮಯ್ಯಗಾರತಿಗಳ ತಂದಂಥ
ನಾರಿಯರುಗಳ ಶೃಂಗಾರವ ।
ಆರು ಪೊಗಳುವರು ಧಾರುಣಿಯೊಳಗೊರ್ವ
ವಾರಿಜೋದ್ಭವಗಿಂದ್ರಗಳವೆ ॥೨೧೧॥

ಮನ್ನೆಯ ಮಾಂಡಲಿಕರು ಮಂತ್ರಿ ಬೈಚಪ್ಪ
ಅಣ್ಣ ಕಾಟಣ್ಣ ಸಹೋದರರು ।
ಚೆನ್ನಾಗಿ ರಾಮಯ್ಯನ ಇದಿರುಗೊಂಡರು ಎಲ್ಲ
ಸನ್ಮತದಿಂದಲಾಕ್ಷಣದಿ ॥೨೧೨॥

ಬಂದ ರಾಮನ ತಬ್ಬಿ ನಿಂದು ಆರತಿ ಎತ್ತಿ
ಕಂದನ ಕೈವಿಡಿದುಕೊಂಡು ॥೨೧೩॥

ಕಳುಹಿದನಣ್ಣ ಕಾಟಣ್ಣನ ರಾಮಯ್ಯ
ಕಳುಹಿದ ಭಾವ ಸಂಗಮನ ।
ಕಳುಹಿದ ಮಂತ್ರಿ ಬೈಚಪ್ಪನ ಬೇಗದಿ
ಕಳುಹಿದ ಮನ್ನೆಯರುಗಳ ॥೨೧೪॥

ತನ್ನೊಡನಿತ್ತ ಬಂದವರಿಗೆ ಮನೆಗಳ
ಉನ್ನಿಸಿದನು ರಾಮನಾಥ ।
ಮನ್ನಿಸಿ ಕಳುಹಿದ ಮನ್ನೆಯರೆಲ್ಲರ
ಭಿನ್ನವಿಲ್ಲದೆ ಅರಮನೆಗೆ ॥೨೧೫॥

ಚಿನುಮಯ ರೂಪ ಜಟ್ಟಂಗಿರಾಮನೆ ಗತಿ
ಎನುತ ಹೊಕ್ಕನು ಅರಮನೆಯ ॥೨೧೬॥

ತನ್ನರಮನೆಯ ಹೊಕ್ಕನು ರಾಮನಾಥನು
ಪನ್ನಂಗಧರ ಗತಿಯೆನುತ ।
ಭಿನ್ನವಿಲ್ಲದೆ ಭೋಜನ ಮಾಡಿ ರಾಮಯ್ಯ
ಮನ್ನಿಸಿ ಸತಿಯರೆಲ್ಲರನು ॥೨೧೭॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳು ಬೊಲ್ಲನನು ।
ಇರದೆ ಬೊಲ್ಲನ ತಂದು ಮೆರೆವ ಜಟ್ಟಂಗಿ
ವರದಿಂದ ನೀನಹುದೊ ಎಂದು ॥೨೧೮॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।

ಕದನವ ಗೆದ್ದು ಬೊಲ್ಲನ ತಂದ ರಾಮ
ಪದಗಳು ಪೂರಾಯ್ತು ಮುಂದೆ ॥೨೧೯॥

ಅಂತು ಸಂಧಿ ೮ಕ್ಕಂ ಪದನು ೭೨೮ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೯

❖

ಹುಳಿಯೇರ ಕಾಳಗ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ದೇವ ಜಟ್ಟಂಗಿದೇವರ ಪಿಂಡ ರಾಮಯ್ಯ
ಕೋವಿದೆಪ್ಪತ್ತಿರಾಜನ ।
ಅವನ ಬೊಲ್ಲನ ತಂದು ಕುಮ್ಮಟದೊಳು
ಭಾವಜ ರಾಮಯ್ಯನಿರಲು ॥೨॥

ಅತ್ತ ಹುಳಿಯೇರ ಮಾರಿಭೂಪನು ತನ್ನ
ಒತ್ತಿನ ಮನ್ನೆಯರೊಡನೆ ।
ಚಿತ್ತಜರೂಪ ರಾಮನ ಕೂಡೆ ಕಾದುವ
ಅರ್ತಿಲಿ ಮಂತ್ರಿಯೊಳುಸುರೆ ॥೩॥

ಕೇಳುತ ಮಾತುಗಳನು ಶಿರೋಮಣಿ ತಾನು
ಬಹಳ ಹರುಷದಿಂದಲೆದ್ದು ।
ವೀಳ್ಯವ ಎಕ್ಕಟಿಗರಿಗಿತ್ತನು ತಾನು
ಕೇಳಿದ ಕುಮ್ಮಟದರಸು ॥೪॥

ಮಾರಿಗೊಂಡನು ತನ್ನ ಮಂತ್ರಿಯೊಳುಸುರುತ
ಮೂರು ಮಾತುಗಳನಾಡಿದನು ।

ಗಾರುಡವನು ಮಾಡಿಲ ಓರುಗಲ್ಲಿಗೆ ಹೋಗಿ
ವಾರುವ ತಂದನಂತೆ ರಾಮ ॥೫॥

ಅಲ್ಲಿ ತನ್ನಯ ಬಿರಿದುಗಳ ಕೊಂಡಾಡಿಸಿ
ಎಲ್ಲ ರಾಯರಗಂಡನೆಂದು ।
ಇಲ್ಲದ ತಳ್ಳಿಗಳನು ಮಾಡಿ ಕಡಿದಾಡಿ
ನಿಲ್ಲದೆ ಓಡಿ ಬಂದನಂತೆ ॥೬॥

ಕಳ್ಳ ಬೇಡನಿಗಿಷ್ಟು ಬಿಡಿಸುವೆನು ।
ಮಿಳ್ಳಾಟವನು ಬಿಡಿಸುವೆನು ।
ಬಳ್ಳಿ ತೋಟಿಗರು ಕೊಯ್ದಂತೆ ಕುಮ್ಮಟವನು
ಹಳ್ಳಿಯ ಮಾಡಿ ಆಳುವೆನು ॥೭॥

ಗುತ್ತಿಯ ಜಗದಪ್ಪರಾಯನ ಮಗಳನು
ಕತ್ತಿಲಿ ಗೆದ್ದು ತಂದೆನುತ ।
ಸುತ್ತಣ ರಾಯರ ಗಂಡನೆಂದೆನಿಸು[ವ]
ಮೊತ್ತದ ಬಿರಿದ್ಯಾಕೆ ತನಗೆ ॥೮॥

ಸುತ್ತಣ ಸಣ್ಣ ಪಾಳೆಯಗಾರರಿಗೆಲ್ಲ
ಒತ್ತಿ ರಾಜ್ಯವ ಕಟ್ಟಿದಂತೆ ।
ಮತ್ತೆ ನಮ್ಮ ಮೇಲೆ ಎತ್ತಿ ಬಂದರೆ ಇನ್ನು
ಸುತ್ತಿ ಹಿಡಿವೆನು ಕೈಸೆರೆಯ ॥೯॥

ಇಂತಪ್ಪ ಸುದ್ದಿಯ ಕೇಳಿ ರಾಮಯ್ಯನು
ಅಂತರಂಗದೊಳು ಕೇಳಿದನು ।
ಪಂಥದಿ ಹುಳಿಯೇರು ರಣರಂಗ ಭಯವಾಯ್ತು
ಚಿಂತೆಯು ನಮಗೇತಕೆಂದ ॥೧೦॥

ಇತ್ತ ಸುದ್ದಿಯ ಕೇಳಿದನು ರಾಮಯ್ಯ
ಎತ್ತಿದ ಧ್ವಜ [ಪತಾ]ಕವನು ।
ಮುತ್ತಿಗೆ ಹುಳಿಯೇರಿಗೆಂದು ಮನ್ನೆಯರನು
ಇತ್ತ ಶೃಂಗರಿಸಿ ರಾಮಯ್ಯ ॥೧೧॥

ಕರೆಸಿದ ತನ್ನ ಎಕ್ಕಟಿಗ ನಾಯಕರನು
ಕರೆಸಿದ ಕಂಪಿಲನರಸ ।
ಕರೆಸಿದ ಮಂತ್ರಿ ಬೈಚಪ್ಪನ ಬೇಗದಿ
ಕರೆಸಿ ವೀಳ್ಯವನಿತ್ತ ರಾಮ ॥೧೨॥

ಅರಸು ಮಂತ್ರಿಗಳೆ[ಲ್ಲ] ಎಕ್ಕಟಿಗರು ಎಲ್ಲ
ಬೆರಸಿ ಏಕಾಂತವಾಡಿದರು ।
ತುರಗ ಕರಿಯು ಹರಿಗೆ ಭಟರುಗಳನು
ನೆರಹಿದ ಕಾಲಾಳು ಬೇಗ ॥೧೩॥

ಕರಿಯ ಸಾರಂಗನು ಕುಣಿಕಾಲ ಬೊಲ್ಲನು
ಬಿರಿದು ಬಿಂಕದ ಜಂಬನನು ॥೧೪॥

ಹುಳಿಯೇರ ಮಾರಿಗೊಂಡನ ಗಂಡನೆಂದೆಂಬ
ತಳುಕಿನ ಪದಕವನಿಟ್ಟು ।
ಘಳಿಲನೆ ತೇಜಿಯನೇರಿ ತಾ ಹೊರಟನು
ಇಳಿದನು ಹೊರ ಪಯಣವನು ॥೧೫॥

ತಂದೆ ಕಂಪಿಲರಾಯಗೊಂದನೆಯನು ಮಾಡಿ
ಮುಂದೆ ತೆರಳಿದ ದಾರಿವಿಡಿದು ।
ಬಂದುಬಿಟ್ಟನು ದಂಡ ಗಂಡಿಬಾಗಿಲ ಮುಂದೆ
ಮುಂದಣುಬ್ಜುಣಿಯ ಬಯಲಿಗೆ ॥೧೬॥

ಇರುಳಲ್ಲಿ ಕಳೆದು ಸೂರ್ಯ ಉದಯವಾಗಲು
ತೆರಳಿ ಕೂಡಲಿಗೆಯೊಳಿಳಿದ ।
ಭರದಿಂದ ಉಂಡು ಬೈಗಿನ ಪಯಣವು ಬೇಗ
ಬೆರಸಿ ನಡೆಯಿತು ದಂಡು ಮುಂದೆ ॥೧೭॥

ಭರದಿಂದ ನಾಲ್ಕು ಪಯಣವ ಹೋಗಿ ಮುಂದಕ್ಕೆ
ತೆರಳಿ ಕಣಜದಹಳ್ಳಿಯಲ್ಲಿ ।
ನೆರೆದಲ್ಲಿ ಬೀಡು ಬಿಟ್ಟರು ಪಾಳೆಯವನು
ಮರಿವುಂಟ್ಲು ಬೂದಿಹಳ್ಳಿಯಲಿ ॥೧೮॥

ಅಲ್ಲಿಂದ ಮುಂದಕ್ಕೆ ತೆರಳಿ ಬಂದನು ಬೇಗ
ಎಲ್ಲರು ಒಂದೆ ಒಗ್ಗಿನಲಿ ॥೧೯॥

ನಿಲ್ಲದೆ ಬಂದಿಳಿದನು ಹುಳಿಯೇರಿನ
ಬಲ್ಲಿದ ನಂದನ ವನದಿ ।
ನಿಲ್ಲದಿತ್ತಲಿ ಹುಳಿಯೇರ ಮಾರನು ತಾ
ಮೆಲ್ಲನೆ ಕರೆ[ಸೆ] ಮಂತ್ರಿಯನು ॥೨೦॥

ಕರೆಯಲು ಬಂದ[ರು] ಮಂತ್ರಿಕರೆಲ್ಲ[ರು]
ಅರಸೆ ನೀ ಕರೆಸಿರುವುದೇನು ।
ತರಿಸುಡುಗೊರೆಯ ಎಕ್ಕಟಿಗರೆಲ್ಲಕೆ ನೀನು
ಕರೆಸು ಮನ್ನೆಯ ಮಾಂಡಲಿಕರ ॥೨೧॥

ಊರ ಬಳಸಿ ರಾಮ ದಂಡ ಬಂದಿಳಿದನು
ತೋರುತ ತನ್ನ ಸಾಹಸವ ।
ಭೋರನೆಪ್ಪತ್ತು ಮನ್ನೆಯರು ಸಹವಾಗಿಯೆ
ಊರಮುಂದಿಳಿದನೆಂದೆನಲು ॥೨೨॥

ಇತ್ತ ರಾಮನು ಪರಿವಾರ ಸಹ ಊರ
ಹತ್ತಿರೆ ಇಳಿದನೀ ಕ್ಷಣಕೆ ।
ಮತ್ತೆ ಹುಳಿಯೇರು ಭೂಪತಿ ತನ್ನ ಮನದೊಳ
ಗತ್ಯಂತ ಹರುಷ ತಾಳಿದನು ॥೨೩॥

ಸುತ್ತಣ ಮಾನ್ಯರಿಗೋಲೆಯ ಬರೆಸಿದ
ಮತ್ತೆ ಬೇಗ ಬನ್ನಿರೆಂದು ।
ಮುತ್ತಿಗೆ ಹುಳಿಯೇರಿಗಾಗಲು ಭೂಪ ತಾ
ನಿತ್ತ ಮಾನ್ಯರ ಕರೆಸಿದನು ॥೨೪॥

ಎಲ್ಲಿಯ ಮುತ್ತಿಗೆ ಎತ್ತಣ ದಾಳಿಯು
ಬಲ್ಲಿದರಾರು ನಿನ್ನೊಡನೆ ।
ನಿಲ್ಲುವನಾವ ರಾಯನು ನಿನಗೆ ಭೂಪತಿ
ಸೊಲ್ಲಿಸೆನ್ನೊಳು ಸವಿಮಾತ ॥೨೫॥

ಹೊಸಮಲೆಯನಾಳುವ ಕಂಪಿಲ ಭೂಪನ
ಕುಶಲ ಕುಮಾರ ಬಂದಿಹನೆ ।
ಎಸೆವ ಸತ್ತಿಗೆ ನೆಳಲಲಿ ರಾಮನಾಥನು
ಮುಸಗುತ ಬಂದನಾಹವಕೆ ॥೨೬॥

ಕರೆಸು ನಮ್ಮಯ ಪರಿವಾರ ಎಕ್ಕಟಿಗರ
ಅರಸುಮಕ್ಕಳು ಮಂತ್ರಿಯನು ।
ವಿರಸಕೆ ನೆರೆದುದು ಪದಿನೆಂಟು ಸಾವಿರ
ಕರಿ ತುರಗವು ಏಳ್ನೂರು ॥೨೭॥

ಹಿರಿಯೂರನಾಳ್ವ ನರಸನ ಕರೆಸಿದ
ದೊರೆ ಮಾರಭೂಪಾಲನೊಲಿದು ।
ಕುರುಸಾಣಿ ಬಾಗೂರು ಕಟ್ಟೆಯನಾಯ್ಕನ
ಪರಿವಾರ ನೆರೆದುದು ಆರುನೂರು ॥೨೮॥

ಮಾನ್ಯರು ಗೋವಿಂದನೊಡಗೊಂಡು ಸಾವಿರ
ಮುನ್ನೂರು ವಾರುವ ಸಹಿತ ।
ಸಣ್ಣಕ್ಕಿ ಬಾಗೂರನಾಳ್ವ ನಾಯಕನಿಗೆ
ಮಾನ್ಯರು ಕುದುರೆಯ ಪೌಜು ॥೨೯॥

ಮನ್ನೆಯ ಮಾರಭೂಪತಿಯ ಕೂಟಕೆ ಬಂದ
ಮುನ್ನೂರು ಕರಿಯು ಆರುನೂರು ।
ಇನ್ನೊಂದು ಸಾವಿರ ಕಾಲ್ಬಲಕಧಿಕವು
ಮುನ್ನೂರು ಲಕ್ಷ ಪೈಟಣೆಯು ॥೩೦॥

ಸುತ್ತಲ ಅರಸರ ಕೂಟವ ಕೂಡಿಸುವ ಭೂಪ
ನೊತ್ತಿ ಲೆತ್ತವನಾಡುತಿರಲು ।
ಮುತ್ತಿಗೆ ತೆಗೆಸಬೇಕೆಂದು ಯೋಚನೆಮಾಡಿ
ಅತ್ತ ಮನ್ನೆಯರು ಹಿಗ್ಗುತಲಿ ॥೩೧॥

ಲೇಸನಾಡಿದೆ ದೊರೆಗಳ ದೇವ ನಿನ್ನಯ
ಭಾಷೆಯ ಸಲಿಸುವೆನೆನಲು ।

ವಾಸೆಯಿಂದಲಿ ಬಂದು ಅಸಗೋಡ ನಾಯಕ
ಲೇಸಿನ ವೀಳ್ಯವ ಪಿಡಿದ ॥೩೨॥

ಮುಂದಣ ವೀಳ್ಯವು ಅವಗೇಕೆ ಎನುತಲಿ
ನಿಂದ ಬಾಗೂರ ಓಬಯ್ಯ ।
ಹಿಂದಣ ಹುಯ್ಯಲದೊಳು ತಾನು ಪಿಡಿದಿರ್ದ
ಚಂದ್ರವಂಕಿಯ ಬಿಟ್ಟು ಬಂದ ॥೩೩॥

ತಂದ ನಮ್ಮೊಳಗಿರ್ದ ಬಂಟ ಬಾಗೂರ ತಿಪ್ಪ
ಮುಂದ್ಯಾಕೆ ಅವನಿಗೆ ವೀಳ್ಯ ।
ಅಂದ[ಣ]ವೇರಿಯೆ ಹೊರಟು ಬಂದನು ಹುಳಿಯೇರ
ನಂದ ರಾಯಿನಪಾಲ ಸಹಿತ ॥೩೪॥

ವೀಳ್ಯವ ಹಿಡಿದು ಎಕ್ಕಟಿಗರೆಲ್ಲ ಕೂಡಿ
ಭಾಳದ ಲಿಪಿ ಒರೆಸುವಂತೆ ।
ನಾಳಿನ ಹುಯ್ಯಲೊಳಗೆ ಎನ್ನ ನೋಡೆಂದು
ವೀಳ್ಯವ ರಾಯಿಪಾಲ ಹಿಡಿದ ॥೩೫॥

ಹಿಡಿದಂಥ ವೀಳ್ಯವ ತಡೆದ ಮನ್ನೂಲ ಮಾರ
ಕಡುಗಲಿ ರಾಯಿಪಾಲ ಜರಿದ ।
ಬಿಡು ಅವರಿಗ್ಯಾಕೆ ರಾಯಿಪಾಲನನ್ನು
ತೊಡರ ಬಾಪು[ರ] ಬಿಟ್ಟು ಬಂದ ॥೩೬॥

ಮನ್ನೂಲ ಮಾರ[ನ] ವೀಳ್ಯವ ತಡೆದನು
ಚೆನ್ನ ಕಂಪಿಲಿಯ ಸೋಮುಗನು ।
ಇಂದಿವಗ್ಯಾಕೆ ವೀಳ್ಯವು ಎಂದು ಜರಿದನು
ತನ್ನ ಜಲ್ಲಿಯು ಬಿದ್ದಿರಲು ॥೩೭॥

ಇರದೆ ನಮ್ಮೊಳಗಿಹ ಬಂಟ ತಂದನು ಜೀಯ
ಕರೆದೇಕೆ ಅವನ ಮನ್ನಿಸಿದೆ ।
ಹಿರಿಯೂರವ ಜಗಳದಿ ತನ್ನ ಬಿರಿದಿನ
ಸುರಗಿ ಮುಕ್ಕ[ಣ] ನ್ಯಾಜ್ಯವನು ॥೩೮॥

ತನ್ನ ಕೊರತೆಯ ತಾನರಿಯದೆ ನ್ಯಾಜ್ಯವ
ಭಿನ್ನವಿಲ್ಲದೆ ಬಿಟ್ಟುಬರಲು ।
ಹೊನ್ನೂರ ಇರಪಯ್ಯ ತಂದನು ಇವಗ್ಯಾಕೆ
ಮುನ್ನಿನ ವೀಳ್ಯವಿತ್ತಯ್ಯ ॥೩೯॥

ತಡೆದನಾತನ ವೀಳ್ಯವನು ಇರುಪನು
ಕಡುಗಲಿಯಿಂದ ಸೋಮುಗನು ।
ಬಿಡದೆ ಜಡಿದನು ಸುರಗಿಯ ಕೊಂಡುಬಂದನು
ನಡಗೂರ ಬಸವನೆಂಬನು ॥೪೦॥

ಬಸವನ ವೀಳ್ಯವ ತಡೆದನು ಅವನೊಬ್ಬ
ಬಸವಾಪುರದ ಬೊಮ್ಮಲಿಂಗ ।
ಅಸಗೋಡ ಜಗಳದೊಳಗೆ ತನ್ನ ಬಿರುದನು
ಬಿಟ್ಟು ಬಂದನು ಅವಗ್ಯಾಕೆ ॥೪೧॥

ಅಸಹಾಯಶೂರನೆಂದೆಂಬ ಗರ್ವಿಕೆಯಲ್ಲಿ
ಉಸುರಿದ ದೊರೆಯ ಮಧ್ಯದಲಿ ।
ಆದರೆ ಲೇಸನಾಡಿದೆ ಬೊಮ್ಮುಗ ನಿನ್ನ
ವಾದ ವಾದಿಯ ಗೆಲ್ಲಬೇಕು ॥೪೨॥

ಭೇದಿಸಿ ವೀಳ್ಯವ ಇವನಿಗೆ ಕೊಡಬೇಕು
ಕಾದಲೆ ಗಿರಿಯ ನೋಡಿದನು ।
ಕಾದಲೆ ವೀಳ್ಯವ ಗಿರಿಯನು ತಡೆದನು
ಸಾಧನೆ ಸಿದ್ಧನ ಮಗನು ॥೪೩॥

ಬೇಧವಿಲ್ಲದೆ ರಣರಣದಿ ತನ್ನ ಕತ್ತಿಯ
ಮೂದಲಿಸಲು ಬಿಟ್ಟುಬಂದ ।
ಮೇದುನಿಪತಿ ಕೇಳು ಇವಗ್ಯಾಕೆ ವೀಳ್ಯವು
ಹಾಯ್ದು ತಡೆದುಕೊಂಡ ಗಿರಿಯ ॥೪೪॥

ಕದುಬಿ ತಡೆದ ಮುರುಡಿಯ ಚೆನ್ನಸೋಮನು
ಮೊದಲು ವೀಳ್ಯವು ತನಗ್ಯಾಕೆ ॥೪೫॥

ಚೆನ್ನಸೋಮಯ್ಯನ ಜರಿದು ವೀಳ್ಯವ ತಾನು
ಮನ್ನೂಲ ಮಾಚ ತಾ ನುಡಿದ ।
ಚೆನ್ನಾಯಿತಿವನ ಕೈಯೊಳಗಣಾಯುಧವನು
ಕನ್ನವೆಂಬವ ತೆಗೆದು ತಂದ ॥೪೬॥

ಕನ್ನನ ವಿಳ್ಯವ ತಡೆದನು ಬೂಟಕ
ಚೆನ್ನಮರುಳೆಯ ಪಾಪಯ್ಯ ।
ತನ್ನ ಆಯುಧವನು ಬಿಟ್ಟು ಬರಲು ಬೇಗ
ಉನ್ನತ ಮೀನಿಗರ ಲಕ್ಕ ॥೪೭॥

ಬಿದ್ದ ಆಯುಧವನು ಗೆದ್ದು ತಂದನು ತಮ್ಮ
ಮುದ್ದು ಬಸವಯ್ಯನೆಂಬವನು ।
ಗೆದ್ದು ವೀಳ್ಯಗಳನು ಪಿಡಿದು ಬಾರೋ ನೀನು
.... ತಮತಮಗಾಗ ॥೪೮॥

ಮೇದುನಿಯೊಳಗೆ ಇವಗ್ಯಾಕೆ ವೀಳ್ಯಗಳೆಂದು
ಮೂದಲಿಸುತ ತಮತಮಗೆ ।
ವಾದಿಸಿ ವೀಳ್ಯವ ಪಿಡಿದರೊಬ್ಬೊಬ್ಬರು
ಅದುಕೊಂಡರು ಹೊಳಕೆಯಲಿ ॥೪೯॥

ಹೊಳಕೆಯ ಹಿಡಿದು ಬಂಟರು ಮಾರಭೂಪನ
ಕಲಹವ ಕಂಡು ತಮತಮಗೆ ।
ಗಲಭೆಯ ನಿಲಿಸುತ ಹೊಳಕೆಯ ಬಂಟರು
ಸುಳುಹುದೋರುತ ಪರಬಲಕೆ ॥೫೦॥

ಏರಿತು ಹನ್ನೊಂದು ಸಾವಿರ ಭಟರ್ಗಳು
ವೀರ ರಾಮಯ್ನ ಕೆಣಕಿದರು ॥೫೧॥

ಭರದಿಂದಲೇರಿ ಮುತ್ತಿಗೆಯನು ತೆಗೆಸಿದರು
ದೊರೆ ಮಾರಭೂಪನ ಭಟರು ।
ತೆರಳದೆ ಹಿಂದೆ ರಾಮನ ಪರಿವಾರವು
ನೆರೆದ ಬಂಟರನು ಬೆನ್ಹತ್ತಿ ॥೫೨॥

ಹುಯ್ಯಲ ಹಿಡಿದರು ರಾಮನ ಭಟರಾಗ
ಒಯ್ಯಾರದಲಿ ಭಟರೊಡನೆ ।
ಕೈಯ್ಯಮಾಡುತ ರಣದೊಳು ಕಲಿಭಟರಾಗ
ಮುಯ್ಯೆಂದು ಕೆಡಹಿ ಮಾರ್ಬಲವ ॥೫೩॥

ಅರಿರಾಯ ಮಾರಮರ್ದನ ಚೆನ್ನರಾಮನು
ಧುರಗಲಿಗಳ ಕೂಡಕೊಂಡ ।
ನೆರೆದ ಮಾರ್ಬಲದೊಳು ತುರುಗವ ನೋಡುತ
ಇರಿದು ರಾಹುತರನು ಕೆಡಹಿ ॥೫೪॥

ಶಿರಗಳನರಿದು ಚೆಂಡಾಡುತ ರಾಮನ
ಪರಿವಾರ ನಾಯಕರೆಲ್ಲ ।
ತರಿದು ಗೋನಾಳಿಯ ಬಿಡಿಸುತ ಭಟರ್ಗಳ
ಉರುಬಿ ರಣವ ಹೊಕ್ಕರೊಡನೆ ॥೫೫।

ಅರೆ ರಾಹುತ ಭಲಭಲರೆ ರಣರಂಗದಿ
ಸರಸದಿ ನಿಲ್ಲುನಿಲ್ಲೆನುತ ।
ಧುರಧೀರ ರಾಮನ ಪರಿವಾರವೆಲ್ಲವು
ಪರಬಲದೊಳಗೆ ಮೂದಲಿಸೆ ॥೫೬॥

ಮುಂದಿಟ್ಟ ಕಾಲನು ಹಿಂದಕ್ಕೆ ತೆಗೆಯದೆ
ಸಂಧಿಸಿ ಮುಂದ[ಲೆ] ಹಿಡಿದು ।
ಬಂದು ಹೊಕ್ಕರು ಹುಳಿಯೇರ ಮಾರನ ಬಲ
ಒಂದುಳಿಯದೆ ತರಿದೊಟ್ಟಿ ॥೫೭॥

ಅಟ್ಟಿ ಇರಿದು ತಲೆಯೊಟ್ಟಿ ಮೂದಲಿಸುತ
ನಿಟ್ಟೆಲುವುಗಳ ಮುರಿವುತಲಿ ॥೫೮॥

ಮುರಿದ ಬಲವನು ಸಂತೈಸಿ ಮಾರಭೂಪಾಲ
ವರದ ಎಕ್ಕಟಿಗರ ಕೂಡೆ ।
ಸರಿದೊರೆಗಳು ಮುನ್ನೂರು ಮಂದಿಯು ಸಹ
ಹರಿದು ಹೊಕ್ಕನು ರಣದೊಳಗೆ ॥೫೯॥

ಮುರಿದ ಬಲವು ಮತ್ತೆ ತಿರುಗಿ ಬಾಹುದ ಕಂಡು
ತುರುಗವೇರಿದವೆಡಬಲದಿ ।
ಹರಿಗೆಯ ಬಲ ಈಟಿ ಪೆಟಲು ಸಬಳಿಗರು
ನೆರೆದು ಹೊಕ್ಕರು ತಮತಮಗೆ ॥೬೦॥

ಉರುಬಿ ಹುಯ್ಯಲ ಹಿಡಿದರು ರಾಮನಾಥನ
ಚರರು ಡೊಕ್ಕನೆ ರಣದೊಳಗೆ ।
ತರಿವರು ಶಿರವನೆ ಕಡಿಮಾಡಿ ರಣದೊಳು
ಕೊರೆದು ಕತ್ತಿರಿಸಿ ಕಾಳಿಜವ ॥೬೧॥

ಹೊಯ್ದು ಹೆಯ್ದೂರ ಹೊಗಿಸಿ ಮುತ್ತಿದ ರಾಮ
ಕಪ್ಪ ಕೊಳದೆ ಬಿಡೆನೆಂದ ।
ಐದಾರು ಬಿಂದಿಗೆ ಹೊನ್ನು ಹೊನ್ನರಗಿಳಿಯ
ಸೈಮಾಡಿ ಕೊಡದೆ ನಾ ಹೋಗೆ ॥೬೨॥

ಜೇರು ಮುತ್ತಿಗೆಯ ಮಾಡಿಸಿದ ರಾಮಯ್ಯನು
ಆರು ಸಾವಿರ ಬಲ ಮುತ್ತಿ ।
ಬ್ಯಾರೊಂದು ಕಡೆಯಲ್ಲಿ ಮೂರು ಸಾವಿರ ಬಲ
ಸೇರೀತು ಹುಲಿಮುಖವಿಡಿದು ॥೬೩॥

ಕುದುರೆಯ ಪೌಜೊಂದು ಕಡೆಯಲ್ಲಿ ನಿಲಿಸದ
ಚೆದುರ ಮ್ಯಾನರ ಕೂಡಿಕೊಂಡು ।
ಕದನ ಕೋವಿದರು ದೊರೆಮಕ್ಕಳು ತಾವೆಂದು
ಸದನದೊಳಗೆ ಕಾದುಕೊಂಡು ॥೬೪॥

ಈ ರೀತಿ ಮುತ್ತಿಗೆ ಮಾಡಿ ರಾಮಯ್ಯನು
ದುರದೊಳು ತಾ ನಿಂತುಕೊಂಡು ।
ಮಾರತಮ್ಮನು ಜರಿದು ದೂರಿಕೊಂಡಹನಲ್ಲ
ತೋರ ಹೇಳೆಂದ ರಾಮಯ್ಯ ॥೬೫॥

ತನ್ನ ಬಿರಿದುಗಳ ಕೊಂಡಾಡಿಸುತಲಿ ರಾಮ
ತನ್ನ ಮಾನ್ಯರ ಕೂಡಿಕೊಂಡು ।

ಉನ್ನತ ಮುತ್ತಿನ ಸತ್ತಿಗೆ ನೆಳಲಡಿ
ಹೊನ್ನ ಹಂಚಿಸಿ ಕೊಡುತಿರ್ದ ॥೬೬॥

ಹುಳಿಯೇರ ಮಾರಗೊಂಡನ ಗಂಡನೆಂಬಂಥ
ಕೊಳಲು ತಪ್ಪಟೆ ಚಿನ್ನಗಾಳೆ ।
ಚಳಿಯದೆ ಕೂಗುವ ಭಟರ ಧ್ವನಿಯ ಕೇಳಿ
ಒಳಗಿರ್ದ ಮಾರಭೂಪಾಲ ॥೬೭॥

ಕೂಗುವ ಬಿರಿದ ಕೇಳುತ ಮಾರಭೂಪನು
ಆಗ ತನ್ನೊಳಗತಿ ನೊಂದು ।
ಬೇಗ ತನ್ನ ಮಂತ್ರಿ ಕಲ್ಲರಸನ ಕರೆಸಿದ
ಮುಂದಣ ರಾಜಕಾರ್ಯಕ್ಕೆ ॥೬೮॥

ಹೇಳುವುದೇನು ಕೇಳುವುದೇನು ನಾವಿನ್ನು
ಕೋಳು[ಹೋಯಿತು] ಹುಳಿಯೇರು ।
ಧೂಳುಗೋಟೆಯ ಮಾಡಿ ಕೆಡಿಸುವ ರಾಮನು
ನಾಳಿನ ದಿನದೊಳಗವನು ॥೬೯॥

ರಣಮಯವಾಯಿತ್ತು ರಾಜ್ಯದ ಬಲವೆಲ್ಲ
ಮುಣಗಿತು ಮಾನ್ಯರು ಸಹಿತ ।
ಹೊಣಕೆಯ ಬಂಟರೆಲ್ಲರು ಅಳಿದು ಹೋದರು
ಕೆಣಕಿ ಮಾಡುವುದೇನು ನಾವು ॥೭೦॥

ಕಾರಣಿಕದ ರಾಮ ಪುಟ್ಟಿದ ಜಗದೊಳು
ಓರುಗಲ್ಲವ ತಾ ಗೆದ್ದ ।
ಧಾರುಣಿಯೊಳು ಗುತ್ತಿ ಜಗದಪ್ಪರಾಯನ ಮಗಳ
ಕಾಳಗ ಗೆದ್ದು ತಕ್ಕೊಂಡ ॥೭೧॥

ಡಿಳ್ಳಿಯ ಸುರಿತಾಳನ ಪಾವುಗೆಗಳ
ನಿಲ್ಲದೆ ಮೆಟ್ಟಿದನಿವನು ।
ಎಲ್ಲ ರಾಯರ ಸೀಮೆ ಒಳಹೊಕ್ಕು ಕಟ್ಟಿದ
ಸಲ್ಲದು ಅವನೊಳು ಕದನ ॥೭೨॥

ಈಗ ಅವನಿಗೆ ನಾವು ಬೇಗ ಪಗುಡಿಯ ಕೊಟ್ಟು
ಹೋಗೆಂದು ಕಳುಹುದೆ ಲೇಸು ।
ಹಾಗಲ್ಲವೆಂದರೆ ನಿಮ್ಮ ಚಿತ್ತವು ಬಂದ
ಹಾಗೆ ಮಾಡುವೆನೆಂದ ಮಂತ್ರಿ ॥೭೩॥

ಆದರಾಗಲಿ ಅವನಿಗೆ ತಕ್ಕ ಮಾತನು
ಭೇದಿಸಿ ನೀನೊಂದು ಮಾಡು ।
ಭೇವಿನ್ಯಾತಕೆ ನಮ್ಮ ಬಲ ಮುರಿಯಿತು
ಕಾದುವರಿಲ್ಲ ಊರೊಳಗೆ ॥೭೪॥

ಸಾಯಕಗಳುವುಳ್ಳ [ಸೆ]ಳೆದುರುವಣಿಸುತು
ಪಾಯಕರೊಡನೆ ಮಾತಾಡಿ ।
ಕೋಯೆಂದು ಕೊಟ್ಟು ಕಳುಹುದೆ ತಾನು ಬೇಡಿದುದ
ಮಾಡಿ ಕಳುಹಿದನಾಗ ಮಾತ ॥೭೫॥

ಹುಳಿಯೇರ ಮಾರಗೊಂಡನು ಕಪ್ಪವನಿತ್ತು
ಘಳಿಲನೆ ಸಮರಸವಾಗಿ ।
ಅಳಿಕಿ ಬಿಂದಿಗೆ ಹೊನ್ನ ಐದೂರುಗಳನಿತ್ತು
ಗಿಳಿಯ ತಂದಿತ್ತು ಒಂದಾದ ॥೭೬॥

ಅತ್ತಲು ಮಾರಭೂಪನ [ಮೊ]ನೆಯೊಳಗೆ
ಮುತ್ತಿಗೆ ತೆಗಸಿ ರಾಮಯ್ಯ ।
ಕೊತ್ತಲ ಚಿಂಚೆಯು ಕಣಜದಹಳಿಗಾಗ
ಮತ್ತೆ ತಿರುಗಿದನು ರಾಮಯ್ಯ ॥೭೭॥

ಮಗನ ನೋಡುವರೆ ತಾ ಮಂತ್ರಿಯ ಕರಕೊಂಡು
ಸೊಗಸಿಂದ ಬಂದ ಕಂಪಿಲನು ।
ಅಗಣಿತವಾದಂಥ ಮಂದಿ ಕುದುರೆ ಸಹ
ಜಗಳವ ನೋಡಲಿ ಬಂದ ॥೭೮॥

ತಂದೆ ಬರುವುದ ಕೇಳಿ ಹಿಂದಕ್ಕೆ ತಿರುಗಿದ
ಬಂದ ಕಾರ್ಯವ ಮಾಡಿಕೊಂಡು ।

ಒಂದಾಗಿ ಹುಳಿಯೇರ ಕಪ್ಪವ ತೆಕ್ಕೊಂಡು
ಮುಂದಕ್ಕೆ ನಡೆತಂದನಿದಿರ ॥೭೯॥

ಉತ್ತುಮ ಬೊಲ್ಲನ ಏರಿ ಕಾಟಿಗ[ರಿಗೆ]
ಮತ್ತೆ ಕರೆದ ರಾಮನಾಥ ।
ಚಿತ್ತೈಸು ರಾಯ ಅರಿರಾಯಮಸ್ತಕಶೂಲ
ವೆತ್ತಣ ಪ್ರಯಾಣ ಪೇಳೆಮಗೆ ॥೮೦॥

ಅರಿರಾಯ ಮಾನಮರ್ದನಶೂಲ ನರಪತಿ
ಗಜಪತಿ ಅಶ್ವಪತಿಗಳ ।
[ಪಿ]ರಿದೋರ್ಗಲ್ಲ ಪ್ರತಾಪರುದ್ರನ ಗಂಡ
ಕರಸಿದ್ಯಾತಕೆ ನಮ್ಮೆಲ್ಲರನು ॥೮೧॥

ಕಂಪಿಲರಾಯ ತನ್ನಯ ಕುಮಾರನ ಮಾತ
ಸಂಪಿಂದ ಕೇಳಿ [ನೀ ಒಡನೆ] ।
ಮುಂ ಪರಿವುತ ಪೋಗಿ ಹುಳಿಯೇರ ಮಾರನ
ಚಂಪಕಮಾಲೆಯ ತಹೆಯಾ ॥೮೨॥

ಕಪ್ಪವ ಕೊಂಡು ಗಕ್ಕನೆ ರಾಮ ತಿರುಗಿದ
ಭೋಪಕರೊಡವೆರಸುತಲಿ ।
ಅಪ್ಪಾಜಿ ಇ[ದ]ನೊಪ್ಪಿಸು ಮಂತ್ರಿ ನೀನು ಬೈ
ಚಪ್ಪನೆನುತ ರಾಮ ನುಡಿದ ॥೮೩॥

ರಾಮನಾಥನ ಪರಿತಾಪವ ಕಾಣುತ
ಪ್ರೇಮದಿ ಮಂತ್ರಿ ಬೈಚಪ್ಪ ।
ಸಾಮ್ಯಗಳನು ಹೇಳಿ ಕಂಪಿಲರಾಯಗೆ
ಭೂಮಿರಾಯರಗಂಡನೆನುತ ॥೮೪॥

ಗುತ್ತಿಯ ಜಗದಪ್ಪನ ಮುರಿಯಲೊತ್ತಿದೆ
ಮತ್ತೆ ಓರ್ಗಲ್ಲವನ ಅಳಿದೆ ।
ಇತ್ತಲಿ ಹುಳಿಯೇರ ಮಾರಿಗೊಂಡನ ಮೇಲೆ
ಒತ್ತಿ ಕಾದಿದೆ ರಾಮನಾಥ ॥೮೫॥

ಒತ್ತಿ ಕಾದಿದೆ ಸುರಿತಾಳನ ಅಳಿಯನ
ಮತ್ತೆ ಹಿಂದಿಕ್ಕಿ ಒಳಗೊಂಡು ॥೮೬॥

ಕೊಡದೆ ಬಾದ್ದೂರನ ಕಡಿದು ಸುರಿತಾಳನ
ಬಡಿದು ನೇಮಿಯನೆಲ್ಲ ತಾನು ।
ಬಿಡದಪ್ಪಿ ಹುಳಿಯೇರ ಮಾರಗೊಂಡನ ಕೈಯ್ಯ
ತಡೆಯದೆ ತಂದೆ ಕಪ್ಪವನು ॥೮೭॥

ಕಪ್ಪದ ಬಿಂದಿಗೆ ಹೊನ್ನು ಪಂಜರಗಿಳಿಯನು
ಒಪ್ಪಿಸಿದನು ಮಾರಭೂಪ ।
ಛಪ್ಪನ್ನ ದೇಶ ರಾಯರುಗಳ ಕೂಡೆ
ತಪ್ಪದೆ ಕಾದಿ ಗೆಲಿ[ವ]ನು ॥೮೮॥

ಕಪ್ಪವ ಕೊಟ್ಟು ರಾಮನನೊಂದು ಮಾಡಿಕೊಂ
ಡೊಪ್ಪದಿ ಕಳುಹಿದನವರ ।
ಅಪ್ಪಾಜಿ ಕೇಳು ನೀನಾಡಿದ ಮಾತಿಗೆ
ಕಪ್ಪವ ರಾಮಯ್ಯ ತಂದ ॥೮೯॥

ಎಂದ ಮಾತಿಗೆ ಹುಳಿಯೇರ ಮಾರಗೊಂಡನ ಕೈಯ್ಯ
ತಂದು ತೋರಿದನು ಕಪ್ಪವನು ।
ಒಂದಾರು ಭುಜವಾಗಿ ಕಂಪಿಲರಾಯನು
ಬಂದ ರಾಮಯ್ಯನ ತಬ್ಬಿ ॥೯೦॥

ಹಂದೆ ಕುಮಾರರ ಕರೆದು ಕಂಪಿಲರಾಯ ಕೂ
[ಳ್ ಹಂದೆ]ಗಳಿರಾ ನೀವು ।
ಕಂದ ರಾಮಯ್ಯ[ನು] ಪಿರಿದೆನಿಸುವ ಹಾ
ಗೆಂದು ನುಡಿದ ಕಂಪಭೂಪ ॥೯೧॥

ಅರಸು ಕಂಪಿಲರಾಯನೊಡನೆ ರಾಮಯ್ಯನು
ಬೆರಸಿ ಮಾತಾಡಿ ಸಂಭ್ರಮದಿ ।
ಇರಿಸಿದ ಮಾರಭೂಪನ ಕೈಯ್ಯ ತಂದಂಥ
ಅರಗಿಳಿ ಕಪ್ಪವನೆಲ್ಲ ॥೯೨॥

ತಂದಿರಿಸಿದನು ಕಂಪಿಲರಾಯನ ಮುಂದೆ
ತಂದಿದ್ದ ಹೊನ್ನರಗಿಳಿಯ ।
ಮುಂದರಿಯದ ಕುವರರೆಂದ ಮಾತಿಗೆ [ತಾನು]
ತಂದು ತೋರಿದನು ಕಪ್ಪವನು ॥೯೩॥

ತನ್ನ ಎಕ್ಕಟಿಗರು ಎಪ್ಪ[ತ್ತೆರ]ಳ್ಕನ್ನೆಯರು
ಮುನ್ನೂರು ವಾರುವ ಸಹಿತ ।
ಚೆನ್ನ ರಾಮಯ್ಯನ ಏರಿ ಬೊಲ್ಲನ ಮೇಲೆ
ಸನ್ನೆಗಾಳೆಯ ಹಿಡಿಸಿದನು ॥೯೪॥

ಬಿರಿದಿನ ಕಾಳೆಯ ಕೇಳುತ ಹರಿಯಮ್ಮ
ಹರಿದು ಬಂದಳು ಬೀದಿಗಾಗಿ ।
ತರಳ ರಾಮಯ್ಯ[ಗೆಯ್ತ]ಂದಳು ಮಾರಮ್ಮ
ಎರಗಿ ಪಾದದ ಮೇಲೆ ಬಿದ್ದು ॥೯೫॥

ಅಣ್ಣ ರಾಮಣ್ಣನ ಕಾಣುತ ಮಾರಮ್ಮ
ಕಣ್ಣಹಬ್ಬವನು ನೋಡುತಲಿ ।
ಸಣ್ಣವರೊಡಗೂಡಿ ತಂಗಿ ಸಿಂಗಮ್ಮನು
ಅಣ್ಣಗಾರತಿಯನೆತ್ತಿದರು ॥೯೬॥

ಆರತಿ ಎತ್ತಿ ಅಂಗಜ ರಾಮನಾಥಗೆ
ವೀರನಾರಿಯರೊಂದಾಗಿ ।
ಭೋರನೆ ಅರಮನೆಗೈದು ಕನ್ನೆಯರನು
ಧೀರ ರಾಮಯ್ಯ ಕಳುಹಿದ ॥೯೭॥

ಕಳುಹಿದ ದೇವಿಸೆಟ್ಟಿಯ ಲಿಂಗಣ್ಣನ
ಕಳುಹಿದ ಭಾವ ಸಂಗಮನ ।
ಕಳುಹಿದ ಮನ್ನೊಲ ಮಾಚನನಾಗ
ಕಳುಹಿದ ಕೊಳ್ಳಿ ನಾಗನನ ॥೯೮॥

ಕಳುಹಿದ ಬಾದೂರಖಾನನ ಮಂತ್ರಿಯ
ಕಳುಹಿದ ಅಣ್ಣ ಕಾಟಣ್ಣನ ।

ಕಳುಹಿದ ಮಾದಿಗ ಹಂಪನ ಸಂಪನ
ಕಳುಹಿದ ಕಲಿ ಮುದ್ದುಗನ ॥೯೯॥

ಕಳುಹಿದ ಎಪ್ಪ[ತೆರಡು] ಮನ್ನೆಯರನು
ಕಳುಹಿದ ಹರಿಯಮ್ಮನವರ ।
ಕಳುಹಿದ ತನ್ನಯ ಅರಮನೆಯನು ಹೊಕ್ಕು
ಲಲನೆ ರಾಮಲದೇವಿ ಸಹಿತ ॥೧೦೦॥

ಒಲಿದರಮನೆಯ ಹೊಕ್ಕನು ರಾಮನಾಥನು
ಚೆಲುವ ಬಿರಿದಿನ ಮನ್ನೆಯರು ।
ಗೆಲವಿಂದ ತಮ್ಮರಮನೆಯೊಳಗೆಲ್ಲರು
ಒಲಿದು ಹೊಕ್ಕರು ಅರ್ತಿಯಲಿ ॥೧೦೧॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಚೆದುರ ರಾಮಯ್ಯ ಹುಳಿಯೇರ ಮಾರನ ಕೂಡೆ
ಒದಗಿ ಕಪ್ಪವ ತಾನು ತಂದ ॥೧೦೨॥

ಮುದರಿಂದ ಈ ಕೃತಿಯೊಳು ಮಾರಭೂಪನ
ಚೆದುರ ರಾಮಯ್ಯ ತಾ ಗೆದ್ದ ।
ಕದನದಿ ಕಪ್ಪವ ತಂದು ತಂದೆಗೆ ಕೊಟ್ಟ
ಪದಗಳ ಸಂಧಿ ಪೂರಾಯ ॥೧೦೩॥

ಅಂತು ಸಂಧಿ ೯ಕ್ಕ ಪದನು ೮೩೧ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೦

❖

ಬಾದೂರಖಾನ ಕುಮ್ಮಟದುರ್ಗಕ್ಕೆ ಓಡಿಬಂದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ಸಕ್ಕರೆ ಸವಿದಂತೆ ಮಧುರ ಮಾವಿನಹಣ್ಣ
ಉಕ್ಕುವ ತನಿರಸದಂತೆ ।
ಮಕ್ಕಳ ಮಾಣಿಕದಂತೆ ರಾಮನ ಕೃತಿ
ಸತ್ಕವಿಗಳು ಲಾಲಿಪುದು ॥೩॥

ಇತ್ತ ರಾಮಯ್ಯ ತಾ ಒತ್ತಿ ರಾಜ್ಯವನಾಳೆ
ಸುತ್ತಣ ರಾಯರ ಹೊಡೆದು ।
ಅತ್ತ ಡಿಳ್ಳಿಯೊಳು ಬಾದೂರಖಾನಗೆ
ಮೃತ್ಯುಬಂಧವಗೆಡಿಸಿದರು ॥೪॥

ಮಾಡಬಾರದ ತಪ್ಪ ಮಾಡಿ ಬಾದೂರಖಾನ
ಓಡಿಬಂದನು ಡಿಳ್ಳಿ ಬಿಟ್ಟು ।

ಕೂಡ್ಯೆದು ಮಂದಿ ರಾಹುತರ ಕರಕೊಂಡು
ಕಾಡರಸುತ ರಾತ್ರಿಯಲಿ ॥೫॥

ಈ ಧರೆಯೊಳು ನಮ್ಮ[ಮೊರೆ] ಹಾಕಿಕೊಂಡು ತಾ
ಕಾದುವ ದೊರೆಗಳಿನ್ನಾರು ।
ಆದರೊಳ್ಳಿತು ನನ್ನ ಮಾನವುಳಿದರೆ ಸಾಕು
ಭೇದ ಹುಟ್ಟಿದವು ಡಿಳ್ಳಿಯೊಳು ॥೬॥

ಸಾಧಿಸೆನೆಂದರೆ ಶಕ್ತಿ ಸಾಲದು ಮುಂದೆ
ಹಾದಿ ಹತ್ತುವುದು ಲೇಸೆನುತ ।
ಈ ಧರೆಗೆಲ್ಲ ಪಚ್ಛಾವನ ಪಾವುಗೆ
ನೆರೆದು ಮೆಟ್ಟಿದನಂತೆ ರಾಮ ॥೭॥

ಬಿರಿದಂಕನಹುದು ನಾನಲ್ಲಿಗೆ ಪೋ[ಪೆ]ನೆಂ
ದಿರದೆ ಬಂದನು ಬಾದೂರ ।
ಬೆಳಗೊ ಹೊತ್ತಿಗೆ ಹತ್ತು ಗಾವುದ ಬಂದನು
ಒಳಗುದುರೆಯನೇರಿಕೊಂಡು ॥೮॥

ಕುಳಿತಲ್ಲಿ ಕುಳ್ಳಿರದೆ ನಿಂತಲ್ಲಿ ನಿಲ್ಲದೆ
ಹೊಳೆಯ ದಂಡೆಗೆ ಬಂದನಾಗ ।
ಬುತ್ತಿಗಳನು ಉಂಡು ಮುಂದಕೆ ಸಾಗಿದನು
ಮತ್ತೆ ಬೈತನಕ ಬೆಳತನಕ ॥೯॥

ಒತ್ತಿ ನಡೆದನು ಮುತ್ತಿಪ್ಪತ್ತು ಗಾವುದ
ಎತ್ತ ಹೋಗುವೆನೆಂದೆನುತ ಈ ।
ರೀತಿಯಲಿ ಹತ್ತು ದಿವಸಕೆ ನರ್ಮದೆಯ
ತೀರವ ದಾಂಟಿದನಾಗ ॥೧೦॥

ಧಾರುಣಿಯೊಳಗೆ ಬಲ್ಲಿದನು ಮುಂಗುಲಿರಾಯ
ಸೇರಬೇಕೆಂದು ನಡೆದನು ।
ಬಾದೂರಖಾನನು ಬಂದನೆಂಬುದ ಕೇಳಿ
ಚೋದ್ಯವಾದನು ಮುಂಗುಲಿರಾಯ ॥೧೧॥

ಇದೇನು ಕಾರಣವೆಂದು ಕರೆಸಿದನಾಗ
ಭೇದವ ತಿಳಿಯಬೇಕೆಂದು ।
ಬಂದ ಬಾದೂರಖಾನ ನಿಂದು ಮುಂಗುಲಿರಾಯ
ಗೊಂದಿಸಿ ಉಡುಗೊರೆನಿತ್ತು ॥೧೨॥

ಇಂದು ನಮ್ಮನ್ನು ನಿಲ್ಲಿಸಿದ ಕಾರಣ[ವೇನು]
ಎಂದನು ಬಾದೂರಖಾನ ।
ಸಂದೇಹವಾದರೆ ಸಾಗೆವು ಮುಂದಕೆ ನಾ
ವೆಂದಾನು ಖಾನ ವಜೀರ ॥೧೩॥

ಅಲ್ಲಿಂದ ಬಿಟ್ಟು ನೀ ಬಂದ ಸುದ್ದಿಗಳನು
ಎಲ್ಲವ ಪೇಳು ನನ್ನೊಡನೆ ।
ಇಲ್ಲದ ಸಂಶಯ ಪುಟ್ಟಿತು ನಮ್ಮೇಲೆ
ನಿಲ್ಲದೆ ಬಂದೆನು ರಾಯ ॥೧೪॥

ನಿಲ್ಲಿಸಿಕೊಂಡೇವು ನೇಮಿ ಬಂದರೆ ನಾಳೆ
ಎಲ್ಲೊಕ್ಕೊಬೇಕು ಬಾದೂರನೆ ।
ಮೆಲ್ಲನೆ ಮುಂದಕ್ಕೆ ಸಾಗೆಂದು ಮುಂಗುಲಿರಾಯ
ವೀಳ್ಯ ಉಡುಗೋರೆ ಕೊಟ್ಟನವಗೆ ॥೧೫॥

ವೆಚ್ಚಕ್ಕೆ ಕೊಡುವಷ್ಟು ಹೊನ್ನು ಕೊಟ್ಟವನಿಗೆ
ಉಚ್ಛಾಹದಲಿ ಕಳುಹಿದನು ।
ರಜ್ಜೆಯ ಮಾಡದೆ ಹೋಗಿ ಮುಂದಕೆ ನಿ
ಮ್ಮಿಚ್ಚೆ ಇದ್ದಂತೆ ನಡೆಯೆಂದ ॥೧೬॥

ಓರುಗಲ್ಲಿಗಾಗಿ ಬಂದನು ಬಾದೂರ
ವೀರ ಪ್ರತಾಪನ ಕಂಡು ।
ಧಾರುಣಿಯೊಳು ನೀನು ಬಲ್ಲಿದನಹುದೆಂದು
ಸೇರಿದೆವಯ್ಯ ನಾವ್ನಿಮ್ಮ ॥೧೭॥

ನಿಮ್ಮ ನಿಲ್ಲಿಸುವುದು ನಮ್ಮ ಕೈಲಾಗದು
ಗಮ್ಮನೆ ನೇಮಿ ತಾ ಬರಲು ।

ಸುಮ್ಮನೆ ಹಿಡಿಕೊಡು ಎಂದರೆ ನಮಗಿನ್ನು
ಸಾಮ್ಯವೆ ಅದು ನಮಗೆ ಗುಣವೆ ॥೧೮॥

ಬಂದ ಬಾದೂರಖಾನಗೊಂದು ವೀಳ್ಯವನಿತ್ತು
ಮುಂದಕ್ಕೆ ಸಾಗಿ ನೀವೆಂದ ।
[ಹಿಂ]ದುವ ರಾಮನು ಬಲ್ಲಿದನವ ನಿಲಿಸುವ
ನೆಂದು ಪ್ರತಾಪ ಹೇಳಿದನು ॥೧೯॥

ಅವನಲ್ಲದಿನ್ಯಾರು ನಿಲಿಸುವಂಥವರಿಲ್ಲ
ಭುವನದೊಳಗೆ ನಿಮ್ಮನಾರು ।
ಅಹುದೆಂದು ಸಾಗಿದನವನು ಮುಂದಕೆ ಬೇಗ
ಕುವರ ರಾಮನ ನೋಡ್ವೆನೆನುತ ॥೨೦॥

ಗುತ್ತಿಯೂನಾಳುವ ಜಗದಪ್ಪರಾಯನ
ಒತ್ತಿಗೆ ಬಂದ ಬಾದೂರನು ।
ಎತ್ತಣಿಂದಲಿ ಬಂದಿರೆನುತ ಜಗದಪ್ಪನು
ಒತ್ತಿ ಕೇಳಿದನು ಗುತ್ತಿಯರಸು ॥೨೧॥

ಡಿಳ್ಳಿಯ ಬಿಟ್ಟು ಬಂದೆವು ಜಗದಪ್ಪ
ತಳ್ಳಿ ಗತಾದಿಯ ಮಾಡಿ ।
ಪೊಳ್ಳು ಹೋಗಲಿಬೇಡ ಜಗದೊಳು ನೀ ದೊಡ್ಡ
ಪಾಳ್ಯೆಯ ದೊರೆಯೆಂದು ನಾವು ॥೨೨॥

ಜಗದೊಳು ಕಂಪಿಲರಾಯನ ಮಗ ರಾಮ
ಅಗಣಿತ ಬಿರಿದ ಧರಿಸಿಹನು ।
ಸೊಗಸಿಂದ ನೀವು ಅಲ್ಲಿಗೆ ಹೋಗಿರೆನುತಲಿ
ಜಗದಪ್ಪರಾಯ ಕಳುಹಿದನು ॥೨೩॥

ಬಂದಂಥ ಬಾದೂರಗೆ ವಂದಿಸಿ ವೀಳ್ಯವ ಕೊಟ್ಟು
[ಮುಂದು] ಮುಂದಕೆ ನಡೆಯಿನ್ನು ।
ಸಾಗಿ ಹೋಗೆನುತಲಿ ಬಂದ ಬಾದೂರನ
ಅಂದು ಕಳುಹಿದ ಜಗದಪ್ಪ ॥೨೪॥

ನಡೆದು ಬಂದನು ಬಾದೂರಖಾನ ಕುಮ್ಮಟಕಾಗಿ
ಬೆದರಿದ ಹುಲ್ಲೆಯಂದದಲಿ ।
ಚೆದುರ ರಾಮಯ್ಯ ಸ್ವಾರಿಯ ಹೋಗಿಬರುವಾಗ
ಒದಗಿ ಕಾಣಿಸಿಕೊಂಡರೆಲ್ಲ ॥೨೫॥

ಎಲ್ಲಿಂದ ಬಂದಿರಿ ಯಾವ ದೇಶವು ನೀವು
ಸೊಲ್ಲಿಸಿ ನಮ್ಮೊಡನೆನಲು ।
ಡಿಳ್ಳಿಯ ಸುರಿತಾಳ ಪಾಚ್ಛಾವನ ಮೇಲಿನ್ನು
ತಳ್ಳಿಯ ಮಾಡ್ಬೆಂದೆವಯ್ಯ ॥೨೬॥

ಮೊರೆ ಹಾಕಿಕೊಂಬ ರಾಯರ ಕಾಣೆವೈ ನಾವು
ತಿರಿಗಿದೆವು ನಾನಾ ಪಾಳ್ಯಗಳ ।
ದೊರೆಗಳ ಕಂಡೆವು ನಿಲಿಸಲಾರದೆ ನಮ್ಮ
ಪರಬಲಾಂತಕ ನಿನ್ನ ಬಳಿಗೆ ॥೨೭॥

ಬಿರಿದಂಕ ರಾಮನು [ಅಹ] ನಿಮ್ಮ ಮರೆಗೊಂಬ
ಅರಸುಗಳಲ್ಲ ನಾವೆನುತ ।
ಮರೆಯ ಮಾತೇನು ಸುರಿತಾಳಗೆ ಅಂಜುವರು
ದೊರೆ ನಿಮ್ಮ ತೋರಿ ಕಳುಹಿದರು ॥೨೮॥

ಬಾದೂರಖಾನನು ಬಂದು ಕೈಮುಗಿದಿನ್ನು
ಸಾಧಿಸು ನಮ್ಮ ಮರೆಗೊಂಡು ।
ಈ ಧರೆಯೊಳು ನಮ್ಮ ರಣದೊಳು [ಕಾ]ದುಕೋ
ಖೇದವಲ್ಲವು ಕೀರ್ತಿವುಂಟು ॥೨೯॥

ಮೊರೆಹೊಕ್ಕ ಖಾನರ ಕೊಡೆನೆಂಬ ಬಿರಿದನು
ಧರಿಸಿದ ರಾಮ ಕಾಲೊಳಗೆ ।
ಬರಹೇಳಿ ನೇಮಿಯು ಕಂಡು ಕಾಬುವೆನೆಂದು
ದೊರೆ ರಾಮ [ಮೊರೆ] ಹಾಕಿಕೊಂಡ ॥೩೦॥

ಬಂದ ಬಾದೂರನಿಗೆ ವೀಳ್ಯಗಳನೆ ಕೊಟ್ಟು
ಒಂದು ಗ್ರಾಮವನು ಉಮ್ಮಳಿಯ ।

ಚೆಂದದಿಂದಲಿ ಉಡಗೊರೆಗೊಟ್ಟು ರಾಮಯ್ಯ
ಬಂದ ಬಾದೂರನ ನಿಲಿಸಿದನು ॥೩೧॥

ಮನ್ನಿಸಿ ಕರೆದೊಯ್ದು ಮನೆಗಳನವರಿಗೆ
ಉನ್ನತ ಹರುಷದೊಳ್ಕೊಟ್ಟು ।
ಮುನ್ನೂರು ವರಹವ ವೆಚ್ಚಕ್ಕೆ ಕೊಟ್ಟನು
ಚೆನ್ನಗನವನಿಟ್ಟುಕೊಂಡ ॥೩೨॥

ಬಾದೂರಖಾನನು ಹೋದನೆಂಬುದ ಕೇಳಿ
ಮೇದುನಿಪತಿಯು ಸುರಿತಾಳ ।
ಖೇದವ ಮನದೊಳಗಿಟ್ಟು ನೇಮಿಯಖಾನನ
ಕ್ರೋಧದಿ ಕರೆಸಿದನವನು ॥೩೩॥

ಕರೆಸಲು ಬಂದು ನೇಮಿಯು ಕೈಮುಗಿದನು
ಬೆರಸಿ ಮಾತಾಡುತಲವನ ।
ಇರದೋಡಿಹೋದ ಬಾದೂರ ಅಪರಾತ್ರಿಯೊಳ್
ಹರುಷವಾಯಿತೆ ನಿನಗೆಂದ ॥೩೪॥

ಕೋಪವ್ಯಾತಕೊ ಭೂಪ ಎಲ್ಲಿದ್ದರವನನು
ಧೂಪಿಸಿ ಪಿಡಿದುತರಿಸುವೆ ।
ಈ ಪರಿಯಲಿ ಮೋಸವ ಮಾಡಿ ಹೋದನು
ತಾ ಪಿರಿದಾಗಿ ಬಾಳುವನೆ ॥೩೫॥

ಬಲವಂತ ಬಾದೂರನವನ ಮೋಸದಿ ನೀನು
ಒಲಿದು ಬಂಧಿಸಿ ಎಳೆತರಿಸಿ ।
ಸುಲಿಸಿ ನಿಂದಿರಿಸಿ ಡಿಳ್ಳಿಯ ಪಟ್ಟಣಕೆಲ್ಲ
ಬಲಿಯ ಕೊಡೆಂದು ಪೇಳಿದನು ॥೩೬॥

ಮೋಸವ ಮಾಡಿ ಹೋದನು ರಾತ್ರಿಯೊಳು
ಹೇಸದೆ ಜೀವದಾಸೆಯೊಳು ।
ದೇಶದೊಳೆಲ್ಲಿ ಹೊಕ್ಕರೆ ಬಿಡೆನವನ
ಭಾಷೆಯ ಪಾಲಿಸೊ ಪಾಚ್ಛಾ ॥೩೭॥

ಚರರನು ಕಳುಹಿಸಿ ನೆಲೆಯನ್ನು ತರಿಸಯ್ಯ
ಪರಬಲಾಂತಕ ನೇಮಿಖಾನ ।
ಧರೆಯ ದೊರೆಗಳು [ಮೊರೆ] ಹಾಕಿಕೊಂಡರೆ ಅವರ
ದೊರೆತನವನು ಕೆಡಿಸಯ್ಯ ॥೩೮॥

ಆಗ ಸುರಿತಾಳನೆಂದೆಂಬ ಮಾತನು ಕೇಳಿ
ಬೇಗದೊಳ್ ಚರರನಟ್ಟಿದನು ।
ಸಾಗಿ ಹೋಗಿ ನೀವು ಛಪ್ಪನ್ನಾರು ದೇಶವ
ಜೋಗಿ ವೇಷವ ತಾಳಿಕೊಂಡು ॥೩೯॥

ಎಲ್ಲಿರ್ದರವನ ನೆಲೆಯ ನೋಡಿ ಬನ್ನಿರೊ
ಬೇಗನೆ ಹೋಗಿ ನೀವೆನಲು ॥೪೦॥

ನಿಲ್ಲದೆ ಚರರೋಡಿ ಪೋದರು ಜಗಕೆಲಲ ಭೂ
ವಲ್ಲಭನಪ್ಪಣೆಯ ತಕ್ಕೊಂಡು ।
ಅಂಗ ಕಾಳಿಂಗ ಕಾಶ್ಮೀರ ಬರ್ಬರದೇಶ
ಬಂಗಾಳ ತೆಲುಗ ಕಾಂಬೋಜ ॥೪೧॥

ಛಪ್ಪನ್ನ ದೇಶವ ತಿರುಗಿ ಕರ್ನಾಟಕದ ಜಗ
ದಪ್ಪನ ಪುರಕೆ ತಾವ್ ಬಂದು ।
ತಪ್ಪದೆ ಸುದ್ದಿಯ ಕೇಳುತ ಬರಲಾಗ
ಇಪ್ಪನು ಕುಮ್ಮಟದೊಳಗೆ ॥೪೨॥

ಬಂದು ಸುರಿತಾಳರಾಯಗೆ ಅಡ್ಡಬಿದ್ದರು
ವಂದಿಸಿ ಕರಗಳ ಮುಗಿದು ।
ಬಂದೆವು ಸ್ವಾಮಿ ಕುಮ್ಮಟದೊಳು ಬಾದೂರ
ಹೊಂದಿದ ರಾಮಯ್ಯನೊಡನೆ । ॥೪೩॥

ಇಂತಪ್ಪ ಸುದ್ದಿಯ ಕೇಳುತ ಸುರಿತಾಳ
ಪಂಥದ ರಾಮನ ಬಳಿಗೆ ।
ಚಿಂತೆಯಾತಕೊ ನೇಮಿ ಹೊರಡೋ ನೀ ಬೇಗದಿ
ಇಂತು ದಂಡನೆ ಕೂಡಿಕೊಂಡು ॥೪೪॥

ಕೊಟ್ಟನು ಉಡುಗೊರೆ ಮೈಜೋಡು ದಗಲೆಯ
ಕೊಟ್ಟನು ಕೊರಳ ಪದಕವ ।
ದಿಟ್ಟ ಖಾನರ ಕೂಡಿಕೊಂಡು ನೀ ಹೋಗೆಂದು
ಕೊಟ್ಟನು ಪಟ್ಟಿ ವೀಳೆಯವ ॥೪೫॥

ಜೀವದರಸಿ ರಾಮನ ತರಬೇಕೆಂದು
ಕೋವಿದೆ ಬಾಬಮ್ಮ ಪೇಳೆ ।
ಜೀವದಾಸೆಯ ಬಿಟ್ಟು ಕಂಪಿಲನೊಳು ಕಾದಿ
ತೀವಿ ರಾಮನ ಕೈಸೆರೆಯ ॥೪೬॥

ಅಪ್ಪಣೆ ಕೊಟ್ಟು ಕಳುಹಲು ಸುರಿತಾಳನು
ತಪ್ಪದೆ ನೇಮಿ ತಾ ಹೊರಟ ।
ಕಪ್ಪವ ಕೊಂಡು ಕುಮ್ಮಟದ ರಾಮನನೊಂ
ದೊಪ್ಪದಿ ಪಿಡಿತಹೆನೆನುತ ॥೪೭॥

ಹೊರ ಪ್ರಯಾಣವ ಮಾಡಿ ಇಳಿದನು ನೇಮಿಯು
ಬರುವಂಥ ಖಾನರ ಕರೆಸಿ ।
ತುರುಕರ ಬಲವ ಚೆನ್ನಾಗಿ ಕೂಡಿಸಿಕೊಂಡು
ತೆರಳಿದ ಡಿಳ್ಳಿಯ ಬಿಟ್ಟು ॥೪೮॥

ಕೂಡಿತು ಖಾನಖಾನರು ಒಂದು ಗುಂಪಾಗಿ
ಜೋಡು ಸಿಂಗಾಡಿ ನೇಜೆಗಳು ।
ನಾಡೆಲ್ಲ ಬೆಸಲಾದಂತೆ ತುರುಕರ ಪಡೆ
ಕೂಡಿತು ಚಿಕ್ಕ ಡಿಳ್ಳಿಯಲಿ ॥೪೯॥

ಅಂಬರಖಾನ ತುಂಬುರಖಾನ ಅಬ್ದುಲ್ಲ
ಶಂಬಾರಖಾನ ಶೇರ್ಖಾನ ।
ಡೊಂಬಿ ಸಾಹೇಬ್ಖಾನ ಅಲ್ಲೀಯಖಾನನು
ಶಂಬಾರಿಖಾನ ಜಲ್ಲಿಖಾನ ॥೫೦॥

ಯಕಲಾಸಖಾನ ಯಕ್ಕಟಿಖಾನ ಸೈದ್ರಲ್ಲಿ
ಬಕರಿಯಖಾನ ಬಲೆಖಾನ ।

ಮಕರಂಕಖಾನ ಮಾಮುದ್ದು ಬಕರಿಯಖಾನ
ಶೆಕುನಾದಖಾನ ಬಾಬ್ಖಾನ ॥೫೧॥

ಬಿಜ್ಜಾರಿಖಾನ ಗುಜ್ಜರಿಖಾನ ಮೀರಲ್ಲಿ
ಮಜ್ಜಾ ಬಾಪುರೆ ರಾಜಖಾನ ।
ಹೆಜ್ಜೆಹೆಜ್ಜೆಗೆ ಗೆಲ್ವ ತುಂಬುರಖಾನನು
ಲುಜ್ಜಖಾನರು ಒದಗಿದರು ॥೫೨॥

ಎಪ್ಪತ್ತು ಸಾವಿರ ಕುದುರೆ ವಜೀರನು
ಎಪ್ಪತ್ತಿಖಾನನೆಂಬವನು ।
ಕುಪ್ಪಳಿಸುತ ಅರಿಬಲದೊಳು ತೂರುವ
ಅಪ್ಪಾಜಿಖಾನನೆಂಬವನು ॥೫೩॥

ಮೂವತ್ತು ಸಾವಿರ ಕುದುರೆ ವಜೀರನು
ಮೀರ ಅಬ್ದುಲಖಾನನವನು ।
ಆವಾಗ ಸುರಿತಾಳನ ಹುಜುರಿನಲ್ಲಿರುವಂಥ
ಮಾವೀ ಹಳದಿಯಖಾನ ಬಂದ ॥೫೪॥

ಐವತ್ತು ಸಾವಿರ ಕುದುರೆಯ ವಜೀರ
ಸೈದಾಲಖಾನನೆಂಬವನು ।
ಮೈಜೋಡು ಸಿಂಗಾಡಿ ತರ್ಕಾಸ ಕೈಯಂಬು
ಸೈದಲಖಾನನೆಂಬವನು ॥೫೫॥

ಅರವತ್ತು ಸಾವಿರ ಕುದುರೆ ವಜೀರನು
ತರುವೂಲಿಖಾನನೆಂಬವನು ।
ಬಿರಿದಿನ ಟೆಕ್ಕೆಯು ಜಲ್ಲಿಯ ಮುಖರಂಬ
ಬರುದಲೆ ಬಾಬಾಜಿಖಾನ ॥೫೬॥

ಎಪ್ಪತ್ತು ಸಾವಿರ ಕುದುರೆಗೆ ವಜೀರನು
ಮುಪ್ಪಿನ ಮುಜುರಲ್ಲಿಖಾನ ।
ತಪ್ಪದೆ ಢಂಮೆಂದಿರಿವನು ರಣದೊಳು
ಒಪ್ಪದಿ ಬಂದು ಕೂಡಿದನು ॥೫೭॥

ಅಚ್ಚಾಗಿ ಐವತ್ತು ಲಕ್ಷವು ಕೂಡಿತು
ಬಿಚ್ಚಿತು ಭೂಮಿ ಬಾಯ್ದೆರೆದು ।
ಹುಚ್ಚಾದವು ಅಷ್ಟ ದಿಗ್ದಂತಿ ತಲೆಬಾಗಿ
ಮುಚ್ಚಿದ ಕೂರುಮ ಕಣ್ಣ ॥೫೮॥

ನೆರೆದುದು ನೇಮಿಖಾನನ ವಾಲಗದೊಳು
ಸುರಿತಾಳಿಳನಪ್ಪಣೆಯಿಂದ ।
ಬರೆದು ಕಳುಹಿದನು ಐದು ಲಕ್ಷ ವಾಜಿಯ
ದೊರೆದೊರೆ ಖಾನಖಾನರನು ॥೫೯॥

ಇನ್ನೊಂದು ಲಕ್ಷ ರಾಜಪುತ್ರ ರಾಹುತರನು
ಮನ್ನಿಸಿ ಕಳುಹಿ ಸುರಿತಾಳ ॥೬೦॥

ನಾಳೆ ನೇಮಿಯನು ತೆರಳಿ ಹೋಗ ಹೇಳಿರೊ
ಬಾಳ ದಿನ ನೀವು ನಿಲುಪೇಕೆ ।
ಕೋಳು ಹಿಡಿದು ಕುಮ್ಮಟವ ಲೆಗ್ಗೆಯ ಮಾಡಿ
ಸಾಳುವ ರಾಮನ ಬಿಡೆನೊ ॥೬೧॥

ಗಂಗಾಸಾಗರದ ಕೋಟೆಗೆ ಒಂದು ಸಾವಿರ
ಭಂಗಿಯ ಹೇರೊಂದು ಲಕ್ಷ ।
ಶೃಂಗಾರ ಕಡಲೆ ಮೀಠಾಯಿ ಹೇರು ಸಾವಿರ
ಸಡಗರವೇನ ಬಣ್ಣಿಸುವೆ ॥೬೨॥

ಆಯತವನು ಮಾಡಿ ಆಹಾರಗಳನೆಲ್ಲ
ಜಾಯಿಕಾಯಿ ಜಾಪತ್ರೆಗಳನು ।
ಬೇಯಿಸಿದ ರೊಟ್ಟಿಯ ಕಟ್ಟಿ ತಿತ್ತಿಗಳನು
ಆಯತವಾಗಿ ನಿಂದಿಹರು ॥೬೩॥

ನೇಮಿಖಾನನು ದಂಡ ಕೂಚೆಯ ಮಾಡಿ
ಮುಂದಕ್ಕೆ ನಡೆಯಬೇಕೆಂದ ।
ಢಂಢಾಮ ಢಮಢಮ ಎಂದು ಗರ್ಜಿಸೆ ವಾದ್ಯ
ಮಂಡಲಿಕರು ತೆರಳಿದರು ॥೬೪॥

ಅಕ್ಕಿ ಬೇಳೆಯ ಹೇರು ಸಕ್ಕರೆ ಗೋಧಿಯ ಹಿಟ್ಟು
ಲೆಕ್ಕವಿಲ್ಲದೆ ಹೇರಿದರು ।
ಮಿಕ್ಕ ಮಾತಿನ್ನೇನು ತುಪ್ಪದ ನಗಗಳು
ಲಕ್ಷದ ಮೇಲೆ ಹೇರಿದರು ॥೬೫॥

ಹಸುರು ಕೆಂಪಿನ ಗುಡಿಯು ಸಾಳು ಪಟ್ಟೆದ ಗುಡಿ
ಹಸುರಂಜಿ ಬಿಳಿದಿನ ಗುಡಿಯು ।
ಹೊಸ ಒಂದು ಲಕ್ಷ ಗುಡಿಗಳು ಹೇರಿದವು
ಬಿಸಿಲು ಗುಡಾರ ಲೆಕ್ಕವಿಲ್ಲ ॥೬೬॥

ಬೆಳಗಿದ ಮೇಲೊಂದು ಕೂಚೆ ನಗಾರಿಯು
ಬೋರುಗುಟ್ಟುವ ಕರ್ಣೆ ಬುರುಗು ॥೬೭॥

ಹೊಡೆದವು ಬರಸಿಡಲಂತೆ ವಾದ್ಯದ ಧ್ವನಿ
ಬಿಡದೊದರುವ ಚಿನ್ನಗಹಳೆ ।
ಮೇದುನಿ ಘೀಳಿಡುವಂತೆ ವಾದ್ಯದ ಧ್ವನಿ
ಸಾಧಿಸಿ ದಂಡು ನಡೆಯಿತು ॥೬೮॥

ಚೆಕ್ಕನೆ ತುರುಕರ ದಂಡೆತ್ತಿ ನಡೆಯಿತು
ಚಿಕ್ಕ ಡಿಳ್ಳಿಯ ಬಿಟ್ಟು ನಡೆಯೆ ।
ಉಕ್ಕಿತು ಕೆಂಧೂಳು ಸೂರ್ಯಮಂಡಲಕಾಗಿ
ದೊಕ್ಕನೆ ಆಕಾಶ ಮುಸುಕಿ ॥೬೯॥

ತೆಗೆದು ತೆರಳಿದುದು ಕುದುರೆಯ ಪೌಜಲ್ಲಲ್ಲಿ
ಒಗುಮಿಗಿಲಾಗಿ ನಡೆದರು ।
ಅಗಣಿತ ಹರುಷದಿ ಭಾಗೀರಥಿಯ ದಾಂಟಿ
ಸೊಗಸಿಂದ ತೆರಳಿತು ದಂಡ ॥೭೦॥

ಹರಿದು ಬಂದಿತು ಕುದುರೆಯ ಪೌಜು ವಿಂಗಡಿಸಿ
ತೆರಳಿತು ಮುಂದಕ್ಕೆ ಸಾಗಿ ।
ಕರಿಘಟೆಪೌಜು ನೇಮಿಯಖಾನರ ಬಲ
ಮರಡಿಗಳಂದದಿ ಬರಲು ॥೭೧॥

ಇತ್ತರದಲಿ ಛತ್ರ ಐನೂರು ಹಿಡಿದವು
ಎತ್ತ ನೋಡಲು ನೇಮಿಯೊಡನೆ ।
ಎತ್ತಿದ ಮೊನೆಮೊನೆ ನ್ಯಾಜ್ಯದ ತುರುಕರು
ಮೊತ್ತದ ಕಾಲಾಳು ಸಹಿತ ॥೭೨॥

ಮುಂದೆ ಮೂವತ್ತು ಲಕ್ಷ ವಾಜಿಯು ನಡೆಯಿತು
ಇಪ್ಪತ್ತು ಲಕ್ಷದ ಪೌಜು ।
ನಿಂದವಲ್ಲಲ್ಲಿ ಒಂದೆ ವಾದ್ಯ ರಭಸದಿ
ಆಂಧ್ರದೇಶದ ಗಡಿಗಾಗಿ ॥೭೩॥

ನಾಲ್ಕ ದಿನಕೆ ನಡೆವಂಥ ದಾರಿಯ ನೇಮಿ
ಎರಡು ದಿನಕೆ ನಡೆವುತಲಿ ।
ನೂಕಿ ನಡೆಯಿತು ಕುದುರೆಯ ಪೌಜು ಮುಂದಕ್ಕೆ
ಏಕವಾಯಿತು ಗಂಗೆ ತಡಿಯ ॥೭೪॥

ಗಂಗೆಯ ತಡಿಯ ಸುರಿತಾಳಪುರದ ಮುಂದೆ
ಮುಂಗುಡಿಗಳ ಹೊಯ್ದರವರು ।
ಶೃಂಗಾರದಾನೆಯನಿಳಿದು ನೇಮಿಯಖಾನ
ಸೊಗಸಿಂದ ಇಳಿದ ದಂಡಿನಲಿ ॥೭೫॥

ಮುಂಜಾನೆ ಎದ್ದು ನಡೆಯಿತು ಮೂಗಾವುದ
ಸಂಜೆಗೆ ಎರಡು ಗಾವುದವು ।
ಅಂಜದೆ ನೇಮಿಯು ನಡೆದನು ಈ ರೀತಿ ಧ
ನಂಜಯ ಪಟ್ಟಣಕಿಳಿದ ॥೭೬॥

ಆರು ದಿನದ ದಾರಿ ಮೂರು ದಿನಕೆ ನಡೆದು
ವಾರಣಾಸಿಯ ಸೀಮೆ ಗಡಿಗೆ ।
ನೂರು ಗಾವುದ ರಾಯ ನೇಮಿ ನಡೆದು ಬಂದ
ಧಾರುಣಿ ಭೋರಿಡುವಂತೆ ॥೭೭॥

ಎಂಟು ದಿನದ ಪಯಣ ನಾಲ್ಕು ದಿನಕೆ ಬಂದ
ಬಂಟ ನೇಮಿಯಖಾನ ತಾನು ॥೭೮॥

ಹತ್ತು ದಿನದ ದಾರಿ ಐದು ದಿನಕೆ ನಡೆದ
ಒತ್ತಿ ಬಂದನು ನೇಮಿಖಾನ ।
ಚಿತ್ರಕೂಟದ ಪುರವನು ದಾಂಟುತಾಗಲೆ
ಸುತ್ತಿ ಯಮುನೆ ತೀರಕಿಳಿದ ॥೭೯॥

ಅಲ್ಲಿಂದ ತೆರಳಿ ಹೊರಟ ದಂಡು ಬೇಗದಿ
ಸೊಲ್ಲಾಪುರವನು ದಾಂಟಿದರು ।
ನಿಲ್ಲದೆ ನಾಲ್ಕೆಂಟು ಪ್ರಯಾಣಕೆ ನರ್ಮದೆ
ಬಲ್ಲಿದ ಗಂಗೆ ತೀರದಲಿ ॥೮೦॥

ಚಲ್ಲಿತು ಅಲ್ಲಿಂದ ದಂಡು ಮುಂದಕೆ ಎದ್ದು
ಎಲ್ಲರು ಒಂದಾಗಿ ಕೂಡಿ ।
ನಿಲ್ಲದೆ ಅವರಂಗಬಾದಿಗೆ ಇಳಿದರು
ಅಲ್ಲಿಂದ ಕುಮುಕ ಮಾಡಿದರು ॥೮೧॥

ಹಿಂದುಮುಂದೆಲ್ಲ ಕೂಡಿತು ದಣಿದಂದು
ಬಂದು ಕೂಡಿತು ಖಾನರೆಲ್ಲ ।
ಇಂದಿಗೆ ಸುರಿತಾಳನ ಚಾಕರಿ ಸಾಕೆಂದು
ನುಡಿದರು ಬಾದುಬಾದುರರು ॥೮೨॥

ಇಷ್ಟು ತವಕದಿ ನಾವು ಹೋಗಲೇತಕೆ ರಾಮ
ಬಿಟ್ಟು ಹೋಗುವನೆ ನಮಗಂಜಿ ।
ಸೃಷ್ಟಿಯೊಳಗೆ ಅವನು ಕಾರಣಿಕದ ಪುರುಷ
ಹುಟ್ಟಿಬಂದನು ಕಲಿಯುಗದಿ ॥೮೩॥

ಇಷ್ಟು ದಂಡಿನ ಮೇಲೆ ಕಡಿದಾಡದೆ ಅವ
ಬಿಟ್ಟುಹೋಗುವನೆ ಗೂಳೆಯವ ।
ದಿಟ್ಟತನವು ರಾಮಗಿಲ್ಲದಿದ್ದರೆ ಅವ
ಮೆಟ್ಟುತಲಹನೆ ಪಾವುಗೆಯ ॥೮೪॥

ಎಲ್ಲರು ಕೂಡಿ ಮಾತಾಡುತ್ತ ಖಾನರು
ಅಲ್ಲಿಂದ ವಿಜಾಪುರಕೆ ನಡೆದು ।

ನಿಲ್ಲದೆ ನಾಲ್ಕಾರು ದಿವಸಕೆ ತಾವ್ಬಂದು
ಮೆಲ್ಲನಿಳಿದರು ನಿಲುಪಯಣ ॥೮೫॥

ಅಲ್ಲಿ ನಿಲ್ಲಿಸಿ ದಂಡ ನೇಮಿಯಖಾನನು
ಬಲ್ಲಿದ ಖಾನಖಾನರನು ।
ಎಲ್ಲ ವಜೀರರ ಕರೆಸಿ ಆಲೋಚನೆ
ಬಲ್ಲಂತೆ ಪೇಳಿ ನೀವೆನಲು ॥೮೬॥

ಸಾವಧಾನವಮಾಡು ದಂಡ ಚತುರೋಪಾಯ
ನೇಮಗಳುಂಟು ದೊರೆಗಳಿಗೆ ।
ಕ್ಷೇಮದೊಳಲ್ಲಿಂದ ಕುಳಿತು ಸುದ್ದಿಯ ತರಿಸಿ
ಆಮೇಲೆ ಮಾಡು ಕಾರ್ಯವನು ॥೮೭॥

ಎನಲು ವಜೀರರಾಡಿದ ಮಾತುಗಳನು
ಅನುಕರಿಸಿದ ನೇಮಿ ತಾನು ॥೮೮॥

ಸುತ್ತಣ ಸಣ್ಣ ಪಾಳ್ಯಗಾರರು ಎಲ್ಲ
ಎತ್ತಳ ಮಾರಿ ಬಂತೆನುತ ।
ಉತ್ರ ಉಡುಗೊರೆಗಳ ಕಟ್ಟಿಸಿ ಮಂತ್ರಿಗಳು
ಇತ್ತ ಕಳುಹಿದರು ಬೇಗದೊಳು ॥೮೯॥

ಬಂದರು ನಾಡಮಂತ್ರಿಗಳೆಲ್ಲ ಕೂಡಿನ್ನು
ತಂದಂಥ ಉಡುಗೊರೆಗಳನು ।
ಮುಂದಿಕ್ಕಿ ಕರಗಳ ಮುಗಿದು ವಂದಿಸಿದರು
ಮುಂದೇನು ಗತಿ ನಮಗೆನುತ ॥೯೦॥

ಆವಾಗ ಕೊಡುವ ಕಪ್ಪವ ಕೊಟ್ಟು ಬರುವೆವು
ನಾವು ಕೂಟವನು ಮಾಡುವೆವು ।
ಭಾವಶುದ್ಧವಾಗಿ ನಡೆಕೊಂಬೆವಲ್ಲದೆ
ನಾವು ಮಾಡಿದ ತಪ್ಪುಗಳೇನು ॥೯೧॥

ಕೆಲವು ರಾಜ್ಯವನೆಲ್ಲ ಕಟ್ಟಿಕೊಂಡನು ರಾಮ
ಉಳಿದ ರಾಜ್ಯವು ಹಾಳಾಯ್ತು ।

ಬಳಿಕೀಗ ನಾವು ಬದುಕುವ ತೆರನಿಲ್ಲ ಮುಂದೆ
ಬೆಳೆದಂಥ ಪೈರೆಲ್ಲ ಹೋಯ್ತು ॥೯೨॥

ನಿಮ್ಮೇಲೆ ನಾವು ಕಾರ್ಯಕೆ ಬಂದವರಲ್ಲ
ಕುಮ್ಮಟವನು ಮುತ್ತಿಕೊಂಡು ।
ಹಮ್ಮಿನ ರಾಮನ ಹಿಡಿದು ಕೈಸೆರೆಯನು
ಗಮ್ಮನೆ ಸುರಿತಾಳನೆಡೆಗೆ ॥೯೩॥

ಮುತ್ತಿಗೆಯನು ಮಾಡಿ ಕುಮ್ಮಟ ದುರ್ಗವ
ಒತ್ತಿ ರಾಮನ ಹಿಡಿಕೊಂಡು ।
ಮತ್ತೆ ಸುರಿತಾಳನ ಹುಜುರಿಗೆ ಒಯ್ವೆವು
ಎತ್ತಣ ಕಾರ್ಯ ನಮಗಿಲ್ಲ ॥೯೪॥

ಬಂದ ಮಂತ್ರಿಗಳೊಂದು ಉಡುಗೊರೆಯನು ಮಾಡಿ
ನಿಂದಿರಬೇಡಿ ನೀವು ಹೋಗಿ ।
ಮಂದಿಮಕ್ಕಳನೆಲ್ಲ ಕೂಟವ ಕಳಹಿಸಿ
ಮುಂದುವರಿದು ಕುಮ್ಮಟಕೆ ॥೯೫॥

ಪಗುದಿಯಖಾನನ ಕರೆಸಿದ ನೇಮಿಯು
ಸೊಗಸಿಂದ ಹೋಗು ಕುಮ್ಮಟಕೆ ।
ಮಿಗೆ ಐದು ಕುದುರೆಯ ಚರರನ್ನು ಕರಕೊಂಡು
ಅಗಣಿತ ಕಂಪಿಲನೆಡೆಗೆ ॥೯೬॥

ಒಪ್ಪದಿಂದಲಿ ಕಪ್ಪವ ಕೊಟ್ಟು ಬಾದ್ದೂರನ
ಒಪ್ಪಿಸ ಹೇಳೊ ಸ್ನೇಹದಲಿ ।
ತಪ್ಪು ಮಾತುಗಳಾಡಿ ತಳ್ಳಿಯ ಮಾಡಿದರೆ
ತಪ್ಪ[ದೆ] ಬಾರೋ ನಮ್ಮೆಡೆಗೆ ॥೯೭॥

ಒಡೆಯ ಮಾತನು ಕೇಳಿ ಪಗುಡಿಯಖಾನ
ತಡೆಯದೆ ಪೊರಟನಾಕ್ಷಣದಿ ।
ಒಡನೈದು ವಾಜಿ ಚೋರರ ಕರೆಸಿಕೊಂಡಾಗ
ನಡೆದನು ಕುಮ್ಮಟಕಾಗಿ ॥೯೮॥

ಬಂದವು ಬಾಗಿಲಿಗೈದು ಕುದುರೆಯು ಬೇಗ
ನಿಂದಲ್ಲಿ ಸುದ್ದಿಯ ಪೇಳಿ ।
ಅಂದು ಗೊಲ್ಲರು ಕಂಪಿಲರಾಯಗುಸುರಲು
ಬಂದವರನು ಕರೆಸಿದನು ॥೯೯॥

ವಂದಿಸಿ ಕರವ ಮುಗಿದು ಅವರು ಕುಳಿತಾಗ
ಎಂದರು ಮೂರು ಮಾತುಗಳ ।
ಬಂದಿತು ಸುರಿತಾಳನ ದಂಡು ಮಿರಿಜಿಗೆ
ಬಂದನು ನೇಮಿಯಖಾನ ॥೧೦೦॥

ನಡತೆಲೊಂದಾಗಿ ಕಪ್ಪವ ಕೊಟ್ಟು ಬಾದ್ದೂರನ
ಹಿಡಿದುಕೊಡುವದು ಕರ ಲೇಸು ।
ಬಿಡದೆ ಬಾದ್ದೂರನ ಹಿಂದಿಕ್ಕಿಕೊಂಡರೆ ನಾವು
ಅಡವಿಯ ಪಾಲೆಂದರವರು ॥೧೦೧॥

ಮುತ್ತಿ ಕುಮ್ಮಟವ ಕೈಸೆರೆಯನು ನಿಮ್ಮನು
ಒತ್ತಿ ಹಿಡಿಸುವ ನೇಮಿಖಾನ ।
ಒತ್ತರದೋಡಿಹೋದರೆ ನಾವು ಬಿಡುವೆವೆ
ಚಿತ್ತೈಸಿ ಕೇಳು ಕಂಪಿಲನೆ ॥೧೦೨॥

ಅಗಣಿತ ಸುದ್ದಿಯ ಕೇಳುತ ಕಂಪಿಲರಾಯ
ಮಗ ರಾಮನ ಮುಖ ನೋಡಿ ।
ಬಿಗುವಿನ ಮಾತುಗಳೇಕೆ ನೇಮಿಗೆ ಎಂದು
ಸೊಗಸಿಂದ ಬರಹೇಳೋ ದಂಡ ॥೧೦೩॥

ಮರೆಹೊಕ್ಕಗಾಸರೆ ಕೊಡುವ ರಾಯರ ಗಂಡ
ಜಗದೊಳು ನೇಮಿಯ ಮಿಂಡ ।
ಜಗಬಿರಿದನು ಧರಿಸಿದೆನು ಕಾಲೊಳು ನಾನು
ಮಿಗೆ ಕೊಡುವನಲ್ಲ ಬಾದೂರನ ॥೧೦೪॥

ಇಂತಪ್ಪ ಬಿರಿದು ಧರಿಸಿ ಕೊಟ್ಟರೆ ನನ್ನ
ಪಂಥವೇನಾಯ್ತಪ್ಪ ಜೀಯ ।

ಚಿಂತೆ ಇನ್ಯಾತಕೆ ಬರಹೇಳೋ ನೇಮಿಯ
ಪಂಥವನೆಲ್ಲ ನೋಡುವೆನು ॥೧೦೫॥

ಬಂದ ಖಾನರಿಗೊಂಡು ವೀಳ್ಯ ಉಡುಗೊರೆ ಕೊಟ್ಟು
ಹಿಂದಕೆ ತೆರಳಿ ನೀವೆಂದ ।
ಮಂದಿ ಮನ್ನೆಯರ ಕರೆಸಿಕೊಂಡು ರಾಮಯ್ಯ
ಬಂದನು ಹೊರ ಚಾವಡಿಗೆ ॥೧೦೬॥

ಬಂದನಂತೆ ನೇಮಿ ನಮ್ಮೇಲೆ ಕಾರ್ಯಕ್ಕೆ
ಇಂದು ಬಾದೂರನ ಕೊಡಹೇಳಿ ।
ಬಂದಿದ್ದವೈದು ಕುದುರೆಯ ಸುದ್ದಿಯ ಕೇಳಿ
ಹಿಂದಕ್ಕೆ ಅಟ್ಟಿದೆವೆನಲು ॥೧೦೭॥

ಕುರಿಯ ಹಟ್ಟಿಯ ಹೊಕ್ಕರೆ ಕುರುಬ ಕೊಡನು, ತನ್ನ
ಮರೆಹೊಕ್ಕ ಪೋರನ ಎನುತ ।
ಧರೆಯ ರಾಯರ ಗಂಡ ನೆರೆಸೋ ಸೇನೆಯನೆಲ್ಲ
ಬರಲಿನ್ನು ನೇಮಿಯಖಾನ ॥೧೦೮॥

ಎಡಬಲದಲಿ ನೋಡಿ ಬರುವಂಥ ಶಬರರ
ತಡೆಯದೆ ಕರೆಸಿರೋ ನೀವು ।
ಬಿಡಬೇಡಿ ಬಂದಂಥ ಬೇಡಪಡೆಯ ಮುಂದೆ
ಕೊಡುವೆನು ವರುಷ ಸಂಬಳವ ॥೧೦೯॥

ತಂದೆಯ ಪಾದಕ್ಕೆ ಎರಗಿ ರಾಮಯ್ಯನು
ಒಂದು ಬಿಂದಿಗೆ ಹೊನ್ನ ಕೇಳಿ ।
ಕಂದನ ಮಾತ ಕೇಳುತ ಕಂಪಿಲಭೂಪ
ಬಿಂದಿಗೆ ಹೊನ್ನ ಕೊಡಿಸಿದನು ॥೧೧೦॥

ಮಂದಿಮಕ್ಕಳು ರಾಹುತರು ರಾಣುವೆಗೆಲ್ಲ
ಗಂಧ ವೀಳ್ಯವ ಕೊಡಿಸಿದನು ।
ತಂದಂಥ ಬಿಂದಿಗೆ ಹೊನ್ನ ಹಂಚಿಸಿ ಕೊಟ್ಟು
ಮಂದಿಯ ಸಮಜಾಸಿಕೊಂಡ ॥೧೧೧॥

ನೋಡು ಬೈಚಪ್ಪ ಕೂಡು ಬೇಗದಿ ಗಡಿ
ವಾಡದ ಮಂದಿ ನಾಯಕರ ।
ಕೂಡಿಸೊ ಕರೆಸೋ ಬೇಗದೊಳೆಂದು ಪೇಳಿದ
ನಾಡ ಪರಿವಾರವನೆಲ್ಲ ॥೧೧೨॥

ಆರೆಯ ಚಾರಮರಾಯನ ಮಕ್ಕಳಿಗೆ
ಆರು ಸಾವಿರ ವಾಜಿಯನು ।
ಭೋರನೆ ಕೊಡಿಸು ಎಂದು ಹಣವ ಕೊಟ್ಟು
ಬೇರೊಂದು ಪೌಜ ಮಾಡಿದನು ॥೧೧೩॥

ಇತ್ತ ರಾಮಯ್ಯನು ಕತ್ತಿ ಸಂಭ್ರಮದೊಳು
ಅರ್ತಿಯಿಂದಲಿ ಇರುತಿಹನು ।
ಅತ್ತ ಪಗುದಿಯಖಾನ ನೇಮಿಯೊಳ್ ಸುದ್ದಿಯ
ಬಿತ್ತರದಿಂದ ಪೇಳಿದನು ॥೧೧೪॥

ಕೇಳಿದೆವ್ವೆ ನೇಮಿ ಎಮ್ಮೊಡೆಯ, ರಾಮನ ಸುದ್ದಿ
ಹೇಳುವುದೇನವನ ಕೊಬ್ಬ ।
ಬಾಳ ಪಂಥದ ಬಿರುದುಗಳ ಕೊಂಡಾಡಿಸಿ
ಹೇಳಿ ನಿಮ್ಮೊಡೆಯಗೆ ಎನುತ ॥೧೧೫॥

ಅಡಗಿದ ಖಾನನ ಬಿಡಿಸುವ ನೇಮಿಯ
ಒಡೆಯ ಸುರಿತಾಳನ ಗಂಡ ।
ಬಿಡೆನು ಬಾದೂರನ ಕೊಡೆನು ಕಪ್ಪವನೆಂದು
ಜಡಿದು ಖಡ್ಗವನು ಝಳ್ಪಿಸುತ ॥೧೧೬॥

ಹೇಳುವ ಮಾತನು ಕೇಳಿದ ನೇಮಿಯು
ಬಾಳ ಕೋಪವ ತಾಳಿ ಮನದಿ ।
ಧೂಳುಗೋಟೆಯ ಮಾಡಿ ಕಡಿವೆನು ಕುಮ್ಮಟವ
ಸನ್ನೆಗಾಳಿಯ ಮಾಡಿಸಿದ ॥೧೧೭॥

ಅಲ್ಲಿಂದ ತೆರಳಿ ದಂಡು ಮುಂದಕ್ಕೆ ಸಾಗಿತು
ಮೆಲ್ಲನೆ ಮಿರುಜೆಯ ಬಳಿಗೆ ।

ಬಲ್ಲಿದ ಖಾನಖಾನರು ಮುಂದಾಗಿ
ನಿಲ್ಲದೆ ದಾಳಿ ಮಾಡೆನುತ ॥೧೧೮॥

ಎಂಬತ್ತು ಸಾವಿರ ಕುದುರೆ ವಜೀರರ
ಮುಂಚಣಿ ಫೌಜ ನಡೆಯೆಂದ ।
ಕುಂಭಿನಿ ಬಿರಿವಂತೆ ನಡೆಯಿತು ದಂಡಿನ
ಸಂಭ್ರಮವೇನ ಬಣ್ಣಿಸುವೆ ॥೧೧೯॥

ರಾಮನ ಸೀಮೆಯ ಗಡಿವಾಡದೊಳು ಬೇಗ
ನೇಮಿಯ ದಂಡು ಬಂದುದನು ।
ಆ ಮಹಾ ಕಂಪಿಲರಾಯಗೆ ಪೇಳಲು
ರಾಮಗೆ ಪೇಳೆಂದನರಸ ॥೧೨೦॥

ಬಂದರು ಚರರು ರಾಮಗೆ ವಂದಿಸಿ ಬೇಗ
ನಿಂದು ಸುದ್ದಿಯನು ಪೇಳಿದನು ।
ಇಂದೆಮ್ಮ ರಾಜ್ಯವ ಸಂದುತ ನೇಮಿಯ ದಂಡು
ಬಂದಿತು ರಾಮಯ್ಯನೆನಲು ॥೧೨೧॥

ಕೇಳಿದ ಸುದ್ದಿಯ ಹೇಳುವುದೇನೆಂದು
ಕಾಳಗ ಬಂತು ನಮಗೆಂದ ।
ನಾಳಿನ ದಾಳಿಗೆ ಸಿಕ್ಕಿದೆ ನೀವೆಲ್ಲ
ಗೂಳೇವ ತೆಗಸು ಬನ್ನೆಂದ ॥೧೨೨॥

ಬಂದ ಚರರು ಓಡಿಹೋದರು ಹಿಂದಕ್ಕೆ
ಒಂದರಗಳಿಗೆ ನಿಲ್ಲದೆಲೆ ।
ಕೂಡಿತು ಮಂಚೂಣಿ ಕುದುರೆ ಖಾನರು ಬಂದು
ನಾಡಿನ ಪ್ರಜೆಗಳ ಮೇಲೆ ॥೧೨೩॥

ಮುಂದಕ್ಕೆ ಗೂಳೆವ ತೆರಳಿಸಿಕೊಂಡು ಬಂದರು
ಬಂದಂಥ ಕುದುರೆಯ ನೋಡಿ ।
ಹಿಂದಕ್ಕೆ ನಿಂತು ತರುಬುವ ಖಾನಖಾನರ
ಸಂದಣಿಯನು ನಿಲಿಸುತಲಿ ॥೧೨೪॥

ಹಿಂದಟ್ಟಿ ಬಂದಂಥ ಕುದುರೆಯ ಶಬರರು
ತಂದರು ಕುದುರೆಯ ಹಿಡಿದು ।
ಕೊಂದು ಖಾನರನೆಲ್ಲ ಕಡಿದೊಟ್ಟುತಲಿ ತಾವು
ಹಿಂದುಮುಂದಾಗಿ ನಡೆವುತಲಿ ॥೧೨೫॥

ಎಡದಲ್ಲಿ ಬಾಹಂತ ಕುದುರೆಯ ಬೇಡರು
ಹಿಡಿದು ರಾಹುತರನ್ನು ಕಟ್ಟಿ ।
ಕಡಿದೊಟ್ಟಿ ಖಾನಖಾನರನೆಲ್ಲ ತಲೆಗಳ
ಪಿಡಿಕೊಂಡು ಮುಂದಕ್ಕೆ ನಡೆದು ॥೧೨೬॥

ಬಲದೊಳು ಬಾಹಂತ ಕುದುರೆಯನೆಚ್ಚರೆ
ಬಲದೊಳು ಕಲ್ಲು ಬಿದ್ದಂತೆ ।
ಮರೆತು ಬಾಹಂತ ಕುದುರೆಯನೆಲ್ಲ ಶಬರರು
ಕಲೆತು ಹಿಡಿಯುತಿರ್ದರಾಗ ॥೧೨೭॥

ಕೆಂದಗುದುರೆಯನೇರಿ ಬಾಹಂತ ರಾಹುತರ
ಮುಂದಲೆಗಳ ಪಿಡಿದುಕೊಂಡು ।
ಕೊಂದು ಕೂಗುತ ಬೊಬ್ಬಿಡುತಲಿ ಶಬರರು
ಬಂದರು ಕುಮ್ಮಟಕಾಗ ॥೧೨೮॥

ಮಿರಜೆಯ ಬಿಟ್ಟು ಎದ್ದಿತು ದಂಡು ಕೂಚಾಗಿ
ಭರದಿಂದ ದಳ್ಳುದಳ್ಳಿಯಲಿ ।
ತೊರಗಲ್ಲು ಬಾದಾವಿ ಬಳಿಗೆ ಬಂದಿತು ಬೇಗ
ಅರೆಮರೆಯಿಲ್ಲದೆ ನೇಮಿ ॥೧೨೯॥

ತೊರಗಲ್ಲು ಬಾದಾವಿಲಿಂದ ಕೂಚೆಯ ಮಾಡಿ
ನರಗುಂದದ ಹೊಳೆಯ ದಾಂಟಿ ।
ಧುರಧೀರ ಖಾನವಜೀರರು ಮುಂದಾಗಿ
ಅರುವತ್ತು ಸಾವಿರ ವಾಜಿ ॥೧೩೦॥

ಬೆಟ್ಟವಾದುದು ಕುಮ್ಮಟದುರ್ಗ ನಮಗೊಂದು
ಕೊಟ್ಟವಾಯಿತು ಧರೆಯೊಳಗೆ ।
ಮುಟ್ಟಿ ಕೇಳುತ ನೇಮಿ ಚರರನು ಅಲ್ಲಿಂದ
ಅಟ್ಟಿ ಒತ್ತಿಗೆ ಬಂದಿಳಿದ ॥೧೩೧॥

ತುರುಕ ನೇಮಿಯಖಾನ ಬಂದ ಕುಮ್ಮಟಕೆಂದು
ಅರಸು ಜಗದಪ್ಪ ಕೇಳಿದನು ।
ಕರೆಕರೆ ಮಾತಲ್ಲ ಕಳುಹುವೆ ಕುದುರೆಯ
ಬೆರಸಿ ಮಾತಾಡಿ ನೀವ್ ಬನ್ನಿ ॥೧೩೨॥

ದೊರೆ ಕಂಪಿಲನ ಬಳಿಗೆ ನೀವು ಹೋಗಿರೊ
ಕರೆಸಿಕೊಳ್ಳಲಿ ನಮ್ಮ ಪೌಜ ।
ಕರೆಕರೆ ಮಾತಲ್ಲ ಕುಳುಹುವೆ ಕುದುರೆಯ
ಬೆರಸಿ ಮಾತಾಡಿರೊ ನೀವು ॥೧೩೩॥

ಹೋದರು ಚರರೋಡಿ ಕಂಪಿಲರಾಯಗೆ
ಭೇದವಿಲ್ಲದೆ ಅಡ್ಡ ಬಿದ್ದು ।
ಕಾದುವ ಕುದುರೆ ಮಂದಿಯ ಕೊಟ್ಟು ಕಳುಹುವ
ಈ ಧರೆ ಜಗದಪ್ಪ ಅರಸು ॥೧೩೪॥

ಮಾವನ ಸುದ್ದಿಯ ಕೇಳುತ ರಾಮಯ್ಯ
ಆವ ರಾಯರ ಕೂಟ ಬೇಡ ।
ತಾವು ಸುರಿತಾಳಗೆ ಪಗುದಿಯ ಒಕ್ಕಲು
ಸಾವಂತರ [ಕೂಟ] ನಮಗೇಕೆ ॥೧೩೫॥

ಕೂಟವ ಕೂಡಿಸಿ ಕಡಿದಾಡುವಂಥವರ
ಕೋಟಿ ರಾಯರ ಗಂಡನೆಂದು ।
ಆಟಕೆ ಬಿರಿದ ನಾ ಧರಿಸಿದೆ ಅಪ್ಪಾಜಿ
ಕೂಟ ನಮಗ್ಯಾಕೆಂದ ರಾಮ ॥೧೩೬॥

ಪರಬಲವನು ಬಯಸಿ ರಣರಂಗ ಮಾಡುವ
ದೊರೆಗಳ ಗಂಡನೆಂದೆಂಬ ।
ಧರೆಯೊಳು ಬಿರಿದ ನಾ ಧರಿಸಿದೆನಲ್ಲದೆ
ದೊರೆಗಳ ಕೂಟ ಬೇಕಿಲ್ಲ ॥೧೩೭॥

ಇಂತಪ್ಪ ಬಿರಿದ ಧರಿಸಿದೆನೆಂದು ಮಾವಗೆ
ನಿಂತು ಮಾತುಗಳನಾಡಿದನು ।

ಚಿಂತೆಯಾತಕೊ ನೇಮಿಖಾನನ ನೋಡುವೆನು
ಪಂಥವ ನೋಡ ಹೇಳೆಂದ ॥೧೩೮॥

ಬಂದ ಚರರಿಗೆ ರಾಮ ಒಂದುಡುಗೊರೆ ಕೊಟ್ಟು
ಹಿಂದಕ್ಕೆ ಹೋಗಿ ನೀವೆನಲು ।
ಮಂದಿ ಕುದುರೆಯು ಬೇಡ ನಮಗಿನ್ನು ಮಾವಗೆ
ವಂದಿಸಿ ಕರಮುಗಿವೆನಿನ್ನು ॥೧೩೯॥

ಅತ್ತವರನು ಕಳುಹಿಸಿದ ರಾಮಯ್ಯನು
ಒತ್ತಿ ಮಾನ್ಯರ ಕೂಡಿಕೊಂಡು ।
ಸುತ್ತಣ ಕಣಿವೆಯ ಕಟ್ಟಿ ಕೊಲ್ಲುವೆನೆಂದು
ಅರ್ತಿಲಿ ಹೊರಟ ರಾಮಯ್ಯ ॥೧೪೦॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಚದುರ ಬಾದೂರಖಾನ ರಾಮನ ಮರೆಬಿದ್ದ
ಕದನದ ಕಥೆಯು ಪೂರಾಯ್ತು ॥೧೪೧॥

ಅಂತು ಸಂಧಿ ೧೦ಕ್ಕ ಪದನು ೯೭೨ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೧

❖

ನೇಮಿಖಾನ ಕುಮ್ಮಟದುರ್ಗ ಮುತ್ತಿದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗೀಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮ ಜಟ್ಟಂಗಿದೇವರ ಪಿಂಡ ರಾಮಯ್ಯ
ರಾಮನ ಕೃತಿಯ ಪೇಳುವೆನು ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ಬಂದ ನೇಮಿಯಖಾನನ ದಂಡನೆಲ್ಲವ
ಹಿಂದು ಮುಂದನೆ ಮಾಡಿ ಕಡಿದು ।
ಕೊಂದು ರಣದೊಳು ಸೂರೆಮಾಡಿದ ರಾಮಯ್ಯ
ಮುಂದಣ ಕಥೆಯ ಪೇಳುವೆನು ॥೩॥

ಅಷ್ಟದಿಕ್ಕಿನಲಿ ಇಳಿದುದು ಸುತ್ತುಮುತ್ತಲು
ಮುತ್ತಿಗೆ ಕುಮ್ಮಟಕಾಯ್ತು ।
ಎತ್ತ ನೋಡಲು ದುರ್ಗ ಕಣಿವೆ ಮಲೆಗಳೊಳು
ಬಿತ್ತರಿಸುತ ಖಾನರೆಲ್ಲ ॥೪॥

ಅಷ್ಟದಿಕ್ಕಿಲಿ ದಂಡು ಬಂದು ಇಳಿಯಿತೆಂದು
ಸುತ್ತಣ ಹಳ್ಳಿಪಳ್ಳಿಗಳು ।

ಮತ್ತೊಡೆದು ಬಂದು ಕುಮ್ಮಟ ಹೊಕ್ಕು ಕಂಪಿಲಗೆ
ಒತ್ತಿ ಸುದ್ದಿಯನು ಪೇಳಿದರು ॥೫॥

ದಂಡು ಬಂತೆಂಬ ಸುದ್ದಿಯ ಕೇಳಿ ರಾಮಯ್ಯ
ಉಂಡು ಹೊರ ಚಾವಡಿಯೊಳಗೆ ।
ಢಂಢಾಮ ಢಮ ಎಂದು ಹೊಯ್ಸಿ ನಗಾರಿಯ
ಮಂಡಲಪತಿ ಹೊರಹೊಂಟ ॥೬॥

ಕರೆಸಿ ತನ್ನಯ ಮಂದಿ ಮಕ್ಕಳಿಕ್ಕಟಿಗರ
ಬಿರಿದಂಕ ಮನ್ನೆಯರನೆಲ್ಲ ।
ಹರುಷದಿ ಗಂಧ ಪರಿಮಳವನು ಕೊಟ್ಟನ್ನು
ತುರುಕರ ದಂಡಿನ ಮೇಲೆ ॥೭॥

ಬೊಬ್ಬೆಯಬ್ಬರಗಳು ಹತ್ತಿ ಕುಮ್ಮಟದೊಳು
ಇಬ್ಭಾಗವಾಯ್ತು ಪಟ್ಟಣವು ।
ಗಬ್ಬಿ ರಾಮನ ಮನ್ನೆಯರೆಲ್ಲ ಕೂಡಿದರು
ಉಬ್ಬಿ ಹಿಡಿದರು ವೀಳ್ಯಯವ ॥೮॥

ಮರ ಬಿಲ್ಲು ಕತ್ತಿ ಈಟಿಯು ಬಾಣ ಪೆಟ್ಟಲು
ಬರುಚಿ ಕಠಾರಿ ಕೈಯಂಬು ।
ಸರಸದಿ ಆನೆ ಕುದುರೆ ಕಾಲ್ಬಲ ಮಂದಿ
ಅರುವತ್ತು ಸಾವಿರ ಕೂಡಿ ॥೯॥

ಧರೆಯೊಳು ಕುಮ್ಮಟದರಸಿನ ಕಾರ್ಯಕ್ಕೆ
ಹರುಷವ ತಾಳಿ ಮನದೊಳಗೆ ।
ಚಾರಮರಯನ ಮಕ್ಕಳ ಕರೆಸಿದ
ಆರು ಸಾವಿರ ಕುದುರೆ ಪೌಜ ॥೧೦॥

ಧೀರರು ಹೋಗಿ ದಂಡಿಗೆ ನೀವು ಇದಿರೇರಿ
ಸ್ವಾರಿಯ ಮಾಡಬೇಕೆಂದ ॥೧೧॥

ಧೀರರು ಹೋಗಿ ದಂಡಿಗೆ ತಬಕಿಲಿ ವೀಳ್ಯವ
ಬಿಟ್ಟನು ದಂಡಿಗೆ ಇದಿರ ।

ಬೆಟ್ಟವ ಸುತ್ತಿ ಹೋಯಿತು ಕುದುರೆಯ ಪೌಜು
ನೆಟ್ಟನೆ ನೇಮಿ ಎಲ್ಲೆನುತ ॥೧೨॥

ಚಾಮರರಾಯನ ಮಕ್ಕಳಿಬ್ಬರು ಕೂಡಿ
ಆರು ಸಾವಿರ ಕುದುರೆಯಲಿ ।
ದಾರಿಯ ಪಿಡಿದು ಬರುವಂಥ ಗುನುಗನು
ಸೂರೆಯ ಮಾಡಿನ್ನು ಸುಲಿದು ॥೧೩॥

ಮುನ್ನೂರು ಪೌಜಿಯ ಕೈಸೆರೆ ಹಿಡಿದರು
ಹನ್ನೊಂದು ಆನೆಯ ತೆಗೆದು ।
ಚೆನ್ನರಾಮಯ್ಯನ ಬಳಿಗೆ ಬಂದು ಒಪ್ಪಿಸಿ
ಉನ್ನತ ಹರುಷದೊಳವರು ॥೧೪॥

ಗಡಿಯ ಕಾಲವ ಕಾವ ಕಾಟನಾಯಕ ಹೋಗಿ
ಕಡೆಯಕಲ್ಲನು ನೀನು [ಸೂ]ರೆ ।
ಬಿಡಬೇಡ ಬರುವಂಥ ಖಾನರನವ
ಕಡಿದು ಹಿಂದಕೆ ಹಾಕೊ ನೀನು ॥೧೫॥

ಒಡೆಯನ ಮಾತ ಕೇಳುತ ಕಾಟನಾಯಕ
ತಡೆಯದೆ ವೀಳ್ಯವ ಹಿಡಿದು ।
ಒಡನೊಂದು ಸಾವಿರ ಮಂದಿಯ ಕರಕೊಂಡು
ಬಿಡದೆ ಹತ್ತಿದ ಕಡೆಯಕಲ್ಲ ॥೧೬॥

ಕಣಿವೆಯ ಕಟ್ಟಿ ಬರುವಂಥ ಖಾನರನೆಲ್ಲ
ಭಿನ್ನವಿಲ್ಲದೆ ಕೊಂದನವರ ॥೧೭॥

ಐವತ್ತು ನೂರು ಕುದುರೆಯ ಹಿಡಿದುಕೊಂಡರು
ಬೈಗಿನ ಹೊತ್ತಿಗೆ ಬಂದು ।
ಸೈಮಾಡಿ ಒಪ್ಪಿಸಿ ಒಡೆಯ ರಾಮಯ್ಯಗೆ
ಕೈಯ ಮುಗಿದರು ಮನ್ನೆಯರು ॥೧೮॥

ಮಲೆಯ ಕಾವಲ ಕಾವ ಹೊಲೆಯರ ಹೊನ್ನುಗ
ಸಲೆ ಕೋಡ್ಗಲ್ಲ ನೀನೇರೊ ।

ಒಳಹೊಕ್ಕು ಬಾಹಂಥ ಖಾನ ವಜೀರರ
ಬಲಿಯನಿಕ್ಕಿಸೊ ಕಣಿವೆಯೊಳಗೆ ॥೧೯॥

ಪಟ್ಟಿ ವೀಳ್ಯವ ಕೊಟ್ಟು ಅಟ್ಟಿದನಲ್ಲಿಗೆ
ಬಿಟ್ಟು ಸೂಟಿಯನವರು ಹೋಗಿ ।
ನೆಟ್ಟನೆ ಕೋಡ್ಗಲ್ಲನೇರಿ ನೋಡಿದರಾಗ
ಬಿಟ್ಟಿಹ ದಂಡಿನ ಸೊಬಗ ॥೨೦॥

ಒಳಹೊಕ್ಕು ಬರುವಂಥ ಕುದುರೆ ಖಾನರನೆಲ್ಲ
ಒಳಿತಾಗಿ ಹೋಗಬಿಟ್ಟುಕೊಂಡು ।
ಇಳಿದರು ಕಲ್ಲಿನ ಸುತ್ತಡ್ಡಗಟ್ಟಿಕೊಂಡು
ಬಳೆಯ ಹೇರನು ಒಡೆವಂತೆ ॥೨೧॥

ಕಡಿದು ಕಡಿದು ಒಟ್ಟಿ ತಲೆಗಳ ಮಲೆಯೊಳು
ಅಟ್ಟಿ ಹಿಂದಕೆ ಹಾಕಿದರು ।
ಕೊಟ್ಟದ ಬೇಡರು ಕೂಡಿ ಕುದುರೆಗಳ ಹೊಯ್
ದೊಟ್ಟಿ ಕೆಡಹಿದರು ರಾವುತರ ॥೨೨॥

ನೂರೊಂದು ಕುದುರೆಯ ಆರಿಸಿ ಹಿಡಿದರು
ಸೂರೆ ಮಾಡಿದರು ಅರಿಬಲವ ।
ಕಾರಣಿಕದ ರಾಮಯ್ಯಗೊಪ್ಪಿಸಿದರು
ಧೀರರು ಕೈಮುಗಿದರಾಗ ॥೨೩॥

ಬೆಟ್ಟದ ಸಿಂಗನಾಯಕಗೊಂದು ವೀಳ್ಯವ
ಕೊಟ್ಟನು ನಗುತ ರಾಮಯ್ಯ ।
ಹಟ್ಟಿಕಾರರು ಹಳ್ಳಿಕಾರರ ಕೂಡಿಸಿ
ನೆಟ್ಟನೆ ಹಿರಿಯ ಕಣಿವೆಗೆ ॥೨೪॥

ಜಡಿದೇರಿ ಬರುವಂಥ ದೊಡ್ಡ ಪೌಜನು ಕಂಡು
ಕಡೆಯ ಕಣಿವೆಯ ಕಟ್ಟಿದರು ।
ಸುತ್ತಡ್ಡಗಟ್ಟಿಕೊಂಡರು ದೊಡ್ಡ ಪೌಜನು
ಮುತ್ತಿಕೊಂಡರು ಅಡವಿಯೊಳಗೆ ॥೨೫॥

ಎತ್ತ ನೋಡಲು ಅಂಬಿನ ಮಳೆ ಗಾಯದಿ
ಸತ್ತ ಖಾನರು ಲೆಕ್ಕವಿಲ್ಲ ॥೨೬॥

ಸಾವಿರದೇಳ್ನೂರು ಮಂದಿಯ ಕೊಂದರು
ಗಾಯಾದ ಮಂದಿ ಕಡೆಯಿಲ್ಲ ।
ಆವಿನ ಹಿಂಡು ಬೆದರಿದಂತೆ ತುರುಕರ ದಂಡು
ನೋವಿಂದ ಹಿಂದಕ್ಕೋಡಿದರು ॥೨೭॥

ಅರವತ್ತು ಕುದುರೆಯ ಹಿಡಿಕೊಂಡರಾಕ್ಷಣ
ಧರ್ಮಗಾಳೆಯ ಹಿಡಿಸುತಲಿ ।
ಭರದಿಂದ ಬಂದು ರಾಮಯ್ಯಗೆ ಒಪ್ಪಿಸಿ
ಕರಗಳ ಮುಗಿದು ಮನ್ನೆಯರು ॥೨೮॥

ಹೊಳೆಯ ದಂಡೆಯ ಹಿಡಿದು ಬರುವಂಥ ದಂಡನು
ಇಳಿಯ ಹೊಡೆದು ಹಿಂದಕಟ್ಟಿ ॥೨೯॥

ಗೊಂದಿಯ ಕಣಿವೆಯ ಸುತ್ತಡ್ಡಗಟ್ಟಿದ
ಬಂಧಿಸಿ ತನ್ನ ಮಂದಿಯನು ।
ಬಂಥಂಥ ಖಾನರ ಕಡಿದೊಟ್ಟಿದ ಮಾಚ
ಸಂಧಿನೊಳ್ ಹಿಡಿದ ವಾಜಿಗಳ ॥೩೦॥

ಇನ್ನೂರು ಕುದುರೆಯ ಕೈಸೆರೆಯ ಹಿಡಿದನು
ಚೆನ್ನಿಗ ರಾಮನ ಬಳಿಗೆ ॥೩೧॥

ಮಂದಿಯನೊಯ್ಯಗೊಡದೆ ಗುಜ್ಜಲ ಓಬ
ತಂದೆಯ ಕಾಲದ ಹಳಬ ।
ಇಂದಿನ ಕಾರ್ಯವೆಷ್ಟುಂಟು ಅಷ್ಟನೆ ಮಾಡಿ
ಹಿಂದಕ್ಕೆ ತಿರಿಗಿ ಬಾಯೆಂದ ॥೩೨॥

ಎಲ್ಲರಿಗೊಂದೊಂದು ಪಟ್ಟಿ ವೀಳ್ಯವ ಕೊಟ್ಟು
ನಿಲ್ಲದೆ ಹೋಗಿ ನೀವೆನುತ ।
ಬಲ್ಲಿದ ರಾಮಯ್ಯ ಕಳುಹಲು ಮಾನ್ಯರು
ಎಲ್ಲರು ತೆರಳಿ ಸಾಗಿದರು ॥೩೩॥

ಎಮ್ಮೆಯಗುಡ್ಡಕೆ ಹತ್ತಿ ತೋವರನಿಟ್ಟು
ಹೆಮ್ಮೆಯ ತುರುಕರು ಬರುವಾಗ ।
ಗಮ್ಮನೆ ದಾರಿಯ ಕಟ್ಟಿ ಅವರನಟ್ಟಿ
ದಮ್ಮನೆ ದಣಿಸಿ ಕೊಲ್ಲುತಲಿ ॥೩೪॥

ಆರುಸಾವಿರ ಬಲ ಕೂಡಿತು ಅಲ್ಲಿಗೆ
ದಾರಿದಾರಿಯ ಕಟ್ಟಿಕೊಂಡು ।
ದೂರಕರು ಘೋರಡವಿಯನೆ ಬಿದ್ದು
ದಾರಿಯರಿಯದೆ ಅಡೆಯೆದ್ದು ॥೩೫॥

ಮನ್ನಾಲ ಮಾಚನು ತನ್ನ ಮಂದಿಯ ಕೂಡಿ
ಮುನ್ನೂರು ಬಿಲ್ಲು ಈಟಿಗಳು ।
ಚೆನ್ನಾಗಿ ಇರಿದಿರಿದು ನೂಕುತ ಕುದುರೆಯ
ಚೆನ್ನಾಗಿ ರಾಮಗೊಪ್ಪಿಸುತ ॥೩೬॥

ಒಕ್ಕಲಿಗರ ಮುದ್ದ ಹೊಕ್ಕನು ರಣದೊಳು
ಸೊಕ್ಕಾನೆ ಹಿಂಡನು ಕಂಡು ।
ಗಕ್ಕನೆ ನಿಂತು ಮುಂದಕೆ ಬರಲೀಸದೆ
ಸಿಕ್ಕಿದವೆಲ್ಲವ ಕಡಿದ ॥೩೭॥

ಖಾನಖಾನರನೆಲ್ಲ ಕಡಿದು ಹಿಂದಕೆ ಹಾಕಿ
ತಾನೊಂದು ನೂರು ವಾಜಿಯನು ।
ಮಾನದಿ ತಂದು ರಾಮಯ್ಯಗೆ ಒಪ್ಪಿಸಿ
ಖಾನರ ಗಂಡನೆಂದೆನುತ ॥೩೮॥

ಆನೆಯಕಲ್ಲಿಗಾತುಕೊಂಡರು ಶರಬರು
ಮೌನದೊಳಡಗಿಕೊಂಡಿಹರು ।
ಜಾಣ ಖಾನನು ಒತ್ತಿ ಬರುವ ದಾರಿಯ ಕಟ್ಟಿ
ಮೀನಿಗರ ಲಕ್ಕ ಹೊಕ್ಕಿರಿದ ॥೩೯॥

ರಕ್ಕಸ ಮಾದನು ಬುಕ್ಕನ ಪಾಲನು
ಹೊಕ್ಕು ಖಾನರ ಮೇಲೆ ಇರಿದ ॥೪೦॥

ಮಾದಿಗ ಹಂಪನು ಕೋಟಿಗರ ದ್ಯಾವನು
ಆದವನ್ನಿಯ ಗಿರಿಯನವ[ನು] ।
ಸಂಧಿಸಿ ಹೊಕ್ಕು ತಲೆಗಳನು ಚಂಡಾಡಿದ ವಿ
ನೋದವನೇನ ಬಣ್ಣಿಸುವೆ ॥೪೧॥

ಎಲ್ಲ ಮಾನ್ಯರು ಕೂಡಿ ಕಣಿವೆಗಳನು ಕಟ್ಟಿ
ಬಲ್ಲಂತೆ ಕಾರ್ಯಮಾಡಿದರು ।
ಮೆಲ್ಲನೆ ಹತ್ತುಸಾವಿರ ತುರುಕರ ಕೊಂದು
ಉಲ್ಲಾಸದಲಿ ತಿರುಗಿದರು ॥೪೨॥

ಮುನ್ನೂರು ಕುದುರೆ ಮೂವತ್ತಾನೆ ಕೈಸೆರೆ
ಹನ್ನೊಂದು ಮಂದಿ ಖಾನರನು ।
ಚೆನ್ನಾಗಿ ರಾಮಗೊಪ್ಪಿಸಿ ಕೈಮುಗಿದರು
ಮನ್ನೆಯರೆಲ್ಲ ಒಂದಾಗಿ ॥೪೩॥

ಹೊತ್ತು ಹೋಯಿತು ಕತ್ತಲಾಯಿತು ಅಲ್ಲಿಗೆ
ಸುತ್ತ ಹೋಗಿರ್ದವರೆಲ್ಲ ।
ಮೊತ್ತದಿ ಬಂದು ರಾಮಯ್ಯಗೆ ಕೈಮುಗಿದು
ಒತ್ತಿ ನಿಂದರು ಎಡಬಲದಿ ॥೪೪॥

ಮಂದಿಯ ಹಾವಳಿ ಘನವಾಗಿ ತೋರಿತು
ನೊಂದುಹೋದರು ತುರುಕರೆಲ್ಲ ॥೪೫॥

ಹತ್ತೆಂಟು ಸಾವಿರ ಲಕ್ಷ ವಾಜಿಯ ಬಲವು
ಹೊತ್ತು ಮುಳುಗಿತ್ತು ಒಂದಿನಕೆ ।
ಚಿತ್ತೈಸು ನೇಮಿ ಬೇಡರ ಪಡೆ ಹೆಚ್ಚಿತ್ತು
ಎತ್ತ ನೋಡಲು ಕಲ್ಲು ಮುಳ್ಳು ॥೪೬॥

ಹಿಂದೆ ಬಾಹಂತ ಗುನುಗನೆಲ್ಲ ಸವರಿದರು
ಮಂದಿ ಮಕ್ಕಳನೆಲ್ಲ ಕಡಿದು ।
ಹೊಂದಿ ಬಾಹಂತ ಖಾನರನೆಲ್ಲ ಕಡಿದರು
ಒಂದು ದಿನದ ಕಾಳಗಕೆ ॥೪೭॥

ನೊಂದುಕೊಂಡನು ನೇಮಿ ಮನದೊಳು ಚಿಂತಿಸಿ
ಮುಂದೆ ಹೋಗುವ ತೆರ ಹೇಗೆ ।
ಬಂಧಿಸಿ ರಾಮನ ಹಿಡಿವೊರೆ ಆಶ್ಚರ್ಯ
ವೆಂದನು ತನ್ನ ಮನದೊಳಗೆ ॥೪೮॥

ಇಂದಿನ ದಿನ ನಮ್ಮ ಬಲವೆಲ್ಲ ನೊಂದಿತು
ಮುಂದೆ ರಾಮನ ಬಲ ಕೂಡಿ ।
ಸಂಸುಸಂದುಗಳು ಗೊಂದಿ ಕಣಿವೆಯ ಕಟ್ಟಿ
ಹೊಂದಲೀಸರು ಕುಮ್ಮಟಕೆ ॥೪೯॥

ನಾಳಿನ ದಿನದಲ್ಲಿ ಏಳಬೇಕೆಲೊ ದಂಡು
ಧೂಳಿಗೋಟೆಯ ಮಾಡಬೇಕು ।
ಕೋಳ ಹಿಡಿದು ಕುಮ್ಮಟವ ಮುತ್ತಲಿ ಬೇಕು
ಪಾಳೆವ ನಾವಿಳಿಯಬೇಕು ॥೫೦॥

ಬೆಳಗಾದರೆ ಕೂಚೆಯ ಮಾಡಿಸಿ ದಂಡ
ಮೇಳೈಸಿ ಮುತ್ತ ಕಳುಹಿದನು ।
ಕಾಳಗವನು ಮಾಡಿ ಹೊಕ್ಕು ಕುಮ್ಮಟವನು
ಮೇಳೈಸಿ ಮುತ್ತಲು ಬೇಕು ॥೫೧॥

ಬಂದ ಖಾನರಿಗೆಲ್ಲ ಒಂದು ವೀಳ್ಯವ ಕೊಟ್ಟು
ಅಂದದೊಳವರ ಕಳುಹಿದನು ।
ಮುಂದೆ ಮಾಡುವ ಕಾರ್ಯದ ಆಲೋಚನೆಯಿಂದ
ಹೊಂದಿ ಮಲಗಿದ ನೇಮಿಖಾನ ॥೫೨॥

ಇತ್ತ ರಾಮನು ತನ್ನ ಮಂದಿ ಮಕ್ಕಳ ಕರೆಸಿ
ಮುತ್ತಿಗೆ ಬರುವುದು ನಾಳೆ ।
ಒತ್ತರಿಸಿ ತುರುಕರು ಬರುವರು ನಿಲ್ಲದೆ
ಒತ್ತಿ ಕಡಿಯಲಿಬೇಕು ನಾವು ॥೫೩॥

ಬರುವಂಥ ದಾರಿ ಕಣಿವೆಗಳ ಕಟ್ಟಿರಿ ನೀವು
ದೊರೆಮಕ್ಕಳೆಲ್ಲರು ಸಹಿತ ।

ಇರದೆ ನೀವು ಹೋಗಿ ಹನ್ನೆರಡು ಸಾವಿರ ಬಲ
ನೆರೆದಂಥ ಮನ್ನೆಯರೆಲ್ಲ ॥೫೪॥

ಸಂಜೆಯ ಊಟವನುಂಡು ನೀವ್ಹೋಗಿರೊ
ಗಂಡಿ ಕಣಿವೆಗಳೊಳು ಇಳಿದು ।
ದಂಡು ಬರುವುದ ನೋಡಿ ಕಂಡು [ಹೇ]ಳಿರೋ ಎಂದು
ಗಂಡುಗಲಿಗಳಿಗೆ ಪೇಳಿದನು ॥೫೫॥

ಅಂದಿನ ವಾಲಗ ಹರಿಯಿತು ರಾಮಯ್ಯ
ತಂದೆಯ ಬಳಿಗೆದ್ದು ಬಂದ ।
ವಂದಿಸಿ ಕರಗಳ ಮುಗಿದು ಬಿನ್ನೈಸಿದ
ಅಂದಿನ ರಾಜ್ಯಕಾರ್ಯವನು ॥೫೬॥

ಕೊಂದರು ನಮ್ಮ ಮನ್ನೆಯರು ಕಣಿವೆಯ ಕಟ್ಟಿ
ನೊಂದಿತು ನೇಮಿಯ ಬಲವು ।
ಸಂದು ಹೋಯಿತು ಹತ್ತು ಸಾವಿರ ಖಾನರು
ತಂದರು ಕುದುರೆ ಸಾವಿರವ ॥೫೭॥

ನಾಳಿನ ದಿನದಲ್ಲಿ ಕಾಳಗ ಬಂತೆಮಗೆ
ಹೇಳುವುದೇನು ಬೈಚಪ್ಪ ।
ಮಂದಿ ಮಕ್ಕಳನೆಲ್ಲ ಕಳುಹಿದ ಮನೆಗಳಿಗೆ
ಬಂದನು ತನ್ನರಮನೆಗೆ ॥೫೮॥

ಅರಸು ರಾಮಯ್ಯನು ಕರೆದು ಕಾಟಣ್ಣನ
ಹೊರ ಚಾವಡಿಯಲ್ಲಿ ನೀನು ।
ಇರುವಂಥ ಮಂದಿ ಮಕ್ಕಳನೆಲ್ಲ ಕೂಡಿಕೊಂ
ಡಿರು ಹೋಗೊ ಬೇಗದೊಳುಂಡು ॥೫೯॥

ಕಾಟಣ್ಣಗಪ್ಪಣೆ ಕೊಟ್ಟು ರಾಮಯ್ಯನು
ಕೋಟಲೆಯೊಳು ಉಂಡು ಮಲಗಿ ।
ಮೇಳೈಸಿ ದುರ್ಗದ ಕಾವಲ ಮಂದಿಯ ಬ
ಹಳ ಎಚ್ಚರವೆನುತೆದ್ದ ॥೬೦॥

ತಂದೆಯ ಪಾದಕ್ಕೆ ಬಿದ್ದು ರಾಮಯ್ಯನು
ವಂದಿಲಿ ಕಾಟಣ್ಣ ಸಹಿತ ॥೬೧॥

ಕುಕ್ಕಟ ಕೂಗಿದ ಮೇಲೆ ರಾಮಯ್ಯನು
ಚೊಕ್ಕ ಭೋಜನ ಮಾಡಿಕೊಂಡು ।
ಗಕ್ಕನೆ ಹೊರಟನು ಒಳಲಾಯವ ಪೊಕ್ಕು
ರಕ್ಕಸ ಬೊಲ್ಲನ ನೋಡಿ ॥೬೨॥

ಬೊಲ್ಲನ ಹಲ್ಲಣಿಸಿ ಪೂಜೆಯ ಮಾಡಿರೊ
ಮೆಲ್ಲನೆ ತೆಕ್ಕೊಂಡು ಬನ್ನಿ ।
ಎಲ್ಲ ವಾಜಿಗಳನು ಶೃಂಗರಿಸಿರೊ ಶೀಘ್ರ
ನಿಲ್ಲದೆ ಕಾಟಣ್ಣನೆಡೆಗೆ ॥೬೩॥

ಹೊನ್ನಂದಣವೇರಿ ಹೊರಟನು ರಾಮಯ್ಯ
ತನ್ನ ಮಾನ್ಯರ ಕೂಡಿಕೊಂಡು ।
ಚೆನ್ನಾಗಿ ಹೊರ ಚಾವಡಿಯಲ್ಲಿ ಕುಳಿತನು
ಉನ್ನಿಸಿದನು ಮನದೊಳಗೆ ॥೬೪॥

ಬೇಗ ಬೈಚಪ್ಪನ ಮಕ್ಕಳ ಕರೆಸಿದ
ಸೋಗೆಗಣ್ಣರಸು ರಾಮಯ್ಯ ।
ದೇವಿಸೆಟ್ಟಿಯಲಿಂಗ ಬೇವಿನ ಸಿಂಗಯ್ಯ
ಕೋವಿದ ಕಾಟಿಗರ ದ್ಯಾವ ।
ಮಾವ ಮಂಚಣ್ಣನ ಮಕ್ಕಳು ಸಹವಾಗಿ
ಭೋರನೆ ಕರೆಸಿದೆಲ್ಲರನು ॥೬೫॥

ಬಾದೂರಖಾನನು ಮಹಿಮೆಯ ಖಾನನು
ಕಾದುವ ಬಾಣದ ಬಸವ ।
ಆದವನ್ನಿಯ ಅರಸುಮಕ್ಕಳ ಕರೆಸಿದ
ಬಾದಾವಿ ಬಸವ ರಾವುತನ ॥೬೬॥

ಹೊರ ಚಾವಡಿಯಿಂದ ಹೊರಟನು ರಾಮಯ್ಯ
ತೊರೆ ಮಾವಿನಮರಕಾಗಿ ।

ಬಿರಿದನುಗ್ಗಡಿಸುವ ಭಟರೊಡಗೂಡಿನ್ನು
ಅರಿರಯರಗಂಡನೆನುತ ॥೧೭॥

ಎಲ್ಲರಿಗೊಂದೊಂದು ಒಳ್ಳೆ ತೇಜಿಯ ಕೊಟ್ಟು
ಬೊಲ್ಲನ ತರಿಸಿ ಬೇಗದೊಳು ।
ನಿಲ್ಲದೆ ಅದನೇರಿ ದುವ್ವಾಳಿಸುತ ರಾಮ
ಎಲ್ಲ ಮಾನ್ಯರ ಕೂಡಿಕೊಂಡು ॥೧೮॥

ಇತ್ತ ರಾಮಯ್ಯನು ಕತ್ತಿ ಝಾಮಿನೊಳಿರೆ
ಅತ್ತ ಸುರಿತಾಳ ತಾನೆದ್ದು ।
ಒತ್ತಿ ಕುಮ್ಮಟಕೆ ಮುತ್ತಿಗೆ ಮಾಡಬೇಕೆಂದು
ಉತ್ತಮಖಾನರ ಕರೆಸಿ ॥೧೯॥

ಮೊದಲು ಪೈಜೆಯನು ಮಾಡಿಸಿರೊ ನೀವ್ ಬೇಗದಿ
ಸದರಿಗೆ ಬಂದ ಸುರಿತಾಳ ॥೨೦॥

ಮೊದಲ ಕೂಚಿಗೆ ದಂಡೆಲ್ಲ ಎಚ್ಚರ ಹುಟ್ಟಿ
ಬೆದರಿ ಎದ್ದರು ತಮತಮಗೆ ।
ಮುದದಿಂದ ಅನ್ನಪನ್ನಗಳ ಮಾಡಿಸಿಕೊಂಡು
ಹದಮಾಡಿ ರೊಟ್ಟಿಯ ಸುಟ್ಟು ॥೨೧॥

ಎರಡನೆ ಕೂಚಿಗೆ ಹೊರಟರು ಉಂಡುಟ್ಟು
ಬಿರಿದಂಕ ಖಾನರು ಎಲ್ಲ ।
ಮರೆಯದೆ ಬಗಲಿಗೊಂದು ರೊಟ್ಟಿಯ ಕಟ್ಟಿ
ತೆರಳಿ ಮುಂದಕ್ಕೆ ಸಾಗಿದರು ॥೨೨॥

ಮೂರನೆ ಕೂಚಿಗೆ ತೆರಳಿತು ದಂಡೆಲ್ಲ
ದಾರಿಕಾರರ ಕರಕೊಂಡು ।
ವಾರುವ ಲಕ್ಷ ಮಂದಿಯು ಹತ್ತು ಲಕ್ಷವು
ಧೀರರು ನಡೆದರರ್ತಿಯಲಿ ॥೨೩॥

ಅಲ್ಲಲ್ಲಿ ಕುದುರೆಯ ಪೌಜುಗಳೆದ್ದು ನಡೆದವು
ಝಲ್ಲುಝಲ್ಲೆನುತ ಖಾನರರು ।

ನಿಲ್ಲದೆ ಆನೆಯ ಪೌಜು ಹೊರಟವು ಬೇಗ
ಬಿಲ್ಲಿನ ಮಂದಿ ಕಡೆಯಿಲ್ಲ ॥೭೪॥

ಎದ್ದನು ನೇಮಿ ಆನೆಯ ಹತ್ತಿ ನಡೆದನು
ಮುದ್ದುಖಾನರ ಕೂಡಿಕೊಂಡು ।
ಉದ್ದುರುಟದ ರಾಹುತರೆಲ್ಲ ಮುಂದಾಗಿ
ಎದ್ದರು ಕುಮ್ಮಟಕಾಗಿ ॥೭೫॥

ಖಾನ ನೇಮಿಯ ಕೂಡ ನಾಲ್ಕು ಲಕ್ಷ ವಾಜಿಯು
ಆನೆಯ ಹಿಂಡೊಂದು ಲಕ್ಷ ।
ಮಾನಾವತಿಗಳು ಕಾಲ್ಬಲ ಹತ್ತು ಲಕ್ಷವು
ಮೌನವಿಲ್ಲದೆ ನಡೆದ ಖಾನ ॥೭೬॥

ಪಾಳೆಗಾರರ ಮಂದಿ ಮುಂಜೂಣಿ ನಡೆಯಿತು ಕ
ಹಳೆ ಢಮಾಮಿ ಹೊಯ್ಯುತಲಿ ॥೭೭॥

ಕೆಂಧೂಳು ಮುಗಿಲು ಆಕಾಶಕೆ ಮುಸುಗಿತು
ಬಂದಿತು ಮುಂದಕ್ಕೆ ದಂಡು ।
ಢಂ ಢಮಢಮ ಎಂದು ಭೇರಿಯ ಹೊಯ್ಯುತ
ಗಂಡಿಯ ಒಳಹೊಕ್ಕರಾಗ ॥೭೮॥

ಕೆಂಡದ ಮೇಲೆ ನೊರಜು ಮುತ್ತುವಂದದಿ
ದಂಡೆಲ್ಲ ಒಂದೆ ವಾದ್ಯದೊಳು ।
ಹಿಂಡಾನೆ ಪೌಜು ಮುಂದಕೆ ಸಾಗಿ ಬಂದಿತು
ಕಂಡರು ರಾಮನ ಭಟರು ॥೭೯॥

ಮುಂಜೂಣಿ ಕುದುರೆ ಬಂದವು ಕುಮ್ಮಟಕಾಗಿ
ಅಂಜದೆ ಕುದುರೆಯ ಪೌಜು ।
ಮಂಜು ಗುಡ್ಡಕೆ ಮುಸುಕುವಂತೆ ತೆರಳಿತು
ಸಂಜೆ ಮಬ್ಬಾಯಿತು ಕುಮ್ಮಟವು ॥೮೦॥

ಸುತ್ತಣ ಕಣಿವೆಯ ಕಾದಿರ್ದ ರಾಮನ ಬಲ
ಮೊತ್ತದೊಳೊಂದುಂಡೆಯಾಗಿ ।

ಕತ್ತಿಯ ಕಿತ್ತು ಕಹಳೆಯ ಹಿಡಿಸಿ ನಡೆದರು
ಮುತ್ತಿಕೊಂಡರು ಮುಂಜೂಣಿಯಲಿ ॥೮೧॥

ನಡು ಬೆನ್ನು ತೊಡೆ ತೋಳು ಕುಳಿಯಳ್ಳೆ ಕೈ ಕಾಲು
ಒಡನೆ ಉರುಳಿ ಬಿದ್ದ ಹೆಣನು ।
ಜಡಿದು ಭರ್ಜಿಯಲಿಂದ ಇರಿವುತ ಶಬರರು
ಕಡಿದರು ಚೂಣಿಯನೆಲ್ಲ ॥೮೨॥

ತಲೆಗಳು ಉದುರಿ ತೋಳ್ಗಳ ಕತ್ತರಿಸುತ
ಮೊಲೆಕಟ್ಟು ಎದೆಯ ತಟ್ಟುಗಿದು ।
ಜಾಲರೆ ಒಡೆದು ಕರುಳು ಕುಪ್ಪೆ ಬಿದ್ದವು
ಗಲಭೆಯಾಯಿತು ರಣರಂಗ ॥೮೩॥

ಬಿಲ್ಲಿನ ಮಂದಿ ಹೊಕ್ಕಿರಿದರು ಖಾನರ
ನೆಲ್ಲ ಮುಸುಕಿ ಕೊಲ್ಲುತಿಹರು ।
ಕಲ್ಲಕೋಟೆಯ ಚಿಕ್ಕ ಕಾಮಗೇತಿಯ ತಿಮ್ಮ
ಜಲ್ಲಿ ಬಿಲ್ಲಿನ ಬುಕ್ಕಿನಾಯ್ಕ ॥೮೪॥

ಎಲ್ಲ ಖಾನರ ಕೂಡ ರಹುಡೆಖಾನನ ಮೇಲೆ
ಬಿಲ್ಲಿಂದಲಿಟ್ಟು ಕೆಡಹಿದರು ।
ಬಲ್ಲಿದ ಖಾನ ವಜೀರ ಬಿದ್ದನು ಎಂದು
ಎಲ್ಲ ಖಾನರು ಮರುಗಿದರು ॥೮೫॥

ಇಪ್ಪತ್ತು ಸಾವಿರ ವಜೀರರೆಲ್ಲರು
ತೊಪ್ಪನೆ ತೊಯ್ದು ರಕ್ತದಲಿ ॥೮೬॥

ಕೋಪದಿ ನೇಮಿ ಆನೆಯ ಮೀಟಿ ನಡೆದನು
ಧೂಪಿಸಿ ವಜೀರರೆಲ್ಲ ।
ಆಪತ್ತು ಬಂದಿತು ತುರುಕರಿಗೆನುತಲಿ
ರೂಪದೋರಿದ ರಣದೊಳಗೆ ॥೮೭॥

ಎಂಬತ್ತು ಸಾವಿರ ವಾಜಿಯು ಏರಿತು
ದೊಂಬಿಯ ತುಂಬೂರಖಾನ ।

ಕುಂಭಿನಿಪತಿ ರಾಮನ ಮಂದಿಯ ಮೇಲೆ
ಮುಂಬಾಗಿನಲಿ ಏರಿ ಬಂದ ॥೮೮॥

ಜೋಡು ಸಿಂಗಾಡಿ ಪೆಟಲುಗಳಿಂದ ಶಬರರು
ಕೂಡಿ ಬಂದೊದಗಿ ಮುತ್ತಿದರು ।
ಕಾಡ ಬೇಡರ ಪಡೆ ಹಿಂದುಮುಂದಾಗಲು
ನೋಡಿದ ರಾಮಯ್ಯ ನಗುತ ॥೮೯॥

ಪಡೆ ಮುರಿದೋಡಿ ಬರುವದ ಕಂಡು ರಾಮಯ್ಯ
ಒಡನೆ ಬೊಲ್ಲನ ಮೀಟಿದನು ।
ನಡೆಯಿತು ರಾಮನ ಹಿಂದೆ ಮನ್ನೆಯರೆಲ್ಲ
ಒಡೆಯನ ಎಡಬಲದಲ್ಲಿ ॥೯೦॥

ಹೊಕ್ಕು ರಾಮಯ್ಯ ರಣರಂಗದೊಳ್ ತುರುಕರ
ರಕ್ಕಸ ಪಡೆಯನೆಲ್ಲವನು ।
ಸೊಕ್ಕಾನೆ ಕದಳಿಯ ವನದೊಳು ಹೊಡೆದಂತೆ
ಹೊಕ್ಕಿರಿದನು ರಣಕೊಬ್ಬ ॥೯೧॥

ಉರುಳಿತು ತುರುಕ ಜರ ಪಡೆ ಲೆಕ್ಕವಿಲ್ಲದೆ
ತಿರುಗಿದ ರಾಮಯ್ಯನೊಡನೆ ॥೯೨॥

ಹಿಂದುಮುಂದೆಲ್ಲರ ಕೂಡಿಸಿ ರಾಮಯ್ಯ
ಮಂದಿಯ ಸಂದಣಿಯಿಂದ ।
ಬಂದನು ಕುಮ್ಮಟಕಾಗಿ ಮಾನ್ಯರ ಕೂಡಿ
ನಿಂದನು ದುರ್ಗದ ಮುಂದೆ ॥೯೩॥

ರಣಮಯವಾಯಿತು ಹೆಣಮಯವಾಯಿತು
ಎಣಿಕೆಯ ಮಾಡುತ ನೇಮಿ ।
ಕೆಣಕಿ ಹೊಕ್ಕೆವು ರಾಮನ ಕೂಡೆ ಜಗಳವು
ಅಣಕವು ಅಲ್ಲ ಬಲ್ಲಿದನು ॥೯೪॥

ಭಾಪುರೆ ಭಾಪು ರಣರಂಗದೊಳ್ ರಾಮನು
ರೂಪುದೋರಿಸಿ ಹೊಕ್ಕು ಹೊರಟ ।

ಈ ಪರಿ ರಾಯರಾವುತರ ಕಾಣೆನು ಎಂದು
ಭೂಪ ನೇಮಿಯು ಹೊಗಳಿದನು ॥೯೫॥

ಸಿಡಿಲೆರಗಿದಂತೆ ಹೊಕ್ಕನು ತನ್ನ ಮಂದಿಯ
ಕಡೆಹಾಯಿಸಿಕೊಂಡು ತಾ ಹೊರಟ ।
ಒಡೆಯನಹುದು ರಾಜ್ಯದೊಳಗಿಲ್ಲ ಇವನಂಥ
ಪೊಡವಿಪತಿಗಳ ಕಾಣೆನೆಂದ ॥೯೬॥

ಒತ್ತಿ ಮುಂದಕೆ ಪೌಜ ನಡೆಸಿ ನೇಮಿಯಖಾನ
ಸುತ್ತ ಮುತ್ತಿಗೆಯ ಮಾಡಿದನು ।
ಎತ್ತ ನೋಡಲು ಅತ್ತ ಕಡೆಯಿಲ್ಲ ದಂಡಿನ
ಮೊತ್ತವನೇನ ಬಣ್ಣಿಸುವೆ ॥೯೭॥

ಲಕ್ಕದ ಮೇಲೆ ತೊಂಬತ್ತಾರು ಸಾವಿರ
ಲೆಕ್ಕವಿಲ್ಲದ ಗುಡಿ ಹೊಯ್ದು ।
ಅಕ್ಕರಾಣಿಯ ಗುಡಿಯೊಳು ನೇಮಿ ಇಳಿದನು
ಲಕ್ಷಾಧಿಪತಿ ಆನೆ ಇಳಿದ ॥೯೮॥

ಡೋಳು ಢಮಾಮಿ ವಾದ್ಯಗಳು ನಗಾರಿಯು
ಮೇಳೈಸುತ ನೇಮಿ ನಡೆದ ।
ಪಾಳ್ಯಪಾಳೆಗಳು ಹಾಕಿತು ಅಲ್ಲಿಗಲ್ಲಿಗೆ
ಕೋಳು ಹೋಯಿತು ನೇಮಿ ದಂಡು ॥೯೯॥

ಕೋಟೆಯ ಸುತ್ತ ಮುತ್ತಲು ಇಳಿದರು ನೇಮಿ
ಪಾಟಿಸಿ ಪೌಜು ಅಲ್ಲಲ್ಲಿ ॥೧೦೦॥

ಕಡಿದರೆ ತೀರದು ಕಡೆಯಿಲ್ಲದ ದಂಡು
ಒಡನೆದ್ದು ನೋಡಿ ಕಂಪಿಲನು ।
ಬಡವರು ನಾವು ಕೆಣಕಿ ರಾಮ [ಕೊಂ]ದನು
ಕಡೆಹಾಯ್ವ ತೆರನಿಲ್ಲ ನಮಗೆ ॥೧೦೧॥

ಕರೆಸಿದನು ತನ್ನ ಮಂತ್ರಿ ಬೈಚಪ್ಪನ
ತೆರನೇನು ಮುಂದೆ ನಮಗಿನ್ನು ।

ಧರೆಯೆಲ್ಲ [ಈದಂತೆ] ದಂಡು ಬಂದಿಳಿಯಿತು
ಕರೆಸಯ್ಯ ರಾಮನ ಬಲವ ॥೧೦೨॥

ಬಂದು ರಾಮಯ್ಯ ತಂದೆಯ ಪಾದಕೆರಗಿದ
ವಂದಿಸಿ ಕರಗಳ ಮುಗಿದು ।
ಅಂದಿನ ರಾಜ್ಯಕಾರ್ಯಂಗಳೆಲ್ಲವ ಪೇಳಿ
ಇಂದ್ಯಾಕೆ ನಮ್ಮ ಕರೆಸಿದಿರಿ ॥೧೦೩॥

ಧರೆಯೆಲ್ಲ [ಈದಂತೆ] ದಂಡು ಬಂದಿಳಿಯಿತು
ಸುರಿತಾಳನ ನೇಮಿ ಬಂದು ।
ದೊರೆತನ ಉಳಿವ ದಾರಿಲ್ಲವೊ ರಾಮಯ್ಯ
ಕರೆಕರೆಯಾಯಿತು ನಮಗಿನ್ನು ॥೧೦೪॥

ಸಾಕಿನ್ನು ಬಿಡು ಚಿಂತೆ ಯಾಕೆ ನಿಮಗಾಯಿತು
ನಾಕಜಪತಿಯ ಜರಿವರೆ ।
ನೂಕಿ ಹೆದ್ದೊರೆಯತನಕಲಿ ಮುರಿಯಲಿಸುವೆ
ಜೋಕೆ ಮಾಡುವೆನು ಕುಮ್ಮಟವ ॥೧೦೫॥

ಬಂದರೆ ಬರಲಿನ್ನು ನೇಮಿಖಾನರ ದಂಡ
ಸಂದೇಹವ್ಯಾಕಿನ್ನು ನಮಗೆ ।
ಒಂದಿನದಾಹುತಿ ಇಲ್ಲವೊ ಕತ್ತಿಗೆ
ಚಂದದಿ ಕೇಳು ಬೈಚಪ್ಪ ॥೧೦೬॥

ಇಂದಿನ ರಾತ್ರಿಯೊಳು ಕಗ್ಗೊಲೆಯನು ಬಿದ್ದು
ಬಂಧಿಸಬೇಕು ತುರುಕರನು ।
ಇರುಳ ಕಗ್ಗೊಲೆ ನೋಡಬಾರದೆಂದೆನುತಲಿ
ಭರದಿಂದ ಭಾಸ್ಕರನೋಡಿ ॥೧೦೭॥

ಇರಬಾರದೆಂದು ಪಡುವಣಾದ್ರಿಗೆ ಇಳಿದನು
ಮರೆಗೊಂಡ ದೊಡ್ಡ ಪರ್ವತವ ।
ಸಂಜೆಯ ಮಹಲಕ್ಷ್ಮಿ ಬಂದಳು ಸದರಿಗೆ
ದರಿಗೆ ಮಂದೆದ್ದು ಕೈಮುಗಿದರೆಲ್ಲ ॥೧೦೮॥

ಕಾದ ಹೋಗಲಿಬೇಕು ರಾತ್ರಿ ಕಗ್ಗೊಲೆಗೆಂದು
ಮೇದುನಿಪತಿ ರಾಮ ಪೇಳೆ ।
ಅಪ್ಪಣೆ ಕೊಡು ನಮಗೆ ನಿಮ್ಮಯ ಪಾದಕ್ಕೆ
ಒಪ್ಪಿಸುವೆನು ಊಳಿಗವ ॥೧೦೯॥

ರೊಪ್ಪದ ಆನೆ ಹಿಂಡಿಗೆ ಸಿಂಹ ಬಿದ್ದಂತೆ
ತಪ್ಪದೆ ಹೊಡೆವೆ ನೇಮಿಯನು ।
ವೀಳ್ಯ ಉಡುಗೊರೆ ಕೊಟ್ಟು ಬಾದೂರಖಾನಗೆ
ಒಳ್ಳೆಯ ಮಂದಿಯನಾಯ್ದುಕೊಟ್ಟ ॥೧೧೦॥

ಚೋರಗಂಡಿಯಲಿ ಇಳಿದ ಬಾದೂರಖಾನ
ಕಾರೆಂಬ ಕತ್ತಲೆಯೊಳಗೆ ।
ಧೀರ ಮನ್ನೆಯರೆಲ್ಲ ಒಳಹೊಕ್ಕು ನೇಮಿಯ
ಡೇರೆ ಹೊಗಬಿದ್ದರಾಗ ॥೧೧೧॥

ಕೊಲಲೊ ಕೊಲಿಲೊ ಎಂದು ಕೂಗಿ ಅಬ್ಬರಿಸುತ
ಹಲಿವು ಖಾನರನು ಕಡಿದೊಟ್ಟಿ ।
ಗಲಬಿಲಿ ಆಯಿತು ದಂಡಿನೊಳಗೆಲ್ಲ
ಗಲಭೆ ಹತ್ತಿತು ತಮ್ಮೊಡನೆ ॥೧೧೨॥

ಹಗಲೆ ಬಂದಿತು ದಂಡು ರಾಮಯ್ಯ ಇರುಳಿಗೆ ಬಂದ
ಹೊಗುವರೆ ಠಾವಾವುದೆಮಗೆ ।
ಹಗರಣವಾಯಿತು ದಂಡು ಗಜಿಬಜಿ ಎದ್ದು
ಜಗಳವಾಯಿತು ತಮತಮಗೆ ॥೧೧೩॥

ಎತ್ತಲೆಂದರಿಯದೆ ಕತ್ತಲೊಳಗೆ ತಾವು
ಒತ್ತರವೆದ್ದು ಓಡಿದರು ।
ಮುತ್ತಿತು ರಾಮನಾಥನ ಬಲ ಡೇರೇದ
ಸುತ್ತ ತಲೆಗಳ ಹೊಡೆದರಾಗ ॥೧೧೪॥

ಓಡಿದ ನೇಮಿ ಹಿಂದಕ್ಕೆ ಹರುದಾರಿಯ
ಕೂಡಿಕೊಂಡೆಲ್ಲ ಖಾನರನು ।

ಕಾಡಬೇಡರ ಉಪಟಳದಿಂದ ದಂಡೆಲ್ಲ
ಕಾಡೆದ್ದು ಮುತ್ತಿಗೆ ತೆಗೆದು ॥೧೧೫॥

ಹತ್ತು ಸಾವಿರ ತಲೆಯನು ಹೊಯ್ದು ಕುದುರೆಯ
ಒತ್ತಿ ಹಿಡಿದರು ಕೈಸೆರೆಯ ।
ಅರ್ತಿಯೊಳ್ ಹಿಂದಕ್ಕೆ ತಿರುಗಿಬಂದನು ಬೇಗ
ಮತ್ತೆ ಕುಮ್ಮಟ ಹೊಕ್ಕರವರು ॥೧೧೬॥

ಕೋಳಿ ಕೂಗಿತು ಬೆಳಗಾಯಿತು ಭಾಸ್ಕರ
ಧೂಳಿಗೋಟೆಯ ನೋಡುವರೆ
ಬಹಳ ಸಂತೋಷದಿ ಮೂಡಿಬಂದನು ತಾನು
ಕಾಳಗತ್ತಲೆ ಬೆಳಗಾಯಿತು ॥೧೧೭॥

ಓಡಿಹೋದಂಥ ನೇಮಿಯು ತಾನು ತಿರುಗಿದ
ಜೋಡು ಸಿಂಗಾಡಿಯಪ್ಪಾಜಿ ।
ಕೋಟಿ ಕಾಲ್ಬಲ ಮುತ್ತಿತು ಕುಮ್ಮಟವನು
ಲೂಟಿಯಾಯಿತು ಹೊರ ಪ್ಯಾಟೆ ॥೧೧೮॥

ಕೋಟೆಯ ಸುತ್ತಮುತ್ತಲ ಬಂದು ಮುತ್ತಿತು
ಮೀಟದ ಖಾನ ಒಂದಾಗಿ ।
ಜೂಟಿಸಿ ಬಂದು ಒಳ ಬೀದಿಯ ಹಿಡಿಯಿತು
ನೋಟಕೊಂದಾಶ್ಚರ್ಯವಾಯಿತು ॥೧೧೯॥

ಅಲ್ಲಲ್ಲಿ ಗಜವ ಹಾಕಿದರು ಸುರಿತಾಳನ
ಬಲ್ಲಿದ ವಾಜಿ ಜನರೆಲ್ಲ ।
ನಿಲ್ಲಲಾರದೆ ರಾಮನ ಬಲದುರ್ಗುವ
ಎಲ್ಲರು ಒಳಹೊಕ್ಕರಾಗ ॥೧೨೦॥

ಜೇರು ಮುತ್ತಿಗೆ ಮಾಡಿ ಶಬರರ ಪಡೆಯನೆಲ್ಲ
ಗಾರುಗತ್ತಲೆಯ ಮಾಡಿದರು ।
ನೂರಾರು ಮಂದಿಯ ಕೊಂದರು ಖಾನರು
ಊರ ಹೊಗಿಸಿದರು ಶಬರರ ॥೧೨೧॥

ಒಳಹೊಕ್ಕು ಶಬರರು ಒಳ ಕೋಟೆಯ ಹೊಕ್ಕು
ಉಳಿಯದೆ ಬೇಡಪಡೆಯೆಲ್ಲ ।
ಘಳಿಲನೆ ಅಟ್ಟಳೆಗಳನೇರಿ ಎಸೆದರು
ಸೆಳೆಗೋಲು ಬಿಲ್ಲು ಪೆಟಲುಗಳ ॥೧೨೨॥

ಸುಳಿದಾಡದಂತೆ ಕೋಟೆಯ ಸುತ್ತ ಖಾನರ
ಸೆಳೆಸರಳುಗಳಿಂದ ಕೊಲ್ಲುತಲಿ ।
ಹೊಳಕೆಯ ಮಂದಿ ಹೊರಟು ಹೊಕ್ಕು ಕಡಿದರು
ಅಳಿದಿತು ಖಾನರ ಪಡೆಯು ॥೧೨೩॥

ಮರೆಹೊಕ್ಕ ಖಾನರ ಕೊಡೆನೆಂಬ ಕಹಳೆಯು
ಒರಲುತಿರ್ದವು ದುರ್ಗದೊಳಗೆ ।
ಧರೆಯ ರಾಯರಗಂಡ ಬರುವನು
ಹೊರಡೆಂದು ಕರ್ಣೆಗಳೊದರುತಲಿರಲು ॥೧೨೪॥

ಬಿಟ್ಟು ಹೋಗುವನಲ್ಲ ಬಾದೂರಖಾನನ
ಕೊಟ್ಟು ಒಂದಾಗುವುದು ಲೇಸು ।
ಈ ಮೇಲೆ ಕುಮ್ಮಟ ಕಳಕೊಂಡು ಕೆಟ್ಟರು ಮುಟ್ಟಿ
ಪೇಳಿರೊ ಚರರ್ಪೋಗಿ ॥೧೨೫॥

ಬಂದು ಭಟರು ಪೇಳೆ ಕೇಳಿ ರಾಮಯ್ಯನು
ತಂದೆ ಅಪ್ಪಣೆಯಿಲ್ಲ ನಮಗೆ ।
ಕೊಂದು ರಣಭೂತಕೆ ಹಬ್ಬವ ಮಾಡುವೆ
ಒಂದೆರಡಿನ ದಿನದೊಳಗೆ ॥೧೨೬॥

ಮಾಗಿದ ಹಣ್ಣಿಗೆ ಕೋಲು ಸೆಳೆಗಳೇಕೆ
ಈಗ ಲೆಗ್ಗೆಯ ಮಾಡ ಹೇಳೊ ॥೧೨೭॥

ಎಂದ ಮಾತನು ಕೇಳಿ ಬಂದರು ಭಟರೋಡಿ
ತಂದರು ಆದ ಸುದ್ದಿಯನು ।
ಮುಂದಣ ರಾಜಕಾರ್ಯಗಳನು ಮಾಡುವ
ಅಂದವ ಪೇಳಿ ನೀವೆನಲು ॥೧೨೮॥

ಬಿಡು ಎಮ್ಮನೀಗ ಕುಮ್ಮಟಕೆ ಲಗ್ಗೆಯ ಮಾಡಿ
ಕಡಿದು ರಾಮುಗನ ಕೈಸೆರೆಯ ।
ಹಿಡಿದು ತಂದು ನಿನ್ನ ಕೈಯಲಿ ಕೊಟ್ಟು ನಾವಿನ್ನು
ನಡೆವೆವು ಸುರಿತಾಳನೆಡೆಗೆ ॥೧೨೯॥

ಇತ್ತ ನೇಮಿಯು ತನ್ನ ಖಾನವಜೀರರೊಂ
ದರ್ತಿಯಲಿ ಮಾತನಾಡಿದನು ।
ಅತ್ತ ರಾಮಯ್ಯ ಮಂತ್ರಿಯ ಕೂಡೆ ಹೇಳಿದ
ಕತ್ತಿಗೆ ನಡೆಯಬೇಕೆನುತ ॥೧೩೦॥

ಅಪ್ಪಣೆ[ಯನು] ಹೇಳೊ ಬೈಚಪ್ಪ ಬೇಗದಿಂ
ದೊಪ್ಪನೆ ಮಂದಿಮಕ್ಕಳಿಗೆ ।
ತುಪ್ಪದೂಟವನುಣಿಸಿಕೊಂಡು ನಮ್ಮೆಲ್ಲರ
ಅಪ್ಪಣೆ ಕೊಡ ಹೇಳೊ ಅರಸ ॥೧೩೧॥

ಎಂದ ಮಾತನು ಕೇಳಿ ಬಂದನು ಬೈಚಪ್ಪ
ನಿಂದನು ಕಂಪಿಲನೆಡೆಗೆ ।
ಕಂದಯ್ಯ ರಾಮ ಕಳುಹಿದ ನಿಮ್ಮ ಬಳಿಗೆಮ್ಮ
ಮಂದಿಯನುಣಿಸಬೇಕೆಂದ ॥೧೩೨॥

ನಾಳೆಯ ಪಯಣವಂತೆ ರಣರಂಗ [ಆ]ಜಿಗೆ ಕ
ಹಳೆಯ ಹಿಡಿಸಿ ರಾಮಯ್ಯ ।
ಕೇಳಿ ಬಾರೆಂದ ಬಿಂದಿಗೆ ಹೊನ್ನ ನಿಮ್ಮನು
ಹೇಳಿದ ವೀರನೆಂದೆನುತ ॥೧೩೩॥

ಹರಿಯಲದೇವಿಗೆ ಅಡಿಗೆ ಮಾಡಿಸ ಹೇಳೊ
ಬಿರಿದಿನ ಬಂಟರಿಗೆಲ್ಲ ।
ಕರೆತಂದು ಊಟವ ಮಾಡಿ ರಾಮಯ್ಯನ
ಹೊರಡ್ಹೇಳೊ ಮುಂಗಾಳಗಕೆ ॥೧೩೪॥

ಅಪ್ಪಣೆಯನು ಕೈಕೊಂಡು ಮಂತ್ರೀಶನು
ತಪ್ಪದೆ ರಾಮಯ್ಯನೆಡೆಗೆ ।

ಒಪ್ಪವಾಯಿತು ನೀವು ಪೇಳಿದ ಮಾತಿನ್ನು ಕಂ
ದರ್ಪ ರೂಪನೆ ರಾಮಯ್ಯ ॥೧೩೫॥

ಅಂದಿನ ದಿನ ತನ್ನ ಅರಮನೆಯೊಳು ರಾಮ
ಚಂದ್ರಮುಖಿಯರ ಮೇಳದಲಿ ।
ಚಂದದಿಂದುಂಡು ಸುಖನಿದ್ರೆಗೈದೆದ್ದು
ಒಂದು ಹೊತ್ತಿಲಿ ಎದ್ದ ರಾಮ ॥೧೩೬॥

ವಂದಿಸಿ ಜಟ್ಟಂಗಿಲಿಂಗ ರಾಮೇಶಗೆ
ಚೆಂದದಿಂ ಕೈಯ ಮುಗಿದನು ।
ಇಂದಿನ ಭವಹರ ಚಂದ್ರಮೌಳೀಶ್ವರ
ತಂದೆ ನೀ ಗತಿಯೆನುತೆದ್ದ ॥೧೩೭॥

ಪನ್ನೀರ ಜಳಕದಿಂದಾಹಾರ ಭೋಜನ ಮಾಡಿ
ತನ್ನ ವಲ್ಲಭೆಯರನೆಲ್ಲ ।
ಮನ್ನಿಸಿ ಕರೆದು ಮೈಜೋಡು ಒಡವೆಗಳನು
ತನ್ನಿರೆಂದನು ರಾಮ ನಗುತ ॥೧೩೮॥

ಒಡವೆ ವಸ್ತ್ರಂಗಳ ಪೆಟ್ಟಿಗೆಗಳ ತಂದು
ಒಡನೆ ರಾಮಯ್ಯನ ಮುಂದೆ ।
ಪೆಟ್ಟಿಗೆಯ ಬಿಚ್ಚಿ ಒಂದೊಂದು ವಸನಂಗಳ
ಕೊಡುತಿರ್ದರೆಲ್ಲ ಬಾಲೆಯರು ॥೧೩೯॥

ಸುರಿತಾಳ ನೇಮಿಯಗಂಡನೆಂಬುವದೊಂದು
ಕೊರಳಪದಕವನಿಟ್ಟ ರಾಮ ।
ಧರೆಯೊಳಗುಳ್ಳ ರಾಯರಗಂಡನೆಂಬಂಥ
ಬೆರಳ ಹೊನ್ನುಂಗುರವನಿಟ್ಟ ॥೧೪೦॥

ಉತ್ತುಂಗರಾಯನ ಗಂಡನೆಂಬುವ ಜೋಡ
ಮುತ್ತಿನ ಚವುಕುಳಿ ಇಟ್ಟ ।
ಮುಂಗುಲಿರಾಯನ ಗಂಡನೆಂಬುವದೊಂದು
ಉಂಗುರ ಪಚ್ಚೆಯ ಕಡಗ ॥೧೪೧॥

ಹುಳಿಯೇರ ಮಾರಿಗೊಂಡನಗಂಡನೆಂಬಂಥ
ಉಳಿಯ ಸರಪಳಿಯ ಇಳಿಬಿಟ್ಟ ।
ಮಿಕ್ಕ ಒಡವೆಯನೆಲ್ಲ ಲೆಕ್ಕವಿಲ್ಲದೆ ಇಟ್ಟು
ಅಕ್ಕರಾಣಿಯ ಮುತ್ತನಿಟ್ಟ ॥೧೪೨॥

ಬಂದರೈವರು ಸೇಸೆಯನಿಟ್ಟು ರಾಮಯ್ಯಗೆ
ವಂದಿಸಿ ವೀಳ್ಯವ ಕೊಟ್ಟು ।
ಬಂದನು ತಾಯರಮನೆಗಾಗಿ ರಾಮಯ್ಯ
ವಂದಿಸಿ ಪಾದಕೆರಗಿದನು ॥೧೪೩॥

ಇಂದೊಂದು ದಿವಸ ನಾಳಿನ ದಿನ ರಣರಂಗ
ಬಂದಂಥ ನೇಮಿಯ ಮೇಲೆ ।
ಎಂದ ಮಾತನು ಕೇಳಿ ಹರಿಯಲದೇವಿ ತಾ
ಕಂದನ ಪಿಡಿದಪ್ಪಿಕೊಂಡು ॥೧೪೪॥

ಉಂಡುಟ್ಟು ಬಂಟರನುಣಿಸಿಕೊಂಡು ನೀನು
ಚಂದದಿ ಹೊರಡೊ ರಾಮಯ್ಯ ।
ಎಂದು ಪೇಳಲು ಹರಿಯಮ್ಮನ ಮಾತಿಗೆ
ಮಂದಿಯ ಕರೆಸಿದ ಬೇಗ ॥೧೪೫॥

ರಾಣ್ಯ ರಾಹುತರು ಗುರಿಕಾರರು ಮನ್ನೆಯರು
ಠಾಣ್ಯದ ಗಡಿವಾಡದವರು ।
ಅಣ್ಣ ಕಾಟಣ್ಣ ಅರಸುಮಕ್ಕಳೆಲ್ಲರು
ಉಣ್ಣ ಹೇಳೆಂದ ರಾಮಯ್ಯ ॥೧೪೬॥

ಚೊಕ್ಕ ಭೋಜನವನಿಕ್ಕಿಸಿ ಹರಿಯಮ್ಮನು
ಚೊಕ್ಕ ಬಿಳಿಯೆಲೆ ವೀಳ್ಯ ಕೊಡಿಸಿ ।
ಮಕ್ಕಳು ನಿಮ್ಮ ಪಾಲಿಸಬಂದರೆನುತಲಿ
ಎಕ್ಕಟಿಗರಿಗೆ ಪೇಳಿದಳು ॥೧೪೭॥

ಅಡ್ಡಬಿದ್ದರು ಹರಿಯಮ್ಮನ ಪಾದಕ್ಕೆ
ದೊಡ್ಡರಮ್ಮ ರಾಮುಗನು ।

ಮಂದಿಯನುಣ್ಣಿಸಿಕೊಂಡು ತಾ ಉಂಡುಟ್ಟು
ತಂದೆಯ ಪಾದಕ್ಕೆ ಬಿದ್ದ ॥೧೪೮॥

ಅಪ್ಪನ ಪಾದಕೊಂದೊಪ್ಪದಿಂದಲಿ ಬಿದ್ದು
ಉಪ್ಪರಿಗೆಯನೇರಿ ನೋಡೊ ।
ಒಪ್ಪಿಸುವೆನು ನಿಮ್ಮ ಊಳಿಗವ ನೇಮಿಯ
ಒಪ್ಪದಿ ಕಳುಹಿಸಿ ಕೊಡುವೆ ॥೧೪೯॥

ತಂದೆತಾಯಿ ಪಾದಕೆ ಬಿದ್ದು ರಾಮಯ್ಯನು
ಬಂದನು ಹೊರಚಾವಡಿಗೆ ।
ಅಂದು ತನ್ನಯ ಮಂದಿ ಮಕ್ಕಳ ಕೂಡಿ ಕುಳಿತನು
ಒಂದರಗಳಿಗೆ ರಾಮಯ್ಯ ॥೧೫೦॥

ಕರೆಸಿದ ಮಂತ್ರಿ ಬೈಚಪ್ಪನ ಮಕ್ಕಳ
ಕರೆಸಿದನಾಗ ಬೊಲ್ಲುಗನ ।
ಕರೆಸಿದ ಹಂಪರಾಜನ ಕಂಪರಾಜನ
ಕರೆಸಿದ ದೊರೆಮಕ್ಕಳನೆಲ್ಲ ॥೧೫೧॥

ಬಾದೂರಖಾನನ ಮಹಿಮೆಯಖಾನನ
ಸಾಧನೆ ಬಸವರಾಜಯ್ಯ ।
ಆದಂಥ ಹಳೆಯ ರಾಹುತರನೆಲ್ಲರ ರಾಮ
ಕಾದಲಿ ಕರೆಸಿದನಾಗ ॥೧೫೨॥

ದೇವಿಸೆಟ್ಟಿಯಲಿಂಗ ಬೇವನ ಸಿಂಗಯ್ಯ
ಜೀವರತ್ನವು ಕೊಳ್ಳಿನಾಗ ।
ಮಾವಗಳಾದ ಚಾರಮನ ಮಕ್ಕಳ ಬೇಗ
ಕೋವಿದ ರಾಮಯ್ಯ ಕರೆಸಿ ॥೧೫೩॥

ಹೊಳಕೆಯ ಬಂಟರ ಕರೆಸಿಕೊಂಡನು ರಾಮ ಎಣಿ
ಕೆಲಿ ನೂರು ಸಾವಿರವ ।
ಎಣಿಕೆಯಿಲ್ಲದೆ ಕೊಟ್ಟ ಹಿಡಿಹೊನ್ನು ರಾಮಯ್ಯ
ಬಣಗಾರಗಂಡನೆಂದೆನುತ ॥೧೫೪॥

ಸನ್ನೆಗಾಳೆಯ ಹಿಡಿಸಿದ ದುರ್ಗದೊಳಗೆಲ್ಲ
ಚಿನ್ನಗಾಳೆಯು ನೌಬತ್ತು ।
ಉನ್ನತ ವಾದ್ಯ ಗಿಡಬಿಡಿ ನಾಗಸರ ಕೊಂಬು
ಸನ್ನೆ ನಗಾರಿ ಸಾರಿದವು ॥೧೫೫॥

ಅರವತ್ತು ಸಾವಿರ ಕುದುರೆ ಮಂದಿಯು ಕೂಡಿ
ಭರದಿಂದ ದುರ್ಗವನಿಳಿದು ।
ಹೊರಬಾಗಿಲ ದಾಂಟಿ ಮುಂದಣ ಬಯಲಿಗ
ಬರುವಂಥ ರಾಮನ ನೋಡಿ ॥೧೫೬॥

ಇತ್ತ ರಾಮಯ್ಯ ದುರ್ಗವನಿಳಿದು ಬರುತಿರೆ
ಅತ್ತ ಸುರಿತಾಳನ ಚರರು ।
ಅರ್ತಿಲಿ ಕುಳಿತಿರೆ ಮಾತನಾಡುತ ನೇಮಿ
ಒತ್ತರ ಸುದ್ದಿಯ ಪೇಳೆ ॥೧೫೭॥

ಎದ್ದು ನೇಮಿಯಖಾನನು ಕೂಚೆ ನಗಾರಿ
ಸದ್ದು ಮಾಡಿಸಿ ದಂಡಿನೊಳಗೆ ।
ಮುದ್ದು ಖಾನರು ಕೂಡಿ ಏಳಿರೊ ಜಗಳಕ್ಕೆ
ಇದ್ದಲ್ಲಿಗೆ ರಾಮ ಬಂದ ॥೧೫೮॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಪದನ ।
ಕದನದಿ ನೇಮಿ ಕುಮ್ಮಟವ ಮುತ್ತಿದನಂತೆ
ಪದಗಳು ಮುಗಿಯೆ ಸಂಪೂರ್ಣ ॥೧೫೯॥

ಅಂತು ಸಂಧಿ ೧೧ಕ್ಕಂ ಪದನು ೧೧೩೧ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೨

❖

ನೇಮಿಖಾನನ ಯುದ್ಧ ಮತ್ತು ಸೋಲು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ಬಂದನು ಹೊನ್ನಂದಣನೇರಿ ರಾಮಯ್ಯ
ಮುಂದಣ ರಾಮೇಶ ಗುಡಿಗೆ ।
ವಂದಿಸಿ ಕರಗಳ ಮುಗಿದಡ್ಡಬಿದ್ದನು
ಚಂದ್ರಶೇಖರ ಗತಿಯೆನುತ ॥೨॥

ಒಂದು ಹಿಡಿಹೊನ್ನ ಕಾಣಿಕೆನಿಟ್ಟು ರಾಮನು
ಗಂಧ ಪ್ರಸಾದ ಕೈಕೊಂಡು ।
ಮುಂದಕ್ಕೆ ನಡೆದನು ರಣರಂಗ ವಾಜಿಗೆ
ಮಂದಿಯ ಮುಂದಿಟ್ಟುಕೊಂಡು ॥೩॥

ಬೊಲ್ಲನ ಏರಿ ದುವ್ವಾಳಿಸುತಲಿ ರಾಮ
ನಿಲ್ಲದೆ ಪೇರಿ ಮಾಡುತಲಿ ।
ಎಲ್ಲರು ಕುದುರೆಯನೇರಿ ನಡೆದರಾಗ
ಬಲ್ಲಿದ ರಾಮಯ್ಯನೊಡನೆ ॥೪॥

ಬಿಲ್ಲಿನ ಪೌಜೆಲ್ಲ ಮುಂಜೂಣಿ ನಡೆಯಿತು
ಭಲ್ಲೆದ ಈಟಿಯ ಪೌಜ ।

ಎಲ್ಲರು ಎಡವಂಕ ಬಲವಂಕದೊಳು ಮುಂದೆ
ಕಲ್ಲಕೋಟೆಯ ಚಿಕ್ಕನವರು ||೫||

ಕುದುರೆಯ ಪೌಜು ಬೆನ್ನ ಮೇಲೆ ಇರಲೆಂದು
ಒದಗಿದ ಮನ್ನೆಯರೆಲ್ಲ ।
ಇದಿರೇರಿ ಬರುವ ಖಾನರ ಮೇಲೆ ನಡೆಯೆಂದ
ಚೆದುರ ಚೆನ್ನಿಗ ರಾಮ ನಗುತ ||೬||

ಬೇರೊಂದು ಪೌಜ ಮಾಡಿದ ಕಾಟಣ್ಣಗೆ
ಆರಿಸಿ ಮಾನ್ಯರನೆಲ್ಲ ।
ಚಾರಮರಾಯನ ಮಕ್ಕಳ ಕೂಡಿಸಿ
ಆರು ಸಾವಿರ ಕುದುರೆಯನು ||೭||

ಹೊಸಮಲೆದುರ್ಗದ ಹಳೆಯ ಮಂದಿಯ ಕೊಟ್ಟ
ದೆಸೆಯುಳ್ಳ ಮನ್ನೆಮನ್ನೆಯರ ।
ಕುಸುರಿದರಿವ ಗಡಿವಾಡದ ಮಂದಿಯ
ಹೆಸರಾದ ಗುರಿಕಾರರನು ||೮||

ಎಡಬಲದಲಿ ಏರಿ ಬರುವಂಥ ಪೌಜಿಗೆ
ನಡೆಯೊ ಕಾಟಣ್ಣ ನೀ ಮುಂದೆ ।
ಬಿಡಬೇಡ ಅತ್ತಿತ್ತ ಚದರಿದ ಕುದುರೆಯ
ಇಡಿಸಯ್ಯ ಬಿಲ್ಲಿನ ಕೂಡ ||೯||

ಹೊಣಕೆಯ ಭಟರೆಲ್ಲ ಬೇರೊಂದು ಗುಂಪಾಗಿ
ಕುಣಿವುತ ರಾಮನ ಮುಂದೆ ।
ಕೆಣಕುತ ಎಡಬಲ ಬಾಹಂತ ಖಾನರ
ರಣಕೆ ಕಾಲ್ಗೆದರುತಲವರು ||೧೦||

ಒತ್ತರಿಸಿ ಬರುವ ರಾಮನ ಬಲವನು ಕಂಡು
ಮುತ್ತಿಗೆ ತೆಗೆದು ಓಡಿದರು ।
ಹತ್ತಿತು ಗಲಿಬಿಲಿ ದಂಡಿನ ಒಳಗೆಲ್ಲ
ಸುತ್ತಲು ಗಲಭೆ ಗುಲ್ಲುಗಳ ||೧೧||

ಕೇಳಿದ ನೇಮಿಯು ಗಲಭೆಗಳನು ಎದ್ದು
ಊಳಿಗದವರನು ಕಳುಹಿ ।
ಸಾಳುವ ರಾಮ ದುರ್ಗವನಿಳಿದು ಬಂದ
ಕಾಳಗಕಿದಿರಾಗಿ ನಮಗೆ ॥೧೨॥

ಸುದ್ದಿಯ ಕೇಳುತ ಎದ್ದನು ಸುರಿತಾಳ
ಗದ್ದಲಿಸುತ ಖಾನರನು ।
ಮುದ್ದುಖಾನರ ಕೂಡಿ ಆನೆಯನೇರಿದ
ತಿದ್ದಿದ ಮುಖದ ಮೀಸೆಯನು ॥೧೩॥

ಎಡಬಲದಲಿ ಗಜವಿಂಡು ನಡೆದವಾಗ
ಅಡವಿಯ [ಮೊರ]ಡಿಯಂದದಲಿ ।
ಪಡೆಯೆಲ್ಲ [ನೊರೆಯ] ಸಾಗರದಂತೆ ಮುಂದಕ್ಕೆ
ನಡೆಯಿತು ನೇಮಿಯ ಪೌಜು ॥೧೪॥

ಹಿಂದೆ ಬರುವ ವಾಜಿ ಎಂಬತ್ತು ಸಾವಿರ
ಮುಂದಣ ಪೌಜೊಂದು ಲಕ್ಷ ।
ಬಂದಿತು ಎಡಬಲ ಐವತ್ತು ಸಾವಿರ ವಾಜಿ
ಸಂದಣಿಯೇನ ಬಣ್ಣಿಸುವೆ ॥೧೫॥

ಡೊಳ್ಳು ಢಮಾಮಿ ಗಿಡಿಬಿಡಿ ಕೊಂಬು ನಿಸ್ಸಾಳೆ
ಸ್ಸಾಳೆ ಕಹಳೆ ನಗಾರಿ ನೌಬತ್ತು ।
ಪಾಳೆಗಾರರ ಪೌಜು ಅರುವತ್ತು ಸಾವಿರ
ಕ್ಷೋಣಿಪ ನೇಮಿ ನಡೆದನು ॥೧೬॥

ಮುಂದಕ್ಕೆ ಸಾಗಿ ಬಂದಿತು ಕುದುರೆಯ ಪೌಜು
ಒಂದೊಂದು ಗುಡ್ಡಗಳಂತೆ ।
ಸಂಧಿಸಿ ಉಭಯ ಬಲವು ಕೂಡಿ ಕಡಿದಾಡೆ
ಅಂದವನೇನ ಬಣ್ಣಿಸುವೆ ॥೧೭॥

ಕೋಲು ಖಂಡ್ರಿಸಿ ಬೀಳೆ ಕರುಳಿನ ಮಲೆಯೊಳು
ಬಾಳೆಯಂದದಿ ತೊಡಕಿದವು ॥೧೮॥

ಉರುಳಿ ಬೀಳುವ ತಮ್ಮ ತಲೆಗಳ ತಿರುಹಿಟ್ಟು
ಶಿರವನರಿಯದೆ ಮುಂದೆ ನಡೆಯೆ ।
ಈ ರೀತಿಯಲ್ಲಿ ಕಾಲ್ಬಲವು ಹೊಯ್ದಾಡಿತು
ಮೀರಿತು ರಣರಂಗದೊಳಗೆ ॥೧೯॥

ಎತ್ತ ನೋಡಿದರತ್ತ ವಾಜಿಗಳ ಪೌಜುಗಳು
ಒತ್ತೊ ಬಂದವು ರಾಮನೆಡೆಗೆ ।
ಸುತ್ತಮುತ್ತಲು ತನ್ನ ಕುದುರೆಯ ಪೌಜನು
ಒತ್ತಿ ನಡೆಸಿ ಅವರ ಮೇಲೆ ॥೨೦॥

ವಿಭವದೊಳ್ ರಾಮನು ಅರಸುಮಕ್ಕಳ ಕೂಡಿ
ನಬಿಯಖಾನನ ಕೆಡಹಿದರು ॥೨೧॥

ರಾಮನ ಬಲವ ಒಡೆ ತುಳಿಸುತ ನೇಮಿಯ
ನೇಮಿಯ ಖಾನರು ಬೆನ್ನತ್ತಿ ಬರಲು ।
ಭೂಮಿಯಾಕಾಶಕೆ ಕೆಂಧೂಳು ಮುಸುಕಲು
ಮಾಮನೆಯಾಯ್ತು ಶಬರರಿಗೆ ॥೨೨॥

ಇಕ್ಕೆಲದಲಿ ಏರಿ ಬರುವಂಥ ಪೌಜನು
ಗಕ್ಕನೆ ಕಂಡು ರಾಮಯ್ಯ ।
ಹೊಕ್ಕನು ಬೊಲ್ಲನ ಝಾಡಿಸಿ ಮುಂದಕ್ಕೆ
ಒಕ್ಕಲಿಕ್ಕುತ ತುಳಿಸಿದನು ॥೨೩॥

ಎಡಬಲದಲಿರ್ದ ಮನ್ನೆಯರೆಲ್ಲರು
ಒಡನೊಂದು ಸಾವಿರ ಬಲವು ।
ದೃಢಗಲಿ ರಾಮ ಹೊಕ್ಕಿರಿಯಲು ತುರುಕರ
ಪಡೆ ಮುಳುಗಿತು ನಿವಹದೊಳಗೆ ॥೨೪॥

ಒಂದು ಬಾರಿಗೆ ಎತ್ತಿ ಕಡಿಯಲು ರಾಮಯ್ಯ
ಕೊಂದುದು ಬೊಲ್ಲ ನಾಲ್ವರನು ।
ಮುಂದೆ ಸುಳಿವ ಖಾನನ ಕಚ್ಚಿ ಎಳೆಕೊಂಡು
ಬಂಧಿಸಿ ಕಾಲೊಳು ತುಳಿದು ॥೨೫॥

ಮನ್ನೂಲ ಮಾಚನು ತಲೆಯ ತಂದೊಪ್ಪಿಸೆ
ಮಾನ್ಯರೆಲ್ಲರು ಕೈಯ್ಯ ಮುಗಿದು ।
ಚೆನ್ನ ಬಾಣದ ಬಸವಯ್ಯ ಬಾಣಕೆ ನಾಲ್ಕು
ಮುನ್ನೂರು ಕುದುರೆಯ ಕೊಂದ ॥೨೬॥

ಬೂಟಕ ಬೊಮ್ಮಯ್ಯ ಎಕ್ಕಟಿಗರು ಕೂಡಿ
ಬಿಟ್ಟರು ಸರಳಂಬುಗಳನು ।
ನೆಟ್ಟವು ವಾಜಿಯ ಬೆನ್ನ ತಟ್ಟುಗುಚಿನ್ನು
ಬಿಟ್ಟು ಓಡುತ ತುರುಕರ ಪಡೆಯು ॥೨೭॥

ಗುತ್ತಿಯಖಾನನು ಹತ್ತಿ ಬರುವರ ಮೇಲೆ
ಹತ್ತಿದ ತನ್ನ ಮಂದಿಯೊಳು ।
ಕುತ್ತಿಗೆಗಳ ಕೊಯ್ಯುತ ತುರುಕರ ಪಡೆಯ
ಮುತ್ತಿಕೊಂಡನು ಸಾವಿರವ ॥೨೮॥

ಯನುಮಾಲ ಚಿತ್ತನು ಯರಬೋತು ಗಂಗನು
ಚಿನುಮದ ಚಿಕ್ಕ ತಮ್ಮುಗನು ।
ಪೆನಗುಂಡೆ ಪಾಪನಾಯಕರು ಇವರೆಲ್ಲರು
ರಣಧೂಲಖಾನನ ಮುತ್ತಿ ॥೨೯॥

ಕೊಂದರು ಇವನೊಳು ಸಾವಿರ ಕುದುರೆಯ
ಮಂದಿಯೆಂಬುದು ಲೆಕ್ಕವಿಲ್ಲ ।
ಮುಂದುವರಿದು ಬಂದು ಖಾನ ವಜೀರರ
ಕೊಂದರು ರಣಧೂಲ ಬಿದ್ದ ॥೩೦॥

ಕಬ್ಬುಲಿ ನಾಗ ಹೆಬ್ಬುಲಿ ಚಿಕ್ಕ ಬೈಯಣ್ಣ
ಅಬ್ಬಯ್ಯನಾಯಕನವರು ।
ತಬ್ಬಿಬ್ಬಗೊಳಿಸುತ ತುರುಕರ ಪಡೆಯನು
ಅಬ್ದೂಲಖಾನನ ಹೊಯ್ದು ॥೩೧॥

ಅಸಗೋಡ ಬಸವನು ಅಕ್ಕಸಾಲೆರ ಚಿಕ್ಕ
ಹೊಸಮಂದಿಯನು ಕೂಡಿಕೊಂಡು ॥೩೨॥

ಕುಕ್ಕಲಿರಿದು ತಲೆಗಳ ಹೊಯ್ದು ಮುಂದಕ್ಕೆ
ಹೊಕ್ಕರು ನೇಮಿಯ ಮೇಲೆ ।
ಹೊಕ್ಕರು ನೇಮಿಯಖಾನನ ಪೌಜಿಗೆ
ಇಕ್ಕೆಲದಲಿ ಮಂದಿ ಕೂಡಿ ॥೩೩॥

ಬುಕ್ಕನ ಪಾಲನು ಹೊಕ್ಕನು ರಣದೊಳು
ಕಕ್ಕುತ ಇಟ್ಟಿಹ ಪೌಜ ॥೩೪॥

ಅಗಣಿತ ಸಿಂಗನು ಬೆಂಗಳೂರ ಚಿಕ್ಕನು
ಬಗೆದು ಹೊಕ್ಕನು ರಣದೊಳಗೆ ।
ಸುಗುಣ ಗಾಣಿಗ ಬೊಮ್ಮಕಾಮಗೇತಿಯ ತಿಮ್ಮ
ಜಗಳವೆಂದರೆ ಕಡೆಯಿಲ್ಲ ॥೩೫॥

ಒಕ್ಕಲಿಗರ ಮುದ್ದ ಹೊಕ್ಕನು ರಣದೊಳು
ರಕ್ಕಸ ಮಾದನು ಕೂಡಿ ।
ಸೊಕ್ಕಿದ ನೇಮಿಖಾನರ ಮೇಲೆ ಇರಿದರು
ಹೊಕ್ಕು ಹೊಡೆದು ಭಾಪೆನುತ ॥೩೬॥

ನಲ್ಲೂರ ನಲ್ಲನು ನಿಡಿಗಲ್ಲ ಕಾಮನು
ಬಿಲ್ಲ ಪೆನ್ನನು ದ್ಯಾವನವರು ।
ಬಲ್ಲಿದ ಖಾನರ ಇರಿದು ಹಿಂದಕೆ ಮೆಟ್ಟಿ
ನಿಲ್ಲದೆ ನೇಮಿಯ ಮೇಲೆ ॥೩೭॥

ಮಾದಿಗ ಹಂಪನು ಹೊಕ್ಕು ಬಂದನು ಬೇಗ
ಸಾಧಿಸಿ ಕೊಲುತ ತುರುಕರನು ।
ಭೇದಿಸಿ ಕೊಂದು ಹಿಡಿಯಾಳ ಹಿಡಿದು ರಾಮ
ಗಾದ ಮಾನ್ಯರು ಒಳಹೊಕ್ಕು ॥೩೮॥

ಹೊಲೆಯರ ಹೊನ್ನುಗ ಅಲಗಿನ ಭರ್ಚಿಯೊಳ್
ಹಲವು ಮಂದಿಯ ಕೂಡಿಕೊಂಡು ।
ಬಲದಲ್ಲಿ ಬರುವಂಥ ಖಾನರ ಕೊಂದರು
ಛಲದಂಕ ರಾಮನ ಹುಜರ ॥೩೯॥

ಒಡಗೊಂಡು ಸಾವಿರ ಕುದುರೆಯ ಕೊಂದರು
ಹಿಡಿಯಾಳು ಲೆಕ್ಕ ಕಡೆಯಿಲ್ಲ ।
ನೇಮಿಖಾನನ ಸುತ್ತಮುತ್ತ ಎಡಬಲದೊಳು
ಭೂಮಿಯೊಳಗೆ ರಕ್ತ ಹರಿದು ॥೪೦॥

ಬೊಲ್ಲನ ಜೂಟಿಸಿ ಬಿಟ್ಟನು ರಾಮಯ್ಯ
ನಿಲ್ಲದೆ ನೇಮಿಯ ಮೇಲೆ ।
ಬಿಲ್ಲಿಂದ ಹೊಡೆದು ನ್ಯಾಜ್ಯದೊಳು ಹೊಕ್ಕಿರಿದನು
ಎಲ್ಲ ಖಾನರ ಮುತ್ತಿಕೊಂಡು ॥೪೧॥

ಲಕ್ಷ ಸಿಂಗಾಡಿ ಮುತ್ತಿತು ರಾಮನ ಮೇಲೆ
ಲಕ್ಷ ದಳವ ನೋಡೆ ತುಳಿದು ।
ಪಕ್ಷಿಯಂದದಿ ಹಾರಿ ಬೊಲ್ಲ ಈ ಕಡಿಗಿನ್ನು
ದಕ್ಷಿಣ ಭಾಗದ ಪೌಜ ॥೪೨॥

ನೋಡಲು ನೇಮಿಯು ಓಡಿದ ಸಿಕ್ಕರೆ
ಕೂಡಿದ ಕುದುರೆಯ ಪೌಜ ।
ಝಾಡಿಸಿ ಬೊಲ್ಲನ ಹಾಕಿ ಹಿಂದಕೆ ರಾಮ
ನೋಡಿರೆ ನೇಮಿಯನೆನುತ ॥೪೩॥

ಕಾಲಬಲದ ಮೇಲೆ ಬಿದ್ದನು ರಾಮಯ್ಯ
ಸಾಲುದಲೆಗಳ ಹೊಯ್ಸುತಲಿ ।
ಸಾಲಾಗಿ ನಿಂತಿರ್ದ ಪೌಜಿಗೆ ಹೊಗಲೇರಿ
ಬಾಳೆಯೊಳು ಕರಿ ಹೊಕ್ಕ ತೆರದಿ ॥೪೪॥

ಮುರಿಯಿತು ಕಾಲ್ಬಲ ಮೂರು ಸಾವಿರ ಮಂದಿ
ಒರಗಿತು ಗಾಯ ಕಡೆಯಿಲ್ಲ ।
ಬಿರಿದಿನ ಬಂಟರು ಹೊಕ್ಕಿರಿಯಲು ಬಹು
ಅರವತ್ತು ಸಾವಿರ ಬಲವು ॥೪೫॥

ಕಾಲಬಲದ ಮೇಲೆ ಬಿದ್ದ ರಾಮನು ಎಂದು
ಬಾಲದ ಬಣ್ಣದ ವಾಜಿ ।

ಸಾಲಿಟ್ಟು ಐವತ್ತು ಸಾವಿರ ಕುದುರೆಯು
ಮೇಲೆ ಬಿದ್ದಿತು ರಾಮಯ್ಯಗೆ ॥೪೬॥

ಸಿಂಗಾಡಿ ಸೋನೆಯ ಮಳೆಯಂತೆ ಸುರಿವುತ
ಕಂಗೆಡಿಸುತ ಅರಿಬಲವ ।
ಮಂಗಳ ಬೊಲ್ಲನನೇರಿ ರಾಮನ ಮೇಲೆ
ಮುಂಗುಲಿಖಾನ ತಾ ಹೊಡೆದ ॥೪೭॥

ಹೊಡೆದ ಪೆಟ್ಟನು ತಪ್ಪಿಸಿಕೊಂಡು ರಾಮಯ್ಯ
ಅಡಹಾಯ್ದು ಬೊಲ್ಲನ ಮೀಟಿ ।
ದೊಡ್ಡಖಾನನು ನೀನು ಅಹುದೆಂದು ಮುಂಗುಲಿಯ
ಅಡ್ಡ ಹೊಯ್ದನು ಎರಡು ತುಂಡ ॥೪೮॥

ಬಿದ್ದ ಮುಂಗುಲಿಖಾನನೆಂದು ವಜೀರರು
ಎದ್ದು ರಾಮಯ್ಯನ ಮೇಲೆ ।
ಇದ್ದಂಥ ಖಾನರೆಲ್ಲರು ಕೂಡಿ ಒಂದಾಗಿ
ಬಿದ್ದರು ರಾಮನ ಮೇಲೆ ॥೪೯॥

ಸುತ್ತಮುತ್ತಲು ವಾಜಿ ಸಿಂಗಾಡಿ ಪೆಟಲಿಗೆ
ತತ್ತಳಗೊಳುತ ಶಬರರು ।
ಒತ್ತಿ ರಾಮಯ್ಯ ಖಾನರ ಮೇಲೆ ಹೊಯ್ದನು
ಮುತ್ತಿದ ತುರುಕರನೆಲ್ಲ ॥೫೦॥

ಕರುಳು ಹರಿದು ಕಾಲು ಖಂಡ್ರಿಸಿ ತೋಳ್ತೊಡೆ
ಉರುಳಿ ಬಿದ್ದರು ವಾಜಿಯಿಂದ ।
ಕೊರಳ ಕತ್ತರಿಸಿ ಬೆರಳ ಗಾಯ ಘನವಾಗಿ
ತೆರಳಿ ಹೋದರು ತಮತಮಗೆ ॥೫೧॥

ಮೂಡಣ ಪೌಜಿಗೆ ಬೊಲ್ಲನ ಹಾಕಿದ
ಕೋಡುಗಲ್ಲಿನ ತನಕ ಗದುಮಿ ।
ಕೂಡಿದ ತುರುಕರನೆಲ್ಲ ಸವರುತ ಪೋಗೆ
ಹೇಡಿಗೊಂಡಿತು ನೇಮಿ ಪೌಜು ॥೫೨॥

ಪಡುವಣ ಪೌಜಿಗೆ ಹಾಕಿದ ಬೊಲ್ಲನ
ಕಡಿದನು ರಣದೊಳು ಪೊಕ್ಕು ।
ಒಡನೆ ಮನ್ನೆಯರೇರಿ ತಲೆಗಳನು ಕುಟ್ಟಲು
ಅಡೆಯೆ ತುರುಕ ರಾಹುತರು ॥೫೩॥

ಉತ್ತರ ದಿಕ್ಕಿನ ಪೌಜಿಗೆ ಬೊಲ್ಲನ
ಒತ್ತಿ ಮೀಟಿದ ರಾಮನಾಗ ।
ಸುತ್ತಿ ತುರುಕರ ಪಡೆಯನೆಲ್ಲವ ಸವರಿ
ಒತ್ತಿದ ಕಡೆಕಲ್ಲ ತನಕ ॥೫೪॥

ಹಿಂದಕ್ಕೆ ಕುದುರೆಯ ಮೀಟಿ ರಾಮಯ್ಯನು
ಬಂದನು ಡೇರೆದ ಬಳಿಗೆ ।
ಮುಂದುಳಿದಂಥ ತುರುಕರನೆಲ್ಲ ಕೊಲ್ಲುತ
ಹೊಂದಿ ಸವರುತ ಮನ್ನೆಯರ ॥೫೫॥

ಜೋಳದ ಸೊಪ್ಪೆಯು ಹೊಲದೊಳು ಬಿದ್ದಂತೆ
ಹಾಳಾಯಿತು ನೇಮಿ ದಂಡು ॥೫೬॥

ಒಡೆದು ಓಡುವ ದಂಡನೆಲ್ಲ ಕೂಡಿಸಿ ನೇಮಿ
ಬಿಡದೆ ಪೌಜನು ಮಾಡಿಕೊಂಡು ।
ಒಡನೊಂದು ಲಕ್ಷ ಮಂದಿಯು ವಾಜಿ ಕಡೆಯಿಲ್ಲ
ತಡೆಯದೆ ರಾಮನ ಮೇಲೆ ॥೫೭॥

ಇದಿರೇರಿ ಬರುವ ನೇಮಿಯ ಕಂಡು ರಾಮಯ್ಯ
ಅದ ಕೋ ಉಳಿದನೆಂದು ನೋಡಿ ।
ಹದವಿಲ್ಲ ಮನ್ನೇರ ಕೂಡಿ ಹೊಕ್ಕನು ರಾಯ
ಬೆದರಿತು ಕುದುರೆಯ ಪೌಜು ॥೫೮॥

ಸುತ್ತಲಿ ಕಡಿದಾಡಿ ಬರುತ ಕಾಟಣ್ಣನು
ಒತ್ತಿ ನೋಡಿದ ದೊಡ್ಡ ಪೌಜ ।
ಮುತ್ತಿಕೊಂಡರು ರಾಮಯ್ಯನನೆನುತಲಿ
ಮತ್ತೋಡಿಬಂದು ಕೂಡಿದನು ॥೫೯॥

ಕಾಟನ ಒಡನಿದ್ದ ಮಾನ್ಯರು ರಾಹುತರು
ದೂಟಿಸಿ ಹೊಕ್ಕು ನೇಮಿಯನು ॥೬೦॥

ರಾಮನ ಮೇಲೆ ನಿಲ್ಲುವುದಿಲ್ಲ ದಂಡೆಂದು
ನೇಮಿ ಚಿಂತಿಸಿ ಮನದೊಳಗೆ ।
ಕಾಮುಖಖಾನರ ಕೂಡಿ ಬಿದ್ದನು ಮೇಲೆ
ಭೂಮಿ ತಲ್ಲಣಿಸಿ ಭೋರಿಡುತ ॥೬೧॥

ಹೆಣಗಳು ಬಿದ್ದು ಮುಂಡಗಳು ಕುಣಿವುತ ಬರೆ
ರಣಮಯವಾಯ್ತು ಭೂಮಿಯಲಿ ।
ರಣಮಯ ಹೆಣಮಯವಾಯ್ತು ರಣರಂಗ
ರಣರಂಗ ಬಿಟ್ಟು ಓಡಿದ ನೇಮಿಖಾನ ॥೬೨॥

ಕುಣಿದಾಡಿದವು ಶಾಕಿನಿ ಡಾಕಿನಿ ಭೂತ
ಕುಣಿದಾಡಿ [ತಿಂದು] ತೇಗಿದವು ।
ದಣಿಯಲೆ ತಿಂದು ರಾಮನ ಕೊಂಡಾಡಿದವು
ಅಣಕವಾಯಿತು ರಣದೊಳಗೆ ॥೬೩॥

ಹಬ್ಬವ ಮಾಡಿ ಉಣಿಸಿದ ರಾಮುಗನೆಂದು
ಉಬ್ಬಿ ಕೊಂಡಾಡುತ ಕುಣಿದು ।
ಬೊಬ್ಬೆಯನಿಡುತ ರಣದೊಳು ಭೂತಗಳು ಕೂಗೆ
ಗಬ್ಬಿ ರಾಮಯ್ಯ ನೋಡಿದನು ॥೬೪॥

ಓಡಿಹೋದರು ತುರುಕರು ಎಲ್ಲ ಅಲ್ಲಲ್ಲಿ
ಕೂಡಿ ಮಾತಾಡಿಕೊಂಡವರು ।
ನಾಡಿನೊಳ್ ರಾಮಗೆ ಇದಿರಿಲ್ಲವೆನುತಲಿ
ಜೋಡಿಸಿಕೊಂಡು ಗಂಟುಗಳ ॥೬೫॥

ಹೋಗುವ ನೇಮಿಯ ಬೆನ್ನತ್ತೆ ರಾಮಯ್ಯ
ಬೇಗ ತೊರೆಯ ದಾಂಟಿ ನೇಮಿ ।
ಸಾಗಿದ ಮುಂದಕೆ ಬಾದಾಮಿತನಕಲಿ
ಜಾಗ್ರತೆಯೊಳು ಹಗಲಿರುಳು ॥೬೬॥

ಹಿಡಿಸಿದ ಧರ್ಮಗಹಳೆಯನು ರಾಮಯ್ಯ
ಕಡಿವಂಥ ಮನ್ನೆಯರೆಲ್ಲ ।
ಒಡನೆ ತಿರುಗಿ ಹಿಂದಕೆ ನಿಂತರೆಲ್ಲರು
ತಡೆದರು ಅಲ್ಲೊಂದು ದಿನವು ॥೬೭॥

ಒಡನೆದ್ದು ಹಿಂದಕ್ಕೆ ತಿರುಗಿ ರಾಮಯ್ಯನು
ಬಿಡಿಸಿದ ಸಿಕ್ಕಿದವರನು ।
ಕಡೆಯಾಯಿತು ಕಾಟಣ್ಣ ಹೋಗುವ
ನಡೆಯೆಂದ ರಾಮಯ್ಯನೊಡನೆ ॥೬೮॥

ಹುಲ್ಲ ಕಚ್ಚಿದರ ಹುತ್ತವನೇರಿ ಜಲದೊಳು
ನಿಲ್ಲದೆ ನಿಂತವರ ನೋಡಿ ।
ಎಲ್ಲರ ನೋಡಿಬಿಡು ಎನುತ ರಾಮಯ್ಯನು
ಉಲ್ಲಾಸದಿಂದ ಕುಮ್ಮಟಕೆ ॥೬೯॥

ಮಗ ಗೆದ್ದು ಬರುವ ಸುದ್ದಿಯ ಕೇಳಿ ಕಂಪಿಲ
ಸೊಗಸಿಂದ ತನ್ನ ಪಟ್ಟಣವ ।
ಮಿಗೆ ಶೃಂಗರಿಸಿ ತಳಿರು ತೋರಣದಿಂದ
ಹೊಗಲಿ ಅರ್ತಿಯಲಿ ರಾಮಯ್ಯ ॥೭೦॥

ಬಂದನು ಐದಾರು ಗಳಿಗೆಗೆ ರಾಮಯ್ಯ
ನಿಂದನು ಕುಮ್ಮಟದ ಮುಂದೆ ।
ಅಂದು ರಾಮೇಶಗೆ ಶರಣೆಂದು ಹೊಕ್ಕನು
ತಂದೆಯ ಕಾಣಬೇಕೆಂದು ॥೭೧॥

ಸೊಕ್ಕ ಸಾರಂಗನ ಏರಿ ರಾಮಯ್ಯನು
ಉಕ್ಕುಡವನು ಹೊಗುವಾಗ ।
ತಕ್ಕಂತೆ ಕುರಿಯ ಕಡಿಸಿ ನಿವಾಳಿ ಹಾಕಿ
ಹೊಕ್ಕನು ರಾಜಬೀದಿಯಲಿ ॥೭೨॥

ಊರೊಳಗುಳ್ಳ ಹೆಮ್ಮಕ್ಕಳು ಶೃಂಗರಿಸಿ
ಆರತಿಗಳ ತಂದರಾಗ ।

ವೀರ ರಾಮಯ್ಯಗೆ ಎತ್ತಿ ಹರಸಲಾಗ
ಆರತಿಯೊಳಗೆ ಹೊನ್ನುಗಳ ॥೭೩॥

ಹರಿವಾಣದಾರತಿಗಳ ತಂದು ಹರಿಯಮ್ಮ
ಭರದಿಂದ ಮಗಗೆ ಎತ್ತಿದಳು ।
ಧುರದೊಳು ಗೆದ್ದು ಬಂದಂಥ ರಾಮಯ್ಯಗೆ
ಹರಸಿ ಎತ್ತಿದರು ಆರತಿಯ ॥೭೪॥

ಅಕ್ಕ ಮಾರಮ್ಮ ಸಿಂಗಮ್ಮನವರ ರಾಮ
ತೆಕ್ಕಿಸಿಕೊಂಡು ಹರುಷದಲಿ ।
ಮುಕ್ಕಣ್ಣ ಶಿವನ ದಯದಿಂದ ಬಂದನು ರಾಮ
ಅಕ್ಕತಂಗಿಯರು ಹರುಷದಲಿ ॥೭೫॥

ಮುತ್ತಿನಾರತಿಯನೆತ್ತಿದರು ರಾಮಯ್ಯಗೆ
ಅರ್ತಿಯಿಂದಲಿ ಹರಸಿದರು ॥೭೬॥

ಎಲ್ಲರ ಕಳುಹಿಸಿ ನಿಲ್ಲದೆ ತಾನೆದ್ದು
ಉಲ್ಲಾಸದಲಿ ಅರಮನೆಗೆ ।
ಇತ್ತ ರಾಮನು ತನ್ನ ಅರಮನೆಯನು ಹೊಕ್ಕ
ಅತ್ತ ನೇಮಿಯಖಾನ ಪೋಗಿ ॥೭೭॥

ಬರೆಸಿದ ರಾಮನ ಮೇಲಿನ್ನು ಕಾರ್ಯವ
ಇರದೆ ಎಲ್ಲರು ಕೂಡಿಕೊಂಡು ।
ಬರುತೇವೆ ನಾವಿನ್ನು ಬಿಡುವುದಿಲ್ಲ ರಾಮನ
ಸೆರೆಯಕೊಂಡೊಯ್ವೆವು ನಾವು ॥೭೮॥

ವೀರಬಲ್ಲಾಳಗೆ ಮಾರಿಗೊಂಡಗೆ ದೊಡ್ಡ
ಓರುಗಲ್ಲರಸು ಮುಂಗುಲಿಗೆ ।
ಬೇರೊಂದು ಗುತ್ತಿಯ ಜಗದಪ್ಪಗೆ ನೇಮಿಯು
ಸಾರಿ ಬರೆಸಿದನು ವಾಲೆಯನು ॥೭೯॥

ಎಲ್ಲ ದೊರೆಗಳಿಗೆಲ್ಲ ಹ್ಯಾವ ಪಂಥವನಿಕ್ಕಿ
ಮೆಲ್ಲನೆ ಕೂಚ ಮಾಡಿಸಿ ।

ಅಲ್ಲಿಂದ ಡಿಳ್ಳಿಗೆ ಸಾಗಿ ತಾ ಹೋದನು
ಬಲ್ಲಿದ ಆರು ತಿಂಗಳಿಗೆ ॥೮೦॥

ಎಲ್ಲ ದಂಡೆಲ್ಲ ಚಿಕ್ಕ ಡಿಳ್ಳಿಗೆ ಇಳಿದರು
ಅಲ್ಲಿಂದ ಉಂಡುಟ್ಟು ಹೊರಟು ।
ನಿಲ್ಲದೆ ರಾತ್ರಿ[ಯ] ಹೊತ್ತಿಗೆ ಮನೆಗಳಿಗೆ
ಬಲ್ಲಂತೆ ಹೋದರು ತಮಗೆ ॥೮೧॥

ಮುರಿದೋಡಿ ಬಂದ ಸುದ್ದಿಯ ಕೇಳಿ ಸುರಿತಾಳ
ಸುರಿತಾಳ ಕರೆಸಿದ ನೇಮಿಖಾನರನು ।
ಭರದಿಂದ ಬಂದಡ್ಡಬಿದ್ದು ಮುಜುರೆ ಮಾಡಿ
ಸರನದ್ದು ನಿಂದು ಕೈಮುಗಿಯೆ ॥೮೨॥

ಕೊಟ್ಟದ ಬೇಡ ರಾಮನ ಹಿಡಿತರುವರೆ
ಬಿಟ್ಟುಬರುವರೆ ನೇಮಿಖಾನ ।
ಇಷ್ಟು ಮಾತ್ರಕೆ ಕೊಂದೆ ಖಾನ ವಜೀರರ
ಬೆಟ್ಟದ ರಾಮಗೆ ಅಂಜಿ ॥೮೩॥

ಭಾಪುರೆ ಪಾಚ್ಛಾ ಕೇಳ್ ಕೋಪವ ಮಾಡದೆ
ಮಾಡದೆ ಈ ಪರಿ ಕಾಳಗವಿಲ್ಲ ।
[ಅಪಾ]ರಮಹಿಮ ಛಲದಂಕನಹುದು ರಾಮ
ಭೂಪರೊಳು ಹುಟ್ಟಲರಿದು ॥೮೪॥

ದುರ್ಗವೆಂಬುದು ತರುಗಿರಿಬೆಟ್ಟ ಕುಮ್ಮಟ
ಗರ್ವ ರಾಮಯ್ಯ ತಾ ಹೊರಟ ।
ನುಗ್ಗುಮಾಡಿ ಖಾನಖಾನರನೆಲ್ಲರ ಕೊಂದನು
ಸ್ವರ್ಗದ ಪತಿ ಶಿವ ಬಲ್ಲ ॥೮೫॥

ರಾಮನ ಕತ್ತಿಗೆ ಇದಿರಿಲ್ಲ ರಾಜ್ಯದೊಳ್
ಕಾಮನ ರೂಪು ಚೆನ್ನಿಗನು ।
ಭೂಮಿಯೊಳಗೆ ಅವ ಕೈಸೆರೆ ಸಿಕ್ಕುವನಲ್ಲ
ಸೋಮಶೇಖರ ಶಿವ ಬಲ್ಲ ॥೮೬॥

ಎಂದ ಮಾತನು ಕೇಳಿ ಸುರಿತಾಳ ಪಾಚಾವ ಇ
ನ್ನೊಂದು ಬಾರಿಗೆ ನೋಡಿಕೊಂಬ ।
ಬಂದಂಥ ಖಾನರ ಸಮಜಾಯಿತಿ ಸುರಿತಾಳ
ನಂದು ಮನೆಗೆ ಕಳುಹಿದನು ॥೮೭॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಕದನದೊಳ್ ನೇಮಿಯ ಗೆದ್ದನು ರಾಮಯ್ಯ
ಪದಗಳು ಮುಗಿಯೆ ಸಂಪೂರ್ಣ ॥೮೮॥

ಅಂತು ಸಂಧಿ ೧೨ಕ್ಕಂ ಪದನು ೧೨೯ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೩

❖

ಬಲ್ಲಾಳರಾಯನ ಯುದ್ಧ ಮತ್ತು ಸೋಲು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ತಂದೆ ಮಕ್ಕಳು ಕೂಡುವೊಂದಿಲಿ ಕಾಟಣ್ಣ
ಬಂದು ಕುಳಿತರು ಬೇಗದೊಳು ।
ಚಂದದೊಳುಂಡು ಕರ್ಪುರ ವೀಳ್ಯವ ಕೊಂಡು
ವಂದಿಸಿ ಹೊರಟರಾಕ್ಷಣದಿ ॥೨॥

ತಂದೆ ಮಕ್ಕಳು ಕೂಡ ಬಂದು ಹಜಾರಕ್ಕೆ
ಒಂದೇ ಸದರಿನಲ್ಲಿ ಕುಳಿತು ।
[ಹಿಂ]ದುವ ರಾಮ ನಿನ ಮುಂದೆ ಕಡಿದಾಡಿದ
ಮಂದಿಯ ಸಮಜಾಯಿಸಿಕೊಳ್ಳೊ ॥೩॥

ಎಂದ ಮಾತನು ಕೇಳಿ ಪೇಳಿದ ಚರರಿಗೆ
ಮಂದಿಯನೆಲ್ಲ ಕರೆತನ್ನಿ ॥೪॥

ಚರರೋಡಿ ಹೋಗಿ ಸಮಸ್ತರ ಕರೆದರು
ದೊರೆಯ ಮಕ್ಕಳನು ರಾಹುತರ ।
ಇರದೆ ನೀವ್ ಬನ್ನಿ ಮಾನ್ಯರಿಗೆಲ್ಲ ಸಾರುತ
ಕರೆದರು ಕೇರಿಕೇರಿಯೊಳು ॥೫॥

ಎಲ್ಲರು ಬಂದು ಕೈಮುಗಿಯಲು ಕಂಪಿಲ
ನಿಲ್ಲದೆ ಕುಳ್ಳಿರೆಂದೆನುತ ।
ಉಲ್ಲಾಸದಲಿ ಮಂತ್ರಿ ಬೈಚಪ್ಪಗೆ । ಹೇಳಿದ
ಎಲ್ಲ ವಸ್ತ್ರಂಗಳ ತರಿಸೊ ॥೬॥

ರಾಮಯ್ಯನೆಡೆಗೆ ತಂದಿರಿಸಯ್ಯ ಬೇಡಿದುದ
ಕ್ಷೇಮದೊಳೆನುತ ಕಂಪಿಲನು ॥೭॥

ದೊರೆಯ ಮಕ್ಕಳಿಗೆಲ್ಲ ಕರೆದು ಕೊಟ್ಟನು ರಾಮ
ಮುರುಡಿ ಸರಪಳಿಯ ಪದಕಗಳ ।
ನೆರೆ ಬಂದಂಥ ರಾಹುತರಿಗೆಲ್ಲವ ಕೊಟ್ಟು
ಪರಿಪರಿ ಒಡವೆ ವಸ್ತ್ರಗಳ ॥೮॥

ಬಿರಿದು ಬಾವುಲಿ ಕೊಟ್ಟು ಮಂದಿ ಮಕ್ಕಳಿಗೆಲ್ಲ
ಕರೆದು ಕೊಟ್ಟನು ಹೊನ್ನುಗಳ ।
ಪರಿಪರಿ ಬಣ್ಣ ಉಡುಗೊರೆ ಕೊಟ್ಟು ಮನ್ನಿಸಿ
ಕರೆದು ಕೊಟ್ಟನು ವೀಳ್ಯಗಳನು ॥೯॥

ಗಾಯದವರಿಗೆ ಕೊಟ್ಟ ಜಾಳಿಗೆ ಹೊನ್ನನು
ನಾಯಕವಾಡಿಗಳಿಗೆಲ್ಲ ।
ಆಯತವಾಗಿ ಕೊಟ್ಟನು ಉಡುಗೊರೆಯ
ಬಾಯೆಂದು ಕೊಟ್ಟ ವೀಳ್ಯವನು ॥೧೦॥

ಸಕಲ ಬಲವನೆಲ್ಲ ಸಮಜಾಯಿಸಿಕೊಂಡನು
ಯುಕುತಿಲಿ ರಾಮಯ್ಯ ನಗುತ ॥೧೧॥

ಇಂತು ಸಂತೋಷದೊಳು ರಾಮ ತಾನಿರುತಿರೆ
ಪಂಥದೊಳ್ ಬಲ್ಲಾಳರಾಯ ।
ಇಂತಪ್ಪ ರಾಮನ ಸುದ್ದಿಯ ಕೇಳುತ
ಚಿಂತೆಮಾಡುತಲಿರ್ದನಲ್ಲಿ ॥೧೨॥

ಸುರಿತಾಳ ನೇಮಿಯು ಬರೆದಂಥ ಕಾಗದ
ಚರರೋಡಿ ತಾ ಬಂದು ಕೊಡಲು ।

ಅತ್ತವರನು ಕಳುಹಿ ತನ್ನ ಮಂತ್ರಿಯೊಳ್
ಇತ್ತ ಆಲೋಚಿಸುತಿರಲು ॥೧೩॥

ಮೀರಿದ ರಾಮನು ಸುರಿತಾಳನ ಗೆದ್ದ
ದಾರಿಗಂಜುವನವನೆಂದ ॥೧೪॥

ದಾರಿಯ ಸುದ್ದಿಯ ನೆಚ್ಚಿಗೆ ನಮಗಿಲ್ಲ
ಆರನಾದರು ನಾವು ಕಳುಹಿ ।
ಓರುಗಲ್ಲಿಗೆ ಹೋಗಿ ಸುದ್ದಿಯ ತರುವಂತೆ
ಸಾರ ಅಪ್ಪಣೆ ಕೊಡಬೇಕು ॥೧೫॥

ಕಳುಹಯ್ಯ ಮಂತ್ರಿ ನರಸಿಂಗರಾಯನ ಬೇಗ
ಒಳಪಾಡಿನೂಳಿಗದವರ ।
ಒಳಹೊಕ್ಕು ಪಟ್ಟಣದೊಳಗೆಲ್ಲ ಅಲ್ಲಲ್ಲಿ
ತಿಳಿಕೊಂಡು ಬರಲಿ ಸುದ್ದಿಯ ॥೧೬॥

ಧರೆಯೊಳು ರಾಮ ಬಲ್ಲಿದನಾಗಿ ರಾಜ್ಯದ
ದೊರೆದೊರೆಗಳ ಬಿರಿದುಗಳ ।
ಧರಿಸಿದೆನೆಂಬ ಗರ್ವದಿ ತಮ್ಮ ತಂದೆಯೊಳ್
[ವಿ]ರಸಾಗಿ ಓರ್ಗಲ್ಲ ಸೇರಿ ॥೧೭॥

ತಂದೆಯ ಕೂಡಿನ್ನು ಮನ ಮುನಿಸಿ ನಾನಿನ್ನು
ಬಂದೆನು ನಿಮ್ಮಮೋಲೈಸ ।
ಲೆಂದು ಅವರೊಳು ಒಳಹೊಕ್ಕು ತಾ ಹೋಗಿ
ನಿಂದನು ಅವರ ಮುಖದೊಳು ॥೧೮॥

ಇಲ್ಲದ ತಳ್ಳಿಯ ಮಾಡಿ ಅವರ ಮಂದಿ
ನೆಲ್ಲರ ಕೊಂದು ಮೋಸದಲಿ ।
ನಿಲ್ಲದೆ ಕಳ್ಳ ಬೇಡನು ಬೊಲ್ಲನ ತಂದ
ಬಲ್ಲಾಳರಾಯ ಕೇಳೊಡೆಯ ॥೧೯॥

ಬೊಲ್ಲನ ತಂದಂಥ ಗರ್ವದೊಳ್ ಘುಳಿಯೇರ
ನಿಲ್ಲದೆ ಮುತ್ತಿಗೆ ಮಾಡಿ ।

ಪಲ್ಲವಿಸಿ ಪಂಜರಗಿಳಿಯನು ಆಕ್ಷಣ
ಕಲ್ಲರಸ ಕೊಟ್ಟು ಒಂದಾದ ॥೨೦॥

ಮತ್ತೆ ಮೇಲಾಗಿ ಕರಿಯ ಪಚ್ಚೆಯ ಕಲ್ಲ
ಕೊಟ್ಟನು ಹುಳಿಯಾರ ಮಾರ ।
ಗುತ್ತಿಯ ಜಗದಪ್ಪ ಅಂಜಿ ಕೊಟ್ಟನು ಹೆಣ್ಣ
ಒತ್ತಿದ ರಾಮ ರಾಜ್ಯವನು ॥೨೧॥

ಸುತ್ತ[ಣ] ಸೀಮೆಯ ಕಟ್ಟಿ ಬಲ್ಲಿದನಾದ
ಕುತ್ತಿಗುಬ್ಬಸ ನಿಮಗೆಂದ ॥೨೨॥

ಪಗುಡಿಗೆ ಪಾಚ್ಛಾವ ಕಳುಹಿದ ಪಾವುಗೆಯ
ಜಗದೊಳಗವನು ಮೆಟ್ಟಿದನು ।
ಜಗಳಕ್ಕೆ ಡಿಲ್ಲಿಗೆ ಡಾವೆದಾರು ಆದ
ಹಗರಣವೇನ ಪೇಳುವೆನು ॥೨೩॥

ಅವನೊಳು ಸೆಣಸುವ ರಾಯರ ಕಾಣೆನ್ನು
ಭುವನದೊಳಗೆ ಆಶ್ಚರ್ಯ ।
ಹವಣಿಲ್ಲ ಅವನ ಕೂಡೆಯು ಕಾನಝುಂಗೆಯು
ಶಿವನ ಒಲುಮೆಯ ಕುಮಾರ ॥೨೪॥

ಇಂತಪ್ಪ ಸುದ್ದಿಯ ಕೇಳುತ ಬಲ್ಲಾಳ
ಚಿಂತೆ ಯಾತಕೆ ನೇಮಿಗೆನುತ ।
ಪಂಥವ ತಾಳಿ ಮನದೊಳಗೆ ಕ್ರೋಧವನಿಟ್ಟು
ಇಂತು ಬಿಡಬಲ್ಲೆನೆ ಅವನ ॥೨೫॥

ಗರ್ವವ ಮುರಿದು ಕುಮ್ಮಟವ ಕೈಸೆರೆಯನು
ಉರ್ವಿಯೊಳ್ ಪಿಡಿತಹೆನೆನುತ ॥೨೬॥

ಸುತ್ತಣ ರಾಜರಿಗೋಲೆ ಉಡುಗೊರೆಗಳ
ಒತ್ತಿ ಬರೆಸಿ ಕಳುಹಿದನು ।
ಇತ್ತ ಚರರೋಡಿ ಬಂದು ಎಲ್ಲರು ಕಂಡು
ಇತ್ತರು ವಾಲೆ ಉಡುಗೊರೆಯ ॥೨೭॥

ಓದಿಸಿಕೊಂಡು ಕೇಳಿದರಾಗ ಸುದ್ದಿಯ
ಕಾದುವರುಂಟೆ ರಾಮನೊಳು ।
ಭೂದೇವಿ ಬಲ್ಲಳು ಎನುತಲವರು ಬಲ ಎಲ್ಲ
ಆದಂಥ ಕುದುರೆ ಮಂದಿಯನು ॥೨೮॥

ಚಿಪ್ಪಗಿರಿಯಲಿಂದ ಮೊಗಲ ತಾ ಬಂದನು
ಎಪ್ಪತ್ತು ಸಾವಿರ ಕುದುರೆ ।
ತಪ್ಪದೆ ಏಳ್ನೂರ ಆನೆ ಸಹಿತವಾಗಿ
ಒಪ್ಪದಿ ಬಲ್ಲಾಳನೆಡೆಗೆ ॥೨೯॥

ಲಾಳ ಮಾಳವ ರಾಯರು ಕೂಡಿ ಮಾತಾಡಿ
ಆಳೊಂದು ಹತ್ತು ಸಾವಿರವು ।
ಎಳ್ನೂರು ವಾಜಿ ಎಪ್ಪತ್ತು ಕರಿಗಳು ಸಹ
ಪಾಳೆಗಾರರು ಕಳುಹಿದರು ॥೩೦॥

ಮಲೆಯಾಳ ಕೊಂಕಣದೇಶದ ರಾಯರು
ಒಲಿದು ಬಲ್ಲಾಳನ ಮೇಲೆ ।
ಸಲೆ ಹತ್ತು ಸಾವಿರ ಬಲವು ಸಾವಿರ ವಾಜಿ
ಬಲವಂತದವರ ಕಳುಹಿದರು ॥೩೧॥

ಅತ್ತ ಓರ್ಗಲ್ಲ ಪ್ರತಾಪರುದ್ರನ ಬಳಿಗೆ
ಮತ್ತೆ ಬಲ್ಲಾಳ ಮುತ್ತಿಗೆಯನು ।
ಮಾಡಬೇಕು ಕುಮ್ಮಟಕೆಂದು ಉತ್ರ
ಉಡುಗೊರೆಯ ಕಳುಹಿದನು ॥೩೨॥

ಸಾರಿಹೋದರು ಮಂತ್ರಿಗಳೋರುಗಲ್ಲಿಗೆ
ವೀರ ಪ್ರತಾಪನ ಕಂಡು ।
ಬೇರೆ ಏಕಾಂತವ ಮಾಡಿ ಮಾತಾಡಿದರು
ಧೀರ ಮುಂಗುಲಿರಾಯನ ಬಳಿಗೆ ॥೩೩॥

ಸಾರಿ ಕರೆಸಿದನು ಗುರಿಕಾರ ಎಕ್ಕಟಿಗರ
ಓರುಗಲ್ಲಿಗೆ ಪಯಾಣವೆನುತ ।
ಅರುವತ್ತು ಸಾವಿರ ಕುದುರೆಯ [ತಳುವದೆ]
ದೊರೆಯ ಮಕ್ಕಳ ಕಳುಹಿದನು ॥೩೪॥

ಬಿರಿದಿನೆಕ್ಕಟಿಗರು ಮೂವತ್ತು ಸಾವಿರ
ಹರುಷದಿ ಮುಂಗುಲಿರಾಯ ।
ಮಗ ಸಿಂಗರಾಯನ ಕೂಡಿಸಿ ಕಳುಹಿದ
ಅಗಣಿತವಾದಂಥ ಪೌಜ ॥೩೫॥

ನಾಳಿನ ದಿನ ದಂಡ ಕೂಚಿಗಳನು ಮಾಡಿ
ಯಾಳಬೇಕೆಂದು ಕುಮ್ಮಟಕೆ ।
ದಾಳಿಯ ಮಾಡಿನ್ನು ರಾಮನ ರಾಜ್ಯವ
ಕೋಳ ಹಿಡಿಯಲಿ ಬೇಕು ನಾವು ॥೩೬॥

ಮೊಗಲ ವಜೀರನ ಮಾತುಗಳನು ಕೇಳಿ
ಮಿಗೆ ರುದ್ರರಾಯ ತಾ ನುಡಿದ ।
ಜಗಳಕೆ ಪಾಚ್ಛಾನೇಮಿಯು ಮುತ್ತಿ ಕಲ್ಲೊಳು
ನಗುಪಾಟಲಾಗಿ ತಾ ಹೋದ ॥೩೭॥

ಎಂದ ಮಾತನು ಕೇಳಿ ಸಿಂಗಯ್ಯನಾಡಿದ
ಮುಂದೊಂದು ದೊಡ್ಡ ಕೋಟೆಯನು ।
ಬಂಧಿಸಿ ಮುತ್ತಿಕೊಂಡರೆ ರಾಮ ಬರುವನು
ಬಂದರೆ ನಾವ್ ಸುತ್ತಿಕೊಂಡು ॥೩೮॥

ಕಡಿಕಡಿದು ರಾಮನ ಕೈಸೆರೆಯನು
ಹಿಡಿದು ಡಿಲ್ಲಿಗೆ ಕಳುಹುವೆನು ।
ಬಿಡದೆ ಕುಮ್ಮಟವ ಮುತ್ತಿಗೆಯನು ಮಾಡಿ
ಹೆಡಮುರಿಯನು ಕಟ್ಟಿಕೊಂಡು ॥೩೯॥

ಬೆಳಗೆದ್ದು ಊಟವ ಮಾಡಿನ್ನು ಹೊರಟರು
ಘಳಿಲನೆ ದಂಡು ಕೂಚಾಗಿ ।
ಇಳಿಯಿತು ಬಂದು ಗಡಿದುರ್ಗಕ್ಕೆ ಮುತ್ತಿಗೆ
ತಳಿಗಳ ಹಾಕಿದರಾಗ ॥೪೦॥

ಸುತ್ತ ಮುತ್ತಿಗೆ ಮಾಡಿಕೊಂಡು ಬಂದಿಳಿದರು
ಎತ್ತ ನೋಡಲು ಅತ್ತ ಪೌಜು ।
ಹತ್ತಿತು ಜಗಳವು ಕೋಟೆಯೊಳಗಳ ಮಂದಿ
ತತ್ತಾರದಲಿ ಹೊರಟು ಕಡಿದು ॥೪೧॥

ನಾಲ್ಕು ಕಡೆಗೆ ದಂಡು ನಾಲ್ಕು ಪೌಜನು ಮಾಡಿ
ನೂಕಿ ಇಳಿಯಿತು ಸುತ್ತಮುತ್ತ ।
ಜೋಕೆ ಎಚ್ಚರ ರಾಮನು ಬರುವ ದಾರಿ
ಯೊಳು ಆಕಡೆ ಮೊಗಲ ತಾನಿಳಿದ ॥೪೨॥

ರಾಮನ ಸೀಮೆಗೆ ದಾಳಿಯನಿಕ್ಕುತ
ಗ್ರಾಮಗಳೆಲ್ಲವ ಸುಡುತ ।
ಸೀಮೆಯನೆಲ್ಲವ ಕೈಸೆರೆಯ ಹಿಡಿವುತ
ಧಾಮಧೂಮ ಮಾಡಿ ಸುಡುತ ॥೪೩॥

ಗಡಿದುರ್ಗದೊಳಗಿರ್ದ ಕಾಟನಾಯಕ ತನ್ನ
ಕಡೆಯ ತಳವಾರರ ಕರೆಸಿ ।
ಬಿಡದೋಡಿಹೋಗಿ ರಾಮಗೆ ಸುದ್ದಿಯನು ಪೇಳಿ
ತಡೆಯದೆ ಬನ್ನಿ ನೀವೇನಲು ॥೪೪॥

ಎಂದ ಮಾತನು ಕೇಳಿ ಬಂದರು ಚರರೋಡಿ
ನಿಂದರು ರಾಮಯ್ಯನಿದಿರ ।
ಅಂದಡ್ಡಬಿದ್ದು ಕೈಮುಗಿದು ವಂದನೆ ಮಾಡಿ
ಬಂದಿತು ಮುತ್ತಿಗೆ ಎನಲು ॥೪೫॥

ಲೆಕ್ಕವಿಲ್ಲದ ದಂಡು ಕೂಡಿ ಬಲ್ಲಾಳನ
ರಕ್ಕಸ ಮೊಗಲ ತಾ ಸಹಿತ ।
ಮಿಕ್ಕ ಮಾತಿನ್ನೇನು ಸುತ್ತಣ ರಾಯರು ಕೂಡಿ
ಹೊಕ್ಕರು ನಮ್ಮ ಸೀಮೆಯನು ॥೪೬॥

ನಾಡನೆಲ್ಲವ ಹೊಕ್ಕು ಸುಡುತ ಗಡಿದುರ್ಗವ
ನೋಡಿ ಮುತ್ತಿದರು ಎನ್ನೊಡೆಯ ॥೪೭॥

ಸುತ್ತಣ ಸೀಮೆಯ ಮುತ್ತಿಕೊಂಡಿತು ದಂಡು
ಎತ್ತ ನೋಡಲು ತೆರಹಿಲ್ಲ ।
ಕತ್ತಲೊಳ್ ತಪ್ಪಿಸಿಕೊಂಡು ಬಂದೆವು ರಾಯ
ಚಿತ್ತೈಸು ಎಮ್ಮಬಿನ್ನಪವ ॥೪೮॥

ಕೇಳಿದ ಸುದ್ದಿಗಳನೆಲ್ಲ ರಾಮಯ್ಯನು
ಹೇಳುವುದೇನು ನೀವು ಹೋಗಿ ।
ನಾಳೆ ಹೊರಡುವೆ ಪ್ರಯಾಣವ ಮಾಡಿ
ಕಾಹಳೆಯಹಿಡಿಯೆಂದ ಭೂಪ ॥೪೯॥

ಬಂದಂಥ ಚರರಿಗನ್ನವನುಂಡು ಹೋಗೆಂದು
ಒಂದು ನಗಾರಿ ಮಾಡಿಸಿದ ।
ನಿಲ್ಲದೆ ತಾನು ಮನ್ನೆಯರ ಬರ
ಹೇಳೆಂದು ಬಂದನು ತನ್ನ[ರ]ಮನೆಗೆ ॥೫೦॥

ಹಿರಿಯ ಹೆಂಡತಿ ರಾಮಲದೇವಿಯ ಕರೆದನು
ಬೆರಸು ಕೊಪ್ಪರಿ ಬಿಸಿನೀರ ।
ಭರದಿಂದೆ ಹಾನಗಲ್ಲಿಗೆ ಪ್ರಯಾಣವೆನುತಲಿ
ತರಿಸು ಕಮ್ಮೆಣ್ಣೆ ಕಸ್ತೂರಿಯ ॥೫೧॥

ರಾಯನ ಮಾತ ಕೇಳುತ ರಾಮಲದೇವಿ
ಆಯತವಾಗಿ ತಾ ತಂದು ।
ಬಾಯೆಂದು ಕರೆದು ಕಮ್ಮೆಣ್ಣೆ ಮಂಡೆಗೆ ಊಡಿ
ಪ್ರಿಯದಿಂ ಮಜ್ಜನಗೈದು ॥೫೨॥

ಧೂಳುತವಿಟ್ಟು ನಾಮವನಿಟ್ಟು ರಾಮಯ್ಯ
ಹೋಳಿಗೆ ಮೃಷ್ಟಾನ್ನವುಂಡು ।
ಪಾಳೆಗಾರರ ಗಂಡನೆಂಬಂಥ ಬಿರಿದನು
ತೋಳ ಬಾಪುರಿ ಇಟ್ಟ ರಾಮ ॥೫೩॥

ವೀರಜಡೆಯನು ಹೆಣಿಸಿದನು ರಾಮಯ್ಯನು
ಭಾರಿ ನಿಗಳವ ಧರಿಸಿದನು ।
ಹಾರ ಮುತ್ತಿನ ಸರ ಕೊರಳ ಪದಕವನಿಟ್ಟ
ಧೀರ ಬಲ್ಲಾಳನಗಂಡ ॥೫೪॥

ಮುಂಗೈಯ್ಯ ಮುರುಡಿ ಸರಪಳಿ ಚವುಕಳಿನಿಟ್ಟು
ಶೃಂಗಾರವಾದ ರಾಮಯ್ಯ ।
ಮಂಗಳ ಶುಭವೆಂದು ಗಂಧ ಪರಿಮಳವನು
ಅಂಗನೆಯರು ತಂದು ಪೂಸಿ ॥೫೫॥

ಗಂಧದೆಣ್ಣೆಯ ಕಸ್ತೂರಿ ಜವ್ವಾದಿಯ
ಚಂದದಿ ಧರಸಿ ರಾಮಯ್ಯ ।
ಬಂದನು ತಾಯರಮನೆಗಾಗಿ ರಾಮಯ್ಯ
ನಿಂದಡ್ಡಬಿದ್ದು ಕೈಮುಗಿದ ॥೫೬॥

ಎಲ್ಲಿಗೆ ಪಯಾಣ ಎತ್ತಣ ರಾಜಕಾರ್ಯವು
ಸೊಲ್ಲಿಸೊ ರಾಮ ಎನ್ನೊಡನೆ ।
ಬಲ್ಲಿದ ವೀರಬಲ್ಲಾಳ ಗಡಿದುರ್ಗವ
ನಿಲ್ಲದೆ ಮುತ್ತಿದನಂತೆ ॥೫೭॥

ರಾಮಯ್ಯನಿತ್ತ ಮಾತಾಡುತಲಿರಲಾಗ
ಕೋಮಲೆ ರತುನಿಯ ಬಿಟ್ಟು ।
ಭೂಪ ಕಂಪಿಲರಾಯ ಹೊರಟ ಚಿಕ್ಕರಮನೆಯ
ಪ್ರೇಮದೊಳ್ ಹರಿಯಮ್ಮನೆಡೆಗೆ ॥೫೮॥

ಬಂದ ತಂದೆಯ ಪಾದಕೆರಗಿ ರಾಮಯ್ಯನು
ನಿಂದನು ಮು[ಕುಲ]ಹಸ್ತದೊಳು ।
ಕಂದಯ್ಯ ವೀರ ಅರಸುಗಳೇನೊ ಅವರು
ಎಂದನು ಕಂಪಿಲಭೂಪ ॥೫೯॥

ಬಲ್ಲಾಳ ಮೊಗಲ ಮುಂಗುಲಿರಾಯನ ಮಗ
ಬಲ್ಲಿದ ಓರುಗಲ್ಲರಸು ।
ಎಲ್ಲ ರಾಯರು ಕೂಡಿ ಮಾತಾಡಿ ಗಡಿದುರ್ಗವ
ನಿಲ್ಲದೆ ಮುತ್ತಿದರಂತೆ ॥೬೦॥

ಕರೆಸಿದನಾಕ್ಷಣ ಮಂತ್ರಿ ಬೈಚಪ್ಪನ
ಕರೆಸಿದ ಮಂಚಣ್ಣನವರ ।
ಕರೆಸಿದ ಚೇರಮರಾಯನ ಮಕ್ಕಳ
ಕರೆಸಿದ ಅರಸುಮಕ್ಕಳನು ॥೬೧॥

ದೊರೆಯ ಮಕ್ಕಳು ಹಂಪರಾಜ ಕಂಪರಾಜನು
ಹಿರಿಯ ಕುಮಾರ ಕಾಟಣ್ಣ ।

ಕರೆದರಾಕ್ಷಣದೊಳು ಬಂದು ಕೈಮುಗಿಯಲು
ದೊರೆ ಕಂಪಿಲ ಕುಳ್ಳಿರೆಂದ ॥೬೨॥

ವೀರ ಬಲ್ಲಾಳನ ಗಂಡನೆಂಬುವುದೊಂದು
ಭಾರಿ ಪೆಂಡೆಯನಿಟ್ಟು ರಾಮ ।
ಸಾರಿ ಮಾನ್ಯರನೆಲ್ಲ ಕರೆಸಿಕೊಂಡನು ಮುಂದೆ
ದೂರಣ ಪಯಣ ಬೈಚಪ್ಪ ॥೬೩॥

ಬಲ್ಲಾಳರಾಯನ ಬಲವಲ್ಲದೆ ಮೊಗಲ
ರೆಲ್ಲ ರಾಯರ ಬಲ ಕೂಡಿ ।
ಬಲ್ಲಿದ ಮುಂಗುಲಿರಾಯನ ಮಗ ಸಿಂಗ
ನಲ್ಲದೆ ಓರ್ಗಲ್ಲ ಅರಸು ॥೬೪॥

ನೇಮಿಯಪ್ಪಣೆಯಿಂದ ನಾಡದೊರೆಗಳು ಎಲ್ಲ
ಆ ಮಹಾ ಮೊಗಲರು ಸಹಿತ ।
ಭೂಮಿ ಈದಂತೆ ಕೂಡಿಬಂದರೆಲ್ಲರು
ರಾಮನ ಮೇಲೆ ದಂಡೆತ್ತಿ ॥೬೫॥

ಊಟವ ಮಾಡಿಸಿ ಎಲ್ಲರನೊಡಗೊಂಡು
ದೂಟಿಸಿ ಬಂದ ಚಾವಡಿಗೆ ॥೬೬॥

ಹರಿಯಲದೇವಿ ಪಾದಕ್ಕೆರಗಿ ರಾಮಯ್ಯ
ಹರಕೆಯ ಕೈಕೊಂಡು ಹೊರಟ ।
ತರಹೇಳೊ ಬೊಲ್ಲನ ಪೂಜೆಯ ಮಾಡಿ
ಬರಹೇಳೋ ಮನ್ನೆಯರನೆಲ್ಲ ॥೬೭॥

ಮುತ್ತಿನಂದಣವೇರಿ ಹೊರಟನು ರಾಮಯ್ಯ
ಹತ್ತಿದ ಸದರು ಚಾವಡಿಯ ॥೬೮॥

ಎರಡನೆ ಕೂಚೆಯಾಯಿತು ರಾಮ ಹೊರಟನು
ಮುರಹರ ರಾಮೇಶನೆಡೆಗೆ ।
ವರಗಳ ಬೇಡಿ ಹೊನ್ನ ಕಾಣಿಕೆನಿಟ್ಟು
ಹೊರ ದಂಡನಿಳಿದ ರಾಮಯ್ಯ ॥೬೯॥

ಕುದುರೆ ಮಂದಿಯಗಣಿತ ಮಾಡಿಕೊಂಡನು
ಮದಗಜ ಹಿಂಡ ಮನ್ನೆಯರ ।
ಪದುಳದಿ ಕೂಡಿತು ಇಪ್ಪತ್ತು ಸಾವಿರ
ಕುದುರೆ ಎಪ್ಪತ್ತು ಸಾವಿರವು ॥೭೦॥

ಮೂರು ಕೂಚೆಯ ಮಾಡಿ ಹೊರಟ ರಾಮಯ್ಯನು
ಏರಿದ ಬೊಲ್ಲನ ಬೇಗ ।
ಎಡಬಲದಲಿ ಮನ್ನೆಯರು ಕುದುರೆಯ ಪೌಜು
ನಡೆದನು ತಿರುಪಳ್ಳಿಗಾಗಿ ॥೭೧॥

ಕಾಟಣ್ಣಗೊಂದು ಪೌಜನು ಮಾಡಿಕೊಟ್ಟನು
ಮೀಟಾದ ವಾಜಿಯನೆಲ್ಲ ।
ಈಟಿ ಬರ್ಚಿಯ ಮಂದಿಯನೆಲ್ಲ ಕೊಟ್ಟನು
ಮೀಟಾದ ಮನ್ನೆಯರನೆಲ್ಲ ॥೭೨॥

ನಾಲ್ಕು ಪೌಜನು ಮಾಡಿ ನಡೆಯೆಂದು ಗುಜ್ಜಲೋಬ
ನಾಲ್ಕು ಬಗೆಯ ರಾಯರುಂಟು ।
ನಿಲ್ಲದೆ [ನಡೆಯಿರೋ] ಸೂರ್ಯ ಉದಯಕೆ ನೀವು
ಬಲ್ಲಿದ ಮೊಗಲನ ಮೇಲೆ ॥೭೩॥

ಎರಡನೆ ಕೂಚಿಗೆ ದಂಡೆಲ್ಲ ಉಂಡುಟ್ಟು
ಭರದಿಂದ ಮುಸ್ತೈದೆಯಾಗಿ ।
ಮೂರನೆ ಕೂಚಿಗೆ ದಂಡೆಲ್ಲ ನಡೆಯಿತು
ದಾರಿಕಾರರ ಕರಕೊಂಡು ॥೭೪॥

ಏರಿ ಬೊಲ್ಲ ರಾಮಯ್ಯ ಬಂದಿಳಿದನು
ನರಗುಂದದ ಹೊಳೆಗಾಗಿ ।
ಕರೆಸಿದ ಕಳ್ಳಬಂಟರನೆಲ್ಲ ರಾಮಯ್ಯ
ಬರಹೇಳೊ ನಿನ್ನ ಮನ್ನೆಯರು ॥೭೫॥

ಇರದೋಡಿ ಹೋಗಿ ಗಡಿ ದುರ್ಗದ ಸುದ್ದಿಯ
ತರಹೇಳೊ ಸುದ್ದಿಗಳೆನುತ ॥೭೬॥

ಅಲ್ಲಿಂದ ನಾಲ್ಕೂರು ಪ್ರಯಾಣಕ್ಕೆ ರಾಮಯ್ಯ
ನಿಲ್ಲದೆ ಮುನವಳ್ಳಿಯೊಳಗೆ ।
ಬಲ್ಲಿದ ಮನ್ನೆಯರ ಗುಜ್ಜಲೋಬಯ್ಯನ
ಎಲ್ಲರ ಕರೆಸಿ ಬೇಗದೊಳು ॥೭೭॥

ಏಕಾಂತವನಾಡಿ ಎಲ್ಲರು ಕೂಡಿನ್ನು
ಸಾಕಾರವಾದಂಥ ಮಾತ ।
ನೂಕಿ ಹೊರಟು ನಾಳೆ ಮುತ್ತಿಗೆ ಎಬ್ಬಿಸಿ
ಹಾಕಿಸೊ ಝುಂಡೆಯವೆನುತ ॥೭೮॥

ಉದಯದೊಳೆದ್ದು ಊಟವ ಮಾಡಿ ರಾಮಯ್ಯ
ಸದರ ಡೇರೆದೊಳು ಕುಳಿತ ।
ಚದುರರು ನಾಲ್ಕು ಪೌಜನು ಮಾಡಿ ನ
ಡೆದರು ಚತುರಂಗ ಬಲ ಸಹವಾಗಿ ॥೭೯॥

ಬಿಡದೇರಿ ಬಂದ ಬಾದೂರನಖಾನು ಬಲದಿ
ಎಡವಂಕದಲಿ ಕಾಟಣ್ಣ ।
ಕಡೆಯಲ್ಲಿ ಚಾರಮರಾಯನ ಮಕ್ಕಳು
ಮುಂದೆ ದೇಮಯ್ಯನ ಪೌಜು ॥೮೦॥

ಭೇರಿ ನಗಾರಿ ಹೊಯ್ಸುತ ರಾಮಯ್ಯ
ವಾರುವನೇರಿ ನಡೆದನು ।
ವೀರ ಬಲ್ಲಾಳನ ಮುಂಜೂಣಿ ಕುದುರೆಯು
ಏರಿತು ರಾಮನ ಮೇಲೆ ॥೮೧॥

ಮುರಿಯಲಿರಿದನು ಮುಂಜೂಣಿಯ ಕಾಟಣ್ಣ
ಬೆರಸಿ ಹೊಯ್ದನು ತಿವಿತಿವಿದು ॥೮೨॥

ಬಂದು ಬಿದ್ದನು ರಾಮನೆನುತ ಬಲ್ಲಾಳ
ಮಂದಿಯನೆಲ್ಲವ ಕರೆದು ।
[ಹಿಂದು]ವ ರಾಮನ ಕೈಸೆರೆ ಹಿಡಿಸುವೆ
ನೆಂದನು ರುದ್ರನ ಮುಂದೆ ॥೮೩॥

ಸುತ್ತಳ ಮಂದಿ ಪಾಳೆಗಾರರು ಕೂಡಿತು
ಎತ್ತ ನೋಡಲು ಅತ್ತ ಪೌಜು ।
ಕತ್ತಲು ಮುಸುಗಿದಂತಾಯ್ತು ರಾಮನ ಮಂದಿ
ತತ್ತರಗೊ[ಳೆ] ತಮ್ಮೊಳಗೆ ॥೮೪॥

ಆರೆಯ ಚಾರಮರಾಯನ ಮಕ್ಕಳು
ಏರಿದರೆಡ ಬಲದಲ್ಲಿ ।
ತೂರುತ ತಲೆಗಳ ತೆಗೆದಿಟ್ಟು ಗಗನಕ್ಕೆ
ತೋರಿಸಿದರು ಸಾಹಸವನು ॥೮೫॥

ಕೋಟೆಯ ಒಳಗಣ ಕಾಟನಾಯಕನ ಮಂದಿ
ಕೋಟಿ ದಂಡಿನ ಮೇಲೆ ಹೊರಟು ।
ಲೂಟಿಯ ಮಾಡಿ ತಳಿಗಳ ಕಿತ್ತು ಈಡಾಡಿ
ದಾಟಿ ಮುಂದಕೆ ಒತ್ತಿ ಕಡಿದು ॥೮೬॥

ಇತ್ತ ರಾಮಯ್ಯ ತಾನೊತ್ತಿ ಬಂದನು ಮುಂದೆ
ಒತ್ತರಿಸುತ ಮನ್ನೆಯರ ।
ಸುತ್ತಲಿ ಬಲವ ಸವರುತ ಕಡಿವುತ
ಒತ್ತರವೇನ ಪೇಳುವೆನು ॥೮೪॥

ಮುತ್ತಿಗೆ ತೆಗೆದು ಮುಂದಕೆ ಹೋಗಿ ಬಲವೆಲ್ಲ
ಒತ್ತರದಲಿ ತಾವು ಕೂಡಿ ।
ಸುತ್ತಲು ಕವಿದು ಮುತ್ತಿತು ರಾಮನ ದಂಡು
ಎತ್ತ ನೋಡಲು ತೆರಹಿಲ್ಲ ॥೮೮॥

ಬರುವ ಬಲವನು ಕಂಡು ನೋಡಿದ ರಾಮಯ್ಯ
ನಡೆಸಿದ ಬೊಲ್ಲನ ಮೀಟಿ ।
ತುಡುಕಿ ಹೊಕ್ಕನು ಪರಬಲದ ಗುಂಪುಗಳನು
ಒಡೆಯಲಿರಿದು ಪಡೆ ಸಹಿತ ॥೮೯॥

ಗಾಯವಾದವು ಬಾದೂರಖಾನನಂಬಿನ
ಮಾಯದ ಮಳೆಯಿಂದ ತೊಯ್ದು ।

ಪಾಯದಳ ಮುರಿದು ಬರುವದ ಕಂಡು ರಾ
ಮಯ್ಯ ಝೇಯೆಂದು ಬೊಲ್ಲನ ಮೀಟಿ ॥೯೦॥

ಒಂದೆ ವಾದ್ಯದಲಿ ಏರಿದ ರಾಮಯ್ಯನು
ಬಂದನು ಬಾದೂರನಿದಿರ ।
ಸಂದೇಹ ಬಡುವಂಥ ಮಂದಿಯ ಸಮಜಾಯಿಸಿ
ಮುಂದಕ್ಕೆ ನೂಕಿದ ಬಲವ ॥೯೧॥

ಹೊಕ್ಕನು ಮಿಸಿಮಿಲ್ಲಖಾನನ ಹೊಡೆದನು
ರಕ್ಕಸ ಮಾದ ಕೂಡಿದನು ॥೯೨॥

ಮಿಸಿಮಿಲ್ಲಖಾನ ಹೊಕ್ಕನು ರಾಮನ ಮೇಲೆ
ಹೆಸರಾದ ದೊರೆಯೆ ನೋಡೆನುತ ।
ಮಸೆದಲಗಿನ ಕತ್ತಿಯಲಿ ಬಂದು ಹೊಯ್ದನು
ದೆಸೆಗೆ ಮಾನ್ಯರ ಗಂಡನ ಮೇಲೆ ॥೯೩॥

ಹೊಡೆದ ಪೆಟ್ಟನು ತಪ್ಪಿಸಿಕೊಂಡು ರಾಮಯ್ಯ
ಜಡಿದು ನೆತ್ತಿಯ ಠೌಳಿ ಮೇಲೆ ।
ಕಡಿದ ಗಾಯಕೆ ಬೀಳಲು ಆನೆ ಮಲಗಲು
ಹೊಡೆದರು ಶಬರರು ತಲೆಯ ॥೯೪॥

ಸತ್ತನೆ ಶಿವಶಿವ ಮಿಸಿಮಿಲ್ಲಖಾನನು
ಮುತ್ತಿದ ತುರಕರನೆಲ್ಲ ।
ಒತ್ತಿ ಕಡಿದು ಹಿಂದಕೆ ಹಾಕಿ ರಾಮಯ್ಯ
ಮತ್ತೆ ತಿರುಗಿದನೆಡಬಲಕೆ ॥೯೫॥

ಬಿದ್ದನು ಮೊಗಲ ವಜೀರನೆನುತಲಿ ರುದ್ರ
ಗದ್ದರಿಸುತ ಹೋಗಲೇರಿ ।
ಬಿದ್ದರು ರಾಮನ ಶಬರರು ರುದ್ರರಸು
ಗೆದ್ದೆವೆನುತ ಹೋಗಲೇರಿ ॥೯೬॥

ಒತ್ತಿದ ಚಾರಮರಾಯನ ಮಕ್ಕಳ
ಮುತ್ತಿಕೊಂಡನು ಹಿಂದು ಮುಂದು ।

ನೆತ್ತರ ಕಾಲುವೆ ಹರಿಯಿತು ರಣದೊಳು
ಸತ್ತಿತು ರಾಮನ ಬಲವು ॥೯೭॥

ಎಡವಂಕದಲಿ ಬರುತ ಕಂಡ ಕಾಟಣ್ಣನು
ಬಿಡದೆ ಹೊಕ್ಕನು ಅವರ ಮೇಲೆ ।
ಕಡಿಯೆ ರುದ್ರರಸು ಗಾಯದೊಳು ಹಿಮ್ಮೆಟ್ಟಿದ
ಒಡನೆ ಸಿಂಗನ ಕೂಡಿಕೊಂಡ ॥೯೮॥

ಮುರಿದೋಡಿ ಹೋಯಿತು ಮೂಡಣ ದೊರೆಗಳು
ನಡೆದರು ತಮ್ಮ ಪಟ್ಟಣಕೆ ।
ತಡೆಯಿಲ್ಲದೆ ಮಂದಿ ಹತ್ತುಸಾವಿರ ಬಿತ್ತು
ಒಡೆದು ಹೋಯಿತು ಮೊಗಲ ಪೌಜು ॥೯೯॥

ಇತ್ತ ಬಲ್ಲಾಳನು ಒತ್ತಿ ಬರಲು ರಾಮ
ಇತ್ತರದಲಿ ಮನ್ನೆಯರು ।
ನೆತ್ತರ ಕಾಲುವೆ ಹರಿವಂತೆ ಕಡಿದಾಡೆ
ಸತ್ತ ಮೊಗಲನ ಸುದ್ದಿ ಕೇಳಿ ॥೧೦೦॥

ಪಡೆಯೆಲ್ಲ ಮುಳುಗಿತು ತಡೆಯದೆ ಬಲ್ಲಾಳ
ನಡೆದನು ತನ್ನಯ ಪುರಕೆ ।
ಬಿಡದೆ ಬೆನ್ನಟ್ಟಿ ರಾಮನ ಮನ್ನೆಯರೆಲ್ಲ
ಕಡಿದು ಗದುಮಿತು ಬೇಡಪಡೆಯು ॥೧೦೧॥

ಬಾದೂರಖಾನನು ಕಾಟಣ್ಣನ ಮನ್ನೆಯರು
ಕಾದಿ ಬಂದರು ರಾಮನೆಡೆಗೆ ॥೧೦೨॥

ಒಡೆಯನ ಕಳಕೊಂಡು ಮೊಗಲರು ಹೋದರು
ತಡೆಯದೆ ತಮ್ಮ ಪುರಕಾಗಿ ।
ಜಡದೇಹಿ ಗಾಯದಿ ರುದ್ರರಸು [ಸಿ]ಂಗಯ್ಯ
ಕೆಡೆ ಮುರಿದೋಡಿದರವರು ॥೧೦೩॥

ಸುತ್ತ ಮೂರ್ಹರುದಾರಿ ಹೆಣಗಳು ಬಿದ್ದಿತು
ಒತ್ತಿ ಕೂಗುತ ಬೊಬ್ಬೆಯಿಡುತ ।

ಕಾತರತನದಿಂದ ಉಂಡು ದಣಿದು ರಾಮ
ನಾಥನ ಕೊಂಡಾಡುತಿರಲು ॥೧೦೪॥

ಮರುಳು ಭೂತ ಹಿಂಡು ಮರೆಯದೆ ರಾಮನ
ಧರಣೀಶನಹುದೊ ರಾಮಯ್ಯ ।
ಸ್ಥಿರವಾಗಿ ಬಾಳು ಅರಿಗಳ ಕೊಂದು ನಮಗಿನ್ನು
ಧರೆಯೊಳು ತೃಪ್ತಿಯ ಮಾಡು ॥೧೦೫॥

ಹಿಡಿಸಿದ ಧರ್ಮಗಹಳೆ ರಾಮಯ್ಯನು
ನಡೆಯೆಂದ ಮುಂದಕ್ಕೆ ದಂಡ ।
ಬಿಡದೆ ಬೆನ್ನತ್ತಿ ಹಾನ್ಗಲ್ಲ ಸುತ್ತಮುತ್ತಲಿ
ಬಿಡಿಸಿ ಇಳಿದಾನಲ್ಲಿ ದಂಡ ॥೧೦೬॥

ಬೆದರಿ ಬಂದೂರ ಹೊಕ್ಕನು ಬಲ್ಲಾಳರಾಯ
ರಾಮನ ಕತ್ತಿಗೆ ಅಂಜಿ ।
ಬೆದರಿತು ಪಡೆಯೆಲ್ಲ ಮುಳುಗಿಹೋಯಿತು ಕೆಲವು
ಹದನೇನೊ ನರಸಿಂಗ ಮಂತ್ರಿ ॥೧೦೭॥

ಇಂತಪ್ಪ ರಣಮಯ ನೋಡಲಾರದೆ ಸೂ[ರ್ಯ]
ಅಂತ್ಯವಾದನು ಪಡುಗಡಲ ॥೧೦೮॥

ಬಂದನು ನಮ್ಮ ಪಟ್ಟಣಕೆ ಮುತ್ತಿಗೆ ರಾಮ
ಮಂದೆಲ್ಲ ಸತ್ತು ರಣದೊಳಗೆ ।
ಹಿಂದಾದೆವವನೊಳು ಓಡಿಬಂದೆವು ನಾವು
ಕುಂದ ಹೊತ್ತೆವು ಮಂತ್ರೀಶ ॥೧೦೯॥

ಮುಂದಣ ಆಲೋಚನೆ ಹೇಳು ಮಂತ್ರೀಶ
ಎಂದು ವೀರಬಲ್ಲಾಳ ।
ಇಂದಿಗೆ ಅವನೊಳು ಒಂದಾಗುವುದು ಲೇಸು
ಹಿಂದೆ ನೋಡುವ ರಾಜಕಾರ್ಯ ॥೧೧೦॥

ನರಸಿಂಗರಾಯ ಮಂತ್ರಿ ಹೊರಟುಬಂದನು
ಕರೆಸಿದನವರ ಮನ್ನೆಯರ ।

ಬರಮಾಡಿಕೊಂಡು ಕೇಳಿದರವನ ಸುದ್ದಿಯ
ತೆರನೇನು ಮುಂದೆ ಕಾದುವರೆ ॥೧೧೧॥

ಕಡೆಯಲಿ ಮುರಿದೋಡಿ ಬಂದೆವು ಮಂತ್ರೀಶ
ಪಡೆಯೆಲ್ಲ ಸತ್ತು ಗಾಯಗಳು ॥೧೧೨॥

[ಮಂ]ದೆಲ್ಲ ಅಂದ ಮಾತನು ಕೇಳಿ ಮಂತ್ರೀಶ
ನೊಂದಾಗುವುದು ಲೇಸೆಂದ ।
ಮುಂದೆ ನೋಡಿಕೊಂಬ ರಾಜಕಾರ್ಯವನೆಂದು
ಮಂದಿಯ ಸಮಜಾಯಿಸಿಕೊಂಡ ॥೧೧೩॥

ಬಲ್ಲಾಳರಾಯ ಕಾಗದ ಬರೆಸಿ ಕಳುಹಿದ
ಕಳುಹಿದ ಕೊಡುವೆವು ನಾವು ಕಪ್ಪವನು ।
ಕಾದಾಕೆ ಶಕ್ತಿಯು ನಮಗಿಲ್ಲ ರಾಮಯ್ಯ
ಮಂದಿ ಮಾರ್ಬಲವೆಲ್ಲ ಹೋಯ್ತು ॥೧೧೪॥

ಎಂದು ಕಾಗದವ ಕಳುಹಿದನು ಬಲ್ಲಾಳರಾಯ
ನೊಂದು ಚರರು ತಂದುಕೊಡಲು ।
ತಂದಂಥ ಕಾಗದವ ನೋಡಿಕೊಂಡು ರಾಮಯ್ಯ
ಹುಸಿನಗೆಗಳ ನಗುತಿರ್ದ ॥೧೧೫॥

ಒಂದು ಬಿಂದಿಗೆ ಹೊನ್ನ ಪಚ್ಚೆವರ್ಣದ ಶ್ಯಾಲೆ
ತಂದುಕೊಡ ಹೇಳೊ ಗುಜ್ಜಲೋಬ ।
ಮುಂದೆರಡು ಹಿಡಿದೇಜಿ ತಂದುಕೊಟ್ಟಲ್ಲದೆ
ಒಂದಾಗುವುದು ಇಲ್ಲವೆಂದ ॥೧೧೬॥

ಎಂದ ಮಾತನು ಕೇಳಿ ಮುಂದಾಲ ಬೊಮ್ಮಯ್ಯ
ಹಿಂದಕೆ ಬಂದು ಹೇಳಿದನು ॥೧೧೭॥

ಕೇಳಿದ [ನರ]ಸಿಂಗರಾಯನು ಬಂದು
ಹೇಳಿದ ರಾಯನ ಕೂಡೆ ।
ಹೇಳುವುದೇನು ಕೇಳಿದುದ ಕೊಟ್ಟು ಕಳುಹೊ
ಕೋಳುಹೋಯಿತು ದೊರೆತನವು ॥೧೧೮॥

ಪಚ್ಚೆದ ಸೀರೆಯು [ಬಿಂದಿ]ಗೆ ಹೊನ್ನು ಹಿಡಿದೇಜಿ
ರಚ್ಚೆಗಿಕ್ಕದೆ ತಂದುಕೊಟ್ಟ ।
ಮೆಚ್ಚಿಸಿ ರಾಮಗೆ ಮುತ್ತಿನ ತುರಾಯವ
ಎಚ್ಚತ್ತು ಕಳುಹಿದ ಅರಸ ॥೧೧೯॥

ಆ ಮಹಾ ಮೊಗಲ ವಜೀರರ ಕೆಡಹಿದ
ನೇಮದಿ ಕೊಂದ ಖಾನರನು ॥೧೨೦॥

ಓರುಗಲ್ಲರಸಗೆ ಬರುಗಾಯವಾಯಿತು
ಜಾರಿಹೋದನು ಸಿಂಗನೊಡನೆ ।
ಧಾರುಣಿಯೆಲ್ಲ ರಕ್ತದ ಮಳೆಯಾಯಿತು
ಸೂರೆಯಾಯಿತು ರಣರಂಗ ॥೧೨೧॥

ಬಾದೂರಖಾನಗೆ ಬಲು ಗಾಯವಾಯಿತು
ಜಾರಿಹೋದನು ಸಿಂಗನೊಡನೆ ।
ಧಾರಿಣಿಯಲ್ಲಿ ಅಬ್ದೂಲಖಾನನು ಬಿದ್ದ ಹೊಳಕೆಯ
ಬಂಟರು ಮುಳುಗಿಹೋಯಿತು ರಾಯ
ಎಣಿಕೆಯನೇನ ಪೇಳುವೆನು ॥೧೨೨॥

ಭಾವ ಸಂಗಮದೇವ ದೇವಿಸೆಟ್ಟಿಯ ಲಿಂಗ
ಕೋವಿದ ಕೊಟಗರ ದ್ಯಾವ ।
ಜೀವಕೆ ಭಯವಿಲ್ಲ ಹುಸಿಗಾಯವಾದವು
ದೇವರ ದಯವುಂಟು ನಮಗೆ ॥೧೨೩॥

ಪಟ್ಟಣವನು ಶೃಂಗರಿಸು ಗುಡಿ ತೋರಣ
ಕಟ್ಟಿಸೊ ಸಾಲು [ಬು]ರುಜುಗಳ ।
ಪಟ್ಟದರಸು ರಾಮ ಬರುವಂಥ ದಾರಿಗೆ
ದೃಷ್ಟಿ ನಿವಾಳಿಯ ತರಿಸೊ ॥೧೨೪॥

ಪೊಡವೀಶ ಕಂಪಿಲ ಹೊರಟುಬಂದನು ಬೇಗ
ಹಿಡಿದವು ಜೋಡು ಕರ್ಣೆಗಳು ।
ತಂದೆದ್ದು ಬರುವ ರಭಸವ ಕೇಳಿ ರಾಮಯ್ಯ
ನಿಂದನು ತಾನೆದ್ದು ಬೇಗ ॥೧೨೫॥

ಇರದೆದ್ದು ಪೋಗಿ ತಂದೆಯ ಪಾದಕೆರಗಿದ
ಒದಗಿ ಕೈಪಿಡಿದೆತ್ತಿ ಮಗನ ॥೧೨೬॥

ರಾಮ ಕಂಪಿಲ[ರೆ]ದ್ದು ಬಂದರು ಹಂಪೆಯ
ಸ್ವಾಮಿ ಪೊಂಪಾಪತಿಯೆಡೆಗೆ ।
ಆ ಮಹಾ ವಿರೂಪಾಕ್ಷಗಡ್ಡಬಿದ್ದರು ಆಗ
ಕ್ಷೇಮವ ಕೇಳುತಲವರು ॥೧೨೭॥

ಹಿಡಿಹೊನ್ನ ಕಾಣಿಕೆಗಳನಿಟ್ಟು ಸ್ವಾಮಿಗೆ
ಪೊಡವೀಶರಡ್ಡಬಿದ್ದರಾಗ ।
ಒಡನೆದ್ದು ಗಂಧ ಪ್ರಸಾದವ ಕೈಕೊಂಡು
ನಡೆದರು ಕುಮ್ಮಟಕಾಗಿ ॥೧೨೮॥

ತಂದೆ ಮಕ್ಕಳು ಕೂಡಿ ಒಂದಾಗಿ ಬಂದರು
ಮಂದಿ ಮಕ್ಕಳ ಕೂಡಿಕೊಂಡು ॥೧೨೯॥

ಒಡನೆ ಬೈಚಪ್ಪನ ಕೂಡೆ ಮಾತಾಡುತ
ನಡೆದರು ರಾಮೇಶನೆಡೆಗೆ ।
ಹಿಡಿಹೊನ್ನ ಕಾಣಿಕೆನಿಕ್ಕಿ ರಾಮೇಶಗೆ
ಪೊಡವೀಶ ತಾನಡ್ಡಬಿದ್ದ ॥೧೩೦॥

ಗಂಧ ಪ್ರಸಾದವ ಕೈಕೊಂಡು ರಾಮಯ್ಯ
ಬಂದನು ಊರ ಬಾಗಿಲಿಗೆ ।
ನಿಂದಲ್ಲಿ ಕುರಿಗಳ ಹೊಯ್ಸಿ ನಿವಾಳಿಯ
ಮುಂದಕ್ಕೆ ನಡೆದ ರಾಮಯ್ಯ ॥೧೩೧॥

ಮಂಗಳ ನೀಲನ ಏರಿದ ರಾಮಯ್ಯ
ಶೃಂಗಾರ ಬಾಜಾರದೊಳಗೆ ।
ಮಗ ಬರುವದ ಕಂಡು ಹರಿಯಲದೇವಿಯು
ಅಗಣಿತ ಹೆಮ್ಮಕ್ಕಳೊಡನೆ ॥೧೩೨॥

ಮಿಗೆ ಹರುಷದೊಳೊಂದು ಮುತ್ತಿನಾರತಿ ಎತ್ತಿ
ಬಿಗಿಯಪ್ಪಿ ಮಗನ ಮುಂಡಾಡೆ ।

ಎರಡು ಪಾದಕ್ಕೆ ಎರಗಲು ಹರಿಯಮ್ಮ
ಹರಸುತ ಕರವಿಡಿದೆತ್ತಿ ॥೧೩೩॥

ತಂದೆ ಮಕ್ಕಳು ಕೂಡಿ ಬಂದರು ಸದರಿಗೆ
ಮಂದಿಮಕ್ಕಳ ಕೂಡಿಕೊಂಡು ।
ನಿಲ್ಲದೆಲ್ಲರನು ಮನ್ನಿಸಿ ಅಪ್ಪಣೆಕೊಟ್ಟು
ಬಂದನು ತನ್ನರಮನೆಗೆ ॥೧೩೪॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂಡು ಕಥೆಯ ।
ಸದೆದು ಬಲ್ಲಾಳನ ಕೂಡೆ ಕಪ್ಪವ ತಂದು
ಒದಗಿ ಮಂತ್ರಿಯಿಳು ತಾ ಕೊಟ್ಟ ॥೧೩೫॥

ತಂದೆಗೊಪ್ಪಿಸು ಎಂದು [ಹಿಂ]ದುವ ರಾಮಯ್ಯ
ಮಂದಿರದೊಳು ಸುಖವಿರಲು
ತಂದು ಕಂಪಿಲನ ಮುಂದಿಟ್ಟ ಬೈಚಪ್ಪನು
ಸಂಧಿ ಅಲ್ಲಿಗೆ ಪೂರಾಯ್ತು ॥೧೩೬॥

ಅಂತು ಸಂಧಿ ೧೩ಕ್ಕಂ ಪದನು ೧೩೫೫ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೪

❖

ತುಂಗಭದ್ರೆಯಲ್ಲಿ ನೀರಾಟ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ಸಕ್ಕರೆ ಸವಿದಂತೆ ಮಧುರ ಮಾವಿನಹಣ್ಣು
ಉಕ್ಕುವ ತನಿಬೆಲ್ಲದಂತೆ ।
ಮಕ್ಕಳ ಮಾಣಿಕದಂತೆ ರಾಮನ ಕೃತಿ
ಸತ್ಕವಿಗಳು ಲಾಲಿಪುದು ॥೩॥

ಮುಂದಕ್ಕೆ ಬೇಂಟೆಯ ಹೋಗದೆ ರಾಯನ ಕೂಡೆ
ಹಿಂದಕ್ಕೆ ತಿರುಗಿ ರಾಮಯ್ಯ ।
ಬಂದನು ಊರೊಳಗುಳ್ಳ ಹರುಗೋಲನು
ಒಂದುಳಿಯದೆ ತರಿಸಿದನು ॥೪॥

ಕಂಪಿಲರಾಯನ ಮಗನು ರಾಮಯ್ಯನು
ಹಂಪೆಯ ಹೊಳೆಗಾಗಿ ಬಂದ ।

ಹಂಪರಾಜನು ಕಂಪರಾಜನ ಕೊಂಡೆಯರಾಜ
ಸಂಪಿಗೆರೆಯ ಸಿಂಗರಾಜ ॥೫॥
ಹಡಪದ ಬೊಲ್ಲುಗ ಕಡುಪ್ರಿಯ ಗಂಗಯ್ಯ
ಒಡಹುಟ್ಟಿದವನು ಕಾಟಣ್ಣ ।
ತಡೆಯದೆ ಮಂತ್ರಿ ಬೈಚಪ್ಪನ ಮಕ್ಕಳು
ಒಡನೆ ನೀರಾಟಕ್ಕೈದಿದರು ॥೬॥

ಮಾವ ಮಂಚಣ್ಣನ ಮಕ್ಕಳ ಕರೆಸಿದ
ಭಾವ ಸಂಗಮದೇವನವರ ।
ಕಾವಲ ಕಾಟನಾಯಕನ ಮಕ್ಕಳ
ದೇವಿಸೆಟ್ಟಿಯ ಲಿಂಗಣ್ಣ ॥೭॥

ಚಾರಮರಾಯನ ಮಕ್ಕಳು ಬಂದರು
ಸಾರಂಗ ಗೊಲ್ಲರ ಗುಜ್ಜಯ್ಯ ।
ಭೋರನೆ ಮನ್ನೆರೆಲ್ಲರ ಕೂಡಿಕೊಂಡಾಗ
ನೀರಾಟಕೆ ತೆರಳಿದರು ॥೮॥

ತಂದು ಹರುಗೋಲನು ಹಾಕಿದರು ಹೊಳೆಯೊಳು
ಬಂದು ಕುಳಿತ ಚೆನ್ನರಾಮ ।
ಚೆಂದದಿ ಕಾಟಣ್ಣನ ಪರಿವಾರವು
ಒಂದೆಸೆಯಲಿ ಏರಿದರು ॥೯॥

ಎಲ್ಲರು ಒಂದೊಂದು ಹರುಗೋಲನೇರುತ
ನಿಲ್ಲದೆ ನೀರ ಚೆಲ್ಲುತಲಿ ।
ಬಲಿದ ರಾಮನ ಹರುಗೋಲಿನ ಮೇಲೆ
ಎಲ್ಲರು ತುಡುಕಿ ನೂಕಿದರು ॥೧೦॥

ಒತ್ತಿ ಬಂದರು ಕಾಟಣ್ಣನ ಪರಿವಾರ
ಮೊತ್ತದ ಹರುಗೋಲು ನೂರು ।
ಸುತ್ತಗಟ್ಟಿಕೊಂಡು ರಾಮನಾಥನ ಮೇಲೆ
ಎತ್ತಿ ನೀರುಗಳ ಚೆಲ್ಲಿದರು ॥೧೧॥

ಚಿನ್ನದಂಡೆಯು ಬೆಳ್ಳಿಯುಂಡೆ ಜೀರ್ಕೊಳವಿಯು
ಉನ್ನತ ಮುತ್ತಿನಂಡೆಗಳು ।
ಚೆನ್ನಿಗ ರಾಮಯ್ಯ ನೀರ ಮೊಗೆದು ತಂದು
ಮನ್ನೇರ ಮೇಲೆ ಚೆಲ್ಲಿದನು ॥೧೨॥

ಒತ್ತಿ ಬಂದನು ಭಾವಸಂಗದೇವನು
ಮುತ್ತಿನ ಬಿಳಿಕೋಲು ಪಿಡಿದು ।
ಮತ್ತೆ ರಾಮಯ್ಯನ ಮುತ್ತಿಕೊಂಡೆಲ್ಲರು
ತಂತ್ರ ಭೀತಿಯನು ಮಾಡುತಲಿ ॥೧೩॥

ಭಾವನ ಮೇಲೆ ನೂಕಿದ ಹರುಗೋಲನು
ಸಾವಿರ ಬೆಳ್ಳಿ ಕೊಳವಿ ಸಹಿತ ।
ಕೋವಿದ ರಾಮನ ನೀರಿಲಿ ಎಸೆವಂಥ
ಠೀವಿಯನೇನ ಬಣ್ಣಿಸುವೆ ॥೧೪॥

ತಪ್ಪನೆ ತೊಯ್ಸಿ ನೀರಿಲಿ ರಾಮಯ್ಯನ
ಇಪ್ಪತ್ತು ಹರುಗೋಲಿನಿಂದ ।
ತಪ್ಪದೆ ಮಂತ್ರಿ ಬೈಚಪ್ಪನ ಮಕ್ಕಳು
ಎಪ್ಪತ್ತು ಹರುಗೋಲಿನಿಂದ ॥೧೫॥

ಎಲ್ಲರ ನೂಕಿ ಹೊಡೆವುತಲಿ ರಾಮಯ್ಯನು
ಚೆಲ್ಲಿದ ಮಳೆ ಬಂದ ತೆರದಿ ।
ನಿಲ್ಲದೋಡಿದರು ಹಿಂದಕೆ ಹಿಮ್ಮೆಟ್ಟಲು
ಮೆಲ್ಲನೆ ಬಂದ ಕಾಟಣ್ಣ ॥೧೬॥

ಸುತ್ತಿಕೊಂಡನು ಬಂದು ಕಾಟಣ್ಣನೊಳಹೊಕ್ಕು
ಮೊತ್ತದಿ ಬೀಗರ ಮೇಲೆ ।
ಎತ್ತ ನೋಡಲು [ಹುಬ್ಬಿ] ಮಳೆ ಬಂದ ತೆರನಂತೆ
ತೆರನಂತೆ ಕತ್ತಲಾಯಿತು ನೀರಾಟ ॥೧೭॥

ಆರೇರ ಚಾರಮರಾಯನ ಮಕ್ಕಳು
ನೂರಾರು ಹರುಗೋಲ ನೂಕಿ ।

ಧೀರ ರಾಮಯ್ಯ ಕಾಟಣ್ಣನ ಮೇಲೆಸೆವುತ
ಏರಿ ಬಂದರು ಸುತ್ತಮುತ್ತ ॥೧೮॥

ಮಲೆನಾಡ ಸೋನೆ ಸುರಿವ ತೆರನಂದದಿ
ಮುಳುಗಿ ತೇಲುತಲಿ ಕಾಟಣ್ಣ ।
ಬಳಲುವ ಅಣ್ಣ ನೋಡಿ ರಾಮಯ್ಯನು
ಸಲೆ ತನ್ನ ಹರುಗೋಲ ನೂಕೆ ॥೧೯॥

ಒಂದೆ ವಾದ್ಯದಲಿ ಏರಿದ ರಾಮಯ್ಯನು
ಬಂದಡ್ಡಗಟ್ಟಿ ಎಲ್ಲರನು ।
ಹಿಂದುಮುಂದನೆ ಮಾಡಿ ನೀರಿಲಿ ಎಲ್ಲರ
ಹಿಂದಕೆ ಹಾಕಿದ ನಗುತ ॥೨೦॥

ಮಂಚಣ್ಣನ ಮಕ್ಕಳೇರಿ ಬಂದರು ಬೇಗ
ಹೊಂಚುತ ರಾಮನ ಮೇಲೆ ।
ಅಂಜೆಯ ಕಾದಿರ್ದ ಹಂಪರಾಜನು ಬಂದು
ಮುಂಚಡ್ಡಗಟ್ಟಿ ನೂಕಿದನು ॥೨೧॥

ತಣ್ಣನ ನೀರೊಳು ನೀರಾಟವನಾಡಿ
ದಣ್ಣನೆ ದಣಿಯಲಾಕ್ಷಣದಿ ।
ಅಣ್ಣ ಕಾಟಣ್ಣನು ಮನ್ನೆಯರು ಸಹವಾಗಿ ಮು
ಕ್ಕ[ಣ್ಣ] ವಿರೂಪಾಕ್ಷನ ಗುಡಿಗೆ ॥೨೨॥

[ಬ]ಂದು ಕಾಣಿಕೆಯಿಕ್ಕಿ ವಿರೂಪಾಕ್ಷಲಿಂಗಗೆ
ಚೆಂದಚೆಂದದಲಿ ಮನ್ನೆಯರು ।
ಗಂಧ ಪ್ರಸಾದವ ಕೈಕೊಂಡು ಬಂದರು
ಅಂದು ಹರುಷದಲಿ ಮನ್ನೆಯರು ॥೨೩॥

ಇಂದುಧರೆಗೆ ವಂದನೆಮಾಡಿ ರಾಮಯ್ಯ
ಬಂದನು ತನ್ನ ಮಂಟಪಕೆ ।
ನಡೆದು ಬಂದನು ಅರಮನೆಗಾಗಿ ರಾಮಯ್ಯ
ಒಡನೆ ಪಾತಕರು ಉಗ್ಗಡಿಸೆ ॥೨೪॥

ಬಂದ ಮಾನ್ಯರಿಗೆಲ್ಲ ಒಂದು ವೀಳ್ಯವ ಕೊಟ್ಟು
ನಿಂದು ಎಲ್ಲರ ಕಳುಹಿದನು ।
ಚೆಂದದಿ ಕಾಟಣ್ಣನ ಹೋಗಹೇಳಿದ
ನಂದು ಹೊಕ್ಕನು ಅರಮನೆಯ ॥೨೫॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಪದನು ।
ಚೆದುರ ರಾಮಯ್ಯ ನೀರಾಟವನಾಡಿದ
ಪದಗಳು ಮುಗಿಯೆ ಸಂಪೂರ್ಣ ॥೨೬॥

ಅಂತು ಸಂಧಿ ೧೪ಕ್ಕಂ ಪದನು ೧೩೮೧ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೫

❖

ಹರಿಯಲದೇವಿಯಲ್ಲಿಗೆ ಚೆಂಡು ಬೇಡಲು ಹೋದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತಫಲವೀವ ರಾಮ ॥೨॥

ಸಕ್ಕರೆ ಸವಿದಂತೆ ಮಧುರ ಮಾವಿನಹಣ್ಣ
ಉಕ್ಕುವ ತನಿರಸದಂತೆ ।
ಮಕ್ಕಳ ಮಾಣಿಕದಂತೆ ರಾಮನ ಕೃತಿ
ಸತ್ಕವಿಗಳು ಲಾಲಿಪುದು ॥೩॥

ತನ್ನರಮನೆಯಿಂದ ಬಂದನು ಕಾಟಣ್ಣ
ಚೆನ್ನ ರಾಮುಗನಿದ್ದೆಡೆಗೆ ।
ಸಂತೋಷದಿಂದ ರಾಮಯ್ಯನಿದಿರಿನಲ್ಲಿ
ಬಿನ್ನೈಸಿದನಿಂತೆಂದು ॥೪॥

ಅರಿಯೆದೆ ಬಲ್ಲಾಳ [ಮೂರು] ರಾಯರಗಂಡ
ಪರಬಲ ನಿರ್ಧೂಮಧಾಮ ।

ಎರಡೆಂಟು ದಿಕ್ಕಿಗೆ ವಾರ್ತೆಯಾಗಿಹುದಯ್ಯ
ಹರಿಯಮ್ಮನೊಶದಲಿದೆ ಚೆಂಡು ॥೫॥
ಅದ ತರಬೇಕು ಚೆನ್ನಿಗರಾಮ ನೀನೆಂದು
ಚದುರ ಕಾಟಣ್ಣ ತಾ ನುಡಿದ ॥೬॥

ಹೊತ್ತುಹೋಗದು ಚೆಂಡನಾಡಬೇಕೆನುತಲಿ
ಮತ್ತೆ ಆಯತವಾದ ರಾಮ ।
ಮುತ್ತಿನ ವಾಲು ಚಿಮ್ಮುರಿ ಸುತ್ತಿ ರಾಮಯ್ಯ
ಮತ್ತಿಟ್ಟ ಸಣ್ಣ ನಾಮವನು ॥೭॥

ನಿಲುವುಗನ್ನಡಿಯ ನೆಳಲ ನೋಡಿ ರಾಮಯ್ಯ
ರುಳಿಯ ಪದಕವನಿಟ್ಟನೊಲಿದು ।
ಸುಲಲಿತವಾದ ಕಂಠಮಾಲೆಯ ಧರಿಸಿದ
ಕಲಿಗಳರಸ ಚೆನ್ನರಾಮ ॥೮॥

ಸೂರ್ಯನ ಕಿರಣಕೆ ಸರಿಯಾದ ಪದಕವ
ವೀರ ರಾಮುಗನಿಟ್ಟುಕೊಂಡ ॥೯॥

ಎಳೆ ಮಿಂಚು ಹೊಳೆವಂತೆ ನೀಲನಾಮವನಿಟ್ಟ
ಕಳೆಯು ಏರಿದ ಚಂದ್ರನಂತೆ ।
ಕಳಕಳಿಸುವ ಮುಖಕಾಂತಿ ರಂಜಿಸುತಿರೆ
ಬಲವಂತ ರಾಮನೊಪ್ಪಿದನು ॥೧೦॥

ಮೊರೆಯ ಹೊಕ್ಕವರ ಕೊಡುವ ರಾಯರ ಗಂಡ
ಧರೆಯೊಳು ನೇಮಿಯಮಿಂಡ ।
ಮೊತ್ತದ ಖಾನಖಾನ ಮಲುಕರಗಂಡ
ಮುತ್ತಿನ ಖಡೆಯವನಿಟ್ಟ ॥೧೧॥

ಇನ್ನು ಮುನ್ನಿನ ರಾಮದೇವ ತಾನಲ್ಲದೆ
ಚೆನ್ನ ರಾಮಗೆ ಸರಿಯಿಲ್ಲ ।
ಭಿನ್ನವಿಲ್ಲದೆ ಪರರಾಯರಗಂಡನೆಂದೆಂಬ
ರನ್ನದ ಖಡೆಯವನಿಟ್ಟ ॥೧೨॥

ಮಾಳವ ರಾಯರ ಗಂಡನೆಂದೆನಿಸುವ
ನೀಲಕಂಕಣ ರಾಮನಿಟ್ಟ ।
ಸಾಳುವ ರಾಯರ ಗಂಡನೆಂಬವದೊಂದು
ತೋಳಬಾಪುರಿನಿಟ್ಟ ರಾಮ ॥೧೩॥

ಕನ್ನೋಜಿರಾಯರ ಗಂಡನೆಂದೆನಿಸುವ
ಉಂಗುರವನು ಇಟ್ಟ ರಾಮ ।
ಮುಂಗುಲಿರಾಯರ ಗಂಡನೆಂಬವದೊಂದು
ಮುಂಗೈಯ್ಯ ಸರಪಳಿಯನಿಟ್ಟ ॥೧೪॥

ಪಡುವಲರಾಯರ ಗಂಡನೆಂದೆನಿಸುವ
ಕಡುಕು ತೊಂಗಲನಿಟ್ಟ ರಾಮ ।
ಬಡಗಲ ರಾಯರ ಗಂಡನೆಂಬುವದೊಂದು
ಕಾಲಪೆಂಡೆವನಿಟ್ಟ ರಾಮ ॥೧೫॥

ಕೊಟ್ಟ ಭಾಷೆಗೆ ತಪ್ಪುವ ರಾಯರ ಗಂಡ
ದಿಟ್ಟ ರಾಮುಗ ಕರದಿಂದ ।
ದೃಢಗಲಿ ನೇಮಿಯ ಗಂಡನೆಂಬುವದೊಂದು
ಎಡದ ಪಾದದ ಬೊಂಬೆ ಮೆರೆಯೆ ॥೧೬॥

ದಿಕ್ಕು ದೇಶದೊಳುಳ್ಳ ಮೊಗಲ ದೇವಾಂಗವ
ಬಿಗಿದುಟ್ಟ ಮಲ್ಲಗಾಸೆಯನು ॥೧೭॥

ಇತ್ತ ರಾಮುಗ ಶೃಂಗಾರವಾಗಲು ಕಂಡು
ಮತ್ತೆ ರಾಮಲದೇವಿ ನೋಡಿ ।
ಮುತ್ತಿನಾರತಿಯ ರಚಿಸಿ ತಂದಳು ಬೇಗ
ಎತ್ತಿ ಚಾಂಗುರೆ ಭಲರೆನಲು ॥೧೮॥

ಸಾರಿದವರ ಕಾಯ್ವ ಮೀರಿದವರ ಕೊಲ್ವ
ಓರುಗಲ್ಲಿಗೆ ಕೋಳಹಳ ।
ವೀರ ಕುಮಾರ ರಾಮಗೆ ಸರಿಯಿಲ್ಲೆಂದು
ಚೀರುವ ಕಹಳೆ ಕೂಗಿದವು ॥೧೯॥

ಹುಳಿಯೇರ ಮಾರಿಗೊಂಡ[ನ ಗಂಡ]ನೆಂದೆಂಬ
ಭಾರಿ ಪದಕವನಿಟ್ಟ ರಾಮ ।
ಬಲ್ಲಾಳ ರಾಯರ ಗಂಡನೆಂಬ.....ಮುತ್ತಿನ
ಕಾಲಪೆಂಡೆವನಿಟ್ಟ ರಾಮ ॥೨೦॥

ಪಟ್ಟಸಾಲಿಗಾಗಿ ಬಂದನು ರಾಮಯ್ಯ
ಕಟ್ಟಿಗೆಕಾರರ ಕರೆಸಿ ।
ಪಟ್ಟಣದೊಳಗುಳ್ಳ ಮಂತ್ರಿ ಮನ್ನೆಯರನು
ತೊಟ್ಟು ಶೃಂಗಾರವಾಗ ಹೇಳೊ ॥೨೧॥

ಎಂದ ಮಾತನು ಕೇಳಿ ಕಟ್ಟಿಗೆಕಾರರು
ಬಂದರು ಕೇರಿಕೇರಿಯಲಿ ।
ಮಂದಿಯ ಹೊರಡ ಹೇಳಿದ ರಾಮನಾಥನು
ಇಂದು ಚಂಡಾಟವಾಡುವರೆ ॥೨೨॥

ಗಮ್ಮನೆ ಆ ಮಾತ ಕೇಳುತ ಕೆಲಬರು
ಉಮ್ಮಾಯದೊಳು ಶೃಂಗರಿಸಿ ॥೨೩॥

ಒತ್ತಿ ಬಂದರು ಮತ್ತೆ ರಾಮಗೆ ಬಿನ್ನೈಸ
ಲಿತ್ತನೆಲ್ಲರಿಗೆ ವೀಳ್ಯವನು ।
ಇತ್ತ ಮನ್ನೆಯರನು ಕೂಡಿಕೊಳ್ಳುತ ರಾಮ
ಹೆತ್ತ ತಾಯರಮನೆಗಾಗಿ ॥೨೪॥

ಮುತ್ತಿನಂದಣವೇರಿ ಹೊರಟನು ರಾಮಯ್ಯ
ಅರ್ತಿಲಿ ಚೆಂಡ ಬೇಡುವರೆ ॥೨೫॥

ಐವರು ಮನ್ನೆಯರು ಸಹವಾಗಿ ಬಂದನು
ಕೈಯ್ಯ ಮುಗಿದು ಹರಿಯಮ್ಮಗೆ ।
ಹುಯ್ಯಲ ಲೆಗ್ಗೆಯ ಕಲಿಯಬೇಕೆನುತಲಿ
ಒಯ್ಯನೆ ಬಿನ್ನೈಸಿದನು ॥೨೬॥

ಬಂದ ಮಗನ ನೋಡಿ ಒಂದಾರು ಭುಜವಾಗಿ
ಗಂಧ ಪರಿಮಳವನು ಕೊಡಿಸಿ ।

ಚಂದ್ರನ ಕಳೆಯ ರಾಮ ಕೋ ಎನುತಲಿ
ತಂದು ವೀಳ್ಯವ ಕೊಟ್ಟಳಾಗ ॥೨೭॥
ಎಲ್ಲಿಗೆ ಪ್ರಯಾಣವಿದೇಕೆ ಶೃಂಗರವಾದೆ
ಸೊಲ್ಲಿಸೆನ್ನೊಡನೆ ರಾಮುಗನೆ ।
ಗಲ್ಲವ ಪಿಡಿದು ಮುದ್ದಿಸಿ ಹರಿಯಮ್ಮನು
ನಿಲ್ಲದೆ ಕೇಳಿದಳು ಮಗನ ॥೨೮॥

ಹೆತ್ತತಾಯೆ ಕೇಳು ಹಂಪೆಯ ಹೊಳೆಯಲ್ಲಿ
ಅತ್ತ ಮಾನ್ಯರ ಕೂಡಿಕೊಂಡು ।
ಮತ್ತೆ ನೀರಾಟವನಾಡಿ ಬಳಲಿ ಬಂದೆ
ಹೊತ್ತುಹೋಗದು ಕಾಣಮ್ಮ ॥೨೯॥

ಲೆತ್ತ ಪಗಡೆ ಜೂಜನಾಡಿದೆವಮ್ಮಾಜಿ
ಮತ್ತೆ ಆಡಿದೆವು ಚದುರಂಗವನು ।
ಮುತ್ತೈಯ್ಯ ಮುಮ್ಮಡಿ ಸಿಂಗನ ಕಾಲದ
ಮುತ್ತಿನ ಚೆಂಡದೆಯಂತೆ ॥೩೦॥

ಅರ್ತಿಯಿಂದಲಿ ಅದ ಆಡಿನೋಡುವೆ ತಾಯೆ
ಇತ್ತು ಎಮ್ಮಗಳ ಕಳುಹಮ್ಮ ॥೩೧॥

ನೆಟ್ಟನೆ ಆ ಮಾತ ಕೇಳುತ ಹರಿಯಮ್ಮಗೆ
ನಿಟ್ಟೆಲು ಮುರಿದವಾಕ್ಷಣದಿ ।
ಕೆಟ್ಟೆನೊ ಮಗನೆ ಎನಗೆ ಮಾರಿಯಾಯಿತ್ತು
ಹುಟ್ಟಿದ ದಿನ ಬಂತು ಶಿವನೆ ॥೩೨॥

ಮರೆದು ಹೋದ ಚೆಂಡ ಅರುಹಿದರಾರಪ್ಪ
ನೆರೆಗಲಿ ಚೆನ್ನಿಗರಾಮ ॥೩೩॥

ಆವ ಪಾಪಿಗಳು ಚೆಂಡದೆಯೆಂದು ರಾಮನ
ಜೀವಕ್ಕೆ ಮುನಿದು ಹೇಳಿದರು ।
ದೇವರೆ ಇದಕೇನ ಮಾಡುವೆನೆನುತಲಿ
ಬೇವುತಿರ್ದಳು ಹರಿಯಮ್ಮ ॥೩೪॥

ಮುತ್ತೈಯ್ಯ ಮುಮ್ಮಡಿ ಸಿಂಗನ ಕಾಲದ
ಮುತ್ತಿನ ಚೆಂಡ ಕೊಡಮ್ಮ ॥೩೫॥

ಈ ಚೆಂಡು ಶ್ರೀಕೃಷ್ಣರಾಯನಾಡಿದ ಚೆಂಡು
ಈ ಚೆಂಡು ಅಭಿಮನ್ಯುವಾಡೆ ।
ಈ ಚೆಂಡ ಮುಮ್ಮಡಿ ಸಿಂಗನಾಡಿ ಕೆಟ್ಟ
ಈ ಚೆಂಡ ಮಗ ರಾಮ ಬೇಡ ॥೩೬॥

ಕಿರಿದು ಬುದ್ಧಿಗಳೇಕೆ ಹರಿಯಮ್ಮಗೆನುತಲಿ
ಮರೆಯನು ವೀರ ರಾಮಯ್ಯ ॥೩೭॥

ಆರು ಹೇಳಿದರಪ್ಪ ಚೆಂಡಿನ ಸುದ್ದಿಯ
ಊರೊಳಗರಸು ಹೆಣ್ಣುಗಳು ।
ಸಾರಿ ಕೈತಪ್ಪಿ ಚೆಂಡತ್ತಿತ್ತ ಬಿದ್ದರೆ
ಆರು ಹೊರುವರಪಕೀರ್ತಿ ॥೩೮॥

ಚೆಲುವ ರಾಮಯ್ಯ ಬೇಡವೊ ಚೆಂಡಿನಾಟವು
ಚೆಲುವ ಹೆಣ್ಣುಂಟು ಕುಮ್ಮಟದಿ ॥೩೯॥

ತಂದೆ ಊರೊಳಗಿಲ್ಲ ಚಂದ್ರಮುಖಿಯರುಂಟು
ಕಂದ ನೀ ಕೇಳೊ ರಾಮಯ್ಯ ।
ಇಂದಿಗೆ ಬೇಡ ಮತ್ತೊಂದಿನ ಆಡೆಂದು
ಕಂದಗೆ ಬುದ್ಧಿ ಹೇಳಿದಳು ॥೪೦॥

ಚಿಕ್ಕ ಸಿಂಗಮ್ಮನೋಪದಿ ಪರಸತಿಯರು
ಮಕ್ಕಳು ನಮಗೆ ಕಾಣಮ್ಮ ।
ಮಿಕ್ಕ ಮಾತಿನ್ನೇನು ಪರಸ್ತ್ರೀಯರೆಂಬರು ನಮಗೆ
ಮಕ್ಕಳ ಸಮನು ಕಾಣಮ್ಮ ॥೪೧॥

ಅಕ್ಕ ಮಾರ್‍ಯಮ್ಮನೋಪದಿ ಸತಿಯರೆಲ್ಲರು
ಮಿಕ್ಕಿನ್ನೈವರು ಹೊರತಾಗಿ ।
ಕಕ್ಕುಲತೆಯ ಮಾಡಿ ಕಳವಳಗೊಂಡರೆ
ಚಕ್ರಧರನ ಪಾದದಾಣೆ ॥೪೨॥

ಬೇಡ ರಾಮುಗ ನಿನ್ನ ನೋಡಿದ ಸತಿಯರು
ಮಾಡರು ಮನೆಗೆಲಸಗಳ ।
ಊಡರು ತಮ್ಮ ಕಂದರಿಗೆ ಮೊಲೆವಾಲನು
ಕೂಡರು ತಮ್ಮ ಪುರುಷರ ॥೪೩॥

ಪರಸತಿಯೆಂಬವರು ಹಿರಿಯಕ್ಕ ಮಾರೆಮ್ಮ
ಮಾರೆಮ್ಮ ನಿಮ್ಮ ಸಮಾನ ಕೇಳ್ತಾಯಿ ।
ಗುರುವಿನ ಸತಿಯ ಸಮಾನವು ನಮಗಿನ್ನು
ಹರುಷದಿ ಚೆಂಡ ಕೊಡಮ್ಮ ॥೪೪॥

ಹಿರಿಯರು ನೀವು ಎಲ್ಲರು ರಾಮಯ್ಯಗೆ
ತರುವಲಿ ಬುದ್ಧಿಗಲಿಸುವಿರೆ ।
ಒರೆದು ಹೇಳಿದೆವಮ್ಮ ಕೇಳ[ನು] ರಾಮಯ್ಯ
ದೊರೆನುಡಿಗಳಿಗೆ ಅಂಜುವೆವು ॥೪೫॥

ಕೃತಯುಗ[ದಲಿ] ಹುಟ್ಟಿತು ಮಾಯಾಂಗನೆ
ಹತವ ಮಾಡಿಸಿತು ಕಾರ್ತಿವೀರನನು ।
ಯತಿಶಾಪದಿಂದಲಿ ಪತಿ ಶಿರ ಹೋಯಿತು
ಸುತರ ಬಿಲ್ಲನು ಮುರಿ[ಯಿ]ಸಿತು ॥೪೬॥

ಹಿಂದಿನ ಕಾಲದಿ ದ್ರೌಪತಿ ವನವಾಸ ಮಾಡಿಸಿತು
ನೊಂದು ಕೀಚಕನ ಕೊಲಿಸಿತು ।
ಮುಂದುಗೆಡಿಸುವುದು ರಾಮುಗ ಈ ಚೆಂಡು
ಕಂದರ್ಪಸಮರೂಪ ಕೇಳೊ ॥೪೭॥

ಪಟ್ಟಕ್ಕೆ ಸಲುವಂಥ ರಾಯರು ಪಿಡಿದಾಡುವ
ಕಟ್ಟಾಣಿ ಮುತ್ತ ಹುದುಗಿಹುದು ।
ನೆಟ್ಟನೆ ಪೂಜೆಯ ಮಾಡುವ ಚೆಂಡಲ್ಲದೆ
ಇಟ್ಟಾಡುವ ಚೆಂಡು ಅಲ್ಲ ॥೪೮॥

ಪೃಥ್ವಿಯೊಳಗೆ ಇದು ಮಾಯಾಂಗನೆ ಸುರ
ಪತಿಯ ಐಶ್ವರ್ಯವ ಕೆಡಿಸಿ ॥೪೯॥

ಘನ ತಪಸಿಯ ವನದೊಳು ಮಾಯಾಂಗನೆ
ಬಿನುಗು ಸೂಕರನಾಗಿ ಜನಿಸೆ ।
ಧನುವ ಹಿಡಿದುಕೊಂಡು ಹರಿಶ್ಚಂದ್ರನೆಸೆಯಲು
ಜನಿಸಿ ಮುತ್ತಿನ ಚೆಂಡಾಯಿತು. ॥೫೦॥

ಕಾಳಿಂಗನೋಲಗಕೆ ಹೋಯಿತು ಈ ಚೆಂಡು
ಕಾಲನವರ ಚೆಂಡಾಡಿತು ।
ನಾಳೆ ನಿಮ್ಮಪ್ಪ ಬಂದರೆ ಚೆಂಡನಾಡೆಂದು
ಹೇಳಿದಳು ಹರಿಯಲದೇವಿ ॥೫೧॥

ಅತಿಕಾಲ ವನದಲ್ಲಿ ಪುಟ್ಟಿತು ಈ ಮಾಯಿ
ಸುತರನೈವರ ತಿರುಗಿಸಿತು ।
ಅತಿ[ಯಾಸೆಯಿಂ]ದ ಲೆತ್ತವನಾಡಿ ಕೆಡಿಸಿತು
ಹತವ ಮಾಡಿಸಿತು ಕೌರವರ ॥೫೨॥

ಆಸೆಯಿಂದಲಿ ದೇಶವ ಕೊಡಲೀಸದೆ
ಮೋಸದಿ ಕೌರವರ ಪಡೆಯ ।
ಗಾಸಿಯ ಮಾಡಿತು ಕೇಳು ಮುಮ್ಮಡಿಸಿಂಗನ
ಈಶ ಕುಮಾರ ರಾಮಯ್ಯ ॥೫೩॥

ಪೊಡವಿಯನಾಳ್ವ ರಾಯರ ಕೆಡಸಿತು ಮಾಯಿ
ನಡೆದು ಷೋಡಶ ರಾಯರುಗಳ ।
ತಡೆಯದೆ ನಿಮ್ಮ ಮುಮ್ಮಡಿಸಿಂಗನಾಯಕನು
ಪಿಡಿದು ಆಡುವ ಚೆಂಡು ಅಲ್ಲ ॥೫೪॥

ಉಡುರಾಜನಂದದಿ ಮೈಯೆಲ್ಲ ಕೆಡುತಿರೆ
ಮಡಗಿ ಪೂಜಿಸುವರೊ ಮಗನೆ ।
ಕಡುಗಲಿ ಚೆಲುವ ರಾಮ ಚೆಂಡ ಬೇಡೆಂದು
ನುಡಿದಳು ಹರಿಯಲದೇವಿ ॥೫೫॥

ಒಂದು ಹೊಮ್ಮಿಗವಾಗಿ ಜನಿಸಿತು ಈ ಚೆಂಡು
ಒಂದು ಜಲ್ಮದಲಿ ಚೆಂಡಾಯಿತು ।

ಕಂದ ನೀನಾಡಲು ವಿಧಿ ಬೆನ್ನ ಹತ್ತುವುದು
ಕೊಂಡೊಯ್ವುದು ರತ್ನಿ ಮನೆಗೆ ॥೫೬॥

ವಿಧಿಯಿಂದ ರಾಮರು ಕೆಟ್ಟರು ಎಲೆ ತಾಯೆ
ವಿಧಿಯಿಂದ ರಾವಳನಳಿದ ।
ವಿಧಿಯಿಂದ ಪಾಂಡವರು ವನವಾಸ ಹೋದರು
ವಿಧಿಯಿಂದ ಕೀಚಕನಳಿದ ॥೫೭॥

ತಲೆ ಹೋಯಿತೆಂದು ಶೂದ್ರಿಕವೀರನು ತಾನು
ಸಲೆ ತನ್ನ ಕೈಕಾಲು ಕೊಯ್ಸಿ ।
ಬಲು ಬುದ್ಧಿಯಿಂದ ಇರುವೆನೆಂದು ಇರುತಿರೆ
ತಲೆಯ ಕಟ್ಟಿತು ಕಂಚಾಲಕ್ಕೆ ॥೫೮॥

ಪೊಡವಿಯೊಳಗೆ ಹರಿಶ್ಚಂದ್ರರಾಯನು
ಸುಡುಗಾಡನು ಕಾಯ್ದುದಿಲ್ಲವೆ ।
ಹೆಡತಲೆಯೊಳಗಣ ವಿಧಿ ಬೆನ್ನಬಿಡುವುದೆ
ಕೊಡು ತಾಯಿ ಚೆಂಡ ಬೇಗದಲಿ ॥೫೯॥

ನಿನ್ನ ಪಾಡೇನಪ್ಪ ಮುನ್ನಿನ ದೊರೆಗಳು
ಹೊನ್ನು ಬಂಗಾರವ ನೆಚ್ಚಿ ।
ತನ್ನ ತಾನರಿಯದೆ ಕೆಟ್ಟುಹೋದರು ರಾಮ
ಇನ್ನು ಈ ಚೆಂಡಾಟ ಬೇಡ ॥೬೦॥

ಆಡಿದ ಮಾತಿಗೆ ಅಳುಕದೆ ರಾಮಯ್ಯ
ಬೇಡಿದ ಚೆಂಡ ಕೊಡಮ್ಮ ।
ಕಾಡುವ ಶನಿಯು ಎಲ್ಲಿದ್ದರೆ ಬಿಡದಮ್ಮ
ಅಡಿದಲ್ಲದೆ ಬಿಡೆ ಚೆಂಡ ॥೬೧॥

ರಾಜಬೀದಿಯಲಿ ಲಗ್ಗೆಯನಾಡಬೇಡೆಂದು
ವಾಜೆಯ ಮಗಗೆ ಹೇಳಿದಳು ।
ರಾಜಲಕ್ಷಣಕೆ ಆಯುಧ ವಿದ್ಯೆ ಚದುರಂಗ
ತೇಜಿಯ ಮೇಲೆ ವೈಹಾಳಿ ॥೬೨॥

ಮಂದಿಯ ತಡೆ ಕುದುರೆಯ ಕಟ್ಟು ಜೀತವ
ಸಂದುದು [ಚಾ]ರ ಸುಭಟರಿಗೆ ।
ಮಂದತನವು ಬೇಡ ಮಕ್ಕಳಾಟಿಕೆ ಯಾಕೆ
ಮುಂದುಂಟು ಬಹು ರಾಜಕಾರ್ಯ ॥೬೩॥

ಗುತ್ತಿಯ ನಾಡನಿರಿದು ಜಗದಪ್ಪನ
ಒತ್ತಿ ಸಾಧ್ಯವ ಮಾಡಿಕೊಂಡೆ ।
ಹತ್ತಿತು ಬಹಳ ಹುಳಿಯಾರ ಮಾರಿಗೊಂಡನ ಮೇಲೆ
ಇತ್ತ ಸಲ್ಲದು ಚೆಂಡಿನಾಟ ॥೬೪॥

ನವಲಕ್ಷ ಕುದುರೆಯ ವಾಜಿಯ ಬಂಟನ
ಅವನ ಕೊಡದೆ ಬಾದೂರನ ।
ಬವರಕ್ಕೆ ಸುರಿತಾಳನ ದಂಡು ಬಂದರೆ ನಾಳೆ
ಹವಣಾಗಿಹುದೆ ರಾಜಕಾರ್ಯ ॥೬೫॥

ವೀರ ಬಲ್ಲಾಳನ ಮುರಿಯಲಿರಿದೆ ರಾಮ
ಓರುಗಲ್ಲವನ ಕೆಣಿಕಿಸಿದೆ ।
ಹೋರಾಟವನು ಮಾಡಿಕೊಂಡೆ ತುರುಕರೊಳು
ಆರಿಂತು ಮೈಮರೆದಿಹರೆ ॥೬೬॥

ಚೆಂಡುಗಳನೆ ಆಡಿ ಕೈಕಾಲು ನೊಂದರೆ
ಆರು ಹೊರುವರಪಕೀರ್ತಿ ।
ದಂಡೆತ್ತಿ ಬಾರದೆ ಬಿಡುವರೆ ಚೆಲ್ವರ
ಗಂಡ ಬೇಡವೊ ಚೆಂಡಿನಾಟ ॥೬೭॥

ಬುದ್ಧಿ ಹೇಳಲು ರಾಮ ಮುದ್ದುಮುಖವು ಬಾಡಿ
ಬಿದ್ದವು ಕಂಗಳ ಉದಕ ।
ಎದ್ದಳು ಈ ನೋವು ಯಾಕೆಂದು ಹರಿಯಮ್ಮ
ಮುದ್ದಿಸಿ ಮಗನ ಸಂತೈಸಿ ॥೬೮॥

ಎನ್ನ ತಾಯೆ ಕೇಳು ನಿನ್ನ ಸೊಸೆಯರೊಳು
ಇನ್ನೈವರು ಹೊರತಾಗಿ ।

ಪನ್ನಂಗಧರನಾಣೆ ಪರಸತಿ ಎಂಬವರು
ನಿಮ್ಮ ಸಮಾನ ಕಾಣಮ್ಮ ॥೧೯॥

ಊರ ನಾರೇರ ದೃಷ್ಟಿ ತಾಕಿತು ರಾಮಗೆ
ಮಾರಿ ಬಂದಿತು ಕುಮ್ಮಟಕೆ ।
ಇತ್ತ ಕೇಳಿದಳು ಹೊಸ ಸುದ್ದಿಯ ರತ್ನಾಜಿ
ಮತ್ತೆ ಹೇಳಿದಳು ಸಂಗಿಯೊಡನೆ ॥೨೦॥

ತಂದೆ ಇಲ್ಲದೆ ಹಿಂದೆ ಕಂಡವರುಶ್ಯಾರರು
ಕಂದ ಕೇಳೆಲೊ ರಾಮಯ್ಯ ।
ಎಂದು ಬುದ್ಧಿಯ ಹೇಳಿ ಹರಿಯಲದೇವಿಯು
ನಿಂದು ರಾಮನಿಗೆ ಹೇಳಿದಳು ॥೨೧॥

ಇಷ್ಟರ ಮೇಲಿನ್ನು ಚೆಂಡು ಬೇಕಾದರೆ
ಮುಟ್ಟಿ ಬಲಿಯ ಕೊಡು ಮಗನೆ ।
ಅಷ್ಟ ದಿಕ್ಕಿನ ರಾಹು ದಣಿವಂತೆ ಬಲಿಯನು
ಕೊಟ್ಟು ಚೆಂಡನು ಒಯ್ಯೊ ಮಗನೆ ॥೨೨॥

ಏನು ಬಲಿಯು ಬೇಕು ಹೇಳಮ್ಮ ನಮಗಿನ್ನು
ನಾನು ತರಿಸುವೆನು ಈ ಕ್ಷಣದಿ ।
ನಾನೂರು ಕುರಿಗಳು ಐನೂರು ಕೋಳಿಗಳು ಬಲಿಯ
ಕೊಟ್ಟೊಯ್ಯೊ ರಾಮಯ್ಯ ॥೨೩॥

ಎಂದ ಮಾತನು ಕೇಳುತ ರಾಮಯ್ಯ ತನ್ನ
ಮಂದಿಯ ಕರೆಸಿ ಹೇಳಿದನು ।
ಬನ್ನಿರೊ ಮನ್ನೆಯರು ಹೋಗಿರೊ ದಿಕ್ಕುದಿಕ್ಕಿಗೆ
ತನ್ನಿರಿ ಕುರಿ ಕೋಳಿಗಳ ॥೨೪॥

ಸಂದೇಹವಿಲ್ಲದೆ ದಿಕ್ಕುದಿಕ್ಕಿಗೆ ಹೋಗಿ
ತಂದರೈನೂರು ಕೆಂಗುರಿಯ ।
ಏಳ್ನೂರು ಕೋಳಿಯ ಏಳ್ನೂರು ರಸದಾಳಿ
ಏಳ್ನೂರು ಕಾಯಿ ಹಣ್ಣುಗಳ ॥೨೫॥

ಏಳು ಗಳಿಗೆ ಚೆಂಡಿಗೆ ಬಲಿಯ ಕೊಟ್ಟರು
ಲೋಲರಾಮನು ಕೈಮುಗಿದ ।
ಗಂಧ ಅಕ್ಷತೆ ಧೂಪ ದೀಪ ನೈವೇದ್ಯಾದಿ
ತಂದು ಅರ್ಚಿಸಿದಳು ಹರಿಯಮ್ಮ ॥೭೬॥

ಭಾಷೆಪಾಲಕ ರಾಮ ಚೆಂಡು ಬೇಕಾದರೆ
ಲೇಸಿನ ಸತ್ಯವ ಮಾಡೊ ॥೭೭॥

ಎನ್ನ ತಾಯೆ ಕೇಳು ನಿನ್ನ ಸೊಸೆಯರೊಳು
ಇನ್ನೈವರು ಹೊರತಾಗಿ ।
ಪನ್ನಂಗಧರನಾಣೆ ಪರಸತಿ ಎಂಬುವರು
ನಿನ್ನ ಸಮಾನ ಕಾಣಮ್ಮ ॥೭೮॥

ಈ ಚೆಂಡ ನೀನಾಡಬೇಡ ಚೆನ್ನಿಗ ರಾಮ
ಈ ಚೆಂಡ ನಿನ್ನ ಕೆಡಸೀತು ।
ಎಂದು ಬುದ್ಧಿಯ ಹೇಳಿ ಹರಿಯಲದೇವಿಯು
ತಂದುಕೊಟ್ಟಳು ಚೆಂಡ ಬೇಗ ॥೭೯॥

ಕೃತಯುಗದಲ್ಲಿ ಹುಟ್ಟಿತು ಮಾಯಾಂಗನೆ
ಹತಮಾಡಿಸಿತು ಕಾರ್ತಿವೀರನ ।
ಇಂದಿನ ಜಲ್ಮದಿ ಮಾಯಾಂಗನೆಯಾಗಿ
ಬಂದು ಜನಿಸಿತು ಕುಮ್ಮಟದಿ ॥೮೦॥

ತಾಯಿ ಹೇಳಿದ ಮಾತ ಕೇಳುತ ರಾಮಯ್ಯ
ಜೀಯ ಎನುತ ಪಾದಕೆರಗೆ ।
ಆಯುಷ್ಯ ಬಲ್ಲಿದನಾಗೆಂದು ಪಿಡಿದೆತ್ತಿ
ರಾಯರಗಂಡನೆಂದೆನುತ ॥೮೧॥

ಮುತ್ತಿನಚೆಂಡು ಸಹಿತ ರಾಮಯ್ಯನು
ಮತ್ತೆ ಅಂದಳವೇರಿ ನಡೆದ ।
ಎತ್ತಿತು ಸತ್ತಿಗೆ ರಾಮನಾಥಗೆ ಆಗ
ಮುತ್ತಿನ ಚೌರ ಢಾಳಿಸುತ ॥೮೨॥

ಪಟ್ಟಣ ಬೀದಿಲಿ ರಾಮಯ್ಯ ಬರುವಾಗ
ಭಟ್ಟರು ಉಗ್ಗಡಿಸುತಿರಲು ।
ಕಟ್ಟಿದಿರಿನಲಿ ಸೀನಲು ರಾಮನಾಥನು
ಸೃಷ್ಟಿಗೀಶ್ವರನೆ ಗತಿಯೆನುತ ॥೮೩॥

ಚಿತ್ತಜರೂಪನ ನೋಡಬೇಕೆನುತಲಿ
ಅತ್ತ ಮಕ್ಕಳನೆತ್ತದಿಹರು ।
ಇತ್ತರದಲಿ ನಿಂದು ನೋಡುತ ಸತಿಯರು
ಮತ್ತೆ ರಾಮಯ್ಯನ ನೋಡುತಲಿ ॥೮೪॥

ಹೆತ್ತತಾಯಿಗಳು ಮಗನ ನೋಡುತಿಹರೆಂದು
ಚಿತ್ತದೊಳ್ ರಾಮ ಹಿಗ್ಗಿದನು ॥೮೫॥

ಚೆಂಡನು ಇಸುಕೊಂಡು ಮಂಡಲೇಶ್ವರ ರಾಮ
ಕೊಂಡುಬಂದನು ಹರುಷದಲಿ ।
ಚಂಡಮಿಕ್ರಮ ಕಾಟಣ್ಣನೆಡೆಗೆ ಬಂದು
ಚೆಂಡಿಗೆ ಅಳ ಹಂಚೆಂದ ॥೮೬॥

ಆಳ ಹಂಚೆಂದ ಮಾತನು ಕೇಳಿ ಕಾಟಣ್ಣ
ಬೋಳೈಸಿದ ಮನದೊಳಗೆ ।
ಹೇಳಿದ ತನ್ನ ಎಕ್ಕಟಿಗ ನಾಯಕರಿಗೆ
ಭಾಳ ಹರುಷದಲಿ ಕೂಡೆಂದ ॥೮೭॥

ಹಟ್ಟಿಕಾರರು ಹಳ್ಳಿಕಾರರು ಎಲ್ಲರು
ದಿಟ್ಟ ಗಾಣಿಗ ಬೊಮ್ಮನವರು ।
ಕಟ್ಟಾಳು ಕುಂಬಾರ ಸೋಮನು ಇರುಪನು
ಬೆಟ್ಟಗಳಂದದಿ ಹೊರಟು ॥೮೮॥

ನೆಲಗತ್ತಿ ಕಾಮ ಭಟ್ಟರ ಭೀಮ ಚಿಕ್ಕಯ್ಯ
ದಿಟ್ಟ ಮನ್ನೆಯರು ತಾವು ಬಂದು ।
ಒಕ್ಕಲಿಗರ ಮುದ್ದ ಅಕ್ಕಸಾಲೆಯ ಚಿಕ್ಕ
ಮಿಕ್ಕ ಮೀನಿಗ ಬೊಮ್ಮನವರು ॥೮೯॥

ಹೊಕ್ಕು ಹೊಯ್ದು ಹೆಸರಾದ ಕೊಳ್ಳಿಯ ನಾಗ
ವೀರ ಮನ್ನೆಯರೆಲ್ಲ ಬಂದು ।
ಯನುಮಲ ಚಿತ್ತನು ಯರಬೋತು ಗಂಗನು
ಮನಕೆ ಮನ್ನೂಲ ಚಿನ್ನನವರು ॥೯೦॥

ಬೂಟಕ ಬ್ರಹ್ಮನು ಮಿಡಿಗೇಸಿ ನಲ್ಲನು
ಕಟ್ಟಾಳು ರವಳಿಯ ಹನುಮ ॥೯೧॥

ಅರಸುಮಕ್ಕಳು ಹಂಪರಾಜ ಕಂಪರಾಜನು
ಅರಿಬಿರಿದಿನ ಮನ್ನೆಯರು ।
ಮನ್ನಾಲ ಮಾಚನು ಮುದುಕೊಂಡ ಲೋಬನು
ಮನ್ನೆಯರ ಕೊಟಗರ ದೇವ ॥೯೨॥

ಬುಕ್ಕನ ಪಾಲನು ಹೊಳಕೆಯ ಕೆಂಚನು
ರಕ್ಕಸ ಚಿನುಮಾದನವರು ।
ಕರೆಸಿದ ಕತ್ತಿಯ ವೀರಾಧಿ ವೀರರ
ಬಿರಿದಂಕ ಚೆನ್ನಿಗರಾಮ ॥೯೩॥

ಬಾದೂರಖಾನನು ಮಹಿಮೆಯಖಾನನು
ಸಾಧನೆ ಬಸವರಾಜಯ್ಯ ।
ಭೇದಿಸಿ ಮಣಿಹದ ಮಲ್ಲನ [ಕರಿಸಿದ್ದ] ಬೇ
ಗದಿ ಕರೆಸಿದ ರಾಮ ॥೯೪॥

ಹಳದಿಯ ತಿಪ್ಪನು ಬಾರಿಯ ಮಲ್ಲನು
ದಳದುಳಿಯ ರಕ್ಕಸ ಮಾದ ।
ಹೊಳಕೆಯ ಬಂಟರ ಕರೆಸಿದ ರಾಮಯ್ಯ
ಕಳುಹಿದ ಚೆನ್ನಿಗರಾಮ ॥೯೫॥

ಹೊನ್ನಮೊಳೆಯ ಕಠಾರಿ ಎಕ್ಕಟಿಗರು
ನಿನ್ನ ಕಡೆಯಲೊ ಕಾಟಣ್ಣ ।
ಮನ್ನಿಸಿ ಉಡುಗೊರೆ ಕೊಂಬ ಎಕ್ಕಟಿಗರ
ತನ್ನ ಕಡೆಗೆ ಮಾಡಿಕೊಂಡ ॥೯೬॥

ತೆಲುಗ ಮನ್ನೆಯ ಮಕ್ಕಳು ಊರೊಳಗುಳ್ಳ
ಸಲೆ ರಾಜಪುತ್ರರೆಲ್ಲರನು ।
ಗೆಲವುಳ್ಳವರ ಹಂಚಿಕೊಟ್ಟನು ಕಾಟಗೆ
ಛಲದಂಕ ಚೆನ್ನಿಗರಾಮ ॥೯೭॥

ಆವ ಠಾವಿಲಿ ಚೆಂಡನಾಡುವ ಕಾಟಣ್ಣ
ಆವ ಬಯಲು ಹಸ ನಮಗೆ ।
ಕೋವಿದೆ ರತ್ನಾಜಿ ಚಿಕ್ಕಮ್ಮನರಮನೆಯ
ಠಾವಿಗೆ ನಡೆಯೊ ಕಾಟಣ್ಣ ॥೯೮॥

ಅಲ್ಲಿ ನೋಡಲಿ ಮಕ್ಕಳರ್ತಿಯ ಕಾಟಣ್ಣ
ಅಲ್ಲಿಗೆ ನಡೆಯೊ ಹಿರಿಯಣ್ಣ ॥೯೯॥

ಚಿನ್ನದ ಲೆಗ್ಗೆ ಬೆಳ್ಳಿಯ ಲೆಗ್ಗೆ ತೆಕ್ಕೊಂಡು
ಚೆನ್ನಾಗಿ ನಡೆಯೊ ಕಾಟಣ್ಣ ।
ಉನ್ನತ ಹರುಷದಿ ಚಿಕ್ಕಮ್ಮನರಮನೆಗೆ
ಹೊನ್ನ ಉಪ್ಪರಿಗೆಯ ಬಳಿಗೆ ॥೧೦೦॥

ತಗ್ಗು ಮುಗ್ಗಿಲ್ಲದ ಠಾವಿಲಿ ಕಾಟಣ್ಣ
ಲೆಗ್ಗೆಯ ಮಾಡ ಹೇಳಿದನು ।
ಒಗ್ಗೊಡೆಯದೆ ಕೂಡಿತು ಪರಿವಾರವು
ವೆಗ್ಗಳ ರಾಮನ ಭಟರು ॥೧೦೧॥

ಚಿನ್ನದವೇಳು ಬೆಳ್ಳಿಯವೇಳು ಲೆಗ್ಗೆಯ
ಚೆನ್ನಾಗಿ ಹೂಡ ಹೇಳಿದನು ।
ತನ್ನ ಮನ್ನೆಯರು ಮಂದಿಗಳೆಲ್ಲ ಒಂದಾಗಿ
ಭಿನ್ನವಿಲ್ಲದೆ ಚೆನ್ನರಾಮ ॥೧೦೨॥

ಸರಿಯಾಗಿ ಹಂ[ಚೆ] ಇಕ್ಕೆಲದ ಮನ್ನೆಯರನಿ
ತ್ತರದ ಬೊಬ್ಬೇನು ಸಂಗಾಯಿ ।
ಹೊರಗಣ ಲೆಗ್ಗೆಯ ಚೆಂಡಾಟವು ನೋಡಿ
ಸರಸಿಜಮುಖಿಗೆ ಹೇಳಿದಳು ॥ ೧೦೩॥

ಲೋಲ ರಾಮಯ್ಯ ಚೆಂಡಾಡುವ ಬಯಲಿಗೆ
ಸೂಳೆಯರೆಲ್ಲ ಶೃಂಗರಿಸಿ ।
ಲೀಲೆಯಿಂದಲಿ ಹೊರಟು ಬಂದರು ಬೇಗದಿ
ಮೂಲೋಕ ಜನರು ಕಂಗೆಡಲು ॥೧೦೪॥

ಸೂಳೆ ಹಂಪಾಜಿ ಬಂದಳು ಬೇಗದಲಿಂದ
ಮೇಲೆ ರಹುಡೆಯನು ಹೊಡೆಸುತಲಿ ।
ಬಾಳ ಪಂಥವನಾಡುವ ವಿಟರೆದೆಗೊಂದು
ಲಾಳಸರದ ಬೊಂಬೆಯಂತೆ ॥೧೦೫॥

ಕಳವಳಿಸುವ ಕಾಂತಿ ಹೊಳೆವುತ ನಡೆದಳು
ಲಲನೆಯರೆಡಬಲದಲ್ಲಿ ।
ಹೊಳೆಯ ಹೊನ್ನೂರ ರಾಮಾಜಿ ಬಂದಳು ಬೇಗ
ಗೆಲವಿಂದ ಚೆಂಡ ನೋಡುವರೆ ॥೧೦೬॥

ಸರುರಾತ್ರಿಗೆ ಹಿಡಿ ಹೊನ್ನೆ ಕೊಂಬುವಳೊಬ್ಬ
ಸುರತದ ಸುಗ್ಗಿ ಎಂಬುವಳು ।
ಗುರುಮುಕೊಂಡದ ಸೋಮಿ ಹೊರಟುಬಂದಳು ಬೇಗ
ಭರದಿಂದ ಚಂಡ ನೋಡುವರೆ ॥೧೦೭॥

ಹೊಲಬುದಪ್ಪಿದ ಹುಲ್ಲೆಯಂತೆ ಹಂಬಲಿಸುತ
ಕಳೆಯುಳ್ಳ ನಗೆಯ ಮುಖಕಾಂತಿ ।
ಇಳೆಗೆ ಇಕ್ಕೇರಿಯ ಪ್ರಾಣನಾಯಕಿ ಬಂದಳು
ಬಲವಂತೆ ದುರ್ಗಾಯಿ ಎದ್ದು ॥೧೦೮॥

ಬಾಳೆಯ ಸುಳಿಯಂತೆ ಬಳುಕುತ ಬಂದಳು
ಬಾಲೆವೆಣ್ಣುಗಳ ಕೈವಿಡಿದು ।
ಪಾಳೇದ ಪಾಪಾಜಿ ಬಂದಳು ಒಲವಿಂದ
ಲೋಲ ರಾಮುಗನ ನೋಡುವರೆ ॥೧೦೯॥

ಹೊಳೆವ ಹೊಂಬಣ್ಣದ ಸೀರೆಯನುಟ್ಟಳು
ನಳಿನಾಕ್ಷಿಯು ತಾಳವಿಡಿದು ।

ಹಳೆಯಬೀಡಿನ ಹಂಪಾಜಿ ಬಂದಳು ಬೇಗ
ನಲುವಿಂದ ಚೆಂಡ ನೋಡುವರೆ ॥೧೧೦॥

ನಾರಿ ಶಿರೋಮಣಿ ಬಾಣವಾರದ ಭದ್ರಿ
ಭೋರನೆ ತಾ ಬಂದು ನಿಂದಳು ॥೧೧೧॥

ಪಟ್ಟಾವಳಿಯ ಸೀರೆ[ಯು]ಟ್ಟು ಆಭರಣವ
ತೊಟ್ಟು ಶೃಂಗಾರ[ದಿ] ನಡೆದು ।
ಕೊಟ್ಟೂರ ಕಾಮಾಜಿ ಬಂದು ನಿಂದಳು ಬೇಗ
ದಿಟ್ಟ ರಾಮುಗನ ನೋಡುವರೆ ॥೧೧೨॥

ಏಣಾಕ್ಷಿ ಬಾದಾವಿ ಬಸವಿ ಬಂದಳು ಪಂಚ
ಬಾಣ ರಾಮುಗನ ನೋಡುವರೆ ॥೧೧೩॥

ಗಂಧ ಕಸ್ತೂರಿ ತಿಲಕವನಿಟ್ಟು ನಡೆದಳು
ಚೆಂದಚೆಂದದ ಕೊನಬುಗಳ ।
ಕುಂದುರ್ಪೆಯಿಂದಲಿ ನಡೆದು
ಬಂದಳು ಬೇಗ ಕೊನಬಿನ ಕೊಂಡಾಜಿ ಆಗ ॥೧೧೪॥

ಮುಡಿವಾಳ ಹೂವ ಮಲ್ಲಿಗೆ ಜಾಜಿ ಸಂಪಗೆ
ಎಡೆಯೆಡೆಯಲ್ಲಿ ಕುಂಕುಮವು ।
ಬೇಲೂರ ಬೆನಕಾಜಿ ನಡೆದು ಬಂದಳು ಬೇಗ
ವಿಟರೆದೆ ಬೊಂಬೆಯಂದದಲಿ ॥೧೧೫॥

ಅದವನ್ನಿಯ ನಾಗಾಜಿ ಬಂದಳು ಬೇಗ
ಕಾದುವ ಮಾಸಾಳನಂತೆ ॥೧೧೬॥

ಕುಂಭಕೋಣೆಯ ವೀರಾಜಿ ಹೊರಟಳು ಬೇಗ
ಗಂಭೀರ ರಾಮನ ನೋಡುವರೆ ॥೧೧೭॥

ಹೊನ್ನ ಹಾವುಗೆ ಮೆಟ್ಟಿ ಹೊಳೆವ ಪಟ್ಟೆಯನುಟ್ಟು
ಚೆನ್ನೆಯರೊಡನೆ ತಾ ನಡೆದು ।

ಕನ್ನಡಿ ಕದಪಿನ ನೀರೆ[ಯು]ಬಂದಳು
ಚೆನ್ನಪಟ್ಟಣದ ಚೆನ್ನಾಜಿ ॥೧೧೮॥

ಸಾಸುವೆ ಬಣ್ಣದ ಸೀರೆಯನುಟ್ಟಳು
ಮೋಸಮಾಡುತಲಿ ವಿಟರುಗಳ ॥೧೧೯॥

ಚಂದ್ರಗಾವಿಯನುಟ್ಟು ಬಂದಳು ಒಲವಿಂದ
ಚಂದ್ರ[ಕಳೆ]ಯ ಸೋಲಿಸುತ ।
ನಿಂದಿರ್ದ ವಿಟರ ಕಾಲ್ಗೆಡಿಸುತ ಬಂದಳು
ಚಂದ್ರಗಿರಿಯ ಚೆಲ್ವ ಚೆನ್ನೆ ॥೧೨೦॥

ದಸುರಿ ಬಣ್ಣದ ಸೀರೆ ಹೊಸ ಮುತ್ತಿನೋಲೆಯು
ಕುಸುಮಶರನ ಸೋಲಿಸುತ ।
ಹಸುರು ಕುಪ್ಪಸವು ಕಸ್ತೂರಿ ನೊಸಲೊಳಗಿಟ್ಟು
ಹೊಸಪ್ಯಾಟೆಯ ಜಂಬುಲಿಂಗಿ ॥೧೨೧॥

ಮಿಸುನಿ ಪುತ್ಥಳಿಯ ಪಿತಾಂಬರವನುಟ್ಟಳು
ಹೊಸಮುತ್ತಿನ ಬೊಟ್ಟನಿಟ್ಟು ।
ಮಸೆದ ಅಂಬಿನ ಮೊನೆಯಂತೆ ನಡೆದು ಬಂದಳು
ವಸವಂತಪುರದ ಮಲ್ಲಾಜಿ ॥೧೨೨॥

ಏ[ಸು] ನೋಂಪಿಯ ನೋಂತು ಪಡೆದಳಿವನ ತಾಯಿ
ಈಶ ಕುಮಾರ ರಾಮಯ್ಯನ ।
ಭಾಷೆಯ ಮಾಡಿಕೊಂಬರು ತಮ್ಮೊಳು ತಾವು
ಗಾಸಿಯಾದೆವು ಎಂದೆನುತ ॥೧೨೩॥

ಸೋತರು ತನುವನೀತನಿಗೆ ಭ್ರಮೆಯಾದರು ಈ
[ಭೂತಳ]ದ ರೀತಿಯಲ್ಲ ॥೧೨೪॥

ಕಟ್ಟಾಳುಗಳ ಕರೆಸುತ ರಾಮನಾಥನು
ಕೊಟ್ಟನು ಭೂಷಣವ ।
ಪಟ್ಟಣದೊಳು ಕೂಗೆ ಬೊಬ್ಬಾಟ ಹತ್ತಿತು
ಉಟ್ಟು ಶೃಂಗರವಾಗುತಹಳೆ ॥೧೨೫॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ
....
.... ॥೧೨೬॥

ಅಂತು ಸಂಧಿ ೧೫ಕ್ಕಂ ಪದನು ೧೫೦೭ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೬

❖

ಕೊಮಾರ ರಾಮಯ್ಯನ ಚೆಂಡಿನಾಟ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ [ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನದರೆ
ಕಾಮಿತ ಫಲವೀವ ರಾಮ ॥೨॥

ಬೊಬ್ಬೆಯಬ್ಬರ[ವು] ಹಬ್ಬಿತು ಕುಮ್ಮಟದೊಳು
ನಿಬ್ಬೆರಗಾಯ್ತು ಪಟ್ಟಣವು ।
ಗಬ್ಬಿ ರಾಮನ ಚಂಡಿನಾಟವು ಜನರಿಗೆ
ಹಬ್ಬವಾಯಿತು ಕಂಗಳಿಗೆ ॥೩॥

ಹೆಣ್ಣಿಂದಲಳಿವ ಕಂಟಕವುಂಟು ರಾಮಗೆ
ಹಣ್ಣಿತು ಚಂಡಿನಾಟಗಳು ।
ಕಣ್ಣ ಮುಂದೆ ಲೆಗ್ಗೆ ಹುಯ್ಯಲು ನಡೆವುತ
ಬಣ್ಣಿಸಿ ಲೋಕಕೆ ಹರಿಯೆ ॥೪॥

ಭೂತಳದೊಳಗಿಲ್ಲ ಇವರ ಚಂಡಿನಾಟವು
ಮರ್ತ್ಯಾದಿ ದೇವ ದಾನವರು ॥೫॥

ಭೋರನೆ ಭೋರ‍್ಗೈಸಿ ವೀರ ವಾದ್ಯಗಳಿಂದ
ಮೀರಿತು ಕಾಲಾಳ ಬೊಬ್ಬೆ ।
ಊರ ಮುಂದಣ ಬೊಬ್ಬೆ ಕೇರಿಗೆ ನಿಲ್ಲಬಾರದು
ವೀರ ರಾಮನ ಚಂಡಿನಾಟ ॥೬॥

ಎತ್ತ ನೋಡಿದರತ್ತ ಹುಯ್ಯಲಬ್ಬರಗಳು
ಸುತ್ತಲು ಉಲಿವ ಬೊಬ್ಬೆಗಳು ।
ಇತ್ತ ಕೇಳಿಯೆ ಹೊಸ ಸುದ್ದಿಯ ರತ್ನಾಜಿ
ಮತ್ತೆ ಹೇಳಿದಳು ಸಂಗಿಯೊಡನೆ ॥೭॥

ಎಲ್ಲಿಯ ಸುದ್ದಿಯು ಕೇಳಿ ಬಾ ಎನುತಲಿ
ನಲ್ಲೆ ಸಂಗಿಯ ಕಳುಹಿದಳು ।
ಎಲ್ಲಿಯು ನೋಡಲು ನಿಲ್ಲದಬ್ಬರಗಳು
ಬಲ್ಲಿದ ರಾಮನಾಟಗಳು ॥೮॥

ಹೋಗು ಸಂಗಾಯಿ ನೀ ಕೇಳಿ ಬಾ ಸುದ್ದಿಯ
ಆಗ ರತ್ನಾಜಿ ಕಳುಹಿದಳು ।
ಬೇಗ ಬಂದಳು ರಾಜಬೀದಿಯ ಮಧ್ಯದಿ
ಆಗ ಕಂಡಳು ರಾಮನಾಟಗಳ ॥೯॥

ರಾಮನಾಡುವ ಚೆಂಡು ಭೂಮಿಗ್ವಿಚಿತ್ರವು
ಕಾಮುಕನಾಟವ ಕಂಡು ।
ಪ್ರೇಮದಿ ಸಂಗಿ ತಿರಿಗಿ ಅರಮನೆ ಹೊಕ್ಕು
ಕೋಮಲೆ ರತ್ನಿಯೊಳುಸುರೆ ॥೧೦॥

ಸುಮ್ಮಾನದಲಿ ರಾಮನಾಥನಾಡುವ ಚೆಂಡು
ಬ್ರಹ್ಮಾಂಡವನು ಮುಟ್ಟುತಿರಲು ।
ಉಮ್ಮಯದಿಂದಲಿ ರತ್ನಿಗೆ ಸುದ್ದಿಯ
ಗಮ್ಮನೆ ಬಂದು ಪೇಳಿದಳು ॥೧೧॥

ಅತ್ತ ರಾಮಯ್ಯ ಚೆಂಡಾಡುವ ಸುದ್ದಿಯ
ಇತ್ತ ಕೇಳಿದಳು ರತ್ನಾಜಿ ।

ಚಿತ್ತಜರೂಪನ ನೋಡಬೇಕೆನುತಲಿ
ಮತ್ತೆ ಶೃಂಗಾರವಾಗುತಹಳೆ ॥೧೨॥

ಚೆನ್ನಿಗ ರಾಮನ ನೋಡಬೇಕೆನುತಲಿ
ಕನ್ನೆ ಶೃಂಗಾರವಾಗುತಹಳೆ ।
ಪನ್ನೀರ ಕೈಕೊಂಡು ಚೆನ್ನಾಗಿ [ತಳೆ]ಕೊಂಡು
ಚೆನ್ನೆ ಆಯತವಾಗುತಿರ್ದು ॥೧೩॥

ಕಾಲುಂಗುರ ಪಿಲ್ಲಿ ಮೇಲೆ ಹೊನ್ನುಡಿದಾರ
ತೋಳಬಾಪುರಿ ಭುಜಕೀರ್ತಿ ।
ಸಾಲಮುತ್ತಿನ ಸರ ಕೊರಳ ಚಿಂತಾಕವು
ಬಾಲೆ ರತ್ನಿಗೆ ಅಳವಡಿಸಿ ॥೧೪॥

ಬೆರಳ ಹೊನ್ನುಂಗುರ ಕೊರಳ ಮುತ್ತಿನಹಾರ
ಹರಳು ತೆತ್ತಿಸಿದ ಸೂಡಂಗ ॥೧೫॥

ಚೆನ್ನನ ಸರ ಹೊನ್ನ ಹೂವು ಮುತ್ತಿನ ಕೊಪ್ಪು
ಚೆನ್ನಾಗಿ ಕರ್ಣಕಿಕ್ಕಿದಳು ।
ಬಣ್ಣಿಸಿ ಬಾಚಿ ಬೈತಲೆ ತೆಗದು ರತ್ನಿ
ನುಣ್ಣಿಸಿ ತುರುಬನಿಕ್ಕಿದಳು ॥೧೬॥

ಕಣ್ಣಿ ಕಪ್ಪನೆ ಹಚ್ಚಿ ಕಸ್ತೂರಿ ತಿಲಕವು
ಚೆನ್ನಾಗಿ ನೊಸಲಿಗಿಕ್ಕಿದಳು ॥೧೭॥

ಉಟ್ಟ ಉಡಿಗೆ ಮೇಲೆ ಕಟ್ಟಿ ಸರಪಳಿ ಗೆಜ್ಜೆ
ತೊಟ್ಟು ಮುತ್ತಿನ ರವಿಕೆಗಳ ।
ಇಟ್ಟ ಮೂಗುತಿಯು ಮುತ್ತಿನ ಬೊಟ್ಟು ನೊಸಲೊಳು
ದಿಟ್ಟ ರತ್ನಾಜಿಗಳವಡಿಸಿ ॥೧೮॥

ಇಟ್ಟಳು ಕಸ್ತೂರಿ ತಿಲಕವ ನೊಸಲೊಳು
ಉಟ್ಟಳು ಪಟ್ಟಾವಳಿಯನು ।
ಇಟ್ಟು ತೊಟ್ಟು ಶೃಂಗಾರವಾಗಿ ನಿಂದಳು
ಕಟ್ಟಿದ ನಿಲವುಗನ್ನಡಿಯ ॥೧೯॥

ದೃಷ್ಟಿಸಿ ನೋಡಿ ನಗುತಲಿ ರತ್ನಾಜಿ
ಕಟ್ಟಾಳು ರಾಮಗೇಣೆಯೆಂದು ॥೨೦॥

ಧುರಗಲಿ ರಾಮನ ನೋಡಬೇಕೆನುತಲಿ
ಗರುವೆ ಸಂಗಿಯನೊಡಗೊಂಡು ।
ಇರದೆ ಉಪ್ಪರಿಗೆಯ ಬಳಿಗೆ ಬಂದಳು ಬೇಗ
ದೊರೆ ರಾಮುಗನ ನೋಡುವರೆ ॥೨೧॥

ಸಂಗಿಯ ನಾಗಿಯರೊಡಗೂಡಿ ಬಂದಳು
ತುಂಗ ಕುಚಗಳ ನಲುಗುತಲಿ ।
ಅಂಗಜರೂಪ ರಾಮನ ನೋಡಬೇಕೆಂದು
ಮಂಗಳವಾಗಿ ರತ್ನಮ್ಮ ॥೨೨॥

ಚಿತ್ತಜ ಜಯತು ತ್ರಿಯಂಬಕ ಜಯತೆಂದು
ಹಸ್ತಿಗಮನೆ ಕೊಂಡಾಡಿದಳು ।
ಇತ್ತ ನಮ್ಮಯ ಹರಕೆಯ ಪಾಲಿಸು ಎಂದು
ಚಿತ್ತಜ ರಾಮನ ಬರಿಸೊ ॥೨೩॥

ಚೆನ್ನಿಗ ರಾಮನ ಚೆಂಡು ಎನ್ನ ಬಳಿಗೆ
ಭಿನ್ನವಿಲ್ಲದೆ ಬೀಳಲೊಡನೆ ।
ಉನ್ನತ ಊರ ಮುಂದಣ ಮಾರ‍್ಯಮ್ಮಗೆ
ಮುನ್ನೂರು ಕೋಣ ಹೊಯ್ಸುವೆನು ॥೨೪॥

ಮಾನವ ರಾಮನಾಡುವ ಮುತ್ತಿನ ಚೆಂಡು
ಮೌನದಲೆನಗೆ ಸೇರಿದರೆ ।
ಬೋನಗುರಿಯ ಹೊಯ್ಸುವೆನು ಮನದಣಿಯಲಿ
ಮನದಣಿಯಲಿ ಹಾರುಗೋಳಿಯ ಬಿಡಿಸುವೆನು ॥೨೫॥

ಹರಿದು ಹಬ್ಬವ ಮಾಡುವೆ ಗುತ್ತಿ ಎಲ್ಲಮ್ಮಗೆ
ಹರಿಯೆ ಹೊಯ್ಸುವೆನು ಕೋಣಗಳ ।
ಮೂರು ಮಾಣಿಕದ ಆರತಿಯನು ಎತ್ತುವೆ
ಲೋಲ ರಾಮಯ್ಯ ಸಿಕ್ಕಿದರೆ ॥೨೬॥

ಹಿಡಿ ಹೊನ್ನ ಕಾಣಿಕೆ ಹುಲಿಗೆ ಹೊಸೂರಮ್ಮಗೆ
ಹಿಡಿವೆನೊಪ್ಪತ್ತಿನೂಟವನು ।
ಮುಡುಪಿನ ಮುಂದಲೆಯನು ಕೊಡುವೆನು ಎ
ನ್ನೊಡೆಯ ಕಂಪಿಲಸ್ವಾಮಿ ನಿನಗೆ ॥೨೭॥

ಧರೆಯೊಳಗದೃಷ್ಟಮೂರುತಿ ತಿರುಮಲದೇವ
ಧುರಗಲಿ ರಾಮ ಸಿಕ್ಕಿದರೆ ।
ಸುರತದೊಳಗೆ ಒಂದು ಶಿಶು ಹುಟ್ಟಿತಾದರೆ
ತಿರುಮುಡಿಯನು ಮಾಡಿಸುವೆನು ॥೨೮॥

ಸೋಮವಾರ ದಿನ ಉಪವಾಸ ಇರುವೆನು
ಪ್ರೇಮದಿ ಹುಲಿಗೆರೆಯರಸ ।
ಸೋಮನಾಥನ ಕರುಣದಿ ರಾಮ ಸಿಕ್ಕಿದರೆ
ಹೇಮದ ಕಳಸ ಪರ್ವತಕೆ ॥೨೯॥

ಹೊಳೆವ ಮನ್ಮಥ ರಾಮನಿಟ್ಟ ಮುತ್ತಿನ ಚೆಂಡು
ಬಳಲಿ ಬೀಳಲಿ ಅರಮನೆಗೆ ।
ತಳುವದುಪ್ಪರಿಗೆಯ ಮುಂದೆ ಬೀಳಲಿ ಹೊನ್ನ
ಕಳಸವ ಕೊಡುವೆ ದೇವರಿಗೆ ॥೩೦॥

ಅಕ್ಕನ ಮಗ ರಾಮ ಸಿಕ್ಕಿದುಂಟಾದರೆ
ಉಪ್ಪರಿಗೆಯ ಕಟ್ಟಿಸುವೆನು ।
ತಪ್ಪದೆ ಎಪ್ಪತ್ತೇಳು ಕಪಿಲೆಯನು
ಒಪ್ಪದಿಂದಲಿ ಬಿಡಿಸುವೆನು ॥೩೧॥

ಕಂಪಿಲರಾಯನ ಮಗನು ರಾಮಯ್ಯನು
ಸೊಂಪಿಂದಲೆನಗೆ ಸೇರಿದರೆ ।
ಹಂಪೆಯಾಳ್ದಗೆ ಹಣ್ಣುಹಂಪಲಗಳಿಂದ
ಸಂಪತ್ತಿನಲೆ [ಸೇವಿಸುವೆ] ॥೩೨॥

ವಸುಧೆಯೊಳಗೆ ರಾಮನಾಡ್ವ ಮುತ್ತಿನ ಚೆಂಡು
ಪಸರಿಸಿಕೊಳಲೆನ್ನ ಮನೆಗೆ ।

ಹೊಸಪೇಟೆಯ ಜಂಬುಲಿಂಗನಾಥಗೆ ನಾನು
ವಸವಂತವನಾಡುವೆನು ॥೩೩॥

ಚಿಕ್ಕ ಪ್ರಾಯದ ರಾಮ ಸಿಕ್ಕಿದನಾದರೆ
ಹೊಕ್ಕುಳಗಂಟೆ ಸಪರಳಿಯು ।
ಮುಕ್ಕಣ್ಣನ ಒಡನಾಡಿ ಬಸವೇಶಗೆ
ಅಕ್ಕರಿಂ ಕೊಟ್ಟು ಕೈಮುಗಿವೆ ॥೩೪॥

ಅಂಗಜರೂಪ ರಾಮಯ್ಯನಾಡುವ ಚೆಂಡು
ಹಿಂಗದೆ ಎನಗೆ ಸೇರಿದರೆ ।
ತಿಂಗಳುಪವಾಸನಿರುವೆ ಗಂಗಾಧರಗೆ
ಮಂಗಳಾರತಿಯನೆತ್ತುವೆನು ॥೩೫॥

ಒಪ್ಪುವ ರಾಮನಾಥನಾಡುವ ಚೆಂಡು
ತಪ್ಪದೆ ಎನಗೆ ಸೇರಿದರೆ ।
ಕಪಿನಿಪತಿ ನಂಜುಂಡಲಿಂಗಗೆ ನಾನು
ಕರ್ಪುರದಾರತಿಯನೆತ್ತುವೆನು ॥೩೬॥

ತೆತ್ತೀಸಕೋಟಿ ದೇವರ್ಕಳೆಲ್ಲರನು
ಚಿತ್ತದೊಳಗೆ ನೆನೆನೆನೆದು ।
ಪೃಥ್ವಿಯಪತಿ ಕಂಪಿಲರಾಯ ಕೇಳ್ದರೆ
ಮತ್ತೇನ ಪೇಳ್ವೆ ರತ್ನಾಜಿ ॥೩೭॥

ನೀನು ಬೇಂಟೆಯ ಪೋಗಿ ತಡೆಯಲೊಂದು ದಿನ
ನಾನು ದೇವರ ಬೇಡಿಕೊಂ[ಡೆ] ॥೩೮॥

ಶರಭ ಶಾರ್ದೂಲ ಸಿಂಹಗಳಟ್ಟಿ ನಿನ್ನನು
ಮುರಿದು [ಕೊಲದಿರಲೆಂ]ದೆನುತ ।
ಪರವತ ಮಲ್ಲಿಕಾರ್ಜುನ ಗಂಗಾಧರನಿಗೆ
ಇರದೆ ಹರಕೆಯನಾಂತೆ ಭೂಪ ॥೩೯॥

ಇಂತು ಪರಿಯಲಿ ನಾನು ಉಪಾಯದಿಂದಲಿ ಪೇಳಿ
ಸಂತೋಷವನು ತೋರಿಸುವೆ ॥೪೦॥

ಪಾರ್ವತಿರಮಣನೆ ಉರ್ವೀಶರೊಡೆಯನೆ
ಗೀರ್ವಾಣಮುನಿಗಳೊಂದಿತನೆ ।
ಸರ್ವಜೀವರ ಸಲಹುವ ಸೂತ್ರಧಾರನೆ
ಗರ್ವ ರಾಮನ ಪಾಲಿಸೆನಗೆ ॥೪೧॥

ಧುರಗಲಿ ರಾಮನ ನೋಡಬೇಕೆನುತಲಿ ಗರ್ವೆ
ಸಂಗಿಯನೊಡಗೊಂಡು ।
ಇರದೆ ಉಪ್ಪರಿಗೆಯ ಬಳಿಗೆ ಬಂದಳು ಬೇಗ
ದೊರೆ ರಾಮನ ನೋಡುವರೆ ॥೪೨॥

ಆಡಬಹುದೆ ಚೆಂಡು ಹಸುಮಕ್ಕಳಂದದಿ
ನೋಡ ಬನ್ನಿ ಆಶ್ಚರ್ಯ ।
ಗಾಡಿಕಾರಿಯು ಹಡಪದ ಸಂಗಿಯು
ಕೂಡೆ ಉಪ್ಪರಿಗೆಯನೇರಿದರು ॥೪೩॥

ಹತ್ತಿದಳೇಳು ನೆಲೆಯ ಉಪ್ಪರಿಗೆಯ
ಮತ್ತೆ ಸಂಗಿಯು ಸಹವಾಗಿ ।
ಇತ್ತ ಕಂಡರು ರಾಜಬೀದಿಯ ಮಧ್ಯದಿ
ಅರ್ತಿಲಿ ಚೆಂಡನಾಡುವದ ॥೪೪॥

ಒಡೆಯನಾವನು ಬಂಟನಾರೆ ಎಂದೆನುತಲಿ
ಅಡರಿವೆ ಸತ್ತಿಗೆ ಬಳಸಿ ।
ಕಡುಗಲಿಗಳು ಇವರಾರೆಂದು ಅರಿಯದೆ
ನುಡಿದು ಕೇಳಿದಳು ಸಂಗಿಯನು ॥೪೫॥

ಅಗಲನ ಸತ್ತಿಗೆ ಮುಗಿಲು ಮುಟ್ಟುವ ಜಲ್ಲಿ
ದಗಲೆ ಮೈಯ್ಯವನಾರೆ ಸಂಗಿ ।
ತಗಿಲು ಬುಗಿಲು ಮಾಡಿ ಕಡಿವನು ರಣದೊಳಗೆ
ನೆಗಳೂರ ತಳವಾರ ಹರಿಯ ॥೪೬॥

ವಸವಂತ ಸತ್ತಿಗೆ ನೆಳಲಲ್ಲಿ ನಿಂದಿಹ
ಹಸುರುಗುಬ್ಬಸದವನ್ಯಾರೆ ।
ದೆಸೆಗೆಡಿಸಿ ತುರುಕ ಮಾರ್ಬಲವನು ಕಡಿವನು

ಹೆಸರುಳ್ಳ ಬಾದೂರಖಾನ ||೪೭||

ಸೂರೆಯ ಪುಟದ ಸತ್ತಿಗೆಯ ನೆಳಲಲ್ಲಿಹ
ಮಾರ ಸನ್ನಿಭನಾರೆ ಸಂಗಿ ।
ಹೊರಲ ಹುಯ್ಯಲದೊಳು ಹೊಕ್ಕು ಕಡಿವನು
ಹಾವಳಿ ಲಿಂಗ ಕಾಣಮ್ಮ ||೪೮||

ಮಝು ಭಾಪುರೆ ಸಂಗಿ ಹಿಡಿ ಕರ್ಪೂರ ವೀಳ್ಯ
ಗುಜ್ಜಲನಾರೆ ಮನ್ನೆಯನು ।
ನಿರ್ಜರದಲಿ ಡೊಳ್ಳು ಢಮ್ಮೆಂದಲಿರಿವನು
ಗುಜ್ಜಲ ಹರಿಯ ಕಾಣಮ್ಮ ||೪೯||

ಹೊಂಬಣ್ಣ ಸತ್ತಿಗೆ ನೆಳಲಲ್ಲಿ ನಿಂದಿಹ
ಗಂಭೀರ ಮನ್ನೆಯನಾರೆ ।
ತುಂಬಿರ್ದ ದೊರೆಗಳ ನಡುವೆ ಹೊಕ್ಕಿರಿವನು
ಕುಂಬಾರ ಕಲ್ಲ ಕಾಣಮ್ಮ ||೫೦||

ಚಿಕ್ಕ ಪೀತಾಂಬರ ಸತ್ತಿಗೆ ನೆರಳಡಿಯ
ಅಕ್ಕರಿಂದಿಹನಾರೆ ಸಂಗಿ ।
ಲಕ್ಷ ದಂಡಿಗೆ ಒಬ್ಬ ರಹುಡೆಯ ಸುರಿತಾಳ
ಒಕ್ಕಲಿಗರ ಮುದ್ದನಮ್ಮ ||೫೧||

ಗುಬ್ಬಿ ಸತ್ತಿಗೆ ಮೇಲೆ ಹಬ್ಬಿದ ಜಲ್ಲಿಯು
ಗಬ್ಬಿ ಮನ್ನೆಯನಾರೆ ಸಂಗಿ ।
ಸಬ್ಬ ದಂಡಿನ ಮೇಲೆ ಒಬ್ಬನೆ ಕಡಿವನು
ಕಬ್ಬುಲಿಗರ ನಾಗನಮ್ಮ ||೫೨||

ನೆಗಳ ಸತ್ತಿಗೆ ಮೇಲೆ ಬಿರಿದ ಹೊಗಳಿಸಿಕೊಂಬ
ಹಗಲು ಪಂಜಿನ ಮಾನ್ಯನಾರೆ ।
ಮಿಗೆ ಹಾಯ್ದು ತುರುಕರ ತಗರಾಗಿ ತಾಕುವ
ಅಗಣಿತ ಜಂಗಮರ ಬಸವ ||೫೩||

ಬಿಳಿಯ ಸತ್ತಿಗೆ ಮೇಲೆ ಬೀಗುವ ಚೌರವು
ಇಳೆಯೊಳಗಾವ ಮನ್ನೆಯನೆ ।

ಹೊಳೆಯ ಕಾವಲ ಕಾವ ಮಡಿವಾಳ ಮಾಚಯ್ಯ
ಲಲನೆ ಕೇಳಮ್ಮ ರತ್ನಾಜಿ ॥೫೪॥

ಹಸುರು ಸತ್ತಿಗೆ ಮೇಲೆ ಹೊಸ ಹೊನ್ನ ಕಳಸವು
ದೆಸೆಯುಳ್ಳನಾವ ಮನ್ನೆಯನೆ ।
ವಸುಧೆಯೊಳಗೆ ಇವ ಕುಶಲನೆನಿಸಿಕೊಂಬ
ಅಸಗೋಡ ಬಸವ ಕಾಣಮ್ಮ ॥೫೫॥

ಕಂಚಿನ ಸತ್ತಿಗೆ ಮಿಂಚುಳ್ಳ ಜಲ್ಲಿಯು
ಗೊಂಚಲ ಕಟುಕಿನವನಾರೆ ।
ಮುಂಚಿನ ಹುಯ್ಯಲೊಳಗೆ ಏರಿ ಕಡಿವನು
ಕಂಚುಗಾರ ಕಾಳನಮ್ಮ ॥೫೬॥

ಚಂಡಿಕುಮಾರರ ಗಂಡನೆನಿಸಿಕೊಂಬ ಭೂ
ಮಂಡಲಪತಿ ಅವನಾರೆ ।
ಲೆಂಡ ಖಾನರ ಮೇಲೆ ಎದ್ದು ಕಡಿವನವ
ಗಂಡಿಕೋಟೆಯ ಗಂಗರಾಜ ॥೫೭॥

ಮಂಡಲದೊಳಗೆ ಉದ್ದಂಡನೆನಿಸಿಕೊಂಬ
ಚಂಡವಿಕ್ರಮನಾರೆ ಸಂಗಿ ।
ಪಾಂಡುರಂಗ ದೇಶದ ರಾಯನಿವನಮ್ಮ
ಮಂಡಲವದನೆ ರತ್ನಾಜಿ ॥೫೮॥

ಹಳದಿ ಸತ್ತಿಗೆ ಮೇಲೆ ಹೊಳೆವ ಹೊಂಗಳಸವು
ನಳಿನಾಕ್ಷನವನಾರೆ ಸಂಗಿ ।
ಇಳೊಯೊಳಧಿಕವಾಗಿ ಕಳಸ ಭಾಂಡವನಾಳ್ವ
ತುಳವರ ಗಿರಿಯ ಕಾಣಮ್ಮ ॥೫೯॥

ಪಚ್ಚೆದ ಸತ್ತಿಗೆ ನೆರಳಡಿಯ ನಿಂದಿಹ
ಹೆಚ್ಚುಳ್ಳ ಮನ್ನೆಯನಾರೆ ।
ಹುಚ್ಚುಗೆಡಿಸಿ ತುರುಕರ ದಂಡ ಕಡಿವನು
ಮುಚ್ಚಾಲ ಹನುಮ ಕಾಣಮ್ಮ ॥೬೦॥

ಅಗಲನ ಸತ್ತಿಗೆ ನರಳಲ್ಲಿ ನಿಂದಿಹ
ಜಗುಲಿ ಮೈಯ್ಯವನಾರೆ ಸಂಗಿ ।
ತೊರಗಲ್ಲ ಬಾದಾವಿ ನಾಡಿನ ಅರಸನು
ಹರದಿ ಕೇಳಮ್ಮ ರತ್ನಾಜಿ ॥೬೧॥

ಚಿಕ್ಕ ಸತ್ತಿಗೆ ಕಾಲಿಗಿಕ್ಕಿದ ಕಡೆಯವು
ರಕ್ಕಸ ಮನ್ನೆಯನಾರೆ ।
ಕಕ್ಕಸ ಕುಚದ ರತ್ನಿಯೆ ಕೇಳು ಪೇಳುವೆ
ಒಕ್ಕಲ ಮಿಡಿಗೇಸಿ ನಾಗ ॥೬೨॥

ಹಳದಿಯ ಬಿರಿದು ಮಾದಳಗಾವಿ ಸತ್ತಿಗೆ
ಸೆಳೆ ನಡುವಿನ ಜಾಣನಾರೆ ।
ತಳುಹದೆ ಹುಯ್ಯಲ ಕಂಡೇರಿ ಕಡಿವನು
ಹೊಳಲಕೆರೆಯ ಸಂಗನಮ್ಮ ॥೬೩॥

ಇಂದ್ರನ ತೋಪಿನ ಸತ್ತಿಗೆ ನೆರಳಡಿ ದೇ
ವೇಂದ್ರನಂತಿಹನ್ಯಾರೆ ಸಂಗಿ ।
ಬಂದ ದಂಡನು ಹಿಂದುಮುಂದಾಗಿ ಕಡಿವನು
ಚಂದ್ರಗಿರಿಯ ಸಿದ್ಧನಮ್ಮ ॥೬೪॥

ಪಂಚವರ್ಣದ ಸತ್ತಿಗೆ ನೆರಳಡಿಯಲಿ
ಹೊಂಚಿ ನಿಂದಿಹನಾರೆ ಸಂಗಿ ।
ಮುಂಚಿನ ಚೂಣಿಯ ಮುರಿಯಲಿರಿವನಿವ
ಪಂಚಮರ ಬಸವ ಕಾಣಮ್ಮ ॥೬೫॥

ಉದ್ದನ ಸತ್ತಿಗೆ ನೆರಳಡಿ ನಿಂದಿಹ
ಮುದ್ದುಮುಖದವನಾರೆ ಸಂಗಿ ।
ಉದ್ದಗಿರಿಯ ಸಿದ್ಧರಾಜನ ಮಗನಮ್ಮ
ಮುದ್ದು ಕೋಮಲೆ ರತ್ನಿ ಕೇಳು ॥೬೬॥

ಗೊಂಡೇದ ಸತ್ತಿಗೆ ನೆಳಲಡಿಯ ನಿಂದಿಹ
ಚಂಡವಿಕ್ರಮನಾರೆ ಸಂಗಿ ।

ದಂಡೆತ್ತಿ ಬಹ ತುರುಕರ ಗಂಡನೆಂದೆಂಬ ಪೆನ
ಗುಂಡೆಯ ಸೋಮ ಕಾಣಮ್ಮ ॥೬೭॥

ಏಕಲಂಜಿ ಸತ್ತಿಗೆ ನೆರಳಡಿಯ ನಿಂದಿಹ
ಲೋಕನಾಯಕನಾರೆ ಸಂಗಿ ।
ನೂಕಿ ದಂಡೆತ್ತಿ ಬಾಹರಗಂಡನೆಂದೆಂಬ
ಏಕಾಂಗಿ ವೀರ ಕಾಣಮ್ಮ ॥೬೮॥

ಹಸುರು ಕಾವಿನ ಛತ್ರಿ ಬಸವನ ಮುದ್ರೆಯು
ಮಿಸುನಿಯ ಬಾಯವನಾರೆ ।
ಅಸಮ ದಳದ ಮೇಲೆ ಎದ್ದು ಕಡಿವನಿವ
ಬಸವರಾಹುತ ಸಿದ್ಧನಮ್ಮ ॥೬೯॥

ಸಕಲಾತಿ ಸತ್ತಿಗೆ ನೆರಳಡಿಯ ನಿಂದಿಹ
ಮಕರಂಕನವನಾರೆ ಸಂಗಿ ।
ಸಕಲ ದಂಡಿನ ಮೇಲೆ ಸಮರದಿ ಕಡಿವನು
ಅಕಳಂಕ ಸಿದ್ಧನೆಂಬವನು ॥೭೦॥

ಕೊಡೆಯ ಸತ್ತಿಗೆ ಮೇಲೆ ಗಿಡುಗನ ಬಿರಿದಿಕ್ಕಿ
ಸಡಗರದಲ್ಲಿಹನಾರೆ ।
ಬಿಡದೆ ಬೆನ್ನತ್ತಿ ಕಡಿವನು ರಣದೊಳು
ಮಿಡಿಗೇಸಿ ನಾಗ ಕಾಣಮ್ಮ ॥೭೧॥

ಎಡಬಲದಲ್ಲಿ ಚೌರ ಢಾಳಿಸಿಕೊಂಬ
ಬೆಡಗಿನ ಮಾನ್ಯನವನಾರೆ ।
ಕೊಡುವೆಡೆಯೊಳು ಕರ್ಣನೆಂದೆನಿಸುವ
ನಿಡಿಗಲ್ಲ ಕಾಮ ನಿಸ್ಸೀಮ ॥೭೨॥

ಚಂದ್ರಗಾವಿಯ ಸತ್ತಿಗೆ ನರಳಡಿಯ
ಚೆಂದದಿಂದಿಹನಾರೆ ಸಂಗಿ ।
ಕಂದರ್ಪ ಸಮರೂಪ ಕದನ ಪ್ರಚಂಡನು
ಕುಂದುರ್ಪೆ ತಮ್ಮ ಕಾಣಮ್ಮ ॥೭೩॥

ಹೊಳೆವ ಮನ್ಮಥರೂಪ ಥಳಥಳಿಸುತಲಿಪ್ಪ
ಕಳೆಯುಳ್ಳವನಾವ ಮನ್ನೆಯನೆ ।
ಇಳೆಯೊಳಗಿವ ರಾಯದುರ್ಗದ ವೀರನು
ಕೆಳದಿ ಕೇಳಮ್ಮ ರತ್ನಾಜಿ ॥೭೪॥

ಕಾಗಿನ ಸತ್ತಿಗೆ ತೂಗುವ ಜಲ್ಲಿಯು
ಭೋಗದೊಳಿಹನಾರೆ ಸಂಗಿ ।
ಕೂಗಿದ [ರಣಕಿವ] ಮೊಳ ಹೆಚ್ಚುವನು ಕೇಳು
ಬೋಗಾರ ಮಲ್ಲ ಕಾಣಮ್ಮ ॥೭೫॥

ಬೊಂಬೆಯ ಸತ್ತಿಗೆ ನೆರಳಡಿಯ ನಿಂದಿಹ
ತುಂಬಿದ ಮೈಯವನಾರೆ ।
ಹಂಬಲ ಹರಿದು ತುರುಕರ ದಂಡ ಕಡಿವನು
ಕುಂಭಕೋಣೆಯ ಕಲ್ಲನಮ್ಮ ॥೭೬॥

ಎತ್ತಿದ ನ್ಯಾಜ್ಯವು ಪಪ್ಪಾಳಿ ಸತ್ತಿಗೆ
ಎತ್ತಳ ನಾಡ ಮನ್ನೆಯನೆ ।
ಉತ್ಸಂಗಿದುರ್ಗದ ಪಡುವಲದೇಶದ
ಮತ್ತ ಕೋಕಿಲನು ಕಾಣಮ್ಮ ॥೭೭॥

ಕೊಡೆನೆಂಬ ಲೋಭಿಯ ಗಂಡನೆಂದೆನಿಸುವ
ಗಡಿಯಂಕ ಭಿಮನವನಾರೆ ।
ಪೊಡವಿಯೊಳಗೆ ಎಣೆಗಾಣೆನು ಇವನಿಗೆ
ಗಡಿಯಕೋಟೆಯ ದೇವನಮ್ಮ ॥೭೮॥

ಸುಲಿಪಲ್ಲ ಸತ್ತಿಗೆ ನೆರಳಡಿಯ ನಿಂದಿಹ
ಒಲವುಳ್ಳ ಮನ್ನೆಯನಾರೆ ।
ಛಲದಂಕ ಸಾರಂಗಿ ಗೊಲ್ಲರ ಗುಜ್ಜಯ್ಯ
ಲಲನೆ ಕೇಳೆಲೆ ರತ್ನಾಜಿ ॥೭೯॥

ಸಕಲಾತಿ ಸತ್ತಿಗೆಯ ನೆರಳಲ್ಲಿ ನಿಂದಿಹ
ಮುಖ ದೊಡ್ಡನಾವ ಮನ್ನೆಯನೆ ।

ಸಕಲ ವೈರಿಗಳೆದೆಗಂಕುಶವಾಗಿಹ
ಮಕರಂಕ ಮಾದಿಗ ಹಂಪ ॥೮೦॥

ಸುಳಿವಾಳೆ ಪಟ್ಟೆ ಸತ್ತಿಗೆ ನೆರಳಲಿ ನಿಂದಿಹ
ಮೇಳದ ಮನ್ನೆಯನಾರೆ ।
ದಾಳಿಯ ಬಂದ ಖಾನರನೆಲ್ಲ ಕೊಲ್ಲುವ
ದಳಧೂಳಿ ಮಾದ ಕಾಣಮ್ಮ ॥೮೧॥

ಚಿನ್ನದ ಸತ್ತಿಗೆ ರನ್ನದ ಕಳಸವು
ಮನ್ನೆಯನ್ಯಾರೆಲೆ ಸಂಗಿ ।
ಕನ್ನೋಜಿ ಖಾನರ ಗಂಡನೆನಿಸುವ ಕೇಳು
ಮನ್ನೂಲ ಮಾಚನೆಂಬವನು ॥೮೨॥

ಕುರುಹಿನ ಟೆಕ್ಕೆಯು ಅರಿಬಿರಿದಿನ ಜಲ್ಲಿ
ಮೆರೆವ ಮನ್ನೆಯನಾರೆ ಸಂಗಿ ।
ಧರೆಯೊಳು ಕುರುಗೋಡ ಸಂಗಮ ಇವನೊಳು
ಬೆರಸಿ ಕಾದುವರಿಲ್ಲವಮ್ಮ ॥೮೩॥

ಜಗಜಂಪಿನ ಸತ್ತಿಗೆ ನೆರಳಲ್ಲಿ ನಿಂದಿಹ
ನಗೆಮುಖದವನಾರೆ ಸಂಗಿ ।
ಜಗದೊಳು ಚಿನ್ಮೂಲಗಿರಿದುರ್ಗದ ದೊಡ್ಡ
ಅಗಣಿತ ಸಿಂಗ ಕಾಣಮ್ಮ ॥೮೪॥

ಕನಕದ ಸತ್ತಿಗೆ ನೆರಳಡಿಯ ನಿಂದಿಹ
ಜನವಶ್ಯ ತಿಲಕದವನಾರೆ ।
ಆನೆಯ ದಂಡನೆಲ್ಲವ ಕಡಿವನು ಇವ
ಮೀನಿಗರ ಲಕ್ಕ ಕಾಣಮ್ಮ ॥೮೫॥

ಪಚ್ಚೆ ಕಾವಿನ ಸತ್ತಿಗೆ ನೆರಳಲಿ ನಿಂದಿಹ
ಹೆಚ್ಚುಳ್ಳನಾವ ಮನ್ನೆಯನೆ ।
ಮೆಚ್ಚ ನುಂಗುವ ಲೋಭಿಯ ಗಂಡನೆನಿಸುವ
ಉಚ್ಚಂಗಿದುರ್ಗದ ಪಾಲ ॥೮೬॥

ಎಸೆವ ಸತ್ತಿಗೆ ಮೇಲೆ ಹೊಸ ಹೊನ್ನ ಕಳಸವು
ದೆಸೆಯುಳ್ಳನಾವ ಮನ್ನೆಯನೆ ।
ಅಸಮದಳಕಿದಿರಾದ ಅಸುರರ ತಲೆ ರನ್ನ
ವಸದಾರಿ ಬಸವ ಕಾಣಮ್ಮ ॥೮೭॥

ಸತ್ತಿಗೆ ಎಲ್ಲಕೆ ಸುತ್ತಳ ಗೊಂಡೆವು
ಎತ್ತಳ ನಾಡ ಮನ್ನೆಯನೆ ।
ಉತ್ತುಮ ತೊರಗಲ್ಲ ಜಾಯಿಶೆಟ್ಟಿ ಬಸವಯ್ಯ
ಮತ್ತೆ ಕೇಳಮ್ಮ ರತ್ನಾಜಿ ॥೮೮॥

ಬೆಳ್ಳಿಯ ಕಾವಿನ ಸತ್ತಿಗೆ ನೆರಳಡಿಯ
ಒಳ್ಳೆವನಾವ ಮನ್ನೆಯನೆ ।
ಡಿಳ್ಳಿಯ ಖಾನರ ಗಂಡನೆನಿಸಿಕೊಂಬ
ಬಳ್ಳಾರಿ ಹನುಮ ಕಾಣಮ್ಮ ॥೮೯॥

ಬಾವನ್ನ ಸತ್ತಿಗೆ ನೆರಳಡಿಯ ನಿಂದಿರ್ದ
ಕೋವಿದನಾವ ಮನ್ನೆಯನೆ ।
ಜೀವದೊಳರ್ಧನೆನಿಸುವನು ರಾಮಗೆ
ದೇವಿಸೆಟ್ಟಿಯ ಲಿಂಗನಮ್ಮ ॥೯೦॥

ನೀಲಿಯ ಸತ್ತಿಗೆ ಮೇಲೆ ಹಬ್ಬಿದ ಬಿರಿದು
ಲೋಲ ಮನ್ನೆಯನಾರೆ ಸಂಗಿ ।
ಬಾಲಕುಮಾರರ ಗಂಡನೆನಿಸಿಕೊಂಬ
[ಸಾ]ಲ್ಗುಂದಿ ಚೆನ್ನ ನಿನ ತಮ್ಮ ॥೯೧॥

ಮುಕ್ಕಣ್ಣ ನೇಜೆವು ಇತ್ತರದಲಿ ಜಲ್ಲಿ
ಕಂಕಣರುದ್ರನವನಾರೆ ।
ಕೊಂಕಿ ಉರುಲ ಹಾಕಿ ಸೆಳೆವನು ರಣದೊಳು ನಿ
ಶ್ಯಂಕ ಕಂಪಿಲನಳಿಯನಮ್ಮ ॥೯೨॥

ಏಕಾಂಬ್ರ ಸತ್ತಿಗೆ ಹಾಕುವ ಚವುರವು
ಪಾಕಶಾನು ಇವನಾರೆ ।

ಕಾಟಣ್ಣ ನಿಮ್ಮ ಹಿರಿಯ ಕುಮಾರನು
ಮೀಟು ಜವ್ವನೆ ಕೇಳು ರತ್ನಿ ॥೯೩॥

ನೇತ್ರಾವಳಿಯ ಸತ್ತಿಗೆ ನೆಳಲಲ್ಲಿ ನಿಂದಿಹ
ಗಾತ್ರ ಮನ್ನೆಯನಾರೆ ಸಂಗಿ ।
ಯಂತ್ರವಾಹಕ ನಮ್ಮ ಅರಸಿನ ಕುಮಾರ
ಮಂತ್ರಿ ಬೈಚಪ್ಪನ ಮಗನು ॥೯೪॥

ಜಲ್ಲಿಯ ಸತ್ತಿಗೆ ನೆರಳಡಿಯ ನಿಂದಿಹ
ನಲ್ಲನಾಯಕನಾರೆ ಸಂಗಿ ।
ಎಲ್ಲ ದಳಕಿಂದಲಿ ಬಿಲ್ಲಲಿ ಬಲ್ಲಿದ
ಕಲ್ಲಕೋಟೆಯ ಚಿತ್ತನಮ್ಮ ॥೯೫॥

ಛಪ್ಪನ್ನ ದೇಶದ ಮನ್ನೆಯರೊಳಗೊಬ್ಬ
ಪುಷ್ಪಚಾಪಿನ ರೂಪನಾರೆ ।
ಎಪ್ಪ[ತ್ತೆರಡು] ಮಾನ್ಯಯರಿಗೆ ವೆಗ್ಗಳ
ಕೊಪ್ಪಳದ ತಿಮ್ಮ ಕಾಣಮ್ಮ ॥೯೬॥

ಎಪ್ಪತ್ತು [ಎರಡು] ಮನ್ನೆಯರ ಸತ್ತಿಗೆಗಳು
ತಪ್ಪದೆ ಉರಿಯಲೆ ಸಂಗಿ ।
ಒಪ್ಪುವ ಚೆಲುವ ರಾಮನ ತೋರುತೋರೆಂದು
ಕರ್ಪೂರಗಂಧಿ ಆಡಿದಳು ॥೯೭॥

ಉನ್ನಂತ ರಾಮನ ತೋರೆಂದರೆ ನಾಡ
ಮನ್ನೆಯರ ಎನಗೆ ತೋರುವರೆ ।
ಎನ್ನ ತನುವ ಸೂರೆಗೊಂಬ ರಾಮನ ತೋರೆ
ಹೊನ್ನ ಹೊಯ್ಸಿವೆ ಬಾಯಿತುಂಬ ॥೯೮॥

ನಾಲ್ಕು ಸತ್ತಿಗೆ ಮೇಲೆ ಚೌಡ ಢಾಳಿಸಿಕೊಂಬ
ಲೋಕ ಮನ್ನೆಯನಾರೆ ಸಂಗಿ ।
ಭೂಲೋಕಕತಿ ರೂಪ ಕಾಲನೇಮಿಯ ಗಂಡ
ಬಾಲಕುಮಾರ ರಾಮಯ್ಯ ॥೯೯॥

ಎಡಬಲದಲಿ ನಾಲ್ಕು ಮುತ್ತಿನ ಸತ್ತಿಗೆ
ನಡುವೆ ನಿಂದಿಹನಾರೆ ಸಂಗಿ ।
ಪೊಡವಿಯೊಳುಳ್ಳ ದಿಕ್ಕಿನ ರಾಯರಗಂಡ
ಕಡುಗಲಿ ಚೆನ್ನಿಗರಾಮ ॥೧೦೦॥

ರಾಮನ ತೋರುತೋರೆಂದರೆ ಸಂಗಾಯಿ ನಾ
ಡ ಮನ್ನೆಯರ ತೋರಿಸಿದೆ ।
ಕಾಮನ ಸಮರೂಪ ಕನ್ನಡಿ ಮುಖಧರ
ರಾಮನ ತೋರದೆ ನೀನು ॥೧೦೧॥

ರಾಮನೆಂಬಾ ಮಾತ ಕೇಳಿ ಸಂತೋಷದಿ ನಿ
ಸ್ಸೀಮನ ದೃಷ್ಟಿಸಿ ನೋಡಿ ।
ಕ್ಷೇಮದಿ ತಲ್ಲಣಿಸುತ ತರಹರಿಸುತ
ಕಾಮ ಹುಟ್ಟಿತು ಮನದೊಳಗೆ ॥೧೦೨॥

ದೃಷ್ಟಿಸಿ ನೋಡಿ ರಾಮನ ಕಂಡು ಮನದೊಳು
ಹುಟ್ಟಿತು ತಾಪ ವೆಗ್ಗಳಿಸಿ ।
ಕಟ್ಟಾಳು ರಾಮನ ಸಂಗವ ಹೊಕ್ಕು ಸವಿವೆನು
ದಿಟ್ಟೆಯಾಡಿದಳು ಸಂಗಿಯೊಡನೆ ॥೧೦೩॥

ಧರೆಯೊಳಾಡುವುದು ಬರಿ ಮಾತು ಮನ್ಮಥನ
ಉರುಹಿ ಸುಟ್ಟುದು ಸಟೆಯೆನುತ ।
ಗರುವ ರಾಮನು ಸ್ತ್ರೀಯರ ತನುದುರ್ಗವ
ಇರದೆ ಮುತ್ತಿಗೆ ಮಾಡ ಬಂದ ॥೧೦೪॥

ಕಟ್ಟಾಳು ರಾಮಯ್ಯ ಹುಟ್ಟುವಾಗಲು ಶಿವ
ಕೊಟ್ಟಾನು ರೂಪನಿವನಿಗೆ ।
ಸೃಷ್ಟಿಯೊಳಗೆ ರಾಮ ಸ್ತ್ರೀಯರ ಅಂಗವ
ಮುಟ್ಟಿ ಸೂರೆಯ ಮಾಡಬಂದ ॥೧೦೫॥

ಹೊನ್ನ ಪುತ್ಥಳಿಯಂತೆ ಹೊಳೆವ ಕನ್ನಡಿಯಂತೆ
ಮನ್ಮಥನ ಮರೆಸುವಂದದಲಿ ।

ಕನ್ನಡಜಾಣ ರಮನ ಕಂಡು ಮನಸೋತು
ತನ್ನ ಮನದಣಿಯ ನೋಡಿದಳು ॥೧೦೬॥

ನೋಡಿದಾಕ್ಷಣದಲ್ಲಿ ಮೂಡಿತು ಮೊನೆ ಮೊಳೆ
ಕೂಡಿತು ರತ್ನಿಗೆ ತಾಪ ।
ರೂಢಿಯೊಳ್ ಮನ್ಮಥ ತನ್ನೈದು ಬಾಣವ
ಹೂಡಿಬಿಟ್ಟನು ಇವಳೆದೆಗೆ ॥೧೦೭॥

ಮದನೈದು ಬಾಣವು ಎದೆಯ ತಟ್ಟುಗಿಯಲು
ಕದುಬಿ ಕಾತರಿಸಿ ಕಂಗೆಟ್ಟು ।
ಹೃದಯ ತಲ್ಲಣಿಸಿ ಮೈಮರೆದ ವಿರಹದಲ್ಲಿ
ಬೆದರಿ ಬಿದ್ದಳು ರತ್ನಾಜಿ ॥೧೦೮॥

ಬಿದ್ದ ಭರಕೆ ರತ್ನಿ ಮುದ್ದುಮುಖವು ಬಾಡಿ
ಹೊದ್ದಿ ಬಳಸಿ ಕುಂತಳವಳು ।
ನಿದ್ರೆಯಂದದಿ ಮೈಮರೆದಳು ವಿರಹದಿ
ಹೊದ್ದಿ ಹೊರಳಿದಳು ರತ್ನಾಜಿ ॥೧೦೯॥

ಹೊರಳಿದಳು ಬುಡುಬುಡನುರುಳಿದಳು ಭೂಮಿಯಲಿ
ಸೊರಗಿದಳು ಮೋಹಮೂರ್ಛೆಯಲಿ ॥೧೧೦॥

ಹವಣರಿಯದೆ ಇವಳು ಬಿದ್ದಿಹ ಸಮಯದಿ
ಭುವನೇಶ ಕಂಡರೆ ಇವಳ ।
ಕಿವಿ ಮೂಗು ಮುಂದಳೆ ಕೊಯ್ಸದೆ ಬಿಡನೆಂದು
ಹವಣಿಸಿದಳು ಒಂದು ನೋವ ॥೧೧೧॥

ತವಕದಿ ಕಂಪಿಲರಾಯ ಬಂದರೆ ಇವಳ
ಜೀವಕ್ಕೆ ಮುನಿಯದೆ ಬಿಡನು ।
ಇವಳು ಮೈಮರೆದು ಬಿದ್ದಳು ವಿರಹ ತಾಪದಲಿ
ಹವಣ ಕಾಣೆಲೆ ಸಂಗಾಯಿ ॥೧೧೨॥

ಅಂದು ಕಂಗೆಟ್ಟು ಸಂಗಾಯಿ ತನ್ನ ಮನದಲ್ಲಿ
ಮತ್ತೊಂದು ಬುದ್ಧಿಯನೆಣಿಸುತ ।

ಪನ್ನೀರ್ಗಳನು ತಂದು ಕಣ್ಣಿಗೆ ಒತ್ತಲು
ತನ್ನ ಮರವೆ ತಿಳಿದೆದ್ದು ॥೧೧೩॥

ಇನ್ನು ಸಂಗಿಯ ಕೂಡ ನುಡಿದಳು ರತ್ನಾಜಿ
ಚೆನ್ನರಾಮನ ತೋರಿಸೆನುತ ।
ಕನ್ನೆ ನಿನ್ನಯ ಬುದ್ಧಿ ಸಣ್ಣವರಂದದಿ
ಚೆನ್ನಿಗಗೆ ನೀನು ಸೋಲುವರೆ ॥೧೧೪॥

ಆಡಲು ಚೆಂಡು ಇಲ್ಲಿಗೆ ಓಡಿ ಬರುವುದು
ಬೇಡಲು ಬರುವ ರಾಮಯ್ಯ ।
ರೂಢಿಯೊಳಗೆ ಮನ್ಮಥನ ಕೈವಶವ
ಮಾಡಿಕೊಳ್ಳಮ್ಮ ರತ್ನಾಜಿ ॥೧೧೫॥

ಮಂದಗಮನೆ ಕೇಳು ಮನ್ಮಥರೂಪನು
ಬಂದಾನು ನಿನ್ನರಮನೆಗೆ ।
ಸಂದೇಹಬೇಡವೆಂದೆನುತ ರತ್ನಾಜಿಗೆ
ಬಂದು ಬುದ್ಧಿಯನು ಹೇಳಿದಳು ॥೧೧೬॥

ಗಾದೆಯ ಮಾತ ಸಾವಿರವ ಹೇಳಿದರೇನು
ಬೋಧಿಸುವೆನೆ ಬುದ್ಧಿಯನು ।
ನಿಧಾನವ ಕಂಡರೆ ಬಿಡುವರುಂಟೆ ಸಂಗಾಯಿ
ಉದಾರ ರಾಮನ ತೋರಿಸೆನಗೆ ॥೧೧೭॥

ತೋರೇನು ಏಳೆಂದು ನೀರೆಯ ಪಿಡಿದೆತ್ತಿ
ಮೇರುವೆಯನು ಹತ್ತಿ ನಿಂದು ।
ಧಾರುಣಿಯೊಳು ಚೆಲ್ವರಗಂಡ ರಾಮ ತಾ
ನೀರೆ ರತ್ನಾಜಿ ನೀ [ನೋಡೆ] ॥೧೧೮॥

ಕಪ್ಪಹತ್ತಿದ ಮೀಸೆ ಕಸ್ತೂರಿ ತಿಲಕವು
ಬಲ್ಪಿನ ಚಿಮ್ಮುರಿ ಸುತ್ತಿ ।
ಮಾರಸನ್ನಿಭನಿವ ಅರಸು ನೇಮಿಯ ಗಂಡ
ಹರುಸಾದೆ ನೋಡೆ ರಾಮುಗನ ॥೧೧೯॥

ಒತ್ತಿ ಬರುವ ಮೀಸೆ ಕೆನ್ನೆ ಕುಮರಗಡ್ಡ
ಉತ್ತುಮ ಧೀರನಿವನೀಗ ।
ಇತ್ತ ನೋಡೆಲೆ ರತ್ನಾಜಿ ರಾಮಯ್ಯನು
ಅರ್ತಿಲಿ ಚೆಂಡನಾಡುವದ ॥೧೨೦॥

ಚೆಂಡನಾಡುವ ರಾಮನ ಕಂಡು ಮನದಲ್ಲಿ
ಕೊಂಡಾಡಿದಳು ಹರುಷದಲಿ ।
ಇಂದ್ರನೊ ಚಂದ್ರನೊ ಶೂದ್ರಿಕ ವೀರನೊದೇ
ವೇಂದ್ರನೆನುತ ಕೊಂಡಾಡಿದಳು ॥೧೨೧॥

ಇನ್ನೊಂದು ಬಾರಿ ರಾಮನ ತೋರು ತೋರಿಸೆ
ಮನ್ನಿಸಿ ಉಡುಗೊರೆನೀವೆ ।
ರಾಮನಾಥನ ಕಂಡು ನೀರೆ ಮನಸೋತಳು
ಪ್ರೇಮ ಹುಟ್ಟಿತು ಮನದೊಳಗೆ ॥೧೨೨॥

ಸೃಷ್ಟಿಗಧಿಕ ಕಾಟಣ್ಣ ಮುತ್ತಿನ ಚೆಂಡ
ನೆಟ್ಟನೆ ಪಿಡಿದಿರೆ ಕಂಡು ।
ಪಟ್ಟದಾನೆಯೆ ಕಾಟಣ್ಣ ಚೆಂಡನು ತಾರೊ
ಇಟ್ಟು ನೋಡುವೆನೊಂದು ಬಾರಿ ॥೧೨೩॥

ಚೆಂಡಾಟ ನೀನರಿಯೆ ಚೆನ್ನಿಗ ರಾಮಯ್ಯ
ಚೆಂಡನಾಡುವ ಪಾಯ ನೋಡು ।
ರೂಢಿಯೊಳಧಿಕ ಕಾಟಣ್ಣನು ಬೊಬ್ಬಿರಿದು
ಈಡಾಡಿ ಇಟ್ಟ ಲೆಗ್ಗೆಯನು ॥೧೨೪॥

ಸರಗೋಲು ಮುರಿದು ಲೆಗ್ಗೆಯ ಹಲ್ಲೆ ನುಗ್ಗೆದ್ದು
ಉರುಳಿತು ಲೆಗ್ಗೆ ಭೋರ್ಮೊರೆದು ।
ಹಿರಿಯಣ್ಣನಿಟ್ಟರೆ ತಡೆಯಬಾರದು ಎಂದು
ಕರವ ಮುಗಿದು ಬಲಿಗೊಟ್ಟ ॥೧೨೫॥

ಇತ್ತ ಕಾಟಣ್ಣನಾಡಿದ ಮುತ್ತಿನ ಚೆಂಡು ರಾಮ
ನೊತ್ತಿನ ಮನ್ನೆರುಗಳು ।

ಚಿತ್ತದೊಳಗೆ ಹಿಗ್ಗುತ ಗುಜ್ಜಲ ಹರಿಯ
ನೆತ್ತಿ ಪಿಡಿದನಾ ಚೆಂಡ ॥೧೨೬॥

ಹಿಡಿದ ಚೆಂಡನು ಕಂಡು ರಾಮನ ಮನ್ನೆಯರು
ಗಿಡಿಬಿಡಿ ಕೊಳಲು ತಪ್ಪಟೆಯು ।
ಬಿಡದೆ ಬಿರಿದಿನ ಕಹಳೆ ಹಿಡಿಯೆ ಬ್ರಹ್ಮಾಂಡವು
ಒಡೆವಂತೆ ಬೊಬ್ಬಿಡುತಿಹುದು ॥೧೨೭॥

ಹೂಡಿರೊ ಲೆಗ್ಗೆಯ ನೀಡಿರೊ ಚೆಂಡನು
ಓಡಿರೊ ನಾಲ್ಕು ದಿಕ್ಕಿನಲಿ ।
ಈಡಾಡಿ ದೇವಿಸೆಟ್ಟಿ ಲಿಂಗಣ್ಣಿಟ್ಟರೆ
ಬೇಡನಾಯಕರು ಬೆದರಿದರು ॥೧೨೮॥

ಬೂಟಕ ಬೊಮ್ಮನ ಮೊಳಕಾಲು ಮುರಿಯಿತು
ದಿಟ್ಟ ಗಾಣಿಗ ಬುಳ್ಳನವರು ॥೧೨೯॥

ದೇವಿಸೆಟ್ಟಿಯ ಲಿಂಗನಿಟ್ಟ ಮುತ್ತಿನ ಚೆಂಡ
ಭಾವ ಸಂಗಮನಾಥ ಪಿಡಿದ ।
ಕೋವಿದ ಕಾಟಣ್ಣನ ಪರಿವಾರವು
ಆವುಜ ಭೇರಿ ಮದ್ದಳೆಯು ॥೧೩೦॥

ಬುರುಗು ಜಾಗಟೆ ಚಿನ್ನಗಹಳೆ ತುತೂರಿ ಕೊಂಬು
ಬಿರುದಿನ ರಹುಡೆಯ ಹೊಯ್ಸಿ ॥೧೩೧॥

ಹರಿದು ಬಂದೆಲ್ಲ ಕಾಟಣ್ಣನ ಮನ್ನೆಯರು
ಬಿರಿದಿನೆಕ್ಕಟಿಗರು ಸಹಿತ ।
ಬಿರಿದಿನ ಕಹಳೆಯ ಹಿಡಿಸಿ ಲೆಗ್ಗೆಯ ಮಾಡಿ
ಉರುಳಲಿಟ್ಟರು ಲೆಗ್ಗೆಯನು ॥೧೩೨॥

ಹಲ್ಲೆಯ ನೋಡಿ ಇಟ್ಟರೆ ಚೆಂಡು ಭೋರೆಂದು
ನಿಲ್ಲದೆ ಬೊಬ್ಬಿರಿವುತಲಿ ।
ಬಲ್ಲಿದ ರಾಮನ ಮನ್ನೆಯರೆಲ್ಲರ
ಕೊಲ್ಲದೆ ಬಿಡೆನೆಂದು ಚೆಂಡು ॥೧೩೩॥

ಭಾವ ಸಂಗಮನಾಥನಿಟ್ಟ ಮುತ್ತಿನ ಚೆಂಡು
ಕೋವಿದ ಕೋಟಿಗರ ದ್ಯಾವ ।
ತೀವಿ ತಂದನು ರಾಮನ ಮನ್ನೆಯರೆಲ್ಲ
ತಾ ಒಡಗೂಡಿ ಬೊಬ್ಬಿರಿದು ॥೧೩೪॥

ಹಿಡಿವಂಥ ಚೆಂಡನು ತಂದು ರಾಮನ ಕೈಲಿ
ಕೊಡಲಿ ಕಾಟಣ್ಣನವರುಗಳು ।
ಕಡುಗಲಿ ಇಟ್ಟರೆ ನಿಲ್ಲರು ಮನ್ನೆಯರು
ಬಿಡದೆ ಓಡಿತು ದೆಸೆದೆಸೆಗೆ ॥೧೩೫॥

ರಾಮನಿಡಲು ಚೆಂಡು ಭೂಮಿಯಾಕಾಶಕ್ಕೆ
ತಾಮಸವಿಲ್ಲದೆ ನೆಗೆಯೆ ॥೧೩೬॥

ನೆಗೆವ ಚೆಂಡನು ಕಂಡು ಜಗಲೂರ ಕಾಮಯ್ಯ
ಬಿಗಿದು ಹಿಡಿದನು ಕೈಯೊಳಗೆ ॥೧೩೭॥

ಹಾರೋರ ಲಿಂಗನ ಹರಣವು ಹತ್ತಿತು
ದೊರೆ ದೇವನ ಕೆನ್ನೆ ಒಡೆದು ।
ಮರುಳೆಯ ಪಾಪನ ಹಲ್ಲು ಹೋಯಿತು ನಾನಾ
ಕರುಳು ಬಿದ್ದವರು ಬಿದ್ದಿಹರು ॥೧೩೮॥

ಕೋವಿದ ರಾಮಯ್ಯನಿಟ್ಟ ಮುತ್ತಿನ ಚೆಂಡ
ಭಾವ ಸಂಗಮನಾಥ ತಡೆದ ।
ಭಾವ ಸಂಗಮನಾಥನಿಟ್ಟ ಮುತ್ತನ ಚೆಂಡ
ಬಾದೂರಖಾನ ಬಂಧ್ಹಿಡಿದ ॥೧೩೯॥

ಕಂಡು ಬಾದೂರಖಾನ ಲಗ್ಗೆ ನೀಡಲು ಮುನ್ನ
ಮಂಡಲದುರಿತಾರಾಕ್ಷಣದಿ ॥೧೪೦॥

ಗುದ್ದುಗುದ್ದನು ಹೊಕ್ಕು ಕಾಟಣ್ಣನ ಮಂದಿಯು
ಬಿದ್ದರು ತಲೆಕೆಳಗಾಗಿ ।
ಎದ್ದೆದ್ದು ನೋಡಲು ಉಬ್ಬಿ ಮನ್ನೆಯರೆಲ್ಲ
ಸದ್ದು ಮಾಡುತ ಚೆಂಡು ಬರಲು ॥೧೪೧॥

ಆ ಸಮಯದಿ ದೇವಿಸೆಟ್ಟಿ ಲಿಂಗಣ್ಣನು
ಕೇಸರಿ ಕೆರಳಿದಂದದಲಿ ।
ಸಾಸಿರ ತುಡುಮು ಹೊಯ್ಸುತ ಲೆಗ್ಗೆ ಮಾಡುತ
ರೋಷದಿ ಚೆಂಡ ಬಂದ್ಹಿಡಿದ ॥೧೪೨॥

ಕಡುಗೋಪದಲಿ ಬಂದು ದೇವಿಸೆಟ್ಟಿಯ ಲಿಂಗ
ಪಿಡಿದನು ಮುತ್ತಿನ ಚೆಂಡ ।
ತಡೆಯದೆ ಲೆಗ್ಗೆಯ ನೋಡಿ ಇಟ್ಟರೆ ಮುನ್ನ
ಕೆಡಹಿತೈವರು ಮನ್ನೆಯರ ॥೧೪೩॥

ಮನ್ನೂಲ ಮಾಚನ ಮೂಗು ಬಿಚ್ಚಿತು ಆಗ
ಚೆನ್ನ ಕಂಪನ ಕಾಲೊಡೆದು ।
ಚೆನ್ನದ ಕಾಸೆಯ ವಿರೂಪಯ್ಯನಾತನ
ಕೆನ್ನೆ ಹಾರಿತು ಆಕ್ಷಣದಿ ॥೧೪೪॥

ಇತ್ತ ಮನ್ನೆಯರು ನೊಂದುದ ಕಂಡು ರಾಮಯ್ಯ
ಮತ್ತೆ ಕೋಪವನು ತಾಳಿದನು ।
ತೆತ್ತಿಸಿದವು ರೋಮ ಸರಳು ತೆತ್ತಿಸಿದಂತೆ
ಮತ್ತೆ ರಾಮನ ಮೈಗಳಲಿ ॥೧೪೫॥

ಭರದಿಂದ ಬಂದನು ಧುರಗಲಿ ರಾಮನು
ಬರುವ ಮುತ್ತಿನ ಚೆಂಡಿಗಾಗಿ ।
ಧುರಧೀರ ಮುತ್ತಿನ ಚೆಂಡ ಪಿಡಿದಿರುವದ ಕಂಡು
ಪರಿದು ಭೂತಗಳು ಹತವಾಗೆ ॥೧೪೬॥

ಇತ್ತ ರಾಮನು ಲೆಗ್ಗೆಯನಿಡುವ ಸಂಭ್ರಮವನು
ಬಿತ್ತರಿಸುವರಳವಲ್ಲ ।
ಮೃತ್ಯು ಬಂದಿತು ರಾಮಯ್ಯನ ಕೊರಳಿಗೆ
ಸತ್ಯಸಾ[ಧಕರು] ಲಾಲಿಪುದು ॥೧೪೭॥

ಹೊಡಿದ ಲೆಗ್ಗೆಯ ನೋಡಿ ಇಡಲು ಮುನ್ನ
ಓಡಿತು ನಾಲ್ಕು ದಿಕ್ಕಿನಲಿ ।

ಉರವಣಿಸುತ ಬಂದು ದಿಕ್ಕಿದಿಕ್ಕಿಲಿ ಹೊಕ್ಕು
ಕರ ಬೇಗ ಲೆಗ್ಗೆ ಮಾಡಿದರು ॥೧೪೮॥

ಬಲ್ಲಿದ ಕಾಟಣ್ಣನಿಟ್ಟ ಮುತ್ತಿನ ಚೆಂಡು
ಚೆಲ್ಲೆಗಂಗಳ ರಾಮ ಪಿಡಿದ ॥೧೪೯॥

ಹಿಡಿ ಬೇಗ ಲೆಗ್ಗೆಯ ಕೆಡಹುವೆ ಕಾಲಾಳ
ಹೊಡೆವೆ ಕಾಟಣ್ಣನ ಎದೆಯ ।
ಮೃಡನು ಬಲ್ಲಂತೆ ಭೋರ್ಮೊರೆವನು ರಾಮಯ್ಯ
ಬಿಡು ಕೈಯಿಂದಲಿ ತನ್ನ ॥೧೫೦॥

ಪ್ರೇಮದಿ ಕಾಟಣ್ಣ ಕೊಳ್ಳಿಯ ನಾಗಣ್ಣ
ಸೋಮಿದೇವನು ಚಿನುಮಾದ ।
ಕಾಮಗೇತಿಯ ಚಿತ್ತನೈವರು ಮಾನ್ಯರು ಹೊ
ಕ್ಕು ಮುರಿಯದೆ ಬಿಡೆವೆಂದರವರು ॥೧೫೧॥

ಚೆಂಡ ಬಿನ್ನಹವ ಮಾ[ಡಿತು] ರಾಮಯ್ಯ
ಮಂದಿಯ ನೋಯಿಸಬೇಡ ।
ಹಿಂದುಮುಂದಣ ಪೌಜು ಒದಗಿತು ನಾನೀಗ
ಚೆಂದಗೆಡಿಸುವೆ ಮನ್ನೆಯರ ॥೧೫೨॥

ನೆಗೆವೆನಾಕಾಶಕೆ ಬೆಗೆವೆನು ಭೂಮಿಯ
ತೆಗೆವೆ ಕಾಟಣ್ಣನಾಯಕನ ।
ಉಗಿದು ಬೀಳುವೆನು ಮನ್ನೆಯರ ಕೈಯಿಂದ
[ಖ]ಗರಾಜಪತಿ ಬಿಡೊ ನಿನ್ನ ॥೧೫೩॥

ಮುತ್ತಿನ ಚೆಂಡನಿಡಲು ರಾಮಯ್ಯನು
ಅತ್ತ ತಾನೊಯ್ಯುವ ಪರಿಯ ।
ಚಿತ್ತ ಒಲಿದ ಕೋವಿದರೆಲ್ಲ ಕೇಳಿರೊ
ಕೃತಕ[ದ ಚಂಡ] ಲೆಗ್ಗೆಯನು ॥೧೫೪॥

ಕೇಳಿರೊ ಚೆಂಡು ರತ್ನಿಗೆ ಸಿಕ್ಕುವಂದಾಗ
ಕೇಳಿರೊ ಒಯ್ವೋದ ಪರಿಯ ।

ಭೋರು ಭುಗಿಭುಗಿಲೆನುತಲಿ ಬಂದುದು
ಏರಿ ಬೆಟ್ಟದಲಿಂದಲಿಳಿದು ॥೧೫೫॥

ಸೇರಿದನಾಗಳೆ ರಾಮನ ಚೆಂಡಿಗೆ
ಸಾರ್ವ ಹೆಗ್ಗಾಳೆಯಂದದಲಿ ॥೧೫೬॥

ಮುಂದಾಣಿಯಲಿ ಸರ್ವ ಮೊಳಗುತಲಿರುತಿರೆ
ಬಂದನು ರಾಮ ಬೊಬ್ಬಿರಿದು ।
ಚೆಂದದಿಂದಲಿ ಲೆಗ್ಗೆಯ ನೋಡಿ ಇಟ್ಟರೆ
ಕೆಂಧೂಳು ಕವಿಯಿತಂಬರಕೆ ॥೧೫೭॥

ಸಿಡಿಲು ಪರ್ವತದ ಚೆನ್ನ ಕಳಸವ ಹೊಡೆವಂತೆ
ಹಿಡಿದು ಒಯ್ದನು ವಾಯುದೇವ ।
ತಡೆಯದೆ ರತ್ನಿಯ ಅಂಗಳದೊಳು ಹೋಗಿ
ಕೆಡಹಿದ ಮುತ್ತಿನ ಚೆಂಡ ॥೧೫೮॥

ದಿಟ್ಟ ರಾಮನ ಚೆಂಡ ಸೆಳಕೊಂಡು ರತ್ನಾಜಿ
ಪಟ್ಟಸಾಲೆಯ ಮುಂದೆ ಹಾಕಿ ।
ಉಟ್ಟ ಉಡಿಗೆಯ ಕಳೆಯಲರಿಯದೆ ರತ್ನಿ
ದಿಟ್ಟೆ ಚೆಂಡಿನ ಮೇಲೆ ಬಿದ್ದು ॥೧೫೯॥

ಘಳಿಲನೆ ಅರಮನೆ ಒಳಯಕೆ ತೆಕ್ಕೊಂಡು
ಹೊಳೆವ ಕಂಗಳಿಗೊತ್ತಿಕೊಂಡು ॥೧೬೦॥

ತರಿಸಿದಳುದಕ ಪನ್ನೀರು ಚಳೆಯವಗೊಟ್ಟು
ವರವ ಬೇಡಿದಳು ಚೆಂಡೆನಗೆ ।
ದುರಧೀರ ರಾಮನ ಸಮವೆಂದು ಚೆಂಡನು
ಉರದಲ್ಲಿ ತೆಗೆದಪ್ಪಿಕೊಂಡು ॥೧೬೧॥

ಭರವಾಸದಲ್ಲಿ ರತ್ನಾಜಿ ಚೆಂಡಿನ ಮೇಲೆ
ಕರ ತವಕದಿ ಬಿದ್ದು ಹೊರಳೆ ॥೧೬೨॥

ಮುದ್ದು ರಾಮನ ಸಮವೆನುತ ಮುತ್ತಿನ ಚಂಡ
ನಿರ್ಧಾರದಲಿ ತೆಗೆದಪ್ಪಿ ।
ಸಧ್ಯಾಫಲದಿ ರಾಮ ಸಿಕ್ಕಿದನೆನುತಲಿ
ಬಿದ್ದಳು ಚೆಂಡಿನ ಮೇಲೆ ॥೧೬೩॥

ಮುತ್ತಿನ ಚೆಂಡನು ಪಿಡಿಕೊಂಡು ರತ್ನಾಜಿ
ಮತ್ತೆ ರಾಮನ ಸಮವೆಂದು ।
ಒತ್ತಿದಳೋ ನಖರೇಖೆಯ ಚೆಂಡಿಗೆ
ಚಿತ್ತಿನಿಜಾತಿ ರತ್ನಾಜಿ ॥೧೬೪॥

ಕುಶಲ ರಾಮನ ಸಮವೆನುತ ಚೆಂಡಿನ ಮೇಲೆ
ದಶ ವಸ್ತ್ರಗಳನು ಹಾಕಿದಳು ।
ವಸುಧೆಯೊಳಗೆ ಎನ್ನ ಭಾಗ್ಯ ಬಂದಿತು ಎಂದು
ಕುಶಲೆ ರತ್ನಾಜಿ ಹೆಚ್ಚಿದಳು ॥೧೬೫॥

ಅಳಿಪಾದವು ಸೋಂಕಿದಂತೆ [ಕಮಲ]ಮುಖ
ಕಳೆಯು ಏರಿತು ಚೆಂಡು ಬರಲು ॥೧೬೬॥

ಎದಿಗೊತ್ತಿ ಬದಿಗೊತ್ತಿಕೊಂಡಳು ಆ ಚೆಂಡ
ಮುದದಿ ಮುದ್ದಿಸಿ ಮುಂಡಾಡಿದಳು ।
ಚದುರ ರಾಮನ ಸಮವೆನುತ ಮುತ್ತಿನ ಚೆಂಡ
ಮದನಗೃಹಕೆ ವೊಂದಿಸಿದಳು ॥೧೬೭॥

ಹರಸಿದ ಹರಕೆಯು ಕೈಗೂಡಿತೆನುತಲಿ
ಪುರುಷ ಬಂದೆನುತ ರತ್ನಾಜಿ ।
ತರಿಸಿ ಪುಣುಗು ಜವ್ವಾದಿ ಕಸ್ತೂರಿಯನು
ಸರಸಿಜಮುಖಿ ಲೇಪಿಸಿದಳು ॥೧೬೮॥

ಪಟ್ಟೆ ದೇವಾಂಗವನು ಸುತ್ತಿನ್ನು ಚೆಂಡಿಗೆ
ಇಟ್ಟಳು ಗಂಧ ಕಸ್ತುರಿಯ ।
ತರತರದಲಿ ಮುತ್ತಿನಾರತಿ ಸಹಿತಲಿ
ತೆರಳಿ ಒಸಗೆ ಪಾಡುತಲಿ ॥೧೬೯॥

ಬಂದು ರಾಮಯ್ಯನ ಚೆಂಡಿಗೆ ಇದಿರಾಗಿ
ನಿಂದು ಆರತಿಯನೆತ್ತಿದಳು ।
ಚೆಂದದಿಂದಲಿ ರತ್ನಾಯಿ ತಿರಿಗಿಬಂದು
ತಂದೆ ಇಟ್ಟಳು ಮಂಚದ ಮೇಲೆ ॥೧೭೦॥

ಇತ್ತ ಚಿನ್ನದ ಗದ್ದುಗೆ ಮಾಡಿ ಚೆಂಡಿಗೆ
ಅಂದದಿ ಪೂಜೆ ಮಾಡಿದಳು ।
ಸುತ್ತ ಮಂಚಕ್ಕೆ ಕಾವಲನಿಟ್ಟು ಮನವನು
ಇತ್ತ ಹರುಷದಲಿ ರತ್ನಾಜಿ ॥೧೭೧॥

ಮುತ್ತಿನ ಚೆಂಡಿಗೆ ರಾಮಯ್ಯ ಬಂದಂತೆ
ಕಿತ್ತು ಬಲುವೇಷ ಮಾಡಿದಳು ।
ಹರುಷದಿ ರತ್ನಾಜಿ ಇರದೆ ಏಕಾಂತದಿ
ತರುಣಿಗೈಶ್ವರ್ಯ ಬಂದಂತೆ ॥೧೭೨॥

ತರುಣಿ ಬೇಗದಲಾಗ ಸಂಗಿಯ ಕರೆದಳು
ಹೊರಗೆ ಕಾವಲ ಇರು ಎನುತ ।
ಗರುವೆ ಮುತ್ತಿನ ಕಾಲುಮಣಿಯ ಮಂಚದ ಮೇಲೆ
ಅರಸಿ ರತ್ನಾಜಿ ಚೆಂದದಲಿ ॥೧೭೩॥

ತಂದೆ ಇಲ್ಲದ ಅರಮನೆಗೆ ತಾ ಹೋದರೆ
ಕುಂದು ಬರುವದೆಂದು ರಾಮ ।
ಎಂದು ಬಾಹನೊ ಬಾರದಿರುವನೊ ರಾಮ ತಾ
ಸಂದೇಹಿಸುತಲಿ ರತ್ನಾಜಿ ॥೧೭೪॥

ಅನುಮಾನವಾಗಿ ತಾ ಮೂಗಿನೊಳ್ ಬೆರಳಿಟ್ಟು
ನೆನೆದಳು ಕುಟಿಲ ದೇವಿಯರ ।
ಕೊನರಿಸಿ ಮೂಗಿಗೆ ಬೆರಳಿಟ್ಟು ರತ್ನಾಜಿ
ನಿಂತು ಬಾಗಿಲನು ನೋಡಿದಳು ॥೧೭೫॥

ಅತ್ತ ರಾಮಯ್ಯನ ಚಿಂತಿಲಿ ರತ್ನಾಜಿ
ಯಾತಕೆ ಬಾರನೊ ರಾಮ ।

ಚಿಂತೆ ವೇಗ್ಗಳವಾಗಿ ಇರುವಳು ರತ್ನಿಯು
ಮತ್ತೆ ರಾಮುಗನ ನೆನೆನೆನೆದು ॥೧೭೬॥

ಇತ್ತಲಿ ಮನ್ನೆಯರು ಚೆಂಡು ಹೋಯಿತು ಎಂದು
ಮತ್ತೆ ಸ್ವೈವೆರಗಾಗಿ ನಿಂದು ।
ಮೃತ್ಯು ಬಂದಿತು ಎಂದು ಚಿಂತಿಸಿ ಕಾಟಣ್ಣ
ನಿಂತ ಬಳಿಗೆ ಸಂಧಿ ಮುಗಿಯೆ ॥೧೭೭॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ವಿದಿತ ಪಾಶದಿ ಚೆಂಡನಾಡಿದನೆಂದೆಂಬ
ಅಧಿಕ ಸಂಧಿಯು ಸಂಪೂರ್ಣ ॥೧೭೮॥

ಅಂತು ಸಂಧಿ ೧೬ಕ್ಕಂ ಪದನು ೧೬೮೫ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೭

❖

ಕೊಮಾರ ರಾಮಯ್ಯನನ್ನು ರತ್ನಾಜಿ ಮೋಹಿಸಿದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ಕಂಪಿಲರಾಯ ಕೇಳಿದರೆ ಏನೆಂಬನೊ
[ಹ]ಂಪಿ ಲಿಂಗಯ್ಯ ಕಂಗೆಡುತ ।
ಬೇಡವೆಂದರೆ ಕೇಳೆ ರಾಮ ಚೆಂಡಾಟವ
ಆಡಬಂದೆಯೊ ನಿಲ್ಲಗೊಡದೆ ॥೩॥

ಚೆಂಡನೇತಕೆ ಕೊಡಳು ತಾಯಿ ಚಿಕ್ಕಮ್ಮ
ಬಂಡಾಟದ ಮಾತು ಬೇಡ ।
ಕಂಡು ಚಿಕ್ಕಮ್ಮನ ಪಾದಕ್ಕೆ ಶರಣೆಂದು
ಕೊಂಡು ನೀ ಬಾರೊ ಕಾಟಣ್ಣ ॥೪॥

ಭೀತಿಯಿಲ್ಲದೆ ಹೋಗಿ ಚಿಕ್ಕಮ್ಮನಲ್ಲಿಗೆ
ಮಾತೆ ಅಮ್ಮನ ಪಾದಕೆರಗಿ ।
ಮಾತೆಯ ಕೈಯಲ್ಲಿ ಚೆಂಡನು ತಂದು ಬೇಗದಿ
ಭೀತಿಯೆಲ್ಲವ ಬಿಡಿಸುವೆನು ॥೫॥

ಒಂದು ಬಾರಿಗೆ ಹೋಗಿ ಬೇಡು ನೀ ಚೆಂಡನು
ಕೊಂಡು ಬಾ ಕಾಟಣ್ಣ ನೀನು ।
ಕಂದನು ನಿಮ್ಮ ಚೆನ್ನಿಗೆ ರಾಮನಿಟ್ಟರೆ
ಬಂದಿತು ಕೈತಪ್ಪಿಯೆಂದು ॥೬॥

ನಿಂದು ಅಂಗಳದಲ್ಲಿ ಚೆಂಡ ನೀ ಬೇಡಣ್ಣ
ಕಂದಿದ ಮುಖ ದುಗುಡದಲಿ ।
ಎಂದ ಮಾತನು ಕೇಳಿ ಮೆಲ್ಲನೆ ಕಾಟಣ್ಣ
ಬಂದನು ಚೆಂಡ ಬೇಡುವರೆ ॥೭॥

ಗಮ್ಮನೆ ಹೋಗಿ ಹೊಕ್ಕನು ಕಾಟಣ್ಣನು
ನೆಮ್ಮಿದ ಸಂಗಿಯ ಕಂಡು ।
ಚಿಮ್ಮಿದ ಹಾಗೆ ಚೆಂಡಿನಲ್ಲಿಗೆ ಬಂದಿತು
ಗಮ್ಮನೆ ಕೊಡು ಚೆಂಡ ಬೇಗ ॥೮॥

ನಿಮ್ಮಾಣೆ ನಮ್ಮ ಕಣ್ಣಿಗೆ ಸಂಧಿಸಲಿಲ್ಲ
ಅಮ್ಮಾಜಿ ನೋಡೆ ಕಾಟಣ್ಣನ ।
ತಮ್ಮ ಮುತ್ತಿನ ಚೆಂಡು ನಮ್ಮಲ್ಲಿ ಇದೆಯೆಂದು
ನಿಮ್ಮ ಕುಮಾರ ಬಂದಿಹನೆ ॥೯॥

ಚೆಂಡು ಇಲ್ಲಿದೆಯೆಂದು ಬಂದವನಾರೆಲೊ
ಗಂಡಸಿಲ್ಲದ ಅರಮನೆಗೆ ।
ಗಂಡಾಳು ನಿಮ್ಮ ಹಿರಿಯಮಗನು ಕಾಟ
ಚೆಂಡ ಬೇಡರೆ ಬಂದೆ ನಾನು ॥೧೦॥

ಯಾಕೆ ಬಂದೆಲೊ ಕಾಟ ಅರಸಿಲ್ಲದರಮನೆಗೆ
ಜೋಕೆಯೆ ನಿನಗಿದು ಗುಣವೆ ।

ನೂಕೆಂದು ನೂಕಿಸೆ ಮುಖ ಖಿನ್ನನಾಗಲು
ಆಕೆ ಮಗನ ದಬ್ಬಿಸಿದಳು ॥೧೧॥

ಆಡಬಂದರೆ ನಮ್ಮ ಸತಿಯರು ನಿಮ್ಮೊಳು
ನೋಡಿರೆ ಇವನೊಡಲುರಿಯ ।
ಕಾಡಬೇಡವೊ ಹೋಗು ಚೆಂಡಿಲ್ಲಿಗೆ ಬಂದಿಲ್ಲ
ನೋಡಿಕೊ ಹೋಗೊ ಇದ್ದಲ್ಲಿ ॥೧೨॥

ಪದ್ಮವದನೆ ಕೇಳು ಬಂತು ಮುತ್ತಿನ ಚೆಂಡು
ಮುಂದೆ ನೀ ತರಿಸಿ ಕೊಡಮ್ಮ ।
ಕೊಂಡುಹೋದೆನು ಚೆಂಡ ನೀ ಬೇಗ ಕೊಡಿಸು ಭೂ
ಮಂಡಲದೊಡತಿ ಚಿಕ್ಕಮ್ಮ ॥೧೩॥

ಚೆಲ್ಲೆಗಂಗಳ ರಾಮನಿಟ್ಟ ಮುತ್ತಿನ ಚೆಂಡು
ಚೆಂಡು ಬಂದಿತು ಕೈತಪ್ಪಿತೆಂದ ।
ಮುದ್ದಿನ ಮಗ ನಿಮ್ಮ ರಾಮನಿಟ್ಟ ಚೆಂಡು
ಎದ್ದು ನಿಮ್ಮಂಗಳಕೆ ಬಂತು ॥೧೪॥

ಶೃಂಗಾರದೋಟದೊಳಗೆ ನೋಡುವೆನೆಂದು
ಅಂಗನೆ ತೆರಳ್ದು ಅರ್ತಿಯಲಿ ।
ರತ್ನಾಜಿ ಕಾಟಣ್ಣ ಸಂಗಿಯನೊಡಗೊಂಡು
ತೋಟಕೆ ಬಂದರು ಬೇಗ ॥೧೫॥

ಪಾಟಿಸಿ ಬೆಳೆದ ಪುಷ್ಪದ ಗಿಡದೊಳಗೆಲ್ಲ
ನೋಟದಿ ನೋಡಿದರಾಗ ॥೧೬॥

ಬಲ್ಲಿದ ರಾಮಯ್ಯನಿಟ್ಟ ಮುತ್ತಿನ ಚೆಂಡು
ಮಲ್ಲಿಗೆ ಗಿಡಗಳಡಿಯಲ್ಲಿ ।
ಅಲ್ಲಲ್ಲಿ ಅರಸಿ ಕಾಣದೆ ಆಗ ರತ್ನಾಜಿ
ಎಲ್ಲಿ ಹೋಯಿತೋ ಚೆಂಡು ಮಗನೆ ॥೧೭॥

ಒಚ್ಚೆರೆಗಂಗಳ ರಾಮನಿಟ್ಟ ಚೆಂಡು
ಪಚ್ಚೆದ ಗಿಡಗಳಡಿಯಲ್ಲಿ ।

ಕಂಪಿಲರಾಯನ ಮಗನಿಟ್ಟ ಮುತ್ತಿನ ಚೆಂಡು
ಸಂಪಿಗೆ ಗಿಡಗಳಡಿಯಲ್ಲಿ ॥೧೮॥

ಕೋವಿದ ರಾಮಯ್ಯನಿಟ್ಟ ಮುತ್ತಿನ ಚೆಂಡು
ಭಾವಿಯ ತಡಿಯಲ್ಲಿ ನೋಡಿ ।
ಆವ ಕಡೆಗೆ ಹೋಯಿತು ಚೆಂಡು ಕಾಟಣ್ಣ
ಆವ ಬಳಿಯಲಿ ಮಾಜಿದರೊ ॥೧೯॥

ಗಂಭೀರ ರಾಮಯ್ಯನಿಟ್ಟ ಮುತ್ತಿನ ಚೆಂಡು
ನಿಂಬೆಯ ಗಿಡದ ಅಡಿಯಲ್ಲಿ ॥೨೦॥

ತಿರಿಗಿ ಬಂದಳು ಅರಮನೆಗಾಗಿ ರತ್ನಾಜಿ
ದೊರೆಯು ಕಾಟಣ್ಣನೆಡೆಗೆ ।
ಧುರಗಲಿ ರಾಮಯ್ಯನಿಟ್ಟ ಚಂಡರಸಿಯೆ
ತಿರಿಗಿ ರತ್ನಾಜಿ ಬೇಗದಲಿ ॥೨೧॥

ಬಂದ ಕಾಟಣ್ಣಗೆ ಗಂಧ ವೀಳ್ಯವನಿತ್ತು
ಕುಂದದೆ ನುಡಿದವನೊಡನೆ ।
ಕಂದ ರಾಮನ ನೋಡಬೇಕೆಂದು ರತ್ನಮ್ಮ
ಮುಂದವರಿದು ಹೇಳಿದಳು ॥೨೨॥

ಇಮ್ಮಡಿ ರಾಮನ ಸಮನಲ್ಲವೆಲೆ ತಾಯೆ
ನಿಮ್ಮಯ ಹಿರಿಯ ಕುಮಾರ ।
ತಮ್ಮ ರಾಮುಗ ಬರಲರಿಯ ಮುತ್ತಿನ ಚೆಂಡ
ಗಮ್ಮನೆ ಕೊಡಿಸು ಚಿಕ್ಕಮ್ಮ ॥೨೩॥

ಕಂದನ ನೋಡುವೆ ಬೇಗ ನೀ ಬರಹೇಳೊ
ಎಂದು ಹೇಳಿದಳು ಕಾಟನಿಗೆ ।
ಚೆಂಡಿನ ನೆವದಲಾದರು ಮಗನನು ಕಂಡು
ತಂದುಕೊಡುವೆ ಸಂತೋಷದಲಿ ॥೨೪॥

ಕೊಂಡೊಯ್ಯಲಿ ತನ್ನ ಮನಬಂದ ವಸ್ತುವ
ಗಂಡುರಾಮನ ಬರಹೇಳೊ ।

ತಮ್ಮ ರಾಮನು ಬರಲರಿಯ ಬುದ್ಧಿ ಸಾಲದು
ಗಮ್ಮನೆ ಚೆಂಡು ತಾರಮ್ಮ ॥೨೫॥

ಮಗ ಬಂದರಲ್ಲದೆ ಕೊಡೆಹೋಗು ಚೆಂಡನು
ನಗೆಮೊಗದವನೆ ಕಾಟಣ್ಣ ।
ಜಗದೊಳು ತಾಯಿ ಮಕ್ಕಳಿಗೆ ನಾಚಿಕೆಯುಂಟೆ
ಹಗೆಯೆ ರಾಮಗೆ ಎನ್ನ ಮನೆಯು ॥೨೬॥

ತಲೆಯು ಇದ್ದಂತೆ ಮುಂಡಕೆ ಶಾಸೆಯಿಡುವರೆ
ಲಲನೆ ಕೇಳಮ್ಮ ಚಿಕ್ಕಮ್ಮ ॥೨೭॥

ಎನ್ನಯ ಮೋಹದ ಮಗ ಬಂದರಲ್ಲದೆ
ನಿನ್ನಾಣೆ ಕೊಡೆನೊ ಕಾಟಣ್ಣ ।
ರನ್ನದ ತೂಗುಮಂಚದಿ ಪೂಜೆ ಮಾಡ್ಯೆತೆ
ತನ್ನನೊಯ್ಯಲಿ ಬರಹೇಳೊ ॥೨೮॥

ಸರಸವ್ಯಾತಕೆ ಮಕ್ಕಳ ಕೂಡೆ ಚಿಕ್ಕಮ್ಮ
ತರಿಸಿ ಕೊಟ್ಟೆನ್ನ ನೀ ಕಳುಹು ।
ಹಿರಿಯರಿಗಿದು ಗುಣವೆ ಎಂದು ಕೇಳಲು
ತರಳೆ ನುಡಿದಳೊಂದು ಮಾತ ॥೨೯॥

ಅಕ್ಕನ ಮಗನು ಕುಮಾರ ರಾಮಯ್ಯನ
ಚಿಕ್ಕಂದು ಮೊದಲು ನಾನರಿಯೆ ।
ಚಿಕ್ಕ ಕುಮಾರ ರಾಮಯ್ಯನು ಬಂದರೆ
ಮುತ್ತಿನ ಚೆಂಡ ಕೊಡುವೆನು ॥೩೦॥

ಆರ ಚೆಂಡನು ನಾನಾರಿಗೆ ಕೊಡಲಪ್ಪ
[ಸೇರದು] ದಾಯಾದ್ಯ ಜಲ್ಮ ।
ತೋರ ಮುತ್ತಿನ ಚೆಂಡ ನಿನಗಿತ್ತೆನಾದರೆ
ಹೋರಾಟ ಬಹುದು ಇಬ್ಬರಿಗೆ ॥೩೧॥

ರಾಮುಗಗೇನು ನಾಯಕತನ ಬಂದುದೊ
ಪ್ರೇಮದಿ ಚೆಂಡ ಬೇಡುವರೆ ।

ತಾಮಸಗಣ್ಣ ಯೌವನದ ಮದವೊ ಎಂದು
ಕೋಮಲೆ ರತ್ನಿ ಆಡಿದಳು ॥೩೨॥

ಆ [ಧೀರ] ನೇಮಿಯೊಡನೆ ರಾವನಾಥನು
ಕಾದಿ ಗೆಲಿದೆನೆಂಬ ಗರ್ವ ।
ಮೇದುನಿಯೊಳು ತಾಯಿಮನೆಗೆ ಮಕ್ಕಳು ಬಂದು
ಭೇದವಿಲ್ಲದೆ ಬೇಡುವರೆ ॥೩೩॥

ಚಿಕ್ಕಂದು ಮೊದಲು ಎನ್ನೊಳು ನೀವು ಕೂಡುಂಡು
ಸೊಕ್ಕಲಿ ಬಹುದೆ ನೀವೀಗ ।
ಚಿಕ್ಕಮ್ಮನಲ್ಲವೆ ನಿಮಗೆ ನಾ ಕಾಟಣ್ಣ
ಮಕ್ಕಳಲ್ಲವೆ ನೀವು ಎನಗೆ ॥೩೪॥

ಠಕ್ಕುತನದ ನೋವನಿಕ್ಕಿ ರತ್ನಮ್ಮನು
ಒಕ್ಕಳು ಹುಸಿಯ ಕಂಬನಿಯ ।
ಚಿಕ್ಕಮ್ಮ ನಿನಗಿ ದುಃಖವೇತಕೆಯೆಂದು
ಗಕ್ಕನೆ ಪಾದಕೆರಗಿದನು ॥೩೫॥

ಎಲೆ ತಾಯೆ ನಿನ್ನ ಕಂಬನಿ ಬೀಳುವಾಗಲಿ
ತಲೆ ಬೀಳಬೇಕು ರಾಮುಗನ ॥೩೬॥

ಚೆಂಡು ಬೇಕಾದರೆ ರಾಮನ ಬರಹೇಳೊ
ಚೆಂಡ ಕೊಡುವೆನೆಂದಳವಳು ।
ಎಂದ ಮಾತನು ಕೇಳಿ ಮೆಲ್ಲನೆ ಕಾಟಣ್ಣ
ಬಂದು ರಾಮಗೆ ಹೇಳಿದನು ॥೩೭॥

ಹಳೆಯ ಬಲ್ಲುಗನ ಕರೆಯಲು ಬಂದು ಬಿನ್ನೈಸಲು
ಧುರಗಲಿ ರಾಮನಿಂತೆಂದ ।
ಮರುಳ ರತ್ನಿಯ ಮನೆಗೆ ನೀ ಹೋಗು ಬಲ್ಲುಗ
ಧುರಧೀರ ಚೆಂಡು ಬೇಡುವರೆ ॥೩೮॥

ಒಡೆಯ ರಾಮಯ್ಯ ಕಳುಹಲು ಆಗ ಬಲ್ಲುಗ
ನಡೆದನು ಚಂಡ ಬೇಡುವರೆ ॥೩೯॥

ಭರದಿಂದ ಬಂದು ಬಿನ್ನೈಸಿದ ಬಲ್ಲುಗ
ಗರುವೆ ರತ್ನಾಜಿಗಿಂತೆಂದ ।
ಪರನಾರಿಸೋದರ ರಾಮನ ಚೆಂಡನು
ಸರಸಿಜಮುಖಿಯೆ ತಾರಮ್ಮ ॥೪೦॥

ರಾಮನ ಬಿರಿದ ಕೊಂಡಾಡಿದೆ ಬಲ್ಲುಗ
ಕಾಮುಕನಹುದೊ ಊಳಿಗವು ।
ಸೀಮೆಯೊಳಗೆ ಅರನೊಲಿಸಿದೊ ಬಲ್ಲುಗ
ಕಾಮುಕವಿಟ್ಟವ ನುಡಿಯೆ ॥೪೧॥

ತಾಯಿಮನೆಗೆ ಬಂದು ಮಗ ಚೆಂಡ ಬೇಡಲು
ನ್ಯಾಯವೇತಕೆ ಬರಹೇಳೊ ।
ಆಯತಾಕ್ಷಿಯ ಮಾತನು ಕೇಳಿ ಬಲ್ಲುಗ
ರಾಯನಲ್ಲಿಗೆ ಬಿಜಗೈದ ॥೪೨॥

ಭಾವದಿಂದಲಿ ಹೋಗಿ ಚೆಂಡನು ಬೇಡಿದೆ
ಕೋವಿದ ಚೆನ್ನಿಗ ರಾಮ ।
ನೀವು ಬಂದಲ್ಲದೆ ಕೊಡಳಂತೆ ಚೆಂಡನು
ಆವ ಹದನೊ ನಾನರಿಯೆ ॥೪೩॥

ರಾಮಯ್ಯ ಎಂದನು ವಿಧಿ ಬೆನ್ನ ಬಿಡುವುದೆ
ಮುನ್ನಿನ ಸುಕೃತದ ಫಲವ ।
ಸಂಗಡವಿಲ್ಲದೆ ಅರಮನೆಗೆ ಹೋಗುವರೆ
ಶೃಂಗಾರವನು ತೆಗಿ ತಮ್ಮ ॥೪೪॥

ಎಂದ ಕಾಟಣ್ಣನ ನುಡಿಗೇಳಿ ರಾಮಯ್ಯ
ನಿಂದು ಹಾರವ ತೆಗೆದುಕೊಟ್ಟ ।
ಹೆಸರುಳ್ಳ ರಾಯರಗಂಡೆನು ಎಂಬ ಬಿರುದಿನ
ಕುಸುರಿ ಪೆಂಡೆಯವನು ತೆಗೆದ ॥೪೫॥

ಭೂಮಿಯೊಳುಳ್ಳ ರಾಯರಗಂಡ
ರಾಮಯ್ಯ ತೆಗೆದನು ಕೊರಳ ಪದಕವ ॥೪೬॥

ಅಷ್ಟದಿಕ್ಕಿನ ರಾಯರಗಂಡನೆಂಬಂಥ
ಇಟ್ಟ ಬಾಪುರಿಯನು ತೆಗೆದ ।
ಸುತ್ತಣ ರಾಯರಗಂಡನೆಂಬುವದೊಂದು
ಸುತ್ತಿದ ಚಿಮ್ಮುರಿಯನಳಿದ ॥೪೭॥

ಕನ್ನೋಜಿ ರಾಯರಗಂಡನೆಂಬುವದೊಂದು
ಹೊನ್ನುಂಗುರವ ತೆಗೆದುಕೊಟ್ಟ ।
ಮನ್ನೆಯ ಮಗಧ ರಾಯರಗಂಡನೆಂಬಂಥ
ರನ್ನದ ಪದಕವ ತೆಗೆದ ॥೪೮॥

ದಂಡೆತ್ತಿ ಬರುವ ರಾಯರಗಂಡನೆಂಬುವ ಕಾಲ
ಪೆಂಡೆವ ತೆಗೆದುಕೊಟ್ಟ ।
ಗಂಡುಗಲಿಯು ರಾಮ ಬಲು ಕಂಠಮಾಲೆಯ
ದಂಡೆ ಹಾರವ ತೆಗೆದುಕೊಟ್ಟ ॥೪೯॥

ರನ್ನದ ಕಡಗ ಚಿನ್ನದ ಸರಗಳ ರಾಮ
ಉನ್ನತ ನಡುವಿನುಡುದಾರ ।
ಭಿನ್ನವಿಲ್ಲದೆ ರಾಮಯ್ಯ ತೆಗೆದುಕೊಟ್ಟ
ಅಣ್ಣ ಕಾಟಣ್ಣನ ಕೈಗೆ ॥೫೦॥

ಪಡುವಣ ರಾಯರಗಂಡನೆಂಬವದೊಂದು
ತೊಡರು ಪೆಂಡೆಯವನು ತೆಗೆದ ।
ಗಡಿಯಂಕ ಮನ್ನೆಯರ ಗಂಡನೆಂಬುವದೊಂದು
ಕಡುಕು ಚೌಕುಳಿಯನು ತೆಗೆದ ॥೫೧॥

ಬಂಗಾಳ ರಾಯರ ಗಂಡನೆಂಬುವುದೊಂದು ಬೆರ
ಳುಂಗುರವನು ತೆಗೆದುಕೊಟ್ಟ ।
ಪಿಂಗಾಳ ರಾಯರ ಗಂಡನೆಂಬುವದೊಂದು
ಅಂಗದಾಭರಣವ ಕೊಟ್ಟ ॥೫೨॥

ಕಡೆಯವು ಕಾಲೊಳುಲಿವ ಸರಪಳಿಗಳನು
ಲೋಲ ರಾಮನು ಮಡಗಕೊಟ್ಟ ।

ಚಿತ್ತಜ ಸಮರೂಪ ರಾಮಯ್ಯ ಮಂಡೆಯ
ನೊತ್ತಿ ಬಿಗಿದ ಎಣ್ಣೆಗಂಟ ॥೫೩॥

ಹೊನ್ನ ನಾಮವನು ತೆಗೆವುತ ರಾಮಯ್ಯ
ರನ್ನದ ಕಡಗವ ಕಳೆದ ।
ಭಿನ್ನವಲ್ಲದೆ ಕಾಟಣ್ಣಗೆ ಶರಣೆಂದು
ಚೆನ್ನ ರಾಮುಗನೆಡೆಗೊಂಡ ॥೫೪॥

ಸಾಗರಗಂಭೀರ ಸಲಹೊ ಜಟ್ಟಂಗಿಯ
ನಾಗಭೂಷಣ ನಂದಿಕೇಶ ॥೫೫॥

ಪರನಾರಿಯ ಸಹೋದರರನೆಂಬ ಕಡೆಯವ
ಧರಿಸಿದ ಎಡದ ಕಾಲೊಳಗೆ ।
ದೊರೆ ರಾಮಯ್ಯ ಬರುವ ಸಂಭ್ರಮವನು ಕಂಡು
ಧರ್ಮದೇವತೆ ಬಿನ್ನಬಿಡಳು ॥೫೬॥

ಬಲ್ಲಿದ ರಾಮಯ್ಯ ಬರುವಾಗ ಬಾಗಿಲ
ಗೊಲ್ಲರು ಎದ್ದು ಕೈ ಮುಗಿಯೆ ।
ನಿಲ್ಲಿ ಕುಳ್ಳಿರಿ ಎಂಬ ಸನ್ಮಾನದಲಿ ರಾಮ
ಅಲ್ಲಿ ಹೊಕ್ಕನು ಅರಮನೆಯ ॥೫೭॥

ಬಾಗಿಲೊಳಗೆ ಅಲ್ಲಿರ್ದಂತೆಕ್ಕಟಿಗರು
ಬಾಗಿ ತಾವ್ ಕರಗಳ ಮುಗಿಯೆ ।
ನಿಲ್ಲಿರಿ ಕುಳ್ಳಿರಿ ಎನುತಲಿ ರಾಮಯ್ಯ
ಮೆಲ್ಲನೆ ಒಳೆಯಾಕೆ ಪೊಕ್ಕ ॥೫೮॥

ಚೆನ್ನಿಗ ರಾಮಯ್ಯ ಒಳಬಾಗಿಲ ಪೊಕ್ಕು
ಒನ್ನದುಪ್ಪರಿಗೆಗೆ ಬರಲು ।
ಕನ್ನೆವೆಣ್ಣಿಗೆ ಸನ್ನೆ ಮಾಡುತ ರತ್ನಿಯು
ರನ್ನದ ಹುಡೆಯ ಸೇರಿದಳು ॥೫೯॥

ಚೆನ್ನದ ಪಂಜರದೊಳಗಿರ್ದ ಅರಗಿಳಿ
ತನ್ನ ಜಾಳಿಂದ್ರದಿ ನೋಡಿ ।

ಇನ್ನಿವನಾವ ದೇಶದ ರಾಯನೆನುತಲಿ
ಚೆನ್ನ ರಾಮನ ಕೇಳಿತಾಗ ॥೬೦॥

ಬಂದ ರಾಮನ ನೋಡಿ ನುಡಿಯಿತು ಅರಗಿಳಿ
ಚಂದ್ರಲೋಕದ ಚೆನ್ನಿಗನೊ ।
ಇಂದು ಕಂಪಿಲರಾಯನಿಲ್ಲದ ಅರಮನೆಗೆ
ಬಂದವನಾರೆಲೊ ಪಾಪಿ ॥೬೧॥

ಅರಸಿಲ್ಲದರಮನೆಯನು ಹೊಕ್ಕವರಾರು
ಸರಸವೆ ಕಂಪಿಲನೊಡನೆ ।
ಅರಸಿ ನಮ್ಮಕ್ಕಗ ಕಂಡು ಹೇಳುವೆ ನಾನು
ಬೆರಸಿ ಕಟ್ಟುವೆ ಹೆಡತಲೆಯ ॥೬೨॥

ಎಂದ ಅರಗಿಳಿಯ ಮಾತನು ಕೇಳಿ ರಾಮಯ್ಯ
ನಿಂದಾಗ ಮಾತನಾಡಿದನು ॥೬೩॥

ಏನೆಲೊ ಗಿಳಿರಾಮ ಎನ್ನ ನೀ ಮರೆದೆಯಾ
ನಾನು ರಾಮನು ಎಂಬುದರಿಯಾ ।
ಕಾನನದೊಳು ಕಣ್ಣುದಪ್ಪಿದಂತಾಗಿದೆ
ನೀನು ವಿಸ್ತರವಾಗಿ ಹೇಳೊ ॥೬೪॥

ಹುಳಿಯೇರ ಮಾರಗೊಂಡನ ಮೇಲೆ ದಾಳಿಯ
ಗಳಿಲನೆ ನಾ ಹೋಗಿ ಅಂದು ।
ತಳುಹದೆ ನಿನ್ನ ಕಪ್ಪವ ಕೊಂಡುಬಂದವ
ಚೆಲುವ ರಾಮಯ್ಯನೆಂದರಿಯಾ ॥೬೫॥

ನಾನು ಕಂಪಿಲರಾಯನ ಕುಮಾರನು
ನಾನು ಮಾನ್ಯರ ಕೂಡಿಕೊಂಡು ।
ಆನಂದ ಅರ್ತಿಲಿ ಚೆಂಡನಾಡಿದೆ ಕೇಳು
ನಾನೀಗ ಚೆನ್ನಿಗ ರಾಮು ॥೬೬॥

ಏನು ಕಾರಣ ಚೆನ್ನಿಗ ರಾಮಯ್ಯ
ನೀನು ಇಲ್ಲಿಗೆ ಬರಬಹುದೆ ।

ಮಾನವಮದದಾನೆ ಮನ್ಮಥರೂಪನೆ
ಏನು ಹದನು ಹೇಳೆನಗೆ ॥೬೭॥

ಒತ್ತಿ ಬಲಿದು ನಾನು ಲೆಗ್ಗೆಯಿಡಲು ಮುನ್ನ
ಮತ್ತೆ ಉಪ್ಪರಿಗೆಯ ದಾಂಟಿ ।
ಇತ್ತ ಚಿಕ್ಕಮ್ಮನರಮನೆಯೊಳು ಬೀಳಲು
ಹೆತ್ತ ತಾಯನು ಕೇಳಬಂದೆ ॥೬೮॥

ನಿನ್ನ ಚೆಂಡಿನ ಮನೆ ಮಂಟೆಯಾಯಿತು ರಾಮ
ನಿನ್ನ ಜೀವಕೆ ಮೂಲಬಂತು ।
ಉನ್ನತದಿಂದಲಿ ಹಿಂದಕೆ ತಿರುಗೆಂದು
ಚೆನ್ನ ರಾಮಗೆ ಹೇಳಿತಾಗ ॥೬೯॥

ಅಯ್ಯಯ್ಯೋ [ಗಿಳಿರಾಮ] ನೊಂದೆಯಾತಕೆ ಕೇಳು
ಅಯ್ಯನ ರಾಣಿ ಚಿಕ್ಕಮ್ಮ ।
ಕೈಯಲ್ಲಿ ಚೆಂಡದೆ ಕೈಮುಗಿವೆನು ನಾನು
ಒಯ್ಯನೆ ಬಿನ್ನೈಸುವೆನು ॥೭೦॥

ಚೆಂಡು ಬೇಕಾದರೆ ಸಾವಿರ ಬಂದಾವು
ಗಂಡು ನಿನ್ನನು ಪೋಲ್ವರಿಲ್ಲ ।
ಬಂಡು ಆಗದೆ ನೀನು ತಿರುಗು ಹಿಂದಕೆ ಎಂದು ಪ್ರ
ಚಂಡ ರಾಮಗೆ ಹೇಳಿತಾಗ ॥೭೧॥

ರತ್ನಾಜಿಯು ನಿನ್ನ ಮೇಲೆ ವಿರಹಂಗಳ
ಯತ್ನವ ಮಾಡಿಕೊಂಡಿಹಳೆ ।
ಜತ್ನವಾಗಿದ್ದಂತೆ ಹೋಗು ನೀ ರಾಮಯ್ಯ
ಯತ್ನಕ್ಕೆ ಒಳಗಾಗಬೇಡ ॥೭೨॥

ಬಿಡು ನಿನ್ನ ಚೆಂಡನು ಪಾಪಿ ನಾ ಸಾರಿದೆ
ಕೆಡಬೇಡ ತಿರುಗೊ ರಾಮಯ್ಯ ॥೭೩॥

ಮೊನೆಗಾರನೆಂಬ ಸತ್ವದಿ ನೀನಾ ರತ್ನಿಯ
ಮನೆಯನು ಹೋಗಬೇಡ ರಾಮ ।

ನಿನಗೀಗ ಪ್ರಾಣದ ನೆಲೆಗೆ ಬರುವುದಿನ್ನು
ಚಿನುಮಯನಾಣೆ ಸಾರಿದೆನೊ ॥೭೪॥

ಎಂದು ನಾ ನಿನ್ನ ಮುಖವನು ನೋಡಲಿಲ್ಲವೊ
ಇಂದು ಕಂಡೆನು ನಿನ್ನ ಮುಖವ ।
ಕಂದರ್ಪರೂಪ ಅಪಕೀರ್ತಿಯು ಬರುತದೆ
ಹಿಂದಕ್ಕೆ ತಿರುಗೆಂದು ಗಿಳಿಯು ॥೭೫॥

ಎಂದ ಗಿಳಿಯ ಮಾತನು ಕೇಳಿ ರಾಮಯ್ಯ
ನೊಂದುಕೊಂಡನು ಮನದೊಳಗೆ ।
ಇಂದುಧರನೆ ಜಟ್ಟಂಗಿ ರಾಮೇಶನೆ
ಇಂದು ಕಂಟಕವ ಪರಿಹರಿಸೊ ॥೭೬॥

ಎನ್ನ ಪಣೆಯಲಿ ಬರೆದ ಬ್ರಹ್ಮ ಕಲ್ಪನೆಯನ್ನು
ಇನ್ನು ಮೀರುವರಳವಲ್ಲ ।
ಚೆನ್ನಿಗ ರಾಮಯ್ಯ ಗಿಳಿಯ ಮಾತನು ಕೇಳಿ
ಪನ್ನಗಧರ ಗತಿಯೆನುತ ॥೭೭॥

ಬಂದುದು ಬರಲಿ ಕಂಡುದ ಕಾಂಬೆನೆನುತಲಿ
ಮುಂದಕೆ ತಾನಡಿಯಿಟ್ಟ ।
ನಂದಿವಾಹನ ಗತಿಯೆನುತಲಿ ಅಲ್ಲಿಂದ
ಬಂದ ಸಂಗಾಯಿ ಇದ್ದೆಡೆಗೆ ॥೭೮॥

ಚಿಂತೆಮಾಡುತ ರಾಮ ಎಂತಹುದೆನುತಲಿ
ಅಂತರಿಸುತ ಬರುತಿರಲು ।
ಕಾಂತೆ ರತ್ನಮ್ಮ ಹಡಪದ ಸಂಗಿಯು
ನಿಂತಿರುವದ ಕಂಡ ರಾಮ ॥೭೯॥

ಕಂಡಳಾಗಳೆ ರಾಮಯ್ಯನ ಬರವನು
ದಂಡ[ಪ್ರಣಾಮ] ತಾನು ಮಾಡಿ ।
ಗಂಡುಗಲಿಯು ರಾಮ ಬಂದೆಯಾತಕೆ ಎಂದು
ದಿಂಡೆಯು ಸಂಗಿ ಕೇಳಿದಳು ॥೮೦॥

ಬಂದ ಕಾರಣವೇನೊ ಧರೆಯ ರಾಯರಗಂಡ
ಎಂದು ಕೇಳಿದಳು ಸಂಗಾಯಿ ।
ಚೆಂದದಿ ಮನ್ನೆಯರು ಸಹಿತ ಚೆಂಡಾಡಿದೆ
ಬಂದಿತು ನಿಮ್ಮರಮನೆಗೆ ॥೮೧॥

ಕಳುಹಿದೆ ಚೆಂಡು ಬೇಡುವರೆ ಕಾಟಣ್ಣನ
ಕಳುಹಿದೆ ಹಳೆಯ ಬಲ್ಲುಗನ ।
ಕಳುಹಿದವರ ಕೂಡೆ ಚೆಂಡು ಕೊಡದೆ ನೀವು
ಬಳಲಿಸುವದು ಗುಣವಹುದೆ ॥೮೨॥

ಅರಮನೆಯೊಳು ಚೆಂಡು ಮುಟ್ಟಲಮ್ಮೆವು ನಾವು
ಸರಸವೆ ನಿಮ್ಮೊಳು ನಮಗೆ ।
ಗರುವೆ ರತ್ನಮ್ಮನ ಬಳಿಯಲಿ ಚೆಂಡಿದೆ
ದೊರೆಗಳ ದೇವ ನೀ ಬೇಡು ॥೮೩॥

ಎಂದ ಸಂಗಿಯ ಮಾತನು ಕೇಳಿ ರಾಮಯ್ಯ
ನೊಂದುಕೊಂಡನು ಮನದೊಳಗೆ ।
ಚಂದ್ರಶೇಖರ ಜಟ್ಟಂಗಿ ರಾಮೇಶನೆ
ಬಂದ ಕಂಟಕವ ಪರಿಹರಿಸೊ ॥೮೪॥

ಬಂದಿದೆ ಕಂಟಕ ಮುಂದಕ್ಕೆ ನಡೆದರೆ
ಇಂದುಧರನೆ ಗತಿಯೆನುತ ।
ಮುಂದೇನು ಬಾಹುದೊ ಕಾಬೆನೆನುತು ರಾಮ
ಬಂದನು ಚೆಂಡ ಬೇಡುವರೆ ॥೮೫॥

ಭರದಿಂದ ಬಂದು ರತ್ನಾಜಿಗೆ ರಾಮಯ್ಯ
ಕರವ ಮುಗಿದು ನಮಿಸಿದನು ।
ಹರಿಯಲದೇವಿಯವೋಪಾದಿ ಚಿಕ್ಕಮ್ಮ
ಹರುಷದಿ ಚೆಂಡ ಕೊಡಮ್ಮ ॥೮೬॥

ಬಂದು ನಿಂದುದನು ಕಂಡಳು ರತ್ನಾಜಿಯು
ಚಂದ್ರನ ಪೋಲ್ವ ರಾಮುಗನ ।

ಕಂಡ ನೀ ಬಾರೊ ಚೆಂಡಾಡಿ ದಣಿದೆಯೊ ಎಂದು
ಮಂದಿರಕವನ ಕರೆದಳು ॥೮೭॥

ಮಾಣಿಕದಂತೆ ಹೊಳೆವ ಗದ್ದುಗೆ ಹಾಸಿ
ಪ್ರಾಣ ಬಂದಂತೆ ಹಿಗ್ಗಿದಳು ।
ಜಾಣ ರಾಮುಗ ಕುಳ್ಳಿರು ಬಾರೆಂದರೆ
ಏಣಲೋಚನೆ ಒಲ್ಲೆನೆಂದ ॥೮೮॥

ಇಂದು ಚೆಂಡಿಲ್ಲದೆ ನಿಂತಿದೆ ಆಟವು
ತಂದು ಕೊಡಮ್ಮ ಚಿಕ್ಕಮ್ಮ ।
ಎಂದ ಮಾತನು ಕೇಳಿ ಒಂದಾರು ಭುಜವಾಗಿ
ನಿಂದು ಮಾರ್ನುಡಿದಳು ರತ್ನಾಜಿ ॥೮೯॥

ಇತ್ತ ಕೇಳೆಲೊ ನಿಮ್ಮ ಹೆತ್ತ ತಂದೆ ಮಂಚದಿ
ಮುತ್ತಿನ ಚೆಂಡು ಮಡಗಿದೆ ।
ಅದೆ ಹೋಗು ಮುತ್ತಿನ ಚೆಂಡು ಮಂಚದ ಮೇಲೆ
ಮದನಸನ್ನಿಭನೆ ರಾಮಯ್ಯ ॥೯೦॥

ಸೆಜ್ಜೆಯ ಗೃಹಕ್ಹೋಗಿ ಹೆಜ್ಜೆಯನಿಡುವಾಗ
ಗುಜ್ಜಾರಿ ಮಂಚದೊಳಿರುವ ।
ವೆಜ್ಜವಿಲ್ಲದ ಮುತ್ತು ಬಿಗಿದಿಹ ಚಂಡಿಗೆ
ಸಜ್ಜನ ರಾಮ ಕೈ ತುಡುಕೆ ॥೯೧॥

ಉರವಣೆಯಲಿ ಹೋಗಲೀಸದೆ ರಾಮನ
ತರಳೆ ಹಿಡಿದಳು ಮುಂದಲೆಯ ।
ಗರುವ ರಾಮುಗ ನಿನ್ನ ರೂಪಿಗೆ ಮನಸೋತೆ
ನೆರೆದುಳುಹೊ ಎನ್ನ ಬೇಗದಲಿ ॥೯೨॥

ಹೊಕ್ಕ ಸಮಯದೊಳು ಒಳಪೊಕ್ಕು ರಾಮನ
ಅಕ್ಕರಿಂದಲಿ ತಬ್ಬಿಕೊಂಡಳು ।
ಚಿಕ್ಕಮ್ಮ ಎನ್ನ ಪಡೆದ ತಾಯೆ ನೀನು
ಇಕ್ಕಲಿ ಬಹುದೆ ಈ ಮನಸ ॥೯೩॥

ಹರಿಯಲದೇವಿಯೋಪಾದಿ ಎನುತಿರ್ದೆ
ಪರಿಹರಿಸೆನ್ನ ಪಾತಕವ ।
ಸಿಕ್ಕಿದೆ ಎನ್ನಯ ಭಾಗ್ಯದ ನಿಧಿಯೆಂದು
ಅಕ್ಕರದಿಂದ ಆಡಿದಳು ॥೯೪॥

ಅಮ್ಮಾಜಿ ನೀ ನನ್ನ ಹಿಡಿಯ ಸಲ್ಲದು ತಾಯೆ
ನಿರ್ಮಳವಾಗಿ ಪೇಳೆನಗೆ ।
ಹೆಮ್ಮೆ ಬೇಡವೊ ರಾಮ ಸಿಕ್ಕಿದೆ ಬಿಡಲಾರೆ
ಕಮ್ಮಗೋಲನ ಬಾಧೆ ಘನವು ॥೯೫॥

ಹರಹರಾ ಎನುತೆರಡು ಕಿವಿ ಮುಚ್ಚಿ
ರಾಮಯ್ಯ ಪರಿಹರಿಸೆನ್ನ ಪಾತಕವ ॥೯೬॥

ಕನಸಿನೊಳಗೆ ಬಂದು ಕಾಡುತಲಿರೆ ರಾಮ
ಮನಸಿಲ್ಯಾತಕೆ ಸುಮ್ಮನಿರ್ದೆ ।
ಮುನಿಸು ಸಲ್ಲದು ಮುಂದುಗೆಟ್ಟನು ವಿರಹದಿ
ಮನಸಿಜರೂಪ ನೀ ಕಾಯೋ ॥೯೭॥

ಅತಿಮಾತು ಬೇಡ ಚಿಕ್ಕಮ್ಮ ಮುಂದಲೆ ಬಿಡು
ಸುತನಲ್ಲವೆ ನಾನು ನಿನಗೆ ।
ಸತಿಯಲ್ಲವೆ ನಮ್ಮ ಕಂಪಿಲರಾಯಗೆ
ಮತಿಗೆಡುವರೆ ಚಿಕ್ಕಮ್ಮ ॥೯೮॥

ಶೂಲದ ಹಬ್ಬದಿ ನಿನ್ನ ಕಂಡೆನೊ ರಾಮ
ಬಾಳುವ ಕಾಲವ ಮರೆದೆ ।
ಭೂಲೋಕದೊಳಗಿಂಥ ಚೆಲುವನ ಶಿವ ತಾನು
ಲೋಲನ ಪುಟ್ಟಿಸಬಹುದೆ ॥೯೯॥

ಬಾಲೆ ಹೆಣ್ಣು ಬಯಸಿ ಬಂದು ಹಿಡಿದರೆ
ಒಲ್ಲೆನೆಂಬುವದು ಗುಣವೇನೊ ।
ಚಿನ್ನವು ಕೈಸೇರಿದರೆ ಬಿಡುವವರುಂಟೆ
ಹೆಣ್ಣು ಮೇಲಿಕ್ಕಿ ಮೋಹಿಸಿದರೆ ॥೧೦೦॥

ಹೆಣ್ಣೆನಳಲು ಹೊಲ್ಲೆವೆಂಬ ರಾಮನ ಮೇಲೆ
ಮಣ್ಣ ತೂರಿದಳು ರತ್ನಾಜಿ ।
ಕಣ್ಣನೀರಿಲಿ ಕೈಯ್ಯ ತೊಳೆದು ಉಂಗು[ಟ ಕಚ್ಚಿ]
ಬಣ್ಣಗುಂದಿದಳು ರತ್ನಾಜಿ ॥೧೦೧॥

ಚಿತ್ತ ಒಲಿದು ಒಪ್ಪತ್ತಿನ ಭೋಗವ
ನಿತ್ತು ಮನ್ನಿಸಿ ಮಾತನಾಡೊ ।
ಮುತ್ತು ಮಾಣಿಕ ನವರತ್ನ ಬಂಗಾರವ
ನಿತ್ತಪೆ ಬೇಗ ಕೂಡೆನ್ನ ॥೧೦೨॥

ದೃಷ್ಟಿಸಿ ನೋಡಿ ಮಾತಿಗೆ ಮಾತನಾಡುತ
ನೆಟ್ಟನೆ ಮುನಿಸಿದಂತಿಹಳು ।
ಬಟ್ಟ ಕುಚವ ತೋರುವಳು ಎದೆಗೆಡಹೇಳಿ
ದಿಟ್ಟ ಕುಮಾರ ರಾಮಯ್ಯೆಗೆ ॥೧೦೩॥

ಹೊಸಮಲೆದುರ್ಗವ ನಿನ್ನೊಶಮಾಡುವೆ
ದೆಸೆಯ ಮನ್ನೆಯರ ಕಾಣಿಸುವೆ ।
ವಿಷಮದ್ದನಿಕ್ಕಿ ಕೊಲುವೆ ಮುದಿ ಕಂಪಿಲನ
ಹೊಸಪಟ್ಟ ನಿನಗೆ [ಮಾಡಿಸುವೆ] ॥೧೦೪॥

ಭೂತಳದೊಳು ತಾಯಿ ಮಕ್ಕಳ ಬಯಸಿದರೆ
ಪಾತಕಕೊಳಗಾಗಬಹುದೆ ।
ಮಾತಲ್ಲ ಬಿಡು ನಿನ್ನ ಮನಸಿಲಿ ನೋಡಿಕೋ
ನೀತಿಯೆ ನಿನಗಿದು ಗುಣವೆ ॥೧೦೫॥

ಕೊಂದು ಹೋಗೆಲೊ ರಾಮ ನಿಂದು ಸೈರಿಸಲಾರೆ
ಮುಂದುಗೆಟ್ಟೆನೊ ವಿರಹದಲಿ ।
ಒಂದು ಗಳಿಗೆ ಭೋಗವನಿತ್ತು ಸೈರಿಸು
ಕಂದರ್ಪ ಸಮರೂಪ ರಾಮ ॥೧೦೬॥

ಯಾತಕೆ ಚಿಕ್ಕಮ್ಮ ಬಯಲ ಕಾತರವಿದು
ಕಾಕು ಆಗುವರೆ ಬಲ್ಲವರು ।

ಲೋಕ ನಿಂದಿಸುವುದು ಕೇಳಿದವರು ಬೇಗ
ವಾಕರಿಸುವರು ಚಿಕ್ಕಮ್ಮ ॥೧೦೭॥

ಮರೆ ಯಾಕೆ ರಾಮ ರತ್ನಾಜಿಯ ಮಗನೆಂದು
ನೆರೆ ಹೊಯ್ಸುವೆನು ಡಂಗುರವ ॥೧೦೮॥

ಸಾಕಿದಾಕೆಯು ಹರಿಯಮ್ಮನು ತಾನೆಂದು
ಹೆತ್ತಾಕೆ ರತ್ನಮ್ಮನೆಂದು ।
ಲೋಕಕರಿಕೆಯನು ಮಾಡುವೆನು ಕಂಪಿಲರಾಯ
ಭೂಕಾಂತ ಮೆಚ್ಚುವಂದದಲಿ ॥೧೦೯॥

ಬೇಡ ಬೇಡಪಕೀರ್ತಿ ನಾಡೊಳು ಮಕ್ಕಳ
ಕೂಡುವೆನೆಂದು ಬಯಸುವರೆ ।
ಬೇಡ ಚೆಂಡನು ಕೊಡು ಹೋಹೆ ಮನ್ನೆಯರೆಲ್ಲ
ನೋಡುವರೆನ್ನ ದಾರಿಯನು ॥೧೧೦॥

ಚೆಂ[ಡೇನೊ ಪಾವನ] ಚೆಲುವ ರಆಮುಗ ನೀನು
ಭಂಡಾರ [ಸಿರಿ]ಯ ಭಾಗ್ಯವನು ।
ಕೊಂಡೊಯ್ಯೊ ಆಶೆಯ ಬಿಡಿಸೊ ನೀ ಎನ್ನಯ
ಹೆಂಡಿಯನು ಮಾಡಿಕೊಳ್ಳೊ ॥೧೧೧॥

ಪಾಪವ ಕೇಳಿದೆ ಜಟ್ಟಂಗಿ ರಾಮೇಶ
ಆಪತ್ತು ತರುವರೆ ಎನಗೆ ।
ಈ ಪರಿ ಅಲ್ಪಬುದ್ಧಿಯನೆಣಿಸುವರೆ ತಾಯಿ
ಭೂಪಾಲ ಕಂಪಿಲನರಸಿ ॥೧೧೨॥

ಹಲವು ಮಾತೇನಮ್ಮ ಕೇಳು ಮದುವೆಯಾದ
ಲಲನೆರಲ್ಲದೆ ಪರಸತಿಯ ।
ಒಲಿದು ಮೋಹಿಸಿದವನವನು ಸತ್ಪುರುಷನೆ
ಹೊಲೆಯನಲ್ಲವೆ ಭೂಮಿಯೊಳಗೆ ॥೧೧೩॥

ನೀತಿಶಾಸ್ತ್ರವ ಕೇಳಬ[ಂದೆನೊ] ನಿನ್ನೊಳು
ಯಾತರ ಧರ್ಮದ ನಡತೆ ।

ಸೋತವಳೊಡನೆ ಮನ್ನಿಸೊ ಸನ್ನಿಭಭೂಪ
ಕಾತರಿಸುತ ಹಲುಬಿದಳು ॥೧೧೪॥

ಕಥೆಯನೋದುವರೆಲ್ಲ ವ್ರತಗೆಟ್ಟು ಹೋದರು
ಪೃಥ್ವಿಯೊಳಗೆ ಬ್ರಹ್ಮ ತನ್ನ ।
ಸಂತೆಯ ಮದುವೆಯಾದ ಕೇಳರಿಯ ರಾಮ ನೀ
ಸತಿಗೊಳಗಾಗದವರ್ಯ್ಯಾರೊ ॥೧೧೫॥

ಮಳೆಗಾಲದೊಳು ಮಲ್ಲಿಗೆ ಕಾತ ತೆರನಂತೆ
ಅಳಿವೆನೊ ಮುದಿಕಂಪಿಲಗೆ ।
ಹೊಳೆವ ಮನ್ಮಥರಾಮ ಒಲಿದೆನ್ನ ಕೂಡೆಂದು
ನಳಿನಾಕ್ಷಿ ರತ್ನಿಯಾಡಿದಳು ॥೧೧೬॥

ಚಿಕ್ಕಮ್ಮ ನೀ ನನ್ನ ಪಿಡಿಯ ಸಲ್ಲದು ನಿನ್ನ
ಚಿಕ್ಕಂದು ಹುಟ್ಟಿದ ಮಗನು ।
ತರ್ಕೈಸಿಕೊಂಡ ಮುಂದಲೆಯನು ಬಿಡುಯೆಂದು
ಅಕ್ಕರಿಂದಲಿ ಆಡಿದನು ॥೧೧೭॥

ಆಡಿದ ಮಾತನು ಕೇಳಿ ರತ್ನಮ್ಮನು
ತೋಡಿದಳಾಕೆ ಮಾರ್ನುಡಿಯ ।
ಬೇಡ ರಾಮಯ್ಯ ಎನ್ನೊಳು ಪಂಥವ್ಯಾತಕೆ
ರೂಢಿಯೊಳಗೆ ಹೊಸಮಾತು ॥೧೧೮॥

ಇನ್ನು ನಿನ್ನನು ನಾನು ಬಿಡುವೆನೆ ರಾಮಯ್ಯ
ನನ್ನ ಹರಕೆ ಕೈಸೇರಿತು ॥೧೧೯॥

ಹರಕೆಯ ಕಳೆವೆನೊ ಮನಸಿಜ ತಾಪವ
ಹರಿವೆ ನಿನ್ನಾಣೆ ಸಟೆಯಲ್ಲ ।
ನೆರೆಗಲಿ ರಾಮಯ್ಯ ಅಂಜಬೇಡವೊ ಇಂದು
ನೆರೆದೆನ್ನ ಒಲಿದು ಕೂಡುವುದು ॥೧೨೦॥

ಬೇಡುವೆ ಚಿಕ್ಕಮ್ಮ ಆಡಬಾರದು ಮಾತ
ಕೇಡುಬಹುದು ಇದರಿಂದ ।

ಬೇಡ ಕೇಳ್ ಧರೆಯೊಳು ಮಾಡಬಾರದ ಪಾಪ
ಬೇಡವೆ ಇನ್ನು ನಾನರಿಯೆ ॥೧೨೧॥

ಬೇಡವೊ ಚೆನ್ನಿಗ ರಾಮಯ್ಯನೆನುತಲಿ
ಕಾಡಿ ಬಿಡದೆ ಮರುಗಿದಳು ।
ಕೆಡಬೇಡವೆಲೆ ರಾಮ ಸತಿಯರ ಶಾಪವು
ಬಿಡದೆನ್ನ ಹೆಣ್ಣುತನದನುವ ॥೧೨೨॥

ಪಿಡಿದು ಸರಳಿಂದ ನಿನ್ನ ನಾ ಹೊಡೆದಿನ್ನು
ಬಿಡುವೆನು ರಾಮಯ್ಯ ಕೇಳು ॥೧೨೩॥

ರೂಪ ನೋಡಲಿ ಬೇಡ ಚಿಕ್ಕಮ್ಮ ನೀ ನನ್ನ
ರೂಪಾದರೇನು ನಿನ್ನ ಮಗನು ।
ರೂಪ ನೋಡಿ ಎನ್ನ ಪಾಪಕ್ಕೆ ಗುರಿ[ಯಾದೆ]
ಕೋಪವ ಬಿಡು ಎನ್ನ ತಾಯೆ ॥೧೨೪॥

ಶೂಲದ ಹಬ್ಬದಿ ನಿನ್ನ ಕಂಡೆ ಮೊದಲು
ಬಾಳುವ ಕಾಲವ ಮರೆದೆ ।
ಲೀಲೆಯೊಳಿಂತಪ್ಪ ಚೆಲುವನ ಬಿಡಲಾರೆ
ಪಾಲಿಸಿ ಪ್ರಾಣವನುಳುಹೊ ॥೧೨೫॥

ಏಕಾಂತದಲ್ಲಿ ಕಂಪಿಲರಾಯಗೆ ಹೇಳಿ
ಅನೇಕ ರಾಜ್ಯವ ಬಿಡಸುವೆನು ।
ಹೊಸಮಲೆದುರ್ಗವ ನಿನ್ನೊಶ ಮಾಡುವೆ ರಾಮ
ಹೊಸಪಟ್ಟ ನಿನಗೆ ಚೆನ್ನಿಗನೆ ॥೧೨೬॥

ನರರಿಗಿನ್ನೆಲ್ಲಿಯ ಪಾಪವು ಧರೆಯೊಳು
ಹರುಷದಿ ಎನ್ನ ಕೂಡೊಲಿದು ।
ಭುವನದೊಳಗೆ ನಾ ಹೆಂಡತಿ ನೀ ಗಂಡ
ರಾಜಪಟ್ಟವನು ಕಟ್ಟಿಸುವೆ ॥೧೨೭॥

ಚಿಕ್ಕಂದು ನಿನಗೆ ತೆಗೆದ ಹೆಣ್ಣು ರಾಮಯ್ಯ
ಇತ್ತ ಕಂಪಿಲ ತಂದ ತನಗೆ ।

ಹೆತ್ತ ತಾಯಲ್ಲವೊ ನಿನಗೆ ನಾ ಸೋದರ
ಅತ್ತೆಯ ಮಗಳೊ ರಾಮಯ್ಯ ॥೧೨೮॥

ಅಲ್ಲವೆ ಚಿಕ್ಕಮ್ಮ ಹೆತ್ತಿಹ ತಾಯನು
ಎಲ್ಲಾದರೆ ಕೂಡೋದುಂಟೆ ।
ತಂದೆ ಏರುವ ಪಲ್ಲಕ್ಕಿಯ ರಾಮಯ್ಯ
ಕಂದರು ಏರುವುದಿಲ್ಲವೆ ॥೧೨೯॥

ಕಲ್ಯಾಣದೊಳು ರಾಮನಾಯಕನ ಹೆಂಡತಿ
ಅಲ್ಲಿ ಚಿಕ್ಕಯ್ಯನ ಭ್ರಮಿಸೆ ।
ಒಲ್ಲದೆ ಹೋದರೆ ತಲೆಯು ಹೋಯಿತು ರಾಮ
ಮೆಲ್ಲನೆ [ಮುಂದಣೆಚ್ಚರಿಕೆ] ॥೧೩೦॥

ಕೊಂದು ಹೋಗೆಲೊ ರಾಮ ನಿಂದು ಸೈರಿಸಲಾರೆ
ಮುಂದುಗೆಟ್ಟೆನು ವಿರಹದಲಿ ।
ತಂದೆ ಬಾಸಿಗಗಟ್ಟಿ ಮದುವೆಯಾದವಳಲ್ಲ
ಕಂದನಲ್ಲವೊ ನೀನು ಎನಗೆ ॥೧೩೧॥

ಆರಿಗೆ ತಾಯಿ [ನಾ] ನೀನಾರಿಗೆ ಮಗನೆಂದು
ಕೋಮಲೆ ರತ್ನಿ ಆಡಿದಳು ।
ನಾರಿ ಹರಿಯಮ್ಮನು ಪೆತ್ತಳು ನಿನ್ನನು
ಗರುವ ರಾಮುಗ ಕೇಳು ನೀನು ॥೧೩೨॥

ಹರಿಯಮ್ಮನೊಬ್ಬಳೆ ಪಟ್ಟದ ರಾಣಿಯು
ಗರುವ ರಾಮನೆ ನೀ ಕೇಳೊ ।
ಕರೆದು ವಿಚಾರಿಸು ಸಂಗಾಯ ನೀನೆಲ್ಲ
ದೊರೆ ಇಟ್ಟ ಊಳಿಗದವಳು ॥೧೩೩॥

ಪೊಂಬಣ್ಣವನುಟ್ಟು ತಂದೆತಾಯೊಡಗೂಡಿ
ತಂದವಳಲ್ಲವೊ ನಾನು ।
ಅಂದು ಕಂಪಿಲರಾಯ ಸೋಲಗೊ[ಳಿ]ಸಿ ತಂದ
ಸಂದೇಹವ್ಯಾಕೆ ರಾಮುಗನೆ ॥೧೩೪॥

ಕಡು ಪಾಪಿ ಹೋಗೆಂದು ಒದರಿ ಕಾಲಲಿ ನೂಕೆ
ಮುರಿದು ಮರಳಿ ತೊಡರುವಳು ।
ಮುಡಿ ಮುಸುಗನು ಇಟ್ಟು ಕುಳಿತಳು ನೆಲದಲ್ಲಿ
ಬಿಡಿಮುತ್ತುಹರಿದೋಲೆ ಸಡಿಲೆ ॥೧೩೫॥

ಮುಂದಲೆಯನು ಪಿಡಿದು ಬಿಡದೆ ತಾ ತೊಡರುತ
ಮುಂದೆ ಬಾಗಿಲನು ಹಾಕೆನುತ ।
ನೊಂದ ರಾಮಯ್ಯನ ಶಿಖಿಯನು ಪಿಡಿದಳು
ನೊಂದು ಕೋಪದಲೊದೆವುತಲಿ ॥೧೩೬॥

ಒದವಿದ ಬಿರುಸಿಗೆ ಹದಿನಾರು ತುಂಡಾಗಿ
ಕೆದರಿತು ರತ್ನದ ಹಾರ ।
ಹೆದರಿ ಹಮ್ಮೈಸಿ ಕಂಗಳ ಮುಚ್ಚಿ ರತ್ನಾಜಿ
ಮದನಬಾಣದ ತಾಪದಲಿ ॥೧೩೭॥

ಒಡೆದವು ಬಳೆಗಳು ಸಿಡಿದವು ಮಾಣಿಕ
ತೊಡಿಗೆ ಬೆಸುಗೆ ಬಿಚ್ಚಿದವು ।
ಪುಡಿಯಾಯಿತು ರಸದಾಂಬೂಲ ಬಾಯೊಳು
ಹಿಡಿದಲೆ ತರಗಾದವಾಗ ॥೧೩೮॥

ಮುದ್ದುಮುಖದ ರಾಮಯ್ಯ ಚೆಂಡು ಸಿಗದೆಂದು
ಸದ್ದುಮಾಡದೆ ಪೋದನಾಗ ।
ಗದ್ದುಗೆಯನು ತಾ ಇಳಿದು ಬಂದನು ಬೇಗ
ಸಿದ್ಧಲಿಂಗನು ಬಲ್ಲನೆನುತ ॥೧೩೯॥

ಹೊರಳಿದಳು ಬುಡುಬುಡು ಮರಳಿದಳು ರತ್ನಿಯು
ತರಹರಗೊಂಡು ಮರುಗಿದಳು ।
ನೆರೆಗಲಿ ರಾಮಯ್ಯ ಬಂದನು [ಹೊ]ರಮನೆಗೆ
ತರಹರಿಸದಲೆ ಕಾತರದಿ ॥೧೪೦॥

ಇತ್ತ ಬಂದನು ಹೊರಬಾಗಿಲ್ಯೆದನು ದಾಂಟಿ
ಸುತ್ತ ನೋಡಿದರಾರುಯಿಲ್ಲ ।

ಚಿತ್ತಜಹರ ಬಲ್ಲನೆನುತ ರಾಮಯ್ಯನು
ಪೃಥ್ವಿಗಧಿಕ ನಡೆತಂದ ॥೧೪೧॥

ಆಟದ ಮನ್ನೆಯರನು ಕಳುಹಿದನಾಗ
ಪಾಟಕರನು ಕಳುಹಿದನು ।
ಕಾಟಣ್ಣನಾಗಲೆ ಕಳುಹಿದ ರಾಮಯ್ಯ
ಕೋಟಲೆಯಲಿ ಹೊಕ್ಕನರಮನೆಯ ॥೧೪೨॥

ಪರನಾರಿಯರ ಸೋದರನೆಂಬ ಭಾಷೆಯ
ಒರೆದು ನೋಡಿದ ಉಮೆಯರಸ ।
ಹಿರಿಯ ಮಗನು ರಾಮ ರಾಜ್ಯವನಾಳಲಿ
ಪರಿಹರಿಸುವೆವು ಪಾತಕವ ॥೧೪೩॥

ಕೇಳು ಪಾರ್ವತಿ ಹಿಂದಣ ಕಾಲದೊಳರ್ಜುನನ
ಮೇಲೆ ಕೋಪವ ತಾಳಿ ನೀನು ।
ಹೇಳಿ ರಂಭೆಯನಟ್ಟಿ ಒಳಗುಮಾಡೆಂದವನ
ಲೀಲೆಯಿಂ ಕಳುಹಿದೆ ಛಲದಿ ॥೧೪೪॥

ಬಾಲೆ ರತ್ನಾಜಿ ರಾಮನ ಸೋಲಿಸಲಿಲ್ಲ
ಮೇಲಾದುದೆನ್ನಯ ಛಲವು ।
ನೀಲಲೋಚನೆ ರಾಮ ಬಲ್ಲಿದನಹುದಯ್ಯ
ಗೆಲಿದನು ಛಲ ಬಿರಿದುಗಳ ॥೧೪೫॥

ಪರನಾರಿಯರ ಸೋದರನೆಂಬ ಬಿರಿದೀಗ
ಇರದೆ ಸಲ್ಲುವುದು ಇವಗೆನುತ ।
ಒರೆದು ನೋಡಿದಳು ಪಾರ್ವತಿ ಭಲಭಲರೆಂದು
ಕರುಣ ದೃಷ್ಟಿಯಲಿ [ಒಲಿ]ದಳು ॥೧೪೬॥

ಮಕ್ಕಳಾಟಿಕೆಯಾಯ್ತು ನಮ್ಮಯ ಭಾಗ್ಯವು
ದುಃಖವಾಯಿತು ರಾಮನಿಗೆ ।
ಅಕ್ಕರಿಂದಲಿ ತನ್ನ ಅರಮನೆಯನು
ಹೊಕ್ಕು ಎಕ್ಕಟಿಗರ ಕಳುಹಿದನು ॥೧೪೭॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ವಿಧಿ ರತ್ನಿ ಚೆಂಡ ಮಡಗಿಕೊಂಡಿರ್ದಳು
ಪದಗಳು ಮುಗಿಯೆ ಸಂಪೂರ್ಣ ॥೧೪೮॥

ಅಂತು ಸಂಧಿ ೧೭ಕ್ಕಂ ಪದನು ೧೮೨೯ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೮

❖

ಕಂಪಿಲರಾಯನಿಗೆ ರತ್ನಾಜಿ ಚಾಡಿ ಹೇಳಿದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ] ನಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ಗಂಗೆಯ ಜಡೆಯೊಳು ಧರಿಸಿದ ಲಿಂಗನೆ
ತಿಂಗಳ ಸೂಡಿದಭವನೆ ।
ಮಂಗಳಮೂರ್ತಿ ಪಾವನಚರಿತನೆ
ಸಂಗಮೇಶ[ನೆ] ಸಲಹೆನ್ನ ॥೨॥

ನಾನು ರಾಮನ ಕೂಡೆ ಹೆಣಗುವಾಗಲೆ ಸಂಗಿ
ನೀ ನನ್ನ ಒದಗಿ ಬರಲಿಲ್ಲ ।
ನಾನಾ ಕಾಲ ನಾ ಬಯಸಿದ ಬಯಕೆಯು
ಏನೂ ಕೈಸೇರಿದುದಿಲ್ಲ ॥೩॥

ಇಬ್ಬರು ಹಿಡಿದು ಬಾಗಿಲ ಮುಚ್ಚಿ ಒಬ್ಬನ
ತ[ಬ್ಬೆ] ಹೋಗಲಿ ಏನಹುದು ।
ದಬ್ಬಿ ತರ್ಕೈಸಿ ದೈನ್ಯವ ಮಾಡಿ ಆಮೇಲೆ
ಇಬ್ಬರೊಂದಾಗಿ ಕೂ[ಡಿದೆನೆ] ॥೪॥

ಇದ್ದವನೊಬ್ಬನ ಇಬ್ಬರು ಹಿಡಿದರೆ
ಎದ್ದುಹೋಗುವ ರಾಮ[ನಾಥನ] ।

ಬಿದ್ದು ಪಾದಕೆ ದೈನ್ಯವ ಮಾಡಿ ಆಮೇಲೆ
ಮುದ್ದು ಮಾತಿಂದ ಮೆಚ್ಚಿ[ದೆನೆ] ॥೫॥

[ಆಗಲೆ] ಕರೆದು[ಹೇಳಿ]ದಿಲ್ಲ ರತ್ನಾಜಿ
ಈಗ ಬಯಸಿದರೇನು ಬಹುದು ।
ನಾಗಲಿಕನು ಚೆಲ್ವ ರಾಮಯ್ಯ ಬರುವನೆ
ಹೋಗಲೇತಕ ಮರೆಯೆಂದು ॥೬॥

ಎಂತು ಮರೆವೆನೆಲೆ ಸಂಗಾಯಿ ತುರುಗರೇ
ವಂತ ರಾಮಯ್ಯನ ಮೇಲೆ ಅ ।
ನಂತ ಕಾಲವು ಬಯಕೆಯು ಎನ್ನ ಮನದೊಳು
ಚಿಂತೆ ಪರಿಹರಿದಿಲ್ಲ ಸಂಗಿ ॥೭॥

ಹಲವು ಪರಿಯಲಿ ಹಂಬಲಿಸುತ ರತ್ನಾಜಿ
ಮಲಗುವ ಸಜ್ಜೆಗೃಹದಲ್ಲಿ ।
ಕೆಲಬಲದಲಿಯಿರ್ದ ತೆರೆಯ ಮಂಚದ ಸುತ್ತ
ಲಲನೆ ಆಲುತ ಕರೆದಳು ॥೮॥

[ಏರುಂಡ] ಹುಲಿಯಂತೆ ಚೀರಿ ನೆಲನ ಹಾಯ್ದು
ಮೀರಿದ [ಬಿಸಿಯ] ಕೋಪದಲಿ ।
ಬೇರೆಬೇರೆಲ್ಲರ ಬೈವುತ ಹೊಯ್ವುತ
ನೀರೆ ಸ್ವೈವೆರಗಾಗಿ ನಿಂದು ॥೯॥

ಬರಿ ಮಾತ ಬಿಡು ಇನ್ನು ರಾಮನ ಹಂಬಲ ಕೆಡಹಿ
ಕೆಡಹಿ ಕೊರಳ ಕೊಯ್ಸುವೆನು ॥೧೦॥

ಅತ್ತು ಕಂಪಿಲರಾಯಗೆ ಚಾಡಿಯ ಹೇಳಿ
ಮತ್ತೆ ರಾಮನ ಪಿಡಿತರಿಸಿ ।
ಒತ್ತಿ ಶಿರವನರಿಸಿದಲ್ಲದೆ ಉಂಡರೆ
ಹೊತ್ತವು ಮೊಲೆಯಲ್ಲ ಸಂಗಿ ॥೧೧॥

ಹಾರವ ಹರಿದಿಟ್ಟು ಸೀರೆಯ ಸೆಳೆದಿಟ್ಟು
ನಾರ ಸೀಳಿದ ಹಾಗೆ ಸೀಳಿ ॥೧೨॥

ಹೊಸ ಗಾಯವಾದವು ನಖರೇಖೆಗಳ ಮೇಲೆ
ಅಸಿಯಳ ತೋಳು ತೊಡೆಯೊಳು ।
ಹುಸಿ ದಿಟವನು ಮಾಡಿ ಸೋಲಿಸುವೆನೆನುತಲಿ
ಮಸೆದಳು ಕದನದಾಯುಧವ ॥೧೩॥

ಮದನಹರನು ಬಲ್ಲನೆನುತಲಿ ರತ್ನಾಜಿ
ಮದನಗೃಹಕೆ ಒದಗಿದಳು ।
ಹೊಟ್ಟೆಬೇನೆಗಳಾದಂತೆ ರತ್ನಾಜಿಯು
ಒಟ್ಟಿಸಿದಳು ಅಗ್ಗಷ್ಟಿಗೆಯ ॥೧೪॥

ಇರಲಿತ್ತ ಕಂಪಿಲರಾಯನ ಬೇಂಟೆಯ
ಪರಿಯ ಕೇಳುವುದು ಕೋವಿದರು ॥೧೫॥

ಬೆಟ್ಟದ ಮೇಲೆ ಬೇಂಟೆಯನಾಡಿ ಕಂಪಿಲ
ಬಿಟ್ಟನು ಮೊಲಕೆ ನಾಯಿಗಳ ।
ಅಟ್ಯಾಡಿ ಹುಲಿ ಹಂದಿ ಸಾರಂಗ ಮೊದಲಾದ
ಒತ್ತಿ ಇರಿದು ಭಟರುಗಳು ॥೧೬॥

ಎಡಬಲದಲ್ಲಿ ಬಳಸಿ ಬೇಂಟೆಯನಾಡಿ
ಕಡು ಬೆಮರಿಲಿ ಬಳಿವಿಡಿದು ।
ತೊಡರು ಕಲ್ಲಿಯೊಳು ನಾನಾ ಪಕ್ಷಿಗಳ ಹಾಕಿ
ನಡೆದವು ಬಂದಿಯ ಮೃಗವು ॥೧೭॥

ವನದ ಮೃಗಗಳನೆಲ್ಲ ಬಂಡಿಲಿ ಹೇರಿಸಿ
ಮೊನೆಗಾರ ಕಂಪಿಲರಾಯ ।
ದಕ್ಕಡಿರಾಯರಗಂಡ ಕಂಪಿಲನೆಂದು
ಹೊಕ್ಕನು ಬಂದು ಕುಮ್ಮಟವ ॥೧೮॥

ಭೇರಿ ಮೃದಂಗ ತಂಬಟೆ ಕಹಳೆ ಹೊಡೆಸುತ
ಭೋರೆಂದು ನಾದಮಾಡಿದವು ।
ತುಡುಮು ತಂಬಟೆ ಭೇರಿ ಗಿಡಿಬಿಡಿ ನಿಸ್ಸಾಳ
ಬಿಡದೊದರುವ ಚಿನ್ನಗಹಳೆ ॥೧೯॥

ಕೆಲರ ಕೈಯ್ಯಲಿ ಮೊಲ ಕೆಲರ ಕೈಯ್ಯಲಿ ಉಡ
ಕೆಲರ ಕೈಯ್ಯಲಿ ನವಿಲುಗಳು ।
ಕಂಪಿಲರಾಯ ಮನ್ನೆಯರಿತ್ತ ಸಹಿತಲಿ
ಸೊಂಪಿಲಿ ಹೊಕ್ಕ ಪಟ್ಟಣವ ॥೨೦॥

ಒಡೆಯ ಕಂಪಿಲ ಬೇಂಟೆಯ
ನಾಡಿ ಬಂದಾಗ ತವಕದಿಂದಲಿ ಅರಮನೆಗೆ ।
ಪಡುವಣ ಸೂರ್ಯನು ಇಳಿವಂತೆ ಕಂಪಿಲ
ಒಡನೆ ಹೊಕ್ಕನು ಅರಮನೆಯ ॥೨೧॥

ಬಂದು ಹಜಾರದ ಮುಂದೆ ನಿಂದನು ರಾಯ
ಮಂದಿ ಮಾರ್ಬಲ ನೋಡಿದನು ।
ನೊಂದು ಬೇಂಟೆಯನಾಡಿ ಬಳಲಿದಿರಿ ನೀವೆಂದು
ಎಂದು ಎಲ್ಲರ ಕಳುಹಿದನು ॥೨೨॥

ಕರೆಸಿದ ಬಾದೂರಖಾನನ ಕಂಪಿಲ ಈ
ಪರಿ ಬೇಂಟೆ ನೋಡೆನುತ ।
ಷಡುಚಕ್ರವರ್ತಿಗಳು ಪೊಗಳುವರೆನ್ನಳವೆ
ಪೊಡವಿಪ ನಿಮ್ಮಯ ಬೇಂಟೆ ॥೨೩॥

ಹೋಗಿ ಬೈಚಪ್ಪ ಖಾನರು ಬಳಲಿದಿರೆಂದು
ಹೋಗಿರ್ಪೆ ತೆಲುಗ ಮನ್ನೆಯರು ॥೨೪॥

ಹಿರಿಯರು ಮನೆಯ ಹೆಮ್ಮಕ್ಕಳು ಹರಿಯಮ್ಮ
ಹರಿವಾಣದಾರತಿ ಸಹಿತ ।
ಪುರದೊಳಗುಳ್ಳ ನಾರಿಯರು ಆರತಿಗಳ
ಪಿಡಿದೆತ್ತಿ ಹರಸಿ ಕಂಪಿಲನ ॥೨೫॥

ಹೆಣ್ಣುಮಕ್ಕಳು ಚೊಕ್ಕ ಬಣ್ಣ ಬಂಗಾರವಿಟ್ಟು
ಪುಣ್ಯಸ್ತ್ರೀಯರುಗಳು ನಡೆದರು ।
ಬಣ್ಣಿಸಿ ಪಾಡಿ ಭೂಪಾಲ ಕಂಪಿಲಗಗ್ರ
ಗಣ್ಯಾರತಿಯನೆತ್ತಿದರು ॥೨೬॥

ಚಿತ್ತದೊಲ್ಲಭೆ ಬಾರಳೆನುತ ಕಂಪಿಲರಾಯ
ಮತ್ತೆ ಮನದಲಿ ಅತಿ ನೊಂದು ।
ಚಿತ್ತದಿಂ ಬವಣೆಗೊಳುತಲಾಗ ಭೂಪತಿ
ಒತ್ತಿ ನಡೆದನರಮನೆಗೆ ॥೨೭॥

ಮಾನಿನಿ ಮುನಿದಳೆನುತ ಕಂಪಿಲರಾಯ
ತಾನೈದಿದನರಮನೆಗೆ ।
ಏನ ಬೇಡಿದಡೆ ಈವೆನು ಮನದಣಿವಂತೆ
ಭಾನುಸಖನ ಮುಖದವಳೆ ॥೨೮॥

ಚಿಕ್ಕರಮನೆಗೆ ಕಂಪಿಲರಾಯ ಬರುವಾಗ
ಇಕ್ಕಿತು ಗೌಳಿಯ ಶಕುನ ।
ಸೊಕ್ಕಿನ ರತ್ನಿಯ ಸಜ್ಜೆಗೃಹವ ತಾನು
ಹೊಕ್ಕು ನೋಡಿದನು ಹೊಸಪರಿಯ ॥೨೯॥

ಹೊಸಪರಿಯಾಗಿದೆ ಮಂಡೆಗೆ ಮಸಿ ಪೂಸಿ
ಮಿಸುನಿಯ ಬಳೆಯೊಡೆದಿವೆ ಕೋ ।
ಮುಸುಕಿದ ಕೋಪವಿದೇಕೆಂದು ಕಂಪಿಲ
ಬೆಸಗೊಂಡ ತನ್ನ ರಾಣಿಯನು ॥೩೦॥

ತನ್ನ ವಲ್ಲಭನ ಕಾಣುತಲಾಗ ರತ್ನಾಜಿ ಮೆ
ಲ್ಲನೆ ಮಂಚದೊಳಿರ್ದು ಕುಟಿಲ ।
ಕುಟಿಲ ಮಾಯಗಳ ಮಾಯದೊಳಿಟ್ಟು ರತ್ನಾಜಿ
ಬಂದ ಗಂಡನ ಕೂಡೆ ಹೇಳಿ ॥೩೧॥

ಮುತ್ತಿನ ಹಾರವು ಹರಿದು ಕುರುಳ್ಗುಂದಿವೆ
ಹಸ್ತದ ಬಳೆ ಒಡೆದಿವೆ ಕೋ ।
ಒತ್ತಿದ ನಖರೇಖೆ ಇವು ಎಲ್ಲಿಯವೆಂದು
ಮತ್ತೆ ಕೇಳಿದನು ಮಡದಿಯನು ॥೩೨॥

ಎಲೆ ಪ್ರಿಯಳೆ ಮಾಜಲಿಬೇಡ ಈ ಮೈಯ್ಯ
ಕಲೆಗಳೆಲ್ಲಿಯವು ನಿನ್ನಾಣೆ ।

ಸುಮ್ಮನಿರಲು ಕಂಪಿಲರಾಯ ಬೆರಗಾಗಿ
ಗಮ್ಮನೆ ಮುಖವ ನೋಡಿದನು ॥೩೩॥

ಸತಿಯು ಕುಹಕವನು ಹೇಳಿದಳು ಗಂಡನ ಕೂಡೆ
ಹಿತವುಳ್ಳ ಮಗನು ನೀನೆಂಬೆ ।
ಕಥೆಯ ಇನ್ನೆಂದು ಮರೆವೆ ಈಗ ಸಾವೆನು
ಸುತನು ಎಂಬವನು ಎಣಿಸಿದನು ॥೩೪॥

ಬೇಟೆಗೆ ಬಾರದೊಂದಾಟವ ಕೈಕೊಂಡು
ನೋಟಕೆ ಚೆಂಡನಾಡಿದನು ।
ಪಾಟಿಸಿ ಬಂದು ಮನೆಯ ಹೊಕ್ಕು ಮಾಡಿದ
ಮಾಟವ ಕೇಳು ಮಹರಾಯ ॥೩೫॥

ಚೆಂಡು ಬಿದ್ದ ನೆವದಿ ನಿನ್ನಯ ಮಗ ಬಂದು
ಬಂಡು ಮಾಡಿದನು ಮೈ ಕೆಡಿಸಿ ।
ಹೊಕ್ಕು ಒಗತನವನು ಮಾಡಲಾರೆನು ನಾನು
ತಂದೆ ಮಗನಿಗೆ ಒಬ್ಬಳಾದೆ ॥೩೬॥

ಒಗತನವನು ಮಾಡಲರಿಯೆ ನಿನ್ನೊಳು ನಾನು
ನಗೆಗೇಡಲ್ಲವೆ ರಾಯ ನಿನಗೆ ।
ನಗುವರ ಮುಂದೆ ನಿನ್ನಯ ಮಗ ಮಾಡಿದ
ಬಗೆಯ ನಾನೇನ ಬಣ್ಣಿಸುವೆ ॥೩೭॥

ನಿನ್ನ ಹೆಂಡತಿ ನಿನ್ನ ಮಗನಿಗೆ ಹೆಂಡತಿ
ವನಿತೆ ಒಬ್ಬಳಿಗಿಬ್ಬರುಂಟೆ ।
ಮನದೊಳು ನೀ ನನ್ನ ಮೇಲಣಾಸೆಯು ಬೇಡ
ತನುಜಗೆ ಒಪ್ಪಿಸು ಎನ್ನ ॥೩೮॥

ಒಲ್ಲೆನೆಂದರೆ ಎನ್ನ ಬಲುಹಿಂದಲಪ್ಪಿದ
ಗಲ್ಲಕ್ಕೆ ರೇಖೆಯನೊತ್ತಿ ।
ಸಲ್ಲದು ಇದು ಮಾತಲ್ಲವೆಂದರೆ ರಾಮ
ಚೆಲ್ಲಿದ ಬಿಡಿಮುತ್ತ ಹರಿದು ॥೩೯॥

ಹಿಡಿದೆಳೆದರೆ ಕೈಯ್ಯ ಮುರಿದು ಬಿಡಿಸಕೊಂಡೆ
ಒಡನೆ ಬಿಡದೆ ತೊಡರಿದನು ।
ಬಿಡು ಪಾಪಿ ಹರಿಯಮ್ಮನೋಪಾದಿ ಎಂದರೆ
ಕಡುಪಾಪಿ ಅವನು ಅಂಜುವನೆ ॥೪೦॥

ಭಂಗಿಸೆನ್ನಂಗವ ಪಿಡಿದುಕೊಂಡಾಕ್ಷಣ
ಮುಂಗೈಯ್ಯ ಪಿಡಿದೆನ್ನನೆಳೆದ ।
ಅಂಗಕ್ಕೆ ಹತ್ತಿರ ಬಂದೆನ್ನ ತುಡುಕಲು
ಭಂಗಕ್ಕೆ ಒಳಗಾದೆ ರಾಯ ॥೪೧॥

ಗಂಡನೆಂಬವ ಮುಪ್ಪು ಮಿಂಡಿ ಹೆಂಗಸು ನೀನು
ಪುಂಡರಿಕಾಕ್ಷಿ ಬಾರೆನುತ ।
ದಂಡಿಸಿ ಮೈಯೇರಿ ಎಳೆದು ನಿನ್ನಯ ಮಗ
ಬಂಡು ಮಾಡಿದ ಮೆಯ್ಯ ಕೆಡಿಸಿ ॥೪೨॥

ಕಾವಲ ದುರ್ಗಕ್ಕೆ ಮತ್ತೊಬ್ಬರಿಲ್ಲದೆ
ಗಾವುದಿಗನ ಇರಿಸುವರೆ ।
ಅಸಗೊಳ್ಳದಲೆ ರಾಮ ಮಾಡಿದ ಮಾಟಕ್ಕೆ
ಸೊಸೆಯಾದೆನು ರಾಯ ನಿನಗೆ ॥೪೩॥

ಕಳೆಯುಳ್ಳವನಾದರೆ ತನ್ನ ಹೆಂಡರಿಗೆ
ಜೋಕೆಯೊಳ್ಪಾಳಿಸಬೇಕು ।
ಸಾಕಾಗಿ ಪ್ರಾಣವ ತೊರೆದು ಪರಸ್ತ್ರೀಯರ
ಸೊಕ್ಕಿ ಪಿಡಿವರೆ ಮುಂದಲೆಯ ॥೪೪॥

ಕುಂಭಕುಚವು ಬಿ[ಚ್ಚಿ] ಅಂಗವು ತೋರಲು
ತಿಂಗಳರೇಖೆಯ ಕಂಡ ।
ಭಂಗಬಡಿಸಿದನು ನಿನ್ನಯ ಮಗ ಬಂದು
ಸಂಗಿಯ ಕೇಳು ಹೇಳುವಳು ॥೪೫॥

ಬಸುರೊಳು ಬರಬೇಕೆ ಮಗನಲ್ಲವೆ ತಾನು
ದಶಪಾತಕ ದ್ರೋಹಿ ಅವನು ।

ಕುಸುರಿದರಿದು ತಲೆಯನು ತಾರದಿರ್ದರೆ
ವಿಷವ ಕೊಂಬೆನು ನಿನ್ನ ಮುಂದೆ ॥೪೬॥

ಎಂದ ಮಾತನು ಕೇಳಿ ಕಂಪಿಲರಾಯನು
ನೊಂದು ಕೋಪದಲುರಿದೆದ್ದು ।
ಬಂದು ಭಂಡಾರಿ ಬುಕ್ಕಣ್ಣನ ಕರೆಸಿದ
ಇಂದೊಂದು ಕಂಪಿಲ ನುಡಿದ ॥೪೭॥

ಕರೆಸಿದಿರೇಕೆಂದು ಬಂದು ಭಂಡಾರಿಯು
ಕರೆಯೊ ಬೈಚಪ್ಪನ ಬೇಗ ।
ಬರಹೇಳು ಬೇಗದಿ ತಡೆಯದೆ ಎಂದಾಗ
ಇರದೆ ಅಟ್ಟಿದನರಮನೆಗೆ ॥೪೮॥

ಬಂದು ಭಂಡಾರಿಯು ಬೈಚಣ್ಣನ ಕೂಡೆ
ನಿಂದು ಬಿನ್ನಹವ ಮಾಡಿದನು ।
ಕಂದ ರಾಮಯ್ಯನ ಕೊಲ್ಲಬೇಕೆನುತಲಿ
ನಿಂದು ಇಹನೆ ಕಂಪಿಲನು ॥೪೯॥

ಸತಿಯು ಕುಹಕವ ಹೇಳಲು ಗಂಡನ ಕೂಡೆ
ಸುತನ ಕೊಲ್ಲೆಂಬ ಕಂಪಿಲನು ।
ಕತೆಯಾಯಿತು ಇಂದಿಗೆ ಕಾಂತಿ ಅಳಿದಿತು
ಹತವಾಯಿತು ಕುಮ್ಮಟವು ॥೫೦॥

ಕರೆಸಿದಿರೇಕೆಂದು ಬೈಚಪ್ಪ ಬಂದಿನ್ನು
ಹೊರೆಯಲ್ಲಿ ಬಿನ್ನೈಸಿದನು ।
ಧರೆಯೊಳಗಿಲ್ಲದ ಪಾಪವ ಮಾಡಿದ
ಹಿರಿಯಾಕೆಯ ಮಗ ರಾಮ ॥೫೧॥

ಮಗ ರಾಮ ಮಾಡಿದ ಹಗರಣವನು ಕೇಳು
ಜಗಕೊಂದು ಕಥೆಯ ಮಾಡಿದನು ।
ಜಗದೊಳಗಿಲ್ಲದ ಪಾಪವನೆಣಿಸಿದ
ನಘಧರ ಚೆನ್ನಿಗರಾಮ ॥೫೨॥

ಎತ್ತಣ ಮಾತು ಎನುತಲಿ ಬೈಚಪ್ಪ
ಒತ್ತಿ ಕೇಳಿದನೊರೆದೊರೆದು ।
ಹೆತ್ತ ಮಗನು ಕುಮಾರ ರಾಮಯ್ಯನು
ತ್ತದೊಳೆಣಿಸುವನಲ್ಲ ॥೫೩॥

ತಂದೆಯ ಕಾಲದ ಹಿರಿಯನಲ್ಲವೆ ನೀನು
ಬಂದು ನೋಡರಮನೆಯೊಳಗೆ ।
ಕೊಂದು ರಾಮನ ಅಂಗವ ತಾರದಿರ್ದರೆ ಈ
ನಿಂದ್ಯವ ನೀನೆ ಮಾಡಿಸಿದೆ ॥೫೪॥

ಹೇಳಿದ ಮಾತನು ಕೇಳುತ ಬೈಚಪ್ಪ
ತಾಳಿದ ಮನದಲ್ಲಿ ನೋವ ।
ಹಾಳಾಯಿತು ಹೊಸಮಲೆಯು ಕುಮ್ಮಟವೆಂದು
ಹೇಳಿ[ದ] [ತ]ನ್ನೊಳು [ತಾ]ನು ॥೫೫॥

ಒಡೆಯನ ಮಾತನು ಮೀರದೆ ಬೈಚಪ್ಪ
ನುಡಿದು ಹೇಳಿದನೊಂದು ಮಾತ ।
ಹಿಡಿದನು ಕತ್ತಿಯ ಮಂತ್ರಿಶಿರೋಮಣಿ
ನುಡಿದನು ಕಂಪಿಲನೊಡನೆ ॥೫೬॥

ದೇವ ಕಂಪಿಲರಾಯ ನಿಧಾನಿಸಿ ನೋಡು
ತೀವಿ ಕೋಪದ ಮನಸಿನಲಿ ।
ಕಾವುದಿಲ್ಲವೆ ಒಮ್ಮೆ ಎನುತ ಪ್ರಧಾನರ
ದೇವ ನುಡಿದನು ಕಂಪಿಲಗೆ ॥೫೭॥

ಇಂದೇನು ನೋಡುವೆನೆನುತಲಿ ಕಂಪಿಲ
ತನ್ನ ಮಗನ ಕೋಪದಲಿ ।
ಚೆನ್ನರಾಮನ ಈ ಕ್ಷಣ ಕೊಲ್ಲದಿರ್ದರೆ
ನಿನ್ನ ಮೇಲಾಣೆಯೆಂದೆನುತ ॥೫೮॥

ಒಡೆಯ ಕಂಪಿಲರಾಯನ ಮಾತ ಕೇಳುತ
ಹಿಡಿಯಬೇಕೆಂದು ಬೈಚಪ್ಪ ।

ತಡೆಯದೆ ತನ್ನರಮನೆಗೆ ಬಂದನು ಬೇಗ
ಬಿಡದೆಣಿಸಿದನು ಬುದ್ಧಿಯನು ॥೫೯॥

ಬಂದು ಪ್ರಧಾನಿಗಳರಸ ತನ್ನರಮನೆಗೆ
ಒಂದು ಬುದ್ಧಿಯನೆಣಿಸಿದನು ।
ಕುಂದದೆ ತಾನು ನೆನೆದು ತನ್ನ ಮನದೊಳು
ಕಂದರ್ಪರೂಪನ ಮೇಲೆ ॥೬೦॥

ಹುಲಿಯಡಗಿದ ಮೆಳೆಯಂತಿರ್ದ ರಾಮನ
ಕೊಲುವರೆ ಕೈಯೇಳವೆಂದ ।
ಚೆಲುವರ ಗಂಡ ಚೆನ್ನಿಗ ರಾಮನಳಿದರೆ
ಲಲನೆಯರೆಂತು ಬಾಳುವರು ॥೬೧॥

ದಿಟ್ಟ ಚೆನ್ನಿಗರಾಮನಳಿದರೆ ಸುದ್ದಿಯು
ಹುಟ್ಟದಿಹುದೆ ಡಿಳ್ಳಿಯೊಳಗೆ ।
ನೆಟ್ಟನೆ ತುರುಕರ ಮಾರ್ಬಲ ಕೂಡಿಬಂದರೆ
ತೊಟ್ಟು ಕಾದುವರಿನ್ನಾರು ॥೬೨॥

ಕಟ್ಟಾಳು ರಾಮನ ಮಡಗಿ ಕಾರ್ಯವ ಕಾಬೆ
ಬೆಟ್ಟ ಕುಮ್ಮಟವನುಳುಹುವೆನು ।
ದಿಟ್ಟ ಕಂಪಿಲಗೆ ಆಪತ್ತು ಬಂದಾಗಲೆ
ಕೊಟ್ಟದ ರಾಮನ ತೋರು[ವೆ] ॥೬೩॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ವಿಧಿಮುಂಡೆ ರತ್ನಿ ರಾಮನ ಕೊಲ್ಲಹೇಳಿದ
ಪದಗಳು ಮುಗಿಯೆ ಸಂಪೂರ್ಣ ॥೬೪॥

ಅಂತು ಸಂಧಿ ೧೮ಕ್ಕಂ ಪದನು ೧೮೯೩ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೧೯

❖

ಕೊಮಾರ ರಾಮಯ್ಯನಿಗೆ ನೆಲಮನೆ ವಾಸ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ಮಂತ್ರಿ ಬೈಚಪ್ಪನು ಯೋಚನೆ ಮಾಡಿನ್ನು
ಬಂದನು ಕಂಪಿಲನ ಬಳಿಗೆ ।
ಕೊಂಡೆರ ಮಾತಿಗೆ ರಾಮನ ಕೊಲ್ವರೆ
ಮಂಡಲವೆಲ್ಲ ಕೆಡುವುದು ॥೩॥

ಹೆಣ್ಣಿಂದ ವಾಲಿ ಸುಗ್ರೀವರು ಕೆಟ್ಟರು
ಹೆಣ್ಣಿನ ಮಾತ ನಂಬುವರೆ ।
ಹೆಣ್ಣಿಂದ ರಾಮರು ಕೆಟ್ಟರು ಎಲೆ ರಾಯ
ಹೆಣ್ಣಿಂದ ಕೀಚಕನಳಿದ ॥೪॥

ಯಾತರ ಮಾತನಾಡಿದೆ ನೀನು ಬೈಚಪ್ಪ
ಕೀರ್ತಿಯಾಯಿತು ನಮ್ಮ ಬದುಕು ॥೫॥

ಕೊಂಬೆಯಾತಕೆಯೆಂದು ಹಿಂದೆ ನೋಯಲಿಬೇಡ
ಸಂದೇಹವಿಲ್ಲದೆ ಹೇಳಯ್ಯ ।
ಎಂದ ಬೈಚಪ್ಪನ ನುಡಿಗೇಳಿ ಕಂಪಿಲ
ಇಂದಿತ್ತ ನಂಬುಗೆಯ ಕೊಟ್ಟು ॥೬॥

ಕೊಲ್ಲಲಿಂತೆಂದರೆ ಕೊಲ್ಲುವೆ ತಪ್ಪದೆ
ಬಲು ನಂಬಿಗೆಯ ಪಾಲಿಸೆನಗೆ ।
ಸಲೆ ನಂಬುನಂಬೆಂದು ಕಂಪಿಲರಾಯನು
ಬಲುಹಿಂದ ಹೇಳಿದನಾಗ ॥೭॥

ನಿಲ್ಲದೆ ಮಂತ್ರಿಗೆ ವೀಳ್ಯಯವನು ಕೊಟ್ಟು
ಕೊಲ್ಲೆಂದು ಕಳುಹಿದ ರಾಯ ।
ಕೊಲ್ಲೆಂದ ಮಾತಿಗೆ ಕೊಲ್ಲದಿರ್ದಡೆ ನಿನ್ನ
ಕಲ್ಲಗಾಣಕೆ ಹಾಕಿಸುವೆನು ॥೮॥

ಒಪ್ಪವ ಕೊಡುವುದ ಕಾಣುತ ಬೈಚಪ್ಪ
ತಪ್ಪದೆ ಕಡೆಗಣ್ಣಿಲುದಕ ।
ಒಂದೆರಡು ಭಾಷೆಯ ತಪ್ಪದೆ ತಕ್ಕೊಂಡು ಕರೆ
ಸಿದ ತನ್ನ ಮಂದಿಯನು ॥೯॥

ಬನ್ನಿರೊ ಹಳೆಯ ಎಕ್ಕಟಿಗರೆಲ್ಲರು ನೀವು
ಬನ್ನಿರೈ ತೆಲುಗು ಮನ್ನೆಯರು ।
ಚೆನ್ನಿಗ ರಾಮನ ಹಿಡಿಯಬೇಕೆನುತಲಿ
ತನ್ನ ಬಂಟರಿಗೆ ಹೇಳಿದನು ॥೧೦॥

ಒಡೆಯನ ಮಾತನು ಕೇಳುತ ಬೈಚಪ್ಪ
ಹಿಡಿಯಬೇಕೆಂದ ರಾಮುಗನ ।
ಕಡುಗಲಿ ರಾಮಯ್ಯ ಕೈಕೊಂಡನಾದರೆ
ಪೊಡವಿಯೊಳಗೆ ಇದಿರಿಲ್ಲ ॥೧೧॥

ಪೊರೆ ರಾಮಯ್ಯನ ಬಳಿಗೆ ಬಂದ ಬೈಚಪ್ಪ
ಭರದಿಂದ ಬಿನ್ನೈಸಿದನು ॥೧೨॥

ಏಕಾಂಗಿ ವೀರ ರಾಮಯ್ಯ ಬೈಚಪ್ಪನು
ಏಕಾಂತದ ಮನೆಗೈದು ।
ಯಾಕೆ ಬಂದೆಯೊ ಮಂತ್ರಿ ಬಂದ ಕಾರಣವೇನು
ಎಂದು ಕೇಳಿದನು ರಾಮಯ್ಯ ॥೧೩॥

ಇಂದು ನಿನಗೆ ರಾಮು ರತ್ನಿಯಿಂದಪಕೀರ್ತಿ
ಬಂದಿದೆ ಕೇಳು ಚೆನ್ನಿಗನೆ ॥೧೪॥

ಕೊಲ್ಲೆಂದು ಕಳುಹಿದ ಕಂಪಿಲರಾಯನು
ಕೊಲ್ಲದಿರ್ದಡೆ ನಿನ್ನ ನಾನು ।
ಕಲ್ಲುಗಾಣಕ್ಕೆ ಹಾಕಿಸುವೆನೆನು
ತಲಿ ಅರಸು ಕೋಪಿಸಿದ ಎನ್ನ ಮೇಲೆ ॥೧೫॥

ಎತ್ತಣ ಮಾತು ಎಲ್ಲಿಯ ಬಹು ಸುದ್ದಿಯು
ಹೊತ್ತಿತು ಬಯಲಪಕೀರ್ತಿ ।
ಎಲ್ಲಿಯ ಮಾತಿನ್ನು ಹೊಂದಿತು ಬೈಚಪ್ಪ
ನಿಲ್ಲದೆ ಕೇಳ್ದ ರಾಮಯ್ಯ ॥೧೬॥

ಇಲ್ಲಿಗೆ ಹೋಯಿತು ಈ ಕ್ಷಣವೆ ಪ್ರಾಣವು
ಕೊಲ್ಲು ಪ್ರಧಾನಿಗಳರಸ ॥೧೭॥

ಮೊತ್ತದ ಪರಿವಾರ ಸಹಿತ ಮುತ್ತಿನಚೆಂಡ
ಅರ್ತಿಯಿಂದಲಿ ಆಡುತಿರಲು ।
ಒತ್ತಿ ಇಡಲು ಚೆಂಡು ಬೀಳಲು ತರಹೋದೆ
ಮತ್ತೆ ಚಿಕ್ಕಮ್ಮನರಮನೆಗೆ ॥೧೮॥

ಚಿಕ್ಕಮ್ಮನೆಂದು ನಾ ಚೆಂಡ ತರಹೋದೆ
ತಕ್ಕೈಸಿ ಮುಂದೆ ಪಿಡಿದಳು ।
ಅಮ್ಮಾಜಿ ನೀ ನನ್ನ ಪಿಡಿಯಸಲ್ಲದು ಎಂದೆ
ಕಲಶ ಕುಚಗಳನು ತೋರಿದಳು ॥೧೯॥

ಮುಕ್ಕಣ್ಣ ಜಟ್ಟಂಗಿ ರಾಮೇಶ್ವರನಾಣೆ
ಚಿಕ್ಕಮ್ಮಗೆರಡೆಣಿಸಿದರೆ ॥೨೦॥

ಇನಿತಿಷ್ಟು ತಪ್ಪ ಮಾಡಿದುದಿಲ್ಲ ಬೈಚಪ್ಪ
ಅನುಮಾನವೇಕೆ ಕೊಲ್ಲಯ್ಯ ।
ಮಾನಿನಿಯರ ಮಾತು ಕುಟಿಲ ಕೌತುಕವನು
ಏನೆನ್ನಬಹುದು ಸಿದ್ಧಾಂತ ॥೨೧॥

ಅಪ್ಪನ ರಾಣಿಗೆ ತಪ್ಪಿದೆನಾದರೆ
ಸರ್ಪಭೂಷಣ ಶಿವ ಬಲ್ಲ ।
ತಪ್ಪು ಉಂಟಾದರೆ ಕೊಲ್ಲೊ ಪ್ರಧಾನಿ ಎಂ
ದೊಪ್ಪಿಸಿದನು ಕಠಾರವನು ॥೨೨॥

ತಪ್ಪು ಉಂಟಾದರೆ ಕೊಲ್ಲುವೆ ರಾಮಯ್ಯ
ತಪ್ಪುವನಲ್ಲ ಪರಸತಿಗೆ ।
ತಪ್ಪೆನು ನಿನ್ನ ಪ್ರಾಣಕೆ ಎಂದು ಬೈಚಪ್ಪ
ಅಪ್ಪಿಕೊಂಡನು ಭುಜತುಂಬ ॥೨೩॥

ಆವ ಠಾವಿಲಿ ಮಡಗುವೆನೆಂದು ಬೈಚಪ್ಪ
ಭಾವದೊಳಗೆ ಧ್ಯಾನಿಸಿದನು ।
ದೇವ ಜಟ್ಟಂಗಿರಾಮನ ಗುಡಿಯೊತ್ತಿಲಿ
ದೇವೇಂದ್ರಸುತನ ಮಡಗುವೆನು ॥೨೪॥

ಉಪ್ಪಲಿಕರ ಸಿಂಗಯ್ಯನ ಕರೆಸಿದ
ತಪ್ಪದೆ ಏಕಾಂತವಾಡಿ ।
ಒಪ್ಪದಿಂದಲಿ ಬೆಳಗಾಗದ ಮುನ್ನಲಿ
ಇಪ್ಪಂತೆ ಮಾಡೊಂದು ಗೃಹವ ॥೨೫॥

ಮುನ್ನೂರು ಹಾರೆ ಗುದ್ದಲಿ ಸಲಿಕೆ ಸಹವಾಗಿ
ಚೆನ್ನಾಗಿ ತೋಡೊ ಮಾಳಿಗೆಯ ॥೨೬॥

ಎಂದ ಮಾತನು ಕೇಳಿ ಉಪ್ಪಾರ ಸಿಂಗಯ್ಯ
ಅಂದು ಮಾಳಿಗೆಯ ತೋಡಿದನು ।
ಬಂದು ಕಾಮಾಟರು ಮಂತ್ರಿಗೆ ಪೇಳಲು
ಬಂದು ನೋಡಿದನು ಬೈಚಪ್ಪ ॥೨೭॥

ಚೆಂದವಾಗಿದೆಯೆಂದು ಮಂತ್ರಿ ಬೈಚಪ್ಪನು
ತಂದುಕೊಟ್ಟನು ಉಡುಗೊರೆಯ ।
ಏಳು ತಿಂಗಳಿಗೆ ಅಕ್ಕಿ ಕಡಲೆ ಗೋಧಿಗಳಾಗ
ಬೇಳೆ ಬೆಲ್ಲವು ಸಹವಾಗಿ ॥೨೮॥

ದೀಪದೆಣ್ಣೆಯು ತೂಗುಮಂಚ ರಾಮಯ್ಯಗೆ
ತಪ್ಪದೆ ತಂದಿರಿಸಿದರು ।
ಉಪ್ಪು ಮೆಣಸು ಅಡಕೆ ಬಿಳಿಯೆಲೆ ಸುಣ್ಣವ
ತಪ್ಪದೆ ತಂದಿರಿಸಿದರು ॥೨೯॥

ದೇವಿಸೆಟ್ಟಿಯ ಲಿಂಗ ಕೊಳ್ಳಿಯ ನಾಗಣ್ಣ
ಭಾವಸಂಗಮ ಗುಜ್ಜಲೋಬ ।
ಕೋವಿದ ಕೋಟಗರ ದ್ಯಾವ ಮಾದಿಗ ಹಂಪ
ಹಾವಳಿಕಾರನು ಹನುಮ ॥೩೦॥

ಲಿಂಗ ಕಾಟಣ್ಣನು ನಲ್ಲನಾಯಕ ಸಹ
ಸಿಂಗಯ್ಯ ಮುಮ್ಮುಡಿಯೆನಿಪ ।
ಅಂಗಜರೂಪ ನೆಲಮಾಳಿಗೆಯೊಳು ಆರು
ತಿಂಗಳು ನೀವಿರಿಯೆಂದು ॥೩೧॥

ಸಂಗಡದವರು ಹನ್ನೆರಡು ಮಾನ್ಯರು ಸಹ
ಹಿಂಗದೆ ಇರಿಯೆಂದು ಮಡಗಿ ॥೩೨॥

ಆರು ತಿಂಗಳ ಬೀಯ ಅಡಕೆಲೆ ಸಹವಾಗಿ
ತೋರಿದ ರಾಮಯ್ಯಗಾಗ ।
ಆರು ತಿಂಗಳ ಸನ್ನಹವನು ತೋರಿಸಿ
ಧೀರ ರಾಮನ ಮಡಗಿದನು ॥೩೩॥

ಭಾವಜರೂಪನ ಮಡಗಿ ಬೈಚಪ್ಪನು
ನೋವ ತಾಳಿದನು ಮನದೊಳಗೆ ।
ಬೇಗದಿ ತಿರಿಗಿಬಂದನು ಬೈಚಪ್ಪ
ಖಳರಾಮ ಬಂಟನಿದ್ದೆಡೆಗೆ ॥೩೪॥

ಅಳಿವ ಕಾಲವು ಬಂತು ನಿನಗೆ ಎನುತಲಿ ಈಗ
ಉಳಿಯಲೀಸನು ಕಂಪನೃಪತಿ ॥೩೫॥

ಪಾಪಿಯ ಪ್ರಾಣವ ಕಾಯ್ದೆ ಇಷ್ಟು ದಿನ
ಭೂಪ ಕಂಪಿಲ ಬೇಂಟೆಯಲಿ ।
ಕೋಪವ ಮಾಡಿದ ನನ್ನ ಮೇಲೆನುತಲಿ
ಉಪಾಯದಿ ಬೈಚಪ್ಪ ನುಡಿದ ॥೩೬॥

ಒಡೆಯ ಕಂಪಿಲರಾಯ ಕೋಪಿಸಲ್ಯಾತಕೆ
ಕೊಡುವೆನು ನನ್ನ ಪ್ರಾಣವನು ।
ಪೊಡವಿಯೊಳೀ ಕಾಯ ಇರಬಂದಿಲ್ಲೆಂದು
ತಡೆಯದೆ ಖಳರಾಮ ನುಡಿದ ॥೩೭॥

ಪ್ರಾಣವನಾದರೆ ಕೊಡುವೆನೊ ಪ್ರಧಾನ
ಮಾಣದೆನಗೆ ಉಸುರೆನಲು ।
ಏಣಾಕ್ಷಿ ರತ್ನಿಯರಮನೆಗೆ ಹೋಗಿ
ತಾ ಕೇಣವಿಲ್ಲದೆ ಚೆಂಡ ಬೇಡೆ ॥೩೮॥

ಜಾಣ ರಾಮುಗನ ಕೊಲ್ಲೆಂದು ಕಂಪಿಲರಾಯ
ಮಾಣದೆನ್ನೊಳು ಉಸುರಿದನು ।
ಬಾಣವ್ಯೆದುಳ್ಳ ರೂಪನ ಕೊಲ್ಲಲಾರದೆ
ಪಾಣದೆ [ಬ]ಂದೆ ನಿನ್ನೆಡೆಗೆ ॥೩೯॥

ಬಂದರೆ ಒಳ್ಳಿತಾಯಿತು ಮಂತ್ರಿಗಳದೇವ
ಇಂದೆನ್ನ ಪ್ರಾಣವ ಕೊಡುವೆ ।
ಇಂದೆನ್ನ ಪ್ರಾಣವ ಕೊಡುವೆನು ಬೈಚಪ್ಪ ಕೇ
ಳೆಂದನು ಖಳಬಂಟರಾಮ ॥೪೦॥

ಒತ್ತಿಸಿ ಮೀಸೆಯೆಲ್ಲವನು ಬವರಿಯ ತಿದ್ದಿ
ಕಸ್ತೂರಿ ತಿಲಕವನಿಟ್ಟು ।
ಮುತ್ತಿನ ಕಡುಕಿಕ್ಕಿ ವೀರಜಡೆಯ ಹೆಣೆದು
ಮತ್ತೆ ರಾಮನ ಸರಿಯೆನಿಸಿ ॥೪೧॥

ಜಡಿದು ಸುರಗಿಯನು ಪಿಡಿದೆದ್ದು ಬೈಚಪ್ಪ
ಬಿಡದೆ ರಾಮುಗನೆ ಪೇಳೆನಲು ।
ಕೊಡುವೆ ಜಟ್ಟಂಗಿರಾಮಗೆ ಎನ್ನ ತಲೆಯನು
ನುಡಿದನು ಖಳಬಂಟರಾಮ ॥೪೨॥

ನುಡಿದ ಮಾತನು ಕೇಳುತಲಾಗ ಬೈಚಪ್ಪ
ಬಿಡದೆ ತನ್ನಿಷ್ಟದೈವರನು ।
ತಡೆಯದೆ ನೆನೆದು ಮೇಡ ನೀನೆ ಬಲ್ಲೆಂದು
ಒಡನೆ ಗರ್ಜಿಸಿ ತುಂಡ್ರಿಸಿದನು ॥೪೩॥

ಕಡಿಯಲು ಖಳರಾಮನ ತಲೆ ಬಿದ್ದಿತು
ಒಡನೆ ನಾಲ್ವರು ಬೊಬ್ಬೆಯಿಡುತ ।
ಪೊಡವಿಯೊಳಗೆ ಬ್ರ[ಹ್ಮ]ತ್ಯವಾಯಿತು ಎಂದು
ಒಡನೆ ಬೈಚಪ್ಪನಿಂತೆಂದ ॥೪೪॥

ಮು[ನ್ನ ಸೆರೆ]ಯೊಳಿರ್ದ ಹನ್ನೆರಡು ಮಂದಿಯ
ಚಿನ್ನಭಿನ್ನವಮಾಡಿ ಕಡಿದ ।
ಬಿನ್ನಾಣದಿಂದ ತಲೆಯನು ತಂದು ಬೈಚಪ್ಪ
ಗನ್ನದ ಕೊಲೆಯ ತೋರಿದನು ॥೪೫॥

ಹೆಚ್ಚಿದವರ ಶಿರ ಛೇದನ ಮಾಡಿದ
ಮಚ್ಚರದವರನು ಕಡಿದ ॥೪೬॥

ಇತ್ತ ರಾಮನ ಪ್ರತಿರೂಪಿನ ತಲೆಯನು
ಎತ್ತಿ ತಂದರು ಎಳೆದೆಳೆದು ।
ಅರ್ತಿಯಿನೆಲ್ಲ ಕಂಪಿಲರಾಯ ನೋಡೆಂದು
ಮತ್ತೆ ಸಂಜೆಯಲಿ ತೋರಿದರು ॥೪೭॥

ಈ ತಲೆ ದೇವಿಸೆಟ್ಟಿಯ ಲಿಂಗನ ತಲೆ
ಈ ತಲೆ [ಭಾವ ಸಂಗ]ನದು ।
ಈ ತಲೆ ಕೊಳ್ಳಿಯ ನಾಗನ ತಲೆಯೆಂದು
ಈ ತಲೆ ಗುಜ್ಜಲೋಬನದು ॥೪೮॥

ಈ ತಲೆ ಹಾವಳಿಕಾರ ಹನುಮನ ತಲೆ
ಈ ತಲೆ ಲಿಂಗ ಕಾಟನದು
ಈ ತಲೆ ನಲ್ಲನಾಗನ ತಲೆ [ದ್ಯಾವ]ನದು
ಈ ತಲೆ ಮುಮ್ಮಡಿಸಿಂಗನದು ॥೪೯॥

ಈ ತಲೆ ಮಾದಿಗ ಹಂಪನ ತಲೆಯೆಂದು
ಮಾತನಾಡಿದ ಮಂತ್ರಿಯೊಡನೆ ।
ಯಾತಕಿವರನೆಲ್ಲ ಹೊಯ್ಸಿದೆ ಬೈಚಪ್ಪ
ನೀತಿಯೆ ಕಂಪಿಲ ನುಡಿದ ॥೫೦॥

ಇದು ಸುರಿತಾಳನಗಂಡನೆಂದೆಂಬಂಥ
ಚದುರನ ತಲೆಯ ತೋರಿಸಿದ ।
ಇದು ಕಾಮಭೀಮನ ರೂಪನ ತಲೆಯೆಂದು
ಮುದದಿ ತೋರಿದನು ಪ್ರಧಾನಿ ॥೫೧॥

ಇದು ಸುರಿತಾಳನೇಮಿಯ ಗಂಡನೆಂದೆಂಬ
ಒದಗಿ ಬಲ್ಲಾಳರಾಯನವರ ।
ಎದೆಶೂಲ ಓರ್ಗಲ್ಲರಸಿನಗಂಡನೆಂದೆಂಬ
ಚದುರನ ತಲೆಯ ತೋರಿಸಿದ ॥೫೨॥

ಕೊಂಬೆ ಯಾತಕೊ ಕಾಟಲಿಂಗನ ಎನುತಲಿ
ತಂದೆ ಕಂಪಿಲರಾಯ ನುಡಿದ ।
ಬಂದು ರಾಮನ ಕೊಂದುಹೋದೆ[ನೆ]ಂದರೆ ತಾವು
ಹಿಂದಟ್ಟಿ ಹರಿ[ಯೆ] ಹೊಯ್ಸಿದೆನು ॥೫೩॥

ಈಸು ಮಾಡಿದ ರಾಮ [ಗಾಸಿ]ಯಾದನು ಈಗ
ಭಾಷೆಯವಳ ಕರೆಸೆನಲು ।
ಅರಗಿಳಿ ನುಡಿಯಂಥ ಕನ್ನಡಿಮುಖದವಳ
ಕರೆಸು ರತ್ನಾಜಿರಾಣಿಯನು ॥೫೪॥

ಹಾಸಿದ ಹಾಸಿಕೆ ಪೂಸಿದ ತಲೆಮದ್ದು
ಮಾಸಿದ ಸೀರೆ ಸೊಲ್ಮುಡಿಯು ।

ಭಾಷೆಗೆ ತಪ್ಪದ ರಾಯ ಕಂಪಿಲನೆಂದು
ಆಸೆಕಾತಿಯು ಹೊರಹೊಂಟು ॥೫೫॥

ಅಲ್ಲಲ್ಲಿ ನಿಲ್ಲುತ ಅಲ್ಲಲ್ಲಿ ನೋಡುತ
ಮೆಲ್ಲಮೆಲ್ಲನೆ ಅಡಿಯಿಡುತ ।
ಗಲ್ಲದ ಮೇಲೆ ಕರವಿಟ್ಟು ರತ್ನಾಜಿಯು
ಅಲ್ಲಿಗೆ ಬಂದಳು ನಗುತ ॥೫೬॥

ದೃಷ್ಟಿಸಿ ನೋಡಿದಳು ರಾಮನ ತಲೆಯನು
ಮೆಟ್ಟಿ [ನಿಲ್ವೆನು] ಎಲೋ ಮಂತ್ರಿ ।
ನಿಷ್ಠುರಿ ಹಾಗೆಂದು ನೀಕರಿಸಿ ತಲೆಯನು
ಕಟ್ಟಕಡೆಗೆ ಹಾಕಿಸಿದಳು ॥೫೭॥

ಕಷ್ಟವ ನುಡಿವುತ ಮಂತ್ರಿಯ ರತ್ನಾಜಿ
ಪಟ್ಟಸಾಲೆಯನೊಳಪೊಕ್ಕು ॥೫೮॥

ಕುರುಹಿನ ಕಡೆಯ ಪೊಂಗಲು ಕಂಠಮಾಲೆಯ
ಮರೆಮಾಡಿ ತಂದು ತೋರಿಸಿದ ।
ಕುರುಹನು ತಂದು ತೋರಲು ಕಂಪಿಲರಾಯ
ಬೆರಗಾದನು ದಿಟವೆನುತ ॥೫೯॥

ಮುಂದರಿಯದೆ ವಿಚಾರವ ಮಾಡದೆ
ಹಿಂದಣ ಹಗೆಯುಂಟೆ ನಿನಗೆ ॥೬೦॥

ಮೂರು ಮಾತನು ಕೇಳುವರು ಪ್ರಧಾನರು
ಏರಿತೆ ಹುಚ್ಚು ತಲೆಗೆನಲು ।
ಮೀರಿ ಆಜ್ಞೆಯ ಮಾಡಿದೆ ನೀನು ರಾಮನ
ತೋರೆಂದು ರಾಯನಾಡಿದನು ॥೬೧॥

ನಿರ್ಧಾರವಹುದೇನೋ ಎನಲು ಕಂಪಿಲರಾಯ
ಬಿದ್ದನು ಮುಖ ಅಡಿಯಾಗಿ ॥೬೨॥
ಗಬ್ಬಿ ರಾಮಯ್ಯನ ಕೊಲ್ಲೆಂದು ನಿನಗೆ

ನಾ ಉಬ್ಬಿ ಕೊಟ್ಟೆನೆ ಸಲೆ ಚೀಟಿ ।
ಹೆಬ್ಬುಲಿ ರಾಮನ ತೋರೆಂದು ಕಂಪಿಲ
ನುಬ್ಬಿ ಬಿದ್ದನು ಧರಣಿ ಮೇಲೆ ॥೬೩॥

ಅರಸಿಗೆ ಆರುಬಾಯೆಂಬುದು ತಪ್ಪದು
ಸರಸವೆ ನಿಮ್ಮೊಳು ನಮಗೆ ॥೬೪॥

ಹೊನ್ನಮೊಳೆಯ ಕಠಾರಿಯ ತೆಗೆದಿತ್ತ
ರನ್ನ ಮಾಣಿಕದ ಉಂಗುರವ ।
ಚೆನ್ನನ ಸರ ಕಾಲಪೆಂಡೆಯ ತೆಗೆದಿಟ್ಟ
ಹೊನ್ನ ಒರೆಯ ವಂಕುಡಿಯ ॥೬೫॥

ಹೊ[ನ್ನ] ದೇವಾಂಗ ಹಚ್ಚಡವ ತೆಗೆದುಕೊಟ್ಟ
ಹನಿವ ರಕ್ತದ ತಲೆ ಸಹಿತ ।
ಇನಿತು ತಲೆಯನು ಕಟ್ಟಿದ ಚಂದ್ರಗಾವಿಯ
ಅನುವಾಗಿ ಕೊಟ್ಟ ಕಂಪಿಲಗೆ ॥೬೬॥

ಕೊಲುವಾಗ ಏನೆಂದ ಚೆನ್ನಿಗ ರಾಮಯ್ಯ
ಸೊಲ್ಲ ಹೇಳೆನಗೊಂದು ಬಾರಿ ॥೬೭॥

ಪರಿವಾರ ಮಂತ್ರಿ ರಾಹುತರು ಮನ್ನೆಯರೆಲ್ಲ
ಸ್ಥಿರವಾಗಿ ಬಾಳಲಿನ್ನೆಂದ ।
ದೊರೆಯು ಶಿರೋಮಣಿ ಕಂಪಿಲರಾಯನು
ಧರೆಯನೆಲ್ಲವನಾಳಲೆಂದ ॥೬೮॥

ಅಪ್ಪನ ಮೋಹದ ರಾಣಿ ಚಿಕ್ಕಮ್ಮನು
ಮುಪ್ಪಿನ ಮುತ್ತೈದೆಯಾಗಿ ।
ಕಪ್ಪುಗೊರಳನ ಕರುಣದಲಿ ಸ್ಥಿರಬಾಳಲಿಯೆಂದು
ತಪ್ಪದೆ ಹರಕೆಯ ಕೊಟ್ಟ ॥೬೯॥

ಹಗಲು ಕಗ್ಗೊಲೆಯ ಸಾಹಸಭೀಮ ರಾಮಯ್ಯ
ಮರೆಯದೆ ನಿನಗೆ ಹೇಳೆಂದ ।

ಅಗಣಿತವಾಗಿ ರತ್ನಮ್ಮ ಹೇಳಿದ ಮಾತ
ಉಗುಳ ದಾಟಲಿಬೇಡವೆಂದ ॥೭೦॥

ಎಂದೆಂದು ರತ್ನಮ್ಮ ಹೇಳಿದ ಮಾತನು
ಒಂದಿಷ್ಟು ಮೀರಬೇಡೆಂದ ।
ಕುಂದದೆ ಇಬ್ಬರು ಸ್ಥಿರವಾಗಿ ಬಾಳಲಿ
ಎಂದು ಹರಕೆಯ ಕೊಟ್ಟ ರಾಮ ॥೭೧॥

ಏಳೇಳು ಜಲ್ಮಕ್ಕೆ ಕಂಪಿಲ ತಂದೆಯು
ಏಳೇಳು ಜಲ್ಮಕೆ ರತ್ನಾಜಿ ।
ಏಳೇಳು ಜಲ್ಮಕೆ ತಾಯಾಗಲಿಯೆಂದು
ಲೋಲ ರಾಮಯ್ಯ ಹರಸಿದನು ॥೭೨॥

ಏಳೇಳು ಜಲ್ಮಕೆ ಜಟ್ಟಂಗಿ ರಾಮೇಶ
ಭಾಳಲೋಚನನಾಗಲೆಂದ ।
ಏಳೇಳು ಜಲ್ಮಕೆ ಕಾಟಣ್ಣನಂತಣ್ಣ
ಏಳು ಕಲ್ಮದಲಾಗಲೆಂದ ॥೭೩॥

ಏಳೇಳು ಜಲ್ಮಕೆ ಮಾರಮ್ಮ ಸಿಂಗಮ್ಮ
ಏಳು ಜಲ್ಮಕೆ ಹರಿಯಮ್ಮ ।
ಏಳು ಜಲ್ಮದಿ ಒಡಹುಟ್ಟಿದವರಾಗಲಿಯೆಂದು
ಕೋಳಾಹಳನು ರಾಮ ನುಡಿದ ॥೭೪॥

ಹರಕೆಯ ನಮಗಿತ್ತು ಜಟ್ಟಂಗಿರಾಮನ
ವರಪಾದವನು ಸೇರಿಕೊಂಡ ।
ಹರುಷದಿ ಮೂಡ ಮುಂದಾಗಿ ಕುಳಿತು ರಾಮ
ಶಿರವನಿತ್ತನು ಕಡಿಯೆನುತ ॥೭೫॥

ಬಾಯನೆತ್ತದೆ ಹೊಯ್ದು ಶಿರವನು ನಾನು
ಕಾಯವ ಕಡಿತಂದೆನೆಂದ ।
ಆ ಮಾತ ಕೇಳಿ ಕಂಪಿಲರಾಯ ಶೋಕದಿ
ಭೂಮಿಪ ಧರಣಿಗೆ ಕಡೆದ ॥೭೬॥

ಕಾಯವ ಮರೆದು ಕಂಗಳ ಮುಚ್ಚಿ ಧರೆಯೊಳು
ಬಾಯಬಿಟ್ಟನು ದೆಸೆದೆಸೆಗೆ ॥೭೭॥

ಹೆಸರಡಗಿತು ಕುಮಾರರಾಮಯ್ಯನ
ದೆಸೆಹೋಯಿತು ಕಂಪಿಲನ ।
ಅಸುರರ ದಂಡು ಬಂದರೆ ಕಾದುವರಾರು
ದೆಸೆಯ ಮಾನ್ಯರ ಕಾಣೆನೆಂದ ॥೭೮॥

ಉಕ್ಕುವ ಕೋಪದಿ ರಾಯ ಬೀಳಲು ಮಂತ್ರಿ
ತರ್ಕೈಸಿ ತಬ್ಬಿ ಕುಳ್ಳಿರಿಸಿ ।
ಮುಕ್ಕಣ್ಣ ಸಾಕೆಂದರೆ ರಾಮನಳಿದನು
ದುಃಖವ ಬಿಡು ರಾಯನೆನಲು ॥೭೯॥

ಬಿಡು ಇನ್ಯಾಕೆ ರಾಮನ ಹಂಬಲಯೆಂದು
ಬೇಡಿಕೊಂಡನು ಕಂಪಿಲನ ।
ಗನ್ನ ಘಾತಕಿ ರತ್ನಿಗೆ ರಾಮನ ತಲೆಯ
ಕೊಡಿರೆಂದು ಕಂಪಿಲ ನುಡಿಯೆ ॥೮೦॥

ಖಿನ್ನವಿಲ್ಲದೆ ತೋರೆಂದ ಕಂಪಿಲರಾಯ
ತನ್ನ ಮಂತ್ರಿಯೊಳು ಕಳುಹಿದನು ॥೮೧॥

ಕೊಂಡು ಬಂದರು ಹರಿವಾಣದಿ ತಲೆಯನು
ದಿಂಡೆ ರತ್ನಿಗೊಪ್ಪಿಸಲು ।
ಬಂಡುಮಾಡಿದ ತಲೆಯೆಂದು ರಾಮಯ್ಯನ
ಮಂಡೆಯನೊಲಿದು ನೋಡಿದಳು ॥೮೨॥

[ಗಾಸಿ]ಯ ಮಾಡಿದ ಕುಮಾರರಾಮಯ್ಯನ
ಮೀಸೆಯ ಪಿಡಿದು ನೋಡಿದಳು ।
ಬೇಡ ಹೆತ್ತ ತಂದೆಯ ಅಪಮಾನಕ್ಕೆ
ನಿಲ್ಲದೆ ಎಳಸಿದ ದ್ರೋಹಿ ॥೮೩॥

ಒಲ್ಲದಿರ್ದರೆ ಎನ್ನ ಭವಗೆಡಿಸಿದನೆಂದು
ಗಲ್ಲವ ಪಿಡಿದು ನೋಡಿದಳು ॥೮೪॥

ಜಗದೊಳಗಿನ್ನೇನು ಜಿಗುರಿ ಕಾಡಿದನೆಂದು
ಬಿಗಿದ ತಲೆಯನು ಮೆಟ್ಟಿನಿಂದು ।
ತೆಗದುಹಾಕಿದರು ರಾಮಯ್ಯನ ತಲೆಯನು
ಅಗುಳಿಗೆ ಬಿಸುಟರಾಕ್ಷಣದಿ ॥೮೫॥

ಬೊಬ್ಬಿಟ್ಟು ಅಳುತಿರೆ ರಾಮನ ತಲೆ[ಯಿ]ನ್ನು
ಗಬ್ಬಿ ರಾಮುಗ ನಿಜವೆನುತ ।
ಉಬ್ಬಿದಳಾಗ ಮನದಲಿ ರತ್ನದೇವಿಯು
ತಬ್ಬಿಬ್ಬಗೊಂಡಳಾಕ್ಷಣದಿ ॥೮೬॥

ನೆರೆಗಲಿ ರಾಮನ ಕೊಂದರೆಂದೆನುತಲಿ
ಹಿರಿದು ಹಿರ್ರನೆ ಹಿಗ್ಗಿದಳು ॥೮೭॥

ಇತ್ತ ಕೇಳ್ದಳು ರಾಮ ಸತ್ತ ಸುದ್ದಿಯನವನ
ಹೆತ್ತತಾಯಿ ಹರಿಯಲದೇವಿ ।
ಹೆತ್ತ ಒಡಲನಾಗ ಹೊಯ್ಕೊಂಡು ಮರುಗಿದಳು
ಮತ್ತೆ ಅಂಗಜರಾಮನಳಿದ ॥೮೮॥

ಎಲ್ಲಿಯ ಮಾತು ರಾಮಯ್ಯನೇನಾದನೊ
ಹೊಲ್ಲಹ ಸ್ವಪ್ನವ ಕಂಡೆ ।
ನಿಲ್ಲದೆ ಬಲಗೈಯ ಕಂಕಣ ಮುರಿವುದು
ಬೊಲ್ಲನು ತೊಡಕಿ ಬಿದ್ದಿಹುದು ॥೮೯॥

ಸಂದೇಹವಾಗಿ ಬೈಚಪ್ಪನ ಕರೆಸಿದಳು
ಇಂದು ಮನೆಗೆ ಬಾರದ್ಹೋದ ।
ತಂದಳು ದಾಳಿಯ ರತ್ನಾಜಿ ಎಂದೀಗ
ಅಂದು ಸೋದರರರಳಿದರು ॥೯೦॥

ಹೊಟ್ಟೆಹೊರಕರಂತೆ ಹೊರಸಿಗೆ ತಲೆಯನು
ಗೊಟ್ಟು ಸಾವರೆ ಗಂಡುಮರಿಯೆ ।
ಮೆಟ್ಟಿ ಇರಿದು ಖಂಡೆಯದ ಕೈಮಾಡದೆ
ಪೆಟ್ಟಿಗೊಳಗಾಗೊರೆ ಮಗನೆ ॥೯೧॥

ಮುಟ್ಟಬಂದವರ ಮುಂದಲೆಯನೆಳೆದು ಸುತ್ತಿ
ಹೊಟ್ಟೆಯ ಬಗಿಯದೆ ನೀನು ।
ಹಿಟ್ಟತನದಲಿ ಬಂದವರ ಕೊಲ್ಲದೆ ರಾಮು
ನಿತ್ತೆ ಪ್ರಾಣವನು ನೀ ಮಗನೆ ॥೯೨॥

ಮುತ್ತಿ ಬಂದವರನು ಇರಿದು ಕೊಲ್ಲದೆ ನೀನು
ಇತ್ತೆ ಪ್ರಾಣವನು ನೀ ಮಗನೆ ॥೯೩॥

ಅಟ್ಟಿ ಹಿಡಿವರನೆಲ್ಲ ಮನೆಯ ಬಾಗಿಲ ಮುಂದೆ
ಒಟ್ಟಬಾರದೆ ತಲೆಗಳನು ।
ಪಟ್ಟಣ ಮೊರೆದು ಎದ್ದರೆ ಕಾದಿ ಕೊಲ್ಲದೆ
ಕಟ್ಟಿಗೆ ನೀ ಸಿಕ್ಕಬಹುದೆ ॥೯೪॥

ಬಲ್ಲಿದ ರಾಮನ ನಿಲ್ಲದೆ ಕರೆದೊಯ್ದು
ಮೆಲ್ಲನೆ ಕೊರಳ ಮುರಿದರೊ ।
ಕಲ್ಲು ಮರನ ಹಾಯ್ದು ಅತ್ತಳಾ ಹರಿಯಮ್ಮ
ಬಲ್ಲಿದನರಮನೆಯೊಳಗೆ ॥೯೫॥

ಮತ್ಸರದಿಂದ ಮಾನಿನಿ ರತ್ನಾಜಿಯು
ಎಚ್ಚಳೆ ಗುರಿಮಾಡಿ ನಿನ್ನ ।
ಹೆಚ್ಚಳವಾಯಿತೆ ಕಂಪಿಲರಾಯಗೆ
ಮುಚ್ಚಿತೆ ರಾಮನ ಕಣ್ಣ ॥೯೬॥

ಮಣ್ಣ ಹೊಯ್ಸುವರೆ ನೋಡುವ ಕಣ್ಣುಗಳೊಳು ಮು
ಕ್ಕಣ್ಣನೆ ಎನುತ ಮರುಗಿದಳು ।
ಅಣ್ಣ ರಾಮಣ್ಣನ ನೋಡುವ ಕಣ್ಣಿಗೆ
ಸುಣ್ಣವ ತೊಡೆದಂತಾಯ್ತು ॥೯೭॥

ಹೆಣ್ಣು ಮಕ್ಕಳ ಅರ್ತಿಯ ಸಲಿಸುವ
ತಮ್ಮ ರಾಮನ ಕೊಂದ್ಯಾ ಶಿವನೆ ॥೯೮॥

ಶೂಲದ ಹಬ್ಬಕಿನ್ನಾರ ಮನೆಗೆ ಹೋಹೆ
ಬಾಲೆ ಮರುಗಿದಳು ಸಿಂಗಮ್ಮ ।

ಸಾಲುಮುತ್ತಿನ ಸರ ಲೋಲ ಚಿಂತಕ ನೀನು
ಕಳುಹುವೆಯಲ್ಲೊ ಎಮಗೆ ॥೯೯॥

ಪಟ್ಟೆಪಟ್ಟಾವಳಿ ದೇವಾಂಗ ಆಭರಣ
ಪೆಟ್ಟಿಪೆಟ್ಟಿಗೆಯನು ತುಂಬಿ ।
ಕೊಟ್ಟು ದೀಪಾವಳಿ ಮಾಡಿಪ ರಾಮ ಒಡ
ಹುಟ್ಟಿದ ಅಣ್ಣ ತಾನಳಿದ ॥೧೦೦॥

ಕೆಟ್ಟದೆ ಏಳೆಂಟು ದಿನದೊಳಗೆಲ್ಲ ಗೋ
ಳಿಟ್ಟು ಬೀಳಲಿ ರಾಮನಂತೆ ॥೧೦೧॥

ವಾಲೆಗಳು ಹರಿದವು ಕೀಲು ಕಂಕಣ ಸಡಿಲಿ
ಸಾಲುಮುತ್ತಿನ ಸರ ಹರಿದು ।
ಬಾಲೆ ಸಿಂಗಮ್ಮನು ಬಿಡದುರುಳಿದಳಾಗ
ಲೋಲ ರಾಮಯ್ಯನ ನೆನೆದು ॥೧೦೨॥

ದೇವರೆ ಈ ನೋವ ಆವಾಗ ಮರೆಯಲೊ
ಆವ ಮಕ್ಕಳ ನೋಡಲ್ಯೆಸೆ ।
ಗೋವಿಂದ ಬ್ರಹ್ಮ ಶಿವನೆ ಮೊರೆಯೊ ಎಂದು
ಬೇವುತಿರ್ದಳು ಹರಿಯಮ್ಮ ॥೧೦೩॥

ಮುಡುಬಸ ಕೊಡದೆ ಕೆಡಿಸಿದೆ ಪಾಪಿದೇವರೆ ಎ
ನ್ನೊಡಲಿಗೆ ಕಿಚ್ಚ ಹೊಯ್ಕೊಂಡೆ ।
ಬಡವಿಯ ಮಕ್ಕಳು ಎಲ್ಲರು ಸತ್ತಂತೆ
ಸುಡು ಸಂಸಾರವೆಂದೆನುತ ॥೧೦೪॥

ಬ್ಯಾರೊಂದು ಅರಮನೆಯೊಳು ರಾಮನಾಥನ
ನಾರಿಯರೆಲ್ಲ ಚಿಂತಿಸುತ ।
ವೀರ ಕುಮಾರ ರಾಮಯ್ಯ ನಮ್ಮರಮನೆಗೆ
ಬಾರದ ಕಾರಣವೇನೋ ॥೧೦೫॥

ಎಂದು ರಾತ್ರಿಯ ಸ್ವಪ್ನದೊಳಗೆ ನಮ್ಮರಮನೆ
ನಿಂದ ಹೆಗ್ಗಂಬ ಮುರಿವುದು ।

ಅಂದು ನಮ್ಮಮ್ಮಾಜಿ ಕಳುಹಿದ ಕರಬಾನ
ಒಂದುಳಿಯದೆ ಕೆಡೆದಿಹವು ॥೧೦೬॥

ಹಿರಿಯ ಹೆಂಡತಿ ರಾಮಲದೇವಿ ಸ್ವಪ್ನದಿ
ಇರದೆ ಹೇಳುವ ಸಮಯದಲಿ ।
ಕಿರಿಯಾಕೆ ಹೇಳಿದಳ್ ಅಕ್ಕ ಕೇಳೆನ್ನಯ
ತುರುಬ ನಿಂದುರಿವುದ ಕಂಡೆ ॥೧೦೭॥

ಚಿಕ್ಕ ಹೆಂಡತಿ ತಿಮ್ಮಾಜಿ ಹೇಳಿದಳಂದು
ಲೆಕ್ಕವಿಲ್ಲದ ಸ್ವಪ್ನಗಳನು ।
ಅಕ್ಕರಿಂದಲಿ ಎನ್ನ ಕೊರಳ ಮುತ್ತಿನಹಾರ
ಉಕ್ಕುಳಿಸಿ ಬೀಳ್ವದು ಧರೆಗೆ ॥೧೦೮॥

ರಾಮಗೆ ಹಿಡಿವ ಸತ್ತಿಗೆ ಮುರಿವುದ ಕಂಡೆ
ಪ್ರೇಮದಿ ನಾನಿಟ್ಟ ವಾಲೆ ।
ಭೂಮಿಗೆ ಕಳಚಿ ಬೀಳ್ವದ ಕಂಡೆ ಇರುಳಲಿ
ಕಾಮಾಯಿ ಹೇಳಿದಳು ಕನಸ ॥೧೦೯॥

ಮತ್ತೊಬ್ಬ ಸತಿಯು ಭೂಮಾಯಿ ಹೇಳಿದಳೊಂದು
ಚಿತ್ತಜ ಸಮರೂಪ ರಾಮ ।
ಅರ್ತಿಯಿಂದೇರುವ ಬೊಲ್ಲನು ಸ್ವಪ್ನದಿ
ಸತ್ತುದ ಕಂಡೆ ನಿನ್ನಿರುಳು ॥೧೧೦॥

ಉತ್ತುಮ ಸತಿಯರ ನೋಡಿ ಇಂದಿಗೆ ನಿಮ್ಮ
ಮುತ್ತೈದೆತನಗಳು ಬತ್ತೆ ।
ಚಿತ್ತಜ ಸಮರೂಪ ರಾಮಳಿದನೆಂದು ಅವ
ರತ್ತೆ ಹೇಳಿದಳು ಸುದ್ದಿಯನು ॥೧೧೧॥

ಏನು ಕಾರಣ ರಾಮಳಿದನೆನ್ನುತಲಾಗ
ಮಾನಿನಿಯರೆಲ್ಲ ಕೇಳಿದರು ।
ಏನೆಂದರಿಯೆ ರತ್ನಾಜಿ ಕಂಪಿಲನೊಳು
ಏನು ತಂತ್ರಗಳ ಹೇಳಿದಳೊ ॥೧೧೨॥

ಇಂದ್ರ ಮಹೇಂದ್ರಜಾಲವ ಹೇಳಿ ಕಂಪಿಲಗೆ
ಚಂದ್ರನ ಪೋಲ್ವ ರಾಮನನು ॥೧೧೩॥

ನಾವು [ಪಡೆದ] ಫಲವಿಷ್ಟೆಂದು ತಮ್ಮೊಳು
ತಾವೆ ಮಾತಾಡಿ ನಿಶ್ಚೈಸಿ ।
ಮಾವನಿದ್ದೆಡೆಗೈದು ಕಿಚ್ಚ [ಬೀಳು]ವೆವೆಂದು
ಭಾವಕಿಯರು ತೆರಳಿದರು ॥೧೧೪॥

ದುಕುಲವ ಸಣ್ಣ ನಡುವಿಗುಟ್ಟು ನವರ
ತ್ನ ಖಚಿತದಾಭರಣವನಿಟ್ಟು ।
ಮಕರಂಕನರಸಿಯ ಪಳಿವಂತೆ ರಾಮನ
ಸಖಿಯರೆಲ್ಲರು ತೆರಳಿದರು ॥೧೧೫॥

ಪಿಡಿದು ಕಠಾರಿಯ ಬಲಗೈಯ್ಯಲೈವರು ಎಡಗೈಯ್ಯ
ಕನ್ನಡಿ ನಿಂಬೆ ವಸ್ತ್ರಗಳು ।
ನಡೆದು ಬಂದರು ಕಂಪಿಲರಾಯನೋಲಗಕೆ
ತಡೆಯದೆ ಕಿಚ್ಚ ಬೇಡುವರೆ ॥೧೧೬॥

ನೋಡುತ ಕನ್ನಡಿಯನು ನಲಿದಾಡುತ
ಪಾಡುತಲಾಗ ರಾಮಯನ ॥೧೧೭॥

ಎಳೆಮೀಸೆ ಕೊನೆಮೀಸೆ ಬರುವಂಥ ಭೂಮಿಯ
ದಳಪತಿ ರಾಯರ ಗಂಡ ।
ಕಲೆಯುಳ್ಳ ಚೆಲುವ ಚೆನ್ನಿಗರಾಮನೆನುತಲಿ
ನಲಿದು ಗಂಡನ ಪಾಡಿದರು ॥೧೧೮॥

ಭೀಮ ವಿಕ್ರಮ ರಾಮ ಬಿಟ್ಟಗಲುವರೆ ನಿ
ಸ್ಸೀಮಗೆ ಗುಣವಹುದೇನೊ ॥೧೧೯॥

ಖಾನ ವಜೀರರ ಮೇಲೆ ನೀ ದಂಡೆತ್ತಿ
ಏನ ಹೇಳದೆ ನಮ್ಮೊಡನೆ ।
ಹೊನ್ನಂಬ ಬಿಟ್ಟು ಹೋದರೆ ನಾವು ಬಿಡುವೆವೆ ಹಾ!
ನಿನ್ನನಗಲಿ ಜೀವಿಪೆವೆ ॥೧೨೦॥

ಹಾ ! ಎಮ್ಮ ಬಿಟ್ಟು ಅಗಲುವರೆ ಚೆನ್ನಿಗ ರಾಮ
ಹಾ ! ನಿನ್ನ ಮುಖವನು ತೋರೊ ।
ಇಂದು ರಾಮನ ಸಿಂಹದ ಮೇಲೆ ನೀ ಬಿಟ್ಟು
ಕೊಂದೆಯೊ ಕಂಪಿಲ ಮಾವ ॥೧೨೧॥

ಆವ ಠಾಣ್ಯಕೆ ರಾಮನ ಕಳುಹಿದೆ ಮಾವಾ
ಆವ ರಾಯರ ಮೇಲೆ ದಂಡ ।
ಆವ ರಾಜ್ಯವನು ನೀ ದಾಳಿಯ ಮಾಡೆಂದು
ರಾಮನ ಕಳುಹಿದೋ ಮಾವ ॥೧೨೨॥

ಮಲೆವರಾಯರ ಪಿಡಿ ತರಹೇಳಿ ಈ ಕ್ಷಣ ಒಲಿದು
ಕಳುಹಿದೆಯಾ ಕಂಪಭೂಪ ।
ಚೆಲುವ ರಾಮನ ಎಲ್ಲಿ ಕಳುಹಿದೆ ಎನುತಲಿ
ಬಲುಹಿಂದ ಕೇಳಿ ನುಡಿದರು ॥೧೨೩॥

ಬಲ್ಲಾಳರಾಯನ ಬಳಿಗೆ ನೀ ಕಳುಹಿದೆಯೊ ಓ
ರ್ಗಲ್ಲ ಪ್ರತಾಪನ ಮೇಲೆ ॥೧೨೪॥

ಗುತ್ತಿಯ ಜಗದಪ್ಪರಾಯನ ಠಾಣ್ಯಕ್ಕೆ
ಮುತ್ತಿಗೆಯನು ಕಳುಹಿದೆಯೊ ।
ಮೊತ್ತದಿ ಹುಳಿಯೇರ ಮಾರಗೊಂಡನ ಮೇಲೆ
ಒತ್ತಿ ಕಳುಹಿದೆಯೊ ರಾಮಯನ ॥೧೨೫॥

ಅಂಬಲಿಗಾಗಿ ಅಮೃತಾನ್ನವ ಚೆಲ್ಲಿದೆ
ಕಂಬಳಿಗಾಗಿ ದೇವಾಂಗವನು ।
ಡೊಂಬಿತಿ ರತ್ನಿ ಮಾತನು ಕೇಳಿ ಮಾವಾಜಿ
ಕುಂಭಿನಿಪತಿಯ ಕೊಲ್ಲಿಸಿದೆ ॥೧೨೬॥

ಮಡದಿಯ ಮಾತ ನಿಶ್ಚಯಮಾಡಿ ಕಂಪಿಲ
ಕಡಿಯೆಂದೆ ಚೆಲುವ ರಾಮಯನ ।
ನುಡಿದು ಅಪ್ಪಣೆಯಿತ್ತು ಕಳುಹಿದೆ ನಿನ್ನಯ
ಒಡಲು ಮರುಗದೆ ಮಾವಾಜಿ ॥೧೨೭॥

ಗಂಡನಾಜ್ಞೆಯ ಮೀ[ರ]ದ ಪತಿವ್ರತೆ
ಹೆಂಡಿರುಂಟಲ್ಲದೆ ಮಾವಾ ।
ಹೆಂಡಿರ ಮಾತಿಗೆ ಸುತರ ಕೊಲ್ಲಿಸುವಂಥ
[ಗಂಡಂದಿರುಂಟೆ] ಲೋಕದೊಳು ॥೧೨೮॥

ಶಂಕೆಯಿಲ್ಲದೆ ನಮ್ಮ ಮುತ್ತೈದೆತನಗಳಿಗೆ
ಬೆಂಕಿಯನಿಕ್ಕಲಿಬಹುದೆ ॥೧೨೯॥

ತಂದೆ ಆಜ್ಞೆಯ ಮೀರಬಾರದ ಸತ್ಯಕ್ಕೆ
ಬಂದು ತಲೆಯ ಕೊಟ್ಟನೈಸೆ ।
ಹಿಂದಣ ರಾಯರು ಮುಂದಣ ರಾಯರು
ಮುಂದೆ ನಿಲ್ಲುವರೆ ರಾಮಯನ ॥೧೩೦॥

ನಿನ್ನ ಅಪ್ಪಣೆಯಿಂದ ಕೊಂದ ಧರ್ಮಾತ್ಮಗೆ
ಎಂತು ಕೈ ಎದ್ದವೊ ಶಿವನೆ ।
ಮನ್ನೆಯ ರಾಮನ ಮಡಗಿರ್ದರಾದರೆ
ಏನ ಬೇಡಿದರು ಕೊಡುವೆವು ॥೧೩೧॥

ಅಯ್ಯಯ್ಯೋ ರಾಮನ ಕೊಂದ ಪುಣ್ಯಾತ್ಮಗೆ
ಕೈಯೆಂತು ಎದ್ದವೊ ಶಿವನೆ ।
ದೈವವೆ ಬಲ್ಲುದು ನಮ್ಮ ಸೂರೆಯನೆಂದು
ಐವರಾಡಿದರು ತಮ್ಮೊಳಗೆ ॥೧೩೨॥

ಕಕ್ಕೆಗಾಗಿ ಕಲ್ಪವೃಕ್ಷವ ಕೆಡಿಸಿದೆ
ಎಕ್ಕೆಗಾಗಿ ಬಾವನ್ನವನು ।
ಚಿಕ್ಕಹೆಂಡತಿಯ ಮಾತನು ಕೇಳಿ ಮಾವಾಜಿ
ಲಕ್ಷಾಧಿಪತಿಯ ಕೊಲ್ಲಿಸಿದೆ ॥೧೩೩॥

ನಿಚ್ಚಟ ರಾಮಯ್ಯ ಮುಂಚೆ ಹೋದನು ನಮ
ಗಾಶ್ಚರ್ಯವಾಯಿತು ಈಗ ।
ನಿಶ್ಚಯಿಸಿ ರಾಮನ ಕೂಡೆ ಪೋಪೆವು ನಾವು
ಕಿಚ್ಚ ಪಾಲಿಸೊ ಕಂಪ ಮಾವಾ ॥೧೩೪॥

ಬೇಡಿ ನಿಮ್ಮತ್ತೇರ ಕೂಡಿನ್ನು ಸುಖದಲ್ಲಿ
ನಾಡ ಹಂಚಿಸಿ ಕೊಡಿಸುವೆನು ।
ರೂಢಿಯೊಳಗೆ ರಾಮನ ಬಿಟ್ಟು ಇರುವುದು
ಖೋಡಿಯಲ್ಲವೆ ಕಂಪ ಮಾವಾ ॥೧೩೫॥

ರಂಡೆತನಕೆ ಬೇರೆ ರಾಜ್ಯವ ಕೊಡಿಸುವೆ
ಚಂಡಿತನವ ಮಾಡಬ್ಯಾಡ ।
ಮಂಡಲದೊಳಗೆ ರಾಮನ ಬಿಟ್ಟು ಇರುವುದು
ಭಂಡಲ್ಲವೆ ಕಂಪ ಮಾವಾ ॥೧೩೬॥

ಆಡಿದ ಮಾತ ಕೇಳದೆ ಮೂರ್ಖತನ[ವನು]
ಮಾಡುತಿರಲು ಕೋಪದಲಿ ।
ನೋಡು ಬೈಚಪ್ಪ ನೀನಿದಕೊಂದುಪಾಯವ
ಮಾಡೆಂದು ಮತ್ತೆ ನುಡಿದ[ನು] ॥೧೩೭॥

ಏನ ಹೇಳಿದರು ಕೇಳದ ರಾಮನಾಥನ
ಮಾನಿನಿಯರ ಕರೆದೊಯ್ದು ಮಾ !
ರನು ಮದನನು ಮ[ಡಿದಿಹ] ಠಾವಿಗೆ
ನೀನಿವರನು ಕಳುಹೆಂದ ॥೧೩೮॥

ಪೋಡವೀಶ ನುಡಿದ ಮಾತನು ಕೇಳಿ ರಾಮನ
ಮಡದಿಯರನು ಕರೆದೊಯ್ದು ।
ತಡೆಯದೆ ಬುದ್ಧಿಯ ಹೇಳಿ ತಮ್ಮರಮನೆಗೆ
ನಡೆಯೆಂದು ಕಳುಹಿ ಬೈಚಪ್ಪ ॥೧೩೯॥

ಸತ್ತನೆಂದೆನಬೇಡಿರಿ ನಿಮ್ಮೆಲ್ಲರ
ಚಿತ್ತದೊಳಗೆ ಇರಲೆಂದು ।
ಮೃತ್ಯುಂಜಯನ ವರ ಕರುಣವು ರಾಮಗೆ
ಮತ್ತೆ ಬೈಚಪ್ಪ ಹೇಳಿದನು ॥೧೪೦॥

ರಾಮನ ಮಡದೇರ ಕೊಂದುದುಂಟಾದರೆ
ಭೂಮಿಭಾರದ ದಂಡುಬಹುದು ।

ತಾಮಸ ಬೇಡರುದಿಂಗಳು ರಾಣಿವಾಸವು ನಿ
ಸ್ಸೀಮ ಪ್ರಧಾನ ತಿರುಗಿದನು ॥೧೪೧॥

ನಿಲ್ಲಬೇಕಾರು ತಿಂಗಳು ರಾಣಿವಾಸವು
ಕೊಲ್ಲಬಾರದು ರಾಯನೆನಲು ।
ಬಲ್ಲಿದ ರಾಮುಗ ಸ್ವಾಮಾತವೈದರೆಂ
ಬಲ್ಲಿಗೆ ಸಂಧಿ ಪೂರಾಯ್ತು ॥೧೪೨॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ವಿದಿತ ವಿಶ್ವಾಸದಿ ನೆಲಮಾಳಿಗೆಯೊಳು
ಮುದದಿಂಬಿಟ ಸಂಧಿ ಮುಗಿಯೆ ॥೧೪೩॥

ಅಂತು ಸಂಧಿ ೧೯ಕ್ಕಂ ಪದನು ೨೦೩೫ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨೦

❖

ನೇಮಿಖಾನನಿಂದ ಕುಮ್ಮಟದ ಮುತ್ತಿಗೆ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ದೊರೆಯು ಕಂಪಿಲರಾಯ ಕೊಲಿಸಿದ ಸುದ್ದಿಯು
ಹರಿಯಿತು ಭೂಲೋಕದೊಳಗೆ ।
ಕುಮಾರರಾಮನ ಕೊಲಿಸಿದ ಸುದ್ದಿಯ
ಸೀಮೆಯ ರಾಯರು ಕೇಳಿ ॥೩॥

ನೆಟ್ಟನೆ ಕುಮಾರರಾಮನಳಿದ ಸುದ್ದಿ
ಕೊಟ್ಟದ ಬೇಡರು ಕೇಳಿ ।
ಕಟ್ಟಿದೋಲೆಯು ವಸುಧೆಗೆ ದಿಕ್ಕುದಿಕ್ಕುಗೆ
ಹುಟ್ಟಿತು ಸುದ್ದಿ ಡಿಳ್ಳಿಯಲಿ ॥೪॥

ರಾಮನಳಿದ ಸುದ್ದಿ ಆಗ ಸುರಿತಾಳ ಕೇಳಿ
ಕೋಮಲೆಯರ ಮಾತಿಗಾಗಿ ।

ಈ ಮಹಿಯೊಳು ಹೊಡೆಸಿದನಂತೆ ಕಂಪಿಲ
ಪ್ರೇಮದಿ ಸುದ್ದಿ ಕೇಳಿದನು ॥೫॥

ಚಿನ್ನದ ಒರಗು ಮೂಡೆಯ ನೆಮಮಿ ಸುರಿತಾಳ
ತನ್ನ ಮಂತ್ರಿಯ ಕರೆಸಿದನು ।
ಚೆನ್ನರಾಮನ ಕಂಪಿಲ ಕೊಲಿಸಿದ ಸುದ್ದಿ
ನಿನ್ನೆ ಹುಟ್ಟಿತು ಪುರದೊಳಗೆ ॥೬॥

ಹಮ್ಮಿನ ಮಾತನಾಡಿದನು ಸುರಿತಾಳನು
ನಿರ್ಮಿಸು ನೇಮಿ ಕಾಳಗವ ॥೭॥

ಯಾಕೆ ಈ ಮಾತ ನುಡಿಯಬಪ್ಪುದೆ ನೀನು
ಭೂಕಾಂತಗೆ [ಮರಣ]ಹುದೆ ।
ಯಾಕೆಂದು ನೇಮಿ ಮುಖವ ತಿರುಹಿದನಂದು
ಲೋಕಕ್ಕೆ ಇದು ಸಟೆ ಮಾತು ॥೮॥

ಸಟೆಯೆಂದ ಮಾತ ಕೇಳುತ ಸುರಿತಾಳನು
ಘಟ್ಟಿಸಿ ನುಡಿದ ಮಂತ್ರಿಯನು ।
ಪಟುತರವಾದ ಖಾನರ ಹೋಗಹೇಳಿದ
ದಿಟದಿ ಕುಮ್ಮಟದುರ್ಗಕಾಗಿ ॥೯॥

ಹಣವ ಗಳಿಸಿಕೊಂಡು ವಿನಯದಿ ಎನ್ನಯ
ಮನೆಯ ಒಡವೆಯ ಹಾಳು ಮಾಡಿ ॥೧೦॥

ಕದನವೆಂದರೆ ಹೋಗಲಮ್ಮೆಯೊ ನಿನ್ನಯ
ಹದನನು ನಾವ್ ಬಲ್ಲೆವೆನುತ ।
ಒದಗಿದ ಹುಯ್ಯಲೊಳಟ್ಟಿ ಹೊಯ್ಸಿಕೊಂಡ
ಬೆದರುಂಟು ನಿನಗೆಂದ ನೇಮಿಯನು ॥೧೧॥

ಹಲವು ಮಾತುಗಳಾಡಿ ಒಡವೆಯ ನೀ ತಿಂದು
ಬಲುಜೀವನ ಬುದ್ಧಿ ನಿನಗೆ ।
ಕಲಹವೆಂದರೆ ಹೋಗಲಮ್ಮೆಯೊ ಬಿಡು ನಿನ್ನ
ದಳ ಹೇಡಿತನದ ಮಾತುಗಳ ॥೧೨॥

ಭೂಪತಿ ಭೂಪಾಲ ಕೋಪವ್ಯಾತಕೆ ದೇವ
ಕಾಪಾಲಿ ಕೃಪೆಯುಳ್ಳವನು ।
ಭೂಪ ಕಂಪಿಲನ ಕುಮಾರರಾಮನಳಿದರೆ
ಆ ಪ್ರಜೆ ಪರಿವಾರನೆಲ್ಲ ॥೧೩॥

ಕರೆಸು ಚರರ ಕಳುಹಿಸು ಕುಮ್ಮಟಕತ್ತ
ಬೆರಸಿ ಸುದ್ದಿಯ ಪತಿಕರಿಸು ।
ನೆರೆಸು ವಾರುವವನು ಮನ್ನೆಯರುಗಳನು
ಬರಿಸೊ ದೇಶಾಧಿಪತಿಗಳನು ॥೧೪॥

ಅಚ್ಚಾಳು ಕುದುರೆಯ ಪಯಣವ ಮಾಡಿಸೊ
ಸುಚಿತ್ತದಿ ಸುರಿತಾಳನೆನಲು ॥೧೫॥

ಡಿಳ್ಳಿಯ ಅರಸು ಸುರಿತಾಳ ಕುಮ್ಮಟಕತ್ತ
ಒಳ್ಳೆಯ ಬೇಹಿನ ಚರರ ।
ನಿಲ್ಲದೆ ಕಳುಹಲವರು ಬಂದು ಪಯಣವ
ಮೆಲ್ಲನಿಳಿದರು ಗಂಗಾ ತಡಿಯ ॥೧೬॥

ಬಿಟ್ಟಲ್ಲಿ ಬಿಡದೆ ಬಂದರು ಬೇಹಿನ ಚರರು
ತಟ್ಟನೆ ಕುಮ್ಮಟಕಾಗಿ ।
ಪಟ್ಟಣಗಳ ಹೊಕ್ಕು ಸುದ್ದಿ ವಾರ್ತೆಗಳನು
ಮುಟ್ಟಿ ಕೇಳಿದರು ಅಲ್ಲಲ್ಲಿ ॥೧೭॥

ಮನೆಮನೆ ಅಂಗಡಿ ಬೀದಿಬೀದಿಗಳಲ್ಲಿ
ಜನ ಬಹುಜನರು ಇದ್ದಲ್ಲಿ ।
ತನುಜ ರಾಮುಗ ಸತ್ತನೆಂಬ ವಾರ್ತೆಗಳನು
ಮನಮಟ್ಟಿ ಕೇಳಿದರಾಗ ॥೧೮॥

ಯಾತಕೆ ರಾಮಯ್ಯ ಸತ್ತನೆಂದೆನುತಲಿ
ಭೀತಿಗೊಳ್ಳುತಲಿ ಕೇಳಿದರು ।
ಆತು ಇಡಲು ಚೆಂಡು ಅರಮನೆಯೊಳು ಬೀಳೆ
ಭೀತಿಗೊಳ್ಳುತ ಕೇಳಹೋದ ॥೧೯॥

ನಿಂದು ರಾಮಯ್ಯನು ಚೆಂಡ ಕೇಳಲು
ಹೋದ ಕಂದರ್ಪನ ವಿರಹದಲಿ ।
ಚಂದಿರವದನೆಗೆ ಒಳಗಾಗದೆ ತಾನು
ಬಂದನು ಹೊರಯಾಕೆ ಹೋರಟು ॥೨೦॥

ಚೆಂದದಿ ರಾಮ ಹೋಗಲು ಕಂಡು ರತ್ನಾಜಿ
ನಿಂದಳು ವಿರಹತಾಪದಲಿ ।
ಬಂದ ಕಂಪಿಲನೊಳು ಇಲ್ಲದೊಂದನು ಹೇಳೆ
ತಂದೆಯು ಮಗನ ಕೊಲಿಸಿದನು ॥೨೧॥

ಕೇಳಿಯೆ ಸುದ್ದಿಯನಾಗ ಊರೊಳಗೆ ಅಲ್ಲಲ್ಲಿ
ಪಾಳ್ಯಪಾಳ್ಯಗಳನು ತಿರುಗಿ ।
ಕುಮ್ಮಟವನು ಬಿಟ್ಟು ತೆರಳಿದರು ಬೇಗದಿ ಚಿಕ್ಕ
ಡಿಳ್ಳಿಗೆ ಬಂದರಾಗ ॥೨೨॥

ಅಲ್ಲಿಂದ ಮುಂದಕೆ ತೆರಳಿಬಂದರು ಜೀಯ
ಡಿಳ್ಳಿಯ ಶೃಂಗಾರವನಕೆ ।
ಬಲ್ಲಿದ ಚರರೋಡಿ ಬಂದರು ಆ ಕ್ಷಣ
ವಲ್ಲಭ ಸುರಿತಾಳನೆಡೆಗೆ ॥೨೩॥

....
.... ದಿಟವಹುದೆಂದು ನುಡಿದರು ।
ರಾಯ ಸುರಿತಾಳ ಕರೆಸಿದ ನೇಮಿಯನಾಗ
ದಾಯಾದಿ ಬಂದಿತು ನಮಗೆಲ್ಲವು ॥೨೪॥

ಸ್ತ್ರೀಯಳ ಮಾತಿಗೆ ಕೋಪಿಸಿದ ಕಂಪಿಲ
ಬಯಲಾಯಿತು ಕುಮ್ಮಟವು ॥೨೫॥

ಇದು ನಿಶ್ಚಯವಹುದೆನುತ ಸುರಿತಾಳನು
ಹದನ ಹೇಳಿದ ಮಂತ್ರಿಯೊಡನೆ ।
ಚೆದುರ ಕುಮ್ಮಟಕೆ ನಿನ್ನ ಕುದುರೆ ಮಂದಿಯು ಸಹ
ಸದಳ ಸಹಿತ ತೆರಳೆಂದ ॥೨೬॥

ಎಂದ ಮಾತನು ಕೇಳುತ ನೇಮಿಖಾನನು
ವಂದನೆಯನು ಮಾಡಿಕೊಂಡ ।
ಬಂಧಿಸಿ ನಾಡ ಸೆರೆಯ ಪಿಡಿತಹೆನೆಂದು
ನಿಂದು ಪಾಚ್ಛಾವುಗಡ್ಡಬಿದ್ದ ॥೨೮॥

ಅಡ್ಡಬಿದ್ದ ನೇಮಿಯ ಕಂಡು ಸುರಿತಾಳನು
ದೊಡ್ಡ ತೇಜಿಯ ತರಿಸಿದನು ॥೨೯॥

ಮೂರು ತಿಂಗಳ ಮೇಲೆ ಅರ್ಧ ದಿವಸದೊಳು
ಧಾರುಣಿಪತಿ ಸುರಿತಾಳ ।
ಭೋರನೆ ಕೂಚೆ ಮಾಡಿಸಿದ ಕುಮ್ಮಟಕೆಂದು
ವೀರ ನೇಮಿಯ ಕಳುಹಿದನು ॥೨೯॥

ಕಳುಹಲೊಡನೆ ಹದಿನೆಂಟು ಸಾವಿರ ಗಜ
ದಳಪತಿ ನೇಮಿಯು ಕಂಡ ।
ಹೊಳೆವ ನ್ಯಾಜದ ಖಾನಖಾನರೆಲ್ಲರು ಎದ್ದು ನಡೆವುದು
ದಳ ಲಕ್ಷ ಮೊದಲಾಗಿ ॥೩೦॥

ಭೇರಿ ತಮ್ಮಟೆ ಗಿಡಿಬಿಡಿ ನಿಸಾಳ ಕೊಂಬು
ವೀರ ವಾದ್ಯದ ರಭಸದಲಿ ।
ಭೂರಿ ಕಾಲಾಳು ಒಂಬತ್ತು ಲಕ್ಷವು ಸಹ
ಭೋರನೆ ಬೇಗ ತೆರಳಿದರು ॥೩೧॥

ಕರೆಕರೆ ಖಾನಮಲುಕ ಗುಜ್ಜ ರಾಹುತರ
ಕರೆಕರೆ ಅರೆಯ ದೊರೆಯ ।
ಕರೆಕರೆ ಗೌಳಗುಜ್ಜರ ರಾಹುತರನ್ನು
ಬರೆದು ವಾಲೆಯ ಕಳುಹಿದನು ॥೩೨॥

ಲಾಳವದೇಶದ ಮರಾಳಖಾನರಿಗೆಲ್ಲ ಹೇಳಿ
ವಾಲೆಯ ಕಳುಹಿದನು ಬ ।
ಹಳ ಪಂಥದ ಕುಮ್ಮಟದ ರಾಮುಗ ಸತ್ತ
ವೀಳ್ಯ ಬಂತಿತು ನಮಗೀಗ ॥೩೩॥

ಬರಹೇಳಿದೈವತ್ತುಆರು ದೇಶದರೆಲ್ಲ
ಬರಹೇಳೆ ಕನ್ನೋಜಿಯವರ ।
ನೆರೆದಿತು ಸುರಿತಾಳನ ವಾಲಗಕಾಗ
ತೆರಳಿತು ಕುಮ್ಮಟಕಾಗಿ ॥೩೪॥

ಕರೆಸಿದ ಸಿಂಧುಮರಾಳದೇಶದವರ
ಕರೆಸಿದ ಮಗಧರಾಯರನು ।
ಕರೆಸಿದ ಮಾಳವ ಮನ್ನೆಯರನು ಬೇಗ
ಕರೆಸಿ ವೀಳ್ಯವನಿತ್ತನಾಗ ॥೩೫॥

ದುರ್ಜಟಿಖಾನ ಬಬ್ಬಿರಖಾನ ಸೈದ್ರಲ್ಲಿ
ಜಿಜ್ಞಾಟಿ ಹರಟೆಯಖಾನ ।
ಹೆಜ್ಜೆಹೆಜ್ಜೆಗೆ ಗೆಲ್ವ ಜಂಬಾರಖಾನನು
ಲುಬ್ಧಖಾನನು ಒದಗಿದರು ॥೩೬॥

ರಾರಾಜಿಖಾನನು ರಾಜೆಯಖಾನನು
ಮಾಮುದ್ದುಸಾಹೇಬಖಾನ ॥೩೭॥

ಎಂಬತ್ತುಸಾವಿರ ಕುದುರೆ ಕಟ್ಟಿಹನೊಬ್ಬ
ಡೊಂಬಿ ತುಂಬೂರನೆಂಬುವನು ।
ತುಂಬಿದ ಜೋಡು ಸಿಂಗಾಡಿಯ ತುರುಕ
ರು ಬಂದರು ಸರುಇತಾಳನೆಡೆಗೆ ॥೩೮॥

ಎಕಲಾಸಖಾನ ಎದ್ದೂಲಖಾನರು
ಮತ್ತೊಬ್ಬ ಮಖರಂಕಖಾನ ।
ಸಕಲ ವೈರಿಗಳಿಗೆ ಶೂಲವೆಂದೆನಿಸುವ
ರುಕುಮಸಖಾನ ಸಹವಾಗಿ ॥೩೯॥

ಬಬಾಜಿಖಾನನುಮಬ್ದೂಲಖಾನನು
ಬಾಬಖಾನ ಮುಸಲಖಾನ ಸಾ ।
ಹೇಬಖಾನನು ಸಕಲಲಿಖಾನನು
ಹೈದರಖಾನ ಮೊದಲಾಗಿ ॥೪೦॥

ನೆರೆದು ಸುರಿತಾಳರಾಯನೋಲಗದೊಳು
ಬರಹದೊಂಬತ್ತು ಲಕ್ಷ ವಾಜಿ ।
ಸಾರಿಹೇಳಲು ಕೇಳುತ ಖಾನಖಾನರು
ಹೇರುಗಳ ಬಂಡಿಯ ತುಂಬಿ ॥೪೧॥

ಭೋರೆಂದು ತಿತತಿಯ ಸವರಿಸಿಕೊಂಡಾಗ
ಸಾರಾಯಗಳನು ತುಂಬಿದರು ।
ಸಾರಿಸಿದನು ನೇಮಿ ಪಾಳೆಯವೆಲ್ಲಕ್ಕೆ
ಭೇರಿಸನ್ನೆಯ ಮಾಡಿಸುತಲಿ ॥೪೨॥

ಕಹಳೆಗಳೊದರೆ ಪಾಳೆಯಕೆಲ್ಲ ಸಾರುತ
ನಾಳೆ ಪಯಣಗಳು ನಿಜವೆನುತ ।
ವೀಳ್ಯಗಳನು ಕೊಟ್ಟು ಬೆಳಗಾಗೊ ಹೊತ್ತಿಗೆ
ಪಾಳೆವ ತೆರಳಬೇಕೆಂದ ॥೪೩॥

ಗಂಗ ಸಾಗರದ ಕೋಟಿಗೆ ಒಂದು ಸಾವಿರ
ಸಡಗರನೇನ ಬಣ್ಣಿಸುವೆ ॥೪೪॥

ಆಯತವನು ಮಾಡಿ ಆಹಾರವೆಲ್ಲವ
ಜಾಯಿಕಾಯಿ ಜಾಪತ್ರೆಗಳ ।
ಬೇಯಿಸಿ ರೊಟ್ಟಿ ತಿತ್ತಿಗಳನೆ ತುಂಬಿಸಿ
ಆಯತವಾಗಿ ನಿಂದಿಹರು ॥೪೫॥

ಗಕ್ಕನೆ ತುರುಕರ ದಂಡೆದ್ದು ನಡೆಯಿತು
ಚಿಕ್ಕಡಿಳ್ಳಿಯ ಪಟ್ಟಣ[ದಿ] ।
ಉಕ್ಕಿತು ಕೆಂಧೂಳು ಸೂರ್ಯಮಂಡಲಕಾಗಿ
ದೊಕ್ಕನೆ ತಾಕಿ ಮುಸುಕಿತು ॥೪೬॥

ತೆಗೆದು ತೆರಳಿತು ಕುದುರೆಗಳ ಫೌಜುಗಳಲ್ಲಿ
ಒಗಮಿಗಿಲಾಗಿ ನಡೆದರು ।
ಅಗಣಿತ ಹರುಷದಿ ಭಾಗೀರಥಿಯ ದಾಂಟಿ
ಸೊಗಸಿಂದ ತೆರಳಿತು ದಂಡು ॥೪೭॥

ಹತ್ತು ಸಾವಿರ ವಾಜಿ ಇತ್ತರದಲಿ ನಡೆಯೆ
ಮೊತ್ತದ ಕಾಲಾಳು ಸಹಿತ ॥೪೮॥

ಉರವಣಿಸುತ ದಂಡಿನ ಚೂಣಿ ನಡೆಯಿತು
ಮಿರುಜೆಯ ಪಟ್ಟಣಕಾಗಿ ।
ಮಿರುಜೆಯ ಪಟ್ಟಣದಿಂದ ನೇಮಿಯ ದಂಡು
ಇರದೆ ಅರುಣಾವತಿಗಿಳಿದು ॥೪೯॥

ಎಂಟು ಪಯಣವನು ನಾಲ್ಕು ಪಯಣವ ಮಾಡಿ
ಒಂಟೆಯ ಹಿಂಡ ನಡೆಸಿದರು ॥೫೦॥

ಹತ್ತು ಪಯಣವನು ಐದು ಪಯಣ ಮಾಡಿ
ಒತ್ತಿ ಮುಂದಕೆ ನಡೆವಾಗ ।
ಸುತ್ತಣ ಲೋಕದೊಳಗೆ ಇಹರು ಎಲ್ಲ
ಎತ್ತಣ ಮಾರಿ ಬಂತೆನುತ ॥೫೧॥

ವಿಪರೀತದ ದಂಡು ನಡೆಯಿತು ಮುಂದಕ್ಕೆ
ಅಪರಿಮಿತದಿಂದ ತೆರಳಿತು ।
ಕುಪಿತ ಮಂತ್ರಿಯ ಕರೆಸಿದ ನೇಮಿಖಾನನು
ಉಪಮಿಸೊ ಒಂದು ಶಕುನವ ॥೫೨॥

ಸಾಕು ಪಂಥವು ಮುಂದಕೆ ಇಲ್ಲಿಂದಲಿ
ಶಕುನವಿಲ್ಲದೆ ಹೋಗಬ್ಯಾಡ ।
ಮಕರಂಕರೂಪ ಸುರಿತಾಳನ ಮಂತ್ರಿಯು
ಶಕುನವ ನೋಡ ಹೇಳಿದನು ॥೫೩॥

ನೂರೊಂದು ಶಾಸ್ತ್ರಿಗಳನು ಕರೆಸಿದನಾಗ
ಕಾರಣಿಕವನು ಪೇಳೆಂದ ॥೫೪॥

ಗಂಭೀರವುಳ್ಳಂಥ ಟಗರ ತೆರಿಸಿ ನೇಮಿ
ಸಂಭ್ರಮದಲಿ ತನ್ನ ಪೆಸರ ।
ಹೆಂಬೇಡಿಯಾದ ಟಗರ ತರಸಿ ನೇಮಿ
ತುಂಬಿ ರಾಮನ ಹೆಸರಿಡಿಸಿ ॥೫೫॥

ತನ್ನಯ ಪೆಸರಿನ ಟಗರಿಗೆ ಬಂದಿತು
ಉನ್ನತ ಮುತ್ತಿನ ದಂಡೆ ।
ಮನ್ನೆಯ ರಾಮನ ಪೆಸರಿನ ಟಗರಿಗೆ
ಬಣ್ಣದ ಹೂವಿನ ದಂಡೆ ॥೫೬॥

ಕಡುಗಲಿ ನೇಮಿಯ ಪೆಸರಿನ ಟಗರಿಗೆ
ಹಿಡಿಯೆ ಮುತ್ತಿನ ಸತ್ತಿಗೆಯು ।
ಬಡವನು ಎಂದು ರಾಮಯ್ಯನ ಟಗರಿಗೆ
ಕೊಡೆಯ ಸತ್ತಿಗೆ ಪಿಡಿಸಿದನು ॥೫೭॥

ಬೊಬ್ಬಿಡುತಲಿ ಟಗರಿನ ಕಿವಿಯೊಳಗಾಗ
ಅಬ್ಬರಿಸುತ ಹೋಗಬಿಡಲು ।
ನಿಬ್ಬರದಲಿ ಸನ್ನೆದೆಗದವು ಹಿಂದಕ್ಕೆ
ಹಬ್ಬಿಗೆಯಲ್ಲಿ ತಾಕಿದವು ॥೫೮॥

ನಾಲ್ಕು ಸನ್ನೆಗೆ ನೇಮಿಯ ಟಗರೋಡಿತು
ತಾಕಿತು ತಲೆಮುರಿವಂತೆ ।
ನೂಕಿ ತಿವಿಯೆ ಗುಂಡಿಗೆಯನು ಒಡೆಹಾಯೆ
ಸಾಕೆಂದು ನೇಮಿ ನಿಲ್ಲಿಸಿದ ॥೫೯॥

ಕೋಳಿಯ ಹುಂಜನ ತರಹೇಳಿ ನೇಮಿಯು
ಆಳ ಹರಿಯಬಿಡಲಾಗ ।
ಊಳಿಗದವರು ತಂದಿರಿಸಲು ನಿಮಿಷಕೆ
ಕಾಳಗ ಮಾಡಹೇಳಿದನು ॥೬೦॥

ಬಲ್ಲೆಹ ಹುಂಜನ ತರಿಸಿ ನೇಮಿಯಖಾನ
ನಿಲ್ಲದೆ ಕವಳ ಹಾಕಿಸಿದ ।
ಹೆಂಬೇಡಿ ಹುಂಜನ ತರಿಸಿ ನೇಮಿಯಖಾನ
ಅಲ್ಲಿ ರಾಮನ ಪೆಸರಿಡಿಸಿ ॥೬೧॥

ಹೊಸ ಸಾಣೆಯ ಹಿಡಿಸಿದ ಕತ್ತಿಯ ತನ್ನ
ಹೆಸರ ಹುಂಜಕೆ ಕಟ್ಟಿಸಿದನು ।

ಮಸೆಯದ ಮೊಂಡಗತ್ತಿಯ ತಂದು ರಾಮನ
ಹೆಸರ ಹುಂಜಕೆ ಕಟ್ಟಿಸಿದನು ॥೬೨॥

ಎರಡು ಹುಂಜನ ಕಾಣದಟ್ಟಿಸಿ ಮುಖದೊಳು
ಉರವಣಿಸಿಯೆ ಹೋಗಬಿಡಲು ।
ಹೊರಳಿ ತಪ್ಪಿಸಿಕೊಂಡು ರಾಮನಾಥನ ಹುಂಜ
ಕೊರಳ ಕಚ್ಚಿಯೆ ಒದೆವಾಗ ॥೬೩॥

ಒಂದು ಬಾರಿಗೆ ನೇಮಿಯ ಹುಂಜನೊಳಪೊಕ್ಕು
ಸಂದು ಹರಿಯಲೊದೆವಾಗ ।
ನಿಂದಿರ್ದ ಖಾನರು ನೋಡಿ ಬೆರಗಾದರು
ನೊಂದು ಮೂಗಿಗೆ ಬೆರಳಿಟ್ಟು ॥೬೪॥

ನಮ್ಮ ಹುಂಜನು ಟಗರೋಡಿತು ಜಯವಿಲ್ಲ
ನಿಮ್ಮ ಚಿತ್ತದಲಿ ಇದ್ದಂತೆ ।
ಬ್ರಹ್ಮದೇವರ ಕೃಪೆ ರಾಮಗೆ ಉಂಟೆಂದು
ನಮ್ಮ ಶಾಸ್ತ್ರಕೆ ಅಳವಲ್ಲ ॥೬೫॥

ಹಿಂದಕ್ಕೆ ತಿರುಗಿಹೋದರೆ ಸುರಿತಾಳನು
ಸಂದು ಹರಿಯೆ ಹೊಯ್ಸುವನು ।
ಮುಂದೇನು ಬಂದುದ ಕಾಬೆನೆನುತ ನೇಮಿ
ಬಂದನು ಮುಂದಕ್ಕೆ ತೆರಳಿ ॥೬೬॥

ತೆರಳಿತು ದಂಡು ಚತುರಂಗಬಲ ಸಹವಾಗಿ
ತೊರಗಲ್ಲು ಬಾದಾವಿ ಬಳಿಗೆ ।
ಹರಿದು ದಾಳಿಯ ಮಾಡಿ ನಾಡನೆಲ್ಲವ ಸುಟ್ಟು
ಭರದಿಂದ ದಂಡು ನಡೆಯಿತು ॥೬೭॥

ತೊರಗಲ್ಲು ಬಾದಾವಿ ಮುಂದೆ ನೇಮಿಯ ದಂಡು
ಕರೆಸಿದ ಮನ್ನೆಯರನೆಲ್ಲ ।
ಪರಿಪರಿ ವಸ್ತ್ರ ವೀಳ್ಯಗಳನೆಲ್ಲರಿಗಿತ್ತು
ಸರ್ವ ದಂಡೆಲ್ಲ ಬರುವಾಗ ॥೬೮॥

ಗಲ[ಗಲಿ] ವಿಜಯಪುರದ ನಡುವೆ ಬಂದು
ಚೆಲುವ ನೇಮಿಯು ದಂಡ ಬಿಡಿಸೆ ।
ನೆಲ ಬೆಸಲಾದಂತೆ ತುರುಕ ನೇಮಿಯ ದಂಡು
ಇಳಿಯಿತು ಮೂಗಾವುದದಿ ॥೬೯॥

ನೇಮಿಯ ದಂಡಿನ ರಭಸಕ್ಕೆ ರಾಮನ
ಸೀಮೆಯೆಲ್ಲವು ಹೊಲಸೆದ್ದು ॥೭೦॥

ಕಾಡಮೊಲ್ಲೆಯ ಸೊಪ್ಪ ಓಡಿಲಿ [ಹು]ರಿತಿಂಬ
ಬೇಡನಾಯಕ ಮಕ್ಕಳೆಲ್ಲ ।
ಕೂಡೆ ಕೈಯ್ಯಲಿ ನಾಯಿ ಬಡಿಕೋಲು ಸಹವಾಗಿ
ಬೇಡರು ಗೂಳೆಯ ನಡೆಯೆ ॥೭೧॥

ನೆತ್ತಿಮೇಲಣ ಮೊಟ್ಟೆಗಂಟು ಬೇಡರಿಗೆಲ್ಲ
ಹಸ್ತದ ಮೇಲಣ ಗಿಡುಗ ।
ಇತ್ತರದಲಿ ಹಕ್ಕಿಯ ಗೂಡು ಬೇಡರು
ಹೊಕ್ಕು ಗೂಳೆಯದೊಳು ನಡೆಯೆ ॥೭೨॥

ಹೆಬ್ಬಲೆ ಕಿರುವಲೆ ಮೊಲವಲೆ ಕಾಲ್ವಲೆ
ಗುಬ್ಬಿಯ ಹಕ್ಕಿಯ ಬಲೆಯು ।
ಸರ್ಬಮೃಗವ ಕೊಂದು ಬೇಂಟೆಯನಾಡುವ
ಕಬ್ಬಾರ ಗೂಳೆಯ ನಡೆಯೆ ॥೭೩॥

ಕುರಿಯ ಹಿಂಡುಗಳನ್ನು ತೆರಳಿಸಿಕೊಂಡಾಗ
ಮರಿಗಳ ಹೆಗಲಿಗೆ ಹೊತ್ತು ।
ಮರುಗುವ ಹೆಂಡಿರ ಕೈಯ್ಯ ಪಿಡಿದುಕೊಂಡು ಗೊ
ಲ್ಲರ ಗೂಳೆಯ ನಡೆಯೆ ॥೭೪॥

ದೆಸೆಯುಳ್ಳ ಗಟ್ಟಣಿಗೆ ಕೊಡತಿ ಹೆಗಲ ಮೇಲೆ
ಅಗಸರ ಗೂಳೆವು ನಡೆಯೆ ॥೭೫॥

ಓದುವ ಹಲಗೆ ಕಡತ ಬಳಹವುಗಳು
ವೇದದ ಪೆಟ್ಟಿಗೆ ಮುಂದೆ ।

ಓದಿಸುವಣ್ಣಗಳೊಡನೆ ಹೆಮ್ಮಕ್ಕಳು
ಸಾಧಿಸಿ ಗೂಳೆವು ನಡೆಯೆ ॥೭೬॥
ಪಟ್ಟಣಸ್ವಾಮಿಯ ಕೂಡಿಕೊಂಡಾಗಲು
ಸೆಟ್ಟರ ಗೂಳೆಯ ನಡೆಯೆ ॥೭೭॥

ಅಡಿಗಲ್ಲು ತಿದಿಮುಟ್ಟು ಪಿಡಿವ ಇಕ್ಕಳ ಕೈಯ್ಯ
ಬಿಡದೆ ಕೆತ್ತುವ ಉಳಿ ಬಾಚಿಗಳು ।
ಎಡದ ಕೈಲಿ ಉಳಿ ಕೊಡತಿಯು ಸಹವಾಗಿ
ಬಡಗಿ ಕುಂಬಾರು ತಾ ನಡೆಯೆ ॥೭೮॥

ಅಚ್ಚ ಕುಂಚಿಗೆಗಳು ನಿಚ್ಚಲುಂಕೆಯ ಮಾಳ್ಪ
ಹಚ್ಚಡ ಕುಂಚಿಗೆಗಳನು ।
ರಚ್ಚುಹೊರುವ ಮಕ್ಕಳನೆತ್ತಿಕೊಳುತ
ಲಿ ಜಾಡರ ಗೂಳೆವು ನಡೆಯೆ ॥೭೯॥

ಮಿಕ್ಕ ನಾನಾ ಜಾತಿಗಳು ಎಲ್ಲರು ಕೂಡಿ
ಗಕ್ಕನೆ ಗಲೂಳೆವು ನಡೆಯೆ ।
ಮುಪ್ಪಿನ ಮುದುಕರು ಚಿಪ್ಪಿಗರೆಲ್ಲರು
ಉಪ್ಪಾರು ಗೂಳೆವು ನಡೆಯೆ ॥೮೦॥

ಕುಂಬಾರು ಬಲು ರಂಬೆ ಡೊಂಬರ ಗೂಳೆವು
ಸಂಭ್ರಮದಿಂದಲಿ ನಡೆಯೆ ಬ್ರಾಹ್ಮ ।
ರು ಬಾಲ ಉಪಾಧ್ಯರು ಜೋತಿಷ್ಯರು
ನಾಯಿಂದ್ರ ಗೂಳೆವು ನಡೆಯೆ ॥೮೧॥

ಎರಳೆ ಕುಪ್ಪಳೆಯ ಕುಪ್ಪಳಿಸುತ ಬೇಡರು
ಬರುವಂಥ ಕುದುರೆಯನಿಡುತ ॥೮೨॥

ಎಡದಲ್ಲಿ ಬರುವಂಥ ಕುದುರೆಯನೆಚ್ಚರೆ
ಮಡಿದು ಬಿದ್ದವು ಧರೆಯೊಳಗೆ ।
ಬಿಡದೆ ರಾಹುತರನು ಬಿಚ್ಚಿ ಹಾಕುತಲಾಗ
ಅಡಿಬಿದ್ದೋಡಿದವು ವಾಜಿಗಳು ॥೮೩॥

ಬಲದಲ್ಲಿ ಬಾಹಂತ ಕುದುರೆಯನೆಚ್ಚರೆ
ಬಳೆಯ ಹೇರನು ನೆಗ್ಗಿದಂತೆ ।
ಮಲ್ಲರಾವುತರನು ಮಲಗಿಸಿದರು ಮುಂದೆ
ಕಲಿ ರಾಮನ [ಗ]ಡಿಯರು ||೮೪||

ಎಳೆವಾಸಿ ಬಾಹಂತ ಕುದುರೆಯನೆಚ್ಚರೆ
ನೊಂದವು ಬಿಲ್ಲುಗಾಯದಲಿ ।
ಮುಂದರಿಯದೆ ಬಾಹ ಕುದುರೆಯನೆಚ್ಚರೆ
ನೊಂದವು ಬಿಲ್ಲಗಾಯದಲಿ ||೮೫||

ಕುಂದದೆ ಕೂದಲ ಪಿಡಿಕೊಂಡು ಶಬರರು
ಬಂದವರನು ಕೊಲ್ಲುತಿರಲು ।
ಬೆಂಬಳಿಸಿ ಬಾಹಂತ ಕುದುರೆಯನೆಚ್ಚರೆ
ಡೊಂಬ ಲಾಗವನು ಹೊಡೆದಂತೆ ||೮೬||

ತಂಡತಂಡದಿ ಬಾಹ ಕುದುರೆಯನೆಚ್ಚರೆ
ದಿಂಡುರುಳಿದವು ಭೂಮಿಯಲಿ ।
ಕಂಡ ನೇಮಿಯು ತನ್ನವರ ಸಂತೈಸುತ ಮು
ಕ್ಕೊಂಡು ಹೊಕ್ಕನು ರಣದೊಳಗೆ ||೮೭||

ತೊರಗಲ್ಲು ಬಾದಾವಿ ಮುಂದೆದ್ದು ಹುಯ್ಯಲು
ಉರುಬಿ ಕಾಳಗವ ಮಾಡುತಲಿ ।
ತರಹರಿಸದೆ ಖಾನರ ಮಡುಹುತಲಿ
ಹರಿದು ಹೊಕ್ಕನು ಕುಮ್ಮಟವ ||೮೮||

ನಡೆದ ಗೂಳೆಯ ನೋಯಲೀಸದೆ ಬೇಡರು
ಹೇಡಿಗೊಳ್ಳದೆ ಖಾನರನು ।
ಹತ್ತುಸಾವಿರ ಆಳು ಕುದುರೆಯ ಕೊಂದರು
ಉತ್ತುಮ ಕರಿಗಳೈನೂರು ||೮೯||

ಏಳು ತಿಂಗಳಿಗೆ ಬಂದಿತು ತುರುಕರ ದಂಡು
ದಾಳಿಮಾಡಿಯೆ ನಡೆಸುತಲಿ ।

ಕೋಳಾಹಳವ ಮಾಡುತ ಬಂದು ಹೊಕ್ಕರು
ಧೂಳುಗೋಟೆಯ ಕೊಂಬೆವೆನುತ ॥೯೦॥

ಬಿಡದೆ ಬೆನ್ನಟ್ಟಿ ಕೊಲ್ಲೂವ ರಾಮ ಹೋದನು
ಹುಡೆಯಗಳನು ಕೆಡಹೆನುತ ।
ನಾಡೊಳು ನಗೆಗೇಡಮಾಡಿ ಕೊಲ್ಲುವೆನೆಂದು
ಆಡಿದ ನೇಮಿ ಕೋಪದಲಿ ॥೯೧॥

ಹರುಷವೇರಿಯೆ ನೇಮಿಯಖಾನ ಬೇಗದಿ
ಕರೆಸಿ ಭಟರ ಕಳುಹಿದನು ।
ಸರಸವು ಬೇಡ ನೇಮಿಯ ಕೂಡೆ ಕಂಪಿಲ
ಇರಿಸದೆ ಕೊಡು ಬಾದುರನ ॥೯೨॥

ಬಿಟ್ಟ ಸೂಟಿಯಲೇರಿದವೈದು ಕುದುರೆಯು
ಬಿಟ್ಟರು ಕೈವಾರಿಸುತಲಿ ।
ಅಟ್ಟಳೆಗಳನೇರಿ ಕೋಟೆಯ ಪಾರುತ
ಇಟ್ಟರು ಕಾಗದಗಳನು ॥೯೩॥

ಬೆಟ್ಟವ ನಂಬಿ ಕೆಡಬೇಡ ಬಾದೂರನ
ಕೊಟ್ಟು ಸುಖ ಬಾಳೋದು ಲೇಸು ।
ಹುಟ್ಟುಗೆಡಿಸಿ ಕೊಲ್ಲುವೆ ಕೊಡದಿರ್ದಡೆ
ಬೆಟ್ಟದ ಒಡೆಯ ಕಂಪಿಲನೆ ॥೯೪॥

ಇಷ್ಟು ದಿನದ ಹಾಗೆ ನೋಡಬೇಡವೋ ನೀನು
ಕೊಟ್ಟದ ರಾಮುಗನಿಲ್ಲ ।
ನೆಟ್ಟನೆ ಬಾದೂರನ ಕೊಟ್ಟು ಕಪ್ಪವ ನೀನು
ನೆಟ್ಟನೆ ಕಳುಹೊ ನೇಮಿಯಗೆ ॥೯೫॥

ಮೊರೆಹೊಕ್ಕ ಖಾನನ ಕೊಡೆನೆಂಬ ಬಿರುದನು
ಒರಲುತಿರಲು ಕಹಳೆ ದುರ್ಗದೊಳು ।
ಬರಲಿ ಅಲ್ಲಿಂದ ಪ್ರಾಣವನೊಲ್ಲದಿರ್ದರೆ
ಇರಿವೆನು ಹೆದ್ದೊರೆ ತನಕ ॥೯೬॥

ವಿಷದ ಹುಟ್ಟಿಗೆ ಮುತ್ತಿದ ನೊಣ ಬಾಳ್ವುದೆ
ಅಸವೇನೊ [ನೀನು] ಎಮ್ಮೊಡನೆ ।
ಅಸುರ ನೇಮಿಯ ಕೂಡೆ ಕಷ್ಟಬೇಡವೊ ಎಂದು
ಬೆಸಸಿ ಭಟರ ಕಳುಹಿಸಿದನು ॥೯೭॥

ಮಂಜು ಮುಸುಕಿದರೆ ಅಂಜುವದೆ ಬೆಟ್ಟವು
ರಂಜಿಸುವುದು ಲೇಸಾಗಿ ।
ಕುಂಜರದಾನೆಗೆ ಜಂಬುಕ ತಾ ಬಲ್ಲುದೆ
ಅಂಜುವುದೇಕೆ ಬರಹೇಳೊ ॥೯೮॥

ಬಂದ ಭಟರಿಗೆ ಉಡುಗೊರೆ ಕೊಟ್ಟು ಕಂಪಿಲ
ಚೆಂದಚೆಂದದ ಮನದಣಿಸಿ ।
ಹಿಂದಿಟ್ಟುಕೊಂಡ ಖಾನನ ಕೊಡೆ ಹೋಗೆಂದು
ಬಂದ ಭಟರ ಕಳುಹಿದನು ॥೯೯॥

ನಿಬ್ಬರದಲ್ಲಿ ತಿರುಗಿದವ್ವೆದು ಕುದುರೆಯು
ಅಬ್ಬರ ಸುದ್ದಿಯ ಕೊಂಡು ।
ಬಗ್ಗೆನ ಬಂದು ಹೇಳಿದರು ಒಡೆಯನ ಕೂಡೆ
ದಿಗ್ಗನೆ ಹೊರಟ ಕಂಪಿಲನು ॥೧೦೦॥

ತಲ್ಲಣಿಸುತ ತಳ ಕೆಳಗಾಗಿ ಪಟ್ಟಣ
ನಿಲ್ಲಲಾರದೆ ದ್ರವಗುಂದಿ ।
ಅಲ್ಲಿಗಲ್ಲಿಗೆ ಮಂದಿ ನೆರೆದು ಗುಜುಗುಟ್ಟುತ
ಹಲ್ಗಿರಿದು ಬಾಯ್ಬಿಡುತಿಹರು ॥೧೦೧॥

ಬಂದ ದಂಡನು ಕಂಡು ಕಂಪಿಲರಾಯನು
ಕಂದನ ನೆನೆದು ಚಿಂತಿಸಿದ ।
ಬಂದ ದುರಿತವನು ಕಾಯ್ವರಾರಿಲ್ಲವೆಂದು
ನೊಂದು ಕಂಪಿಲ ಮನದೊಳಗೆ ॥೧೦೨॥

ನೊಂದ ನೋವನು ಸಂತೈಸಿ ಆ ಕ್ಷಣದೊಳು
ಬಂದು ಕುಳಿತ ಚಾವಡಿಯೊಳಗೆ ।

ಅಂದೇಹದಿಂದ ಕರೆಸಿದ ಕಂಪಿಲರಾಯ
ಚೆಂದದಿ ಮಂತ್ರಿ ಬೈಚಪನ ॥೧೦೩॥

ಚಾವಡಿಗೈದು ಕಂಪಿಲಭೂಪ ಮಂತ್ರಿಯ
ಕೋವಿದರನು ಕರೆಸಿದನು ।
ಕೆಟ್ಟೆನು ನಾನು ಬಾಯಿಬಿಟ್ಟರೆ ಬರುವುದೆ
ಪಟ್ಟಣವನು ಶೃಂಗರಿಸೊ ॥೧೦೪॥

ಹೊಡೆಯು ಹುಲಿಮುಖಗಳ ನೋಡಿ ಕಂಪಿಲ
ರೂಢೀಶ ಕೊತ್ತಳಕೆಲ್ಲ ।
ಹೂಡಿಸೊ ಪೆಟಲು ಬಾಣಗಳಲ್ಲಿಗಲ್ಲಿಗೆ
ನೋಡಬೇಕೆಲೊ ಅಂಜಬೇಡ ॥೧೦೫॥

ರಕ್ಕಸ ರಣಗಲಿಯೆಂಬ ಕೊತ್ತಳಕಾಗ
ಇಕ್ಕೊಸೊ ರಣಬಲಿಗಳನು ।
ದಿಕ್ಕನೆ ಹೆಬ್ಬಾಗಿಲ ಚೋರಗಂಡಿಗೆ
ಇಕ್ಕಿಸೊ ರಣಭೂತ ದಣಿಯೆ ॥೧೦೬॥

ಭಾರ್ಗವ ರಾಮನ ಕೊಲಿಸಿದೊ ಕಂಪಿಲ
ದುರ್ಗಕ್ಕೆ ಮುತ್ತಿಗೆಯ ತಂದ್ಯೊ ।
ದುರ್ಗಾಧಿಪತಿ ಕಂಪಿಲ ನಿನ್ನ ಅರಸಿಯ
ಅಗ್ಗಳೆ ರತ್ನಿಯ ಕರಸೊ ॥೧೦೭॥

ಕೂಗುಮಾಡಿ ರಾಮನ ಕೊಲ್ಲ ಹೇಳಿಂದ
ಈಗ ಚಿಂತಿಸಿದರೇನಹುದು ।
ನೀಗಿದೆ ಮಗನ ಕರೆಸು ರತ್ನಾಜಿಯ
ಬೇಗ ಮುತ್ತಿಗೆಯ ತೆಗೆಸೆಂದು ॥೧೦೮॥

ಒಂದೊಂದನಂದು ಭಂಗಿಸುವರೆ ಬೈಚಪ್ಪ
ತಂದೆಯ ಕಾಲದ ಹಳಬ ।
ಬಂದಿತು ದುರ್ಗಕ್ಕೆ ಮುತ್ತಿಗೆ ಎಲೆ ಮಂತ್ರಿ
ಚಂದವೇನಿದಕೆ ಹೇಳೆಂದ ॥೧೦೯॥

ಧುರಧೀರ ವೀರಕಂಪಿಲ ನಿನ್ನ ಸೇನೆಯ
ಕರೆಸು ಕಗ್ಗೊಲೆಗೆಂದ ಮಂತ್ರಿ ।
ಬೆರೆಸಿ ಕಾದಿಸೊ ನಿನ್ನ ಕಿರಿಯ ಹೆಂಡತಿಯನು
ಕರೆಸಿ ನೇಮಿಯ ದಂಡ ತೆಗೆಸೊ ॥೧೧೦॥

ಎಂದ ಮಾತನು ಕೇಳಿ ಕಂಪಿಲರಾಯನು
ನೊಂದನು ತನ್ನ ಮನದೊಳಗೆ ಕೊ ।
ಲ್ಲೆಂದ ಮಾತಿಗೆ ಕೊಲ್ಲುವರೆ ಬೈಚಪ್ಪ
ನಿಲ್ಲಬಾರದೆ ಅರಗಳಿಗೆ ॥೧೧೧॥

ಅರಸಗೆ ಆರು ಬಾಯೆನುತಲಿ ಬೈಚಪ್ಪ
ಬೆರೆಸಿ ಹೇಳಿದನು ಕಂಪಿಲಗೆ ।
ಸಲೆ ವೀಳ್ಯವನು ಕೊಟ್ಟು ಕೊಲ್ಲೆಂದು ಕಳುಹಿದೆ
ಒಲವಿಂದ ಹೇಳಿದೆಯಾಗ ॥೧೧೨॥

ಕರೆಸಿದ ಕಂಪಿಲ ತನ್ನ ಎಕ್ಕಟಿಗರ
ತರಿಸಿದ ಗಂಧ ವೀಳ್ಯವನು ।
ಹರುಷದಿ ವೀಳ್ಯವ ಎಲ್ಲರು ಪಿಡಿದರು
ತೆರಹುಗೊಡದೆ ತಮತಮಗೆ ॥೧೧೩॥

ಬಂದು ವೀಳ್ಯಗಳ ಪಿಡಿದರು ಮನ್ನೆಯರೆಲ್ಲ
ನಿಂದರು ವಾಲಗದೊಳಗೆ ॥೧೧೪॥

ಕರೆಸಿಸ ಬಾದೂರಖಾನನ ಕಂಪಿಲ
ಹರುಷದಿ ವೀಳ್ಯವಿತ್ತವರ್ಗೆ ।
ನೆರಹಿದ ಕಗ್ಗೊಲೆಗೆಂದು ಕಂಪಿಲರಾಯ
ಕರೆಸಿದ ತನ್ನ ಮನ್ನೆಯರ ॥೧೧೫॥

ಇಂದು ಓಡಿಸುವೆವು ತುರುಕರ ದಂಡನು
ಎಂದು ಬುದ್ಧಿಯನೆಣಿಸಿದರು ।
ಇಂದಿನಿರುಳೆ ಕಗ್ಗೊಲೆ ಬೀಳಬೇಕೆಂದು
ಮಂದಿಯ ಕರೆದು ಹೇಳಿದರು ॥೧೧೬॥

ಹೊಳೆವ ಖಂಡೆವ ಪಿಡಿದು ಬಾದೂರಖಾನನು
ಫಳಿಲನೆ ವೀಳ್ಯ ಪಿಡಿದ ।
ವೀಳ್ಯವ ಪಿಡಿದು ಬಾದೂರಖಾನ ತನ್ನೊಳು
ಏಳ್ನೂರು ಕುದುರೆ ಮಂದಿಯನು ॥೧೧೭॥

ಪಾಳೆಯದೊಳು ಪಿಡಿತಹೆನೆಂದು ಬಿರುದಿನ
ಕಾಳೆಯ ಹಿಡಿಸಿ ನಡೆದನು ।
ಪಡುವಣಾದ್ರಿಯೊಳು ಇಳಿದನು ದಿವಕರ
ಉಡುಪತಿ ಉದಯದೋರಿದನು ॥೧೧೮॥

ಇಳಿದರು ಚೋರಗಂಡಿಯೊಳೆಂಟು ಸಾವಿರ
ಫಳಿಲನೆ ಬೇಡನಾಯಕರು ।
ಇಳಿದಿಹ ನೇಮಿಯ ದಂಡ ಕಡಿವೆನೆಂದು
ಕಲಿಭಟರುಗಳೊದಗಿದರು ॥೧೧೯॥

ಚೋರಗಂಡಿಯೊಳಿದ್ದರು ಹೊಳಕೆ ಬಂಟರು
ಕಾಳಗತ್ತಲೆ ನಡುವಿರುಳೆ ।
ವ್ಯಾಳ್ಯವಾಯಿತು ನಾವು ಕಡಿಯಬೇಕೆನುತಲಿ
ಪಾಳ್ಯವನು ಹೊಕ್ಕರಾಗ ॥೧೨೦॥

ಸೇರಿದರಾಗಲೆ ತುರುಕರ ಪಾಳೆವ
ವೀರರು ಕೈಯ್ಯ ಮಾಡಿದರು ।
ವೀರಗಳೈವರು ಒದಗುತ ಪಾಳೆಯದೊಳು
ಸೂರೆಮಾಡಿದರರಿಬಲವ ॥೧೨೧॥

ಹಿಡಿದರು ಸಾವಿರ ಕುದುರೆ ಕಾಲಾಳನು
ಗುಡಿಯ ಬಿಟ್ಟೋಡಿ ಕಂಗೆಟ್ಟು ।
ನಡೆದರು ಆನೆಕ ಕುದುರೆಯ ಕಾಣದೆ
ಕಡಿದರು [ತಮ್ಮ] ತಮ್ಮೊಳಗೆ ॥೧೨೨॥

ಕಗ್ಗೊಲೆಯನು ಬಿದ್ದು ಕಡಿದರು ತುರುಕರ
ವೆಗ್ಗಳ ವೀರ ಪರಿವಾರ ।

ನುಗ್ಗೇಳ ಹೊಯ್ದು ಭೂತಗಳು ಮರಳಿ
ಸುಗ್ಗಿಯಾಯಿತು ರಣದೊಳಗೆ ॥೧೨೩॥

ಕತ್ತಲೆಯೊಳು ನೀನು ತಆನೆಂದರಿಯದೆ
ಮೊತ್ತವಾಯಿತು ಪರಿವಾರ ।
ಅತ್ತಲಾ ಪರಿಯಾಯಿತು ನೇಮಿಯ ದಂಡು
ಇತ್ತ ಕಂಪಿಲನ ಮನ್ನೆಯರು ॥೧೨೪॥

ಒತ್ತಿ ಪಾಳೆದ ಮೇಲೆ ಬಿದ್ದು ಕಡಿಯೆ ರಣ
ಗತ್ತಲಾಯಿತು ಖಾನರಿಗೆ ॥೧೨೫॥

ಏಳಲೀಸದೆ ಮುಂದಲೆಗಳ ಪಿಡಿದುಕೊಂಡು
ಬೀಳಲಿರಿದು ಕೆಡಹುತಲಿ ।
ತೋಳು ತೊಡೆಯ ಮೆಟ್ಟಿ ಕರಳನರಿದು ಬಲು
ಕೋಳಾಹಳವ ಮಾಡಿದರು ॥೧೨೬॥

ಕತ್ತಲೆಯೊಳು ಮುಂದುಗಾಣದೆ ಮಲಗಿರೆ
ಎತ್ತಿ ಶಿರಗಳನು ಚೆಂಡಾಡಿ ।
ಹುತ್ತವನೇರಿ ಹುಲ್ಲನೆ ಕಚ್ಚಿ ಕಂಗೆಟ್ಟು
ಬತ್ತಲೆ ಹರೊದೋಡಿದರು ॥೧೨೭॥

ಧಾರುಣಿಪತಿಗಳೊಂದಾಗಿ ಮಾತಾಡಿ
ತಿರುಗಿ ಹೊಕ್ಕರು ತಮ್ಮ ಪುರವ ॥೧೨೮॥

ಪಿಡಿದು ಸಾವಿರ ವಾಜಿ ಕರಿಘಟೆ ನೂರಾರು
ಪಿಡಿದರು ಕೈಸೆರೆಗಳನು ।
ಪಡೆ ಸಹಿತಲಿ ಬಂದು ಹೊಕ್ಕರು ಕಂಪಿಲನವರು
ತಡೆಯದೆ ತಮ್ಮ ಪಟ್ಟಣವ ॥೧೨೯॥

ಗಿಡಿಬಿಡಿ ಕೊಳಲು ತಪ್ಪಟೆ ಕೊಂಬು ನಿಸ್ಸಾಳ
ಬಿಡದೊದರುವ ಚೆನ್ನಗಾಳೆ ।
ಗಡಣದಿಂದಲಿ ಬಂದು ಕಂಪಿಲಭೂಪಗೆ
ಸಡಗರದಲಿ ಕೈಮುಗಿದು ॥೧೩೦॥

ಪಿಡಿದಾಳು ಕುದುರೆ ಕೈಸೆರೆಯ ಕಾಲಾಳನು
ತಡೆಯದೆ ತಂದು ಒಪ್ಪಿಸಲು ।
ಪೊಡವಿಪ ಕಂಪಿಲನ ಪರಿವಾರಕೆ ಕೊಟ್ಟು
ಹಿಡಿಹೊನ್ನು ಜಲ್ಲಿ ಪಟ್ಟೆಯವ ॥೧೩೧॥

ಕಗ್ಗೊಲೆಯಲ್ಲಿ ಸಿಕ್ಕಿತು ನೂರಾನೆಯು
ಒಗ್ಗಿಲಿ ಸಾವಿರ ಕುದುರೆ ।
ಅಗ್ಗಳೆ ಬಾದೂರಖಾನ ತಂದೊಪ್ಪಿಸಲು
ದುರ್ಗಾಧಿಪತಿ ಕಂಪಿಲಗೆ ॥೧೩೨॥

ಧರೆಯ ಮಧ್ಯದಲಾಗ ಹಿರಿದು ಪಾಳೆಯಗಳು
ಪುರದ ನಾಲ್ಕು ಬಾಗಿಲಲ್ಲಿ ॥೧೩೩॥

ಲಕ್ಷ ಸಂಖ್ಯೆಯ ಮಂದಿ ಎತ್ತಿ ದುಮ್ಮಾನವ
ಲಕ್ಷದ ವರೆ[ಗೆ] ಗುಡಿಹೊಯ್ದು ।
[ದಿಕ್ಕು] ದಿಕ್ಕಿಗೆ ಪಸರಿಸಿ ಪಾಳೆಯ ಮಾಡಿಬಿಡೆ
ರಕ್ಕಸ ರಾಯ[ನ] ದಂಡ ॥೧೩೪॥

ಮುತ್ತಿನ ಗುಡಿಯು ಪಚ್ಚೆದ ಗುಡಿ ಹೊಯ್ದವು
ಸುತ್ತ ಕೆಂಪಿನ ಗುಡಿ ಹೊಯ್ದು ।
ಮತ್ತೆ ರತ್ನದ ಕೆಲಸ ಕಳಸಗ[ಳು] ಮೆರೆದವು
ಅರ್ತಿಲಿ ನೇಮಿಖಾನನಿಗೆ ॥೧೩೫॥

ಚೊಕ್ಕ ಚಿನ್ನದ ಕಳಸಗಳಿಕ್ಕಿ ಮೆರೆದವು
ದಿಕ್ಕುದಿಕ್ಕಿಗೆ ಕಣ್ಣುಗೆಡಲು ॥೧೩೬॥

ಮಂದಿ ಕುದುರೆ ಕಂಡು ನೊಂದ ಕಂಪಿಲರಾಯ
ಚಿಂತಿಸಿದನು ಮನದೊಳಗೆ ।
ಕಂದನಳಿದ ಕಾರಣದಿಂದ ಬಯಲಾಯ್ತು
ತಂದುಕೊಂಡೆನು ಮಾರಿಯನು ॥೧೩೭॥

ಮಗ ಸತ್ತ ಸುದ್ದಿಯು ಮಿಗಿಲಾಯಿತು ಎಂದು
ಹೊಗಲಾಯಿತು ನೇಮಿ ಬಂದು ।

ನಗೆಗೇಡಾಯಿತು ಪರರಾಜರಿಗೆ ನಾವು
ದುಗುಡವಾದನು ಕಂಪಿಲನು ॥೧೩೮॥

ತುತ್ತಾದೆವು ನಾವು ತುರುಕರ ಬಾಯಿಗೆ
ಮಿತ್ತಾದಳು ನಮ್ಮ ರತ್ನಿ ।
ಬಿಗಿಯಿಂದಸುತ್ತಲು ಹತ್ತಿ ಮುತ್ತಿಗೆಮಾಡಿ
ತೆಗವು ಬಿಟ್ಟಂತೆ ಕುಮ್ಮಟವು ॥೧೩೯॥

ದಾಳಿಯು ಮುತ್ತಿಗೆಯಾದುದ ಕಂಡು ಬೈಚಪ್ಪ
ಹೇಳಿದ ಕಂಪಿಲನೊಡನೆ ।
ಹಾಳಾಯಿತು ಹೊಸಮಲೆಯು ಕುಮ್ಮಟವೆಂದು
ಹೇಳಿದೆ ನಿಮ್ಮೊಡನಂದೇ ॥೧೪೦॥

ಕೇಳದೆ ಹೋದೆ ಮಂತ್ರೀಶ ನಿನ್ನಯ ಮಾತ
ಹೇಳಿದೆ ನಮ್ಮೊಡನಂದೇ ।
ಕಾಳಗವನು ಮಾಡಹೇಳೊ ನೀ ಬೈಚಪ್ಪ
ದಾಳಿ ಬಂದಿದೆ ದುರ್ಗಕೆಂದ ॥೧೪೧॥

ಕೃತಯುಗದಲ್ಲಿ ರೇಣುಕೆ ಪುಟ್ಟಿ ಕಾರ್ತಿಕರ
ಹತಮಾಡಿದಳು ನಿಮಿಷದಲಿ ।
ಸತಿಯಾಗಿ ಪುಟ್ಟಿ ದ್ರೌಪತಿ ಪಾಂಡವರನು
ಅತಿಶಯದಿಂ ತಿರಿಗಿಸಿದಳು ॥೧೪೨॥

ಚೆನ್ನರಾಮನ ನೋಡಿ ಕನ್ನೆ ತಾ ಮನಸೋತು
ತನ್ನ ಊಳಿಗರನು ಕಳುಹಿ ।
ಅನ್ಯಾಯವನು ಮಾಡಿ ಕೇಳದಿರ್ದರೆಯು
ನಿನ್ನ ಮಗನ ಕೊಲ್ಲಿಸಿದಳು ॥೧೪೩॥

ಪಾಪಿಯ ನುಡಿಗೇಳಿ ಭೂಪನ ಕೊಲ್ಲಿಸಿ
ಪಾಪನಿಂದ್ಯಕೆ ಒಳಗಾದೆ ।
ಆಪತ್ತು ಬಂದಿದೆ ಕಾಯ್ವರೊಬ್ಬರ ಕಾಣೆ
ಭೂಪ ಪ್ರಾಣಕೆ ಬಂದಿತೀಗ ॥೧೪೪॥

ಕರೆಸು ನಿನ್ನರಸಿಯ ತರಿಸು ವಾಹನವೀಗ
ತೆರೆಸು ದುರ್ಗದ ಬಾಗಿಲನು ॥೧೪೫॥

ಜೋಡ ತೊಡಿಸು ಕುದುರೆಯ ಕೊಟ್ಟು ಭಲ್ಲೆವ
ನೀಡಯ್ಯ ರತ್ನಿಯ ಕೈಗೆ ।
ರೂಢೀಶ ನೇಮಿಯ ಮುರಿಯಲಿರಿಸು ಎಂದು
ಆಡಿದ ಮಂತ್ರಿ ಬೈಚಪ್ಪ ॥೧೪೬॥

ಯಾಕೆ ಬೈಚಪ್ಪ ನೀ ಕಾಕು ಮಾಡಲಿಬೇಡ
ಸಾಕು ಮೂಗಿನ ಮೇಲೆ ಸುಣ್ಣ ।
ಪೋಕನಾದೆನು ನಿನ್ನ ಮಾತು ಕೇಳದೆ ನಾನು
ಲೋಕಾಧಿಪತಿಯ ಕೊಲಿಸಿದೆ ॥೧೪೭॥

ಅರಗಿನ ಮೇಲೆ ಕೆಂಡಮಳೆ ಸುರಿದಂತೆ
ಕರ ನೊಂದು ನುಡಿದ ಕಂಪಿಲನು ॥೧೪೭॥

ಹಿತವೆ ಹೆಂಡಿಯೆಂದು ಸತಿಗೆ ನೀನೊಲಿದರೆ
ಕಥೆಯ ಮಾಡಿದಳು ಕುಹಕದಲಿ ।
ಸುತನು ರಾಮಯ್ಯನ ಹತವ ಮಾಡಿದರಿಂದ
ಕಥೆಯಾದೆ ಮೂರು ಲೋಕದಲಿ ॥೧೪೯॥

ರಾಮನಿಲ್ಲದೆ ನೇಮಿ ಭೂಮಿಯ ಹೊಕ್ಕನು
ಭೂಮಿಯೊಳಪ್ರತಿವೀರ ।
ತಾಮಸ ಮಾಳ್ಪನೆ ದಳವ ಕಂಡರೆ ಅಂಥ
ರಾಮನೆಂದಿಗೆ ಪುಟ್ಟುವನು ॥೧೫೦॥

ಸತ್ತವರೆದ್ದು ಬಹರೇನು ಕಂಪಿಲ
ಮೃತ್ಯು ನುಂಗಿದ ತುತ್ತು ಬಹುದೆ ।
ಹೆತ್ತಂಥ ಮಗನ ಕೊಲ್ಲಿಸಿದ ಅಪಕೀರ್ತಿ
ಆದೀತು ಚಂದ್ರನುಳ್ಳನಕ ॥೧೫೧॥

ಸಕ್ಕರೆ ಇದ್ದಂತೆ ಮುಕ್ಕಿದೆ ಮಣ್ಣನು
ರಕ್ಕಸಿಯಳ ಮಾತಕೇಳಿ ।

ದುಃಖಿಸಿ ಅತ್ತರೆ ರಾಮನು ಬರುವನೆ
ಎತ್ತಳ ಮಾತು ಎಂದೆನುತ ॥೧೫೨॥

ಅರಸು ರಕ್ಕಸನಾದರೆ ಮಂತ್ರಿ ಹೆಬ್ಬುಲಿ
ಬೆರಸಿ ಮುರಿದು ತಿಂಬಂತೆ ।
ಅರಸಿ ಒಂದು ಮಾತನಾಡಲು ಮುನ್ನಂದು
ತರಿಸಿದೆ ಕೊರಳನಾಕ್ಷಣದಿ ॥೧೫೩॥

ನಾನೊಂದು ಮಾತನಾಡಿದರೆ ಕಂಪಿಲರಾಯ
ನೀನವಳಿಗೆ ಒಳಗಾದೆ ।
ನಾನಾ ಅಪಕೀರ್ತಿಯ ತಾಳಲಾರದೆ ರಾಯ
ಜ್ಞಾನಿ ರಾಮಯಯನ ಕೊಲ್ಲಿಸಿದೆ ॥೧೫೪॥

ಮಗನ ಹಂಬಲ ಬಿಡು ಬಗೆದು ಬಂಗಾರವ
ಮಿಗೆ ವೆಚ್ಚಮಾಡು ಉಡುಗೊರೆಯ ।
ಬಗೆಬಗೆಯಿಂದ ರಾಹುತರ ಪರಿವಾರಕ್ಕೆ
ಸೊಗಸಿಂದ ಹಿಡಿಹೊನ್ನ ಕೊಡಿಸೊ ॥೧೫೫॥

ಅರ್ಥದಾಸೆಯ ಬಿಟ್ಟು ಕೊಟ್ಟೆಯಾದರೆ ನಿನ್ನ
ಪುತ್ರರಿಂದಲಿ ಬಂಟರುಂಟು ।
ಚಿತ್ತೈಸು ಕಾದಿಸುವೆನು ರಾಯನೆನುತಲಿ
ಹತ್ತು [ಕಣ್ಣಿನೆ] ದಣಿವಂತೆ ॥೧೫೬॥

ಬೇಡ ಬೈಚಪ್ಪ ನೀ ಕಾಡದಿರೆನ್ನನು
ಆಡೆದ್ದು ಹುಲಿಯ ಮುರಿವುದೆ ।
ರೂಢಿಗೊಡೆಯ ಸುರಿತಾಳನ ದಂಡಿಗೆ
ನಾಡವ[ರೆದು]ರು ಆಗುವರೆ ॥೧೫೭॥

ವಾರುಧಿ ಮೇರೆದಪ್ಪಿದ ಹಾಗೆ ದಂಡಿದೆ
ಬಾರೊ ಬೈಚಪ್ಪ ನೀ ಹೇಳೊ ॥೧೫೮॥

ಬೇಗ ಬಂಟರು ಬಂದು ಕಾಳಗಕೇಳೆಂದು
ಆಗ ಕಂಪಿಲನ ಕರೆದರು ।

ಈಗ ಬಾದೂರನ ಕೊಡದಿದ್ದರೆ ನೀನು
ಬೇಗ ಕಾಳಗಕೆ ಏಳೆಂದು ॥೧೫೯॥

ಮುಂದೆ ರಾಮಯ್ಯನ ತೋರುವಲ್ಲಿಗೆ ಈಗ
ಸಂದಿತು ಪದ ಮುಂದೆ ನೋಡು ॥೧೬೦॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಕದನದಿಂದಲಿ ನೇಮಿ ಕುಮ್ಮಟವ ಮುತ್ತಿದ
ಪದಗಳು ಮುಗಿಯೆ ಸಂಪೂರ್ಣ ॥೧೬೧॥

ಅಂತು ಸಂಧಿ ೨೦ಕ್ಕಂ ಪದನು ೨೧೯೬ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨೧

❖

ನೇಮಿಖಾನನ ಕಾಳಗ ಮತ್ತು ಸೋಲು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ಹೇಳಿದ ಕಂಪಿಲರಾಯಗೆ ಮಂತ್ರೀಶ
ಮೇಳೈಸೊ ದುರ್ಗ ಸೈರಣೆಯ ।
ಕಾಳಗಕನುವ ಮಾಡಿಸೊ ಕಂಪಿಲಭೂಪ
ಹಾಳಾಯಿತಿನ್ನು ಕುಮ್ಮಟವು ॥೩॥

ನಳಿನಪತ್ರದೊಳಿಹ ಜಲದಂತೆ ಕುಮ್ಮಟ
ಕಳವಳಿಸುತ ಭಯಗೊಂಡು ।
ತಳಮಳಗೊಳುತ ಕಂಪಿಲಗೆ ಹೇಳಿದ ಬಂದು
ಉಳಿಯದು ದುರ್ಗವೆಂದೆನುತ ॥೪॥

ಒಂದು ಸುತ್ತಿನ ಕೋಟೆಯ ತೆಕ್ಕೊಂಡರು
ನಿಂದರು ಹುಲಿಮುಖದೊಳಗೆ ।

ಬಂದು ಮೂದಲಿಸಿ ನೇಮಿಯ ಪರಿವಾರವು
ನಿಂದವಂಬಿನ ಮಳೆಗರೆದು ॥೫॥

ಕುಂಭಿನಿಯೊಳಗೆ ತಾ ಬೈಚಪ್ಪನಿಂತೆಂದ
ಇಂಬಿಡೆ ಎನ್ನ ಮುಂದೆ[ಸೆ]ಗೆ ।
ಹಂಬಲಿಪರೆ ಕಂಪಭೂಪ ನೀ[ನೆಂ]ದು
ಕಂಬನಿ [ತೊ]ಡೆದು ಸಂತೈಸಿ ॥೬॥

ಇಂಬಿಡುವೆನು ಎಂದು ಬೈಚಪ್ಪ ನುಡಿದನು
ಕುಂಭಿನಿಗೊಡೆಯ ಎಂದೆನುತ ।
ಧೀರ ನೀ ಏಳು ನೆಲೆಯ ಉಪ್ಪರಿಗೇರು
ತೋರುವೆ ಬಳುಗಾಳಗವ ॥೭॥

ಹೆದ್ದೊರೆ ತನಕ ಮುರಿಸುವೆನು ತುರುಕರ ಗಂಡ
ತಿದ್ದುವೆ ರಕುತ ಕಾಲುವೆಯ ।
ಗೆದ್ದೆನೆನಿಸಿಕೊಂಬೆನು ಮರುಳ್ಗಳ ಕೈಯ್ಯಲಿ
ಇದ್ದಂತೆ ನೋಡೊ ಕಂಪಿಲನೆ ॥೮॥

ಎಂದು ಕಂಪಿಲನ ಉಪ್ಪರಿಗೆಯನೇರಿಸಿ
ಬಂದು ದುರ್ಗವ ಹೊರಹೊಂಟ ।
ಇಂದುಧರನ ರಾಮೇಶನ ಗುಡಿಗಾಗಿ
ಬಂದನು ಮಂತ್ರಿ ಬೈಚಪ್ಪ ॥೯॥

ಭೇರಿ ತಂಬಟೆ ಡೊಳ್ಳು ವಾರಾಣ ಗಿಡಿಬಿಡಿ
ಭೋರಿಡುವವು ವಾದ್ಯಗಳು ॥೧೦॥

ಬಂದನು ಬೇಗ ಪ್ರಧಾನ ಬೈಚಪ್ಪನು
ತಂದು ಕಾಣಿಕೆಯ ಮಡಗಿದನು ।
ಮುಂದೆ ಜಟ್ಟಂಗಿರಾಮೇಶಗೆ ಮಂತ್ರೀಶ
ಅಂದಡ್ಡಬಿದ್ದು ಕೈಮುಗಿದ ॥೧೧॥

ಏಳ್ನೂರು ಎಪ್ಪತ್ತು ಕೋಣನು ಸಾವಿರ
ಏಳ್ನೂರು ಕೋಳಿ ಕುರಿಯನು ।

ಬಲಿಯ ಆಹಾರ ಕೊಟ್ಟು ಬಂದೆನು ಬೈಚಪ್ಪ
ಏಳಯ್ಯ ರಾಯರಗಂಡ ||೧೨||
ತಳಮಳಗೊಂಡು ದುರ್ಗವು ಕಣುಗೆಡುತದೆ
ಚೆಲುವ ಬಾಯೆಂದು ಕರೆಯಲು ||೧೩||

ಭಾಷೆಯನಿತ್ತು ಬಂದೆನು ನಿಮ್ಮ ತಂದೆಗೆ
ಭಾಷೆಪಾಲಕ ಚೆನ್ನರಾಮು ।
ದೇಶಾಧಿಪತಿ ರಾಮನಿರ್ದ ಬಳಿಗೆ ಬಂದು
ಸಾಸಿರ ಕುರಿಯ ಹೊಯ್ಸಿದನು ||೧೪||

ಹರುಷದಿ ಕುರಿ ಕೋಣನ ಬಲಿಯನಿಕ್ಕಿಸಿ
ಭರದಿಂದ ಕರೆದ ಮಂತ್ರೀಶ ।
ಕರೆದರೆ ನುಡಿಯದಿರಲು ಕಂಡು ಬೈಚಪ್ಪ
ತಿರಗಿ ಬಂದಾಲಿಸಿ ಕೇಳಿ ||೧೫||

ಧುರಧೀರ ರಾಮನ ಉಲುಹಿಲ್ಲವೆನುತಲಿ
ಭರದಿಂದ ಕರೆದ ಮಂತ್ರೀಶ ||೧೬||

ಚದುರಂಗ ಪಗಡೆಯನಾಡುತ ಪೇಳಿದ
ಮದದಾನೆ ಚೆನ್ನಿಗರಾಮ ।
ಮುದದಿಂದ ಕಾಟಣ್ಣನೊಳು ಇಂತೆಂದನು
ಚದುರ ಪ್ರಧಾನ ಬಂದಿಹನೆ ||೧೭||

ಏನು ಕಾರಣ ಬಂದೆ ಬೈಚಪ್ಪ ನೀನೆಂದು
ತಾನು ಕೇಳಿದನು ರಾಮಯ್ಯ ।
ಏನು ಹೇಳುವೆನು ಕುಮಾರ ಚೆನ್ನಿಗರಾಮ
ಹಾನಿ ಬಂದಿದೆ ಕಂಪಿಲಗೆ ||೧೮||

ಬಂದ ಹದನ ಹೇಳು ನೀನು ಮಾಜದೆ ಬೇಗ
ಎಂದು ರಾಮಯ್ಯ ಕೇಳಿದನು ।
ಅಂದಿನ ಕಾಲಕ್ಕೆ ಕೊಂದನಲ್ಲವೆ ಕೇಳು
ಇಂದ್ಯಾಕೆ ನಿಮಗೆ ನಮ್ಮಾಸೆ ||೧೯||

ಇಂದೊಂದು ತಪ್ಪನು ಕಾಯಯ್ಯ ನಮಗೀಗ
ಸಂದೇಹಬೇಡ ಚಿತ್ತೈಸು ॥೨೦॥

ಸಾಕು ಬೈಚಪ್ಪ ಸಂಸಾರದ ಸುಖ ದುಃಖ
ಬೇಕಿಲ್ಲ ದೊರೆತನ ನಮಗೆ ಕು ।
ಹಕು ಮಾಡಿದನು ಹೆಂಡತಿಯ ಮಾತನು ಕೇಳಿ
ನಾಕಜನರು ಬಲ್ಲರೆನುತ ॥೨೧॥

ನೆಲಮಾಳಿಗೆಯಿಂದಿನ್ನೇಳು ಚೆನ್ನಿಗರಾಮ
ಕಳೆಯುಳ್ಳ ಬಿದಿಗೆ ಚಂದ್ರಮನೆ ।
ಛಲದಂಕ ತುರುಕರು ನಿಮ್ಮ ತಂದೆಯ ಜೀವ
ಕಳೆವೆವೆನ್ನುತಲಿ ನಿಂದಿಹರೆ ॥೨೨॥

ತಂದೆತಾಯಿಗಳಿಲ್ಲ ಬಂಧುಬಳಗವಿಲ್ಲ
ಹಿಂದೆಮುಂದಾರು ಎನಗಿಲ್ಲ ।
ಕಂದರ್ಪದಹನ ಜಟ್ಟಂಗಿಲಿಂಗನ ಪಾದ
ಹೊಂದುವುದು ಲೇಸೆಂದ ರಾಮ ॥೨೩॥

ಏಳೋ ಚೆನ್ನಿಗರಾಮ ಏಳೋ ರಾಯರಗಂಡ
ಏಳೋ ಸುರಿತಾಳಮರ್ದನನೆ ।
ಏಳಯ್ಯ ಏಳಪ್ಪ ಏಳೋ ಚೆನ್ನಿಗರಾಮ
ಏಳಯ್ಯ ರಣರಂಗಧೀರ ॥೨೪॥

ಕಾಳಮೇಘದವೋಲು ಕವಿದು ತುರುಕರ ದಂಡ
ಹಾಳಮಾಡುವ ಧೀರ ಏಳೋ ।
ಏಳದಿದ್ದರೆ ನಿಮ್ಮ ತಂದೆ ಕಂಪಿಲನಾಣೆ
ಕುಲಗುರುವಿನ ಪಾದದಾಣೆ ॥೨೫॥

ಬಲದ ಪಟ್ಟದರಾಣಿ ಹರಿಯಮ್ಮನಾಣೇಳೋ
ಲಾಳವಿಂಡಿಗೆಯ ತೆಗಸಿದೆನು ॥೨೬॥

ನೆರೆದು ಮಂತ್ರಿಯೊಳು ಮಾತಾಡುವ ಸಮಯಕೆ
ಅರಸು ಕಂಪಿಲರಾಯನಿತ್ತ ।
ಪುರವ ಮುತ್ತಿದರೆಂಬ ಭರವಸವನು ಪೇಳಿ
ಕರೆಸಿದ ಮಂತ್ರಿಯನರಸ ॥೨೭॥

ಕರೆಯಲಾಕ್ಷಣದಿ ರಾಮಯ್ಯನ ಮುಖವನು
ನೆರೆಗಲಿ ಮಂತ್ರಿ ನೋಡಿದನು ।
[ಭರದೆ] ಬೈಚಪ್ಪನ ನುಡಿಗೇಳಿ ರಾಮಯ್ಯ
ಒಂದಾರು ಭುಜವಾಗಿ ಹಿಗ್ಗಿ । ॥೨೮॥

ಚಂದದಿಂ ಸಹಿತ ಕಾಟಣ್ಣ ತಾ ಪೊರಮಟ್ಟು
ಅಂದದಿ ನೆಲಮಾಳಿಗೆಯ ।
ಎದ್ದು ಬಂದಂಥ ರಾಮಯ್ಯನ ಮುಖನೋಡಿ
ಹೊದ್ದಿ ಬೈಚಪ್ಪ ಮುದ್ದಾಡಿ ॥೨೯॥

ನೆಲಮಾಳಿಗೆ ಬಿಟ್ಟು ಒಡಗೂಡಿ ಬಂದನು
ಛಲದಂಕ ರಾಮಯ್ಯ ನಡೆದ ॥೩೦॥

ತನ್ನೊಡನೈವರು ಮನ್ನೇರು ಸಹವಾಗಿ
ಚೆನ್ನಿಗ ನಡೆದನರ್ತಿಯಲಿ ।
ಖಿನ್ನವಿಲ್ಲದೆ ಕಾಟಣ್ಣ ಕೊಳ್ಳಿಯ ನಾಗ
ಚೆನ್ನ ಹಂಪನು [ಸಿಂಗ]ಯ್ಯ ॥೩೧॥

ಕೋವಿದ ಕೊಟಗರ ದ್ಯಾವ ರಾಮಯ್ಯನು
ಭಾವಜ ಮಂತ್ರಿ ಬೈಚಪ್ಪ ।
ಗಂಡರಗಂಡನು ಕದನ ಪ್ರಚಂಡ ಮುಂ
ಕೊಂಡು ಬಂದನು ರಾಮನಾಥ ॥೩೧॥

ಕಂದನ ಕರವಿಡಿದೈತಂದು ಬೈಚಪ್ಪ
ಬಂದನು ತನ್ನರಮನೆಗೆ ।
ಚಂದಚಂದದಲಿ ಆರತಿಯೆತ್ತಿ ಸ್ತ್ರೀಯರು
ಅಂದದಿಂದಲಿ ಪಾಡಿದರು ॥೩೩॥

ಹರಕೆಯ ಕೈಕೊಂಡು ಬಂದ ಚೆನ್ನಿಗರಾಮ
ತರಿಸಿದ ತನ್ನ ಆಯುಧವ ।
ಅರಸು ಕಂಪಿಲನ ಕುಮಾರ ಚೆನ್ನಿಗರಾಮ
ಬರಿಸಿದ ತನ್ನ ವಾರುವನ ॥೩೪॥

ಗಳಿಗೆಯೊಳ್ಕಾಲ ಗಗ್ಗರ ಕೊರಳೊಳ್ ಗೆಜ್ಜೆ
ಹೊಳೆವ ಮಾಣಿಕದ ಹಲ್ಲಣವು ।
ತಳುಪು ರನ್ನದ ಪಟ್ಟೆ ಮುತ್ತಿನ ಬಾಸಿಂಗ
ಚೆಲುವ ರಾಮುಗನ ವಾರುವಿಗೆ ॥೩೫॥

ಲಕ್ಷ ಕುದುರೆಗಳ ಒಕ್ಕಲಿಕ್ಕುವೆನೆಂದು
ರಕ್ಕಸರಾಯನ ತೇಜಿ ।
ಹಕ್ಕರಿಕೆಯ ಮೇಲೆ ಇತ್ತರದಲಿ ಝಲ್ಲಿ
ಕಕ್ಕಸ ಕದನ ಬಲ್ಲೆಯವು ॥೩೬॥

ಬಂದ ಬೊಲ್ಲಗೆ ರಾಮ ಗಂಧ ಅಕ್ಷತೆನಿಟ್ಟು
ವಂದಿಸಿ ಏರಿ ಬೊಲ್ಲನನು ।
ಒಡೆಯ ಚೆನ್ನಿಗರಾಮನಹುದೆಂದು ಪೊಡವಿಯೊಳ್
ಸಡಗರದಲಿ ಬೊಲ್ಲ ನೋಡಿ ॥೩೭॥

ಆರು ತಿಂಗಳ ಮೇವ ನೀರನೊಲ್ಲದೆ ತಾನು
[ಧೀರ] ರಾಮನ ಕಾಣದಿರಲು
ತೋರಿತು ಹರುಷವು ರಾಮನ ತೇಜಿಯು
ಹಾರಿತು ಪಕ್ಷಿಯಂದದಲಿ ॥೩೮॥

ಬೇಗ ರಾಮಯ್ಯಗೆ ಜೋಡು ವಜ್ರಂಗಿಯ
ಆಗ ಬೈಚಪ್ಪನು ತೊಡಿಸಿ ।
ರಾಗವಳಿಯ ತಲೆ ಠೌಳಿಯ ಮೊದಲಾಗಿ
ತ್ಯಾಗವು ದೃಷ್ಟಿಗಳೆನುತ ॥೩೯॥

ಕಾಯವ ದಂಡಿಸಿದನು ರಾಮನಾಥನು
ಮಾಯಕಾರನು ಬೈಚಪ್ಪ ।

ರಾಯರಹುತನೆಂಬ ಪೆಸರವನಿಗೆ ಇತ್ತು
ಆಯತದಲಿ ನಡೆತಂದ ॥೪೦॥

ಎಲ್ಲಿಂದ ಬಂದ ಈ ಮಾನ್ಯ ರಾಹುತನೆಂದು
ಎಲ್ಲರು ಕೇಳಿದರಾಗ ।
ಕಲ್ಯಾಣದಿಂದ ಬಂದನು ರಾಹುತನೆಂದು
ಎಲ್ಲಕ್ಕೆ ಪೇಳಿದ ಮಂತ್ರಿ ॥೪೧॥

ಹೊಸದಾಗಿ ಬಂದ ಮಾನ್ಯ ರಾಹುತನಿಗೆ
ವಶಮಾಡಿ ಹಳೆಯ ಮಂದಿಯನು ।
ಹೆಸರುಳ್ಳ ಕುದುರೆಯ ಕೊಟ್ಟು ಪೌಜನೆಮಾಡಿ
ಸಸಿಮಾವಿನ ಮರದಡಿಯ ॥೪೨॥

ಶೃಂಗಾರದೋಟದೊಳಗೆ ನಿಲ್ಲಿಸಿ ಮಂತ್ರಿ
ಮಂಗಳ ಬೊಲ್ಲನ ತರಿಸಿ ॥೪೩॥

ಕರೆಸಿದ ಮಾನ್ಯರನರಸಿದ ರಾಮನ
ತರಿಸಿದ ಗಂಧ ವೀಳ್ಯಯವ ।
ಸುರಿತಾಳನ ಮಂತ್ರಿ ನೇಮಿಯ ದಂಡಿಗೆ
ಇರಿಸಿದ ಇದಿರು ಪೌಜುಗಳ ॥೪೪॥

ದೇವಿಸೆಟ್ಟಿಯ ಲಿಂಗ ಬೇವಿನ ಸಿಂಗಯ್ಯ
ಭಾವಸಂಗಮ ಹಾರೋ ಲಿಂಗ ।
ಕೋವಿದ ಕೊಟಗರ ದ್ಯಾವನು ಇರುಪನು
ಹಾವಳಿಕಾರ ಹಂಪಯ್ಯ ॥೪೫॥

ಮಾದಿಗ ಹಂಪನು ಮುದುಗೊಂಡ ಲೋಭನು
ಸಾಧನೆ ಬಸವರಾಜಯ್ಯ ।
ಭೇದವಿಲ್ಲದೆ ಬಂದ ಬಾದೂರಖಾನನು
ಮೂದಲಿಸುತ ಭಟರುಗಳು ॥೪೬॥

ಎನುಮಾಲ ಚಿತ್ತನು ಎರಬೋತು ಗಂಗನು
ಮನಕೆ ಬೆಟ್ಟದ ಸಿಂಗನವರು ।

ಮರುಳೆಯ ಪಾಪನು ಬೂಟಕ ಬೊಮ್ಮನು
ಉರಿವ ಕೊಳ್ಳಿಯ ನಾಗಣ್ಣ ॥೪೭॥

ಹೊಸತಾಗಿ ಬಂದಂಥ ರಾಯರಾಹುತನಿಗೆ
ವಶಮಾಡಿ ಹಳೆಯ ಮಂದಿಯನು ॥೪೮॥

ತಿರುಗಿಬಂದನು ಮಂತ್ರಿ ಬೈಚಪ್ಪ ಆಗಲೆ
ಅರಸು ಕಂಪಿಲರಾಯನೆಡೆಗೆ ।
ಬರಹೇಳು ನಿನ್ನ ಮಂದಿ ಕುದುರೆಯನೆಲ್ಲ
ಧುರಕಿದಿರಾದ ಮನ್ನೆಯರ ॥೪೯॥

ನೋಡು ಕಂಪಿಲ ನಿನ್ನೊಳಾಡಿದ ಮಾತಿಗೆ
ನಾಡೊಳು ಹೊಸ ರಾಹುತನ ।
ತಳಮಳಗೊಂಡು ದುರ್ಗವು ಕಣುಗೆಡುತದೆ
ಚೆಲುವನೆ ಬಾಯೆಂದು ಕರೆಯೆ ॥೫೦॥

ಗಾಢದಿ ತಪ್ಪನೆ ತಂದೆನೊ ಭೂಪಾಲ
ನೋಡು ನಿನ್ನಯ ಮನದಣಿಯೆ ॥೫೧॥

ರಾಮನ ಪೋಲ್ವರ ಭೂಮಿಯೊಳ್ಕಾಣೆನೊ
ಸೀಮೆಯೊಳಪ್ರತಿವೀರ ।
ತಾಮಸ ಮಾಳ್ಪನೆ ದಳವ ಕಂಡರೆ ಅಂಥ
ರಾಮನೆಂದಿಗೆ ಪುಟ್ಟುವನೊ ॥೫೨॥

ಪೊಡವಿಗೆ ಒಡೆಯ ಕಂಪಿಲರಾಯ ತನ್ನಯ
ಒಡನೆ ಎಕ್ಕಟಿಗರ ಕರೆಸಿ ।
ಕಡುಗಲಿ ನೇಮಿಯ ಬಲವ ತರಿವೆನೆಂದು
ನಡೆದರು ರಾಯ ಮನ್ನೆಯರು ॥೫೩॥

ಪೊಡವಿಯೊಳಗೆ ಅರಿರಾಯಮರ್ದನನೆಂದು
ಹೊಡೆದರು ರಾಯಭೇರಿಯನು ।
ಕಡುಗಲಿ ಅಬ್ದುಲಖಾನ ನಡೆದ ಮುಂದೆ
ತಡೆಯದೆ ಹೆಬ್ಬಾಗಿಲೊಳಗೆ ॥೫೪॥

ಹೆಬ್ಬಾಗಿಲನು ತೆಗೆಸಿದನು ಅಬ್ದುಲಖಾನ
ಉಬ್ಬಿತು ಸಾವಿರ ಗಜವು ॥೫೫॥

ಬಾಗಿಲ ಹೊರಹೊಂಟು ಏರಿ ತುರುಕರ ಮೇಲೆ
ಸಾಗರದೊಲು ವಾರುವನು ।
ಬೇಗದಿ ಬಂದು ನೂಕಿತು ಹೊಸ ರಾಹುತನ
ಮೂಗ ಸನ್ನೆಯಲಿ ರಾಹುತರು ॥೫೬॥

ಬಾದೂರಖಾನನು ಬರಲು ತುರುಕರ ದಂಡು
ಕ್ರೂರಮಾಡಿತು ತಮ್ಮೊಳಗೆ ।
ಕಾದುವೆನೆಂಬ ಸಮಯಕ್ಕೆ ನೇಮಿಯ ದಂಡ
ಮೂದಲಿಸಿದನು ಬಾದೂರ ॥೫೭॥

ಹೋಗದಿರೆಲೊ ಹೇಡಿಗಳಿರಾ ನೀವೆಂದು
ಆಗ ಹೊಕ್ಕನು ಬಾದೂರನು ।
ಸಾಗಿ ಐದಾರೇಳು ಸಾವಿರ ಗಜವಿಂಡು
ಬೇಗ ನೇಮಿಯಖಾನನೊಡನೆ ॥೫೮॥

ಭಾಪುಭಾಪುರೆ ಮಝುರೆ ಧೀರ ಬಾದೂರ
ಕೋಪವ್ಯಾತಕೆ ನಿಮ್ಮೊಡನೆ ।
ಈ ಪರಿ ಕದನವ ನೇಮಿಖಾನನ ಕೂಡೆ
ತಾ ಪಿರಿದೆನಿಸಿಕೊಂಡಿಹನು ॥೫೯॥

ಹಿಂದಣ ಭಯ ಬಂದಿತೆಂದು ನೇಮಿಯಖಾನ
ಮಂದಿಯ ಮುಖವ ನೋಡಿ ।
ಇಂದುವ ರಾಮ ಸತ್ತುದು ಸಟೆಯೆನುತಲಿ
ಬಂದನು ಕದನಕ್ಕೆ ನೇಮಿ ॥೬೦॥

ಏರಿತು ನಾಲ್ಕು ಪೌಜನುಮಾಡಿ ಕಂಪಿಲನ
ವೀರಮಾನ್ಯಯರುರವಣಿಸಿ ।
ತೋರುತ ಸಾಹಸಗಳ ವೈರಿಶಿರಗಳ
ತೂರುತ ನಡೆದರೊಂದೆಸೆಯ ॥೬೧॥

ಒಂದೆಸೆಯಲ್ಲಿ ಹೊಸರಾಹುತನ ಪರಿವಾರ
ಒಂದು ಕಡೆಯಲ್ಲಿ ಕಂಪಿಲನ ।
ಮುಂದೆ ಮನ್ನೆಯರೊಂದು ಕಡೆಯಲ್ಲಿ ಸವರುತ
ಬಂದು ನಿಂದನು ರಾಮನಾಥ ॥೬೨॥

ಬಲಿದು ತೊಡೆಯನೊತ್ತಲು ಕಲಹ ದಾಂಟಿತು
ಕಲಿ ಕಾದ ಕೈಯ್ಯನೆತ್ತಿದನು ॥೬೩॥

ಎತ್ತ ನೋಡಿದಡತ್ತ ಬಾಯನು ತೆರವುತ
ಮತ್ತೆ ರಾಮಯ್ಯನ ತೇಜಿ ।
ಕೆತ್ತಿಯ ಕಿತ್ತು ಜಡೆಯ ಬೋಳೈಸಿ[ದ]
ಮೃತ್ಯುಂಜಯ ಜಯವೆನುತ ॥೬೪॥

ಬೊಲ್ಲನ ಏರಿ ದೂವಾಳಿಸಿ ರಾಮಯ್ಯ
ಮಲ್ಲಖಾನರನು ಎಲ್ಲರನು ।
ಕೊಲ್ಲುತ ತತ್ತರದರಿವುತ ರಣದೊಳು
ಬಲ್ಲೆಯದಲಿ ತಿವಿತಿವಿದ ॥೬೫॥

ಚಪ್ಪೆಲು ಮುರಿದು ನಿಟ್ಟೆಲು ಮೊಲೆ ಖಂಡ್ರಿಸಿ
ಉಬ್ಬರೊಂದಾಗಿ ಹೊಯ್ದಾಡಿ ।
ರಣದೊಳು ರಾಮನಲ್ಲದೆ ಹೀಗೆ ಕಾದುವ
ಬಣಗರಿಗೆಲ್ಲಿಯದೈಸೆ ॥೬೬॥

ಆ ಬರವಿಂಗೆ ತಲೆ ಹೊಡೆದರೆ ಖಂಡ್ರಿಸಿ
ಕುಪ್ಪಳಿಸುತ ಕಾಲು ಮುರಿದು ।
ಒಪ್ಪ ನೇಮಿಯ ದಂಡನೆಲ್ಲ ಸಂಹರ ಮಾಡಿ
ಕುಪ್ಪೆಯನೊಟ್ಟಿದಂತಾಯ್ತು ॥೬೭॥

ಹಣಿವನೆ ತುರುಕರ ದಂಡಿಗೆ ಇವನೆಂದು
ಎಣಿಸಿಕೊಂಡರು ಜಾಣರುಗಳು ॥೬೮॥

ಸಾವಿರಕೊಬ್ಬ ರಣವ ಹೊಕ್ಕು ಕಡಿವನು
ಇವನಾರು ಎನುತ ರಣದೊಳಗೆ ।

ವಿವರಸಿ ನೋಡಲು ಇವ ರಾಮನೆನುತಲಿ
ಕವಿದು ಕಂಗೆಟ್ಟು ನೋಡಿದರು ॥೯॥

ವಾದಿಸುವರು ರಾಮನಹುದೆಂದು ಮನದೊಳು
ಭೇದಿಸುವರು ಜೂಜನಾಡಿ ।
ಮೊದಲಿಸಿಯೆ ಮಾತನಾಡಲಮ್ಮರು ಅವ
ಕಾದುವ ತೋಟಿಯ ನೋಡಿ ॥೭೦॥

ಕನ್ನವನಿಕ್ಕಿ ಕಳ್ಳನು ಮನೆಯನು ಹೊಕ್ಕು
ಕೆಮ್ಮಿದಂತಾಯಿತು ನೇಮಿ ।
ಇನ್ನೇನು ಹೋದೆನೆಂದರೆ ರಾಮ ಬಿಡುವನೆ
ಎನ್ನುತಿರ್ದರು ತಮತಮಗೆ ॥೭೧॥

ಪೊಡವಿಪ ನೇಮಿಯ ಎಡಬಲದೊಳಗಿರ್ದ
ಕಡುಗಲಿ ವೀರ ರಾಹುತರು ।
ತಡೆಯದೆ ರಾಮನ ಕಡಿದು ಶಿರವ ಬೇಗ
ಬಿಡದೆಮಪುರಕೆ ಕಾಣಿಪೆವು ॥೭೨॥

ಕುಡಗಲಿ ರಾಮನ ಹೊಡೆವೆವು ರಣದೊಳು
ಒಡನೆ ಬಾದೂರನೆಂಬವ[ನ] ।
ಹೆಡಗಯ್ಯ ಕಟ್ಟಿ ತರುವೆವು ಬಾದೂರನೆಂದು ತ
ಮ್ಮೊಡೆಯನ ಬೆಸನ ಬೇಡಿದರು ॥೭೩॥

ತಟ್ಟನೆ ಕವಿದು ಕಾರ್ಮುಗಿಲಂತೆ ಖಾನರು
ನೆಟ್ಟನೆ ಸೇರಿ ನಿಂದೆಸೆಯೆ ।
ತಟ್ಟನೆ ರಾಮನು ಅದ ಕಂಡು ಜೇಯೆಂದು
ತಟ್ಟಿದ ಕುದುರೆ ಕಂಧರವ । ।೭೪॥

ಏರಿ ಬೊಲ್ಲನ ರಾಮ ಸೇರುವೆಯನು ಕೂಡಿ
ಧೀರ ಮನ್ನೆಯರನು ಕರೆಸೆ ।
ವಾರಣ ತುರಗ ಕಾಲಾಳು ಮನ್ನೆಯರೆಲ್ಲ
ಘೋರನೇರಿದರಿದಿರಾಗಿ ॥೭೫॥

ಸುರಿತಾಳನ ಮಂತ್ರಿ ನೇಮಿಖಾನನ ಮೇಲೆ
ಉರುವಣಿಸುತಲಿದಿರಾಗಿ ।
ಭರದಿಂದಲೇರಿಸು ಕುದುರೆ ಕಾಲಾಳೆಲ್ಲ
ಕರಿಘಟೆಗಳು ಇದಿರಾಗಿ ॥೨೬॥

ಧುರಧೀರ ರಾಮನ ಬೊಲ್ಲನು ರಣದೊಳು
ತುರುಗಗಳನು ಸದೆಬಡೆದು ।
ಪರಬಲದಿದಿರಿಲಿ ನೆರೆದು ಪೌಜನು ಮಾಡಿ
ಸರಿ ಪೆಟ್ಟಿನಲ್ಲಿ ಹೊಯ್ದಾಡಿ ॥೨೭॥

ಅರೆ ರಾವುತ ಮಝರೆ ತುಂಬೂರಖಾನ
ಸರಸದಿ ನಿಲ್ಲುನಿಲ್ಲೆನುತ ।
ಹತ್ತೆಂಟು ಸಾವಿರ ಚತುರಂಗ ಬಲಕೂಡಿ
ಮುದದಿ ಮೂದಲಿಸಿ ರಾಮಯ್ನ ॥೨೮॥

ಕದನಕ್ಕೆ ಖಡ್ಗವ ಝಳ್ಪಿಸಿ ಮನ್ನೇರು
ಒದಗಿತು ರಾಮಯ್ಯನೊಡನೆ ।
ಸಿಕ್ಕಿತು ಉರದಲ್ಲಿ ಬೆನ್ನಲುಗಿದು ಬೀಳೆ
ಒಕ್ಕಲಿಕ್ಕುತ ಅರಿಬಲವ ॥೨೯॥

ಒಡೆದುದು ನಡುಬೆನ್ನು ಕುಡಿಯಳ್ಳೆ ತೊಡೆಗಳು
ಕಡೆಗೆ ನೆತ್ತಿಯ ಚಿಪ್ಪು ಹಾರಿ ।
ತಡೆಯದೆ ಗೋಣ ಖಂಡ್ರಿಸಿ ನೆಲದೊಳು ಬೀಳೆ
ಕಡುಗಲಿ ತುಂಬೂರನಳಿದ ॥೩೦॥

ಅರರೆ ತುಂಬೂರಖಾನನಳಿದನೆಂದು ಪರಿ
ವಾರ ಒದಗಿತು ಹುಯ್ಯಲ ಕಾಳಗಕೆ ॥೩೧॥

ಮತ್ತೆ ಮುರಿದು ತಿರುಗಿತು ಹರಿಗೆಯ ಬಲ
ಸುತ್ತಲಡ್ಡೈಸಿ ರಾಮಯ್ನ ।
ಮುತ್ತಿಕೊಂಡರು ರಾಮ ಸಿಕ್ಕಿದನೆನುತಲಿ
ಹತ್ತಿತು ಉರವಣಿಗೆಯಲಿ ॥೩೨॥

ಹರಿಗೆಯ ಬಲವನಬ್ಬರಿಸಿ ಹೊಯ್ಯಲು ರಾಮ
ಹರಿದು ಮಿದುಳು ಚಿಪ್ಪುವೊಡೆದು ।
ಕರುಳು ಹರಿದು ಕಾಳಿಜ ತಂಡು ತುಂಡಾಗಿ
ಮರುಳು ಭೂತಕೆ ಉಣಿಸಿದರು ॥೮೩॥

ಹಬ್ಬಾಯಿತು ರಣಭೂತಪ್ರೇತಗಳಿಗೆ
ಬೊಬ್ಬಿಡುವರು ತಮತಮಗೆ ॥೮೪॥

ರಾಮನು ಸತ್ತ ಸುದ್ದಿಯ ಕೇಳಿ ಬಂದೆವು
ಸೀಮೆಯ ಮೆಟ್ಟಿದೆವು ನಾವು ।
ಭೂಮಿಯ ಬಗೆದು ಹೊಕ್ಕರೆ ನಮ್ಮ ಬಿಡನೆಂದು
ನೇಮಿ-ಚಿಂತಿಸಿ ತಿರುಗಿದನು ॥೮೫॥

ಕತ್ತಿಯ ಬೆಳಕ ರೂಪಿಗೆ ರೂಪನು ಕಂಡು
ಮತ್ತೆ ಬಂದನು ರಾಮನೆನುತ ।
ಹುತ್ತವನೇರಿ ಹುಲ್ಲನೆ ಕಚ್ಚಿ ತುರುಕರು
ಬತ್ತಲೆ ಪರಿದು ಓಡಿದರು ॥೮೬॥

ಅಟ್ಟಿ ಬೆಟ್ಟವು ಗವಿಗಳ ಗಹ್ವರ ಬಿದ್ದು
ಬಟ್ಟೆ ಕಾಣದೆ ಓಡಿದರು ।
ಅಟ್ಟಿ ಹೆದ್ದೊರೆಯ ತನಕಲು ರಾಮಯ್ಯನು
ಗಟ್ಟಿಸಿ ಬೊಲ್ಲನ ತಟ್ಟಿದನು ॥೮೭॥

ತೊರಗಲ್ಲು ಬಾದಾವಿಯ ಊರ ಮುಂದಲ್ಲಿ
ತುರಗವನಿಳಿದ ಬಾದೂರ ।
ಮುರಿದೋಡಿಹೋದ ಬಲವ ಕಂಡು ಕಂಪಿಲ
ಕರೆಸೆಂದ ಬೈಚಪ್ಪನೊಡನೆ ॥೮೮॥

ಕಂಡ ಕಂಪಿಲ ಉಪ್ಪರಿಗೆಯೊಳಗೆ ಇರ್ದು
ದಂಡ ಬಿಟ್ಟೋಡುವರ ನೋಡಿ ।
ಚಂಡವಿಕ್ರಮ ಬೈಚಪ್ಪನೊಳಿಂತೆಂದ
ಕಂಡೆನೊ ಹೊಸ ರಾಹುತನ ॥೮೯॥

ಧೀರನಹುದು ನಿನ್ನಯ ಬಂಟ ಬೈಚಪ್ಪ
ವೀರನಹುದು ರಣದೊಳಗೆ ।
ಹೇರಿಯ ನೇಮಿಯ ಮೇಲೆ ಕೂರ್ಗಣೆಗಳ
ತೋರಿದ ಕೈಯ್ಯ ಚಳಕವ ॥೯೦॥

ರಾಮನಲ್ಲದೆ ರಣದೊಳು ಕಾದುವರಿಲ್ಲ
ಪ್ರೇಮದಿ ಎನ್ನೊಳಗುಸುರೊ ।
ಆ ಮಹಾ ಸುರಿತಾಳ ರಾಯಮರ್ದನನೆಂದು
ಭೂಮಿಪ ಕಂಪಿಲ ನುಡಿದ ॥೯೧॥

ಸತ್ತವರೆದ್ದು ಬಹರೆ ಕೇಳು ಕಂಪಿಲ
ಮೃತ್ಯು ನುಂಗಿದ ತುತ್ತು ಬಹುದೆ ।
ಮತ್ತೊಬ್ಬ ಹೊಸ ರಾಹುತನೆಂದು ಬೈಚಪ್ಪ
ಪೃಥ್ವಿಪಾಲಕಗೆ ಹೇಳಿದನು ॥೯೨॥

ಅವನ ಕರೆಸು ಮಂತ್ರಿ ದಳದುಳಿಕಾರನ
ಅವನ ಕರೆಸು ನಿನ್ನವನ ।
ಅವನ ಕರೆಸೊ ಮಂತ್ರಿಗಳ ಶಿರೋಮಣಿಯೆ
ಅವನ ಕರೆಸು ಕರೆಸೆಂದ ॥೯೩॥

ಹಿಂದಕೆ ಐದಾರು ಗಾವುದ ಅಟ್ಟಿ ರಾಮಯ್ಯ
ಬಂದನು ತನ್ನ ಕುಮ್ಮಟಕೆ ।
ಸಂದೇಹವಿಲ್ಲದೆ ಕಂಪಿಲರಾಯನ
ಕಂದ ರಾಮಯ್ಯ[ನು] ಭರದಿ ॥೯೪॥

ಬೆಳ್ಳಿ ಕಾಲಾಟದ ಕುದುರೆಯನೇರಿದ
ಮೆಲ್ಲನೊಂದೆರಡು ಪೇರಿಯನು ।
ಬಲ್ಲ ಪರಿಯಲ್ಲಿ ಪೇರಿಯಮಾ[ಡೆ] ತೇಜಿಯ
ಅಲ್ಲಿ ಸಂಶಯವು ಕಂಪಿಲಗೆ ॥೯೫॥

ಕರೆಯಲಟ್ಟಿದನು ಬೈಚಪ್ಪ ಪ್ರಧಾನನು
ಅರಸು ಕಂಪಿಲರಾಯನೆಡೆಗೆ ।

ಬರಹೇಳು ಕಂಪಿಲಭೂಪನ ಎನ್ನಲು ಸ
ತ್ಕರಿಸಿ ತೇಜಿಯ ರಾಮನಿಳಿದ ॥೯೬॥

ಭರದಿಂದ ಬಂದು ತಂದೆಗೆ ಕಾಣಿಕೆಯಿಟ್ಟು
ಸೆರೆಯ ಹಿಡಿದವರ ಒಪ್ಪಿಸಲು ।
ಧುರಧೀರ ಕಂಪಿಲರಾಯನು ಮನಮೆಚ್ಚಿ
ಧರೆಯೊಳಿವಗೆ ಎಣೆಗಾಣೆ ॥೯೭॥

ತಲೆಯ ಠೌಳಿಯ ವಜ್ರಾಂಗಿಯ ತೆಗೆತೆಗೆ
ಚೆಲುವರ ಗಂಡನೆ ನೀನು ।
ಕಲಿಗಳರಸೆ ಏಳು ತಿಂಗಳು ಕಾಣೆವು ಸುಲಭ
ರಾಮಯ್ಯ ಮುಖದೋರೊ ॥೯೮॥

ಎನಲು ತಲೆಯ ಮೇಲೆ ಠೌಳಿಯ ತೆಗೆಯಲು
ತನುಜನ ಮುಖ ನೋಡಿದನು ॥೯೯॥

ಮಗನ ಮುಖವ ನೋಡಿ ಬಾಯೊಳು ಬಾಯಿಟ್ಟು
ಮಿಗೆ ದುಃಖಮಾಡಿ ಕಂಪಿಲನು ।
ಒಗುವ ಕಂಬನಿದುಂಬೆ ರಾಮನ ಮೋಹದ
ಬಗೆಯ ನಾನೇನ ಪೇಳುವೆನು ॥೧೦೦॥

ತಂದೆ ಕಂಪಿಲನ ದುಃಖವ ನೋಡಿ ರಾಮಯ್ಯ
ಇಂದೊಂದ ನುಡಿದ ಮೇಲ್ಮಾತ ।
ಸಂದೇಹವ್ಯಾಕೆನ್ನ ಮನಸನು ಕಾಣದೆ
ಕೊಂದೆಯೊ ಚಿಕ್ಕಮ್ಮಗಾಗಿ ॥೧೦೧॥

ರಕ್ತ ಕಾಯವ ತೊಳೆಸಿ ಕಂಪಿಲರಾಯ
ಉತ್ತುಮ ವಜ್ರಾಂಗಿ ತೊಡಿಸಿ ।
ಹತ್ತುಸಾವಿರ ಹೊನ್ನ ದಾನಧರ್ಮವ ಮಾಡಿ
ಮುತ್ತ ನಿವಾಳಿಯ ಚೆಲ್ಲಿ ॥೧೦೨॥

ಎನಲೇಳುತ ಬೀಳುತ ಹರಿಯಮ್ಮ ಆ
ಮನುಜನಿಗೆ ಹಿಡಿಹೊನ್ನ ।

ಕಂದನ ನೋಡಬೇಕೆನುತಲಿ ಹರಿಯಮ್ಮ
ಬಂದಳು ಅಂದಣವೇರಿ ॥೧೦೩॥

ಏಳು ತಿಂಗಳು ನಿನ್ನ ಮುಖವ ಕಾಣೆನೊ ರಾಮ
ಬಾಳುವ ಕಾಲವ ಮರೆದೆ ।
ಹೇಳುವುದೇನು ವಿಧಿಯಿಂದ ಹರಿಯಮ್ಮ
ಗೋಳಿಟ್ಟು ಮರುಗಿ [ನುಡಿದಳು] ॥೧೦೪॥

ಅಕ್ಕ ಮಾರಮ್ಮನು ಕರ ಮಿಗೆ ಕಂಬನಿ
ಒಕ್ಕಳು ದುಃಖದೊಳಾಗ ।
ತಂಗಿ ಸಿಂಗಮ್ಮ ಅಳಲುವ ಸಮಯಕ್ಕೆ
[ಬಿ]ನ್ನನೆ ರಾಮಲದೇವಿ ॥೧೦೫॥

ಸಂಗಡ ನಾಲ್ಕೈದು ಸವತೇರು ಸಹವಾಗಿ
ಪಾದಂಘ್ರಿಗಳಿಗೆ ಎರಗಿರು ।
ಎರಗಲೆಬ್ಬಿಸಿ ಸತಿಯರ ರಾಮನಾಥನು
ಕರ ಮೋಹಿಸಿದನಾಕ್ಷಣದಿ ॥೧೦೬॥

ಎತ್ತಿ ಸಾರುವ ಕಹಳೆಗಳ ಬಿರಿದುಗಳನು
ಇತ್ತ ಕೇಳಿದಳು ರತ್ನಾಜಿ ।
ಎತ್ತಳ ಕಹಳೆಯು ನೋಡಿ ಬಾ ಎನುತಲಿ
ತೊತ್ತು ಸಂಗಿಯ ಕಳುಹಿದಳು ॥೧೦೭॥

ತೊತ್ತು ಹರಿದು ಬಂದು ಮೃತ್ಯು ಬಂದಿತು ಎಂದು
ಸತ್ತ ರಾಮುಗ ಬಂದನೆನಲು ।
ಕಿತ್ತಲಗಿನ ಮೊನೆ ಎದೆಯ ಕೊಳ್ಗೊಂಡಂತೆ
ಚಿತ್ತ ಬೆರಗಾದಳು ರತ್ನಿ ॥೧೦೮॥

ನೋಡು ಸಂಗಾಯಿ ಕಂಪಿಲರಾಯ ಮರೆಮಾಡಿ
ಮಾಡಿದ ಮಾಟವನೆಂದು ।
ಹೂಡಿದಳಾಗ ಕೊರಳಿಗೆ ನೇಣುಗಳನು
ಈಡಾಡಿದಳು ಪ್ರಾಣವನು । ।೧೦೯॥

ಕಂಪಿಲನರಸಿ ಭಾವೆ ರತ್ನಾಜಿಯು
ಕೋಪಿಸಿ ಪ್ರಾಣವ ಬಿಡಲು ॥೧೧೦॥

ಒಡತಿ ಸತ್ತುದ ಕಂಡು ಹಡಪದ ಸಂಗಿಯು
ಒಡಲನಿನ್ನೇನ ಹೊರೆವೆನು ।
ಕಡಿದುಕೊಂಡಳು ತಾನು ಕಠಾರಿಯ ತೆಕ್ಕೊಂಡು
ಮಡಿದು ಬಿದ್ದುಳು ಸಂಗಿಯತ್ತ ॥೧೧೧॥

ನೆರದಿರ್ದ ಸತಿಯರು ಪರಿದೋಡಿಬಂದರು
ಇರದೆ ಹೇಳಿದರು ಕಂಪಿಲಗೆ ।
ಆಗಲೆ ಸತ್ತಳೆಂಬುದ ಕೇಳಿ ಕಂಪಿಲ
ಹೋಗಲಿ ಅವಳು ಪಾತಕಿಯು ॥೧೧೨॥

ಆನೆಯ ಕಾಲಿಗೆ ಕಟ್ಟಿ ಎಳೆಸು ಎಂದು
ನುಡಿದನು ಮಂತ್ರೀಶನೊಡನೆ ।
ಯಾತಕೆ ಸತ್ತಳು ಚಿಕ್ಕಮ್ಮನೆನುತಲಿ
ಭೀತಿಗೊಳ್ಳುತ ರಾಮ ಕೇಳಿ ॥೧೧೩॥

ಮನ್ನೆಯ ಮಗುಟವರ್ಧನ ಖಾನಖಾನರು
ಕನ್ನೋಜಿ ಶ್ಯಾನೆ ಮಾರ್ಬಲವು ।
ಚೆನ್ನಾಗಿ ತುರುಕರ ಬಲವೆಲ್ಲ ಕಳುಹಿಸಿ
ತನ್ನರಮನೆಯನು ಹೊಕ್ಕ । ।೧೧೪॥

ನೇಮಿ ಬಂದುವ ಕೇಳಿ ಸುರಿತಾಳ ಕಳುಹಿದ
ಸೀಮೆಯೊಳಗಾದ ಕಾರ್ಯವನು ।
ಪ್ರೇಮದಿ ಬಂದು ಹೇಳಿದ ತನ್ನ ಸುದ್ದಿಯ
ರಾಮ ಬಂದೆನ್ನ ರಣದೊಳು ॥೧೧೫॥

ಸತ್ತ ರಾಮನು ಎಂತು ನೇಮಿಯ ದಂಡನು
ಮುತ್ತಿಕೊಂಡನು ಎಂಬ ಸುದ್ದಿ ।
ಮತ್ತೆ ಕೇಳುತಲಾ ಸುರಿತಾಳ ನೇಮಿಯ
ಒತ್ತಿಗೆ ಕರೆದು ಹೇಳಿದನು ॥೧೧೬॥

ಹೇಗಾಯಿತು ನೀನು ಹೋದ ಸುದ್ದಿಯು ಈಗ
ಬೇಗವೆಮ್ಮೊಡನೆ ಪೇಳೆನಲು ।
ಕೂಗಿ ಜಡಿದು ಕುಮ್ಮಟವನು ಮುತ್ತಲು
ಆಗ ವೇಗದಿ ರಾಮ ಬಂದು ॥೧೧೭॥

ಮುತ್ತಿಗೆ ತೆಗೆಸಿ ತತ್ತರ ತರಿದೊಟ್ಟಿದ
ಮೃತ್ಯು ತಾ ಮುರಿದು ಹೊಕ್ಕಂತೆ ।
ತಾಳಿದ ಕೋಪದಿ ಪೇಳ್ದ ರತ್ನಾಜಿಯ
ಹಾಳು ಹೆಣನ ತೆಗಸೇಳು ॥೧೧೮॥

ತನ್ನ ಪ್ರಾಣಕೆ ತಾನು ಮುನಿದಳ ಎಳೆತಂದು
ಭಿನ್ನವಿಲ್ಲದೆ ಅಗುಳೊಳಗೆ ।
ಅನ್ಯಾಯಕಾತಿಯು ಹೋಗಲೆನುತ ಮಂತ್ರಿ
ಚೆನ್ನಾಗಿ ಎಳೆದು ಹಾಕಿಸಿದ ॥೧೧೯॥

ನೆರದ ಜನರು ಎಲ್ಲ ಪರಿದೋಡಿ ಬಂದಾಗ
ವಿರಸದವಳ ಎಳೆದೊಯ್ದು ।
ತಿರುಗಿ ಎಲ್ಲರು ಯಮದೂತರ ಕೈಯೊಳು
ಗುರಿಮಾಡಿ ಪುರಜನರೆಲ್ಲ ॥೧೨೦॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ವಿದಿತ ವಿಶ್ವಾಸದಿ ದೆಶೆ ಅಷ್ಟ ಶೂನ್ಯದ
ಸುದತಿ ಅಳಿದ ಸಂಧಿ ಮುಗಿಯೆ ॥೧೨೧॥

ಅಂತು ಸಂಧಿ ೨೧ಕ್ಕಂ ಪದನು ೨೩೧೭ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨೨

❖

ಕೊಮಾರ ರಾಮಯ್ಯನಿಗೆ ಪಟ್ಟಕಟ್ಟಿದುದು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ರಾಮನ ನೆನೆ ಕಂಡ್ಯಾ ಮನವೆ ಜಟ್ಟಂಗಿಯ
ರಾಮನ ನೆನೆ ಕಂಡ್ಯಾ ತನುವೆ ।
ರಾಮರಾಮಾ ಎಂಬ ನಾಮವ ನೆನೆದರೆ
ಕಾಮಿತ ಫಲವೀವ ರಾಮ ॥೨॥

ರಾಮಗೆ ಪಟ್ಟವ ಕಟ್ಟಬೇಕೆನುತಲಿ
ನೇಮಿಸಿದನು ಮನದೊಳಗೆ ।
ಭೂಮೀಶ ಕಂಪಿಲ ತನ್ನ ಪ್ರಧಾನನೊಳ್
ಆಲೋಚನೆಯ ಮಾಡಿದನು ॥೩॥

ಕರಸಿಕೊಂಡನು ಆಗ ಮಂತ್ರಿ ಬೈಚಪ್ಪನ
ಬೆರಸಿ ಮಾತಾಡಿದರಾಗ ।
ಧುರಧೀರ ರಾಮಗೆ ದೊರೆತನವನು ಮಾಡಿ
ಹರುಷವ ನೋಡಬೇಕೆಂದ ॥೪॥

ಮುಪ್ಪಾದೆವು ಎಪ್ಪತ್ತು ವರುಷವು ತುಂಬಿ
ಇಪ್ಪೆವೆ ಸ್ಥಿರಕಾಲವಾಗಿ ।

ಅಪ್ಪಾಜಿ ಕೇಳು ನೀ ಮಂತ್ರಿ ಬೈಚಪ್ಪಗೆ
ಬೆರಸಿ ಮಾತಾಡಿದರಾಗ ॥೫॥

ಹಾಗೆಯಾಗಲಿ ನಿನ್ನ ಮನಸಿನಮತೆ ರಾಯ
ಈಗ ಕರೆಸು ಜೋಯಿಸರ ।
ಕರೆಸಿದ ತನ್ನಯ ರಾಜಪುರೋಹಿತರ
ಕರೆಸಿದ ವೇದಪಾಠಕರ ॥೬॥

ಬಂದರು ಜೋಯಿಸ ಬ್ರಾಹರು ದಿವ್ಯರು
ನಿಂದರು [ಮ]ಖದಲೆ ಅವರು ।
ಗಂಧ ಅಕ್ಷತೆ ಖರ್ಜೂರ ಕದಳಿಗಳನು
ಮುಂದಿಟ್ಟು ಹರಕೆಯನಾಂತು ॥೭॥

ಕರಸಿದಿರೇಕೆಮ್ಮ ಅರಸೆ ಕಂಪಿಲರಾಯ
ದೊರೆ ಕೊಡು ಎಮಗೆ ಬುದ್ಧಿಯನು ।
ಧುರಧೀರ ರಾಮಗೆ ಪಟ್ಟಗಟ್ಟಲಿಬೇಕು
ಒರೆದು ಪೇಳಿರಿ ಶುಭ ದಿವಸ ॥೮॥

ಇಂದಿನ ದಿವಸ ಒಳ್ಳೆಯದು ಅಮೃತಯೋಗ
ಬಂದಿದೆ ಶುಭಲಗ್ನಯೋಗ ।
ಕಂದ ರಾಮಯ್ಯಗೆ ಪಟ್ಟಾಗಬೇಕೆಂದು
ನಿಂದು ಹೇಳಿದರು ಜೋಯಿಸರು ॥೯॥

ತರಿಸಿ ವಸ್ತ್ರಾಭರಣ ಪುಷ್ಪಂಗಳೆಲ್ಲವ
ಕರೆಸಿದ ಮಾನ್ಯರನೆಲ್ಲ ।
ಹರುಷದಿ ತನ್ನ ಹಳಬರನೆಲ್ಲ ಕರೆಸಿದ
ಅರಸುಮಕ್ಕಳ ರಾಹುತರ ॥೧೦॥

ಎಲ್ಲರ ಕರೆಸಿಕೊಂಡಾಗ ಕಂಪಿಲರಾಯ
ಉಲ್ಲಾಸದಿಂದ ತಾನೆದ್ದು ।
ಬಲ್ಲಿದ ರಾಮಗೆ ಪಟ್ಟದ ಪಿರಂಗಿಯ
ನಿಲ್ಲದೆ ಕೊಟ್ಟು ಕರೆಸಿದನು ॥೧೧॥

ಉಡುಗೊರೆ ಉತ್ಸಾಹ ಒಡವೆ ವಸ್ತುಗಳನು
ಕೊಡೆ ಕೊಟ್ಟ ಕಂಪಿಲರಾಯ ।
ದೃಢಗಲಿ ರಾಮಯ್ಯ ಸ್ಥಿರಪಟ್ಟವಾಳೆಂದು
ಕೊಡೆ ಒಳ್ಳೆ ಬುದ್ಧಿಲಿ ಕೊಟ್ಟ ॥೧೨॥

ಸದರೆಲ್ಲ ಎದ್ದು ಕೈಮುಗಿದರು ರಾಮಯ್ಯಗೆ
ಮುದದಿಂದ ಬೈಚಪ್ಪ ಸಹಿತ ।
ಬುಧರೆಲ್ಲ ಎದ್ದು ಮಂತ್ರಾಕ್ಷತೆ ಇತ್ತಾಗ
ಮದಮುಖ ರಾಮನ ಹರಸಿ ॥೧೩॥

ಪಟ್ಟಾಭಿಷೇಕವ ಮಾಡಿ ರಾಮಯ್ಯಗೆ
ಪಟ್ಟಣವೆಲ್ಲ ಶೃಂಗಿರಿಸಿ ।
ನೆಟ್ಟನೆ ಆನೆಯ ಮೇಲೆ ಸಕ್ಕರೆ ಹೇರಿ
ಕೊಟ್ಟರು ಸಕಲ ಜನಕೆಲ್ಲ ॥೧೪॥

ಬಂದ ಬ್ರಾಹ್ಮರಿಗೆಲ್ಲ ನಿಂದು ಕೈಮುಗಿದರು
ತಂದಿಕ್ಕಿದರು ಹಿಡಿಹೊನ್ನ ।
ವಂದನೆಗೈದು ವೀಳ್ಯವಕೊಟ್ಟು ಕಳುಹಿದ
ಕಂದ ರಾಮಯ್ಯ ಅರ್ತಿಯಲಿ ॥೧೫॥

ಬಂದವರೆಲ್ಲರಿಗೆ ಗಂಧ ವೀಳ್ಯವನಿತ್ತು
ಸಂದೇಹವಿಲ್ಲದೆ ರಾಮ ।
ತಂದೆಯ ಪಾದಕ್ಕೆ ಬಿದ್ದು ವಂದನೆಮಾಡಿ
ಮಂದಿರವನು ಒಳಪೊಕ್ಕು ॥೧೬॥

ಹರಿಯಲದೇವಿ ಪಾದಕ್ಕೆರಗಿ ರಾಮಯ್ಯ
ಕರವೆತ್ತಿ ಕೈಮುಗಿದನು ।
ಸ್ಥಿರಪಟ್ಟವಾಳೆಂದು ಹರಕೆಯ ಕೊಟ್ಟಳು
ಪರನಾರಿ ಸಹೋದರನಾಗು ॥೧೭॥

ಮುತ್ತಿನಾರತಿಗಳ ಎತ್ತಿಸಿ ರಾಮಗೆ
ಮುತ್ತೈದೆರೆಲ್ಲ ಹರಸಿದರು ।

ಸುತ್ತಳ ರಾಯರ ಗೆಲ್ಲೆಂದು ಹರಕೆಯ
ನಿತ್ತರು ಅಕ್ಕತಂಗಿಯರು ॥೧೮॥

ಅಲ್ಲಿಂದ ಅಪ್ಪಣೆ ತಕ್ಕೊಂಡು ರಾಮಯ್ಯ
ನಿಲ್ಲದೆ ತನ್ನರಮನೆಗೆ ।
ಮೆಲ್ಲನೆ ಬಂದು ಪಟ್ಟೆಮಂಚದಿ ಮಲಗಿದ ತನ್ನ
ವಲ್ಲಭೆಯರ ಮೇಳದಲಿ ॥೧೯॥

ಉದಯದೊಳೆದ್ದು ಊಟವಮಾಡಿ ರಾಮಯ್ಯ
ಸದರಿಗೆ ಬಂದು ಕುಳಿತನು ।
ಒದಗಾಗಿ ಕರೆಯಿರೊ ಮನ್ನೆ ರಾಹುತರನು
ಮುದದಿಂದ ಗಣತಿಗೆ ಎನುತ ॥೨೦॥

ಕರಸಿದ ಕರಣಿಕ ಲಿಂಗನ ಬೇಗದಿ
ಬರಕೊಳ್ಳೊ ಮಂದಿ ಲೆಕ್ಕವನು ॥೨೧॥

ಇಟ್ಟು ತೊಟ್ಟು ಶೃಂಗರವಾಗಿ ಮಾನ್ಯರನೆಲ್ಲ
ನೆಟ್ಟನೆ ಠಾಣ್ಯ ರಾಹುತರ ।
ಕಟ್ಟಿಗೆಕಾರರ ಕಳಿಸಿದ ರಾಮಯ್ಯ
ತಟ್ಟನೆ ಕರೆತನ್ನಿ ಎನುತ ॥೨೨॥

ಕೇರಿಕೇರಿಯೊಳೆಲ್ಲ ಸಾರುತ ಬಂದರು
ವೀರ ಮನ್ನೆಯ ರಾಹುತರು ।
ಕಾರಣಿಕದ ರಾಮ ಕರೆಯೆಂ[ದ] ಗಣತಿಗೆ
ಧೀರ ಮನ್ನೆಯರೆಲ್ಲ ಬನ್ನಿ ॥೨೩॥

ಶೃಂಗಾರವಾಗಿ ಸಂಗಡ ನಿಮ್ಮ ಮಂದಿಯ
ಶೃಂಗರಿಸಿಕೊಂಡು ಬನ್ನೆನಲು ।
ನಿಲ್ಲದೆ ತಾವು ತಮ್ಮ ಮಂದಿ ಕೂಡಿಸಿಕೊಂಡು
ಉಲ್ಲಾಸದಲಿ ಬಂದರಾಗ ॥೨೪॥

ಬೂಟಕ ಬೊಮ್ಮನು ಬಂದು ಕೈಮುಗಿದನು
ಗಟ್ಟ್ಯುಳ್ಳ ಮಂದಿ ನೂರಾರು ।

ದಿಟ್ಟನಿವನು ಎಂದು ಕೊಟ್ಟ ರಾಮಯ್ಯನು
ಪಟುನೂಲು ಕೊರಳಪದಕವ ॥೨೫॥

ಮನ್ನಾಲ ಮಾಚನು ಬಂದು ಕೈಮುಗಿದನು
ಇನ್ನೂರು ಆಳು ತಾ ಸಹಿತ ।
ಮನ್ನೆಯ ಇವ ಬಲ್ಲಿದನೆಂದು ರಾಮಯ್ಯ
ಹೊನ್ನ ಸರಪಳಿ ಕೊಟ್ಟನವಗೆ ॥೨೬॥

ಗಡಿಯಕೋಟೆಯ ದೇವ ಬಂದು ಕೈಮುಗಿದನು
ಒಡನೆ ನೂರಾಳು ತಾ ಸಹಿತ ।
ಪಡೆ ಮುರಿದರೆ ಹೊಕ್ಕು ಕಡಿವನು ಇವನೆಂದು
ಕಡುಕು ಕಂಠಮಾಲೆಯ ಕೊಟ್ಟ ॥೨೭॥

ಯನುಮಾಲ ಚಿತ್ತನು ಬಂದು ಕೈಮುಗಿದನು
ಅನುವಾದ ಬಂಟರೈವತ್ತು ।
ಮೊನೆಗಾರ ಇವನೆಂದು ಮೆಚ್ಚಿನ ಮಾನ್ಯಗೆ
ಕನಕಮಣಿಯನಿತ್ತನವಗೆ ॥೨೮॥

ಮರುಳೆಯ ಪಾಪನು ಬಂದು ಕೈಮುಗಿದನು
ಅರುವತ್ತು ಬಿಲ್ಲಿನ ಮಂದಿ ।
ಪರಬಲಾಂತಕನಿವ ಬಲ್ಲಿದನಹುದೆಂದು
ಸರಮುತ್ತು ಚವುಕಳಿ ಕೊಟ್ಟ ॥೨೯॥

ಎರಬೋತು ಕಾಮನು ಬಂದು ಕೈಮುಗಿದನು
ಬರುಚಿಯ ಮಂದಿ ನೂರಾಳು ।
ಕರೆದು ರಾಮಯ್ಯನು ಅವನಿಗೆ ಕೊಟ್ಟನು
ಬಿರಿದುಬಾವುಲಿ ಸರಪಳಿಯ ॥೩೦॥

ತುಳುವರ ಹಿರಿಯ ಬಂದ ಕೈಮುಗಿದನು
ಒಳಕಾವಲ ಮಂದಿ ಇನ್ನೂರು ।
ಹಳದಿ ಬಿರಿದು ಮುತ್ತಿನೊಂಟಿಯು ಕಡೆಯವ
ಬಳಸಿ ಕೊಟ್ಟನು ರಾಮಯ್ಯ ॥೩೧॥

ನೆಲಗತ್ತಿ ತಿಪ್ಪನು ಬಂದು ಕೈಮುಗಿದನು
ಹೊಣಕೆಯ ಮಂದಿ ಇನ್ನೂರು ।
ಹಳದಿ ಬಿರಿದು ಮುತ್ತಿನೊಂಟಿಯು ಕಡೆಯವು
ಬಳಸಿ ಕೊಟ್ಟನು ರಾಮಯ್ಯ ॥೩೨॥

ಕೊಟಗರ ದೇವನು ಬಂದು ಕೈಮುಗಿದನು
ಮೀಟಾದ ಮುನ್ನೂರು ಹರಿಗೆ ।
ಅಟಮಟಗೊಳಿಸುವ ತುರುಕರ ಇವನೆಂದು
ಕುಟುಕು ಮುರುಡಿಯ ಸರಪಳಿಯ ॥೩೩॥

ಒಕ್ಕಲಿಗರ ಮುದ್ದ ಬಂದು ಕೈಮುಗಿದನು
ಮುಕ್ಕಣ್ಣ ಬಲ್ಲೆವು ನೂರು ।
ರಕ್ಕಸಘಾತ ತುರುಕರ ಮೇಲೆ ಇವನೆಂದು
ಹೊಕ್ಕುಳಗಂಟೆಯ ಕೊಟ್ಟ ॥೩೪॥

ಮಾದಿಗ ಹಂಪನು ಬಂದು ಕೈಮುಗಿದನು
ಅವಗೆ ಐದೂರು ಉಮ್ಮಳಿಯ ॥೩೫॥

ಅಸಗೋಡ ಬಸವನು ಬಂದು ಕೈಮುಗಿದನು
ಹೊಸಕಟ್ಟಿನ ಈಟಿ ಇನ್ನೂರು ।
ದೆಸೆಗೆಡಿಸುವ ತುರುಕರನೆಂದು ರಾಮಯ್ಯ
ಬಸವಗೆ ಕೊಟ್ಟ ಜವಳಿಯನು ॥೩೬॥

ಅಕ್ಕಸಾಲೆರ ಚಿಕ್ಕ ಬಂದು ಕೈಮುಗಿದನು
ಉಕ್ಕುವ ಬಾಣ ನೂರಾರು ॥೩೭॥

ಮಲೆಯ ಕಾವಲ ಕಾಟನಾಯಕ ಕೈಮುಗಿಯಲು
ಹಳೆಯ ಮಂದಿಯು ಮುನ್ನೂರು ।
ಇಳಿದಿಹ ದಂಡಿಗೆ ಇದಿರೇರಿ ನಡೆವನು ಜ
ಗಳಕ್ಕೆ ಕೊಟ್ಟ ಉಡುಗೊರೆಯ ॥೩೮॥

ಬಾಣದ ಬಸವನು ಬಂದು ಕೈಮುಗಿದನು
ಬಾಣದ ಮಂದಿ ನೂರಾರು ।

ಚೋಣಿಕಾಳಗ ಹಿಡಿವನು ಎಂದು ರಾಮಯ್ಯ
ಜಾಣ ಕೊಟ್ಟನು ಹಿಡಿಹೊನ್ನ ॥೩೯॥

ದಳಧೂಳಿ ಮಾದನು ಬಂದು ಕೈಮುಗಿದನು
ಒಳಕಾವಲ ಮಂದಿ ನೂರು ।
ಅಳುಕಿ ತುರುಕರ ತಲೆಯ ತರಿವನು ಇವನೆಂದು
ಬಳೆಯ ಕೊಟ್ಟನು ರಾಮವಗೆ ॥೪೦॥

ಬುಕ್ಕನ ಪಾಲನು ಬಂದು ಕೈಮುಗಿಯಲು
ಮುಕ್ಕಣ್ಣ ಬರುಚಿ ಮುನ್ನೂರು ।
ಕಕ್ಕಸಗಾರ ಮನ್ನೆಯನೆಂದು ಇವನಿಗೆ
ಲೆಕ್ಕವಿಲ್ಲದೆ ಕೊಟ್ಟ ಹೊನ್ನ ॥೪೧॥

ಗುತ್ತಿಯ ಕಾಚನು ಬಂದು ಕೈಮುಗಿದನು
ಕತ್ತಿಗಾರಿಕೆ ನೂರಾರು ।
ಕತ್ತಲೊಳಗೆ ಕಗ್ಗೊಲೆ ಬಿದ್ದು ಕಡಿವನೆಂದು
ಮುತ್ತಿನಾಭರಣವ ಕೊಟ್ಟ ॥೪೨॥

ಗುಜ್ಜಲ ಓಬನು ಬಂದು ಕೈಮುಗಿಯಲು
ಗಾಜಿನ ಮಂದಿ ಮುನ್ನೂರು ।
ಹೆಜ್ಜೆಹೆಜ್ಜೆಗೆ ಡೊಳ್ಳು ಥಂಮೆಂದರಿರಿವನು
ಮಝು ಬಾಪುರಿ ಕೊಟ್ಟ ರಾಮ ॥೪೩॥

ರಕ್ಕಸ ಮಾದನು ಬಂದು ಕೈಮುಗಿದನು
ಮುಕ್ಕಣ್ಣ ಭಲ್ಲೆ ಮುನ್ನೂರು ।
ಪಚಾರಿಸಿ ಖಾನರನಿಟ್ಟು ಕೆಡಹುವನೆಂದು
ಪಚ್ಚೇದ ಕಡಗವ ಕೊಟ್ಟ ॥೪೪॥

ಕುಂಬಕೋಣೆಯ ವೀರ ಬಂದು ಕೈಮುಗಿದನು
ಕಂಬಿಮರ ಬಿಲ್ಲು ಮುನ್ನೂರು ।
ಅಂಬಿಗೊಬ್ಬೊಬ್ಬರ ಕೆಡಹಿ ತೋರುವನೆಂದು
ತುಂಬಿಕೊಟ್ಟನು ಜಾಳಿಗ್ಹೊನ್ನ ॥೪೫॥

ಹಗ್ಲಾದ ಮಾದ ಬಂದು ಕೈಮುಗಿದನು
ಬಿಲ್ಲೊಂದು ನೂರು ಮನ್ನೆಯರು ।
ಕದ್ದು ಕಗ್ಗೊಲೆಮಾಡಿ ಕುದುರೆ ತರುವನು
ಇವ ಹುಗ್ಗಿ ತುಪ್ಪಕೆ ಊರ ಕೊಟ್ಟ ॥೪೬॥

ನಲ್ಲೂರ ನಲ್ಲನು ಬಂದು ಕೈಮುಗಿದನು
ಬಿಲ್ಲೊಂದು ನೂರು ಮನ್ನೆಯರು ॥೪೭॥

ಕುಂದುರ್ಪಿ ಪಾಲನು ಬಂದು ಕೈಮುಗಿದನು
ತಂದು ನೂರಾಳು ಮನ್ನೆಯರು ।
ಹಿಂದುಮುಂದಾದ ಖಾನರ ಕಡಿವನುಯೆಂದು
ಚಂದ್ರಗಾವಿಯ ಬಿರಿದ ಕೊಟ್ಟ ॥೪೮॥

ರಾಯದುರ್ಗದ ರಾಮ ಬಂದು ಕೈಮುಗಿದನು
ಕಾಲಸರದ ಮಂದಿ ನೂರು ।
ಅವನಿಗೆ ಕೊಟ್ಟನು ಹೊನ್ನು ಜವಳಿಗಳ
ಉನ್ನತ ವಸ್ತ್ರ ಭೂಷಣವ ॥೪೯॥

ಬಿರಿದು ಬಾವುಲಿ ಕೊಟ್ಟ ಕಾಲಸರವ ಕೊಟ್ಟ
ಮೇಲಾದಾಭರಣವ ಕೊಟ್ಟ ॥೫೦॥

ಎಪ್ಪತ್ತು [ಎರಡು] ಮಾನ್ಯರಿಗೆಲ್ಲ ವೀಳ್ಯವ
ತಪ್ಪದೆ ಕೊಟ್ಟನು ರಾಮ ।
ಒಪ್ಪಿ ತುರುಕ[ಗೆ] ಹೆಜ್ಜಾಳ ಕಟ್ಟುವದೆಂದು
ಒಪ್ಪದಿ ಪೇಳಿದ ರಾಮ ॥೫೧॥

ಕುದುರೆಯ ಪೌಜ ಬರಹೇಳಿರೊ ರಾಹುತರು
ಒದಗಿ ಬರಲು ಬೇಗದಲಿ ।
ಮದಗಜ ಹಿಂಡು ರಾಹುತರ ಬರಹೇಳೆಂದು
ಚೆದುರ ರಾಮಯ್ಯ ಪೇಳಿದನು ॥೫೨॥

ಆರೆಯ ಚಾರಮರಾಯನ ಮಕ್ಕಳು
ಸ್ವಾರಿಯ ವಾಜಿ ಸಾವಿರವು ।

ದೂರಳ ದಂಡಿನ ದಾರಿಯ ಕಾಯ್ವಂತ
ಭಾರಿಯ ವಾಜಿ ಏಳ್ನೂರು ॥೫೩॥

ದೇವಿಸೆಟ್ಟಿಯ ಲಿಂಗ ಭಾವ ಸಂಗಮದೇವ
ಜೀವರತ್ನದ ಮಲ್ಲಿದೇವ ।
ಆವಾಗ ರಾಮನ ಕಾದುಕೊಂಡಿರುವಂಥ
ಕಾವಲ ವಾಜಿ ಸಾವಿರವು ॥೫೪॥

ಹಳಬಿಕೆ ತುರುಕರು ಹಂಡೆಯ ರಾಹುತರು
ಒಳಹೊಕ್ಕು ನೇಮಿ ಬರುವಾಗ ।
ತಳುಹದೆ ಹೆಗಲೇರಿ ಇರಿದಿರಿದು ಕಡಿವಂಥ
ಒಳ ಲಾಯ ಕುದುರೆ ಸಾವಿರವು ॥೫೫॥

ಅಣ್ಣ ಕಾಟಣ್ಣನ ಮುಂದೆ ಕಾದುವಂಥ
ಬಣ್ಣಕೊಂದ್ವಾಜಿ ಸಾವಿರವು ।
ಮುಕ್ಕಣ್ಣ ನೇಜ್ಯದ ವಾಜಿ ಒಂದ್ಯೆನೂರು
ಹೊಕ್ಕುಬಂದವು ರಾಮನೆಡೆಗೆ ॥೫೬॥

ಕುದುರೆಯ ಪೌಜ ನೋಡಿದ ರಾಮನಾಥನು
ಸದರಿಗೆ ಕರೆಸಿ ರಾಹುತರ ।
ಮುದದಿಂದಲವರ ಬಾಟಣೆಯ ಲೆಕ್ಕವ ಮಾಡಿ
ಚದುರ ಉಡುಗೊರೆ ವೀಳ್ಯಕೊಟ್ಟ ॥೫೭॥

ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಲೆಕ್ಕವಾಯಿತು ಬಾಟಣೆಯು ।
ಬೊಕ್ಕಸ ತೆಗೆಸಿ ಹಣವ ಕೊಟ್ಟನವರಿಗೆ
ಲಕ್ಷಾಧಿಪತಿ ರಾಮನಾಥ ॥೫೮॥

ಕರಣಿಕ ಲಿಂಗನ ಕರೆಸಿ ಕೇಳಿದನಾಗ
ಬರೆದಿರುವ ಲೆಕ್ಕವೇನಾಯ್ತು ।
ಇರುವಂಥ ಲೆಕ್ಕವ ಬರೆದು ಪೇಳೆನಗೆಂದು
ಧುರಧೀರ ರಾಮ ಕೇಳಿದನು ॥೫೯॥

ಹತ್ತುಸಾವಿರ ವಾಜಿ ಮೂವತ್ತು ಸಾವಿರ ಬಲ
ಮತ್ತೆ ಆಯಿತು ಧುನ್ನೆಧಾರ ।
ಚಿತ್ತೈಸು ಎಂದು ಕರಣಿಕ ಮಂತ್ರಿ ಆ ಕ್ಷಣ
ಒತ್ತಿ ಮಾಡಿದನು ಬಿನ್ನಪವ ॥೬೦॥

ಸಾಲದು ಪೌಜಿನ್ನು ಹೇಳುವ ಮಾತೇನು
ನಾಳೆ ಸುರಿತಾಳ ಬರುತಾನೆ ।
ಕಾಳಗದೊಳು ಅವನ ಮಡುಹದಿದ್ದರೆ ನಮಗೆ
ದಾಳಿ ತಪ್ಪುವುದೆ ಬೈಚಪ್ಪ ॥೬೧॥

ಲಕ್ಷ ಮಂದಿಯು ವಾಜಿ ಮೂವತ್ತು ಸಾವಿರವ
ಸುಕ್ಷೇಮದಲಿ ನೀನು ಕಟ್ಟೊ ।
ಶಿಕ್ಷೆ ನೇಮಿಯ ಕೊಲ್ಲದಿರ್ದಡೆ ನಮಗೆಯು
ಅಕ್ಷಯವಿಲ್ಲೆಂದನಾಗ ॥೬೨॥

ಕರೆದು ರಾಹುತರ ಕರ್ಪೂರ ವೀಳ್ಯವ ಕೊಟ್ಟು
ಉಡುಗೊರೆಗಳನು ಮಾಡಿದರು ।
ಮರೆಯಬೇಡಿರಿ ಹೆಚ್ಚು ಮಂದಿ ಕುದುರೆಯನು
ಕರೆಸೆಂದು ರಾಮ ಹೇಳಿದನು ॥೬೩॥

ಮನ್ನೆಯರ ಕರೆದನು ಮನ್ನಣೆಯಲಿ ರಾಮ
ಇನ್ನು ಹೆಚ್ಚಾಳ ಕಟ್ಟೆಂದ ।
ಮನ್ನಿಸಿ ಅವರನು ಮನೆಗೆ ಅಪ್ಪಣೆ ಕೊಟ್ಟು
ಆಗ ಲಿಂಗನ ಕರೆಸಿದನು ॥೬೪॥

ಬೈಗಿನ ಸರದಿಗೆ ಬಂದಾನು ರಾಮಯ್ಯ
ಮೈಗಾವಲು ಮಂದಿ ಸಹಿತ ।
ಬೇಗ ಬೈಚಪ್ಪನ ಕರೆತರ ಹೇಳಿದ
ಆಗ ಲಿಂಗನ ಕರೆಸಿದನು ॥೬೫॥

ಬಂದು ಬೈಚಪ್ಪನು ವಂದನೆಯನು ಮಾಡಿ
ನಿಂದು ಕರಂಗಳ ಮುಗಿದು

ತಂದೆ ಕಂಪಿಲರಾಯ ಹೊರಟು ಬಂದನು ಬೇಗ
ಹೊಂದಲೈದರು ಎಲ್ಲ ಆಗ ॥೧೬॥

ಅಪ್ಪನ ಪಾದಕ್ಕೆ ಬಿದ್ದನು ರಾಮಯ್ಯ
ಒಪ್ಪದಿ ಮಗನ ಎತ್ತಿದನು ।
ಮುಪ್ಪಿನವರು ನಾವು ರಾಜ್ಯದ ಭಾರವ
ಒಪ್ಪಿಸಿದೆನು ರಾಮ ನಿನಗೆ ॥೧೭॥

ಪಟ್ಟಾಭಿಷೇಕ ರಾಮಯ್ಯಗಾಯಿತು ಎಂದು
ಪಟ್ಟಣದ ಪ್ರಜೆಗಳು ತಾವು ।
ಶೆಟ್ಟಿ ಮಾನ್ಯಯರುಗಳು ಗೌಡ ಒಕ್ಕಲುಗಳು
ಪಟ್ಟುದುಡುಗೊರೆ ತಂದರಾಗ ॥೧೮॥

ಬನ್ನಿ ಕುಳ್ಳಿರಿ ಎಂದು ಮನ್ನಿಸಿದ ರಾಮ ಹಾ
ಗೆನ್ನಲು ಪ್ರಜೆಗಳು ಬಂದು ।
ಹೊನ್ನು ಕಾಣಿಕೆ ಉಡುಗೊರೆ ಕೊಟ್ಟು ರಾಮಗೆ
ಮನ್ನಣೆಯಲಿ ಕುಳಿತರಾಗ ॥೧೯॥

ಬಂದ ಪ್ರಜೆಗಳಿಗೆಲ್ಲ ವಂದಿಸಿ ರಾಮಯ್ಯ ನಿ
ಮ್ಮಿಂದ ಎಮ್ಮಯ ದೊರೆತನವು ।
ಮುಂದೆ ನಿಮ್ಮ ಕಾದು ನಡೆಸುವೆ ನಾನೆಂದು
ಗಂಧ ವೀಳ್ಯವ ಕೊಡಿಸಿದನು ॥೨೦॥

ಕರೆದನು ತನ್ನಯ ಮಂತ್ರಿ ಬೈಚಪ್ಪನ
ಬರೆಸೊ ವಾಲೆಗಳ ನೀನೆಂದ ।
ಬರಮಾಡೊ ಸುತ್ತಣ ರಾಜ್ಯದ ಗೌಡರ
ಕರೆಸಯ್ಯ ನಾಡಿಗರನೆಂದ ॥೨೧॥

ದೊರೆ ರಾಮ ಹೇಳಿದ ವಾಕ್ಯವ ಕೇಳುತ
ಬರೆಸಿದ ವಾಲೆ ಉತ್ರಗಳ ।
ಬರಹೇಳಿ ಸುತ್ತಣ ಸೀಮೆ ಗೌಡರನೆಲ್ಲ
ಇರದೆ ಕರೆಸಿದನು ಮಂತ್ರೀಶ ॥೨೨॥

ಹುಕ್ಕೇರಿ ಸೀಮೆಯ ಒಕ್ಕಲು ಗೌಡರು
ಲೆಕ್ಕದ ಕುಲಕರಣಿಕರು ।
ಒಕ್ಕಳ ಹೊನ್ನುಡುಗೊರೆ ಹಣ್ಣು ಫಲ ತಂ
ದಿಕ್ಕಿ ರಾಮಗೆ ಕೈಮುಗಿಯೆ ॥೭೩॥

ಇಕ್ಕೇರಿ ಸೀಮೆಯ ನಾಡಿಗ ಗೌಡರು ಬಂದು
ಲಕ್ಷ ಹನ್ನೊಂದು ಸಾವಿರವು ॥೭೪॥

ಕಲ್ಯಾಣ ಕಲುಬುರುಗಿ ಸೀಮೆಯ ಗೌಡರು
ಎಲ್ಲಾ ಸೀಮೆಯ ನಾಡಿಗರು ।
ಉಲ್ಲಾಸದಿಂದ ಐದು ಲಕ್ಷ ಹೊನ್ನನು
ಭೂವಲ್ಲಭ ರಾಮಯ್ಯನೆಡೆಗೆ ॥೭೫॥

ಸಗರದ ಸೀಮೆಯ ಶೆಟ್ಟಿಯು ಪ್ರಜೆಗಳು
ಸೊಗಸಿಂದ ಗೌಡ ಕರಣಿಕರು ॥೭೬॥

ತಂದರು ಐದು ಲಕ್ಷ ಹೊನ್ನನುಡುಗೊರೆಯ
ಬಂದರು ರಾಮಯ್ಯನೆಡೆಗೆ ।
ಮುಂದಿಟ್ಟು ಕೈಮುಗಿದು ರಾಮಯ್ಯನಾಥಗೆ
ಮುಂದೆಮ್ಮ ಸಲಹಬೇಕೆಂದು ॥೭೭॥

ತೊರಗಲ್ಲು ಬಾದಾವಿ ಸೀಮೆಯ ಗೌಡರು
ಮರಿ[ಗೌಡ] ಮುನ್ನಿನ ಮುದಿಗೌಡ ।
ಹರುಷದಿ ಎರಡು ಸಾವಿರ ಹೊನ್ನು ಉಡುಗೊರೆ
ಬಿರುದಾಂಕ ರಾಮನ ಮುಂದೆ ॥೭೮॥

ಸೀರೆದ ಸೀಮೆಯ ಗೌಡರು ಬಂದರು
ಸಾರನಗೌಡ ನಾಗಗೌಡ ।
ಆರು ಲಕ್ಷ ಹೊನ್ನ ಉಡುಗೊರೆ ಫಲಗಳ
ದೊರೆಗಳ ಪಟ್ಟಗಾಣಿಕೆಯು ॥೭೯॥

ಬಸವಪಟ್ಟದ ಸೀಮೆ ಗೌಡರು ಬಂದರು
ಹಸುಮಗ ಮುದ್ದನಗೌಡ ।

ಹೊಸಗಾಣಿಕೆ ಐವತ್ತು ಸಾವಿರ ಹೊನ್ನು
ಅಸಮ ಬಲಗೆ ಒಪ್ಪಿಸಿದರು ॥೮೦॥

ಆದವನ್ನಿಯ ಸೀಮೆ ರಡ್ಡಿ ಕರಣಿಕರು
ಒದಗಿ ಬಂದರು ಕುಮ್ಮಟಕೆ ।
ಹದಿನೆಂಟು ಸಾವಿರ ಹೊನ್ನು ಮೋಹರುಗಳ
ಮುದದಿ ಮುಂದಿಟ್ಟು ಉಡುಗೊರೆಯ ॥೮೧॥

ಉಮ್ಮಳಿದಾರರು ಪುರವರ್ಗದವರೆಲ್ಲ
ಗಮ್ಮನೆ ತಾವೆಲ್ಲ ಕೂಡಿ ।
ಒಮ್ಮನ ಹೊನ್ನು ಉಡುಗೊರೆಗಳ ತಂದರು
ಇಮ್ಮಡಿ ರಾಮಗೆ ಕೊಟ್ಟು ॥೮೨॥

ಬಂದವರನ್ನೆಲ್ಲ ಮನ್ನಿಸಿ ರಾಮಯ್ಯ
ಬಂದವರನೆಲ್ಲ ಕಳುಹಿದನು ।
ಚೆಂದದಿ ಉಡುಗೊರೆಗಳ ಕೊಟ್ಟು ರಾಮಯ್ಯ
ನಂದು ಕಳುಹಿದನವರುಗಳ ॥೮೩॥

ತಂದೆಯ ಪಾದಕ್ಕೆ ವಂದಿಸಿ ರಾಮಯ್ಯ
ಬಂದನು ತನ್ನರಮನೆಗೆ ।
ಬಂದಂಥ ಹೊನ್ನನು ಮುಂದಿಟ್ಟು ರಾಮಯ್ಯ
ಮಂದಿರಗಳನೊಳಪೊಕ್ಕ ॥೮೪॥

ಗುತ್ತಿಯನಾಳ್ವ ಜಗದಪ್ಪರಾಯನು ಕೇಳಿ
ಉತ್ರ ಉಡುಗೊರೆಯ ಕಳುಹಿದನು ।
ಇತ್ತ ಚಾರರು ಓಡಿಬಂದು ರಾಮಯ್ಯಗೆ
ಮತ್ತೆ ಸುದ್ದಿಯನು ಪೇಳಿದರು ॥೮೫॥

ಕರೆಸಿದ ಬಂದ ಹೇಜಿಬರ ರಾಮಯ್ಯ
ಹರುಷದಿ ಕೇಳಿದನವರ ।
ದೊರೆ ಜಗದಪ್ಪ ಕ್ಷೇಮವೆ ನಮ್ಮ ಮಾವಾಜಿ
ಇರುವನೆ ಸಂತೋಷದಲ್ಲಿ ॥೮೬॥

ಬಂದ ಕಾರ್ಯಗಳೇನು ಇಂದ್ಯಾಕೆ ಕಳುಹಿದ
ನೆಂದು ರಾಮಯ್ಯ ಬೆಸಗೊಳಲು ।
[ಹಿಂ]ದುವ ರಾಯ ನಿಮ್ಮ ಪಟ್ಟವಾಯಿತೆಂಬ ಆ
ನಂದವ ಕೇಳಿ ಕಳುಹಿದನು ॥೮೭॥

ಪಟ್ಟದ ಉಡುಗೊರೆ ಪೆಟ್ಟಿಗೆ ಬಂಗಾರ
ಸೃಷ್ಟೀಶ ಕಂಪಿಲದೊರೆಗೆ ।
ಪಟ್ಟಪಟ್ಟಾವಳಿ ಮುತ್ತಿನಾಭರಣವ
ಕೊಟ್ಟು ಕಳುಹಿದನು ರಾಮಯ್ಯ ॥೮೮॥

ಮಗಳು ರಾಮಕ್ಕಗೆ ಮುತ್ತಿನಾಭರಣವು
ಮಿಗಿಲಾದ ಜೇಬಿ ನಾಣ್ಯಗಳು ।
ಬಗೆಮಾಡಿ ಐದೂರು ಉಮ್ಮಳಿಯನು ಕೊಟ್ಟ
ಜಗದಪ್ಪರಾಯ ರಾಮಯಗೆ ॥೮೯॥

ಬಂದವರ ಮನ್ನಿಸಿ ಒಂದುಡುಗೊರೆ ಕೊಟ್ಟು
ಒಂದೊಂದು ಸಾವಿರ ಹೊನ್ನ ।
ಅಂದು ಕೊಟ್ಟರು ರಾಮಗೆ ಉಡುಗೊರೆ ಕೊಟ್ಟು
ಬಂದವರ ಬೇಗ ಕಳುಹಿದನು ॥೯೦॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೆ ಮೇಲ್ಗತೆಯ ।
ವಿದಿತ ಈಶ್ವರನ ದರುಶನ ಮಾಡುವ
ಸಂಧಿ ಪದ ಮುಂದೆ ಸಂಪೂರ್ಣ ॥೯೧॥

ಅಂತು ಸಂಧಿ ೨೨ಕ್ಕಂ ಪದನು ೨೪೦೮ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨೩

❖

ಜಟ್ಟಂಗಿ ರಾಮೇಶ್ವರನ ದರ್ಶನ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ಉದಯದೊಳೆದ್ದು ವಂದಿಸಿ ಜಟ್ಟಂಗೀಶಗೆ
ಚೆದುರ ರಾಮಯ್ಯ ಕೈಮುಗಿದ ।
ಒದಗಿ ತಾನೆದ್ದು ಮುಖ ಮಜ್ಜನಂಗಳ ಮಾಡಿ
ಕದುಬಿದ ಸಣ್ಣ ನಾಮವನು ॥೨॥

ಪಟ್ಟಸಾಲಿಗೆ ಹೊರಟುಬಂದನು ರಾಮಯ್ಯ
ಕಟ್ಟಿಗೆಕಾರರ ಕರೆಸಿ ।
ನೆಟ್ಟನೆ ಹೋಗಿ ಬೈಚಪ್ಪನ ಕರೆಯಿರೊ ಎಂ
ದಟ್ಟಿದ ಸೃಷ್ಟೀಶ ರಾಮ ॥೩॥

ಚರರೋಡಿ ಬಂದು ಬೈಚಪ್ಪಗೆ ಕರೆದರು
ಬರಬೇಕು ಮಂತ್ರೀಶ ಬೇಗ ।
ದೊರೆ ರಾಮ ಶೀಘ್ರದಿ ಕರೆತರ ಹೇಳಿದ
ಅರಿಕೆ ಮಾಡಿದೆವಯ್ಯ ಮಂತ್ರಿ ॥೪॥

ಬಂದನು ಬೇಗದೊಳಗೆ ಬೈಚಪ್ಪನು
ನಿಂದನು ರಾಮನ ಹುಜರ ।

ಇಂದಿನ ಪಯಣವ ಪೇಳೆಂದು ರಾಮಯ್ಯ
ಚಂದ್ರಶೇಖರನ ದರುಶನಕೆ ॥೫॥
ಮೃತ್ಯುಂಜಯನ ದರುಶನಕೆ ಹೋಗಲಿಬೇಕು
ಸತ್ಯವಂತನೆ ಬೈಚಪ್ಪ ।
ಮತ್ತೆ ಹಾಕಿಸಬೇಕು ಮೋಪನಾಕ್ಷಣದಲ್ಲಿ
ಅರ್ತಿಲಿ ಉಂಡುಟ್ಟು ಬರಬೇಕು ॥೬॥

ಅಪ್ಪನ ಕೂಡಿನ್ನು ಹೇಳಯ್ಯ ಈ ಮಾತ
ಅಪ್ಪಣೆ ತೆಕ್ಕೊಳ್ಳೊ ಬೇಗ ।
ಮುಪ್ಪುರವ ಗೆಲಿದ ಜಟ್ಟಂಗಿ ರಾಮೇಶಗೆ
ಒಪ್ಪದಿ ಪಯಣಮಾಡೆಂದ ॥೭॥

ತಂದೆ ಮಕ್ಕಳು ನಾವು ವಂದಿಸಿ ಸ್ವಾಮಿಗೆ
ಕಂದುಗೊರಳ ಪರಶಿವಗೆ ।
ಇಂದು ನಾವೀಗ ಕುಟುಂಬ ಜಾತ್ರೆಗಳನು
ವೊಂದಿಲಿ ತೆರಳಬೇಕೆಂದ ॥೮॥

ರಾಮ ಹೇಳಿದ ಸುದ್ದಿ ಕೇಳುತ ಬೈಚಪ್ಪ
ಆ ಮಹಾ ಸಂತೋಷದಲ್ಲಿ ।
ಭೂಮೀಶರಾಯ ಕಂಪಿಲನ ಬಳಿಗೆ ಬಂದು
ಪ್ರೇಮವನುಸುರಿದ ಬೇಗ ॥೯॥

ಮಂತ್ರಿಯ ಮಾತನು ಕೇಳುತ ಕಂಪಿಲ
ಸಂತೋಷ ಅತಿ ಹರುಷದಿಂದ ॥೧೦॥

ಅಕ್ಕಿ ಬೇಳೆಯು ಗೋಧಿಹಿಟ್ಟು ಸಂಬಾರವು
ಸಕ್ಕರೆ ಹೇರು ಬೆಲ್ಲವನು ।
ಮುಕ್ಕಣ್ಣ ಹರನ ನೈವೈದ್ಯಕೆ ಬೇರೆ ಸ
ಣ್ಣಕ್ಕಿ ಹೇರುಗಳನು ಹೊಡಸೊ ॥೧೧॥

ಆದ ಅಡಕೆ ಬಿಳಿಯೆಲೆ ಕರ್ಪುರಗಳ
ಮಾದಾಳ ಖರ್ಜೂರಫಲವು ॥೧೨॥

ಹಾಲುಮೊಸರಿಗೆ ನಮ್ಮ ಕಂಪಳಕೆ ಹೇಳಿರೊ
ಆಲೆ ರಸದಾಳಿ ಕ್ಷೀರವನು ।
ಸಾಲಿಟ್ಟು ಕೊಡಗಳ ಕಳುಹಿದನು ಮಂತ್ರೀಶ
ಆಲಸ್ಯ ಬೇಡವೊ ನಡೆಯೊ ॥೧೩॥

ಬೊಕ್ಕಸದೊಳು ಹೊಕ್ಕು ಕಟ್ಟಿಸೊ ಜವಳಿಯ
ರೊಕ್ಕ ಹೊನ್ನುಗಳ ತೆಕ್ಕೊಳ್ಳೊ ।
ಮುಕ್ಕಣ್ಣನಿಗೆ ಪಾದಗಾಣಿಕೆ ಮಾಡುವೆನು
ಲೆಕ್ಕದ ಮೇಲೆ ತರಿಸಯ್ಯ ॥೧೪॥

ತೆರಳಿ ಬಂದನು ಮಂತ್ರಿ ಬೈಚಪ್ಪ ಚಾವಡಿಗೆ
ಭರದಿಂದ ಬಂದು ಕುಳಿತನು ।
ಕರೆಸಿದ ಕಟ್ಟಿಗೆಯವರ ಕಾಮಾಟದ
ಪರಿವಾರದವರನು ಬೇಗ ॥೧೫॥

ಬಂದು ಕಟ್ಟಿಗೆಯವನರು ನಿಂದು ಕೈಮುಗಿಯಲು
ಇಂದುಶೇಖರನ ಬೆಟ್ಟಕ್ಕೆ ।
ಮುಂದಾಗಿ ತೆರಳಿ ನೀವೊಪ[ಸಾ]ಗಿಸಿಕೊಂಡು ಹೋ
ಗೆಂದು ಹೇಳಿದನು ಬೈಚಪ್ಪ ॥೧೬॥

ಹತ್ತು ಖಂಡುಗ ಹೇರು ಅಕ್ಕಿಯ ತುಂಬಿರೊ
ಮತ್ತೈದು ಖಂಡುಗ ಬೇಳೆ ।
ಮುತ್ತಿನ ಸರದ ಸಣ್ಣಕ್ಕಿಯು ಸಹವಾಗಿ
ಮತ್ತೆ ತುಂಬಿಸಿರೊ ಬೇಗದೊಳು ॥೧೭॥

ಪುನುಗು ರಾಜಾನ್ನವು ಗಿಣಿಮೂಗಿನಕ್ಕಿಯ
ಕಣಕದ ಹೇರೊಂದು ನೂರು ॥೧೮॥

ಬೆಲ್ಲದ ಹೇರು ಐವತ್ತು ಬೇಳೆಯ ಹೇರು
ಕಲ್ಲುಸಕ್ಕರೆ ಹೇರೊಂದ್ಯೆರು ।
ಎಲ್ಲ ಉಗ್ರಾಣದೊಳು ತುಂಬಿಸಿಕೊಂಡರು ಬೇಗ
ನಿಲ್ಲದೆ ತೆರಳಬೇಕೆಂದ ॥೧೯॥

ತುಪ್ಪದ ನಗಗಳು ಐವತ್ತು ಆಗಲೆ
ಇಪ್ಪಿಯ [ಹ]ಣ್ಣೇರು ಹತ್ತೆಂಟು ।
ಕಡಲೆಯ ಹೇರು ಹುರುಳಿಯ ಹೇರು ಇನ್ನೂರು
ಬಿಡಬ್ಯಾಡಿ ಬಿದಿರ ಅಕ್ಕಿಯನು ॥೨೦॥

ಅರಿಷಿಣ ಶುಂಠಿ ಮೆಣಸು ಕೊಬ್ಬರಿಯ ಹೇರು
ಪರಿಪರಿ ಸಾಂಬಾರದ್ಹೇರು ।
ಅರಮನೆ ಎತ್ತು ಸಾವಿರ ನಡೆಯಿತು
ಗಿರಿಯ ಜಟ್ಟಂಗೀಶ್ವರಗೆ ॥೨೧॥

ಅಡಿಯಿಟ್ಟು ನಡೆಯಿತು ಐದುಸಾವಿರ ಬಲ
ಹಡಪದ ಬಲ್ಲುಗ ಸಹಿತ ॥೨೨॥

ಬಂದನು ರಾಮಯ್ಯ ತಂದೆ ಪಾದಕೆ ಬಿದ್ದು
ವಂದನೆಮಾಡಿ ಕೈಮುಗಿದು ।
ಸಂದೇಹವ್ಯಾತಕೆ ತೆರಳಬೇಕೆಂದನು
ಚೆಂದದಿ ತಾಯಿಯ ಕೂಡೆ ॥೨೩॥

ತೆಗೆದಪ್ಪಿ ಮಗನ ಮುದ್ದಾಡಿ ತಾ ಹೇಳಿದ
ಜಗದಪ್ಪರಾಯ ಮಾವನಿಗೆ ।
ಝುಗಝುಗಿಸುವ ಜೇಬಿ ನಾಣ್ಯವ ಕಟ್ಟಿಸಿ
ಸೊಗಸಿಂದ ಕಳುಹೊ ರಾಮಯ್ಯ ॥೨೪॥

ತಂದೆ ತಾಯಿಗಳ ಹೊನ್ನಂದಣವನೇರಿಸಿ
ತಂದರು ಬೇಗದೊಳವರ ।
ಜಗದಪ್ಪರಾಯಗೆ ಉಡುಗೊರೆಯನು ಕಟ್ಟಿ
ಅಗಣಿತವಾದ ವಸ್ತ್ರಗಳ ॥೨೫॥

ಪಲ್ಲಕ್ಕಿ ಪಲ್ಲಕ್ಕಿ ಸಾಲಿಟ್ಟು ನಡೆದವು
ನಿಲ್ಲದೆ ಕಂಪಿಲನೆಡೆಗೆ ।
ಹಿರಿಯ ಸೊಸೆ ಕಂಚಲವ್ವನ ಕರೆಸಿದ
ಅರಸು ಮಕ್ಕಳ ಹೆಮ್ಮಕ್ಕಳನು ॥೨೬॥

ಇಂದುಶೇಖರ ಪೊಂಪಾಪತಿಗಳ ಗುಡಿಗಾಗಿ
ಬಂದು ಇಳಿದರು ಬೇಗದಲಿ ।
ಸ್ನಾನವ ಮಾಡಿ ಮಡಿಯನುಟ್ಟು ಎಲ್ಲರು
ಗ್ಯಾನದಿ ವಿರೂಪಾಕ್ಷನ ಗುಡಿಗೆ ॥೨೭॥

ಬಂದಡ್ಡಬಿದ್ದು ಕಾಣಿಕೆಯಿಕ್ಕಿ ಹಿಡಿಹೊನ್ನ
ಗಂಧ ಪ್ರಸಾದ ಕೈಕೊಂಡು ।
ಅಂದಲ್ಲಿ ನಿಂತು ಪರುವಮಾಡಿ ಜಂಗಮಕೆ
ಚೆಂದದಿ ಕಂಪಿಲರಾಯ ॥೨೮॥

ಲಕ್ಷ ಬ್ರಾಹ್ಮರಿಗೆ ಸಮಾರಾಧನೆ ಮಾಡಿಸಿ
ದಕ್ಷಿಣೆ ತಾಂಬೂಲವಿತ್ತು ।
ಲಕ್ಷಾಧಿಪತಿ ಕಂಪಿಲರಾಯ ಮನ್ನಿಸಿ ಮಂ
ತ್ರಾಕ್ಷತೆ ಕೈಕೊಂಡನಾಗ ॥೨೯॥

ಎಲ್ಲರು ಉಂಡುಟ್ಟು ಸಂತಸದಲಿ ಕಂಪಿಲ
ನಿಲ್ಲದೆ ಹೊರಟನು ಬೇಗ ।
ಅಲ್ಲಿಂದ ಕಂಪಿಲ [ಸೋ]ಮೇಶಗೆ ಬಂದನು
ಬಲ್ಲಿದ ರಾಮಯ್ಯ ಸಹಿತ ॥೩೦॥

[ಸೋ]ಮೇಶ್ವರನ ಪೂಜೆಯ ಮಾಡಿ ಕಂಪಿಲ
ಆ ಮಹಾಪರುವ ಮಾಡಿಸಿದ ।
ಪ್ರೇಮದಿ ಹಿಡಿಹೊನ್ನ ಕಾಣಿಕೆಗಳನಿಟ್ಟು
ಕ್ಷೇಮದಿ ಹೊರಟನಲ್ಲಿಂದ ॥೩೧॥

ಪಲ್ಲಕ್ಕಿನೇರಿದ ಕಂಪಿಲರಾಯನು
ನಿಲ್ಲದೆ ಹೊರಟ ಬೇಗದಲಿ ।
ಜಟ್ಟಂಗಿರಾಮನ ಬಲ್ಲಿದ ಗಿರಿಯ
ಕೆಳಗೆ ಉಲ್ಲಾಸದಿಂದ ಬಂದು ಇಳಿದ ॥೩೨॥

ಬಿಟ್ಟರು ದಂಡೆಲ್ಲ ಕಟ್ಟಿತು ಗುಡಿಗಳ
ನೆಟ್ಟನೆ ಸಾಲು ಪಾಳೆಯವ ।

ಹುಟ್ಟಿತು ಬೀದಿ ಬಾಜಾರ ಅಂಗಡಿಸಾಲು
ನೆಟ್ಟನೆ ಗಿರಿಯ ಮಧ್ಯದಲಿ ॥೩೩॥

ದೇವಸಮುದ್ರವೆಂಬುವದೊಂದು ಕೆರೆಯುಂಟು
ಬಾವಿ ಪೂದೋಟ ವನವುಂಟು ।
ಕಾವಲ ಮಲೆಯುಂಟು ಕಸ್ತೂರಿಮೃಗವುಂಟು
ದೇವನ ಗಿರಿಯ ಮಧ್ಯದಲಿ ॥೩೪॥

ಎಲ್ಲರು ಅಭ್ಯಂಗಸ್ನಾನವ ಮಾಡಿದರು
ನಿಲ್ಲದೆ ಗಿರಿಯನೇರಿದರು ।
ಮಲ್ಲಿಕಾರ್ಜುನ ಜಟ್ಟಂಗೀಶನ ಗುಡಿಗಾಗಿ
ನಿಲ್ಲದೆ ಕಂಪಿಲ ಬಂದ ॥೩೫॥

ಕೆಲರು ಬಂದಡ್ಡಬಿದ್ದು ಕಾಣಿಕೆಯಿಟ್ಟು
ಅಕಳಂಕ ಮಹಿಮನ ಭಜಿಸಿ ।
ಭಕ್ತಿಲಿ ಹಣ್ಣುಫಲಗಳಿಂದ ಪೂಜಿಸಿ
ಮುಕ್ತಿಪದವ ಬೇಡಿಕೊಂಡು ॥೩೬॥

[ಪಂಚಾ]ಭಿಷೇಕವ ಮಾಡಿಸಿ ರಾಮಯ್ಯ
ಪಂಚಭಕ್ಷವು ಪರಮಾನ್ನ ।
ಪಂಚಮುಖನು ಪರಮಾತ್ಮಗೆ ಒಪ್ಪಿಸಿ
ಪಂಚಾರತಿಗಳ ಬೆಳಗಿ ॥೩೭॥

ಲಕ್ಷ ಸಮಾರಾಧನೆಯನು ಮಾಡಿಸಿ
ದಕ್ಷಿಣೆ ಕೊಟ್ಟು ಬ್ರಾಹ್ಮರಿಗೆ ।
ಲಕ್ಷ ಜಂಗಮಕೆ ಭೋಜನವನು ಮಾಡಿಸಿದ
ಲಕ್ಷಾಧಿಪತಿ ಕಂಪಭೂಪ ॥೩೮॥

ಬಂಧಂಥ ಗುರಿಕಾರ ಎಕ್ಕಟಿಗಾರರು
ವೊಂದಿನ ಹಳೆಯ ರಾಹುತರು ।
ಮಂದಿ ಮಕ್ಕಳು ಮನ್ನೆಯರ ವಿನಿಯೋಗಕ್ಕೆ
ಸಂಧಿಸು ಪಡಿ ರೋಜುಗಳ ॥೩೯॥

ಕರಣಿಕ ಲಿಂಗಗೆ ಕರೆದು ಹೇಳಿದ ರಾಮ
ದೊರೆ ಮಕ್ಕಳಿಗೆ ಉಲುಪೆಯನು ।
ನೆರೆದಂಥ ಜನರು ಪರಿವಾರವೆಲ್ಲಕೆ ನೀನು
ಕರೆಕೊಂಡು ಹೋಗೆಂದನಾಗ ॥೪೦॥

ಹರಿಯಮ್ಮ ಮಾಡಿದಳು ಪರಿಪರಿ ಪೂಜೆಯ
ನೆರೆದು ಹೆಮ್ಮಕ್ಕಳು ಸಹಿತ ।
ದೊರೆತನ ರಾಮಗೆ ಸ್ಥಿರವು ಆಗಲಿಯೆಂದು
ಹರಕೆಯ ಬೇಡಿದಳಂದು ॥೪೧॥

ಒಂದೆರಡು ದಿನವಿರ್ದು ಮೂರನೆ ದಿನದಲ್ಲಿ
ಬಂದರು ಕುಮ್ಮಟಕಾಗಿ ।
ಗಂಧ ಪ್ರಸಾದವ ಕೈಕೊಂಡು ರಾಮಯ್ಯ
ಒಂದ ನೆನೆಸಿದ ಮನದೊಳಗೆ ॥೪೨॥

ನರಜಲ್ಮದೊಳಗೆನ್ನನೇಕೆ ಪುಟ್ಟಿಸಿದಯ್ಯ ಈ
ದೊರೆಯ ಗರ್ಭದೊಳು ನಾ ಜನಿಸಿ ।
ಧರಿಸಿದ ಬಿರಿದ ದಕ್ಕಿಸಿ ರಣರಂಗದಿ
ಕರೆದೊಯ್ಯಬೇಕೆನ್ನ ನೀನು ॥೪೩॥

ಎಂದಿದ್ದರೀ ಕಾಯ ಎನಗೆ ನಂಬುಗೆಯಿಲ್ಲ
ಕಂದನ ಮೇಲೆ ದಯಮಾಡೊ ।
ಸಂದೇಹವಿನ್ಯಾಕೆ ನಿಮ್ಮ ಸಮೀಪಕ್ಕೆ
ಎಂದಿದ್ದರೆ ಬರಬೇಕು ॥೪೪॥

ಅತಿ ಬೇಡಿಕೊಂಡ ಭಾವಕ್ಕೆ ತಾ ಶಿವ ಮೆಚ್ಚಿ
ಇತ್ತನು ಬೇಡಿದ ವರವ ।
ನೆತ್ತಿಯೊಳಿರ್ದ ಮಲ್ಲಿಗೆಯ ಪುಷ್ಪಂಗಳ
[ಭೃತ್ಯ] ರಾಮಯ್ಯಗೆ ಕೊಟ್ಟ ॥೪೫॥

ಕೊಟ್ಟ ಪ್ರಸಾದವ ಕೈಕೊಂಡು ರಾಮಯ್ಯ
ಇಟ್ಟನು ಮಂಡೆಯೊಳೊಲಿದು ।

ಧೀರ ರಾಮಯ್ಯ ತಾನೆಲ್ಲರನೊಡಗೊಂಡು
ಸೃಷ್ಟೀಶ ಹೊಕ್ಕ ಕುಮ್ಮಟವ ॥೪೬॥

ಬಂದನು ಕಂಪಿಲವೊಂದಿಲಿ ರಾಮಯ್ಯ
ನಿಂದು ಹಜಾರದೊಳ್ ತಾವು ।
ಮಂದಿ ಮಕ್ಕಳನೆಲ್ಲ ಮನೆಗೆ ಅಪ್ಪಣೆಕೊಟ್ಟು
ಅಂದು ಹೊಕ್ಕನು ಅರಮನೆಯ ॥೪೭॥

ಉದಯದೊಳೆದ್ದು ವಂದಿಸಿ ತಂದೆ ತಾಯಿಗೆ
ಮದಗಜದಾನೆ ರಾಮಯ್ಯ ।
ಮುದದಿಂದ ಕೇಳಿ ಬಿನ್ನೈಸುವೆ ನಾನ ನನ್ನ
ಹೃದಯದ ಅಂತರಂಗವನು ॥೪೮॥

ಇಷ್ಟು ಕುದುರೆ ಮಂದಿ ನಿಲಿಸಿದನೆಂಬಂತೆ
ಸಿಟ್ಟು ಮಾಡಲಿಬೇಡ ಭೂಪ ।
ಪಟ್ಟಾಭಿರಾಮನ ಮಾಡಿದೆ ಜಗದೊಳು
ಮುಟ್ಟುವದು ಡಿಳ್ಳಿಗೆ ಸುದ್ದಿ ॥೪೯॥

ಸುರಿತಾಳನ ಮಗಳು ತನಗಾಗಬೇಕೆಂದು
ಕುರುಹು ನೇಮದಿ ತಾನಿಹಳೊ ।
ಪರಿಪರಿ ವಿಧದಿಂದ ತಂದೆಗೆ ಪೇಳುವಳು
ತರಿಸು ರಾಮನ ಎಂಬುವಳು ॥೫೦॥

ಹಿಡಿಯಾಳ ಮಾಡಿ ಹಿಡಿತರಿಸೆಂದು ಪೇಳಿದಳು
ಬಿಡದೆ ಬಾಹನು ನೇಮಿ ತಾನು ।
ಕಡೆಯ ಮಾತೇನು ನೇಮಿಯ ನುಂಗದಿರ್ದರೆ
ಬಿಡದು ಮುಂದಣ ರಾಜಕಾರ್ಯ ॥೫೧॥

ಪರನಾರಿ ಸಹೋದರನೆಂಬ ಬಿರಿದನು
ಧರಿಸಿದೆ ಕಾಲೊಳು ನಾನು ।
ಮರೆಯ ಮಾತೇನು ದಕ್ಕಿಸಿಕೊಂಬಂಥದು
ಸರಸಿಜಭವ ತಾನೆ ಬಲ್ಲ ॥೫೨॥

ಇಂದಿನ ಮಾತಲ್ಲ ಬಂದವು ಕಾರ್ಯವು
ಮುಂದಣ ತಾಗುಬಾಗುಗಳು ॥೫೩॥

ಅಪ್ಪಣೆ ಕೇಳಿ ತನ್ನರಮನೆಗೆ ಬಂದನು
ಒಪ್ಪದಿ ಸತಿಯರು ಸಹಿತ ।
ಚಪ್ಪರ ಮಂಚದಿ ತಾ ನಿದ್ರೈದೆದ್ದು
ಒಪ್ಪದಿ ಊಟವ ಮಾಡಿ ॥೫೪॥

ಶೃಂಗಾರವಾಗಿ ಹೊರಹೊಂಟನು ರಾಮಯ್ಯ
ಮಂಗಳ ನೀಲನ ಏರಿ ।
ಸಂಗಡ ಬೈಚಪ್ಪ ತನ್ನ ಮನ್ನೆಯರನು
ಹಿಂಗದೆ ಕರಕೊಂಡು ಬೇಗ ॥೫೫॥

ಹೊಸಮಲೆದುರ್ಗವ ಹೊಕ್ಕನು ರಾಮಯ್ಯ
ಅಸಹಾಯ ಮಾನ್ಯರಿಗೆಲ್ಲ
ಕುಸುಮ ಗಂಧವು ಹೊನ್ನ ಹಂಚಿಕೊಟ್ಟನು ರಾಮ
ದೆಸೆವಂತ ಮಾನ್ಯರಿಗೆಲ್ಲ ॥೫೬॥

ಬಿದ್ದಿದ್ದ ಕೋಟೆಯನಿಕ್ಕಿಸಿ ಬೊಕ್ಕಸ
ಇದ್ದುವ ನೋಡಿ ಒಕ್ಕಲಿಗೆ ।
ಬುದ್ಧಿಯ ಪೇಳಿ ಎಲ್ಲರಿಗೆ ತಾ ಹೊರಟನು
ಇದ್ದ ಗಡಿಗಳ ನೋಡುತಲಿ ॥೫೭॥

ಎಲ್ಲ ಗಡಿಗಳನು ತಾ ನೋಡಿಬಂದನು ರಾಮ
ನಿಲ್ಲದೆ ಭದ್ರವ ಮಾಡಿ ।
ಬಲ್ಲಂತೆ ಕಣಜ ಬೊಕ್ಕಸಗಳ ಬಲಿಸಿದ
ಉಲ್ಲಾಸದಲಿ ರಾಮನಾಥ ॥೫೮॥

ಕೆರೆಯ ಕಟ್ಟಿಸಿದ ಪೊದೋಟವ ಹಾಕಿಸಿ
ಸೆರೆಯ ಬಿಡಿಸುತ ಸಿಕ್ಕಿದವರ ।
ಮರೆಯದೆ ಹಸಿದು ಬಂದವರಿಗೆ ಅನ್ನವ
ಇರಿಸೆಂದು ಕಟ್ಟುಮಾಡಿಸಿದ ॥೫೯॥

ಎಲ್ಲೆಲ್ಲಿ ನೋಡಿದರೆ ಕೆರೆಯು ಕಾಲುವೆ ಬಾವಿ
ಎಲ್ಲಿ ನೋಡಲು ತೋಪು ವನವು ।
ಮಲ್ಲಿಗೆ ಶೃಂಗಾರದೋಟ ಮಂಟಪಗಳು
ಬಲ್ಲಿದ ರಾಮಯ್ಯ ನಿಲಿಸಿ ॥೬೦॥

ಸೀಮೆಯ ಒಕ್ಕಲ ಕರೆಸಿದ ರಾಮಯ್ಯ
ಪ್ರೇಮದಿ ವೀಳ್ಯವ ಕೊಟ್ಟು ।
ಕ್ಷೇಮದಿ ಸುಖಿ ಬಾಳಿ ನೀವೆಂದು ಪ್ರಜೆಗಳಿಗೆ
ಪ್ರೇಮದಿ ಮನ್ನಿಸಿದನವರ ॥೬೧॥

ಕೊಟ್ಟಮಾತಿಗೆ ಕೌಲು ತಪ್ಪುವುದಿಲ್ಲವೊ
ಗಟ್ಯಾಗಿ ದುಡುಕೊಂಡು ಇರುಹೋಗಿ ॥೬೨॥

ಅನ್ನಛತ್ರವು ಅರವಟ್ಟಿಗೆ ಮಠಮಾನ್ಯ
ಉನ್ನತ ಅಗ್ರಹಾರಗಳು ।
ಚೆನ್ನಾಗಿ ಕೊಟ್ಟು ಬ್ರಾಹ್ಮರಿಗೆಲ್ಲ ರಾಮಯ್ಯ
ಉನ್ನತ ಹರುಷದೊಳ್ ತಾನು ॥೬೩॥

ಈ ಪರಿಯಲಿ ತಂದೆ ಮಕ್ಕಳು ರಾಜ್ಯವ
ತಾವು ಪಿರಿದಾಗಿ ಆಳುತಲಿ ।
ಭೂಪಾ[ಲರೊ]ಳು ಇಂಥ ದೊರೆಗಳಿಲ್ಲವು ಎಂದು
ರೂಪ ಕೇಳಿದ ಸುರಿತಾಳ ॥೬೪॥

ಮಗಳು ಕೇಳಿದಳಾಗ ರಾಮನ ಸುದ್ದಿಯ
ಜಗ ಬಿರಿದುಗಳ ಹೊಗಳಿಸುತ ।
ಮಿಗೆ ಹರುಷವ ತಾಳಿ ಮನದೊಳು ಅ
ಪ್ಪಗೆ ಸೊಗಸಿಂದ ಬಿನ್ನೈಸಿದಳು ॥೬೫॥

ಅಪ್ಪಾಜಿ ಕರೆಸು ರಾಮಯ್ಯನ ಬೇಗದಿ
ಕಪ್ಪವ ಮೊದಲಾಗಿ ನೀನು ।
ತಪ್ಪದೆ ನೇಮಿಯ ಕಳುಹಿಸು ಬೇಗ
ದಿ ಮುಪ್ಪಾಗಿ ಹೋದೆನಯ್ಯಯ್ಯೋ ॥೬೬॥

ಮಗಳ ಮನ್ನಿಸಿ ಸುರಿತಾಳನು ಮನದೊಳು
....................................।
....
ಅಗಣಿತ ಸಂಧಿ ಪೂರಾಯ್ತು ॥೬೭॥

ಅಂತು ಸಂಧಿ ೨೩ಪದನು ೨೪೭೫ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨೪

❖

ಮಾತಂಗಿಯ ದಾಳಿ – ತೆಲುಗರ ಸಂಚು

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
[ಭಾಗೀರಥಿಧರ ಭವರೋಗವೈದ್ಯನೆ
ನಾಗಕುಂಡಲ] ಶರಣೆಂಬೆ ॥೧॥

ದಾನವ ಸುರಿತಾಳನ ಮಂತ್ರಿಯು
ಭುವನೇಶ[ನ] ಚಿತ್ರಪಟವ ।
ತವಕದಿ ರಾಮನಂಗವ ಬರೆದು ತಂದು
ಕುವರಿಯ ಕೈಯಲ್ಲಿ ಕೊಟ್ಟ ॥೨॥

ಚಿತ್ರಪಟವ ಕಾಣುತ ಸುರಿತಾಳನ
ಪುತ್ರಿಯಗಿದು ಮೂರ್ಛೆಯಾಗಿ ।
ಇತ್ತಲು ಸುರಿತಾಳ ಕುವರಿಗೆ ವಿರಹಾಗ್ನಿ
ಒತ್ತರಿಸಲು ಮನೆಯೊಳಗೆ ॥೩॥

ಎತ್ತಣ ವಿಧಿಯು ಇದೇನು ತಾಪವುಯೆಂದು
ಮತ್ತೆ ಭೂಪತಿಯು ಚಿಂತಿಸಿದ ।
ಏನು ಮನದ ನೋವು ಮಗಳೆ ನೀ ಹೇಳೆಂದು
ಮಾನವೇಶ್ವರನು ಕೇಳಿದನು ॥೪॥

ಖಾನ ವಜೀರ ನಿನ್ನಯ ಮಂತ್ರಿ ನೇಮಿಯ
ಖಾನ ತೋರಿದ ಮನೋವ್ಯಾಧಿ ।

ಕುಮ್ಮಟದರಸು ರಾಮನ ಚಿತ್ರಪಟವಿದು
ನನ್ನಯ ಮನ ಸೂರೆಗೊಂಡ ॥೫॥

ಹಿಂದಣ ದ್ವಾಪರದಲಿ ದ್ರುಪದನಂದನೆಯಾಗಿ
ಬಂದೀಗ ಕಲಿಯುಗದಲ್ಲಿ ।
ಸುರಿತಾಳನ ....
ಮಂದಿರದಲಿ ಜನಿಸಿದಳು ॥೬॥

ಅಂದೈವರ ರಾಣಿಯಾಗಿ ದೇವೇಂದ್ರನ
ನಂದನ ನೆರೆದ ಶಾಪದಲಿ ।
ಕುಂದದೆ ಅರ್ಜುನನೆಂದು ಭೋಗಕೆಯೆಂದು
ಸಂದು ಹುಟ್ಟಿದಳು ಡಿಳ್ಳಿಯೊಳಗೆ ॥೭॥

ನಂದನೆಯಾಗಿ ರಾಮನ ಹೊಂದುವೆನೆಂದು
ಚೆಂದದ ಚೆಲುವಲಂಕರಿಸಿ ।
ಬಂದು ಜಾನಿಸೆ ರಾಮನ ಮೇಲೆ ವಿರಹದಿ
ನೊಂದು [ಮಮ್ಮಲನೆ] ಸುರಿತಾಳ ॥೮॥

ಸತ್ತನೆಂದೇ ಹೋದ ರಾಮನ ಸುದ್ದಿಯ
ಮತ್ತೆ ಮಂತ್ರಿಯು ಮಡಗಿದನು ।
ಕರ್ತು ಪ್ರಧಾನ ರಾಮನ ತಂದು ಕಾಣಿಸಿ
ಹೆತ್ತ ತಾಯಿ ತಂದೆ ಕಾಣಿಸಿದ ॥೯॥

ಭಾಪು ಭಾಪುರೆ [ಹಿಂ]ದುವಿನ ಮಂತ್ರಿಯೆಂದು
ಭೂಪತಿ ಸುರಿತಾಳ ಮೆಚ್ಚಿ ।
ಈ ಪರಿ ಬುದ್ಧಿ ಪ್ರಧಾನರು ನಮಗಿಲ್ಲ
ಕೋಪದಿ ನೇಮಿಯ ಬೈದ ॥೧೦॥

ಅರಮನೆಯಳು ಸುರಿತಾಳನ ಸುತೆ ಮತ್ತೆ
ವಿರಹತಾಪದಿ ಸೊರಗಿದಳು ।
ಕರೆದು ಮಗಳ ನಾನು ಕರೆಸುವ ಸಮಯಕ್ಕೆ
ನೆರೆದುದು ದಿಲ್ಲೀಶ ದೊರೆಯು ॥೧೧॥

ದ್ವಾಪರಯುಗದಲ್ಲಿ ದ್ರುಪದನಂದನೆಯಾಗಿ
ಭೂಪರನೈವರ ಕಾಡಿ ।
ಈ ಪರಿ ಕಲಿಯುಗದೊಳು ಸುರಿತಾಳನ
ಭೂಪನಂದನೆಯಾಗಿ ಜನಿಸಿ ॥೧೨॥

ಶ್ರೀಪತಿ ಮೈದುನ ಪಾರ್ವತಿ ವರದಿಂದ
ಭೂಪ ಕಂಪಿಲನ ಮಗನಾಗಿ ।
ಈ ಪರಿಯಲ್ಲಿ ಇಳೆಯೊಳಗುಳ್ಳರಾಯರ
ಕೋಪದಿ ಚೆಲ್ಲ ಬಡಿದನು ॥೧೩॥

ಎಂದು ಪೇಳಲು ಸುರಿತಾಳನಾ ಕ್ಷಣದಲ್ಲಿ
ಬಂದನು ಹೊರ ಚಾವಡಿಗೆ ॥೧೪॥

ಮತ್ತೆ ಕೇಳೆಲೋ ಮಂತ್ರಿ ನೇಮಿಯವರ ತಂದೆ
ಇತ್ತನಂತೆ ದೊರೆತನವ ।
ಒತ್ತಿ ಪಟ್ಟವನು ಕಟ್ಟಿದರಂತೆ ರಾಮಗೆ
ಮತ್ತೆ ಕೇಳಿದೆ ಮಂತ್ರಿ ಸುದ್ದಿ ॥೧೫॥

ಹತ್ತು ಲಕ್ಷವು ವಾಜಿ ಕಾಲಾಳು ಕರಿಘಟೆ
ಮುತ್ತಲುಹೋಗಿ ಕುಮ್ಮಟಕೆ ।
ನೆತ್ತರ ಹರಿವಂತೆ ಕಡಿವಾಗಲು ರಾಮ
ಹತ್ತು ತಲೆಯ ರಾವಣ[ನೆ] ॥೧೬॥

ಕೊಟ್ಟದ ಬೇಡನೆಂಬಿರಿ ಜಗವೆಲ್ಲವು
ಮುಟ್ಟಲಮ್ಮಗೆ ತಿರುಗಿದಿರಿ ।
ದಿಟ್ಟನಹುದು [ಹಿಂ]ದುವ ರಾಯ ಕದನಕ್ಕೆ
ಅಷ್ಟದಿಕ್ಕಿಗೆ ಕಂಪಸುತನು ॥೧೭॥

ಪೊಡವಿಯೊಳಗೆ ಓರ್ಗಲ್ಲ ಪ್ರತಾಪನು
ಅಡಿಯಾದ ಹಮ್ಮೀರರಾಯ ।
ಪಿಡಿತಹೆನೆಂದು ಮಾತಾಡಿ ಹೋದವರೆಲ್ಲ
ಮಡಿದು ಹೋದರು ಅವನ ಕೈಯ್ಯ ॥೧೮॥

ಚಿಪ್ಪರಿಗಿಯ ಮೊಗಲ ಎಪ್ಪತ್ತು ಸಾವಿರ ವಾಜಿ
ತಪ್ಪದೆ ತಾ ಹೋಗಿ ಮಡಿದ ।
ಕಡುಗಲಿ ಆ ನಾಡ ಗುತ್ತಿ ಜಗದಪ್ಪನ
ಕಡಿದು ಹೆಣ್ಣನು ತೆಕ್ಕೊಂಡ ॥೧೯॥

ರಾಮನಿದಿರಿಗೆ ದಂಡು ನಿಮಿಷವು ನಿಲ್ಲದು
ನೇಮಿಯೊಬ್ಬನು ಏನಹನು ।
ಸೀಮೆಯೊಳಗೆ ಸುತ್ತ ತರುಗಿರಿ ಕುಮ್ಮಟ
ಭೂಮಿಯೊಳೈಶ್ವರ್ಯ ದುರ್ಗ ॥೨೦॥

ಮುಗಿಲ ಸೆರಗಿನಂತೆ ಮಿಗಿಲಾದ ದುರ್ಗವ
ಬಗೆಯನದಾರು ಬಣ್ಣಿಪರು ।
ಹಗೆಯಾದೆವು ಸುರಿತಾಳಗೆ ನಾವಿನ್ನು
ಹೊಗಬಾರದು ಕುಮ್ಮಟವ ॥೨೧॥

ಹೋಗುವ ಸೇನೆಯು ಸಹ ನೇಮಿ [ಹಿಂ]ದುವ ರಯ
ಹಾಗೆನ್ನಲವನು ಬಲ್ಲಿದನೆ ।
ಸೋಗೆಗಂಗಳ ರಾಮ ರಾಯ ಬಲ್ಲಿದನೆಂದು
ನಾಗಲೀಕನ ತಾಹರಿಲ್ಲ ॥೨೨॥

ಎಲ್ಲಿಗಾದರೆ ನನ್ನ ಕಳುಹಯ್ಯ ದಂಡನು
ಬಲ್ಲಿದ ರಾಮನ ಮೇಲೆ ।
ಇಲ್ಲಿಗೆ ತರಿಸಿಕೋ ಕಪ್ಪವ ಕುಮ್ಮಟ
ದಲ್ಲಿಗೆ ಕಳುಹಬೇಡೆಂದ ॥೨೩॥

ಕಳುಹು ಗುಜರಾತಿಯ [ಮೇಲೆ] ತೆಲುಗರ ಮೇ[ಲೆ]
ಕಳುಹು ಮಲೆಯಾಳರ ಮೇಲೆ ।
ಕಳುಹು ಮಗಧ ವಡ್ಡದೇಶದ ಮೇಲಿನ್ನು
ಕಳುಹಲು ಬೇಡ ಕುಮ್ಮಟಕೆ ॥೨೪॥

ಈಗ ಹೋಗುವೆನು [ಹಿಂ]ದುವಿನ ರಾಯರ ಮೇಲೆ
ಬೇಗ ತಾಹೆನು ಕೈಸೆರೆಯ ।

ನಾಗಲೋಕಕೆ ಹೋಗೆಂದರೆ ಹೋದೇವು
ಹೋಗಲಾರೆವು ಕುಮ್ಮಟಕೆ ॥೨೫॥

ಇಂತೆಂಬ ಮಾತನು ಕೇಳುತ ಸುರಿತಾಳ
ಚಿಂತೆಯಾದನು ಮನದೊಳಗೆ ।
ಪಂಥವನಾಡಿ ಪಿಡಿತರದೆ ಹೋದಿರಿ ಕಾ
ಲಾಂತಕನವನೇನೊ ರಾಮ ॥೨೬॥

ಹೋದಹೋದವರೆಲ್ಲ ಕಾದಿ ನುಗ್ಗಾದಿರಿ
ಬಾದೂರಖಾನನ ತರದೆ ।
ಮಾದಿಗಿತ್ತಿಯು ಪುಟ್ಟಿ ಬಂದು ಮಾತಂಗಿಯು
ನಿಂದು ಬಿನ್ನೈಸಿ ಸುರಿತಾಳಗೆ ॥೨೭॥

ರಾಮನ ತರುವೆನು ಎಂದು ಮಾತಂಗಿಯು
ಪ್ರೇಮದಿ ವೀಳ್ಯ ಪಾಲಿಸೆನಲು ।
ಎಂದ ಮಾತನು ಕೇಳಿ ಸುರಿತಾಳನು ತಾನು
ನಿಂದ ಮಂತ್ರಿಯ ಮುಖನೋಡಿ ॥೨೮॥

ಹೇಡಿ ಮಂತ್ರಿಯೆ ಕೇಳು ಹೆಂಗೂಸು ತರುತಾಳೆ
ಎಂದು ಮೂದಲಿಸೆ ಸುರಿತಾಳ ।
ಎಂದು ಮಾತನು ಕೇಳಿ ಎಲೆ ರಂಡೆ ತರುತೀಯ
ಎಂದು ಕೇಳಿದನು ಮಂತ್ರೀಶ ॥೨೯॥

ಮಂತ್ರಿ ನೇಮಿಯೆ ಕೇಳು ತರುತೇನೆ ರಾಮುಗನ
ಮಂತ್ರಿಗೆ ಉಸುರಿದಳು ಎಂದ ।
ಮಾತನು ಕೇಳಿ ಮಂತ್ರಿ ಸೋಜಿಗಬಟ್ಟು
ಚಿಂತಿಸುತಿರ್ದ ಮನದೊಳಗೆ ॥೩೦॥

ಮಾದಿಗಿತ್ತಿಗೆ ವೀಳ್ಯವ ಕೊಟ್ಟು ಸುರಿತಾಳ
ತರುಹೋಗು ರಾಮುಗನ ಎನುತ ।
ಚೆಲುವುಳ್ಳ ಚೆನ್ನಾರಿ ಒನಪು ಹೊಂತಕಾರಿ
ಬಲವುಳ್ಳ ಮಾನಿನಿ ರನ್ನೆ ॥೩೧॥

ತುರಗ ಶೃಂಗಾರಕೆ ಒಪ್ಪುವ ಹೊನ್ನಾಯುಧ
ಸರಪಳಿ ಝುಲ್ಲಿ ಜಮದಂಡೆ ।
ಆದರಿವಳ ಕೂಡೆ ಹೋಗಿ ನೀವೆಲ್ಲರು
ಹೋಗಿರಿ ಎನ್ನಯ ಮುಂದೆ ॥೩೨॥

ನವಲಕ್ಷ ಕುದುರೆ ಕಾಲಾಳು ಕೋಟಿಯು ಮತ್ತೆ
ಭುವನವ ಸೂರೆಗೊಂಬಂತೆ ।
ಹವಣಿಸಿ ಸುರಿತಾಳ ನೇಮಿಯ ಕಳುಹಲು
ನವ ರಾಮನಾಥನ ಮೇಲೆ ॥೩೩॥

ಹತ್ತು ಲಕ್ಷ್ವ ಆಳು ನವಲಕ್ಷ ವಾಜಿಯು
ಮತ್ತೆ ಗಜವಿಂಡೊಂದು ಲಕ್ಷ ।
ಇತ್ತರದಲಿ ನೆರೆದಿಹ ಪರಿವಾರವು
ಮುತ್ತಿ ನಡೆಯಿತು ಕುಮ್ಮಟವ ॥೩೪॥

ಇತ್ತಲಿ ಸುರಿತಾಳರಾಯ ಮಾತಂಗಿಗೆ
ಮೊತ್ತದ ವೀಳ್ಯವನಾಗ ।
ಇತ್ತರದಲ್ಲಿ ನಿಂದಿರುವ ಪರಿವಾರವ
ಸತ್ಕರಿಸಿದನು ಸುರಿತಾಳ ॥೩೫॥

ಹೋಗಿರೈ ನೇಮಿ ಬೇಗದಿ ಕುಮ್ಮಟಕೆಂದು
ಆಗ ಹೇಳಿದ ಸುರಿತಾಳ ।
ಎದ್ದು ಮಾತಂಗಿ ಸುರಿತಾಳನ ಪಾದಕ್ಕೆ
ಬಿದ್ದಳು ತುಂಬಿದೋಲಗದಿ ॥೩೬॥

ಭಾಷೆಯ ಕೊಟ್ಟಳು ಆ ಸುರಿತಾಳಗೆ
ದೇಶವರಿಯೆ ಕಂಪಿಲನ ।
[ಗಾಸಿ]ಯ ಮಾಡಿ ರಾಮನ ಕಟ್ಟಿ ತಹೆನೆಂದು
ಲೇಸಾಗಿ ಸುರಿತಾಳನ ಮುಂದೆ ॥೩೭॥

[ತೆಂ]ಕಣದೇಶದ ಮಧ್ಯದಿ ಮಾತಂಗಿ
ಶಂಕೆಯಿಲ್ಲದೆ ದಂಡ ಬಿಟ್ಟು ।

ಬಿಂಕವ ಮುರಿವೆ ರಾಮನ ದುರ್ಗವನೆಂದು
ಅಂಕಕಾತಿಯು ಬರುತಿಹಳು ॥೩೮॥

ಮುತ್ತಿನ ಗುಡಿಯು ಸಾವಿರ ಮಾತಂಗಿಗೆ
ಇತ್ತರದಲ್ಲಿ ಸತ್ತಿಗೆಯು ।
ಹತ್ತುಸಾವಿರ ಕಾಲಾಳು ಕುದುರೆಗಳು
ಒತ್ತಿಲಿ ನೇಮಿಯ ದಂಡು ॥೩೯॥

ಇಲ್ಲಿಗೆ ಮುನ್ನೂರು ಅರುವತ್ತು ಗಾವುದ
ಅಲ್ಲಿಹ ಕುಮ್ಮಟದುರ್ಗ ।
ಅಲ್ಲಿಗಲ್ಲಿಗೆ ಅಂಚೆ ಕುದುರೆಯನಿಟ್ಟಳು
ನಿಲ್ಲದೆ ದಾಳಿಮಾಡಿದಳು ॥೪೦॥

ಮುಂಜೂಣಿ ಕುದುರೆಯ ಬಿಟ್ಟಳು ಮಾತಂಗಿ
ಸಂಜೆಯ ಅಡಗುಗಳಡಗಿ ।
ಮಂಜು ಮುಸುಕಿದಂತೆ ರಾಮನ ರಾಜ್ಯವ
ಅಂಜಿಕಿಲ್ಲದೆ ಒಳಪೊಕ್ಕು ॥೪೧॥

ಅಲ್ಲಲ್ಲಿ ಬಿಡದೆ ಬಂದಳು ಮಾತಂಗಿಯು
ನಿಲ್ಲದೆ ಪಯಣ ಗತಿಯಲ್ಲಿ ।
ಕೊಲ್ಲದ ಕೊಲೆಯ ಕೊಲ್ಲುವೆನೆಂದು ಮಾತಂಗಿ
ಎಲ್ಲ ಪೌಜನು ಮಾಡಿಕೊಂಡು ॥೪೨॥

ಬಿಟ್ಟಲ್ಲಿ ಬಿಡದೆ ಬಂದಳು ಮಾತಂಗಿಯು
ಬೆಟ್ಟವಾವುದು ಕಂಪಿಲನ ।
ಮುಟ್ಟಿ ತರಿದು ರಾಮನ ಹೆಡಗೈಯ್ಯನು
ಕಟ್ಟಿ ಸುರಿತಾಳನೆಡೆಗೆ ॥೪೩॥

ಗಡಿಯ ದಾಟಿದಳು ಮಾತಂಗಿಯು ಬೇಗದಿ
ಪಿಡಿತಹೆನೆಂದು ಬಾದೂರನ ।
ಇಂದಿನ ದಿನವಿರಳು ಬೆಳಗ ಕಳೆದೆವಾದರೆ
ಚಂದ್ರಶೇಖರ ಶಿವನಿಂದ ॥೪೪॥

ಹಿಂದೆ ಮರಳಿ [ತಾ]ಯಿ ಗರ್ಭದೊಳ್ ಬಂದಂತೆ
ಎಂದು ನುಡಿ[ಯುತೆ] ತಮ್ಮೊಳಗೆ ।
ಬಂದ ದಂಡನು ಕಂಡು ರಾಮನಾಥನು ತನ್ನ
ತಂದೆ ಬಳಿಗೆ ಆಳ ಕಳುಹಿ ॥೪೫॥

ಒಂದು ದಿನಕೆ ಹತ್ತು ಸಾವಿರ ಹೊನ್ನನು
ಮಂದಿಗೆ ಕಳುಹ ಹೇಳಿದನು ।
ಕಡೆಯಕಲ್ಲನೆ ಹತ್ತಿ ನೋಡುತ ರಾಮಯ್ಯ
ಒಡನೆ ಮಾನ್ಯರು ಸಹವಾಗಿ ॥೪೬॥

ವಸುಧೆ ಎಲ್ಲವು ಬೆಸಲಾದಂತೆ ತುರುಕರ ದಂಡು
ದೆಸೆದೆಸೆಯಲ್ಲಿ ಪೌಜುಗಳು ।
ಅಸದಳವಾಗಿದೆ ಕಂಪಿಲರಾಯನ
ಹೊಸದುರ್ಗಕೆ ಹೋ[ಗೆ]ನಲು ॥೪೭॥

ಇಂತೆಂದು ತಂದೆಗೆ ಹೇಳಿ ಕಳುಹಿ ರಾಮ
ಸಂತೋಷವಾದನು ಮನದಿ ।
ಸಂದೇಹವ್ಯಾತಕೆ ಹೊಯ್ದು ಕೆಡುಹುವೆನೆಂದು
ಪಂಥವ ಬಿಡೆನೆಂದ ರಾಮ । ।೪೮॥

ಸ್ವರ್ಗ ಮರ್ತ್ಯ ಪಾತಾಳದಿ ಕೀರ್ತಿಯು
ವೆಗ್ಗಳವಾಗಿ ಪಡೆವೆನು ।
ದುರ್ಗಕ್ಕೆ ತನಗೆ ಮದುವೆಯೆಂದು ರಾಮಯ್ಯ
ಒಗ್ಗಿನ ಮಾತನಾಡಿದನು ॥೪೯॥

ದೇಶದಿಂದಲಿ ದೇಶಕೆ ಬಂದು ಬಾದೂರ
ಆಶೆಯಮಾಡಿ ಮರೆಹೊಕ್ಕ ।
ಮೀಸಲಾಯಿತು ನನ್ನ ತಲೆಯು ಸುರಿತಾಳಗೆ
ಭಾಷೆಯ ಬಿಡೆನೆಂದ ರಾಮ ॥೫೦॥

ಮಂಡಲದೊಳು ಜಟ್ಟಂಗಿರಾಮನ ವರ
ಪಿಂಡವು ತಾನು ಎಂದೆನುತ ।

ತಂಡತಂಡಾಗಿ ಕಡಿವೆನು ತುರುಕರ
ಗಂಡುಗಲಿಯು ರಾಮ ನುಡಿದ ॥೫೧॥

ಎಂದು ನುಡಿದನು ರಾಮಯ್ಯನು ಹಾಗೆಂದು
ತಂದೆ ಕಂಪಿಲರಾಯನೆಡೆಗೆ ।
ಸಂದೇಹವಿಲ್ಲದೆ ಕಡಿದು ಕಾದುವೆನೆಂದು
ಅಂದು ಬಿನ್ನಹವ ಮಾಡಿದನು ॥೫೨॥

ಹೇಳಿದ ಮಾತ ಕೇ[ಳುತ] ಕಂಪಿಲರಾಯ
ತಾಳಿದ ಮನದಿ ಚಿಂತೆಯನು ।
ಹಾಳಾಯಿತು ಹೊಸಮಲೆದುರ್ಗ ಕುಮ್ಮಟವೆಂದು
ಮೇಳೈಸಿದ ಹೊಸಮಲೆಗೆ ॥೫೩॥

ಕಂಡನಾಗಲು ರಾಮ ಬಾದೂರಖಾನನ
ಕೊಂಡಲ್ಲದೆ ಹೋಗರಿವನ ।
ಹೆಂಡರು ಮಕ್ಕಳು ಸಹವಾಗಿ ಬೈಚಪ್ಪ
ಭಂಡಾರವನು ತೆರಳೆಂದ ॥೫೪॥

ಹೊಕ್ಕಳ ಗಂಟೆಯ ಐನೂರು ಕುದುರೆಯ
ಗಕ್ಕನೆ ಕಳುಹಿದ ರಾಮ ॥೫೫॥

ಇತ್ತ ಕುಮ್ಮಟವ ಹೊರಟನು ರಾಮಯ್ಯನು
ಒತ್ತಿ ಮಾಡಿದ ಮುಂ[ಗಾ]ಳಗವ ।
ಒತ್ತರಿಸಿ ಬರುವ ತುರುಕರ ದಂಡ ಕಣಿವೆಯೊಳ್
ಮುತ್ತಿ ಕಡಿದು ಮುರಿಯಲೊತ್ತಿ ॥೫೬॥

ರಣಭೀತಿ ಹೆಣಭೀತಿ ಮಾಡಿ ರಾಮಯ್ಯನು
ಕುಣಿಸುತ ಭೂತಪ್ರೇತಗಳ ।
ಉಣಿಸಿ ಮರುಳು ತಂಡವೆಲ್ಲಕೆ ದಣಿವಂತೆ
ಹೊಣಕೆಯ ಬಂಟರು ಸಹಿತ ॥೫೭॥

ತಿರಿಗಿ ಬಂದನು ಕುಮ್ಮಟಕಾಗಿ ರಾಮಯ್ಯ
ಭರದಿಂದ ತನ್ನ ದುರ್ಗದೊಳು ।

ಇರುತಿರಲಾಕ್ಷಣ ತಂದೆ ಬಳಿಗೆ ಸುದ್ದಿ
ಬರೆಸಿ ಕಳುಹಿ ಚರರಟ್ಟಿ ॥೫೮॥

ಹರಿಯಲದೇವಿಗೆ ಪರಿತಂದು ಸುದ್ದಿಯ
ನೊರೆದರು ಊಳಿಗದವರು ।
ಅರಸು ಭಂಡಾರದೊಳೆರಡು ಖಂಡುಗ ಹೊನ್ನ
ತರಿಸಿ ರಾಮಗೆ ಕಳುಹಿದ[ಳು] ॥೫೯॥

ಮುಂಜೂಣಿ ಕಾಳಗಕೆ ಹೋಗಿರ್ದ ರಾಮಯ್ಯ
ಮಂದಿ ಮಕ್ಕಳು ಸಹವಾಗಿ ।
ಕುಂಜರದಾನೆ ಕುದುರೆಯ ಪಿಡಿಕೊಂಡು
ಸಂಜೆಲಿ ಹೊಕ್ಕ ಅರಮನೆಯ ॥೬೦॥

ಕೊಬ್ಬಿ ದಾಳಿಯ ಬರುತಿರಲು ಮಾತಂಗಿಯು
ಸಬ್ಬ ದಂಡಿಗೆ ಇದಿರಾಗಿ ।
ಹೆಬ್ಬಾಗಿಲ ತೆಗೆತೆಗೆಯೆಂದು ರಾಹುತರು
ಉಬ್ಬಿ ರಾಮಗೆ [ಕಲಿ] ಮಂದಿ ॥೬೧॥

ಬಿಲ್ಲ ಮಂದಿಯು ಹರಿಗೆಯ ಮಂದಿ ಸಹವಾಗಿ
ಎಲ್ಲರು ಕೋಟೆಯ ಮೇಲೆ ।
ಭಾಷೆಕೊಡಲು ನಳಿನಸಖನಸ್ತನಾದನು
ಕಳೆಯು ಏರಿತು ಕುಮ್ಮಟವು ॥೬೨॥

ತಳೆದವು ಕೈದೀವಿಗೆಯು ಕೋಟೆಯ ಮೇಲೆ
ಹೊಳೆಯಿತು ಕಾವಲ ಮಂದಿ ।
ಬಿಲ್ಲ ಮಂದಿಯು ಹರಿಗೆಯ ಮಂದಿ ಸಹವಾಗಿ
ಎಲ್ಲರು ಕೋಟೆಯ ಮೇಲೆ ॥೬೩॥

ಎಲ್ಲಿ ನೋಡಿದರಲ್ಲಿ ತುಳುವ ಎಕ್ಕಟಿಗರು
ಸೊಲ್ಲೆರಡಿಲ್ಲ ಪಟ್ಟಣದಿ ॥೬೪॥

ಈ ಪರಿಯಲ್ಲಿ ಬೆಳಗಾಯಿತು ಕುಮ್ಮಟ
ಭೂಪನೈದಿದ ರಾಮನಾಥ ।

ಶ್ರೀಪತಿ ಶರಣು ಎನ್ನುತ ನಿಶ್ಚೈಸುತ
ಭಾಪುರೆಯೆಂದು ಮನದೊಳಗೆ ||೧೫||

ತನ್ನರಮನೆಗಾಗಿ ಬಂದನು ರಾಮಯ್ಯ
ಮನ್ನೆರನೆಲ್ಲ ಕರೆಸಿದನು ।
ಚೆನ್ನಾಗಿ ಊಟ ಮಾಡಿಸಿ ಉಡುಗೊರೆಯಿತ್ತು
ಮನ್ನಿಸಿದನು ರಾಹುತರ ||೧೬||

ತಂದರು ವಸ್ತ್ರಾಭರಣವನೆಲ್ಲವ
ಮುಂದಿರಿಸಿದರು ರಾಮಯನ ।
ಗಂಧ ಕಸ್ತೂರಿ ಕುಂಕುಮ ಕಾದಂಬವ
ಮಂದಿ ಎಲ್ಲಕ್ಕೆ ಕೊಡುತಿರ್ದ ||೧೭||

ಮಂಡಲದೊಳಗುಳ್ಳ ರಾಯರಗಂಡನೆಂಬ
ಚರಣದೊಳುಲಿಯೆ ಪೆಂಡೆಯವು ||೧೮||

ಮುತ್ತಿನ ಜೋಡು ಪಚ್ಚೆದ ಜೋಡು ಚಿನ್ನದ
ಚಿತ್ರದ ಜೋಡು ವಜ್ರಂಗಿ ।
ಸುತ್ತುಗಟ್ಟಿದ ಕುಮುದ ಝುಲ್ಲಿ ಕುದುರೆಗೆ
ಮಸ್ತಕಕೆ ಮೆರೆವ ಲಲಾಟ ||೧೯||

ಬಂದರು ಭಟರು ಉಗ್ಗಡಿಸುತ ಬಿರಿದನು
ನಿಂದರು ರಾಮನೊಂದಿನಲಿ ।
ಮುಂದೆ ಹೆಬ್ಬಾಗಿಲ ತೆಗೆಯೆಂದು ರಾಹುತರು
ನಿಂದು ರಾಮನ ಪಚಾರಿಸುತ ||೨೦||

ಎತ್ತಿತು ಮುತ್ತಿನ ಸತ್ತಿಗೆ ರಾಮಗೆ
ಮತ್ತೆ ಬಿರುದಿನ ಡೊಳ್ಳುಗಳು ।
ಚಿತ್ರದ ಮಖರ ಟೆಕ್ಕೆಯವೆತ್ತಿ ಬರಲಾ
ಮೊತ್ತವ ಕಂಡು ಮಾತಂಗಿ ||೨೧||

ಅರರೆ ರಾಮುಗನೆಂದು ಕೊಂಡಾಡಿದರಾಗ
ಧುರಧೀರ ನೀನಹುದೆನುತ ||೨೨||

ಅಬ್ಬರದಲಿ ರಾಮನಿಳಿದನು ದುರ್ಗವ
ಹೆಬ್ಬಾಗಿಲ ತೆಗೆಸಿದನು ।
ನಿಬ್ಬರದಲಿ ಕಾಣುತಲೆದ್ದು ತಿವಿದರು
ಒಬ್ಬರೊಬ್ಬರನು ಮೂದಲಿಸಿ ॥೭೩॥

ಎಡವಂಕದಲಿ ನೋಡುತ ರಾಮನಾಥನು
ಬಡಿದಾಡಿತು ಬಲವಂಕ ॥೭೪॥

ಹೋದ ಮಂದಿಯು ತಿರುಗದುಯೆಂದು ಮಾತಂಗಿ
ಮೂದಲಿಸುತ ಏರಿದಳು ।
ಅದುಕೊಂಡರು ರಾಮನ ಮಂದಿ ತುರುಕರ
ಗಾದಿಗಿತ್ತಿಯು ಬೆರಗಾಗೆ ॥೭೫॥

ಬಲ್ಲಂತೆ ಕಡಿ ಹೊಡಿ ಎನುತಲಿ ರಾಮಯ್ಯ
ಎಲ್ಲಕೆ ಕೈಯ್ಯ ಬೀಸಿದನು ।
ಹೊಳಕೆಯ ಮಂದಿಯಂಕವ ನೋಡಿ ಕಡಿವಾಗ
ಎಣಿಕೆಯಿಲ್ಲದೆ ಡೇರೆ ಪೊಕ್ಕು ॥೭೬॥

ತಳುವಿಲ್ಲದೆ ಕುದುರೆಯ ಪಿಡಿದೆಳೆದರು
ಘಳಿಲನೆ ಒಡೆಯಗೊಪ್ಪಿಸಿ ॥೭೭॥

ಹೆಣಮಯವಾಯಿತು ಕದನದೊಳೆಲ್ಲವು
ರಣಮಯವದ್ಭುತವಾಯ್ತು ।
ಹೊಣಿಕೆಯ ಮಂದಿಗೆ ಸರಿಯಲ್ಲ ರಾಮನ
ಕೆಣಕಿ ಕೆಟ್ಟೆವು ನೊಂದೆವೆನುತ ॥೭೮॥

ನುಗ್ಗುಮಾಡಿಯೆ ಕಡಿದರು ಕಣಿವೆಯ ಕಟ್ಟಿ
ಕಗ್ಗೊಲೆಯ ಕೆಲಬಲರ ।
ಬಾಗಿಹೋಗುತ ಗಿಡುಗಳ ಮೆಳೆಯ ಹೋಗುತ
ಅಗ್ಗಾಗಿ ಓಡಿತು ದಂಡು ॥೭೯॥

ಕೆಟ್ಟು ಓಡಿತು ಮಾತಂಗಿಯ ಬಲ್ಲವೆಲ್ಲ
ಅಷ್ಟದಿಕ್ಕಿಗೆ ಬಾಯಬಿಡುತ ॥೮೦॥

ನಾಲ್ಕು ಕಾಲುಗಳ ಕಟ್ಟಿರಿಸುತ ಕುದುರೆಯ
ನೂಕಲಮ್ಮದೆ ನಿಂದಿಹರು ।
ಬೇಕಾಗಿ ಮಾತಂಗಿ [ಏ]ರಲು ರಾಮಯ್ಯ
ತಾ ಕೈಕೊಂಡ ಕಾಳಗವ ॥೮೧॥

ಎರಡು ಲಕ್ಷವು ಕುದುರೆಗಳೇರೆ ರಾಮನ
ತರುಬಿ ಹಿಡಿವೆನು ಎಂದೆನುತ ।
ಕರದ ಪಟ್ಟೆಯದಲ್ಲಿ ಕಡಿಕಡಿದೊಟ್ಟಲು
ಒರಲುತ ಮುರಿದು ಓಡಿದರು ॥೮೨॥

ಕುದುರೆ ಕುದುರೆಗಳ ಸಂದಣಿ ರಾಮನು
ಕದುಬುತ ಕತ್ತಿಯ ಹೊಯ್ದು ।
ಕದಳಿಯೊಳಗೆ ಒಂದು ಮದಕರಿ ಹೊಕ್ಕಂತೆ
ಮೆದೆಗೆಡಹಿದನು ತುರುಕರನು ॥೮೩॥

ಖಂಡೆಯದಲಿ ಹೊಡೆಯಲು ತೋಳು ಖಂಡ್ರಿಸಿ
ಗುಂಡಿಗೆ ಒಡೆದು ಡೆಂಢಣಿಸಿ ।
ತುಂಡುತುಂಡುಗಳಾಗಿ ಕಡಿದನು ರಾಮನು
ಗಂಡುಗಲಿಯು ರಾಹುತರ ॥೮೪॥

ತುರುಕ ರಾಹುತರೆಲ್ಲರು ಮಡಿವಂತಹ
ಪರಿಯನದಾರು ಬಣ್ಣಿಪರು ।
ಮೊರೆದವು ಮರುಳ ತಂಡದ ಹಿಂಡು ಬಂದಿತು
ದೊರೆ ರಾಮನ ಪರಸುತಲಿ ॥೮೫॥

ತಂಡತಂಡದ ಭೂತಗಳುಂಡು ದಣಿದವು
ಕೊಂಡಾಡಿದವು ರಾಮುಗನ ।
ಮಿಕ್ಕಾದ ಮರುಳ ತಂಡವನೆಲ್ಲ ದಣಿಸಿದ
ದಿಕ್ಕಿನೊಳಗೆ ವೀರ ರಾಮ ॥೮೬॥

ಹೆಣಮಯವಾಯಿತ್ತು ಅಳುವೇರಿಯ ಸುತ್ತ
ರಣವನಿಕ್ಕಿದರು ಕುಮ್ಮಟಕೆ ॥೮೭॥

ಕೋಟೆಗೆ ತುರುಕರ ಬಲಿಯನು ಇಕ್ಕಿನ್ನು
ಕಾಟಣ್ಣ ಹಿಂದಕ್ಕೆ ಮರಳಿ ।
ನಾಟಕವಲ್ಲ ರಾಮನ ಕೂಡೆ ಕಾಳಗ
ಕೋಟಲೆಯಾಯ್ತು ನಮಗೆಂದ ॥೮೮॥

ಕೊಪ್ಪರಿಗೆಯೊಳಗೆ ಕಾದ ಎಣ್ಣೆಯ ತಂದು
ಖಾನರ ಮೇಲೆ ಚೆಲ್ಲಿದರು ।
ಕಾದ ಬೊಗ್ಗನು ತಂದು ಖಾನರ ಮೇಲಿನ್ನು
ಚೆಲ್ಲಲು ಅಯ್ಯೋ ಎಂದೆನುತ ॥೮೯॥

ಕಾದುವರಸದಳವೆನುತಲಿ ಮಾತಂಗಿ
ಮೂದಲಿಸುತಲೇರಿದಳು ॥೯೦॥

ಕಲ್ಲೊಳು ಕಾದ[ಬಹು]ದು ರಾಮನ ಕೂಡೆ
ನಿಲ್ಲಬಾರದು ಎಂದೆನುತ ।
ಭಲ್ಲೆಯ ಖಾನ ವಜೀರರ ಕೂಡಿಸಿ
ಝುಲ್ಲನೆ ಹಿಂದಕ್ಕೆ ತಿರುಗಿ ॥೯೧॥

ಹಿಂದಕ್ಕೆ ತಿರುಗಿ ಬಂದಳು ಮಾತಂಗಿಯು
ಒಂದುಗಾವುದ ದಾರಿಯನು ।
ಸಂದೇಹವಿಡಿದು ಕಾದುವ ಬಗೆಯಿಲ್ಲ
ವೆಂದು ಚಿಂತಿಸಿ ಮನದೊಳಗೆ ॥೯೨॥

ನಿಲ್ಲದೆ ತಮ್ಮೊಳು ತಾವು ಮಾತಾಡುತ
[ಅಲ್ಲಿಹ] ತೆಲುಗ ಮನ್ನೆಯರು ।
ಬಲ್ಲಿದ ರಾಮನ [ಕೊಲ್ಲಿ]ಸಬೇಕೆನುತಲಿ
ಎಲ್ಲ ರಾಯರು ಕಾಗದ ಬರಿಸಿ ॥೯೩॥

ನವಲಕ್ಷ ತೆಲುಗರ ಗಂಡನೆಂಬ ಕಡೆಯವ
ಇವನಿಕ್ಕಬಹುದೆ ಕಾಲೊಳಗೆ ।
ತವಕದಿ ತಮ್ಮೊಳು ತಾವೆ ರೋಷವ ತಾಳಿ
ಇವನ ಕೊಲ್ಲಿಸಬೇಕೆನುತ ॥೯೪॥

ಹೋಗಬೇಡವು ತಿರುಗುಯೆಂದು ಮಾತಂಗಿಗೆ
ಆಗಲೆ ತೆಲುಗ ಮನ್ನೆಯರು ।
ಬಾಗಿಲ ತೆಗೆದುಕೊಟ್ಟೇವು ಬರಹೇಳೆಂದು
ಬೇಗದಿ ಬರಸಿ ಕಳುಹಿದ[ರು] ॥೯೫॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಸುದತಿ ಮಾತಂಗಿ ಕುಮ್ಮಟ ಮುತ್ತಿ ಮುರಿದೋಡಿ
ಹೆದರಿ ಓಡಿದ ಕಥೆ ಪೂರಾಯ್ತು ॥೯೬॥

ಅಂತು ಸಂಧಿ ೨೪ಕ್ಕಂ ಪದನು ೨೫೭೯ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨೫

❖

ಮಾತಂಗಿಯೊಡನೆ ಕೊಮಾರ ರಾಮಯ್ಯನ ಯುದ್ಧ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ[ಕುಂಡಲ] ಶರಣೆಂಬೆ ॥೧॥

ಬಿಟ್ಟೋಡಿ ಹೋದಂಥ ಮಾತಂಗಿ ತಾ ಬಂದು
ಬಿಟ್ಟಳು ಕುಮ್ಮಟಕಾಗಿ ।
ಕೊಟ್ಟದ ಬೇಡರು ಕಡಿಕಡಿದೊಟ್ಟುವ
ದಿಟ್ಟವನೇನ ಬಣ್ಣಿಸುವೆ ॥೨॥

ಬಂಧಂಥ ವಾಲೆಯ ನೋಡುತ ಮಾತಂಗಿ
ನಿಂದಳು ಸಂತೋಷದಲ್ಲಿ ।
ಮಂದಿ ಕುದುರೆ ಪರಿವಾರ ರಾಹುತರೆಲ್ಲ
ಬಂದಳು ತಿರುಗಿ ಮಾತಂಗಿ ॥೩॥

ಹೇಳಿದ ಮಾತ ಕೇಳುತಲಿ ಮಾತಂಗಿಯು
ದಾಳಿ ಮಾಡಿದಳು ಕುಮ್ಮಟಕೆ ॥೪॥

ತಿರುಗಿ ಬಂದನು ಕುಮಾರ ಕಾಟಣ್ಣನು
ಅರಮನೆಗಾಗಿ ಬೇಗದೊಳು ।
ಅರಸುಯಿಲ್ಲದೆ ಕಾಳಗವಿನ್ನು ಜಯಿಸದು
ಧುರಧೀರ ರಾಮ ಚಿತ್ತೈಸು ॥೫॥

ಆಳ ಕಾದಿಸಿ ನೋಡುವ ರಾಯರಗಂಡ
ಕೇಳಿ ಕಾಟಣ್ಣನ ಮಾತ ।
ತಾಳಿ ಮನದಲ್ಲಿ ಸಂತೋಷದಿ ನಲಿವುತ
ಹೇಳೆಂದು ಮತ್ತೆ ನುಡಿದನು ॥೬॥

ಕಾಲನ ಕಾಮಾಟವಾಗಿದೆ ಕುಮ್ಮಟ
ಲೀಲೆಯಾಗಿದೆ ದುರ್ಗದೊಳಗೆ ।
ಬಾಲಕ ಮಕ್ಕಳೆಲ್ಲರು ಕಡಿದಾಡಿದರು
ಹೇಳಲಿನ್ನೇನು ಪಟ್ಟಣವ ॥೭॥

ಕೆಳಗೋಟೆ ಹೋಯಿತು ಎಲೊ ರಾಯರಗಂಡ
ಬಳಿಕ ನೀ ಮಾಡುವುದೇನು ।
ಒಳಗೊಟ್ಟರು ನಮ್ಮ ತೆಲುಗ ಮನ್ನೆಯರೆಲ್ಲ
ಇಳುಹೊ ಲೆತ್ತವನು ಬೇಗದಲಿ ॥೮॥

ಮನ್ನೆಮನ್ನೆಯರೆಲ್ಲ ತುರುಕರಿಗೊಳಗಾದ
ರೆನ್ನುವ ಸುದ್ದಿಯ ಕೇಳಿ ।
ಇನ್ನದು ಚೋದ್ಯವೆಂದು ರಾಮನಾನು
ತನ್ನೊಳು ತಾನು ನಿಶ್ಚೈಸಿ ॥೯॥

ಈಗಲೆ ಕಡಿವೆನು ತುರುಕರ ದಂಡನು
ಹೋಗದೆ ಮರೆತು ಕಾದಿದರೆ ।
ನೀಗುವೆನೆನ್ನ ಪ್ರಾಣವನೆಂದು ರಾಮಯ್ಯ
ಸಾಗಿ ಬಂದನು ತನ್ನರಮನೆಗೆ ॥೧೦॥

ತಿರುಗಿ ತನ್ನರಮನೆಗಾಗಿ ರಾಮಯ್ಯನು
ಅರಸಿಯರನು ಕರೆಸಿದನು ।
ತರಿಸಿ ಮುತ್ತಿನ ಗದ್ದುಗೆ ಮೇಲೆ ಕುಳಿತಿರ್ದು
ಹರುಷದಿ ಮಾತಾಡಿದನು ॥೧೧॥

ಕಿಚ್ಚ ಕಂಡು ಕಣ್ಣುಗೆಡಬೇಡಿ ಮನದೊಳು
[ಒಚ್ಚೆಯ] ತಂದುಕೊಳ್ಳೆನುತ ।

ನಿಶ್ಚೈಸಿ ತನ್ನ ಕೂಡಲಿ ಬನ್ನಿಯೆನುತಲಿ
ಮೆಚ್ಚಿನ ಮಡದರ್ಗೆ ಉಸುರೆ ॥೧೨॥

ಮಡದಿಯರಿಗೆ ಬುದ್ಧಿ ಹೇಳಿನ್ನು ರಾಮಯ್ಯ
ಮಡಿದೆನೆಂದರೆ ಎನ್ನೊಡನೆ ।
ಬಿಡುವುದು ಪ್ರಾಣವ ಎನುತ ತಾಂಬೂಲವಿತ್ತು
ಕಡುಗಲಿ ಕಳುಹಿಸಿಕೊಂಡ ॥೧೩॥

ಉಟ್ಟನು ಪಟ್ಟೆ ವಂಕುಡಿದಾರವ ರಾಮ
ನೆಟ್ಟನೆ ಏಕಾಂಗವೀರ ।
ಪಟ್ಟದರಾಣಿ ತಂದಳು ಅಮೃತಾನ್ನವ ಹೊಂ
ಬಟ್ಟಲೊಳಗೆ ರಾಮಯಗೆ ॥೧೪॥

ಹುಟ್ಟಿದ ಒಡಹುಟ್ಟು ಕಾಟಣ್ಣ ಸಹಿತ ಪೊಂ
ಬಟ್ಟಲೊಳಮೃತಾನ್ನವು ।
ಕಟ್ಟಳಿಕ್ಕದೆ ಪರಿವಾರಕ್ಕೆ ಹೊನ್ನ
ತಟ್ಟೆಲಿ ಇತ್ತ ವೀಳ್ಯಯವ ॥೧೫॥

ತುಂಬಿತು ಪಣೆಯ ಬರಹವು ಜಟ್ಟಂಗಿಯ
ಶಂಭುಲಿಂಗನ ಕೃಪೆ ತಪ್ಪಿ ॥೧೬॥

ತನ್ನೊಳಗೈದು ಬಂದಿತು ನಾಲ್ಕು ಸಾವಿರ
ಹೊನ್ನ ಕಟ್ಟಿನ ಬಲ್ಲಿನವರು ।
ಮನ್ನಿಸಿ ಕರ್ಪುರ ವೀಳ್ಯವನಿತ್ತನು
ಚೆನ್ನರಾಮಯ್ಯ ಧನು ಪಿಡಿದ ॥೧೭॥

ಧನುವ ಪಿಡಿದುಕೊಂಡು ಚೆನ್ನಿಗರಾಮಯ್ಯ
ಘನ ಕೋಪಾಟೋಪದಲೆದ್ದು ।
ಚಿನುಮಯ ಜಟ್ಟಂಗಿ ರಾಮೇಶ ಗತಿಯೆಂದು
ಅನುವಾಗಿ ಹೊರಟ ಕಾಳಗಕೆ ॥೧೮॥

ದ್ವಾರವಾಟದಲಿ ನಿಂದನು ರಾಮನಾಥನು
ಆರು ಬಿದ್ದರು ಎಂದೆನಲು ॥೧೯॥

ನಲ್ಲ ನಾಗನು ಬಿದ್ದ ಬಿಲ್ಲ ಪೆನ್ನನು ಬಿದ್ದ
ಅಲ್ಲಿ ಮೀನಿಗ ಸಿಂಗ ಬಿದ್ದ ।
ಜಲ್ಲಿಬಿಲ್ಲಿನ ಬುಕ್ಕಿನಾಯಕ ಮೊದಲಾದ
ಕಲ್ಲಕೋಟೆಯ ಚಿಕ್ಕ ಬಿದ್ದ ॥೨೦॥

ಮೂದಲಿಸುತ ಮಾದಿಗ ಹಂಪ ರಣದೊಳು
ಭೇದವಿಲ್ಲದೆ ಹೊಯ್ದಾಡಿ ।
ಸಾಧಿಸಿ ಒಳಪೊಕ್ಕು ಬಾಹ ತುರುಕರೊಳು
ಕಾದಿ ಬಿದ್ದನು ಸಂಗ್ರಾಮದೊಳು ॥೨೧॥

ಎಕ್ಕಟಿಗರು ಬಿದ್ದರೇಳೊ ಚೆನ್ನಿಗರಾಮ
ಅಕ್ಕಸಾಲೆರ ಚಿಕ್ಕ ಬಿದ್ದ ।
ದಿಕ್ಕುದಿಕ್ಕಿಗೆ ಬಲು ಬಲಿಗಳನಿಕ್ಕುತ
ರಕ್ಕಸ ಮನ್ನೆಯ ಬಿದ್ದ ॥೨೨॥

ಖಂಡೆಯಕಾರ ತುಳುವರ ಮಂದಿ ಬಿದ್ದಿತು
ಗಂಡುಗಲಿಯೆ ವೀರರಾಮ ।
ಕೊಂಡುಬಂದು ಕದನದ ಮೇಲೆ ಕೆಡಹುವ
ಲೆಂಡ ಕೊಳ್ಳಿಯ ನಾಗ ಬಿದ್ದ ॥೨೩॥

ತೊಲಗದೆ ಹೊಯ್ದಾಡಿ ಅಲ[ಗಿಗೆ] ಗುರಿಯಾಗಿ
ಬಲವಂತ ಬೇವಿನ ಸಿಂಗ ।
ಕಲಿರಾಮ ನಿನ್ನ ಮೋಹದ ಎಕ್ಕಟಿಗನು
ಹೊಲೆಯರ ಹಳ್ಳುಗ ಬಿದ್ದ ॥೨೪॥

ಹೇಳಿದ ಮಾತನು ಕೇಳುತ ರಾಮನು
ತಾಳಿದ ಮನ[ದಿ] ರೋಷವನು ।
ಹೋಳುಹೋಳಾಗಿ ಕಡಿವೆ ತುರುಕರ ದಂಡ
ಕಾಳಗದಲಿ ಮೂದಲಿಸಿ ॥೨೫॥

ಈ ಕಡೆಯ ಹೋಗಿ ಕಾದಿಸೊ ಕಾಟಣ್ಣ
ಬೇಕಾದ ಮಂದಿಯ ಕೊಂಡು ।

ಏಕಾಂಗವೀರರೆಲ್ಲರು ಕೋಟೆಯ ಹತ್ತಿ
ನೂಕಿ ತಿವಿದು ಸಬಳದಲಿ ॥೨೬॥

ಸಂಭ್ರಮದಲಿ ಇಳಿದನು ರಾಮ ದುರ್ಗವ
ಕೊಂಬಿನ ನಾದ ಹೆಗ್ಗಾಳೆ ।
ಬೊಂಬುಳಿ ವಾದ್ಯ ನಿಸ್ಸಾಳ ವಾದ್ಯಗಳಿಂದ
ಕುಂಭಿನಿ ನಾಲ್ಕು ದೆಸೆಯಲ್ಲಿ ॥೨೭॥

ಕಹಳೆಯ ಧ್ವನಿಯನು ಕೇಳುತ ತುರುಕರು
ಪಾಳೆಯ ಗದಗದಿಸುತಲಿ ।
ದಾಳಿಯ ಬರು[ತಾ]ನದಕೋ ರಾಮಯ್ಯನು
ಕೇಳಿ ತಮ್ಮೊಳು ಬೆವರುತಲಿ ॥೨೮॥

ಭರದಿಂದ ದುರ್ಗವನಿಳಿದು ರಾಮಯ್ಯನು
ಕರದಲ್ಲಿ ಧನುವ ಜೇವೊಡೆದು ॥೨೯॥

ಮೆಲ್ಲನೆ ದುರ್ಗವನಿಳಿದು ರಾಮಯ್ಯನು
ಬೊಲ್ಲನ ತಂದು ನಿಲ್ಲಿಸಲು ।
ಜಲ್ಲನೆ ಏರಿ ದುವ್ವಾಳಿಸಿ ರಾಮಯ್ಯ
ಎಲ್ಲ ಕುದುರೆಯ ಪೌಜಿನಿಂದ ॥೩೦॥

ಏರಿ ಆನೆಯ ಮೇಲೆ ಬರುವ ಮಾತಂಗಿಗೆ
ತೋರಿದರು ಇವ ರಾಮನೆನುತ ।
ಧಾರುಣಿಯೊಳು ಚೆಲ್ವರಗಂಡ ರಾಮನ ಕ
ಣ್ಣಾರೆ ನೋಡಿದಳು ಮಾತಂಗಿ ॥೩೧॥

ಮಾದಿಗಿತ್ತಿಯ ತೋರೆನುತಲಿ ರಾಮಯ್ಯ
ಕಾದುತ ಕೇಳಿದನಾಗ ।
ಮೂದಲಿಸುತ ಬಂದಳು ರಾಮಗಿದಿರಾಗಿ
ಕಾದುತ ಮಾತಂಗಿ ನಿಂದಳು ॥೩೨॥

ನಿನ್ನ ನೀನರಿಯೆ ನೋಡೆನುತ ಮಾತಂಗಿ ಅ
ಹನ್ನೆ ಹೇಳಿದಳು ರಾಮನಿಗೆ ।

ತನ್ನ ಸಮಾನದ ದೊರೆಗಳು ಸಹವಾಗಿ
ಚೆನ್ನಿಗ ರಾಮನ ಮೇಲೆ ॥೩೩॥

ರಕ್ಕಸ ಮಾದಿಗಿತ್ತಿಯ ಮೇಲೆ ಎಸೆವುತ
ಲೆಕ್ಕವಿಲ್ಲದೆ ಸಿಂಗಾಡಿಯನು ।
ಸೊಕ್ಕಾನೆ ಕುದುರೆ ಕಾಲಾಳು ರಾಹುತರೆಲ್ಲ
ಇಕ್ಕೆಲದಲ್ಲಿ ಏರಿದರು ॥೩೪॥

ಸಿಡಿಲ ತಡೆಯನೊಡೆದಂತೆ ಸಿಂಗಾಡಿಯು
ಕಾಡಿನೊಳೆಸೆದ ಕಾರ್ಮುಳೆಯು ।
ಕಡುಗಲಿ ರಾಮನು ಒಳ ಕಣಿವೆಯ ಪೊಕ್ಕು
ಕಡಿದನಾನೆಯ ಶಿರದೆಡೆಯ ॥೩೫॥

ಪಿಡಿದೆಳೆಯಲು ವೀರಜಡೆಯ ಮಾತಂಗಿಯ
ಪಡೆದ ಮುರಿದುದು ದೆಸೆದೆಸೆಗೆ ।
ತಡೆಯದೆ ರಾಮನವಳ ನೋಡಿ ಮನ್ನಿಸಿ
ಕಡುಗಲಿ ಮನದೊಳಿಂತೆಂದ ॥೩೬॥

ಸಂಗ್ರಾಮದೊಳು ಕಾದಿ ಹೆಂಗಸ ಕೊಂದರೆ ದು
ಸ್ಸಂಗ ತಪ್ಪದು ಸ್ವರ್ಗದಲಿ ।
ನಿಂಗಿ ಹೋಗೆನುತ ಮುಂದಲೆಯನು ಬಿಡಲಾಗ
ಸಿಂಗಾಡಿಯಲಿ ತೆಗೆದೆಚ್ಚಳು ॥೩೭॥

ಹೊಕ್ಕಳು ಮೂದಲಿಸುತ ಮಾತಂಗಿಯು
ಇಕ್ಕೆಲದಲ್ಲಿ ಕರ್ಕಸದ ।
ಲೆಕ್ಕವಿಲ್ಲದ ಅಂಬುಗಳನು ತೆಗೆತೆಗೆ[ತೆಗೆ]
ದಿಕ್ಕಿ ದೊರೆ ರಾಮನ ಮೇಲೆ ॥೩೮॥

ಆಲುತ ಬೊಬ್ಬಿರಿದೆಚ್ಚರ ರಾಮನ ಕೀಲಿಸಿ
ಕೀಲಿಸಿ ತಲೆಯ ತಟ್ಟುಗುಚಿ ।
ಕೋಳಾಹಳವ ರಮ ನೋಡಿ ಇಂದಿನದಲ್ಲಿ
ಹಾಳಾಯಿತು ಕುಮ್ಮಟವು ॥೩೯॥

ಕಿತ್ತನು ರಾಮ ತನ್ನೆದೆಯ ಅಂಬನು ಆಗ
ಒತ್ತಿ ಹರಿವ ರಕುತವನು ।
ಅತ್ಯಂತ ಹರುಷದಿ ನೋಡಿ ಹಾಹಾಯೆಂದು
ಮತ್ತೆ ಮನದೊಳಗೆ ಇಂತೆಂದ ॥೪೦॥

ರಾಮನು ಧರೆಯ ರಾಯರಗಂಡನೆಂದೆಂಬ
ನಾಮವಳಿಯಿತು ಇಂದಿನಲಿ ।
ಹಾಹಾ ವಿಧಿಯೆ ಎಂದೆನುತಲಿ ರಣದ ನಿ
ಸ್ಸೀಮ ನುಡಿದ ರಾಮನಾಥ ॥೪೧॥

ಧಾರುಣಿಯೊಳು ತೋಳ ಬೀಸಿ ನಡೆವ ದೊರೆಯ
ವೀರ ರಾಯರಗಂಡನೆಂಬ
[ಬಿರಿದಿ]ಂದೀಗಳಿಯಿತೆ ಎನುತಲಿ ರಾಮಯ್ಯ
ಮಾರಸನ್ನಿಭನು ತಾ ನುಡಿದ ॥೪೨॥

ಬಲವಂತ ರಾಮನೆಕ್ಕಟಿಗರೆಲ್ಲರು ತಮ್ಮ
ಅಲಗನುಗಿದು ಬೊಬ್ಬಿರಿದು ।
[ಕೆಲ]ಬಲದಲ್ಲಿ ಬಾಣದ ಮಳೆಗರೆಯಲು
ಕೊಲಲೊಯೆಂದು ಏರಿದರು ॥೪೩॥

ಕೆಣಕುತ ಕಿಚ್ಚಿನ ರೋಷದಿ ಎಕ್ಕಟಿಗರು
ರಣಮಯವಭ್ರುತವಾಗೆ ।
ದಣಿಯದೆ ಬಾಣದ ಬಸವಯ್ಯ ನೇಮಿಗೆ
ಹಣಿದನು ಖಾನಖಾನರನು ॥೪೪॥

ಹೆಬ್ಬುಲಿ ಪಶುವಿನ ಹಿಂಡಿನೊಳಗೆ ಹೊಕ್ಕು
ಅಬ್ಬರದಲಿ ಹೊಯ್ದಂತೆ ।
ತಬ್ಬಿಬ್ಬಿಗೊಳ್ಳದೆ ಬಾಣದ ಬಸವಯ್ಯ
ನಿಬ್ಬರದಿ ಬಿದ್ದ ರಣದೊಳಗೆ ॥೪೫॥

ಇಟ್ಟಣಿಸುವ ಮುಂದಲ ಕಾಳಗದೊಳಗೆ
ಒಟ್ಟಿತು ಹೆಣದ ರಾಸಿಗಳು ।

ಅಟ್ಯಾಡಿ ಕಡಿದರು ತುರುಕರ ದಂಡನು
ನೆಟ್ಟನೆ ರಾಮನ ಭಟರು ॥೪೬॥

ಹುಲಿಮುಖದಲ್ಲಿ ಕವಿದೆಚ್ಚರು ಖಾನರು
ಕಲಿ ರಾಮನ ಮುಸುಕಿದರು ।
ಅಲಗಿನ ತಡೆಯ ಬಿಟ್ಟಂತೆ ಕಾಲಾಳ
ತಲೆಗಳ ಚೆಂಡಾಡುತಿರಲು ॥೪೭॥

ಕೊಂದನು ಕೈದಣಿಯದೆ ಮೈದಣಿಯದೆ
ಬಂದ ಮಲ್ಲೂಖಾನರನು ।
ಬಂದನು [ಗೂ]ಗೆಗಲ್ಲಿನ ಮೇಲೆ ರಾಮಯ್ಯ
ಮಂದಿ ಬಿದ್ದಿತು ಹಿಂದೆಮುಂದೆ ॥೪೮॥

ಕಾಟಣ್ಣನೊಂದು ಕಡೆಯಲಿ ಕಾದುತಲಿರ್ದ
ನೋಟ ರಾಮನ ಮೇಲೆ ಹರಿದು ।
ಕೂಟದ ಮಂದಿ ಸಂಗ್ರಹನೆಲ್ಲವ ಕೂಡಿ
ದಾಟಿಬಂದನು ರಾಮನೆಡೆಗೆ ॥೪೯॥

ಹರಿದೋಡಿ ಬಂದು ಹೊರಬಿದ್ದನು ಕಾಟಣ್ಣ
ದೊರೆ ರಾಮನ ಕಾಲ ಮೇಲೆ ।
ಪರಬಲಾಂತಕ ವೈರಿಯಗಂಡನೆಂದೆಂಬ
ಬಿರಿದು ಸಲ್ವದೊ ರಾಮ ನಿನಗೆ ॥೫೦॥

ಕಡುಗಲಿ ಕಾಟನ ಕರೆದು ಹೇಳಿದನಾಗ
ದೃಢಗಲಿ ಚೆನ್ನಿಗರಾಮ ।
ಪಡೆಯಡಗಿತು ನೀ ಮನೆಗ್ಹೋಗೊ ಕಾಟಣ್ಣ
ಒಡೆಯರಿಲ್ಲವು ಹೆಮ್ಮಕ್ಕಳಿಗೆ ॥೫೧॥

ಒಡಹುಟ್ಟಿದವನ ಬಿಟ್ಟು ಬಂದರೇನೆಂಬಳು
ಪಡೆದ ತಾಯಿ ಹರಿಯಮ್ಮ ।
ಕಡುಗಲಿ ನೀ ಹೋಗು ಹೋಗೆನುತ ರಾಮಯ್ಯ
ಅಡಿಗೆರಗಿದನು ಕಾಟಣ್ಣಗೆ ॥೫೨॥

ಒಡನೊಡನರಸಿ ರಾಮಯ್ಯ ಕಾಟಣ್ಣಗೆ
ಒಡಲ ಗಾಯವು ಸೊಕ್ಕಿತೆನಗೆ ।
ಪಡೆದ ತಾಯಿ ಹರಿಯಮ್ಮಗೆ ನೀ ಹೇಳು
ಕಡೆಯವನೊಪ್ಪಿಸುಯೆಂದ ॥೫೩॥

ಸುಣ್ಣ ಸಾಸುವೆಯ ತನ್ನೊಡಲೊಳು ಹೊಯ್ದಂತೆ
ಕಣ್ತೋದ ಸಿಂಹ ಮರಿಯಂತೆ ।
ಪುಣ್ಯವಿಂದಿಗೆ ಹಾಳಾಗಿ ಹೋಯಿತೆ
ಎನ್ನುತ ಕಾಟಣ್ಣ ನುಡಿದ ॥೫೪॥

ಜೀವಗಳ್ಳರಗಂಡ ಎನ್ನ ಸಹೋದರ ರಾಮ
ಆವಲ್ಲಿ ಗಾಯ ಪಡೆದೇಯೊ ।
ದೇವ ಜಟ್ಟಂಗೀಶ್ವರನ ಕೃಪೆ ತಪ್ಪಿತು
ಸಾವೆನೊ ನಿನ್ನೊಡನೆಂದ ॥೫೫॥

ಆರು ಎಚ್ಚರು ಚೆಲ್ವರಗಂಡ ರಾಮಯ್ಯ
ಧಾರಣಿಯೊಳು ಸುಪ್ರಚಂಡ ।
ತೋರಿಸು ನನಗವನ ಖಾನ ವಜೀರನ
ಬೇರು ಮಟ್ಟವು ಕಿತ್ತು ತರುವೆ ॥೫೬॥

ಹೆಂಗುಸು ಎನುತ ಬಿಟ್ಟೆನು ಮಾತಂಗಿಯ
ಸಂಗ್ರಾಮದೊಳು ಕವಿದೆ[ಚ್ಚೆ] ।
ಹಿಂಗದೆ ಎದೆಯನು ತಾಕಿತು ಕಾಟಣ್ಣ ನೀ
ಕಂಗೆಡಬೇಡೆಂದ ರಾಮ ॥೫೭॥

ನನ್ನ ಸಂತೋಷಕ್ಕೆ ಕಿಚ್ಚನಿಕ್ಕಿದೆಯಲ್ಲೊ
ಮಾನ್ಯ ಕುಮಾರರಗಂಡ ।
ಇನ್ನಾವ ಕಾಲಕ್ಕೆ ನಿನ್ನಂಥ ಬಿರಿದುಳ್ಳ
ಚೆನ್ನನ ಕಾಬೆನೊ ತಮ್ಮ ॥೫೮॥

ಇರುವೆಯ ಗೂಡಿಗೆ ಕಿಚ್ಚನಿಕ್ಕಿದೊ ರಾಮ
ಅರಿಬಿರಿದಿನ ಹೊಂತಕಾರ ।

ಹರಿಯಮ್ಮಗೇನೆಂದು ಹೇಳಲಪ್ಪೆನು ಚಾರಿ
ವರಿಯರೆ ಈ ಸುದ್ದಿ ಕೇಳಿ ॥೫೯॥

ಕಂಗೆಡದಿರಪ್ಪ ನಾ ಸಂಗ್ರಾಮದೊಳು ಕಾದಿ
ಹಿಂಗದೆ ಕೀರ್ತಿಯ ತಂದೆ ।
ತುಂಗವಿಕ್ರಮ ಬಿದ್ದನೆನುತಲಿ ಕಾಟಣ್ಣ
ಅಂಗನೆಯರಿಗೆಲ್ಲ ಪೇಳೊ ॥೬೦॥

ಹೇಗೊ ಬೇಗದೊಳು ನನ್ನಣ್ಣ ದೊಡ್ಡಣ್ಣ
ಹೋ[ಗದ] ಅಭಿಮಾನಗಳನು ।
ಚೇಗಿ ಮಾಡಲಿಬೇಡ ರಾಣಿವಾಸವ ಕೊಲ್ಲು
ಹೋಗೆಂದು ನುಡಿದ ರಾಮಯ್ಯ ॥೬೧॥

ತಂದೆಯ ವಂಶಕ್ಕೆ ಕುಂದ ತಂದವನಲ್ಲ
ಅಂದೆ ಕೊಂದಳು ಚಿಕ್ಕಮ್ಮ ।
ಕಂದರ್ಪರೂಪ ಕಾಟಣ್ಣ ಕೇಳೆನುತಲಿ
ನೊಂದು ನುಡಿದ ರಾಮನಾಥ ॥೬೨॥

ನಲಿದು ನನ್ನ ಪೆತ್ತ ತಾಯಿ ಹರಿಯಮ್ಮಗೆ
ಬಲು ಖತಿಯನು ಹೇಳಬೇಡ ॥೬೩॥

ಇನ್ನು ನೀ ಗಾಯದಲಳಿ[ದೆ ಎಂ]ದೆಂಬುದು
ಎನ್ನಲ್ಲಿ ಇನಿತಿಲ್ಲ ರಾಮ ।
ಮನ್ನಿಸೊ ನಿನ್ನ ಪ್ರಾಣವನೊಂದು ಗಳಿಗೆಗೆ
ನಿನ್ನೊಳ್ಳೈದುವೆನೆಂದ ಕಾಟ ॥೬೪॥

ಅಂಗವ ಕೊಡಬೇಡ ನಾ ಬರುವನಕಲಿ
ಸಂಗ್ರಾಮದೊಳು ಓಡಬೇಡ ।
ಕಂಗಳು ಮೂರುಳ್ಳ ಜಟ್ಟಂಗಿರಾಮನ
ಲಿಂಗನ ಕೃಪೆ ತಪ್ಪಿತೆಮಗೆ ॥೬೫॥

ತರಹರಿಸದೆ ಓಡಿಬಂದನು ಕಾಟಣ್ಣ
ಉರಿಗೊಂಡ ಕರ್ಪುರದಂತೆ ॥೬೬॥

ಹೇಳುತ ದುಃಖದೊಳಾಡುತ ಕಾಟನ
ಕೇಳಿ ಕಂಪಿಲ ಮೂರ್ಛೆಗೈದ ।
ಕೇಳಿದಳಾಗಲೆ ಹರಿಯಮ್ಮ ಸುದ್ದಿಯ
ಗೋಳಿಟ್ಟು ಹುಡಿಯೊಳು ಹೊರಳಿ ॥೬೭॥

ಕಡುಗಲಿ ರಾಮನ ಒಡಹುಟ್ಟಿದವರೆಲ್ಲ
ಹುಡಿಯಲ್ಲಿ ಬಿದ್ದು ಹೊರಳಿದರು ।
ನುಡಿದರು ಜನರೆಲ್ಲ ತಮತಮಗಿಂದಿಗೆ
ಕಡೆಗಾಲವಾಯಿತೆಂದರೆಲ್ಲ ॥೬೮॥

ತಡೆಯದೆ ಹರಿಯಮ್ಮನೊಳು ಪೇಳಿ ಪಾದಕೆ ಬಿದ್ದು
ನಡೆದು ಬಂದನು ಕುಮ್ಮಟಕೆ ॥೬೯॥

ಬಂದನು ರಾಮಯ್ಯನ ಮಡದಿಯರೆಲ್ಲರ
ನಿಂದು ಶೃಂಗಾರ ಮಾಡಿಸಿದ ।
ಚೆಂದದಿ ಮೊರೆವುತ ಆಡುತ ಪಾಡುತ
ಬಂದರು ರಾಜಬೀದಿಯಲಿ ॥೭೦॥

ಬಂದನು ರಾಮನ ಮಡದಿಯರೆಲ್ಲರು
ಚೆಂದಚೆಂದದಲಿ ಮೆರೆವುತ ।
ಇಂದೆಮ್ಮ ಜೋಡಗಲುವರೆ ಚೆನ್ನಿಗರಾಮ
ಕಂದರ್ಪರೂಪ ಎಂದೆನುತ ॥೭೧॥

ವೀರಾಧಿವೀರ ಹಾ ವೀರ ರಣಶೂರ ಹಾ
ಮಾರಾಂತರ ಗಂಡ ಹಾಹಾ ।
ಧಾರುಣಿಯೊಳು ಚೆಲ್ವರಗಂಡ ಹಾಯೆಂದು
ನಾರಿಯರೆಲ್ಲ ಮೊರೆದು ॥೭೨॥

ಮಳಲಗೌರಿಯ ನೋಂತರು ಏಳು
ಜಲ್ಮಕೆ ದೊರೆ ರಾಮನೆ ಗಂಡನೆನುತ ।
ಅರಸು ಕಂಪಿಲರಾಯ ಮಾವನಾಗಲಿ ನಮಗೆ
ಹರಿಯಮ್ಮ ಅತ್ತ್ಯಾಗಲೆಂದು ॥೭೩॥

ಓಡಿಬಂದರು ಕೊಂಡವಹತ್ತಿ ಬೇಗದಿ
ಗಾಢದಿ ಹತ್ತಿ ಕೆಂಡವನು ।
ನೋಡುತ ನಸುನಗೆ ನಗುತ ರಾಮಯ್ಯನ
ಪಾಡುತ ದುಮುಕಿದರಾಗ ॥೭೪॥

ಕಿಚ್ಚ ಹಾಯ್ವಾಗಲಿ ಹೆಚ್ಚಿತು ಬೊಬ್ಬೆಯು
[ಬೆ]ಚ್ಚಿತು ಕುಮ್ಮಟದುರ್ಗ ।
ಒಚ್ಚೊತ್ತಿಗೆಲ್ಲರ ಕಿಚ್ಚಿನೊಳಗೆ ನೂಕಿ
ನಿಶ್ಚೈಸಿ ತಿರುಗಿದ ಕಾಟ ॥೭೫॥

ತನ್ನರಮನೆಗಾಗಿ ಬಂದನು ಕಾಟಣ್ಣ
ಉನ್ನತ ಕಿಚ್ಚುರಿವುತಿರೆ ।
ಮನ್ನೆಯ ರಾಮನ ಮಡದೇರ ಕೊಂದೆನು
ಎನ್ನುತ ಕಾಟ ಪೇಳಿದನು ॥೭೬॥

ತಡಬೇಡ ಎನ್ನನು ಕಡಿ ಬೇಗ ಎಂದಳು
ಕಡುಗಲಿ ಕಾಟಣ್ಣನರಸಿ ।
ಬಿಡು ನನ್ನ ಮೇಲಣ ಆಸೆಯನೆಂದಳು
ನುಡಿದಳು ತನ್ನರಸನ ಕೂಡೆ ॥೭೭॥

ಕಡಿಯೊ ಎನ್ನಯ ಜೀವದಾಸಿಲ್ಲ ಕಾಟ
ಹಿಡಿಯಿರಿಯೆನೆ ಖಂಡೆಯವ ।
ಬಿಡದೆ ಖಂಡೆಯವೆತ್ತಿ ಜಳ್ಪಿಸಿ ಕಾಟನು
ನಡುವುರದ ಮೇಲಿನ್ನು ಇರಿದ ॥೭೮॥

ಸುರಿವ ರಕ್ತವ ಕಂಡು ಬಾಯೊಳು ಬಾಯಿಟ್ಟು
ಒರಗಿಸಿದನು ರಾಣಿಯನು ।
ತರಿಗೆಂಡವ ತನ್ನ ಒಡಲೊಳು ಹೊಯ್ದಂತೆ
ತಿರುಗಿದ ರಾಮನಿದ್ದೆಡೆಗೆ ॥೭೯॥

ಹೆಮ್ಮಕ್ಕಳ ಕೊಂದು ತಿರುಗಿ ಕಾಟಣ್ಣನು
ನಿರ್ಮಳವಾಯಿತೆಂದೆನುತ ।

ತಮ್ಮ ರಾಮಯ್ಯನೇನಾದನೆನುತ ಬಂದು
ಉಮ್ಮಳಿಸುತಲಿ ಕಾಟಣ್ಣ ॥೮೦॥

ಊರು ಹೋಯಿತು ಒಳಹೊಕ್ಕರು ತುರುಕರು
ಧೀರ ರಾಮನ ಎಕ್ಕಟಿಗರು ।
ಸೇರಿ ನಿಂದರು ತಮ್ಮೊಡೆಯನ ಸುತ್ತಲಿ
ಹೋರಾಡಿ ಹೊಯ್‌ಹೊಯ್ದೆಳೆದು ॥೮೧॥

ಮುಂದಿದ್ದ ದೇವಿಸೆಟ್ಟಿಯ ಲಿಂಗ ನುಡಿದ ನಾ
ನೆಂದೆಂದು ನಿನಗಿತ್ತೆ ಪ್ರಾಣ ।
ಇಂದಿನ ಕಾಳಗದೊಳು ಎನ್ನ ನೋಡೆಂದು
ಕೊಂದನು ಖಾನ ಮಲುಕರ ॥೮೨॥

ಕಾಯವೆಲ್ಲವು ತಾತತೂತಾಗಲೆಚ್ಚರೆ
ಗಾಯದಿ ಕಡಿಕಡಿದೊಟ್ಟಿ ।
ರಾಯ ಕಂಪಿಲನ ಕುಮಾರನೆ ನೋಡೆಂದು
ಆಯೆಡೆಯಲಿ ಬಿದ್ದ ಲಿಂಗ ॥೮೩॥

ಬಂಟತನಕೆ ಪ್ರಾಣ ಲಿಂಗಣ್ಣ ನೀನಳಿದೆ ಇ
ನ್ನುಂಟೆ ಎನಗೆ ಜೀವದಾಸೆ ।
ಒಚಿಟಲಿ ಸಿಂಹದ ಮರಿಯಂತೆ ಕುಳುತಿರ್ದ
ಕಂಟಾಯಿಸದೆ ರಾಮನಾಥ ॥೮೪॥

ಏಳು ವೀರರಗಂಡ ಕೈಯ್ಯ ಮರೆಯ ಬೇಡ
ಏಳು ಬಲ್ಲಾಳರಗಂಡ ।
ಏಳು ಸುರಿತಾಳನ ಗಂಡ ರಾಮಯ್ಯ
ಏಳೇನ್ನ ಕಷ್ಟ ನೋಡೆಂದ ॥೮೫॥

ಬೊಲ್ಲನ ಏರಿರ್ದ ಬಲ್ಲೇವ ಪಿಡಿದಿರ್ದ
ಹೊಡೆದ ಅಂಬಿನ ಗಾಯದಲಿ ।
ಬಾಣದಿ ಹೊಡೆಯಲು ತಗುಲಿತು ರಾಮೈಗೆ
ನಿಂತಿತು ಬೊಲ್ಲ ಜೂಕರಿಸಿ ॥೮೬॥

ಬಾಣದ ತಾಪ ಬಂದಿತು ರಾಮನಾಥಗೆ
ಮೇಳೈಸಿ ಕಣ್ಣ ಮುಚ್ಚಿದನು ।
ನೇಜದ ಮೊನೆಯನು ನಿಲಹಾಕಿ ರಾಮಯ್ಯ
ಮೂರ್ಛೆಯು ಆಗಿ ನಿಂತಿಹನು ॥೮೭॥

ಏಳು ರಾಯರಗಂಡ ಕಾಟಣ್ಣನೆನಲಾಗಿ
ತಪ್ಪನೆ ಕಣ್ಣ ತೆರೆದನು ।
ಕಣ್ಣನು ತೆರೆಯಲು ಕಂಗೆಟ್ಟು ಓಡಿದರು ಕಾ
ಟಣ್ಣ ನೋಡಿ ಬೆನ್ಹತ್ತಿ ॥೮೮॥

ಮಾದಿಗಿತ್ತಿಯನು ತೋರೆಂದು ಕಾಟಣ್ಣನು
ಮೂದಲಿಸುತ್ತ ಏರಿದನು ।
ಕಾದಿಸಿ ತನ್ನ ತಮ್ಮನ ಎಚ್ಚಳೆನುತಲಿ
ಭೇದಿಸಿ ನೋಡಿದನವಳ ॥೮೯॥

ಹತ್ತುಸಾವಿರ ಸಿಂಗಾಡಿಯ ತುರುಕರು
ಮತ್ತೆಚ್ಚರಂಬಿನಲಿ ಮುಳುಗಿ ।
ಸುತ್ತ ತಿರಿಗಿ ನೋಡಿದ ಕಾಟಣ್ಣನು ಮಾದಿ
ಗಿತ್ತಿಯು ಸಿಕ್ಕಳೆನುತ್ತ ॥೯೦॥

ಕರುಳ ಹರಿದು ಚೆಲ್ಯಾಡಿ ಅವಳ ಸೀಳಿ
ಸುರಿಸುವೆ ರಕುತವನೆಂದ ।
ದೊರೆ ರಾಮ ನನ್ನ ತಮ್ಮನ ಎಚ್ಚೆನುತಲಿ
ಉರಿವ ಗಾಯದಲಿ ಬೊಬ್ಬಿರಿದ ॥೯೧॥

[ಅದ್ದು]ರಿಸುತ ಖಾನಖಾನರ ತರಿದನು
ಹದ್ದು ಹಕ್ಕಿಯ[ಪೊ]ಯ್ವಂತೆ ।
ಮುದ್ದು ಎನ್ನಯ ಒಡಹುಟ್ಟಿದವ ನೋಡೆಂದು
ಬಿದ್ದನು ರಣದೊಳು ಕಾಟ ॥೯೨॥

ಮಡಿದೆಯೊ ಎನ್ನ ಒಡಹುಟ್ಟಿದಣ್ಣಾ ಎಂದು
ಕಡಿದೆಯೊ ಖಾನಖಾನರನು ।

ಬಿಡದೆ ನಿನ್ನೊಡನೀಗ ಪಯಣವು ನನಗೆಂದು
ನುಡಿದನು ಚೆನ್ನಿಗರಾಮ ॥೯೩॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಚದುರ ತಾ ಕಾ[ದೆ] ಮಾತಂಗಿ ರಾಮಯ್ಯನ
ಚದುರಿಟ್ಟ ಗಾಯ ಸಂಪೂರ್ಣ ॥೯೪॥

ಅಂತು ಸಂಧಿ ೨೫ಕ್ಕಂ ಪದನು ೨೬೬೩ಕ್ಕಂ ಮಂಗಳ ಮಹಾಶ್ರೀ

❖❖

ಸಂಧಿ : ೨೬

❖

ಕೊಮಾರ ರಾಮಯ್ಯನ ಮರಣ – ಕೈಲಾಸ ಗಮನ

ಶ್ರೀ ಗಿರಿಜಾ[ಸ್ಯಾಂಬುಜ ದಿನ]ನಾಯಕ
ಭೋಗಿಭೂಷಣ ಭಾಳನೇತ್ರ ।
ಭಾಗೀರಥಿಧರ ಭವರೋಗವೈದ್ಯನೆ
ನಾಗ [ಕುಂಡಲ] ಶರಣೆಂಬೆ ॥೧॥

ತಿರಿಗಿ ಬಂದಳು ಮಾತಂಗಿ ರಾಮನ ಮೇಲೆ
ಧುರಗಲಿತನದಿಂದಲೆಚ್ಚು ।
ಪರಿದು ಮುತ್ತಿತು ತುರುಕರ ದಂಡು ಸುತ್ತಲಿ
ನೆರಹುಗೊಡದೆ ರಾಮಯನ ॥೨॥

ನೆಟ್ಟವು ಸರಳು ರಾಮಯ್ಯನ ಮೈತುಂಬ
ಬೊಟ್ಟ ತೂರುವರೆ ಇಂಬಿಲ್ಲ ।
ದಿಟ್ಟ ಕುಮಾರರಾಮಯ್ಯ ಬೊಬ್ಬಿಟ್ಟರೆ
ಬೆಟ್ಟವೆಲ್ಲವು ಆರ್ಭಟಿಸೆ ॥೩॥

ತುಟ್ಟಯಿಸಿತು ಕೂರಂಬಿನ ಗಾಯವು
ಕೆಟ್ಟಿತು ಹೊಸಮಲೆದುರ್ಗ ।
ದಿಟ್ಟ ಕಂಪಿಲನ ದೆಸೆಯು ಹಾರಿಹೋಯಿತು
ಬಿಟ್ಟನು ರಾಮ ಪ್ರಾಣವನು ॥೪॥

ಉಳಿದಂಥ ಮಂದಿ ರಾಹುತರೆಲ್ಲ
ಒಳಿತಾಗಿ ಕಡಿದಾಡಿ ಬಿದ್ದರು ।

ಕಳಕಳಿಸುವ ರಾಮಯ್ಯನ ಸಂಗಡ
ಅಳಿದರು ಎಲ್ಲ ಮನ್ನೆಯರು ॥೫॥
ಧುರಧೀರ ರಾಮನ ಮನವ ಬೋಡುವೆನೆಂದು
ಪರಮೇಶ್ವರ ಪ್ರಾಣವಿತ್ತ ॥೬॥

ಕೂಗುತ ಬಂದ ರಾಮಯ್ಯನ ಮೇಲೊಂದು
ಕಾಗೆ ಕುಳಿತರೆ ಸತ್ತನೆಂದು ।
ಸಾಗಿಬಂದಿತು ಮಾತಂಗಿಯ ಬಲವೆಲ್ಲ
ಬೇಗ ರಾಮನ ಸುತ್ತ ಬಳಸಿ ॥೭॥

ಕೇಳಿ ಮನ್ನೆಯರೆಲ್ಲ ಕೊಂದೇನೆನುತ ಬಂದು
ಒತ್ತಿ [ನಿಂ]ದರು ಬೊಲ್ಲನೆಡೆಗೆ ।
ಬಂದು [ಮಾತಂಗಿ]ಯು ರಾಮನ ಎಳೆದಳು
ಒಲಿದು ಬಿದ್ದನು ರಣದೊಳಗೆ ॥೮॥

ತೆರೆದು ಕಣ್ಣನು ನೋಡಲು ರಾಮ ತುರುಕರು
ಮುತ್ತಿ ಕೊಲ್ಲು[ವ]ನೆಂದು ನಮಿಸೆ ।
ತ[ರಿ]ವೆನೆನುತ ಮುಂದಕೆ ತಾ ತೆರಳಿದರೆ
ಸುರಲೋಕದ ನಾರಿಯರು ॥೯॥

ಕರದೊ[ಯ್ವೆಕ] ತಮ್ಮ ನೆರೆವುದೆಂದೆನು[ತಿರೆ]
ಚರಣವ ಹಿಮ್ಮೆಟ್ಟಿದನು ।
ಪರನಾರಿಯ ಸಹೋದರನೆಂಬ ಸತ್ಯವು
ಬಿರಿದು ದಿಕ್ಕಿದರೆ ಸಾಕೆನುತ ॥೧೦॥

ಧುರದೊಳು ಹೊ[ದ್ದಿದ]ನೆಂಬ ಅಪಕೀರ್ತಿಯು
ಬರುವದೆಂದು ಹಿಮ್ಮೆಟ್ಟಿದನು ।
ಧುರಹೇಡಿಯಾದನೆಂದೆನುತಲಿ ಜರಿವುತ
ಸುರಲೋಕದ ನಾರಿಯರು ॥೧೧॥

ತಿರಿಗಿದರತ್ತಲಿ ಕಲಿ ರಾಮನಾಥನು
ಮರಣವಾದನು ನಿಮುಷದಲಿ ॥೧೨॥

ಬಿಟ್ಟು ಕಣ್ಣವ ಕಾಣುತ ಬರುತಾನೆಂದು
ಕಟ್ಟೋಡಿ ತುರುಕರ ದಂಡು ।
ಮುಟ್ಟಲಮ್ಮದೆ ಮಾತಂಗಿಯ ಪರಿವಾರ
ಕಟ್ಟಕಡೆಯಲಿ ನಿಂದಿಹರು ॥೧೩॥

ಮತ್ತೆ ಮೇಲಾಗಿ ಕಾಗೆ ಬಂದು ಕುಳ್ಳಿರಲು
ಸತ್ತನು ಎನುತ ನಿಶ್ಚೈಸಿ ।
ಮುತ್ತಿ ಸಹಬಲವು ರಾಮಯ್ಯನ
ಒತ್ತಿ ತಿವಿದು ನೂಕಿದರು ॥೧೪॥

ಹತ್ತಿರೆ ಬಂದು ಮಾತಂಗಿ ಖಾನರ ಕೂಡಿ
ಸತ್ತನೆನುತ ತಲೆಗೊಯ್ದು ।
ಬೊಲ್ಲನ ಪಿಡಿಯಬೇಕೆನುತಲಿ ತುರುಕರು
ಮೆಲ್ಲನೆ ಸರಪಳಿ ತಂದು ॥೧೫॥

ಸರಪಳಿ ಬೊಲ್ಲಗೆ ಹಾಕಿ ಹಿಮ್ಮಡಿ ತಪ್ಪಿಸಿ
ಝಾಗಿಸಿ ಎಳೆದು ಬೊಲ್ಲನನ ।
ಎಳೆಯಲಾಕಾಶಕ್ಕೆ ಪಕ್ಷಿಯಂದದಿ ಹಾರಿ ಮ
ರಳಿ ಬಿದ್ದಿತು ಧರಣಿ ಮೇಲೆ ॥೧೬॥

ರಾಮನ ತಲೆಯನು ಕೊಯ್ದರು ತುರುಕರು
ನೇಮದಿ ಡಿಳ್ಳಿ ಮುಟ್ಟಿಪೆವು ।
ಮುತ್ತು ಮಾಣಿಕ ಚಿನ್ನವ ಬಾಯೊಳು ತುಂಬಿ
ಸುತ್ತಿ ದೇವಾಂಗವ ತಲೆಗೆ ॥೧೭॥

ಸಾಯಬಹುದೆ ಚೆನ್ನಿಗರಾಮ ಮಲೆವಂತ
ರಾಯ ವಜೀರರಗಂಡ ।
ಕಾಯಜರೂಪ ಎನುತ ಖಾನ ಮಲುಕರು
ಹಾಯೆಂದು ಬೊಟ್ಟ ಕಚ್ಚಿದರು ॥೧೮॥

ಗಂಧ ಕಸ್ತೂರಿ ಕುಂಕುಮ ಕಾದಂಬವ
ತಂದರು ಖಾನಮಲುಕರು ।

ಮು............ರಳುವ ಜಾಜಿ ಮಲ್ಲಿಗೆ ಸಂಪಗೆ
ತುಂಬಿ ನಿಂದು ರಾಮನ ಶೃಂಗರಿಸಿ ॥೧೯॥

ಮ[ನವೇಗ] ತೇಜಿಯ ತರಿಸಿ ಅದರ ಮೇಲೆ
ಘನ ವೀರರಾಮನ ತಲೆಯ ।
ದಿಕರನುದಯವಾಗದ ಮುನ್ನ ನೀವು ಹೋಗಿ
ಎನುತ ಸುರಿತಾಳನ ಬಳಿಗೆ ॥೨೦॥

ಒಂದೆರಡು ದಿವಸದ ಮಧ್ಯಾಹ್ನದೊಳು ತಲೆ
ಬಂದಿತು ಡಿಳ್ಳಿ ಪಟ್ಟಣಕೆ ।
ಮುಂದೆ ಬಂದ್ಹೇಳಿದರು ಸುರಿತಾಳರಾಯಗೆ
ನೊಂದು ವೀಳ್ಯವನುಗುಳಿದನು ॥೨೧॥

ತರಹೇಳು ತಲೆಯನೆನುತ ಸುರಿತಾಳನು
ವರಸುತೆ ಸಹ ತಾವು ಬಂದು ।
ಹಿರಿದು ದುಃಖವನು ಮಾಡಿದರು ತಲೆಯ ನೋಡಿ
ದೊರೆದೊರೆಗಳು ಮರುಗಿದರು ॥೨೨॥

ಇದ್ಹ್ಯಾಂಗೆ ತರಹೇಳಿದೆ ನಾನು ರಾಮನ
ನಿರ್ದೈಸಿ ಕೊಲ್ಲ ಹೇಳಿದೆನೆ ? ।
ಮುದ್ದುಮುಖದ ಚೆನ್ನಿಗರಾಮ ಹಾಯೆಂದು
ಬಿದ್ದನು ಸುರಿತಾಳ ಹೊರಳಿ ॥೨೩॥

ಸುರಿತಾಳನ ಮಗಳು ಈ ತಲೆಯನು ಕಂಡು
ಸ್ಥಿರಕಾಲವು ಬಯಸಿರ್ದೆ ।
ಪುರುಷ ನೀನಳಿಯಬಹುದೆ ಈಗ ನೀನೆಂದು
ಹರುಷದಿ ಮುಖವ ನೋಡಿದಳು ॥೨೪॥

ನಿನ್ನನು ಪ್ರಾಣಸಹಿತ ತಂದರೆನುತಲಿ
ಚೆನ್ನಾಗಿ ನಂಬಿರ್ದೆ ಬೇಗ ।
ಇನ್ನು ನೀನಳಿಯಬಹುದೆ ಎಂದೆನುತಲಿ
ಉನ್ನತ ಶೋಕ ಮಾಡಿದಳು ॥೨೫॥

ನೋಡಿದ ಸುರಿತಾಳನು ತನ್ನ ತನುಜೆಯ
ಬೇಡಿಕೊಂಡತಿ ಬುದ್ಧಿ ಪೇಳಿ ।
ಬೇ[ಡವ್ವ] ರೂಢಿಗೆ ಅಪಕೀರ್ತಿಯು ಎಂ
ದಾಡಿದ ಇದ ಬಿಡು ಮಗಳೆ ॥೨೬॥

ಕಡಗುಲಿ ರಾಮನ ಬಿಡಲಾರೆನೆನುತವನ
ಜಡೆಯ ಮುತ್ತಿನ ಗೊಂಡೆಯವ ।
ಮುಡಿಸಿ ತನ್ನಯ ತುರುಬಿನ ಮೇಲೆ ಕಟ್ಟಿದಳು
ಕಡು ಶೋಕವ ಮಾಡಿದಳು ॥೨೭॥

ದೇಶದೊಳಗೆಲ್ಲ ವಸ್ತುವನೆಲ್ಲ ತರಿಸಿದಳು
ರಾಸಿಗಳನು ಮಾಡಿಸಿದಳು ।
ಭೂಸುರರಿಗೆ ದಾನವನಿತ್ತು ದಣಿಸಿದಳು
ಮೀಸರಗಂಡನೆಂದೆನುತ ॥೨೮॥

ಕಡುಗಲಿ ರಾಮನ ತಲೆಯ ತೆಗೆದುಕೊಂಡು
ತೊಡೆಯ ಮೇಲಿಟ್ಟು ನೋಡಿದಳು ।
ಪಡೆದೆಯೊ ನಿನ್ನ ಚೆಲ್ವಿಕೆಯ ಬ್ರಹ್ಮನ ಕೈಲಿ
ನುಡಿದು ಶೋಕವನು ಮಾಡಿದಳು ॥೨೯॥

ಕಳೆಯಲಿ ಬಿದಿಗೆ ಚಂದ್ರ ದಿವ್ಯರೂಪಿಲಿ
ಇಳೆಯೊಳು ನೀನು ಮನ್ಮಥನೊ ।
ತಳುಹದೆ ನಾ ನಿನ್ನ ಬಯಸಿದಲ್ಲದೆ ನೋಡಿ
ಕಳುಹಿದ ಸುರಿತಾಳ ದಂಡ ॥೩೦॥

ನೀನೆ ನನಗೆ ಗಂಡನಾಗಬೇಕೆನುತಲಿ
ನಾ ನಿನ್ನ ಬಯಸಿದೆ ನೋಡಿ ।
ಖಾನರ ಕಳುಹಿಸಿ ಕೈಸೆರೆ ತಾರೆಂದ
ಹಾನಿ ಮಾಡಿದರು ಪಾಪಿಗಳು ॥೩೧॥

ಪೊಡವಿಪ ತಂದೆ[ಗೆ] ಕಿಚ್ಚ ಬೇಡಿದಳಾಗ
ಕಡುಗಲಿ ರಾಮನ ತಲೆಯ ।

ಉಡಿಯಲಿ ತಾ ಕಟ್ಟಿಕೊಂಡು ಬೀಳುವೆನೆನಲು
ನುಡಿದ[ನು] ಸುರಿತಾಳನೊಡನೆ ॥೩೨॥

ಅಪಕೀರ್ತಿಯ ಮಾಡಿಕೊಂಬರೆ ಕಂದಯ್ಯ
ವಿಪರೀತ ನಿನ್ನಯ ಮಾತು ।
ತಪವಿರುವಾ ಸತ್ತ ತಲೆಯನು ಪಿಡಿಕೊಂಡು
ಅಪಹರಿಸಂ[ದೂ]ರ[ಲಿ]ದನು ॥೩೩॥

ತಂದೆಯ ಮಾತ ಮೀರದೆ ನೋಡಿ ತಲೆಯನು
ಕಂದರ್ಪನ ಸಮರೂಪ ।
ಎಂದಿಗೆ ನಿನ್ನಂಥ ಚೆಲುವ ಪುಟ್ಟುವನೆಂದು
ಕುಂದದೆ ಬಿಗಿದಪ್ಪಿದಳು ॥೩೪॥

ಪ್ರಾಣವಿಲ್ಲದೆ ಇಷ್ಟು ಕಳೆಯಲ್ಲಿ ನೀನಿರ್ದೆ
ಜಾಣತನದ ದೇಹವನು ।
ಕಾಣಿಸಿ ನೆರೆವ ಸ್ವರ್ಗಲೋಕವ ಸುಟ್ಟು
ಊನ್ಯ[ವ]ಲ್ಲ[ವೆ] ಮುದ್ದುರಾಮ ॥೩೫॥

ಒಂದು ಗಳಿಗೆ ನಿನ್ನ ಭೋಗದೊಳಿದ್ದರೆ
ಹಿಂದೇಳು ಮುಂದೇಳು ಜಲ್ಮ ।
ಕುಂದದೆ ಪಾವನವಾಗದೆ ಪೋ[ಗ]ದೆ
ಕಂದರ್ಪನ ಸಮರೂಪ ॥೩೬॥

ದುಂಡುಮಲ್ಲಿಗೆ ಸಂಪಗೆ ಕೇತಕಿಯನು
ಮಂಡೆ ತುಂಬಲಿ ಮುಡಿಸಿದಳು ।
ಗಂಡರಗಂಡ ಚೆಲ್ವರಗಂಡನೆನುತಲಿ
ಮುಂಡಾಡಿ ಮುಖವ ನೋಡಿದಳು ॥೩೭॥

ಕಾಳಗದಲಿ ಕಲಿಪಾರ್ಥನೊ ಭೀಮನೊ
ಆಳುತನಕೆ ಮನ್ಮಥನೊ ।
ಸೂಳಿಟ್ಟು ಮುಂಡಾಡಿ ಮುಖದೊಳು ಮುದ್ದಿಸಿ
ಊಲಿಗದರ ಕೈಗೆ ಕೊಡಲು ॥೩೮॥

ತಂದು ಕಟ್ಟಿದರು ಸುರಹೊನ್ನೆಯ ಮರದಲ್ಲಿ
ಬಂದು ಕುಳಿತ ಸುರಿತಾಳ ।
ಬಂದರು ಪುರದ ಜನರು ರಾಮಯ್ಯನ
ಅಂದವ ನೋಡಿ ಮರುಗಿದರು ॥೩೯॥

ಒಂದು ದಿವಸ ಅಲ್ಲಿ ಇರಲಾಗ ಆ ತಲೆ
ಮುಂದುಗೆ[ಟ್ಟಿತು] ಪಟ್ಟಣವು ।
ಸಂದಿತು ಮಧ್ಯರಾತ್ರಿಯ ನಡುವಿರುಳಲಿ
ಬಂದವು ಅಭ್ರೂತಗಳು ॥೪೦॥

ಡಿಳ್ಳಿಲ್ಲ ನಡುಗಿತು ರಾಮನ ಬೊಬ್ಬೆಗೆ
ನಿಲ್ಲಲಾರದೆ ಕಂಗೆಡುತ ।
ಇಲ್ಲಿ ಇದ್ದರೆ ಪಟ್ಟಣ ಕೆಡುವುದು ಎಂದು
ಎಲ್ಲ ಶಾಸ್ತ್ರಿಕರು ಪೇಳಿದರು ॥೪೧॥

[ಹಿಂ]ದುವ ರಾಯನ ತಲೆ ನಮ್ಮ ಪಟ್ಟಣದ
ಮಂದಿಯನೆಲ್ಲ ಕೊಲುತಿಹುದು ।
ಬಂದರು ಖಾನ ವಜೀರರು ತಲೆಯನು
ತಂದು ಹಾಕಿದರಗುಳೊಳಗೆ ॥೪೨॥

ಕೂ[ಗುವ] ರಾಮನ ಧ್ವನಿಗೇಳಿ ಕಂಗೆಟ್ಟು
ಆಗ ಮಡಿವುದು ಪಟ್ಟಣದಿ ।
ನೀಗಿದೆವೆನುತಲಿರ್ದೆವು ನಮ್ಮ ಡಿಳ್ಳಿಗೆ
ಬೇಗೆಯನಿಕ್ಕ ಬಂದನೆನುತ ॥೪೩॥

ದಿನವೊಂದಕೆ ಲಕ್ಷವು ಲಕ್ಷ ಮಡಿವುದು
ಘನ ರಾಮನ ಧ್ವನಿಗೇಳಿ ।
ಮನದೊಳು ಅನುಮಾನವ ಮಾಡಿ ಸುರಿತಾಳ
ತನುಗುಂದಿ ಚಿಂತಿಸುತಿರ್ದ ॥೪೪॥

ಕಳುಹಿದ ಸುರಿತಾಳರಾಯನು ಭಟ್ಟನ
ತಳುಹದೆ ಕಂಪಿಲನೆಡೆಗೆ ।

ಬೆಳಗಾಗೊ ಹೊತ್ತಿಗೆ ತಮ್ಮ ರಾಮನ ತಲೆಯ
ಗಳಿಲನೊಯ್ವಂತೆ ಮಾಡೆಂದ ॥೪೫॥

ಬಂದನು ಸುರಿತಾಳರಾಯನ ಭಟ್ಟನು
ಒಂದಾರುದಿವಸ ಬೇಗದಲಿ ।
ನಿಂದಾಗ ಕಂಪಿಲರಾಯಗೆ ಪೇಳಿದ
ತಂದುಕೋ ಮಗನ ತಲೆಯನು ॥೪೬॥

ನೀವೆ ತಂದರೆ ಆಗುವುದೆಂದು ಭಟ್ಟನ
ದೇವ ಕಂಪಿಲ ಬೆಸಗೊಂಡ ।
ಕೋವಿದ ಲಕ್ಷವ ಖೋಯೆಂದು ಕೊಲುವನು
ನಾವು ಮುಟ್ಟುವರಳವಲ್ಲ ॥೪೭॥

ನಿಮ್ಮಲ್ಲಿ ಇರುವಂಥ ಭಟ್ಟನ ಕಳುಹೆಂದು
ನಿಮ್ಮ ರಾಮಯ್ಯನ ಬಿರಿದ ।
ಸುಮ್ಮಾನದಿಂದ ಕೊಂಡಾಡಲು ಬರುವುದು
ನಮ್ಮಲ್ಲಿ ಮುಟ್ಟುವರಿಲ್ಲ ॥೪೮॥

ಭಟ್ಟರ ರೂಪಿದೇವಯ್ಯನ ಕರೆಸಿದ
ಹಚ್ಚಡ ದಟ್ಟಿ ಕಬಾಯಿ ।
ಕೊಟ್ಟು ಕಂಪಿಲರಾಯ ಕಳಹಲು ಡಿಳ್ಳಿಗೆ
ಬಿಟ್ಟಲ್ಲಿ ಬಿಡದೆ ಬಂದಿಳಿದ ॥೪೯॥

ಈ ಪರಿಯಲ್ಲಿ ಸುದ್ದಿಯ ವಾಲಗದೊಳು
ಭೂಪಾಲ ಸುರಿತಾಳನೊಡನೆ ।
ರೂಪಿದೇವಯ್ಯ ಬಂದನೆಂದು ಪೇಳಿದ
ಭೂಪತಿಗವರು ಬಿನ್ನೈಸೆ ॥೫೦॥

ಕರೆಸಿದ ಭಟ್ಟರ ರೂಪಿದೇವಯ್ಯನ
ಸುರಿತಾಳರಾಯ ಬೇಗದಲಿ ।
ಹರುಷದಿ ಪಲ್ಲಕ್ಕಿ ಇಳಿದು ತಾ ಬಂದನು
ಬಿರಿದೆತ್ತಿ ಕೊಂಡಾಡಿದನು ॥೫೧॥

ಮಲೆವ ಮಾನ್ಯರ ಗಂಡ ಬಲುಗಜ ಕಂಠೀರವ
ಬಲವಂತರಿಗೆ ಅಂಕುಶವೆ ।
ಕುಲದೀಪ ಸುರಿತಾಳ ಡಿಳ್ಳಿಯಾಳುವನೆಂದು
ನಲಿದು ಕೊಂಡಾಡಿದ ಭಟ್ಟ ॥೫೨॥

ಕೊಂಡಾಡಿದ ಭಟ್ಟನ ನೋಡಿ ಸುರಿತಾಳ
ದಿಂಡುದಿಂಡಿನ ಉಡುಗೊರೆಯ ।
ದಂಡಿಗೆ ಸತ್ತಿಗೆ ದಣಿವಷ್ಟು ವಸ್ತುವ
ಮಂಡಲೇಶ್ವರನು ಕರೆದಿತ್ತ ॥೫೩॥

ಇತ್ತನು ಸುರಿತಾಳರಾಯನಾ ಭಟ್ಟಗೆ
ಮುತ್ತಿನ ದಂಡೆ ಪದಕವ ।
ಚಿತ್ತಜ ಸಮರೂಪ ರಾಮನ ತಲೆಯನು
ಎತ್ತಿಕೊಂಡಿನ್ನು ಪೋಗೆನಲು ॥೫೪॥

ನಾಳಿನ ಉದಯಕ್ಕೆ ರಾಮನ ತಲೆಯ ಹೇ
ಳದೆ ನಾನು ಕೊಂಡೊಯ್ವೆನೆನಲು ।
ಕೇಳಿ ಸಂತೋಷದಿ ಸುರಿತಾಳ ಭಟ್ಟಗೆ
ವೀಳ್ಯವ ಕೊಟ್ಟು ಮನ್ನಿಸಿದ ॥೫೫॥

ಬೀಡಾರಕೆ ಬಂದು ರೂಪಿದೇವಯ ಊಟ
ಮಾಡಿ ಮಲಗೆ ಸ್ವಪ್ನದಲ್ಲಿ ।
ರೂಢಿರಾಯರಗಂಡನೆಂಬ ರಾಮಯ್ಯನು
ಆಡಿದನವಗೆ ಮೂದಲಿಸಿ ॥೫೬॥

ಡಿಳ್ಳಿಯನಾಳುವ ಸುರಿತಾಳನ ಗಂಡ
ಬಲ್ಲಿದ ರಾಯರಗಂಡ ।
ಎಲ್ಲ ತುರುಕರ ಗಂಡನೆಂದೆಂಬ ಬಿರಿದನು
ಇಲ್ಲಿ ಹೊಗಳು ನಾನು ಬಹೆನು ॥೫೭॥

ಸುರಿತಾಳನ ನಾನಿರುವಂಥ ಠಾವಿಗೆ
ಕರೆತಂದು ಅವನ ಮುಂದೆನ್ನ ।

ಭಟ್ಟಾ ಕೇಳೆಲೋ ನೀನು ನಿನಗೆ ನಾ ಸಿಕ್ಕುವೆ[ನು]
ಉನ್ನತ ಬಿರಿದ ಕೊಂಡಾಡು ॥೫೮॥

ಸುರಿತಾಳನ ಮಗಳು ಮಿಂದು ಮಡಿಯನುಟ್ಟು
ಒಂದೊತ್ತು ಉಪವಾಸದಿಂದ ।
ಎರಡು ಕೈಯ್ಯಲ್ಲಿ ಆರತಿಯನೆ ಪಿಡಿಕೊಂಡು
ನಿಂದು ಹಜಾರದ ಮುಂದೆ ॥೫೯॥

ಬಲದಲ್ಲಿ ಸುರಿತಾಳ [ಎ]ಡದಲ್ಲಿ ಆಕೆಯು
ಚೆನ್ನಾಗಿ ನಿಂತು ಹೊಗಳಿದರೆ ।
ಪರಿಪರಿ ಬಿರಿದು ಕೊಂಡಾಡಲು ನಿನ್ನೊಳು
ಬರುವೆನೆನುತ ರಾಮ ನುಡಿದ ॥೬೦॥

ಛಪ್ಪನ್ನ ದೇಶದ ರಾಯರಗಂಡನೆಂದು
ತಪ್ಪದೆ ನನ್ನಯ ಬಿರಿದ ।
ಒಪ್ಪದಿ ಕೊಂಡಾಡೆ ಬರುವೆನಲ್ಲದೆ ನಾನು
ಅಪ್ಪಳಿಸುವೆನು ಡಿಳ್ಳಿಯನು ॥೬೧॥

ಕಣ್ಣುದೆರೆದು ನೋಡಿದ ರೂಪಿದೇವಯ್ಯ
ಇನ್ನಿದು ಚೋದ್ಯವೆಂದೆನುತ ।
ಚೆನ್ನಿಗರಾಮಯ್ಯ ತನ್ನ ಬಿರಿದನೆಲ್ಲ
ಇನ್ನ ಕೊಂಡಾಡ ಹೇಳಿದನು ॥೬೨॥

ದೈವವೆ ಬಲ್ಲವೆನುತ ರೂಪಿದೇವಯ್ಯ
ಸುಯ್ಯುತ ಸುರಿತಾಳನೊಡನೆ ॥೬೩॥

ಗಂಡರಗಂಡ ಖಾನರಗಂಡ ಡಿಳ್ಳಿಯ
ಮಾಂಡಲಿಕರ ಗಂಡನೆಂದು ।
ಹಿಂದು ಮಾನ್ಯರಗಂಡನೆಂಬಂಥ ಬಿರಿದನು
ಕೊಂಡಾಡೆ ನಾ ಬರುವೆನೆಂದ ॥೬೪॥

ಹೀಗೆಂದು ಕೊಂಡಾಡೆ ಬರುವೆನೆಂದನು ರಾಮ
ಬೇಗ ಕೊಂಡಾಡದುಳಿದರೆ ।

ನೀಗುವೆ ಸುರಿತಾಳನ ಡಿಳ್ಳಿಯನೆಂದು
ಈಗ ಹೇಳಿದನು ಸ್ವಪ್ನವನು ॥೬೫॥

ಸಾವುದೊಳ್ಳಿತೆ ಬರುವೆನು ರಾಮನಾಥನ
ಆವ ಪರಿಯಲಿ ನೀನು ಪೊಗಳೊ ।
ನಾವು ಮಾಡಿದ ಫಲವೆನುತಲಿ ಸುರಿತಾಳ
ನೋವುತ ಬಂದನಾಯೆಡೆಗೆ ॥೬೬॥

ನಡೆದು ಬಂದನು ವೀರ ರಾಮನ ಬಳಿಗಾ
ಮುಡಿಯಿರುವಲ್ಲಿಗೆ ಬೇಗ ।
ಎಡೆಯಲ್ಲಿ ನಿಂದು ಸುರಿತಾಳನು ಭಟ್ಟನ
ನುಡಿದನು ಕೊಂಡಾಡು ಎನುತ ॥೬೭॥

ಎಂದು ರಾಮಯ್ಯನ ಬಿರಿದನೆಲ್ಲವ ತನ್ನ
ಮುಂದೆ ಕೊಂಡಾಡಲು ತಲೆಯು ।
ಬಂದೀತೆ ನಿನ್ನ ಬಳಿಗೆ ಎಂದು ಸುರಿತಾಳ
ಕುಂದದೆ ನುಡಿದ ಭಟ್ಟನಿಗೆ ॥೬೮॥

ಗಂಡುಗಲಿಯು ರಾಮಯ್ಯನ ಬಿರಿದನು
ಕೊಂಡಾಡಲು ಬಾರದಿರಲು ।
ತುಂಡುತುಂಡಾಗಿ ಕಡಿಸು ಎನ್ನನು ಎಂದು
ಕೊಂಡಾಡಿದ ವೀರಭಟ್ಟ ॥೬೯॥

ಧರೆಯನಾಳುವ ಸುರಿತಾಳರಾಯನ ಗಂಡ
ಉಳಿದ ರಾಯರ ಗಂಡ ರಾಮ ।
ತುರುಕರ ಗಂಡ ಚೆಲ್ವರ ಗಂಡನೆಂದು
ದೊರೆ ರಾಮನ ಕೊಂಡಾಡಿದನು ॥೭೦॥

ಕಾಟಣ್ಣ ಕಂಪಿಲನಲ್ಲದೆ ಉಳಿದೊಂದು
ಕೋಟ್ಯಾನುಕೋಟಿ ವೈರಿಗಳ ।
ಕಾಟಕ ನಾಲ್ಕು ದಿಕ್ಕಿನ ರಾಯರಗಂಡ
ಸಾಲ್ಲ ರಾಮಯ್ಯ ನಿನಗೆ ॥೭೧॥

ಭುಗಿಭುಗಿಲೆನುತಲಿ ಎದ್ದಿತು ಆ ತಲೆ
ಬಂದಿತು ಗುಡಿಗುಡಿಸುತಲಿ ।
ಬಂದು ಆ ತಲೆಯೊ[ಡನೆ] ಕುಳ್ಳಿರಲು
ಆ ತಲೆ ಪಕಪಕನೆ ನೋಡಿ ನಗುತಲಿ ॥೭೨॥

ಇದ್ದಂಥ ಖಾನಮಲುಕ ಸುರಿತಾಳರು
ನಿರ್ಧಾರದಲಿ ಬೆರಗಾಗಿ ॥೭೩॥

ಕಸ್ತೂರಿ ನಾಮವ ತಿದ್ದುತ ಸುರಿತಾಳ
ಮುತ್ತಿನ ಚೌಕುಳಿ ಇಟ್ಟ ।
ಮತ್ತೆ ಹೆಣಿಸಿ ವೀರಜಡೆಯ ಶೃಂಗಾರಕ್ಕೆ
ಸುತ್ತಿದ ಜಾಜಿ ಮಲ್ಲಿಗೆಯ ॥೭೪॥

ಗಂಧವಿಡಿಯ ಕುಂಕುಮ ಕದಂಬವ
ತಂದು ರಾಮಯ್ಯನ ತಲೆಗೆ ।
ಚೆಂದದಿ ಶೃಂಗಾರಮಾಡಿ ಭಟ್ಟನ ಕೈಗೆ
ತಂದು ಇಟ್ಟನು ಸುರಿತಾಳ ॥೭೫॥

ಇನ್ನಾದರು ಹೋಗೆನುತಲಿ ಸುರಿತಾಳ
ತನ್ನ ಕರಂಗಳ ಮುಗಿದು ।
ಚೆನ್ನಿಗ ರಾಮನ ಕಳುಹಿ ತನ್ನರಮನೆಗೆ
ಉನ್ನತ ಹರುಷದಿ ಬಂದ ॥೭೬॥

ಡಿಳ್ಳಿಯ ಕಳೆದು ರೂಪಿದೇವಯ್ಯನು
ನಿಲ್ಲದೆ ನಾಲ್ಕಾರು ದಿನಕೆ ।
ಬಲ್ಲಿದ ರಾಮನ ತಲೆಯನಿಳುಹಿ ಇತ್ತ
ನಲ್ಲಿ ವಿಶಾಲ್ಯ[ಕ್ಕೆ] ಪೋದ ॥೭೭॥

ತಿರುಗಿ ತಾ ಬಂದು ನೋಡಲು ರಾಮನ ತಲೆ
ಇರಿಸಿಹೋದಲ್ಲಿ ಇರಲಿಲ್ಲ ।
ಕರೆದನು ಚೆಲ್ವರಗಂಡ ರಾಮಯ್ಯನ
ಮರದ ಮೇಲಿದ್ದು ಓಯೆನಲು ॥೭೮॥

ಅಡಗದೆ [ನಿನ್ನ] ಪರಾಕ್ರಮ ಕೀರ್ತಿಯು
ಉಡುಗಿ ಹಾಳಾಗದೆ ಎನುತ ।
ಕಡುಗೋಪದಿ ರೂಪಿದೇವಯ್ಯ ಮರ ಹತ್ತಿ
ಪಿಡಿಯಲು ಪ್ರಾಣವಳಿಯಿತು ॥೭೯॥

ಭಟ್ಟನ ಶಾಪದಿ ರಾಮಯ್ಯನ ಪ್ರಾಣ
ಬಿಟ್ಟುಹೋಯಿತು ಆ ತಲೆಯ ।
ಇಟ್ಟ ಕಸ್ತೂರಿ ಕಾದಂಬ ಸಹಿತ ಬಂದು
ಕೊಟ್ಟನು ಕಂಪಿಲರಸಗೆ ॥೮೦॥

ಉಡುಗೊರೆ ವೀಳ್ಯವ ದಟ್ಟಿ ಕಬಾಯವ
ಕಡೆಯದ ಪದಕ ಚೌಕಳಿಯ ।
ಕಡುಗಲಿ ಕಂಪಿಲರಾಯ ಭಟ್ಟಗೆ ಕೊಟ್ಟು
ತಡೆಯದೆ ಕಳುಹಿದನವನ ॥೮೧॥

ತಲೆಯ ಕಾಣುತಲಿ ದುಃಖದೊಳದ್ದು ಕಂಪಿಲ
ಹೊಲಬುದಪ್ಪಿದ ಹುಲ್ಲೆಯಂತೆ ।
ಬಲುಹು ಹಾಳಾಯಿತೊ ಕಂದಯ್ಯ ಎನುತಲಿ
ಚೆಲುವರ ಗಂಡನೆಂದೆನುತ ॥೮೨॥

ಅಂದು ರತ್ನಿಯ ಮಾತ ಕೇಳುತ ನಿನ್ನನು
ಕೊಂದೆನೊ ಏ ಎನ್ನ ಕಂದ ।
ಬಂದಪಕೀರ್ತಿಯ ಕಳೆದ ಬೈಚಪ್ಪನು
ಮುಂದೆ ನನಗಿನ್ನು ಗತಿಯಾರೊ ॥೮೩॥

ಮೂಜಗದೊಳು ನಿನ್ನ ದೆಸೆಯಿಂದ ಕಂದಯ್ಯ
ರಾಜ್ಯವನಾಳಿದೆ ಇನ್ನು ।
ಪೂಜ್ಯ ಹೋಯಿತು ದೆಸೆಗೇಡಿಯಾದೆನೊ ನಿನ್ನ
ನೇಜದ ಮೊನೆಗೆಣೆಯುಂಟೆ ॥೮೪॥

ಆವ ಮಗನ ನೋಡಿ ರಾಜ್ಯವನಾಳಲಿ
ಆವ ಸುತನ ನೋಡಿ ನಿನ್ನ ।

ಆವ ಪರಿಯ ನಿನ್ನ ಗುಣ ಹೇಗೆ ಮರೆಯಲಿ
ದೇವ ಕಂಪಿಲ ಮರುಗಿದನು ॥೮೫॥

ಹೀನಜಾತಿಯ ಕೈಲಿ ಅಳಿಯೆಂದು ಹಣೆಯಲ್ಲಿ
ಏನೆಂದು ಬರೆದನೊ ಬ್ರಹ್ಮ ।
ನಾನೀಗ ಪುತ್ರ ಶೋಕವನೆಂತು ಮರೆಯಲೊ
ಖಾನ ವಜೀರರಗಂಡ ॥೮೬॥

ಪಟ್ಟದ ರಾಣಿ ಹರಿಯಮ್ಮ ಸಹಿತ ಒಡ
ಹುಟ್ಟಿದವರೆಲ್ಲ ಬಾಯಿಬಿಡುತ ।
ಕೆಟ್ಟೆವು ನಮ್ಮಯ ಸಿರಿಯು ಸಂತೋಷವು
ಸುಟ್ಟಹೋಹದೆ ಅಣ್ಣಾಜಿ ॥೮೭॥

ಕಂತುಸನ್ನಿಭ ಚೆನ್ನಿಗರಾಮ ನಿನಗಿದಿ
ರಾಂತು ಬಾಳುವರಿಲ್ಲವೆಂದು ।
ಸಂತೋಷದಲ್ಲಿ ನಂಬಿದ್ದೆವು ತಮ್ಮ ನೀ
ನಿಂತು ಕೆಡಿಸಿ ಹೋಗುವರೆ ॥೮೮॥

ಪೊಡವಿಯೊಳಗೆ ನಿನಗಿದಿರಿಲ್ಲವೆನುತಲಿ
ಕಡು ನಂಬಿರ್ದೆವೊ ಅಣ್ಣ ।
ಬಿಡದೆ ನೀನೀ ಪರಿಯಲಿ ನಮ್ಮ ಬಾಯಲಿ
ಹುಡಿಯನು [ಹೊಯ್ದು] ಹೋಗುವರೆ ॥೮೯॥

ಮಾದಿಗಿತ್ತಿಯ ಕೈಲಿ ಅಳಿಯೆಂದು ಪಣೆಯಲ್ಲಿ
ಸಾ[ಧಿ]ಸಿ ಬರದಂಥ ಬ್ರಹ್ಮ ।
ಹೋದ ದಾರಿಯು ಹಾಳಾಗಲಿ ಎನುತಲಿ
ಸೋದರರೆಲ್ಲ ಮರುಗಿದರು ॥೯೦॥

ಲೆ[ಕ್ಕವಿಲ್ಲ]ದೆ ತಾಯಿ ಒಡಲಿಗೆ ಕಿಚ್ಚನು
ಇಕ್ಕಿ ಹೋಗುವರೆ ಕಂದಯ್ಯ ।
ದಿಕ್ಕುಗೇಡ್ಯಾದೆನೊ ಎನುತಲಿ ಹರಿಯಮ್ಮ
ದುಃಖದಲತಿ ಮರುಗಿದಳು ॥೯೧॥

ಸಿರಿಯು ಸಂತೋಷವು ದೊರೆತನವೆಲ್ಲವ
ಸುರುಹಿ ಹೋಗುವರೆ ಕಂದಯ್ಯ ।
ರಾಮನ ವರದಿಂದ ಪಡೆದೆನೊ ಜಟ್ಟಂಗಿ
ಸ್ವಾಮಿಗೆನ್ನಯ ಉಲಿಮುಟ್ಟ ॥೬೨॥

ಅರೆಯಾಯುಷ್ಯವ ನಿನಗೆ ಬರೆದಂಥ
ನೆರೆ ಬ್ರಹ್ಮನ ಮನೆ ಉರಿ[ಯಾ] ।
....
ಹರಿಯಮ್ಮ ಬಿದ್ದು ಹೊರಳಿದಳು ॥೬೩॥

ಭೂಮಿಯೊಳುಳ್ಳಂಥ ದೇವರನೆಲ್ಲವ
ನೇಮದಿ ಭಜಿಸಿ ಜಟ್ಟಂಗಿ ।
ಹರನು ನಾರಾಯಣ ನನ್ನಂತೆ ದುಃಖ
ವೆರಸಲಿ ಪುತ್ರಶೋಕದಲಿ ॥೬೪॥

ದೇವ ಬ್ರಹ್ಮನು ನಾರಾಯಣ ನನ್ನಂತೆ
ಮೂವರು ಚಾಲ್ವರಿವುದ ।
ಆವ ಕಾಲಕೆ ಕೇಳುವೆನೆಂದು ಹರಿಯಮ್ಮ
ದೇವಿ ಬಿದ್ದಳು ದುಃಖದಲಿ ॥೬೫॥

ಒಡ್ಡುಗೆಡೆದು ದುಃಖಮಾಡೆ ಹರಿಯಮ್ಮನ
ನೋಡಲು ಕಂಪಿಲನಾಗ ॥೬೬॥

ಇರುವೆಯ ಗೂಡಿಗೆ ಕಿಚ್ಚನಿಕ್ಕಿದೆ ಬಂದು
ಅರೆಮಾಡಿ ನಮ್ಮ ಮೋಹವನು ।
ಬರುಕೈಯಮಾಡಿ ಹೋಗುವರೆ ರಾಮಯ್ಯ
ಸ್ಥಿರ[ಮಾಡಿ] [ಎ]ನಗೆ [ದುಃಖವನು] ॥೬೭॥

ಹೆಂಡರು ಮಕ್ಕಳು ಸಹವಾಗಿ ಕಂಪಿಲ
ಮುಂಡಾಡಿ ಮುದ್ದಾಡಿ ಮಗನ ।
ಕೊಂಡುಹೋಗಿರೊ ಕಾಶಿಯಪಟ್ಟಣಕೆಂದ
ಗಂಡಾಳು ರಾಮನ ತಲೆಯ ॥೬೮॥

ದೇಶಾಧಿಪತಿ ರಾಮಯ್ಯನ ತಲೆಯನು
ಕಾಶಿಯ ಪಟ್ಟಣಕೊಯ್ದು ।
ಈಶ್ವರನ ಪಾದಕರ್ಪಿಸುಯೆಂದು ಕಂಪಿಲ
ಆ ಸಮಯದಿ ಕಳುಹಿದನು ॥೯೯॥

ಇತ್ತಲೀ ತಲೆಯ ಕಂಪಿಲರಾಯ ಕಳುಹಿದ
ಅತ್ತಲೀಶ್ವರ ಮನಮೆಚ್ಚಿ ।
ನೆತ್ತರ ಕಾಯವ ತರಹೇಳಿ ಚರರಟ್ಟಿ
ಅರ್ತಿಲಿ ತೆಗೆಸೆ ಕಾಯವನು ॥೧೦೦॥

ಹಿಂದಣ ಶಾಪದಿ ರಾಮನ ತಲೆಹೋಗಿ
ಸಂದಿತು ಡಿಳ್ಳಿಪಟ್ಟಣಕೆ ।
ಕುಂದದೆ ಉಳಿದಂಥ ಕಾಯವ ....
.... ॥೧೦೧॥

....
ಕಾಯಾ ಒಣಗಿಸಿ ನೋಡದಿ ।
....
ಶಿವನೊಯ್ದನೆಂದೆನುತ ॥೧೦೨॥

ಎಲ್ಲರು ರಣವ ಶೋಧಿಸಿಕೊಳುತ ಬಂದರು
ಬಲ್ಲಿದ ರಾಮನ ಕಾಯ ।
ಇಲ್ಲವೆನುತ ಪೇಳಿದರೆಲ್ಲ ಬೈಚಪ್ಪ
ಎಲ್ಲಿ ಹೋಯಿತೊ ರಾಮನ ಕಾಯ ॥೧೦೩॥

ಕಾಯವಿದ್ದರೆ ತಲೆ ಮುಂಡವ ಕೂಡಿಸಿ
ಸಾಯುಜ್ಯಪದವಿಯ ಮಾಡಿ ।
ಕಾಯ[ವೆ]ರಸಿ ಕಳುಹುವೆ ಕಾಶಿ ನದಿಗಾಗಿ
ಕಾಯ ಸಿಕ್ಕದೆ ಹೋಯಿತೊ ಮಂತ್ರಿ ॥೧೦೪॥

ತಲೆಯ ಕಳುಹಿಸೊ ಮಂತ್ರಿ ಬೇಗ ಕಾಶಿಗಾಗಿ
ನಿಲ್ಲಿಸಬೇಡೊಂದು ಗಳಿಗೆ ।

ಕಲಿ ರಾಮನಾಥನ ತಲೆಯ ಭಟ್ಟರು ಕೂಡಿ
ಒಲಿದು ಬ್ರಾಹ್ಮರ ಕೊಟ್ಟುಕಳುಹೆ ॥೧೦೫॥

ಕಾಶಿಯಪಟ್ಟಣಕೊಯ್ದು ಈ ತಲೆಯನು
ಲೇಸಿಂದ ಭಾಗೀರಥಿಯೊಳಗೆ ।
ವಾಸವಮಾಡಿಯೆ ಕಾಶಿಯ ಈಶ್ವರಗೆ
ಲೇಸು ಆರಾಧನೆ ಮಾಡಿ ॥೧೦೬॥

ಅನ್ನಶಾಂತಿಯ ಮಾಡಿ ನೀವು ಬನ್ನೆನುತಲಿ
ಮನ್ನಿಸಿ ಹಣ ಹೊನ್ನು ಕೊಟ್ಟು ।
ಉನ್ನತ ಮಾತನೆಲ್ಲವ ಹೇಳಿ ಕಂಪಿಲ
ಚೆನ್ನಾಗಿ ಪುರೋಹಿತರಿಗೆ ॥೧೦೭॥

ಅಪ್ಪಣೆ ತೆಗದು ಪುರೋಹಿತರು ಅವರಾಗ
ತಪ್ಪದೆ ಕಾಶಿಪಟ್ಟಣಕೆ ।
ಒಪ್ಪದಿ ಬಂದು ಸ್ನಾನವಮಾಡಿ ನದಿಯೊಳು
ಸುಪ್ಪಾಣಿ ರಾಮನ ತಲೆಯ ॥೧೦೮॥

ಆಗಲೆ ತಲೆಯ ನದಿಯೊಳು ಹಾಕುವರೆಂಬ
ಯೋಗವ ತಿಳಿದು ಗರುಡಾಳು ।
ಬೇಗ ಆಕಾಶದೊಳ್ ಕಾದು ತಾನಿರ್ದು
ತೂಗಿ ಬೀಸಾಡುವದ ಕಂಡು ॥೧೦೯॥

ಬಂದ ಬ್ರಾಹ್ಮರು ಮಂತ್ರಯೋಗದಿಂದ ತಲೆಯ
ನಿಂದು ಹಾಕಲು ನದಿಯೊಳಗೆ ।
ಅಂದು ತಲೆಯು ನದಿಯೊಳು ಬೀಳುವಾಗಲು
ಬಂದು ಗರುಡಾಳು ಕೊಂಡೊಯ್ಯೆ ॥೧೧೦॥

ನದಿಯೊಳು ತಲೆ ಬಂದು ಬೀಳುವ ಸಮಯದಿ
ಒದಗಿ ಅಂತರ ಮಾರ್ಗದಲಿ ।
ಮುದದಿಂದ ಕಚ್ಚಿಕೊಂಡೊಯ್ದು ಗರುಡಾಳನು
ಚೆದುರ ರಾಮಯ್ಯನ ತಲೆಯ ॥೧೧೧॥

ಇದು ಚೋದ್ಯವೆಂದು ಬಂದವರೆಲ್ಲ
ನೋಡಲು [ಒಯ್ದಿತು] ಕೈಲಾಸಪುರಕೆ ।
ಒದಗಿ ನಾನಾ ದಾನ ಧರ್ಮವನು ಮಾಡಿ
ಕದಲಿ ಬಂದರು ಈಶನೆಡೆಗೆ ॥೧೧೨॥

ಕಾಶಿಯ ಈಶ್ವರಗೆ ನೈವೇದ್ಯವ ಮಾಡಿ
ಲೇಸಿಂದ ಮಾಡಿದರಾಗ ।
ದೋಸಿಗ ಬ್ರಾಹ್ಮರಿಗೆಲ್ಲ ದಾನವನಿತ್ತು
ಆ ಸಖೆಯರ ಕೂಡಿಕೊಂಡು ॥೧೧೩॥

ಇಲ್ಲಿಂದ ತೀರ್ಥ ಪ್ರಸಾದವ ತೆಕ್ಕೊಂಡು
ಮೆಲ್ಲನೆ ಕುಮ್ಮಟಕಾಗಿ ।
ಎಲ್ಲರು ಕೂಡಿ ಒಂದಾಗಿ ಮಾತಾಡುತ
ನಿಲ್ಲದೆ ಕಂಪಿಲನೆಡೆಗೆ ॥೧೧೪॥

ಇತ್ತ ಜೋಯಿಷ್ಯರು ಕುಮ್ಮಟಕಾಗಿ ಬಂದರು
ಅತ್ತ ಗರುಡಾಳು ಬೇಗದೊಳು ।
ಎತ್ತಿ ತಲೆಯನು ತಂದು ಈಶ್ವರನ ಸದರಿಗೆ
ಮತ್ತೆ ಗರುಡಾಳು ಬಿನ್ನೈಸೆ ॥೧೧೫॥

ಹರನು ವಾಲಗದೊಳು ಸಕಲ ಗಣಂಗಳು
ಹರಿ ಬ್ರಹ್ಮ ರುದ್ರಾದಿಗಳು ।
ಇರಲುಮೆ ಸಹ ಈಶ ನುಡಿದನು ರಾಮನ ಪರಿಯ
ಪರಿಯ ಕಂಡಿರ ಕಂಡಿರೆನುತ ॥೧೧೬॥

ನರಜಲ್ಮದಲ್ಲಿ ಪುಟ್ಟಿಸಿ ನೋಡಿದೆವು ಅವನ
ಪರನಾರಿಯರ ಸಹೋದರನ ।
ಬಿರಿದ ಕಾಲೊಳು ಹಾಕಿ ಗೆದ್ದನು ಪಾರ್ಥನು
ಕರೆತನ್ನಿ ಅವರ ನೋಡುವರೆ ॥೧೧೭॥

ತಲೆ ಮುಂಡ ಗೂಡಿಸಿ ಪ್ರಾಣವಿತ್ತನು ಈಶ
ನಲಿವುತ......................ರಾಮಯ್ಯ ।

ಬಲವಂತನಹದೊ ನಮ್ಮ ಜೂಜ ಗೆಲಿಸಿದೆ
ಕಲಿಪಾರ್ಥ ನೀನಹುದೆಂದ ॥೧೧೮॥

ಬಂದಡ್ಡಬಿದ್ದ ಉಮೆಯರಸಗೆ ರಾಮಯ್ಯ
ನಿಂದನು ಕೈಯ್ಯನು ಮುಗಿದು ।
ಅಂದಚೆಂದವು ನರರೂಪಿನ ಕಾಂತಿಯು
ಅಂದೆಲ್ಲ ಹರಸಿ ಗಣ ನೋಡಿ ॥೧೧೯॥

ನಾರಾಯಣ ನಿನ್ನ ಮೈದುನ ಬಂದನು
ಈರೇಳು ಭುವನವ ಗೆದ್ದು ।
ನಾರಿಯ ಶಾಪವ ಕಳೆದು ಹುಜುರು ಬಂದ
ವೀರಪಾರ್ಥನು ತಾನಹುದು ॥೧೨೦॥

ಪಾರ್ವತಿ ಕಂಡು ಪಾರ್ಥನ ಅತಿನಿಷ್ಠೆಯ
ಊರ್ವಿಯೊಳಗೆ ರಾಯರನೆಲ್ಲ ।
ಗರ್ವವ ಮುರಿದು ಊರ್ವಶಿ ರಂಭೆಯ ಗೆದ್ದು
ನಿರ್ವಾಹ ಮಾಡಿದನು ಮಾತ ॥೧೨೧॥

ಬಲ್ಲಿದನಹುದೀಗ ಶಿವ ನಿಮ್ಮ ಪಾರ್ಥನ
ಗೆಲ್ಲಲಿಲ್ಲವು ನಮ್ಮ ರಂಭೆ ।
ಉಲ್ಲಾಸ............[ಉ]ಮೆ ಹರಕೆಯ ಕೊಟ್ಟಳು
ಮೆಲ್ಲನೆ ನಾರಾಯಣನೊಡನೆ ॥೧೨೨॥

ಹೋಗಯ್ಯ ವೈಕುಂಠಪುರಕೆ ಸಾಗಿ ನೀನು
ಬೇಗದಿ ಹರಿಯನೆಡೆಗೊಂಡು ।
ಆ ಗಳಿಗೆಯೊಳು ಸಾಯುಜ್ಯಪದವಿಯ ಕೊಟ್ಟು
ನೀಗೆಂದು ನರಜಲ್ಮವನು ॥೧೨೩॥

ನಾರಾಯಣ ಪಾರ್ಥರಿಬ್ಬರು ಗರುಡನ
ಏರಿಕೊಂಡು ಹರುಷದಲಿ ।
ಹಾರಿತು ಅಲ್ಲಿಂದ ವೈಕುಂಠಪುರಕಾಗಿ
ನಾರಾಯಣನೊಡಗೊಂಡು ॥೧೨೪॥

ರಾಮನಾಥನ ಕಥೆಯನು ಕೇಳಿದ ಜನರಿಗೆ
ಭೂಮಿದಾನವನಿತ್ತ ಫಲವು ।
ಪ್ರೇಮದಿ ಸಕಲ ಐಶ್ವರ್ಯವು ದೊರಕುವುದು
ಆ ಮಹಾದೇವ ರಕ್ಷಿಸುವ ॥೧೨೫॥

ಸಂಗ್ರಾಮಧೀರನ ಚರಿತೆಯ ಕೇಳಲು
ಹಿಂಗದೆ ಸಂತಾನಫಲವು ।
[ಬಂಗಾರ] ರಾಜ್ಯವು ಸ್ಥಿರವು ಜಟ್ಟಂಗಿಯ
ಲಿಂಗನ ಕೃಪೆಯಿಂದಲಹುದು ॥೧೨೬॥

ಕಂದರ್ಪರೂಪ ರಾಮಯ್ಯನ ಚರಿತೆಯ
ಚೆಂದದಿಂದಲಿ ಕೇಳಿದವರ್ಗೆ ।
ಬಂಧನ ಪೋಗಿ ಸಂತೋಷ ಬರುವುದಿಂದು
ಚಂದ್ರಶೇಖರನ ದಯದಿಂದ ॥೧೨೭॥

ಕರುಣದಿಂ ಕಾಪಾಡುವ ಪೊಂಪಾಪತಿ
ವಿರೂಪಾಕ್ಷಲಿಂಗ ರಕ್ಷಿಸುವ ।
ಶರಣು ದಯಾಳು ಜಟ್ಟಂಗಿಯ ಸ್ವಾಮಿಯ
ಕರುಣದಿ ಸುಖ ಬಾಳ್ವರವರು ॥೧೨೮॥

ಈ ಮಹಾಕೃತಿಯನು ಓದಿ ಬರೆದು ಕೇಳಿ
ದಾ ಮಹಾಪುರುಷನಾವನಿಗೆ ।
ಭೂಮಿಯೊಳ್ ಶನಿಹತ್ತಿರೆ ಬಿಟ್ಟು ಓಡುವುದು
ಸ್ವಾಮಿ ಈಶ್ವರ ಶಿವನಾಣೆ ॥೧೨೯॥

ಇದು ರಾಮನ ಸ್ತುತಿಯ ಬರೆದೋದಲು
ಪದೆಪದೆ ಲಕ್ಷ ಸ್ಮರಣೆಯು ।
ಮಧುಸೂದನ ದಾರಿದ್ರವ ಕಳೆದಿನ್ನು
ಒದಗಿಸುವನು ಸೌಭಾಗ್ಯವನು ॥೧೩೦॥

ಪಾರ್ವತದೇವಿ ಪರಮೇಶ ವಾಲಗದೊಳು
ಊರ್ವಿಯೊಳರ್ಜುನ ಪುಟ್ಟಿ ।

ದೇವ ಜಟ್ಟಂಗಿ ರಾಮೇಶ್ವರನ ವರದಿಂದ
ಊರ್ವಶಿ ರಂಭೆಯ ಗೆಲಿದ ॥೧೩೧॥

ಇದು ಪರನಾರಿ ಸೋದರ ರಾಮನಾಥನ
ಪದಕೃತಿಯೊಳಗೊಂದು ಕಥೆಯ ।
ಸುದತಿಯೂರ್ವಶಿ ರಂಭೆಯ ಗೆದ್ದನರ್ಜುನ
ಪದಗಳು ಮುಗಿಯೆ ಈ ಸಂಧಿ ॥೧೩೨॥

ಪರನಾರಿಯರ ಸೋದರನೆಂಬ ಬಿರಿದನು
ಧರಿಸಿ ಧರಿಸಿಕೊಂಡ ರಾಮ ।
ಪರಮಾತ್ಮ ಕೃಪೆಮಾಡಿ ಹುಜುರು ಕರೆಸಿಕೊಂಡ
ಸರಸರ ಸಂಧಿ ಸಂಪೂರ್ಣ ॥೧೩೩॥

ಅಂತು ಸಂಧಿ ೨೬ಕ್ಕಂ ಪದನು ೨೭೯೬ಕ್ಕಂ ಮಂಗಳ ಮಹಾಶ್ರೀ

❖❖

ಮಹಾಲಿಂಗಸ್ವಾಮಿ ವಿರಚಿತ

ಬಾಲರಾಮನ ಸಾಂಗತ್ಯ

ಸಂಪಾದಕ

ಎಂ. ಎಂ. ಕಲಬುರ್ಗಿ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೭

*

ಪ್ರಸ್ತಾವನೆ

ಎಂ.ಎಂ. ಕಲಬುರ್ಗಿ

ಹಸ್ತಪ್ರತಿಗಳು:

ಅಂದವಲ್ಲದ ಅಕ್ಷರ, ಶುದ್ಧವಲ್ಲದ ಭಾಷೆ, ಶ್ರದ್ಧಾವಂತನಲ್ಲದ ಲಿಪಿಕಾರ -ಈ ಮೂರು ಅಸಮರ್ಪಕತೆಗಳಲ್ಲಿ ಆಕಾರ ಪಡೆದ ಏಕೈಕ (ಒಂದೂವರೆ) ಕಾಗದ ಪ್ರತಿಯನ್ನು ಆಧರಿಸಿ, ಹಂಪೆಯ ಮಹಾಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ' ಕೃತಿಯನ್ನು ಇಲ್ಲಿ ಪರಿಷ್ಕರಿಸಲಾಗಿದೆ. ರಾಜ್ಯದ ಎಲ್ಲ ಹಸ್ತಪ್ರತಿ ಭಾಂಡಾರಗಳನ್ನು ಜಾಲಾಡಿದರೂ, ಎಲ್ಲ ಪ್ರಮುಖ ವ್ಯಕ್ತಿಗಳನ್ನು ವಿಚಾರಿಸಿದರೂ, ಈ ಕೃತಿಯ ಇನ್ನೊಂದು ಪ್ರತಿ ಲಭ್ಯವಾಗಲಿಲ್ಲ. ಹೀಗಾಗಿ ಈಗಾಗಲೇ ಖಿಲವಾಗುತ್ತಿರುವ ಇಂದು ಆಧುನಿಕ ಕಾಗದ ಪ್ರತಿಯೂ ಹಾಳಾಗಿ ಹೋದರೆ, ಈ ಕೃತಿಯನ್ನು ಶಾಶ್ವತ ಕಳೆದುಕೊಳ್ಳುತ್ತೇವೆ -ಎಂಬ ಭೀತಿ ನನ್ನಿಂದ ಈ ಕಾರ್ಯ ಮಾಡಿಸಿದ್ದು, ವಿದ್ವಾಂಸರು ನನ್ನ ಅಸಹಾಯಕತೆಯನ್ನು, ಅನಿವಾರ್ಯತೆಯನ್ನು ಅರ್ಥಮಾಡಿಕೊಳ್ಳಬೇಕೆಂದು ಬಿನ್ನವಿಸಿಕೊಳ್ಳುತ್ತ, ಉತ್ತಮ ಪ್ರತಿ ಸಿಕ್ಕರೆ ಇದನ್ನು ಪರಿಷ್ಕರಿಸಲು ವಿಪುಲ ಅವಕಾಶಗಳಿವೆಯೆಂದು ಸೂಚಿಸಬಯಸುತ್ತೇನೆ.

'ಬಾಲರಾಮನ ಸಾಂಗತ್ಯ' ಕೃತಿನಾಮವಾಗಲೀ, ಕರ್ತೃ ಮಹಾಲಿಂಗಸ್ವಾಮಿಯ ಹೆಸರಾಗಲೀ ಕವಿಚರಿತೆಕಾರರ ಗಮನಕ್ಕೆ ಬಂದಿಲ್ಲ. ಈ ಕೃತಿಯ ಕಾಗದ ಪ್ರತಿಯನ್ನು ಶೋಧಿಸಿದವರು (೧೯೪೪) ಹುಲ್ಲೂರು ಶ್ರೀನಿವಾಸ ಜೋಯಿಸರು.[೧] ಕಣ್ಮುಟ್ಟಿ ಓದಿ, ಇದನ್ನು ಡಾ। ಜಿ. ವರದರಾಜರಾವ್ ಅವರು ತಮ್ಮ ಪ್ರಕಟಿತ ಪಿಎಚ್.ಡಿ ಪ್ರಬಂಧದಲ್ಲಿ (ಕ್ರಿ.ಶ.೧೯೬೬) ಉದ್ದಕ್ಕೂ ಬಳಸಿಕೊಂಡಿದ್ದಾರೆ. ಒಂದು ಪುಟದ ಭಾವಚಿತ್ರವನ್ನೂ ಪ್ರಕಟಿಸಿದ್ದಾರೆ.

"ಈ ಪ್ರತಿಯನ್ನು ಉಪಯೋಗಿಸಿಕೊಂಡು ಶ್ರೀ ಹುಲ್ಲೂರ ಅವರಿಗೆ ಹಿಂದಿರುಗಿಸಿದ್ದೇನೆ" ಎಂದು ಡಾ। ವರದರಾಜರಾವ್ ಅವರು ಸುಮಾರು ೧೯೬೮ರಲ್ಲಿ ನನಗೆ ಹೇಳಿದ್ದರು. ಅಂದಿನಿಂದ ಇದರ ಶೋಧಕ್ಕಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಯತ್ನಿಸಿ ವಿಫಲನಾದ ಸಂದರ್ಭದಲ್ಲಿ ಶ್ರೀ ಎಸ್.ಶಿವಣ್ಣನವರು ಇದರ ನಕಲು ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆಯೆಂದು ಸೂಚಿಸಿ, ಕಮರಿದ ನನ್ನ ಆಸೆಯನ್ನು ಕುದುರಿಸಿದರು. ಈ ನಕಲು ಪ್ರತಿಯ ಸ್ವರೂಪ ಹೀಗಿದೆ :

ಶ್ರೀ ವರದರಾಜರಾವ್ ಅವರು ಈ ಹಸ್ತಪ್ರತಿಯನ್ನು ಆರಂಭದಿಂದ ೩ನೆಯ ಸಂಧಿ ೧೫೮ನೆಯ ಪದ್ಯದ ವರೆಗೆ ಬೇರೊಬ್ಬರಿಂದ ಒಂದು ನೋಟಬುಕ್ಕಿನಲ್ಲಿ ನಕಲು ಮಾಡಿಸಿದ್ದಾರೆ (KB 811). ಬಳಿಕ ಅವರೇ ನಕಲು ಕಾರ್ಯ ಮುಂದುವರಿಸಿ ೧೩ನೆಯ ಸಂಧಿ ೧೨೦ನೆಯ ಪದ್ಯದ ವರೆಗೆ ಮಾತ್ರ ಬರೆದು ನಿಲ್ಲಿಸಿದ್ದಾರೆ. ಅಪೂರ್ಣಸ್ಥಿತಿಯಲ್ಲಿ ನಿಂತ ಇವರ ಬರವಣಿಗೆ ಎರಡು ನೋಟಬುಕ್ (KB 812, KB 813) ವ್ಯಾಪಿಸಿದೆ. ಈ

---


೧. ಬಾಲಕುಮಾರ ರಾಮನ ಸಾಂಗತ್ಯ (ಶರಣಸಾಹಿತ್ಯ ೭-೨).

ಮೂರೂ ನೋಟಬುಕ್‌ಗಳು ತುಂಬ ಅಶುದ್ಧ ಪ್ರತಿಗಳಾಗಿವೆ. ಹೀಗೆ ಶ್ರೀ ಹುಲ್ಲೂರ ಅವರ ಹಸ್ತಪ್ರತಿಯ ನಕಲು ಸಿಕ್ಕರೂ ಅದರ ಅಪೂರ್ಣಸ್ಥಿತಿ (ಸಂಧಿ ೧೩-ಪದ್ಯ ೧೨೦) ನನ್ನನ್ನು ಬಾಧಿಸುತ್ತಿರುವಾಗ, ಶ್ರೀ ಎಸ್.ಶಿವಣ್ಣ ಅವರು ಶ್ರೀ ಹುಲ್ಲೂರ ಅವರ ಪ್ರತಿಯ ಪೂರ್ಣ ನಕಲಿನ ಬೇರೊಂದು ಪ್ರತಿ (KB 808, KB 809, KB 810) ಅದೇ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವುದೆಂದು ತಿಳಿಸಿದರು. ಚಿತ್ರದುರ್ಗದ ಪಾತಾಳೇಶ್ವರ ಸಂಘದ ಸದಸ್ಯನಾದ ಮಂಜುನಾಥನೆಂಬವನು ಡಾ॥ ವರದರಾಜರಾವ್ ಅವರ ಹೇಳಿಕೆಯ ಮೇರೆಗೆ ಈ ನಕಲು ಕಾರ್ಯವನ್ನು ಇಡಿಯಾಗಿ ಪೂರೈಸಿದ್ದಾನೆ. ಮೇಲೆ ಹೇಳಿದ KB811, KB 812, KB 813 ನಂಬರಿನ ಪ್ರತಿಗಳಿಗಿಂತ ಇದು ಇನ್ನೂ ಅಶುದ್ಧಪ್ರತಿಯಾಗಿದೆ.

ಹೀಗೆ ಡಾ॥ ವರದರಾಜರಾವ್ ಅವರ ಪ್ರಯತ್ನದಿಂದಾಗಿ ಶ್ರೀ ಹುಲ್ಲೂರ ಅವರ ಹಸ್ತಪ್ರತಿಯಿಂದ ಒಂದೂವರೆ ಪ್ರತಿ ಹುಟ್ಟಿದ್ದು, ಇವುಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಕುಮಾರರಾಮನನ್ನು ಕುರಿತ ಕೃತಿಗಳ ಸಂಖ್ಯೆ :

ಕುಮಾರ ರಾಮನನ್ನು ಕುರಿತು ಕನ್ನಡದಲ್ಲಿ ಹುಟ್ಟಿಕೊಂಡಿರುವ ಕೃತಿಗಳು ಅನೇಕ. ನಂಜುಡ ಮಹಾಲಿಂಗಸ್ವಾಮಿ ಕೃತಿಗಳನ್ನು ಹೊರತು ಪಡಿಸಿದರೆ ಪಾಂಚಾಳಗಂಗನ ಕೃತಿ ಉಳಿದ ಮೂರು ಪಾಠಾಂತರಗಳಾಗಿರುವದರಿಂದ, ಇವೆಲ್ಲವನ್ನೂ ಒಂದೇ ಕೃತಿಯಾಗಿ ಇಟ್ಟುಕೊಳ್ಳಬೇಕೆಂದು ಡಾ॥ ವರದರಾಜರಾವ್ ಹೇಳುತ್ತಾರೆ. ಆದರೆ ಇವುಗಳಲ್ಲಿಯ ಸ್ವತಂತ್ರ ಪದ್ಯ, ಸ್ವತಂತ್ರ ಘಟನೆ, ಘಟನೆಗಳಿಂದ ಆಕಾರಗೊಂಡ ಕೃತಿಶಿಲ್ಪಗಳನ್ನು ನೋಡಿದರೆ, ಇವುಗಳನ್ನು ಪಾಠಾಂತರ (Veriation)ಗಳೆನ್ನದೆ, ರೂಪಾಂತರ (Version) ಎಂದು ಕರೆದು, ಇವುಗಳಿಗೆ ಶೂನ್ಯಸಂಪಾದನೆಗಳಂತೆ ಸ್ವತಂತ್ರಸ್ಥಾನ ಕೊಡುವುದೇ ಸೂಕ್ತವೆನಿಸುತ್ತದೆ. ಹೀಗಾಗಿ ನಾನು ಪಾಂಚಾಳಗಂಗ ಪರಿವಾರದ ಈ ಮೂರು ಕೃತಿಗಳನ್ನು ಶೋಧಿಸಿ, ಈಗಾಗಲೇ ಹೊಸ ಕುಮಾರರಾಮನ ಸಾಂಗತ್ಯ (೨೦೦೦), ಕೊಮಾರ ರಾಮಯ್ಯನ ಚರಿತೆ (೨೦೦೧)ಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದೇನೆ. ಮೂರನೆಯದಾದ "ಹಳೆಯ ಕುಮಾರರಾಮನ ಸಾಂಗತ್ಯ" ಹಸ್ತಪ್ರತಿ ನನ್ನಲ್ಲಿದ್ದು, ಪರಿಷ್ಕರಿಸಿ ಇಷ್ಟರಲ್ಲಿಯೇ ಪ್ರಕಟಿಸಲಿದ್ದೇನೆ.* ಈ ಮೂರು ಕೃತಿಗಳ ಸಂಬಂಧ ಹೀಗಿದೆ :



---

* ಈ ಕೃತಿ ಪ್ರಕಟವಾಗಿದೆ. ಸಪ್ನಬುಕ್ ಹೌಸ್, ಬೆಂಗಳೂರು-೨೦೦೮

ಈ ಮೂರೂ ಒಂದರೊಳಗೊಂದು ಬೆರೆತು ಬಹುಕವಿ ಸೃಷ್ಟಿಯಾಗಿ ಬೆಳೆದರೆ, ನಂಜುಂಡನ ಮತ್ತು ಮಹಾಲಿಂಗಸ್ವಾಮಿಯ ಕೃತಿಗಳು ಮಾತ್ರ ಬಹುಮಟ್ಟಿಗೆ ತಮ್ಮ ಮೂಲ ಸ್ವರೂಪ ಉಳಿಸಿಕೊಂಡಿವೆ. ಇವುಗಳಲ್ಲಿ ನಂಜುಂಡನ 'ರಾಮನಾಥಚರಿತೆ' ಈಗಾಗಲೇ ಮೈಸೂರು ಪ್ರಾಚ್ಯವಿದ್ಯಾಲಯದಿಂದ ಪ್ರಕಟವಾಗಿದೆ (ಸಂ.ಎಚ್. ದೇವೀರಪ್ಪ). ಸದ್ಯ ಮಹಾಲಿಂಗಸ್ವಾಮಿಯ "ಬಾಲರಾಮನ ಸಾಂಗತ್ಯ" ಪ್ರಕಟವಾಗುತ್ತಲಿದೆ.

ಕರ್ನಾಟಕದಲ್ಲಿ ಸಿಗುವ ಕುಮಾರರಾಮನನ್ನು ಕುರಿತ ಎಲ್ಲ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಪರಸ್ಪರ ಹೋಲಿಸಿ ನೋಡಿದರೆ ಈ ಕೃತಿ ಸಂಖ್ಯೆ ಐದರಿಂದ ಇನ್ನೂ ವರ್ಧಿಸುವ ಸಾಧ್ಯತೆಯಿದೆ. ಹೀಗೆ ಸಿಗುವ ಕೃತಿಗಳ ಸಂಖ್ಯೆ ೬ ಎಂದು ಶ್ರೀ ಹುಲ್ಲೂರ ಅವರು ಹೇಳುವ ಮಾತನ್ನು ಇಲ್ಲಿ ನೆನೆಯಸಬಹುದು.[೨]

ಮಹಾಲಿಂಗಸ್ವಾಮಿಯ "ಬಾಲರಾಮನ ಸಾಂಗತ್ಯ" :

ಕನ್ನಡಸಾಹಿತ್ಯದಲ್ಲಿ ಕವಿಗಳು ತಮ್ಮ ಚರಿತ್ರೆಯ ಬಗ್ಗೆ ತುಂಬ ಉದಾಸೀನ ಭಾವ ತಾಳುತ್ತ ಬಂದಿದ್ದಾರೆ. ಇದರಿಂದಾಗಿ ಕವಿ-ಕೃತಿಗಳ ವಿವರ, ಸೃಷ್ಟಿಸಂದರ್ಭ ತಿಳಿದುಕೊಳ್ಳವುದು ಸಾಧ್ಯವಾಗುತ್ತಿಲ್ಲ. ಈ ಶ್ರೇಣಿಯಲ್ಲಿ ಪರಿಗಣಿತನಾಗುತ್ತಾನೆ, ಮಹಾಲಿಂಗಸ್ವಾಮಿ. ಈ ವರೆಗೆ ತಿಳಿದು ಬಂದಂತೆ, ಈತನ ಏಕೈಕ ಕೃತಿ ಬಾಲರಾಮನ ಸಾಂಗತ್ಯ. ಇದಕ್ಕೆ 'ಬಾಲಕುಮಾರರಾಮನ ಸಾಂಗತ್ಯ'ವೆಂಬ ಪರ್ಯಾಯ ನಾಮವೂ ಕಂಡುಬರುತ್ತದೆ. ಈ ಕೃತಿಯನ್ನಾಧರಿಸಿ ಕವಿ ಪರಿಚಯವನ್ನು ಹೀಗೆ ಸಂಗ್ರಹಿಸಬಹುದು:

ಮಹಾಲಿಂಗಸ್ವಾಮಿ ಹಂಪೆಯವನು. ಚರಪತಿಯೆಂದು ಕರೆದುಕೊಂಡಿರುವುದರಿಂದ ಲಿಂಗಾಯತ ಜಂಗಮನೆಂಬುದು ಸ್ಪಷ್ಟ. ಶಿವಗಂಗೆಯನ್ನು ಸ್ಮರಿಸುವದರಿಂದ ಇವನು ಅಲ್ಲಿಯ ಮೇಲಣಗವಿ ಸಂಪ್ರದಾಯದವನಿರಬೇಕೆಂದು ಹುಲ್ಲೂರ ಶ್ರೀನಿವಾಸರಾಯರು ಊಹಿಸುತ್ತಾರೆ. ಪೀಠಿಕಾ ಭಾಗದಲ್ಲಿ ರೇವಣಾಚಾರ್ಯರನ್ನು ನೆನೆದಿರುವುದೂ ಈ ಹೇಳಿಕೆಯನ್ನು ಬೆಂಬಲಿಸುತ್ತದೆ. ಪ್ರಾಚೀನ ಕವಿಗಳಲ್ಲಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಕವಿಲಿಂಗರನ್ನೂ, ಪುರಂದರದಾಸ, ಕನಕದಾಸ, ತಾಳಪಾದ ಚೆನ್ನರನ್ನೂ ನೆನೆದಿದ್ದಾನೆ. ಪರಮೇಶ್ವರ, ಪಾರ್ವತಿ, ಗಣಪ, ಶಾರದೆ, ಶರಭೇಂದ್ರ ಮೊದಲಾದ ಪೌರಾಣಿಕ ದೇವತೆಗಳನ್ನು, ತಗಡೂರು ಬೆನವನೆಂಬ ಸ್ಥಳೀಯ ದೇವತೆಯನ್ನು, ಶಿವಭಕ್ತರಲ್ಲಿ ಕಲ್ಯಾಣದ ಬಸವರಾಜನನ್ನು, ಬೇರೆಡೆಗಳಲ್ಲಿ ಅಲ್ಲಮನನ್ನು ಹೊಗಳಿದ್ದಾನೆ. ಪಾಂಚಾಳಗಂಗನನ್ನು ಸ್ಮರಿಸದಿದ್ದರೂ ಎರಡು ಕಡೆಗಳಲ್ಲಿ ಆ ಹೆಸರನ್ನು ಬಳಸಿರುವುದರಿಂದ, ಅವನಿಂದ ಪ್ರಭಾವಿತನಾಗಿರುವುದು ಸ್ಪಷ್ಟ. ತನ್ನ ಕೃತಿಯ ಕಥೆ ಜೈಮಿನಿ ಭಾರತಕ್ಕಿಂತ ಶ್ರೇಷ್ಠವೆನ್ನುವಲ್ಲಿ ಕನ್ನಡ ಜೈಮಿನಿಭಾರತವನ್ನೇ ಕುರಿತು ಹೇಳಿದಂತಿದೆ. ಹೀಗಾಗಿ ಇವನು ಲಕ್ಷ್ಮೀಶನಿಗಿಂತ ಈಚೆಯವನೆಂಬುದು ಖಚಿತ. ಅಲ್ಲಲ್ಲಿ ಉರ್ದು ಮಿಶ್ರಿತ ಭಾಷೆ ಕಂಡುಬರುವುದೂ ಈ ಹೇಳಿಕೆಯನ್ನು ಸಮರ್ಥಿಸುತ್ತದೆ. ಶ್ರೀ ಹುಲ್ಲೂರ ಅವರಿಗೆ ಲಭ್ಯವಿರುವ ಪ್ರತಿ 'ರುಧಿರೋದಾರಿ ಸಂವತ್ಸರದ ಮಾರ್ಗಶಿರ' ಮಾಸವನ್ನು ಸೂಚಿಸುತ್ತಿದ್ದರೂ, ಕೃತಿ ರಚನೆಯ ನಿರ್ದಿಷ್ಟ ಕಾಲನಿರ್ಣಯಕ್ಕೆ ಇದು ನೆರವಾಗುವುದಿಲ್ಲ. ಒಟ್ಟಾರೆ, ಡಾ॥ ವರದರಾಜರಾವ್ ಹೇಳುವಂತೆ ಇದು ೧೮ನೆಯ ಶತಮಾನದಲ್ಲಿ ರಚನೆಗೊಂಡಿರಬೇಕು.

ಈ ಕೃತಿಯನ್ನು ಶೋಧಿಸಿದ ಹುಲ್ಲೂರ ಶ್ರೀನಿವಾಸರಾಯರು ಇದರ ಸಂಧಿ ಸಂಖ್ಯೆ ೧೯ ಎಂದು ದಾಖಲಿಸಿದ್ದಾರೆ. ಡಾ॥ ವರದರಾಜರಾಯರೂ ಇದನ್ನು ಅನುಮೋದಿಸಿದ್ದಾರೆ. ಆದರೆ ೧೯ ಎಂಬ ಅಸಮ (ಅಶುಭ) ಸಂಖ್ಯೆಗೆ ಕೃತಿಪೂರ್ಣಗೊಳಿಸಿದುದು ಸರಿಯನಿಸುವುದಿಲ್ಲ. ಬಹುಶಃ ಲಿಪಿಕಾರ ೬ ಮತ್ತು ೭ ಸಂಧಿಗಳನ್ನು ಸೇರಿಸಿದಂತಿದೆ. ಇವುಗಳನ್ನು ಬಿಡಿಸಿಕೊಂಡು ಸಂಧಿ ಸಂಖ್ಯೆ ೨೦ ಎಂದು ನಾವು ಪರಿಗಣಿಸಿದ್ದೇವೆ.

* * *

---

೨. ಕುಮಾರರಾಮನ ಸಾಂಗತ್ಯಗಳು (ಪು.೮) - ಜಿ.ವರದರಾಜರಾವ್.

ಕೃತಿ ಮಹತ್ವ :

ಜೀವಿತಕಾಲದಲ್ಲಿ ವೀರನಾಗಿ ಬಾಳಿ, ಮರಣೋತ್ತರ ಕಾಲದಲ್ಲಿ ಸಾಂಸ್ಕೃತಿಕ ವೀರನಾಗಿ, ಕೊನೆಗೆ ಪುರಾಣ ವೀರನಾಗಿ, ದೇವರಾಗಿ,ಬೆಳಗಿದವ, ಕುಮಾರರಾಮ. ಬಹುಶಃ ರಣಾಂಗಣದಲ್ಲಿ ವೀರಸ್ವರ್ಗವೇರುತ್ತಲೇ (೧೩೨೭) ಇವನನ್ನು ಕುರಿತು ಜನಪದ, ಶಿಷ್ಟಪದ ಸಾಹಿತ್ಯ ಹುಟ್ಟಲು ಆರಂಭಿಸಿರಬೇಕು. ಹೀಗೆ ಹುಟ್ಟಿದ ಮೊದಲ ಕಾವ್ಯ ಬಹುಶಃ ಪಾಂಚಾಳಗಂಗನ ಕುಮಾರರಾಮನ ಸಾಂಗತ್ಯ, ತೀರ ಪ್ರಾಚೀನ ಕಾವ್ಯವಾಗಿರುವ ಕಾರಣ ಜನ ಇದನ್ನು "ಹಳೆಯ ಕುಮಾರರಾಮನ ಸಾಂಗತ್ಯ" ವೆಂದು ಕರೆದಂತಿದೆ. ಈ ಶೀರ್ಷಿಕೆಯಿಂದ ಸಿಗುವ ಹಸ್ತಪ್ರತಿಯೇ ಇದಕ್ಕೆ ನಿದರ್ಶನ. ಮುಂದೆ ಕೆಲವೇ ದಿನಗಳಲ್ಲಿ ಇದಕ್ಕೆ ಇನ್ನಷ್ಟು ಘಟನೆಗಳು ಸೇರಿಕೊಂಡು "ಹೊಸ ಕುಮಾರ ರಾಮನ ಸಾಂಗತ್ಯ" ಶೀರ್ಷಿಕೆಯ ಕೃತಿ ಹುಟ್ಟಿದೆ. ಆಮೇಲೆ ಕುಮಾರರಾಮ-ರತ್ನಾಜಿ ಇವರನ್ನು ಅರ್ಜುನ-ಊರ್ವಶಿಯರೊಂದಿಗೆ ಸಮೀಕರಿಸಿ 'ಕುಮಾರರಾಮಯ್ಯನ ಚರಿತ್ರೆ' ರೂಪ ಗೊಂಡಿರಬೇಕು. ಇದರ ವಸ್ತುವನ್ನೇ ಇನ್ನಷ್ಟು ಪರಿಷ್ಕರಿಸಿ ನಂಜುಂಡ 'ರಾಮನಾಥ ಚರಿತೆ' ಬರೆದಂತಿದೆ. ಕೊನೆಗೆ ಜಮದಗ್ನಿಯು ಕಂಪಿಲನಾಗಿ, ಪರಶುರಾಮನು ಕುಮಾರರಾಮನಾಗಿ, ರೇಣುಕೆಯು ರತ್ನಾಜಿಯಾಗಿ ಹುಟ್ಟಿದರೆಂಬ ಅವತಾರ ಕಲ್ಪನೆಯ ನೆಲೆಯಲ್ಲಿ* ಮಹಾಲಿಂಗಸ್ವಾಮಿ ತನ್ನ ಕೃತಿ ರಚಿಸಿದ್ದಾನೆ. ಈ ಅವತಾರವನ್ನು ಹೊರತು ಪಡಿಸಿದರೆ, ಉಳಿದಂತೆ ಪರಶುರಾಮ - ಕುಮಾರರಾಮರ ಹೋಲಿಕೆಯು ಅರ್ಜುನ-ಅರಿಕೇಸರಿಗಳ ತಗಳ್ಚಿ ಹೇಳಿದ ಕಥಾತಂತ್ರವನ್ನು ನೆನಪಿಸುತ್ತದೆ. ಕೃತಿಯ ವೈಶಿಷ್ಟ್ಯವೆಂದರೆ ನಡುನಡುವೆ ತ್ರಿಶಂಕು, ರೇಣುಕೆ, ಇಂದ್ರಕುಮಾರಿ, ಸೂರ್ಯಾಂಗಮುನಿ, ಜಯಸೇನ, ವರರುಚಿ, ಡೊಂಬರ ಚೆನ್ನಿ, ಮಚ್ಛೇಂದ್ರರ ಉಪಕಥೆಗಳನ್ನು ಹೆಣೆದುದು. ಆರಂಭದಲ್ಲಿ ನಾರದನು ಹೊಸಮಲೆಗೆ ಬಂದು ಅಲ್ಲಿಯ ಋಷಿಗಳಿಗೆ "ಈ ಪ್ರಶಾಂತ ಪ್ರದೇಶವು ಇಷ್ಟರಲ್ಲಿ ಪ್ರಕ್ಷುಬ್ಧ ಪ್ರದೇಶವಾಗುವುದು" ಎಂದು ಪೀಠಿಕೆ ಹಾಕಿರುವುದು, ಇನ್ನೂ ಮೊದಲು ಆಸ್ಥಾನದಲ್ಲಿ ವಿರಾಜಮಾನನಾದ ಕುಮಾರರಾಮನ ಮಗ ಜಟ್ಟಂಗಿರಾಮ ದೊರೆಗೆ ಗುರು "ತನುಜನೆ ಕೇಳ್ ನಿಮ್ಮ ಜನಕ ಮಾಡಿದ ಕಾರ್ಯ" ಎಂದು ನುಡಿದು, ಕುಮಾರರಾಮನ ಕಥೆ ವಿವರಿಸುತ್ತ ಹೋಗುವುದು. ಇಲ್ಲಿ ಗುರುವು ದೊರೆ ಮಗನಿಗೆ ಕಥೆ ಹೇಳುತ್ತಲಿರುವುದು ಕುಮಾರವ್ಯಾಸನ "ಕೇಳು ಜನಮೇಜಯ ಧರಿತ್ರೀಪಾಲ" ಎಂಬ ಕಥಾ ತಂತ್ರವನ್ನು ನೆನಪಿಸುತ್ತದೆ.

ಇದು ಕನ್ನಡ ದೇಶೀ ಪರಂಪರೆಯ ಕಾವ್ಯ. ಧಾರ್ಮಿಕ ಮಹಾಪುರುಷರನ್ನು ಕಥಾನಾಯಕರನ್ನಾಗಿಸುವ ಒಂದು ದೊಡ್ಡ ಪರಂಪರೆಯೇ ನಮ್ಮಲ್ಲಿ ಬೆಳೆದು ಬಂದಿದ್ದು, ಇದರ ಮಗ್ಗುಲಲ್ಲಿಯೇ ರಾಜಕೀಯ ಗಣ್ಯರನ್ನೂ ಕಥಾನಾಯಕರನ್ನಾಗಿಸುವ ಪರಂಪರೆಯೊಂದು ತಲೆಯೆತ್ತಿದೆ. ಕಥಾನಾಯಕ ಜೀವಂತವಾಗಿರುವಾಗ ಇಲ್ಲವೆ ಗತಿಸಿದ ಬಳಿಕ ಈ ಕೃತಿಗಳು ಹುಟ್ಟುತ್ತ ಬಂದಿದ್ದು, ಕುಮಾರರಾಮನನ್ನು ಕುರಿತವು ಬಹುಶಃ ಅವನ ಮರಣದ ಮರುಕ್ಷಣದಿಂದಲೇ ಕಣ್ಣು ತೆರೆಯಲಾರಂಭಿಸಿವೆ. ಕನ್ನಡದ ಯಾವುದೇ ಚಾರಿತ್ರಿಕ ವೀರನನ್ನು ಕುರಿತು ಇಷ್ಟು ಸಂಖ್ಯೆಯಲ್ಲಿ ಕೃತಿಗಳು ಹುಟ್ಟಿಲ್ಲ. ಚಿಕ್ಕದೇವರಾಯನನ್ನು ಕುರಿತು ೨-೩ ಕೃತಿ ಹುಟ್ಟಿದ್ದರೂ ಇವು ನಿರಪೇಕ್ಷಧೋರಣೆಯವು ಅಲ್ಲ. ಇಂಥ ಧೋರಣೆಯು ಸಿರುಮನನ್ನು ಕುರಿತ ಕೃತಿಗಳಲ್ಲಿ ಕಂಡುಬಂದರೂ, ಕುಮಾರರಾಮನನ್ನು ಕುರಿತ ಕೃತಿಗಳ ವಿಸ್ತಾರ, ವೈವಿಧ್ಯ ಅಲ್ಲಿಲ್ಲ.

ಕುಮಾರರಾಮನನ್ನು ಕುರಿತು ಕಾವ್ಯ ರಚಿಸಿದವರು ಅನ್ನದ ಋಣಕ್ಕಾಗಿ ಬರೆದವರಲ್ಲ. ಸಂಸ್ಕೃತಿ ಬಗೆಗಿನ ಹೆಮ್ಮೆಗಾಗಿ,ಅದನ್ನು ಗೌರವಿಸುವುದಕ್ಕಾಗಿ ಬರೆದವರು. ಇವರಲ್ಲಿ ಮಹಾಲಿಂಗಸ್ವಾಮಿ ಕುಮ್ಮಟದುರ್ಗ ಸಮೀಪದ ಹಂಪೆಯವನಾಗಿರುವುದು ವಿಶೇಷವೆನಿಸಿದೆ. ಈತನಿಗಿಂತ ಮೊದಲು ಪಾಂಚಾಳಗಂಗ ಮತ್ತು ಅವನ ಪರಿವಾರದ

---

* ರತ್ನಾಜಿ ಸತ್ತು ದಿಲ್ಲಿ ಸುಲ್ತಾನನ ಮಗಳಾಗಿ ಹುಟ್ಟಿದಳೆಂದೂ ಇಲ್ಲಿ ಅವತಾರ ಕಲ್ಪನೆಯನ್ನು ವಿಸ್ತರಿಸಲಾಗಿದೆ.

ಕೃತಿ, ನಂಜುಂಡನ ಕೃತಿ ಹುಟ್ಟಿದ್ದರೂ, ಈತನ ಕೃತಿ ರಚನೆಯ ಹಿಂದೆ, ಈ ಮೊದಲಿನವುಗಳಲ್ಲಿ ಕಾಣದ ಯಾವುದೋ ಒಂದು ವಿಶೇಷ ಉದ್ದೇಶವಿರಬಹುದು. ಸಾಹಿತ್ಯಿಕವಂತೂ ಸರಿಯೇ, ಜಮದಗ್ನಿ ಪರಶುರಾಮ ರೇಣುಕೆಯರ ಅವತಾರ ಇತ್ಯಾದಿ ಸಾಹಿತ್ಯೇತರ ಉದ್ದೇಶವೂ ಸ್ಪಷ್ಟವಾಗಿಯೇ ಇದೆ.

"ಕುಮಾರ ರಾಮನ ಸಾಂಗತ್ಯಗಳು" ವಿಷಯವನ್ನು ಕುರಿತು ಪಿಎಚ್.ಡಿ ಅಭ್ಯಾಸ ಪೂರೈಸಿದ ಡಾ|| ವರದರಾಜರಾವ್ ಅವರು ಈ ಕೃತಿಯ ಸಾಹಿತ್ಯಿಕ ಗುಣವನ್ನು ಹೀಗೆ ವಿವರಿಸಿದ್ದಾರೆ:

"ಮಹಾಲಿಂಗಸ್ವಾಮಿಯ ಬರವಣಿಗೆಯಲ್ಲಿ ಉಪಮಾನಗಳಿಗಾಗಲೀ, ಗಾದೆಗಳಿಗಾಗಲೀ ಪೂರ್ವಕಥೆಗಳಿಗಾಗಲೀ ಅಭಾವವಿಲ್ಲ. ನಂಜುಂಡನಂತೆ ಪಂಡಿತಮಾನ್ಯನಲ್ಲದಿದ್ದರೂ ಪಾಂಚಾಳಗಂಗನ ಜಾಡಿನಲ್ಲಿಯೇ ಬಹುದೂರ ನಡೆದಿದ್ದಾನೆ ಎನ್ನಬಹುದು. ಪ್ರಾಚೀನ ಕಾವ್ಯಗಳ ಶ್ರವಣದ ಪರಿಣಾಮವನ್ನೂ ನೋಡಬಹುದು" (ಪು ೩೪೬).

"ಪರಾವಲಂಬಿಯಾದ ನಿದರ್ಶನಗಳಲ್ಲಿಯೇ ಕವಿಯ ಶಕ್ತಿ ಮುಗಿಯುವುದಿಲ್ಲ. ಅವನಿಗೆ ಜೀವನದ ಗಾಢವಾದ ಪರಿಚಯವಿದೆಯೆನ್ನಲು ಅವನು ಬಳಸಿರುವ ಇತರ ಉಪಮೆಗಳೇ ಸಾಕ್ಷಿ. ರಾಶಿರಾಶಿಯಾಗಿ ಹೊಸಹೊಸ ಹೋಲಿಕೆಗಳನ್ನು ಕೊಟ್ಟಿರುತ್ತಾನೆ. ಅದರಲ್ಲಿಯೂ ಸಾಮಾನ್ಯವರ್ಗದವರ ಜೀವನದ ಕಡೆಗೆ ಅವನ ಗಮನ ಹೆಚ್ಚಾಗಿದೆ" (ಪು ೩೪೭).

"ಮಹಾಲಿಂಗಸ್ವಾಮಿಯ ರಚನೆಯಲ್ಲಿ ಇನ್ನೊಂದು ವಿಶೇಷ ಕಂಡು ಬರುವುದುಂಟು. ಈತನು ಆಡುಮಾತಿನ ಸರಣಿಯನ್ನು ಬಹುಮಟ್ಟಿಗೆ ಅನುಸರಿಸಿರುವುದರಿಂದ, ತಾನು ಕೇಳಿರಬಹುದಾದ ಕೆಲವು ನುಡಿಗಟ್ಟುಗಳನ್ನು, ದ್ವಿರುಕ್ತಿಗಳನ್ನೂ ಪಾಮರಪ್ರಿಯವಾಗುವ ರೀತಿಯಲ್ಲಿ ಬಳಸುತ್ತಾನೆ."

ಈ ನಿರ್ಣಾಯಕ ಮಾತುಗಳ ಸಮರ್ಥನೆಗಾಗಿ ಡಾ|| ವರದರಾಜರಾವ್ ಅವರ ಪಿಎಚ್.ಡಿ.ಪ್ರಬಂಧದ "ಸಾಹಿತ್ಯ ವಿಮರ್ಶೆ" ಪ್ರಕರಣವನ್ನು ನೋಡಬಹುದು.

ಮಿಕ್ಕ ಕಾವ್ಯಗಳಲ್ಲಿ ಸಿಗದ ಸಾಹಿತ್ಯೇತರ ಅನೇಕ ಅಂಶಗಳನ್ನು ಒದಗಿಸುವ ಇದು, ಸಮಕಾಲೀನ ಚಾರಿತ್ರ ಮತ್ತು ಸಂಸ್ಕೃತಿ ಬಗೆಗಿನ ನಮ್ಮ ತಿಳುವಳಿಕೆಯನ್ನು ವಿಸ್ತರಿಸುತ್ತದೆ.

ಶೌರ್ಯ, ಶೌಚ, ಶರಣಾಗತ ರಕ್ಷಣೆ ಪ್ರಾಚೀನ ಯುದ್ಧವೀರನ ಜೀವನ ಮೌಲ್ಯಗಳೆನಿಸಿದ್ದವು. "ಈಯಲ್ ಇರಿಯಲ್ ಶರಣ್ಬುಗೆ ಕಾಯಲ್ ಕ್ಷತ್ರಿಯರೇ ಬಲ್ಲರ್" ಎಂದು ಮುಂತಾಗಿ ಈ ಮೌಲ್ಯಗಳನ್ನು ಗದಾಯುದ್ಧ ಘೋಷಿಸುತ್ತದೆ. ಇವುಗಳಲ್ಲಿ ಶೌರ್ಯವನ್ನು ಕುರಿತು ಹೇಳುವುದಾದರೆ ಕುಮಾರರಾಮ ಜೀವನದುದ್ದಕ್ಕೂ ಯುದ್ಧೋತ್ಸಾಹವನ್ನು ಮೆರೆದ ವ್ಯಕ್ತಿಯಾಗಿದ್ದಾನೆ. ಮಿಕ್ಕಕಾವ್ಯಗಳಿಗಿಂತ ಇಲ್ಲಿ ಯುದ್ಧ ಘಟನೆಗಳು ಹೆಚ್ಚು ವಿಸ್ತಾರವಾಗಿ ತೋರಿಬರುತ್ತವೆ. ಗುತ್ತಿಯ ಜಗದಪ್ಪನ ಯುದ್ಧ (೬ನೆಯ ಸಂಧಿ) ಹೊಯ್ಸಳ ಬಲ್ಲಾಳನ ಯುದ್ಧ (೪,೫ನೆಯ ಸಂಧಿ), ಓದುಗಲ್ಲ ಪ್ರತಾಪರುದ್ರನ ಯುದ್ಧ (೭,೮,೯, ನೆಯ ಸಂಧಿ) ಗಳು ಇಲ್ಲಿ ತುಂಬ ವಿವರವಾಗಿ ವರ್ಣಿಸಲ್ಪಟ್ಟಿವೆ. ನೇಮಿಯೊಂದಿಗಿನ ಎರಡು ಕಾಳಗ, ಮಾತಂಗಿಯೊಂದಿಗಿನ ಒಂದು ಕಾಳಗ ಸಹಜವಾಗಿಯೇ ಈ ಕೃತಿಯ ಬಹುಭಾಗವನ್ನು ವ್ಯಾಪಿಸಿವೆ.

ಶೌರ್ಯಕ್ಕೆ ಮೆರುಗು ಪ್ರಾಸ್ತವಾಗುವುದು ಸ್ತ್ರೀವಿಷಯದ ಶೌಚಗುಣದಿಂದ. ಕುಮಾರರಾಮ ಇಂದಿಗೂ ಮಾನ್ಯನಾಗಿರುವುದು ಈ ಮೌಲ್ಯ ಕಾರಣವಾಗಿ. ಇವನ ಜೀವನದಲ್ಲಿ ಮೂರು ಜನ ಸ್ತ್ರೀಯರು ಪಾತ್ರಮಾಡಿದ್ದಾರೆ. ಒಬ್ಬಳು ರತ್ನಾಜಿ, ಇನ್ನೊಬ್ಬಳು ಮಾತಂಗಿ, ಮತ್ತೊಬ್ಬಳು ಬಾಬಮ್ಮ. ಇವರಲ್ಲಿ ರತ್ನಾಜಿ ಕುಮಾರರಾಯನ ಶೌಚಕ್ಕೆ ಒರೆಗಲ್ಲಾಗಿ, ಮಾತಂಗಿ ಹಿಂದಿನ ಜನ್ಮದ ಸೇಡುತ್ತಿರಿಸಿಕೊಳ್ಳುವ ಹಂತಕಿಯಾಗಿ, ಬಾಬಮ್ಮ ವಿಫಲಪ್ರೇಮಿಯಾಗಿ ಚಿತ್ರಿತರಾಗಿದ್ದಾರೆ. ಅಂಬೆಯನ್ನು ಒಲ್ಲದಿರುವ ಮತ್ತು ಪುರುಷಸ್ತ್ರೀ ಶಿಖಂಡಿಯನ್ನು

ಕೊಲ್ಲದಿರುವ ಭೀಷ್ಮನಂತೆ ಕುಮಾರರಾಮ ರತ್ನಾಜಿಯನ್ನು ಒಲ್ಲದವನಾಗಿದ್ದಾನೆ, ಮಾತಂಗಿಯನ್ನು ಕೊಲ್ಲದವನಾಗಿದ್ದಾನೆ. ರತ್ನಾಜಿ ಸತ್ತು ಮಾತಂಗಿಯಾಗಿ ಹುಟ್ಟಿ ಕುಮಾರರಾಮನನ್ನು ಕೊಂದಳೆಂಬ ಇಲ್ಲಿಯ ತಿರುವು ಅಂಬೆ ಸತ್ತು ಶಿಖಂಡಿಯಾಗಿ ಹುಟ್ಟಿ ಭೀಷ್ಮನ ಹರಣಮಾಡಿದನ್ನು ನೆನಪಿಸುತ್ತದೆ.

ಶರಣಾಗತ ರಕ್ಷಣೆ ಈ ಕೃತಿಯ ಕೇಂದ್ರ ಮೌಲ್ಯ. ದಿಲ್ಲಿ ಸುಲ್ತಾನನ ವಿರೋಧ ಕಟ್ಟಿಕೊಂಡು ಮೊರೆಹೊಕ್ಕ ಬಹಾದ್ದೂರ (ಬಹಾವುದ್ದೀನ)ನನ್ನು ರಕ್ಷಿಸಿದುದೇ ಕುಮಾರರಾಮ ಮತ್ತು ದಿಲ್ಲಿ ಸುಲ್ತಾನರ ನಡುವಿನ ಕಾಳಗಕ್ಕೆ ಕಾರಣವಾಯಿತು. ಅದು ಕುಮಾರರಾಮನ ಮರಣದಲ್ಲಿ ಪರ್ಯವಸಾನಗೊಂಡಿತು. ಮುಂದೆ ಒದಗಬಹುದಾದ ಆಪತ್ತನ್ನೂ, ತನ್ನ ಸಾಮರ್ಥ್ಯವನ್ನೂ ಪರಿಗಣಿಸದೇ ನೀಡಿದ ರಕ್ಷಣೆ ಮೌಲ್ಯಕ್ಕಾಗಿ ತೆತ್ತ ಬಲಿದಾನವಾಗಿದೆ.

ಈ ಮೂರು ಮೌಲ್ಯಗಳು ಮಿಕ್ಕ ಕೃತಿಗಳಂತೆ ಈ ಕೃತಿಯ ತುಂಬವೂ ವಿಜೃಂಭಿಸುತ್ತಿವೆ. ಚಾರಿತ್ರಿಕ ಅಂಶಗಳನ್ನು ಕುರಿತು ಹೇಳುವುದಾದರೆ ಇಲ್ಲಿ ರತ್ನಾಜಿ ಡೊಂಬರ ಹೆಣ್ಣು. ಕುಮಾರರಾಮ ಬೈಚಪ್ಪನ ಅಳಿಯ, ಕುಮಾರರಾಮನ ಹೆಂಡತಿ ಸುಭದ್ರೆಯ ಮಗ ಜಟ್ಟಂಗಿರಾಮ, ಈತನು ತಂದೆಯ ಬಳಿಕ ರಾಜ್ಯವಾಳಿದ, ರತ್ನಾಜಿಗೆ ಎಲ್ಲರಸನೆಂಬ ಮಗನಿದ್ದು ತೆಲುಗನಾದ ಈತ ಮಾತಂಗಿಯೊಂದಿಗೆ ಪಿತೂರಿ ನಡೆಸಿ ಕುಮಾರರಾಮನ ಮರಣಕ್ಕೆ ಕಾರಣನಾದ, ಕುಮಾರರಾಮನ ಕುದುರೆ ಬೊಲ್ಲ ಕೊನೆಯಲ್ಲಿ ಶಿಲೆಯಾಗಿ ಮಾರ್ಪಾಡು ಹೊಂದಿತು, ಕುಮಾರರಾಮ ಹುಟ್ಟಿದ್ದು "ಶ್ರಾವಣ ಮಾಸ ಸ್ಥಿತಿ (ಸಿತ?) ಪಂಚ ಗುರುವಾರ ಜಾವ ಎರಡನೆಯ ಏಳುಗಳಿಗೆ ಪವುರ್ನೋಮಿ ಚಂದ್ರಮ ಪೂರ್ವದೊಳಿಪ್ಪಂತೆ." ಈತನು ಬಾಳಿದ್ದು ಮೂವತ್ತು ವರ್ಷ. ಇತ್ಯಾದಿ ವಿವರಗಳು ಈ ಕೃತಿ ನೀಡುವ ಹೊಸ ಚಾರಿತ್ರಿಕ ಸಂಗತಿಗಳಾಗಿವೆ.

ಹೀಗೆ ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರ ಪರಿವಾರ ಮತ್ತು ಪರಿಸರದ ಸಂಸ್ಕೃತಿ- ಚರಿತ್ರೆ ಇಲ್ಲಿ ದಟ್ಟವಾಗಿ ಹರಡಿದೆ. ನಿತ್ಯಜೀವನ ವ್ಯವಹಾರಗಳು, ವಿಶಿಷ್ಟ ಆಚರಣೆಗಳು, ಘಟನೆಗಳು ಇತ್ಯಾದಿಗಳಲ್ಲೆಲ್ಲ ಅಂದಿನ ಜನರ ಮಾತು, ಕೃತಿ-ಇವುಗಳ ಹಿಂದಿರುವ ಮನಸ್ಸುಗಳು ಎದ್ದು ಕಾಣುತ್ತವೆ. ಈ ಸಾಂಗತ್ಯ ಕೃತಿಯ ನಡುವೆ ಅಲಲ್ಲಿ ಸಂದರ್ಭೋಚಿತವಾಗಿ ಬಳಸಿದ ಧವಳ, ಯಾಲಪದ, ಜೋಗುಳಪದ, ಒರಳಕ್ಕಿಪದಗಳೆಂಬ ದೇಶೀಮುಟ್ಟುಗಳು ಈ ಕೃತಿಯ ಜಾನಪದೀಯತೆಗೆ ಸಾಕ್ಷಿಯಾಗಿವೆ. ಇವುಗಳಲ್ಲದೆ ಪರಕೀಯ ಮುಸಲ್ಮಾನ ಸಂಸ್ಕೃತಿಯ ಸಮನ್ವಯ ಸಂಘರ್ಷಗಳಿಂದುಂಟಾದ ವಿಶಿಷ್ಟ ಸಂದರ್ಭವನ್ನು ಈ ಕೃತಿಯಲ್ಲಿ ಕಾಣುತ್ತೇವೆ. ಒಟ್ಟಾರೆ, ಸಾಹಿತ್ಯಿಕ ಅಭ್ಯಾಸಕ್ಕಿಂತ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಭ್ಯಾಸಕ್ಕೆ ಈ ಕೃತಿ ಒಂದು ದೊಡ್ಡ ಗಣಿಯೆಂದೇ ಹೇಳಬೇಕು. ಈ ಗಣಿಯನ್ನು ಇತಿಹಾಸದೊಂದಿಗೆ, ಅಲ್ಲಲ್ಲಿ ಉಳಿದಿರುವ ಅವಶೇಷ-ಆಚರಣೆಗಳೊಂದಿಗೆ ಹೋಲಿಸಿ ನೋಡುವುದು ಅವಶ್ಯವಿದೆ.

ಕೊರಳಿಗೆ ಕೊರಳು:

ಕುಮ್ಮಟದುರ್ಗದ ಕಾಳಗದಲ್ಲಿ ಸೋತು ಹಿಂದಿರುಗುತ್ತಲ್ಲಿದ್ದ ಮಾತಂಗಿಯ ಮುಸಲ್ಮಾನ ಸೈನ್ಯಕ್ಕೆ ಪತ್ರಕಳುಹಿ, ಮತ್ತೆ ಏರಿಬರಬೇಕೆಂದೂ, ತಾವು ಕುಮ್ಮಟದುರ್ಗದ ಕೋಟೆ ಬಾಗಿಲು ತೆರೆದು ನೆರವಾಗುವೆವೆಂದೂ ತಿಳಿಸಿದವರು, ಕುಮಾರರಾಮನ ಸೈನ್ಯದಲ್ಲಿದ್ದ ತೆಲುಗರು. ನೆರೆಮನೆಯವರೇ ಅಂತರಂಗದ ವೈರಿಗಳೆಂಬಂತೆ ಇವರು ನಡೆದುಕೊಂಡರು. ಇವರ ಆಮಂತ್ರಣದ ಪ್ರಕಾರ ಮಾತಂಗಿ ಸೈನ್ಯದೊಂದಿಗೆ ಮರಳಿದಳು. ತೆಲುಗರು ಕೋಟೆಬಾಗಿಲ ತೆರೆದರು. ಮುಸಲ್ಮಾನಸೈನ್ಯ ಒಳನುಗ್ಗಿತು. ವಿಜಯದ ಸಂತೋಷದಲ್ಲಿ ಮಗ್ನರಾಗಿದ್ದ ಕುಮಾರರಾಮ ಮತ್ತು ಅವನ ಸೈನಿಕರಿಗೆ ಅಸಹಾಯಕ ಸ್ಥಿತಿ ನಿರ್ಮಾಣವಾಯಿತು. ಏರಿಬಂದ ಮಾತಂಗಿ ರಾಮನ ರುಂಡ ಕತ್ತರಿಸಿದಳು. ಒಂದರ್ಥದಲ್ಲಿ ಮುಸಲ್ಮಾನರ ಸಹಾಯದಿಂದ ತೆಲುಗರು ಕನ್ನಡಿಗ ರಾಮನ ಕೊರಳು ಕತ್ತರಿಸಿದ ಈ ಘಟನೆ ಕನ್ನಡಿಗರ ಮನಸ್ಸನ್ನು ಗಾಸಿಗೊಳಿಸಿತು. ತೆಲುಗರು ಈ ವಿದ್ರೋಹ ಕನ್ನಡಿಗರ ಮನಸ್ಸಿನಲ್ಲಿ ಜೀವಂತವಾಗಿ ಉಳಿಯಿತು.

ಈ ಘಟನೆ ಜರುಗಿದುದು ೧೩೨೭ರಲ್ಲಿ. ಮುಂದೆ ಒಂದು ದಶಕ ಕಳೆಯುವುದರೊಳಗಾಗಿ ಅಳಿದುಳಿದ ಕುಮ್ಮಟದುರ್ಗದ ಕನ್ನಡ ವೀರರು ನೆರೆಯ ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಮೊದಲು ಸಂಗಮ (೧೩೩೬-೧೪೮೫), ತರುವಾಯ ಸಾಳುವ(೧೪೮೫-೧೫೦೫)ರೆಂಬ ಕನ್ನಡಿಗರು ಈ ರಾಜ್ಯವನ್ನು ಆಳಿದರು. ಆ ಮೇಲೆ ಕನ್ನಡಿಗನೇ ಆದ ತುಳುವ ನರಸನಾಯಕ (೧೪೯೧ - ೧೫೦೩), ಬಳಿಕ ಆಳಿದ ಆತನ ಮಗ ವೀರಸಿಂಹ(೧೫೦೩-೬)ನ ಆಳಿಕೆಯನ್ನು ಕೊನೆಗೊಳಿಸಿ, ತೆಲುಗುಪಕ್ಷಪಾತಿ ಇನ್ನೊಬ್ಬ ಮಗ ಕೃಷ್ಣದೇವರಾಯ (೧೫೦೯-೧೫೨೯)ಪಟ್ಟವೇರಿದ. ಈತನ ಕಾಲದಲ್ಲಿ ಕನ್ನಡರಾಜ್ಯ ತೆಲುಗರ ಪ್ರಭಾವಕ್ಕೆ ಒಳಗಾಯಿತು. ಬಳಿಕ ಕನ್ನಡಿಗನಾದ ಅಚ್ಯುತ (೧೫೨೯-೪೨) ಅಧಿಕಾರಕ್ಕೆ ಬಂದರೂ, ಕೃಷ್ಣದೇವರಾಯನ ಅಳಿಯ ತೆಲುಗ ರಾಮರಾಯನೇ ಆಡಳಿತ ಸೂತ್ರಹಿಡಿದ. ಅಚ್ಯುತನ ತರುವಾಯ ಮಗ ವೆಂಕಟ (೧೫೪೨), ತಮ್ಮನ ಮಗ ಸದಾಶಿವ (೧೫೪೨-) ಆಳಿದರೂ ತೆಲುಗ ರಾಮರಾಯನೇ (೧೫೪೨-೬೫) ತನ್ನ ಆಡಳಿತ ಮುಂದುವರಿಸಿದ.

ಹೀಗೆ ಕೃಷ್ಣದೇವರಯನ ಕಾಲದಿಂದಲೂ ಕನ್ನಡ ಸಿಂಹಾಸನದ ಪ್ರತ್ಯಕ್ಷ - ಪರೋಕ್ಷವಾಗಿ ತೆಲುಗರ ಪಾಲಾದುದು, ಹಂಪಿ ವಿರೂಪಾಕ್ಷನ ಶೈವ ಪರಿಸರದಲ್ಲಿ ತಿರುಪತಿ ತಿಮ್ಮಪ್ಪನ ವೈಷ್ಣವ ವಾತಾವರಣ ನಿರ್ಮಾಣವಾದುದು ಕನ್ನಡಿಗರ ಸ್ವಾಭಿಮಾನವನ್ನು ಕೆಣಕಿತು. ತೆಲುಗರು ಕುಮಾರರಾಮನ ಕೊರಳು ಕತ್ತರಿಸಿದ ನೋವು ೩೦೦ ವರ್ಷ ಕಳೆದರೂ ಕನ್ನಡಿಗರಲ್ಲಿ ಶಮನವಾಗಿರಲಿಲ್ಲ. ಇಂಥ ಪ್ರಸಂಗದಲ್ಲಿ ಮತ್ತೆ ತೆಲುಗರೇ ಆಡಳಿತ ನಡೆಸಿದುದು, ಆ ನೋವನ್ನು ಇಮ್ಮಡಿಸಿತು. ಕೊರಳು ಕತ್ತರಿಸಿದುದಕ್ಕೆ ಕೊರಳು ಕತ್ತರಿಸುವುದೇ ಉತ್ತರವೆಂದು ನಿರ್ಧರಿಸಿದಂತೆ ತೋರುತ್ತದೆ. ಹೀಗಾಗಿ, ಮುಸಲ್ಮಾನರ ನೆರವಿನಿಂದ ತೆಲುಗರು ಕನ್ನಡಿಗ ಕುಮಾರರಾಮನ ಕೊರಳು ಕತ್ತರಿಸಿದುದಕ್ಕೆ ಪ್ರತಿಯಾಗಿ, ತಾವೂ ಮುಸಲ್ಮಾನರ ನೆರವಿನಿಂದ ತೆಲುಗ ರಾನುಮರಾಯನ ಕೊರಳು ಕತ್ತರಿಸಿ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದರೆನಿಸುತ್ತದೆ. ಅದಕ್ಕಾಗಿಯೇ ಕುಮಾರ "ರಾಮ"ನ ಕೊರಳಿಗೆ ಪ್ರತಿಯಾಗಿ "ರಾಮ" ರಾಯನ ಕೊರಳು ಕತ್ತರಿಸಿ, ತೆಲುಗರ ಹಿಡಿತದಿಂದ ವಿಜಯನಗರ ಸಾಮ್ರಾಜ್ಯವನ್ನು ಮುಕ್ತಗೊಳಿಸಿದರು.

ಕುಮಾರ(ಸ್ವಾಮಿ)ರಾಮು:

ಜಟ್ಟಂಗಿರಾಮ ದೈವತದ ವರದಿಂದ ಹುಟ್ಟಿದ ಕಾರಣ ಕಂಪಿಲರಾಯ ತನ್ನ ಮಗನಿಗೆ ರಾಮ ರಾಮನಾಥ ಅಥವಾ ರಾಮಯ್ಯನೆಂದು ಹೆಸರಿಟ್ಟಿರುವುದು ಸಹಜ. ಆದರೆ ಈ ಹೆಸರು ಕುಮಾರ ವಿಶೇಷಣದೊಂದಿಗೆ ಪ್ರಸಾರಗೊಂಡುದಕ್ಕೆ ಕಾರಣವೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ನಮ್ಮ ಇತಿಹಾಸದಲ್ಲಿ (ರಾಜನ) ಮಗ ಅರ್ಥದಲ್ಲಿ 'ಕುಮಾರ'ಎಂಬ ವಿಶೇಷಣವನ್ನು ಹೆಸರಿನೊಂದಿಗೆ ಬಳಸಿದ ಉದಾಹರಣೆಗಳಿಲ್ಲವಾಗಿ, ಇದು ಬೇರೆ ಅರ್ಥವನ್ನು ಸೂಚಿಸುತ್ತಿರಬಹುದು.

ಷಣ್ಮುಖನ ಇನ್ನೊಂದು ಹೆಸರು ಕುಮಾರ. ಕಂಪಿಲನ ರಾಜಧಾನಿ ಹೊಸಮಲೆದುರ್ಗದ ಸಮೀಪದಲ್ಲಿರುವ ಸಂಡೂರಿನ ಕುಮಾರಸ್ವಾಮಿ ಆ ಪ್ರದೇಶದ ಬಹುದೊಡ್ಡ ದೈವತ. ಈ ಕುಮಾರಸ್ವಾಮಿ ಶೌರ್ಯ ಮತ್ತು ಶೌಚಗಳ ಪ್ರತೀಕ. ಹುಟ್ಟಿದ ಏಳನೆಯ ದಿನಕ್ಕೆ ದೇವಸೇನಾನಿಯಾಗಿ ತಾರಕಾಸುರನನ್ನು ವಧೆಮಾಡಿದ ಈತನ ಶೌರ್ಯ ಪುರಾಣಪ್ರಸಿದ್ಧ. ಆಜನ್ಮಬ್ರಹ್ಮಚಾರಿಯಾಗಿದ್ದ ಕಾರಣ ಈತನ ಶೌಚವೂ ಪುರಾಣಪ್ರಸಿದ್ಧ. ಶೌರ್ಯ ಮತ್ತು ಶೌಚದಲ್ಲಿ ಈ ಷಣ್ಮುಖನನ್ನು ಹೋಲುವನೆಂಬ ಅರ್ಥದಲ್ಲಿ ಕಂಪಿಲನ ಮಗ ರಾಮನಿಗೆ ಕುಮಾರ+ರಾಮ ಎಂಬ ಹೆಸರು ಪ್ರಚಾರಗೊಂಡತಿದೆ. ಬಹುಶಃ ಕರ್ನಾಟಕದಲ್ಲಿ ಕುಮಾರರಾಮನಿಂದ ಆರಂಭವಾದ ಶೌರ್ಯ-

ಶೌಚಗಳ ಸಮನ್ವಯನಾದ ವ್ಯಕ್ತಿಗೆ 'ಕುಮಾರ' ಅಂಟಿಸುವ ಪರಿಕಲ್ಪನೆ ಬೇರೆ ಅರಸು ಮಕ್ಕಳ ವಿಷಯದಲ್ಲಿಯೂ ಮುಂದುವರಿದಂತಿದೆ. ಇಮ್ಮಡಿ ಚಿಕ್ಕಭೂಪಾಲನ ಮಗ ತೋಂಟದರಾಯ ಸಿರುಮನ ಮಗ ಮಲ್ಲ ಕ್ರಮವಾಗಿ ಕುಮಾರ ತೋಂಟದರಾಯ, ಕುಮಾರ ಮಲ್ಲರೆಂದು ಕಾವ್ಯದಲ್ಲಿ ಕೀರ್ತಿತರಾದುದು ಇದಕ್ಕೆ ಉದಾಹರಣೆಯೆನಿಸಿದೆ.

ಕೃತಜ್ಞತೆ

ಹಂಪೆಯ ಮಹಾಲಿಂಗಸ್ವಾಮಿಯ "ಬಾಲರಾಮನ ಸಾಂಗತ್ಯ"ದ ಹಸ್ತಪ್ರತಿ ಹುಡುಕ ಹೊರಟ ನನಗೆ ಕೆಂಚಸೆಟ್ಟಿಸುತರಾಮನ 'ಸಿರುಮನ ಚರಿತೆ'ಯ ಹಸ್ತಪ್ರತಿ ಸಿಕ್ಕಿತು. ಅದನ್ನು ಪ್ರಕಟಿಸಿದೆ (೧೯೬೧). ಮುಂದುವರಿದ ನನ್ನ ಪ್ರಯತ್ನದ ಫಲವಾಗಿ ಬಾಲರಾಮನ ಸಾಂಗತ್ಯವೂ ಸಿಕ್ಕು, ಈಗ ಪ್ರಕಟವಾಗುತ್ತಲಿದೆ. ಈ ಎರಡೂ ಕೃತಿಗಳನ್ನು ಮೂಲತಃ ಬೆಳಕಿಗೆ ತಂದವರು ಶ್ರೀ ಹುಲ್ಲೂರ ಅವರು. ತಾವು ಪ್ರಕಟಿಸಬೇಕೆಂದು ಇವೆರಡನ್ನೂ ಕಷ್ಟಪಟ್ಟು ಪ್ರತಿ ಮಾಡಿಕೊಂಡಿದ್ದವರು, ಪ್ರತಿ ಮಾಡಿಸಿದ್ದವರು ಡಾ|| ವರದರಾಜರಾವ್ ಅವರು. ಇವುಗಳಲ್ಲಿ ೧೯೩೪ಳರಷ್ಟು ಪೂರ್ವದಲ್ಲಿಯೇ ಬೆಳಕಿಗೆ ಬಂದಿದ್ದ ಬಾಲರಾಮನ ಸಾಂಗತ್ಯ ೬೦ ವರ್ಷಗಳ ಬಳಿಕ ಪರಿಷ್ಕರಣಗೊಂಡು ಪ್ರಕಟವಾಗುತ್ತಲ್ಲಿರುವುದು, ನನ್ನಿಂದ. ಇದೆಲ್ಲ ಯೋಗಾಯೋಗ. ಈ ಇಬ್ಬರೂ ವಿದ್ವಾಂಸರಿಗೆ ಕೃತಜ್ಞ.

ಗ್ರಂಥ ಸಂಪಾದನೆಗೆ ಮೂಲಸಾಮಗ್ರಿ ಹಸ್ತಪ್ರತಿ. ಜಿ. ವರದರಾಜರಾವ್ ಅವರು ಪ್ರತಿಮಾಡಿದ್ದ ಅರ್ಧಪ್ರತಿ, ಪ್ರತಿಮಾಡಿಸಿದ್ದ ಪೂರ್ಣ ಪ್ರತಿ - ಹೀಗೆ ಒಂದೂವರೆ (ಕಾಗದ) ನಕಲು ಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿದ್ದವು. ಇವುಗಳನ್ನು ಬಳಸಿಕೊಳ್ಳಲು ಸಮ್ಮತಿಸಿದವರು ಸಂಸ್ಥೆಯ ಮುಖ್ಯಸ್ಥರಾದ ಡಾ|| ಸಿ.ಪಿ. ಸಿದ್ಧಾಶ್ರಮ ಅವರು ಮತ್ತು ಹಸ್ತಪ್ರತಿ ವಿಭಾಗದ ಮುಖ್ಯಸ್ಥರಾದ ಶ್ರೀ ಮೈಲಹಳ್ಳಿ ರೇವಣ್ಣ ಅವರು. ಈ ನಕಲು ಪ್ರತಿಗಳು ಕನ್ನಡ ಅಧ್ಯಯನ ಸಂಸ್ಥೆಯಲ್ಲಿವೆಯೆಂದು ಸೂಚಿಸಿದರು, ಶ್ರೀ ಎಸ್. ಶಿವಣ್ಣನವರು ಮತ್ತು ಇವುಗಳನ್ನು ದೊರಕಿಸಿಕೊಳ್ಳುವಲ್ಲಿ ನೆರವಾದವರು ಶ್ರೀಮತಿ ವೈ.ಸಿ.ಭಾನುಮತಿ ಅವರು. ಇವರೆಲ್ಲರಿಗೆ ಕೃತಜ್ಞ.

ನನ್ನ ಪ್ರಕಾರ ಕುಮಾರರಾಮನನ್ನು ಕುರಿತು ಹುಟ್ಟಿದ ಮುಖ್ಯಕೃತಿಗಳು ಐದು. ಇವುಗಳಲ್ಲಿ ನಂಜುಂಡನದು ಈಗಾಗಲೇ ಪ್ರಕಟವಾಗಿದೆ. ಮಿಕ್ಕ ನಾಲ್ಕನ್ನು ಪ್ರಕಟಿಸುವ ನನ್ನ ದೊಡ್ಡಯೋಜನೆಯ ಅಂಗವಾಗಿ ಎರಡು ಕೃತಿಗಳನ್ನು ಈಗಾಗಲೇ ನಾನು ಪ್ರಕಟಿಸಿದ್ದು, ಮೂರನೆಯ ಕೃತಿಯನ್ನು ಸದ್ಯೆ ಪ್ರಕಟಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಹಳೆಯ ಕುಮಾರರಾಮನ ಸಾಂಗತ್ಯವೊಂದನ್ನು ಪ್ರಕಟಿಸಿದರೆ ಈ ಯೋಜನೆ ಪೂರ್ಣಗೊಳ್ಳುತ್ತದೆ. ಈ ಮೂರನೆಯ ಕೃತಿಯೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಲು ಅವಕಾಶಮಾಡಿಕೊಟ್ಟ ಮಾನ್ಯಮಿತ್ರರೂ ಕುಲಪತಿಗಳೂ ಆಗಿರುವ ಡಾ|| ವಿವೇಕ ರೈ ಅವರಿಗೆ, ಪ್ರಸಾರಾಂಗದ ನಿರ್ದೇಶಕರೂ ಆತ್ಮೀಯರೂ ಆಗಿರುವ ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ವಂದನೆಗಳು. ಡಿ.ಟಿ.ಪಿ. ಕೆಲಸವನ್ನು ಪೂರೈಸಿದ ಧಾರವಾಡ ವಚನ ಗ್ರಾಫಿಕ್ಸ್ ಒಡೆಯರಾದ ಶ್ರೀ ದೇವರಾಜ ನಾಡಿಗ ಅವರಿಗೂ, ಅಂದವಾಗಿ ಮುದ್ರಿಸಿದ ಅವರಿಗೂ ಮುಖಪುಟವನ್ನು ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳೆ ಅವರಿಗೂ ಧನ್ಯವಾದಗಳು.

❖❖

*

ಪರಿವಿಡಿ

ಸಂಧಿ : ಒಂದು

❖

ಗೊಲ್ಲರ ಕಾಟಣ್ಣ : ರಾಜಪುತ್ರ, ಡೊಂಬರ ರತ್ನಾಜಿ : ರಾಜಪತ್ನಿ

---

[೧][ತ್ರಿಪದಿ]

ರಾಮನಾಥನ ಪ್ರೇಮದ ಚರಿತೆಯ
ತಾಮಸವಿಲ್ಲದೆ ಪೇಳುವೆ। ಭೂಮಿಪ[ನೆ]
ಒಲಿದು ಲಾಲಿಸು ಮುದದಿಂ ॥

ಕಾಮಹರನೊಲವಿಂದ ಪಡೆದ ಕಾಳಗ ಗತಿಯ
ಪೇಳಲಳವೆ.... ಕಲ್ಕಿಯೊಳು ಕ[ಥೆ]ಯಂ॥

[ಸಾಂಗತ್ಯ][೨]

ಶ್ರೀ ಗಿರಿಜಾ ಶಂಭು ಕುವರನೆ ಗಣಪತಿ ।
ಪ್ರೇಮದಿ ಸಾಗಿಸು ಕೃತಿಯ ।
[ಆ]ಗಿಸು ಶ್ರುತಿಸಾರ ಜಿಹ್ವಾಗ್ರದೊಳು ನಿಂದು ।
ಪಾರ್ವತಿಯಣುಗ ಗಣೇಶ ॥೧॥

ಸಾಸಿರ [ಹೆ]ಡೆಯನ [ಭೂಷಣ]ವನ್ನಿಟ್ಟ ।
ಮೂಷಕವಾಹನ ಪಿತನೆ ।

---

೧. +ಶ್ರೀ ಗಣಾಧಿಪತಾಯೇಂ ನಮಃ ॥ ಶ್ರೀ ಶಾರದಾಂಬಾಯಂನ್ನಮಃ ಸಿದ್ಧರಾಮೇಶ್ವಾರನಾ ಪಾದವೇ ಗತಿ ಮತ್ತಿ ॥ ರುಧಿರೋದ್ಗಾರಿ ಸಂ ಮಾರ್ಗಿಸಿರ ಬಹುಳ ೫ ಲ್ಲು ಚೀಲಾನಹಳ್ಳಿ ಮರುಳಸಿದ್ಧಪ್ಪನ ಮಮ್ಮಗ ಮರಿದೇವರು ತಾನು ತನ್ನ ಪ್ರಿಯೋಕ್ತಿಯಿಂದಾ ಬರಕೊಟ್ಟಂತ್ತಾ ಕಾಟ್ಟನರೆ ದೊಡ ತ್ರಿಂಮಂಣಗೆ । ಬಾಲಕೊಮಾರರಾಮನ ಸಂಗತ್ಯ ಬರೆಉದಕೆ ಶುಭಮಸ್ತು । ನಿರ್ವಿಗ್ನಾಮಸ್ತು।
ಉ‍್ರದ್ದಿರಸ್ತು । ದನ ಕನಕಮಸ್ತು ಸ್ತಿರಸ್ತು ॥ಕಂದ॥ (ಮೂ)

೨ - ೨. ಪದನು

ಪ್ರಾಸಡಿ ಬೀಳದೆ ನಿರ್ಮಲ ಮತಿಯಿತ್ತು ।
ಈಶ ಕೊಡೆನಗೆ ಸತ್ಕೃಪೆಯ ॥೨॥

ಕಾಯವಿಲ್ಲದವನ [ಸರ್ಪನಯ್ಯನಾ]ರೂಢ ।
ನಾಗಿಹ ನಾನಾಮ[ಯ]ಜನ ।
ಮಾಡಿ[ಯೆ] ನಯನದಿ ಬೂದಿ ಭಸಿತವನಿಟ್ಟ ।
ಏಣಾಂಕಧರನೆ ಕೊಡು ಮತಿಯ ॥೩॥

ನರಮುಖವತಿಗಳೆದು ಕರಿಮುಖ ಧರಿಸಿದೆ ।
ಒಲಿದು ಮೂಷಕವನೇರಿದನೆ ।
ವಿವಹವನೊಲ್ಲದೆ ಬಲಿದೆ ಶಾಸ್ತ್ರವನ[ನ]ಘು ।
ತಗಡೂರ ಬೆನವ ಕೊಡು ಮತಿಯ ॥೪॥

ಭಾರತಿ [ಬ್ರಹ್ಮಾಣಿ] ಪಾಲಿಸು ಮತಿಯನು ।
ವೇದವಾಕ್ಯದೊಳು ಬಲ್ಲಿದಳೆ।
ಆಡಿಸು ನುಡಿ ಜಿಹ್ವೆ ತುದಿಯಾಗ್ರದೊಳು ನಿಂದು ।
ಹಾದಿವಿಡಿದಂತೆ ಬಲ್ಲವರು ॥೫॥

ಪ್ರಳಯ ಕಾಲವ ಗೆದ್ದೆ ಭುವನವ ಹೆಪ್ಪಿಟ್ಟೆ ।
ಸಲಹುವೆ ಜಗವ ಸಂತವಿಸಿ।
ಗೆಲಿದೆ ಪಾಪವ ಕಲ್ಯಾಣದೊಳು ಬಂದು ।
ಬಸವರಾಜನೆ ಕೊಡು ಮತಿಯ ॥೬॥

ಮರುಳಾಗಿ ದಕ್ಷನ .... ಹೋಮವನಿಡಲು ।
ಬೆವರೊಳು .... ಜನಿಸಿ ।
ನವಕೋಟಿ ಅಸುರರ ಸಂಹರಿಸಿ ಬ್ರಹ್ಮನ ।
ಶಿರ ಹೊಡೆದೀಶಗೆ ಶರಣು ॥೭॥

ದೇವತೆ ಭಜನೆಯ ಮಾಡಿದೆ ಬಲ್ಲಂತೆ ।
ಕೊಂಡಾಡುವೆ ಕವಿಸ್ತೋಮವನು।
ಕಾಳಿದಾಸನು ಕನಕ ತಾಳಪದ ಚೆನ್ನ ।
ಮೇಲೆ ಪುರಂದರ ವಿಠಲ ॥೮॥

ಹರಕವಿ ಹಂಪೆಯ ಹರಿ ರಾಘವಾಂಕರ ।
ಕೆರೆಯ ಪದ್ಮರಸ ಕವಿಲಿಂಗ।
ಚರಣಾರವಿಂದಕ್ಕೆ ಎರಗಿ ವಂದನೆ ಮಾಡಿ।
ಕಡಲ ವಿಸ್ತರವ ವರ್ಣಿಸುವೆ ॥೯॥

ವರಕವಿಗಳನು ವಂದಿಸಿ ಮುಂದಲ।
ನರಕವಿಗಳನು ಕೀರ್ತಿಸುವೆ ।
[ಒರೆವೆನು] ಕೃತಿಯನು ನುಡಿ ತಪ್ಪು ಕಂಡಡೆ ।
ಜರಿದಾಡದೆನ್ನ ತಿದ್ದುವುದು ॥೧೦॥

ಆದಡೆ ಅಪನಿಂದೆ ಓದುವ ನಿಪುಣರು ।
ಬೀಳಾಗಿ ಇರಲು ಅಕ್ಷರದಿ ।
ಕೂಡಿಕೊಂಬುದು ನಿಮ್ಮವನೆಂದು ಕವಿವರ್ಣ ।
[ಕೂಡಲು ಒಳ್ಳಾವಿಸಿ] ನೆಲೆಯ ॥೧೧॥

ಹಿಂದು ಮುಂದಲ ಕವಿಗೆ ವಂದಿಸಿ ಸಾಗರದ ।
ಶೃಂಗಾರ ಸಿರಿಯನು ಒರೆವೆ।
ಕುಂಬಿನಿಯೊಳ್ಪುರ ಮಧ್ಯ ಜಂಬುದ್ವೀಪಾಂತ್ರವು ।
ಸಂಭ್ರಮದಿ ಮೆರೆ[ಯೆ] ದೇಶಗಳು ॥೧೨॥

ಜಂಬುದ್ವೀಪದ ಸುತ್ತಲಿಂಬುಗೊಂಡಿಹ ಲವಣ ।
ವೆಂಬ ಸಾಗರದ ಕಡೆಮೊದಲ।
ಕಂಡವರತಿ ಚೋದ್ಯ ಕೌಮಾರಿ ಹೊರತಾಗಿ ।
ಮುಂದೆ ನರರಿಗೆ ಸಾಧನವೆ ॥೧೩॥

ಮುತ್ತು ಶಂಖವು ಮಾಣಿಕ ರತ್ನ ವೈಢೂರ್ಯ ।
ಮೊತ್ತವು ಕಡಲ ಸ್ಥಾನದಲಿ ।
ಮತ್ತೆ ಏಳನು ದಾಂಟಿ ಕಂಡೆವೆಂಬಾತನ ।
ಮೃತ್ಯುಂಜಯ ಎನ್ನಬಹುದು ॥೧೪॥

ಮೇಘ ಪ್ರಪಂಚ ಸಾಗರದ ನೆಲೆಯ ಮೇಲೆ ।
ಬರುವಂಥ ಕಾಲಗತಿಯು ।

ಯಾರಿಗೆ ತಿಳಿಯದು ಹರಿಯಜ ಮೊದಲು ।
ಕಾಣದೆ ಕಷ್ಟಪಡಲಿಲ್ಲವೆ ॥೧೫॥

ರಾಮಕೃತಿಯ ಸಾರ ಯಾರು ಮಾಡಿದರೆಂದು ।
ಆಡರೆ ಜನರು ಲೋಕದೊಳು।
ರೂಢಿಯೊಳ್ [ಕವಿ]ರತ್ನ ಹಂಪೆಯ ಚರಪತಿ ।
ಮಾಡಿದ ಮಹಲಿಂಗಸ್ವಾಮಿ ॥೧೬॥

ರೇವಣಾಚಾರ್‍ಯರ ಮೂಲಾಗ್ರ ಶಿವಗಂಗೆ ।
ಮೇಲಣಗವಿಯ ಸ್ಥಾನಗಳು।
ರೂಢಿಯೊಳೀ ಕೃತಿ ಸ್ಥಿರಕಾಲ ನಡೆಯಲೆಂದು ।
ಮಾಡಿದ ವಿರೂಪಾಕ್ಷ ವರದಿ ॥೧೭॥

ರಾಮನ ಕೃತಿಯೊಳು ಮೊದಲಾವುದೆಂದರೆ ।
ಚತುರಾಷ್ಟಕಧಿಕ ಹಮ್ಮೀರ।
ರತ್ನಮಾಣಿಕದಂತೆ ಮೆರೆವ ಕುಮ್ಮಟದುರ್ಗ ।
ಇಪ್ಪುದು ಕಿರಣ ಪ್ರಭೆಯಂತೆ ॥೧೮॥

ಅಮರೇಂದ್ರ ನಗರಕ್ಕೆ ಮಿ[ಗಿಲಾ]ಗಿ ಎರಡನೆ ।
ಕನಕ ವೈಢೂರ್‍ಯ ತರುವ ।
ದಿನಕರನ ತುಡುಕುವ [ಕೆ]ರೆಯ ಅಗಳಿನ ನೆಲೆಯು ।
ಗಜಕೂರ್ಮ ಬೆನ್ನ ತಟ್ಟುತಲಿ ॥೧೯॥

ಮೂರು ಸುತ್ತಿನ ಕೋಟೆ ಗಾರೆಗೆತ್ತಿಗೆ ಕಟ್ಟು ।
ನೂರೆಂಟು ಫಿರಂಗಿ ತವಗ ।
ಸೂರ್‍ಯಚಂದ್ರರು ಯಮರಾಜಗೆ ಭಯವೆನಿಸಿ ।
ರಾಜಸೇವಿತಗ ...ರಿ ಮಠವು ॥೨೦॥

ಸೋಮ ಸೂರ್‍ಯರ ವೀಧಿ ಕಾಮಿನಿಯರ ಕೇರಿ ।
ವಾಮಲೋಚನೆಯರ ಕೇರಿ ।
ಮಾಣಿಕ ನವರತ್ನ ಪುಷ್ಯರಾಗವ ಕೆತ್ತೋ ।
ಜಾಣ ಪಂಚಾಳರ ಬೀದಿ ॥೨೧॥

ಹರ[ಪೂ]ಜೆ ಗುರುವರ ಹರಿಸ್ಮರಣೆಯ ಮಾಳ್ಪ ।
ಪರಮಭಕ್ತರ ಪುರದೊಳಗೆ ।
ಜಯಲಕ್ಷ್ಮಿ ವರದಿಂದ ಮೆರೆವುತಿರ್ಪುದು ನಗರ ।
ಎದೆಶೂಲವಾಗಿ ವೈರಿಗಳ ||೨೨||

ಜಗಳ ಅರಿದೆನೆ ಇರ್ಪ ಪುರದೊಳು ನೆಲೆಗೊಂಡ ।
ಮೃಗಧರ ಪರಮೇಶಲಿಂಗ ।
ಪುರದ ಜಟ್ಟಂಗಿ ರಾಮೇಶನ ಚರಿತೆಯ ।
ಪರಿಯ ಪೇಳಲು ಶೇಷಗರಿದು ||೨೩||

ಹರನ ಆಲಯದ ಗುಡಿಯ ಬಾಗಿಲ ಮುಂದೆ ।
ಕರುಮಾಡ ನಂದಿಯ ಧ್ವಜವು ।
ಮೆರೆವ ಗೋಮುಖದಿಂದ ಮಿಸುನಿ ಕಳಸದ ಪ್ರಭೆಯು ।
ಮುಸುಕುತಿರಲು ದಿನಕರನ ||೨೪||

ಧರೆಯ ಭಕ್ತರಿಗೊಲಿದು ಹರಶಂಭು ಜಟ್ಟಂಗಿ ।
ಪುರಮಧ್ಯದಲ್ಲಿ ನೆಲೆಗೊಂಡು ।
ಹಿರಿದಲ್ಲ ರಜತಾದ್ರಿ ಅರಸಿ ಪಾರ್ವತಿ ಸಹ ।
ಸ್ಥಿರಗೊಂಡ ಪೂಜೆಯ ಫಲಕೆ ||೨೫||

ಅಂತಪ್ಪ ಪುರವನನಂತ ಕಾಲದೊಳ್ ಪೊರೆವ ಭೂ ।
ಕಾಂತ ರಾಮೇಂದ್ರನ ತನುಜ।
ಪಂಥದಿಂ ಸಲಹುವ ಜಟ್ಟಂಗಿರಾಯನು ಭೂ ।
ಕಾಂತರಿಗೆ ತಲೆವಾಗದಂತೆ ||೨೬||

ಆಳುವನರುವತ್ತು ಸಾವಿರ ಕರಿ ತುರಗ ।
ಕಾಲಾಳು ಲಕ್ಷೋಪ ಬಲದಿ।
ಭೂಮಿಯ ನೃಪರಿಗೆ ಬಾಗದೆ ತಲೆ [ಸಾರ್ಚಿ] ।
ಭೋಗಾಬ್ಧಿ ಸುಖದೊಳಗಿರಲು ||೨೭||

ಧರಣಿಯ ಧೈರ್ಯಗಳು ರವಿಯ ಪರಾಕ್ರಮ ।
ಹಿಮಕರನ ಶಾಂತಿ ಸಾಗರದ ।

ಗುಣಭಾವ ಚರಿತದಿ ತನ್ನ ರಾಜ್ಯವನಾಳ್ವ ।
ಮನಸಿಜ ಜನಕನ ತೆರದಿ ||೨೮||

ರಾಯನು ಜಟ್ಟಿಂಗಿನೃಪಾಲನ ಸ್ತ್ರೀಯರ ।
ಲಾವಣ್ಯ ಪೇಳಲ್ಕೆ ಅರಿದು।
[ಕಾಮನಂಗನೆರ್ಗೆಣೆ] ಸೋಮಾಜಿ ಲಿಂಗಾಜಿ ।
ಕಾಮಸತಿಯರು ನೆಲಸಿಹರು ||೨೯||

ಇರುತೊಂದು ದಿವಸದೊಳ್ ಅರಸು ಸದರಿಗೆ ಬರಲು ।
ಪರಿವಾರ ಭಟರ ರೋಷದಲಿ ।
ವರಮಂತ್ರಿ ಕೇಣಿಕಾರರು ಪರದೊರೆಗಳ ।
ಸದರ ದೇವೇಂದ್ರ ಭೋಗದಲಿ ||೩೦||

ನೆರೆದ ವಾಲಗ ಕೇಳಿ ಗುರುವಾದ ಪ್ರಭುದೇವ ।
ಹಿಡಿದೇರಲು ಪಲ್ಲಕ್ಕಿ ಬೇಗ।
ಬಿಜಯಂಗೆಯ್ಯಾಕ್ಷಣ ಕರಡೆ ಸಮ್ಮಾಳದಿ ।
ಒಡನೆ ಜಂಗಮದ ಸಂದೋಹ ||೩೧||

ಜನ್ಮಪಾವನರೂಪ ಗುರುವ ಕಾಣುತ ನೃಪನು ।
ಬೆದರಿದನೆದ್ದು ಕರಮುಗಿದು ।
ಎರಗಿ ಸಾಷ್ಟಾಂಗವ ಕರವಿಡಿಯೆ ಗುರುರಾಯ ।
ಹರಸುತ ಮಗನ ಹರುಷದಲಿ ||೩೨||

ಬಿಜಗೊಳಿಸಿ ನೃಪವರನು ರತ್ನಪೀಠದ ಮೇಲೆ ।
ದರಹಸಿತ ವಾಲಗದಿ ಕುಳ್ಳಿರಿಸಿ।
ಎರಗುತ ನೃಪೇಂದ್ರ ಕಳೆಯಲ್ಕೆ ಆಲಸ್ಯ ।
ಒರೆಯಬೇಕೆನಗೆ ಆಗಮವ ||೩೩||

ಭಾರತ ಜೈಮಿನಿಯ ಕಾಳಗವೆಂದು ।
ಪೇಳಬೇಕೆನಗೆ ಸದ್ಗುರುವೆ।
ಆದಿಯೊಳ್ನಡೆದಂಥ ಕಾರ್ಯ ಪ್ರಸಂಗವ ।
ಪೇಳಬೇಕೆನಗೆ ಬಾಲನಿಗೆ ||೩೪||

ತನುಜ ನೋಡು ನಿಮ್ಮ ಜನಕ ಮಾಡಿದ ಕಾರ್‍ಯ ।
[ತ್ರ]ಣೆಯಲೋದುವುದು ಈ ಧರಣಿ ।
ಜೈಮಿನಿ ರಾಮಾಯಣ ಸಮ[ವು] ಭಾರತಕೆ ।
ಮಿಗಿಲಾಗಿ ಮಾಡಿ ಆಳಿದಿಹರು ||೩೫||

ದಯಮಾಡಬಹುದೆನ್ನ ಗುರು ಪರಂಜ್ಯೋತಿಯೆ ।
ಒರೆಯಬಹುದು ಅರಿಯದವಗೆ ।
ಮರಳಿ ವಂದನೆಗೈದು ಎರಗಲು ಸಾಷ್ಟಾಂಗ ।
ಒರೆವೆನು ಕೇಳು ನೃಪರಾಜ ||೩೬||

ಕಾಮಗೇತಕಿ ಭೂಪಾಲ ಲಾಲಿಸು ನಿಮ್ಮ ।
ಏಳು ತಲೆಯಂತ್ರ ಎತ್ತುವೆನು ।
ಪೂರ್ವದೊಳಾಳಿದ ವೀರಕಸ್ತುರಿ ನಾಯ್ಕ ।
ತೀರದು [ಹೊಗಳೆ] ವಾಗ್ಮುಡಿಯು ||೩೭||

ಇಬ್ಬರಾಳಿಕೆಯೊಳು ಹಬ್ಬಿ ಬೆಳೆದವರಲ್ಲ ।
ಹೆಬ್ಬುಲಿಯಾದ ಮುಮ್ಮುಡಿಯು ।
ರುದ್ರನ ಒಲುಮೆಯಲಿ ಬಂದು ಸೇರಲು ಚೆಂಡು ।
ದೊಡ್ಡವನಾ[ದನು] ಇಳೆಗೆ ||೩೮||

ರಾಯ ಮುಮ್ಮುಡಿನಾಯ್ಕ ಆಳಿದ ಪಟ್ಟ ಎರಡು ।
ಕಾಲ ವರ್ಷಗಳು ಒದಗಿದಡೆ ।
ರಾಯ ಕಂಪಿಲಗೆ ನೇಮ ಮಾಡುತ ಪಟ್ಟವ ।
ಸೇರಲು ವೈಕುಂಠಗತಿಯ ||೩೯||

ಲಾಲಿಸು ಜಟ್ಟಂಗಿರಾಯನೆ ನಿಮ್ಮಜ್ಜ ।
ನಾಳಿಕೆಯೊಳಗಾದ ಕಾರ್ಯ।
ಬಾಲರ ಫಲವಿಲ್ಲದೆ ಮಾರಿದೈವವ ಭಜಿಸೆ ।
ಆಮೇಲೆ ನಿಮ್ಮಯ್ಯ ಜನಿಸೆ ||೪೦||

ರಾಜೀವ ಕಂಪಿಲ ರಾಣಿಸ್ತ್ರೀಯರ ನಾಮ ।
ಮೃಗಲೋಚನೆ ಹರಿಯಮ್ಮ।

ಭಾನು ಪ್ರಕಾಶದ ಕಮಲಾಜಿ ಈರ್ವರು ಭೂ ।
ದೇವಿಯಂದದಿ ಒಪ್ಪಿಹರು ||೪೧||

ರಂಭೆಯುರ್ವಶಿಯರ ಮರೆಸುವ ಲಾವಣ್ಯ ।
ಅಂಬುಧಿಯೆನಿಪ ಗುಣಭಾವ।
ಗಂಗೆ ಪಾರ್ವತಿಯೋಲ್ ಪತಿವ್ರತ ಭಾವಗಳು ।
ಅಂಗಜನ ಸತಿಯ ಪತಿಭಕ್ತಿ ||೪೨||

ಸಮರೂಪ ಸಮಭಾವ ಸಮರತಿಯ ಸುಖದೊಳಗೆ ।
ಇನಿರಸವು ಮದ್ದು ಬೆರೆದಂತೆ।
ಮದನ ಕಲೆ ಮೀರಿ ಫಲವಿಲ್ಲದೆ ಸಂತಾನ ।
ಫಲವ ಹಂಬಲಿಸಿ ಮನದೊಳಗೆ ||೪೩||

ಬಾಲರ ಚಿಂತೆಗಳಿಂದಲಿ ಇರುತಿರೆ ।
ಅಜ್ಜ ಕೇಳಯ್ಯ ಕುಮ್ಮಟದ।
ಏಳಿಗೆ ಶೃಂಗಾರ ಪೇಳ್ವರೆ ಅಳವಲ್ಲ ।
ರಾಯ ಕಂಪಿಲನ ಅರಮನೆಯ ||೪೪||

ರಾಜೇಂದ್ರ ಮನೆಯು ಮೂಜಗಕರಿದೆನೆ ।
ಗಾಜಿನುಪ್ಪರಿಗೆ ಹದಿನಾರು।
ಮೂರು ಸುತ್ತಿನ ಕೋಟೆ ಹದಿನಾರು ಲೋವೆಯ ।
ದ್ವಾರವಾದವು ಜಂತ್ರಗೆಲಸ ||೪೫||

ಹತ್ತುವ ಹಜಾರಕ್ಕೆ ಮುತ್ತಿನ ಮೇಲ್ಕಟ್ಟು ।
ಇಟ್ಟ ಕಳಸಗಳು ಅಪರಂಜಿ ।
ಪೃಥ್ವಿಪಾಲಕ ಬಂದು ಸದರಿನೊಳ್ ಕುಳಿತರೆ ।
ಇತ್ತ ಪ್ರಧಾನರೆಡಬಲದಿ ||೪೬||

ಅಮರಾಧಿಪತಿಯಂತೆ ಸದರನೇರಲು ನೃಪನು ।
ಎಡಬಲದಿ ಮಂತ್ರಿ ಮನ್ನೆಯರು ।
ಕಡಲೇಳು ಸಾಗರ ಕೂಡಿದವು ತಾವೆಂಬ ।
ಪೌಢರು ಉಂಟು ವಾಲಗದಿ ||೪೭||

ಹಂಸಗಾರರು ಕವಿಭೂಷಣರು ಪ್ರತುಮೆಯ ।
ಮಾತನಾಡಿಪರು ಹಾಸ್ಯದಲಿ ।
ಬೀಸುವ ಸುಳಿಗಾಳಿ ಬಿಗಿದು ನಿಲ್ಲಿಸುವಂಥ ವಿ ।
ಲಾಸಿಗಳುಂಟು ವಾಲಗದಿ ॥೩೮॥

ಪುರಕಾಯ್ವ [ತಳ]ತಂತ್ರ ಹರಿವಂಥ ಪ್ರೌಢರು ।
ಹಿಡಿದಲಗುವರು ಭೂಮಿಯನು ।
ಧರಣಿಯ ಗಿರಿಗಳ ಅಣ್ಣೆಕಲ್ಲಾಡುವ ।
ಭುಜಬಲರುಂಟು ನೂರಾರು ॥೩೯॥

ಕರಿ ತುರಗ ಕಾಲಾಳು ಬರಮಾಡಿ ತುರಗವನು ।
ಧರಣೀಂದ್ರ ಪಾಲಕ ನಡೆಯೆ।
ತರಳೆಯರು ಪಟ್ಟದ ರಾಣಿಯರು ಮುಂತಾದ ।
ಸಡಗರದೊಳು ಪುರವ ಪೊರಡೆ ॥೪೦॥

ಭೇರಿ ಕಾಳೆಗಳಿಂದ ಸಾರುವ ಭಟರಿಂದ ।
ಪರಿವಾರ ಚಾಮರ ಬಿರಿದು ।
ಭೂಮಿಯನು [ಅ]ದರಿ ಚತುರಂಗದೊಳು ಬಂದು ।
ದೇವಾಲಯವ ಪೊಕ್ಕನಾಗ ॥೪೧॥

ಲಿಂಗದ ಗುಡಿಯನು ಬಂದು ರಾಯನು ಪೊಗಲು ।
ಎರಗಿ ಸಾಷ್ಟಾಂಗದಿಂದ ।
ಗಂಗೆಯ ಧರಿಸಿದೆ ಘನ ಮಹಿಮನೆಯೆಂದು ।
......ಕರ ಮುಗಿಯೇ ॥೪೨॥

ಜಯ ಜಯ ಶಂಕರ ಜಗದ್ಗುರು ಗಿರಿಜೆಯ ।
ಮನಪ್ರಿಯ ರವಿಚಂದ್ರಧರನೆ ।
ಜಯ ಜಯ [ಮಧುಸೂದ] ನಯನವ ಧರಿಸಿದ ।
ಹರ ಹಂಪೆ ವಿರುಪಾಕ್ಷಲಿಂಗ ॥೪೩॥

ತ್ರಾಹಿ ಲೋಕವನು ಆಡಿಪ ಶಾಸ್ತ್ರಿಕ ತ್ರಾಹಿ ।
ಭುಜಗ ಧವಳಾಂಗ ತ್ರಾಹಿ ।

ಭಜಕರ ಭಕ್ತ ತ್ರಾಹಿ ದಯಪಾಲಿಪ ತ್ರಾಹಿ ।
ನಿಮ್ಮಣುಗನ ಶ್ರುತಿ ಪಾಲಿಪುದು ||೫೪||

[ತ್ರಿ]ಪುರೇಂದ್ರ ಒಡೆಯಗೆ ಅಪ್ಪಿ ಪೂಜೆಯ ಮಾಡಿ ।
ಘನವಾದ ಪರುಪಾಡ್ಯಗಳನು ।
ಧರಣಿಪ ಭೂಸುರ ಸಮರಾಧನೆ ಮಾಡೆ ।
ಕಡೆಗಂಡ ರವಿಯು ತಾಯೊಡಲ ||೫೫||

ದಿವರಾತ್ರಿ ಬೆಳ[ಗಿದ] ರ[ಜ]ತದ ವಾಹನ[ನ]
[ಮಿ]ಗಲು ಬತ್ತಿ ಬಿರುಸು ಬಾಣಗಳು ।
ಜಗದಿ ಮೋಹನವಾಗಿ ಉತ್ಸಹವಾ[ಗೆ] ।
ಪಗಲೊಡೆಯ ಮಿಗೆದೋರಿದನು ||೫೬||

ಉದಯಕಾಲದಿ ರಾಯ ಹರನ ಪೂಜೆಯ ಮಾಡಿ ।
ಧರಿಸಿದ ನವಭಸಿತವನು ।
ಪರಮಾನ್ನ ಭೋಜನ ಸವಿದು ಏಳಲು ನೃಪ ।
ಹರಗೆ ವಂದಿಸಿ ಕರಮುಗಿದು ||೫೭||

ಹೊಡೆವ ತಂಬಟ ಭೋರಿಡುವ ಬಿರುದಿನ ಕಾಳೆ ।
ಬಡಬಾಗ್ನಿ ಬಿಸಿಲೊಳು ನಡೆಯೆ।
ಅಡವಿ ಮಾರ್ಗದಿ ಒಂದು ವನಸ್ಥಳವಿರೆ ಕಂಡು ।
[ಕ್ರ]ಮಿಸಿ ನಿಲ್ಲಲು ರಾಯ ಗಳಿಗೆ ||೫೮||

ರಾಯ ನಿಲ್ಲಲು ಕೇ[ಳಿ] ಬೇರೊಂದು [ಕಥೆಯೊಂದ] ।
ಲಾಲಿಸಿ ರಸಿಕ ಕೋವಿದರು।
ಪೂರ್ವದ ಫಲಬೀಡು ಕಾಡೊಳು ಜನಿಸಿದರೆ ।
ರಾಜನಾಗುವ ಭೋಗ[ವಿ]ರಲು ||೫೯||

ಕಾಡಗೊಲ್ಲರ ದೊಡ್ಡಿ ಕೆಳಗೊಂದು ಇರುತಿರೆ ।
ನೂರಾರು ಒಕ್ಕಲು ಸುಖದಿ।
ಸಾವಿರ ಹದಿನೆಂಟು ಲಕ್ಷೋಪ ಕುರಿ ಗೋವು ।
ಆಳುತ ಸಕಲ ಸಂಭ್ರಮದಿ ||೬೦||

ಹಟ್ಟಿಯ ಗೊಲ್ಲರು ರೊಪ್ಪದೊಡ್ಡಿಯ ಹಾಕಿ ।
ಒಕ್ಕಲು ಸಿರಿ ಭಾಗ್ಯದೊಳಗೆ ।
ಮಕ್ಕಳ ಫಲವಿಲ್ಲದೆ ಗೊಲ್ಲನ ಸತಿಗೆ
ಪೃಥ್ವಿದೇವರ ಹರಸಿಕೊಳುತ ||೬೧||

ಹಣವಿದ್ದು ಫಲವೇನು ತನುಜರ ಪಡೆಯದ ।
.... ಪಾಪಿ ಮೂಳರಿಗೆ ।
ಮರದೊಳು ಹಾಲಿಲ್ಲದೆ ಬಿಳಿಲಂತೆಸಗಿದರೆ ಅದು ।
ಪುಣ್ಯನರಜೀವವಹು[ದೆ] ||೬೨||

ಕಂಡವರಿಗೆ ಅವರು ಹಂಬಲಿಸಿ ಲೋಕದ ।
ದೈವಂಗಳಿಗೆ ಭಜನೆ ಮಾಡುತಲಿ ।
ಮುಂದೆಮ್ಮ ಫಲಪ್ರಾಪ್ತಿಗೆ ಹೇಗೆ ಇರುವುದೆಂದು ।
ಕಂದುತಿರಲು ತಾವು ಕಲಿಗೆ ||೬೩||

ಕೆಲವು ಕಾಲದ ಮೇಲೆ ಲಲನೆ ಗರ್ಭಿಣಿಯಾಗೆ ।
ನಲಿದು ಹಿಗ್ಗುತಲಿರ್ದು ಮನದಿ ।
ಕುಲಗೋತ್ರದವರೆಲ್ಲ ಪಲ ಬಗೆ ಒಸಗೆ ಮಾಡಿ ।
ದಿನದಿನಕೆ ಹೆಚ್ಚುತ ಬರಲು ||೬೪||

ಒಂದೆರಡು ಮೂರಾಗಿ ತುಂಬಿಬರಲು ಮಾಸ ।
ಸಂಧಿಸಿ ಆರೆಂಟು ಬರಲು ।
ಇಂದೆನಗೆ ತುಂಬಿ ಬರಲು ಚೆಲ್ವ ಭೇರುಂಡ ।
ಉನ್ನಂತ ಗಂಡುಮಗನು ||೬೫||

ಶಿಶುವನು ಕಾಣುತ್ತ ಸಿರಿಯಿಂದ ಗೊಲ್ಲರು ।
ಇದು ಚೋದ್ಯ ನಮ್ಮ ವಂಶದಲಿ ।
ಮುಡುಬ ಮೂಳನೊ ಸಹಜನೊ ಬಾಲ ಜನಿಸಿರಲು ।
ತಿಳಿಯಬೇಕೆನುತಲಿ ಅವರು ||೬೬||

ಕರೆಯಿಸಿದರು ಬಲ್ಲ ಹಿರಿಯ ಶಾಸ್ತ್ರದವರ ।
ಜನನವ ನೋಡಿ ಬಾಲಕನ ।

ಹೊಳವ ಮಾಡದೆ ಪೇಳಿ ಬಹುಕಾಲ ತಡೆದಾಕೆ ।
ಪಡೆದಾಳು ನರಹರಿ ಸುತನ ॥೬೭॥

ನೋಡುವರವರಲ್ಲಿ ವಾರ ತಿಥಿಗಳ ಮೇಲೆ ।
ಕಾರಣಾಗಲು ನಾಮವಿಡಿದು ।
ತೋರುವರವ ಲಗ್ನ ಮರಣ ತಂದೆಗೆ ಹೊಲ್ಲ ।
ಮೂಲ ನಕ್ಷತ್ರದ ಜನನ ॥೬೮॥

ಕೆಟ್ಟ ಗಳಿಗೆಯಲಿ ಮುನ್ನ ಹುಟ್ಟಿದ ಶಿಶು ।
ಇಟ್ಟುಕೊಂಬುದು ಅತಿ ಕಷ್ಟ।
ಹೆತ್ತರೆ ಫಲವೇನು ದುಃಖ ಬಪ್ಪಿರಿ ಕಡೆಗೆ ।
ನಷ್ಟವಲ್ಲದೆ ಲಾಭವಿಲ್ಲ ॥೬೯॥

ಕಂಡುದ ನುಡಿದೆವು ಬಂದಾದ ಶಾಸ್ತ್ರದೊಳ್ ।
ಮಂದತ್ವದೊಳಗೆ ನೀ ಬಿಡದೆ ।
ನೊಂದಿರಲ್ಲದೆ ಬಾಳ ಚಂದಗಾಣದು ನಿಮ್ಮ ।
ಬಾಂಧವ್ಯ ಜನಕೆ ಕೊಡಿಯೆನಲು ॥೭೦॥

ಹೊಳವಾಗಿ ಪೇಳ್ದಡೆ ಬಿಡದೆಮ್ಮ ಕರ್ಮಗಳು ।
ಹಿಡಿದ ಪಂಚಾಂಗಕ್ಕೆ ಹೀನ ।
ಕಡೆಗೆ ವರುಷ ಕಾಲ ಪೊಡವಿಗೆ ಗುರುತಾಗಿ ।
ದೊರೆಯಾಗಿ ಭಾಳಾಕ್ಷ ಕೊ[ಡುಗು] ॥೭೧॥

ಬಹುಕಾಲ ತುಂಬಿದ ಬಂಜೆಗೆ ಫಲವಾಗೆ ।
ಲಯಕಾಲ ಬಿಡದು ಪಡೆದರಿಗೆ ।
ಕುಲಗೋತ್ರದೊಳಗಾರು ಒಲ್ಲೆನೆನಲು [ನಿಮ್ಮ] ।
ಮನೆದೇವರೆಡೆಗೆ ಹಾಕೆನಲು ॥೭೨॥

ತನುವಿರಲು ಮಕ್ಕಳ ಪಡೆವುದು ಘನವೇನು ।
ಗೊನೆಯ ಬಾಳೆಯ ಹಣ್ಣ ತೆರದಿ ।
ಮನೆಯನು ಲಯಮಾಳ್ಪ ಚೆಲುವ ಸಂತಾನದಿಂದ ।
ಪಡೆವುದೇನುಂಟು ಸದ್ಗತಿಯ ॥೭೩॥

ಹೆತ್ತವರಾ ಮಾತ ಚಿತ್ತದೊಳ್ಕೇಳುತ ।
ದುಃಖದೊಳಗೆ ಆಳಿ ಮುಳುಗಿ ।
ಹೊತ್ತಿರ್ದು ಹಗಲಿರುಳು [ಹತ್ತೆಂ]ಟು ಮಾಸವು ।
ಕಾಡಿಗಿಕ್ಕುವುದೆ ಕರ್ಮ ಶಿಶುಹತ್ಯೆ ||೭೪||

ಮಕ್ಕಳಾದರೆ ಏನು ಪ್ರಾಪ್ತಿಯಿಲ್ಲದ ಬಳಿಕ ।
ಅರ್ಥವಿದ್ದೇನು ತಾನುಣುವುದೆ ।
ಬೆಟ್ಟದೊಳ್ ಜೇನ್ಹುಟ್ಟು ಬ್ಯಾಡರ ಪಾಲಾದ ।
ವ್ಯರ್ಥವಾಯಿತು ಎಮ್ಮ ಬದುಕು ||೭೫||

ಪಡೆಯದಿರಲು ನಾವು ಕಲ್ಲುಮರನಾಗಿರಬಹುದು ।
ಹಡೆದಂದೆ ಗುಡಿಗೆ ಹಾಕುವುದು ।
ಪುತ್ರರೊಳಗೆ ರೋಹಿಣಿಯಂಥ ಬಾಲನ ।
ಮತ್ತೇಕೆ ನಾವು ಹಾಕುವುದು ||೭೬||

ಎಲ್ಲರು ಸಾಕೆನುತ ದುಃಖದಲಿ ಕೇಳಲು ।
ಒಲ್ಲೆವು ಎಮ್ಮ ತಿಂಬುವುದು ।
ಹೊಲ್ಲದ ಮೂಳನ ಹೊರಗೆ [ಹಾಕುವುದು] ಗೋತ್ರ ।
ದಲ್ಲಿ ಒಬ್ಬರ ಕೆಡಿಸುವುದು ||೭೭||

ನಮಗಂತು ಫಲವಿಲ್ಲ ನಿಮಗೇಕೆ ಭಯಭೀತಿ ।
ಮೃಡನೊಳು ನಾವು ಪಡೆದುದಿಲ್ಲ ।
ಅಲರಂಬ ರೂಪನ ಸಾಕಿ ಬದುಕಲು ನಾವು ।
ನಯನದಿ ನೋಡಿ ಹಿಗ್ಗುವೆ[ವೆ] ||೭೮||

ಸಂತಾನಗೆಡುಕನ ಸಾಕಲ್ಕೆ ನಮಗಿನ್ನು ।
ಭ್ರಾಂತಿ ಲೋಕದಿ ಮಕ್ಕಳ್ಯಾರು ।
ಎಂತು ಇಲ್ಲವು ಎಂದು ಎನುತವರು ಪೋಗಲು ।
ಮುಂಚೆ ತಂದರು ದೇವಾಲಯಕೆ ||೭೯||

ಗೊಲ್ಲರ ಮನದೈವ ಬಿಲ್ಲ ಕಾಟಮಲಿಂಗ ।
ಅಲ್ಲಿ ಕಂಪಿಲನಿಪ್ಪ ವನದಿ ।

ಹೊಲ್ಲದ ಶಿಶು ಬೇಡ ಸಲ್ಲಲಿ ನಿಮಗೆಂದು ।
ಅಲ್ಲಿ ಬಿಟ್ಟರು ಗುಡಿಯಲ್ಲಿ ॥೮೦॥

ಬಿಟ್ಟವರು ನಡೆಯಲು ಇತ್ತ ಕಂಪಿಲನೃಪಗೆ ।
ಮತ್ತೆದೋರಲು ಉದಕ ತೃಷೆಯು ।
ಚಿತ್ತ ಗಮನದಿ ಹೋಗಿ ತರಲೆಂದು ಅಗ್ಗಣಿ ।
ಕಟ್ಟು ಮಾಡಿಸಲು ಊಳಿಗಕೆ ॥೮೧॥

ಅರಸು ಪೇಳಲು ಚರರು ಪರಿದರು ದಿಕ್ಕಾಗಿ ।
ಹುಡುಕುತ ನಾಯ್ಕ ಮೂಲೆಯನು ।
ತಡಕಿ ಕಾಣದೆ ಅವರು ವನದ ಕಿಗ್ಗಡಿಯೊಳು ।
ಗುಡಿಯಿರಲು ಕೊಳಸಹಿತ ಕಂಡು ॥೮೨॥

ಕಂಡರು ಉದಕವ ಒಂದಾರು ಭುಜವಾಗಿ ।
ತುಂಬಿಕೊಂಡರು ತವಕದಲಿ ।
ಬಂಧನ ಬಿಡಿಪರೆ ತಡವೇಕೆ ಎನುತಲಿ ।
ಪೊರಡಲು ತವಕದಿ ಚರರು ॥೮೩॥

ಬಾವಿಯಿಂದಲಿ ಹೊರಟು ದೇವಾಲಯ ಪೊಗಲು ।
ಬೋರಿಡುವ ಮೊಳಗು ಧ್ವನಿಗೇಳಿ ।
ಅರಣ್ಯ ಗುಡಿಯೊಳು ಏನು ಚೋದ್ಯವು ಎಂದು ।
ರಾಯನಿರ್ದೆಡೆಗಾಗಿ [ಬ]ರಲು ॥೮೪॥

ಏನು ಮಾಯವೊ ರೂಪನೆ ಕಂಡೆವಾಲಯದಿ ।
ಒಂದು ಬಾಲನಿರಲು ತಂದೆವೆನುತ।
ರಾಯ ನೋಳ್ಪುದು ಎಂದು ಮುಂದಕ್ಕೆ ಇರಿಸಲು ।
ಆ ಭೂಪ ನೋಡಿ ಬೆರಗ್ಹೊಡೆಯೆ ॥೮೫॥

ಹರಿಹರದೇವಿಯ ಕರೆದು ಉಲ್ಲಾಸದೊಳ್ ।
ತರಳನ ನೋಡೆನಲು ಹರಸಿ ।
ಹರನೊಲಿದು ನಮಗಿತ್ತ ಕರ ಚೆಲ್ವ ಸಂತಾನ ।
ದೊರೆಗಳಾತ್ಮದಿ ಬರಲರಿದು ॥೮೬॥

ಕಾಶಿ ರಾಮೇಶ್ವರ ಗೋಕರ್ಣ ಶ್ರೀಶೈಲ ।
ಯಾತ್ರೆಯ ಮಾಡಿ ತಪವಿಡಿದು ।
ಬೇಕೆಂದು ಸಂತಾನ ಜಗದೀಶ ಸ್ತುತಿಮಾಡೆ ।
ಆತ್ಮದಿ ಬಾಲ ಸಿದ್ಧಿಸದು ॥೮೭॥

ರಮಣನ ವಚನಕ್ಕೆ ಧರ್ಮಶಾಂತಿಯ ತಿದ್ದಿ ।
ಆಳೋಚನೆ ಪೇಳುತ್ತಿರಲು ।
ಉರಗೇಂದ್ರ ಹರನೊಳು ಪಡೆಯದ ಪಾಪಿಗೆ ।
[ವರ ಶಿಶು] ಎಮಗೆದೋರುವುದೆ ॥೮೮॥

ನಾವಾಗಿ ಬರಲೆಂದು ಹಾರೈಸಿ ಮಾಡಿದ ।
ದೇವನೆ ತಾನೊಲಿದಿತ್ತು ।
ತನುಜರಿಲ್ಲದ ಎಮ್ಮ ಸ್ಮರಣೆ ಹರನಿಗೆ ತಟ್ಟೆ ।
ದಯಮಾಡೆ ಕಾಡಾಲಯದಲಿ ॥೮೯॥

ಕಕ್ಕೆಯು ಫಲವಾಗೆ ಒಪ್ಪುವುದೆ ಊಟಕ್ಕೆ ।
ಉಂ[ಬು]ತ ಸ್ವಾಯವಾಗಿರಲು ।
ಮುಕ್ಕಣ್ಣಗೆರಗಲು ತನ್ನೊಡಲು ಪಡೆಯದ ।
ತನುಜ ಪಟ್ಟಕೆ ಸಲುವುದೆ ಭೂಪ ॥೯೦॥

ಆವ ಜನ್ಮದ ಶಿಶುವೊ ಭೇದಗಾ[ಣ್ಬುದು] ರಾಯ ।
ನೀರು ಬೆರೆವುದೆ ತೈಲದೊಳಗೆ ।
ಹಾದಿಯ ಗುಡಿಯೊಳು ಏನು ಕಾರಣಯಿತ್ತು ।
ಹಾದರದೊಳಗೆ ಜನಿಸಿತ್ತೊ ॥೯೧॥

ಸತಿಯ ಮಾತಿಗೆ ರಾಯ ಪ್ರತಿನುಡಿಯಿಲ್ಲದೆ ।
ನುಡಿವ ನಾಲಗೆ ಪಿಡಿದಂತೆ ।
ಮಡದಿ ಕೇಳೆಲೆ ಕ[ಣ್ಣು ತಿ]ಳಿಯದಿರಲು ಒಂದು ।
ಸಲಹಿ ಸಾಕಲು ಧರ್ಮ ಬರದೆ ॥೯೨॥

ಆದರಾಗಲಿ ಕುಲಭೇದ ವರ್ಮವ ತಿಳಿದು ।
ನೋಡಬಹುದು ಸಲಹುದಕೆ।

ಊರೆಂಟು ಎಡಬಲದಿ ಹಳ್ಳಿ ಮನೆಗಳ ತಿಳಿದು ವಿ ।
ಚಾರ ಮಾಡಲಿ ಬಹುದೆನಲು ॥೯೩॥

ಹೊಲ್ಲದ ಶಿಶುವನು ಗುಡಿಯಲ್ಲಿ ಬಿಟ್ಟರು ಕಾಂತ ।
ಸಲುವ ನಾಣ್ಯಕೆ [ಊನ]ವುಂಟೆ।
ತಲೆ ಬುಡ ತಿಳಿಯದೆ ಸಲಹಿದರೆ ಸಾಕಿದ ।
ಮಗನೆಂದಾಡರೆ ಬಲ್ಲವರು ॥೯೪॥

ರಾಣಿ ಆಡುವ ಮಾತು ಭೇದಗಾಣದೆ ಅರಸು ।
ಊಳಿಗ ಜನಕೆ ಪೇಳೆನಲು ।
ನೋಡಿ ಎಡಬಲದೊಳು ಊರ ಒಕ್ಕಲು ಇರಲು ।
ವಿಚಾರಿಸಿ ಕೇಳಬೇಕೆನಲು ॥೯೫॥

ಅರಸಿ [ಶ್ರೇಣಿಯನು] ಬಿಡಿಸಿಕೊಳ್ಳುತ ಚರರು ।
ಹುಡುಕಲು ನಾಲ್ಕು ದಿಕ್ಕಿನಲಿ।
ಅಡವಿಯೊಳಗೆ ಒಂದು ಕಾಡುಗೊಲ್ಲರ ದೊಡ್ಡಿ ।
ಸುಳುಹು ಕಾಣುತ ಹೋಗಿ ಮುತ್ತಿ ॥೯೬॥

ಹಿಡಿ ಬಡಿ ಕೊಲ್ಲೆಂದುಗ್ಘಡಿಸಿ ಕಾರ್ಗವಿಯಲು ।
ನಡುಗಿ ಗೊಲ್ಲರು ಕಂಗೆಡಲು ।
ಕಡಿಯ ಬೇಡೆಮ್ಮನು ಕೊಡುವೆವು ಧನಧಾನ್ಯ ।
ಬಿಡು ಎಮ್ಮ ಪ್ರಾಣಧರ್ಮದಲಿ ॥೯೭॥

ಅಂಜಲೇತಕೆ ಬನ್ನಿ ರಾಜೇಂದ್ರ ಕರೆಸಿದ ।
ಕಂದ ಸಿಕ್ಕಲು ನಿಮ್ಮ ಗುಡಿಯ।
ಮುಂದಲ ಸ್ಥಿತಿಗತಿಯೆಲ್ಲೆಂದು ಕರೆಸಿದ ।
ಕುಂದು ಯಾತಕೆ ನೀವು ಬನ್ನಿ ॥೯೮॥

ಬಾಲನ ತೆರನ ಕೇ[ಳಲು] ತೆರನ [ಹೇ]ಳುವರೆ ।
ಜೀವ ಕೊಲ್ಲಲು ಪರಬಲವೆ ।
ಓರಂತೆ ಗೊಲ್ಲರ ಒಡಗೊಂಡು ಬಂದರು ।
ರಾಯ ಭೂಪಾಲನಿದ್ದೆಡೆಗೆ ॥೯೯॥

ಗೊಲ್ಲರು ಬೆದರುತ ಭಯದಲ್ಲಿ ಕರಮುಗಿಯೆ ।
ಅಲ್ಲಿ ಮಂತ್ರಿಗಳು ಕೇಳುವರು ।
ಎಲ್ಲಿ ನಿಮ್ಮಯ ಗುಡಿ ಎಲ್ಲಿಯ ಶಿಶು ಬಾಲ ।
ನಿಲ್ಲದೆ ಒಳವ ಪೇಳೆಮಗೆ ||೧೦೦||

ಸ್ವಾಮಿ ಎಮ್ಮ[ಯ] ವಂಶದಲಿ ಜನಿಸಿತು [ಕಂದ] ।
ತಾಯಿ ತಂದೆಗೆ ಮರಣವೆನಲು ।
ಆರಾರು ಕೊಳ್ಳ[ರು] ನಮ್ಮ ತಿಂದಿತು ಎನಲು ।
ದೇವರ ಗುಡಿಗೆ ಹಾಕಿದೆವು ||೧೦೧||

ಕೇಳಿದ ನೃಪ ನಗುತ ಮರುಳ ಗೊಲ್ಲರ ನುಡಿಗೆ ।
ಹಾಳು ಶಾಸ್ತ್ರವು ಸುಡಲಿ ನಿಮ್ಮ।
ಭಾನು ಪ್ರಕಾಶದ ಬಾಲನ ಕೊಲ್ಲಲ್ಕೆ ।
ಮೂದೇವಿ ಹಿಡಿದಳೆ ನಿಮಗೆ ||೧೦೨||

ಮರಣವೆನ್ನಲು ಹೆದರಿ ತನುಜನ ಕೊಲ್ಲುವರೆ ।
ಧರ್ಮವೆ ನಿಮಗೆ ಪೃಥ್ವಿಯಲಿ ।
ಫಲವಿಲ್ಲ ಅವನಿಗೆ ವರುಷ [ತೊ]ರೆವುದೆ ಎಂದು ।
ಕರೆದು ಗೊಲ್ಲರನು ಮನ್ನಿಸಲು ||೧೦೩||

ಕಾಡುಗೊಲ್ಲರ ಒಳಗೆ ತೋರುವ ಶಿಶುವಲ್ಲ ।
ಪೂರ್ವದ ಋಣವ ತೀರಿಸಿತು।
ಸೇರುವ ಸ್ಥಾನಗಳು ಬೇರಿರಲು ನಿಮಗೆಲ್ಲ ।
ತೋರಿತೆಂದನು ರಾಜೇಂದ್ರ ||೧೦೪||

ಬಾಲನ ಜನನ ನಕ್ಷತ್ರ ಮೂಲ[ವ] ತಿಳಿದು ।
ಆಗ ಗೊಲ್ಲರ ಸಂತೈಸುತಲಿ ।
ನೀಗಿ ದುಃಖವ ನಿಮ್ಮ ದೊರೆ ಬಾಲನಾದನು ಎಂದು ।
ಆಗ ಉಡುಗೊರೆಯಿತ್ತು ಕಳುಹೆ ||೧೦೫||

ನೊಂದು ಬಳಲಿಕೆ ಬೇಡ ಕುಟುಂಬ ಎಮ್ಮದು ನಿಮ್ಮ ।
ಸಂದೇಹವಿಲ್ಲದೆ ಬಾಳೆನಲು ।

ಹಿಂದಲ ಋಣಕಾಗೀ ಬಸುರಿಂದ ಜನಿಸಿತ್ತು ರಾ ।
ಜೇಂದ್ರನಾಗುವನು ಪೋಗೆನಲು ||೧೦೬||

ತಿಳಿಸಿದ ನೃಪನಾಗ ಘನಶಾಸ್ತ್ರದವರನು ।
ನಮಗೀಗ ಶಿಶು ಸೇರಿದಂಥ।
ಶುಭಹಾನಿಯೆಂಬುದ ನೆರೆ ಸೋಸಿ ಪೇಳೆಂದು ।
ತಿಥಿ ವಾರ ಗುಣಿಸಿ ನೋಡುವುದು ||೧೦೭||

ರೂಢಿಗುನ್ನತವಾದ ಭೂಪ ಲಾಲಿಸು ಮುಂದೆ ।
ಬಾಲನ ಸ್ಥಿತಿಗತಿಗಳಿಗೆ ।
ವೀರನಾಗುವ ಶಕ್ತಿರಣಧೀರನೆನಿಸಿ ಪಂಥ ।
ಗಾರ ತಮ್ಮನ ಪಡೆಯುವನು ||೧೦೮||

ಪುತ್ರನ ಫಲದಿಂದ ಮತ್ತೊಬ್ಬ ಜನಿಸುವ ।
ಪುಷ್ಪಬಾಣಗೆ ಸಮನೆನಿಸೀ ।
ಕೊಟ್ಟೇವು ಬರಹವು ದೃಷ್ಟಗಳು ಈ ಹೊತ್ತು ।
ತಪ್ಪಲು [ಯಮನಾಜ್ಞೆ] ಭೂಪ ||೧೦೯||

ಹರುಷವಾಗುತ ರಾಯ ಕರೆದು ಮಾನ್ಯ ಮಂತ್ರಿ ।
ಪರಿವಾರಕೊಪ್ಪೆ ಪೇಳೆನಲು ।
ಹೊರಗೊಂದು ಒಳಗೊಂದು ಹೀನ ಸ್ವರ ಆಡಲಿ ಬೇಡ ।
ಕೊರತೆ ಕಂಡರೆ ಈಗ ಪೇಳಿ ||೧೧೦||

ರಾಯ ರಾಜೇಂದ್ರನೆ ಕೇಳುವುದಿನ್ನೇನು ।
ಬೀಜದ ನೆಲೆ ಕಾಣಬಂತು ।
ಆಗಬಹುದು ಭಕ್ಷ ಕಾವಂದರಿವರಷ್ಟೇ ।
ಪಾಗೊಂಡನಾಳ್ವನು ಗೊಲ್ಲ ||೧೧೧||

ಸರ್ವರು ಜಯವೆನಲು.............. ।
[ಮೋದ]ನೊಡ್ಡಲು ಹರುಷದಲಿ ।
ರಾಯ ಕಾಟನು ಎಂಬ ನಾಮ ಬಾಲಗೆಯಿಟ್ಟು ।
ಸಾಗಲು ನೃಪನು ಬಲದೊಡನೆ ||೧೧೨||

ಭಾನು ಇಳಿದು ತಾಯೊಡಲ ಸೇರುವಂದದಿ ।
ರಾಯ ಪೊಗಲಾಗ ಕುಮ್ಮಟವ ।
ಬಸುರಿಡಿದು ಬಂದಂಥ ಶಿಶುವಿಗೆ ಮಿಗಿಲಾಗಿ ।
ಶಶಿಮುಖಿ ಸಾಕಿ ಸಲುಹಿದಳು ॥೧೩॥

ಮಿಸುನಿಯ ಅರಳಲೆ ಮಾಗಾಯಿ ಗೆಜ್ಜೆಯ ।
ಧರಿಸಿ ಬಾಲಕನ ಆಡಿಪಳು ।
ಮಕ್ಕಳಾಡದ ಮನೆಯು ರಾಕ್ಷಸ ಪೊಳಲಹುದು ।
ದುಃಖನು ಮರೆದು ಹಲಕೆಲವ ॥೧೪॥

ಹುಟ್ಟು ಬಂಜೆರ ಒಡಲು ಉರಿಯಬಾರದುಯೆಂದು ।
ದುಃಖ ಅಡಗಿಸಿದ ಹರನೊಲಿದು ।
ಉಡುರಾಜ ತಲೆದೋರೆ ಶರಧಿ ನಲಿವಂದದಿ ।
ಇರಲತ್ತ ಹರಿಹರದೇವಿ ॥೧೫॥

ಅಮರಾದ್ರಿಪತಿಯಂತೆ ಸದರ ವಾಲಗಗೊಳುತ ।
ದೊರೆಯಿರಲು ಕಂಪಿಲಭೂಪ।
ಎಡದೊಳು ಮಂತ್ರಿ ಬಲದೊಳು ಕರಣಿಕರು ।
ಪಿಡಿದಿಹರು ಕಾಳಂಜಿ ಕುಂಚ ॥೧೬॥

ಮಡದೇರ ನೃತ್ಯ ಉಗ್ಘಡಿಸುವ ಪಾಠಕರು ।
ನುಡಿನುಡಿಗೆ ನಗಿಸುವ ಜನರು ।
ಗೀತ ಗೀರ್ವಾದ್ಯ ವಾಚಕರು ಹಾಸ್ಯದ ।
ವೇಷವಂತರು ಪಲಬಗೆಯ ॥೧೭॥

ದೇಶಭಾಗದ ನೃಪರ ಒಡನೆ ವಾಲಗಗೊಳುತ ।
ಶೇಷಾದ್ರಿವಾಸನಾಗಿರಲು ।
ಇರುವಂಥ ಕಾಲದೊಳು ಪರವೊಂದು ಕಥೆ ಬಂತು ।
ಒರೆದು ಕೇಳುವುದು ಬಲ್ಲವರು ॥೧೮॥

ನೆರೆ ಜಾಣ ವಿಟಜನಕೆ ಇನಿಗೋಲ ರುಚಿಯಂತೆ ।
ಬರುತಿದೆ ರತ್ನಿಪ್ರಸಂಗ।

ಡೊಂಬರ ಕುಲದೊಳಗೆ ರಂಭೆ ಊರ್ವಶಿ ಜನಿಸಿ ।
ಕಂದರ್ಪ ರತಿಗೆ ಮಿಗಿಲೆನಿಸಿ ॥೧೯॥

ಬಂದಳೆ ದ್ರೌಪದಿ ಜಾನಕಿ ಸ[ತಿ]ಗೆಣೆ ।
ಎಂಬಂತೆ ಬಿರಿದ ಪೊಗಳಿಪಳು ।
ಕೊಂಕಿದ ಕುರುಳ ಕೂ[ಡ]ದ ಹುಬ್ಬು ಸಿಂಗಾಡಿ ।
ಬಿಂಕದ ಮೊಲೆಯು ಬಿರಿ ಮುಗುಳು ॥೨೦॥

ಶಂಖಿನಿ ಜಾತಿಗೆ ಸಮನಾಗಿ ಜನಿಸಿದಳು ।
ಎಂತಪ್ಪ ವಿಟರ ಜರೆಯುತಲಿ ।
ಬಡನಡುವಿನ ಬಾಲೆ ಪಿಕಸ್ವರವು ವಾಕತ್ವ ।
ಮಲೆಯ ಕಾಳಿಂಗ [ಮಿಥುನದಿ] ॥೨೧॥

ಅರಗಿಣಿ ಮುದದೊಳು ಸರಸಿಜ ಮುಖಪದ್ಮ ।
ಕರಿಯೊ ಕೇಸರಿಯೊ ಕೂಟದಲಿ ।
ಕುಂಜರಗಮನತ್ವ ಚಂದ್ರನ ಕಳೆ ಕಾಂತಿ ।
ಅಂಗದ ಕೆಂಪೊ ಪುಲ್ಲಿಗೆಯೊ ॥೨೨॥

ತುಂಬಿ ತುಳುಕುವ ಪ್ರಾಯವ ಕಂಡ ವಿಟಜನರು ।
ಹಿಂದೆ ಚರಿಸುವರು ಕಡೆಮೊದಲೆ ।
ಅರಳುವ ಕಮಲದ ದಳದಂಥ ನಯನಗಳು ।
ಪುಣುಗಿನ ಮೃಗದ ವಾಸನೆಯು ॥೨೩॥

[ಎಳೆ]ಯಂಚೆ ಗಮನತ್ವ ಕಳಸಕುಚಗಳ ಭಾವ ।
ಮನದೋರ್ವ ಕರಿಯ ಕುಂಭಗಳು।
ಮಾತಿನ [ಮು]ದದೊಳು ಮಾರುತನ ಸುಳಿಗಾಳಿ ।
ನೋಟದಿ ಹರಿಣನ ದೃಷ್ಟಿ ॥೨೪॥

ಲೋಕಾಂ[ತರ]ದೊಳಗಿನ್ನು ನೆರೆಯಲಾಪವರುಂಟೆ ।
ನಾಲ್ಕು ಮೂಲೆಯನು ಬೆರಸುವಳು।
ವಿದ್ಯಾಸದಾನೆಗಳೀ ಈಶ್ವರಗಳವಲ್ಲ ।
ಮದ್ದು ಮಂತ್ರಗಳ ಜಾಲದಲಿ ॥೨೫॥

ಹೊದ್ದಿ ಚರಿತವೇಕೆ ನಾನಾದೇಶಂಗಳ ।
ಒಬ್ಬರ ಕಾಣೆ ತನಗೆಣೆಯ ।
ನೆರಹಿದ ಲಾವಣ್ಯ ಧರೆಯೊಳು ಸರಿಗಾಣೆ ।
ಎರಳೆ ವ್ಯಾಘ್ರನ ವಿದ್ಯೆದೊಳಗೆ ॥೧೨೬॥

ತಿರುಗುತ ಕಾಳಿಂಗ ಕೊಡಗು ಬಂಗಾಳದಿ ।
ಚೋಳ ಕರ್ನಾಟ ಮಾಳವದಿ।
ಕಾಂಬೋದಿ ಕೇರಳ ಹಿಂದುಸ್ತಾನವು ತೆಲುಗು ।
ಕೊಂಕ ಕೊಲ್ಹಾರ ಕನಗಟ್ಟ ॥೧೨೭॥

ಮುಂದೆಲ್ಲ ರಾಜ್ಯವನು ಸಂಭ್ರಮದೊಳು ಚರಿಸಿ ।
ಬಂದಳು ಹಮ್ಮೀರಕಿಳಿದು ।
ಹಮ್ಮೀರ ದೇಶದಿ ಕುಮ್ಮಟವಿರುವುದು ।
ನಿಮ್ಮಜ್ಜನಾಳುವನು ಮಗನೇ ॥೧೨೮॥

ಮುಮ್ಮಡಿ ಸುತನಾಳ್ವ ಹನ್ನೊಂದು ಲಕ್ಷವು ರಾಜ್ಯ ।
ಧರ್ಮಾಧರ್ಮದಿ ಕಂಪಿಲನು ।
ಅಂತಪ್ಪ ಕಾಲದಿ ಬಂತು ಡೊಂಬರ ಪಾಳ್ಯ ।
ಜಂತೂರಿಗಿಳಿದು ಕುಮ್ಮಟ[ಕೆ] ॥೧೨೯॥

ಕಾಂತ ಕಂಪಿಲಭೂಪ ತ್ಯಾಗಿಯೆಂಬರು ರತ್ನಿ ।
ಮುಂಚೆ ಆಗುವಳು ಶೃಂಗರವ ।
ವಾಲೆ ಮೂಗುತಿ ಕಂಠ ಮುತ್ತಿನ ಡಾಬು ।
ಪಗಡೆ ಗೆಜ್ಜೆ ಕಾಲಕಡಗ ॥೧೩೦॥

ವೀರಮಟ್ಟಿಕೆ ಹಸ್ತದೊರೆ ಕಡಗದ ಬಳೆಯು ।
ರ್‍ಯಾಗಟೆ ಜಡೆಯು ಕುಪ್ಪಿಗೆಯು।
ಉಂಗುರ ನಡುವಿಗೆ ಕುಂದಣದ ಡಾಬುಳೆ ।
ಮಂಜಿರ ಮುತ್ತಿನ ಬಲೆಯು ॥೧೩೧॥

ಶೃಂಗಾರವಾಗಲು ರಂಭೆ ಮೇನಕೆಯರು ।
ಹಿಂದು ಎನಿಸುವರು ರೂಪಿಂಗೆ।

ನಾರಿ ಶೃಂಗರವಾಗೆ ನಕ್ಷತ್ರದೊಳು ಚಂದ್ರ ।
ಮೂಡಿದಂದಲಿ ತೋರುತಲಿ ||೧೩೨||

ತೀರಲು ಲಾವಣ್ಯ ನಿಲವುಗನ್ನಡಿ ನೋಡಿ ।
ಮೇಲೆ ಚಿಂತಾಕ ತಾನಿಡಲು ||
ರಾಯನೋಲಗವನು ಕೇಳುತ್ತ ರತ್ನಾಜಿ ।
ಸಾಗಲು ಸಂಭ್ರಮದೊಳಗೆ ||೧೩೩||

ನೂರಾರು ಹೆಣ್ಗಳ ಒಡನೆ ಡೊಂಬರು ಕೂಡಿ ।
ಹೋಗಿ ಕರಮುಗಿಯೆ ರಾಯನಿಗೆ।
ರಾಜಾಧಿರಾಜನೆ ತ್ಯಾಗದಿ ಕರ್ಣನೆ ।
ನೋಡಬೇಕೆಮ್ಮ ವಿದ್ಯೆಗಳ ||೧೩೪||

ಮಹಾರಾಜ ನೋಡೆನುತ ಕರವ ಮುಗಿಯಲು ರತ್ನಿ ।
ನೋಡಿ ಬೆರಗ್ಗೊಡೆದ ನೃಪನಾಗ।
ಕಂಡನು ಕಮಲಾಕ್ಷಿ ಬಂದಂಥ ಲಾವಣ್ಯ ।
ರಂಭೆಯೆನಬಹುದು ಕಲಿಯುಗದಿ ||೧೩೫||

ಉಂಗುಷ್ಟ ನಡುನೆತ್ತಿ ತುಂಬ ನಯನದಿ ನೋಡಿ ।
ಕಂದರ್ಪ ನೆಲೆಗೆ ಮೈಮರೆದ।
ಪುಲ್ಲಶರನ ತಾಪ ನಿಲ್ಲಿಸಿ ಮನದೊಳು ।
ಅಲ್ಲಿ ಕೇಳುವನು ಮಂತ್ರಿಯನು ||೧೩೬||

ಎಲ್ಲ್ಯಾರು ಕಂಡುಂಟೆ ಈ ಸತಿ ರೂಪನೆ ಪೋಲ್ವ ।
ಹುಲ್ಲೆಗಣ್ಣಿನ ಬಾಲೆಯರನು।
ರತಿದೇವಿ ಪರಿಗಾಣೆ ರಾವಣನು ಕೊಂಡೊಯ್ದ ।
ಜಾನಕಿಯ ಪೋಲ್ವಳು ನೋಡಿದರೆ ||೧೩೭||

ಅಸಮಾಕ್ಷ ಇನ್ನೆಂಥ ರೂಪ ಕಾಂತೆಗೆ ಇತ್ತ ।
ಶ್ರುತಿಮಾಡಲಳವೆ ವರ್ಣಿಯನು ।
ಡೊಂಬರ ಕುಲದೊಳಗೆ ರಂಭೆ ಜನಿಸಲು ಚೋದ್ಯ ।
ಅಂಗನಿನ್ನೆಂತು ಪಡೆದಾಕೆ ||೧೩೮||

ಇಂದಿವಳಾಡುವ ವಿದ್ಯೆ ಕುಶಲವೆಂತೊ ।
ಆಡೆಂದು ವೀಳ್ಯವ ಕೊಡಲು ।
ಗಾನವ ಪಾಡುವಳು ಕೋಗಿಲೆ ಸ್ವರಗತಿ ।
ಮೂರು ಇಮ್ಮಡಿಯ ರಾಗದಲಿ ||೧೩೯||

ಲಾಗ ಪುಟಗಳ ತೋರೆ ಲೆಗ್ಗೆ ಚೆಂಡಿನ ತೆರದಿ ।
ಭೂಮಿ ಖೇಚರವ ಸೋಂಕದಲೆ ।
ತುರಗದ ಭರದೊಳು ನಡೆವಳು ಮಿಣಿಯೊಳು ।
ಎರಳೆ ವ್ಯಾಘ್ರ ರೂಪದೋರುವಳು ||೧೪೦||

ಬೆದರಲು ಸಭೆಯೆಲ್ಲ ಗಿಳಿಯು ಗಿಡುಗನ ತೆರದಿ ।
ಕರ ದೂಡುವಳು ನೃಪಜನರ।
ಪಾಡುತ ಲಯ ಸ್ವರದ ತಾಳಗತಿಯಲಿ ದೃಷ್ಟಿ ।
ನೋಡಲು ವಿಟರು ಮರುಳಾಗಿ ||೧೪೧||

ಕೂಡಿದ ಶು[ಕ್ಲ]ದೋರಿ ಕಾಮಬಿಂದುವು ಒಡೆದು ।
ನೋಡದೆ ಅವಳ ನಾಚುವರು ।
ಅಂತ್ರದಿ ಪುವಗಳು ಮೇಲಂತ್ರ ಶಕ್ತಿಯವಾಗೆ ।
ಮಂತ್ರಮಾಯದ ಗಾರುಡವು ||೧೪೨||

ಸುತ್ತ ನೋಳ್ಪರ ಕಣ್ಗೆ ಮಿಂಚು ಪೊಳೆವಂದದಲಿ ।
ಮುಂಚೆ ನಭದೊಳಗೆ ತೋರುವಳು ।
ಅಣುವಿದ್ಯೆ ಶ್ರುಣುವಿದ್ಯೆ ಮಿಣಿಯಲಾಡುವ ವಿದ್ಯೆ ।
ಗಣೆಯನೇರುವ ಶ್ರುಣುವಿದ್ಯೆ ||೧೪೩||

ಮಳೆಯ [ಬ]ರಸುವ ವಿದ್ಯೆ ಕಡ[ಲುಕ್ಕಿಸು]ವ ಮಂತ್ರ ।
ನಡೆವ ವಿದ್ಯೆಗಳು ಖೇಚರದಿ ।
ನಾನಾ ವರ್ಣದ ವಿದ್ಯೆ ನೋಡುತಲಿ ನೃಪವರನು ।
ಧ್ಯಾನ ಮರೆದನು ನಿಮ್ಮಜ್ಜ ||೧೪೪||

ಆನೆಗೆ ಮದವಿಳಿದ ತೆರನಾಗಿ ಮಂತ್ರಿಯ ।
ಕೂಡೆ ಮಾತಾಡುವ ಕೇ[ಳ್ಬೇಗ]ನೆ।

ಕಂಡೇನ್ನೆ ಬೈಚಪ್ಪ ಭೂಮಂಡಲದೊಳಗಿಂಥ ।
ಕನ್ನೆಯರೊಳಗೆ ಹೆಣ್ಣುಗಳು ॥೧೪೫॥

ರಂಭೆಯುರ್ವಶಿಯರುಂಟೆಂಬುದೆ ಹುಸಿಮಾತು ।
ಇಂದಿವಳ ನಿಜವೆನ್ನಬಹುದು।
ಚಿತ್ರದ ಪ್ರತುಮೆಯೊಳ್ಪುಟ್ಟುವ ಇವಳಂಥ ।
ತಪ್ಪದೆ ಎಳ್ಳನಿತು ಭಾವ ॥೧೪೬॥

ಸತ್ಯವುಳ್ಳವ ಮಂತ್ರಿ ಸನ್ಮತವೆ ಮನಸಿಂಗೆ ।
ಇಟ್ಟುಕೊಂಬೆನು ಎನ್ನೊಳಗೆ ।
ಆಗಬಹುದು ಸ್ವಾಮಿ ಅರಸು ಕಟ್ಟಲು ಆರಾರ ।
ಸೋಲು ಗೆಲುವ ಕಾರ್ಯವೆನ್ನದೆ ॥೧೪೭॥

ಸಾಗುವ ತೆರನಿಲ್ಲ ಕಥೆಯ ಈಕಿಲ್ಲದೆ ।
ದಾನದಿ ತಿಳಿದುಕೊಂಬೆನಲು ।
ರಾಯರಿಗೆ ಬದಲಾರು ಬದಲಾಗಿ ಪೇಳಲು ।
ಸಿಟ್ಟು ಹನಿಗಾದಾರು ಭೂಪಾಲ ॥೧೪೮॥

ಭೂನಾಥ ಮನಸಿಟ್ಟು ಮಾದಿಗಿತ್ತಿಗೆ ಸೋಲೆ ।
ಮೇಲೆ ಆಶಿಕರಿಗಿನ್ನುಂಟೆ ।
ಬಿರಿದು ನುಡಿಯಲು ಮಂತ್ರಿ ಬಿಡಲಾರೆ ಆ ಸತಿಯ ।
ಕಡಿದು ತಿಂಬುವ ಕಾಮನೆನ್ನ ॥೧೪೯॥

ಜಡೆದಲೆಯ ಯತಿಗಳು ಒಡನುಂಡು [ಕನ್ನೆಯ] ।
ಪಡೆಯದೆ ಕೈಲಾಸಪದವ ।
ಆದುದೆ ಇದು ಎನ್ನ ರಾಜಮದದೊಳು ಮಂತ್ರಿ ।
ದೇವ ಮಾನ್ಯವರೊಳಗಿರದೆ ॥೧೫೦॥

ಭೀಮನು ಮನಸೋತು ದನುಜೆ ಹಿಡಿಂಬೆಯ ।
ಕೂಡಲಿಲ್ಲವೆ ಕ್ಷತ್ರಿಕುಲದಿ ।
ಉಡುಗೊರೆ ವೀಳ್ಯವ ಕೊಡಿಸಿ ಡೊಂಬರ ಕಳುಹಿ ।
ಪ್ರೌಢ ರತ್ನಿಯ ರಾಜ ಕರೆದ ॥೧೫೧॥

ಪೊಡವಿರಾಜ್ಯಕೆ ಮನೆಗೆ ಒಡೆಯಳಾಗಿರುಯೆಂದು
ಮಡಗಿಕೊಳ್ಳಲು ತಮ್ಮ ಬಳಿಯ ।
ಹಿರಿಯರು ಬಲ್ಲಂಥ ಅರುಹುಳ್ಳ ಜ್ಞಾನಿಗಳು
ಹೊರಗೆ ಏಕಾಂತ ಮಾಡುವರು ॥೧೫೨॥

ಕಡೆಗಾಲ ಈ ಪುರಕೆ ಸೀತೆ ಲಂಕೆಯ ಹೊಗಲು
ಅಳಿದ ರಾವಣ ಗಾದೆ ಇವಗೆ ।
ಮಂತ್ರಿ ಬ್ರಾಹ್ಮರು ಕೂಡಿ ಏಕಾಂತವಾಡುವರು
ಕಂಟಕ ಬಿಡದೀಕೆ ಕಾಲಿಂದ ॥೧೫೩॥

ಬಂಟನಾದ ವೀರ ಬಡನಾಯನು ಕಡಿದೆಂಬ
ತುಂಟ ಸೂಳೆಯನು ತರಬಹುದೆ।
ಪಟ್ಟಾಭಿಷೇಕರರು ಮುಟ್ಟರು ಪರಸ್ತ್ರೀಯ
ಶಕ್ತಿಯುಳ್ಳಡೆ ಸಲ್ವ ಜಾತಿಯಲಿ ॥೧೫೪॥

ಹತ್ತೆಂಟು ತಂದಿನ್ನು ಮದುವೆಯಾಗಲು ಮೋಕ್ಷ
ಕೆಟ್ಟ ಸೂಳೆಯರ ಸೋಂಕಿತ ಸಲ್ಲ।
ಕೇಳಯ್ಯ ಮಂತ್ರಿಗಳ ಮೇಲಿಪ್ಪ ಬೈಚಪ್ಪ
ಪೇಳುವೆನಿದಕೊಂದು ಕಥೆಯ ॥೧೫೫॥

ಮಾದಿಗ ಸತಿಯರು ಲಾವಣ್ಯವಾಗಿರೆ ಕಂಡು
ಕೂಡುವರೆ ಸೂರ್ಯಕುಲದೊಳಗೆ ॥೧೫೬॥

ಅದು ಹೇಗೆ ಚಾಮರಸೆ ತಿಳುಹೆಲ್ಲ ಪೂರ್ವದ
ನಡೆವ ರಾಯರ ಕಥೆಯನ್ನು ।
ದೃಢವಾಗಿ ಕೇಳ್ಮಗನೆ ನಿಮ್ಮಜ್ಜ ಮಾಡಿದಕೆ
ನಡೆವ ಪ್ರಸಂಗಮೂಲವನು ॥೧೫೭॥

ಲಾಲಿಸಿ ಕೇಳರಸ ಭೂಪಾಲನೆ ಜಟ್ಟಂಗಿ ।
ರಾಯ ಪೇಳುವೆ ಚಾಮರಸ।
ಭಾನಾಬ್ದಿ ವಂಶದಲಿ ರಾಯ ತ್ರಿಶಂಕನು ।
ಹೀನ ಸತಿಯಳ ಒಡಗೂಡಿ ॥೧೫೮॥

ಮಾನ್ಯರ ಮಾತೇನು ಮೂರು ಶಂಕಾಳ್ದವಗೆ ।
ತೋರದೆ ಹೀನ ಬುದ್ಧಿಗಳು।
ಊರ ಬಾರಿಕನ ಕುಮಾರಿ ಲಾವಣ್ಯಕೆ ।
ಹೊಲಗೇರಿಲಿ ಮನೆ ಮಾಡಿಸನೆ ||೧೫೯||

ರಾಯ ತ್ರಿಶಂಕನು ನವಖಾಂಡ ಪೃಥ್ವಿಯನು ।
ಆಳುವನೊಂದು ಚಿತ್ರದಲಿ ।
ಪೂರ್ವವೀ ಪಣೆಯೊಳು ಆದ ಲೇಖನ ಬಿಡದು ।
ಸೂರ್ಯಚಂದ್ರರಿಗೆ ಮುಂತಾಗಿ ||೧೬೦||

ಮತ್ತೆ ಕೇಳ್ ಬೈಚಪ್ಪ ಇತ್ತ ತ್ರಿಶಂಕನು ।
ಮತ್ತೆ ವಾಲಗದಿ ಕುಳ್ಳಿರಲು ।
ಚಕ್ರನಾದವ ತನ್ನ ಕುವರಿಯನೊಡಗೊಂಡು ।
ಇತ್ತಲಾಡುತಿರೆ ಬೀದಿಯಲಿ ||೧೬೧||

ನೋಡಿದ ನೃಪನವಳ ನಯನೇಂದ್ರಿ ದಣಿವಂತೆ ।
ಮೂಡಲು ಕುಚವು ಎದೆಯೊಳಗೆ
ಯಾರಿಂಥ ಅತಿಚೆಲ್ವೆ ಜಂಭಾರಿ ಆದಗೆ ।
ಜಾತಿ ಪದ್ಮಿನಿಯೊ ಮೇನಕಿಯೊ ||೧೬೨||

ಆಳಿದೆನು ಭೂಮಿಯನು ಮೂರು ಶಂಕೊರುಷವು ।
ನಾರಿಯ ಕಾಣೆ ಇಂಥವಳ।
ನೀರೆಯನೊಡಗೂಡಿ ಬೆಳಗಾಗಿ ಅಳಿದರೇನು ।
ಕೇಳುವನು ತಮ್ಮ ಮಂತ್ರಿಯ ||೧೬೩||

ಹರನುರಿಗಣ್ಣೊಳು ಅಳಿದವನ ಗೆಲ್ವೊಡೆ ।
ಪರಶಿವಗಳವೆ ಇನ್ನೊಮ್ಮೆ।
ಸೈರಿಸಲಾರದೆ ಸ್ಮರನ ಬಾಣದ ಲಗ್ಗೆ ।
ತರ[ಳೆ ಯಾ]ರೆಂದು ಕೇಳುವನು ||೧೬೪||

ಊರಿಗೆ ಬಾರಿಕನ ಕುಮಾರಿಯೆಂಬರು ಭೂಪ ।
ಹೀನ ಜಾತಿಗಳು ಹೊರಕುಲದ ।

ಆದರಾಗಲಿ ಮಂತ್ರಿ ಆ ನಾರಿಗೆ ಮನಸೋತೆ ।
ಆ ಕೇರಿಯೊಳರಮನೆ ರಚಿಸು ॥೧೬೫॥

ರಾಯನಾಡುವ ನುಡಿಗೆ ಪ್ರಧಾನನು ಗಹಗಹಿಸಿ ।
ತೂಗಿ[ಯೆ] ತಲೆಯ ಮನದೊಳಗೆ ।
ತೀರಿತು ಕಡೆಗಾಲ ಮೂರು ಶಂ[ಕವ]ನಾಳಿ ।
ಹೀನ ಸತಿಯಳನು ನೆರೆಯೆಂದು ॥೧೬೬॥

ಲಾಲಿಸಬಹುದು ಭೂಪಾಲ ಬಿನ್ನಹವನ್ನು ।
ಕ್ಷೀಣಜಾತಿಯಳು ಸತಿಯಾಕೆ ।
ಕಾಣದೆ ಮನವಿಟ್ಟಿ ಅನ್ಯ ಆಜ್ಞೆಗಳು ।
ಆಗಲೆ ಯಮನೊಳಗೆನಲು ॥೧೬೭॥

ಮರುಳ ಮಂತ್ರಿಯೆ ಕೇಳರಿಯ[ದಾ]ಡುವೆ ನೀನು ।
ಹಲವು ಜನ್ಮದಲಿ ಹೊಲೆಯಿಲ್ಲವೆ ।
ಹೊಲೆಯರ ಮನೆಯೊಳಗಿರಲೊಂದು ರತ್ನವು ।
ದೊರೆಗಳಾದವರು ಧರಿಸರೆ ॥೧೬೮॥

ಹೆಣ್ಣು ಹೊನ್ನಿಗೆ ರತ್ನ ಮಣ್ಣಿಗೆ ಕುಲವೇನು ।
ಸಣ್ಣ ಮಡಕೆಯಲಿ ಸೂತಕವೆ।
ಕಣ್ಣಿಟ್ಟ ಬಳಕಲಿ ಇನ್ನೇನು ಎಲೆ ಮಂತ್ರಿ ।
ಹಣ್ಣೆದಂತಾಯ್ತು ರತಿಕಲೆಯು ॥೧೬೯॥

ದೊರೆಗಳಿಗೆ ಕುಲವೇನು ತಿರುಕಗೆ ಭಯವೇನು ।
ಪದಮಲಿಂಗಕೆ ಹೊಲೆ ಛಲವೆ।
ನವರತ್ನದೊಳಗೊಂದು ಸ್ತ್ರೀರತ್ನ ಮುಖ್ಯಳು ।
ಹರಳಯ್ಯನೊಳಗೆ ಹರನುಣನೆ ॥೧೭೦॥

ದೊರೆತನವ ಮಾಳ್ಪ ನರಕವಲ್ಲದೆ ಮುಂದೆ ।
ಮರುಜನ್ಮವುಂಟೆ ಭವಭವದ ।
ಧರಣಿಯೊಳ್ಬೆರೆದುಣನೆ ಜಾತಿಯೊಡೆಯರು ಡೊಂಬ ।
ತರಳೆ ಚೆನ್ನೆಯ [ಒ]ಡನಾಡಿ ॥೧೭೦॥

ಪ್ರತಿ ಮಾತನಾಡದೆ ಮನೆಯ ಮಾಡಿಸು ಮಂತ್ರಿ ।
ರತಿನಾಥನಟ್ಟಳೆ ಘನವು ।
ಸಕಲ ಜಾತಿಗಳೊಳು ಹಿರಿಯ ಕುಲದವರಾಗೆ ।
ಪ್ರತಿ ನೀರು ಹೊರಗವರ ಮನೆಯ ॥೧೭೨॥

ಯಾರು ಮಾಡುವುದೇನು ಪೂರ್ವಜನ್ಮವು ।
ಹೀನಕುಲ ಸ್ತ್ರೀಯ ನೆರೆಯೆಂದು ।
ವಾಣಿಪತಿ ಬರೆದ ಭವ ಲಿಖಿತವು ಬಿಡದು ।
ಸಾಗಿಸು ಮಂತ್ರೀಶ ಮನೆಯ ॥೧೭೩॥

ಹರಳರ ಕೇರಿಯೊಳ್ [ಮನೆಮಾಡಿ] ಮಂತ್ರೀಶ ।
ತಿರುಗಿ ಬಂದರಸಗೆ ಎರಗೆ ।
ಬೆರಸಿ ನೋಡುವೆನಿದಕೆ ಟವುಳಿ ಮಾತನುಯೆಂದು ।
ಭಯಭೀತಿಯೊಳಗೆ ಪೇಳುವನು ॥೧೭೪॥

ಬಂದಾಗ ಕರಮುಗಿದು ರಾಜೇಂದ್ರ ಬಿನ್ನಹ ಕೇಳೊ ।
ಅಂಜುವೆ ಅರುಹಲ್ಕೆ ಮನದಿ ।
ನಂದಾದೀವಿಗೆ ಬೆಳಕು ಕಂಡರೆ ಕೂಡಿರ್ದ ।
ಗಂಡಗೆ ಮರಣ ರೀತಿಯಲಿ ॥೧೭೫॥

ಬೇಡ ದೀವಿಗೆ ಮಂತ್ರಿ ಮಾಡುವುದು ನೀನೇನು ।
ಸಾಗಿಸು ಸಕಲ ಭೂಷಣವ।
ನಾನೊಂದನೆಣಿಸಲು ತಾನೊಂದಾಯಿತುಯೆಂದು ।
ಸಾಗಲು ಮಂತ್ರಿ ಸತಿಯೆಡೆಗೆ ॥೧೭೬॥

ರಾಯ ತ್ರಿಶಂಕನ ರಾಣಿ ಗೃಹಕೆ ಪೋಗಿ ।
ಜೋಡಿಸಿ ಕರಗಳ ಮುಗಿದು ।
ಏನ ಹೇಳಲಿ ತಾಯಿ ಭೂಪಾಲ ಅಪಕೀರ್ತಿ ।
ಮೂಲೋಕದೊಳಗಿಲ್ಲವಮ್ಮ ॥೧೭೭॥

ಹರಳನ ಮನೆಯೊಳಗೆ ನೆರೆ ಚೆಲ್ವೆ ಸ್ತ್ರೀಯಿರಲು ।
ಧರಣೀಶ ಭ್ರಮೆಗೊಂಡನಮ್ಮ।

ರಚಿಸೆನಲು ಗೃಹವನು ಮಾಡಿಸಿ ನಿಮ್ಮೆಡೆಗೆ ।
ಉಸುರಿದೆ ದಯಮಾಡಬಹುದು ||೧೭೮||

ಬೀಳು ಮಾಡದೆ ತಾಯಿ ಸೇವಕನ ಬಿನ್ನಪವ ।
ಲಾಲಿಸಿ ಅವರ ಭಾವದಲಿ ।
ಈ ರಾತ್ರಿ ದಯಮಾಡಿ ಆ ಗೃಹದೊಳಗಿರಲು ।
ಕಾಲನ ಭಯವಿಲ್ಲ ನೃಪಗೆ ||೧೭೯||

ಲಿಖಿತದ ಬರಹವು ಅಪಕೀರ್ತಿ ಸಾಧನವು ।
ಮತಿಗೆಡಲು ನೃಪವರನ ಬುದ್ಧಿ ।
ಸತಿಯರ ಭ್ರಮೆಯಿಡಲಿ ಸಲುವ ಜಾತಿಯ ಮೇಲೆ ।
ಕಿರಿ ಕುಲದೊಳಗಿಡಬಹುದೆ ||೧೮೦||

ತೋರದೆ ಕುರುಹು ನೀವ್ ಹೊಸ ನೀರೆಯಂದದಿ ।
ನಾಚಿ ಮುಗು[ಳಂ]ತಿರಬೇಕು ರಾತ್ರಿ ।
ಆಗಲೈ ಎಲೆ ಮಂತ್ರಿ ಪ್ರವೀಣನಾ[ದವ] ನೀನು ।
ಜೋಡಿಸಿದೆ ಈ ಬಗೆಯ ತಂತ್ರ ||೧೮೧||

ಒಪ್ಪಿಕೊಳುತಲಿ ನಾರಿ ಕೀರ್ತಿ ಪಡೆದೆಲೆ ಮಂತ್ರಿ ।
ಪೃಥ್ವಿಯೊಳುಂಟೆ ಪೋಲ್ವವರು ।
ಇಟ್ಟ ಭೂಷಣದುಡಿಗೆ ಕಳೆದಿಟ್ಟು ಹೊರಕುಲದೊಳಗೆ ।
ಒಪ್ಪುವ ಸ್ತ್ರೀಯಾಗಿ ನಡೆಯೆ ||೧೮೨||

ರಾಯನರ್ಧಾಂಗಿಯು ಹೋಗಿರಲು ಹೊಲಗೇರಿ ।
ಗೃಹದೊಳಗೆ ದಿನಕರನು ।
ತಾಯ ಗರ್ಭವ ಸೇರೆ ರಾಯ ತ್ರಿಶಂಕನು ।
ಸಾಗಲು ಹರಿಸಿ ವಾಲಗವ ||೧೮೩||

ಕೇಳೆನ್ನ ವರಮಂತ್ರಿ ಮಾಡಿದ ಕಳತ್ರಯವ ।
ರಾಣಿ ಕರ್ಣಕೆ ಮುಟ್ಟಲೆನುತ।
ಹೋಗಲಾಗ ತ್ರಿಶಂಕು ಹೊಲಗೇರಿ ಗೃಹದಿ ।
ಲಲನೆಯೊಳಗೆ ಸುಖವಡೆಯೆ ||೧೮೪||

ತಿಳಿಯದೆ ಸತಿ ಕುರುಹ ನೆರೆಯಲು ಹೊಸಬಾಲೆ ।
ತೆರದೊಳು ಕಂಡು ಸುಖದೊಳಗೆ ।
ಅಗಲಿದ ರತಿಯನು ಅಳಿದ ಮನ್ಮಥ ಕಂಡು ।
ಕೊಡುವಂತೆ ಪಲ ಬಗೆಯ ಸುಖವ ||೧೮೫||

ಘನವಾಗಿ ನೃಪನಿರಲು ಮನಸಿಚಾಂತಕನಲಿ ।
ನೆಲೆಗೊಂಡ ಸತಿಯ ಗರ್ಭದಲಿ ।
ತಂದೆ ಮಾಡಿದ ಕರ್ಮ ಕಂದರ ಕಾಡದೆ ।
ಬಿಂದು ನಿಲ್ಲಲು ಹೊಲಗೇರಿಯೊಳಗೆ ||೧೮೬||

ಮುಂದಲ್ಲಿ ಜನಿಸಿದ ಹರಿಶ್ಚಂದ್ರರಾಯನ ಪಾಡು ।
ಇದರಿಂದಲಾದುದು ಬೈಚಪ್ಪ।
ಸತ್ಯದಿ ಹರಿಚಂದ್ರ ಸಮರ್ಥನಾಗಲು ಮಂತ್ರಿ ।
ಕೀರ್ತಿಪಡೆಯನೆ ಕಾರ್ಯಚರಿತೆ ||೧೮೭||

ಕರ್ತು ಹರನು ಮೆಚ್ಚೆ ಕೈಲಾಸ ಪದವನೆ ಕಂಡ ।
ಗೊತ್ತಹುದೆ ತ್ರಿಶಂಕನ ಮಾತು ।
ಶಂಕು ಮೂರಾಳ್ದನ ಉಂಟೆ ಕಥೆ ಕಾರ್ಯಗಳು ।
ಕೆಟ್ಟ ಮನುಜನಿಗೆ ಕಡೆಯಾದ ||೧೮೮||

ಬಿಟ್ಟನಾದಿಯ ಗುರುವ ಮ[ತ್ತೇಕಾಕಿ]ಯಾಗಿ ।
ಕೆಟ್ಟೆ ಹರಿಹರನ ಕಾಣದಲೆ ।
ಅಷ್ಟು ಬಾಳಿದ ಮೇಲೆ ಬುದ್ಧಿ ಕೂಡದು ಅವಗೆ ।
ಭ್ರಷ್ಟ ಕಂಪಿಲನ ಮಾತೇನೊ ||೧೮೯||

ಕೆಟ್ಟ ಬುದ್ಧಿಯ ಗ್ರಹಿಸಿ ಕೆಡನೆ ರಾವಣ ಹಿಂದು ।
ಸತ್ಯದ ಕಥೆ ಪೇಳ್ವ ಚಾ[ಮ]ಣ್ಣ ।
ರಾಯ ತ್ರಿಶಂಕುಗೆ ಆದ ಪಾಡನು ಕೇಳು ।
ಮಾನವರ ಮಾತೇನೊ ಮಂತ್ರಿ ||೧೯೦||

ಆದಿ ಸೂಳೆಯ ತಂದ ರಾಯ ರತ್ನಿಯ ಮೂಲ ।
ನೋಡುವ ನಡೆವ ಕಾಲ್ಗತಿಯ।

ಚೆಂದದ ಪ್ರಸಂಗ ಎಂದಾಗ ಬೈಚಪ್ಪ ।
ಕೊಂಡಾಡಿ ಅವನು ಮಂತ್ರಿಯನು ||೯೧||

ವಂದಿಸಿದನು ನಾನಾ ತಂತ್ರಭಾಗವ ಮಾಡಿ ।
ಕುಂದಾಗದಂತೆ ಯಮನೊಳಗೆ।
ಅರಸು ಮೆಚ್ಚಿದ ಬಂಟ ದೊರೆಯಲ್ಲವೆ ಲೋಕದಲಿ ।
ಪುರುಷಗೆ ಮೆಚ್ಚದ ಸತಿಯು ||೯೨||

ಅರಿದು ಮಾಡಲು ಹಾದರ ಪರರ ಭೀತಿಗಳೇನು ।
ಬರಿದೆ ನಾವೆಲ್ಲರಾಡುವುದು ।
[ಅನರ್ಥ] ನೋಡುವೆ ಮುಂದೆ ।
ಗೋಪ್ಯದೊಳವರು ಇರುತಿರಲು ||೯೩||

ಮತ್ತೊಂದು ಗ್ರಹಿಸಿದ ರಾಯ ಕಂಪಿಲ ಮನದಿ ।
ಯಾತ್ರೆ ಮಾಡುವ ರಾಮೇಶ್ವರನ ।
ಎನ್ನ ಮಂತ್ರೀಶನೆ ನಾಳಿನ ದಿನದೊಳು ।
ದೇವಾಲಯಕೆ ಹೋಗಬೇಕು ||೯೪||

ಸಾಗಿಸು ಬೇಕಾದ ಸೌರಣೆಯೆನ್ನಲು ।
ಮಂತ್ರೀ[ಶ] ಒಳಿತು ಬುದ್ಧಿ ಎನಲು।
ಕಬ್ಬು ಕಡಲೆ ಬೆಲ್ಲ ಉದ್ದು ತೆಂಗಿನಕಾಯಿ ।
ಸಿದ್ದಿಗೆ ಎಣ್ಣೆ ಕುಪ್ಪೆಗಳು ||೯೫||

ಸಜ್ಜಿಗೆ ಒಡೆಗೋದಿ ಸಕಲ ಸನ್ನಾಯವನು ।
ಬುದ್ಧಿಶಾಲಿಗಳೊಡನೆ ಕಳುಹಿ।
ಅಕ್ಕಿ ಸಕ್ಕರೆ ಜೇನುತುಪ್ಪ ರುಚಿಗಾಯನು ।
ಲೆಕ್ಕವಿಲ್ಲದೆ ಸಾಗೊ ಹಣ್ಣು ||೯೬||

ಬತ್ತಿ ಬಾಣದ ಬಿರುಸು ಕರ್ಪೂರ ಸಾಂಬ್ರಾಣಿ ।
ಅಷ್ಟಭಾಗದ ಹೋಳೆಲೆಯು।
ಸಾಗಿಸಿ ಸಕಲವ ಬೇಕಾದ ಸೌರಣೆ ।
ಪಾಕ [ಮಾಡುವ] ಹಣ್ಣುಗಳು ||೯೭||

ಜ್ಯೋತಿರ್ಮಯನ ಗುಡಿ ರಚಿಸಿ ಶೃಂಗರ ಮಾಡಿ ।
ಭೂಪಗರುಹಲು ವರಮಂತ್ರಿ ।
ತೋರಣ ಮೇಲ್ಕಟ್ಟು ಬೀದಿ ಶೃಂಗರಮಾಡಿ ।
ಭೇರಿ ಕಹಳೆಗಳೊದರುತಲಿ ॥೧೯೮॥

ಕೂಡಲು ಬಲ ತುರಗ ಸಾರಿಸಿ ನಗರದೊಳ್ ।
ರಾಯ ಜಟ್ಟಂಗಿ ಯಾತ್ರೆಯನು ।
ಮಂತ್ರಿ ಪ್ರಧಾನರು ಪಟ್ಟ[ಸ]ತಿ ಹಿರಿಯರು ।
ಸಕಲ ಜಾತಿಗಳು ಭೂಸುರರು ॥೧೯೯॥

ಸತಿಯರು ಪಟ್ಟದರಾಣಿ ಒಡನೆ ಬಹ ।
ಸಖಿ ಜನದ ಜಾತ್ರೆ ಸಹವಾಗಿ ।
ಪಗಲೊಡೆಯ ರಥವೇರಿ ಪ್ರಭೆಸೂಸಿ ಬರುವಂತೆ ।
ನಗರವ ಪೊರಡೆ ರಾಜೇಂದ್ರ ॥೨೦೦॥

ಚತುರಂಗ ಬಲಗೂಡಿ ಬಂದು ವನದೊಳಗಿಳಿಯೆ ।
ಲಿಖಿತವಳಿಯಲು ಭಾಸ್ಕರನು ।
ವರುಣಾದ್ರಿಯಲ್ಲಿ ಪೂರ್ವದ ಕಳೆ ಸೂಸೆ ।
ಹರಿಣಾಂಕಧರನು ಪೊಗಲೆ[ಣೆ]ಸಿ ॥೨೦೧॥

ಮೆರವಣಿಗೆ ಉತ್ಸವ ಕರಡೆ ಪಾತ್ರಗಳಿಂದ ।
ಹರನ ಊಳಿಗವ ನಡೆಸುವರು ।
ಅಷ್ಟಭೋಗದ ಪೂಜೆ ಕೊಟ್ಟನು ನೃಪ ಹರಗೆ ।
ಮೆಚ್ಚುವಂದದಿ ಸುರಗಣವು ॥೨೦೨॥

ನಿತ್ಯದಲಿ ಅಳಿವ ತಾ ಪೂರ್ವದ ವೀರ ತಾವ ।
ಒಪ್ಪಿಸಿ ಹರನ ಊಳಿಗವ ।
ಉದಯವಾಗಲು ರಾಯ ಬಿಜಗೈಸಿ ಸ್ವಾಮಿಯನು ।
ಪರಮಾನ್ನ ಭೋಜನ ಸವಿದು ॥೨೦೩॥

ಜನಕನು ನಿಮ್ಮಯ್ಯ ಅಯ್ಯ ಮಾಡಿರುವಂಥ ।
ವನಕೆ ಬಿಜಯಂಗೆಯ್ಯೆ ನೋಡಲ್ಕೆ ।

ತಂದೆ ಹಾಕಿಸಿದಂಥ ಶೃಂಗಾರವನ ನೋಳ್ಪೆನೆಂದು।
ನಡೆಯಲು ತಾನು ನೃಪವರನು ॥೨೦೪॥

ಸಂಗಡ ಮಂತ್ರಿಗಳು ಸತಿಯರನೊಡಗೂಡಿ ।
ಬಂದನು ನಿರೊರುಕ್ಷ ನೋಡ ।
ಗಂಧ ಚಂದನ ವೃಕ್ಷ ನಿಂಬೆ ನೇರಿಲು ದ್ರಾಕ್ಷೆ ।
ತೆಂಗು ಬಾಳೆಯು ಬೆಲ್ವತವು ॥೨೦೫॥

ಅಂಬಟ್ಟೆ ಕಿರುನೆಲ್ಲಿ ಅಶ್ವಜಾಲದ ವೃಕ್ಷ ।
ಜಂಬುದ್ವೀಪಾಂತ್ರದ ದ್ರಾಕ್ಷಿ ।
ನಾಗಸಂಪಗೆ ನಂದಿ ದಾಳಿಂಬ ನೂರೆಂಟು ।
ಬಾಲರ ಪಡೆದ ಪಲಸುಗಳು ॥೨೦೬॥

ಬಾಲೆಯರ ಪಡೆಯದೆ ಮಾವನೆಂಬರು ಲೋಕ ।
ಆ ಕಾಲದಲಿ ಫಲದೋರೆ।
ಆ ವನದ ಶೃಂಗಾರ ಮಗನ ಹರುಷದಿ ನೋಡಿ ।
ಕೊಳನ ತೀರಕೆ ಬಂದು ಕುಳಿತು ॥೨೦೭॥

ಪಲಬಗೆಯ ಪಣ್ಣ ಸವಿದು ಬಳಲಿಕೆಯನು ।
ಕಳೆಯುತಲಿ ರಾಯನಿರಲಿತ್ತ।
ವೃಕ್ಷದೊಳಿರುವಂಥ ಪಕ್ಷಿಜಾತಿಗಳೆಲ್ಲ ।
ಅಕ್ಕರೆಗೊಳುತ ಮರಿಗಳಿಗೆ ॥೨೦೮॥

ರೆಕ್ಕೆಯ ಪಸರಿಸಿ ಗುಟುಕ ಕೊಡುವುದ ನೋಡಿ ।
ಉಕ್ಕಲು ದುಃಖ ಹರಿಯಮ್ಮಗೆ ।
ಪಕ್ಷಿ ಜೀವನಕುಂಟು ಮಕ್ಕಳ ಅಪೇಕ್ಷೆ ।
ಅಕ್ಕರದೊಳಗೆ ಸಲಹುವುದು ॥೨೦೯॥

ಇಂತೊಮ್ಮೆ ಗುಟುಕನು ಕಚ್ಚಿ ಮುದ್ದಾಡುವ ।
ಪಕ್ಷಿಗೆ ಕಡೆ ನಮ್ಮ ಜೀವ ।
ಮಕ್ಕಳಿಲ್ಲದ ಮನೆಯು ಒಕ್ಕಲಿಲ್ಲದ ಗ್ರಾಮ ।
ಭಕ್ತಿಯಿಲ್ಲದನ ಶಿವಪೂಜೆ ॥೨೧೦॥

ಮುಕ್ಕಣ್ಣನವತಾರ ಇಲ್ಲದ ಊರನು ।
ಹೊಕ್ಕರೆ ಫಲವೇನು ಕಾಂತ।
ಬಾಲರಾಡದ ಮನೆಯು ದೀವಿಗಿಲ್ಲದ ದೇವಾಲ್ಯ ।
ಹಾಲು ಹಯನಿಲ್ಲದ ಹಬ್ಬ ||೨೧೧||

ಕಾಲೆರಡು ಇಂಗಿದ ಮನುಜನ ತೆರನಂತೆ ।
ನಾರಿಗೆ ದುಃಖ ಉಮ್ಮಳಿಸೆ ।
ಅರಸುತನಗಳು ಯಾಕೆ ಆನೆ ತುರಗವ ಪಡೆದು ।
ಸರ್ವ ಭೋಗಗಳು ಇನ್ಯಾಕೆ ||೨೧೨||

ತನುಜರನು ಪಡೆಯದ ಮನುಜರು ಊರಿಗೆ ।
ಸಮನಹುದೆ ನೂರೆಂಟು ಕುಲದಿ ।
ಏನು ಪಡೆಯಲು ಹಾನಿ ಸಂತಾನ ಪಡೆಯದ ಬಳಿಕ ।
ಜೇನಿಟ್ಟು ಪರರು ತಿಂಬಂತೆ ||೨೧೩||

ನಾವಿದ್ದು ಫಲವೇನು ಸಂತಾನವಿಲ್ಲದ ಜೀವ ।
ಹಾಳೂರ ಹದ್ದಿನ ತೆರದಿ ।
ಕ್ಷೋಣಿ ಚತುರಂಗ ಪ್ರಧಾನ ಮಾನ್ಯಗಳು ಇರಲು ।
ಹೇಳಬಲ್ಲರೆ ತಮ್ಮ ಹೆಸರ ||೨೧೪||

ಆಲದ ಬಿಳಲಂತೆ ಕುಡಿ ಸಾಗಿಬಂದರೆ ।
ಪುಣ್ಯ ರಾಣಿಯ ಸುಖಕೆಣೆಯೆ।
ದುಃಖಸಲ್ಲದು ನಾರಿ ಮಕ್ಕಳನು ಪಡೆಯಲ್ಕೆ ।
ತನ್ನಿಚ್ಛೆಯೇ ಲೋಕದೊಳ್ಮರುಳೇ ||೨೧೫||

ಮುಕ್ಕಣ್ಣ ಹರನೊಳು ಪಡೆಯದೆ ನಾವ್ ಬಂದು ।
ಇಲ್ಲ್ಯತ್ತರೇನು ಫಲ ಕಾಂತೆ ।
ಸತಿಯೆ ಕೇಳೆಲೆ ನಾರಿ ಮತಿಗೆಟ್ಟು ಶೋಕಿಸುವೆ ।
ಸುತರ ಪಡೆಯಲು ಸುಮ್ಮನಹುದೆ ||೨೧೬||

ಸಿತಕಂಠನೊಳು ಮುನ್ನ ಪಡೆಯದೆ ನಾವ್ ಬಂದು ।
ವಿಕಳತೆಬಡುವರೆ ನಾರಿ ।

ಮಕ್ಕಳಾದಡೆ ಏನು ಅಪಕೀರ್ತಿ ಸಾಧನವು ।
ಹೆತ್ತವರಿಗೆ ಬಿಡದ್ಹೀನ ॥೨೧೭॥

ಪೃಥ್ವಿಪಾಲಕರಿಗೆ ದತ್ತಪುತ್ರನು ಜನಿಸೆ ।
ಮರ್ತ್ಯವುಳ್ಳನಕ ಅಪಕೀರ್ತಿ ।
ಹಿಂದಲಾಗಮ ತಿಳಿಯೆ ಚಂದ್ರನ ಮುಖದವಳೆ ।
ಒಂದೊರ್ವ ವಿರಾಟನ ಸುತನು ॥೨೧೮॥

ಕೌರವನೊಡನೆ ಕಾಳಗಡೊಳಗೆ ಓಡೆ ।
ತಂದೆಗೆ ಬರದೆ ಅಪಕೀರ್ತಿ।
ಶೋಕವನು ಬಿಡು ನಾರಿ ಈಶ್ವರನ ಸ್ತುತಿ ಮಾಳ್ಪ ।
ಲೇಸಾಗಿ ಪಡೆವೆ ಸಂತಾನವ ॥೨೧೯॥

ಭಾಷೆ ರಾಣಿಗೆ ಇತ್ತು ಭವರೋಗ ಜಟ್ಟಿಂಗ ।
ರಾಮೇಶ ಗುಡಿಗೆದ್ದು ನಡೆಯೆ।
ಬಾಲರ ಅಪೇಕ್ಷೆ ರಾಯಗೆ ತಲೆದೋರಿ ।
ಸಾಗಲು ಹರನ ಆಲಯಕೆ ॥೨೨೦॥

ಜೋಡೆರಡು ಕರ ಮುಗಿಯೆ ದೀರ್ಘ ಪ್ರಣತರಾಗಿ ।
ರಾಣಿ ರಾಜೇಂದ್ರ ಇರ್ವವರು ।

ವ್ಯಾಲಪದ :

ಹರನೆ ಜಯತು ನಿಮ್ಮ ಘನವ ಸ್ಮರಿಸುವೆನು ।
ಪಾಲಿಸೆನಗೆ ಗಿರಿಜಾರಮಣ॥
ಮರವೆ ಮನುಜನ ಹೊ[ಲ್ಲಗು]ಣಂಗಳ ನೋಡಸಲ್ಲದು।
ಹರಿಯ ಸುತನ ಹತವ ಮಾಡಿ ಧರಿಸಿದಭವ ಬೂದಿಯನ್ನು ॥
ಧವಳವರ್ಣ ದಯಮಾಡೊ ರಾಮೇಶಲಿಂಗ ತ್ರಾಹಿದೇವ ।
ಸಕಲಜೀವದಯಾಪರಿಯನ್ನು ನಂಬಿದವರ।
ಆವ ಮುಖದಿ ಸಲಹುತ್ತಿರ್ಪೆ ಶೂಲಧರನೆ ।
ಭೂಮಿರಾಜ್ಯವನ್ನು ಪಡೆದೆ ಪಾದಕಮಲ ಪೂಜೆಮಾಡಿ ।
ಜ್ಞಾನಗುಣದೊಂದು ಮರೆದೆ ಸಂತಾನಫಲವನು ॥

ಇತ್ತೆ ಭೋಗ ಸಕಲಚಂದ್ರ ಅಮರಾಧೀಶ ಪದವಿಗಳನು
ದತ್ತಬುದ್ಧಿ ಮತಿಗಳಿಂದ ಮತ್ತೊಂದು ಮರೆದೆನು ।
ಕೊಟ್ಟ ಭೋಗನುಣ್ಣುವುದಕ್ಕೆ ಪುತ್ರರಿಲ್ಲ ಪಾಲಿಸೆಂದು ।

ಮುಕ್ತಿಧರನೆ ನಿಮ್ಮ ಭಜಿಪೆ ರಾಮೇಶಲಿಂಗ॥
ಬೇಡುವೆನು ಹರನೆ ನಿಮ್ಮ।ದಯಮಾಡದಿರಲು।
ಹರಣಗಳನು ನೀಡುವೆನು ಪಾದದೆಡೆಯ ಹಾಯ್ದು ಶೂಲವ।
ಊನವ್ಯಾಧಿ ತನುಜರೆನಗೆ ಬೇಡ ಹರನೆ।
ಜಗವನೊತ್ತಿ ಆಳುವಂಥ ಧೀರನೆನಗೆ ಪಾಲಿಸೆನಗೆ।

ಅನಿತರೊಳಗೆ ಹರನು ದಯಕರಿಸಿ ಕೊರಳಿನ।
[ಹೆದೆ]ಪುಷ್ಪವನು ತೆಗೆದಿಡಲು।ಮನಸಿಗೆ ಸಂಶಯ ನಿರ್ಧರವು।
ಕಾಣದು ಗುರುವೆ ಅಭಯ ಪ್ರಸಾದ ಪಾಲಿಪುದು।
ತಿಗುಳಾಣ್ಯ ಮುಗುಳಾಣ್ಯ ತೆಲುಗಾಣ್ಯ ಚತುರ್ದಿಕ್ಕು।
ನವಖಾಂಡ ಇದಿರಿಲ್ಲವೆಂಬ।ಚದುರ ಪ್ರತಾಪಿಯ।
ಹೃದಯದಿ ಕೊಡಬೇಕು।ಅಧಮನಾಗಲು ಒಲ್ಲೆ ಹರನೆ।
ಸೋಮಧರನಿ[ಗೆ] ಶಾಂತಿ ಪುಟ್ಟಿ।ಕೋಮಳಾತ್ಮದಿ ಹಿಗ್ಗಿ ಬೇಡಿದ ವರವಿತ್ತು ಹರನು।
ಕಾಲಭೈರವನಂಥ ಕುಮಾರನಾಗಲಿಯೆಂದು ತ್ರಿಶೂಲದ ಪ್ರ[ಸಾ]ದವಿಡಲು।
ಗಂಧಪ್ರಸಾದವ ತಂದು ತಮ್ಮಡಿ ಕೊಡೆಯೆನಲು।
ಒಂದಾರು ಭುಜವಾಗೆ ನೃಪನು।
ಚಂದ್ರಧರನ ತಮ್ಮ ವಂಶವನುದ್ಧಾರವ ಮಾಳ್ಪ।
ಮಂಡೆಯ ಮೇಲಿಟ್ಟುಕೊಂಡ।
ಕದಳಿಯ ಫಲದಲ್ಲಿ ಹುದಗಿ ಪ್ರ[ಸಾ]ದವ।
ಮಡದಿ ಹರಿಯಮ್ಮಗೆ ಕೊಡಲು। ಕರುಣೆಯಾಗಿ ವರುಷದನೇ।
ಯಾಕೆ ತೋರಲು। ಬೆರಗಾದ ಮನಮೂರ್ಚೆಯೊಳಗೆ।
ಪುತ್ರ ಕೇಳ್ಳೆ ನಿಮ್ಮ ಪಿತನ ಜನನತ್ವ ಹತ್ತಿತ್ತೆ।
ಕರ್ಣಶೋಭಿತವೊ ಇತ್ತನು। ಹರಶಂಭು ಜಟ್ಟಂಗಿ।
ರಾಮೇಶ್ವರನಾ ಶಕ್ತಿಯಾದಂಥ ವರಪಿಂಡ।
ಜನ್ಮ ಪಾವನ ಗುರುವೆ ಮುಗಿಸಿ ಇಂದಿಗೆ ವಚನ।
ಪಗಲೊಡೆಯ ತಾಯೊಡಲಗಂಡ।
ಮೃಗಧರನು ಹಂಪೆ ವಿರೂಪಾಕ್ಷನ ವರದೊಳು।
ಮುಗಿಯಲು ಪ್ರ[ಥ]ಮ ಏಕಸಂಧಿ*

❖❖

* + ಸಮಾಪ್ತ ಮಂಗಳ ಮಹಾಶ್ರೀ.

ಸಂಧಿ : ಎರಡು

❖

ಬಾಲರಾಮನ ಜನನ-ಹೊಸಮಲೆಯ ಭವಿಷ್ಯ

---

*ಕಂದ:

ಹರನಿತ್ತ ಪುಷ್ಪ ಫಲದೊಳು ।
ತರಳೆ ಹರಿಯಮ್ಮನೊಳಗೆ ಕುರುಹಂದೋರಲು।
ಹರಿಣಾಂಕನುಬ್ಬುವಂತೆ ತಾಯ ಹೃದಯದಿ ।
ಬಿರುದಾಂಕ ರಾಮೇಂದ್ರ ಜನಿಪ ವಾರ್ತೆಯ ಲಾಲಿಸಿ॥

ಪದನು:

ಶ್ರೀ ಗುರುವರ ಶಂಭು ಭಾಗೀರಥೀಶನೆ ।
ನಾಗಭೂಷಣನೆ ನಂದೀಶ।
ಭೋಗಿಭೂಷ ಭರ್ಗ ಭಾಳಾಕ್ಷಿ ಸಹಿತನೆ ।
ಶ್ರೀಗಿರಿ ಮಲ್ಲೇಶ ಕೊಡು ಮತಿಯ ॥೧॥

ಗಜಮುಖನೆ ಗಣನಾಥ ಜಗವೆಲ್ಲ ಪೂಜಿ[ತ]ನೆ ।
ಅಗಜೆಯ ರಮಣನ ಪ್ರಿಯ।
ನಿಜದೋರಿ ತಗಡೂರ ಕಟ್ಟೆಯೊಳ್ ನೆಲಸಿದ ।
ಭುಜಗಧರನೆ ವಿಘ್ನರಾಜ ॥೨॥

ದಿವರಾತ್ರಿ [ಪರಿ]ಯಲು ದಿನಕರನು ರಥವೇ[ರೆ] ।
ಸ್ವರವುದೋರಲು ಕಕ್ಕುಟನು।
ಹರನ ನೆನೆವುತಲೇಳ್ವ ನೃಪವರನು ಜಟ್ಟಂಗಿ ।
ಧರಿಸಲು ಕಾಮಭಸಿತವನು ॥೩॥

ಸತ್ಯರಾಮೇಂದ್ರನ ಪುತ್ರನು ಜಟ್ಟಂಗಿ ಭೂ ।
ಪೋತ್ತಮ ಪರಮಾನ್ನ ಸವಿದು।
ಇತ್ತರ ಗಜ ತುರಗ ಬಲದೊಡೆ... ।
ಹತ್ತಲು ಸದರ ಚಾವಡಿಯ ||೪||

ವಾಲಗ ನೆರೆಯಲು ಕೇಳು[ತ] ಗುರುವರ್ಯ ।
ಏರಿದ ಪಲ್ಲಕ್ಕಿ ನೆರೆಯೆ।
ಕಾಣುತ್ತ ರಾಜೇಂದ್ರ ದೀರ್ಘ ಪ್ರಣತನಾಗಿ ।
ಬೇರೊಂದು ಸದರ ಬಿಜಗೊಳಿಸಿ ||೫||

ಗುರುರಾಯ ಕರುಣಿಸಿ ದಯಮಾಡಿ ಅಜ್ಜಗೆ ।
ಮಗನಾದ ಸುಪ್ರಸಂಗ[ವನು]
ಉರಗಭೂಷಣನೊಲಿದು ಪೂರ್ವಿತ್ತ ಫಲದೊಳಗೆ ।
ಜನನತ್ವವಾ[ದುದನೊರೆಯಿ] ||೬||

ಲಾಲಿಸೊ ಗುರುಪುತ್ರ ಲೀಲೆ ನಿಮ್ಮಯ್ಯನ ।
ಮೂಲ ಪ್ರಾರಂಭ ಕೃತಿಯೊಳಗೆ।
ಸ್ವಾಮಿಯ ವರದೊಳು ಪ್ರಸಾದವದು ನಿಮಗೆ ।
ಶೋಭಿತ ವಾರ್ತೆ ಕರ್ಣದಲಿ ||೭||

ರಾಮೇಶಲಿಂಗಕ್ಕೆ ಮಾಡಿಸಿ ಪರುಪಾಡ್ಯ ।
ದಾನಧರ್ಮಗಳನು ಕೊಡಿಸಿ।
ಸಾಮರಾಧನೆ ಸಕಲದೇವ ಬ್ರಾಹ್ಮರಿಗೆಲ್ಲ ।
ದಾನ ಮಾನ್ಯಗಳನು ಬಿಡಿಸಿ ||೮||

ನಂದಿವಾಹನಗೆ ತ್ರಾಹೆಂದು ಕಂಪಿಲರಾಯ ।
ವಂದಿಸಿ ಕರಮುಗಿದು ಪುರಕೆ।
ಮಂದಿ ಮಾರ್ಬಲ ಕೂಡಿ ನಡೆಯಲು ನಿಮ್ಮಜ್ಜ ।
ಕುಂಭಿನಿ ಒದರ್ವ ರವದೊಳಗೆ ||೯||

ಕರಿ ತುರಗ ಕಾಲಾಳು ಪೊಡೆವ ಭೇರಿಯ ನಾದ ।
ಬಿರಿದಿನೆಕ್ಕಟಿಗ ಮಾನ್ಯೆಯರು ।

ವರುಣಾದ್ರಿ ಸ್ಥಾನಕ್ಕೆ ರವಿ ಬಂದು ಇಳಿವಂತೆ ।
ನಗರವನು ಪೊಗಲು ರಾಜೇಂದ್ರ ॥೧೦॥

ಬಂದು ಹಜಾರದ ಮುಂದಿಳಿದು ಕರಿಘಟೆಯ ।
ಮಂದಿ ಮಾರ್ಬಲವನು ನೋಡಿ।
ನಮ್ಮ ಸ್ವಾಮಿಯ ಪೂಜೆ ಚೆಂದವಾದುದು ಮಂತ್ರಿ ।
ಮಂದಿಗೆಲ್ಲ ಪೋಗೆನಲು ॥೧೧॥

ರಾಯ ಭೂಪಾಲನೆ ಪೋಗುವೆನು ಬಿಜಮಾಡಿ ।
ಕೂಡೆ ಕರಮುಗಿದು ಬಲವೆಲ್ಲ।
ರಾಮೇಶ ಗತಿಯೆಂದು ರಾಯನರಮನೆ ಪೊಗಲು ।
ತಾವರೆ ಸಖನಸ್ತಕಿಳಿದ ॥೧೨॥

ರವಿಶಶಿ ತಾಯೊಡಲ ಕಡಲಿಗೆ ಇಳಿಯಲು ।
ಪರಮಾನ್ನ ಸವಿದು ನೃಪವರನು।
ಪರಮ ಸಂತೋಷದಿ ಒರಗಿ ನಿದ್ರೆಯ ಮಾಡೆ ।
ಹರ ಬಂದು ಸುಳಿಯೆ ಸ್ವಪ್ನದಲಿ ॥೧೩॥

ಚಕ್ರಧರನ ಸುತನ ಶಿಕ್ಷಿಸಿ ಭಸಿತವನು ।
ಇಟ್ಟವ ಸುವರ್ಣ ತೊಟ್ಟಿಹನು ।
ಭಿಕ್ಷಾಪಾವನ ಮೂರ್ತಿ ಬಂದಾಗ ನೃಪವರನ ।
ಅಕ್ಷಿಗೆ ಸುಳಿದ ಆ ವೇಳೆ ॥೧೪॥

ಬರುವಾಗ ಭವರೋಗ ಭಯರೂಪನೇ ಧರಿಸಿ ।
ಕುಂಜರದೈತ್ಯನ ಕೊಂದ ತೆರದಿ ।
ದ್ವಂದ್ವದಿ ನೂರೆಂಟು ಭೂತ ಮರುಳ ತಂಡ ।
ಅಂದು ಸುಳಿಯಲು ಅಜ್ಜಯಗೆ ॥೧೫॥

ಜಡೆಗಳು ಜಡಿಯುತ್ತ ಪಿಡಿದ ತ್ರಿಶೂಲಗಳು ।
ತೊಡಗಿದ ಮೈಯೆಲ್ಲ ಉರಗ ।
ಹೊದೆದು ಭಸ್ಮಾಂಗ ರುದ್ರಾಕ್ಷಿ ಕಾವಿಯ ಕಂತೆ ।
ದಿಗಿಲನೆ ರಾಯ ಕಂಗೆಡಲು ॥೧೬॥

ಕಣ್ಣ ತೆರೆಯಲು ಸರ್ಪ ತನ್ನ ಕಡಿಯವೆಯೆಂದು ।
ಬಿಮ್ಮನೆ ಬಿಗಿದು ಮುಚ್ಚುವನು ।
ನಮ್ಮಯ್ಯ ಬರಬೇಡಿ ಬೆದರುವೆ ಮುಂದಕ್ಕೆ ।
ಕೊಡುವೆ ನೀವೇನ ಕೇಳಿದರು ||೧೭||

ಒಡೆಯರೆ ಹಿಂದಕ್ಕೆ ನಿಲಲಾಗದೆ ಸ್ವಾಮಿ ।
ಕಡಿಯವೆ ನಿಮ್ಮ ಹಾವುಗಳು ।
ಕೊಡುವೆನು ನಿಮ್ಮ ಮನದಣಿಯ ವಸ್ತುವ ನಾನು ।
ಉಳುಹಯ್ಯ ಎನ್ನ ಪ್ರಾಣವನು ||೧೮||

ಯಾರು ಬಿಟ್ಟರು ಇತ್ತ ಗಾರುಡಿಗ ಮಹಿಮನ ।
ಬಾಗಿಲ ಜನರು ಏನಾಯ್ತು ।
ದೂರಮಾಡುವೆನೆನಲು ಬಾಯಿ ಬಾರದೊ ಶಿವನೆ ।
ತೀರಿತೆ ಫಲವಿಂದು ಎನಗೆ ||೧೯||

ಹೆದರಬೇಡವೊ ಮಗನೆ ಹೃದಯದೊಳೊರ್ವನು ।
ಚದುರ ಪ್ರತಾಪ ಜನಿಸುವನು ।
ಇದಿರಿಲ್ಲ ಅವನಿಗೆ ಭುವನ ನವಖಂಡಗಳು ।
ವಿಧಿವಾಸ ಸ್ವಲ್ಪ ಕಿಂಚಿತವು ||೨೦||

ಛಪ್ಪನ್ನ ರಾಯರೊಳ್ ಕಪ್ಪವ ತೆಗೆವನು ।
ಸತ್ಯದೊಳು ಹರಿಚಂದ್ರನೆ[ನಿ]ಸುವನು ।
ಪರಸ್ತ್ರೀಯ ಒಪ್ಪಕೆ ಸಿಲುಕನು ಒಂದು ಕಂಟಕವುಂಟು ।
ತಪ್ಪದಾಳ್ವನು ಮೂವತ್ತೊರುಷ ||೨೧||

ಸ್ವಪ್ನದಿ ಹರಬಂದು ಕೃಪೆಯ ಪಾಲಿಸಿ ಹೋಗೆ ।
ನೃಪವರನು ಬೆದರಿ ಹಮ್ಮೈಸಿ ।
ಈ ಪರಿ ತಿಳಿದೆದ್ದು ಎಡಬಲದ ಸತಿಯರನು ।
ತಡವರಿಸಿ ಹೆದರಿಯಬ್ಬರಿ[ಸೆ] ||೨೨||

ಕಾಂತನ ಕೈಸನ್ನೆ ಕಂಡು ಸತಿಯರು ಹೆದರಿ ।
ಬಿಮ್ಮನೆ [ಬಿ]ಗಿದು ತಬ್ಬುವರು ।

ಎದೆಹಾರಗಳ ಬಿಡಿಸಿ ಏನೆಂದು ಕೇಳಲು ।
ಮೃದು ಬಾಲನಂತೆ ತೊದಲಿಪನು ॥೨೩॥

ಮಡದಿ ಕೇಳೆಲೆ ಇರುಳು ತಿಳಿದ ಸ್ವಪ್ನದ ಬಗೆ ।
ಎದೆ ಧೈರ್ಯನಾಗಲು ಊಳಿದೆ।
ನಡುಗುವುದು ಜೀವಾತ್ಮ ಅಡಗಿ ಇರುವನು ದೀಪ ।
ವಿಡಿದು ನೋಡಿದರೆಡಬಲನ ॥೨೪॥

ನಾರಿ ಕೇಳೆಲೆ ರಣಧೀರನಾಗಲು ಉಳಿದೆ ।
ಸೇರಿಲ್ಲ ಪ್ರಾಣ ಡಿಂಬದಲಿ ।
ಸ್ವಾಮಿ ಜಟ್ಟಂಗಿಯ ಪೂಜೆ ಫಲದೊಳು ಮಿಕ್ಕ ।
ಜೀವಿಯಾಗಲು ಯಮನ ಕಾಣ್ವ ॥೨೫॥

ಮಡದಿ ಕೇಳೆಲೆ ಓರ್ವ ಒಡೆಯರ ರೂಪಿಂಗೆ ।
ಸುಳಿದನು ಮುನಿಯ ವೇಷದಲಿ ।
ಜಡೆದಲೆ ಕರದೊಳು ನರನ ಕಪಾಲವು ।
ತೊಡರಿದ ಹಾವು ಮೈಯೆಲ್ಲ ॥೨೬॥

ಅತ್ತತ್ತ ಹೋಗೆನಲು ಇತ್ತಿತ್ತ ಬರುವನು ।
ಒತ್ತಿಗೆ ಇಬ್ಬರಳು ಸುಳಿದು ।
ನೆತ್ತಿಯೊಳುರಿಗಣ್ಣು ಸುತ್ತ ಮರುಳ ತಂಡ ।
ಪೃಥ್ವಿಯೊಳಿಲ್ಲದಂಥ ರೂಪ ॥೨೭॥

ಪಿಡಿದ ಡಮರುಗ ಶೂಲ ತೊಡೆದ ಭಸ್ಮಾಂಗವು ।
ಸಿಡಿಲಂತೆ ಬರುವ ರವ ರುದ್ರ।
ಹೃದಯ ಬೆಚ್ಚುತ ಹದಿನಾರು ಮೂಲೆಯ ಹೊಗಲು ।
ಎಡಬಲದಿ ಬಂದು ನಿಂದಿಹರು ॥೨೮॥

ಸಾವಿರ ಹಾವುಗಳ ಯಾವಲ್ಲಿ ಪಿಡಿದಿಹನೊ ।
ಆಹಾರಕೇನ ಮಾಡುವನೊ।
ಬೇಡಯ್ಯ ಬೇಕಾದ ಸುವರ್ಣ ಸಾವಿರವೆನಲು ।
ಬಾಲ ಸಂತತಿಯ ಪೇಳಿದನು ॥೨೯॥

[ಭಾಳ]ಲೋಚನ ಬಂದು ನಿಜರೂಪ ತೋರಿದಡೆ ।
ಹುಚ್ಚಾಗಬಹುದೆನ್ನ ಪ್ರಿಯ ।
ಹುಟ್ಟು ದರಿದ್ರನಿಗೆ ಹೊಂದಿಡಲು ಕಣ್ಣೆರಡು ।
ತೋರದೆ ಅಣಕಿಸಿ ನಡೆದ ||೩೦||

ಹರಿವ ಹಾವನು ದೋರಿ ಆಭರಣ ಮಾಡಿದ ದೇವ ।
ಸುಳಿಯಲು ಸ್ವಪ್ನದಿ ಬಂದು ।
ಮರುಳಾಗಬಹುದೆ [ನಾ] ತಾನು ಚರಣಕ್ಕೆರಗಿ ।
ಕೈವಲ್ಯ ಗತಿಗೇಳದಿಹರೆ ||೩೧||

ಪತಿ[ಗೆರಗಿ] ಪಾವಕನ ಧರಿಸಿದ ಭವನನ್ನೆಯ ।
[ನ ಸರ್ವ] ಸುಖದೊಳಗಿರಲು ।
ಸಿತಕಂಠನೊಲುಮೆಯಲಿ ಮನ್ಮಥ ಕೀ.... ।
ಪತಿ ಬಿಂದು ಸತಿಯೊಳು ನೆಲಸೆ ||೩೨||

ಹರಿಹರದೇವಿಗೆ ಘನಸ್ಥಾನವು ನಿಲ್ಲೆ ।
ಮೃಗಧರನ ವರದೃಷ್ಟಿಯೊಳಗೆ ।
ಮುಗುಳುದೋರ್ವುದು ಮೊಲೆಯು ತುದಿಗೆಂಪು ಕಪ್ಪಡರಿ ।
[ಮೃಗಮದ]ವಾಗೆ ಮೈಬಣ್ಣ ||೩೩||

ಒಂದೆರಡು ಮೂರಾಗೆ ಚಂದ್ರವದನೆ ದೇಹ ।
ಕಂಡನು ನೃಪ ತನ್ನ ಸತಿಯ ।
ಚಂದ್ರನು ದಿನದಿನಕೆ ಪೆಚ್ಚುವ ತೆರದಿ ತ್ರಿ ।
ಮಾಸಗಳ ಒಸಗೆ ಮಾಡಿಸುವ ||೩೪||

ಮೂರು ತಿಂಗಳ ಒಸಗೆ ಊರ ತೋರಣ ಹಾರ ।
ಮಾರ್ಗ ಮಾರ್ಗದಿ ಅನ್ನಛತ್ರ।
ನೀರ ಮಜ್ಜಿಗೆ ಕ್ಷೀರ ಬೆಣ್ಣೆ ಬಸವನ ಗ್ರಾಸ ।
ಸಾರಿಸಿ ಸಕಲ ಜಾತಿಗಳ ||೩೫||

ಕಾಡದೇವರಿಗೆಲ್ಲ ಕಡಲೆ ಕಬ್ಬಿನಕೋಲು ।
ನಾಡದೈವಕೆ ನಿತ್ಯಪೂಜೆ।

ಮಾಡುವನು ನೃಪವರನು ಮನ[ದಣಿ] ಸತಿಯಳಿ।
ಗಾಗಿಹುದು ಜನನದ ಕಾಲ ||೩೬||

ಬ್ರಾಹ್ಮಣ ಜಾತಿಗೆ ಸಮರಾಧನೆ ಮಾಡಿ।
ಗ್ರಾಮ ಅಗ್ರಹಾರವ ಬಿಡಿಸಿ।
ಆದಿತ್ಯ ಜಪಮಾಡಿ ಶೂನ್ಯವಾಗಲು ದೋಷ।
ರಾಮೇಶ ಮೂರ್ತಿಗಭಿಷೇಕ ||೩೭||

ತುಂಬಿದ ಬಸುರಿಗೆ ತುಟಿ ಬಾಯಿ ಒಣಗುತ್ತ।
ಹಂಬಲಿಸುತ್ತ ಪಲ ಬಗೆಯ।
ಒಂಬತ್ತರೊಳವಿಗೆ ಮುಂದುವರಿಯಲು ಮಾಸ।
ನೊಂದುಕೊಂಡನು ಚಿಂತಿಪನು ||೩೮||

ಪಟ್ಟದ ರಾಣಿಗೆ ಹುಟ್ಟಲು ಕಿರಿಬೇನೆ।
ಕಟ್ಟನೆ ಕರೆಸಿ ಸೂಲಿಗರ।
ಕೊಟ್ಟು ಉಡುಗೊರೆ ತೊಡ ಬಣ್ಣ ಸತಿಯಳ।
ಕಷ್ಟ ಕೋಟಲೆ ನಿಮ್ಮದೆಂದ ||೩೯||

ಸುತನ ಜನನತ್ವ ನೋಡಲ್ಕೆ ರವಿ ಪೂರ್ವ।
ರಥವೇ[ರಿ] ಬಂದನು ತನುಜ।
ಸಿತಕಂಠ ಹರಿಬ್ರಹ್ಮ ನಂದಿ ಗರುಡನನೇರಿ।
ಮೇರು ಮಂಡಲದಿ ನೋಡುತಲಿ ||೪೦||

ತುಂಬುರ ನಾರದರು ಭೃಂಗಿ ನಾಟ್ಯಗಳಿಂದ।
ಚಂದ್ರಶೇಖರ ಸನ್ನಿಧಿಯ।
ಇಂದ್ರನು ಸುರ ಕೋಟಿ ಗಣಗಳು ಸುರಸಭೆ।
ನಿಂದು ಖೇಚರದಿ ನೋಡುತಲಿ ||೪೧||

ಶ್ರಾವಣ ಮಾಸದೊಳು ತಿಥಿ ಪಂಚ ಗುರುವಾರ।
ಜಾವ ಎರಡನೆ ಏಳು ಘಳಿಗೆ।
ಪೌರ್ಣಮಿ ಚಂದ್ರಾಮ ಪೂರ್ವದೊಳಿಪ್ಪಂತೆ।
ಬಾಲಕ ತೋರೆ ಸೂಲಿಗರ ||೪೨||

ಕಿರಣದ ಪ್ರಭೆಯಂತೆ ಉರಿವ ಬಾಲನ ಕಂಡು ।
ಮನ ಮೆಚ್ಚಿಯಾಗಿ ಸೂಲಿಗರು।
ತಿಳಿದೆದ್ದು ನೋಡುವ ಸಮಯದೊಳಪರಂಜಿ ।
ಕರುವಿಟ್ಟು ಗೊಂಬೆ ಗಾರಿಡಲು ||೪೩||

ಫುಲ್ಲಶರನ ಪೋಲ್ವ ಪುರುಷ ಶಿಶುವಿನ ತೊಳೆ ।
ದಲ್ಲಿ ಶಾಸ್ತ್ರಗಳ ಮಾಡುವರು।
ನಿಲ್ಲದೆ ಪಲಬಗೆಯ ದೃಷ್ಟಿ ಆರತಿ ಬೆಳಗಿ ।
ಚೆಲ್ವ ಬಾಲನಿಗೆ ಮೊಲೆಯೂಡಿ ||೪೪||

ಪರಿದೋಡಿ ಬರುತಿರೆ ತರಳೆಯೋರ್ವಳು ದಾಸಿ ।
ಅರಸರಿಗೆ ವಾರ್ತೆ ಪೇಳಲ್ಕೆ ।
ಎಡಹುತ ಮುಗ್ಗರಿಸುತ ಬರುವ ದಾಸಿಯ ಕಂಡು ।
ಎದೆ ಹಾರಿ ನೃಪನು ಕೇಳುವನು ||೪೫||

ಹಿಂಗಿತ್ತು ಜನನತ್ವ ಅಂಗನೆಗೆ ನೃಪವರನೆ ।
ರಂಗನಾಯಕ ನಮಗೆ ಭೂಪ ।
ಕುಂಜರವೈರಿ ಭೇರುಂಡನ ಮರಿ [ಹೋಲ್ವ] ।
ಕಂ[ದ] ಬಾಲಕನ ಪಡೆದಳು ||೪೬||

ಧೃತರಾಷ್ಟ್ರ ಕೌರವರ ಹತಮಾಡಿಕೊಂದಾತ ।
ಪ್ರತಿಭೀಮ ಬಂದು ಜನಿಸಿದ ।
ರತಿದೇವಿಪತಿ ಭೂಪ ಹತನಾದನೆನಬೇಡ ।
ಸುತನಾದ ಬಂದಿಲ್ಲಿ ನಿಮಗೆ ||೪೭||

ಬಾಲನೆಂಬುವ ನುಡಿಯು ಬಂದು ಕರ್ಣಕೆ ಬೀಳೆ ।
ಬಾಯೊಳು ಹೊನ್ನ ತುಂಬಿಸಿದ ।
ಸಾರಿ ನಾಣ್ಯದ ಬಣ್ಣ ಆಭರಣವ ಕೊಟ್ಟು ।
ಪ್ರಾಣಕಾಂತೆಗೆ ಪರಿಣಾಮವೇನೆ ? ||೪೮||

ಗುರುವಿನ ಕೃಪೆಯೊಳು ಪರಿಣಾಮ ರಾಜೇಂದ್ರ ।
ಧರೆಯೊಳಗುಂಟೆ ಈ ಜನನ ।

ಮರವೆ ಮೂರ್ಛೆಗಳಾಗಿ ಸ್ಮರಣೆದಪ್ಪಲು ನಾವು ।
ಅರಿವಾಗೆ ಶಿಶುವು ಭೋರಿಡಲು ॥೪೯॥

ಮಂತ್ರಿ ಕೇಳ್ ಬೈಚಪ್ಪ ಚಿಂತೆ ಇಂಗಿತು ಇಂದು ।
ಮುಂತೆ ಸಮನಾದೆ ಧರಣಿಯಲಿ ।
ಅಂತಿಂತು ಆಗಲು ರವಿಚಂದ್ರ ಇರುತಿರ್ಪ ।
ಮುಂಚೆ ತಪ್ಪದೆ ಅಪಕೀರ್ತಿ ॥೫೦॥

ಹರನು ಕರುಣಿಸಿದಂತೆ ವರದ ಬಾಲಗೆ ಮಂತ್ರಿ ।
ಜನನ ದಾನವ ಮಾಡಿಸಯ್ಯ।
ಅರಸನಪ್ಪಣೆ ಆಗೆ ಕರೆಸೆ ಭೂಸುರರು ಬಂದು ।
ನೆರೆಯಲು ಸದರ ಚಾವಡಿಯ ॥೫೧॥

ಮದಕರಿಯ ಶೃಂಗರಿಸಿ ಹುರಿಗಡಲೆ ಸಕ್ಕರೆವೆರಸಿ ।
ಪರಿಮಳ ದ್ರವ್ಯ ಗಂಧಗಳು।
ಧರಣಿಯನೊತ್ತಾಳ್ವ ಬಾಲ ಜನಿಸಿದನೆಂದು ।
ಬಿರುದಿನ ಕಾಳೆ ಸಾರುತಲಿ ॥೫೨॥

ಆರುಸಾವಿರ ಹೊನ್ನ ದಾನಧರ್ಮಕೆ ಕೊಡಿಸಿ ।
ದಾನ ಮಾನ್ಯಗಳನು ಬಿಡಿಸಿ ।
ಸಾರುವ ರಣಗಾಳೆ ಭೇರಿ ನಾದಗಳಿಂದ ।
ರಾಜಬೀದಿಯಲಿ ಕೊಡುಕೊಡುತ ॥೫೩॥

ಬ್ರಾಹ್ಮಜಾತಿಗೆ ನಿತ್ಯ ಸಮರಾಧನೆ ಭೂಮಿ ।
ಧಾರೆಯೆರೆದು ಅಗ್ರಹಾರ।
ದೇವರ ಸಮಾರಾಧನೆ ಮಠ ಮಹಂತಿಗೆ ।
ಗ್ರಾಮಕ್ಕೆ ಲಿಂಗಮುದ್ರೆಗಳು ॥೫೪॥

ಆರು ದರುಶನಕೆಲ್ಲ ಮನಹಾರವ ಕೊಟ್ಟು ।
ನಾಮಕರ[ಣಂ]ಗಳಿಡುವೆಡೆಯ।
ಸಾಗಿ ಬರಲು ಮತ್ತೆ ರಾಯಗೆ ಗುರುವಾದ ।
ಯೋಗೀಂದ್ರ ಸಾರಂಗಮುನಿಯು ॥೫೫॥

ಗುರುಪಾದ ದೊರೆತದ್ದು ಪರಮ ಪಾವನ ಪುಣ್ಯ ।
ಎರಗಿದ ನೃಪನು ಸಾಷ್ಟಾಂಗ।
ಪರಿಣಾಮ ಸ್ಥಿತಿ ಮಗನೆ ಸ್ಥಿರಪಟ್ಟವಾಳೆಂದು ।
ಹರಸುತ ಶಿರವನು ಪಿಡಿಯೆ ||೫೬||

ವರರತ್ನ ಖಚಿತದ ಸದರ ಮಾಡಿಸಿ ನೃಪನು ।
ಒರಗು ಲೋಡುಗಳಿಕ್ಕೆಲದಿ ।
ಕರಹಸ್ತಲಾಗದೊಳ್ ಬಿಜಗೊಳಿಸಿ ಮುನಿಯನು ।
ವರರತ್ನಪೀಠದೊಳ್ ಕುಳ್ಳಿ[ರಿ]ಸಿ ||೫೭||

ಪಟ್ಟೆ ಪೀತಾಂಬರದ ನೇತ್ರಾವಳಿಯ ಹೊನ್ನ ।
ತಟ್ಟೆಯೊಳ್ ತಂದು ತಾಯಿರಿಸಿ।
ಒಪ್ಪಿಕೊಳಲಿಬೇಕು ನಿಮ್ಮಯ ತನುಜನ ।
ಉತ್ಪತ್ಯವಾದ ಉಡುಗೊರೆಯ ||೫೮||

ಗುರುರಾಯ ಫಲದೋರಿ ಬೆಳೆಸಿಕೊಂಡಿರಿ ಮನೆಯ ।
ನೆರೆ ಬಂಜೆತನ ಹಿಂಗಿತೆನಗೆ ।
ಕರುಣದಿ ನಿಮ್ಮಯ ಮಗನ ನೋಡುವುದೆಂದು ।
ಕರದೊಳಗಿಡಲವ ಶಿಶುವ ||೫೯||

ನೋಡಲು ಮುನಿರಾಯ ಬಾಲನ ನಿಜರೂಪ ।
ತಾವರೆಗೆಣೆಯೇ ಎನ್ನಯ್ಯ ।
ಜೋಡಿಲ್ಲ ಧರೆಯೊಳು ಧರ್ಮಜನನುಜನ ।
ರೀತಿಗೆ ಸಮನೆನ್ನಬಹುದು ||೬೦||

ಅರಸ ಕೇಳೆಲೆ ಭೂಪ ನರನಲ್ಲ ಈ ಬಾಲ ।
ಹರಿಣಾಂಕ ಸಮನು ಎನಬಹುದೇ ।
ಬಿಡು ಮುನ್ನ ಮೂರ್ಲೋಕವಡೆದು ಕಪ್ಪವ ತಂದು ।
ಬಹುಕಾರ್ಯ ಫಲ ಸ್ಥಿತಿಗತಿಗೆ ||೬೧||

ಮೊದಲು ಕಂಟಕ ರಾಯ ಮಾಡದೆ ಕಳಹಾದರ ।
ಕಳೆದಳಿವ ಮೂವತ್ತರೊಳಗೆ ।

[ಕಿ]ರಿಯ ಜನನಿಯಿಂದ ಮರಣ ತಪ್ಪದು ರಾಯ ।
ಮರಣವನು ತಿಳಿದಿರೋ ಮಂತ್ರಿ ||೬೨||

ನಾಮ ಕರಣಂಗಳ ಮಾಡಿದ ಮುನಿಗುರು ।
ರಾಮ ಕುಮಾರಯ್ಯನೆನುತೆ।
ಭೂಮಿ ಚಂದ್ರುಳ್ಳನಕ ಪೆಸರಾಗಿ ಬಾಳ್ವನೆನುತ ।
ಸಾಗಲು ಗುರುಮುನಿ ಹರಸಿ ||೬೩||

ಸತ್ಕರಿ[ಸೆ] ಮುನಿವರ[ನ] ಚಿತ್ತೈಸಲವರತ್ತ ।
ಮತ್ತೆ ಸುಖದೊಳು ರಾಯನಿರಲು।
ಪುತ್ರ ಜಟ್ಟಂಗಿನೃಪೋತ್ತಮ ಕೇಳೆ ಪಿತನ ।
ಅತ್ತ ಜನ್ಮಾಂತರ ಕಥೆಯ ||೬೪||

ಅರಸು ಕೇಳೈ ನಿಮ್ಮ ಜನಕನ ಕಾಲಿಂದ ।
ಬರುವನು ನಾರದಮುನಿಯು।
ಪರಚಿತ್ತವಾಗದೆ ಒರೆದು ಕೇಳಲು ಜನರು ।
ಮಧುರುಚಿಯಾಗಿ ತೋರುವುದು ||೬೫||

ಈರೇಳು ಭುವನದ ಬೇರು ಬಲ್ಲ ತಾನು ।
ನಾರದಮುನಿ ಬರುವ ಕೇಳೊ ।
ಪರ್ವಜನ್ಮದೊಳಿರ್ದ ಪಿತನ ಪ್ರಸಂಗವ ।
ತೋರಲ್ಕೆ ಬರುವನೆಲ್ಲರಿಗೆ ||೬೬||

ಚಾಡಿಗ ಮುನಿಯೆಂದು ಆಡಿಕೊಂಬರು ಲೋಕ ।
ಕೇಡನು ಬಲ್ಲ ಮುಂದಾಗೋ।
ಆಡದಿದ್ದರೆ ಮುನಿಗೆ ರೋಗ ಎಂಬುದರಿಂದ ।
ಸಾಗಿದ ರಜತಾದ್ರಿ ಬಿಟ್ಟು ||೬೭||

ರಾಯ ರಾಮನ ಜನನ ಕಾಲ ಗತಿಗಳೆಲ್ಲ ।
ಹೇಳಲ್ಕೆ ತಮ್ಮ ಮುನಿಜನಕೆ ।
ಸುರಲೋಕ ಹರಲೋಕ ಕಳೆದಾಗ ಹೊಸಮಲೆಯ ।
ಗಿರಿಯ ಸಮೀಪಕೆ ಬರಲು ||೬೮||

ಹೊಸಮಲೆ ಗಿರಿಯ ಈಶಾನ್ಯ ದಿಕ್ಕಿಲಿ ಒಂದು ।
ಬಸವನ ಕಲ್ಲೆಂಬ ಗಿರಿಯು
ಅಸಮಾನವಾದಂಥ ಗವಿಯ ಸ್ಥಾನದಿ ಇರುವ ।
ಋಷಿಗಳ ಪೇಳಲೆನ್ನಳವೆ ॥೧೯॥

ಧರಣಿಗೆ ಶಿರವಿಟ್ಟು ಚರಣಗಳ ಮೇಲ್ಮಾಡಿ ।
ತವೆ ಮಿಸುಕದೆ ನೇತ್ರಗಳ।
ಮರಿಮಾಡಿ ಗೀಜಗ ರೋಮರೋಮದಿ ಉರಗ ।
ಜಡೆಯು ಕರ್ಣದಲಿ ಸೇರಿಹವು ॥೨೦॥

ಬತ್ತಿದ ಕೈಕಾಲು ಹತ್ತಿದ ಬೆನ್ನೊಡಲು ।
ಬಿಟ್ಟ ಕೆಂಜೆಡೆಯು ಬೇರಿಳಿದು ।
ಹತ್ತು ಹನ್ನೆರಡೊರುಷ ತುತ್ತಾಹಾರವ ತೊರೆದ ।
ದೃಷ್ಟ ಋಷಿಗಳನೇನೆಂಬೆ ॥೨೧॥

ಅಷ್ಟಮದಗಳನೆಲ್ಲ ಸುಟ್ಟು ಬೂದಿಯ ಮಾಡಿ ।
ಅಟ್ಟುರುಹಿ ಕಾಮನೆಗಳನು ।
ನೆಟ್ಟು ಕೂರಲಗನು ಕುಳಿತು ಮಾಡುವ ತಪಸ ।
ಶೇಷಗಳವೆ ಶಿವ ಬಲ್ಲ ॥೨೨॥

ಕಾದ ಕಲ್ಲಿನ ಮೇಲೆ ಪಾದ ಜೋಡಿಸಿ ನಿಂತು ।
ಮೇಲೆ ಖಗರಾಜ ಜಡೆಯೊಳಗೆ।
ಗೂಡಿಟ್ಟು ಮರಿಮಾಡಿ [ಇರ್ಪ] ಮುನಿಗಳನೆಲ್ಲ ।
ನೋಡುತಲಿ ನಾರದ ಬರಲು ॥೨೩॥

ಅನ್ನಾಹರಂಗಳ ಮುನ್ನ ಎಲ್ಲವ ತೊರೆದು ।
ಪನ್ನಂಗಧರನ ಧ್ಯಾನದಲಿ ।
ಮುನ್ನೂರು ಮುನಿಗಳು ಇರುವರಾ ಗಿರಿಯೊಳು ।
ಇನ್ನು ನೋಡಲ್ಕೆ ಹರಗಳವೆ ॥೨೪॥

ಅಂತವರು ಮಾಡುವನಂತ ತಪಸನು ನೋಡಿ ।
ಸಂತಸದೊಳು ನಗುತ ನಾರದನು ।

ಜಂತ್ರ ನಾಟಕ ಬಲ್ಲ ಯೋಗದ ಬಲವನು ।
ಮುಂಚೆಮಗೆ ಸಾಧನವಹುದೆ ॥೭೫॥

ಹರಿಹರ ಬ್ರಹ್ಮಂಗೆ ಅಳವಡದು ಈ ತಪಸ ।
ಗುರುವೆ ತಾ ಬಲ್ಲ ಪ್ರಭುರಾಯ।
ಶಿರಮಂಡೆಯೊಲೆಯುತಲಿ ಪರಮ ನಾರದ ಮುನಿಯು ।
ಇಳಿಯಲು ಅವರ ಸನ್ನಿಧಿಗೆ ॥೭೬॥

ಕಂಡರು ನಾರದರು ಬಂದ ಕಾರಣವೇನು ।
ಕೊಂಡಿಗ ಮುನಿಯಂತು ಅಹುದು ।
ಕಂದ[ರು] ನಮಗಿನ್ನು [ಹೇ]ಳೆಂಬ ಕಾಲ್ಗತಿಯ ।
[ಅಂ]ದಾರೆ ಮುನಿಗಳಾದವರು ॥೭೭॥

ಸುಮ್ಮನೆ ಬರನೀತ ಸುಳುಹುಗಾಣದೆ [ನಾವು] ।
ಬಿಮ್ಮನಾಡಲಿ ಬೇಡ ಕೇಳುವೆ[ವು] ।
ಬ್ರಹ್ಮಾಂಡ ಗೋಚರದ ತೆರದ ಭೇದವ ಬಲ್ಲ ।
ಮನ್ನಣೆಯ ಮಾಡಿ [ಹೇ]ಳುವನು ॥೭೮॥

ಬಂದಿರೆ ನಾರದಮುನಿ ಮಹಿಮನೆ ಕ್ಷೇಮ ।
ಚೆಂದವೆ ಪರಿಣಾಮ [ಸಿದ್ಧತೆಯು]।
ಬಂದು ದೇವರ ದೃಷ್ಟಿ ಬಡ ಮುನಿಗಳ ನೋಡಲು ।
ಶರಣೆಂಬುತಲಿವರ ಕರವಿಡಿದು ॥೭೯॥

ಹರಹರ ಫಾಲಾಕ್ಷ ಇಳಿದುದೇ ಸರಿ ।
ಧರೆ ನಮಗೀ ಚೋದ್ಯವಹುದು ।
ಮುನಿಗಳೆಲ್ಲರು ಘನಮುನಿಯ ಕೇಳಲು ಪೇಳ್ವೆ ।
ವಿನಯದಿ ಕೇಳಿ ಋಷಿಗಳಿರಾ ॥೮೦॥

ಸಂತಾನಗಳು ತೊಲಗುವ ವೇಳೆ ಒದಗಿತು ನಿಮಗೆ ।
ಯೋಗ ಬಂದಿತ್ತು ಎಡೆ ವಿದ್ಯೆ ।
ಕಾಳಗ ಹಣ್ಣುವುದು ಕೋವಿ ಜೀವನವಳಿದು ರಣ ।
ಭೂಮಿಯಾಗುವುದು ಈ ಬಳಿಯ ॥೮೧॥

ಪೇಳಬಹುದೆ ಮುನಿಯು ಯಾರಯ್ಯ ಹತಮಾಳ್ಪ ।
ಭೀಮನೋ ದೇವೇಂದ್ರಸುತನೊ।
ಮೂರು ಯುಗದೊಳಗವರ ಕಾರ್ಯಗಳು ಸಾಗಿದವು ।
ಯಾರಯ್ಯ ಕಲಿಯೊಳು ಜಗಳ ॥೮೨॥

ಮುನಿರಾಯ ನಿಮ್ಮಾತು ಪರಿಹಾಸ್ಯವಾಗಿದೆ ।
ಅಳಿದವರು ಮರಳಿ ಜನಿಸುವರೆ ।
ಬಳಿಯೆಲ್ಲ ಮನುಜರು ನೆಗಳಲು ತಿಳಿಯದು ।
ನಿಜವಾಗಿ ಪೇಳಿ ನಮ್ಮೊಡನೆ ॥೮೩॥

ಮುಂದಾಗೊ ಸ್ಥಿತಿ ಪೇಳ್ವೆ ಚೆಂಡೇಂದ್ರನೆಂಬರು ಲೋಕ ।
ನಂಬೀಗ ಕೇಳಿ ಪೇಳುವೆನು।
ಹಿಂದಾದ ಕಾರ್ಯಗಳು ಹವಣೆಲ್ಲ ಶ್ರೋಣಿತ ।
ಅಂಬುಧಿಯಾಗಿ ಹರಿವುದು ॥೮೪॥

ಕುಮ್ಮಟದೊಳು ರಾಮ ಮುನ್ನ ಜನಿಸಿದ ಭೇದ ।
ನಿಮ್ಮ ಆತ್ಮದಲಿ ತಿಳಿದಿಲ್ಲವೆ।
ಚಿನ್ಮಯ ಹರರೊಳು ಪಡಕೊಂಡು ವರಶಕ್ತಿ ।
ನಿರ್ವಾಣದಿ ಬಂದಿಲ್ಲಿ ॥೮೫॥

ಗೆಲ್ಲುವ ಸಾಹಸತೆ ಪಡಕೊಂಡು ಹರನೊಳು ।
ಇಲ್ಲೀಗ ಜನಿಸಿದ ಕೇಳು ।
ಮುನ್ನವನ ಮೂಲಗಳ ನೆವ ಬೇರೆ ಮುನಿಗಣವೆ ।
ಸೊಮ್ಮಿನ ಪುರುಷನು ಕೇಳಿ ॥೮೬॥

ವೈರಿಗಳಿಲ್ಲದೆ ಜಗಳಕ್ಕೆ ಯಾರಯ್ಯ ।
ಟೌಳಿಯಾಗಿದೆ ನಿಮ್ಮಾತು ।
ತಿಳಿಕೊಳ್ಳಿ ತಲೆಯೊಳು ಸುರಿತಾಳನೆಂಬಾತ ।
[ಹಗೆ ಕದನ] ಗೈವ ಇವನೊಳಗೆ ॥೮೭॥

ಡಿಳ್ಳಿಯ ಸುರಿತಾಳ ಜಗಕೆಲ್ಲ ಬಲಗಾರ ।
ಹುಲ್ಲು ರಾಮನಿಗೆ ಮಣಿವವನೆ।

ಚೆಲ್ವ ನಾರದ ಮುನಿಯೆ ಎಲ್ಲ ಭೇದವ ಬಲ್ಲೆ ।
ಎಲ್ಲಿಯದು ರಾಮನಿಗೆ ಶಕ್ತಿ ||೮೮||

ಶೂಲಧರನ ತಪ ಸಕಲ [ರಮ್ಯ]ದಿ ಮಾಡಿ ।
ಬೇಡಿಕೊಂಡಳಿದ ಕಂಪಿಲನು ।
ಬಾಲನ ಕರದೊಳು ಪೂರ್ವ ಹಗೆಯನು ಕಳೆದು।
ಪೋಗಲ್ಕೆ ಬಂದ ಛಲ ಪದವು ||೮೯||

ಹರ ಮೆಚ್ಚಿ ಕೊಡುವುದಕೆ ಸೆರೆಮನೆಯೆ ಕೈಲಾಸ ।
ಬಲವಂತ ತಪಸೇನು ಮಾಡ।
ಶರೀರವ ಕೊರೆದಿತ್ತ ಚಿಲ್ಲಾಳ ಚೆಂಗಳೆ ಮಗನೇ ।
ದೃಢವೇನು ಪೂರ್ವಜನ್ಮದಲಿ ||೯೦||

ನೂರಾರು ಕಾಲದಿಂ ಮಾಡುತಿರ್ಪೆವು ತಪಸ ।
ಕಾಣನು ಹರನು ಸ್ವಪ್ನದಲಿ ।
ಹಾಗಲ್ಲ ಋಷಿಗಳಿರ ಭೈರವನ ಮೂಲಾಗ್ರ ।
ಕೇಳ್ವೆನೆಂದರೆ ಬಿಚ್ಚಿ ಒರೆವೆ ||೯೧||

ಪೂರ್ವದ ನೆಲೆಗಳ ಬೇರಿಂದ ಕೊನೆತನಕ ।
ಒರೆವೆನು ಅವರ ಸಾಹಸವ ||೯೨||

ಕೇಳಿ ಬಲ್ಲಿರಾ ಹಿಂದೆ ಋಷಿಮೂಲದೊಳ್ ಜಮದಗ್ನಿ ।
ರೇಣುಕೆ ಸತಿಯೆಂಬ ನುಡಿಯ।
ಋಷಿಮೂಲದೊಳಗೆಲ್ಲ ಪೆಸರೊಡೆದು ಜಮದಗ್ನಿ ।
ಸತಿ ಮಾಡಿದಂಥ ಕಥೆ ಕರ್ಮ ||೯೩||

ಹತಮಾಡಿ ಸತಿಯಳನು ಸುಟ್ಟು ಬೂದಿಯ ಬಿಟ್ಟು ।
ಸಿತಕಂಠನೆಡೆಗೆ ಪೋಗುವನು ।
ರೇಣುಕೆಯ ಬಸಿರೊಳು ಕುಮಾರನೊರ್ವನು ಇರನೆ ।
ಭೂಮಿ ಸಾಹಸ ಪರಶುರಾಮ ||೯೪||

ತ್ರಾಣಗಾರನು ಕೇಳಿ ಧನುರ್ವೇದ ಶಾಸ್ತ್ರದೊಳಗೆ ।
ಏಳು ಸಾಗರವನೊತ್ತಿದನು ।

ಹಡೆದ ಜನನಿಯ [ಹತ್ಯೆ] ಸುಡುವ ಕರ್ಮವ ಕಂಡು।
ಪಡೆದ ಮುನಿವರಗೆ ಪೇಳಿದನು ||೯೫||

ಬಿಡಬೇಕು ಎನಲಾಗಿ ಈ ಸುಡುವ ಸ್ತ್ರೀಹತ್ಯೆಗಳ ।
ಕೊಡುವೆ ಪಾದಕೆ ತಾಯಿ ಶಿರವ ।
ಬೇಡವೊ ತನುಜವಳು ನಾಡಾಡಿ ಸತಿಯಲ್ಲ।
ಬೇ[ಡ]ವಳು ಕಥೆಯ ಹೆಣ್ಣಲ್ಲ ||೯೬||

ರೂಢಿಗೀಶನು ಸಕಲ ಪಾಪವ ಕಳೆದು ಸ್ತ್ರೀ ಮಾಡೆ।
ಕೂಡಿದ ಪತಿ[ಗೆ] ಕೊಟ್ಟ[ಳು] ಶಾಪ ।
ಪುತ್ರರಾಮ[ನ] ಹರ[ಣ] ಶಕ್ತಿಯಾದಳು ಈಕೆ।
ಮುಕ್ಕಣ್ಣಗಳವಲ್ಲ ಇವಳು ||೯೭||

ಸುಟ್ಟರೆ ಪಡಕೊಂಬ ಶಕ್ತಿ ಎಮ್ಮೊಳಗುಂಟು ।
ಬಿಟ್ಟುಕೊ ತನುಜನ ಮಾತ।
ತಂದೆ ಮುನಿವರೆ ನಿಮಗೆ ಅಂಜಿ ಬಿನ್ನಹ ಮಾಳ್ಪೆ।
ಇಂದೊಮ್ಮೆ ದಯಕರಿಸಿ ಪೋಗಿ ||೯೮||

ಕಂಡರೆ ಕಳತ್ರೆಯ ಮುಂದಾಗಿ ನಿಮಗಿಂದ ।
ಚಂಡಿಕೆಯ ಹೊಡೆದು ಹಾಕುವೆನು ।
ಸತಿಯೊಳಗಳಿಯೆಂಬ ಲಿಖಿತ ಪಣೆಯೊಳಗಿರಲು ।
ಸಿತಕಂಠಗೊಮ್ಮೆ ತಪ್ಪುವುದೆ ||೯೯||

ಸತಿಯಳ ರೋದನಕೆ ಚತುರ್ಮುಖನ ಶಿರಹರಿದು ।
ಕ್ಷಿತಿಯೊಳು ತಿರಿದುಣ್ಣನೆ ಹರನು।
ಹತಕಾಲ ಬರುವಾಗ ಹರಿಗಿನ್ನು ಮೊರೆವೆಗಳು ।
ಲಿಖಿತವು ಬರೆದಂತೆ ವಿಧಿಯ ||೧೦೦||

ಗುಪಿತವನು ತಿಳಿಯದೆ ಮೊರಸಾವತೆಗೆ ಹೊರೆಯು ।
ಹತವಾಗಲಿಲ್ಲವೆ ದ್ವಾರಕಿಯು ।
ಸರ್ವ ಜೀವನರಾಶಿ ನಿರ್ಮಾಣ ಮಾಳ್ಪಾತಂಗೆ।
ತಿಳಿಯಲಿಲ್ಲವೆ ತಲೆಯು ಪೋಪುದು ||೧೦೧||

ಉಳಿದವರ ಮಾತೇನು ಸುತನ ವಚನವ ಬಿಟ್ಟು
ನಡೆಯಲು ಋಷಿಯು ಹರನೆಡೆಗೆ ।
ಹಲಕಾಲ ಹೀಗೆ ನಡೆದು ಬರಲು ಮಗನೆ ।
ಒದಗಿತು ಕಡೆಗಾಲ ಮನೆಗೆ ||೧೦೨||

ಧರಣಿಪಾಲಕನೆಂಬ ಕಾರ್ತಿಕ ವೀರನು।
ಬರಲಾಗ ವನಕೆ ಬೇಟೆಯನು ।
ಲಕ್ಷೋಪ ಬಲದೊಳಗೆ ಹೊಕ್ಕನಾ ವನಸ್ಥಲವ।
ಪಕ್ಷಿ ಖಗಮೃಗ ನೋಡುತಲಿ ||೧೦೩||

ತಕ್ಷ[ಣ]ದೊಳು ತಮ್ಮ ವೈರವರ್ಗಬಿಟ್ಟು।
ಹೊಕ್ಕು ತೆಕ್ಕೆಯಲಿ ಕೂಗಾಡಿ।
ಹುಲ್ಲೆ ಹುಲಿಗಳು ಕ[ರ]ಡಿ ಜಲ್ಲ ಮೃಗ ಸಾರಂಗ।
ಎಲ್ಲ ಒಂದಾಗಿ ಚರಿಸುತಲಿ ||೧೦೪||

ಚೆಲ್ಲಾಡಿ ಮೇಯಲು ಕರಿ ಸಿಂಹ ಭೇರುಂಡ।
ಅಲ್ಲಿ ನೃಪ ಕಂಡು ಬೆರಗಾದ।
ಗಿಡುಗ ಗೀಜುಗ ಲನಡು ಗರುಡ ಲ್ಯಾವಿಗೆ ಒಂದು।
ಒಡನಾಡಿ ಹಾಸ್ಯ ಲಾಸ್ಯದಲಿ ||೧೦೫||

ಅಗಜೆಯ ರಮಣಗಿಮ್ಮಿಗಿಲಾದ ಮುನಿಯಾಗೆ ।
ಜಗದೊಳಗಿದು ಪುಣ್ಯಸ್ಥಳವು ।
ಗಿರಿಜೆಯ ರಮಣಗೆ ಮಿಗಿಲಾದ ಋಷಿಯಿರದೆ ।
ಬಿಸಲರಿಯರು ತಮ್ಮ ವೈರಿಗಳ ||೧೦೬||

ಅಡಿಗಳನು ಕಂಡಡೆ ಜಗದೀಶ ದೊರೆತಂತೆ ।
ನಡೆಯಲು ನೃಪನು ಉಲ್ಲಸದಿ ।
ಪರಮಯೋಗೀಂದ್ರನ ಪರ್ಣಶಾಲೆಯ ಕಂಡು ।
ಎರಗಲು ನೃಪನು ಮುನಿವರಗೆ ||೧೦೭||

ಕರಗಳನು ವಂದಿಸಲು ಚತುರಂಗ ಬಲವೆಲ್ಲ ।
ಪರಸಲಾ ಮುನಿ ಎಲ್ಲರನು ।

ಮಣಿದಿರ್ದ ನೃಪವರನ ಮಂಡೆಯನು ಪಿಡಿದೆತ್ತಿ ।
ಸ್ಥಿರರಾಜ್ಯ ಪದವನಾಳೆಂದು ||೧೦೮||

ಹರಿನಯನ ಪೂಜಿತ ನರದೃಷ್ಟಿ ನಿಮಗಾಗಿ ।
ದೊರೆ ರಾಯ ಏಳು ಏಳೆನಲು ।
ಏನು ಕಾರಣ ನೃಪನೆ ಧ್ಯಾನ ಹರಿದಿತ್ತು ಬಡ।
ಜೀವಿ ಮುನಿಗಳನು ನೋಡಲ್ಕೆ ||೧೦೯||

ಕಾಡಾಶ್ರಯ ಮಾಳ್ಪರಲ್ಲೇನುಂಟು ಸುಖಸಾರ ।
ಬಾಳ್ವೆನು ವನಚರ ತೆರದಿ ।
ಮನೆಯಿಲ್ಲ ಮಠವಿಲ್ಲ ಉಣಲಿಕ್ಕೆ ರಾಜೇಂದ್ರ।
ಕೊನೆಯೊಳಗಿಹ ಕದದಂತೆ ||೧೧೦||

ಹನಿಮಳೆ ಚಳಿಯೊಳು ತನುವ ದಂಡಿಸುವರು ।
ಮುನಿಗಳ ಸುಖ ಸುಡಲಿ ಭೂಪ।
ಉರಗನ ಧರಿಸಿದ ಪರಶಿವನ ಕಂಡಂತೆ।
ವರಸಿದ್ಧಿಯಾದುದು ಕಾಯ ||೧೧೧||

ಪರಮ ಕೈಲಾಸಗಳು ನಿಮ್ಮೊಳಗೆ ಇರುವುದು ಗುರುವೆ ।
ಹೊರಿಸುವಾ ಎನಗೆ ಭಾರಗಳ।
ದಯಮಾಡಿ ಅಪ್ಪಣೆಯ ಪುರಕೆ ಪೋಗುವೆ ಗುರುವೆ ।
ಎರಗಲು ನೃಪನು ಮುನಿವರಗೆ ||೧೧೨||

ರವಿಕುಲೋತ್ತಮ ಕೇಳು ಬಳಲಿ ಬಂದಿರಿ ತೃಷೆಯ ।
ಕಳೆದು ಪೋಗರಸ ಕ್ಷಣ ನಿಂತು ।
ಮುನಿಯಾಶ್ರಮನೆ ಪೊಕ್ಕು ಬಳಲಿ ಬಂದೆನು ಎಂಬ।
ಜನ ನಿಂದೆ ಎಮಗೆ ಹೊರಿಸದೆ ||೧೧೩||

ನಿಲ್ಲಬಹುದು ನಿಮಿಷದಿ ಬಲ ಸಹಿತರೆ ಬಳಿಗೆ।
ಸವಿದು ಪೋಗುವ ಘನ[ತೆ] ನಮಗೆ।
ಬಲವೆಲ್ಲ ಉಣಲೆಂಬ ನುಡಿಯ ಕೇಳುತ ರಾಯ।
ತಲೆದೂಗಿ ಗಹಗಹಿಸಿ ನಗಲು ||೧೧೪||

ಮನೆಯಿಲ್ಲ ಮಠವಿಲ್ಲ ಮಾಡಲ್ಕೆ ಪರರಿಲ್ಲ।
ನಗೆಗೇಡಾಗಿದೆ ಋಷಿಯ ಮಾತು ।
ಲಕ್ಷಾಂತ್ರ ಬಲಕನ್ನವಿಕ್ಕಬೇಕಾದರೆ।
ಎಷ್ಟಾಗಬೇಕು ಸೌರಣೆಯು ||೧೧೫||

ನಿಂತು ನೋಳ್ಪೆನು ನಿಮಿಷ ಮುನಿ ತ್ರಾಣವನೆಂದು।
ಕುಳಿತನು ರಾಯ ವನದೊಳಗೆ ।
ಲಕ್ಷಾಂತ್ರ ಬಲ ನೀವು ಪಂಕ್ತಿ ಸಾಲಲಿ ಕುಳಿತು।
ವಟಪತ್ರದೆಲೆಯ ಹಾಸೆನಲು ||೧೧೬||

ಭವರೋಗ ಅಭ[ಯ] ಕುಳಿತು ಕೃಪೆಯನೆ ಮಾಡೆ।
ಧರಣಿಗಿಳಿಯೆ ಕಾಮಧೇನು।
ಆರಾರ ಮನದೊಳು ಉಂಟಾದ ಭ್ರಮೆಯಿರಲು।
ಪಾಯಸ ಪರಮಾನ್ನ ಭಕ್ಷ ||೧೧೭||

ಗಾರಿಗೆ ಕಜ್ಜಾಯ ಕಡಬು ಪರಡಿಗೆಯಿಂದ ।
ಕಾರನ್ನ ಕಲ್ಪರುಚಿಯಿಂದ।
ದಣಿಯಲು ಬಲವೆಲ್ಲ ಸವಿದು ಡರ್‍ರನೆ ತೇಗೆ।
ಪೊಗಳುತ ಮುನಿಯ ಕೊಂಡಾಡೆ ||೧೧೮||

ಧರೆಗಧಿಕ ಕಲ್ಯಾಣಪುರದೊಳು ಬಸವೇಂದ್ರ ।
ಉಣಿಸಿದಂತಾಯ್ತು ಜಂಗಮಕೆ ।
ಸಾರುವ ಶ್ರುತಿವಾಕ್ಯ ಕೇಳಿ ಬಲ್ಲೆವು ನಾವು ।
ನಾವಂತು ಕಂಡುದುದಿಲ್ಲ ||೧೧೯||

ನೋಡಿದೆವು ನಯನದಿ ಅದಕಿದು ಮಿಗಿಲೆಂದು।
ಕೂಡೆ ಕೊಂಡಾಡೆ ಬಲವೆಲ್ಲ ||೧೨೦||

ಕಾರ್ತಿಕರಾಯನಿಗೆ ನೆಟ್ಟಿತು ಮನದೊಳು।
ದೃಷ್ಟವೊ ಮುನಿಯ ಗಾರುಡವೊ।
ಹೊತ್ತದೆ ಬೆಂಕಿಯ ಹೊಗೆಯ ಕಾಣದೆ ಪರಮ ।
ಮೃಷ್ಟಾನ್ನ ಉಂಡ ಪರಿ ಹೇಗೆ ||೧೨೧||

ಕೇಳಿ ಪೋಗುವೆನಿದರ ಮೂಲತಂತ್ರದ ಬಗೆಯ ।
ಭಾವ ದೃಷ್ಟವೊ ಯೋಗ ಬಲವೋ ।
ದೇವರ ದೇವನೆ ಪಾವನ ಪರಶಿವನೆ ।
ಮಾಯ ತಂತ್ರವ ಪೇಳು ಗುರುವೆ ||೧೨೨||

ನೃಪನು ಕೇಳಲು ಮಗನೆ ಉಸುರುವನು ಮುನಿವರನು ।
ಹತಕಾಲ ಮರೆದು ಕೆಡುವನು ।
ವಿಪರೀತ ಕಾಲಕ್ಕೆ ವಿನಾಶ ಬುದ್ಧಿಗಳೆಂಬ ।
ತೆರಬಂತು ಮುನಿವರಗೆ ಮಗನೆ ||೧೨೩||

ದೇವರತ್ನದ ನೆಲೆಯ ಕಾಳದೈತ್ಯನ ಮಥನ ।
ಮೋಹಿನಿಯೊಡನೆ ಪೇಳ್ವಂತೆ ।
ಹೋಗುವ ಮಾರಿಯ ಊರಿಗೆ ಕರೆಕೊಂಡ ।
ತೆರನಾಯಿತಲ್ಲ ಕೋಣಬನಂತೆ ||೧೨೪||

ಪಶುವಿನ ಮೂಲದಿ ತೃಷೆಯು ಅಡಗದೆ ಅರಸೆ ।
ಋಷಿಗಳಿಗೆಲ್ಲ ಅನ್ನಗಳು ।
ಶಶಿಧರನು ಕಳುಹಲು ಕಾಮಧೇನೆಲೆ ರಾಯ ।
ಬಿಸಿಯನ್ನ ಸವಿದಿರಿ ಎಲ್ಲ ||೧೨೫||

ಹರಹರ ಎನುತಲಿ ಕರಮುಗಿಯೆ ಕಾರ್ತಿಕನು ।
ಅರುಹುವರು ಚಾಡಿ ಮಂತ್ರಿಗಳು ।
ಧರಣಿ ಪಾಲಕರೊಳಗೆ ಇರಬೇಕು ಈ ಪಶುವು ।
ಮುನಿಗೇಕೆ ಕಾಡ ವಾಸರಿಗೆ ||೧೨೬||

ಒಂದರ ಬದಲು ನೂರೊಂದ ಕೊಡುವೆನು ಮುನಿಯೆ ।
ಸಂದೇಹ ಬೇಡ ಮನದೊಳಗೆ ।
ಮುಂದಾಗಿ ಪಿಡಿಕೊಳ್ಳು ಮುನ್ನೂರನಾದರು ಕಡೆಗೆ ।
ಹಿಂದಾಗಿ ಕೊಡಿ ನಿಮ್ಮ ಒಡವೆ ||೧೨೭||

ಚೆಂದವಾಯಿತು ಇತ್ತ ಬಾರೆಂದರೆ ಮನೆಯನು ।
ಇಂಬುಗೊಂಡರು ಎಂಬ ಗಾದೆ ।

ಕೊಂದೆನೆಂಬಾತಗೆ ಕೋಲನು ಕರಕಿತ್ತ ।
ಎನ್ನಿಂದವೆ ತನಗಾಯಿತೆಂಬ ||೧೨೮||

ಮಾಡುವುದೇನು ಕಲಿಕಾಲದ ಮಹಿಮೆಯ ।
ಮಾಡಿದುಪಕಾರಕಪಕಾರ।
ರೂಢಿಯೊಳರಸಂಗೆ ಆದಾಯ ತೋರುವವ ।
ಮೂಢನಲ್ಲದೆ ಜಾಣನಲ್ಲ ||೧೨೯||

ನಾನಾ ಜೀವಂಗಳಿಗೆ ಮಾಡಬಹುದುಪಕಾರ ।
ಮಾನವಜನ್ಮಕೆ ಮಾಡಸಲ್ಲ।
ಶ್ವಾನಗೆ ಕ್ಷೀರಾನ್ನ ಹಾಕಿ ಸಾಕಲು ಬಿಡದು ।
ತಾ ಬಿಡದು ಮಲವ ತಿಂಬುದನು ||೧೩೦||

ನೂರವ ಕೊಡಲೆಂದು ಆಡಲು ನೃಪವರನೆ ।
ಜೋಡಹುದೆ ರತ್ನಕ್ಕೆ ಮುತ್ತು ।
ಬೇಡಿದ ಬಯಕೆಯ ನೀಡುವ ಕಾಮಧೇನುಗೆ ।
ನಾಡಾಡಿ ಪಶುಗಳು ಎಣೆಯೆ ||೧೩೧||

ನಮ್ಮದಲ್ಲವೊ ಗೋವು ಆಜ್ಞೆಮಾಡಿ ಕೆಡಲೇಕೆ ।
ನಿಮ್ಮಿಚ್ಛೆ ಬರುವುದಕೆ ಮರುಳೇ।
ಬ್ರಹ್ಮಾದಿ ವಿಷ್ಣುಗಳಿಗೆ ಅಳವಡದು ಲೋಕದ ।
ಹುಲ್ಲುಗೋವೇನೊ ಎಲೆ ರಾಯ ||೧೩೨||

ಬೇಡವೊ ಮುನಿರಾಯ ಕೇಳುವೆನು ಕರ ಮುಗಿದು ।
ಕಾಡುವ ಭಯಗಳನು ತೋರೆ ।
ಬೇಡುವೆನು ಕರೆದೆನ್ನ ನೀಡಿದುಪಚಾರಕ್ಕೆ ।
ರೂಢಿಸಲು ಕೋಪ ಪಿಡಿಸುವೆನು ||೧೩೩||

ಕೊಡುವರೆ ನಮ್ಮಿಚ್ಛೆ ಒಡವೆ ಬಾಧ್ಯರು ಬೇರೆ ।
ಹಿಡಿಯಲು ಬಲವ ತಿಂಬುವುದು ।
ಸಿಡಿಲಿನ ಮರಿಯೊಳು ಸರಸವಾಡಲು ಉರಗ ।
ಕೆಡದೇನು ರಾಜೇಂದ್ರ ಕೇಳು ||೧೩೪||

ಪ್ರೀತಿಯೊಳ್ ಕೊಡು ಮುನಿಯೆ ಭೀತಿಗಂಜೆನು ನಿಮ್ಮ ।
ಮಾತಿಗೋಸ್ಕರ ಪೇಳುವೆನು ।
ಹಾಕಿ ಹಿಡಿಸುವೆ ಹಗ್ಗ ಹಗಲೆಲ್ಲ ನಿಮ್ಮೊಳಗೆ ।
ಮಾತೇನು ಎಂದು ಬಲಕುಸುರೆ ||೧೩೫||

ಹಿಡಿಯಲು ಬಾರದರಸೆ ಜಡಮತಿಯ ಸುಡು ನಿನ್ನ ।
ಪಡೆಯ ನೀಗದೆ ನಿಮಿಷದೊಳಗೆ ।
ಸಿಡಿಲೆರಗಿ ಹೊಡೆಯಲು ಕೊಡೆ ಕಾಯ್ದುದೆಲೆ ಮರುಳೆ ।
ಬಲಕೆ ಬೆದರುವುದೆ ಕಾಮಧೇನು ||೧೩೬||

ಆದರಾಗಲಿ ಮುನಿಯೆ ಪಾದದ ದಯವಿರಲಿ ।
ನಾನಾ ತೆರದೊಳಗೆ ಪಿಡಿಸುವೆನು ।
ವಾದಿ ಮನುಜನ ಕೂಡೆ ಮಾತಾಡಿ ಫಲವೇನು ।
ನೀ ಕಂಡ ತೆರನ ಮಾಡೆನಲು ||೧೩೭||

ಹರುಷದಿಂ ಪೇಳಿದ ನೃಪ ತನ್ನ ಮಂತ್ರಿಗೆ ।
ಚತುರಂಗ ಬಲಕೆ ಪಿಡಿಯೆನಲು ।
ಹತ್ಯೆ ಕಾಲವು ತಿಳಿಯದೆ ಬಲ ಭೋರನೆ ಮುತ್ತೆ ।
ಮತಿಗೇಡಿ ರಾಯನಾಜ್ಞೆಯಲಿ ||೧೩೮||

ಬಲವೆಲ್ಲ ಒತ್ತುತ ಬಳಸಿ ಮುತ್ತಲು ಕಂಡು ।
ಯಮನ ರೂಪಾಗಲಾ ಗೋವು ।
ಕಿಡಿಸೂಸಿ ನಯನದಿ ಸಿಡಿಲು ಗರ್ಜನೆಯಾಗೆ ।
ನಡುಗಲು ಧರಣಿ ಜಜ್ಜರಿಸಿ ||೧೩೯||

ಮುತ್ತುವರು ಜೇನು ನೊಣದ ಮೊತ್ತ ಕವಿದಂತೆ ।
ಒತ್ತಿ ಬರಲು ನಾಲ್ಕು ಮುಖದಿ ।
ಕೆಕ್ಕರಿಸಿ ನೋಡುತಲಿ ಎತ್ತಿ ಬಾಲದ ತುದಿಯ ।
ಹೊಕ್ಕಿತ್ತು ಬಲಕೆ ಹೊಮ್ಮಿರಿದು ||೧೪೦||

ಸೀ[ಗು]ತಲಿ ಕೋಡೆರಡು ತುದಿಗೆಂಟು ಹೆಣಗಳ ।
ಒಗೆವುತ ಗಗನ ಮಾರ್ಗಕ್ಕೆ ।

ಮೊಗಚಿ ಏರಲು ಬಂದು ಮರಳಿ ಪಾದಗಳಿಂದ ।
ಒರೆಸಲು ಎಂಟು ಸಾವಿರವ ॥೧೪೧॥

ಸಿಟ್ಟು ರೋಷಗಳಾಗಿ ಸಿಡಿಲ ಆರ್ಭಟದೊಳು ।
ಕುಕ್ಕಿರಿ ಹೆಣದ ಮೇಲ್ವೆಣನ ।
ಚಿಪ್ಪಾಗಿ ಬಲವೆಲ್ಲ ಬೆದರಿ ಓಡಲು ರಾಯ ।
ದುಃಖ ಶೋಕಾರ್ತನಾಗಿರಲು ॥೧೪೨॥

ಮುನಿಯ ಮಾತನು ಮೀರಿ ಶುನಿಗಿಂದ ಕಡೆಯಾದೆ ।
ಗಿಣಿಗೋದಿದಂತೆ ಪೇಳಿದರು ।
ಬಲವೆಲ್ಲ ಲಯವಾಗೆ ತನಗೇನು ಗತಿ ಮುಂದೆ ।
ಮುನಿಗೆ ಎರಗಲು ಕರುಣಿಸನೇ ॥೧೪೩॥

ಕೆಂಡ ಕರದೊಳು ಪಿಡಿದು ಮಂಡೆ ತುರುಸಿದ ತೆರನು ।
ಎಂಬ ಗಾದೆಯು ತನಗಾಯ್ತು ।
ಕಂಡೇನೊ ಎಲೆ ಮಗನೆ ಕಾರ್ತಿಕವೀರನ ಪಾಡ ।
ಸಂದನೆನಬೇಡ ಉಳಿವವನು ॥೧೪೪॥

ಖುಷಿಯಿಂದ ತಪ್ಪಿಲ್ಲ ಮತಿವಾದಿ ಬಿಜ್ಜಳಗೆ ।
ಬಸವದಂಡೇಶ ಪೇಳುತ್ತೆ ।
ಬೆಸೆಯಲು ಮಂಚಣನ ತೆರದೊಳು ಎನಗರುಹಿ ।
ಹತಗಾಲ ತನಗೀಗ ಬಂತು ॥೧೪೫॥

ಕರಗಲು ಕಾರ್ತಿಕ ಉರಿಗೊಂಡ ತಳಿರಂತೆ ।
ತೆರದೊಳು ಕಂದಿ ಕುಂದಿದನು ।
ಪರ್ಣಗೃಹದ ನೆಲೆಯೊಳು ರೇಣುಕೆ ಇರ್ದು ।
ಕರೆದಳು ನೃಪನ ಸನ್ನೆಯಲಿ ॥೧೪೬॥

ಮರುಳ ರಾಯನೆ ನೀನು ತಾಯೊಡಲು ಪೊಕ್ಕರೆ ಬಿಡದು ।
ಹುಡುಗಾಟವಾದೆ ಧರೆಯೊಳಗೆ ।
ಸುಳಿವ ತೋರುವೆ ಎನ್ನ ಕರೆದು ಕೇಳ್ದರೆ ಮೊದಲೆ ।
ಬಲವೆಲ್ಲ ಲಯವಾಯ್ತು ಅರಸೆ ॥೧೪೭॥

ಹುಚ್ಚು ರಾಯನೆ ಕೇಳು ಅನರ್ಥ ಸಾಯಲು ಬೇಡ ।
ಶಕ್ತಿಗೆ ಬರದು ನಿಮ್ಮೊಡನೆ ।
ಮತ್ತೆ ತೋರುವೆ ನಿಮಗೆ ಭೇದ ವರ್ಮವ ಮುನಿಯ ।
ಕುತ್ತಿಗೆನರಿವ ತ್ರಾಣಹುದೊ ||೧೪೮||

ಕಂಡನಾ ಕಾರ್ತಿಕ ರಂಭೆ ಊರ್ವಶಿ ಸ್ತ್ರೀಯ ।
ಮುಂಚೋರೆ ನೋಡೆ ನಯನಗಳು ।
ಕಂದರ್ಪ ಬಾಣಗಳು ಎದೆಯೊಳು ಮೂಡಿದಂತೆ ।
ಮುಂಬರಿಯೆ ಮೂರ್ಛೆ ಕಳವಳಿಸಿ ||೧೪೯||

ಕಳವಳವ ಬಿಡು ರಾಯ ಬೇಕೆನಲು ನಾ ಬರುವೆ ।
ಪಾಪಿ ಮುನಿಯನು ಹತಮಾಡು ।
ಈ ಕ್ಷಣ ಮುನಿಯ ಶಿರವರಿದು ಪಶುವಿಗೆ ಕಟ್ಟೆ ।
ಬರುವುದು ಕುರಿಯಂತೆ ಹಿಂದೆ ||೧೫೦||

ಭೇದ ವರ್ಮವ ಪೇಳೆ ರಾಯ ಹಿಗ್ಗಲು ಮನದಿ ।
ಯಾರ ಭಯವು ಎನಗೆ ಕೊಲ್ಲುವರೆ ।
ಕಾಲನ ಭಯವಷ್ಟೆ ಕಳೆಯಬಹುದು ಬಹಳ ।
ದಾನಧರ್ಮಗಳನು ಮಾಡಿ ||೧೫೧||

ಕಾಮಧೇನುವು ಸುಡಲಿ ಬಾಲೆ ಬರುವಳು ಚೊಕ್ಕ ।
ನೀಗದಿರಲು ಮುನಿಯು ಕೊಡನು ।
ಪೇಳಲು ಚರರೊಡನೆ ಶಿರವರಿದು ಋಷಿಯನು ।
ಗೋವಿನ ಶಿರಕೆ ಧರಿಸೆನಲು ||೧೫೨||

ಅರಸ ಪೇಳಲು ಒಡನೆ ಚರರು ಮಂಡೆಯನರಿದು ।
ಎದುರಾಗಿ ತರಲು ತೋರುತಲಿ ।
ಬಲವ ಕೊಲ್ಲುವ ಗೋವು ಶಿರಗೊಂಡು ಭಕ್ತಿಯಲಿ ।
ಕೊರಳ [ನೊಡ್ಡ] ಪ್ರೀತಿಯಲ್ಲಿ ||೧೫೩||

ಹರಿಣನೇತ್ರೆಯ ಮಾತು ಪರಿಹಾಸ್ಯವಲ್ಲೆಂದು ।
ತರಿಸುತ ಶಿರವ ಧರಿಸಿದರು।

[ತೊರೆ]ದುದು ಪಶುವಿಗೆ ಜಮದಗ್ನಿ ಶಿರ ತನ್ನ ।
ಕೊರಳಿಗೆ ಬರಲೆಂಬ ಶಾಪ ॥೧೫೪॥

ಕಂಡಿರೆ ಮುನಿಗಳೆ ಗಂಡನ ಕೊಲಿಸಿದ ।
ರಂಡೆ ಪಾತಕಿ ಮೂಳಿಯರನು ।
ನಂತರದಿ ಬೆರಳಿಟ್ಟು ನಗುತಲಿ ನಾರದರು ।
ಮುಂದೇನಾದಳು ರೇಣುಕೆಯು ॥೧೫೫॥

ಲಾಲಿಸಿ ಅವಳಾದ ಕಾಲದಾಶವನೊರೆವೆ ।
ಕೂಡಿದ ಪತಿಕೊಂದ ಕರ್ಮ।
ಹೋಗಲೀಸದು ಕೇಳಿ ಬಾಲಕನ ಕರದೊಳಗೆ ।
ನೀಗುವಳು ರಂಡೆ ಪ್ರಾಣವನು ॥೧೫೬॥

ಶಿರ ಬಂದು ಗೋವಿನ ಶಿರದೊಳು ಬೀಳಲು ।
[ಮೊ]ರೆಯಲು ಬರಸಿಡಿಲ ತೆರದಿ ।
ಬೆದರಿ ಓಡಲು ಬಲವು ಗಿಡು ಮೆಳೆಯನು ಬಿದ್ದು ।
ನಡೆಯಲು ಗೋವು ಹರನೆಡೆಗೆ ॥೧೫೭॥

ಹರನ ವಾಲಗದಿಂದ ಬರುತಾಗ ಮುನಿವರನ ।
ತನುಜ ಕಂಡನು ಪರಶುರಾಮ ।
ಶಿರವ ಕಾಣುತ ಪರಶು ನಯನದಿ ಜಲಸೂಸಿ ।
ನಿಲಿಸಿ ಕೇಳ್ಯಾನು ಆ ಪಶುವ ॥೧೫೮॥

ಬಲ್ಲಿದ ಪರಶುನು ಅಂತು ಕೇಳಲು ಧೇನು ।
ಎಲ್ಲ ವೃತ್ತಾಂತಗಳ ಪೇಳೆ ।
ಕೊಲ್ಲಿಸಿ ನಡೆದಳು ತಾಯಿ ರೇಣುಕೆ ನಿಮ್ಮ ।
ಖುಲ್ಲ ಕಾರ್ತಿಕನ ಮೆಚ್ಚಿ ॥೧೫೯॥

ಹೇಳೇನೆಂದರೆ ಬಹಳುಂಟು ಈ ಮೂಲ ।
ವೇಳೆಯಾಯಿತ್ತು ತನಗೀಗ।
ಭಾಳಲೋಚನ ಹರನ ವಾಲಗವಿರ್ದಂತೆ ।
ನಾ ಹೋಗಿ ಇಡಬೇಕು ಶಿರವ ॥೧೬೦॥

ನಡೆಯಲು ಪಶು ಅತ್ತ ಸಿಡಿಲಿನ ಮರಿಯಂತೆ।
ಕಿಡಿಸೂಸಿ ಪಶುವ ರಾಮುಗನು।
ಹರಲೋಕ ಪೋಗಲ್ಕೆ ಬಿಡೆನು ಎನುತಲಿ ಬಂದು।
ಹೊಡೆದನು ರೇಣುಕೆ ತಲೆಯ ||೧೬೧||

ಜಡದ್ರೋಹಿ ಕಾರ್ತಿಕನ ಸದೆಬಡೆ[ದ ರಾಮುಗ]।
ಗಿಡಕೊಬ್ಬರಾಗಿ ಓಡಿದರು।
ತೊಡರಿ ಆಯುಧ ಪಿಡಿದು ನಡೆಯಲು ಕಾರ್ತಿಕ।
ಒಡನೆ ಹಾರಿಸಿದ ತುರಗವನು ||೧೬೨||

ಶಿರಬರಲು ಜಮದಗ್ನಿ ಹರನ ವಾಲಗದೆಡೆಗೆ।
ಇಡಲಾಗ ಈಶ್ವರನ ಮುಂದೆ।
ಗುರುರಾಯ ಶಾಪೆನ್ನ ಕಳೆದು ಹೋಯಿತುಯೆಂದು।
ನಡೆಯಲು ಪಶು ಹೇಮಗಿರಿಗೆ ||೧೬೩||

ಹರನೋಡಿ ಜಮದಗ್ನಿ ಮುನಿಯ ಮಂಡೆಯ ಮೇಲೆ।
ಕರವಿಟ್ಟು ನಿನಗಿಂತು ಬಂತೆ।
ವನಿತೆಯರ ಕಾಲೊಳು ಲಯವಾಗಲೆಂದೆಂಬ।
ಹಣೆಯ ಬರಹವು ಹೀಗೆ ಬಂತೆ ||೧೬೪||

ಕಳೆದು ಹೋಯಿತು ಕರ್ಮ ಉಳಿದುದು ನಿಜ ಎಮ್ಮ।
ಬಳಿಯ ಸೇರಲು ಭಯವೇನು?।
ಪುನರ್ಜೀವ ಮಾಡಿ ಕಳುಹಿಕೊಡುವೆವು ನಿಮ್ಮ।
ಮೊದಲ ಯೋಗಕೆ ಹೋಗಿ ಎನಲು ||೧೬೫||

ಶ್ರೀ ಶಂಭೋ ಧವಳಾಂಗ ಏಕೋದೇವನೆ ಭುವನ।
ಲೋಕ ಬ್ರಹ್ಮಾಂಡ ರಕ್ಷಿಪನೆ।
ಓಂಕಾರ ಪ್ರಣಮತ್ವ ಬಿನ್ನಹ ಲಾಲಿಪುದೆನ್ನ।
[ಒರೆವ] ಕಾರ್ತಿಕನ ಧರ್ಮ ||೧೬೬||

ಕರೆದನ್ನ ನೀಡಲು ಹರಣಕ್ಕೆ ಮುನಿಯಲು।
ಚರಣಾಗ್ರದೊಳಗೆ ಒಪ್ಪದೆ।

ಮರುಳು ವೇದವಲಿತ್ತ ಪೂರ್ವ ಭಂಗವೆಂದು ।
ಎರಗಿದ ಮುನಿಹರನಡಿಗೆ ||೧೬೭||

ಉಪಕಾರ ಮಾಡಲ್ಕೆ ಅಪಕಾರ ಮಾಡಿದ ।
ತ್ರಿಪುರಸಂಹಾರಿ ಲಾಲಿಪುದು ।
ಕೃಪೆಮಾಡಿ ಕಾರ್ತಿಕನ ಡಿಳ್ಳಿಯೊಳಗೆ ಜನಿಸಿ ।
ಹತ ಮಾಳ್ಪ ತ್ರಾಣ ನಿನಗಿಹುದು ||೧೬೮||

ಇನ್ನೊಲ್ಲೆ ಗುರುರಾಯ ಮುನಿಯ ಮಾರ್ಗವು ಸುಡಲಿ ।
ದಯಮಾಡಿ ಈರ್ವರ ಧರೆಗೆ ।
ಹಗೆಯನ ಕೊಲ್ಲುವ ತನುಜನ ಎನಗಿತ್ತು ।
ಕಳುಹಲು ಕೀರ್ತಿಯ ಪಡೆವೆ ||೧೬೯||

ಗಿರಿಜೆಯ ರಮಣನು ಹರುಷದಿಂದಲಿ ಮೆಚ್ಚಿ ।
ಛಲಪಂಥ ಸರಿಯೆನಲು ನಗುತ ।
ಕರುಣದಿ ಹರಶಂಭು ಕಮ್ಮಟದ ಮುಮ್ಮಡಿಯ ।
ಉರರದಿ ಜನಿಸು ನೀ ಎನಲು ||೧೭೦||

ಹರನಾಗ ಮುನಿವರಗೆ ನಿರ್ಣಯಿಸಿ ಶಾಪಗಳ ।
ಕಳುಹಿದ ಬಗೆಗೇಳಿ ಮುನಿಗಳಿರಾ।
ಧರಣಿಪಾಲಕನಾದ ಮುನಿಯು ಕಂಪಿಲರಾಯ ।
ಮಗ ಬಂದು ಜನಿಸಿದ ಈಗ ||೧೭೧||

ಮಾತೆಯನು ಕೊಂದಾತ ಮಗನಾದ ಕಂಪಿಲಗೆ ।
ಜೋಕೆಯಾಯ್ತೀ ಋಷಿಗಳಿಗೆ ।
ಕಾರ್ತಿಕವೀರನು ಡಿಳ್ಳಿಯೊಳ್ ನೇಮ್ಯಾದ ।
ಶಾಪಕ್ಕೆ ಬಂದು ಜನಿಸಿದರು ||೧೭೨||

ಕೊಂದ ರಾಮಗೆ ಕೊಲೆಯು ಮುಂದೆ ತಪ್ಪದು ಋಷಿಯೆ ।
ಡೊಂಬಿತಿಯಾಗಿ ರೇಣುಕೆಯು ।
ಬಂದಳು ಕಂಪಿಲಗೆ ಮೆಚ್ಚಿನ ವೇಶ್ಯಾಗಿ ।
ತಿಂಬಳು ಮಗನ ಛಲಪದಕೆ ||೧೭೩||

ಬಂದವರ ಸ್ಥಿತಿ ಹೀಗೆ ಹಿಂದಲ ಹಗೆಗಾಗಿ ।
ಚಂದ್ರಶೇಖರನ ಅಭಯದಲಿ ।
ಮುಂದಿಲ್ಲಿ ಕಡಿದಾಡಿ ರಣಭೂಮಿ ಕೆಸರೇಳೆ ।
ಸಂದು ಪೋಪರು ಮುನಿಗಳಿರಾ ||೧೭೪||

ಪರಶುರಾಮನು ಬಂದು ಈ ತೆರ ಜನಿಸಿದ ।
ತಿಳಿದೀರೆ ಮುನಿಯ ಭೇದಗಳ ।
ಹರನಿತ್ತು ಕಳುಹನೆ ನರಪಡೆಯ ತಿಂಬುವರೆ ।
ಪರಮಶಕ್ತಿಗಳು ರಾಮನಿಗೆ ||೧೭೫||

ಚಂದವಾದುದು ನಾರಂದರೆ ಮುನಿರಾಯ ।
ಇಂದಿಗೆ ಬಿಟ್ಟೆ ಈ ಸ್ಥಳವ ।
ನಂಬಬಹುದೆ ಹೆಣ್ಣೆಂಬೊ ಮಾಯೆಯನು ।
ಮುಂದೇಳೆ ಋಷಿ ಮೂಲ ಕಿತ್ತು ||೧೭೬||

ಕೇಳುತಲಿ ಮುನಿಗಳು ಝಾಡಿಸಿ ನಡೆದರು ।
ನಾರಂದ ಮುನಿಯರೊಗ್ಗಿನಲಿ ।
ಹೇಮಾದ್ರಿ ಗಿರಿಮಾರ್ಗ ದಾರಿಯೊಳ್ ಬರುತಾಗ ।
ಮಾಡುತಲಿಹ ಪ್ರಸಂಗ ||೧೭೭||

ಮಡದಿಯ ನಂಬುವುದು ಮರುಳಾಟ ನಾರದರೆ ।
ಇದ ಕೇಳಿ ನಾನೊಂದನೊರೆವೆ ।
ಬಿಡದೆರಡು ಕರದೊಳು ಪಿಡಿದಿರಲು ಸತಿಯರು ।
ಮುಡುಬ [ಮೋ]ಟಗೆ ಮನವಿಡರೆ ||೧೭೮||

ಅದು ಹೇಗೆ ಮುನಿನಾಥ ನಗುತ ನಾರದ ಕೇಳೆ ।
ಒರೆವೆನಲ್ಲೊರ್ವ ಯೋಗೇಂದ್ರ।
ಪರಧ್ಯಾನವಿಲ್ಲದೆ ಮುನಿಗಳೆಲ್ಲರು ಕೇಳಿ ।
ಇದಕೆ ಘನವಾದ ಪ್ರಸಂಗ ||೧೭೯||

ರೇಣುಕೆ ಪರರೊಳು ಪೇಳಿ ಪುರುಷನ ಕೊಂದಳು ।
ಕಿಡಿಯೇಳು ಸುಡುವ ಹಗೆಗಾಗಿ ।

ರಾಯನ ಇಂದ್ರಕುಮಾರಿ ಗಂಡನ ಕೈಯ ।
ಹಾರ ಕೊಂದುದ ಕೇಳಿ ಪೇಳ್ವೆ ॥೧೮೦॥

ಮಾಳವದೇಶದ ಭೂಮಿಯೊಳಗಿಹುದೊಂದು ।
ಕಾಳವತಿಯೆಂಬ ಪಟ್ಟಣವು ।
ಆಳುವ ಅತ್ಯಂತ ಭೋಗದಿ ರವಿಕುಲದ ।
ರಾಯ ವಿಜಯೇಂದ್ರ ಸುಖದೊಳಗೆ ॥೧೮೧॥

ಹಾಗಿರುತಿರುಲಾಗ ಪ್ರಧಾನಿಯ ಮಗನೊಪ್ಪಿ ।
ಸಾಗಲು ಕುಳೀಂದ್ರಪುರಕೆ ।
ರಾಯ ವಿಜಯನು ಕೇಳಿ ರಣಭೇರಿ ಹೊಡೆಯಲು ।
ಭೋರನೆ ಹೊರಟು ಮಾರ್ಬಲದಿ ॥೧೮೨॥

ಪೇಳುವರಳವಲ್ಲ ರಾಯ ವಿಜಯೇಂದ್ರನ ।
ಕುಮಾರಿಯ ಲಾವಣ್ಯ ರೂಪ ।
ದೇವೇಂದ್ರ ಸತಿಗಿಂತ ಮೂರು ಇಮ್ಮಡಿಯಾಗಿ ।
ಬೀರುವಳು ಮನ್ಮಥನ ಮೋಡಿ ॥೧೮೩॥

ವರ ಚೆಲ್ವ ತನುಜೆಯ ನೆರೆ ಪಡೆದು ನೃಪವರನು ।
ಇರುವನು ಪರಮಸುಖದೊಳಗೆ ।
ಪರವೊಂದು ರಾಜ್ಯದ ದೊರೆ ಮಗನು ಆ ಸತಿಯ ।
ತರುವನು ಕೇಳು ನಾರದರೇ ॥೧೮೪॥

ಚೋಳೇಂದ್ರದೇಶದ ಪಾಂಚಾಲರಾಯನ ।
ಮಗನು ಫಾಲೇಂದ್ರ ಕುಮಾರ ।
ಆದನು ಮದುವೆಯ ಅನೇಕ ಸಂಭ್ರಮದೊಳು ।
ಮೂರು ವರುಷ ಬಿಡಲು ತವರೊಳಗೆ ॥೧೮೫॥

ಫಾಲೇಂದ್ರಕುಮಾರ ಪ್ರಧಾನಿ ಮಗ ಸಹ ।
ಸ್ನೇಹಿತರಾಗಿ ಎರವಿಲ್ಲದೆ ।
ಒಂದು ದಿವಸದೊಳು ಸ್ವಾರಿ ಮುಖದೊಳು ಬಂದು ।
ಆರಣ್ಯದೊಳಗೆ ಪರುಗ್ರಹಿ ॥೧೮೬॥

ಪಡೆದವರ ಮನೆಯೊಳಗೆ ಮಡದಿ ಬಿಡುವುದು ಸಲ್ಲ ।
ದೃಢದೊಳಗವರು ಇರುತಿಹರೇ ? ।
ಸು[ಳಿ]ವಾ ಮಂತ್ರಿಯೆ ನಡೆಯೆನಲು ।
ಇವರು ನಡೆಯಲು ಅಲ್ಲಿಂದತ್ತ ॥೧೮೭॥

ಭೇರಿ ಕಾಳೆಯ ರವದಿ ಮೇಳ ಪಾತ್ರಗಳೊಳಗೆ ।
ರಾಯನಿದಿರ್ಗೊಂಡ ಅಳಿಯರನು ।
ಏನು ಮಾಯವು ಕಾಣೆ ಇರ್ವರು ಬಂದರರ್ಥ ।
ನಾಳೆ ಕೇಳುವನು ಇದಕೇನು ॥೧೮೮॥

ಅಷ್ಟಭೋಗದಿ [ಸಾಗಿ] ಅರಮನೆಯನೊಳು ಹೊಗಲು ।
ಮೃಷ್ಟಾನ್ನ ಭೋಜನ ಸವಿದು।
ಮತ್ತೊಂದು ಬಿಡದಿಯ ಏಕಾಂತ ಸ್ಥಳಮಾಡಿ ।
[ಕೊ]ಟ್ಟರು ರಾಯಪುತ್ರನಿಗೆ ॥೧೮೯॥

ಪ್ರಾಣಸ್ನೇಹಿತನಾದ ಪ್ರಧಾನಿಯ ಮಗನಿಗೆ ।
ಬಾಗಿಲಂ[ಗಳದಿ] ಸಡಗರಿಸಿ ।
ಒಡನೆ ಮನೆಯ ಮಾಡಿ ಮಂತ್ರಿ[ಮಗನಿ]ಗೆ ಕೊಡಲು ।
ಆಗ ಮಲಗಿರಲು ಜಾಗ್ರದಲಿ ॥೧೯೦॥

ರಾಯ ಫಾಲೇಂದ್ರನು ತಾ ಬಳಲಿ ನಿದ್ರೆಯ ಮಾಡೆ ।
ಹೋದ ಮೇಲಣ ಸ್ಮರಣೆ ಮರೆದು ।
ಲಾಲಿಸಿ ಮುನಿಗಳೆ ವಿಜಯರಾಯನ ಮಗಳು ।
[ಮೋಟ]ನ ಮೆಚ್ಚಿಕೊಂಡಿಹಳು ॥೧೯೧॥

ಷಡುರಸಾನ್ನದ ಬುತ್ತಿ ಹದಮಾಡಿ ಕಟ್ಟಿದಳು ।
ನಡೆದಳು ಕಾಂತನಿದ್ದೆಡೆಗೆ ।
[ಒ]ರಗು ನಿದ್ರೆಯ ಮಾಳ್ಪ ರಮಣನೆಚ್ಚರವರಿದು ।
ಹೆಳವನ ನೆನೆದು ಮನದೊಳಗೆ ॥೧೯೨॥

ನಾಳೆ ಎನ್ನಯ ರಮಣ ಕರೆದು ಒಯ್ಯದೆ ಬಿಡನು ।
ಹೇಳಲು ಸಮಯ ಹೆಳವನಿಗೆ ।

ಕೂಡಿದ ವಿಶ್ವಾಸ ಬಾಲರಾಭ್ಯದಿ ಮೊದಲು ।
ಹಾಗೆ ಹೋಗಲು ಬಹಳ ಕರ್ಮ ॥೧೯೩॥

ಚಂದ್ರವದನೆ ಹೊಕ್ಕು ಹಿಂದಕ್ಕೆ ತಿರುಗಲು ।
ಕಂಡನು ಮಂತ್ರಿಯ ಮಗನು ।
ಬಂದಾಕೆ ಒದಗಿಲಿ ಹಿಂದಕ್ಕೆ ತಿರುಗಿದಳು ।
ಬೆಂಬಳಿವಿಡಿದ ಪ್ರಧಾನಿ ॥೧೯೪॥

ಸಾಗಿದಳು ನಗರದ ಮೂಲೆ ಮುಡುಕನೆ ಹಿಡಿದು ।
ಜಾರಿ ಬೀಳುತ ಏಳುತಲಿ ।
ಬೇರೊಂದು ಹಾಳೂರ ಮೂಲೆಯೊಳಿರುವನು ।
ಕಾಲೆರಡಿಲ್ಲದ ಮೋಟ ॥೧೯೫॥

ಬಂದು ಗುಡಿಲನೆ ಪೊಗಲು ಹಿಂದೆ ಮಂತ್ರಿಯು ಕುಳಿತ ।
ಛಂದವಾಯಿತು ಫಲಪ್ರಾಪ್ತಿ ।
ಹಿಂದಲ ಜಲ್ಮದ ಸ್ನೇಹದ ಫಲವಿದು ।
ಅಂಗಹೀನನ ಬೆರೆಯುವುದು ॥೧೯೬॥

ಅರಿಯದೆ ನುಡಿವರು ಮರುಳು ಮಾನವರು ।
ವಿಧಿಯ ಬರಹದ ಫಲಗಳೆಂದೆನದೆ ।
ಕಡಿಮೆಯರ ಮಾತೇನು ದೊರೆರಾಯ ವಲ್ಲಭೆಯು ।
ಮುಡಬಗೆ ಮನವಿಟ್ಟ ಬಳಿಕ ॥೧೯೭॥

ತಡವೇಕೆ ಇಷ್ಟೊತ್ತು ಎ[ದೆ]ಗರ್ವ ಮದವೆಂದು ।
ಹೊಡೆದನು ಬಿದಿರ ದಬ್ಬೆಯಲಿ ।
ತಡಬಡಿಸಿಕೊಳುತೆದ್ದು ಗುಡಿಲ ಗಳುವನೆ ಪಿಡಿದು ।
ಒದೆವನು ಮೋಟ ಮಂಡಿಯಲಿ ॥೧೯೮॥

ದೂರಮಾಡದೆ ಆಕೆ ಕಾಲೆರಡು ಪಿಡಿಕೊಂಡು ।
ಲಾಲಿಸಿ ತಪ್ಪ ಪೇಳುವೆನು ।
ಧಾರೆರೆದ [ಮೊದಲಾ]ಗಿ ಮೋರೆ ನೋಡದದ ಕಾಂತ ।
ಬರಲು ತಡವಾಯ್ತು ಪಾಲಿಪುದು ॥೧೯೯॥

ಎನ್ನಯ ಪ್ರಿಯ ಕರಕೊಂಡು ಹೋಗದೆ ಬಿಡನು ।
ನಿಮ್ಮಯ ಋಣ ತೀರಿತೆನಗೆ ।
ಹೆಣ್ಣು ಜನ್ಮವು ಸುಡಲಿ ಇನ್ನೆಂತು ನಾ ಮರೆದು ।
ಕಣ್ಣು ಪೋದಂತೆ ನಾನಿರೆ ॥೨೦೦॥

ಕೂಡಿದ ಮೊದಲಾಗಿ ಹಾಲ್ಹಣ್ಣು ಬೆರೆದೊಂದು ।
ಗೂಡಿನ ಗಿಣಿಯಂತೆ ಇರ್ದು ।
ಹೋಗಲು ಮನವಿಲ್ಲ ಒಲ್ಲೆನೆಂದರೆ ಜನರು ।
ಹಾದರಗಿತ್ತಿ ಎನ್ನುವರು ॥೨೦೧॥

ಹಾಳ ಚಿಂತೆಗಳೇಕೆ ಹೇಳುವೆನಿದಕೊಂದು ।
ಮೇದಗತ್ತಿಯನು ನೀ ಒಯ್ದು ।
ಮೇಳೆ ಕುತ್ತಿಗೆ[ಯ]ನರಿಯೆ ಜೋಡುಗಾರನ ।
ಮೇಲೆ ದೂರುವದು ಜನರೆಲ್ಲ ॥೨೦೨॥

ನಿಶ್ಚಯದ ಮಾತೆಂದು ಒಪ್ಪಿದಳಾ ನಾರಿ ।
ಕತ್ತಿಯ ಹದಮಾಡು ಎನುತ ।
ಮತ್ಯಾವ ತೊಡರಿಲ್ಲ ಮುಂಡೆಯೆಂಬರು ಲೋಕ ।
ನಿಶ್ಚಿಂತೆಯಲಿ ಬಾಳಬಹುದು ॥೨೦೩॥

ಕೇಳಿದ ಮಂತ್ರಿಯ ಮಗನು ಆಡಿದ ನುಡಿಯ ।
ಗಹಗಹಿಸಿ ನಗುತ ಮನದೊಳಗೆ ।
ಮಾಡ್ಯಾಳ ಹ[ದ]ವನು ಆಡಿದ ವಿಷಯಕ್ಕೆ ।
ಕೂಡಿಂದು ಪ್ರಿಯನ ಹತವ ॥೨೦೪॥

ನೋಡುವ ಅದಕೇನು ಅವಳಿಗೆ ಮುಂದರಿದು ।
ಸ್ಥಾನದಿ ನಾ ಹೋಗಿ ಇರುವ ।
ಜಾಗ್ರದೊಳಿರು[ತಾ]ಗ ವ್ಯಾಘ್ರನಂದದಿ ಬಂದು ।
ಮಗ್ಗುಲೊಳ್ ನಿಂದು ನೋಡಿದಳು ॥೨೦೫॥

ಬಂದಳು ಭವಗೇಡಿ ಗಂಡನ ಸನ್ನಿಧಿಗೆ ।
ತುಂಡೇಳನರಿದಳು ಶಿರಮುಂಡ।

ಕಂಡಳಲ್ಲದ ರೀತಿ ಕಾಂತನ ತಡವರಿಸಿ ।
ಮುಂಡೆಯಾದೆನು ಎಂದು ಹೊಡಕೊಳ್ಳೆ ॥೨೦೬॥

ಬೊಬ್ಬೆ ಹೊಡೆಯಲು ಮನೆಯೆದ್ದು ಹಾರುವ ತೆರದಿ ।
ಗುದ್ದಿಕೊಂಬಳು ಎದೆ ಬಾಯ ।
ಸದ್ದ ಲಾಲಿಸಿ ಕೇಳಿ ಹೊರಗಿರ್ದ ಪರಿಜನರು ।
ನುಗ್ಗಿ ಬರಲು ನೂರಾರು ಜನರು ॥೨೦೭॥

ಏನೆಂದು ಗರ್ಜಿಸುತ ಕುಮಾರಿ ಕೇಳಲವರು ।
ಪ್ರಾಣಕಾಂತನು ಜೀವವಳಿದ ।
ಏನು ಹೇಳಲಿ ಪ್ರಿಯನ ಭೋಗ ನೋಡಲು ಬಂದೆ।
ಖೋಡಿರಂಡೆಗೆ ಫಲವಿಲ್ಲ ॥೨೦೮॥

ಎಂದು ಬಾರವ ಪ್ರಿಯ ಬಂದನೆನ್ನುತ ಹಿಗ್ಗಿ ।
ಒಂದಾರು ಭುಜದಿ ನಾ ಬರಲು ।
ತುಂಡಾಗಿ ತಲೆ ಮುಂಡ ಇರುವ ಬಗೆಯನು ನೋಡಿ।
ಕೊಂಡ ಬೀಳ್ವೆನು ಪ್ರಿಯನೊಡನೆ ॥೨೦೯॥

ಮತ್ತಾರು ಇರಲಿಲ್ಲ ಜೊತ್ತುಗಾರನ ಹೊರತು।
ಇತ್ತೇನೋ ಹಿಂದಲಿ ಹಗೆಯು ।
ಕೊಚ್ಚಿ ಕೊರೆದನು ಎಂದು ಹೆಚ್ಚಾಗಿ ಕೂಗುತ್ತ।
ಬೆಚ್ಚಿ ಬೀಳುತ ಶವದ ಮೇಲೆ ॥೨೧೦॥

ನೋಡುವುದೇನಿವನ ನಾಡರಿದಿತು ಹಿಂದೆ।
ಮಾಡಿದ ಹಗೆಯ ತೀರಿಸಿದ ।
ಜೋಡಿಸಿ ಕರವೆರಡ ತೆಗೆದು ಹಿಂಗಡೆ ಕಟ್ಟಿ।
ಆಳೊಂದು ಗುದ್ದನು ಹೊಡೆಯೆ ॥೨೧೧॥

ಹಿಡಿದಾಗ ಮಂತ್ರಿಯನು ಹೊಡೆಯಲು ನೂರಾರು।
ನುಡಿಯೆಡೆಗೊಡದೆ ನಾಲಗೆಯ।
ಹಿಡಿತಂದು ಪಟ್ಟ ವಿಜಯರಾಯಗೆ ಪೇಳೆ।
ಅಳಿಯನ ಕೊಂದೆ ನೀನೆಂದು ॥೨೧೨॥

ವಿವರ ಕಾಣದೆ ಅರಸು ಕರೆಸಿ ಮಂತ್ರಿ[ಗೆ] ಎನಲು।
ತೆಗೆಸಿವನ ಶೂಲದ ಮರಕೆ ।
ಒಡಗೊಂಡು ಆ ಮಂತ್ರಿ ಕರೆದೊಯ್ದು ತನ್ನಯ ।
ಅರಮನೆಯೊಳಗೆ ಉಪಚರಿಸೆ ||೨೧೩||

ಷಡುರಸಾನ್ನವ ಎಡೆಬಡಿಸಿ ಮಂತ್ರಿಯು ।
ಚದುರತ್ವದೊಳಗೆ ಕೇಳುವನು ।
ಇದು ಹೇಗೆ ದೊರೆ ಮಗನ ಹಗೆಯಿಂದಲಿ ಕೊಂದ್ಯಾ।
ಬಗೆಯಾವುದೆಂದು ಪ್ರಧಾನಿ ||೨೧೪||

ವಿವರ ಕಾಣದೆ ಹೊಡೆ ಗದ್ದೆ ಕೊಯ್ದು ತೆರನಂತೆ ।
ಹುಡುಗ ನಿಮ್ಮ ನೃಪನೊಳನು।
ಕಡಲೊಳಗೆ ಬಿದ್ದವನ ಹೊರದೆ ಮೂರು ವೇಳೆ ।
ಒಳಕೊಳ್ಳುದೆ ಭಾಗೀರಥಿ ಮಡುವು ||೨೧೫||

ಎತ್ತು ಕರುವನು ಈಯೆ ಹಿತ್ತಲಿಗೆ ಹೊಡೆಯೆಂಬ।
ಅರ್ಥ ನಿಮ್ಮರಸಿನೊಳಿಹುದು ।
ಪೃಥ್ವೀಶನಾಡನೆ ಮೂರುತ್ತರವ ಲಾಲಿಸಿ।
ಸತ್ಯಧರ್ಮಗಳ ಶೋಧಿಸದೆ ||೨೧೬||

ಸರ್ಪನ ಗ್ರಾಸದಿ ಕಪ್ಪೆ ಸಿಲ್ಕಿರುವಾಗ ।
ಮೋಕ್ಷಕನ ಪಿಡಿಕೊಂಬ ತೆರದಿ ।
ಪೃಥ್ವಿಪಾಲಕನಳಿದ ತೊತ್ತ ಕೆಡಿಸಲು ಏನು ।
ಜೊತ್ತಿಗೆ ಕಳುಹು ಸ್ನೇಹಿತನ ||೨೧೭||

ಹಲವು ಟವುಳಿಯ ಮಾಡಿ ಉಳಿದರೆ ಫಲವೇನು।
ಗೆಣೆಕಾರನಳಿದ ಇನ್ನೇಕೆ ।
ಕಳ್ಳ ಸೂಳೆಯು ಮೇದಮೋಟ ಬದುಕಲಿ ಮಂತ್ರಿ ।
ನಡೆಸಯ್ಯ ಶೂಲಕ್ಕೆ ಮಂತ್ರಿ ||೨೧೮||

ಅಣ್ಣ ಜೀವಳಿದಿರಲು ಆವ ಕಥೆಯನು ಪೇಳ್ವೆ ।
ಮೇಲೆ ಮೂಗ ಕೊಯ್ಸಿ ರಂಡೆಯನು ।

ಕುಲಶುದ್ಧ ಮಾಳ್ಪುದಕೆ ಹೆಳವ ಮೋಟನ ಕರೆಸಿ।
[ಕೇ]ಳಿಸಯ್ಯ ಎನ್ನ ಇದಿರಿನಲಿ ॥೨೯॥

ಮೇದನ ಪಿಡಿತರಿಸಿ ಬೆದರಿಸಿ ಕೇಳಲು ।
ಆದ ನಿಜಕರವ ಪೇಳುವನು ।
ರಾಯಗರುಹಲು ಮಂತ್ರಿ ಕುಮಾರಿಯ ಪಿಡಿತರಿಸಿ ।
ಸೀಳಿ ತೋರಣವ ಕಟ್ಟಿಸಿದ ॥೨೨೦॥

ರೇಣುಕಿ ಮಾಡಿದ್ದು ಹೀನಾಯ ಎನಬೇಡಿ ।
ರಾಜಶೇಖರಗೆ ತಾ ಒಲಿದಳು ।
ನೋಡಿರೈ ಈ ಕರ್ಮ ಮುಡುಬ ಮೋಟಗೆ ಒಲಿದ ।
ಶ್ವಾನ ಮುಂಡೇರ ಫಲಪ್ರಾಪ್ತಿ ॥೨೨೧॥

ಹರಹರ ಇದು ದೊಡ್ಡ ಅಗಣಿತದ ಕರ್ಮಗಳು ।
ನಗುತ ಮುನಿಗಳು ಶಿರದೂಗೆ।
ನೆರೆ ಪಾಪಿ ರೇಣುಕಿ ಎನುತಲಿದ್ದೆವು ನಾವು ।
ಅದಕಿದು ಬಹಳ ಅನ್ಯಾಯ ॥೨೨೨॥

ಲಯವಾದ ನೃಪತನುಜ ಕಡಿಗೇನಾದನು ಎಂದು।
ಮುನಿಯ ಕೇಳಿದನು ನಾರದನು ।
ವಿನಯದಿ ಲಾಲಿಸಿ ಈಶ್ವರನ ಕೃಪೆಯೊಳಗೆ ।
ತಾನು ಪಡೆದಂಥ ಪತಿವ್ರತೆಯ ॥೨೨೩॥

ರಾಯ ವಿಜಯೀಂದ್ರನು ಬಹಳ ಚಿಂತಿತನಾಗಿ ।
ಮಗಳಿಂದ [ಪಾಪಕೆ] ಗುರಿಯಾದೆ ।
ಪಡೆದವರ ಬಳಿಗೆ ನಾ ಹೇಗೆ ಕಳುಹಲಿ ಸುದ್ದಿ ।
ಇಳಿಯಲು ಉದಕ ನಯನದಲಿ ॥೨೨೪॥

ತಾಯಿ ತಂದೆಯ ಬಳಿಗೆ ಹೇಗೆ ಬರೆಯಲಿ [ಪತ್ರ] ।
ಗೋಳಿಡುತದೆ ಆ ಪುರವು ।
ಬಾರೆಂದು ಅಳಿಯನ ಪ್ರಧಾನಿಯ ಸತ್ಕರಿಸಿ ।
ಆಭರಣ ಭೂಷಣವ ಕೊಡಿಸಿ ॥೨೨೫॥

ಮೇದನ ಸುಳ್ಳಿಂದ ಪ್ರಾಣಕ್ಕೆ ಮುನಿದಿರ್ದೆ ।
ನಾ ಬೇರೆ ಯಮಗೆ ಗುರಿಯಾಗಿ ।
ಆದಂಥ ಸ್ಥಿತಿಗತಿಯ ಪಾಂಚಾಲರಾಯಗೆ ಪೇಳೀ ।
ಕಾಯನೊಯ್ದು ಮುಖ[ದೋರು] ॥೨೨೬॥

ಒಳಿತಯ್ಯ ರಾಜೇಂದ್ರ ಬೆಳ್ಳಿ [ಪೆಟ್ಟಿಗೆ] ತುಂಬಿ ।
ಸುಮ್ಮನೆ ಕಳುಹು ಎಮ್ಮೊಡನೆ।
ಗಮ್ಮನೆ ಬರುವಾಗ [ಅನ್ಯೆಯ] ಸತಿ ಹೀಗೆ ।
ಎನ್ನುತ ನಡೆಯಲಾ ಪುರಕೆ ॥೨೨೭॥

ಬರಲಾಗ ಚಂಪಕಪುರದ ಮಂತ್ರಿಗೆ ಸುದ್ದಿ ।
ಕೊಡಲಾಗ ಪೋಗಿ ಕಂಡವರು ।
ತನುಜೆಯ ರಮಣನ ಬರವ ಪೇಳಲು ಹೊರಟು ।
ಇದಿರ್ಗೊಂಡು ಕರೆದೊಯ್ಯೆ ಮನೆಗೆ ॥೨೨೮॥

ಷಡುರಸಾನ್ನವನೀಗ ಸಲಿಸಿ ಭುಕ್ತಿಯ ಮೇಲೆ ।
ಮಲಗುವ ಮನೆಯ ಶೃಂಗರಿಸಿ ।
ಪೆಟ್ಟಿಗೆ ಸಹವಾಗಿ ಹೊತ್ತು ಮಂಚದ ಮೇಲೆ ।
ಇಟ್ಟು ಶವವನ್ನು ಮಲಗಿಸಲು ॥೨೨೯॥

ಬಂದಳು ಸತಿ ಬೇಗ ಬಿಡದಿ ಏಕಾಂತಕ್ಕೆ ।
ಅಂಜಿ ಅಳುಕುತಲಿ ಭಕ್ತಿಯಲಿ ।
ಬಿಂಬ ಅರಳಲು ಮರಿದುಂಬಿ ಎರಗುವ ತೆರದಿ ।
ಪಾದಂಗಳಿಗೆರಗಿ ವಲ್ಲಭನ ॥೨೩೦॥

ಧಾವಂತದೊಳು ಬಹಳ ಬಳಲಿ ನಿದ್ರೆಯ ಮಾಳ್ಪರ ।
ಏಳಿಸ ಸಲ್ಲೆಂದು ಮನದಿ ।
ಮೇಲಣ ಮುಸುಕನು ಜಾರಿಸಿ ಕರವಿಡಲು ।
ತೋರಲು ಸೀತಾಗ್ನಿಯಾಗಿ ॥೨೩೧॥

ಹರಹರ ಗುರುರಾಯ ಇದು ಏನು ಮಾಯಗಳು ।
ಸ[ತಿ]ಜೀವ [ಪತಿಯೊ]ಡನೆ ಮಲಗಾಗೆ॥

ಲಯಕಾಲಲ್ಲೈದರು ಇದು [ಏನು] ಫಲಪ್ರಾಪ್ತಿ ।
ಶಿವದ್ರೋಹಿ ರಂಡೇರಿನ್ನುಂಟೆ ॥೨೩೨॥

ಆಸೆಯಿಲ್ಲದ ಪತಿಗೆ ಐದೆತನವಿಲ್ಲದ ಸತಿಯ ।
ಯಾಕೆ ನಿರ್ಮಿಸಿದನಾ ಬ್ರಹ್ಮ ।
ಲೋಕದಿ ಬಾಳ್ವರಿಗೆ ರತಿಗಲೆಯ ಕೆಡಿಸಿದ ಫಲವು।
ಈ ಪ್ರಾಪ್ತಿ ಎನಗಾಯಿತೆನಲು ॥೨೩೩॥

ಪತಿ ಅಳಿದು ನಾನಿರ್ದು ಗತಿಯೇನು ಧರೆಯೊಳಗೆ ।
ಜೊತೆಗೂಡಿ ನಡೆಯೆ ಪತಿಯೊಡನೆ ।
ಸಿತಕಂಠ ವರಪುತ್ರ ಶರಭನ ವಂದಿಸಿ ।
ಹತ [ಮಾ]ಡಿಕೊಂಬೆ ಪ್ರಾಣವನು ॥೨೩೪॥

ಭದ್ರಕಾಳಿಯ ರಮಣ ಚಿದ್ರೂಪನಣುಗನೆ ।
ನಿರ್ಧರಿಸು ಎಲ್ಲ ಪ್ರಾಣಗಳ।
ನಿದ್ರೆಯ ಮಾಡುತಲಿ ಮರಣವಾದನು ರಮಣ।
ನಿದ್ರೋಹಿ ಎನ್ನನು ಕೂಡಿ ॥೨೩೫॥

ಕೊಂಡಾಡಿ ಕಿಡಿಗಣ್ಣ ರುಂಡಮಾಲನೆ ಎನ್ನ ।
ಗಂಡನ ಅಸುವ ಕೊಡದಿರಲು ।
ಗಂಡಗತ್ತರಿ ಹಾಯ್ದು ಕೊಡುವೆ ಪ್ರಾಣವ ಗುರುವೆ।
ಬಂಧಿಸಿ ಶಿರವ ಹೂಡಿದಳು ॥೨೩೬॥

ಅಳಿಯಲೇತಕೆ ಮಗಳೆ ಪರಹಿತದ ಪತಿವ್ರತೆಯೆ ।
ತಾಯೆ ಮೆಚ್ಚಿದೆ ಬೇಡು ಎನಲು।
ನೀ ಹೋಗಿ ಪತಿಯನು ಏಳು ಎನ್ನಲು ಮತ್ತೆ ।
ಕಾಯವ ಮರೆದೇಳ್ವನಮ್ಮ ॥೨೩೭॥

ಹರಿಣಲೋಚನೆ ಬೇಗ ಎರಗಿ ಈಶ್ವರನೆಡೆಗೆ ।
ತಿರುಗಿದಳು ತನ್ನ ಗೃಹಕಾಗಿ ।
ಪುರುಷನೆ ಏಳೆಂದು ಮುಖದೆರೆದು ನೋಡಲು ।
ಹರಹರ ಎನುತ ಕುಳ್ಳಿರಲು ॥೨೩೮॥

ಸತ್ಯದ ಸತಿಯೆಂದು ಮೆಚ್ಚೆ ಮಂತ್ರಿಯ ಮಗನು ।
ಮಂಚದ ಕೆಳಗಿಂದಲೇಳೆ ।
ವೃತ್ತಾಂತ ಎಲ್ಲವನು ರಾಯಪುತ್ರಗೆ ಪೇಳೆ ।
ಸತ್ಯ ಪಾರ್ವತಿ[ಗವರೆ]ರಗೆ ॥೨೩೯॥

ರಾಯ ಫಾಲೀಂದ್ರನು ಪ್ರಧಾನನು ಸತಿಯೊಳು ।
ಸಾಗಿದರವರು ಪುರಕಾಗಿ ।
ಹೇಳಿದ ಮುನಿವರನು ಕೇಳಿದ ನಾರಂದ ।
ಭೂದೇವಿ ಎನಬಹುದು ಕಾಯ ॥೨೪೦॥

ಎಲ್ಲಾರು ಕಂಡೀರೇ ಕಳ್ಳರಂಡೆರ ಮಾತ ।
ಅಲ್ಲಿ ಪಡೆದಂಥ ಪತಿವ್ರತೆಯ ।
ನಿಲ್ಲದೆ ಧರೆಯೊಳು ಕೋಟಿಗೊರ್ವರು ಧರಣಿ ।
ಅಲ್ಲಿ ಹುದುಗದೆ ನಿಮಿಷದಲಿ ॥೨೪೧॥

ಗುರುವಾಕ್ಯವಾದುದು ಈ ಒರೆದ ಪ್ರಸಂಗವು ।
ಮಡದಿಯರ ನಂಬಲು ಮರುಳೆ ।
ಸುಡು ಹೆಣ್ಣು ಜನ್ಮವ ಸಾಕೆಂದು ಮುನಿಗಳು ।
ಅಡರಲು ರಜತಾದ್ರಿಗಿರಿಗೆ ॥೨೪೨॥

ರಾಮಭೂಪಾಲ ಕುಮಾರ[ನು] ಜಟ್ಟಿಂಗಿ ।
ರಾಯ ಲಾಲಿಸಿದ ಮೇಲ್ಕಥೆಯ ।
ದೇವ ನಿಮ್ಮಯ ಪಾದ ಬಳಲಿಸಿದಿರಿ ರವಿ ।
ಕಡಲ ಪಾಲಿಸಬೇಕು ॥೨೪೩॥

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರ[ದ] ।
ಕರುಣಿಸು ವಿರುಪಾಕ್ಷಲಿಂಗ।
ತರಳ ರಾಮನ ಜನನ ಬೆಳೆವಾಸರವ ಮುನಿಯು ।
ನಡೆದ ಬಳಿಗೆ ದ್ವಯ ಸಂಧಿ ॥೨೪೪॥*

❖❖

* + ಅಂತು ಸಂಧಿ ೨ಕ್ಕಂ ಪದನು ೪೮೪ಕ್ಕಂ ಮಂಗಳಮಹಾಶ್ರೀ

ಸಂಧಿ : ಮೂರು

❖

ಬಾಲರಾಮನ ಬಾಲಲೀಲೆ-ಹೊಯ್ಸಳನ ಮೇಲೆ ಯುದ್ಧ ಪ್ರಮಾಣ

---

*ಶ್ರೀಗುರು ಪ್ರಭುರಾಯ ಮಾಯನು ಗೆಲಿದಂಥ
ತಾವು ತಂಗಿಲ್ಲದ ಭಯವು ।
ವೇದಪುರಾಣಕೆ ನಿಲುಕದ ಅಲ್ಲಮ
ರಾಯ ಕೊಡೆನಗೆ ಸನ್ಮತಿಯ ॥೧॥

ತಾವರೆ ಗೆಣೆಯನ ಭಾಳದೆ ಸೂಡಿ[ದ]ನೆ
ಹೂಡಿ ನರಬೊಂಬೆ ಸೂತ್ರಗಳ
ಆಡಿಪ ಅಖಿಳ ಬ್ರಹ್ಮಾಂಡಲೋಕವನು
ದೇವ ಪಾಲಿಸು ಸನ್ಮತಿಯ ॥೨॥

ಮುಂದಣ ಶ್ರುತಿ ಎನಗೆ ತುಂಬಿಹುದು ಹೃದಯದೊಳ್
ಇಂಬುಗೊಂಡೆನ್ನ ಶಾರದೆಯೆ।
ಗಂಧದ ಮರದೊಳು ಶ್ರೀಗಂಧವು ಮರದಂತೆ
ಒಂದಿಸು ಕೃತಿಯ ನಡೆವಂತೆ ॥೩॥

ತಾವರೆ ಗೆಣೆಯನು ತಾಯೊಡಲಗಂಡ ತಾ
ಏರಿದ ರಥವ ಪೂರ್ವದಲಿ ।
ರಾಯನು ಜಟ್ಟಂಗಿಕುಮಾರನುದಯದಿ
ಸ್ನಾನಪಾನಗಳಾಗಿ ನಡೆಯೆ ॥೪॥

---

* +ಬಲ್ಲಾಳರಾಯನ ಮೇಲೆ ದಂಡ ನಡೆ[ದ] ಸಂಧಿ, ಶ್ರೀಗುರು ಬಸವಲಿಂಗಾಯ ನಮಃ । ಶ್ರೀ ಗಣಾಧಿಪತಾಯಂ ನಮಃ ಶುಭಮಸ್ತು. ಪದನು ॥ (ಮೂ)

ಕರಿ ತುರಗ ಬಲದೊಡನೆ ಸದರಿಗೆ ನಡೆಯಲು
ಚದುರ ಮಂತ್ರಿಗಳು ಮನ್ನೆಯರು ।
ಗುರುರಾಯ ಹರಪೂಜೆ ಮಾಡಿ ವಂದನೆಗೆಯ್ಯೆ
ಪರಮಾನ್ನ ಸವಿದು [ಏಳಿದನು] ||೫||

ಸದರಿಗೆ ಬರಲಾಗ ದೊರೆಬಾಲನಿದಿರೆದ್ದು
ಕರಮುಗಿದು ಸಾಷ್ಟಾಂಗವೆರಗಿ ।
ಕರಹಸ್ತಲಾಗದೊಳ್ ಸದರಿಗೆ ಬಿಜಗೊಳಿಸಿ
ನಡೆಸಬೇಕೆನ್ನ ಕೃತಿ ಮುಂದೆ ||೬||

ಬಾಲ ನಿಮ್ಮಯ್ಯನ ಲೀಲೆಯನೊರೆವೆನು
ಲಾಲಿಸು ಮಗನೆ ಪ್ರೀತಿಯಲಿ ।
ಒಂದೆರಡು ಮಾಸಗಳು ಕಳೆದು ಹನ್ನೆರಡಾಗೆ
ತೋರುವ ಚಿನ್ನಭಿನ್ನಗಳ ||೭||

ನಗುವನು ಕಿಲಿಕಿಲಿ ನಲಿವನು ನ[ವಿಲಂ]ತೆ
ಕುಣಿವ ಕಾಳಗಗತಿಯೊಳಗೆ ।
ಘುಲಿಘುಲಿಯೆಂಬ ಕಾಲ್ಗೆಜ್ಜೆಗಳಿಂದ
ಪಲ ಬಗೆಯ ರತ್ನದೋರುವನು ||೮||

ಅಂಬೆಗಾಲಿಡುವನು ತುಂಬಿಯೆ ಮೆರೆಯುತ
ತಾಯೆಂದರೆ ಮುತ್ತನು ಕೊಡುತ ।
ಚಂದ್ರನು ಮುಂಬರಿದು ವರುಣಾದ್ರಿ[ಲಿ] ಬೆಳೆವಂತೆ
ದಿನಕೊಂದು ಕಳೆಯದೋರುವನು ||೯||

ಆಡುವನರಗಳಿಗೆ ಕಾಡುವ ಕೆಲವೊತ್ತು
ಗೋಡೆಕಂಬವ ಹಿಡಿದು ನಡೆವ ।
ನಡೆವನು ತಪ್ಪೆಜ್ಜೆ ಪಿಡಿದರೆ ಕರವನು
ನುಡಿವನು ಕೊಡಲುಗೀರ್ಶ್ವಣವ ||೧೦||

ತಾತಿಯ ಕೊಡುವನು ಮಾತಾಡೆ ಮೃದು ನುಡಿಯನು
ಪ್ರೀತಿಯ ಸಲಿಸಿ ಪಡೆದವರ।

ಭೂತೇಶನಣುಗನ ಕೋಪಾಗ್ನಿ ಬೀರಿ ತಾ
ರಾಪು ಮಾಡುವನು ರಚ್ಚೆಯಲಿ ||೧೧||

ಕಾಡುವನು ಕೆಲವೊತ್ತು ಮಾಡಿ ರಚ್ಚೆಯ ಮಾಡಿ
ಜೋಲಿದೋರಿದರೆ ನಯನಕ್ಕೆ ।
ಕ್ಷೀರ ಸಕ್ಕರೆ ಎರೆದು ದಾದಿಯರು ಕೂಗಲು
ಜೋಗುಳದ ಸ್ವರವ ಲಾಲಿಸುತ ||೧೨||

ಜೋಗುಳ ಪದ:
ಜೋ ಜೋ ಎನ್ನಿರೆ ಬಾಲೆವೆಣ್ಣುಗಳು ।ನಮ್ಮ
ದೇವ ಜಟ್ಟಂಗಿಯ ವರದ ರಾಮಯ್ಯಗೆ ಜೋ ಜೋ ||

ಬೆಳ್ಳಿಯ ತೊಟ್ಟಿಲಿಗೆ ಚಿನ್ನದ ಗೊಣಸು
ಬಣ್ಣ ಬಳಿದು ದುಕೂಲಾಂಬರವ ಹಾಸಿ
ಕಮ್ಮೆಣ್ಣೆ ಕಸ್ತುರಿಯನೊತ್ತಿ ನೀರೆರೆದು ಜೋ ಜೋ ||೧೩||

ಅರಳೆಲೆ ಮಾಗಾಯಿ ಬೆರಳಿಗುಂಗುರವು
ಹುಲಿಯುಗುರು ಅಪರಂಜಿ ಉಡಿದಾರ ಡಾಬು
ಕಡಗ ಕಾಲಂದುಗೆ ಕುಂದಣದ ಗೆಜ್ಜೆ
ಜಡೆಗೆಲ್ಲ ಬಿಳಿಮುತ್ತುಗಳನೆ ಧರಿಸಿ ಜೋ ಜೋ ||೧೪||

ಬಾಲನ ಲಾವಣ್ಯ ಶ್ರೀನೀಲ ಹರಿಯು
ಕುಮಾರಗೆ ಮಿಗಿಲಾದ ಶಕ್ತಿ ಸಾಹಸದಿ ।
ದೇವೇಂದ್ರಸುತ ಪಾರ್ಥ ಮೂರು ಖಂಡವನು
ಆಳುವ ವೈರಿಗೆ ತಲೆಬಾಗದಿಹ[ನು] ಜೋ ಜೋ ||೧೫||

ಸಾಂಗತ್ಯ:
ವರುಷೊಂದು ಮಾಸಾಗಿ ಮಾಸೊಂದು ದಿನವಾಗಿ
ಹರಕೃಪೆಯೊಳಗೆ ಬೆಳೆಯುತಲಿ ।
ಬಿದಿಗೆ ಚಂದ್ರನು ಬೆಳೆದೊಮ್ಮೆ ಬರುವಂತೆ
ನಡೆದಾಡುವರಮನೆ ಹೊರಟು ||೧೬||

ಕಾಮನ ಕಲೆಯುಳ್ಳ ಕೋಮಲೆ ರತ್ನಿಯು
ಬಾಲನ ನೋಡಿ ಮುದ್ದಾಡಿ।
ಉರಿದ ಮನ್ಮಥನಿಲ್ಲಿ ಮರಳಿ ಜನಿಸಿದನೆಂದು
ನೆರೆಯಬಹುದೆ ಪ್ರಾಯ ಬರಲು ||೧೭||

ಲಾವಣ್ಯ ನೋಡಿದರೆ ಕಾಮದಲು ಸ್ತ್ರೀಯರಿಗೆ
ಕಾಮಹರನ ಬಾಧೆ ಘನವು ।
ತಾಳಲಾರದೆ ತಾಪ ತರಳನ ಬಿಗಿದಪ್ಪಿ
ಮೋಹದಿ ಗಲ್ಲವ ಕಡಿದು ||೧೮||

ಆಡಿಸುವರು ಒಯ್ದು ಎಡಬಲದ ರಾಯರ
ಸ್ತ್ರೀಯರು ಪ್ರಿಯದಿ ತನುಜನ।
ರಾಯ ಕಂಪಿಲನೊಡನೆ ಪೋಗಿ ಸದರಿಗೆ ಕುಳಿತು
ನೋಡುವನು ವಾಲಗದ ಸುಳುಹ ||೧೯||

ರಾಣಿ ಹರಿಹರದೇವಿ ರಾಯನೊಡನೆ ಪೇಳಿ
ಬಾಲರಿಗೆ ವಿದ್ಯೆ ಸಾಧನವ ।
ಮಾಡಬೇಕೆಲೆ ರಾಯ ಮಕ್ಕಳು ಬರುವಂಥ
ಸಾಲೆಯೊಳ್ಗುರು ಪೂಜೆ ಮಾಡಿ ||೨೦||

ಸಾಕಿದ ಮಗ ಮುದ್ದು ಕಾಟಣ್ಣ ರಾಮಯ್ಯ
ಹಾಕಲು ಗುರುವಿದ್ಯೆ ಮಠಕೆ ।
ಓಂ ನಾಮ ಕಾಕುವ ಪಠಿಸಿ ಕಲಿತರು
ಬೇಕಾದ ಮಗ್ಗಿ ಗಣಿತಗಳ ||೨೧||

ಭೂಮಿ ಅಕ್ಷರವೆಲ್ಲ ಸಾಧಿಸಿ ಕಲಿತರು
ವಾಲಿ ಹಲಗೆಯಲಿ ಓದುವರು ।
ಆದಿಯಲಿ ಆದಂಥ ವೇದ ಪುರಾಣಗಳ
ಭೇದ ಭೇದಗಳನೆ ತಿಳಿದು ||೨೨||

ಭಾರತ ರಾಮಾಯಣ ಚೋರತನ ಕಥೆ
ಕಾರ್ಯ ಕದನಗಳು ಜೈಮಿನಿಯು ।

ಕೇಳುತ ಬಾಲರಿಗೆ ಜೀವ ಪಲ್ಲಟವಾಗೆ
ಮಾಡಬೇಕವರಂತೆ ನಾವು ||೨೩||

ಯಾವ ಕಾಲದ ಮಾತು ಭೂಮಿರಲು ನಡೆವುದು
ಕಾಯಳಿಯೆ ಕೀರ್ತಿ ಧರೆಯೊಳಗೆ ।
ಭೂಮಿ ಪಾರ್ಥರ ತೆರ ದೀಕ್ಷೆ ತೊಡೆದು ಬಾಳ ನೃಪನು
ಶ್ವಾನ ಮ[ರೆ]ದಂತೆ ಬಾಳುವೆಯ ||೨೪||

ಬರುವ ಸಾಲೆಯ ಬಿಟ್ಟು ಗರುಡಿ ಸಾಧನದೊಳಗೆ
ಮುರಿಯುತ ಕಂಬದ ದಂಡೆಗಳ
ತಿರುವರು ದಂಡನು ಕರಕೆರಡು ಮಣುವಿನ
ಧನುರ್ವೇದಗಳನು ಸಾಧಿಸಲು ||೨೫||

ಕಲಿವರು ತಮ್ಮೆರಡು ಕರಕೆ ಜೋಡಿಲವೆಂದು
ಬಿಡಲಿಯಂಬು[ಗ]ಳ ಸಾಧನವ ।
ನವಖಂಡ ಭುವನದಿ ನಡೆವ ಮಾತುಗಳನು
ಕಲಿವರು ಪಲ ಬಗೆಯ ಭಾಷೆ ||೨೬||

ಆರೆ ಪಾರಸಿ ಮಾತು ಅರವು ಕೊಂಕಣ ತೆಲುಗು
ಗೀರ್ವಾಣ ತುಳುವ ಮಲೆಯಾಳ।
ಭೂಮಿ ಬ್ರಹ್ಮಾಂಡದೊಳ್ನಡಿವ ಮಾತುಗಳನು
ಸಾಧಿಸಿ ಕಲಿಯೆ ಸ್ವರಗಳ ||೨೭||

ಎಳಗನ ಮೇಲೇರಿ ಪಳಗಿಸಿ ಇರ್ವರು
ಬಿಡುವರು ಬೀದಿಗೋಲುಗಳ।
ತಿರುಹುವ ಚಳಕತ್ವತನವ ರಾಯನು ನೋಡೆ
[ಗಿಡುಗನ] ಮೇಲೆ [ಪಳ]ಗಿಪರು ||೨೮||

ಬಾಲ ಬುದ್ಧಿಯ ಕಳೆದು ಮತಿ ಸಲಿಸಾಗಲು
ನಿತ್ಯ ಸ್ವಾರಿ ಶಿಕಾರಿ ಮಾಡುವರು।
ಕಾಲಾಳು ಕರಿತುರಗದೊಡನೆ ಬಸವನ ಗಿರಿಯಲಾಗ
ಬೇಂಟೆಯನಾಡಿ ದಿನಚರಿಯ ||೨೯||

ಇರುಳೊಂದು ದಿನದೊಳು ಗ್ರಹಿ ಮನದೊಳು ರಾಮ
ರಣರಂಗವಾದ ಭಾರತವ ।
ಅವರಾಹವದೊಳು ಕಡಿದಾಡಿ ಮಡಿದರು
ಭುವನವಿರಲು ಶಾಶ್ವತವು ॥೩೦॥

ಕಾಯಗಳು ಅಸ್ಥಿರವು ಯಾರಿಗೆ ನೆಲೆಯುಂಟು
ಮಾಡಿದ ಕೀರ್ತಿ ಅಪಕೀರ್ತಿ।
ರೂಢಿಯೊಳ್ ರಣಭೂಮಿ ಚಂದ್ರರುಳ್ಳನಕ
ವೆಂದಾಡುವ ರಾಮ ಬಲದೊಳಗೆ ॥೩೧॥

ಹಿರಿಯಾತ ನೀ ಕೇಳು ದೊರೆಗಳಾತ್ಮದಿ ಬಂದು
ಗುರುವು ಕೊಡುವನು ಬಾಳ್ವ ಮನುಜ ।
ಕುರಿಯ ಜನ್ಮಕೆ ಕಷ್ಟ..... ತಾಳೆ
ಯಮನಿಗೆ ಗುರು ಕೀರ್ತಿ ಇಲ್ಲ ॥೩೨॥

ಇಡಬೇಕು ಈಶ್ವರ ಮುನಿಯಲು ಬಿಡದಂಥ
ಧರಣಿಪರ ಗಂಡೆಂಬ ಬಿರುದ ।
ನಡೆಯಬೇಕದರಾಜ್ಞೆಯೊಳಗೀಗ ಅಣ್ಣಾಜಿ
ನಡೆಯಲು ಚಂದ್ರಸಾಲಿಗೆ ॥೩೩॥

ಅಣ್ಣಾಜಿ ಲಾಲಿಸು ಅಪರಂಜಿ ಚಿನ್ನವೆ
ಎಮ್ಮಯ್ಯಗೆ ಯಾರು ಮಲೆತವರು।
ಇಮ್ಮೆಯ ದೊರೆಗಳ ಎದೆ ಗರ್ವ ಮುರಿಯದ ಮೇಲೆ
ಎಮ್ಮ ಪಡೆದವರಿಗೆ ಘನವೇನು ॥೩೪॥

ಇಡಬೇಕು ಧರೆಯೊಳು ಇದಿರಾಗೊ ರಾಯರ ಗಂಡ
ಹುದುಗಿ ಬರಲವಗೆ ತಾ ಪಿಂಡ।
ಪೊಡವಿಗುನ್ನತವಾದ ಸುರಿತಾಳ ನೇಮಿಯ ಗಂಡ
ಧರಿಸಿದ ರಾಮ ಪೆಂಡೆಯವ ॥೩೫॥

ಮೂರು ರಾಯರ ಗಂಡ ಮುಂಗುಲಿಯ ರಾಯನ ಮಿಂಡ
[ಒರಗಿ] ರಂಡೆ ಮನೆಯೊಳಗೆ

ಬೇರೊಬ್ಬರ ದಣಿ ಮಾಡಿ ರಣಭೂಮಿಗೆ ಕಳುಹುವ
ಹೇಡಿರಾಯರ ಗಂಡ ರಾಮ ||೩೬||

ಮಲೆ[ಯ] ರಾಯರ ಗಂಡ ತುಳುವ ರಾಯರ ಮಿಂಡ
ತಳುವೊ ರಾಯರಿಗೆ ಎದೆ ಶೂಲ ।
ಬಲವಂತ ಓರ್ಗಲ್ಲ ಗಣಪತಿರಾಯನ ಮಿಂಡ
ಧರಿಸಿದ ರಾಮ ಗಂಟೆಯನು ||೩೭||

ಮೋಸಗಾರರ ಗಂಡ ಮರೆಬಿದ್ದವರ ಕೊಡುವಂಥ
ಹೇಸಿದೊರೆಗಳ ಗಂಡ ರಾಮ ।
ರಾತ್ರಿ ಜಗಳಕೆ ಹೊರಟು ರಣಗೆಲ್ಲುವರ ಗಂಡ
ರೇಕು ತುರಾಯ ಧರಿಸಿದನು ||೩೮||

ಮಂದಿ ಜಗಳಕೆ ಬಿಟ್ಟು ಹಿಂದೆ ನಿಲ್ವರ ಗಂಡ
ಸಂಬಳ ಕೊಡದೆ ಬಂಟರಿಗೆ ।
ಕುಂಬಳದ ಕಾಯಂತೆ ಕೂಡಿ ಒಡಲನೆ ಬೆಳೆಸಿ
ಖಂ[ಡೆ] ಮುರಿದೋಡುವರ ಮಿಂಡ ||೩೯||

ಹರಶಂಭು ಜಟ್ಟಂಗಿ ರಾಮಗೆತ್ತಿದ ಕರವ
ನರರಿಗೆ ಎತ್ತುವನಲ್ಲ।
ಹಿಡಿಸಿದ ರಣಗಾಳೆ ಹೊಗಳುವ ಭಟ್ಟರು
ಉಗ್ಘಡಿಸೆ ಎರಡು ಭಾಗದಲಿ ||೪೦||

ಇಟ್ಟರಾಭರಣವ ಇರ್ವರು ಸಮನಾಗಿ
ಮುತ್ತು ಮಾಣಿಕ್ಯ ವಜ್ರಗಳ।
ಹೆತ್ತ ತಂದೆಯ ಬಳಿಗೆ ಅಪ್ಪಣೆ ಕೇಳಿ ನಿಮ್ಮಯ
ಎತ್ತಲು ದಂಡ್ಯೆರಿ ಮೇಲೆ ||೪೧||

ಕಾಳಗವೆಂಬೋದು ಕರ್ಮದ ಫಲ ತಮ್ಮ
ಮಾಡುವರು ಧರ್ಮಜ್ಞಾನಿಗಳು ।
ಕೇಳಯ್ಯ ಅಣ್ಣಾಜಿ ಇದಕೆ ದೃಷ್ಟವ ಕೊಡುವೆ
ಮೂಲಕರ್ತನು ಶಿವನೊಳಗೆ ||೪೨||

ಯುಗ ಮೂರರೊಳಗಾಗಿ ನಡೆಯವೆ ಕಾರ್ಯಗಳು
ಮೊದಲಾಗಿ ಹರನು ಮಾಡಿರುವ ।
ತ್ರಿಪುರದ ದೈತ್ಯರ ಹತವ ಮಾಡಿದ ಹರಗೆ
ತ್ರಿಪುರಾಂತಕ ನಾಮ ಬಂದುದೆ ||೪೩||

ಜಗದ ಕರ್ತನ ಮಾತು ಹಾಗಿರಲಿ ಈಚೆಗೆ
ಸುರರೊಳಗೆ ತೋರ್ವೆ ಕಾರ್ಯಗಳ।
ಇಡನೆ ಒರ್ವನು ದಾಳಿ ಶಿವ ಪರಕೆ ಚಾಮರನು
ಅದು ಬೇಡ ಇನ್ನು ತೋರುವೆನು ||೪೪||

ಮುಂದೊಮ್ಮೆ ತಿಳಿಯಣ್ಣ ಮುಕುಂದನು ದಂಡೆದ್ದು
ಕಂದನ ಮಗನ ಮಾವನ್ನ ।
ಕೊಂದುದಿಲ್ಲವೆ ಅಣ್ಣ ತಲೆಯರಿದು ಬಾಣನ
ಕೊಂದು ಪೋಗನೆ ಮೊಮ್ಮಗನ ||೪೫||

ತ್ರೇತಾಯುಗದೊಳು ಸೀತೆ ರಾವಣನೊಯ್ಯೆ
ಆತ ಕುವರಾಮ ಬಲಗೂಡಿ।
ಕೋಟಿರಾಕ್ಷಸರ ಮುನ್ನ ಕೊಲ್ಲದೆ ಸೆರೆ ಪೋದ
ಸೀತೆ ಬಂದಾಳೆ ಕೇಳಣ್ಣ ||೪೬||

ಗರ್ವದ ಮದದೊಳು ಇಡನೆ ಅರಣಿ ಹೋಮ
ಬೆಮರೊಳು ಶರಭೇಂದ್ರ ಜನಿಸಿ।
ನವಕೋಟಿ ದಾನವರ ಸದೆದು ದಕ್ಷನ ಕೊಂದ
ಅದು ಕಾರ್ಯವೆಲ್ಲ ಪೇಳುವೆನು ||೪೭||

ಭೀಮ ಪಾರ್ಥನು ಹಿಂದೆ ಮಾಡರೆ ಕಾರ್ಯಗಳ
ರಾಯ ಧೃತರಾಷ್ಟ್ರ ಕೌರವರ।
ಕ್ಷೋಹಿಣಿ ಹದಿನೆಂಟು ಬಲವ ಧರಣಿಗೆ ಕೆಡಹಿ
ನ್ಯಾಯ ತೀರಿತೆ ದಾಯಾದ ವರ್ಮ ||೪೮||

ಆದಿಯಲಿ ನಡೆದವರ ಹಾದಿಯಲಿ ನಡೆವೆನೀ
ಡಾಡುವೆ ಎನ್ನ ತಲೆ[ಯನ್ನು] ।

ತಾನೊಂದು ಹಾದಿಯ ಹಿಡಿದು ಹೋದರೆ ಹರನು
ಕಾಲಗೆ ಗುರಿಮಾಡದಿಹನೆ ||೪೯||

ಕಾಳಗದ ಕಥೆಯನ್ನು ಕೇಳಲಾಗದು ಎಂಬ
ಜಾಣನು ಕೇಳಿ ಸಾಕ್ಷಿಯನು ।
ಭಾರತ ಜೈಮಿನಿಯ ಓದಿ ಕೇಳಿದ ಬಳಿಕ
ಭೇದ ಮಾಡುವರೆ ಬಲ್ಲವರು ||೫೦||

ಜಗಳವಿಲ್ಲದ ಕಾರ್ಯ ಜಾಣ[ನಲ್ಲ]ದ ಮಂತ್ರಿ
ಗುಣವಿಲ್ಲದಂಥ ಮನೆವಾರ್ತೆ।
ಸುಳಿಯಿದ್ದು ಫಲವೇನು ಸುಗುಣವಿಲ್ಲದ ಮೇಲೆ
ಜೋಗಿತಿಯಾದ ತೆರನಂತೆ ||೫೧||

ನರಕೃತಿಯನು ಕೇಳಿ ಫಲವಿಲ್ಲವೆನಬೇಡ
ಹರನ ಮೂಲದಲಿ ಜನಿಸಿದರ।
ನರ ಕಾರ್ಯವಿಲ್ಲದೆ ಮರದೊಳು ಜನಿಸುವರಾರು
ಸುರಕೋಟಿ ಶರಣು ಸಂತತಿಯ ||೫೨||

ನರರಿಗೋಸ್ಕರ ಹರನು ಧರೆಯ ನಿರ್ಮಾಣ ಮಾಡೆ
ಧರೆಯಿಂದ ಸಕಲ ಜೀವವನು ।
ಇದಿರೊಳಗಾದ ತಾ ನಡೆವ ಸತ್ಯಗಳಿಂದ
ಶರಣನಾಗುವನು ಕೇಳಣ್ಣ ||೫೩||

ಸತ್ತವರ ಕಥೆಗಳನು ಕೇಳಲಾಗದು ಎಂಬ
ಶ್ರೇಷ್ಠವುಳ್ಳವರು ಉಳಿವರೇ।
ನಿತ್ಯಗಳ ಪಡೆದಿಲ್ಲಿ ಗರಿಸಿರಿಯು ಮುಂತಾಗಿ
ಇಪ್ಪವರಾರು ಇಳೆಯೊಳಗೆ ||೫೪||

ಆನೆ ತನ್ನೊಳಗೆಚ್ಚುವಿರುವೆಗೆ ದೊಡ್ಡದಲ್ಲ
ಓದಿಗೆ ಹಿರಿದು ಕಿರಿದುಗಳೇ।
ನಾನಾ ವರ್ಣಂಗಳ ಕುಲಜಾತಿಯವರಿಗೆ
ಭೇದ ಮಾಡುವರೆ ಬಲ್ಲವರು ||೫೫||

ಸರ್ವ ಜೀವಿಗಳೊಳು ಅಧಿಕವು ನರಜನ್ಮ
ಅಂತು ನಡೆಯಲು ಧರ್ಮಕರ್ಮ।
ಮರುಳಾಗಿ ದೇವೇಂದ್ರ ಪರಸತಿಗೆ ಮನವಿಡಲು
ಭಗವಾ[ಯಿತ]ವನ ಕಾ[ಯವು] ||೫೬||

ಮುನ್ನವರು ಮೆಚ್ಚಲು ಮಾರಾರಿಗಳವಲ್ಲ
ಆಡಿಪ ತನು ಬೇರೆ ತನ್ನ।
ಮಾಡಿ ಸೂತ್ರದ ಬೊಂಬೆ ಆಡಿ ಕುಣಿಸುವ ಬಲ್ಲ
ರಾಮನ ಧರ್ಮ [ಕರ್ಮ]ಗಳ ||೫೭||

ಲಾಲಿಸಿ ಮನಮುಟ್ಟಿ ಜ್ಞಾನ ಬಂದರೆ ನಿಮ[ಗನು]
ಮಾನ ಕಂಡರೆ ಬಿಜಮಾಡಿ ।
ಕೇಳಯ್ಯ ಜಟ್ಟಂಗಿಕುಮಾರ ಜನ[ನದ] ಮೂಲ
ಸಾಗಿಸುವೆ ಮುಂದಲ ಕೃತಿಯ ||೫೮||

ಪ್ರಾಣಹತ್ಯವ ಮಾಡುವುದು ಪಾಪ[ವೆನೆ] ತಮ್ಮ
ಏಳು ಸಾಗರವ ತಂದಿಟ್ಟ।
ಆಡುವನ ನಾಲಗೆಯನಿಕ್ಕಳದಿ ಪಿಡಿದಂತೆ
ನಾಡಿ ನಿಲಿಸಿದೆ ವಾದಿಗಳ ||೫೯||

ಕರಿ ತುರಗ ಕಾಲಾಳು ಮೆರೆವುತ್ತೆ ಒಂದಾಗಿ
ನೆರೆಯಲು ರಾಜ ಬೀದಿಯಲಿ।
ದೊರೆ ತನುಜರಿರ್ವರು ಬರಲಾಗಿ ಶೃಂಗರಿಸಿ
ಮೆರೆವ ಮಾರ್ಬಲ ಚಾವಡಿಗೆ ||೬೦||

ಒದರುವ ರಣಗಾಳೆ ಎದೆ ಬೆಚ್ಚಿ ಒಡೆವಂತೆ
ಹೊಡೆವ ಭೇರಿಗಳು ನಿಸ್ಸಾಳ।
ಪೊಡವಿ ರಾಯರಿಗೆಲ್ಲ ಗಂಡುಗೊಡಲಿ ರಾಮ
ನೆಂದು ಪೊಗಳಿ ಚರರುಗ್ಗಡಿಸೆ ||೬೧||

ಶಶಿ ರವಿಯು ಒಂದಾಗಿ ಜೊತೆಗೂಡಿ ಬರುವಂತೆ
ಹಿತರೊಳು ಜಾನಕಿ ಸುತರು।

ಪಟ್ಟಣ ದಿಗಿಲೆನಿಸಿ ಬರುವ ತನುಜರ ನೋಡಿ
ಬೆಚ್ಚಲು ಕಂಪಿಲನೆದೆಯು ||೬೨||

ಮಕ್ಕಳು ಬರುವಂಥ ದಸ್ತು ಠೀವಿಗೆ ನೃಪನು
ಹೆಚ್ಚಲು ಮನದಿ ಮುಗುಳ್ನಗೆಯ।
ಹತ್ತೆಂಟು ಮಕ್ಕಳ ಹಡೆದಿನ್ನು ಫಲವೇನು
ಪುತ್ರರೆ ಸಾಕು ಇವರೆರಡು ||೬೩||

ಚಿಪ್ಪಿಲಿ ಅಡಗಿರ್ದ ಸುಪ್ಪಾಣಿ ಮುತ್ತುಗಳೊ
ನೊಪ್ಪಿಲಿ [ಅ]ಡಗಿರ್ದ ಜಾಣೊ।
ಪೃಥ್ವಿಯೊಳಡಗಿರ್ದ ಅಪರಂಜಿ ಕುಂದಣವೊ
ಎತ್ತಿ ಮುಂಡಾಡಿ ಇರ್ವರನು ||೬೪||

ಎಡಬಲದಿ ಇರ್ವರನು ತೊಡೆಯೊಳಗೆ ಕುಳ್ಳಿರಿಸಿ
ಪಿಡಿಯಲು ತನುಜರ ಗಲ್ಲ।
ನಡುಕಟ್ಟಿದ ಮಂದಿ ಹೊಡೆಯೆ ಭೇರಿಯ ನೀವು
ಬಂದ ಫಲವೇನೆಂದು ಕೇಳಿದನು ||೬೫||

ರಾಜರೊಳು ರಾಜನೆ ರಾಜ ಮಾರ್ತಂಡನೆ
ತೇಜತ್ವದೊಳು ಕರ್ಣಭೂಪ।
ದೇವೇಂದ್ರ ಸಮಗಾತ್ರ ದೇಶ ಮಧ್ಯದಿ ನಿಮ್ಮ
ಹಿರಿದ ರಾಯರ ಪೇಳೆಮಗೆ ||೬೬||

ಅಯ್ಯನೆ ಮೃಡತ್ವಜೀಯನೆ ಧರೆಯೊಳು
ಕಯ್ಯ ಮುಗಿಯದೆ ಕಾಣಿಕೆಯ ।
ಈಯದ ದೊರೆಗಳನೆಮ್ಮಯ್ಯನೆ ಪೇ[ಳಯ್ಯ]
ಸೈಯೆನಲು ವಂಶಾಬ್ದಿ ಛಲವು ||೬೭||

ಕಂದನಾಡುವ ನುಡಿಯ ತುಂಬ ಕರ್ಣದಿ ಕೇಳಿ
ಮಂಡೆಯನೊಲೆವುತ ಮನದಿ ।
ಕಂಡಿಲ್ಲ ಹುಳಿ ಉಪ್ಪುಯೆಂಬ ಕಾರದ ರುಚಿಯ
ತಂದೆ ವೈರಿಯ [ಹೇ]ಳಾ [ವಿ]ಗ್ರಹಕೆ ||೬೮||

ಹರನಿತ್ತ ಅರಳಿನ ಫಲದ ತ್ರಾಣವೊ ಇದು
ವೈರತ್ವಗಳ ಕೇಳ್ವ ಛಲವು ।
ನರಪಿಂಡವಾಗಲು ಬರಲರಿದು ಈ ಜ್ಞಾನ
ವರಪಿಂಡ ಅಹುದೆಂದು ಮನದಿ ॥೯॥

ಕುಂಜರ ಗರ್ಭದಿ ಭೇರುಂಡ ಇಳಿದಂತೆ
ಚಂದ್ರಶೇಖರನ ಬೆವರೊಳಗೆ।
ಅಂದು ಶರಭನು ಜನಿಸಿ ಹೋಮವನು ಗೆಲಿದೆಂಬ
ಅಂದವಾಯಿತು ಇಂದು ನಡೆವ ॥೨೦॥

ಗುತ್ತಿಯನಾಳುವ ಕಸ್ತೂರಿ ಚಾಮಯ್ಯ
ಉಪಹತನು ಎನ್ನ ಕಡೆಗೆ।
ಮತ್ತೊಂದು ಕೇಳ್ಮಗನೆ ಮುಮ್ಮುಡಿರಾಯಗವ
ತೆತ್ತು ಬರುತಿರ್ದ ಹಣವ ॥೨೧॥

ಹಳೆಯಬೀಡನೆ ಆಳ್ವ ರಣಧೀರ ಬಲ್ಲಾಳ
ಕೆಲವು ರಾಜ್ಯವ ಕಟ್ಟಿಕೊಂಡು।
ಉಳಿಯಲೀಸನು ನಮ್ಮ ಬುಡಕವ ಕೊಡಲಿಯಾದ
ಮೆಳೆಯ ಗೊಲ್ಲನು ಕಡಿದಂತೆ ॥೨೨॥

ಓರುಗಲ್ಲವನೀಗ ಕೋರು ಹಾಕಿದ ಬಲವ
ಆರು ತಿಂಗಳು ಮುತ್ತಿ ಊರ।
ಗೇರೆ ಬೇಲಿಯ ಮುಳ್ಳ ಕೀಳಲಾರದೆ ಬಂದೆ
ನೀಗ ಕೇಳೋ [ಬಾಗಿ] ಕದ್ದು ॥೨೩॥

ಪುತ್ರ ಕೇಳೈ ನಿಮ್ಮ ಹೆತ್ತನ ಕಾಲಕವರು
ಕೊಟ್ಟು ಕಪ್ಪಗಳ ಕಾದಿಹರು ।
ಇತ್ತೆನ್ನ ಆಳಿಕೆ ಆಳ[ರೊ]ಬ್ಬ ಮೊದಲಾಗಿ
ಸೊಪ್ಪು ಹಾಕರು ಎನ್ನ ಕಡೆಗೆ ॥೨೪॥

ಎಡಬಲದೊಳಗಿರುವ ಬಡಪಾಳೆಗಾರರು ರೊಕ್ಕ
ಕೊಡದಂತೆ ಸುರಿತಾಳ ಎನಗೇ ।

ಅದು ಹೋಗಿ ಕಡೆಗೆನ್ನ ಗ್ರಾಮವ ಬಿಡುಯೆಂದು
ಬರೆವ ಕಾಗದವು ಕಡೆಯಿಲ್ಲ ||೭೫||

ಕಪ್ಪವನು ಕೊಡುಯೆಂದು ನಿತ್ಯ ಬಾಗಿಲ ತಟ್ಟಿ
ಮುತ್ತಿಕೊಂಬರು ಅರಮನೆಯ ।
ದಿಟ್ಟಗಾರನು ಮಂತ್ರಿ ತಕ್ಕ ಮನ್ನಣೆ ಮಾ[ಡೆ]
ಹೊತ್ತ ನೂಕಿದೆನಿಂದಿನೊರೆಗೆ ||೭೬||

ಕಂದ ಕೇಳಿರೊ ಎನ್ನ ಕಾಲಕ್ಕೆ ಇಷ್ಟು
ಭಂಗವಲ್ಲದೆ ಸುಖವ ಕಾಣೆ।
ಮುಂದೆ ನಿಮ್ಮಯ ಪುಣ್ಯ ಫಲದಿಂದ ಎನ್ನಯ
ಪಾಡು ಹಿಂಗಲು ಪುಣ್ಯಜೀವಿ ||೭೭||

ಎಲ್ಲ ರಾಯರ ಮಾತು ಹಾಗಿರಲಿ ನೋಡುವ ಕಡೆಗೆ
ಬಲ್ಲಾಳನಟ್ಟುಳಿ ಘನವು ।
ಹುಲ್ಲು ಜಾಲಿಯ ಬೆಳೆಸಿ ಹಳ್ಳಿ ಗಡಿ ಮನೆಯನು
ಕಲ್ಲು ಮುಳ್ಳೆರಡು ಬಿಟ್ಟಿಹನು ||೭೮||

ರಾಯನಾಡಿದ ಮಾತ ಕೇಳಿ ಚೆನ್ನಿಗ ರಾಮ
ಗಾಯೊಡೆದ ವ್ಯಾಘ್ರನ ತೆರದಿ ।
ರೋಮಾದಿ ರೋಮಗಳು ಏದಿನ ಮುಳ್ಳಾಗೆ
ಕಾಲಭೈರವನ ರೂಪಾದ ||೭೯||

ತಂದೆಯಾಡಲು ತರಳ ಕಾಳಿಂಗ ರೂಪಾಗಿ
ಮುಂಗೈಯ ಕಡಿಯೆ ಕೋಪದಲಿ ।
ಮುಂಗಾರ ಸಿಡಿಲಂತೆ ಹೃದಯದೊಳ್ ಕುದಿಯುತ್ತೆ
ರಾಜೇಂದ್ರ ಬೆಸನ ಕೊಡೆಮಗೆ ||೮೦||

ಭೂಪ ಹೇಳಲು ಬೇಡ ಸಾಕಯ್ಯ ಅಪಕೀರ್ತಿ
ನೀ ಪಾಲಿಸೆಮಗೆ ವೀಳ್ಯವನು ।
ಈಶ್ವರನು ಹರಿಬ್ರಹ್ಮ ಹೊರತಾಗಿ ಮಿಕ್ಕವರ
ಲೋಕಕಾಣಿಸುವೆ ಯಮನೂರ ||೮೧||

ಹೇಳಿಕೊಂಬುವರಲ್ಲ ಪಾಲಿಸೆಮಗೆ ವೀಳ್ಯ
ಬಹಳ ದಣಿಸಿರುವ ಬಲ್ಲಾಳನ ।
[ಖೂಳನ ಎದೆಗರ್ವ] ಮುರಿದವಗೆ ಕೆರೆ[ಯೇಳ]
ನೀರ ಕುಡಿಸುವೆ ಸಾಕು ಎನಿಸಿ ||೮೨||

ಊರನೆ ಬಿಡಲೆಂದ ಸುರಿತಾಳನ ರಾಜ್ಯ
ಬೂದಿ ಮಾಡುವೆನು ಭೂಪಾಲ ।
ಊರ ಬಾಗಿಲ ಕದವ ಹಾಕಿಸುವೆ ನೀವಿರುವ
ಮೂಲೆಗೆ ಮಂಡೆ ಇಡದಂತೆ ||೮೩||

ಬಾಲನಾಡುವ ಮಾತ ಕೇಳುತ ನೃಪವರನು
ತ್ರಾಣ ಸಾಲದು ತರಳ ರಣದಿ ।
ಕಾಣದೆ ಮಲಗಿರುವ ಹುಲಿಯ ಎಬ್ಬಿಸಿದಂತೆ
ಮಾಡಿಕೊಳಲಿ ಬೇಡ ಮಗನೆ ||೮೪||

ಛಲದಂಕ ರಣವಿಜಯ ವೈರಿರಾಯರ ಗಂಡ
ಸೈರಿಸಿ ಕಾರ್ಯ ಕಾಣ್ಬಹುದು ।
ಬರುತಿದೆ ಜಗಳತ್ವ ಧರಿಸಿರುವ ಬಿರುದಿನಲಿ
ಹುಡಿಕೆ ನಾರಿ ಪೋಗಲುಯೊಕ್ಕೆ ||೮೫||

ನಾವಾಗಿ ಮೊದಲಿನ್ನು ಬೇಗೆ ಹಾಕಿದ ಮೇಲೆ
ಆರಿಸಿಕೊಳ್ಳುವುದು ಕಷ್ಟ।
ಹೇ[ರು] ಕಡಲೆಯೊಳಗೆ ಹಿಡಿ ಕಡಲೆ ವಾದಿಸಿದಂತೆ
ಕಾದುವ ತ್ರಾಣ ನಮಗುಂಟೆ ||೮೬||

ಅಪ್ಪಾಜಿ ನಿಮ್ಮೊಳು ಬದಲುತ್ತರ ಯಾಕೆ
ಬೀಳಕ್ಷರ ಮಾತು ಬೇಡ।
ಕಿಚ್ಚಾಗಿ ಬರುತಿದೆ ಕಾಯಾತ್ಮ ರಾಜೇಂದ್ರ
ಪೆತ್ತಾತ ಎನಗೆ ಸೈರಿಸದೆ ||೮೭||

ರಾಯ ಪಾಲಿಸಬಹುದು ಕೇಳೆಮ್ಮ ಕಡೆ ಉತ್ತರ
ನೀ ಬರೆದೆ ಪಣೆಯೊಳು ಲಿಪಿಯ? ।

ರಾಯ ಜಟ್ಟಂಗನೊಲವು ತಪ್ಪಿದ ಮೇಲೆ
ಕಾಯಲಾಪರೆ ಹಡೆದವರು ||೮೮||

ಮರಣ ತಪ್ಪದು ರಾಯ ಧರಣಿ ಜೀವನಕೆಲ್ಲ
ಭರಣಿಯೆ ಬಿಟ್ಟೊಡಲು ಆತ್ಮ।
ಇರುಳಾಂಕ ದೈತ್ಯನು ಮರಣವಿಲ್ಲವ ಪಡೆದು
ಉಗುರಿಂದಲಳಿದನಾ ಕ್ಷಣದಿ ||೮೯||

ಕೊಡು ರಾಯ ಅಭಯವ ಬಡವಾಗಿ ನುಡಿಯದೆ
ಹರ ಬಂದು ಪೇಳಲು ನಿಲ್ಲೊಲ್ಲೆ।
ತಡೆಯಲೇತಕೆ ಮಾತ ಕುಡಿಯಲೊಲ್ಲದೆ ನೀರ
ತಡೆದರೆ ನಿಮಗೆ ಹರನಾಣೆ ||೯೦||

ಬಾಲನ ಮಾತಿಗೆ ಹೇಳಲು ತಾವಿಲ್ಲದೆ
ರಾಯನು ಒಪ್ಪಿ ಮನದೊಳಗೆ।
ಕಾಲಾಳು ತುರಗವನು ಬೇಡಿದವರನಿತ್ತು
ರಾಮ ಲಕ್ಷ್ಮಣರಾಗಿ ಬಾಳಿ ||೯೧||

ಹರಸಿದ ನೃಪವರನ ಚರಣಕೊಂದನೆ ಮಾಡಿ
ನಡೆದರು ತಾಯರಮನೆಗೆ ।
ತರಳರ ಮುಖವನು ಕಾಣುತ ಹರಿಯಮ್ಮ
ಹವಳದಾರತಿ ಎತ್ತಿ ಬೆಳಗಿ ||೯೨||

ಬೆಳಗಿದ ಜನನಿಯ ಚರಣಕೊಂದಿಸಿ ಅವರು
ಕರಗಳ ಮುಗಿದು ಭಕ್ತಿಯಲಿ ।
ತರಳರಿರ್ವರ ಎತ್ತಿ ಕರವಿಡಿದು ಎಡಬಲದ
ತೊಡೆಯೊಳಗವರ ಕುಳ್ಳಿರಿಸಿ ||೯೩||

ಇಂದ್ರನ ಸುತನೆಂಬ ವಿಜಯಪಾರ್ಥನ ತಮ್ಮ
ಹಿಡಿಂಬನ ಗೆಲಿದ ನಳಭೀಮ।
ಹಿಂಗದ ಕೌರವನ ಕಾರ್ಯಕೆ ನಡೆದಂತೆ
ಅಂದು ತೋರ್ಪುದು ಬಂದ ಗಮನ ||೯೪||

ಚಂದ್ರನ ಪೌರ್ಣಮಿ ದಿನದೊಳು ಮೂಡುವಂಥ
ಅಂದವಾಗಿದೆ ಮುಖಕಾಂತಿ।
ಶೃಂಗಾರವಾಗಿದೆ ಮಂದಿ ತುರಗ ಕಾರ್ಯ
ವೆಂಬ ಸೂಚನೆಯು ತೋರುವುದು ॥೯೫॥

ಕಮಲಲೋಚನೆ ತಾಯಿ ಕಳವೇಕೆ ನಿಮ್ಮೊಡನೆ ಸಂ
ಗ್ರಾಮಕೆ ನಡೆವೆ ವೈರಿಗಳ।
ತಂದೆಗೆ ಮಾರ್ಮಲೆತ ಬಲ್ಲಾಳನೂರಿಗೆ ಮುತ್ತಿ
ತಿಂದು ತೇಗುವೆನವನ ಬುಡವ ॥೯೬॥

ಇದಿರಾದ ರಾಯರ ಎ[ದೆ]ಗರ್ವ ಮುರಿದು
ಹೊಡೆಯಬೇಕಮ್ಮ ಗುತ್ತಿಯನು ।
ಅದುಗಿ ಬಂದವಗೆನ್ನ ಶರೀರ ಬೇಡಲು ಇತ್ತು
ಕೊಡು ತಾಯಿ ಹರಸಿ ಅಪ್ಪಣೆಯ ॥೯೭॥

ಬಾಲನಾಡುವ ಮಾತ ಕೇಳುತ್ತ ಹರಿಯಮ್ಮ
ಜೀವದೊಳತಿ ದುಃಖಗೊಳಲು ।
ಯಾರು ಹೇಳಿದರಪ್ಪ ಪ್ರಾಣಕೊಲ್ಲುವ ಬುದ್ಧಿ
ತೀರಿತೆ ಮಿತಿಗಾಲ ನಿಮಗೆ ॥೯೮॥

ಬಲ್ಲಾಳನೆಂಬವನು ಬಿಡವನೆ ಎಲೆ ಮಗನೆ
ಪನ್ನಂಗಧರನೊಲುಮೆ ಭಕ್ತ।
ಹೊನ್ನಿನ ಮಳೆಗರೆದ ಮುಕ್ಕಣ್ಣ ತಾ ಮೆ[ಚ್ಚಿ]
ಬಲ್ಲಿದ ಧನ ತುರಗ ಬಲದಿ ॥೯೯॥

ಹುಚ್ಚೇನೋ ಎಲೆ ರಾಮ ಮುತ್ತಲು ಆ ಪುರವ
ಹೆಚ್ಚೆಂದು ತಿಳಿದೆಲ್ಲ ಪುರಕೆ ।
ಮತ್ತೊಬ್ಬೇಗಿ ಈ ಸುದ್ದಿ ಮುಟ್ಟಲವರ ಕಿವಿಗೆ
ಎತ್ತರೆ ನಮ್ಮ ಸ್ಥಿತಿಗತಿ[ಯ] ॥೧೦೦॥

ಗುತ್ತಿ ಎಂಬುದು ಕೇಳು ಪೃಥ್ವಿಗೆ ಅಸದಳವು
ಮುತ್ತಿ ಸಿಗದೆ ಮುಮ್ಮುಡಿಯು।

ಕಪ್ಪ ತಂದರುಯೆಂದು ಹೇಳಿ ಕೇಳ್ಬುದ ಬಲ್ಲೆ
ಇತ್ತ ತಂದವರ ನಾನರಿಯೆ ||೧೦೧||

ಆರು ತಿಂಗಳು ಹೋಗಿ ರಾಯ ಮುತ್ತನೆ ನಿಮ್ಮ
ಓರುಗಲ್ಲೆಂಬ ಪಟ್ಟಣವ |
ಮೂರು ತಿಂಗಳ ಮೇಲೆ ರಾಯ ರುದ್ರಗೆ ಸುದ್ದಿ
ನೀರ ಬಾಲೆಯರು ಪೇಳ್ದಂತೆ ||೧೦೨||

ಓರಗಲ್ಲನೆ ಮುತ್ತಿ ನೋಡಬಹುದು ಡಿಳ್ಳಿಯರ
ಹವಣೇನೊ ಬಲ್ಲಾಳರಾಯ|
ಕಾಲನ ಪುರ ಹೊಕ್ಕು ಹ್ಯಾಗಾದರು ಬರಬಹುದು
ನಾಮ ಎತ್ತಲು ಬೇಡ ಬಲ್ಲಾಳನ ||೧೦೩||

ಪುತ್ರ ರಾಮನೆ ಕೇಳೊ ಪಟ್ಟಣದ ವಿಸ್ತಾರ
ಲಕ್ಷ ಫಿರಂಗಿಯ ದ್ವಾರ |
ಕತ್ತಿ ಉಕ್ಕಡ ಬಿಚ್ಚಿ ಮೂವತ್ತು ಸಾವಿರ ಮಂದಿ
ಸುತ್ತಗಾವಲು ಹೊರಪಾರಿ ||೧೦೪||

ಕಾಸಿ ಕೆಲಸಲದ ಕೋಟೆ ಸೀಸ ಎರಕದ ಗಚ್ಚು
ಸೂಸುತಿಹವು ತೆನೆ ಮೇಲೆ |
ಈಶ್ವರಗಳವಲ್ಲ ನರರ ಮಾತುಗಳೇನು
ಸಾಕು ಮಾಡಿದಳೆ ವಿಧಿ ನಿಮಗೆ ||೧೦೫||

ಬಲವಂತನೊಳು ಪೋಗಿ ಮುರಿದು ಬಂದರೆ ರಾಮ
ಹಿರಿಯರೆ ಬೇರ ನಿಮ್ಮಯ್ಯನ |
ಇರುವ ರಾಜ್ಯವೆ ಸಾಕು ಪರ[ರಾಜ್ಯ] ನಮಗೇಕೊ
ನರಿಯು ಮುತ್ತಲು ಕರಿಗೆ ಭಯವೆ ||೧೦೬||

ಜನನಿಯಾಡುವ ಮಾತ ಕೊನೆಗೆ ಲಾಲಿಸೆ ರಾಮ
ಕನಲಿತು ಕೋಪಾಗ್ನಿ ಮನದಿ |
ನರಿ ತಾನಹುದಮ್ಮ ಹಡೆದಾಕೆ ಎನುತಲಿ
ತಡೆಯಬೇಕಾದುದು ಕೋಪ ||೧೦೭||

ಹರಿಣಲೋಚನೆ ಕೇಳು ಕಡೆಯ ಮಾತಿನ ಬಿನ್ನ
ಹಡೆದಾಕೆ ಹಣೆಯೊಳು ಬರೆದ್ಯಾ।
ಸುಡು ತಾಯಿ ನಿಮ್ಮಯ ಮಾತ ಕರ್ಣಕೆ ಬೀಳಲು
ದೊರೆಯಾಡಲಿಲ್ಲ ಈ ಬಗೆಯ ॥೧೦೮॥

ಬಲ್ಲಾಳ ಕಲಿ ನೀವು ಹೇಳುವುದು ಸರಿ ತಾಯಿ
ಕೇಳಲಿಲ್ಲವೆ ಕುಶ ಲವರ ಕಥೆಯ ।
ಆಳು[ವ] ಒಡೆಯನು ಮೇಲಿರಲು ಬೆನ್ನೊಳು
ಮೂಳ ಬಲ್ಲಾಳನ ಘನವೇನು ॥೧೦೯॥

ಕಾಲಭೈರವ[ನೆಂದು] ಘನವಾಗಿ ಪೇಳು[ವೆ] ತಾಯಿ
ಬೇರು ಕೀಳದೆ ತಾನು ಬರ[ಲು]
ರಾಮ ಜಟ್ಟಂಗಿಯ ವರಪುತ್ರರೆಂದೆಂಬ
ತ[ಮ]ಗೆ ಶ್ವಾನ[ಕು] ಕಡೆಯೆಂದು ಕಾಣು ॥೧೧೦॥

ಮಕ್ಕಳ ಮಾತಿಗೆ ಒಪ್ಪಲು ಹರಿಯಮ್ಮ
ಮಿಕ್ಕಿವರು ಹೋಗದೆ ಬಿಡರು ।
ಮತ್ತೊಗೆವ ನೇತ್ರ ತುಂಬಲು ನೋಡಿ
ಕೆಟ್ಟೋಡಿ ಬರುವಾಗ ಬಿಡುವ ॥೧೧೧॥

ಹವಳ ಮುತ್ತಿನ ಆರತಿ ಬೆಳ[ಗೆ] ಸ್ತ್ರೀಯರು
ಪರಿಪರಿ ಪದಗಳ ಕಟ್ಟಿ।
ತರಳರಿಗೆ ಪಲ ಬಗೆಯ ಆಭರಣ ಭೂಷಿತವಿಟ್ಟು
ಬೆಳಗುವರು ಧವಳ ರಾಗದಲಿ ॥೧೧೨॥

ಮಂಗಳಾರತಿ ಪದ :

ಮಂಗಳಂ ಜಟ್ಟಂಗಿ ರಾಮನೊರಪುತ್ರರಿಗೆ।
ಮಂಗಳಂ ಮಲೆತವರ ಮರ್ದಿಪರಿಗೆ ।
ಮಂಗಳಂ ರಣವಿಜಯ ಕುಶಲ ಸಾಹಸದ ।
ಮಂಗಳಂ ಮಾರ್ತಂಡ ಪ್ರಚಂಡರೀರ್ವರಿಗೆ ।
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥೧೧೩॥

ಕದನ ಸಂಹರನಿಗೆ ಬಿದಿಗೆ ಚಂದ್ರನ ಪೋಲ್ವ।
ಇದಿರಾದ ವೈರಿಗಳ ಎದೆ ಶೂಲಗೆ ।
ಹದಿನಾರು ವರುಷಕ್ಕೆ ಕದನ ಕಾರ್ಯಕೆ ನಡೆವ ।
ಸದೆಬಡೆದು ಬಲ್ಲಾಳನ ಬರುವ ಧೀರರಿಗೆ ।
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥೧೪॥

ಕನ್ನಡಿಯ ಮುಖದರ್ಗೆ ಕಾಮನಂ ಪೋಲ್ವರ್ಗೆ
ಪರಹೆಣ್ಣುಗಳ ಕಣ್ಣೆತ್ತಿ ನೋಡದವರ್ಗೆ।
ಚಿಣ್ಣ ಬಾಲತ್ವದಲಿ ಚದುರರಿರ್ವರು ಪೋಗಿ।
ಹೊಮ್ಮಿ ಗತಿಯ ಮೇಲೆ ಹೊನ್ನ ತೆಗೆವರಿಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥೧೫॥

ಛಪ್ಪನ್ನ ದೇಶದೊಳು ಕಪ್ಪವನು ತೆಗೆವರಿಗೆ ।
ಕೀರ್ತಿಯುಳ್ಳವರಿಗೆ ಪಡೆದ ಜನಕರಿಗೆ ।
ಮುಪ್ಪುರವ ಗೆಲಿದಂಥ ಮೂರು ನಯನದ ದೇವ।
ಪುತ್ರರಿಗೆ [ಸ್ವಯ]ವಾಗಿ ರಣಶಕ್ತಿ ಪಾಲಿಪುದು ।
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥೧೬॥

ಬಾಲ ಪ್ರಾಯದೊಳು ರಣಭೂಮಿಗೆ ನಡೆವರಿಗೆ ।
ರಾಯ ಜಟ್ಟಂಗೀಶನೊರಪುತ್ರರಿಗೆ ।
ತಾಯಿ ಹರಿಹರದೇವಿ ಕಂಡು ಆರತಿ ಬೆಳಗಿ ।
ಬಾಲರಿಗೆ ಶಾಸೆಯನು ಇಟ್ಟು ಹರಸಿದಳು ।
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥೧೭॥

ಸಾಂಗತ್ಯ:

ಹರಸಿದ ತಾಯ ಸುಚರಣಕೊಂದನೆ ಮಾಡಿ
ಕರಗಳ ಮುಗಿದು ಬಾಲಕರು ।
ಧುರವ ಜಯಿಸಿ ಬನ್ನಿ ಮಂಡೆ ಹೂ ಬಾಡದೆ
ಶರೀರವೊಂದಾಗಿ ಭೇರುಂಡನಂತೆ ॥೧೮॥

ಪರಮಾನ್ನ ಭೋಜನವ ಸವಿದಾಗ ಇರ್ವರು
ಧರಿಸಲು ಪುಣುಗು ಕಸ್ತುರಿಯ।

ವರಮಾತೆ ಸುಖದೊಳು ಬೀಳ್ಕೊಡೆ ಇರ್ವರು
ಮೆರೆವ ಹಜಾರದಿ ಕುಳಿತು ||೧೧೯||

ಕರೆಸಲು ಬಲ್ಲಂಥ ಪರಿವಾರ ಮಂತ್ರಿಯ
ಮಗ ನೀಲಕಂಠನೆಂಬವನ।
ಕರಿ ತುರಗ ಕಾಲಾಳು ಹದಿನಾರು ಸಾವಿರ ಮಂದಿ
ಇದಿರಿಗೆ ನಿಲೆ ಬಾಲಕರ ||೧೨೦||

ಕರೆಸಿದ ಬಲವಂತ ಬಿರಿದಿನ ಮನ್ನೆಯರ
ದೊರೆತನಕೆ ಆಳಾಗಿ ಬಂದವರ।
ಧುರಧೀರ ಮಲ್ಲಯ್ಯ ಪೆನಗುಂಡೆ ನಾಗನು
ಎಡಗೈಯ ಹಂಪನು ಹನುಮ ||೧೨೧||

ಭಾವನು ಸಂಗಯ್ಯ ಬಲವಂತ ಲಿಂಗಣ್ಣ
ಕಾಮಗೇತಿಯ ಚಿಕ್ಕನಾಯಕ।
ಭೀಮನ ಸಮತೂಕ ಬಿಜವಾಡಿ ರಂಗಣ್ಣ
ಹಾಗಿನ ಹನುಮಂತನಾಯಕ ||೧೨೨||

ಕಲಿಯೊಳಗೆ ಕಾಡುವ ಜಗಲೂರ ಮರಚೆಟ್ಟಿ
ಹಗಲು ದೀವಟಿ ಸರ್ಜನಾಯಕ।
ಅಗಡು ಕೋಣನಂ[ತೆ] ತೆಗೆದಿಡುವ ಬಾಣೆಯ ಮುದ್ದ
ಬಡಗಿ ಗಂಗನ ಬಸವಯ್ಯ ||೧೨೩||

ಭೇರಿನಾದಗಳನು ಮಾಡಿಸಿ ಕಂಪಿಲರಾಯ
ವಾರ ತಿಥಿ ಒಳ್ಳೆ ಘಳಿಗೆಯಲಿ ।
ರಾವನು ಎಡಯಿಟ್ಟು ಗುರುವಾರ ಮುಂಜಾನೆ
ಸಾರಲು ಜಾಂಡೆ ಯಮನ ಮೂಲ್ಗೆ ||೧೨೪||

ಬಾಣ ಬತ್ತಿಗಳನು ಆನೆ ಒಂಟೆಗೆ ಹೇರಿ
ಮೇಲಾದ ಸೌರಣೆ ಕಿತ್ತು ।
ಹೇರಲು ಹನ್ನೆರಡು ಸ್ವಾಧೀನಕ್ಕೆ ಸಮನಾಗಿ
ಸಾಗಿಸಿ ರಾಯ ಕಂಪಿಲನು ||೧೨೫||

ರಾಯ ಕುಮಾರರು ತಾವು ಶೃಂಗರವಾಗಿ
ಬೇಗ ಜಾನಕಿಯ ಸುತರಂತೆ ।
[ಮೇಘ]ಕಾಳದ ಘೋಷ ಕಾಳೆ ಭೋರಿನ ಸ್ವರದಿ
ಮೇಲೆ ಉಗ್ಘಡಿಸುವ ಭಟರ ॥೧೨೬॥

ರಾಯನು ಕಂಪಿಲ ಪ್ರಧಾನರು ಬೈಚಪ್ಪ
ಬಲ್ಲರು ಒಡಗೊಂಡು ನಡೆಯೆ ।
ಮೇಲು ಮಾತನು ಬುದ್ಧಿ ಕುವರರಿರ್ವರಿಗರುಹಿ
ತಾವಲ್ಲಿ ಪುರಕೆ ನಡೆಯೆ ॥೧೨೭॥

ಪಟ್ಟಣ ಹೊರಹೊರಟು ಬಿಟ್ಟು ದಂಡಿನ ಪಾಳ್ಯ
ಪೊಕ್ಕರಂದು ಹರನ ಆಲಯವ ।
ಸಾಷ್ಟಾಂಗವೆರಗಿ ಪ್ರಣತರಾಗಿ ಜಟ್ಟಂಗಿ
ಮುಕ್ಕಣ್ಣನೆಂದು ಬೇಡುವರು ॥೧೨೮॥

ಯಾಲ ಪದನು :
ಜಯ ಜಯ ಶಂಕರ ಭುವನ ಬ್ರಹ್ಮಾಂಡಗಳನು
ಕುಣಿದು ಆಡಿಸುವ ಸ್ತುತಿಕ ।
ಕುಂಜರದ ವೈರಿ ನಯನ
ಮೂರುಳ್ಳದೇವ ನೀವರಿಸು ನಿಮ್ಮಯ ತನುಜರ ಬಿನ್ನಪವನು ।
ತರಳರ ಬುದ್ಧಿಯಲಿ ನಡೆವೆವು ।
ನಿಮ್ಮಯ ದೃಷ್ಟಿ ಇರಬೇಕು ಎರವ ಮಾಡದೆ ॥೧೨೯॥

ಹೀನಾಯ ಅಪಕೀರ್ತಿ ಪಾದಕೆ ಬರುವುದು ।
ನಾವು ಬೇರೆ ಹೆದರಿ ನಿಲ್ಲೆವು ।
ಕಾಯಗಳಾಸೆ ಮಾಡ ಬುದ್ಧಿ ಕೊಟ್ಟಲ್ಲದೆ
ಮಂಡೆಯ ಮೇಲೆ ನೀನಿರೆ ಗೆದ್ದು ಬರುವೆನು ।
ಸಹಾಯವಾಗಲಿ ಬೇಕು। ಭವರೋಗ ಶಕ್ತಿಯನಿತ್ತು ।
ದೇವ ಜಟ್ಟಂಗಿರಾಮೇಶ ಕೋಟಿಪ್ರಕಾಶ
ಬೇಗ ಅಭಯವ ಪಾಲಿಸೆಂದನು ॥೧೩೦॥

ಸಾಂಗತ್ಯ:

ಛಲದಂಕ ಪುತ್ರರ ಸ್ಮರಣೆ ಭಕ್ತಿಯ ಮೆಚ್ಚಿ
ಹರಸಿಡಲು ತ್ರಿಶೂಲದಭಯ।
ಧರಿಸಿ ಮಂಡೆಯ ಮೇಲೆ ಎರಗಿ ವಂದನೆಗೆಯ್ದು
ತಿರುಗಿದರವರು ಪಾಳೆಯಕೆ ||೧೩೧||

ಎದ್ದಿತು ದಂಡೆಲ್ಲ ಯಮನ ಮೂಲೆಯ ಭಾಗ
ಜಜ್ಜರಿವಂತೆ ಭೇರಿಗಳು ।
ಇದ್ದಂಥ ಎಡಬಲದ ಪಾಳೆಯಗಾರರ ಭೂಮಿ
ಪೋದುಗೊಡದೆ ದಂಡು ನಡೆಯೆ ||೧೩೨||

ನಡೆಯಲು ದಂಡಾಗ ನದಿಗಿಳಿದು ಹಂಪೆಯ
ನಡೆಯಲು ಕಣ್ಣುಕುಪ್ಪೆ ಬುಡಕೆ ।
ಗುಡಿಗುಡಿಸಲಾರ್ಭಟಕೆ ಹೊಡೆವ ಭೇರಿಯ ಧ್ವನಿಗೆ
ನಡುಗಿ ಭೂಮಿಗಳು ಕಂಗೆಡಲು ||೧೩೩||

ಬಲವಾನ ಹೊಡೆಯಲು ಬಡವನು ತನ್ನಯ
ಕಡೆಯ ಬಾಗಿಲು ಕಾಯ್ದು ಇರುವ।
ಬುಡಕೆ ಕೊಡಲಿಯ ಹಾಕೆ ಕೊನೆಗೊಂಬು ತನ್ನಯ
ಹಿಡಿಗೆ ಬರದೇನೋ ಅಣ್ಣಯ್ಯ ||೧೩೪||

ಒಂದೆರಡು ಮೂರು ನಾಲ್ಕೈದು ಪಯಣ ದಾಂಟಿ
ಬಂದಿಳಿಯೆ ಭೀಮಕೇರೆಗೆ।
ಮುಂಜಾನೆ ದೌಡೆದ್ದು ತುರಗ ಬಲ್ಲಾಳನ
ತಂದರು ಕೊನೆ ಸೀಮೆ ಕೋಳಾ ||೧೩೫||

ಸಾಗಿಬರಲು ರಾಮ ನೀಲನೂರನು ದಾಂಟಿ
ಬೇಗಿಳಿದು ಯರಗಟ್ಟಿಯ ತೊರೆಗೆ।
ಭೂಮಿ ರಾಜ್ಯಗಳೊಡೆದು ತಾಯಿಗೆ ಮಗನಿಲ್ಲದೆ
ಓಡುವರು ಮಲೆನಾಡ ಬಿದ್ದು ||೧೩೬||

ಒದಗಿ ಬಂತೆನುತ ಬಾಯ ಬಿಡುತಿರೆ ಲೋಕ
ಸೂಳೆಯರು ಹಾಸ್ಯ ಮಾಡುವರು ।

ಯಾವಾತನ ಕೈಯ ಯಮನ ರಾಜ್ಯವ ಪೊಕ್ಕು
ತಾ ಊರ ಪೊಗುವಂಥ ಧೀರ ||೧೩೭||

ಬರುವನೆ ದಂಡಕ್ಕೆ ಗರುಡನ ಸೀಮೆಯಲಿ
ಉರಗನ ಹಬ್ಬ ಮಾಳ್ಪನೇ ।
ಇಡಲಮ್ಮ ಮುಖವನು ಪೊಡವಿಗೆ ಕರ್ತಾದ
ಸುರಿತಾಳ ಹೆಸರನು ಹಿಡಿದು ||೧೩೮||

ಗಾದೆ ಹೇಳುವ ಗರತಿ ಏಳೆ ರಾಮನು ಬಂದ
ಯಾಳೆಕೈಯ್ದಾರೆ ಬಲ್ಲಾಳನ।
ಊರ ಮುಂದಿರುವ ದನ ಮಂದೆ ಕುರಿಯನ್ನು
ಕೋಳಹಿಡಿದನು ಏಳೆ ಮಿಂಡ ||೧೩೯||

ಬಲು ಮಾತು ಕಲಿತಾಳು ಹಲವು ವಿಟರೊಳಗಾಡಿ
ಸುಲಿದಾರೆಂಬುವರು ಕಡೂರ।
ತಡವು ಮಾಡಲು ಬೇಡ ಕುದುರೆಗೆ ಹುರಳಿ ಕೊಚ್ಚೊ
ತೆರ ಬರುವುದೇಳೆ ಓಡುವನಾ ||೧೪೦||

ಗಡಿ ರಾಜ್ಯ ಒಡೆಯಲು ಕಡೆಗೊಂದು ಕಲ್ಲರೆ
ಗಿರಿಯ ಸೇರಲು ಕಣ್ಣುಗೆಟ್ಟು ।
ಭಿಕ್ಷ ಭಂಡಾರವ ತಿರುಗಿ ನೋಡದೆ ಅವರು ಓಡಿ
ತೆರೆಯದೆ ನೆಲ ಬಾಯನೆನುತೆ ||೧೪೧||

ಸೆಟ್ಟಿಗಳು ಸಕಲಾತಿ ಮುತ್ತು ಹವಳವ ಮಾರೊ
ಪಟ್ಟೆ ಪೀತಾಂಬರ ಜಲ್ಲಿಗಳು।
ಬಿಟ್ಟಲ್ಲಿ ನಡೆಯಲು ಬೇಲೂರ ಜಾಗರವ
ಹೊಕ್ಕಲ್ಲದೆ ಪ್ರಾಣುಳಿದೆನುತ ||೧೪೨||

ಎದ್ದರು ಎದೆಗೆಟ್ಟು ಬಂದಳಿಕೆ ವೈಶ್ಯರು
ಅಗ್ನಿ [ಪಾಲಾಗಿ] ಬದುಕು ಪೋಗಿ ।
ಬಿಡಲು ಮೊಸಲುಸೋಡಿನ್ನು ಮನಕೊಚ್ಚೆ
ಬಿದ್ದು ಓಡುವರು ಕೊಮ್ಮಟಿಗ ||೧೪೩||

ಎಂದಿಗೆ ಅರಿಯೆವು ದಂಡೆಂಬ ಸುದ್ದಿಗಳ
ಬಂದುದೆ ಪ್ರಳಯಕಾಲ ನಮಗೆ ।
ತುಂಬಿದ ಮನೆ ಬದುಕು ತುರು ಕರು ಪಾಲ್ಮಾಡಿ
ಕುಂಬಾರು ಕುರುಬರು ನಡೆಯೆ ||೧೪೪||

ಏರಿಸಿದ ಮಡಕೆಯನಿಳುಹದೆ ಬಾಳಿದೆವು
ಮೂರಾರು ತಲೆಯಿಂದ ನಾವು ।
ಖೋಡಿ ಮೂಳನು ರಾಮಗೆ ಕೊಟ್ಟು ಬಲ್ಲಾಳ ರೊಕ್ಕ
ಸಾಗಿಸಿ ಬಿಡಲರಿಯನಕ್ಕ ||೧೪೫||

ನಾನಾ ಜಾತಿಯ ಗೂಳ್ಯ ಜ್ಞಾನಕ್ಕೆ ತಿಳಿದಂತೆ
ಓಡಲು ದಿಕ್ಕು ದಿಕ್ಕಾಗಿ ।
ಆಡುವರು ಹೋದಲ್ಲಿ ದಾವು ಎಡೆಗಳ ಬಿಟ್ಟು
ಸೂರ್‍ಯಾದ ಬದುಕನೆ ನೆನೆದು ||೧೪೬||

ಯಾರಿಗೆ ಹೇಳಲಿ ಎಮ್ಮವರು ಮಾಡಿದ ಬದುಕ
ನೂರಾರು ಖಂಡುಗ ದವಸ ।
ಮಾರಗೊಡದೆ ಎಮ್ಮ ಮನೆಯಾತ ಕೆಡಿಸಿದ
ಮೂರು ಸೋರೆಗ ಹೊನ್ನು ||೧೪೭||

ಬಿಡು ನಿನ್ನ ಕಾಳಿನ ಸಡಗರ ಸುಡಲಕ್ಕ
ಪಡಿ ಹೊನ್ನು ಬಿಟ್ಟೆ ಮೂರ್ಪಡಿಯ ।
ಇರಿಸಿದ ಒಡವೆಯನು ಹಿಡಿಯಲಾರದೆ ಬಂದೆ
ಕಡೆ ಹೊಲಕೆ ಬರಲು ಕುದುರೆಗಳು ||೧೪೮||

ಅರ್ಥ ಗಳಿಸಲು ಎತ್ತ ಕರ್ತರು ಬಾರದಕೆ
ಸರ್ಪ ದೈವವು ಕಾದೊ ತೆರದಿ ।
ಬಚ್ಚಿಟ್ಟು ಇರಿಸಿರ್ದ ಬರುವ ಭಾವನೆ ಕೊಟ್ಟು
ಬಿಟ್ಟೆಹರವಾರೆಂದು ಬರಲು ||೧೪೯||

ಹಣ ಹೊನ್ನ ಧನ ಧಾನ್ಯ ಸ್ಥಿರವಲ್ಲ ಕೇಳಕ್ಕ
ಇರುವಂತೆ ತನ್ನ ಕಣ್ಣಮುಂದೆ ।

ಇಡುವುದು ಗೆದ್ದಲೆ ಹುತ್ತ ಸುಖಬಡುವುದು ಕಾಳಿಂಗ
ತೆರನಾಯಿತೆಮ್ಮ ಬದುಕು ||೧೫೦||

ಅನ್ನಿರ್ದು ಉಣಲಿಲ್ಲ ಆಭರಣಿರ್ದು ತೊಡಲಿಲ್ಲ
ಬಣ್ಣ ಬಿಳಿದಿರ್ದು ಬಂಡಿಯಲಿ ।
ಒಂದಿವಸ ಉಡಲಿಲ್ಲ ನುಣ್ಣಗಾದ ಮೇಲೆ
ಇನ್ನೇಕೆ ಅಳುವುದು ತಾಯಿ ||೧೫೧||

ಹೊದೆವರೆ ಕಂಬಳಿಯ ಕುರಿಯ ತುಬುಟವ ಬೆಳೆದು
ಮರುಳೇನೆ ತಾಯಿ ಅಳುವುದಕೆ ।
ಋಣವು ತೀರಿತು ಅಮ್ಮ ಒಡವೆ ಕರ್ತನು ಒಯ್ದು
ಬಡಕೊಳ್ಳೆ ಬರುವುದೇನಕ್ಕ ||೧೫೨||

ನಾಡದೇಶವು ಗೂಳೆ ಹೀಗೆಂದು ಮೊರೆಯಿಡುತ
ಸೇರಿ ಗಿಡ ಮೆಳೆಯ ಸೇರುವರು ।
ರಾಯ ರಾಮನ ದಂಡು ನಾಳೆ ಏಳಲಿ ಎಂದು
ಭೇರಿ ಹೊಡೆಯಲು ಬೆಳಗಿನಲಿ ||೧೫೩||

ಯದವತ್ತಿ ಮಲ್ಲಗೆ ಮಾಡಿಸಿ ಪರುಪಾದ್ಯ
ಕಾಣಿಕೆಯನಿಟ್ಟು ಕರಮುಗಿದು ।
ಭೂಮಿ ಭೂಮಂಡಲ ನಡುಗುವಂದದಿ ಹೋಗಿ
ಕೋಳೂರ ಕೆರೆಗಾಗಿ ಇಳಿದ ||೧೫೪||

ಹಳೆಯಬೀಡಿಗೆ ನಾಳೆ ಇಳಿದು ನಗರವ ಮುತ್ತುವ
ಬಗೆಯ ಮಾರ್ಬಲಕೆ ಹೇಳಿದನು ।
ಹಿರಿಯರು ಮಂತ್ರಿಗಳು ಅರುಹುವರು ರಾಮಯಗೆ
ಸುಳುಹುಂಟು ಊರ ಮುತ್ತಲಿಕೆ ||೧೫೫||

ಹೇಗೆಂದು ಎನುತ ಭೂಪಾಲ ರಾಮನು ಕೇಳೆ
ವಾಲೆಯ ಬರೆದನಲ್ಲಿಂದ ।
ಬಾರದೆ ನಯ ನುಡಿಗೆ ತೋರಿದರೆ ಎ[ದೆ]ಗರ್ವ
ಮಾಡಬಹುದು ರಾಯಕಾರ್ಯ ||೧೫೬||

ಜಾನಕಿಯ ಮನಪ್ರಿಯ ರಾವಣನ ಕೊಲುವಾಗ
ಮಾಡಿದನೆ ಮೂಗ ಕಾರ್ಯವನು ।
ಪೇಳಿ ಅಂಗದನಿಂದ ಸ್ಥಾನಪತಿಗಳ ನಡೆಸಿ
ಮೀರಲು ಮಿತಿಯನು ತೊಡೆದ ||೧೫೭||

ಒಳಿತಾಗಲಿ ಮಂತ್ರಿ ಬಲ್ಲ ತೆರಮಾಡೆನಲು
ಬಲ್ಲಿದ ಹೇಜೀಬರ ಕರೆಸಿ ।
ಬಲ್ಮೆ ಸದನದೊಳು ಲೇಖನವ ಬರೆಯೆಂದು
ಅಲ್ಲಿ ಮಂತ್ರಿಯು ಪೇಳಿದನು ||೧೫೮||

ಶ್ರೀಮತು ಸಚ್ಚಿತ ಭೋಗದಿ ದೇವೇಂದ್ರ
ರಾಮಭೂಪಾಲ ಕಂಪಿಲನು ।
ಮಾಡುವ ವಿನಯಾರ್ಥ ಹಳೆಬೀಡ ಬಲ್ಲಾಳನಿಗೆ
ಸಾಗಿಸಿ ಬಿಡು ನಮ್ಮ ಹೊನ್ನ ||೧೫೯||

ರಾಜೇಂದ್ರ ಕಂಪಿಲನ ಕುಮಾರರು ಬಂದಿವೆ ಕೋ
ಭೇರುಂಡ ರಾಮ ಕಾಟರಸ।
ಆಲಸ್ಯ ಮಾಡದೆ ಮೂರು ತಲೆಯೊಳಾದ
ಕಾಣಿಕೆ ಕಪ್ಪ ಕಳುಹುವುದು ||೧೬೦||

ಮನದೊಳಗೆ ತರ್ಕವಿಸಿ ಕೊಡುವುದು ಘನ ನಿಮಗೆ
ನಡೆಸಲು ಬಲುಮೆ ಬಡಿಗೋಲು ।
ಹಿಡಿಹುಲ್ಲ ಕರದೊಳು ಬುಡವ ಕೀಳೆ ನಿನ್ನ
ನಡೆಯೆ ವಂಶಾಬ್ದಿ ಕುಂದು ||೧೬೧||

ಕಾಗದವನು ಬರೆದು ಪ್ರಧಾನಿಯ ಮಗ ಮಂತ್ರಿ
ಓದಲು ಆಗ ರಾಮೇಂದ್ರ।
ಕೇಳಿ ಮನದೊಳು ನಗುತ ಕೈಗೂಡಿ ಬರುವುದು ಕಾರ್ಯ
ಸಾಗಿಸಿ ಹೇಜೀಬರೊಡನೆ ||೧೬೨||

ಜೋಡೆಯರ ಕಳುಹುತಲಿ ರಾಮನು ನಡೆದೆದ್ದು
ಹೋಗಿ ಬೆಳುವಾಡಿ ಕೆರೆಗಿಳಿಯೆ ।

ಜೋಡೆಯರು ತವಕದಿ ಹಳೆಬೀಡ ಕಾಣುತ ಬರಲು
ಬಾಗಿಲ ಗೊಲ್ಲರು ತಡೆಯೆ ||೧೬೩||

ತಡೆದ ಗೊಲ್ಲರ ಕೂಡೆ ಅರುಹಿ ಸೂಚನೆಗಳ
ಅರಸು ಬಲ್ಲಾಳಗೆ ಪೇಳೆನಲು ।
ಪರಿದೋಡಿ ಬಂದಾಗ ಚರರು ಪೇಳಲು ರಾಯ
ಕರೆಯೆಂದು ಊಳಿಗದವರ ಕಳುಹೆ ||೧೬೪||

ಲೇಖ ಪತ್ರವ ತೆಗೆದು ಭೂಪಾಲನ ಮುಂದಿರಿಸಿ
ಭೂಪ ಕಳುಹಿದ್ದೆಂದು ಕರಮುಗಿದು ।
ಮೂಕನಂದದಿ ನೋಡಿ ಕಾಲನ ರೂಪಾದ
ಕನಲಿ ಗರ್ಜಿಸುತಾಗ ಮನದಿ ||೧೬೫||

ಕಾಳುರಗ ಭೋರಿಡುವ ತೆರನಾಗಿ ಕಣ್ಣೆರಡು
ಮೂಡುವ ರವಿಯ ರೂಪಾಗೆ ।
ಜೋಡೆಯರ ನೋಡುತ್ತ ಸೀಳಿ ಕಾಗದವನು
ದೂಡಿವರ ಬಾಯ ಮೇಲ್ಬೊಡೆದು ||೧೬೬||

ಕೊಡುವೆನು ಹೊನ್ನನು ಮತ್ತಲ್ಲಿ ಇರಹೇಳಿ
ಹೊತ್ತುಣಿತೆ ನಾಳೆ ಮುಂಜಾನೆ ।
ಇಕ್ಕಿವೆ ಗೋರಿಯ ಇಂದ ಮೂಳ ಮೇಲೆ
ಮೊದಲಿವನಪ್ಪನ ಬೇರ ಕೀಳುವೆನು ||೧೬೭||

ರಾಮನೆಂಬುವ ಯಾರು ಕೂಲಿ ಮೇಕೆಯ ಕಾಯ್ವ
ಮೂಳನ ಮಗನು ಬಂದಿಹನೆ ।
ಮಾರಿ ಗುಡಿಯ ಹೊಕ್ಕು ಮರಳಿ ಹೋಹುದೆ ಕುರಿಯು
ದೂಡಿ ಹೇಜೀಬರ ಕತ್ತಿಡಿದು ||೧೬೮||

ಹೊಡೆ ರಾಯ ಬಂದಿರುವ ವೈರಿ ರಾಮನ ಮೇಲೆ
ಪೊಡವಿಯೊಳ್ ಸ್ಥಾನಪತಿಗಳನು ।
ಹೊಡೆಯೆಂಬ ನುಡಿಯ ನಿನ್ನೊಳು ಕಂಡೆವು ಎಂದು
ನಡೆದಾರು ಕೇರಿ ಮುಖದೊಳಗೆ ||೧೬೯||

ಜೋಡೆಯರು ಬರುತಾಗ ನೀರ ನಯನದಿ ಉಕ್ಕೆ
ರಾಯ ರಾಮಗೆ ಕರವ ಮುಗಿದು ।
ಆಡಲು ಬಾಯಿಲ್ಲವನೆಂದ ಮಾತಿಗೆ ಕರ್ಣ
ಹೋದವರ ತೆರನಾಗಿ ಇರಲು ||೧೭೦||

ಲೇಖಪತ್ರವ ಹರಿದು ಒರೆಸಿ ಕಾಲಡಿ ಹಾಕಿ
ನೂಕಿ ಹೊಡೆ ಇವರ ಬಾಯ್ಮೇಲೆ।
ಲೋಕದ ರಾಯರ ಗಂಡನೆನಿಸಿಕೊಂಬೆ
ಮೇಕೆ ಕಾಯ್ವುವನ ಮಾಡಿ ಬಿಟ್ಟ ||೧೭೧||

ಸ್ಥಾನಪತಿಗಳ ಮಾತ ಕೇಳುತ್ತ ರಾಮೇಂದ್ರ
ಕಾಲಭೈರವನ ರೂಪಾದ ।
ಮಾಡಿದರವರೀಗ ಮಂತ್ರಿ ಪ್ರಧಾನರು
ಜೋಡೆಯರ ಕರೆದು ಮನ್ನಿಸಲು ||೧೭೨||

ಉದಯ[ದಲಿ] ನುಡಿಯೆ ಸನ್ನೆಯ ಭೇರಿ ಕದನಕ್ಕೆ
ಯೆಂದು ಕಲಿಯಾಗಿ ನುಡಿದವು ।
ತುರಗ ಜೋಡನು ಮಾಡಿ ನಡುವ ಕಟ್ಟುತ ಮಂದಿ
ಕಡಿಕಡಿಯೆನುತ ಏರುವರು ||೧೭೩||

ಯಾವಲ್ಲಿ ಹದ ಇರುವ ಹಳ್ಳವ ಹಿಡಿದು
ಏರಿಸಿ ಬಾಣ ಬತ್ತಿಗಳ।
ಸೋರಿಸಿ ಮುಂಗಾರ ಆಣೆ ಕಲ್ಮಳೆಯಂತೆ
ತೋರಲೀಸವು ಒಳಗೆ ತಲೆಯ ||೧೭೪||

ಗುಂಡಿನ ರವದೊಳು ಹೊಡೆವ ಭೇರಿಯ ನಾದ
ಧರಣಿ ಒದರ್ವಂತೆ ಕೋಳಾಹಳ।
ಹೊಡೆ ಬಡಿಯೆನುತಲಿ ಅಡರುವ ಬಲ ತುರಗ
ಹಿಡಿದರು ಪುಷ್ಪದ ಗಿರಿಯ ||೧೭೫||

ರಾಯ ಪೌಜಿನ ಮೇಲೆ ಸಾಗಿಬರುವನು [ಕಾಟ]
ರಾಮಭೂಪಾಲ ಸಿಂಗರಸು।

ಧುರದೊಳಗೆ ಕಂಡರು ಊರಿನ ಬಲುಮೆಯ
ರಾವಣ ಲೆಂಕೆಯ ಪುರವೋ ||೧೭೬||

ಇಂದ್ರನಗರಕೆ ಮಿಗಿಲೆಂದು ಪೇಳಲುಬಹುದು
ಕಂದರ್ಪ ಪಿತನ ದ್ವಾರಕಿಯೊ।
ತಂದೆ ತಾಯಿಗಳನ್ನು ಎಂದರೆ ಪುಸಿಯೆಂಬೆ
ಮಂದೋಲನಾಗಿ ಕಾಣುವನು ||೧೭೭||

ನೋಡಿದಾಗಲೆ ರಾಮ ಇಂದ್ರಪುರಕೆ ಮಿಗಿಲೆಂದು
ಕಾಣುತಲಿಹುದು ಈ ಪುರವು ।
ರೂಢಿಯೊಳಪಕೀರ್ತಿ ಮುರಿದು ಓಡಲು ಮುತ್ತಿ
ಧ್ಯಾನ ಮಾಡುವರಾ ಮನದಿ ||೧೭೮||

ನಗರ ತೋರುವುದಣ್ಣ ಹರಿದಾರಿಗಿ[ದು ದೂರ]
ಕರುವಾಡ ಉಂಟು ನೂರಾರು ।
ಇರುವಂಥ ದೇವಾಲ್ಯ ಕಡೆಯಿಲ್ಲ ಮೊದಲಿಲ್ಲ
ಬಡವ ಎಮ್ಮಯ್ಯಗಿವ ಮಣಿಯ ||೧೭೯||

ದೇವಾಲಯಗಳ ನೋಡೆ ತಾನಿಹುದು ಕೈಲಾಸ
ಹೇಮ ಬೆಳೆವುದೆ ಈ ಭೂಮಿ ।
ಜೋಡಿಲ್ಲ ಈ ಪುರಕೆ ಜಂಬುದ್ವೀಪದ ಮೇಲೆ
ನಾ ಬಂದ ಫಲವು ಹ್ಯಾಗಿಹುದೋ ||೧೮೦||

ರಾಯ ರಾಮನು ಮನದಿ ಧ್ಯಾನ ಮಾಡಲು ಪಲ್ಲಿ
ವಾಮಭಾಗದಿ ಲೇಸು ನುಡಿಯೆ ।
ಮಾಡು ಕಾರ್ಯವ ತನುಜ ಮುರಿವ ಬಲ್ಲಳರಾಯ
ಭೂಮಿರಲು ಖ್ಯಾತಿಯನು ಪಡೆವೆ ||೧೮೧||

ನಡೆಯಲು ಮನದೊಳು ನೃಪನೊಂದು ತನ್ನಯ
ಪಡೆದ ಒಡೆಯನ ಕೃಪೆಯಿಂದ।
ತಡೆಯಬಲ್ಲುದೆ ಗೋಡೆ ತನ್ನ ಕರದೊಳಗಿವ
ಲಯವಾಗಲೆಂಬ ಫಲವಿರಲು ||೧೮೨||

ನಗರವನು ಪರಿ ಬಳಸಿ ಯಮನ ಮೂಲೆಗೆ ಬಂದು
ಗಿರಿ ಎಡ ಬಳಸಿ ದಂಡಿಳಿಯೆ।
ಹೊಡೆಯಲು ನವಗಜ ಪಶುರಾಗದ ಗಿರಿಯ
ಒಡನೇರೆ ರಾಮ ವಾಲಕ್ಕೆ ||೧೮೩||

ಪೂಜೆ ಪುಷ್ಪಗಳಿಂದ ಕಾಣಿಕೆ ಕರ ಮುಗಿದು
ಪಾಲಿಸು ಹರನೆ ಪ್ರಸಾದ।
ಕಾಮನ ಕೊಂದಾತ ಕಾಯಗೆಲ್ಲುವುದು ಎಂದು
ಜಾರಲು ತ್ರಿಶೂಲದಭಯ ||೧೮೪||

ಕರೆಸಿದ ಭುಜವುಳ್ಳ ಬಿರಿದಿನ ಮಾನ್ಯರ
ತೊಡೆಸಿದಾಭರಣ ದುಕೂಲವನು ।
ದಿನ ಮೂರರೊಳಗಾಗಿ ಹೊರಕೋಟೆ ಕೋಳೆಂದು
ಸರಿಮಾಡಿ ಫಲವನಕ ಮುಖಕೆ ||೧೮೫||

ಬಂದನು ಕಾಟಣ್ಣ ಬಡಗಲ ಮೂಲೆಯ
ಕುಂಬಾರಹಳ್ಳಿಯ ಹಿಡಿದು।
ಸಂಕಯ್ಯ ಮೂಡಲ ಜಂಬಾರ ಮರಡಿಯ ಹಿಡಿದು
ಮುಂಗಾರ ಸಿಡಿಲಂತೆ ಬರುವ ||೨೮೬||

ಒಕ್ಕಲಿಗರ ಮುದ್ದ ಒಂಟಿಗತ್ತಿಯ ನಾಗ
ಹೊಕ್ಕರು ವರುಣಭಾಗದಲಿ ।
ಮುತ್ತಲು ಜೇನ್ನೊಣದ ಮೊತ್ತಗಳು ಕವಿದಂತೆ
ಕಿಚ್ಚಿನ ಮಳೆಯಗರೆವುತಲಿ ||೧೮೭||

ಯಮನ ಭಾಗದಿ ರಾಮ ಹಿಡಿದು ಶರಭನ ಗಡಿಯ
ಸುರಿವನು ಬಾಣದ ಮಳೆಯ।
ಕಡೆಗಂಡ ರವಿರಾಜ ಜನನಿ ಗರ್ಭಕೆ ಇಳಿದು
ಮರೆಗೊಂಡ ಹೇಮಾದ್ರಿ ಗಿರಿಯ ||೧೮೮||

ಪುರದ ಕಾವಲ ಮಂದಿ ಐಶ್ವರ್ಯ ಪೇಳುವೆ ಮಗನೆ
ಬರಿ ಧೈರ್ಯದೊಳಗಡಣಿಕ್ಕೆಯ ಹಿಡಿದು ।

ಉಕ್ಕಡಗಾಳ ಹನ್ನೆರಡು ಸಾವಿರ ಮಂದಿ
ರೇವೆಯ ಪೊಯ್ಯದೆ ಹೊರಪಾರಿ ||೧೮೯||

ಬಿರಿದಿನ ಬಂಟರು ತರತರದೊಳು ನಿಂದು
ತೊಡೆ ಬಡಿದು ಕೇಕೆ ಹೊಡೆಯುತಲಿ ।
ಪಡೆ ತೀರಿ ಬಂದನೆ ಹುಡುಗ ರಾಮನು ಎಂದು
ಮಗನೂರನೆಂಬುದನರಿಯಾ ||೧೯೦||

ತಿಳಿಯಲರಿಯದೆ ಬಂದ ಎಳೆಯ ಪ್ರಾಯದ ಬಾಲ
ಹಡೆದವರು ಹೇಗೆಯ್ಯದಾಯದ್ಯೋ ।
ಪುರದೊಳಗೆ ಬಲ್ಲಂಥ ಹಿರಿಯರಿಲ್ಲವೆ ಎಂದು
ಊರೊಳು ಹೊಗುವರೆ ಬಲ ಸಹಿತ ||೧೯೧||

ಕಪ್ಪು ಕಾವಳ ನೋಡಿ ಬತ್ತಿ ಬಾಣವ ಸುರಿದು
ಸುತ್ತಲು ಜ್ಯೋತಿ ಜಗಂಜ್ಯೋತಿ ।
ಇಕ್ಕಲು ಸ್ವರವನು ಕುಕ್ಕುಟ ಖಗ ಮೃಗ
ರೆಕ್ಕೆಯ ಮುರಿದು ಚರಿಸಾಡೆ ||೧೯೨||

ಉದಯವಾಗಲು ರಾಮ ಹರನ ನೆನೆಯುತಲೆದ್ದು
ಧರಿಸಲು ನಾಮ ಭಸಿತವನು ।
ತುರಗಮಂದಿಯು ಎದ್ದು ಶೃಂಗರವಾಗಿ ಮುತ್ತಲು
[ನೆಗೆದು] ಗಾಹುಗೊಳ್ಳೆ ಆ ನಗರ ||೧೯೩||*

ಉತ್ತರ ದಿಕ್ಕಿಲಿ ಹತ್ತಿ ಕಾಟಣಲೆಗ್ಗೆ
ಬತ್ತಿ ಬಾಣಗಳ [ಎಸೆ]ಯುತಲಿ ।
ಒತ್ತಿ ಮುಂದಕ್ಕೆ ನೂಕಿ ಗೇರೆ ಬೇಲಿಯ ಹಿಡಿದು
[ಕಿಚ್ಚೆಳೆದು] ಕುರಿದನವ ಹೊಡೆದು ||೧೯೪||

ಪೂರ್ವಭಾಗದ ಮೇಲೆ ಏರಿ ಸಂಗಮದೇವ
ಕೊಳ್ಳೆ ಹೊಡೆಯಲು ಆಳ್ವೇರಿ।

---

* ೧೯೩, ೧೯೪, ೧೯೫ನೆಯ ಪದ್ಯಗಳ ನಾಲ್ಕು ಸಾಲು ಮಾತ್ರ ಲಿಪಿಸಲ್ಪಟ್ಟಿವೆ(ಸಂ)

ಚೋರಗಂಡಿಯ ಕಿತ್ತು ಬಲ್ಲಾಳರಾಯನ ಮಂದಿ
ಕೂಡಲು ಜಗಳ ರಣರಂಗ ||೧೯೫||

ಜಗಳ ಕಚ್ಚಲು ಹನುಮನಿರುವ ಬಾಗಿಲ ಮುಂದೆ
ಹಗಲು ಗಾವಳ ಕವಿಯಲು ।
ಮುರಿಯಲು ಸಂಗಯ್ಯ ಯಮನ ಮೂಲೆಯ ರಾಮ
ತುಳಿಸಿದ ಜೀಬಿಯನ ಕಟ್ಟಿ ||೧೯೬||

ಜಗಳ ಮಾಳ್ಪರು ಕೆಲರು ಅಗಳ ಬೀಳ್ವರು ಕೆಲರು
ಹೆದರಿ ಮೂರ್ಚೆಗಳಾಗೆ ಕೆಲರು ।
ನಿಗಮಗೋಚರ ಬಲ್ಲ ಮೂರು ಸಾವಿರ ಬಂದಿ
ಯಮನೂರ ಕಂಡರು ಮಗನೆ ||೧೯೭||

ಚೋರಗಂಡಿಲಿ ಹೊರ ಆರು ಸಾವಿರ ಮಂದಿ
ಈ ರಾಮನಿಗೆ ಇದಿರಾಗೆ।
ಚಾರಿಗೊನ್ನಾ ಮೇಲೆ ತಿರುಹಿ ತನ್ನಯ ತುರಗ
ತಾರಗಡಿಯನು ಈ ಕೆಲದಿ ||೧೯೮||

ಹಿಡಿಗಲ್ಲು ಹೊಡೆಗಲ್ಲು ಸುಡುವ ಬಾಣದ ಬತ್ತಿ
ಕರೆವರು ರಾಮನ ಮೇಲೆ ।
ಗುರುಕೃಪೆ ಬಲದೊಳು ಇರುವೆ ಸೋಂಕಿದ ತೆರದಿ
ಚರಿಸವೆ ಮೇಘಮಾರ್ಗದಲಿ ||೧೯೯||

ಹುಚ್ಚುಕೋಣನ ತೆರದಿ ಹೊಕ್ಕು ಬಾಣಿಯ ಮುದ್ದ
ಕೊಚ್ಚಿದನು ರಣ ಜೀಬಿಯಲಿ ।
ಲಕ್ಷ ಕುರಿ ದನಗಳನು ಹಿಡಿದು ಜೀಬಿಯಲಿರ್ದ
ಒಕ್ಕಲ ಗೂಳ್ಯವನು ತೆಗೆಯೆ ||೨೦೦||

ಕೋಟೆಯ ಪರಿ ಬಳಸಿ ಈ ರೀತಿ ಕೋಳಾಹಳ
ಸೊಕ ಮಾಡುವುದೆ ಕಡೆ ಮೊದಲು ।
ಹಾಕಲು ನಗರಕ್ಕೆ ಹನ್ನೆರಡು ಸಾವಿರ ಬಾಣ
ಬಿತ್ತಿಗೊಳುವುದು ಜಜ್ಝುರಿಸಿ ||೨೦೧||

ಜೋ[ರು] ಮುತ್ತಲು ಊರ ಕೇರಿ ಬೊಬ್ಬೆಗಳೇಳೆ
ಸೂರ್ಯಗು ಸಮಯ ಬಂತೆಂದು ।
ರಾಯ ಬಲ್ಲಾಳನಿಗೆ ದೂರ ಪೇಳ್ವರೆ ಓರ್ವ
ಓಡಿ ಬರಲಾಗ ನೃಪನೆಡೆಗೆ ॥೨೦೨॥

ಪರಿದೋಡಿ ಬಂದಾಗ ಕರ ಮುಗಿದು ಪೇಳ್ವನು
ಹಿಡಿದರು ಅಗಳ ಭೂಪಾಲ।
ಕಿಡಿಗರೆದು ಕೋಪಾಗ್ನಿ ಒಡನೆ ರಾಯನು ಬಂದು
ಯಮನಂತೆ ಸದರನೇರಿದನು ॥೨೦೩॥

ಕರೆಸಿದ ತನ್ನಯ ಮಂತ್ರಿ ಪ್ರಧಾನರ
ಬಿರಿದಿನ ಧೀರ ರಾಹುತರ।
ಯಮದೂತರಂದದಿ ಜರಿಯ ಕಾಪಿನ ಮಂದಿ
ಹರಿಗೆ ರಾವುತರು ಒದಗಿದರು ॥೨೦೪॥

ಬಿಲ್ಲೆ ಸುನಂಗಿಯ ಬಿಲ್ಲು ಸಾಧನೆಯವರು
ನಿಲ್ಲದೆ ಬಂದು ಒದಗಿದರು।
ಹುಲ್ಲೆಯ ಮರಿಯಂತೆ ಹಾರುತ್ತ ಭಟರಾಗ
ಬಲ್ಲಾಳ ನೃಪಗೆ ಕೈಮುಗಿದು ॥೨೦೫॥

ಸದರಿನೊಳಗೆ ಕುಳಿತು ಚದುರ ಬಲ್ಲಾಳರಾಯ
ಕರವಿಡಿದು ತನ್ನ ಮಂತ್ರಿಯನು
ಮುಳುಗುವ ತೆರ ಬಂತು ಮುದಿಯ ಕಂಪಿಲನಿಗೆ
ನಗುತ ಬಲ್ಲಾಳನಾಡುವನು ॥೨೦೬॥

ತಿಳಿಯಲಿಲ್ಲವೆ ತನ್ನ ಬಗೆಯ ಬಾಲನ ಕಳುಹಿ
ಮೊಗವ ಕಾಣನೆ ಮಗನೆನುತ।
ಬಳೆಯ ತೊಟ್ಟನೆ ತಾನು ಈ ತರಳನೊಳ ಗೆದ್ದು
ತಿರುಗಬಲ್ಲನೆ ತನ್ನ ಪುರಕೆ ॥೨೦೭॥

ಹೋಗಬೇಕೆನುತಿರ್ದೆ ನಾನಾಗಿ ಮೊದಲವನ
ಬೇರ ಕೀಳ್ವರೆ ಬುಡ ಸಹಿತ ।

ಕಾಲಿಗೆ ತೊಡರ್ದಂತೆ ತಾ ಬೇಡಿ ಅರಸುವ ಮದ್ದು
ತಾನಾಗಿ ಎಳತಂತು ವಿಧಿಯು ॥೨೦೮॥

ಗಿಳಿಯು ಬೆಕ್ಕಿಗೆ ಸಿಕ್ಕಿ ಉಳಿದು ಹೋಗುವುದೆ ಮಂತ್ರಿ
ಯಮನೂರ ಸೇರಿದ ಮನುಜ ।
ಮರಳುವ ತೆರನುಂಟೆ ಮರುಳ ಕಂಪಿಲ ಕೆಟ್ಟ
ಬಿಡುವಾಗ ಜೀವ ಮುಪ್ಪಿನಲಿ ॥೨೦೯॥

ಬಡಪ್ರಾಣಿ ಎನುತಲಿ ತಡೆದು ಬಂದೆನುತ್ತರವ
ಹುಡುಗ ಮೂಳವನಿಗೆ ಜನಿಸಿ ।
ತೊಡರಾದ ಬೇರಿಗೆ ಬಿಸಿನೀರ ಎರೆದಂತೆ
ಬಲಗಾರರೊಡನೆ ತಾ ಕೆಣಕಿ ॥೨೧೦॥

ಎಷ್ಟು ಕಾಲಗಳಿಂದ ಎನಗುಂಟು ಕಂಪಿಲ
ಸುಟ್ಟು ಬೂದಿಯ ಮಾಡೊ ಛಲವು ।
ಕಟ್ಟಿಕೊಳ್ಳಲು ರಾಜ್ಯ ಕಳ್ಳನಂದದಿ ಇರ್ದು
ಬಿಟ್ಟು ಪಾಲಿಸಿದೆ ಈ ವರೆಗೆ ॥೨೧೧॥

ಆಡುವ ಬಲ್ಲಾಳ ಬಾಯಿಗೆ ಬಂದಂತೆ
ಕೂಳಿನ ಸಿರಿಯ ಮದದೊಳಗೆ ।
ಬಾಲನ ಬುದ್ಧಿಯ ಕಾಣದಿಲ್ಲಿಗೆ ಬಂದು
ವಾಲೆಯ ಬರಸೊಮ್ಮೆ ಪೇಳ್ವ ॥೨೧೨॥

ಕರೆಸಿದ ನೃಪನಾಗ ಬರೆವ ಕರಣಿಕರನು
ಬರೆಯಲು ಬಲ್ಮೆ ಲೇಖನವ ।
ಹುಡುಗನ ಮಾತೇನು ಪಡೆದವರ ಕರೆಸೆಂದು
ಹೊರಡುವ ಬಲ್ಲಾಳ ಭೂಪ ॥೨೧೩॥

ಶ್ರೀಮತು ಸಚ್ಚಿತ ಆನಂದ ಪರಿಪೂರ್ಣ
ದೇವೇಂದ್ರ ಸಮಗಾತ್ರ ಬಲ್ಲಾಳ।
ಮಾಡುವ ವಿನಯಾರ್ಥ ಖೂಳರಾಮಗೆ ನಿಮ್ಮ
ಜಾಳು ಕಂಪಿಲನ ಕರೆಸೆಂದು ॥೨೧೪॥

ಶುನಿಯೊಳು ಮದಗಜ ಕದನಕ್ಕೆ ನಡೆವುದೆ
ಇದಿರಹುದೆ ಇಲಿ ಮಾರ್ಜಾಲಕ್ಕೆ ।
ಮಂ[ದಹ] ಕಂಪಿಲನ ಬಾಳು ಸುಡಲೀಗ
ಬರಹೇಳೊ ಹುಡುಗನ ಯಾಕೆ ಕೊಲಿಸುವೆ ॥೨೧೫॥

ಹೀನಮಾನಗಳೆತ್ತಿ ಕಾಗದವ ಬರೆಯಲು
ಸ್ಥಾನಪತಿಗಳ ಕರಕಿತ್ತು।
ಹೋಗಿ ರಾಮನ ಬಳಿಗೆ ಮಾತಾಡಿ ಲೇಖನವಿತ್ತು
ಸಾರೀಗಳೆ ಕೊಡಿ ಕರದಿ ॥೨೧೬॥

ರಾಯನಪ್ಪಣೆಯಾಗೆ ಸ್ಥಾನಪತಿಗಳು ನಡೆದು
ಕಾಗದ ಇರಿಸಿ ಕರ ಮುಗಿದು ।
ಮಾರಿಯ ಹಗೆಗೊಂಡು ಕೋಣ ಬದುಕುವುದೆ
ನೀಗುವರೆ ನಿನ್ನ ತಲೆ ರಾಜ ॥೨೧೭॥

ಬಾಯಿದೆರೆಯನು ಕೇಳಿ ಕಾಲಾಗ್ನಿ ಕೋಪದೊಳು
ಮೇಲೆ ಲೇಖನವ ನೋಡುತಲಿ ।
ಸೀಳಿ ಕಾಗದ ರಾಮ ಸಿಂಹದ ಮರಿಯಾಗಿ
ದೂಡಿವರ ಬಾಯನು ಬಡಿದು ॥೨೧೮॥

ಹೊಡೆಸುವೆ ಶಿರಗಳನು ಧುರದ ಒಳಗೆ ನೋಡಾ
ನುಡಿವ ಮಂತ್ರಿ ಹೇಜೀಬಿಕೆಯ।
ಕೆಡುಗಾಲ ಬಂದಿತೆ ಜಡದ್ರೋಹಿ ಬಲ್ಲಾಳಗೆ
ತರಳ ಮುರಿಯಲು ಪಿತ ಬರನೆ ॥೨೧೯॥

ತರಳ ಪಿಡಿಯಲು ಕಾರ್ಯ ಮುರಿದೊಡೆ ಬಾರದೆ
ಗರ್ವದ ಮದವೆ ಬಲ್ಲಾಳಗೆ ।
ಮರಿ ಹಾವು ಕಡಿಯಲು ಮೃತವನೆಯ್ಯರೆ ಬಂದು
ಹುಡುಗ ಮಿಂಡನ ಕಡಿದಟ್ಟೋ ॥೨೨೦॥

ಮೊಲನ ಹಿಡಿಯದ ನಾಯಿ ಹೆಬ್ಬುಲಿಯ ಕೊಲ್ಲುವುದೆ
ಸುಡು ನಿಮ್ಮ ನೃಪನ ಪೌರುಷವ ।

ಹಡೆದವನು ಬರಲೆಂದು ನುಡಿದ ನಾಲಗೆ ಕರವ
ಅರಿಯದಿರಲು ರಾಮುಗನೆ ||೨೧||

ಓತಿಗಂಜುವ ಬಂಟ ರಣಭೂತ ಕೊಲ್ವನೆ
ಕೋತಿಗಂಜುವ ಮುದಿನಾಯಿ ।
ಬೇಂಟೆಯ ತರುವುದೆ ಹೊರಡೊ ಜಗಳಕೆ ಮೂಳ
ಇದ ಬಲ್ಲನೆ ನಿನಗುಪ್ಪ ||೨೨||

ಬರೆಸಿದ ಬದಲಾಗಿ ಭಲ ಬರುವ ಲೇಖನವ
[ಸಾರಿದ] ಜರಿದು ಕ್ಷೀಣದಲಿ ।
ಶಿರಹಿಡಿದು ನೂಕಿಸಿ ಬಂದ ಹೆಜೀಬರನು
ಬಿಡಿಸಿದ ಊರ ಲೆಗ್ಗೆಯನು ||೨೩||

ತಿಳಿದೆನೊ ಎಲೆ ಮಗನೆ ಮೊದಲ ಕಾಳಪಿತನ
ತರಳತ್ವದೊಳಗೆ ಭಲಪಂಥ।
ಗುರುರಾಯ ನಿಮ್ಮಯ ವರಪ್ರದ ಕೃತಿಯೊಳು
ಬರಬೇಕು ಜನಕ ತಾ ಗೆದ್ದು ||೨೪||

ದಯಮಾಡಿ ಇಂದಿಗೆ ರವಿ ಕಡಲ ಸೇರಲು
ಮರೆಗೊಂಡು ಹೇಮಾದ್ರಿ ಗಿರಿಯ ।
ಹರಸಿ ವಾಲಗವನು ನಡೆಯಲು ಜಟ್ಟಂಗಿ
ನೃಪನು ತನ್ನಯ ಅರಮನೆಗೆ ||೨೫||

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಧವಳಾಂಗ ವಿರುಪಾಕ್ಷಲಿಂಗ।
ತರಳ ರಾಮನು ಹೋಗಿ [ವೈರಿ] ಬಲ್ಲಾಳನ
ಪುರವ ಮುತ್ತಲು ಮೂರು ಸಂಧಿ ||೨೬||*

❖❖

* + ಅಂತು ಸಂಧಿ ೩ ಕ್ಕಂ ಪದನು ೬೧೦ ಕಂ ಮಂಗಳ ಮಹಾಶ್ರೀ

ಸಂಧಿ : ನಾಲ್ಕು

❖

ಹೊಯ್ಸಳ ಬಲ್ಲಾಳನೊಂದಿಗೆ ಯುದ್ಧ

---

*ಶ್ರೀ ಗುರುವೆ ಸಚ್ಚಿತ್ತ ಈರೇಳು ಭುವನಕ್ಕೆ
ಆಧಾರ ಕರ್ತ ಅವಿರಳನೆ ।
ಪಾಲಿಸು ವರಮತಿಯ ಪಂಚವಕ್ತ್ರದ ದೇವ
ಶ್ರೀ ಗೌರಿಗಂಗೆ ಪ್ರಿಯವರನೆ ॥೧॥

ಕುಂಜರ ವೈರಿಯ ಕರದೊಳು ನೊಂದಾನ
ಮಗಳ ಮೈಬಣ್ಣ ಅಂಜದೆ
ಒಡಲಿಗೆ ಇಟ್ಟೆ ಒಡಲಿಗೆ ಉರಗ
ಶುಂಡಿಲ ಬೆನವ ಕೊಡು ಮತಿಯ ॥೨॥

ಕಂದರ್ಪ ಪಿತನ ತಂಗಿ ವಲ್ಲಭನಣ್ಣ
ತಂದೆಯ ಸಖನ ವೈರಿಯನು ।
ಕೊಂದವನೆ ಕರಿಚರ್ಮನೆಂಬ ನಾಮವ ಪಡೆದ
ನಂದಿವಾಹನ ಕೊಡುಮತಿಯ ॥೩॥

ಹಾವಿನ ಹಗೆಯನು ಏರಿದವನ ಮಗನ
ಬೂದಿಯ ಮಾಡಿ ಭಸಿತವನು ।
ಓಲಾಡಿ ಧರಿಸಿದೆ ಬೇಡಿಕೊಳ್ಳಲು ರತಿಯು
ಪ್ರಾಣವಿತ್ತವನೆ ಕೊಡು ಮತಿಯ ॥೪॥

---

* + ಬಲ್ಲಾಳನ ಯರಡನೆಯ ಸಂಧಿ. ಶ್ರೀ ಗುರು ಬಸವಲಿಂಗಾಯನ್ನಮಃ। ಹಂಪಿ ವಿರುಪಾಕ್ಷಸ್ವಾಮಿಯವರ ದಿವ್ಯಾಚರಣಾರವಿಂದಾನೇ ಗತಿ ಮತ್ತೀ॥ ನಿರ್ವಿಘ್ನ ಮಸ್ತು॥ ಬಲ್ಲಾಳನಾದೊಡ ಜಗಳಾದ ಸಂಧೀ॥ (ಮೂ)

ಕಾಶಿ ರಾಮೇಶ್ವರಕೆ ಈಸು ವೆಗ್ಗಳವಾದ
ಶ್ರೀ ಕೈಲಾಸ ಹಂಪೆಯಲಿ ।
ಲೇಸಾಗಿ ನೆಲಸಿದ ಹರಶಂಭು ವಿರುಪಾಕ್ಷ
[ಉಸುರು] ಮನಕೆ ಮುಂಗತೆಯ ||೫||

ಲಾಲಿಸಿ ಮುಂಗತೆಯ ಧರ್ಮಜ್ಞಾನವುಳ್ಳವರು
ಆಡದೆ ಅಡ್ಡಮಾತುಗಳ ।
ಓದಲು ಮತಿಹೀನ ಪರಧ್ಯಾನದಿಂ ಕೇಳೆ
ಶ್ವಾನಜನ್ಮದ ನರಕ ಬಿಡದು ||೬||

ಚಿತ್ತ[ದಿ] ಬೇಸತ್ತುದೆ ಪುಸ್ತಕವ ಕಟ್ಟೆನ್ನಿ
[ಹೊ]ತ್ತಿನ ಮದ ನಿದ್ರೆಬರಲು ।
ವ್ಯರ್ಥ ಸಾಧನ ಮುಂದೆ ಮುಕ್ತಿ ದೊರೆಯದು ಗಿಳಿಯು
ಮತ್ತೋದಿ ಮಲವ ತಿಂದಂತೆ ||೭||

ಕೇಳಬೇಕೆನಲವರ್ಗೆ ಪೇಳುವುದು ಇನ್ನೊಮ್ಮೆ
ಬಾಲರಾಮನ ಸತ್ಯಕಥೆಯ ।
ಪ್ರಾಣಕಾಂತೆಯರುಳಿದು ಪರಸತಿಯರು [ತನ್ನೇ]
ಕಾಂ[ತ] ಕಣ್ಮನದೊಳ[ಗಿರದ] ||೮||

ರಾಯ ಬಲ್ಲಾಳನಾ ಸ್ಥಾನಪತಿಗಳು ಪೋಗಿ
ಕ್ಷೀಣವಾದುದು ಕಂಡೆ ಮನುಜ ।
ಬೇಗದಿಂದಲಿ ಹೋಗಿ ರಾಯ ಬಲ್ಲಾಳಗೆ
ಪೇಳುವದು ಜಲವನೊತ್ತುತಲಿ ||೯||

ರಾಯ ರಾಜೇಂದ್ರನೆ ಕೇಳಯ್ಯ ಕಿವಿ ತುಂಬ
ಕಾಗದವಿರಿಸಿ ಕರಮುಗಿದ ।
ನೀರನಿಳುಹಿದ ಸಣ್ಣ ಪೋರನು ನಮ್ಮ
ಹೇಳಲಾರೆನು ಹೀನ ಸ್ವರವ ||೧೦||

ನೋಡರಸ ಲೇಖನವ ಪಾದಕ್ಕೆ ತಿಳಿವುದು
ಆಡಲಮ್ಮೆವು ಅವನಂತೆ ।

ಕೋಡಗ ಕಪಿಮೂಳ ಮೂಡಿ ಮಳೆಯನು ನಿಮ್ಮ
ನಾಯು ಸಮಾನ ಮಾಡಿದನು ||೧೧||

ಹುಲಿಯ ಹೆಣ್ಣನು ಸಣ್ಣ ಮೊಲ ಬಂದು ಕೇಳುವ
ತೆರನಾಯಿತೆಂದು ಹೇಜೀಬರು ।
ತರಳ ತಬ್ಬಲಿ ಮೂಳ ತಲೆಯ ಮೇಲಣ ಬಪ್ಪು
ಹರದಿಲ್ಲ ಹಲವ ಬೊಗಳುವನು ||೧೨||

ಆಡಿದನವ ತನ್ನ ಬಾಯಿಗೆ ತಿಳಿದಂತೆ
ಕೇಳಿದೆವು ಕಿವುಡರಂದದಲಿ ।
ಆಡಿರಲು ಪ್ರತಿಮಾತ ಚೆಂಡಾಡಿಸುವ ತಲೆಯನ್ನು
ಮೂಕ[ರಾಗೆ]ದ್ದು ಮಿಕ್ಕು ಬಂದು ||೧೩||

ಸ್ಥಾನಪತಿಗಳ ಮಾತ ಕೇಳುತ ನೃಪನಾಗ
ಭೂಮಿಯ ಹೊಡೆದು ಗರ್ಜಿಸಿದ ।
ಕೂರಂಬ ತಾಕಿದ ಕೇಸರಿಯಂತೆ ನಯನದಿ
ತೋರಲು ಕಿಡಿಸೂಸಿ ||೧೪||

ಹೊಡೆಯಲು ಭೇರಿಯ ಬಲ ಬರಲಿ ಚತುರಂಗ
ಸಿಡಿಲ ರೂಪಾಗಿ ನೃಪವರನು ।
ಹುಡುಗ ಮೂಳನ ಹಿಡಿದು ಬಡಿಯುವೆ ಇಲಿಯನು
ಹಿಡಿದು ಮಾರ್ಜಾಲ ನುಂಗುವಂತೆ ||೧೫||

ಬಂಟನಾದನೆ ಈಗ ಬಡನಾಯಿ ಕಂಪಿಲನು
ಸೆಂಟಿದ ಪೋರನ ಕಳುಹಿ ।
ಸುಂಟರ ಗಾಳಿಗೆ ತರಗೆಲೆ ನಿಲ್ಲುವುದುಂಟೆ
ಒಂಟಿ ರಟ್ಟೆಯ ಹಿಡಿದು ಬಡಿವೆ ||೧೬||

ಕೆಂಡಕಿರುವೆ ಮುತ್ತಿ ಹಿಂದಕೆ ತಿರುಗುವುದೆ
ಗಂಡಭೇರುಂಡನು ಕರಿಯ।
ಕಂಡರೆ ಬಿಡುವುದೆ ದಂಡು ಕೂಡಲಿಯೆಂದು
ಮುಂಗೈಯ ಕಡಿಕೊಳುವ ರಾಯ ||೧೭||

ರಣಗಾಳೆ ಸಾರಲು ಒದಗಿತು ಬಲ ತುರಗ
ಕೊಡು ನಮಗೆ ಭೂಪ ವೀಳ್ಯವನು ।
ತೊಡೆ ಹೊಡೆದಾರುತ ಯಮದೂತರಂದದಿ
ಬಿಡುರಾಯ ತಡವೇಕೆ ಅಭಯ ॥೧೮॥

ಕೋಪಾಗ್ರದೊಳಗೇಳ್ವ ಭೂಪ ರಾಯನ ಕಂಡು
ನೀತಿಯ ಪೇಳ್ವನು ಮಂತ್ರಿ ।
ಸಾಕಯ್ಯ ಸೈರಿಸು ಮಾತಿನ ಬಿಗುವ್ಯಾಕೆ
ಜ್ಯೋತಿ ಪ್ರಕಾಶವೆಲ್ಲಿಹುದೋ ॥೧೯॥

ಶಕ್ತಿ ಸಾಹಸದೊಳ್ ಮದಸೊಕ್ಕಿ ಪೋಗಲು ಸಲ್ಲ
ಲಕ್ಷ್ಮೀಯ ಒಲುಮೆಯೆಲ್ಲಿಹುದೊ।
ಹುಚ್ಚಾಗಿ ಅಳಿವನೆ ಹತ್ತು ತಲೆಯವ ಕಪಿಯು
ಸುಟ್ಟು ಬರದೆ ಲೆಂಕೆಪುರವ ॥೨೦॥

ನರಿಯ ಕೊಲ್ಲಲು ಒಂದು ಹುಲಿಯ ಸಾಹ[ಸ ಬೇಡ]
ಗೆಲಬೇಕು ಕಾರ್ಯ ಸುಳುಹರಿದು।
ಮೊದಲಾಗಿ ಕಳುಹುವ ಬಲ ಕುದುರೆ ಮಂದಿಯ
ಹೊಡೆವನೊ ಮುರಿದು ಓಡುವನೊ ॥೨೧॥

ರಾಜೇಂದ್ರ ಬಲ್ಲಾಳ ಭೂಮಿಗೆ ಪೆಸರಂತೆ
ಬಾಲನೊಡನೆ ಕಾರ್ಯ ಸಲ್ಲ।
ಕಾಲಗತಿಗಳ ಮೂಲ ಯಾರಿಗೆ ತಿಳಿಯದು
ಹೋಗಿ ಮುರಿಯರಿಯಲು ಹೀನ ಬಿಡದು ॥೨೨॥

ಯುಕ್ತಿಯಲಿ ಗೆಲಿಬೇಕು ಶಕ್ತಿ ಕಾಣುವ ತನಕ
ಹೊತ್ತಿನ ಗುಣವ ಕಾಲ್ಗತಿಯ।
ರಕ್ಕಸರ ಹೊಳಲನು ನರನು ಮುತ್ತಲು ಜಗ[ದ]
ಸೂತ್ರಧಾರಿಯೆ ತಾನೆ ಬಲ್ಲ ॥೨೩॥

ಮೆಚ್ಚಿದ ನೃಪನಾಗ ಮಂತ್ರಿ ಯಲ್ಲರಸನ
ನಿಶ್ಚಯದ ಮಾತೆಂದು ಮನದಿ ।

ತಟ್ಟನೆ ಕರೆಸಿದ ಮಂದಿ ತುರಗವ ರಾಯ
ದಿಟ್ಟವಾದಂಥ ಮನ್ನೆಯರ ||೨೪||

ಕರೆಸಿದ ದಳವಾಯಿ ಮುದ್ದನ ಮಗ ಧೀರ
ಮೊನೆಗಾರ ಸಿದ್ಧರಾಜಯನ।
ಹೊಡಿ ಹೋಗು ರಾಮನ ಹಿಡಿದು ಕೈಸೆರೆಯನು
ಕೊಡುವೆನು ಬೇಕಾದ ಬಲವ ||೨೫||

ಬುದ್ಧಿಯೆನುತಲಿ ಅಡ್ಡಬಿದ್ದು ಸಿದ್ಧರಾಜ
ತಬ್ಬಲಿಯ ಮಾತೇನು ಭೂಪ ।
ಕದ್ದೋಡಿ ಯಮ[ನ ಮೊರೆ] ಬಿದ್ದರೆ ತಾರದಿರಲು
ಸಿದ್ಧರಾಜನೆ ಎನ್ನ ಬೇಡಿ ||೨೬||

ಕೊಡಿಸಿದ ಹೆಚ್ಚಿನ ಉಡುಗೊರೆ ಉತ್ಸಾಹ
ಕರಿ ತುರಗ ಕಾಲಾಳು ಬಲವ ।
ಸರಿಮಾಡಿ ಜಗಳಕ್ಕೆ ಬಾಣ ಬತ್ತಿಯನೆರಡು
ಸವಲಕ್ಷದೊಳಗೆ ಹೇರಿಸಿದ ||೨೭||

ಜೇರಿಯ ಕಾಪಿನ ಮಂದಿ ಬಿರಿದಿನೆಕ್ಕಟಿಗರು
ಗುರಿಕಾರ ಬಿರಿದ ಬಾವುಲಿಯ ।
ಹುದುರಿನೊಳಗೆ ನಿಂದು ಕರಗಳ ಮುಗಿಯಲು
ನಡೆಸಯ್ಯ ತಡವೇಕೆ ಮಾಳ್ಪೆ ||೨೮||

ಭೇರಿ ಕಾಳೆಯ ಸ್ವರವು ಭೋರೆನಿಸಿ ನಗರದಿ
ಊರ ಬಾಗಿಲ ತೆಗೆ ಎನಲು।
ಮೂಳನ ಭಯಕಂಜಿ ದ್ವಾರವನು ಮುಚ್ಚುವರೆ
ಕೀಳಿ[ರಿ] ಲಾಳಮುಂಡಿಗೆಯ ||೨೯||

ಹೋಗಾಡಲು ಬಲ ತುರುಗ ಎಡದೆರನಿಲ್ಲದೆ
ಎದೆಗಳೊಡೆವಂತೆ ವೈರಿಗಳ।
ದಿಗಿಲು ಗುಟ್ಟುತ ಬಂದು ಇಳಿಯಲು [ಮಾಹರ್ನವಮಿ]
ಸದರ ವಾಲಗದ ಬಯಲೊಳಗೆ ||೩೦||

ಬಂದ ಪೌಜಿನ ಬಗೆಯ ತಂದು ರಾಮಗೆ ಪೇಳೆ
ಹಿಂದಕ್ಕೆ ತೆಗೆದು ಮುತ್ತಿಗೆಯ।
ಬರಮಾಡಿ ಬಲುಧೀರ ಮೊನೆಗಾರ ಮನ್ನೆಯರ
ಕೊಡಿಸಿದ ಬಾಣ ಬತ್ತಿಗಳ ॥೩೧॥

ಯಾವಲ್ಲಿ ಜಗಳದ ತಪವಡನೆ ಪಿಡಿದು
ರಾಯ ಕಟ್ಟಿಗೆ ನೇಮಿಸಲು ।
ತಾನೊಂದು ಪೌಜಾಗಿ ರಾಯ ರಾಮನು ನಿಂತು
ಏರಲು ಪೌಜ ಜಗಳಕ್ಕೆ ॥೩೨॥

ಕಚ್ಚಲು ರಣ ಚೂಳಿ ಕತ್ತಿ ಭಲ್ಲೆಯ ಕಿತ್ತು
ಹೊಕ್ಕರು ತುರಗ ರಾವುತರು ।
ಮುಕ್ಕಣ್ಣ ನೇಜಯ ಸುರಗಿ ಚಕ್ರಗಳಿಂದ
ಇಕ್ಕೆಲದೊಳಗೆ ಸಮರಸವು ॥೩೩॥

ಕೊಡುತಲಿ ಜಗಳವನು ಹಿಂದಗಿದು ರಾಮನ ತುರಗ
ಅಡವಿನ ಬಲದ ಮೇಲ್ಕೆಡಹಿ ।
ಕಡುಕೊಂಡು ಬರಲಾಗ ಬಲ್ಲಾಳರಾಯನ ಪೌಜು
ಬಳಸ ಮುತ್ತಲು ರಾಮನ ಪೌಜ ॥೩೪॥

ರಾಯ ಬಲ್ಲಾಳನ ಮೂರು ಸಾವಿರ ಮಂದಿ
ಸೀಗೆಲಡಗಿದ ಬಾಳೆಯಾಗೆ ।
ನೂರಾರು ಬಾಣಗಳ ಎ[ಚ್ಚು] ಬಾಣೆಯ ಮುದ್ದ
ಕೋಣನಂದದಿ ಹೊಕ್ಕು ಕಡಿದ ॥೩೫॥

ಹೊಡೆ ಇವರ ತಲೆಯನು ಎಡಗೈಯ ಹಂಪನೆ
ಹೊಕ್ಕು ಪಿಡಿದು ಕಾಲೊಗೆವುತಲಿ।
ಮುಳುಗಿತ್ತು ಪೌಜೆಮ್ಮ ದಳವಾಯಿ ಮುದ್ದನ
ತನುಜ ತುಳಿಸಿದ ಸಿದ್ಧರಾಜಯ್ಯ ॥೩೬॥

ಮುತ್ತಲು ಬಲ್ಲಾಳನ ಮೂವತ್ತು ಸಾವಿರ ಪೌಜು
ಸತ್ತ ಜೀವಿಗಳ ತುಳಕೊಂಡು ।

ತಾಯಿ ಗರ್ಭವ ಹೊಗಲು ಬಿಟ್ಟು [ಬಿಡೆ]ವು ಎಂದು
ಹಾರುತ ತೊಡೆಯ ತಟ್ಟುವರು ||೩೭||

ಹುಡುಗನ ಮಾತಿಗೆ ಬರುವರೆ ಜಗಳಕ್ಕೆ
ಎಳೆತಂದು ಹಾಕಿತ್ತು ವಿಧಿಯು ।
ಕಡಿವನು ಕಂಪಿಲನ ಹುಡುಗನೆಲ್ಲೆನುತಲಿ
ತುಳಿಸುತ್ತಿರಲು ಬೆನ್ನಮೇಲೆ ||೩೮||

ಜೇರಿಸಿ ಕವಿಯಲು ರಾಯನು ಸಿದ್ಧರಸ
ದಾರಿ ಬಿಡದಂತೆ [ಹೊ]ಣಕಿ[ರಿದು] ।
ನೂರಾರು ತಲೆ ಹೊಡೆದು ನೂಕಲು ಮುಂದಕ್ಕೆ
ರಾಯ ರಾಮನ ಮಂದಿ ಮುರಿಯೆ ||೩೯||

ತೀರಿ ಬಂದಿರೆ ನಿಮ್ಮ ಊರ ಹೆಂಡಿರ ಬಿಟ್ಟು
ಖೂಳ ಬಲ್ಲಾಳನ ತಿಳಿಯದೆ ।
ತೋಡಿ ಭೂಮಿಯ ಹೊಗಲು ಬಿಟ್ಟು ಮಡುಗುವೆಯೆಂದು
ಹಾರುತ ಬೆನ್ನಡಿ ಹೊಡೆಯೆ ||೪೦||

ತರಳನ ಮಾತಿಗೆ ಹರಿಣ ವ್ಯಾಘ್ರುವ ಕಂಡು
ಹೆದರಿ ಓಡುವ ತೆರದಿ ।
ಮುರಿದು ರಾಮನ ಮಂದಿ ತಿರುಗೆ ಹೆದರಬೇಡಿರೊ ಎಂದು
ಚದುರ[ರಣ್ಣ] ತಮ್ಮ ಸಿಡಿಲಿನಂತೆರಗೆ ||೪೧||

ಹರಶಂಭು ಜಟ್ಟಂಗಿ ವರದ ರಾಮನ ನೆನೆದು
ಗಿರಿಜಾವಲ್ಲಭನೆ ಕಾಯೆಂದು ।
ಸ್ಮರಿಸಲು ಸ್ತುತಿಮಾಡಿ ಸೋಮಧರನು ಬಂದು
ಬೆರೆದನು ಬಲದ ಭಾಗದಲಿ ||೪೨||

ರೂಢಿಗೀಶನು ಬಂದು ಕೂಡಲು ಬಲದೊಳಗೆ
ರೋಮಗಳು ಸರಳಾಗಲಿರ್ವರಿಗೆ ।
ವೀರಭದ್ರನು ದಕ್ಷಾಧ್ವರಕೆ ನಡೆಗೊಂಡಂ[ತೆ]
ತಿರುಗಿ ನಡೆಯೆ ಇರ್ವರು ||೪೩||

ಗರುಡನು ಉರಗಗೆ ಮೊರೆದು ಎರಗುವ ತೆರದಿ
ಗಿರಿಗೆ ಬಂದಡರ್ವಂತೆ ಸಿಡಿಲು ।
ಎರಡು ಭಾಗದ ಮೇಲೆ ಅನುಜರಿರ್ವರು ಏರೆ
ಕೊರೆದು ಕೆಡವುತ ಕಣಿಕೆ ತೆರದಿ ॥೪೪॥

ಹೊಕ್ಕರು ಬಲದೊಳಗೆ ಮೃಗದೊಳಗೆ ಸಿಂಹದ
ಮರಿ ಬಂದು ಮುರಿದಿಡುವ ತೆರದಿ ।
ಎತ್ತಿ ಹೊಡೆಯಲು ತುರಗ ಹತ್ತಿರುವ ರಕ್ತ[ದಿ]
ಬಿಚ್ಚಲು ನಾಲ್ಕು ಹೋಳಾಗಿ ॥೪೫॥

ತೃಷೆಯಾದ ಕರಿಗೊಂಡ ರಸದಾಳ ಹೊಲದೊ[ಳಗೆ]
ಕೊಸರಿ ಮುರಿವಂತೆ ಕೊಲ್ಲುವರು ।
ಖುಶಿಯ ಕಳೆಯಲು ತಮ್ಮ ಹೊಸ ಹಸ್ತ ದಣಿಯಲು
ಎಸೆದಾಡುತಿರಲು ತಲೆ ಬುರುಡೆ ॥೪೬॥

ಹುಚ್ಚಕೋಣನ ತೆರದಿ ಎತ್ತಿ ಒಗೆಯುತ ಮುದ್ದ
ದೊಕ್ಕೆ ಸಮೆದ ಕರಿಯ ತೆರದಿ ।
ಒತ್ತಿನೊಳಗೆ ಸಂಗಯ್ಯ ಕಟ್ಟಿ ಜೀಬಿಯ ಬಳಸಿ
ಲೆಕ್ಕವಿಲ್ಲದೆ ತುರುಗವಿಡಿಯೆ ॥೪೭॥

ಎಡಗೈಯ ಹಂಪನು ಕೊರೆಯು[ತಿರೆ] ಮೂಗನು
ಮುರಿದೋಡಿ ಅಗಳ ಬೀಳುವರ ।
ಚರಣವ ಪಿಡಿದು ಒಗೆಯುತ ರಾಮರ ಜಟ್ಟಿ
ಹಿಡಿದನು ಕರಿಯ ಹನ್ನೆರಡ ॥೪೮॥

ರಣಮಯವಾಗಲು ನಯನಗಳು ಕಾಂಬ[ಷ್ಟು]
ಹೆಣದ ಮೇಲ್ಹೆಣ ಬಿದ್ದು ಉರುಳೆ ।
ಪರಿಯಲು ಶ್ರೋಣಿತ ಹುರಿಮಂಜ ಗಿರಿಯೊಳು
ಗರೆದಂತೆ ಮುಂಗಾರ ಮಳೆಯು ॥೪೯॥

ದಳವೆಲ್ಲ ಬಯಲಾಗೆ ದಂಡಿಗೆ [ಮಗುಳ್ದರು] ಹಳ
ಬರ ಮಗ ಸಿದ್ಧರಾಜಯ್ಯ।

ತನಗೇನು ಗತಿಯೆಂದು ಇಳಿದು ಓಡಲು ಕಂಡು
ಹೆಡೆಗಟ್ಟಿನೊಳಗೆ ಪಿಡಿತರಲು ||೫೦||

ಕಂದ ರಾಮಯ್ಯನ ಮುಂದೆ ನಿಲ್ಲಿಸಿ ಹಂಪ
ದಂಡಿಗೆ [ಮಗುಳ್ದರೆ] ಇವನು।
[ಸೀಳುವೆ] ಮೂಗನು ಪ್ರತಿಪಾಲಿಸು ಭೂಪ
ಎಂಬುತ್ತ ಕರಗಳನು ಮುಗಿಯೆ ||೫೧||

ಕೊಲ್ಲಬಾರದು ಹಂಪ ಕೈಯೊಡನೆ ಹಿಡಿದವರ
ಒಳ್ಳೆಯ ಮಗನದರ ಮೇಲೆ ।
ಕೊಲ್ಲದೆ ಕರೆದೊಯ್ಯೊ ದಂಡು ಪಾಳೆಯಕೆಂದ
ಅಲ್ಲಿಗೆ ಮುಗಿಯೆ ರಣವಾರ್ತೆ ||೫೨||

ರಣವೆಲ್ಲ ಕೆಸರೇಳೆ ಸೆಣಸುವರಿಲ್ಲದೆ
ಹಿಡಿಸಲು ಧರ್ಮಗಾಳೆಯನು ।
ರಣವ [ಶೋಧಿ]ಸಿ ಕೊಟ್ಟು ಅಳಿದ ಮಂದಿಗೆ ಕಿಚ್ಚ
ಕೊಡಿ[ಸಿದನು] ರಾಮಭೂಪಾಲ ||೫೩||

ಸುಡಿ[ಸಿದ] ಮುನ್ನೂರು [ಅರೆ]ಗಾಯ ಏಳ್ನೂರು
ಬರೆದುಕೊಂಡರು ಲೆಕ್ಕವನು ।
ಒಡನೆ ಸಾವಿರವಾಗೆ ಪರಬಲೇಂದ್ರಗೆ ಸುದ್ದಿ
ಕೊಡಲಾಗ ಮಂತ್ರಿಯ ಮಗನು ||೫೪||

ಕಾಳಗವೆಂಬುದು ಕಡುಬ ಸಾಧನೆಯಲ್ಲ
ಮಾಡುವುದೇನು ಫಲ ತೀರೆ ।
ನೋಡುವರಳವಲ್ಲ ರಾಯ ಬಲ್ಲಾಳನಾ
ಕಾರ ಮಲಗಿತು ಮಂದಿ ತುರಗ ||೫೫||

ರಾಯ ಕಂಪಿಲಭೂಪಕುಮಾರ ಪಾಳ್ಯಕೆ ನಡೆಯೆ
ರಾಯ ವಜೀರರೆಡಬಲದಿ ।
ಸ್ನಾನ ಪಾನಗಳಾಗಿ ಷಡುರಸಾನ್ನವ ಸವಿದು
ಆನಂದ ಸುಖದೊಳಗಿರಲು ||೫೬||

ಮುತ್ತುವೆ ನಗರವ ಹೊತ್ತೇಳುತೆ ಮುಂಜಾನೆ
ಮತ್ತೆ ಸೋಸುತ್ತ ರಣವನು ।
ಕಟ್ಟಿಗೆ ಚರರನು ಅ[ಟ್ಟಿ] ಕೊ[ಡಲು] ಸುದ್ದಿ
ಕೊಟ್ಟು ಬರಲಾಗ ಚರರ್ಹೋಗಿ ॥೫೭॥

ರಣದೊಳು ಪಿಡಿದಿರ್ದ ಕೈಸೆರೆ ಮಂದಿಯ ತಂದು
ಒಡೆಯ ರಾಮೈಗೆ ತೋರಿದರೆ।
ಕಡು ಚೆಲ್ವ ಚಪಳನ ಪಿಡಿದು ಮೂಗಿಗೆ ಸುಣ್ಣ
ಎಳೆದು ಬಿಡಿಸಿದ ಧರ್ಮ ಸೆರೆಯ ॥೫೮॥

ರಾಯ ರಾಮನು ಇತ್ತ ಪ್ರೇಮದೊಳಿರಲಾಗಿ
ಕೇಳಿ[ರಿ] ಬಲ್ಲಾಳನ ಪ್ರತಾಪ ।
ಹಾಳಾಗಿ ಬಲವೆಲ್ಲ ಹಳ್ಳ ಕೊಳ್ಳವ ಬಿದ್ದು
ಓಡುವ ಪರಿಯಲಾಪುದು ॥೫೯॥

ಒಚ್ಚೆ ಓಣೆಯ ಪಿಡಿದು ಬಿದ್ದು ತೆವಳುತ ತಲೆಯ
ಎದ್ದು ತೋರಲು ಬರುವುದೆನುತ ।
ದಿಬ್ಬ ಸಿಕ್ಕಲು ಒಂದು ಮಗ್ಗಲು ಉರುಳುತ್ತ
ಬಿದ್ದರು ಕೆಲರೋಡಿ ಜಗಳ ॥೬೦॥

[ಸಾಯೆ] ಸಾಯದ ಮಂದಿ ಭೋರಿಡುವ ರಕ್ತದಿ
ಮಾರಿಗೊಂಡಡೆ ಎದ್ದು ಕೆಡೆದು ।
ನೀರು ಕಾಣುತ ಕುಡಿದು ಕೆಳ ಚೀರಿ ಬಿಡುವರು
ಜೀವ ನೂರಾರು ಕಡೆ ಮೊದಲೆ ॥೬೧॥

ಕಂಡನು ಬಲ್ಲಾಳ ಚಂದ್ರಸಾಲೆಯನಡರಿ
ದಂಡೆಲ್ಲಿ ಅಡಗಿತೊ ಶಿವನೆ ।
ನುಂಗಿತೆ ರಣಭೂಮಿ ರೂಢಿಯೊಳ್ ರಾಮನು
ಚಂದ್ರನಹುದು ಪ್ರತಿ ಭೀಮ ॥೬೨॥

ಚಂದವಾಯಿತು ಮಂತ್ರಿ ಮಂಡೆ ಬೋಳಿಸಿದಂತೆ
ಒಂದಾರೆ ಸುಳುಹಿಲ್ಲ ರಣದಿ ।

ಬಿಂದಿಗೆಯನೊಡಕೊಂಡ ಬಾಲನ ತೆರನಾಗಿ
ಹಿಂದೆ ಕೊಂಬರೆ ಬಿಡಲಿಲ್ಲ ||೬೩||

ಎರಳೆಯ ಮರಿ ಬಂದು ವ್ಯಾಘ್ರನ ಕೊಂದಂತೆ
ತೆರನಾಯಿತಲ್ಲ ಧರೆಯೊಳಗೆ ।
ಮೊಲ ನಾಯ ಕಡಿಯಿತ್ತು ಎಂಬರು ಧರೆಯೊಳು
ಸರಿಯೆಂಬುದಾಗಿ ತೋರುವುದು ||೬೪||

ಗೀಜಗ ಗಿಡುಗನೊಳ್ ಕಡಿದಾಡಿದ ತೆರ ಮಂತ್ರಿ
ಮೂಗಿನಲಿ ಬೆರಳಿಟ್ಟ ನೃಪನು ।
ಗಾಜಿನ ಬಳೆತೊಟ್ಟ ಬಾಲೆರಿಗೆ ಕಡೆಮಾಡಿ
ಬೀಜಕೊಂದನು ಬಿಡಲಿಲ್ಲ ||೬೫||

ಹುಡುಗನೆಂಬರು ಮಂತ್ರಿ ಹೋಗಿ ಕಂಡವರೆಲ್ಲ
ಅಡಗಿಸಿದ ಕಲಿ ಪಾರ್ಥನಂತೆ ।
ಮೃಡನ ಮೋಹದ ಕಂದ ದಕ್ಷಾಧ್ವರವ ಹೊಕ್ಕು
ಸುಡಬಡಿದ ತೆರ ಬಂತಿಲ್ಲಿ ||೬೬||

ಚಿತ್ತದಿ ಕರಗುತ್ತ ಮತ್ತೆ ಬಲ್ಲಾಳರಾಯ
ಮತ್ತೊಮ್ಮೆ ಹೊರಡೆ ಹ್ಯಾಗಾಗುವುದೊ ।
ಶಕ್ತಿ ಮನದೊಳುಗುಂದಿ ತಾವರೆ ಎಲೆ ಉದಕ
ಇಪ್ಪಂತೆ ಇರಲು ಮನದೊಳಗೆ ||೬೭||

ರಾಯನ ಬಡಧೈರ್ಯ ಪ್ರಧಾನಗೆ ತೋರಲು
ಕೇಡಿಗೆ ಬೀಜ ದೇವರಸ ।
ರೂಢಿಯೊಳ್ ಬಲ್ಲಾಳ ತ್ರಾಣಿಯೆಂಬರು ಲೋಕ
ಆನೆ ಹಸಿದಾಗದೆ ಬಂತು ||೬೮||

ಒಂದು ಜಗಳಕೆ ಹೊರಟು ರಂಡೆಯಾದನುಯೆಂದು
ಕುಂಡಿ ಬಡಕೊಳ್ಳೆ ಸರಿಯವರು ।
ತಂದೆ ನೀನಪಕೀರ್ತಿ ನಿಮ್ಮಜ್ಜರು ತಲೆ ಬಾಳ್ದ
ಇಂದಿಗೆ ಮುಳುಗಿತ್ತು ನೃಪನೇ ||೬೯||

ಬಲ್ಲಾಳನೆಂದರೆ ಡಿಳ್ಳಿಗೆ ಹೆಸರಾದೆ
ಹುಲ್ಲು ಬಾಡನಿಗೆ ನೀ ಹೆದರೆ ।
ಎಲ್ಲರು ನಗರರಸೆ ಡಿಳ್ಳಿಯ ಸುರಿತಾಳ
ಜೊಳ್ಳು ಹೋಗೆಂದು ಉಗಿಯನೇ ॥೭೦॥

ಕುದುರೆ ಮಂದಿಗೆ ಏನು ಕಡೆಯೇ ಪಟ್ಟಣದೊಳು
ಬದಲಾಗಿ ದಂಡ ಕೂಡಿಸುವಾ ।
ಈ ದಿವಸ ಕಡೆಯಾಗೆ ಮುಳುಗಿದ ಬಲಕಂಜಿ
ಎದೆಗೆಡಲು ಬಿಡುವನೆ ರಾಮ ॥೭೧॥

ಧರಣಿಮಂಡಲಕೆಲ್ಲ ಹೆಸರೊಡೆದ ಬಲ್ಲಾಳ
ಶ್ವಾನ ಮೂಳನಿಗೆ ನೀ ಹೆದರೆ ।
ಅಣಕವಾಡರೆ ನಿಮ್ಮ ಕೂಡಿದ ಸತಿಯರು
ತಿಳಕೊ[ಳ್ಳು] ರಾಯ ಮನದೊಳಗೆ ॥೭೨॥

ಮಂತ್ರಿ ದೇವರಸನ ಮಾತು ನಿಶ್ಚಯವಾಗಿ
ಭೂಪ ಬಲ್ಲಾಳಗೆ ತೋರೆ ।
ಮಾತಿನ ಸುಳುವಹುದು ಮುಂದೆ ಬರುವುದನೀಗ
ಜ್ಯೋತಿಷ್ಯನಂತೆ ಪೇಳಿದನು ॥೭೩॥

ಪುಟುಮಾಡಲಗ್ನಿಯ ದಿಟವೆಂಬ ರೀತಿಗೆ
ರೋಷ[ವು] ಗವಿಸಲು ನೃಪಗೆ ।
ತಟ್ಟನೆ ಕರೆಸಿದ ಬಾವಾಜಿ ಮಲ್ಲಯ್ಯನ
ಇಷ್ಟ ಭೂಷಣಗಳ ತೊಡಿಸಿ ॥೭೪॥

ತುರುಗಾಯ ಬಾಲಗೆ ಮುರಿದ ಬಲ್ಲಾಳನೆಂದು
ಧ[ರೆಯರಿಯೆ] ಬಿಡದಪಕೀರ್ತಿ ।
ಕೊಡುವೆನು ಬಲ ತುರಗ ಒಡನೆರಡುಲಕ್ಷವನು
ಕಡಿಯವನ ಕುಲವಂಶ ಬಿಡದೆ ॥೭೫॥

ಕಟ್ಟು ಮಾಡುವ ತೆರಕೆ ಹೊಕ್ಕು ಕಾರ್ಯವ ಮಾಳ್ಪೆ
ಮಿಕ್ಕು ಮೀರಲು ಎನ್ನ ಕೈಲಿ ।

ಮತ್ತೆ ಮಾಡುವುದೇನೊ ಮರಣವು ತಪ್ಪದು
ಮಡದಿ ಮಕ್ಕಳು ನಿಮ್ಮವಯ್ಯಾ ||೭೬||

ಕೇಳಿರೈ ಪ್ರಧಾನ ನೀ ಹೋಗಿ ಮಂತ್ರಿಗಳೆಲ್ಲ
ಬಾವಾಜಿ [ಯಾ]ಡೊ ವಾಕ್ಯಗಳ ।
ಓಂ ಎಂಬ ಅಕ್ಷರದಿ [ಚೇಳ] ಸಯವಾಗಲು ಮುಂದೆ
ಕಾರ್ಯ ಗೆಲ್ಲುವುದೆ ಶುಭದೊಳಗೆ ||೭೭||

ರಾಯರೊಳ್ ರಾಯನೆ ರಣಧೀರ ಬಲ್ಲಾಳ
ಪೇಳೆನಲು ನಾನೊಂದು ನುಡಿವೆ ।
ಕಾಣಗೊಡದು ಕಾರ್ಯ ಆಡುವುದು ಅತಿಕಷ್ಟ
ವಾದಕ್ಕೆ ಹೇಗೆ ತೋರುವುದೊ ||೭೮||

ಹೇಳಯ್ಯ ಯಲ್ಲರಸ ಹಳಬರ ಮಗ ನೀನು
ಏಳು ಮೂರೆರಡು ತಲೆಯಿಂದ।
ಕೂಡಿದ ಮನೆತನಕೆ ಹೀನಾಯ ಬರದಂತೆ
ಜಾರಿಸು ಬಂದ ಕಂಟಕವ ||೭೯||

ಆಡುವುದತಿ ಕಷ್ಟ ಚಾಡಿಗರಿರುವಲ್ಲಿ
ಕೋಡಿನ ಕೂರ ಕಿವಿಗುಂಟೆ ।
ಕೇಳುವರು ದೊರೆಗಳು ಹಾಳು ಮಾಳ್ಪರ ಮಾತ
ಚಂಡಿಗಳು [ಹಿತರೆ] ದೊರೆತನಕೆ ||೮೦||

ರಾಯ ಲಾಲಿಸು ಬಿನ್ನಹ ರಾಮನೊಳಗೆ ಗೆದ್ದು
ಪಾದಕೆ ಕೀರ್ತಿ ತರಲಾಪರೆ ।
[ಬ]ಡ ಕಿವಿಗಳೆ ಸಾಕು ಬದಲಾಗಿ ಮೂಗನು ಕೊಡದೆ
ಸಾಗಿಸುವ ರೊಕ್ಕವ ಕೊಟ್ಟು ||೮೧||

ಸಾಕಿವರ ಮಾತೇನು ಕಾರ್ಯ ಸಂಧಾನವ ಮಾಡುವ
ಸೋತವರ ತೆರದಿ ಸಾಗಿಸುವಾ।
ಪೋಟ ಪುಂಡರ ಮಾತು ಕೇಳಿ ನಡೆಯಲು ಅರ್ಥ
ಪ್ರಾಣಗೇಡಾಗಿ ಪೋಗುವುದು ||೮೨||

ಕೊಡುವ ಇಂದಿಗೆ ರೊಕ್ಕ [ತ]ರುವ ನಾಳಿಗೆ ಕಡಿದು
ಬುಡ ಸಹಿತ ಕುಮ್ಮಟದ ಬೇರ ।
ಹಿಡಿಕೊಂಬ ಕೊಡೆಯನು ರವಿ ಬಂದ ಕಡೆಗರಸೆ
ಹುಡುಗ ಮೂಳಗೆ [ಹೀ]ಗೆ ಇರದು ||೮೩||

ರಾಮ ಸಣ್ಣವನೆಂದು ಪಾದಕ್ಕೆ ತಿಳಿವುದು
ಭೇದ ಕಾಣದೆ ಜನನ ಸ್ಥಲದ ।
ದೇವ ಜಟ್ಟಂಗಿಯ ವರದೊಳಗೆ ಪುಟ್ಟಿದ ಸುದ್ದಿ
ಕೇಳಲಿಲ್ಲವೆ ಕರ್ಣದಲಿ ||೮೪||

ಅನಿತರೊಳಗೆ ಓರ್ವ ಚರನು ಬಂದನು ಹರಿದು
ಕೊನೆ ಮೂಗ ಸುಣ್ಣದ ಬೊಟ್ಟ।
ಕನಲುತ ಕೈಕಾಲು ಚಳಿಜ್ವರವು ಬಂದಂತೆ
ಕುಣಿಯುತ ಕರ ಮುಗಿಯೆ ನೃಪಗೆ ||೮೫||

ಬಾಯೊಳು ತಡೆಯಿಲ್ಲ ಹೇಳುತಲಿ ಬೆದರುವನು
ಗ್ರಹವು ತೊಡಕಿದ ಮರುಳಂತೆ ।
ನಾಲಗೆ ತೊದಲುತ್ತ ನಾಮದ ಕಡೆಯಿಂದ
ಜೀವ ಬಂದುದು ಪಾದದೆಡೆ[ಗೆ] ||೮೬||

ಹೆದರ ಬೇಡವು ಪೇಳು ಬಲವೇನಾಯಿತು ಭ್ರಷ್ಟ
ರಣಹೇಡಿ ಸುಡು ನಿನ್ನ ಮಾತ ।
ಒಡನೆ ಗರ್ಜಿಸಿ ನುಡಿಯೆ ದೇವರ[ಸ] ಮಂತ್ರಿಯು ಬೇಗ
ಬರೆದೋದಿದಂತೆ ಪೇಳಿದನು ||೮೭||

ಹೋದ ದಂಡನು ಎಲ್ಲ ಆ[ತು]ಕೊಂಡನು ರಾಮ
ಮೀನ ಬಕರಾಜ ತಿಂದಂತೆ ।
ಏನು ಹೇಳಲಿ ನೃಪನೆ ಮೂರು ಸಾವಿರ ಬಲವ
ಮಾದಿಗ ಹಂಪನು ಹೊಡೆದ ||೮೮||

ಲಾಲಿಸಿ ಬಲ್ಲಾಳರಾಜೇಂದ್ರ ಮಂತ್ರಿಗಳು
ರಾಮನೆಂಬವನು ನರನಲ್ಲ।

ಬಾಳೆಯ ವನದೊಳು ನೂರಾನೆ ಹೊಕ್ಕಂತೆ
ಬೀದಿಯಾಗೋದು ಅಂಬಿನೆಸೆಗೆ ||೮೯||

ಓರುಗಲ್ಲಮ್ಮಗೆ ಹದಿನಾರು ಸಾವಿರ ಕುರಿಯ
[ತಾ]ರು ಮಾ[ರಾಗಿ] ಕಡಿದಂತೆ ।
ಗೇಣುದ್ದ ಕೆಸರೇಳೆ ಬಾಣ ದೆಸೆಯಲಿ ಭೂಮಿ ಮಲೆವ
ಜೋಳದ ಹರೆ ನೆಲಕೆ ಬಿದ್ದಂತೆ ||೯೦||

ಈ ಪರಿ ಹೇಳಲು ಬರುತಿದೆ ನಾಚಿಕೆ
ದೆಸೆಯೊಳು ರಾ[ಮುಗ] ಭೂಪ।
ಉಸುರುವರಳವಲ್ಲ ಮೂರೆರಡು ಸಾವಿರ ಬಲವ
ಹೆಸರನಡಗಿಸಿದ ಯಮನಂತೆ ||೯೧||

ಈರ್ವರು ಮಾಡಿದ ಕಾರ್ಯ ನೋಡುವ ರಾಯ
ಕಲಿ ಪಾರ್ಥ ಭೀಮರಂದದಲಿ ।
ಕಡೆಗೆ ಹೊಕ್ಕರು ರಾಯ ಕುಮಾರರೀರ್ವರು ಬಂದು
ಕುರಿಗಳಂದದಿ ತಲೆಯರಿಯೆ ||೯೨||

ಯಾರಾರು ಬಿದ್ದರು ವಜೀರ ಮನ್ನೆಯರೊಳಗೆ
ರಾಯ ಕೇಳುವನು ಮನದೊಳಗೆ ।
ಕೇಳಯ್ಯ ಬಲ್ಲಾಳ ಮೊನೆಗಾರ ಬೇಲೂರ ಚೆನ್ನ
ಚೂಳಲಿ ನೆಗೆದ ಯಮಪುರಕೆ ||೯೩||

ಮಲ್ಲಮಾದನು [ಚೂ]ಳೆಯಲ್ಲಿ ಹುಡುಗನು ಬಿದ್ದ
ಡೊಣೆಯಿಡಲು ಕೆಂಪನು ಅಳಿದ ।
ಕಲ್ಲೂರ ಕನಕನು ನೆಲ್ಲೂರ ಹನುಮಂತ
ಬಳ್ಳಾರಿ ನಿರ್ವಾಣಿ ಬಿದ್ದ ||೯೪||

ಬಿದ್ದನು ಬಲವಂತ ಗದ್ದುವಳ್ಳಿಯ ರಂಗ
ಮದ್ದಾನೆ ಹಿಡಿದು ಮಲಗಿಸುವ ।
[ಬಿ]ದ್ದನು ಬೆಳವಾಡಿ ಯಲ್ಲನಾಯಕ ನಿಮ್ಮ
ಸಿದ್ಧರಾಜನು ಕೈಸೆರೆಯ ||೯೫||

ಗಾಲಿಖಾನನು ಬಿದ್ದ ರಾಗೋಜಿಖಾನನು ಬಿದ್ದ
ಮೀರಖಾನನು ಗೋರಿ ಕಂಡ।
ತೀರಖಾನನು ಬಿದ್ದ ವರ್ಧಿಖಾನನು ಬಿದ್ದ
ಕೆಮ್ಮೋರೆ ತುರುಕರು ಒರಗೆ ||೯೬||

ನಿಮ್ಮಡಿಗೆ ಗುರುತಾದ ಹಮ್ಮೀರರನು ಪೇಳ್ದೆ
ಪುಳ್ಳೆ ಸಾವಕೆ ಲೆಕ್ಕ ಮಿತಿಯೊ।
ನೆಲ್ಲಿಯ ಮರ ಕೊನೆಗೆ ಕಲ್ಲಿಟ್ಟ ತೆರನಾಗಿ
ಉರುಳಿತ್ತು ರಾಯ [ಲಾ]ಲಿಪು[ದು] ||೯೭||

ರಾಯ ಲಾಲಿಸಿ ಕೇಳು ರಾಮನ ಕೊಳ್ಳೆಯೊಳು
ಯಾವ ದೈವಗಳು ನಿಲ್ಲುವುದು ।
ತಾಯೇನ ಪಡೆದಳು ಭೀಮ ಪಾರ್ಥರ ತೆರದಿ
ದೇವರ ಬಲ[ವಂ]ತು ಉಂಟು ||೯೮||

ಬಲವೆಲ್ಲ ಪೋಗಿರಲು ಉಳಿಯಗೊಡುವನೆ ರಾಯ
ಕಳಲೆಯಂದದಿ ಕೊರೆದಿಡುವ ।
ತಿಳಿದ ಮಂತ್ರಿಗಳಪ್ಪ ಯಲ್ಲ[ರ]ಸ ನಿಂದು ನಿಮ್ಮ
ಉಳುಹಿದ ಹೀನ ಮಾನಗಳ ||೯೯||

ಹಬ್ಬದ ಕುರಿಯಂತೆ ಹರಿಸ್ಯಾಡಿ ಕಡಿದರೆ ತಲೆ
ಬಿದ್ದರೆ ಮುಂಡ ಓಡುವುದು ।
[ಸುದ್ದಿ]ಯ ಕೊಡುಯೆಂದು ಎನ್ನೊಬ್ಬನ ಬಿಟ್ಟರು ರಾಯ
ನಾ [ಪಟ್ಟ ಪಾಡ]ನೆ ಶಿವ ಬಲ್ಲ ||೧೦೦||

ಅಂತಹ ರಣದೊಳು ಎಂತು ನೀ ಉಳಿದೆಲೊ
ಚಿಂತೆಯಲಿ ರಾಯ ಕೇಳಿದನು ।
ಪಂಥದ ಮಾತೇಕೆ ಸತ್ತ ಹೆಣ ಎಳಕೊಂಡು
ಮಿಕ್ಕೆ ರಾಜೇಂದ್ರ ಬುದ್ಧಿಯಲಿ ||೧೦೧||

ಅನಿತರೊಳಗೆ ರಾಮ ರಣವ ಸೋಸುತ ಬರೆ
ಇದು ವೇಳೆಯೆಂದು ಚರಣಕೆರಗೆ ।

ಹೆದರಬೇಡವೊ ಎಂದು ಪಿಡಿದು ಕರದೊಳು ಜುಟ್ಟ
ತುದಿ ಮೂಗಿನೊಳಗಿಟ್ಟ ನಾಮ ||೧೦೨||

ತೋರು ನಿಮ್ಮೊಡೆಯಗೆ ಎನಲಾಗ ಹಣೆ ಸುಣ್ಣ
ಕಾದುದು [ಎನ್ನನು] ಭೂಪ
ಬಾಲನು ಎಂದೆಂಬ ಆಲಸ್ಯ ಮಾಡದೆ
ಸಾರಿದೆ ಹುಲ್ಲನು ಹಿಡಿದು ||೧೦೩||

ಚರನರೆ ನುಡಿಗೇಳಿ ಮರುಳ ದೇವರಸನು
ಹೊಡೆಯೆನಲು ಬಾಯ ನೂಕೆನಲು ।
ರಣಹೇಡಿ ರಂಡೇದು ಕೆಡದಿರ್ದು ಎಲ್ಲಿದೊ
ಎದೆಗೆಡಿಸುವ ಇಲ್ಲಿ ಬಂದು ||೧೦೪||

ಸಾಕು ಹೋಗೆಲೊ ಮಂತ್ರಿ ನೂಕಯ್ಯ ಎಲ್ಲೊಡೆವ
ನೀ ಕಡಿವ ಮೊನೆಗಾರನಿರುವೆ ।
ಭೂಪ ಬಲ್ಲಾಳನ ಬುಡಕೆ ಬೆಂಕಿಯನೆಳೆಯೆ
ಆಪ್ತ ಆರುವನೆಂದು ನಡೆದ ||೧೦೫||

ಕೇಳಿದ ರಾಯನು ಆಡುವ ಚರನ ವಾಕ್ಯ
ಆನೆಗೆ ಮದವಿಳಿದಂತೆ ।
ಜಾಣ ಯಲ್ಲರಸನು ಹೇಳಿದ ತೆರದೊಳು
ಸಾಗಿಸು ಪವುದಿಯ ಕೊಟ್ಟು ||೧೦೬||

ಕಪ್ಪವ ಕೊಡಲಿಕ್ಕೆ ಒಪ್ಪೆ ಬಲ್ಲಾಳ ರಾಯ
ಮತ್ತೊಮ್ಮೆ ಕಂಡ ದೇವರಸ ।
ಹುಟ್ಟಿಸಿ ಛಲ ಪಂಥ ಕಿಚ್ಚನು ಎಳೆವನು
ಆ[ಹು]ತಿಯಾಗಿ ರಾಯಗೆ ||೧೦೭||

ರಾಯ ಬಲ್ಲಾಳನೆ ಲಾಲಿಸು ಬಿನ್ನಹ
ಹೋಯಿತ್ತೆ ಎಲ್ಲ ಬಲವು ।
ತಿಳಿಯಬಾರದೆ ಭೂಪ ಅವನಿಗಿ[ಟ್ಟನೆ] ನಾಮ
ನಿಮಗಿಟ್ಟ ರಾಮ ಭೂಮೀಂದ್ರ ||೧೦೮||

ಮಂದಮತಿಗಳ ರಾಯ ಮುಂದೆ ನೋಡಿಸಿ ನೋಡು
ತಾನೆಂದ ಮಾತಿನ ನಿಜತರವ ।
ಸುಂಡನು ಕರುಗಾಯ್ವ ಬಲ್ಲಾಳ ಮೂಳಗೆ ನಿಮ್ಮ
ತುಂಡಮೂಲನ ಮಾತ ದೇವೇಂದ್ರಗೆ ಸಮಮಾಡಿ
ಒಂದಾಗಿ ರಾಮ ಗೆಲುವಂತೆ ॥೧೦೯॥*

ಬಾಳ ಬಾಳಿದ ಯಲ್ಲರಸ ಮೆಚ್ಚಿನ ಮಂತ್ರಿ
ಗಳಿಸಿಕೊಂಡಿರುವ ನಿಮ್ಮೊಡವೆ ।
ಉಳುಹಿಕೊಳ್ಳಲು ರೊಕ್ಕ ಕೊಡಿಸಿ ನಿಮ್ಮೊಳು [ಪವು]ದಿ
ಒಳ ಬಿರಿದು ರಾಮಗೆ ಎ[ಮ್ಮ] ॥೧೧೦॥

ಕಪ್ಪ ಒಪ್ಪಿದ ಮೇಲೆ ಕಡೆಗೆ ಪಟ್ಟದ ರಾಣಿ
ಬಿಟ್ಟು ಏಳೆನೆ ಕೊಡಬೇಕು।
ಲಕ್ಷ ಕುದುರೆ ಮಂದಿ ಕಟ್ಟಿನ್ನು ಫಲವೇನು
ಮುಕ್ಕಗೆ ಹೆದರಿ ಹೊನ್ನ ಕೊಡಲು ॥೧೧೧॥

ಮಗ[ನೊ]ಯ್ವ ಕಪ್ಪವ ಬೆಳಗಾಗೆ ಅಪ್ಪನು ಬಂದು
ಬಿಡು ನಿನ್ನ ಭೂಮಿಯನೆಂಬ ।
ಕೊಡಬೇಕು ತಲೆಯೊಳು ಹಡಲಿಗೆಯನು ಹೊತ್ತು
ತಿರಿದುಣ್ಣಬೇಕು ನಾಡೊಳಗೆ ॥೧೧೨॥

ನಿಜ ತರದ ಮಾತರಸೆ ನಿಮ್ಮ ಪಾದಕೆ ಹೇಗೊ
ಹುಸಿಯಾಗೆ ಎನಗಾಜ್ಞೆ ಮಾಡು ।
ಮುಸುಕನ ಮಾತಿದ ರಾಯ ನಿಜವೆಂದು ತಿಳಿದಾಗ
ಮೆಚ್ಚಿದ ತನ್ನ ಮಂತ್ರಿಯನು ॥೧೧೩॥

ಯಲ್ಲರಸನೆಂಬವನು ಜೊಳ್ಳ ಮಾಡುತಲಿರ್ದ
ಬಲ್ಲ ದೇವರಸನು ಕಾದ ।
ಹುಲ್ಲು ಕೊಯ್ವನ ಮಾತ ಹನುಮ ಭೀಮನ ಮಾರಿ
ಒಳ್ಳೆವನಾಗಿರು ಎಮಗೆ ॥೧೧೪॥

---

* ಇಲ್ಲಿ ಎರಡು ಪದ್ಯಗಳು ಸೇರಿಕೊಂಡಂತಿದೆ (ಸಂ)

ತಿಳಿದು ನೋಡಲು ರಾಯ ಸುಳುವವದು ಬರುವಂಥ
ಮುಳುಗಿಸುವನು ಉರನಾಮ ।
ಒಳಗು ಬೀಳದೆ ಅವನು ಈ ಬಗೆಯ ಕೊಳ್ಳಲುಯೆಂದು
ಪಿಡಿದು ನಾಲಗೆಯ ಕೀಳಿಸುವ ॥೧೧೫॥

ಆಗಲಿ ಅದಕೇನು ಕೀಳಿಸುವೆ ಹಲ್ಲನು
ಮೂಳ ರಾಮುಗನ ಕಡಿದಟ್ಟಿ ।
ಸಾಲು ಶೂಲವ ನಡೆಸಿ ಪೀಳಿಗೆಯೆಂದಂತೆ
ಕಾವಲ ಮನೆ ಕೂಡಿಸಿದ ॥೧೧೬॥

ಕಾವಲ ಮಾಡಿಸಿ ಆಗ ಮಂತ್ರಿಯ ಮನೆಯ
ಸುವರ್ಣ ರಾಯರ ಕಾರ್ಯ।
ಕೇಳುವ ಕರ್ಣಗಳು ಕೀಳಾದ ಹಿತ್ತಾಳೆ
ಬಾಲರಂದದಿ ಮನ ಬುದ್ಧಿ ॥೧೧೭॥

ಕಾಲನರ್ಭಟದೊಳು ರಾಯ ಬಲ್ಲಾಳನು
ಭೇರಿಯ ಹೊಡೆಸಿ ಕೋಪದಲಿ ।
ಕೂಡಲು ಕರಿ ತುರಗ ಬೇಡಲು ಅಭಯವನು
ಹಾ ನೆಗವುತಲಿ ಬಂಟರು ॥೧೧೮॥

ನಾದವಾಗಲು ಭೇರಿ ಕೂಡಿತ್ತು ಎಂಬತ್ತು
ಸಾವಿರ ಕುದುರೆ ಕಾಲಾಳು ।
ಮಾರಿಯ ಮುಖದವರು ಮಲ್ಲಸಾಧನದವರು
ಆನೆಯ ಪಿಡಿದು ನಿಲ್ಲಿಪರು ॥೧೧೯॥

ವಾದವಾಗಲು ಸುರಗಿಯು ಬುಡಕೊಂದನು ದ್ರುಂಬು
ಹಿಡಿಮೀಸೆ ವ್ಯಾಘ್ರನಂಥವರು ।
ದಡಿಗ ದೈತ್ಯರನಾದಿ ಕೊಡು ವೀಳ್ಯವೆನುತಲಿ
ಒದಗಿತ್ತು ಎಂಟು ಸಾವಿರವು ॥೧೨೦॥

ಸಾಗಿ ಬರುವರು ದೊಡ್ಡ ಗ್ರಾಮ ಭಂಗಿಗೆ ಉಂಬ
ತೂರುತ ಮದ್ದಾನೆಯಂತೆ ।

ಏಳಯ್ಯ ತಡವೇಕೆ ಹದಿನೇಳು ಸಾವಿರ ಮಂದಿ
ಮೂಳ ರಾಮನು ಎಮಗಿರಲು ||೧೨೧||

ಚಕ್ರವು ಕೊರೆದೀಟಿ ಮುಕ್ಕಣ್ಣ ನೇಜವು
ಬತ್ತಳ ಬಾಣೆಯ ದೊಣ್ಣೆ ।
ಕುಪ್ಪಳಿಸಿ ಹಾರುವ ಕೂಡಲು ಕಾಲಾಳು
ಎಂಬತ್ತು ಸಾವಿರ ನೆರೆಯೆ ||೧೨೨||

ಕರಿದು ಕೆಂಪಿನ ಮೇಲೆ ಹದಿನಾರು ಸಾವಿರ ಮಂದಿ
ಬಿಳಿದು ಬೂದನು ಮೂರು ದಶಕ ।
ಒಡನೆ ಶೃಂಗರವಾಗಿ ಹುದಿರಿನೊಳಿಳಿಯಲು
ತರ ಹೇಳೆ ಪಟ್ಟದ ತುರಗ ||೧೨೩||

ಎಂದನು ಬಲ್ಲಾಳ ರುದ್ರಕೋಪವ ತಾಳಿ
ಕ್ಷುದ್ರನು ಕಂಡ ದೇವರಸ।
ಬಿದ್ದು ಪಾದದ ಮೇಲೆ ಪಾಲಿಸೆನಗೆ ವೀಳ್ಯ
ಒದ್ದು ಪಿಡಿ ತರುವೆ ರಾಮುಗನ ||೧೨೪||

ನಾಯ ಪಿಡಿವನ ಮೇಲೆ ನೀವು ಹೋಗಲು ಸಲ್ಲ
ನಾವಿರುವುದೇಕೆ ನಿಮ್ಮೆಡೆಯ।
ಕಾಯ ಸಹಿತ ತರಲೋ ಕಡಿದು [ಮುಂಡವ] ತರಲೋ
ರಾಯ ಪಾಲಿಪುದೆನಗೆ ವೀಳ್ಯ ||೧೨೫||

ಅನಿತರೊಳಗೆ ನಿತ್ಯ ಅಳಿದು ಜನಿಸುವವ ಕಡಲ
ಜನನಿ ಗರ್ಭ[ದೊಳು] ಸಾರಿದನು ।
ತಿಮಿರವಾಗಲು ....ರದಿ ಗೆಣೆಯ ಮೂಡಲು ದಿಕ್ಕ
ನಡರಲು ರಾತ್ರಿಯೆ ಪಗಲೆಸೆಯೆ ||೧೨೬||

ರಾಯ ಬಲ್ಲಾಳನು ವಾಲಗವನು ಹರಸಿ
........ಪುರವ ।
ಮೇಳ ತಾಳಗಳಿಂದ ಕಾಳೆ ಸಾರುವ ಖಡ್ಗಾ
ಯುಧವ ಪಿಡಿದು ತಿರುಗುವರು ||೧೨೭||

ನಾಗಲೋಕದೊಳಿಪ್ಪ ದೇವಪುರುಷರ ಬೆಳಗಿ
ತೋರಿ ಹೇಮಾದ್ರಿ ಸುತ್ತಿಸಿ।
ರಾಯ ಕಂಪಿಲನಾತ್ಮ ಕುಮಾರ ಮಾಡುವ ಕಾರ್ಯ
ರವಿ ನೋಡಬೇಕೆನುತಲಡರೆ ||೧೨೮||

ರಾಯ ಬಲ್ಲಾಳನ ಹಾನಿ ನೋಡೆನು ಎಂದು
ಸೋಮನು ಕಳೆಯಗುಂದಿದನು ।
ಕೂಗಲು ಕುಕ್ಕುಟ ರಾಗದೋರಲು ಪಿಕ
ಆಗ ಚರಿಸುವ ಖಗ ಮೃಗವು ||೧೨೯||

ಭೃಂಗವು ಚರಿಸಾಡೆ ಪದ್ಮಗಳು ಮುಖ ಬಿಚ್ಚೆ
ಮಂದಮಾರುತನಾಗ ನಡೆಯೆ ।
ಇಂದ್ರಗೋಪಗಳ್ಕೋಟಿ ಪಂಜನು ಪಿಡಿದಂತೆ
ಜನಂಗಳಿಗೆ ಮುಖವನೆ ತೋರೆ ||೧೩೦||

ಉದಯವಾಗಲು ರಾಯ ರಾಮ ಹರನ ನೆನೆದು
ಗುರುದೇವ ಮಾತೆಯ ಪಿತರ ।
ಮನೆಸ್ವಾಮಿ ಜಟ್ಟಂಗಿ ರಾಮನ ನೆನೆದು
ಧರಿಸಿದ ರಾಮ ಭಸಿತವನು ||೧೩೧||

ಉಟ್ಟರು ಬಹು ಬಗೆಯ ವಸ್ತ್ರಾಭರಣಗಳ
ಮುತ್ತು ಮಾಣಿಕ ವಜ್ರಗಳನು ।
ಮೃಷ್ಟಾನ್ನಭೋಜನವ ಪುತ್ರರೀರ್ವರು ಮಾಡಿ
ಕುಟ್ಟೆನಲು ಹ[ಲ್ಲೆಯ] ಭೇರಿ ||೧೩೨||

ಹಲ್ಲಾ ನಾದಗಳನು ಎಲ್ಲರು ಕೇಳಲು
ಮತ್ತಲ್ಲಿ ಶೃಂಗರವಾಗಿ ಬರಲು ।
ಹುಲ್ಲೆಯ ಮರಿಯಂತೆ ಹಾರಿ ರಾಮನ ಮಂದಿ
ಏಳಯ್ಯ ಭೂಪ ಕೊಡು ವೀಳ್ಯ ||೧೩೩||

ಭೇರಿಗಳಾದವು ಭೂಮಿ ತಲ್ಲಣಿಪಂತೆ
ಭೋರಿಡಲು ರಣಗಾಳೆ ಬಿರಿದು ।

ಏರಲು [ಕಾಳಗಕೆ] ಎಂಟು ಭಾಗದ ಮೇಲೆ
ಕಾಲಾಳು ತುರಗ ಭೋರ್ಮೊರೆದು ||೧೩೪||

ಸರಳಂಬು ಸವಲಕ್ಷ ಎರಡು ಕೋಟಿಯು ಬಾಣ
ಪುರಕೆ ಮುಂಗಾರು ಸುರಿದಂತೆ ।
ಹೊಗಲೇರಿ ಕಾಟಣ್ಣ ಅಗಳು ಜೀಬಿಯ ಹಿಡಿದು
ನಡುಗಿಸಲು ಊರು ತಲ್ಲಣಿಸೆ ||೧೩೫||

ಬೊಬ್ಬೆಯರ್ಭಟದೊಳು ಮುದ್ದನು ಹೊಗಲೇರಿ
ನುಗ್ಗಲು ವರುಣ ಭಾಗದಲಿ ।
[ವಕ್ರ] ಜೀಬಿಯ ಹಿಡಿದು ಬಿದ್ದು ಅ[ಲಗ]ನೆ ಹಿಡಿದು
ಮಗ್ಗದ ಗೂಳ್ಯವನು ಸುಲಿಯೆ ||೧೩೬||

ಕೋಳಾಹಳದೊಳು ತಳಮಳಗೊಳಿಸುತ್ತ
ಮೊನೆಗಾರ ವೀರಸಂಗಯ್ಯ।
ತುಳಿಸಿದ ಮೂರಾರು ಸಾವಿರ ಬಲದೊಳಗೆ
ನಡುಗಿಸಿ ಹಳೆಯನ ಬೀಡ ||೧೩೭||

ಯಮನ ಭಾಗದಿ ರಾಮ ಎತ್ತಗೊಡದೆ ತಲೆಯ
ಹೊಗಲೇರಿ ಕೋಟೆ ಬುಡಕಾಗಿ ।
ಎಳೆದು ಬಾಣವು ಬತ್ತಿ ಸುರಿದು ಅಂಬಿನ ಮಳೆಯ
ಹೊರ ಕೋಟೆ ಹಲ್ಲಾ ಮಾಡಿದರು ||೧೩೮||

ಚರರೋಡಿ ಬಂದಾಗ ಅರುಹಲು ನೃಪನಿಗೆ
ಮರಣದ ತೆರಬಂತು ಪುರಕೆ ।
ಉರಿದೆದ್ದು ಬಲ್ಲಾಳ ಯಮನ ಗರ್ಜನೆಯಿಂದ
ಮೆರೆವ ಹಜಾರಕ್ಕೆ ಬರಲು ||೧೩೯||

ರಾಜೇಂದ್ರ ನೃಪ ಬಂದು ಚಾವಡಿಯನೇರಲು
ಕಾಲಾಳು ಕರಿ ತುರಗ ನಡೆಯೆ ।
ಮೇಲಾದ ಮಂತ್ರಿಯು ದೇವರಸ ಕಟ್ಟಿಗರು
ರಾಯಗೆ ಕರಗಳ ಮುಗಿಯೆ ||೧೪೦||

ರಾಯ ನೋಡಿದ ತನ್ನ ಮೋಹ[ರ] ಗಡಣವ
ಯಾರು ನಿಲ್ಲುವರು ಈ ಬಲಕೆ ।
ಭಾವಜ ಮಲ್ಲಯಗೆ ದೇವರಸ ಮಂತ್ರಿಗೆ
[ನೇ]ಮಿಸಿ ಜಗಳ ಈರ್ವರಿಗೆ ॥೧೪೧॥

ಲಕ್ಷವರೆಯ ಬಲವ ಕೊಟ್ಟು ಇರ್ವರ ಕೈಯ
ಮುತ್ತಿನ ಚಾಮರ ಅಹುದೆ ।
ಮುಕ್ಕ ರಾಮನ ಕಡಿದು ಮೀಸೆಯನುಳುಹೆಂದು
ಪುತ್ರಗೆ ಮಿಗಿಲಾಗಿ ಕಾಣೆ ॥೧೪೨॥

ನಾನಾ ತಂತ್ರಗಳಿಂದ ನೋಡಿ ಕಾರ್ಯವ ಮಾಡಿ
[ಸೈನಿಕರ] ಮರೆಯನು ಹಿಡಿದು ।
ಮ[ಲೆವ ಹೆಬ್ಬು]ಲಿಯಾಗಿ ಇರುವ ರಾಮನುಯೆಂದು
ಜ್ಞಾನದೊಳ್ ಜಗಳ ಮಾಡುವುದು ॥೧೪೩॥

ಆನೆ ಆಡಿಗೆ ಮುರಿದು ಓಡಿ ಬರುವುದೆ ರಾಯ
ಬೇಡಗೆ ಅಂಜುವನೆ ಜಟ್ಟಿ ।
ರೂಢಿಗೀಶನ ಬೆನ್ನು ಮರೆಹೊಗಲು ತಾರದಿರೆನೆ
ಶ್ವಾನ ಮುದ್ರೆಗಳ ಹಾಕಿಸೆಮಗೆ ॥೧೪೪॥

ಕೂಲಿ ದನಗಳ ಕಾಯ್ವ ಮೂಳ ಹುಡುಗನ ಮಾತ
ಹೇಳೋರೆ ರಾಯ ಈ ಬಗೆಯ ।
ಕೋಳಿಯ ಪಿಡಿದಂತೆ ಕಾಲ್ವಿಡಿದು ಧಾತ್ರಿಗೆ ಬಡಿದು
ಆತು ಕೊಂಬೆನು ಅವನ ಬಲವ ॥೧೪೫॥

ದಿಟ್ಟಗಾರರು [ಏಳೆ] ಮೆಚ್ಚಿ ಬಲ್ಲಾಳರಾಯ
ಇಟ್ಟು ಆಭರಣವ ತೊಡಿಸಿ ।
ಕುಟ್ಟಲು ರಣಭೇರಿ ಕುಂಜರ ಮುನ್ನೂರು
ದಟ್ಟೈಸಿ ಪುರವನು ಪೊರಡೆ ॥೧೪೬॥

ಕರಿಘಟೆ ಕಾಲಾಳು ನಡೆಯಲಾರ್ಭಟದೊಳು
ಹುಡಿಯಾಗೆ ಧರಣಿ ಜಜ್ಝರಿಸಿ ।

ಹೊಡೆವ ಭೇರಿಯ ನಾದ ನುಡಿವ ತಾಳಗಳಿಂದ
ಗುಡುಗೇರಿದಂತೆ ಮುಂಗಾರು ॥೧೪೭॥

ಹನ್ನೆರಡು ನವಜ ಮುನ್ನೂರು ನವಗಾಳೆ
ಚೆನ್ನಗಾಳೆಯು ಕಡೆ ಮೊದಲೆ ।
ಬ್ರಹ್ಮಾಂಡವದಿರ್ವಂತೆ ಬಂದು ಬಾಗಿಲ ತೆರೆಸಿ
[ಕಾ]ರ್ಮೇಘದಂದದಿ ಹೊರಡೆ ॥೧೪೮॥

ಹೊಡೆಯಲು ಜಂಡೆಯವ ಮರಡಿ ಮೂಡಲ ಗುಡ್ಡ
ಎಡ ಬಲ ದಂಡಲ್ಲಿ ಇಳಿಯೆ।
ಬಿದಿಗೆ ಚಂದ್ರನ ರೂಪ ರಾಮ ಮುತ್ತಿಗೆ ತೆಗೆದು
ಜಲದಗೆರೆಯ [ಎರಿ]ಗಿಳಿಯೆ ॥೧೪೯॥

ಕೇಳಯ್ಯ ಜಟ್ಟಂಗಿ ನೃಪನೆ ನಿಮ್ಮಯ್ಯನ
ಮೇಲಿನ್ನು ಬರುವಂಥ ದಂಡ।
ಮೂದೇವ ಬಲದೇವ ಮಿಗಿವುದಲ್ಲದೆ ತನ್ನ
ತೋಳ ಶಕ್ತಿಯಲವನುಳಿವ ॥೧೫೦॥

ಚೆಂದವಾಯಿತು ಸ್ವಾಮಿ ಚೆಲ್ವ ಪ್ರಸಂಗವ
ಇಂದು ಕೇಳಿದೆ ಕರ್ಣ ತುಂಬ।
ಅಂಬುಧಿ ಕಡೆಗಂಡ ಬಿಂಬದ ಫಲ ಹೋಗಿ
ಇಂದಿಗೆ ಹರಸಿ ವಾಲಗವ ॥೧೫೧॥

ಧರೆಗಧಿಕ ಹಂಪೆಯ ವರ ಪುಣ್ಯಕ್ಷೇತ್ರದ
ಪುರಹರನೆ ವಿರುಪಾಕ್ಷಲಿಂಗ।
ತರಳ ರಾಮನು ಒಂದು ರಣವ ಗೆಲಿದು ಮತ್ತೆ
ಎರಡು ಜಗಳಕೆ ನಾಲ್ಕು ಸಂಧಿ ॥೧೫೨॥*

❖❖

* + ಅಂತು ಸಂಧಿ ೪ಕ್ಕಂ ಪದನು ೮೬೩ಕ್ಕಂ ಮಂಗಳ ಮಹಾಶ್ರೀ.

ಸಂಧಿ : ಐದು

❖

ಹೊಯ್ಸಳ ಬಲ್ಲಾಳನ ಪರಾಭವ

*ಕುಂಜರ ವೈರಿಯ ಕಂದನ ದೆಸೆಯಿಂದ
ನೊಂದವನ ಮಗಳನಾತ್ಮಜನೆ ।
ಕುಂಭಿನಿಯ ಪೊತ್ತವನ ಇಂಬಿಟ್ಟೆ [ಒಡ]ಲಿಗೆ
ಶುಂಡಿಲ ಬೆನವ ಕೊಡು ಮತಿಯ ||೧||

ಉರಗನ ವೈರಿಯ ವಾಹನವನೇರಿದ
ತನುಜನ ಕೊಂದು ಬೂದಿಯನು ।
ಧರಿಸಿದ ಧವಳಾಂಗ ಬೆವರೊಳು ಜನಿಸಿದ
ಶರಭ ಕೊಡೆನಗೆ ಸನ್ಮತಿಯ ||೨||

ಕಾಶಿ ರಾಮೇಶ್ವರಕೆ ಈಸು ವೆಗ್ಗಳವಾದ
ತ್ರಾಸಿನಲಿ ತೂಗಿ ನೋಡಿದರೆ ।
ಲೇಸಾಗಿ ವರವಿತ್ತು ನಡೆಸು ಮುಂದಲ ಕೃತಿಯ
ಈಶನೆ ವಿರುಪಾಕ್ಷಲಿಂಗ ||೩||

ಅರುಣಾದ್ರಿ ಅಳಿದವ ಇಂದ್ರಾದ್ರಿ ತಲೆದೋರೆ
ಜನರೆದ್ದು ತಮ್ಮಯ ಕ್ರೀಯ।
ಹರಿಪೂಜೆ ಮಾಳ್ಪರು ಹರನ ಧ್ಯಾನದಿ ಕೆಲರು
ದಿನಕರನ ಭಜಿಪರು ಕೆಲರು ||೪||

ರಾಯನು ಜಟ್ಟಂಗಿನೃಪ ಸ್ನಾನವ ಮಾಡಿ
ಭೋಜನ ಮೃಷ್ಟಾನ್ನ ಸವಿದು ।

ಸಾಗಲು ಸೌಭಾಗ್ಯ ದೇವೇಂದ್ರ ಸುಖದೊಳು
ಚಾವಡಿ ಸದರ ವಾಲಗಕೆ ||೫||

ವಾಲಗ ಸಂಭ್ರಮವ ಕೇಳುತ್ತ ಗುರುರಾಯ
ಆಗ ಸಂಭ್ರಮದೊಳು ಪೊರಡೆ ।
ಸಾಗಿ ಬರಲು ನೃಪ ತಾನೆದ್ದು ಕರ ಮುಗಿದು
ಮೇಲು ಪೀಠದಲಿ ಕುಳ್ಳಿರಿಸಿ ||೬||

ದಯಮಾಡಬಹುದೆನ್ನ ಗುರುರಾಯ ಪಿತನಲ್ಲಿ
ಪುರವ ಮುತ್ತಿರುವ ಮೇಲ್ಗತೆಯ ।
ಧರಣಿಗುಬ್ಬಸವಾದ ದಂಡ ಪೇಳಿರಿ ಸ್ವಾಮಿ
ಮುಳುಗುವನೊ ಉಳಿದು ಪೋಗುವನೊ ||೭||

ಲಾಲಿಸಿ ಕೇಳೈ ಕುಮಾರನೆ ಜಟ್ಟಂಗಿ
ರಾಮನ ವರವುಂಟು ಪಿತನೆ ।
ಹಾಳು ಮಾಡುವ ದಂಡ ಹಡೆದಾತ ನಿನ್ನನು
ಮೇಲವನ ಪೊಗದಿಯ ತರುವ ||೮||

ನಡೆಸುವೆ ರಾಮನ ಕಡು ಧೈರ್ಯ ಕೃತಿಯನು
ದೃಢವುಳ್ಳ ಜನರು ಲಾಲಿಪುದು ।
ಜಡಮತಿ ಮನುಜರು ಜರೆಯೆ ರಾಮನ ಸತ್ಯ
ನಡೆಯದೆ ಭೂಮಿಯಲಿ ಶಕ್ತಿ ||೯||

ಓದು ಎನ್ನಲು ಗರ್ವ ಮಾಡಲವಗೆ ಕರ್ಮ
ಕೇಳದೆ ವರ ಚಿತ್ತದೊಳಗೆ ।
ಆಡುತಿರಲು ಅಡ್ಡ ಮಾತು ಪ್ರಸಂಗವ
ಶ್ವಾನಯೋನಿಯ ಜನ್ಮ ಬಿಡದು ||೧೦||

ಉಸಿರುವೆ ಮುಂದಲ ಕೃತಿಯ ಲಾಲಿಸಿ ಬಲ್ಲ
ರಸಿಕರು ಕುಶಲ[ಕೋ]ವಿದರು ।
ವಿಷಕಂಠಧರನೊಲುಮೆ ಇರಲು ರಾಮ ಲಕ್ಷ್ಮಣ
ಹೊಸಬಲಕೆ ದೂರಾಗೊ ಬಗೆಯ ||೧೧||

ರಣಧೀರ ಬಲ್ಲಾಳರಾಯನ ಬಲ ತುರಗ
ಶರಧಿಯಂದದಿ ಬಂದು ಇಳಿಯೆ ।
ಗುಲಗಂಜಿ ಭಾರಕೆ ಗುಂಡ ತ್ರಾಸಿಲಿ ಇಡುವ
ತೆರನಾಯಿತಲ್ಲ ಈ ಕಾರ್ಯ ||೧೨||

ದಂಡಿನಾರ್ಭಟ[ವನು] ಕಂಡು ರಾಮನ ಮಂದಿ
ಬಂದು ಬಿನ್ನೈಸಿ ಪೇಳುವರು ।
ಹಿಂದೆ ಶ್ರೋಣಿತಪುರಕೆ ಮುಕುಂದನು ನಡೆದಂತೆ
ಅಂದವಾಗಿದೆ ಭೂಪ ದಂಡು ||೧೩||

ಭಯಬೇಡಿ ಬಂದಂಥ ಮಳೆಯೆಲ್ಲ
ಲಯಗಾಲ ಮಾಳ್ಪ [ಭೈರವ]ನು ।
ಜಯಲಕ್ಷ್ಮಿ ತೊಲಗಲು ನವಕ್ಷೋಹಿಣಿ ಕೌರವನ
ಲಯಗಾಲ ಐವರರೊಡನೆ ||೧೪||

ಸಂದೇಹಗೊಳಬೇಡಿ ಬಂದುದಕೆ ನಾನಿರುವೆ
ಶಂಭು ಇರುವನು ಎನ್ನ ಮೇಲೆ ।
ಕುಂಭಿನಿಯೊಳಗಿವನು ಬಲವಂತ ಸುರಿತಾಳಗೆ
ಕಂಡು ನಡೆಯದೆ ಮಿಕ್ಕವನು ||೧೫||

ಓಡುವನು ಇನ್ನ್ಯಾಕೆ ನೀಗಿದೆವು ಕಾಲ್ಗೊಡರ
ಕಾಳು ಬೇಳೆಂಬ ಕುರಿ ಮರಿಯ ।
ನಾಳಿನ ದಿನದೊಳು ಹಾಳವಾಗದೆ ಭೂಮಿ
ನಾಡೆಲ್ಲ ಗುತ್ತಿಗೆ ಧುಮುಕಿ ||೧೬||

ತರಳ ಚೆನ್ನಿಗ ರಾಮ ಬಲಕೆ ಧೈರ್ಯವ ಕೊಟ್ಟು
ಕರೆಸಿದ ತನ್ನ ಮನ್ನೆಯರ ।
ಸರಿ ಮಾಡೆ ಜಗಳದ ಪರುಟವಣೆ ಎಲ್ಲರು
ಬಿರಿದನ ಕಾಳೆಯ............... ||೧೭||

ಹೊಡೆಯಲು ಭೇರಿ ಭೋರ್ಮೊರೆದು........
....

ಕಿಡಿ ಮಸಗುತಲೆದ್ದು ನಡೆಯೆ ಮುಂದಕೆ ರಾಮ
ಇಳಿದಿಹ ದಂಡಿಗೆ ಹೇಳಿ ಕಳುಹಿ ॥೧೮॥

ಹೆಸರಿನೊಳ್ ಕಡಿವಂಥ ರಣವೆ ಸಲ್ಲ ಬಿರಿದಾಂಕ
ಭೂಪ ರಾಮನು ಬರುವನೆಂದು ।
ಲೇಸಾಗಿ ಶೃಂಗರಿಸಿ ಬರಹೇಳಿ ಕಾರ‍್ಯಕ್ಕೆ
ಆ ಕ್ಷಣ ಚರರು ತಿರುಗಿದರು ॥೧೯॥

ಬಂದ ರಾಮನು ಎಂದು ದಂಡು ಜಲ್ಲನೆ ಬೆದರಿ
ಶೃಂಗರಿಸಿ ತುರುಮನ್ನೆಯರು ।
ಮುಂಗಾರ ಮಳೆ ಮೇಘ ದಂಡೆಯಲಿ ನಡೆವಂತೆ
ಬೆಂಕಿಯ ಕೆಂಡ ಸುರಿವಂತೆ ॥೨೦॥

ಇತ್ತರದೊಳು ಭೇರಿ ಕಿತ್ತು ತೋರುತ ಭೂಮಿಯ
ಕತ್ತಿ ಮಿಂಚುಗಳು ತಳತಳಿಸೆ।
ಕಚ್ಚಿ ಬೀರುವ ಕಾಳೆ ಕಾಕು ಬೊಬ್ಬೆಗಳಿಂದ
ಪೃಥ್ವಿ ತಲ್ಲಣಿಸಿ ಜಜ್ಝರಿಸೆ ॥೨೧॥

ರೂಢಿಗೀಶ್ವರನ ಸ್ತುತಿ ಮಾಡಿ ಚೆನ್ನಿಗರಾಮ
ಕೊಂಡಾಡುತಿರಲು ಭಕ್ತಿಯಲಿ ।
ನಾಡ ನಾಟಕ ಮಾಡಿ ಕುಣಿದು ಆಡಿಪ ದೇವ
ನೋಡಯ್ಯ ಬಾಲಕನ ಕಾರ‍್ಯ ॥೨೨॥

ಹರಹರ ಗುರು ಶಂಭೋ ವರದ ಜಟ್ಟಂಗಿಯ
ಗಿರಿಜಾವಲ್ಲಭನೆ ಸಲಹುವುದು ।
ಕರುಣವಿರಲಿ ನಿಮ್ಮ ಚರಣಸೇವಕರೊಳು
ಹೆದರಿ ಓಡುವ ಪಿಂಡವಲ್ಲ ॥೨೩॥

ರಾಮನು ರಜತಾದ್ರಿ ಶ್ರೀ ಮಹಾದೇವನ
ಕೊಂಡಾಡಲು ಶ್ರುತಿಯ ಗೋಚ[ರನು]
ನೋಡಲು ರಣವಾರ್ತೆಗೋವಿಂದನೊಡಗೂಡಿ
ಮೇಘ ಮಾರ್ಗದಿ ಬಂದು ನಿಲ್ಲೆ ॥೨೪॥

ಹರ ಬಂದು ನಿಲ್ಲಲು ಅಷ್ಟ ದಿಕ್ಪಾಲಕರು
ಗರುಡ ಗಂಧರ್ವ ಕಿನ್ನರರು ।
ಹರಿಣಾಂಕ ರವಿ ಕೋಟಿ ಅಮರ ಅಸಂಖ್ಯಾತ
ಪ್ರಮಥರೆಲ್ಲರು ಬಂದು ನೆರೆಯೆ ॥೨೫॥

ಜಗದ ನಾಟಿಕ ಬಂದು ಬಲದ ಭಾಗದಿ ನಿಲ್ಲೆ
ತರಳ ರಾಮಗೆ ಚಲವೇರಿ।
ಒಡನೆ ಮೈಯೊಳು ರೋಮ ಶರಗಳಂದದಿ ತೋರೆ
ಬಿಡುಗಣ್ಣ ಶರಭ ರೂಪಾಗಿ ॥೨೬॥

ನಕ್ಕನು ದೇವೇಂದ್ರ ಎತ್ತಳ ಬಲವೀ[ರ]
ಲಕ್ಷವರೆಯ ಬಲದ ಮೇಲೆ ।
ಹತ್ತೆಂಟು ಸಾವಿರ ಬಲ ಹೆಣ[ಗೆ] ಗೆಲು[ವುದು]
ಮೃತ್ಯುಂಜಯ ತಾನೆ ಬಲ್ಲ ॥೨೭॥

ಮೈಯಲ್ಲಿ ಕಣ್ಣೊಡೆದ ಮರುಳ ಇಂದ್ರನೆ ನಿನಗೆ
ತಿಳಿಯದೆ ಹರ ಬಂದ ನೆಲೆಯು।
ತರಳ ಮುರಿಯಲು ಹಾನಿ ತ[ನ]ಗೆ ಬಾಹುದು ಎಂದು
ಬಲದಿ ನಿಂದಿಹ ಶಿವನೆಂದ ನಾರದನು ॥೨೮॥

ಕೇಳಯ್ಯ ದೇವೇಂದ್ರ ಗೋವಿಂದ ಅಲ್ಲಿರುವ ಸಾಕ್ಷಿ
ಪಂಚೈವರ ನವಕ್ಷೋಹಿಣಿ ।
ಹಾಳು ಮಾಡದೆ ಕೇಳು ಧೃತರಾಷ್ಟ್ರ ಕೌರವರ
ಪಿಳ್ಳಿಗೆ ಬಿಡದೆ ಎಳ್ಳನಿತು ॥೨೯॥

ಹರ ಸಾಕ್ಷತವಡೆಯೆ ತೃಣ ಬೆಟ್ಟವಾಗದೆ
ದೊರೆಯು ಬಡವನ ಮನ್ನಿಸಲು ।
ಧರಣಿಯೊಳ್ ಧನ ಧಾನ್ಯ ತರನಾಗಿ ಪರಲೋಕ
ಗು[ರಿ] ತಾಗದಿಹನೆ ಫಲವಿರಲು ॥೩೦॥

[ಒಲಿ]ದನು ಮಯೂರನನು ವಾಹನವನು
ಏರಿದನಯ್ಯ ಮೈಯೊಳಗೆ ।

ಫಲಸತ್ಯ ಈ ಮಾತು ಪರುಷ ಸೋಂಕಿದ ಲೋಹ
ತಡವೆ ಅಪರಂಜಿಯಾಗುವುದು ||೩೧||

ದೇವೇಂದ್ರಗುತ್ತರವ ನಾರದ ಪೇಳಲು
ಕೇಳಲು ಸುರಗಣ ಸಭೆಯು ।
ಹುಡುಗನ ಗಜವೇನು ಕಡಿದಾಡಿಪ ಜಗವನ
ರೂಢಿಗೀಶನ ಮಹಿಮೆಯನು ||೩೨||

ಹರಗಣವಿರುತಿರಲು ಗಗನ ಮಾರ್ಗದಲತ್ತ
ಸುಗುಣರು ಕೇಳಿ ರಣವಾರ್ತೆ।
ಹಗಲು ಕತ್ತಲೆ ಕವಿದು ಹೊಗೆಯು ಬಾಣದ ಬತ್ತಿ
ಮಳ್ಗಿದ ಸೂರ್ಯನೆಂಬಂತೆ ||೩೩||

ಗಿರಿಗೆ ಕಾವಳ ಕವಿದ ತೆರದಿ ಮುತ್ತಲು ಬಂದು
ರಣಧೀರ ಬಲ್ಲಾಳ ಬಲವು ।
ಸುರಿಯುತ ಸೋನೆಯ ಮಳೆಯ ಭರದೊಳು ಅಂಬು
ತುರಗವು [ತೂಳಿಸೆ] ನಭ ಮುಖವ ||೩೪||

ಮುತ್ತಲು ಕಳಿಸಿಯೆ ರೊಪ್ಪದೊಡ್ಡಿಯ ಕುರಿಗೆ
ಕಟ್ಟಿದ ತೆರದಿ ಬಂಧನದಿ ।
ದಿಟ್ಟ ರಾಮನ ಮಂದಿ ತಟ್ಟಿ ತೊಡೆಗಳ ಬಡಿದು
ಇಕ್ಕಗೊಡದೆ ಹೆಜ್ಜೆ ಹೆಣಗಿ ||೩೫||

ಬಂದಿರೆ ಬಲ್ಲಾಳನ ಹೊಂದಿದ ಬಂಟರು
ಚೆಂದವೆ ನಿಮ್ಮ ಮನೆಯೊಳಗೆ।
ತಂ[ದಿ]ರೆ ತಲೆ ಇಂಡೆ ಕೂಳ ಕಾಗೆಗೆ ಚೆಲ್ಲಿ
ಹಿಂಡ ಕೂ[ಡಿರಿ] ನೀವು ಸಹಿತ ||೩೬||

ಹೊಳಕೆ ರಾಮನ ಮಂದಿ ಅಳುಕದೆ ಜವ ಮಾತ್ರ
ತಳ ತಳಿಸುತ ಕಾಂತಿಯೊಳಗೆ ।
ತಿಳಿಯಲಿಲ್ಲವೆ ಬುದ್ಧಿ ನಿಮ್ಮರಸು ಬಲ್ಲಾಳಗೆ
ಕಳುಹಿದನೆ ಕೊರಳ ಕೊಯ್ಸಲಿಕೆ ||೩೭||

ನಿನ್ನೆಯ ದಿನದೊಳು ಹನ್ನೆರಡು ಸಾವಿರ ಮಂದಿ
ಮಣ್ಣಿಗೆ ಸಂದರು ಯಮಪುರಕೆ ।
ಇನ್ನು ಸಾಲದೆಂದು ಯಮನೋಲೆ ಬರೆ[ದನೆ]
ಮುನ್ನಿಹುದೆ ಅವ ನಿಮಗೆ ಸ್ನೇಹ ॥೩೮॥

ಗೆದ್ದೆವೆನುತ ನಿನ್ನೆ ಕೊಬ್ಬಿಯಾಡಲು ಬೇಡ
ಒದ್ದೇವು ನೆಗೆದೆದೆ ಗುಂಡಿಗೆ ।
ಬುದ್ಧಿ ತಿಳಿಯದೆ ನಿಮಗೆ ಈ ಬಾಲ ಹುಡುಗನ ನೆಚ್ಚಿ
ಮದ್ದಾನೆಯೊಳಗೆ ಕೆಣಕುವರೆ ॥೩೯॥

ಹುಷಾರಾಗಿ ಮಾತಾಡಿ ಧಣಿಗಳಿಂದ ಹುಯ್ಯಲ
ಗೆಲಿದೆನೆಂಬುವ ಗರ್ವದೊಳಗೆ ।
ಮದಗಜ ಮಲ್ಲಯ್ಯ ಮರಿಸಿಂಹ ದೇವರಸ
ತೊಡೆವರು ನಿಮ್ಮರಸನ ಲಿಪಿಯ ॥೪೦॥

ಕೊ[ಲಿ]ಸಿಕೊಳ್ಳದೆ ಆಗಲುಳಿದು ಪೋದಿರೆ ನಿಮ್ಮ
ಮಡದಿಯರ ಮುಖವ ನೋಡುವರೆ।
ಪಡಿ ತೀರಿ ಬಂದದ್ದು ದೃಢ ನಿಜ ಮಲ್ಲಯ್ಯ
ಕೆಡದಿಹನೆ ಹಾರುವ ಮೂಳ ॥೪೧॥

ಹೊಡೆ ಇವರ ಹೆಚ್ಚಾಗಿ ನುಡಿವ ಮಾತಿಲಿ ಗರ್ವ
ಪಡೆ ಮುರಿದು ಅಡರೆ ಅರ್ಭಟಿಸಿ ।
ಕಡಿಕಡಿ ಎನುತಲಿ ಕಿತ್ತು ಬಲ್ಲೆಯ ಕತ್ತಿ
ತುಳಿಸಿದರು ಸಂಗಯ್ಯನೆಡೆಯ ॥೪೨॥

ವೀರ ಸಂಗಮನೆಡೆಯ ಹೊಗಲೇರಿ ಬಲ್ಲಾಳ
ರಾಯನ ಭಾವ ಮಲ್ಲಯ್ಯ।
ಮೂವತ್ತು ಸಾವಿರ ಕುದುರೆ ಬಲದೊಳಗೆ
ಸಾವಿಗಂಜದೆ ತುಳಕೊಂಡ ॥೪೩॥

ಎದೆಗೆಡದೆ ಸಂಗಯ್ಯ ಕೆಡಲಿಕ್ಕಿದನು ಒಂದು
ಗಳಿಗೆರಡು ಮತ್ತೆರಡು ಮಾತ್ರದಲಿ ।

ಹದ ಮೀರಿ ಒಳ ಪೊಗಲು ಮೊರೆದು ಸಂಗಮನಾಥ
ತಿರುಗಿ[ಸಿ]ದ ಚೆನ್ನಾಗಿ ಬಲವ ||೪೪||

ಚೆನ್ನಾದ ಬಲದೊಳು ವಾಜಿ ಮಲ್ಲಯ್ಯನು ಏರಿ
ಮುನ್ನೂರು ತಲೆಗಳ ಹೊಡೆದು ।
ಬ್ರಹ್ಮಲೋಕವು ಬಿಟ್ಟೆನೆನುತಲಾಗ
ಬೆನ್ನೊಡನೆ ಇರಲು ಲಕ್ಷ ಪೌಜು ||೪೫||

ವೀರ ಸಂಗಮರಾಯನುಳಿಯಲೆನುತ ಒಬ್ಬ
ಓಡಿಬಂದನು ರಾಮನೆಡೆಗೆ ।
ಏನ ಹೇಳಲಿ ರಾಮಭೂಪ ಸಂಗಮನಾಥ
ಪೋಗುವ ಸಮಯ ಯಮಪುರಕೆ ||೪೬||

ಯಾವಲ್ಲಿ ಎನುತಲಿ ಕುವರರಿರ್ವರು ತಮ್ಮ
ವಾಹನ [ಮೀಟಿ ಚಬಕಿ]ಯನು ।
ಮೂರಾರ ಹೊಡೆಯಲು [ಮಂಕ] ವಾಹನದಂತೆ
ಏರೆ ಭೃಂಗ ಝೇಂಕಾರದಂತೆ ||೪೭||

ಬೆನ್ನಾಗಿ ಬರುತಿರ್ಪ ಬಲದೊಡನೆ ಏರಲು ಲಕ್ಷ
ಮಾನ್ಯರು ಮಾರ್ತಂಡ ತುರಗ।
ಕಾರ್ಮುಗಿಲು ಕವಿದಂತೆ ಬರುವ ಪೌಜಿಗೆ ರಾಮ
ಬ್ರಹ್ಮರಾಕ್ಷಸನಂತೆ ಪೊಗಲು ||೪೮||

ಪೊಕ್ಕರು ಜಾನಕಿಯ ಪುತ್ರರು ಬರುವಂತೆ
ಮುಕ್ಕಣ್ಣ ಸುತ ಶರಭನಂತೆ ।
ಇಕ್ಕೆಲದೊಳು ಸವರಿ ಸಪ್ಪೆಯ [ನೆರೆ] ಕೊಂದು
ಹೊಕ್ಕಂತೆ ಕರ ಚಳಕದಲಿ ||೪೯||

ಕಬ್ಬು ಕದಳಿಯ ವನಕೆ ಕರಿ ನೂರು ಹಸಿದಿರ್ದು
ಬಿದ್ದಂತೆ ಬಾಚಿ ಸವರುತಲಿ ।
ಉಗ್ರ ಕೋಪಗಳಿಂದ ಎತ್ತಿ ಹೊಡೆಯಲು ರಾಮ
ಇದ್ದಂತೆ ಶರೀರ ತುಂಡಾಗಿ ||೫೦||

ಪೂರ್ವಭಾಗ ಕಾಟ ವರುಣ ಭಾಗ ರಾಮ
ತಿರುಹುತ್ತ ತುರುಗೋಲುಗಳ।
ಹರಿಸಾಡಿ ಸವರಲು ಮರದ ನೆಲ್ಲಿಯ ಕಾಯಿ
ಉದಿರೆ ಕುಟ್ಟಿದ ಪರಿಯಾಗೆ ||೫೧||

ತಿರುಹುತ ಖಡ್ಗವ ಮುಂಬರಿದು [ಸೈನ್ಯದ] ಮೇಲೆ
ಕೊರೆಯುತ ಕಳಲೆಯಂದದಲಿ ।
ಬಿರಿಸಿಂದ ಸೆಳೆಯಲು ಬಿಚ್ಚಿ ರಾಹುತ ತುರಗ
ಚತುರ ಭಾಗದಿ ಒರಗುವರು ||೫೨||

ಕರ ಮನಸು ದಣಿವಂತೆ ಹದಿನಾರು ಬೀದಿಯ ಕಡಿಯೆ
ಒರಗಲು ಹೆಣದ ಮೇಲ್ವೆಣನು ।
ಕಡಿಕೊಂಡು ಬರುತಿರ್ಪ ಮಲ್ಲ ಮಂತ್ರಿಯು ಕಂಡು
ಕಡಿಗೊಂಡ ಉರಗನ ತೆರದಿ ||೫೩||

ಬೆಂಬಲ ಒದರುವ ಭೇರುಂಡ[ನು] ಗಜ ಕಂಡು
ಕಂಡಿ ಕಾನನವ ಬೀಳ್ವಂತೆ ।
ಬಿಂಬದೊಳಗೆ ದೇಹ [ಒಂದಾಗಿ] [ಬಾ]ಳ್ವವರು
ಬಂದರು ಕಲಿಪಾರ್ಥ ಭೀಮ ||೫೪||

ಬೆನ್ನಾಗೆ ಬಲ್ಲಾಳರಾಜೇಂದ್ರ ರಾಯನ ಮಂದಿ
ಹಿಮ್ಮರಳೆ ರಾಮನ ಮಂದಿ ।
ಡೊಣ್ಣೆ ಬಾಣೆಯ ಮುದ್ದ ಎಮ್ಮೆಯ ಬಡಿವಂತೆ
ಹನ್ನೆರಡು ಬೀದಿಯ ಕಡಿದ ||೫೫||

ವೀರ ಸಂಗಮನಾಥ ಹೋಗಲೇರಿ ಕೋಟೆಯ
ಬಾಗಿಲ ಬಾಣ[ದಿ] ಕಡಿದು ।
ಮಾರಿಯ ಮುಖದವರು ಮದಗಜ ಶಕ್ತಿಯರು
ನಾಯಿಗೆ ಕಡೆಯಾಗಿ ಒರಗೆ ||೫೬||

ಸಿಟ್ಟಿನೊಳ್ ಸಂಗಯ್ಯ ಕುಟ್ಟಲು ತಲೆ ಮುಂಡ
ಹ[ತ್ರ]ದ ತೆರದಿ ಕೊರೆಯುತಲಿ।

ಬಿಟ್ಟ ನಯನವು ಬಾಯಿ ಕಟ್ಟಿ ಮಿಸುಕದೆ ಇರ್ಪ
ನೆಟ್ಟ ಫಲ ಮರನಂತೆ ಕೆಲರು ||೫೭||

ಮಂತ್ರಿಯ ಮಗ ನೀಲಕಂಠರಾಯನು [ಕುಟ್ಟಿ]
ಎಂಟು ಬೀದಿಯ ಮೇಲೆ ಕಡಿಯೆ ।
ಗುಂಟನೂರಮ್ಮಗೆ ಕುರಿಯನು ಕಡಿದಂತೆ
ಒಂಟಿ ಕತ್ತಿಲೆ ಸವರಿದನು ||೫೮||

ರಾಯ ರಾಮನ ಬಲ ರಣಧೀರ ಮನ್ನೆಯರೆಲ್ಲ
ಈ ಮೇರೆಯೊಳಗೆ ಸವರುವರು ।
ಏರು[ವಡೆದು] ಹದಿನಾರು ಸಾವಿರ ತುರಗ
ಓಡಾಡುತಿರೆ ಗೋವಿನಂತೆ ||೫೯||

ರಾಯ ರಾಮನು ಮರಳಿ ಕರಿಯ ಪೌಜಿಗೆ ಹೊಕ್ಕು
ತಾರ ಕಡಿಯಲು ನೂರೆಂಟ।
ಮೀರಿದ ಬಲವಂತ ಮದ್ದಾನೆ ಮಲೆಯುತ
ಕೋಣನ ತೆರದಿ ಓಡಾಡಿ ||೬೦||

ಬಣ್ಣ ಬತ್ತಿಯ ಸುಡುವ ಜಾಣರೆಲ್ಲರ ಒಯ್ದು
ನೀರ ಹಳ್ಳಕೆ ಹಾಕಿ ಬಿಡಲು ।
ಏನು ಮಾಡನು ಇವನು ಪ್ರಾಣ ಉಳಿಯದುಯೆಂದು
ರಾಮಗೆ ಬಾಣಂಬು ಮಳೆಯು ||೬೧||

ಏಳಲು ಸಮನರ್ಥ ಯಮನ ನಗರದ ದಾರಿ
ತಾವು ಇಲ್ಲದೆ ಇಟ್ಟಣಿಸಿ ।
ಶ್ರೋಣಿತ ಪರಿಯಲು ಬಾಣತನಯನಕ್ಕೆ
ಪಾದ ಮುಳುಗಿದ ಹಳ್ಳ ತೆರದಿ ||೬೨||

ರಣಮಯವಾಗಲು ತಗಲಿದ ಪೌಜೆಲ್ಲ
ಗೊನೆವೊಡೆದ ಬಾಳೆಯ ತೆರದಿ ।
ಒಂದೆಸೆಯೊಳಗಿರ್ದ ಮಂತ್ರಿಯು ಇದ ಕಂಡು
ಕಡೆಗಾಲ ಬಂತೀಗ ನಮಗೆ ||೬೩||

ಆಡಿದೆವು ಪೌರುಷವ ಕೂಳ ಕೊಬ್ಬಿನ ಮೇಲೆ
ಓಡಿದರೆ ಬಲ್ಲಾಳನೇನೆಂಬ ।
ನ[ಮಗೆ] ಶೂಲವ ಕೆತ್ತಿ ಕೊಡನೆ ಆಹುತಿಯಲ್ಲಿ
ಹೋಗುವ ಪ್ರಾಣವನಿಲ್ಲಿ ಕೊಡುವ ॥೬೪॥

ಹೆಮ್ಮೆಯ ನುಡಿವಂ[ತೆ] ಬ್ರಹ್ಮ ಕೊಟ್ಟನು ಹಿಂದೆ
ಧರ್ಮರಾಯಗೆ ಮುನಿದ ಕೌರವನು ।
ನಿರ್ಮಾಯವಾದಂಥ ತೆರ ನಮಗೆ ಬಂತೆಂದು
ಒಮ್ಮೆ ದೇವರಸ ಚಿಂತಿಪನು ॥೬೫॥

ಪಾಪಿಯ ಕೆಡಿಪರಾರು ಪುಣ್ಯಾತ್ಮನ ಬದುಕಿಪರಾರು
ಭೂತಕಾರಂಗಳೆ ಸಾಕ್ಷಿ ।
ಪಾಪಕ್ಕೆ ಹೊರಲಾದ ಯಲ್ಲಯಗೆ ರಕ್ಷಿಸಲು
ಹಾಕಿತ್ತು ವಿಧಿ ನಮಗೆ ಕಲ್ಲ ॥೬॥

ಬಲವನು ಲಯಮಾಡಿ [ಅಳಿದು]ಹೋಗಲುಯೆಂದು
ಇಳೆಯ ಕೆತ್ತಿಸುವ ಬಾಚಿಯಲಿ ।
ಮಡದಿ ಮಕ್ಕಳ ಮುಂದೆ ನಗೆಗೇಡಾಗುದಕಿಲ್ಲ
ಮಡಿದು ಹೋಗುವುದೆ ಲೇಸುಂಟು ॥೬೭॥

ಇನ್ನೇಕೆ ಮಲ್ಲಯ್ಯ ಜೀವ ಮಡದಿಯ ಆಸೆ
ಬ್ರಹ್ಮಲಿಖಿತವು ತೀರಿ ಬಂತು ।
ತಮ್ಮ ಮನದೊಳು ತಾವು ನಿಶ್ಚ[ಯಿಸಿ] ಕಾರ್ಯಕೆ
ಮುನ್ನೇಳ್ವ ದೆಸೆಯಿಂದಾಕ್ಷಣದಿ ॥೬೮॥

ಎರಡು ಪೌಜನೆ ಮಾಡಿ ಎಂಬತ್ತು ಸಾವಿರ ಬಲವು
ತೊರೆಯುಬ್ಬಿ ಭೋರ್ಮೊರೆವಂತೆ ।
ಸುರಿಯಲು ಸರಳಂಬು ಬಾಣ ಪೆರ್ಮಳೆಯಾಗಿ
ತೊರೆದು ಏರಿದರು ಜೀವವನು ॥೬೯॥

ಹೊಡೆವ ಭೇರಿಯ ಕಾಳೆ ಗುಡುಗಿನಾರ್ಭಟೆಯೊಳು
[ಹುಡಿಹುಡಿ]ಯಾಗಲು ಧರಣಿ।

ಹಿಡಿಗಲ್ಲು ನುಗ್ಗಾಗಿ ಗೆಂಟೆ ಶಣಬೆದ್ದು
ಪ್ರಭೆಯಡಗೆ ಡೊಳ್ಳಿನಾರ್ಭಟಕೆ ||೭೦||

ಮತ್ತೆ ಕೂಡಲು ರಣವು ಇತ್ತರದಿ ಸಮನಾಗಿ
ಕಿಚ್ಚು ಕಿಚ್ಚುಗಳ ಸುರಿಸುತಲಿ ।
ಕತ್ತಿಗಳು ಕಣಕಟ್ಟು ಎನಲು ಕತ್ತಲೆಯೊಳು
ಎತ್ತ ನೋಡಲು ಮಿಂಚುವುಳವು ||೭೧||

ವೀರ ಸಂಗಮನಾಥ ಧಾರವಾಡಿಯ ಚಿಕ್ಕ
ಏರಗೊಡದೆ ಎಡಬಲನ ।
ನೂರಾರು ಸರಳಂಬು ಮಾಡಿ ವಾಚಿಗೆರೆಯ
ಕೀಳದೆ ಹೊಡೆದಾಡುತಿಹರು ||೭೨||

[ಅ]ತ್ತಲು ರಣರಂಗ ಬೆಟ್ಟಕ್ಕೆ [ಅನಿಲ] ಬೇಗೆ
ಇಟ್ಟ ಗಾಳಿಯ ತೆರನಂತೆ ।
ಹೊಕ್ಕು ಕಡಿದರು ಎನ್ನ ಹೊಳಕೆ ಬಲ್ಲಾಳನ
ಎಕ್ಕಟಿಗರು ಬಿಡಿಸಿಕೊಂಡು ||೭೩||

ದಕ್ಕಡಿತನದೊಳು ಮಲ್ಲ ರೋಷದಿ ಹೊಕ್ಕು
ಕೊಚ್ಚಿದ ಎರಡು ಬೀದಿಯನು ।
ಸಂದು ಬೀಳಲು ನೋಡಿ ರಾಜೇಂದ್ರ ಬಲ್ಲಾಳನ
ಮಂದಿ ನೂಂಕಲು ಭೋರ್ಗರೆದು ||೭೪||

ಕಂಡರು ಕಲಿಪಾರ್ಥ ಪ್ರಚಂಡ ರಾಮನು ಕಾಟ
[ಕುಂಜರ] ಪದ್ಮ ಕಂಡಂತೆ ।
ಮೇಘದಿ ಗುಡುಗು ಮಿಂಚೇರಿ ಗುಡುಗಿಳಿವಂತೆ
[ಮೂ]ಡಿಸಿ ಕೋಪ ಸಿಡಿಲಾಗಿ ||೭೫||

ಕಾಳಿಂಗಗೆರಗುವ [ಕಾಳೋರಗನೊಲು] ಬಂದು
ಏರಿದರು ಎರಡು ಭಾಗದಲಿ ||೭೬||

ಹೊಕ್ಕರು ಅತಿಭರದಿ ಮದವುಕ್ಕುವ ಕರಿ ಬಂದು
ಹೊಕ್ಕಂತೆ ಬಾಳೆಯ ವನವ ।

[ಕಿತ್ತಿಳೆಯ] ತೆಗೆದಿಡುವ ಶಕ್ತಿ ಸಾಹಸದೊಳು
ಕೊಚ್ಚಿ ಕೊರೆವರು ಎರಡು ಕಡೆಯು ||೭೭||

ಲಾವಿಗೆ ಹಿಂಡಿಗೆ ಅಡಗ ಗಿಡುಗನು ಹೊಕ್ಕು
ಮೇ[ರೆ]ಯಿಲ್ಲದೆ ಕೊಲ್ವ ತೆರದಿ ।
ಮೀರಿದ ಬಲವಂತ ವೀರಯೆಕ್ಕಟಿಗರು
ಆರುಸಾವಿರ ತೀರಿಸಲು ||೭೮||

ಭೇರಿಯ [ಛತ್ತರದ] ತುರಗ ವಜೀರರ
ಕಡಿಯಲು ಕಬ್ಬನರಿದಂತೆ ।
[ಅಳಿದ ಇರಿದ] ತುರಗ ಸರಿ ಇರ್ವ ಪಾಲಾಗಿ
ಧರಣಿಯ ಮಣ್ಣ ಕಚ್ಚುವರು ||೭೯||

ಕಾಗೆಯ ಹಿಂಡಿನೊಳ್ ಖಗರಾಜ ಹೊಕ್ಕಂತೆ
[ತ]ರಿದಾ[ಗ] ಬಲ್ಲಾಳ ಪೌಜ ।
ಮಾರಿಗೆ ಹೊಡೆದಂಥ ಕುರಿಗಳಂದದಿ ಕಡಿಯೆ
ತಾರ ಮಲಗಲು ಹತ್ತು ಬೀದಿ ||೮೦||

ಹೊಕ್ಕನು ಆಮೇಲೆ ಒಕ್ಕಲಿಗ ಮುದ್ದಣ್ಣ
ಹುಚ್ಚ ಕೋಣನು ರೊಚ್ಚಿಗೆದ್ದು ।
ಹೊಕ್ಕು ಕದಳಿಯ ತೋಟ ಇಕ್ಕೆಲದಿ ಬಡಿವಂತೆ
ಎತ್ತಿ ಇಳುಹಲು ದೊಣ್ಣೆಯಲಿ ||೮೧||

ವೀರ ಸಂಗಮದೇವ ತಾನೊಂದು ಮೂಲೆಯ
ಭಾಗದೊಳಗೆ ಹೊಗಲೇರಿ ।
ತೋಳ ಕುರಿಯೊಳು ಹೊಕ್ಕು ಸೀಳಿ ಈಡಾಡುವ
ಮೇಲೇರಿ ಕಡಿವ ಸಾವಿರವ ||೮೨||

ರಾಯ ರಾಮನೆ ಅರ್ಧ ಧೀರನು ಎಡಗೈಯ
ಮಾದಿಗ ಹಂಪನು ಪೊಕ್ಕು ।
ಕಾಲ್ವಿಡಿದು ಒಗೆದನು ನೊಂದರು ಸಾವಿರ ಬಲ
ಮೂಗನರಿದ ಮುಸು[ಡಿ] ಸಹಿತ ||೮೩||

ಗಂಡುಗೊಡಲಿಯ ಸರ್ಜ ಬಂದು ಹೊಗಲೇರಿದ
ಹನ್ನೊಂದು ಸಾವಿರ ಬಲದೊಳಗೆ ।
ತುಂಡೇಳೆ ಹೊಡೆವನೀ ಬಂದ ಹಂಪನುಯೆಂದು
ಬಂದು ಮುತ್ತಿದನು ಭೋರ್ಗರೆದು ||೮೪||

ಹತ್ತಿತು ರಣರಂಗ ಹಂಪನ ಎಡಬಲದಿ
ಮುತ್ತಿತ್ತು ಜೇನ್ನೊಣದಂತೆ।
ಸಿಕ್ಕಿದ ರಣಧೀರ ಹಂಪನೆನ್ನುತ ಬಂದು
ಹೊಕ್ಕನು ವೀರಸಂಗಯ್ಯ ||೮೫||

ಗಂಡುಗೊಡಲಿಯ ಸರ್ಜ ಭೇರುಂಡನಂದದಿ ಹೊಡೆದ
ಪ್ರಚಂಡ ರಾಮನ ಪೌಜಿನೊಳಗೆ ।
ದಿಂಡನು ಅರಿದಂತೆ ಮೂರು ಬೀದಿಯ ಕಡಿಯೆ
ಹಿಂದಾಗೆ ಹಂಪ ಸಂಗಮನು ||೮೬||

ವೀರನು ಬಲವಂತ ರಾಯ ಬಲ್ಲಾಳನ
ಮಾ[ವ]ನ ಮಗನು ಬಿರಿದಾಂಕ ।
ತಾಯಿಗೆ ತಾನೊಬ್ಬ ತರಳ ಕೋವಿದ ರನ್ನ
ಹೊಗಲೇರಿದ ಹನುಮಂತ ||೮೭||

ಕಡಿಯೆನುತ ಕಾಕ್ಕೊಡೆದು ಮುಂದಕೆ ಮೆ[ಟ್ಟೆ]
ಮಡುಗಲು ಬಲವು ಜಜ್ಝರಿಸಿ।
ಹಿಡಿದೊಗೆಯುತ ಒಂಟೆಯ ಕುದುರೆ ಮಂದಿಯ
ಸಾಹಸದೆ ಬಡಿದ ಸಾವಿರವ ||೮೮||

ಹಂಪಗೆ ಹನುಮಗೆ ಹತ್ತಲು ಜಗಳವು
ಸೊ[ಕ್ಕಾ]ನೆ [ಹಿಂ]ಡು ಮಲೆವಂತೆ ।
ಒಕ್ಕಲಿಗರ ಮುದ್ದ ಕೊಡಲಿ ಸರ್ಜಗೆ ಜಗಳ
ಹತ್ತಲು [ಹುಲಿವ್ಯಾ]ಘ್ರನಂತೆ ||೮೯||

ವೀರಸಂಗಮನಿಗೆ ಪ್ರಧಾನಿ ದೇವರಸಗೆ
ಕೂಡಿತ್ತು ಕತ್ತಿ ರೋಷದಲಿ ।

ಹೋರುತಿರಲು ಇವರು ಸೀಗೆ ಬಾಳೆಯ ತೆರದಿ
ರಾಮ ಕಾಟಣ್ಣ ಒಂದೆಸೆಯ ||೯೦||

ಹೊಡೆದರು ತಮ್ಮೆರಡು ಕರ ಮನಸು ದಣಿವಂತೆ
ಹರದಾರಿ ಅಡ್ಡಗಲ ಭೂಮಿ।
ರಣಮಯವಾಗಲು ನಮ್ಮ ಹಂಪನು ಮುದ್ದ
ಬಿರಿದಾಂಕ ಸಂಗಯ್ಯ [ಒ]ಳಗೆ ||೯೧||

ಅನಿತರೊಳಗೆ ಒಬ್ಬ ಚರನು ಹರಿವುದ ಕಂಡು
ಎರಗಿ ಬಿನ್ನವಿಸೆ ।
ಬಿರಿದಿನ ಸಂಗಯ್ಯ ಭೀಮ ಶಕ್ತಿಯ ಹಂಪ
ಮುಳುಗುವರು ಮುದ್ದಣ್ಣ ಸಹಿತ ||೯೨||

ಯಾವಲ್ಲಿ ಎನುತಲಿ ರಾಯ ಕಾಟಣ್ಣನು
[ಭೇರುಂಡನುಗ್ರದಿ] ರಾಮ।
ಆಹತ ತಾಪದ ಸಿಂಹದಾರ್ಭಟೆಯಲ್ಲಿ
ಈಡಾಡುತಿರಲು ತಲೆಗಳನು ||೯೩||

ಕಾಟಣ್ಣ ಕಟ್ಟುಗ್ರಾಟೋಪದೊಳಗೆ ಪೊಕ್ಕು
ಮೇಕೆಯ ಶಿರವನರಿದಂತೆ ।
[ತಾಕಿದ] ಮೂರಾರು ಬೀದಿಯ ಸವರುತ್ತ।
ಕಾಕೆದ್ದು ಪೌಜನ್ನು ಹೊಡೆಯೆ ||೯೪||

ಸಿಟ್ಟಿನೊಳ್ ರಣರಾಮ ಕುಟ್ಟಲು ತಲೆ ಬುರುಡೆ
ಹತ್ತಿದ ತೆರದಿ ಶಿರವರಿದು ।
ರೆಪ್ಪೆ ಮುಚ್ಚದೆ ಕಣ್ಣ ನೆಟ್ಟ ಕಲ್ಲಿನ ತೆರದಿ
ನಿಂದಿಪ್ಪ ಹೆಣ ಕೆಡೆಯದಂತೆ ||೯೫||

ಕಡಿಕಡಿಯೆನುತಲಿ ಸಿಡಿಲಾರ್ಭಟೆಯೊಳು
ಹೊಡೆಯಲು ಹನುಮನ ತಲೆಯ ।
ಒಡೆಯ ಚೆನ್ನಿಗರಾಮ ನೀವಿಲ್ಲದಿರ್ದಡೆ ಎನ್ನ
ಬಿಡನೆಂದು ಹಂಪ ಜಾಡಿಸಿದ ||೯೬||

ಗಾಯವಡೆದ ವ್ಯಾಘ್ರ ಗೂಡಿನೊಳ್ಪೊಕ್ಕಂತೆ
ರಾಯ ಕಾಟಣ್ಣನು ಪೊಕ್ಕು ।
ಮೀರಿದ ಬಲವಂತ ಕೊಡಲಿ ಸರ್ಜನ ತಲೆಯ
ಹಾರಿಸಿ ಕಂಡೆಯಲಿ ಕಡಿದ ॥೯೭॥

ಮುತ್ತಿದ ದಳವೆಲ್ಲ ಇತ್ತರಕೆ ಮಲಗಿತ್ತು
ಸೊಕ್ಕು ನಿದ್ರೆಯು ಬಂದ ತೆರದಿ ।
ವ್ಯರ್ಥವಾಯಿತು ಎಂದು ಮಲ್ಲಮಂತ್ರಿಯು ಕಂಡು
ಸಿಕ್ಕದೆ ಕೆಡೆದೋಡುತಿರಲು ॥೯೮॥

ವೀರ ಸಂಗಯ್ಯನು ಬೆನ್ನ[ಟ್ಟಿ] ಬಾಣೆಯ ಮುದ್ದ
ಊರ ಬಾಗಿಲಕಟ್ಟಿ ಪಿಡಿಯೆ ।
ಮಾದಿಗ ಹಂಪನು ಜೋಡಿಸಿ ಹಿಂಗೈಯ
ಸೇದೆ ಇಬ್ಬರನು ಪಿಡಿತರಲು ॥೯೯॥

ರಾಯ ರಾಮನೆ ರಣಶೂಲ ಮಾರ್ತಂಡನೆ
ಲಾಲಿಸು ರಾಮಭೂಪಾಲ ।
ರಾಯ ಬಲ್ಲಾಳನ ಪ್ರಧಾನಿ ಮಲ್ಲನ ತಂದೆ
ಮೂಗನರಿವೆನು ಕೊಡು ವೀಳ್ಯೆ ॥೧೦೦॥

ನಕ್ಕನು ರಣವಿಜಯ ತಕ್ಕುದಲ್ಲವೊ ಹಂಪ
ಗೊತ್ತುಗಾರರ ಕೊಲ್ಲುವುದು ।
ಸಿಕ್ಕಿದವನ ತಲೆಯ ಕೊಲ್ಲೆ ಮೆಚ್ಚನು ಶಿವನು
ಕೊಟ್ಟು ಪಾರದಿ ಪಾಳ್ಯ ಕಳುಹು ॥೧೦೧॥

ತಣ್ಣಗಾಗಲು ರಣವು ತಗ್ಗು ತೆವರು ಹಳ್ಳ
ಕೆಮ್ಮುಗಿಲಂತೆ ಕಾಣುವುದು ।
ಧರ್ಮಕಾಳೆಯ ಪಿಡಿಸಿ ಧುರದೊಳು ಪಿಡಿದವರ
ಭಯ ಬೇಡಿ ಪೋಗಿರೆಂದೆನುತ ॥೧೦೨॥

ರಾಯ ರಾಮನು ತಿರುಗೆ ಬೇರೊಂದು ಹೊಸ ಪಾಳ್ಯ
ಮೂಡಲ ದಿಕ್ಕಿಗೆ ಇಳಿದು ।

ರಾಜೇಂದ್ರ ಕಂಪಿಲನ ಆತ್ಮಜರು ಸದರಲಿ ಕುಂತು
ಶೋಧಿಸುತಂದವ[ರು] ರಣವ ||೧೦೩||

ನೀಲಕಂಠನೆ ಮಂತ್ರಿ ಲಯವಾದ ಮನ್ನೆಯ
ಲಾವಣಕರಿಸುಡಿಸುವ ।
ಸ್ವಾಮಿ ಒಳಿತು ಎಂದು ತಳವಾರಗೆ ನೇಮಿಸಲು
ಆಗ ಶೋಧಿಸಿ ತಲೆಯ ತಂದು ||೧೦೪||

ಬಲುಮೆ ಮನ್ನೆಯರೊಳು ಯಾರು ಬಿದ್ದರುಯೆಂದು
ಕಳೆಗುಂದಿ ರಾಮ ಕೇಳುವನು ।
ಮಲೆವ ರಾಯರ ಗಂಡ ಲಾಲಿಸೆನುತ ಮಂತ್ರಿ
ದಳದಳ ನೋಡಿ ಪೇಳಿದನು ||೧೦೫||

ಭಾಪುರೆ ಬಲವಂತ ಬಳ್ಳಾರಿ ಲಿಂಗನು ಸತ್ತ
[ರಾ]ಚೂರ ತಮ್ಮನು ಬಿದ್ದ।
ಹಾ[ರು]ವ [ಚಿಕ್ಕಯ್ಯ] ಹರಕೂತೆಯ ಜಗಳ[ದ]
ಪ್ರೀತಿಯ ಮಲ್ಲಯ್ಯ ಬಿದ್ದ ||೧೦೬||

ದಾರವಾಡಿಯ ಚಿಕ್ಕ ಧರ್ಮಹುರಿಯ ಲಕ್ಕ
ಸೇರಿದರು ವೈಕುಂಠವಾಸ।
ನೂರಾಳ ಗುರಿಕಾರ ಹಳ್ಳಿಕಾರನು ಬಿದ್ದ
ಒಂದಕ್ಕೆ [ಆಳೊಂದು] ಬೀಳೆ ||೧೦೭||

ತಾಳಿ ಮನದೊಳು ಚಿಂತೆ ಅನು[ವಾಗಿದ್ದರು] ಬೀಳೆ
ತೀರಿತು ಮಿತಿಗಾಲ ಪ್ರಾಪ್ತಿ ।
ಸಾಯದೆ ಉಳಿವಂಥ [ಜೀವುಳ್ಳ]ರಿಗೆ ಉಂ[ಟು]
ಊರ ಸಂತೆಗೆ ಹೋದ ತೆರದಿ ||೧೦೮||

ಸೋಲು ಗೆಲುವೆ ಇದಕೆ ಕಾಯಿಗೆ ಹಣ್ಣಾಗೆ
ತೀರಲು ತಂದಂಥ ಪಡೆಯು ।
ಸೇರುವರಲ್ಲದೆ ಇರುವ ಜೀವನವಿಲ್ಲ
ಬೇಗದಿ ಅಗ್ನಿಯ ಕೊಡಿಸು ||೧೦೯||

ಸಾವಿರದ ಐನೂರು ಲಾವಣಾವ ಬರಸಿದ
ಗಾಯ [ಕಾ]ಯಗಳು ಮುನ್ನೂರು।
ರಾಯ ಕಂಪಿಲನೆಡೆಗೆ ಬರೆದು ಲೇಖನ ಕಳುಹಿ
ತಾನಿರಲು ರಾಮ ಸುಖದೊಳಗೆ ॥೧೧೦॥

ರಾಯ ರಾಮನ ಮಂದಿ ಶೃಂಗರವಾಗಿ ನಡೆತಂದು
ಬೊಪ್ಪ ಲಗ್ಗೆಯ ಪಾಲಿಸು ಶೂರ ।
ಹಾಕುವೆವು ಹ[ಲ್ಲೆಯ] ಹಳೆಬೀಡ ಪಟ್ಟಣಕ್ಕೆ
ಅಭಯ ಪಾಲಿಸೆಂದು ಕರಮುಗಿಯೆ ॥೧೧೧॥

ಸಮಯ ಕಾಲವನರಿತು ಗೆಲಬೇಕು ವೈರಿಯ
ಮುಳುಗು ಮುಗ್ಗಿದ ಕಾಲದೊಳಗೆ ।
ಸರಿಬಂದು ಗುಂಡಿಯ[ಲಿ] ಕೆಡೆದಾಗ ಜನ[ರೊಂ]ದು
ಇಡಬೇಕು ಕಲ್ಲೆಂಬ ಗಾದೆ ॥೧೧೨॥

ಕೊಡಬೇಕು ನಮಗವನು ತುರಗ ಆನೆಯ [ಲ]ಕ್ಷ
ನಡೆನುಡಿವ ಮಂತ್ರಿ ಮನ್ನೆಯರ ।
ಬಡವ ಬಗ್ಗರ [ಕೂ]ಲಿಗೆ ನಡೆಸಯ್ಯ ಮಧ್ಯಾಹ್ನ
ದೊಳಗಾಗಿ ಅರಸ ತರುವೆವು ॥೧೧೩॥

ಇಂದಿಗೆ ಸೈರಿಸಿ ಮುಂಜಾನೆ ಕೊಡುವೆನು
ನೊಂದವರ ಬಹಳ ನೋಯಿಸಿದರೆ ।
ಮುಂದುಂಟು ಯಮಬಾಧೆ ಕೊಡದಿರಲು ಕಪ್ಪವ
ಬೆಳಗು ಕಾಲದಿ ವೀಳ್ಯ ಕೊಡುವೆ ॥೧೧೪॥

ಮಂದಿ ಮಕ್ಕಳಿಗೆಲ್ಲ ತಮಂಥ ಬುದ್ಧಿಯ ಪೇಳಿ
ಇಂದವನುತ್ತರ ನೋಡುವೆನು ।
ಚೆಂದದಿಂ ಮನ್ನಿಸಿ ಕಳುಹೆ ಚೆನ್ನಿಗರಾಯ ಆ
ನಂದದಿ ಪಾಳ್ಯೆಯದಿ ಇರಲು ॥೧೧೫॥

ಲಾಲಿಸಿ ಬಲ್ಲಂಥ ಜ್ಞಾನವುಳ್ಳವರೊಲಿದು
ಮೇಲೆ ಬಲ್ಲಾಳ ಪ್ರತಾಪ।

ಕೇಳಲು ರಣದೊಳು ಉಳಿದ ಮಂದಿಯ ಧರ್ಮ
ಕಹಳೆಯ ಸ್ವರವು ಕರ್ಣದಲಿ ||೧೧೬||

ಹಳ್ಳಕೊಳ್ಳವ ಬಿದ್ದು ಮುಳ್ಳು ಬೇಲಿಯಲಿರ್ದು
ಅಲ್ಲಿ ನೋಡುವರು ತಲೆಯೆತ್ತಿ ।
ಬಲ್ಲವರು ಹತ್ತೆಂಟು ಹೆಣದೊಳಗೆ ಮಲಗಿರ್ದು
ಮೆಲ್ಲನೆ ಎದ್ದು ಸಾಗುವರು ||೧೧೭||

ಸಿಕ್ಕದೆ ಓಡಿದ ಹೊಕ್ಕ ಮಂದಿಯು ಬಂದು
ಬೆಟ್ಟ ಗುಡ್ಡವನೇರಿ ನೋಡಿ।
ಕಟ್ಟಿಗೆ ಆಯ್ತಂತ ಗೊಲ್ಲರ ತೆರದೊಳು
ಬೆಚ್ಚಿ ಬೆದರುವರು ರಣ ಕಂಡು ||೧೧೮||

ಗಿಡ ಮೆಳೆಗಳ ಬಿದ್ದು ಕೆಲರು ಬಲ್ಲಾಳನ
ವಾಲಗ ಸಾಕು ದಮ್ಮಯ್ಯ।
ಜೀವ ಇಂದಿಗೆ ಉಳಿದು ಹೋಗಿ ನಾಡಿನ ಮೇಲೆ
ಬೇಡಿ ಉಂಡರೆ ಹೀನಯವೇ ||೧೧೯||

ಏಳೂರ ತಿರಿಯಲು ಸೇರು ಹುಟ್ಟದೆ ಮೂಳ
ಮಾಡಬೇ[ಕೇನು] ಸಂಬಳವ।
ನೋಡಯ್ಯ ಈ ಕರ್ಮ ಜೇನಿಗೆ ಕಿಚ್ಚಿಟ್ಟ
[ತೆರನಾ]ಯಿತಯ್ಯ ಲಕ್ಷಜೀವ ||೧೨೦||

ಹರಹರ ಈ ಪಾಪ ಧರೆಯೊಳಗೆಲ್ಲುಂಟು
ಕುರಿಗಿಂದ ಕಡೆಯೆ ಈ ಜನ್ಮ ।
ದುರಗಿಯ ಹೆಸರ್ಹೇಳಿ ಹರಕೆಯವರು ಕಡಿದ
ತೆರನಾಯಿತಲ್ಲ ಈ ಜಗಳ ||೧೨೧||

ತೋಳು ರಟ್ಟೆಗಳರಿದು [ಮೇಲೆ] ಮುಸುಡಿಯ [ಮೇಲೆ]
ಜೋರಿಡುತ ರಕ್ತಮಾಂಸಗಳು ।
ನೀರ ಕಾಣುತ ಕುಡಿದು ಗಾಯ ಸೊಕ್ಕಲು ಒರಗಿ
ಹೋದರು ಕಡೆ[ಗೆ] ಜಲದಲ್ಲಿ ||೧೨೨||

ಕೊರಗುತ ಸೊರಗುತ ಒರಗುತ ಬರುವರು
ಹರವಿ[ಗಡಿಗೊ]ಡೆದಂತೆ ರಕ್ತ ।
ಸುರಿದು ಬೀದಿಯ ಒಳಗೆ ಅಡಗಿ ಮನೆಗಳ ಪೊಕ್ಕು
ಪ್ರಾಣಬಿಟ್ಟಾರು ಹಲಕೆಲರು ||೧೨೩||

ದಂಡೆಲ್ಲ ವಿಪರೀತ ಒಂದಾಗಿ ಬರಲೂರ
ರಂಡೆಯರ ಬೊಬ್ಬೆಯಾರ್ಭಟಿಸಿ ।
ಕೆಂಡವ ತುಳಿವರೆ ಅಂಗಾಲ ಉರಿನೆತ್ತಿ
ಗೊಂಡಂತೆ ನಾರಿಯರು ಹೊರಳೆ ||೧೨೪||

ಕಟ್ಟಿದೆ ಮಂಡೆಯ ಬಿಚ್ಚಿದ ಕೂದಲು
ಕಟ್ಟಿಕೊಂಬುತ ಎದೆ ಬಾಯಿ ।
ಕೆಟ್ಟೆ ಎಮ್ಮಯ ಗಂಡ ಸತ್ತನೆ ಯಮನೂರ
ಬಿಟ್ಟಿ ಹೋದನೆ ತಿರುಗದಂತೆ ||೧೨೫||

ಬೀಡು ಸಾಲಿನ ಒಳಗೆ ಕೇರಿ ಮನೆಗಳ ಸಂದಿ
ಊರೆಲ್ಲ ಕೋಳಾಹಳ ಎದ್ದು ।
ಯಾರು ಉಳಿಯದೆ ಎಮ್ಮ ಭಾವ ಮೈದುನ ಸತ್ತ
ಆಡೊ ಮಕ್ಕಳ ಕೊರಳ ಸುತ್ತಿ ||೧೨೬||

ಹಸುಳೆಯರು ಫಲ[ವ]ಕ್ಷ ಮುಖವ ಕಾಣದೆ ಹೆಣ್ಣು
ಬಸವಳಿದು ಬಡಕೊಂಡು ಎದೆಯ ।
ಕುಸುಮಬಾಣನ ತಲೆಯ ಕಾಣದೆ ಸತಿಯರು
ದೆಸೆಗೆಟ್ಟು ಸಾವಿರ ಬೊಬ್ಬೆ ||೧೨೭||

ಕೋಮಲ ಕಣ್ಣು ಕಂಠೀರವ ನಡುಮಧ್ಯ
ಬಾಳೆಯ ತಳಿರಂತೆ ವದನ।
ಬರಲಾಗಿ [ಒಂದೆಂಟು] ಮಾಸದ ಸತಿಯರು
ಸೂಸಲು ದುಃಖ ನಯನದಲಿ ||೧೨೮||

ಚಪಳೆಯರು ಚೆಂದುಟಿಯ [ಮಿನುಗಿ ವರ]ಪುರುಷನ
ರತಿಗಂಡು ಒಂದೆರಡು ಫಲ[ದ]।

ಕಕುಲಾತಿ [ತಳೆ]ದಂಥ ಕಾಂತೆಯರು ಮೂರೆರಡು
ದಶಸಾವಿರವೆಣ್ಣು ದುಃಖದಲಿ ||೧೨೯||

ಪತಿಯಳಿದು ಸಂತಾನ ಗತಿಗೊಂಡು [ತನ್ನಿರ್ವ]
ಸುತರುಳಿದ ರಂಡೆಯರ ಬೇಗೆ।
ಮೃತವಾದನಯ್ಯಯ್ಯೊ ಮ[ಗು]ವಿಗೆ ತಿಂಗಳು
ಸೊಸೆ ಮಗನ ಕೈಗೆ ವಾರ್‍ಯಾಗಿ ||೧೩೦||

ಹೊರಳುತ ಹುಡಿಯೊಳು ಅರೆಬಾಳ ಬರೆದಳೆ
ಮುಂಡೆ ಕೆರೆಯನು ಒಡೆದಂತೆ।
ಹರಿದು ನಯನದ ಜಲವು ಭೂಮಿಯು ಕೆಸರೇಳೆ
ತರಳೆಯ[ರ] ಬೊಬ್ಬೆ ಈ ತೆರದಿ ||೧೩೧||

ಮಡದಿಯಲ್ಲಿನ ಕೈಯ ಮುಖದ ಮೇಲಣ ಮೀಸೆ
[ಒತ್ತಿ] ಬರುವ ಕೆಮ್ಮೀಸೆ।
ಬಿದಿಗೆ ಚಂದ್ರನ ರೂಪ ಸುಗುಣನಳಿದ ಮೇಲೆ
ಹೊರೆವುದೆ [ಹೀನ] ಹೊಟ್ಟೆಯನು ||೧೩೨||

ಸತ್ತುದು ನಿಶ್ಚಯವೆ ಮತ್ತೊಮ್ಮೆ ಹೇಳಿರೊ
ಕುಕ್ಕುವೆ ಕಲ್ಲಿಗೆ ಬಳೆಯ ।
ದತ್ತಗೇಡಿಯು ನಿ[ನ್ನ] [ಬೇಡೆ ನಾ] ಸಂಬಳವ
ಕತ್ತೆ ಸೂಳೆಯೆ ಹೋಗೆಂ[ದೆ] ||೧೩೩||

ಸಂಬಳವ ಬಿಡಿ ಪಾಪಿ ಆರಂಬ ಮಾಡೆನಲು
ಕಂಡಿ ಬಗ್ಗದೆ ಕಡೆ ಮಳಗಿ ।
ಹೆಂಡತಿಗೆ ರಾಟಿಯು ....
ಗಂಡನೆ ಕಾಡೇಳು ಮಣ್ಣು ||೧೩೪||

ಸಾವ ಪ್ರಾಯವೆ ಅಕ್ಕ ಆರು ತಿಂಗಳು ಕಟ್ಟೆ
ನೀರಬಾವಿಗೆ ಹಾಕಿಬಿಡಲು ।
ಹೋಗಬ[ಹುದೆ] ಜೀವ ಬೀಜ ಮೊದಲಿಗೆ ಒಂದು
ಮುಕ್ಕವಾಗದೆ ಮನೆ ಹಾಳು ||೧೩೫||

[ಕೆಂಡ]ವೆ ಬಂದವರು ನಿರ್ಧರವ ಪೇಳಿರೊ
[ಹೊಂದಿ]ಕೊಂಬೆನು [ನನ್ನೋಪ]
ಸಿದ್ಧವಾ[ದುದು] ಎಂದು ಒಬ್ಬ ನಾರಿಯು ಪೇಳೆ
ಬಿದ್ದಳು ಕೊಂಡ ಬೆಂಕಿಯನು ||೧೩೬||

ಸಾಯಲೇತಕೆ ಅಕ್ಕ ಬಾಳಲಾರದ ಪಾಪಿ
ಹೋದರೆ ಅಂಜಿ ಹಯ ಪಿಡಿದು ।
ವೇಳೆಗಳೆವೆನೆಂದು ಪಡಿ ತೀರೋವನ್ನಕ ಒಬ್ಬ
ನಾರಿ ಹೋದಳು ತನ್ನ ಮನೆಗೆ ||೧೩೭||

ಪಾಪಿ ಪ್ರಧಾನನ ಮಾತ ಕೇಳಿ ಬಲ್ಲಾಳರಾಯ ರಣ
ಭೂಪ ರಾಮನ ಮೇಲೆ ಕಳುಹಿ ।
ದೋತ್ರ ಹಿಂಡುವ ವಿಪ್ರ ಜಗಳದೆಗೆ[ದ] ಮೂರು
ಧಾತ್ರಿಯೊಳಗೆ ಕಾಣಲಿಲ್ಲ ||೧೩೮||

ಎನ್ನ ಪುಣ್ಯವ ಕೇಳೆ ಮನ್ನೆ ಜಗಳದಿ ಮಗನು
ನಿರ್ಣಯವಾದ ಸುಡು [ಬಾಳು]
ಮಣ್ಣ ಬಳೆಗಳು ಬೇಡವೆನ್ನುತ ಮುದಿರಂಡೆ
ಕಲ್ಲ ಹಾಕಿದಳು ಗಂಡನಿಗೆ ||೧೩೯||

ಸಾಲ ಮುಂಡೆಯರಿವರು ಒಂದೆ ಆಗಲಿ ಎಂದು
ಹಾಳಾದ ಬ್ರಹ್ಮ ನಿರ್ಣಯವು ।
ಕಾಲನ ಪುರವನು ಸಾನಂದಮುನಿ ಲಯಮಾಡಿ
ಬೇಡಿದನು ಹರನು ಯಮನೊಡನೆ ||೧೪೦||

ಕಂಡವೆ ಕನಸಿನಲಿ ಗಂಡರ ರೂಪ[ವು]
[ನೊಂ]ದು ಬೈದನೆ ಒಂದು ದಿವಸ ।
ಮಂಡೆ ಕೂದಲ [ಬಾಚಿ] ವಾಲಿ ದಂಡೆಯ ಮುಡಿವ
ಭಂಡಾ[ರ] ಬಯಲಾಯಿತೆಮಗೆ ||೧೪೧||

ತಿಳಿಯಲರಿಯನೆ ಅಕ್ಕ ಅರಸು ಬಲ್ಲಾಳರಾಯ
ಮೊದಲೆ ಕಾಳಗದಿ ಶುಭ ನಷ್ಟ।

ಬದಲಾಗಿ ಕಳುಹಲು ತುರುಗಾಯ್ವ ಬಲ್ಲಗೆ
[ನ]ಡೆಯ[ದೆ] ಧರೆಯೊಳಗೆ ಹತ್ಯ ||೧೪೨||

ಬಾಲೆಯರು ಈ ತೆರದಿ ಅಳಲಾಪದ ಪದ
ಕೇಳುತ ಬಲ್ಲಾಳರಾಯ।
ತಳಮಳಗೊಳುತಲಿ ತನ್ನ ಮನದೊಳು ಚಿಂತೆ
ಅರಗಿನಂದದಿ ಕ[ರಗು]ವನು ||೧೪೩||

ಹೆಣ್ಣುಗಳ ಆರ್ಭಟೆಯು ತಣ್ಣಗಾಗಲು ಪೋಗಿ
[ಮು]ನ್ನವರು [ಮನೆಯ] ಸೇರುವರು ।
ಇನ್ನೇನು ಗತಿ ಮುಂದೆ ರಾಮ ಪುರವನು ಮುತ್ತೆ
ಎನ್ನುತ ರಾಯ ಚಿಂತಿಸಿದ ||೧೪೪||

ಬುದ್ಧಿ ತಿಳಿಯದೆ ಬಳಿಕ ಬಲ್ಲವ[ರ] ನುಡಿಗೇಳಿ
ಒಳ್ಳೆವನಾಗುವ ಮನುಜ।
ಯಲ್ಲರಸು ಪೇಳಿದ ಬಲ್ಲಂಥ ಕಾಲ್ಗತಿಯ
ಕಾಳ[ವ] ದೇವರಸ ಪೇಳಿದನು ||೧೪೫||

ಹಿರಿಯರ ಮಾತುಗಳ ಕಳೆದು ನುಡಿದರೆ [ಅಂ]ದೆ
ವಿಧಿ ಬಂದು ಆತುಕೊಂಡಂತೆ ।
ಚದುರ ಪ್ರಧಾನಿಯ ಮನೆಯ ಕಾವಲ ತೆಗೆಸಿ
ಕರೆತನ್ನಿರೆನಲು ಚರರೊಡನೆ ||೧೪೬||

ಬಂದು ಊಳಿಗದವರು ಮಂದಿ ಕಾವಲ ತೆಗೆದು
ವಂದಿಸಿ ಮಂತ್ರಿಗೆರಗಿದರು।
ಬಂದದ್ದು ವಿಷಗಳಿಗೆ ಇಂದು ಎನ್ನುತ ರಾಯ
ಬರಲು ಪೇಳಿದರು ಬೇಗದಲಿ ||೧೪೭||

ಆಗಲೆನ್ನುತ ಮಂತ್ರಿ ಸಾಗಿ ಬರಲು ಭೂಪ
ರಾಯ ಬಲ್ಲಾಳನಿದ್ದೆಡೆಗೆ ।
ಜೋಡಿಸಿ ಕರಮುಗಿದು ಮಂತ್ರಿ ಕೈಯನೆ ಪಿಡಿದು
ರಾಯ ಬಲ್ಲಾಳ ಕುಳ್ಳಿರಿಸಿ ||೧೪೮||

ಮಂತ್ರಿಗಳರಸನೆ ಮಾಣಿಕ್ಯ ನವರತ್ನ
ಚಿಂತಾಮಣಿಯು ಜಾಣ್ಮೆಯಲಿ ।
ಮುಂಚೆ ನಿನ್ನಯ ಮಾತ ಮೀರಿ ನಡೆಯಲು ಪುರಕೆ
ಕಂಟಕ ಬಂತಯ್ಯ ಮಂತ್ರಿ ॥೧೪೯॥

ಆಡಬಹುದು ಭೂಪ ಅಂಜುವೆ ನಿಮ್ಮಡಿಗೆ
ಕೋಡಗ ಲೆಂಕೆಯ ಸುಡದೆ ।
ರಾವಣನ ತಮ್ಮ ವಿಭೀಷಣ ಪೇಳಲು
ಕೂಡಿತೆ ಬುದ್ಧಿ ದಶಶಿರಗೆ ॥೧೫೦॥

ಕೆಡಬೇಡ ಸೀತೆಯ ಬಿಡುಯೆಂದು ನುಡಿಯಲು
ಬಡದಾಸ ಹರಿಗಿವನೊಳಗೆ ।
ಪಿಡಿದು ನೂಕಿಸಿದಂತೆ ತೆರ ಗಾದೆ ಎನಗಾಗೆ
ಬದಲ ಪೇಳ್ವರೆ ಭಯ ಸ್ವಾಮಿ ॥೧೫೧॥

ಸಿಟ್ಟು ಬೇಡೆಲೆ ಮಂತ್ರಿ ಪಟ್ಟದ ದೊರೆಗಳು
ಎತ್ತಿದವರ ಕೈಕೂಸು ।
ಹಿತ್ತಾಳೆ ಕಿವಿ ಮೂಲ [ಶರೀರವು] ಅಪರಂಜಿ
ತತ್ವ ಸಾರದ ಮಾತು ಸುಳ್ಳೆ ॥೧೫೨॥

ಅಂಬು ಅಲಗಿ[ನ ಮೊ]ನೆಗೆ ಮುಂದುವರಿ[ದ] ಚಾಡಿ
ಹಿಂದಣಾಗಮವ ಕೇಳ್ ಭೂಪ ।
[ಕಡು] ಜಗಳ[ವ] ಹ[ಣ್ಣೆ] ಶಕುನಿ ಪಾಂಡವರಿ[ಗು]
ಕೌರವ[ಗು] ಒಂದು ತೆರನಾಗೆ ॥೧೫೩॥

ಚಾಡಿಯಿಂದಲಿ ಕೆಟ್ಟ ಮೂಢ ಕಾರ್ತಿಕನು
ಆಡಿದಾಕ್ಷಣನ ಕೆಟ್ಟ ಗರ್ವ।
ಬೇಡಿ ವೈರಿಯ ಕೇಳಿ ಬಾಣಾಕಾಸುರನು ಕೆಟ್ಟ
ಹಿಂದಣ ಗಾದೆ ಕೇಳ್ ಭೂಪ ॥೧೫೪॥

ಸಾಕಯ್ಯ ಎಲೆ ಮಂತ್ರಿ [ಪೋಕ]ನಾದೆನು ನಿನ್ನ
ಮಾತನು [ವಿಘಟ] ಮಾಡಿದೆನು ।

ತಾಕಿದಲ್ಲದೆ ಪೆಟ್ಟು ತಲೆಯ [ಪೋಗದು] ಮಂತ್ರಿ
ಹಾಕಿದ ಬೆಂಕಿ ದೇವರಸ ||೧೫೪||

ಆವ [ಪರಿಯ]ಲಿ ನಿನ್ನ ಕೊಲಬೇಕು ಎನುತಿರ್ದೆ
ಶಿವನೊಲುಮೆ ಬೇರೆ ಇರುತಿಹರು ।
ಜೈಮಿನಿ ಕಥೆಯೊಳಗೆ ಚಂದ್ರಹಾಸಗೆ ಮುನಿದ
ಮಂತ್ರಿಯ ತೆರನಾಯಿತೆನಗೆ ||೧೫೫||

ಪಾಪಿಯ ಕೊಲ್ಲದು ಪಾಪವಲ್ಲ[ವು] ಮಂತ್ರಿ
ಧಾರ್ಮಿಕ ನರನು ಯೋಚಿಸಲು ।
ದ್ವಾಪರಯುಗದೊಳು ಧರ್ಮರ ಕೆಡಿಸಲ್ಕೆ
ಯೋಚಿಸಿದವರಳಿದುದರಿಯಾ ||೧೫೬||

ಹೇಳಬಹುದು ಭೂಪ ಲಾಗುತಪ್ಪಿದ ಮೇಲೆ
ಕಾಲು ಜಾರಿತು ಎಂಬ ಗಾದೆ ।
ಹೋದ ದೇವರಸನು ಗೆದ್ದು ಬಂದರೆ ಅಂದು
ಪೀಳಿಗೆ ಸಂತಾನ ಬಿಡು[ವೆ] ||೧೫೭||

ಮುಂಗೈಯ ಹುಣ್ಣಿಗೆ ಮುಕುರವೇತಕೆ ಮಂತ್ರಿ
ಕಿವಿಗೊಂಡ ಮಾತಿಗೆ ಸಾಕ್ಷಿಯುಂಟೆ ।
ಬುದ್ಧಿ ಕೂಡಿತು ಇನ್ನು ಜನ್ಮವಿರಲು ಮಂತ್ರಿ
ಗಾಂಭೀರ್ಯ ಉಳಿ[ವಂ]ತೆ ಮಾಡು ||೧೫೮||

ಅರಿಯಬಾರದು ಭೂಪ ಕರುವ ಕಾಯುವ ತರಳ
ಪುರವ ಮುತ್ತಿದ ಕಾಲಗತಿಯ ।
ಗುರುಕೃಪೆ ಇವನೊಳು ಪರಿಪೂರ್ಣ ಇಹುದೆಂದು
ಭಯದೋರಿ ಸಯದಿ ನೂಕುವುದು ||೧೬೦||

ಹತ್ತು ವರುಷದ ಬಾಲ ದಂಡೆತ್ತಿ ಬರಲಿಂದು
ಹೊತ್ತಿನ ಬಲವೆಂದು ತಿಳಿ[ವು]ದು।
ನಿತ್ಯವೆ ಈ ಕಾಯ ರೊಕ್ಕ ಇಂದಿಗೆ ಕೊ[ಡಲು]
ಶಕ್ತಿ[ಹೊಂ]ದಿದ ಮೇಲೆ ಬರದೆ ||೧೬೧||

ಆಡಬಾರದು ರಾಯ ಬ್ರಾಹ್ಮಣರ ಕಡಿದಾಟ
ಸಮರಾಧನೆಯ [ಬ]ಡಿದಾಟ।
ತಿಥಿಮಿತಿಯು ಸಾಲದು ವಡೆ ತುಪ್ಪವಿಲ್ಲೆಂದು
ಹಳೆಗಾಳಗವಂತ ಸಿಟ್ಟಿ ॥೧೬೨॥

ಬಾಯಲಾಡಿದ ಬಂಟ ಬಳ್ಳುಡುಗಿನ ನಾಯಿ
ಹೋಗುವುದೆ ಕಾನನದ ಬೇಂಟೆ ।
ಭೇರಿಯ ನಾದಕ್ಕೆ ಕಾಯ ನಡುಗುವ ಮೂಳ
ಕೋಳ ಹಿಡಿವನೆ ರಣದೊಳಗೆ ॥೧೬೩॥

ಅನಿತರೊಳಗೆ ಒಬ್ಬ ಚರನು ಕೊರಗುತ ಬಂ[ದು]
ಮುಗಿದನು ಕರವ ರಾಯನಿಗೆ ।
ನುಡಿಯಲಾರೆನು ಭೂಪ ಗರಳಗುಂದಿತು ಜೀವ
ತಿಳಿಯೆ ಲಾಲಿಸಿ ರಣಮಯವ ॥೧೬೪॥

ಹೇಳುವುದಿನ್ನೇನು ಕೇಳಿ ಮಾಡುವುದೇನು
ಆ[ತು]ಕೊಂಡನು ಬಕರಾಕ್ಷಸಂತೆ।
ಶ್ರೋಣಿತ ಹರಿಯಲು ಮೂರುಗಾವುದ ದಾರಿ
ತೋರುತ ಹೆಣಬುರುಡೆ ಸಹಿತ ॥೧೬೫॥

ಸತ್ತವರಲ್ಲದೆ ಕ[ತ್ತಿ]ಗಳು ಮೆಯಿ[ವೆತ್ತು]
ಸಿಟ್ಟಿನೊಳಗೆ ಆಡುತಿಹವು ।
ಭಾವಾಜಿ [ಮ]ಲ್ಲಯ್ಯ ಪ್ರಧಾನಿ ದೇವರಸ
ಹೊಯಿದುದ ಕಂಡೆ ಹೆಡಗಟ್ಟಿ ॥೧೬೬॥

ತಿರುಗಲು ಮುಂದವರು ಮಿಕ್ಕವರ ಕಾಣೆ
ಸಾರಿಕೊಂಬರು ಉಳಿದಿಹರು ॥೧೬೭॥

ಕೊಂದನು ಇಬ್ಬಗೆಯ ಗೋವಿಂದ ಎನ್ನುತ ರಾಮ
ಹಿಂದಕ್ಕೆ ನಡೆದ ಪಾಳೆಯಕೆ ।
ಇಂದಿನಾಟವು ತಮ್ಮದೆಂದು ಭಾವಿಸಿಕೊಳ್ಳಿ
ನಾಳೆ ಮುಂಜಾನೆ ಹಲ್ಲೆ ಬಿಡುವಾ ॥೧೬೮॥

ಹಾಡು ತೀರಿತು ರಾಯ ತಂತಿ ಹರಿಯಲು ಮಂತ್ರಿ
ಚಾವಡಿಗೆ ಸಾಲವ ಕೊಳ್ಳಿ ।
ನಾಳಿನ ದಿನದೊಳು ನೀವಾರೊ ನಾವಾರೊ
ಊರು ಯಾರದೊ ಎಂದ ಚರನು ||೧೯||

ರೊಕ್ಕ ಪಾಕಿಯ ಮೇಲೆ ಕಟ್ಟಿಕೊಂಡರೆ ಕಾಣೆ
ಈ ಸೃಷ್ಟಿ ಮುನಿಯಲು ತೋರದಿಡುವ ।
ಹುಟ್ಟಿದರೆ ಆ ಬುದ್ಧಿ ಹೋಗಿ ಅವನೊಳು ಪೊಕ್ಕು
ಕೆಟ್ಟ ಅಡಿಗೆಯ ರುಚಿ ಮಾಡಿ ||೧೭೦||

ಬಂಟನಾಡುವ ಮಾತ ಕೇಳಿ ಬಲ್ಲಾಳನು
ಅಂತರದೊಳು ಆತ್ಮ ಚರಿಸಿ ।
ನಿಂತು ಕಾಣಲು ಗಳಿಗೆ ಬಲ ತುರಗ ಮೊದಲಿಲ್ಲ
ಚಿಂತೆಯ ಬಿಡಿಸೆನ್ನ ಮಂತ್ರಿ ||೧೭೧||

ಹಿಂದೆ ಹೇಳಲು ಭೂಪ ಹಲ್ಲೆ ಕಳಿಸುವೆನೆಂದೆ
ಮುಂದೆ ಪೇಳ್ದರೆ ಬಂಡಿಗೆ ಬಂದೆ ।
ಹಿಂದಣ ಮಾತೆಲ್ಲ ಬೆಂದು ಹೋಯಿತು ಮಂತ್ರಿ
ಬಂದ ಬೇನೆಗೆ ತೆರನೇನು ||೧೭೨||

ಭಾಳ ಹೇಳಲು ತಮಗೆ ವೇಳೆಯಿಲ್ಲವು ಮಂತ್ರಿ
ಕೋಳಿ ಕೂಗಲು ಲೆಗ್ಗೆ ಬಿಡುವಾ ।
ಊರು ಹೋಗಿಯೆ ಅಗುಸೆ ಬಾರಿಕ ಬಡಿಕೊಂಡ
ತೆರನಾಗಬಾರದು ಪೇಳು ||೧೭೩||

ತನಗೆ ತಿಳಿದುದ ಪೇಳ್ವೆ ನಿಮಗೆ ಚಿತ್ತಕೆ ಹೇಗೊ
ಒಣಗಿ[ತ್ತೆ] ನೀರಿಂಗೆ ಕೆಸರು ।
ಹಣ[ವಿರದೆ] ಆಗದು ಈ ಕಾರ್ಯ [ಭಾವಿಪೊಡೆ]
ತಮ್ಮ ಪಾದಕ್ಕೆ ಹೇಗೆ ತಿಳಿವುದೋ ||೧೭೪||

ಆದರೊಳ್ಳಿತು ರಾಯ ಹದಮೀರುವುದು ಕಾರ್ಯ
ಸಾಗಿಸಿಕೊಂಡು ರೊಕ್ಕವನು ।

ಪಾದದಪ್ಪಣೆಯಾಗೆ ನಿಯೋಗಿತನಗಳ ಮಾಡಿ
ಹೋಗಿ ರಾಮನ ಕಂಡು ಬರುವೆ ||೧೭೫||

ಹಾಗೆ ಆಗಲಿ ಮಂತ್ರಿ ಹೋಗಯ್ಯ ಅತಿ ಬೇಗ
ಸಾಗಿಸಿ ಕೊಡುವೆ ರೊಕ್ಕವನು ।
ನೀಗದೆ ಬಾಲ ಕುದುರೆ ನಿಲ್ಲೊರೆ ನೆಳಲು ಪೋಗಿ
ಜೋಗ್ಯಾಗಿ ಮಾಡುವುದೇನು ||೧೭೬||

ಕಟ್ಟಿದ ಮಂತ್ರಿಯು ಹೆಚ್ಚಿನುಡುಗೊರೆಯನು
[ಮತ್ತೊಳ್ಳೆ] ಕೈಯ ಕಾಣಿಕೆಯ ।
ಹತ್ತಿದ ಪಲ್ಲಕ್ಕಿ ಹನ್ನೆರಡು ತೇಜಿಗಳನೆ
ಹೊಕ್ಕನು ರಾಮನ ದಂಡ ||೧೭೭||

ಪಗಡೆ ಸಾಲಿನ ಮೇಲೆ ಹೊಡೆದಿರುವ ಚಾವಡಿಯ
ಬಾಗಿಲ ಕಾಯ್ವ ಚರರು ಬಂದು ।
ನುಡಿಯೆ ಕರಗಳ ಮುಗಿದು ರಾಯ ಬಲ್ಲಾಳನ
ಹಳಬ ಬಂದಿಹನೆ ಹೇಜಿಬನು ||೧೭೮||

ಬರಲೆಂದು ಚರನಿಗೆ ದೊರೆ ರಾಮನುಸುರಲು
ಕರೆಯಲಾಕ್ಷಣ ಸಾಗಿ ಬರಲು ।
ಎರಗಿ ಕಾಣಿಕೆಯಿಟ್ಟು ಎದ್ದು ಉಡುಗೊರೆ ಮಡಗಿ
ಕರ ಮುಗಿದು ಕೊಂಡಾಡಿದನು ||೧೭೯||

ರಾಯರೊಳ್ ರಾಯನೆ ರಣವಿಜಯ ರಾಜೇಂದ್ರ
ಭೇರುಂಡ ಗಜಸಿಂಹ ವೈರಿ ।
ಸ್ವಾಮಿ ನಿಮ್ಮಯ ಕ್ಷೇಮ ವಾರ್ತೆಯ ಕೇಳಿ ಬಲ್ಲಾಳ
ಪ್ರೇಮದಿ ಸ್ಥಾನಪತಿಗಳ ಕಳುಹಿದ ||೧೮೦||

ಭೂಪರೊಳ್ ಭೂಪನೆ ಜಾತಿಯೊಳ್ ಕುಲರತ್ನ
ಕೇಶವನಾತ್ಮ [ಶೌರ್ಯ]ದಲಿ
ಭೂತೇಶನಣುಗನ ಶಕ್ತಿಸಾಹಸವುಳ್ಳ
ದೇಶಾಧಿಪತಿ ರಾಮಚಂದ್ರ ||೧೮೧||

ಧೀರನೆ ಅಸಹಾಯ ಶೂರನೆ ಶರಧಿಗಂ
ಭೀರನೆ ಕುಂತಿಧರ್ಮಜನೆ।
ಪಾಲಿಸೆಮ್ಮಪರಾಧವನು ಮನದೊಳು ಇಡದೆ
ಊರ ಮುತ್ತಿಗೆ ತೆಗೆಯಬಹುದು ||೧೮೨||

ಮೆಚ್ಚಿದ ಮಂತ್ರಿಯ ದಸ್ತಿನ ಹೊಗಳಿಂಗೆ
ಸತ್ಕರಿಸಿ ಮಂತ್ರಿಯ ಕುಳ್ಳಿರಿಸಿ ।
ಮತ್ತೆ ನಿಮ್ಮಯ ಅರಸ ಕ್ಷೇಮ ಪ್ರೇಮಗಳೇನು?
ಪುತ್ರರಿರ್ವರು ಕೇ[ಳಿದರು] ||೧೮೩||

ಏನಯ್ಯ ನೀ ಬಂದ ಸ್ಥಾನ ಪ್ರತಾಪವನು
ಪೇಳಿ ಕಳುಹಿದ ರಾಯಭೂಪ ।
ಸ್ವಾಮಿ ನಿಮ್ಮಯ ಪಾದ ಕಂಡು ಬಾ[ಳ್ವೆ]ವು ಹಿಂದೆ
ರಾಯ ಮುಮ್ಮಡಿ ಕಾಲದಂತೆ ||೧೮೪||

ಯಾಕಯ್ಯ ಯಲ್ಲರಸ ಕೋಟೆ ಮಾತಿಗೆ ಬಂದೆ
ಹಾಕಿರಿ ಇನ್ನೊದು ತತಿ[ಯ]।
ಬೇಕೆನಲು ನಾ ಕೊಡುವೆ ಬಾಣ ಬತ್ತಿಯು ತುರುಗ
ಈ ಕ್ಷಣದೊಳು ಬಿಟ್ಟು ಕೊಡುವೆ ||೧೮೫||

ಧರ್ಮಪಾಲಕ ಕೇಳು ಸರ್ವಾಪರಾಧವ
ನಿರ್ವಹಿಸಿ ನಿಮ್ಮ ಹೃದಯದಲಿ ।
ಎಮ್ಮ ರಕ್ಷಿಸಿ ಪೋಗೆ ಬ್ರಹ್ಮಾಂಡ ಇರುವನಕ
ಧರ್ಮಕೀರ್ತಿಯು ಹೋಗಲರಿದು ||೧೮೬||

ಈವಾಗ ಇಂತಪ್ಪ ನಯಸರವಾಡುವೆ ಮಂತ್ರಿ
ಕಾಗದ ಬರೆದು ನಾ ತಳುಹೆ ।
ಶ್ವಾನಗೆ ಕಡೆಮಾಡಿ ಹೆಮ್ಮೇಲಿ ಬರಲೆಂದ
ತ್ರಾಣವೇನಾಯಿತೊ ಮಂತ್ರಿ ||೧೮೭||

ಒಪ್ಪಿಕೊಳ್ಳಲಿಬೇಕು ತಪ್ಪು ಲಕ್ಷಗಳಿರಲು
ಸತ್ಯದೊಳ್ ಹರಿಶ್ಚಂದ್ರ ರಾಯ।

ಮತ್ತೆ ಕಾಟಣ್ಣನು ಮಂತ್ರಿಯ ಮಗ ನೀಲ
ಕಂಡನೆರಗಿ ಪೇಳಲೊಡನೆ ||೧೮೮||

ಹಾಗಾಗಲೋ ಮಂತ್ರಿ ಅಣ್ಣಾಜಿ ಒಪ್ಪಿದ ಬಳಿಕ
ಸಾಗುವೆ ದಂಡ ನಾಳಿನಲಿ ।
ಬಹಳ ಕಾಲದ ಕಪ್ಪ ಬಂದರೆ ಅವರ
ಮೇಗಳ ಹಗೆ ನಮಗೇನು ||೧೮೯||

ಹತ್ತೆಂಟು ವರ್ಷದ ಕಪ್ಪ ದಂಡಿನ ವೆಚ್ಚ
ಹತ್ತು ಸಾವಿರ ಮಂದಿ ಕೊಟ್ಟು ।
ಒಪ್ಪಿ ನಿಮ್ಮಯ ಅರಸು ಕೊಟ್ಟರೆ ಎಲೆ ಮಂತ್ರಿ
ಉದಯಕ್ಕೆ ನಾಳೆ ಸಾಗುವೆನು ||೧೯೦||

ಮಂದಿ ಮಕ್ಕಳು ತುರಗ ಸಂದು ಹೋಯಿತು ಸ್ವಾಮಿ
ದಂಡಾಡಿ ರಾಜ್ಯ ಪಾಳಾಗಿ।
ಬಂದ ಕಂಟಕ ನೀವು ಕಂಡುದಾಯಿತು [ಎಡೆ]
ಗೊಂಡ ಮಾತಿಗೆ ನಡೆವೆನು ||೧೯೧||

ಗರ್ವದೊಳಗೆ ಕೆಟ್ಟ ನಿಮ್ಮ ರಾಯನು ಮಂತ್ರಿ
ಎಮ್ಮ ತಪ್ಪನು ಒಮ್ಮೆ ತೋರು ।
ನಿರ್ಣಯವ ಮಾಡುವೆನು ಎಮ್ಮಯ್ಯ ಬರಲೆಂದು
ಕೈಯ ತಡೆವೆ ದೈನ್ಯಕಾಗಿ ||೧೯೨||

ತಾಯಿ ರಕ್ಷೆಯೊಳಗೆ ಬಾಳುವವು ಮಕ್ಕಳು
ಕಾಯಬೇಕೆಂದು ಚಿತ್ತದಲಿ ।
ಪಾಲನು ಕೈಕೊಂಡು ಕುಕ್ಷಿಯಲಿ ರಕ್ಷಿಪುದು
ದೇವೇಂದ್ರ ಸಮಗಾತ್ರ ಭೂಪ ||೧೯೩||

ಕಾಕ ಪೋಕರರಿಂದ ಹೀಗೆ ಬಂದುದು ಸ್ವಾಮಿ
ರಾಯನೊಳಗಾದದ್ದು ಅಲ್ಲ।
ತಾಯಿ ಮಕ್ಕಳಿಗುಂಟು ನ್ಯಾಯ ಬರಲು ಮತ್ತೆ
ಬಾಯೆಂದು ಕರೆದು ಮನ್ನಿಸಳೆ ||೧೯೪||

ಆಗಲೊ ಎಲೆ ಮಂತ್ರಿ ಹದಿನೇಳು ವರ್ಷದ ಲೆಕ್ಕ
ಸಾಗಿದರೆ ನ್ಯಾಯ ತೀರುವುದು ।
ಬಾಳ ಬಡತನಗಳ ಹೇಳಿಕೊಂಡರೆ ಹೊತ್ತ
ಸಾಲ ಬಿಡುವುದೆ ಧರೆಯೊಳಗೆ ||೧೯೫||

ಆಗಲಿ ಮಂತ್ರಿ ನಿಮ್ಮರಸನ್ನ ಬರಹೇಳು
ಯಾವ ರೀತಿಯಲಿ ಪೇಳುವನು ।
[ನಾಳೆ] ನಾವಿರ್ವರು ಕೂಡಿ ಮಾತಾಡುವ
ನೋಡುವ ಲೆಕ್ಕ ಹೆಚ್ಚು ಕಡಿಮೆ ||೧೯೬||

ಬಂದೆನು ಎಂಬಂಥ ನಂಬಿಗೆ ಕಂಡರೆ
ಸಂದೇಹ ಬಿಟ್ಟು ಬರಹೇಳು ।
ಕೊಂದವನ ಹಗೆ ಹಿತವು ಎಂದಿಗೆ ಬೇಡೆನಲು
ಒಂದಿವಸ ಬೇಡ ಲೆಕ್ಕದೊಳಗೆ ||೧೯೭||

ಹದಿನೇಳು ವರುಷಕ್ಕೆ ನಿಲುವಾದ ರೊಕ್ಕದ
ತುದಿ ಮೊದಲು ಕೇಳು ಯಲ್ಲರಸ।
ಕಡತ ಬಲ್ಲುದು ನಿಮ್ಮ ದಶಕೆರಡುವರೆ ಲಕ್ಷ
ಕೊಡುವನಕ ಬಿಡೆನೆಂದ ರಾಮ ||೧೯೮||

ಆಡಿ ತೋರೆಲೊ ಮಂತ್ರಿ ಹೇಳಿದ ವಿವರವ
ಜ್ಞಾನ ತಿಳಿದರೆ ಬಿಟ್ಟು ಬರಲಿ ।
ನೋಡುವೆ ದಿನವಿಂದು ರಾತ್ರಿ ಬೆಳತನಕ
ಮಾಡುವೆ ಊರ ಮುಂಜಾನೆ ಹಲ್ಲಾ ||೧೯೯||

ಬರಬಾರದಾಯಿತೊ ದೂರದಿ ಮಾರ್ತಂಡ
ಹೊರಡಬೇಕು ರಾಯ ಬರುವುದಕ ಭಯ
[ಹಿರಿಮಾತೆ] ಹರಿಯಮ್ಮ ಪಡೆದಂಥ ಪಿತನಭಯ
ಒಡೆಯ ಜಟ್ಟಂಗೀಶ ನಂಬುಗೆಯ ||೨೦೦||

ನಂಬುಗೆ ಅಭಯ ತಕ್ಕೊಂಡು ಯಲ್ಲರಸನು
ಭುವನೇಂದ್ರ ರಾಮಗೆ ಕೈಮುಗಿದು ।

ಬಂದನು ಹರುಷದಿ ಒಂದೆ ಗಮನದಿ ಮಂತ್ರಿ
ರಾಜೇಂದ್ರ ಭೂಪಗೆ ಕೈಮುಗಿದು ||೨೦೧||

ಹೊಂದಿತ್ತು ಸಂಧಾನ ಹದಿನೇಳು ವರುಷಕ್ಕೆ
ಮಂದಿಗೂಟವು ದಂಡಿನೆಚ್ಚ।
ಸಂದರೆ ಬೆಳಗಾಗಿ ದಂಡ ತೆಗೆವೆನು ಎಂದ
ವಿಳಂಬ [ಬೇ]ಡೆಂದು ಹೆಣಗಿದೆನು ||೨೦೨||

ಯುಕ್ತಿ ಸಾಧನೆ ಮಾಡಿ ಹೊಕ್ಕು ಕಾರ್ಯವ ಗೆದ್ದೆ
ಕಟ್ಟದೆ ಮಂತ್ರಿ ಮನ್ನೆಯರ ।
ಮತ್ತೊಂದನಾಡಿದ ನೋಡಿ ನಿಮ್ಮ ಯ ಭೆಟ್ಟಿ
ಕೊಟ್ಟರೆ ಸಾಗುವೆನೆಂದ ||೨೦೩||

ಹೊಗಬಹುದೆ ಮಂತ್ರಿ ಕಾಣಬರ[ದೆ] ಕಪಟ
ಯಾವ ಹದನೋ ನಾನರಿಯೆ।
ಭೂನಾಥ ಲಾಲಿಸಬೇಕೆಂದವಗ್ರಹಿಸೆ ಕಾಲ
ಗಳಿಗೆಯಲಿ ಕೊಳ್ಳನೆ ಊರ ||೨೦೪||

ಮಲೆತವರಲ್ಲದೆ ಮರೆಬಿದ್ದವರ ಕೆಡಿಸದ
ಬಿರಿದುಂಟು ಅವನ ಕಾಲೊಳಗೆ ।
ಹೊಡೆಯಲಿಬೇಕೆಂಬ ಫಲವು ಮನದೊಳಗಿರಲು
ಇದು ಬೇಡಿದರೆ ಮುನ್ನ ಇದಿರೆ ||೨೦೫||

ರಾಯ ಬಲ್ಲಾಳನು ಭೂಮಿ ಮಂಡಲಕಿಳಿದು
ಮಾಡುವುದೇನು ಹೀಗೆ ಬಂತು ।
ಕಾದುವೆನೆಂಬಂಥ ತ್ರಾಣವಿಲ್ಲದ ಮೇಲೆ
ಹೋದರೆ ಹೀನ ಬಿಡದೆಂದ ||೨೦೬||

ಮತ್ತೆ ಕೇಳಲೊ ರಾಜ ಮನದ ಚಿಂತೆಗಳೇಕೆ
ಕೊಟ್ಟನು ಬಲಗೈಯ ಅಭಯ ।
ಪೆತ್ತವರು ಜಟ್ಟಂಗಿ [ಭಾಳ]ಲೋಚನನ ಭಜನೆಯ
ಆತ್ಮಕ್ಕೆ ಹೊಣೆಯೆಂದ ಮಂತ್ರಿ ||೨೦೭||

ಬಂದದ್ದು ಬರಲೆಂದು ರಾಜೇಂದ್ರ ಬಲ್ಲಾಳ
ಊರ ಮುಂದಕೆ ಡೇರೆ ಹೊಡೆಯೆ ।
ಒಂದೊಂದು ಪರಿ ಚಿತ್ರ ಹಜಾರ ಕಂಬಗಳಿಂದ
ಸಂಭ್ರಮವ ನೋಡುವರಳವೆ ॥೨೦೮॥

ಪಟ್ಟದ ಆನೆಗೆ ಮುತ್ತಿನ ಅಹುದವು
ಉತ್ತಮ ಅಪರಂಜಿ ಕೆಲಸ।
ಹಸ್ತಿ ಶೃಂಗರ ಮಾಡಿ ಹನ್ನೆರಡು ಸಾವಿರ ಬಲದಿ
ಮತ್ತೆ ಹೊರಟನು ರಾಜೇಂದ್ರ ॥೨೦೯॥

ಕಹಳೆ ಕರಣೆಯು ಭೇರಿ ಕುಣಿವ ನಾಟಕ ಸಾಲು
ಮೇಲೇರಿ ನಡೆಯೆ ಕುಂಜರದಿ ।
ಧರೆಯ ಭೋರಿಡುತಂದೆ ಪುರವನು ಹೊರಡಲು
ಬಿರುದಿನ ಭಟರು ಹೊಗಳುತಲಿ ॥೨೧೦॥

ಊಳಿಗ ಪರಿಚಾರ ಪ್ರಧಾನಿ ಪಂಡಿತರೊಡ
ನೇರಿ ನಡೆಯಲು ಕುಂಜರದಿ ।
ದೊರೆಯು ರಾಮನ ಬಳಿಗೆ ಬರಲು ಊಳಿಗ ಕಳುಹೆ
ಮೆರೆವ ಹಜಾರದಿ ಕುಳಿತಿರಲು ॥೨೧೧॥

ರಾಯ ರಾಮನ ಬಳಿಗೆ ಹೋಗಿ ಊಳಿಗದವರು
ರಣಧೀರ ಭೂಪಾಲ ಚಿತ್ತೈಸಿ ।
ಕವಳವ ಕರಿಕೊಂಡ ಬೆಳೆದ ಹೆಣ್ಣಿನ ತೆರದಿ
ರಾಯ ಬಲ್ಲಾಳ ಬರಲೆಂದ ॥೨೧೨॥

ಪೃಥಿವಿ ಪಾಲಕ ರಾಯ ಮತ್ತೆ ಬಾಲಕ ರಾಮ
ಕರೆಸಿದ ಶಕ್ತಿ ಸಾಹಸದ ಮನ್ನೆಯರ ।
ಕಸ್ತುರಿ ಮುಖ ಪದ್ಮ ಕಣ್ಣ ಸಂಗಯ್ಯ
ಜೊತ್ತಾಗಿ ನೀಲಕಂಠನನು ॥೨೧೩॥

ಮುಂಜಗಳದ ಮುದ್ದ ಕಗ್ಗೊಲೆ ಹನುಮನ
ಜಗ್ಗದೆ ಕರಿಯ ಗೆದ್ದವನ ।

ಉಜ್ಜನಿಯ ಮಲ್ಲಯ್ಯ ಊರು ಮೂರನು ಉಂಬ
ದೊಡ್ಡ ನಾಯಕ ಚನ್ನಣ್ಣ ||೨೧೪||

ಮದಕರಿಗಳ ಎಂಟು ರಚಿಸಿ ಶೃಂಗರಮಾಡಿ
ಸಕಲಾತಿ ತೋಪು ಜೆಲ್ಲಿಗಳು ।
ಮುಕುರವ ಪಣೆಗಿಟ್ಟು ಮುತ್ತುರತ್ನವ ಕೆತ್ತಿಸಿ
ಅಪರಂಜಿ ಉದೆಯ ಹಾಕಿಸಿದ ಬಿರಿದು ||೨೧೫||

ನೀರಮೇಲೆ ನಡೆವಂಥ ಮೂರು ಸಾವಿರ ತುರಗ
ವೀರ ಎಕ್ಕಟಿಗರು ನೂರಾರು ।
ರಾಜೇಂದ್ರ ಪುತ್ರರು ತಾವು ಶೃಂಗರವಾಗಿ
ಏರಲು ಎರಡು ತೇಜಿಗಳು ||೨೧೬||

ಹೊಡೆವ ಭೇರಿಯ ವಾದ್ಯ ನುಡಿವ ಬಿರಿದಿನ ಕಹಳೆ
ಪಿಡಿದ ಛತ್ರಗಳ ಚಾಮರವು ।
ಪೊಡವಿರಾಯರಿಗೆಲ್ಲ ಗಂಡ ಭಾಪುರೆಯೆಂದು
ಬಿಡದೆ ಸಾರುವ ಭಟ್ಟರೊಡನೆ ||೨೧೭||

ಕಕ್ಕಸ ಕಲಿ ರಾಮ ಕಿಚ್ಚಿನಾರ್ಭಟೆಯೊಳು
ನರ್ತನ ನಾಟಕರೊಳಗೆ ।
ಅತ್ತವನು ಬರುತಿರೆ ಆ ನಗರದೊಳೊಪ್ಪುವ
ಉತ್ತಮ ಸ್ತ್ರೀಯರು ಸಿಂಗರಿಸಿ ||೨೧೮||

ನೋಡುವ ಬನ್ನಿ ಅಕ್ಕ ಬಾಲನೆಂಬುವ ರಾಮನ
ಹಾಳು ಮಾಡಿದ ಲಕ್ಷ ಒರೆಯ।
ಪ್ರಾಯವಾಗಲು ಅವಗೆ ಭೂಮಿ ತಡೆಯದು ಮುನ್ನ
ಭೀಮ ಜನಿಸಿದನು ಕಲಿಯೊಳಗೆ ||೨೧೯||

ಕೋಮಲೆಯರು ಬೇಗ ಶೃಂಗಾರವಾಗಿ ಆ
ಭರಣ ವಸ್ತ್ರಭೂಷಣವ ।
ತಾ ಮೇಲು ನಾ ಮೇಲು ಎಂಬ ಸ್ತ್ರೀಯರ ಸೊಬಗ
ನಾವ ಕವಿ ಬಣ್ಣಿಸುವನು ||೨೨೦||

ಕಡು ಕೆಂಪು ನುಡಿ ಗಿಳಿಯು ಸ್ವರ ರಾಗ ಕೋಗಿಲೆಯು
ನಡು ಸಿಂಹನಂತೆ ಸುಲಿಪಲ್ಲು ।
ಕುಡಿತೆಗಂಗ[ಳವ]ರು ಕುಚದ ಭಾರಕೆ ನಡುವು
ತಡೆಯದೆನ್ನುತ ಡಾಬು ಧರಿಸಿ ॥೨೨೦॥

ಚಪಳೆಯರು ಚೆಂದುಟಿ ಚಂಪಕ [ಮೂಗು] ಮುಖಕಾಂತಿ
ಕುಚಭಾವ ಕಡು ಬೊಗರಿಗಳು ।
ಮಕರಕೇತನ ಎನ್ನ ಮದದಿ [ತಾಗಿದನೆಂದು]
ಸತಿಯರೆಲ್ಲರು ನೋಡುತಿಹರು ॥೨೨೨॥

ಹಳೆಯಬೀಡೊಳಗಿಪ್ಪ ಜನರು ಜಾತ್ರೆಯ ತೆರದಿ
ನೆರೆದು ನೋಡುವರು ನಯನದಲಿ ।
ರೆಪ್ಪೆಗಳ ಹೊಯ್ಯದೆ ಎರಳೆಯ ತೆರದೊಳು
ಕರಗಿ ತರಳೆಯರು ಕಾಂಕ್ಷೆಯಲಿ ॥೨೨೩॥

ಅಕ್ಕಯ್ಯ ನೀ ನೋಡೆ ಕೃಷ್ಣನ ಸುತ ಮುನ್ನ
ಸತ್ತನೆಂಬರು ಸಟೆಯೆನುತ।
ಬಚ್ಚಿಟ್ಟು ಮಡುಗಿರ್ದು ಭರ್ಗೋದೇವನು [ಇಂ]ದು
ಧರೆಗೆ ಬಿಟ್ಟ[ನು] ಎಂದೆನುತ ॥೨೨೪॥

ಕಂಡೇನೇ ಅಕ್ಕಯ್ಯ ಅಪರಂಜಿಯಂದದಿ ಹೊಳೆವ
ತುಂಬಿಲ್ಲ ಹದಿನಾರು ವರುಷ।
ಚಂದ್ರಗೆ ಮಿಗಿಲಾಗಿ ಇನ್ನೇನ ತಾಯಿ ಪಡೆದಳು
ಸೌಂದರದೊಳಗೆ ಅತಿರಂಭೆ ॥೨೨೫॥

ತಾವರೆಗಂಧಿಯರು ನೋಡಿ ರಾಮನ ರೂಪ
ತಾಳಲಾರದೆ ತಾಪಗೊಳುತ ।
ನಾವಿರ್ದು ಫಲವೇನು ಕೂಡಿದ ಬಳಿಕಿವನ
ನೀಗುವುದು ಲೇಸು ಪ್ರಾಣವನು ॥೨೨೬॥

ನೋಡಿದರೆ ಇಂತೊಮ್ಮೆ ಕೂಡಿದರೆ ಸುಖವುಂಟು
ಬೇಡಿಕೊಂಡರೆ ಬಾರದಿಹನೆ।

ರೂಢಿಯೊಳಿಂತಪ್ಪ ಧೀರನಾಗಲು ನಮ್ಮ
ಊರ ನಾರಿಯರ ಬಳೆ ಒಡೆದ ॥೨೨೭॥

ನಾರಿಯರು ಇಂತಪ್ಪ ಆಲಾಪದೊಳಗಿರೆ
ಧೀರ ರಾಮನು ಸಾಗಿ ಬರಲು ।
ಜೋಡಿಸಿ ಕರಮುಗಿದು ಬಲವೆರಡು ಸಾ[ಲಿ]ಗೆ
ಬೀದಿಗಟ್ಟಳೆಯ ಸರಿಯಾಗಿ ॥೨೨೮॥

[ಹ]ಗಲ ಬತ್ತಿಯ ಬೆಳಕು [ಝುಗಿಸೆ] ಮೋಹನವಾಗಿ
ನಗುತಲಿವರು ತೇಜಿ ಇಳಿದು ।
ಬರುವ ಸುದ್ದಿಯ ಕೇಳಿ ಬಲ್ಲಾಳರಾಯನು ಎದ್ದು
ನಡೆದು [ಬರಲು] [ತಾ]ಣದೆ[ಡೆ]ಗೆ ॥೨೨೯॥

ಕ್ಷೇಮವೆ ಬಲ್ಲಾಳ ರಾಜೇಂದ್ರನೆನುತಲಿ
ತಾ[ನು] ರಾ[ಯ]ನ ಕರವ ಪಿಡಿಯೆ।
[ಕ್ಷೇ]ಮವೆ ಪರಿಪೂರ್ಣ ನೀವು ಕ್ಷೇಮವೆ ಎಂದು
ಕುವರರಿರ್ವರ ಕರ ಪಿಡಿದು ॥೨೩೦॥

ಕ್ಷೇಮವೆ ರಣವಿಜಯ ಶೂರ ಕಂಪಿಲರಾಯ
ತಾಯಿ ಹರಿಯಮ್ಮ ಕ್ಷೇಮಹಳೆ।
ಪ್ರೇಮದೊಳಿಹ ಅರಸೆ ನಿಮ್ಮ ಕ್ಷೇಮವ ನಿತ್ಯ
ಕೇಳುವರಯ್ಯ ಪ್ರೀತಿಯಲಿ ॥೨೩೧॥

ಒಬ್ಬರೊಬ್ಬರ ತಾವು ತಬ್ಬಿಕೊಳುತಲಿ ಅವರು
ಮುಂಭಾಗದೊಳು ನಡೆ ತಂದು ।
ಗದ್ದುಗೆ ಸದರೊಳು ಕುಳಿತು ಸಮರಸವಾಗಿ
ಮುದ್ದು ಮಾತುಗಳನಾಡುತಲಿ ॥೨೩೨॥

ಮುಳುಗಿ ಹೋಯಿತು ರಾ[ಮ] ಬಲ ತುರಗ ಮುಂತಾಗಿ
ತಿಳಿಯದೆ ಬುದ್ಧಿಯು ನಮಗೆ ।
ಊರೆಲ್ಲ ಸೂರ್‍ಯಾಗಿ ಹೋದಾಗ ಅಗುಸೆಯ
ಮಾಡಿದ ತೆರನಾಯ್ತು ಕಥೆಯು ॥೨೩೩॥

ಕ್ಷುದ್ರರ ನುಡಿಯಿಂದ ಈ ಬುದ್ಧಿ ಬಂದಿತು ನಿಮಗೆ
ಪ್ರಬುದ್ಧರಿಂದಲೆ ಹೀಗೆ ಬರದು ।
ನಿರ್ಧರವು ಈ ಮಾತು ರಣವಿಜಯ ರಾಮಯ್ಯ
ಬುದ್ಧಿ ಕಲಿಸಿದನು ದೇವರಸ ॥೨೩೪॥

ಯಾರು ಮಾಡಿದರೇನು ರಣಧೀರಪುತ್ರನೆ ಕೇಳು
ಸಾರಿದ ಎಲ್ಲ[ವ] ಮಂತ್ರಿ।
ಕಾಲಗತಿಗಳು ಬಿಡದು ಹೋದ ತುತ್ತಿಗೆ ರುಚಿಯೆ
ಮೇಲೇನು ಗತಿ ನಮಗೆ ಪೇಳು ॥೨೩೫॥

ಸತ್ತವರು ಬರಲರಿದು ಪುತ್ರನೆ ನಮಗೊಂದು
ಕಟ್ಟಳೆ ಮಾಡಿ ಪೋಗುವುದು ।
ಹತ್ತೇಳು ವರುಷದ [ಕಪ್ಪ] ದಂಡಿನ ವೆಚ್ಚ
ಇತ್ತರೆ ಮುಂಜಾನೆ ನಡೆವೆ ॥೨೩೬॥

ಮಂದಿಮಕ್ಕಳು ಎಲ್ಲ ಸಂದುದ ನೀ ಬಲ್ಲೆ
ದಂಡಾಡಿ ಸೀ[ಮೆ]ಲ್ಲ ಪಾಳು ।
ಇಂದಿಗೆ ಅರ್ಧವ ಕೊಡುವೆ ಮನ್ನಿಸಿ ಪೋಗೆಂ
ದೆನುತ ಬಲ್ಲಾಳ ಕೈಮುಗಿದು ॥೨೩೭॥

ಆಗಲೈ ರಾಜೇಂದ್ರ ಹಿರಿಯರಲ್ಲವೆ ನೀವು
ಬಹಳ ಕಷ್ಟವ ಪೇಳಿದಲ್ಲೊ।
ಮೀರಬಾರದು ತಮ್ಮ ಮುಂದೆ ನೋಡುವೆ ನಾಳೆ
ಎಂದುದನೀ ಕಾಟ ಒಪ್ಪಿದನು ॥೨೩೮॥

ಒಪ್ಪಿಕೊಳ್ಳಲು ಪಗುಡಿಯ ಬಲ್ಲಾಳನು
ಪುತ್ರರಿರ್ವರಿಗೆ ಉಡುಗೊರೆಯ।
ತಟ್ಟೆಯಲಿ ಮಡಗಿಸಿ ಸರ್ವಭೂಷಣಗಳ
ಒಪ್ಪಿಕೊಳ್ಳೆಂದೆರಡು ತುರಗ ॥೨೩೯॥

ದೊರೆ ರಾಮ ತರಿಸಿದ ಪಲ ಬಗೆಯ ಭೂಷಣವ
ಹಿಡಿದ ತೇಜಿಯು ಮೂರು ಸಾವಿರವು ।

ಬಿಡಿಸಿದ ಕರಿ ಘಟೆಯ ಹನ್ನೆರಡು ಅಹುದೆಯ ಮಾಡಿ
ಕೊಡಿಸಿದ ರಾಮ ಬಲ್ಲಾಳಗೆ ||೨೪೦||

ಕಪ್ಪಕಾಣಿಕೆ ಬಂದು ಒಪ್ಪಲು ರಾಮನಿಗೆ
ಕೇಡಾದ ರಾಹುತರ ಕಳೆದು ।
ಕಟ್ಟಿದ ರಾಜ್ಯವ ಬಿಡುಯೆಂಬ ರಾಯನಿಗೆ
ದೃಷ್ಟವಾಗಿರು ರಾಯ ಸುಖದೊಳಗೆ ||೨೪೧||

ಯಾತರ ಭಯ ಬೇಡ ಭೂಪ ಬಲ್ಲಾಳ ರಾಯ
ಹೊಕ್ಕು ನಡೆದರೆ ಎಮ್ಮೊಳಗೆ ।
[ಸಹಕಾ]ರದೊಳು ನಡೆ ಸುರಿತಾಳ ಬಂದರೆ ನಿನ್ನ
ಮಾತಿಗೆ ಪ್ರಾಣ ಕೊಡುವೆನು ||೨೪೨||

ಸರಸದಲಿ ಅರಸನ ಊರಿಗೆ ಕಳುಹಿಸಿ
ತಿರುಗಿದ ರಾಮ ಪಾಳೆಯಕೆ ।
ಮರುದಿವಸ ಬೆಳಗಾಗಿ ದೊರೆ ರಾಮ ಗ್ರಹಿಸಿದ
ಹೊಡೆಯಬೇಕೆಂದು ಗುತ್ತಿಯನು ||೨೪೩||

ರಾಜೇಂದ್ರ ಕಂಪಿಲಗೆ ತಾನು ಲೇಖನ ಬರೆದು
ಆದ ಕಾರ್ಯಗಳ ಸ್ಥಿತಿಗತಿಯ।
ಸಾಗುವ ಪಯಣ ಸತ್ತ ಮಂದಿಯ ವಿವರ
ಹೇರಿ ರೊಕ್ಕವನು ಕಳುಹಿದನು ||೨೪೪||

ಮತ್ತೊಂದು ಗ್ರಹಿಸಿದ ಸುತ್ತಲ ರಾಯರಿಗೆ
ಬಿರಿದಿಟ್ಟು ಕಾಗದ ಬರೆಸೆ ।
ಕೊಟ್ಟರು ಕಪ್ಪವ ಎತ್ತಿ ಬರಲು ದಂಡ
ಉತ್ತರ ಊಳಿಗ ಕಳುಹಿ ||೨೪೫||

ಮೂಡಲ ಪಡುವಲ ಯಮನ ಮೂಲೆಯಲಿರ್ಪ
ಮಣಿಯದ ರಾಯ ದೊರೆಗಳಿಗೆ ।
[ತೆ]ರಬೇಕು ಬಂಡಿ ರೊಕ್ಕ ಹಿರಿಯ ಬಲ್ಲಾಳನ
ತೆರ ಬೇಕಾದರೆ ಗರ್ವ ನಡೆಸಿ ||೨೪೬||

ರಾಯ ದೊರೆಗಳಿಗೆಲ್ಲ ಹೋಗಿ ಕಾಗದ ಮುಟ್ಟೆ
ಓದುತ ತಲೆಯದೂಗುವರು ।
ಏನಾಗಿ ಹೋಯಿತ್ತು ಪಾಶ್ಚಗೆ ಮಿಕ್ಕಿರ್ದ
ರಾಯ ಬಲ್ಲಾಳನ ಗರ್ವ ॥೨೪೭॥

ಹಳೆಯಬೀಡೆಂದರೆ ಯಮನ ನಗರಕೆ ಹೆಚ್ಚು
ಬಲತುರಗ ಸವಲಕ್ಷ ಉಂಟು ।
ದಿನದೊಳಗಳಿಯಲು ಮಲಹರನೆ ತಾ ಬಲ್ಲ
ಮರಳಿ ಜನಿಸಿದನೊ ಕಲಿ ಪಾರ್ಥ ॥೨೪೮॥

ಬಲ್ಲಾಳನೆಂದರೆ ನಾವೆಲ್ಲರ ತುಳಿಕೊಂಡು
ಗಲ್ಲಾಗಿರ್ದನು ಜಗಕೆಲ್ಲ ।
ಜೊಳ್ಳಾಗಿಯವ ಪೋಗೆ ನಮಗೆಲ್ಲಿ ಉಳಿಗಾಲ
ಸಲುವ ತೂಗುವುದೆ ಅತಿ ಲೇಸು ॥೨೪೯॥

ವೇಳೆಯ ಬಂದಂತೆ ಕಾಲಕಳೆಯುತ ನಮ್ಮ
ಮರಿಯಾದಿಯ ಉಳುಹಿಕೊಂಬ।
ಹೋಗುವುದು ಅತಿ ಲೇಸು ಕಲಹಕ್ಕೆ ಹೊಯಿವನು
[ಮೂಳೆಯ] ಮುರಿದಡಗು ತನಕ ॥೨೫೦॥

ನಿತ್ಯವಲ್ಲವು ಅವಗೆ ಬತ್ತಿ ಎಣ್ಣೆ[ಯ] ಕೊಟ್ಟು
ತುಂಬಿಟ್ಟ ತೈಲ ತೀರೋ ತನಕ ।
ಹೊತ್ತ ನೂಕುವ ಚಿತ್ತರೆಲ್ಲರು ಗ್ರಹಿಸಿ
ಕಟ್ಟಲು ಉಡುಗೊರೆ ಉಲುಪೆ ॥೨೫೧॥

ಬಲುಮೇಕೆ ಅವನೊಳು ನರರ ಪಡೆ ಉರಿಯಲ್ಕೆ
ಈತನೊಳು ಹರನು ನಿರ್ಮಿಸಿದ ।
ಹೊರ ಪಯಣ ಇಳಿಯಲು ಧರಣಿರಾಯರು ತಮ್ಮ
ತುರಗ ಪವುಡಿಯ ಬಲದೊಡನೆ ॥೨೫೦॥

[ಕೊಂ]ಕು ಮಲೆಯಳದುತ್ತುಂಗರಾಯನು ನಡೆಯೆ
ಅಂಗನೆ ರಾಜ್ಯ ಮಧುರೆಯ ।

ಮಂಗಾಯಿ ನಡೆದಳು ಮೂವತ್ತು ಸಾವಿರದೊಡನೆ
ಚಂದ್ರ ರಾಮನ ಬೆಟ್ಟಿಯನು ॥೨೫೨॥

ಕೊಡಗು ಕೊಲ್ಲಾರ ಕಾಳಿಂಗ ಕಾಶ್ಮೀರ ದೇಶ
ಬೇಡಗಳ್ಳ ಬಿಕ್ಕ ಶೃಂಗಾರ ।
ನಡೆದರು ಮುಂದೆ ದಂಡ ಕಡಲೆದ್ದು ಬರುವಂತೆ
ಪೊಡೆವ ಜಂಡೆಗಳು ಹದಿನೆಂಟು ॥೨೫೩॥

ಪಾಗೊಂಡೆ ನಿಡುಗಲ್ಲು ಮೋಗಾಳ ಮಿಡಿಗೇಸಿ
ಮಾಗಡಿ ಮಲೆತ ಮದ್ಗಿರಿಯ ।
ಸಾಗಲು ದಂಡೆದ್ದು ಮೇಘವು ನಡೆವಂತೆ
ಎಂಬತ್ತು ಸಾವಿರ ಬಲದೊಡನೆ ॥೨೫೪॥

ಬಳ್ಳಾರಿ ನಿಡುಗಲ್ಲು ಗೊಲ್ಲರ ಬೂದ್ಯಾಳ
ಕಲ್ಲೊಳೆ ದಣ್ಣ ಕಂಗೊಂಡೆ ।
ಎಲ್ಲರು ನಡೆದರು ಇಪ್ಪತ್ತು ಸಾವಿರದೊಡನೆ
ತಮ್ಮ [ಹೊನ್ನು]ಗಳು ಸಹವಾಗಿ ॥೨೫೫॥

ಕಡಪೆಯು ಕರ್ನೂಲು ಗುಡಮುಂಡೆ ರಾಯದುರ್ಗ
ನೆಲೆಕೊಲಪೆ ಚಂಪಕಪುರವು ।
ಕೆಲವಾಗಿ ನಡೆದರು ಸಲುವ ಭಕ್ಷವ ಹೇರಿ
ಬಲಗೂಡಿ [ಮೂಟೆ] ಮೂರು ದಶಕ ॥೨೫೬॥

ನಡೆಯಲು ಕೆಳದಿಯ [ಮಲೆ]ನಾಡು ಮುಂತಾಗಿ
ಅಳವಡದ ತೊಡೆವಾಳ ಉಡುಗುತ್ತಿ।
ಮುರಬಿಲ್ಲು ಮಂದಿಯು.................
ಹದಿನಾರು ಸಾವಿರದೊಡನೆ ॥೨೫೭॥

ಹಾವನೂರು ಹುಬ್ಬಳ್ಳಿ ಜೆರಿಮಲೆಯು ಕನಕಾದ್ರಿ
ರಾಯಪೀಠದ ಆನೆಗೊಂದಿ।
ಮೀರಿದ ಬಲವಂತ ಹಮ್ಮೀರರೆಲ್ಲರು ಬಂದು
ರಾಯ ರಾಮಗೆ ಕೈಮುಗಿದು ॥೨೫೮॥

ನಾಲ್ಕು ಮೂಲೆಯಲಿರ್ಪ ಭೂಕಾಂತರೆಲ್ಲರು ಬಂದು
ಭೂಪ ರಾಮಗೆ ಕೈಮುಗಿದು ।
ಬೇಕಾದ ಉಡುಗೊರೆ ಪವುದಿ ಹೊನ್ನನು ಸುರಿಯೆ
......................ಕೋಟಿವರೆಯ ॥೨೫೯॥

ಬಂದ ರಾಯರಿಗೆಲ್ಲ ಆನಂದದೊಳಗೆ ರಾಮ
ಅಂದು ಉಡುಗೊರೆಯ ಮಾಡಿದನು ।
ಮುಂದ್ಯಾರು ಬರಲಿಲ್ಲವೆಂದು ಕೇಳಲು ಮಂತ್ರಿ
ಬಂದು ಇಲ್ಲವು ಗುತ್ತಿಯವನು ॥೨೬೦॥

ಬಡವನೆ ಬರುವುದಕೆ ಬಲ್ಲಾಳಗತಿ ಮಿಕ್ಕ
ಕಲ್ಲ ಹರಿವಾಣ ಸುಡದಂಥ ಶೂರ ।
ಉಳಿಯ ಗಾತ್ರಕೆ ಕಲ್ಲ ಹೊಡೆಸದಿರ್ದರೆ
ಚೆಲ್ವ ಕಂಪಿಲನ ಆತ್ಮಜನೆ ॥೨೬೧॥

ಬಂದಂಥ ರಾಯರ ದಂಡು ಪಾಳೆಯ ಇಳಿಯೆ
ಒಂದು ಗಾವುದ ತೆರಪಿಲ್ಲ।
ಜೆಂಜೆಯವು ಈಶಾನ್ಯ ಮೂಲೆಗೆ ಮೂರು
ಖಂಡದ ಮೇಲೆ ಇಪ್ಪತ್ತು ॥೨೬೨॥

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದಿ
ವರ[ವೀವ] ವಿರುಪಾಕ್ಷಲಿಂಗ।
ತರಳ ಚೆನ್ನಿಗರಾಮ ಮುರಿದು ಬಲ್ಲಾಳ[ನ]
[ನಡೆಯೆ] ಗುತ್ತಿಗೆ ಪಂಚ ಸಂಧಿ ॥೨೬೩॥*

❖❖

* + ಅಂತು ಸಂಧಿ ೫ಕಂ ಪದನು ೧೧೦೦ಕ್ಕಂ ಮಂಗಳ ಮಹಾಶ್ರೀ (ಮೂ)

ಸಂಧಿ : ಆರು

❖

ಗುತ್ತಿಯ ಕದನ

---

*ಉರಗನ ವೈರಿಯ ವಾಹನವೇರಿದ
ಮಗನ ಪುತ್ರನ ಮಾವನಾದ।
ಜಗವರಿಯಲು ಪೋಗಿ ದ್ವಾರಪಾಲಕನಾದ
ಮೃಗಧರನೆ ನೀನು ಸಲಹೆನ್ನ ||೧||

ಖಗರಾಜ ವೈರಿಯ ಧರಿಸಿದೆ ಕುಕ್ಷಿಗೆ
ನಿಗಮ ಶಾಸ್ತ್ರದಲಿ ಬಲ್ಲಿದನೆ ।
ಗಜಶಿರದ ಮುಖದವನೆ ಗಣನಾಥ ನೀ ಎನ್ನ
ಕೃತಿಗೆ ಸಮವಾಗಿ ಪಾಲಿಪುದು ||೨||

ಕಾಶಿ ರಾಮೇಶ್ವರಕೆ ಈಸು ವೆಗ್ಗಳ[ವಾದ]
ಕೈಲಾಸವೆನಿಸುವ ಹಂಪೆ।
ಕ್ಷೇತ್ರದಿ ನೆಲೆಸಿದೆ ಕರುಣಿಸು ವಿರುಪಾಕ್ಷ
ಸೂಸುವೀ ರಾಮನ ಕೃತಿ[ಗೆ] ||೩||

ಶ್ರೀ ಗಿರಿಜೇಶ ಶಂಭೂ ಭಾಗೀರಥೀಶನೆ
[ನಗಜಾಪತಿ] ನಂದೀಶ ।
ಮಲ್ಲಿಕಾರ್ಜುನ ಸಲಹು ಮೂಜಗವನು
ಭಾನುಕೋಟಿಗಳ ಪ್ರಕಾಶ ||೪||

---

* + ಶ್ರೀ ಗುತ್ತಿದುರ್ಗ ಮುತ್ತಿದ್ದು, ಶ್ರೀ ಶಾರದಾಂಬಾಯ ನಮಃ, ಶ್ರೀ ಪದನು । (ಮೂ)

ನಡೆಸುವೆ ರಾಮನ ಕಥೆಸಾರ ಮುಂದಣ
ನುಡಿಯ ಪಾಲಿಸು ಸರಸ್ವತಿಯೆ ।
ಬಡವನ ಕಥೆಯೆಂದು ಜರೆಯದೆ ಬಲ್ಲಂಥ
ಹಿರಿಯರು ಒಲಿದು ಲಾಲಿಪುದು ॥೫॥

ಪ್ರಾಣ[ದಾ]ಸೆಯ ಮಾಡ್ವ ಪರದಾರ ವಂಚಕ
ಕೇಳಬೇಡ್ನಿಮ್ಮ ಕರ್ಣದಲಿ ।
ಖೂಳ ಕಾರ್ತಿಕನ ಪೂರ್ಣ ವೈರಕೆ ಜನಿಸಿ
ಹಾಳು ಮಾಡುವ ಕೋಟಿ ಜನ್ಮ ॥೬॥

ಸತ್ಯವುಳ್ಳವನೆಂಬ ಸಹಜ ಕಾಣಲು ನಿಮ್ಮ
ಚಿತ್ತದಲಿ ಒಲಿದು ಕೇಳುವುದು ।
ಹೊತ್ತು ಬಂದದ್ದು ಹಾಗೆ ಪ್ರಾಣಕೋಸ್ಕರ ಹೊರತು
ಮಿಕ್ಕ ಕಳವಿರಲು ಜರಿದಾಡಿ ॥೭॥

ತಿಳಿದು ಲಾಲಿಸಿ ಬಲ್ಲ ಕರಣ ಚಿತ್ತದಿ ನಿಮ್ಮ
[ಒರೆವೆನು] ಕರ್ಣ [ತಂ]ಪಾಗೆ ।
ಪರಧ್ಯಾನದೊಳು ಕೇಳೆ ನರಕ ತಪ್ಪದು ಮುಂದೆ
ವರಾಹ ಜನ್ಮದಲಿ ಜನಿಸುವುದು ॥೮॥

ಓದಿಯೆನ್ನಲು ಗರ್ವ[ವಾ]ಡಲವಗೆ ಕರ್ಣ
ಕೇಳದೆ ಕರ್ಣಶುದ್ಧದಲಿ ।
ಹಾಳು ಮಾತುಗಳಾಡಿ ಪರಧ್ಯಾನವಾಗೆ ಗಿಳಿ
ಓದಿ ಮಲವನು ತಿಂದಂತೆ ॥೯॥

ಚಿತ್ತದೊಳತಿ ಪ್ರೀತಿ ಪುಟ್ಟಲು ಮತ್ಸರದ
ಅಕ್ಷರಗಳನು ನುಡಿಯೆನೀ ।
ತುತ್ತಿನ ಮದ ನಿದ್ರೆ ತೂಕಡಿಕೆ ಬರೆ ವಾವೆ
ತಪ್ಪೆಂದು ಮನೆಗೆ ಸಾಗುವುದು ॥೧೦॥

ಡಂಬಾಚಾರವ ಮಾಡಿ ಕವಿತೆ ನಡೆಸುವನಲ್ಲ
ಮುಂದವನು ನಡೆದ ಸ್ಥಿತಿಗತಿಯ।

ಬಂದಂತೆಯುಸುರುವೆ ಬಲು ಸುಳ್ಳು ನಡೆಸದೆ
ಕಂಡುಗಕೆ ಜೊಳ್ಳು [ಬೆರೆಸದೆ] ||೧೧||

[ಕೌತುಕ]ವನುಸುರಲು ಕಾಲನ ಭಯ ಅವಗೆ
ನಿಜವನೊರೆಯಲು ನಿರ್ಜನನು ।
ಅದರಿಂದಾಹವ ಬೇಳದ ಹರನೊಲುಮೆ ಹೆಚ್ಚಲು
ಅತಿ ಬಲ್ಲ ಕವಿತೆ ನಾನೊರೆವೆ ||೧೨||

ಇನ್ನು ಲಾಲಿಸಿ ಕೇಳಿ ಇಪ್ಪನ್ನರುಗಳು ಬಂದ
[ಮುನ್ನ] ಮಾರ್ಬಲದಂಡ ಸಿರಿಯ ।
ಪನ್ನಗಧರ ಬಲ್ಲ ಮುನ್ನ ಜನರಿಗೆ ಅಳವೆ
ಪುಣ್ಯ ಒದಗಲು [ಯಾವನಿಗೆ] ||೧೩||

ಮೂರು ಲಕ್ಷದ ಪೌಜು ಹದಿನಾರು ಸಾವಿರ ಘಟೆಯು
ಭೇರಿಗಳು ಭೂಮಿ ಜಜ್ಝರಿಸೆ ।
ತೂ[ಗುತಲಿಎಂ]ಟು ಕರಿಯು ಕೂರ್ಮನು ನಡುಗಿ
ಆದಿಶೇಷನ ಪೆಡೆ ಕುಸಿಯೆ ||೧೪||

ತುರು ಕುಂಜರದಿಂದ ವರೆಯ ಲಕ್ಷದ ಮೇಲೆ
ಬಿರಿದಿನ ಬಲ ಲಕ್ಷ ವರೆಯು ।
[ತ]ಡೆಯಲಾಪವೆ ಲೋಕ ತಾವರೆಯೆಲೆ ಉದಕ
ನಡುಗುವಂದದಿ ನಾಲ್ಕು ಮೂಲೆ ||೧೫||

ಇತ್ತ ಚೆನ್ನಿಗ ರಾಮ ಪೃಥ್ವಿಯ ದೊರೆಗ[ಳ]
ನಕ್ಷತ್ರ ನವ ಕಳೆಯಂತೆ ।
ಒತ್ತಿನೊಳ್ ಪೌರ್ಣಮಿ ಚಂದ್ರನಂದದಿ ರಾಮ
ಗುತ್ತಿ ಮೂಲೆಗೆ ದಂಡು ನಡೆಯೆ ||೧೬||

ಹಳೆಯಬೀಡನು ಬಿಟ್ಟು ನಡೆಯಲು ದಂಡೆತ್ತಿ
ಒಳಗೆ ಇಳಿದು ಯಗಟಿಪುರಕೆ ।
ನಳಿನ ಸಖನು ಪೋಗಿ ತಾಯೊಡಲು ಸೇರಲು
ರಾತ್ರಿ ಕಳೆದು ದಂಡು ನಡೆಯೆ ||೧೭||

ನಡೆದ ದಂಡಿಗೆ ಭೂಮಿ ಪಿ[ಳಿ]ದು ಕುಂಕುಮವಾಗಿ
ಗಿಡವು ಚೂರೆದ್ದು ಹಾಳಾಗೆ ।
ಕಿಡಿಕಿಡಿ ಹಾರುತ್ತ ಹಿಡಿಗಲ್ಲು ನುಗ್ಗೊಡೆದು
ಕೆರೆ ಭಾವಿ ಜಲಬತ್ತಿ ಕ್ಷಣದಿ ॥೧೮॥

ಮೂರು ಪಯಣಕೆ ದಂಡು ತೇರ[ಮಲ್ಲನ] ಊರ
ಮೇಗಣ ಬೊಬ್ಬರಿಗಿಳಿದು ।
ಹೋಗಿ ಗುತ್ತಿಯ ಮುತ್ತಿ ಹೊಡೆಯದನಕ ನಮ್ಮ
ತಾಯಿ ತಂದೆಯ ಪುತ್ರರಲ್ಲ ॥೧೯॥

ತುರಗ ವಜೀರರ ಕರೆಸಿ ಕಂಪಿಲನಾತ್ಮಜ
ಅರುಹಿತ ಉರಿವ ಕೋಪದಲಿ ।
ಬೆಳಗಿನ ಮುಂಜಾವ ನಾಳಿನ ಒಳಗಾಗಿ
ಹಿಡಿಯೆನಲು ಗುತ್ತಿಯ ಕೋಳಾ ॥೨೦॥

ಭಾವ ಸಂಗಯ್ಯಗೆ ನೇಮಿಸಿ ತುರಗವ
ಹದಿನಾರು ಸಾವಿರದ ಪವುಜ ।
ರಾಯ ರಾಮನು ದಂಡನದು ನಡೆಸಲು ಪೋ
ಗಿಳಿದರು ಪೆನಗುಂಡಿ ಬಳಿಗೆ ॥೨೧॥

ವೀರ ಸಂಗಯ್ಯನು ಹದಿನಾರು ಸಾವಿರದೊಡನೆ
ಏರಿದ ರಾತ್ರಿ ಪೋಗಲಾಗಿ ।
ಓರಂತೆ ಗುತ್ತಿಯ ಭೂಮಿಯೆಲ್ಲವ ಸುಟ್ಟು
ಆರು ಲಕ್ಷವ ಕೋಳ ತರಲು ॥೨೨॥

ಗುತ್ತಿಯ ಸೀಮೆಲ್ಲ ಹತ್ತಲು ಕೋಳಾಹಳ
ಕುಟ್ಟಿಕೊಳ್ಳಲು ಎದೆ ಬಾಯ ।
ಹಟ್ಟಿ ತುಂಬಿದ ದನವು ಹಾಳಾಗಿ ಹಣತಿಗೆ
ಇಕ್ಕಲು ಸಗಣೆಲ್ಲ ಎನುತ ॥೨೩॥

ಸಾಗಿರೊ ಇನ್ನೇಕೆ ನೀಗಿದೆವು ಕಾಲ್ದೊಡರ
ಕಾಳು ಬೇಳೆಂಬ ತುರುಮರಿಯ ।

ನಾಳಿಂದೊ ನಾ ಕಾಣೆ ಹಾಳಾಗೋದೀ ಗುತ್ತಿ
ನಾಡೆಲ್ಲ ಧೂಳಿಪಟವಾಗಿ ||೨೪||

ಒಡೆಯಲು ದೊಡ್ಡ ಗ್ರಾಮಗಳ ಮುಂತಾಗಿ
ಕಡಲುಕ್ಕಿ ಒಡೆದಿರುವಂತೆ ।
ಮಡಗುವುದಿನ್ನೇನು ಬುಡಕೊದಗಿ ಬಂದಾಗ ಉರು
ಕೊಂಡೆ ಗ್ರಾಮಕ್ಕೆ ದಂಡ ಬರಲು ||೨೫||

ಒಕ್ಕಲು ಪ್ರಜೆಗಳು ಒಳ್ಳೆಯ ಗೌಡರು
ಬತ್ತ ಭಾಗ್ಯಗಳನು ಬಿಟ್ಟು ।
ಹತ್ತಲು ಕಡಪೆ ಕಲ್ಲೂರು ರಾಜ್ಯಕೆ ಪೋಗಿ
ಹೊರೆವರು ಕೂಲಿಯ ಮಾಡಿ ||೨೬||

ಕೊಂಕಣರು ಕುಂಬಾರ ಪಂಚಮರು ಪಂಚಾಳ
[ಲೊಂಬಾಣೆರು] ಬೇಡ ನಾಯಕರು ।
ಕಂಚುಗಾರರು ಕಾಡಗೊಲ್ಲರು ಕುರುಬರು
ಕುಂಚಿಗರು ಕುಲಜಾತಿ ಓಡೆ ||೨೭||

ಬುದ್ಧ್ಯುಳ್ಳ ವೈಶ್ಯರು ಎದ್ದರು ಮುಂಗಡೆಯ
ಆಗಿ ಪೊಡಿ ಪೋನಿ ಬಾಯಕ।
ಸಿಗ್ಗು ಸೀಡಲು ಉಳಿಸಿ ವಾಜಿರ್ಚನಲು ಬಡಿನಾ ಬಡು
ಗದ್ಯಾಣಮುಂಟೇನಾ ಹೆಚ್ಚು ||೨೮||

ಹರದರು ಹಳ್ಳಿ ಶಾನಭೋಗರು ಗೂಳ್ಯ
ನಡೆಯಿರೆ ರಂಡೆಯರೆಂದೆನುತ ।
[ಹ]ಡೆಯಬೇಕೆಂದರೆ ಹನ್ನೆರಡು ಕೂಸನೆ ಹಡೆದು
ಹೊರುವ ಪ್ರಾಪ್ತಿಯು ಬಂತು ಎನಗೆ ||೨೯||

ನಾಡ [ವೇ]ಸಿಯರೆಲ್ಲ ಕೇಳಿ ಸುದ್ದಿಯ ಹಾಸ್ಯ
ವಾಡುತ್ತ ತಾವು ವಿಟರೊಡನೆ ।
ಯಾವತ್ತ ಈ ಗುತ್ತಿ ನಾಡ ದೃಷ್ಟಿಸಿ ನೋಡಿ
ಹೋಗಿ ಸೇರುವ [ನಮ್ಮ] ಮನೆಯ ||೩೦||

ಸಾಕು ಹೇಳೆಲೆ ರಂಡೆ ಹೋಕೆ ನಡೆಸುವ ಮಿಂಡ
ಭೂಪ ರಾಮನು [ಒ]ದಗಿ ಬಂದ।
ಲೋಕ ತಲ್ಲಣಿಸೆ ನಡುಗಿಸಿ ಗುತ್ತಿಯ ರಾಮ
ಹಾಕುವ ಕಾಣೆ ಕತ್ತಿಯನು ||೩೧||

ಕೆಟ್ಟೆ ಬೆಂದೆನು ಎಂದು ಕಟ್ಟಿದರು ಗೂಳ್ಯಯವ
ಮಟ್ಟೆ ಹೊರುವರು ಯಾರು ನಮಗೆ ।
ಗಟ್ಟಿಗಿ ಇರುವಾಗ ಹತ್ತೆಂಟು ಹಗಲಿರುಳು
ಸುತ್ತಿ ಸುಳಿವರು ಯಾರು ಎಲ್ಲಿ ||೩೨||

ನಾನಾ ಜಾತಿಯ ಗೂಳ್ಯ ಕೂಡಿ ಮಾತಾಡುವ
ಏನು ಹೇಳಲಿ ಎಮ್ಮ ಬದುಕ ।
ಜೋಳ ಗೋದಿಯು ಕಡಲೆ ಮೂರು ಹಗೆಯ ಬಿಟ್ಟು
ರಾಗಿ ನವಣೆಯ ಸಾವೆಲ್ಲ ||೩೩||

ಬಿಡು ನಿನ್ನ ರಾಗಿಯ ಸಿರಿ ಸುಡಲಿ ಅಕ್ಕಯ್ಯ
ತಾ ಪಡೆದ ಒಡವೆಯ ಕೇಳೆ ।
ಪಡಿ ಮೂರು ಹಿಡಿವಂಥ ಹಳೆಯ ನಾಣ್ಯವ ಬಿಟ್ಟೆ
ಮಡಕೆ ಸಾಲೊಳು [ಇ]ಟ್ಟು ಬಂದೆ ||೩೪||

ಮತ್ತೊಬ್ಬಳೆಂದಳು ಅಕ್ಕಯ್ಯ ನೀ ಕೇಳೆ
ಚಿತ್ತದೊಲ್ಲಭ ಕಾಣದಂತೆ ।
ಅಕ್ಕಿ ಬೇಳೆಯ ಮಾರಿ ಮೂರು ಮಾನದ ಸೇರು
ಇಕ್ಕೇರಿ ನಾಣ್ಯವ ಬಿಟ್ಟೆ ||೩೫||

ಜೀನತನದೊಳು ದುಡ್ಡಿಗೆ ಪಾಲು ಬೆಣ್ಣೆಯ ಮಾರಿ
ಬಾಲರಿಗೆ ಬಿಡದೆ ಒಂದಿವಸ ।
ಬರುವ [ಮಗ]ನು ಉಣಲು ಮೂರು ದಡೆಯ ಚಿನ್ನ
ವಾಡೆಯೊಳಿಟ್ಟು ನಾ ಬಂದೆ ||೩೬||

ಕೋಣ ಗೆಯ್ಯಲು ಗದ್ದೆ ಬೋನ ಉಂಬೊದೆ ಮರುಳೆ
ಜೀನ ಬಾಯವನು ಗಳಿಸಿದರೆ ।

ಜೇನಿಡಲು ಬೆಟ್ಟಕ್ಕೆ [ನೋಡಿದರು] ತಿಂದಂತೆ
ಸಾಲ ತೀರಿತು ಪೂರ್ವ ತೆಗೆದ ||೩೭||

ನಾಡ ರಾಜ್ಯದ ಗೂಳೆ ಹೀಗೆ ಹಲುಬುತ ಮುಂದೆ
ಓಡಲು ಗಿಡು ಮೆಳೆ ಬಿದ್ದು ।
ಏರಿದ ಬದಲಾಗಿ ವೀರಸಂಗನು ದವುಡ
ಹೋಗಿ ಸುಲಿಯಲು ಲಕ್ಷ ಗೂಳೆ ||೩೮||

ಕರೆಸಿದ ಕಾಟಯ್ಯನ ರಾಯ ರಾಮನು ದಂಡು
ಸಾಗಲು ಗುತ್ತಿಗೆ ಹೋಗಿ ।
ಮೂರು ಯೋಜನ ಹೋಗು ಕಾಟ ಎಂಬತ್ತು ಸಾವಿರದೊಳು
ಜೇರಿಸಿ ಗುತ್ತಿಯ ಮುತ್ತಿ ||೩೯||

ಮುತ್ತಬಹುದು ಭೂಪ [ಪ]ತ್ತರ ಬರೆವೆವು ಒಮ್ಮೆ
ಶಕ್ತಿದೋರುವನೊ ಬರುವನೊ ।
ಇತ್ತ ಕಾಟನು ಮಂತ್ರಿಯು ರಾಯ ಮಾನ್ಯರು ಪೇಳೆ
ಸಿಟ್ಟಿನೊಳ್ ರಾಮ ಬಿಡಿಸುವ ||೪೦||

ಜಾಣ ಬಲ್ಲನು ವೀಣೆಯ ಸ್ವರಗೀತ
[ಕೋ]ಣ ಬಲ್ಲುದೆ ಕಾಯಿ ರುಚಿಯ ।
ಮಾಣಿಕ್ಯ ಮರ್ಕಟನು ಭೇದ ಬಲ್ಲುದೆ ನಿಮ್ಮ
ಜಾಣತನಗಳನೇನೆಂಬೆ ||೪೧||

ಮದ ಮೆಚ್ಚಿದವ ಮುನ್ನ ಮಣಿವನೆ ನೀವೇಕೆ
ಹೊಡೆಯಲು ನಾಲ್ಕು ಕೊರಡಿಯ।
ಹದಗುವುದು ಕಲಿಯುಗದ ನಿಜದ ಮಾತಿನ ಮಹಿಮೆ
ಒದಗುವುದೆ ಲೇಸು ಮೊದಲಾಗಿ ||೪೨||

ಇಂದೀಗ ಬಲ್ಲಾಳಗೆ ಹೀಗೆಂದು ಎಲ್ಲರು ಪೇಳೆ
ಕುಂದುಮಾಡಿದ ಸಭೆಯೊಳಗೆ ।
ದಂಡೆಲ್ಲ ಲಯವಾಗೆ ದೈನ್ಯನೀತಿಗೆ ಬಂದು
ಬೇಡಿಕೊಂಡಂಥ ಬಗೆಯರಿಯಾ ||೪೩||

ಬಡವನಾದರೆ ಬಂದು ಇವರೊಡನೆ ಕಾಣಿಸಿಕೊಂಬ
ಹೊಡೆವ ತ್ರಾಣವು ತನಗಿರಲು ।
ತಡೆಯಬಲ್ಲರೆ ತಮ್ಮ ರಾಜ್ಯದ ಭೂಮಿಯ
ನುಳುಹಿ ಕೊಡುವೆನು ಹೊನ್ನಯೆಂ[ದ] ॥೪೪॥

ಹೊಡೆಯಲು ನವಭೇರಿ ಗುಡುಗಿನಾರ್ಭಟದೊಳು
ನಡುಗುವಂದದಿ ಗುತ್ತಿ ಮಾರ್ಗ ।
ಕಡಿಕಡಿ ಎನುತಲಿ ಕಾಕ್ಹೊಡೆದು ತೊಡೆ ಬಡಿದು
ಅಡರಲು ಕೋಳಾಹಳ ಮಾಡಿ ॥೪೫॥

ಬತ್ತಿ ಬಾಣವು ಮೂರು ಲಕ್ಷಕ್ಕೆ ಸರಿಮಾಡಿ
ಕೋವಿಯು [ತೋಟ]ಗೆ ಸುರಿಯೆ ।
ಎತ್ತಗೊಡದೆ ತಲೆಯ ಸವಲಕ್ಷ ಕೋವಿಗಳಂಬು
ಹುಚ್ಚು ಮಳೆಯಂ[ತೆ] ಸುರಿಸಲು ॥೪೬॥

ಅಲ್ಲಲ್ಲಿ ಕಲ್ಲಿನ ಅಟ್ಟ ಹಿಡಿದು ಕಾಟ
ಭಲ್ಲೆ ಕತ್ತಿಗಳನು ಹಿಡಿದು ।
ಕುಲಲಿಲಿ ಕೋ ಎಂದು ಕೋಟಿ ಸಿಡಿಲಿನ ಭರದಿ
ಹೊಡೆಯಲು [ಅ]ವ ಕೋಟಿ ಹಲ್ಲೆ ॥೪೭॥

ಸೂರೆ ಸುಲಿಗೆಯ ಮಾಡಿ ಕೋಟೆ ಪೇಟೆಯ ಕೂಡ
ಬಲಿದು ಏರುವನು ದುರ್ಗವನು ।
ಕೋಟೆಯೊಳಗಣ ಆರ್ಭಟವ ಶಿವ ಬಲ್ಲನು
ಪ್ರಜೆ ತಳಮಳ[ದಿ] ತಲ್ಲಣಿಸೆ ॥೪೮॥

ಹೊಡೆಯಲು ಪಿರಂಗಿ ಪುಡಿಕೋವಿ ಬಾಣಗಳು
ಕಡೆ ಮೊದಲಿಲ್ಲ ಅಂಬುಗಳು ।
ಕೆಡಬೇಡಿ ಈ ಕಲ್ಲ ಬುಡಮೇಲು ಮಾಡುವ ರಾಮ
ಬರುವನೆನ್ನುತ ಕಹಳೆ ಸಾರೆ ॥೪೯॥

ಭೂಮಿ ಹಿಡಿಯದ ತೆರದಿ ದಂಡು ಬಂದಿಳಿಯಲು
ಕಲಿಯುಗದ ಪಾರ್ಥ ರಣರಾಮ।

ಎಡಬಲದಿ ಬರುವಂಥ ಇಬ್ಬರು ರಾಯರ ದಂಡು
ಇಳಿಯಲು ಸುತ್ತ ಗೌಡರು ||೫೦||

ಕಡೆಮೊದಲಿಲ್ಲದೆ ಕಡಲುಕ್ಕಿ ಬರುವಂತೆ
ಹೊಡೆಯಲು ಡೇರೆ ಅಲ್ಲಲ್ಲಿ ।
ಪೊಡವಿಗುನ್ನತವಾದ ರಾಯ ರಾಮನ ಡೇರೆ
ಹೊಡೆಯಲು ಬಯಲಹಳ್ಳಿ ಕೊನೆಗೆ ||೫೧||

ಹಸಿರು ಪಟ್ಟೆಯ ಹಳದಿ ದಸರಿ ತೋಪಿನ [ಕ]ಪ್ಪು
ಎಸೆವ ನೀಲವು ಜ್ಯೋತಿ ಬಿಳಿದು ।
ಶಕುನಿ ವರ್ಣದ ಡೇರ್ಯ ರಚಿಸಿ ಮೇಲಕೆ ಹೊನ್ನ
ಕಲಶ ಒಪ್ಪಿದವು ಮುನ್ನೂರು ||೫೨||

ಎಡ ಬಲಕೆ ಎಪ್ಪತ್ತು ದೊರೆಗಳ ಡೇರ್‍ಯವು
ಹೊಳೆಯಲು ಸೂರ್ಯ ಪ್ರಭೆಯಂತೆ ।
ಹೊಡೆಯಲು ನವಗಾಜ ಎರಡು ಸಾಲಿನ ಮೇಲೆ
ಸೊಗಸ ವಿಸ್ತರ ನೋಡುವರಳವಲ್ಲ ||೫೩||

ಗುತ್ತಿಯನಾಳುವ ಕಸ್ತೂರಿ ಚಾಮಯ್ಯ
ಹತ್ತಿ ನೋಡಿದನು ದುರ್ಗವನು ।
ದೃಷ್ಟಿ ತಳ ಕೆಳಗಾಗಿ ಸುತ್ತ ದಂಡನು ನೋಡಿ
ಕೊಟ್ಟ ಶಿವ ಎನಗೆ ಸ್ವರ್ಗವನು ||೫೪||

ದಂಡಲ್ಲ ಇದು ತಮಗೆ ಬಂತು ಪ್ರಳಯ ಭೂ
ಮಂಡಲ ಎಂತು ತಾಳುವುದೊ ।
ಮುಂದೆನ್ನ ಛಲಪಂಥ ಹೋಗಲೆಂದು ದುರ್ಗವನಿಳಿದು
ಸಂಧಾನ ಮಾಡುವುದೆ ಲೇಸೆಂದ ||೫೫||

ಬಾಣಾಸುರನ ಮೇಲೆ ನವಕ್ಷೋಣಿ ದಂಡನು
ಕೂಡಿಹೋದನೆಂಬುದು ಮಾಧವನು ।
ವೇದ ಶಾಸ್ತ್ರದ ಮಾತ ಕಣ್ಣಾರೆ ಕಂಡೆನು ಇಂದು
ತೀರಿತು ಎಮ್ಮಯ ಲಿಖಿತ ||೫೬||

ಗುಂಡಿಡುವುದೇತಕೆ ಪಡಿ ತೀರಿ ಬಂದಾಗ
ತಡೆವರಿನ್ನಾರು ಈ ದಂಡ।
ಒ[ಡನೆ] ಜನಕೊಂದು ಕಲ್ಲಿಡಲು ಊರೆಲ್ಲ
ಮುಳುಗದೆ ತೆನೆಗಾಣದಂತೆ ॥೫೭॥

ಎಲ್ಲಿ ನೋಡಲು ದಂಡು ಇಲ್ಲದ ನೆಲೆಗಾಣೆ
ಕೊಲ್ಲಲಳವೆ ಈ ದಂಡು ।
ಎಲ್ಲರು ಅಡಿಗೆಯ ಒಲೆಗುಂಡಿನ ಕಲ್ಲಿಗೆ ಈ ದುರ್ಗ
ಸಲ್ಲಯ ಮಾಡದೆ ಪ್ರಾಣ ಮಿಗದು ॥೫೮॥

ರಾಯ ಚಾಮಯ್ಯನು ಕರೆಸಿದಾಗಲೆ ಮಂತ್ರಿ
ಕರ ಮುಗಿ[ದ] ಪಾದಕ್ಕೆ ಎರಗಿ ।
ಒದಗಿತು ಕಾಲೆಮಗೆ ಚದುರ ಮಂತ್ರಿಯೆ ಕೇಳು
ಇದಕೇನು ಹದ ಮುಂದೆ ಪೇಳೊ ॥೫೯॥

ರಾಯನೆ ನಾನೊಂದು ಪೇಳುವೆನು ಪಾದಕ್ಕೆ
ಹೇಗೆ ತೋರುವುದು ನಾ ಕಾಣೆ ।
ಕೂಗಿ ಮಾರಿಯ ಕರೆದ ಕೋಣಬಗೊಂಡ[ನಂತೆ]
ನಾದರೆ ಕಾರ್ಯ ಕೆಡುತಿಹುದು ॥೬೦॥

ಅದಕೆ ಅಲ್ಲವೆ ಮಂತ್ರಿ ಹೆದರ್ಯಾತಕೆ ಪೇಳೊ
ಕಡಿವ ಛಲವನೆ ಕಡೆಗೆ ಮಡಗು ।
ಉಳುಹಿಕೊಳ್ಳಲು ಊರ ಹೇಳು ಸಾಧನೆ ಮಾಡಿ
ಮಿಗುಸಯ್ಯ ಎನ್ನ ಮಾನವನು ॥೬೧॥

ಬಲ್ಲಾಳನೆಂದರೆ ಬಲ್ಲಿದ ಜಗದೊಳಗೆ
ಎಲ್ಲ ದೊರೆಗಳಿಗೆ ನವ ಘಟೆಯು ।
ನೆಲ್ಲಿಯ ಕಾಯಂತೆ ಚೆಲ್ಲಿ ಹೋದವು ಬುರುಡೆ
ಉರುಳಿತ್ತು ರಣಮಯವು ಭೂಪ ॥೬೨॥

ರಾಯ ರಾಜೇಂದ್ರನೆ ಲಾಲಿಸು ಬಲ್ಲಾಳ
ಭೂಮಿಗೆ [ಗೆ]ಲ್ಲಾಗಿ ಇರ್ದ।

ಕಾಲ ಗಳಿಗೆಯಲಿ ಕೆಟ್ಟ ಮೂಳ ಮಂತ್ರಿಯ ಮಾತ
ಕೇ[ಳನ್ಯ] ಫಲಕೆ [ಈಡಾದ] ||೬೩||

ಹಿಂದಲ ಛಲಕಾಗೆ ತಿಂಬುವನು ಅಂತೆ
ಕೊಂದು ಕೊಲ್ಲದೆ ನಮ್ಮ ಬಲವ ।
ಒಂದು ಸಿಟ್ಟು ಇದರೊಳು ಬಂದ ಒಳಗೆ ಕಂಡು
ಕುಂದು ಮಾಡದೆ ಕಂಡು ಬಾಳ್ವೆ ||೬೪||

ಲೋಕರೂಢನಾಗೆ ಹಾಕಬಹುದು ಕತ್ತಿ
ಭೂತನಾಗಿ ಹುಟ್ಟಿದ ಜಗಕೆ ।
ಈ ಕಾಯ ಸ್ಥಿರವಲ್ಲ ಇವನು [ಇ]ರುವ ತನಕ
ನೂಕಬೇಕಯ್ಯ ರೊಕ್ಕದಲಿ ||೬೫||

ರಾಯ ರಾಯರು ಬಂದು ಕಾದಲೋಲೈಸುವರು
ಕಾಲಗತಿಗಳು ದೈವಕೃಪೆಯು ।
ಆಳರೆ ಇವನಂತನೇಕರು ಕುಮ್ಮಟದಿ ಇವನ
ಏಳಿಗೆ ಅವರಿಗೆ ಇತ್ತೆ ||೬೬||

ಮುಂಗಯ್ಯ ಹುಣ್ಣಿಗೆ ಕನ್ನಡಿಯ ಬೆಳಗ್ಯಾಕೆ
ನಮಗೆ ಬಲಗಾರ ಮುರಿ[ವ]
ಸುಮ್ಮನೆ ಪವುದಿಯ ಕೊಟ್ಟು ನೂಕಲಿ ಬೇಕು
ನಿಮ್ಮ ಪಾದಕೆ ಹೇಗೊ ಕಾಣೆ ||೬೭||

ಜಾಣಮಂತ್ರಿಯ ಮಾತ ಲಾಲಿಸಿ ರಾಜೇಂದ್ರ
ಪ್ರವೀಣನಹುದು ತಂತ್ರದೊಳಗೆ।
ನೀ ಕಂಡ ಬುದ್ಧಿಯು ಎನಗೆ ಸನ್ಮತ ಮಂತ್ರಿ
ಈ ಕ್ಷಣದೊಳು ಸಲ್ಲಾ ಮಾಡು ||೬೮||

ಅನಿತರೊಳ್ ಪಂಕಜಸಖನು ಅರುಣಾಬ್ಧಿಯ
ಕಡಲ ಸ್ಥಾನಕೆ ಬಿಜಯಗೆಯ್ಯೆ ।
ತಿಮಿರ ಮಿಗಲು ಅಂಗ ಅರೆ[ಯಾ]ದವನು ಬಂದು
ಪ್ರಭೆಸೂಸೆ ಪೂರ್ವಭಾಗದಲಿ ||೬೯||

ಗಗನಕೆ ನವಕೋಟಿ ನಯನವೊಪ್ಪುವ ತೆರದಿ
ಕಿರಣ ಸೂಸುತ ಪುಷ್ಪಮಾಲೆ।
ಓರಿದು ಕಿರಿದಿನ ಮೇಲೆ ಎಡಬಿಡದೆ [ಹೊಳೆವುತ]
ಸೊಗಸು ತಾರಕಿ ತೋರುತಿರಲು ||೭೦||

ಅಳಿದವನು ಅಹಿಲೋಕ ಬೆಳಗಿಸಿ ಹೇಮಾದ್ರಿ
ಪ್ರದಕ್ಷಿಣೆ ಮುಖವಾಗಿ ಪೂರ್ವ।
ನಡೆಯಲು ನಯನೊಂದು ಪಡೆದ ಶುಕ್ರನು ಮೂಡೆ
ಕಲಹ ಕುಕ್ಕುಟ ದನಿದೋರಿ ||೭೧||

ದಿನಕರನ ಪ್ರಭೆ ಮುನ್ನ ಗಗನಕ್ಕೆ ಎಸೆಯಲು
ನಲಿಯಲು ಖಗಮೃಗ ಸ್ವರವು।
ಜಗದೊಡೆಯನು ಏರಿ ಮುಖದೋರೆ ಕಮಲ[ಗಳು]
ನಗುವಂತೆ ಎಸಳು ಬಿಚ್ಚಿಹವು ||೭೨||

ಉದಯ ಕಾಲದೊಳೆದ್ದು ಕದನಕೋಳಾದಳ ರಾಮ
ಹದುಳದೊಳಗೆ ಸ್ನಾನಮಾಡಿ।
ಸದರ ಡೇರ‍್ಯ ಬಂದು ಮೂರ್ತಮಾಡಲು ಮಂತ್ರಿ
ಪೃಥ್ವಿದೊರೆಗಳು ಬಂದರಾಗ ||೭೩||

ಚರರು ತಾ ಛತ್ರ ಚಾಮರ ಗಿಂಡಿ ಕಾಳಂಜಿ
ಪಿಡಿದು ವಾಲೈಸುವರ್ಕಡೆಯಲಿ।
ಮಿಗಿಲೆನಿಸಿ ದೇವೇಂದ್ರ ಪದವಿಭೋಗದಿ ರಾಮ
ಅರುಹಿದ ಎಲ್ಲ ದೊರೆಗಳಿಗೆ ||೭೪||

ಹೊಡೆಯಲು ಭೇರಿಯ ದಳವೆಲ್ಲ ಶೃಂಗರಿಸೆ
ಕುಣಿವುತ ತೇಜಿ ಕಾಲಿಂದಿ।
ಅಣ್ಣಾಜಿ ಕಾಟಣ್ಣ ದೊಣ್ಣೆ ಮುದ್ದನು ತಮ್ಮ
ಬಲ್ಮೆಯುಳ್ಳವನು ಸಂಗಯ್ಯ ||೭೫||

ಹಲ್ಲೆ ಗುತ್ತಿಯಲ್ಲಿ ಹಾರಿಸುವೆ ಕಲ್ಲೆಂದು
ಎಲ್ಲ ಬಲದೊಳಗೆ ಸಾರಿಸಲು।

ಹೊಡೆಯಲು ಗಜಭೇರಿ ದಳವೆಲ್ಲ ಶೃಂಗರಿಸಿ
ಕುಣಿಯುತ ತೇಜಿಯಿದಿರಿನಲಿ ॥೨೬॥

ಬರುವ ಸಡಗರ ಕಂಡು ಎದೆಯೊಡೆದು ಚಾಮಯ್ಯ
ಕರೆಸಿದ ಒಡನೆ ಮಂತ್ರಿಯನು ।
ಬಂದ ಭರದೊಳು ಪೇಟೆ ಹೋಯಿತು ನಿನ್ನೆ
ಬಂದು ಏರಿದರು ಲೆಗ್ಗೆಯನು ॥೨೭॥

ಮಂದಬುದ್ಧಿಯ ಬಿಟ್ಟು ಶೀಘ್ರದಿ ಹೋಗಯ್ಯ
ಹಲ್ಲಾ ಮಾಡಲು ಮಾಡಲೇನು ।
ಕಟ್ಟೆಲೊ ಉಡುಗೊರೆ ಪಟ್ಟೆ ಪೀತಾಂಬರ
ಮುತ್ತು ಮಾಣಿಕ ನವರತ್ನ ॥೨೮॥

ಹೆಚ್ಚಿನ ದ್ವೀಪಾಂತ್ರ ಉತ್ತತ್ತಿ ದ್ರಾಕ್ಷಿಯ
ಕುಂಕುಮ ಕಸ್ತೂರಿ ದ್ರವ್ಯ।
ರಾಯ ರಾಯರಿಗೆಲ್ಲ ಬೇರೆ ಉಡುಗೊರೆ ಕಟ್ಟಿ
ಸಂಬಂಧಿಕರು ಮನ್ನೆಯರ್ಗೆ ॥೨೯॥

ಸಾಗಿಸಿ ನೂರಾರು ಪರಿಚಾರರೊಳು ಮಂತ್ರಿ
ಸಾಗಿದ ಪಲ್ಲಕ್ಕಿಯೊಳಗೆ ।
ನಿಲ್ಲಿ ಹಲ್ಲೆಯನೆಂದು ಅಲ್ಲಿ ಬೀಸುತ ಕರವ
ಸಲ್ಲ ಮುರಿಯಲು ಮಾಡಬಹುದು ॥೩೦॥

ನಿಲ್ಲಬಹುದು ನಿಮಿಷ ರಣವಿಜಯ[ನೊ]ಳ್ಮಾತಾಡಿ
ಹೋಹ ತನಕ ಗಳಿಗೆ ನಿಲ್ಲಿ ।
ರಂಗರಸನು ಬಂದು ದಂಡ ಪೋಗಲು ಕಾಟ
ಮಂದಿಯ ಕೈಜಗಳ ನಿಲಿಸಿ ॥೩೧॥

ಬಂದಾಗ ಪ್ರಧಾನಿ ಭುವನದ ದೊರೆಗಳ
ಹದನವರಿತು ಕಟ್ಟಿ[ತಂದ]
ಉಡುಗೊರೆ ಉತ್ಸವ ಒಡನೆ ಎಲ್ಲದು ಮಾಡಿ
ನಡೆ ನುಡಿವ ಮಂತ್ರಿ ಮನ್ನೆಯರ ॥೩೨॥

ಎಲ್ಲ ಹೊಂದಿತು ನಿಲ್ಲಿ ಪರಬಲಾಂತಕನಿರುವ
ಸದರಿಗೆ ಮಂತ್ರಿ ನಡೆತರಲು ।
ರತ್ನಪೀಠದ ಮೇಲೆ ಒಪ್ಪಿರುವ ರಾಮನ ಕಂಡು
ಇಟ್ಟು ಕಾಣಿಕೆಯ ಕೈಮುಗಿದು ॥೮೩॥

ಒಪ್ಪಿಕೋ ಭೂಪಾಲ ತಪ್ಪು ನೋಡದೆ ಎಮ್ಮ
ರಕ್ಷಣೆ ಮಾಡೆನುತ ಕೊಂಡಾಡಿ ।
ರಾಯ ರಾಯರಿಗೆ ರಣವಿಜಯ ಕಲಿಪಾರ್ಥ
ಭೂಮಿಗೆ ದೊಡ್ಡವರ ಗಂಡ ॥೮೪॥

ಸಾಗರ ಗುಣರನ್ನ ಚಂದ್ರಕಾಂತಿಯ ರೂಪ
ಪಾಲಿಸಬಹುದು ಭೂಕಾಂತ ।
ಭೂಪನೆ ವಂಶಾಬ್ಧಿ ಜ್ಯೋತಿ ತಿಲಕರತ್ನ
ಈ ಕಲಿಗೆ ಭೀಮ ಪ್ರಚಂಡ ॥೮೫॥

ಅನೇಕ ಕಾಲದಿ ನಿಂದ ಪವುದಿ ರೊಕ್ಕವ ಕೊಡುವೆ
ಪ್ರೀತಿಯಿಂದಲಿ ನಮ್ಮ ಸಲಹು ।
ಬಂದೆಯಾತಕೆ ಮಂತ್ರಿ ಅಂಬಲಿಗೆ ತೆಳುವಾಗಿ
[ಹಿಂ]ದಣ ಪಂಥವೇನಾಯ್ತು ॥೮೬॥

ಒಂದೋಲೆಯಲ್ಲದೆ ಹನ್ನೊಂದು ಓಲೆಯ ಬರೆಯೆ
ಕುಂಡಿ ಬುಡಕೆ ಹಾಕಿ ಗರ್ವ।
ಹೇಳಬಹುದು ಭೂಪ ಬಾಲರ ಅಪರಾಧ
ತಾಯಿ ನೋಡಲು ಹುರುಡೇನು ॥೮೭॥

ಬಾಯ ಮೇಲ್ಹೊಡೆದೊಮ್ಮೆ ಬುದ್ಧಿ ತೋರಿದ ಬಳಿಕ
ಮೀ[ರೆವು] ನಿಮ್ಮಾಜ್ಞೆಯನು ।
ಶಕ್ತಿಯೊಳು ಶರಭೇಂದ್ರ ಒಪ್ಪಿಕೊಳ್ಳಲುಬಹುದು
ಮಿಕ್ಕಲು ಉಳಿವಿಲ್ಲ ಮುಂದೆ ॥೮೮॥

ಭೇರಿಯ ನಾದಕ್ಕೆ ಗಾಲುಗೆಡುವರೆ ಮಂತ್ರಿ
ಮಾಡಿಲ್ಲ ಜಗಳ ಒಂದೆರಡು ।

ಬೇಡಯ್ಯ ಕಪ್ಪವು ಚೆಂಡುಗಾರನ ತೆರದಿ
ಮಾಡಿದ ಮೇಲೆ ರೊಕ್ಕಿಡುವಂತೆ ॥೮೯॥

[ಕಡು ಬಡವ]ನಾಗೆ ಸತಿಯು ಹೆಗ್ಗಡತಿ ಶಬರ
ಬಡವನಾಗಲು ಮೊಲ ಕು[ಕ್ಕ] ।
ಬಡವ ಕಂಪಿಲರಾಯನೊಡನೆ ಸೆಣಸಿದ ಗರ್ವ
ಭುಜಬಲವು ತೊರೆಯೆಂದ ರಾಮ ॥೯೦॥

[ಹೋಗಯ್ಯ] ಎಲೆ ಮಂತ್ರಿ ಹೇಳಿಕೊಳ್ಳಲಿ ಬೇಡ
ಕೀಳುವ ಧೈರ್ಯ್ಯಂಟು ಕಲ್ಲ।
ನಾಳಿನ ಒಳಗಾಗಿ ಹೊಳ್ಳದಿರವು ದುರ್ಗ
ಚಾಳು ರಾಮನೆ ಹೋಗು ಎನ್ನೊ ॥೯೧॥

[ರಾಯ]ನವರು ರುದ್ರರಾಯರೆಲ್ಲರು ಕಂಡು
ಕಾಯಬೇಕೆಂದು ಕರಮುಗಿದು।
ತ್ರಾಹಿಯೆನ್ನಲು ಭೂಪ ನೂರೆಂಟು ತಪ್ಪಿರಲು
ಪಾಲಿಸಬಹುದು ಭೇರುಂಡ ॥೯೨॥

ಒಪ್ಪಬಹುದು ಸ್ವಾಮಿ ಲಕ್ಷ ತಪ್ಪುಗಳಿರಲು
ಕುಕ್ಷಿಯೊಳಗೆ ಕ್ಷೀರವೆರೆದು ।
ಮತ್ತೆ ಕಾಟನು ಮಂತ್ರಿ ಸರ್ವಮಾನ್ಯರು ಪೇಳೆ
ಒಪ್ಪಿದ ರಾಮ ಪ್ರೀತಿಯಲಿ ॥೯೩॥

ಉಡುಗೊರೆ ಉತ್ಸಾಹವ ಒಡನೆ ನೋಡುತ ರಾಮ
ದೃಢದಿ ಮೆಚ್ಚಿದ ಮಂತ್ರಿಯನು ।
ಸಲುವುದು ರಂಗರಸ ಪ್ರಧಾನಿ ಪಟ್ಟವು ನಿನಗೆ
ಹೆಣಗಿದೆ ಎನ್ನೊಡನೆ ದಿಟ್ಟ ॥೯೪॥

ಮಂತ್ರಿ ರಂಗರಸನ ಮನ್ನಿಸಿ ರಾಮನು
ಇಮ್ಮಿಗಿಲಾದ ಉಡುಗೊರೆಯ ಕೊಡಿಸಿ ।
ಹಳೆಯಬೀಡಿನ ಮಂತ್ರಿ ಯಲ್ಲರಸಗಿಂ ಜಾಣ
ಹದನರಿತು ಕಾರ್ಯ ತಿದ್ದಿದನು ॥೯೫॥

ಹೋಗಯ್ಯ ಎಲೆ ಮಂತ್ರಿ ಕಪ್ಪ ಕಾಣಿಕೆ ಹೊನ್ನ
ವೆಚ್ಚ ಮಂದಿಯ ಕೊಟ್ಟು ಬೇಗ।
ಹೊತ್ತುಂಟೆ ಸರಿಮಾಡು ತಪ್ಪಲು ಬೆಳಗಾಗೆ

ಮುತ್ತುವೆ ಮನ್ನಣೆಯನ ಕೇಳೊ ||೯೬||

ಮುತ್ತಿಗೆಯನು ತೆಗೆಸಿ ಹೊಕ್ಕನು ರಂಗರಸು
ಪಟ್ಟಣಕೆ ಧೈರ್ಯವ ಕೊಟ್ಟು
ಆದ ವೃತ್ತಾಂತವ ಚಾಮಯ್ಯ ರಾಯಗೆ ಪೇಳಿ
ಮತ್ತವರು ಸುಖದೊಳಿರಲಿತ್ತ ||೯೭||

ಗುತ್ತಿಯ ಕಾರ್ಯವು ಸತ್ತು ಹೋಯಿತೆಂದು
ಪೃಥ್ವಿಪಾಲಕ ರಾಮನಿರಲು ।
ಚಿತ್ತದೊಳಾಲಿಸಿ ಪರಚಿತ್ತವಾಗದೆ ಎಲ್ಲ
ಮತ್ತೊಂದು ಕಥೆ ಕಾರ್ಯ ಬಂತು ||೯೮||

ಲಾಲಿಸಿ ಬಲ್ಲಂಥ ಜ್ಞಾನವುಳ್ಳವರೆಲ್ಲ
ಆಡದೆ ಅಡ್ಡ ವಾಕ್ಯವನು ।
ರೂಢಿಗುನ್ನತವಾದ ಸುರಿತಾಳನ ಬಲ ಭುಜದ
ವಜೀರಗಾದಂಥ ಪಡಿಪಾಟ ||೯೯||

ಗುತ್ತಿಯ ಚಾಮಯ್ಯ ಕಪ್ಪ ಉಡುಗೊರೆ ಹೇರಿ
ಹತ್ತೆಂಟು ಸಾವಿರ ಬಲದಿ।
ಹೊಕ್ಕನು ತಾ ಬಂದು ರಾಯ ರಾಮನ ಕಂಡ
ಒಪ್ಪಿತು ಭೆಟ್ಟಿ ಇರ್ವರಲಿ* ||೧೦೦||

❖❖

---

* KB 812ರಲ್ಲಿ "೯೩ ಮತ್ತು ೯೪ನೆಯ ಪುಟಗಳು ಲೋಪವಾಗಿವೆ" ಎಂದು ಬರೆಯಲಾಗಿದೆ. ಕಳೆದು ಹೊದ ಪುಟಗಳಲ್ಲಿ ಈ ಸಂಧಿಯ ಮುಕ್ತಾಯ ಪ್ರಶಸ್ತಿ ವಾಕ್ಯ, ಮುಂದಿನ ಸಂಧಿಯ ಪ್ರಾರ್ಥನಾ ಪದ್ಯ ಇತ್ಯಾದಿ ಇದ್ದಿರಬಹುದು. ಆದರೆ ಲಿಪಿಕಾರನು ಈ ಎರಡೂ ಸಂಧಿಗಳ ಸಂಖ್ಯೆಯನ್ನು ಕೂಡಿಸಿಯೇ ಕ್ರಮವಾಗಿ ಮುಂದುವರಿಸಿ, ಮುಂದಿನ ೭ ಸಂಧಿಯನ್ನು ೬ ಎಂದು ತಿದ್ದಿಕೊಂಡಂತಿದೆ. ಇದೇ ರೀತಿಮುಂದಿನ ಸಂಧಿ ಸಂಖ್ಯೆಗಳನ್ನು ತಿದ್ದಿಕೊಳ್ಳುತ್ತ ಹೋಗಿರುವದರಿಂದ ನ್ಯಾಯವಾಗಿ ಇರಬೇಕಾಗಿದ್ದ ಕೊನೆಯ ಸಂಧಿ ಸಂಖ್ಯೆ ೨೦ಕ್ಕೆ ಬದಲು ೧೯ ಆಗಿದೆ. ನಾವು ಮಾತ್ರ ೭ನೆಯ ಸಂಧಿಯನ್ನು ಪರಿಗಣಿಸಿಕೊಂಡ ಕಾರಣ ಒಟ್ಟು ಸಂಧಿ ೨೦ ಆಗಿದೆ. ೧೯ ಶುಭ ಸಂಖ್ಯೆ ಅಲ್ಲವೆಂಬುದನ್ನು ಇಲ್ಲಿ ಗಮನಿಸಬೇಕು. ಇದೇ ಸ್ಥಳದಲ್ಲಿ ಹಳ್ಳಿಯಿಂದ ಬಾದೂರ ಖಾನ ಬಂದ ಸಂಧಿ ಎಂಬ ಬರವಣಿಗೆ ಇರುವುದು ನಮಗೆ ಬೆಂಬಲವಾಗಿದೆ. ಇಲ್ಲಿಯ ೧೦೧ನೆಯ ಪದ್ಯ ಸಂಧಿ ೭ ಪದ್ಯ ೧೭೭ರಲ್ಲಿ ಮತ್ತೆ ಕಾಣಿಸಿಕೊಂಡಿದೆ(ಸಂ).

ಸಂಧಿ : ಏಳು

❖

*ದಿಲ್ಲಿ ಬಾದೂರ ಖಾನ ಆಗಮನ - ನೇಮಿಯ ಯುದ್ಧ - ರಾಮನ ಮದುವೆ

---

*ಡಿಳ್ಳಿಯೊಳಗೆ ಒಬ್ಬ ದಿಟ್ಟ ಬಾದುರಖಾನ
ಎಲ್ಲ ವಜೀರರೊಳು ಬಲ್ಲಿದನು।
[ಬಲಬದಿಯ] ಕಿವಿ ಪಾಚ್ಛಾ ಕೊಟ್ಟು ಮತ್ತಲ್ಲಿ
ಸುಖದೊಳಗಾಳುತಿರಲು ||೧||

ಮುಂದೆ ಕೇಳವನಿಗೆ ಬಂದಂಥ ವಿಧಿವಾಸ ಅವನ
ತಂದರು [ಚಾಡಿಗರು] ತವೆ ತಲೆಗೆ।
ಬಂದ ಕಂಟಕವದು ಭಯವಾಗಿ ರಾಮನ
ಕಂಡು ಬದುಕುವ ಕಾಲ್ಗತಿಯ ||೨||

ಬಲ್ಲಾಳರಾ[ಯನ] ಭಂಗ ಬಾದೂರ ಕೇಳಿ
[ತಲೆ]ತೂಗುತ ತನ್ನಲ್ಲಿರುವ ।
ಡಿಳ್ಳಿ[ಗೂ] ಹೆಸರಾದ ಬಲ್ಲಾಳನ ಗೆಲಿದವಗೆ
ಪಾಚ್ಛಾಯ ಗಣನೆಯೇ ಅವಗೆ ||೩||

ಹರಗೊಮ್ಮೆ ಅಳವಲ್ಲ ನರರ ಮಾತುಗಳಿರಲಿ
ಮುರಿವನು ಎದೆ ಗರ್ವ ರಾಮ।
ನರನಲ್ಲ ಈ ತರಳ ಮರೆಮಾಡಿ [ಮಾದೇವ]
ಕಳುಹಿದ ಭೀಮನ ಧರೆಗೆ ||೪||

---

* "ಡಿಳ್ಳಿಯಿಂದ ಬಾದುರಕಾನ ಬಂದ ಸಂಧಿ" ಎಂದು ಎರಡೂ ಪ್ರತಿಗಳಲ್ಲಿದೆ (ಸಂ).

ಹಿಂದಕ್ಕೆ ಆ ಪುರಕೆ [ನೇ]ಮಿಯೆಂಬವ ಪೋಗಿ
ಬಂದ ಕಷ್ಟವನು ಶಿವ ಬಲ್ಲ।
ಎರಡು ಲಕ್ಷದ [ಮೇಲೆ] ಬಲವುಂಟು ಲೆಂಕಿಗೆ
ಮಿಗಿಲೆಂದು ಪೇಳ್ವರಾ ಪುರವ ||೫||

ಅಲ್ಲಾ [ತಂ]ದನು ಆ ಬಲನ ಶಕ್ತಿಯ
[ಮೂಲ] ಬಲ್ಲಾ ಮಹಿಮನ ಪದವ ।
ಜನ್ಮವಿರಲು ಪೋಗಿ ಅವನಲ್ಲಿ ಬಾಳುವೆನೆಂದು
ತೂಗಿದನು ಮನದೊಳ್ ಶಿರವ ||೬||

ಅಚ್ಚನು ಅಹುದೆಂದು ಮೆಚ್ಚಿ ಬಾದುರಖಾನ
ಕಟ್ಟಿದ ಉಡುಗೊರೆ ಉಲುಪೆ ।
ಕೊಟ್ಟು ಕಳುಹಲು [ಒಡನೆ] ಮಿ[ಕ್ಕ] ವಜೀ[ರ]ರು
ತೊಟ್ಟರು ಮನದೊಳು ವಿಷವ ||೭||

ಎಲ್ಲ ಖಾನರು ಕುಳಿತು ಏಕಾಂತದೊಳು ಗ್ರಹಿಸಿ
ಕೊಲ್ಲುವರೆ ಇದು ಸಮಯ ಇವನ ।
ಡಿಳ್ಳಿಯ ಸುರಿತಾಳನ ಗಂಡನೆನಿಸಿಕೊಂಬ
ಪುಂಡ ರಾಮನ ಜಗಳಕೆ ಮೆಚ್ಚಿ ||೮||

ರಾಮನ ಎದೆ ಕೆಚ್ಚ ತೆಗೆಯಲ್ಕೆ ಸುರಿತಾಳ
ಸಾಧಿಸುವ ಸರ್ಪನ ತೆರದಿ ।
ಎಗ್ಗುವಡೆಯದೆ ಪರ[ವೈರಿ] ಮೂಳಗೆ
ಇವ ಸಾಗಿಸಬಹುದೆ ಉಡುಗೊರೆಯ ||೯||

ಹಗೆಯವನ ಕೊಲಲಿಕ್ಕೆ ಇದು ಒಳ್ಳೆ ಸಮಯವು
ಮದಗಜವು ಇರುಬ ಬಿದ್ದಂತೆ ।
ಬೆಳೆಯಗೊಡನೆಮ್ಮ [ಪಾಗುಡದ] ಈ ಸುಳುಹ
ಒರೆಯಲು ಪಾಚ್ಛನ ಬಳಿಗೆ ||೧೦||

ಒಂದಕ್ಕೆ ನೂರಾಗಿ ಕುಲಸಂಖ್ಯೆಗೇಣೆಂಬ
ಮೊಳದುದ್ದ ಕಾಗದವನ್ನು ।

ತಂದರು ಜೋಡೆಯರು ತವಕದಿ ರಾಯನ ಬಳಿಗೆ
ಮುಂದಿಟ್ಟು ಕರಗಳ ಮುಗಿದು ||೧೧||

ನೋಡಿದ ಕಾಗದವ ರಾಯನು ಮನದೊಳು
ರೂಢಿಸಿ ಕಾಲಾಗ್ನಿ ಕಿಚ್ಚು ।
ಸೂರ್ಯನ ಮಗ ಯಮರಾಜನಾಗ್ರತೆಯೊಲು
ಬೇಗ ನೇಮಿಯ ಕರೆಯೆಂದ ||೧೨||

ಎಡಹುತ್ತ ಮುಗ್ಗುತ್ತ ಚರರು ಕೊಡಲು ನೇಮಿಗೆ ಸುದ್ದಿ
ಪರಿದೋಡಿ ಬಂದು ಕರ ಮುಗಿದು ।
ಇದ ಓದು ಎಲೆ ಮಂತ್ರಿ ಕೆಡುವ ಕಾಲಕೆ ಜನರು
ವಿಚಿತ್ರದ ಕೇಡನು ಬೆಳಸಿ ||೧೩||

ಓದಿಕೊಳ್ಳುತ ಮಂತ್ರಿ ಮೂಗಿನೊಳ್ ಬೆರಳಿಟ್ಟು
ಹೋದಳು ಜಯಲಕ್ಷ್ಮಿ ಬಾದುರನೆಂಬಂತೆ।
ಆಡಲಂಜುವೆ ಭೂಪ ಬದಲಾಗಿ ಉತ್ತರವ
ಪಾದಕ್ಕೆ ತಿಳಿದಂತೆ ಮಾಡುವುದು ||೧೪||

ನೀ ಪೇಳು ಎಲೆ ಮಂತ್ರಿ ಜಾಣ್ಮೆಕೆಯ ನಡೆಸುವೆ
ಭೂಮಿ ರಾಯರ ಗಂಡನೆಂಬ।
ಹಾಳಾಗಿ ಹೋಗಲಿ ಎನಗೆ ಮಿಂಡನು ಎಂಬ
ಮೂಳಗುಡುಗೊರೆ ಕೊಡಬಹುದೇ ||೧೫||

ಎಲ್ಲ ಖಾನರಿಗಿಂತ ಬಲ್ಲಿದನೆಂದು ಮಾಡಿದ್ದೆ
ಎಲ್ಲವನು ನೀನರಿವೆ ಮಂತ್ರಿ।
ಖುಲ್ಲ ಕರ್ಮಿಯ ಮುಖವ ಇನ್ನು ನೋಡುವನಲ್ಲ
ಕೊಲ್ಲು ರಾಮನೆಡೆಯೊಳಿವನ ||೧೬||

ಗುತ್ತಿ ಸೀಮೆಯ ಬಳಿಯ ತೊತ್ತಿನ ಮಗ ಬಂದು
ಬಿಟ್ಟಿರುವನಂತೆ ಆ ಖೂಳ।
ಮತ್ತಿವನ ಪಿಡಿದೆಯ್ದಿ [ಒನಕೆಯಿಂದಲಿ] ತಲೆಯ
ಕುಟ್ಟಿ ಕಳುಹಯ್ಯ ನಮ್ಮೆಡೆಗೆ ||೧೭||

ಅಭಯ ಅಪ್ಪಣೆಗೊಂಡು ಚದುರ ಮಂತ್ರಿಯು ಬೇಗ
ಎರಗಿ ಕೇಳಿದ ಮೂರು ಅಭಯ।
ಬದಲು ಮಾತುಗಳೇಕೆ ನಡೆಯೆನಲು ತರಿಸಿದ
ಮೂವತ್ತು ಸಾವಿರ ಕುದುರೆ ॥೧೮॥

ಅಸುರ ಬಾದೂರ ಪಿಡಿದು ದೆಸೆಗೆ ಹಾರುವ ತೇಜಿ
[ಪಹರೆಯೊ]ಳಗೆಯ್ತರಲು ।
....
ಬಿಸಿಗಲ್ಲು ಬೆಳಸದೆಡೆಗೆ ॥೧೯॥

ಅತಿ ಜಾಗ್ರದೊಳು ಬರಲು ಆರೆಂಟು ದಿವಸಕ್ಕೆ
ಕದನ ಸಾಗರ ನಿಧಿಯೊಡನೆ ।
ಅತಿ ಬೇಗ ದಾಂಟುವ ಸಮಯದೊಳಗೆ [ಪಹರೆ]
ಎತ್ತಿ ಸರದೊಳಗೆ ಬರುತಿರಲು ॥೨೦॥

ಶರಧಿ ದಾಂಟುತ [ಪಹರೆ] ಶಬುದವಾಗ[ಲಾಕ್ಷಣ]
ಇದು ವೇಳೆ ತನಗೆಂದು ಗ್ರಹಿಸಿ।
[ತಡಿ]ಗೆ ದಾಂಟುತ ಮುನ್ನ ನಡೆವಾಗ ಮನಕೆ ಪಲ್ಲಿ
ನುಡಿಯಲು ಬಲದ ಭಾಗದಲಿ ॥೨೧॥

[ಸಾವು]ದಲ್ಲವೆ ಪ್ರಾಣ ಉಳಿವುದಾತ್ಮವುಯೆಂದು
ನಿಶ್ಚೈಸಿ ಮನದೊಳು ದೃಢವ ।
ಎಚ್ಚಿದ ತುರಗ ಚಬುಕ ಹನ್ನೆರಡನು
ಪಕ್ಷಿಗರುಡನಂತೆ ನಡೆಯೆ ॥೨೨॥

ಕೌನ ಜಾ ಅರೆಯೆಂದು ಹದಿನಾರು ಸಾವಿರ ತುರಗ
ವಿರಲು ಅವನ ಬೆನ್ನೊಡನೆ ।
ಮೂರು ರಾಯರ ಗಂಡನೆಂದು ಪೊಗಳಿಸಿಕೊಂಬ
ರಾಮನಲ್ಲದೆ ಕಾಯ್ವರಿಲ್ಲ ॥೨೩॥

ಹತ್ತಾರು ಸಾವಿರ ಬೆನ್ನಂಟಿ ಬರಲು ತುರಗ
ಸತ್ತು ಬಳಲುತ ಖಾನ ಬರಲು ।

ಉಕ್ಕಡವ ಕಾಯ್ವಂಥ ಹುಲ್ಲು[ಗಾ]ರರು ಸುದ್ದಿ
ಕೊಟ್ಟರು ರಾಮಭೂಪನಿಗೆ ॥೨೪॥

ಓಡಿ ಬರುವವನು ಒಬ್ಬ ಬೆನ್ನ[ಟ್ಟಿ] ಬರುವುದು ಪೌಜು
ಯಾವ ಹದನೊ ಕಾಣಲರಿಯೆ ।
ಏರಿದಾಕ್ಷಣ ತನ್ನ ವಾಹನ ರಣರಾಮ
[ನೋಡಿದ] ಬರುತಿಪ್ಪ ಸುಳುಹ ॥೨೫॥

ಅಂಜಬೇಡೆಲೊ ಕರುವೆ ಬಂದ ಸ್ಥಿತಿಯನು ಪೇಳು
ಖಂಡೆಯಕೆ ಆಹುತಿಯ ಕೊಡುವೆ ।
ಹಿಂದಟ್ಟಿ ಬರುತಿರ್ಪ ಪೌಜ ನಿಲ್ಲಿಸಿದರೆ
ಬಂದ ಸ್ಥಿತಿಯನು ಪೇಳುವೆನು ॥೨೬॥

ಭೂನಾಥ ಕಂಡುದ ಪೇ[ಳ್ವೆ] [ಕೇ]ಳಲು ನೀನು
ಎಲ್ಲವ ಉಸು[ರ್ವೆ] ಭೂಕಾಂತ ॥೨೭॥

...........ಜೀವ ಚೇತನಗೊಂಡು ನಿಮಿಷ
ಭುವನೇಂದ್ರ ಲಾಲಿಸು ನೀನು ।
ಮಾಳ್ಪ ಕಾರ್ಯಕೆ ಮೆಚ್ಚಿ ಉಡುಗೊರೆ ಕಳುಹಿದ
ಮೂಲದಿ ಬಂತು ಪ್ರಾಣಕ್ಕೆ ॥೨೮॥

ಒಳಗು ನಿಮ್ಮೊಡನೆಂದು ಹಗೆಯವರು ಚಾಡಿಯ ಪೇಳೆ
ವಿವರಗಾಣದೆ ಸುರಿತಾಳನಿಗೆ ।
ತಿಳಿಯರಿಯದ ಮೂಳ ಹೊಳವ ಕಾಣದೆ ಎನ್ನ
ಕಡಿಯೆಂದು ನೇಮಿಗಭಯ ಕೊಟ್ಟ ॥೨೯॥

ಕೊಡಬೇಡ ವೈರಿಗೆ ಕಡಿ ನೀನು ಈ ಕ್ಷಣವೆ
ಪಡೆವೆನು ಮುಂದೆ ಕೀರ್ತಿಯನು ।
ಪೊಡವಿರಾಯರ ಗಂಡನೆಂದೆಂಬ ಬಿರು[ದು] ನಿಮ್ಮ
ಒಡಲ ಸೇರಿದೆ ಸಲಹಬೇಕು ॥೩೦॥

ಕಡೆಗೆ ಪೇಳುವೆ ಸ್ವಾಮಿ ಒಡಲ ದುಃಖವನೆಲ್ಲ
ಬಡ ಬಂಟನ ಮಾಡಿಕೋ ನಿಮ್ಮ ।
ನುಡಿಯೊಳು ಹೊಳವಿಲ್ಲ ನಾ ನಡೆದ ಅಪರಾಧವಿದು
ಪಾವುಳಿ ಕಂಡರೆ ಹೊಡೆ ನೀನು ॥೩೧॥

ಹೆದರ ಬೇಡವೊ ಖಾನ ಕೊಡುವೆ ಎನ್ನಯ ಪ್ರಾಣ
ನೀ ಬೆದರದೆ ನಿಲ್ಲೊ ಬೆನ್ನೊಡನೆ ।
ತಿರುಹಿದ ಕಲಿರಾಮ ತುರುಗ ಅವರ ಕಡೆಗೆ
ನಡೆದಪರಾಧವೇನೆನಲು ॥೩೨॥

ವಿವರ ಕೇಳಲು ಮರುಳೆ ದಣಿಯೇನು ನೀ ನಮಗೆ
ಕೊಡು ಬಾದುರಖಾನನ ಕಳುಹೊ।
ಕೆಡಬೇಡ ಎಲೊ ಹುಚ್ಚ ಬಡ ಕಂಪಿಲನ ಬುಡಕೆ
ಹಾಕುವೆ ಕೊಡಲಿಯ ನೀನು ॥೩೩॥

ಕೊಡು ಕೊಡು ಎನುತಲಿ ನುಡಿಯುತ ಖಾನರು
[ಕೇ]ಳಿಸುತ ನಾಲ್ಕು ಮುಖದೊಳಗೆ।
ಬಲು ಭಂಡ ಕಾದುವಾ ಬಡವನೆ ಪಾಚ್ಛಯ
ಹಿಡಿದು ಕೀಳಿಸನೆ ನಿನ್ನ ಹಲ್ಲ ॥೩೪॥

ಬೆನ್ನ ಬಿದ್ದವರನು ಮುನ್ನ ಕೊಡುವರೆ ಮೂಳ
ಹಲ್ಲ ಕೀಳಿಸುವರಿಗೆ ತಾ ಗಂಡ।
ನಮ್ಮಯ್ಯ ಹರಿತಂದೊಮ್ಮೆ ಮರೆಬೀಳೆ ಗುಂಡ
ಬ್ರಹ್ಮಯ್ಯ ಕೊಟ್ಟನೆ ಗಣಪತಿಗೆ ॥೩೫॥

ಬಡವ ಬಲ್ಲಾಳನ ಕಡಿದೆನು ಎಂದೆಂಬ
ಗರ್ವ ಬೇಡವೊ ಎಮ್ಮ ಕೂಡೆ ।
ಹಿಡಿ ಮುನ್ನ ಕಡ್ಡಿಯ ಹುಡುಗ ಎನುತ ಕೈಯ
ತಡೆದೆವು ಬಿಡು ಕೆಡಬೇಡ ॥೩೬॥

ಕೊಡುವೆನು ಕತ್ತಿಯ ಹಿಡಿಸುವೆ ನಿಮಗೆ ಗುರಿಯ
ಬಿಡಬಹುದೆ ಬೆನ್ನ ಬಿದ್ದವನ ।

ಸುಡು ಸುರಿತಾಳನ ಲವುಡಯೆಂದರಿಯೆನು
ಕೆಡಬೇಡ ಕಾಲನೊಳ್ ಸೆಣಸಿ ||೩೭||

ಸುರಿತಾಳ ಬಲವಾಗೆ ತಾನಿರುವ ರಾಜ್ಯಕೆ ಕರ್ತ
ನಡೆಯೊ ಮೂಳನ ಭಯವೆ ಮೇಘುನಿಗೆ ।
ಹಿರಿಯ ತನದೊಳು ಪೋಗಿ ಹರಣ ಉಳಿದರೆ ನಿಮ್ಮರಸು
ಸುರಿತಾಳನಿಗೆ ಪೇಳೆನಲು ||೩೮||

ನಾಯ ಹಿಡಿವನ ಮಾತ ಹೋಗಿ ಹೇಳಲು ಹೆಣ್ಣು
ಬಾಲೆಗೀ ಕ[ಡೆ]ಯಾ[ದೆ]ವಲ್ಲ।
ಕೂಗಿ ಬೊಬ್ಬೆಯ ಹೊಡೆದು ಕತ್ತಿಗಳು ಥಳಥಳಿಸೆ
ಝೋರಿಸಿ ಮುತ್ತೆ ನಾಕು ಮುಖದಿ ||೩೯||

ಸರಳಿನ ಮಳೆಯನು ಕರೆಸುತ ತುರುಕರು
ಕವಿದು ಏರಲು ಕಾಗೆ ತೆರದಿ ।
ಗರುಡನಂದದಿ ರಾಮನಿರುವ ಮೋಡಿಗೆ ಬೆದರಿ
ಮುರಿದು ಓಡಲು ಬಾಣದೆಸೆಗೆ ||೪೦||

ಕೆಡಬೇಡ ಹೊಡೆವೆನು ಪಡೆದವರ ನೆನೆಕೊಳ್ಳಿ
ಮಡದಿ ಮಕ್ಕಳು ಮುಲ್ಲಾನನ್ನು ।
ಕಿಡಿಗಣ್ಣ ಶರಭನ ಆರ್ಭಟದಿ ಚೆನ್ನಿಗರಾಮ
ನಡೆದನಾಹವಕೆ ಮರಿಸಿಂಹನಂತೆ ||೪೧||

ಹೊಕ್ಕನು ಅತಿ ಬೇಗ ರಾಕ್ಷ ಸಿಂಹನ ತೆರದಿ
ಇಕ್ಕೆಲದೊಳು ಸವರುತಲಿ ।
ಬಿಚ್ಚುತ್ತ ಕಳಲೆಯ ಉಪ್ಪಿಗೆ ಕೊರೆದಂತೆ
ಕೊಚ್ಚಿದನು ನಾಲ್ಕು ಸಾವಿರವ ||೪೨||

ಹಿಂದುಳಿದ ನೇಮಿಯು ಬಂದು ಕೂಡಿದ ಬೇಗ
ಕೋಯೆಂದು ಆರ್ಭಟೆಯಲಿ ಮುತ್ತಿದನು ।
ತುಂಬಿತು ಸರಳಂಬು ಸೋನೆಯ ಮಳೆಯಂತೆ
ಗಂಭೀರ ರಾಮನೆಡಬಲದಿ ||೪೩||

ಕಂಡರು ಕದನ ಪ್ರಚಂಡ ರಾಯರು ಕಾಟ
ಸಂಗಯ್ಯ ಸಮರದ ಮುದ್ದ।
ಮುಂಗಡೆಯೇರಲು ಮೂವತ್ತು ಸಾವಿರದೊಳು
ಹಿಂದೆ ಕವಿಯಲು ಲಕ್ಷ ಪೌಜ ||೪೪||

ಜರಿಮಲೆಯ ಮುಮ್ಮಯ್ಯ ಕನಕಗಿರಿ ನಾಯಕ
ಪೆನುಗೊಂಡೆ ರಂಗರಸು ಪೊಕ್ಕು ।
ಹೊಡೆಯಲು ಹತ್ತೆಂಟು ಬೀದಿ ದಾರಿಯ ಮಾಡಿ
ಕುರಿಗಿಂತ ಕಡೆಯಾಗೆ ತಲೆಯು ||೪೫||

ಲಯವಾದ ಡಿಳ್ಳಿಯ ಪೌಜ ಬಾದುರ ಕಂಡು
ಗೆಲವೇರಿ ತನ್ನ ಮನದೊಳಗೆ ।
[ಕ]ಡಿದಾಡಿ ತುರಗವ ಜೀಯೆಂದು ಹೊಡೆದನು
ಸುಲಭ ಪೌಜಿನ ಮೇಲೆ ಬಿದ್ದು ||೪೬||

ಮಾರು ಮಾರೆನುತಲಿ ಹೊಗಲೇರಿ ಬಾದುರಖಾನುಗ
ರೆದ್ದು ಹೊಡೆಯೆ ಖಾನರನು ।
ರಾಮಗೆ ಒಳಗೆಂದು ಸುರಿತಾಳನಿಗೆ ವಾಲೆಯ ಬರೆದ
ವಜೀರನ ರಾಮುಗ ಕೊಟ್ಟಿದನು ||೪೭||

ಸುತ್ತ ಗಾವುದ ದಾರಿ ಕಟ್ಟಿ ರಾಮನ ಮಂದಿ
ಬೆಟ್ಟ ಬೇಲಿಯನು ಬಿದ್ದವರ ।
ಕುಟ್ಟಿ ತಲೆಗಳನರಿದು ಕೊನೆಗೆ ಕಟ್ಟಿದರೊಂದು
ಸುತ್ತ ಯೋಜನದ ಮಧ್ಯದಲಿ ||೪೮||

ಹತ್ತೆಂಟ ಸಾವಿರ ತುರುಗವ ಪಾಳ್ಯಕೆ ಹೊಡೆದು
ಕತ್ತೆ ಹೊಡೆವಂತೆ ಮಡಿವಾಳ।
ಮತ್ತೆ ನೇಮಿಯು ನೋಡಿ ಮರಣಬಂದಿತು ಎಂದು
ಹೊಕ್ಕನು ಪಾಣೆಯ ಜಲವ ||೪೯||

ಪಾಚ್ಛಯನ ಪೌಜೆಲ್ಲ ಹತ್ತಿತು ಯಮನೂರ
ಕತ್ತಿಯೊಳ್ ಪಾರ್ಥ ಕಲಿಭೀಮ ।

ಮೃತ್ಯುನಿಗೋಸ್ಕರ ಕೀರ್ತಿ ಮಾಡಿದೆ ಭೂಪ
ಅತ್ತ ಬಾದುರಖಾನ ಕೈ ಮುಗಿದು ||೫೦||

ತೀರಿತು ಕಾದಾಟ ನೇಮಿ ಉಳಿದನು ಭೂಪ
ಪಾಣಿ ಪೊಕ್ಕನು ಜೀವ ಭಯಕೆ ।
ಸಾಧಿಸಬಹುದವನ ಸುರಿತಾಳಗೆ ಸುದ್ದಿಯ
ಹೇಳಿಕೋ ಮೂಳ ಹೋಗೆನುತ ||೫೧||

ಕೇಳಿದಾಕ್ಷಣದೊಳು ರಾ[ಮ]ನಲ್ಲಿಗೆ ಬಂದ
ಪ್ರಾಣ ನಂಬಿಗೆಯನು ಕೊಟ್ಟು ।
ಮೇಲವನ ಮನ್ನಿಸಿ ಕರವಿಡಿದು ಪಾಳ್ಯಕ್ಕೆ ಬಂದು
ಬೇರೊಂದು ಡೇರ್‍ಯವನು ಕೊಡಿಸಿ ||೫೨||

ಸಮಗ್ರವನು ಕೊಟ್ಟು ಸಕಲ ಉಪಚಾರ ಮಾಡಿ
ಪಾರಾವ ಹಾಕೆ ಡೇರ್‍ಯಕ್ಕೆ।
ಸೂರ್‍ಯನು ತಾಯೊಡಲ ಸೇರಲು ತಿಮಿರವು
ಮೂಜಗವ ಮುತ್ತಿ ಮುಸುಕಿಹುದು ||೫೩||

ರಾಯ ಕಂಪಿಲನಾತ್ಮಜ ತಾನೊಂದು ಗ್ರಹಿಸಲು
ನೇಮಿ ಕೊಲ್ಲಲು ಕಾರ್‍ಯ ಮುಗಿಯೆ ।
ಯಾರೊಂದು ತನಗರಿಯಾಗಿ ಬರುವರು ಮುಂದೆ
ಕಾರ್‍ಯ ಸಾಧ್ಯಗಳು ತನಗುಂಟು ||೫೪||

ಬರಹೇಳಿ ಕರೆಸಿದ ಹಿರಿಯ ಕಾಟಣ್ಣನ
ಬಿರಿದಾಂಕ ವೀರ ಸಂಗಯ್ಯನ ।
ನೆರೆ ಜಾಣ ಮಂತ್ರಿಯ ಮಗ ನೀಲಕಂಠನ
ಕರಮುಗಿದು ಎಲ್ಲರು ನೆರೆಯೆ ||೫೫||

ಲಾಲಿಸಿ ಎಲ್ಲರು ಭಾವಾಜಿ ಬಲವಂತ
ಧೀರ ಕಾಟಯ್ಯ ವರಮಂತ್ರಿ ।
ನೇಮಿಯ ಬಿಡುವೆನು ನ್ಯಾಯ ಮುಂದಿವನ
ಮಾತಿಗೋಸ್ಕರ ಕಥೆ ಸಾಗಬೇಕು ||೫೬||

ಬಿಡಬಹುದು ರಾಜೇಂದ್ರ ಬೇಡ ಎಂಬವರಲ್ಲ
ವೆಂಬ ಮಾತ ಕೇಳಿ ರಾಮಯ್ಯ।
ಸುಳುಹುಂಟು [ಒಂ]ದು ಮನದಿ ಲಾಲಿಸು ಅಣ್ಣ
ಇವನ ಮೂಲದಲಿ ಬಾದುರನು ॥೫೭॥

ಬರಬೇಕು ಸತಿಸುತರು ಸದರವಾಗಿ ಎಮ್ಮ
ಹೃದಯಕ್ಕೆ ನಿಮಗೆಂತು ಕಾಣೆ।
ನಿಜವೆಂದು ಈ ಮಾತು ಚೆದುರ ಚೆನ್ನಿಗ ರಾಮ
ಅರುಹಲು ನೇಮಿಯ ಕರೆದು ॥೫೮॥

ಆ[ವೊ]ತ್ತು ಅವ ಬಂದು ಪಾದಾಕ್ರಾಂತನು ಆದ
ಅವನ ರಾಣಿಯಿಂದೆನಗೇನು ।
ಬೇಗದಿಂದಲಿ ಬರದು ತನಗಾದ ಸ್ಥಿತಿಯನು ಮುಂದೆ
ರಾಯ ಸುರಿತಾಳನ ಎಡೆಗೆ ॥೫೯॥

ಬಾದುರಖಾನನ ಪ್ರಾಣಕಾಂತೆಯ ಸುತರ
ಸಾಗಿಸಲು ಎನ್ನ ಕಳುಹುವರು।
ದೇವರ ಪಾದಕ್ಕೆ ಪೋಗಿವೆಂಬುದು ತಿಳಿದರೆ ಹೇಗೆ ಕಾಯುವುದು
ಭೂಮಿಪಾಲಕರಿಗೆ ಬಿನ್ನಹ ॥೬೦॥

ನೇಮಿ ಮುಳುಗಲು ಎನ್ನ ನಾಮ ಲಿಖಿತವು ತೀರೆ
ಭೂಮಿಯೊಳಪಕೀರ್ತಿ ಪಡೆವೆ ।
ನೇಮಿ ಬರಲು ನಮ್ಮ ಮಾನ ಉಳಿವುದು ಅವನ
ರಾಣಿಂದ ನಮಗೇನು ಕಳುಹೆ ॥೬೧॥

ಬಾದುರನ ಸತಿ ಸುತರು ಏರಲು ದಂಡಿಗೆ
ನೇಮಿಗೆ ಉಡುಗೊರೆಯ ಮಾಡಿ।
ಸಾವಿರ ತುರಗವ ಸಂಗಡವಿತ್ತು ಪಾಚ್ಛಯಗೆ
ಏಳಯ್ಯ [ದಂಡಿ]ನ ಕಾರ್ಯ ॥೬೨॥

ಕೇಳಿದಾಕ್ಷಣ ದಂಡ ಕೂಡಿ ಬಂದರೆ ಲೇಸು
ನಾ ಬೇರೆ ಅಂಜಿ ಓಡುವನಲ್ಲ ರಾಮಾ।

ನೋಡುವೆ ಭರವನು ಮೂರೆರಡು ದಿವಸದ
ಮೇಲೆ ದಂಡೆದ್ದು ಸಾಗುವೆನು ||೬೩||

ರಾಮಭೂಪಾಲಗೆ ನೇಮಿ ಕರಗಳ ಮುಗಿದು
ಸಾಗಿದ ಡಿಳ್ಳಿಯ ಪುರಕೆ।
ತೀರಿತ್ತು ಇದು ಕಾಲಗತಿಯ ಕಂಟಕವೆಂದು
ಪ್ರಾಣ ಗಂಡಾಂತರವನುಳಿದೆ ||೬೪||

ಸಾಗಿ ಬರಲು ನೇಮಿ ಮೂರಾರು ದಿನ ಕಳೆದು
ಬರೆ ಹನ್ನೆರಡಕ್ಕೆ ಡಿಳ್ಳಿ ।
ಸೇರಿ ಸದರಿಗೆ ಬಂದು ಸುರಿತಾಳಗೆ ಎರಗಲು
ಕೋಣನಾಗುವರೆ ಎಲೆ ಮಂತ್ರಿ ||೬೫||

ಏನು ಹೇಳಲಿ ಭೂಪ ಮೀರಿತು ಮನ್ಮಥನ
ತಾಯವಲ್ಲಭ ಸಾಹಸದಿ ।
ಹಾರಲು ಹರಿಣನ ಮೀರಿ ಮಾರುತನಂತೆ ।
ಏರಿದೆವು ಬೆನ್ನೊಡನೆ ನೆಗೆದು ||೬೬||

ಮಿಕ್ಕು ದಾಟಿದ ಖಾನ ಹೊಕ್ಕನು ಅವನೊಳು
ಮುತ್ತಿದೆವು ಬೆನ್ನಡಿ ನಾವು ।
ಲಕ್ಷ ದಂಡಿಗೆ ರಾಮ ಹೊಕ್ಕು ಕಡಿಯಲು ನಾವು
ಸಿಕ್ಕಿದೆವು ಕುರಿಗಳಂದದಲಿ ||೬೭||

ಮನುಜನಲ್ಲವು ಭೂಪ ದನುಜನ ಸ[ಮ]ಶಕ್ತಿ
ಲವ ಕುಶರಿಗೆ ಮಿಗಿಲು ಭೂಪ।
ಬಲವಿಲ್ಲ ತೋಳೆಡೆಯ ಬಲವೆ ಶಕ್ತಿಗಳಾಗೆ
ಪೊಡವಿಯ ಮಗುಚದೆ ಬಿಡನು ||೬೮||

ಕತ್ತೆಗಳ ಕೋಣಗಳ ಮರಿಗಿಂತ ಕಡೆಯಾಗಿ
ಹೊಡೆಯಲು ಅರ್ಧಭಾಗ।
ತುರಗ ರಾವುತರು ಜನರು ಮುನ್ನವೆಯೆಲ್ಲ
ನೊರಜುಗಳಂತೆ ಬಡಿದನು ||೬೯||

ಹೇಳುವ ಶಕ್ತಿಯ ಕೇಳುತ್ತ ಸುರಿತಾಳ
ಭೂಮಿಯ ಹೊಡೆದದ್ದು ನಿಂದು ।
ಕೀಳುವೆ ಹಲ್ಲನು ಬೇಡ ಮೂಳನ ದಂಡ
ಕೂಡೆಂದು ಭೇರಿಯ ಹೊಡೆಸೆ ॥೭೦॥

ಸ್ವಾಮಿ ಸೈರಿಪುದೆಂದು ನೇಮಿ ಎರಗಲು ಮತ್ತೆ
ಕಾಣಲಾಗದು ಕಾರ್ಯಸ್ಥಿತಿಯ।
ಶ್ವಾನ ಮನುಜನ ಮೇಲೆ ಭೂನಾಥ ನೀ ನಡೆಯಲು
ಹಾನಿ ತೋರಲು ಆ ಕೀರ್ತಿ ॥೭೧॥

ಹಗೆ ಹತ್ತು ವರುಷವು ಮನದೊಳಗೆ ಇಡಬೇಕು
ಅವನ ಜಯಲಕ್ಷ್ಮಿ ತೊಲಗುವ ತನಕ ।
ಬಿದಿಗೆ ಚಂದ್ರನ ಬೆಳಕು ಕಡೆಗೊಂದೆ ಸಮನಿಹುದೆ
ಹದಿನೈದು ಕತ್ತಲೆ ಬೆಳಕು ॥೭೨॥

ವಸವಂತ ಕಾಲದೊಳೆಡಹಿದ ಕಲ್ಲನು
ಬಿಸಲು ಮಾಡಿರ್ದ ಮಳೆ ಬರಲು ।
ಕೆಸರಾದ ಕಾಲದಿ ಕಾಲಲಿ ನಡೆಯಲು
ಅಸಮನದಿ ಬಿಡದೀಗ ಪೋಗೆ ॥೭೩॥

ಶ್ವಾನ ಕಚ್ಚಿತುಯೆಂದು ಮರಳಿ ಕಡಿಯಲು ಮತ್ತೆ
ಹೀನಾಯ ಬಾರದೆ ಕುಂದು ।
ತಾವರೆ ಸಖನಿಗೆ ಮೋಡ ಕವಿಯಲು ಪರಿದು
ಪೋಗದೆ ಇವಗೇನು ನೆಲೆಯೆ ॥೭೪॥

ಹುಡುಗ ಮೂಳನ ಮಾತು ಎಷ್ಟುಗ್ರತಮ ನಿಮಗೆ
ಹೊತ್ತೇರಿದಂತೆ ಬಂದಿಹುದು।
ಶತ್ರುನಾಲರು ಬಗೆ ವಿಳಂಬವಲ್ಲದೆ ಕ್ರೂರ
ಪುಟ್ಟಲು ಆಗವನ ಕೀಳ್ವೆ ॥೭೫॥

ಜಾಣ ಮಂತ್ರಿಯ ಮಾತು ಸಹಜವು ಎನುತಲಿ
ಬಾಳೋದು ಬಾದೂರಗಳವೆ ।

ಕೀಳು ಕುಲದ ಸಣ್ಣ ಮೂಳ ರಾಮನ ತಲೆಯ
ಪೂಜೆ ಮಾಡಿಸುವೆ ಡಿಳ್ಳಿಯಲಿ ||೭೬||

ರಾಜೇಂದ್ರ ಸುರಿತಾಳ ಈ ಬಗೆಯ ಪೌರುಷವಾಡಿ
ಹೋಗಲು ತನ್ನರಮನೆಗೆ।
ಮೂರಾರು ದಿವಸವ ನೋಡಿ ಚೆನ್ನಿಗ ರಾಮ
ಭೇರಿಯ ಹೊಡೆಯೆ ನಲುಗೆ ಮನ ||೭೭||

ಗುತ್ತಿಯ ಚಾಮಯ್ಯ ಕಪ್ಪ ಉಡುಗೊರೆ ಹೇರಿ
ಹತ್ತೆಂಟು ಸಾವಿರ ಬಲದಿ।
ಹೊಕ್ಕನು ತಾ ಬಂದು ರಾಯ ರಾಮನ ದಂಡು
ಒಪ್ಪಿತ್ತು ಭೆಟ್ಟಿ ಇರ್ವರಿಗೆ ||೭೮||*

ಕ್ಷೇಮವೆ ಮಾರ್ತಂಡ ಭೀಮ ಚೆನ್ನಿಗ ರಾಮ
ಕ್ಷೇಮವೆ ಕಾಟಣ್ಣ ನೀವು।
ಕ್ಷೇಮವೆ ಬಂದಿರೆ ಭೂಮಿ ರಾಯರು ಎಲ್ಲ
ಪ್ರೇಮವೆ ಎನಲು ಚಾಮಯ್ಯ ||೭೯||

ಇವರವರು ಕ್ಷೇಮವ ಪರಿಣಮಿಸಿ ಕೇಳ್ಯಾಡಿ
ಕರವಿಡಿದು ತಮ ತಮಗೆಲ್ಲ।
ನಡೆವೆವು ಪುರಕೆ[ನೆ] ಇರಿ ನೀವು ಸುಖದೊಳಗೆ
ನಡೆಸದೆ ಗರ್ವ ಎಮ್ಮೊಡನೆ ||೮೦||

ರೊಕ್ಕ ಪಾಕಿಗಳೆಂದು ಪಾಚ್ಛಯ ಕೇ[ಳಿದರೆ]
ಕತ್ತಿವಿಡಿದು ನೂಕಿ ಬಂದವರ।
ಶಕ್ತಿ ಸಾಹಸ ನಡೆಸೆ ಉತ್ತರ ಬರೆಯೆನ[ಗೆ]
ತಿಟ್ಟಿ ಹಾಕಿಸುವೆ ಯಮನೂರ ||೮೧||

ಗಟ್ಯಾಗಿ ನಂಬುಗೆಯ ಕೊಟ್ಟು ಚೆನ್ನಿಗರಾಮ
ಪಟ್ಟಣಕೆ ಪರಿಣಮಿಸಿ ಕಳುಹಿ।
ಮತ್ತೆ ದಂಡೇಳಲು ಮಾಘ ಮಾಸದ ಶುದ್ಧ
ಮೂರನೆಯ ಸೋಮವಾರದಲ್ಲಿ ||೮೨||

---

* ಸಂಧಿ ೬ - ಪದ್ಯ ೧೧೧ ಪುನರುಕ್ತ (ಸಂ)

ಭೇರಿಗಳ ನಾದವು ಭೂಮಿ ಭೋರಿಡುವಂತೆ
ಕಹಳೆ ನಗಾರಿ ಕರ್ಣೆಗಳು ।
ಸಾಗಲು ಕರಿ ತುರಗ ಬಾಜಾರ ಬಲ ಸಹಿತ
ಧೂಳು ಮೂಜಗವನು ಮುಸುಕೆ ||೮೩||

ನಡೆದ ದಂಡಿಗೆ ಧರಿಣಿಯುಡಿದು ಕುಂಕುಮವಾಗಿ
ಕೆರೆ ಬಾವಿ ಜಲಗಳು ಬತ್ತಿ।
ಕಿರಣದ ಪ್ರಭೆ ಮುಸುಕಿ ಹಗಲು ಕಾವಳದಂತೆ
[ಅಡ]ಗಿತು ಲೋಕದ ಪ್ರಭೆಯು ||೮೪||

ಒದ್ದಾಡಿ ಕೈಕಾಲು ಓಡಲಾರದೆ ಮೃಗವು
ಹಬ್ಬವಾಗಲು ತಿಂಬ ಜನಕೆ ||೮೫||

ಒಂದೆರಡು ಮೂರು ನಾಲ್ಕೈದು ಪಯಣಕೆ ದಾಂಟಿ
ಬಂದಿಳಿಯೆ ಬಳ್ಳಾರಿ ಬುಡಕೆ।
ಮುಂದೆ ಜೋಡಿನವರು ಉತ್ರವಾಲೆಯ ತಂದು
ಕಂಪಿಲ[ಗೆ] ಬರವ ಹೇಳಿದರು ||೮೬||

ರಾಜೇಂದ್ರ ಕಂಪಿಲ ಸಾರಿಸಿ ಪಟ್ಟಣವ
ಓರಂತೆ ಪುರವ ಶೃಂಗರಿಸಿ।
ಆರೆಂಟು ಸಾವಿರ ಬಲಗೂಡಿ ರಾಜೇಂದ್ರ
ಪ್ರಧಾನಿಯ ಒಡಗೊಂಡು ನಡೆಯೆ ||೮೭||

ಕಂಡನು ಮಗ ಬರುವ ದಂಡಿನ ಒಡನೆಯೆ
ಮಂಡೆಯ ತೂಗಿ ನಲಿದಾಡಿ।
ಚಂದವಾಯಿತು ಮಂತ್ರಿ ಗುಂಡಿಗೆ ನ[ಡು]ಗುವುದು
ಭೂಮಂಡಲ ಹೇಗೆ ತಡೆದಿಹುದೊ ||೮೮||

ನೋಡಯ್ಯ ಬೈಚಪ್ಪ ಕುಮಾರನ ಬಲವನು
ಗೀಜಗ ಗಿಡುಗನಾದಂತೆ ।
ರೂಢಿಯ ದೊರೆಗಳು ಕೈಜೋಡಿಸಿ ಕಾದಿಹರು
ಸ್ವಾಮಿಯ ವರ ಪಿಂಡವಹುದು ||೮೯||

ಸಾಕಯ್ಯ ಮಂತ್ರಿ ಈ ಲೋಕದ ಸ್ಥಿತಿ ಎನಗೆ
ಪುತ್ರರ ಸಾಹಸವ ಕಂಡೆ।
ಸತ್ತರೆ ಈ ಮೇಲೆ ಕೀರ್ತಿ ಲೋಕದಿ ನಡೆಯೆ
ಚಿತ್ತದಿ ರಾಯ ಹಿಗ್ಗಿದನು ||೯೦||

ತಾ ಪಾಪಿಯಾಗಲು ತರಳರ ಫಲದಿಂದ
ಮಾತಾಡದಿರ್ದ ವೈರಿಗಳ।
ಮೇಕ ಗರ್ವವ ಮುರಿದು ನಮಗೆ ತಲೆವಾಗಿಸಿದ
ಕುಲದೀಪ ಶ[ತ]ರತ್ನ ಮಣಿಯು ||೯೧||

ಪರಮ ಜಟ್ಟಂಗಿಯ ವರ ಪುತ್ರರಹುದಿವರು
ನರಜನ್ಮ ಫಲ ಸೋಂಕಿಗೆಮ್ಮಾ ।
ಕಾರದೊಳ್ ನಿರ್ಮಿಸಿ ಧರೆಯನು ಮುರಿಯಲ್ಕೆ
ಹರ ಕಳುಹಿದ ಭೀಮನ ಪ್ರತಿಯ ||೯೨||

ರಾಯ ಬರುವ ಸುದ್ದಿ ಕುಮಾರರಿರ್ವರು ಕೇಳಿ
ಏರಿದ ತೇಜಿಯನಿಳಿದು।
ಕಾಲು ನಡೆಯಲಿ ಬಂದು ಕಾಣಿಕೆಯನು ಸುರಿದು
ಭೂಮಿಗೆ ಸಾಷ್ಟಾಂಗವೆರಗಿ ||೯೩||

ಪಾದಕ್ಕೆ ಅಪಕೀರ್ತಿ ಹೀನಾಯ ತರಲಿಲ್ಲ
ಮೀರಿದ ರಾಯ ದೊರೆಗಳನು।
ಕಾದು ನಿಮ್ಮಯ ಬಳಿಯ ಕೈಜೋಡಿಸಿ ನಿಂದಿರುವ
ತೇಜವ ಪಡೆ[ತಂದೆ] ಭೂಪ ||೯೪||

ಪುತ್ರರ ಶಿರಗಳ ಗಲ್ಲವ ಪಿಡಿ[ಯೆ]
ಪೃಥ್ವಿಯ ದೊರೆಗಳು ಬಂದು ।
ಕರಗಳ ಮುಗಿಯಲ್ಕೆ ಸಂತೋಷದಿಂದಲಿ
ಎತ್ತಿದ ಕರವ ಕಂಪಿಲನು ||೯೫||

ಕ್ಷೇಮವೆ ಪರಲೋಕ ರಾಜೇಂದ್ರ ಭೂಪಾಲರು
ಪ್ರೇಮವೆ ರಾಜ್ಯಸ್ಥಿತಿಗತಿಯು ।

ಕ್ಷೇಮವೆನಲಿ ಬಂದು ಬಾದುರ ಸಂಗಯ್ಯ
ನೀಲಕಂಠನು ಬಂದು ಎರಗೆ ||೯೬||

ದಂಡು ಇಳಿಯಲು ಬಂದು ಕುಮ್ಮಟದ ಸುತ್ತ
ಒಂದು ಯೋಜನದ ಅಡ್ಡಗಲ ।
ಬಂದ ರಾಯರಿಗೆಲ್ಲ ಪಡಿ ಬಿಡಾರ ಮಾಡಿ[ಸೆಂದು]
ರಾಜೇಂದ್ರ ಮಂತ್ರಿಗೆ ಪೇಳಿದರು ||೯೭||

ರಾಯ ರಾಯರನೆಲ್ಲ ಸಾಗಿಸಿ ಡೇರ್‍ಯಕ್ಕೆ
ಕುಮಾರರ ಒಡಗೊಂಡು ಅರಸು ।
ಭೋರೆಂಬ ವಾದ್ಯದ ಘೋಷದೊಳಗೆ ರಾಯ
ಊರ ಹೊಕ್ಕನು ಕುಮ್ಮಟವ ||೯೮||

ನಗರದ ಲಾವಣ್ಯ ಚದುರೆಯರಾರತಿ ಮಾಡಿ
ತರತರದೊಳು ತಂದು ಬೆಳಗಿ ।
ತರಳರಿವರು ಹೊನ್ನ ಆಭರಣವ ಕೊಡುತಲಿ
ನಡೆಯಲು ತಾಯ ದರುಶನಕೆ ||೯೯||

ಏರಿದ ತುರಗಗಳನಿಳಿದು ತರಳರಿರ್ವರು ಪೋಗಿ
ಕಾಣಿಕೆ[ಯನು] ಸುರಿದು ಬೇಗ ।
ಭೂಮಿಗೆ [ಪಣೆ] ನೀಡಿ ಎರಗಲು ತಾಯಿಗೆ
ಬಾಲರೇಳೆಂದು ಹರಸಿದಳು ||೧೦೦||

ಗುರು ಶಂಭು ಜಟ್ಟಂಗಿ ವರಪುತ್ರರಿವರೆಂದು
ಪರಬಲವೈರಿದಲ್ಲಣರ ।
ತರಳರಿರ್ವರ ಮಂಡೆ ಪಿಡಿದೆತ್ತಿ ಹರಿಯಮ್ಮ
ಬೆಳಗಿದಳು ದೃಷ್ಟಿ ಆರತಿಯ ||೧೦೧||

ಅನಿತರೊಳಗೆ ಸೂರ್‍ಯ ಕಡೆಗಂಡು ಪ್ರೇಮದಿ
ಗಿರಿಜಾವಲ್ಲಭನ ದರುಶನಕೆ ।
ತಿರುಗಿ ಪೂರ್ವಾಗ್ನಿಯನೇರಲು ರವಿ ಬಂದು
ಸದರಿಗೆ ಕುಳಿತ ಕಂಪಿಲನು ||೧೦೨||

ರಾಮನೋಲಗ ಕೇಳಿ ಭೂಮಿಯ ದೊರೆಗಳು
ಮಂತ್ರಿ ವಾಲ್ಯೆಸಿ ಕುಳಿತಿರಲು ।
ದೇವೇಂದ್ರ ಭೋಗದೊಳಿರುತ ಕಂಪಿಲರಾಯ
ತಾನೊಂದಾಗ್ರಹಿಸಿದ ಮನದಿ ||೧೦೩||

ನಿತ್ಯವಲ್ಲದ ಕಾಯ ನೆತ್ತಿಯೊಳೊಳೆಯುಂಟೆ
ಪುತ್ರರ ಮದುವೆ ಮಾಡಿಸುವಾ ।
ಸತ್ಯವುಳ್ಳವ ಮಂತ್ರಿ ಸತಿಯರ ನೋಡಯ್ಯ
ಪೃಥ್ವಿರಾಯರುರು ಇರಲು ಮಾಳ್ಪೆ ||೧೦೪||

ಪಂಚೈದು ಸ್ತ್ರೀಯರ ಭೂಕಾಂತ ರಾಮಗೆ ನೋಡು
ಮತ್ತೀಗ ಕಾಟಣ್ಣಗೆರಡು ।
[ಪದ್ಮಿನಿ]ಯರ ನೋಡೊ ವಂಶಾಬ್ಧಿಯೊಳಗೊಂದು
ಇಂತು ವಾಲಗವ ಹರಸಿದನು ||೧೦೫||

ಬಂದನು ಬೈಚಪ್ಪ ಪಟ್ಟದ ರಾಣಿಗೆ
ಅರಸೆಂ[ದು] ವಾಕ್ಯವನುಸುರೆ ।
ಚೆಂದವಾಯಿತು ಮಂತ್ರಿ ಕುರುಡ ಬಯಸುವುದೇನು
ಕುಟುಂಬದೊಳಗೆ ನೋಡು ಎನಲು ||೧೦೬||

ವಾಯ ವರ್ಣವು ಚಿತ್ರ ಲಾವಣ್ಯ ಸ್ತ್ರೀಯರ
ನೋಡಯ್ಯ ಈ ಕ್ಷಣದೊಳಗೆ ।
ತಾಯೆ ಕಂಡಿರೆ ನಿಮ್ಮ ಸೋದರ ಸೊಸೆಯೆರಡು
ಮೇಲೆ ಮೂರನು ನೋಡಿ ಬರುವೆ ||೧೦೭||

ಮತ್ತೆ ಲೇಸಾಯ್ತು ಮುತ್ತಿನ ಮಣಿ ಎರಡು
ಮತ್ತೆ ನೋಡಯ್ಯ ಮೂವರನು ।
ಚಿತ್ತದೊಳಿದ್ದಂತೆ ಕರೆಸುವೆ ನೋಡೆಂದು
ಹೊಕ್ಕನು ತನ್ನ ಮಂದಿರವ ||೧೦೮||

ನೋಡಿದನು ನೂರೆಂಟರೊಳಗಾಗಿ ಅತಿರಂಭೆ
ವೀರಸಂಗಯ್ಯನ ತನುಜೆಯನು।

ಮೇಲೊಂದು ಜರೆಮಲೆಯ ಕುಮಾರನ ಮಗಳನ್ನು
ಸಾರಂಗಿ ಕನಕಯ್ಯನ ತನುಜೆ ॥೧೦೯॥

ಬಾಲೆಯರೈವರ ರಾಯಮಂತ್ರಿಯು ತಂದು
ತೋರಿದ ರಾಯ ರಾಣಿಯರಿಗೆ ।
ಕ್ಷೀರದೊಳು ರಸವೊಳ್ಳೆ ಮಡುಪುಣ್ಣೆ ಬೆರೆದಂತೆ
ಸರಿರಸವೆಂದು ಒಪ್ಪಿದರು ॥೧೧೦॥*

ಆಲಸ್ಯ ಮಾಡದೆ ಜೋಡಿಸು ಇನ್ನೆರಡು
ರಾಯ ಕಾಟಣ್ಣಗೆ ವರಸಮನ ।
ತಾ ಒಂದ ಬೊ[ಲ್ಲ]ವ ಕಾವ ಗೊಲ್ಲರ ಹನುಮ
ರಾಯಣ್ಣನೊಳು ಎರಡು ತರಲು ॥೧೧೧॥

ರಾಯ ರಾಮಯ್ಯನ ರಾಣಿಯರೈವರ ಪೆಸರು
ವೀರಾಯಿ ಚೆಲ್ವ ಲಿಂಗರಸಿ ।
ವಾಣಿಯೊಳತಿರಂಭೆ [ಹಂ]ಪಾಜಿ ಸೌಭದ್ರೆ
ಜಾಣತ್ವದೊಳು ಚಂದ್ರ ಕಳೆಯ ॥೧೧೨॥

ದೊರೆರಾಯ ಕಾಟಣ್ಣನ ಮಡದೆರಿಬ್ಬರ ಹೆಸರು
[ಇ]ಡಿಸಿದ ರಾಯ ಪ್ರತಿಯಾಗಿ ।
ಉಡುರಾಜನಂ ಪೋಲ್ವ ಪ್ರೌಢೆಯು ರಂಗಾಯಿ
ನಡು ಸಿಂಹ [ಕು]ರಂಗನಯನೆ ॥೧೧೩॥

[ನಾ]ಮಕರಣಗಳಾಗೆ ರಾಯ ದೊರೆಗಳಿಗೆಲ್ಲ
ತೋರಿಸಿ ಸರ್ವ ಮಾನ್ಯರಿಗೆ ।
ಸ್ತ್ರೀಯರು ಅಜನಿಂದ ಮಾಲೆ ಪಡೆಯಲ್ಕಿಂಥ
ಸಾಹಸಿಗ[ರ] ಪಡೆದರೇನು ॥೧೧೪॥

ನಾರಿಯಾಡಿದಳೊಂದು ಪ್ರಾಣವಲ್ಲಭನೊಳು
ಬಾಲರಿಗೆ ನಾರಿಯರ ರೂಪ ।
ತೋರದೆ ಮದುವೆಯ ಮಾಡಲು ಅತಿಕಷ್ಟ
ನೋಡಿನ್ನು ಮಾರ್ತಂಡ ಭೂಪ ॥೧೧೫॥

---

* + ರಾಮಯ್ಯನ ಮದುವೆ (ಮೂ)

ಮಾತೆ ಪಿತರು ಒಪ್ಪಿ ಮರುಳ ತಂದರೆ ನಾರಿ
ಲೋಕದೊಳತಿಗ[ಳಿವ]ರುಂಟೆ।
ಸಾಕಿನ್ನು ರಾಜೇಂದ್ರ ಸತ್ಯಕಾಲದ ಮಾತ
ಈ ಕಲಿಗೆ ನೀವು ನಡೆಸುವರೆ ||೧೧೬||

ಶ್ರೋಣಿತಪುರದೊಳು ಬಾಣಾಸುರನ ತನುಜೆ
ಕೂಡಳೆ ತಾ ಮೆಚ್ಚಿದವನ ।
ಕೇಳಿದನೆ ಕಂದರ್ಪಸುತನು ಪಡೆದವರನು
ಸಂಯೋಗವಾಗದೆ ಮದುವೆಯಿಲ್ಲದೆ ||೧೧೭||

ತಾಯಿಗಳು ತಂದು ವಿವಾಹಮಾಡಿದ ಸತಿಯನ್ನು
ಬೇರೆ ಬಿಟ್ಟವರ ಕೇಳರಸ।
ರಾಯ ಧರ್ಮರನುಜ ಪಾರ್ಥ ದ್ರೌಪದಿ ಮೆಚ್ಚಿ
ನಾಗಕನ್ನೆಯರನ್ನು ಬಿಡದೆ ||೧೧೮||

ನಕ್ಕನು ರಾಜೇಂದ್ರ ರಾಣಿಯ ವಚನದೊಳ್
ವ್ಯರ್ಥವಾಯಿತು ಎನ್ನ ಮಾತು।
ನಿಶ್ಚಯವಹುದೆಂದು ಸತಿಯರ ಲಾವಣ್ಯ
ಪುತ್ರರಿಗೆ ತೋರಿ ಪ್ರೀತಿಯಲಿ ||೧೧೯||

ಸಾಗಿಸಿ ಮದುವೆಯ ಸಮಗ್ರವಾದ ಮೇಲೆ
ವಾಲೆಯ ಬರೆದು ದೊರೆಗಳಿಗೆ ।
ಪುರವನು ಶೃಂಗರಿಸಿ ಬೀದಿ ಚಪ್ಪರ ಹಾಕಿ
ತೋರಣ ಮೇಲ್ಕಟ್ಟು ರಚಿಸಿ ||೧೨೦||

ಬಾಲರಿಗೆ ಆಭರಣ ವಿಧಾನ ಭೂಷಣ ಮಾಡಿ
ಶೋಭನ ಮದವಳಿಗೆ ಶಾಸ್ತ್ರ।
ಕೋಮಾಲೆ ಮುತ್ತೈದೆಯರು ಹಸೆ ಶೃಂಗರಿಸಿ
ಮೊದಲಾಗಿ ಹಸೆಯೊಳ್ಕುಳ್ಳಿರಿಸಿ ||೧೨೧||

ಮೊದಲಾಗೊ ಶಾಸ್ತ್ರಾದಿಗಳನರಿದು ಮಾಡಿ
ಶುಭದೊಳು ಕಂಕಣ ಧರಿಸಿ ।

ಮೃಗನೇ[ತ್ರಂಗ]ನೆಯರು ಕುಂದಲಿಗೆಯನಿಟ್ಟು
ಒರಳಕ್ಕಿ ಒನಕೆಯ ಪಿಡಿಯೆ ||೧೨೨||

ಒರಳಕ್ಕಿ ಪದ :

ಸುವ್ವಿಯೆಂದು ಪಾಡಿರೆ ಸುಗುಣೆ ಮುತ್ತೈದೆಯರು
ಯೌವನ ಮದದೊಳು ಒಲೆಯುತ ।
ಸುವ್ವಿ ಬಾ ಸುವ್ವಿ ||ಪಲ್ಲ||

ಚಂದನದ ಒನಕೆಗೆ ಗಂಧಾಕ್ಷತೆಯಿಟ್ಟು
ಸುಗುಣಗಂಧಿ ಮುತ್ತೈದೆಯರು ಹಿಡಿಕೊಳ್ಳಿ
ಶಂಭು ಜಟ್ಟಂಗೀಶ ದಯವಾಗೊ ನಿಮ್ಮ ಯ
ವರಪಿಂಡ ಪುತ್ರರ ಸಲಹೆಂದು ||ಸುವ್ವಿ ಬಾ ||೧೨೩||

ತಾವರೆ ಗಂಧಿಯರು ಕೋಮಾಲೆ ಪ್ರಾಯವು
ಬಾಳೆಯ ತೊಳಿಯಂತೆ ಬಳಕುತ ।
ಮೂರು ಕಣ್ಣಯ್ಯನ ವರದೊಳು ಜನಿಸಿದ
ರಾಯ ರಾಮಯ್ಯಗೆ ಒರಳಕ್ಕಿ ||ಸುವ್ವಿ ಬಾ ||೧೨೪||

ನೀಲಕುಂತಳೆಯರು ಕೋಗಿಲೆಸ್ವರ ರಾಗ
ಬಾಗುತ ಬಂದೊನಿಕೆಯ ನೆಗೆವುತ
ಮೂರು ರಾಯರ ಗಂಡ ಭೇರುಂಡ ರಾಮಯಗೆ
ಶ್ರೀ ಗೌರಿವಲ್ಲಭ ದಯವಾಗೋ ||ಸುವ್ವಿ ಬಾ ||೧೨೫||

ಬಡನಡು ಬಳಕುತ ಮುಡಿಯ ಬೆನ್ನನೊಲೆಯುತ
ತೊಡೆ ತೋಳ ಮೊಲೆ ಭಾರವದರುತ
ಪರರಾಯರೆದೆ ಶೂಲ ಪಾರ್ಥ ರಾಮಯ್ಯಗೆ
ಉರಗಭೂಷಣನೆ ದಯವಾಗೊ ||ಸುವ್ವಿ ಬಾ ||೧೨೬||

ಕನ್ನೆಯರು ಕಡುಚೆಲ್ವ ಹೆಣ್ಣುಗಳು ನಾಲ್ವರು
ಸಣ್ಣ ರಾಜಾನ್ನದಕ್ಕಿ ತಳಿಸಲು ।
ದಮ್ಮನೆ ದಣಿಯುತ ಸಣ್ಣ ಬೆವರಿಳಿಯುತ
ಗಮ್ಮನೆ [ನೀ]ಡಿ ನಮಗುಡುಗೊರೆಯ ||ಸುವ್ವಿ ಬಾ ||೧೨೭||

ಸಾಂಗತ್ಯವರ್ಣ :

[ತ]ರುಣಿ ಬಾ ಸಂ[ಗವ್ವ] ತರಲು ಶಾಸ್ತ್ರದ ನೀರ
ತರಳ ಕಂ[ದನು] ಹತ್ತೆ ಮಣಿಯ।
ಗುರುಪೂಜೆಗಳ ಮಾಡಿ ಸುರಗಿ ಶಾಸ್ತ್ರವ ಬಿಟ್ಟು
ಎದುರಗೊಂಡು ನೀರು ಮಿಂದು ||೧೨೮||

ಧರೆಯ [ತಿ]ಥಿ ಲಗ್ನವು ಕೂಡಿ ಬರಲು ಎರಡು
ಮುಹೂರ್ತ ಮಂಡಪದಿ ನಿಲ್ಲಿಸಲು ।
ಮೇ[ಘ] ಮಾರ್ಗದಿ ಬಂದು ದೇವಗಣವೆಸೆಯಲು
ಶ್ರೀ ಗುರು ಹರಿ ಬ್ರಹ್ಮರೆಲ್ಲ ||೧೨೯||

ಗರುಡ ಗಂಧರ್ವ ಕಿನ್ನರರು ಕಿಂಪುರುಷರು
ವರ ನಂದಿ ಷಣ್ಮುಖ ಶರಭ ।
ಕರಿಮುಖನು ಪಾರ್ವತಿ [ಗಂಗಾ]ಂಬಿಕೆ ವಾಣಿ
ಜಯಲಕ್ಷ್ಮಿ ಶರಣ ತಿಂಥಿಣಿಯು ||೧೩೦||

ಗಿರಿಜೆ ಕೇಳಿದಳಾಗ ಗೀರ್ವಾಣಮೂರ್ತಿಯ
ರಾಮ ನರನೊ ಶರಣಗಣವೊ।
ಅವರೆಲ್ಲ ಬೆರೆದು ವಿವಾಹವ ಮಾಡಲು ಇವಗೆ
ನರಕವಿಲ್ಲದೆ ಪುರಕೆ ಬಹನೇ ||೧೩೧||

ಮುಕ್ತಾಂಗಿ ನೀ ಕೇಳು ಮುಂದಿವನು ಎಮ್ಮಯ
ಶಕ್ತಿಯೊ[ಳಿದ್ದಂ]ಥ ಪಿಂಡ।
ಪುಟ್ಟಿದನವನೊಂದು ಕಥೆಯ ಕಾರಣ[ಕಿಲ್ಲಿ]
ಶ್ರೇಷ್ಠಮುನೀಂದ್ರನ ಮ[ಗ]ನು ||೧೩೨||

ಇಂದುಮುಖಿಯೆ ಕೇಳೆ ಇವನ ಭೇದನಗಳ
ನಾರದ ಬಲ್ಲ ಪೂರ್ವ ನೆಲೆಯ।
ಮುಂದೆ ಪೇಳುವೆ ನಿನಗೆ ಮೂಲಸಂಗತಿ ಅಮೃತ
ಬಂದುದು ಧಾರೆಯ ಗಳಿಗೆ ||೧೩೩||

ಗಂಧರ್ವ ಯೋಗದಿ ಗಗನದೊಳ್ ನಡೆಯಲು
ಭುವನದಿ ಇವರು ತೆರೆವಿಡಿದು ।
ಬುಧರು ಮಂತ್ರವ ಪೇಳೆ ಜನರು ಸೇಸೆಯ ತಳೆದು
ತೆರೆ ತೆಗೆದು ಮುತ್ತ ಪೊಯಿಸಿ ॥೧೩೪॥

ಕ್ಷೀರಧಾರೆಯನೆರೆದು ಪಾದಕರಗಳ ತೊಳೆದು
ಮಾಲೆಗಳ ಧರಿಸಿ ಸತಿಪತಿಗೆ ।
ಬೇಗ ಶುಕ್ರನ ತೋರಿ ಸೆರಗ ಗಂಟನೆ ಹೂಡಿ
ಸಾಗಿಸಿ ಮಂದಿರಕವರ ॥೧೩೫॥

ಕರೆದೊಯ್ದು ರತ್ನದ ಹಸೆಯೊಳು ಕುಳ್ಳಿರಿಸಿ
ತಳಿದರು ಮುತ್ತಿನಕ್ಕಿಯನು ।
ಹಡೆದಮ್ಮ ಆರತಿ ಬೆಳಗೆ ಹರದೆ ಮುತ್ತೈದೆಯರು
ಡವಳ ರಾಗದಲಿ ಪೇಳಿದರು ॥೧೩೬॥

ಡವಳ ರಾಗ :

ಶ್ರೀ ಮಹಗೌರೀಶ ಶಂಭು ಜಟ್ಟಂಗಿಯ
ಕಾಮಸಂಹರನೆನಿಸಿದ ರಾಯ
ರಾಮಯ್ಯಗೆ ಕರುಣಿಸೊ ಶೋಬಾನೆ ॥೧೩೭॥

ಆದಿಯ ಹಂಪೆಯ ಸ್ಥಾನಕ್ಕೆ ಮೊದಲೀ
ಮೂರು ಲೋಕದ ದೇವನೊಲಿದು
ಹಾದಿ[ಯನು] ನಯನಕ್ಕೆ ತೋರಿ[ದೆ] ಕಾಟಯ್ಯಗೆ
ಶ್ರೀಗಿರಿಯ ಮಲ್ಲ ಕೃಪೆಯಾಗೊ ॥ಶೋ ॥೧೩೮॥

ಹರಹರ ನಿಮ್ಮಯ ವರದೊಳು ಜನಿಸಿದ
ಅರಸು ಬಲ್ಲಾಳನ ಮುರಿದವಗೆ ।
ಧರಣಿಯೊಳ್ ಹರಿಶ್ಚಂದ್ರ ಪರಸತಿಯ ನೋಡನು
ಉರಗಭೂಷಣನೆ ದಯವಾಗೊ ॥ಶೋ ॥೧೩೯॥

ಸುತ್ತಲ ರಾಯರಿಗೆ ಶತ್ರುವಾಗಿ ಬಾಳುವಗೆ
ಗುತ್ತಿದುರ್ಗದಿ ಹೊನ್ನ ತೆಗೆದವಗೆ ।

ಅರ್ತಿಲಿ ಪಡೆದರು ಐವರು ತಪಸಿಲಿ
ರಾಣಿ ವಿಜಯವಾದ ಪುರುಷನ ||ಶೋ ||೧೪೦||

ಸಾಂಗತ್ಯ :

ನಾಗವಾಲೆಯ ಶಾಸ್ತ್ರವ ಮಾಡಿ ತೊಟ್ಟಿಲ ತೂಗಿ
ರಾಯ ರಾಯರಿಗೆಲ್ಲ ಓಕುಳಿಯ।
ಪೇಳುವರು ಸತಿಯರು ರೂಢಿ ದೊರೆಗಳು ಎಲ್ಲ
ರಾಯ ಕಂಪಿಲ ಹರಿಯಮ್ಮಗೆ ||೧೪೧||

ಮದುವೆ ತೀರಲು ರಾಯ ಬಂಧು ದೊರೆಗಳಿಗೆಲ್ಲ
ಉಡುಗೊರೆ ಉಚಿತವ ಕೊಡಿಸಿ ಬೇಗ।
ಇರಿ ನೀವು ಸುಖದೊಳು ನಿಮ್ಮ ರಾಜ್ಯದಿ ಎಂದು
ದೊರೆ ರಾಮ ಬಂದವರ ಕಳುಹೆ ||೧೪೨||

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ತರಳ ರಾಮನ ಮದುವೆಯಾಗಿ ಬೊಲ್ಲಗೆ ನಡೆವ
ಪಯಣಕೊದಗಲು [ಏಳು] ಸಂಧಿ ||೧೪೩||*

❖❖

* + ಅಂತು ಸಂಧಿ [೭]ಕ್ಕಂ ಪದನು ೧೩೪೧ಕ್ಕಂ ಮಂಗಳ ಮಹಾಶ್ರೀ (ಮೂ).

ಸಂಧಿ : ಎಂಟು

❖

ಓರುಗಲ್ಲ ಯುದ್ಧಸನ್ನಾಹ

---

*ಶ್ರೀ ಗಿರಿಜೇ[ಶನೆ] ಭಾಗೀರಥೀಶನೆ
ಭೋಗಿಭೂಷಣ ಭಾಳನೇತ್ರ ।
ಆಗಮಕೊಡೆಯನೆ ಜಗವ ರಕ್ಷಿಸುವಂಥ
ನಾಗಭೂಷಣ [ವ್ಯೋಮ]ಕೇಶ ॥೧॥

ಮಾಧವನ ಮೊಮ್ಮಗನ ಧ್ರುವನ ಭಕ್ತಿಗೆ ಮೆಚ್ಚಿ
ಆರೆಯ ದ್ವಾರಪಾಲಕನು ।
ವೇದಕ್ಕೆ ನಿಲುಕದ ಏಕೋ ನಿರಂಜನ
ಬೋಧಿಸು ಮುಂದೆನಗೆ ಮತಿಯ ॥೨॥

ಹರನೊಳು ಕಾದಿದ ನರನ ಅಣ್ಣನ ಪಿತನ
ಪಡೆದ ಸೂರ್ಯನ ಸಖನ ವೈರಿಯ।
ಪೆಸರ ತನುಜನ[ನು]ಜನ ಕೊಂದವನೆ
ಹರನೆ ಕೊಡೆನಗೆ ಸನ್ಮತಿಯ ॥೩॥

ಕಾಶಿ ರಾಮೇಶ್ವರಕೆ ಈಸು ವೆಗ್ಗಳವಾದ
ಶ್ರೀ ಕೈಲಾಸವೆನಿಸುವ ಹಂಪೆ ।
ವಾಸದಿ ನೆಲಸಿರ್ಪ ಈಶನೆ ವಿರೂಪಾಕ್ಷ
ಗೋಚರಿಸು ಮುಂದಣ ಕೃತಿಯ ॥೪॥

---

* + ಶ್ರೀ ಗುರುಬೇಂನ್ನಮ್ಮ ಶ್ರೀ ವಿರೂಪಾಕ್ಷಲಿಂಗಾಯ ನಮಃ (ಮೂ)

[ಮಾ]ಡುವೆ ಹರಸ್ತುತಿಯ ಬೇಡುವೆ ಶಿವ [ನಿ]ಮ್ಮ
ನಾಡದೈವಗಳ ನಯನದಲಿ ।
ನೋಡೆನು ಎಂಬ[ಂಥ] ಪಾದ ಪೆಂಡೆಯನಿಟ್ಟು
ರಾಮನ ಕೃತಿಯ ನಡೆಸುವೆನು ||೫||

ಕಳವು ಹುಸಿ ಪರದ್ವಾರಕೆಳಸದೆ ಎಳ್ಳನಿತು
ಕಲಹಕ್ಕೆ ರಣವಿಜಯನಾದ।
ತರಳನ ಸತ್ಕೃತಿಯ ನಡೆಸುವೆ ಬಲ್ಲವರು
ಪದ ತಪ್ಪು ಇರಲು ತಿದ್ದುವುದು ||೬||

ಆಡಬೇ[ಡ]ಡ್ಡ ವಚನವ ಮೂಢರಾಗಿರಬೇಡಿ
ಪೇಳಿರೆ ಅರ್ಥ ತಿಳಿದವರು ।
ಕಾಣದ ಕುರುಡರನು ಕೊಂ[ಡು] ಪೋದಂತೆ
ಸ್ವಾದವಪ್ಪುವದೆ ಅಯ್ಯರಿಗೆ ||೭||

ಹಲವು ಲೇಖಗಳರಿದು ಮನವೊಲಿದು ಲಾಲಿಸಿ
ಸನುಮತದೊಳಗೆ ಕೇಳುವುದು ।
ಕನಸ ರಾತ್ರಿಲಿ ಕಂಡು ಬೆಳಗಾಗಿ ಮುಂದಿರ್ಪ
ಮನುಜರಿಗೆ ಅರ್ಥ ತಿಳಿಪುವುದು ||೮||

ಎತ್ತುವೆ ರಾಮನ ಕೃತಿಯ ಚರಿಸುವೆ ಮುಂದೆ
ಸತ್ಯಸಾಗರರು ಲಾಲಿಪುದು।
ಹುಚ್ಚರಟೆಯ ಬಿಟ್ಟು ಉತ್ತಮರು ಕೇಳುವುದು
ಸಕಲರಿಗೆ ರುಚಿಯಾಗಿ ಇಹುದು ||೯||

[ಹೊಳೆದಂತೆ] ಪೂರ್ವದಿ ಕಳೆಯ ತೋರಲು ಲೋಕ
ಬೆಳಗೆಂದು ಸಕಲ ಜೀವನಕೆ।
ಬಲುವಾಗಿ ಖಗಮೃಗವು ಜಲಜಾಕ್ಷ ಮುಖದಿರುವೆ
ಕಳೆಗೆಡ[ಲ]ರೆಯಂಗದವನು ||೧೦||

ದೈತ್ಯರ ಸಂಹರಿಸಿ [ಆದಿ]ತ್ಯನು ರಥವೇರಿ
ಹತ್ತಿ [ಅರುಣಾದ್ರಿ] ವೇಗದಲಿ ।

ಮರ್ತ್ಯದ ಜನಸ್ತೋಮ ಕೃತ್ಯನೇಮಗಳಾಗೆ
ಅರ್ತಿಯಲಿ ಕಂಪಿಲರಾಯ ||೧೧||

ಭುವನಾಥ ಕಂಪಿಲರಾಯ ಶೃಂಗರವಾಗಿ
ವಾಲಗ ಸದರ ಚಾವಡಿಗೆ।
ಭೋರೆಂದು ನಡೆಯಲು ಭೇರಿ ಕಾಳೆಯ ಸ್ವರದಿ
ಕಾಲಾಳು ತುರಗ ಘೋಷದಲಿ ||೧೨||

ಮಂತ್ರಿ ಮನ್ನೆಯರು ಭೂಕಾಂತನೆಡಬಲದೊಳು
ಅಂತರಂತರದಿ ಚಾಮರವು।
ಇಂತಪ್ಪ ಸಕಲ ಸರ್ವಭೋಗದಿ ಬಂದು
ಕುಳಿತನು ಸೂರ್ಯಪೀಠದಲಿ ||೧೩||

ಎಡದೊಳು ಬೈಚಪ್ಪ ಬಲದೊಳು ಕಾಟಣ್ಣ
ನಡುವೆ ರಾಜೇಂದ್ರಶೇಖರನು।
ಪಿಡಿವ ಸಂ[ಚಿ]ಯ ಕುಂಚ ಹಡಪಿಗರು ಹಾಸ್ಯವ
ನುಡಿವ ವಿಲಾಸಿಕರೊಡನೆ ||೧೪||

ಸುರಪನ ಸಭೆಗಿಂತ ಇಮ್ಮಡಿ ಐಶ್ವರ್ಯದೊಳು
ಇರುವಾಗ ಗ್ರಹಿಸಿ ಮನದೊಳಗೆ।
ತರಳೇಂದ್ರ ಕಾಟಯ್ಯ ಈವೊತ್ತು ಬೇಂಟೆಯ
ತರಹೋಗು ಬೇಕಾದ ಮೃಗವ ||೧೫||

ಬುದ್ಧಿಯೆನುತಲಿ ಕಾಟ ಎದ್ದು ಕರಗಳ ಮುಗಿದು
ಅಲ್ಲಿರ್ದ ಮನ್ನೆಯರ ಒಡಗೊಂಡು।
ಶೀಘ್ರದೊಳಗೆ ಬಂದು ರಾಯ ರಾಮನ ಬಳಿಗೆ
ಉದ್ದಕ್ಕೆ ಕರಮುಗಿದು ಪೇಳೆ ||೧೬||

ಬಾರಯ್ಯ ಬಿರಿದಾಂಕ ಮೂರು ರಾಯರ ಗಂಡ
ರಾಯ ಬೇಂಟೆಗೆ ಹೋಗಿ ಎಂದ।
ಮೂರೆರಡು ಸಾವಿರ ಬಲ[ದೊಡನೆ] ಬೇಂಟೆಯ
ಪೋಗಿ ಬರಲೆಂದು ಅರುಹಿದ[ನು] ||೧೭||

ಯಾತಕ್ಕೆ ಬರಲಣ್ಣ ಪ್ರೀತಿಯ ಮಗನಿಗೆ ಪೇಳ್ದ
ನಿನ್ನ ಭೀತಿಗೆ ಬರಲೇನೊ ಅಣ್ಣಾ।
ಬೇಕಾದ ಮಗನಾದರೆ ನನಗೆ ಹೇಳುವ ರಾಯ
ಸಾಕಣ್ಣ ನೀ ಪೋಗಿ ಬಾರೊ ॥೧೮॥

ಬೇಸರವೇಕಪ್ಪ ರಣಭೂಪ ಚೆನ್ನಿಗರಾಮ
ಬೇಕಾಗಿ ಎನ್ನ ಕರೆಸಿದನು ।
ಆತನ ಸಮ್ಮುಖದಿ ನಿಂದಲ್ಲಿ ಹೇಳಿದ
ಮಾತಿಲಿ ಬಾಣವನು ಎಳೆದೆ ॥೧೯॥

ಬಾಣ ಬತ್ತಿಗಳ[ಲ್ಲ] ಹೋಗಣ್ಣ ನೀನಿಂದು
ನೋಡುವೆ ನಾಳೆ ಮನ ಬರಲು ।
ಕೇಳಯ್ಯ ಕಾಟಣ್ಣ ವಿರೋಧ ನಿನ್ನೊಳಗಿಲ್ಲ
ರಾಯ ಕಂಪಿಲ ಎಂದ ಮಾತ ॥೨೦॥

ಬಂದರೆ ಬರುವೆನು ತಂದೆಯೊಳ್ ಕಲಹವೆ
ಕೇಳಿಂಬವಾಗದೆ ಚಿತ್ತದೊಳಗೆ ।
ಮುಂದೆನ್ನ ಲಾವಣ್ಯ ಕರೆದು ಪೇ[ಳೆ] ಬರುವೆ
ಪರರ ಮಾತಿಗೆ ಬ[ರೆ]ನರಿಯಾ ॥೨೧॥

ಅಶ್ವಳೆಯ ಅದರರು ಮತ್ತೆ ಪೋಗಲು ಲೇಸು
ಮೆಚ್ಚುವುದು ತಂದ್ಯಾರೆ ಕರೆಸಿರಲು ।
ಇಚ್ಛೆಲಿ ನಾ ಬಂದು ಸಿಕ್ಕದಿರಲು ಮೃಗವು
ಮುಖ ಮುರಿದಂತೆ ರಾಯಗೆ ಮನ ಕರಗುವುದು ॥೨೨॥

ಬರುವೆನು ನಡೆಯಣ್ಣ ಹೊರಕೆ..........
.... ಬೇಂಟೆಗಳು ಸುಖವೆ।
ಹಿರಿಯ ತಾನೀ ಪೇಳಿ.......... ವನನು
ಸೇರಿದಲಗು ಕಾಣುವುದಿಲ್ಲ ॥೨೩॥

ಆಡಿ ತೋರಿದ ರಾಮ ತನ್ನೊಳಗಿರ್ದ ಬೇಸರ
ಎರಡು ಚೋಟ್ಯಾಗಿ ಇರುಯೆಂದು ಕಾಟ।

ಜೋಡಿಸಿ ಕರ ಮುಗಿದು ಶೃಂಗಾರವಾಗಿ ನಡೆಯಲು
ಮೂರಾರು ಸಾವಿರ ಬಲದಿ ||೨೪||

ಮೂರು ಸಾವಿರ ತುರಗ ಆರು ಸಾವಿರ ಮಂದಿ
ಠಾವ ತೋರುವ ಅಡವಿಗಳ|
[ಬೇಹಿ]ನವರು ಹೆಜ್ಜೆ ಸುಳುಹದೆಗೆದು ಕೊಲ್ವ
ಭೂಮಿ ಮುಸುಕರು ಮೃಗವಿರುವ ||೨೫||

ಕೊಂಬು ಕೊಳಲು ಹಲಗೆ ಮುಂದೆ ಬಿರುದಿನ ಕಹಳೆ
ಕುಂಭಿನಿ ಭೋರಿಡುವಂತೆ|
ಕೆಂಧೂಳಿ ಮುಸುಕಲು ಒಂದೆ ಗಮನದಿ ಬಂದು
ಕಾಳಂದರವದಂತೆ ಮಲೆಯ ||೨೬||

ಸರವರದೊಳು ಪೊಕ್ಕು ಹೊಳಕೆ ಬಂಟರು ಬೇಗ
ಬಿಡಿಸಿಕೊಂಡರು ತಮತಮಗೆ |
ಎಸೆದು ಕೊಲ್ವರು ಎದ್ದ ಹುಲಿ ಕರಡಿ ಹುಲ್ಲೆಯ
ಮಸಗು ತೋಡುವ ವರಾಹನ ||೨೭||

ಮೊರೆವ ವ್ಯಾಘ್ರನು ಕರಡಿ ಕಾಡೆಮ್ಮೆ ನರಿ ಬೆಕ್ಕು
ಕುರಂಗಿ ಸಾರಂಗಗಳ|
ಶರ[ರವ]ದೊಳು ಸುತ್ತಿ ಮುತ್ತಿ ಆರ್ಭಟಿಸಲು
ಮೃಗರಾಶಿಯೆಲ್ಲ ಕಂಗೆಡುತ ||೨೮||

ಕೊಂದರು ಕೊನೆ ಮೂಗವೆಲ್ಲ ಮೃಗವನು
ಚಂದ ಚಂದದ ಪಕ್ಷಿಗಳನು |
ಮಂದಿಯ ಬೆದರಿಸಿ ಕಾಡಾನೆ ಓಡಲು ಕಂಡು
ಇರುಬಿನ ಮೇಲಿದ ಕೆಡಹಿ ||೨೯||

ಕಪ್ಪಿನೊಳಗೆ ಸಿಕ್ಕಿ ಬೀಳದೆ ಓಡುವ
ತಪ್ಪಿದನೆಲ್ಲವ ಪಿಡಿದು|
ಪೃಥ್ವಿಪಾಲಕ ಕಾಟ ಪುರಕೆ ತಿರುಗಿದ ಮೃಗವ
ಲೆಕ್ಕವಿಲ್ಲದೆ ಹೊಂದಿಸಿಕೊಂಡು ||೩೦||

ಮೃಗವನು ಸಂಹರಿಸಿ.......................ರಿ
ಕಿರಣದ ಕಳೆಕಾಂತಿ ಮನದಿ ।
.... ಬಂದು ಕುಮ್ಮಟವನು ಹೊಕ್ಕು
ಪಡೆದ ರಾಜೇಂದ್ರಗೆ ಎರಗೆ ||೩೧||

ಕಂಡನು ರಾಜೇಂದ್ರ ಕೊಲ್ಲಬಹುದು ಮೃಗವ
ಬಲ್ಲಿದ ಮದಗಜವ ಪಿಡಿಯೆ।
ಅಲ್ಲಿ ಭೀಮಗೆ ಇವ ಹೆಚ್ಚು ಕಾಣಲಿಬಹುದು
ಗಲ್ಲವ ಪಿಡಿದು ಮುದ್ದಿಸಿದ ||೩೨||

ಬಲವಂತಗಲ್ಲದೆ ಸಲುವುದೆ ಈ ಬೇಂಟೆ
ತಲೆದೂಗಿ ಬೆರಳ ನಾಸಿಕದಿ ।
ಕುಲಶಾಬ್ದಿ ನವುದೀಶ ಕುಂಜರಕೆ ಭೇರುಂಡ
ನಲಿದಾಡಿ ನಗುತ ಮೈಯುಬ್ಬಿ ||೩೩||

ರಾಯ ರಾಮನು ಉಳಿದು ಹೋಗದೆ ಮನೆಯೊಳು
ಏನ ಪಡೆದನೊ ಲಕ್ಷ್ಮಂತ್ರ।
ಭೀಮನಂದದಿ ಹೋಗಿ ಆನೆ ಸಹಿತ ತಂದ
ಧೀರ ಕಾಟನ ನೋಡೊ ರಾಮ ||೩೪||

ತಾತ ಕೇಳೋ ಮುನ್ನ ತರಳನ ಬಿನ್ನಪವ
ಈ ಮಾತ ನೀವಾಡೆ ಸೈರಿಸಿದೆ।
ಈಶ್ವರ ಹರಿ ಬ್ರಹ್ಮ ಅವರಲ್ಲದೆ ಮಿಕ್ಕ ಭೂನಾಥ
ರಾಡಲು ಎತ್ತಿ ಬಡಿವೆ ||೩೫||

ಸಾಕಯ್ಯ ನಿಮ್ಮಾತು ಬೇಂಟೆ ಅರ್ತಿಯು ಸುಡಲಿ
ಘನ ಘಾತ್ರ ಮಾಡದೆ ಸಭೆಯೊಳಗೆ ।
ಪಾಪಿ ಮೃಗವ ಕೊಂದು ತಿನಹಾಕೆ ಆತನ [ಜಯಕೆ]
ಹೆಂಬೇಡಿ ಮಾಡಬಹುದೆ ಎನ್ನ ||೩೬||

ಅಡವಿಯ ಮೃಗಕೆಲ್ಲ ಮಡಲ ಕಟ್ಟಿದ ಕರ್ಮ
ಬಿಡಲರಿದು ಜನ್ಮ ಏಳರಲಿ ।

ಒಡನೆ ಬೇಂಟೆಯ ಹೋಗಿ ಹರಿಚಂದ್ರರಾಯ ಕೆಟ್ಟ
ಸುಡುಗಾಡ ಕಾಯ್ದು ಹೊಲೆಯಗಾಳಾದ ||೩೭||

ಹಿಂದೊಬ್ಬ ಬೇಂಟೆಯಾಡಿ ಉಂಡನು ಕಮಲಾಕ್ಷ
ಕಾಳಿಂಗರಾಯನ ಕುಮಾರ।
ಒಂದು ಹರಿಣನ ಕೊಲ್ಲೆ ಮುನಿಯ ಶಾಪಕೆ ಬಂದು
ಹೊಂದನೆ ಸಿಂಹದಾತ್ಮದಲಿ ||೩೮||

ಜಾಣನಾಗಿ ಅವನು ಮರಳಿ ಕೇಳಲು ಶಾಪ
ಯಾವಾಗ ಪರಿಹಾರವೆನಲು।
ಸೋಮಶೇಖರನೆಂಬ ತರಳನ ಕೈಯಿಂದ
ಲಯ ಹೋಗೆನಲು ತನ್ನ ಪುರಕೆ ||೩೯||

ಧರ್ಮವಲ್ಲವು ಬೇಂಟೆ ದಶರಥನು ತೊಟ್ಟನೆ
ಕಾಯ್ದು ಎಸೆಯಲಳಿಯೆ ಗುರುಭಕ್ತ।
ಹುಸಿಯಲಿಲ್ಲವೊ ಬೇಡು ಮಾಡು ಬಾಲಯ್ಯನ ಶಾಪ
ಗಿ[ಡು]ವನು ಚರಿಸೆ ಶ್ರೀರಾಮ ||೪೦||

ತಪ್ಪದು ಮೃಗಶಾಪ ಕೊಟ್ಟರೆ ರಾಜೇಂದ್ರ
ಕೆಟ್ಟ ಕೇಡರಿಯಾ ಪಾಂಡುವಿನ ।
ಜತ್ತುಗೂಡಿರೆ ಹರಿಣ ರತಿಕ್ರೀಡೆ ಕೆಡಿಸಲು
ಶಾಪವಿತ್ತರೆ ವನವಾಸ ತಿರುಗಿ ||೪೧||

ಅರಣ್ಯದೊಳು ನಿಂ[ತ] ರಾಣಿ ಕುಂತಿಯ ದುಃಖ
ಕೇಳಿ ವೇದವ್ಯಾಸ ಬಂದು ।
ಆರು ಮಂತ್ರಗಳರುಹಿ ಪೋಗಲು ಪಾಂಡವ
ಕುಮಾರರ ಪಿತರಾರು ಮಂದಿ ||೪೨||

ದೂರಲಾ ಮಾತೇಕೆ ರಾಯ ಕೇಳೈ ನಿಮ್ಮ
ರಾಯ ಮುಮ್ಮಡಿಯ ಪಡಿಪಾಟ।
ಹೋಗಿ ಬೇಂಟೆಗೆ ಒಂದು ಪಕ್ಷಿ ಮರಿಯನು ತುಳಿಯೆ
ಹೋಗವೆ ನಯನ ಮುನಿಯಿಂದ ||೪೩||

ಬಲವಿರಲು ಬಂದಂಥ ವೈರಿಯ ಗೆಲಬೇಕು
ಪ್ರಾಣಿಗಳ ಕೊಂದೇನು ಫಲವು ।
ಕಡಿಯಲಾರದ ಹೇಡಿ ಕಳ್ಳಗೆ ಬೇಂಟೆ
ಬಿಡು ರಾಯ ನಿಮ್ಮಯ ಮಾತ ||೪೪||

ಕಂಡನು ಕಂಪಿಲನು ರಾಜೇಂದ್ರ ರಾಮನ ಮಾತ
ಸಂಜೀವ ಬೇಕೆನಲು ರಾಘವೇಂದ್ರ।
ಬಂದಾಗ ಹನುಮಂತ ಮಂದರಗಿರಿ ಒಯ್ದು
ತಂದಿಟ್ಟ ರಾಮರ ಬಳಿಗೆ ||೪೫||

ಕಮ್ಮಾರ ಕೇರಿಯಲಿ ಕದಿರು ಮಾರಿಪ ಗಾದೆ
ನಮ್ಮ ಉತ್ರಗಳ ನಿಲ್ಲಿಸಿದ।
ಬ್ರಹ್ಮಾಂಡ ಮಗಚುವ ಬಲ್ಮೆಯಾಡುವ ರಾಮ
ಓರುಗ[ಲ್ಲಿನ] ಬೊಲ್ಲನ ತಾರೋ ||೪೬||

ಕರಿಸಿಂಹ ಶಾರ್ದೂಲ ಒಟ್ಟಿಡಿದು ತಂದವ ನಾನು
ನರಿಗಿಂತ ಕಡೆಮಾಡಿ ಆಡಿ।
ಕಡು ಸಾಮರ್ಥಿಕೆ ನುಡಿವೆ ರುದ್ರನ ಬಳಿಯ
ಬೊಲ್ಲನ ನೀ ತರುವುದುಂಟೆ ||೪೭||

ತೃಣವ ನುಡಿಯಲು ನಾವು ಭುವನವನು ತಂದಿಟ್ಟೆ
ಗಣಪತಿಯ ಮಗನಂತೆ ನೀನು ।
ಗಗನದಿ ಚರಿಸುವ ತುರಗವ ತರುವೆನು
ಅರುಹುವೆ ಧರ್ಮ ನೀತಿಗಳ ||೪೮||

ಎಳೆಯಲಾರದ ಎತ್ತು ಎಡೆಗೋಲ [ಜ]ರೆವಂತೆ
ಕಳೆವೋರೆ ಕಂದ ಧೀರರನು ।
ಬಿಡು ರಾಯ ಅಪ್ಪಣೆಯ ನುಡಿದ ಬಾಣಕೆ ಪ್ರತಿಯ
ಹೊಡೆದಂತೆ ಆಯಿತು ಎದೆಗೆ ||೪೯||

ಉತ್ತಮದ ತೇಜಿಗಳು ಪೆಟ್ಟ ಕೊಂಬುವೆ ರಾಯ
ಕಟ್ಟಿನ್ನು ಕೊಳಲೇಕೆ ಇದಕೆ ।

ಎಪ್ಪತ್ತು ರಾಯನ ತೇಜಿಯ ತರದಿರಲು
ಇಟ್ಟ ಬಿರುದಿಗೆ ಹೀನ ಬಂತು ||೫೦||

ರೂಢಿಸಲು ಅತಿಕೋಪ ರುದ್ರನ [ತೆ]ರದೊಳು
ರೋಮವಾಗಲು ಸರಳಿನಂತೆ।
ಪ್ರೇಮದಿ ಕೇಳರಸೆ ತೇಜಿಯ ತರದಿರಲು
ಸ್ತ್ರೀಯರಿಗೆ ಸರಿಯೆಂದು ಕಾಣಾ ||೫೧||

ತಂದೆ ನೀನಾಡಲು ಈ ನುಡಿ ಕುಂದೆ ದೇ
ವೇಂದ್ರನಾಡಲು ಎತ್ತಿ ಹಣಿವೆ ।
ಇಂದಿಗೆ ತಿಂಗಳಿಗೆ ತಂದರೆ ಮಗನೆನ್ನು
ಹಿಂದಾಗೆ ಮನೆಯಾಳ್ವಿಂಗೂಸು ||೫೨||

ರಾಮನು ಅತಿಕೋಪ ತೋರಲು ಎಲ್ಲರಿಗೆ
ಕೋಡಗ ಕಪಿಚೇಷ್ಟೆ ಮುದಿಯ।
ಮಾಡಿದ ಛಲವಾನೆಗೆ ಇರುವೆ[ಯು] ಕರೆ[ದು]
ಓಡಿ ಬಾರನೆ ಹಿಂದೆ ತಾ ಮುತ್ತಿ ||೫೩||

ಬೇಡವೆನ್ನುತ ಮಂತ್ರಿ ಭೇರುಂಡನ ಮನೆಗೆ
ಹೋಗಿ ಸಾಷ್ಟಾಂಗವ ಎರಗಿ ।
ಜಾಣತನವೆ ಮಂತ್ರಿ ಜೀವದೊಳಗೆ ಕುಸ್ತಿ
ನಾನ್ಯಾತಕಾಡಲಿ ಪಿತರೊಡನೆ ||೫೪||

ತಪ್ಪಲ್ಲೊ ಎಲೆ ಮಂತ್ರಿ ಅಪ್ಪಾಜಿಯೆಂದುದು ಉತ್ರ
ಸಿಟ್ಟಿಲ್ಲ ಎನ್ನ ಮನದೊಳಗೆ ।
ಕಟ್ಟಳೆ ಇದ್ದಷ್ಟು ಮೃತ್ಯುಂಜಯಗೆ ಬಿಡದು
ಸಿಟ್ಟು ಪುಟ್ಟಿಸದೆ ಬಿಡು ಮಂತ್ರಿ ||೫೫||

ಕೇಳಿರೈ ಬಲವಂತ ಜಾಣಕೋವಿದರೊಮ್ಮೆ
ಕಾಲಗತಿಗಳು [ತ]ರುವ ಕೇಡ।
ಯಾವ ದೇಶದ ತೇಜಿ ಯಾವಲ್ಲಿ ಕುಮ್ಮಟ
ಯಾರು ಮಾಡಿದರು ವಿಧಿಬರೆಹ ||೫೬||

ಮದವೆದ್ದ ಗಜದಂತೆ ದಿಗಿಲನೆ[ದ್ದನು] ರಾಮ
ಪಡೆದ ಪಿತನಿಗೆ ಕರ ಮುಗಿದು ।
ಸದರನಿಳಿದು ಬೇಗ ದೊರೆ ಕಾಟ ತಾನೆದ್ದು
ನಡೆಯಲು ರಾಮ[ಯ್ಯನೊ]ಡನೆ ॥೫೭॥

ರಾಯ ರಾಮನ ಮಂತ್ರಿ ನೀಲಕಂಠನು ನಡೆಯೆ
ಬಾಹೂರ ಬಾಣೆಯ ಮುದ್ದ।
ವೀರಸಂಗಯ್ಯನು ಧೀರ ಜಂಗಮ ಬಸವ
ರಾವುತರು ರಾಣುವೆ ಎದ್ದು ॥೫೮॥

ಬಂದನು ಬಲದೊಡನೆ ಪ್ರಚಂಡ ಚೆನ್ನಿಗ ರಾಮ
ಚಂದ್ರಗೆರಗುವ ರವಿಯಂತೆ ।
ಇಂದು ವದನೆ ಹರಿಯಮ್ಮನ ಚರಣಕ್ಕೆ
ಬಂದು ಎರಗಿದ ಬೆಂಕಿ ರವದಿ ॥೫೯॥

ಶರಣೆಂದ ಪುತ್ರನ ಹರಸಿದಳ್ ಜನನಿಯು
ಶಿರವಿಡಿದು ತಕ್ಕೈಸಿ ಮುಂಡಾಡಿ।
ಉರಗನು ಪರೆಗವಿದ ತೆರದಿ ಕಾ[ಣುತ] ಮನಸು
ತರಳನೆ ಮತ್ತೇನು ದುಗುಡ ॥೬೦॥

ಕಮಲಲೋಚನೆ ಕೇಳು ತಳೆಯಿಕ್ಕಿ ಕಾಟಣ್ಣ
ಮೃಗವ ತಂದನು ಬೇಟೆಯಾಡಿ।
ತಣಿದ ರಾಯನು ಭ್ರಾಂತು ಪರಿಹರಿವಂತೆ
ಜರೆದ[ನು] ಎನ್ನ ಸಭೆಯೊಳಗೆ ॥೬೧॥

ತಾಯೆ ಕೇಳ್ ಪಿತನೆನ್ನ ಹೇಡಿ ಹೋಗೆನುತಲಿ
ಕೂಡಿದ ಸಭೆಯೊಳು ನುಡಿದ।
ಓರುಗಲ್ಲಿ[ನ] ಎಪ್ಪತುರಾಯನ ತೇಜಿ ತರದೆ
ನೀರ ಕೊಳ್ಳೆನು ನಿಮ್ಮ ಕರದಿ ॥೬೨॥

ತಾಯೆ ನಿಮ್ಮ ಹೃದಯದೊಳ್ಧೀರತನದಲಿ ಜನಿಸಿ
ಹೇಡಿಯಾಗಲು ಹೀನ ನಿಮಗೆ ।

ಮೂರು ರಾಯರ ಗಂಡನೆಂಬ ಬಿರುದುಗಳೇಕೆ
ಪಾಲಿಸಬಹುದಮ್ಮ ಅಭಯ ||೬೩||

ಅಪ್ಪಣೆಯ ಕೊಡು ತಾಯೆ ಸತ್ಯಸಾಗರನಿಧಿಯೆ
ಮತ್ತೊಂದ ತಡ ಮಾಡಬೇಡ।
ತೊ[ಡರ]ನ್ನು ನಾ ಬೇರೆ ಸತ್ತರೆ ಬಿಡಲರಿಯೆ
ಲೋಕಾರ್ಥಕೆ ನಿಮ್ಮ ಕೇಳುವೆನು ||೬೪||

ಕಡೆಯ ವಚನವ ಕೇಳು ನುಡಿಯದೆ ತಾ ಒಡಲ
ಬಿಡುವೆನಲ್ಲವೊ [ಬಿಡೆನು] ಛಲವ ।
ಹಡೆದಾಕೆಯಲ್ಲವೆ ಒಡಲುರಿಗೆ ಒಂದನ್ನೆ
ನಡೆವ ಕಾರ್ಯವು ಜಯ ಬರದು ||೬೫||

ಕಂದನಾಡಿದ ನುಡಿಗೆ ನೊಂದುಕೊಳ್ಳುತ ಜನನಿ
ಡಿಂಬದೊಳಗೆ ಕುದಿದುಕೊಂಡು।
ಹಿಂದೆ ಹೇಳಿದ ಮಕ್ಕಳಾದರೆ ದುಃಖ
ಎಂದ ಮಾತಿಗೆ ಸರಿಯಾಯಿತ್ತು ||೬೬||

ಕದನವೇತಕೊ ಹಣ್ಣು ಮುದಿಜೀವದ ಕೂಡೆ
ಪಡೆದ ಪಾಡನೆ ಶಿವ ಬಲ್ಲ।
ಸುಡುಗಾಡ ಸನ್ನಿಧಿಗೆ ಹೊರಹೊರಟು ಹೋಗುವ
ಕೆಡುವ ಪ್ರಾಣಿಯ ಕೂಡೆ ಛಲವೆ ||೬೭||

ಸತ್ಯವೆ ನಿನಗಿದು ಹೆತ್ತವರ ನಯನದಿ
ಉಕ್ಕಿಸಿ ಜಲವ ಹೋಗುವುದು ।
ಪುತ್ರರಾಗಲಿಯೆಂದು ನೇತ್ರ ಮೂರುಳ್ಳನ
ಸ್ತೋತ್ರವ ಮಾಡಿದ ಫಲಪ್ರಾಪ್ತಿ ||೬೮||

ಹಲವು ದೈವಕೆ ನಾವು ಹರಸಿ ಪಡೆಯಲು ರಾಮ
ಅಲಗಾಗಬಹುದೆ ರಾಯನಿಗೆ ।
ಅಳಿದ ಯುಗದೊಳಗುಂಟೆ ನಡೆವ ಸ್ಥಿತಿಯೊಳು ಇನ್ನು
ಪೊಡವಿಯೊಳುಂಟೆ ಈ ಕರ್ಮ ||೬೯||

ಮಾತೆ ಪಿತರಿರುವುದು ಪುಣ್ಯಾತ್ಮ ಜೀವವೊ ರಾಮ
ಏಕೋದರನು ಪರಂಜ್ಯೋತಿ।
ಲೋಕಬಲ್ಲುದು ಕೇಳೊ ಸಿಂಧು ಬಲ್ಲಾಳನಿಗೆ
ಪ್ರತಿಯಾಗಿ ಮಗನಾದುದರಿಯಾ ॥೭೦॥

ಅಮ್ಮಾಜಿ ಅಪರಂಜಿ ಚಿನ್ನವೆ ಲಾಲಿಸು
ಬಿನ್ನಪವ ನಿಮ್ಮ ಸೇವಕನ ।
ಎನ್ನೊಳಗೆ ತಪ್ಪಿರಲು ಏಕಾಂತ ಸ್ಥಾನದಿ ಬಾಯ
ಒಮ್ಮೆ ಬಡಿಯಲು ಸುಮ್ಮನಿರುವೆ ॥೭೧॥

ಸಭೆಯೊಳಗೆ ಹಿಂದೊಬ್ಬ ಮಗನ [ಹ]ಳಿಯಲು ಪಾರ್ಥ
ಕದನವಾದುದ ಕೇಳಿ ಅರಿಯಾ।
ಬಿಡುಬಾಯಿ ಈ ನೀತಿ ನುಡಿಯ ಕೇಳವು ಕರ್ಣ
ಕೊಡು ತಾಯಿ ಹೊರಪಯಣವಿಂದು ॥೭೨॥

ಮಂತ್ರಿಗಳು ಮನ್ನೆಯರು ಬಲವಂತ ಧೀರರು
ಭೂಕಾಂತ ರಾಮನಿಗೆ ಬಿನ್ನವಿಸೆ ।
ಕಾಂತ ಮುಪ್ಪಿನ ಕಾಲ ಕದನ ಸೈರಿಸಬಹುದೆ ಬಲ
ವಂತವೆಂಬರು ಓದುಗಲ್ಲ ॥೭೩॥

ಲಾಲಿಸಿ ಮನ್ನೆಯರು ಆಳು ತುರಗವು ಸಹ
ಸಾವಿಗಂಜದ ಮಂದಿ ಬನ್ನಿ ।
ಜೀವದಾಸೆಗಳಿದ್ದ ಬಂಟರಿಲ್ಲಿರಿಯಿಂದು
ನಾ ಹೋಗಿ ತರುವೆ ತೇಜಿಯನು ॥೭೪॥

ಕ್ಲೇಶದ ನುಡಿಯೆಂದು ಕದನ ಶೂರರು ಬೇಗ
ಭೂಷಣಂಗಳನಳವಡಿಸಿ ।
ಸೂಸಲು ರಣಭೇರಿ ಶೃಂಗರವಾಗಿ ಕರಿತುರಗ
ಹಾಕಲು ಜಾಂಡೇವ ಹೊರಗೆ ॥೭೫॥

ಭೇರಿಯ ಧ್ವನಿಯನು ಕೇಳಿ ಹರಿಯಮ್ಮನು
ಹೋಗದೆ ಅವ ಬೇರೆ ಬಿಡನು ।

ಕ್ಷೀರವು ಉಕ್ಕಿದ ನಾರಿಯಂದದಿ ಕುದಿದು
ಭಯಂಕರ ತೋರಿ ಪೇಳಿದಳು ||೭೬||

ಓರುಗಲ್ಲೆಂಬೋದು ಊರೇನೋ ಎಲೆ ರಾಮ
ಬೇರೊಂದು ಲೆಂಕೆಗೆ ಪ್ರತಿಯು ।
ಯಾರು ಮುತ್ತಲು ಮರಳಿ ಊರ ಸೇರಲು [ಇಲ್ಲಿ]
ಸೂರ್ಯನ ಮಗನೂರೆ ಗತಿಯು ||೭೭||

ಗಂಡಸು ನಿಮ್ಮಯ್ಯ ದಂಡನೆ ಕೊರೆಹಾಕಿ
ಕಂಡಿಯ ಮುರಿದೋಡಿ ಬರನೆ ।
ಮಂಡೆ ಮಸ್ತಕವಿಟ್ಟು ಮಲಗನು ಮೂಲೆಗೆ
ದಂಡುಂಟು ಕೋಟೆ ಬ[ರ]ವಗೆ ||೭೮||

ಹೆಸರನು ತಿಳಿ[ಯ] ಬಲ್ಲ[ಡೆ] ದೆಸೆಕಲ್ಲೆಂಬ
ಅಸಮಾಕ್ಷನಿಟ್ಟಂಥ ನಾಮ ।
ಉಸುರುವರಳವಲ್ಲ ಊರಿನಚ್ಚರಿಯನು
ಹಸಿಯ ಸೀಸದ ಕೋಟೆ ಕೊತ್ತಳವು ||೭೯||

ನಗರವೆಂದರೆ ಮಗನೆ ಎದೆಶೂಲ ವೈರಿಗಳ
ಮೊಗಲ ಪಾಚ್ಛಾಡಿಳ್ಳಿಯಲಿ ।
ತೆಗೆಯಲಮ್ಮರು ಕೋಟೆ ಕದ[ವನು] ದಿಕ್ಕಿನಲಿ
ಬೆದರಿ ಬೀಳ್ವರು ದಿನಕೆಂಟು ಬಾರಿ ||೮೦||

ಅಂಥವನಾಗಲು ನಿಂತಿರುವುದು ತೇಜಿ
ಭ್ರಾಂತೇನೊ ನೀ ತಿಳಿದು ನೋಡು।
ಪಂಥ ಪಾಡಿನ ಮೇಲೆ ನೀ[ನೆತ್ತಿ] ಹಿಂದಕೆ
ಪೋಗಿ ಕಾಲಾಂತ್ರ ಹೋಗಲಳವೆ ||೮೧||

ಸುಡು ತಾಯಿ ನಿಮ್ಮಾತ ನುಡಿ ಕಿವಿಗೆ ಬೀಳಲು
ಹೊಡೆಯಬೇಕಾತನ ಮೇಲೆ ।
ಕೊಡಲಿ ಒಳ್ಳೆದರಲ್ಲಿ ಗಿಡವ ಕಡಿದರೆ ತಾಯಿ
ಒಡೆಯದೆ ಕೆಚ್ಚಾದ ಮರನ ||೮೨||

ಮಲೆತವ ಮರ್ದಿಸಲು ಬಡವನು ಜರ್ಝರಿಸಿ
ಕಡೆಯ ಬಾಗಿಲ ಕಾಯ್ದು ಇರುವ ।
ಹಡೆದರೆ ಹಣೆಯೊಳು ಬರೆದಾಕೆ ನೀನಹುದೆ
ತಾ ಪಡೆದಿರುವ ಫಲಪ್ರಾಪ್ತಿ ಬಲ್ಲಾ ||೮೩||

ಹಡೆಯಲ್ಕೆ ನೀ ಕರ್ತು ಪಡೆಯಲ್ಕೆ ನೀ ಕರ್ತು
ಸೂತ್ರವಿಡಿದು ಆಡಿಸುವನು ಬೇರಿಹನು ।
ಕರಿಯ [ಘಟೆಯನು] ಒಯ್ವ ಭೇರುಂಡನೆದೆಯೊಳು
ನಾರಿಯ ಸಾಹಸವೇಕೆ ಪೇಳಿ ||೮೪||

ಕಡೆಯ ಬಿನ್ನಹ ಕೇಳು ಪಡೆದಂಥ ಜನನಿಯೆ
ಕೊಡಲೇಸು ಪ್ರೀತಿಲಿ ಅಪ್ಪಣೆಯ।
ಬರುತಿದೆ ಕಾಲಾಗ್ನಿರುದ್ರ ಕೋಪವು ಬರಲು
ನಡೆವೆನು ನಿಮ್ಮಾಜ್ಞೆ ಮೀರಿ ||೮೫||

ಮಗನ ಮಾತಿಗೆ ಜನನಿ ಹದಮೀರಿತೀ ಕಾರ್ಯ
ಮಿಗೆ ವ್ರತದ ಪುತ್ರನ ನೋಡಿ।
ತೆಗೆದಪ್ಪಿ ಮುಂಡಾಡಿ ಹರಸಿ ಸೇಸೆಯನಿಟ್ಟು
ಪವಳದಾರತಿಗಳ ಬೆಳಗಿ ||೮೬||

ತಾಯ ಹರಕೆಯ ಕೊಂಡು ರಾಯ ರಾಮನು ಕಾಟ
ಓಲಗ ಸಾಲೆಗೆ ಕುಳಿತು ।
ರಾಯ ಕಂಪಿಲ ಒಳ್ಳೆ ಸಂಬಂಧಿಕರ ಕರೆಸಿ
ನಿಯೋಗಿ ಪ್ರೌಢರನು ಸಾಗಿಸಿದ ||೮೭||

ಹತ್ತು ಸಾವಿರ ಕುದುರೆ ಮೂವತ್ತು ಸಾವಿರ ಮಂದಿ
ಸೊಕ್ಕಿದ ಕರಿಗಳೇಳೆಂಟು।
ದಿಕ್ಕು ದೇಶವ ಬಲ್ಲ ಆಪ್ತ ಜನರನು ಕೊಟ್ಟು
ಎಚ್ಚರವೆನೆ ಗಲ್ಲವ ಪಿಡಿದು ||೮೮||

ತರಳರಿರ್ವರು ತಮ್ಮ ಪಡೆದ ಪಿತನಿಗೆ ಎರಗೆ
ಶಿರವಿಡಿದು ತರ್ಕೈಸಿಕೊಂಡು।

ಮೊದಲಾಗಿ ನಾ ಮುತ್ತಿ ನಗೆಗೇಡಿಗೊಳಗಾದೆ
ಹದನರಿತು ನೋಡಿ ಹವಣೆಯ ||೮೯||

ಆದರೊಳ್ಳಿತು ರಾಯ ಅ[ಳಿ]ವು [ಬೆಳೆಯ]ನೆ ತಿಳಿದು
ಮುನಿಸಾಗಿ ಬಂದೆನೆಂದು ಪೋಗುವೆನು ।
ಮೇಲವನ ಶಕ್ತಿ ಸಾರವನೆಲ್ಲ ತಿಳಿದು ವಶವಾಗ
ದಿರಲು ಶಕ್ತಿಯಲಿ ಬರುವೆವು ||೯೦||

ರಾಜೇಂದ್ರ ಕಂಪಿಲಗೆ ಸಮಾಧಾನ ಶಾಂತಿಯ
ಪೇಳಿ ತೇಜಿಗಳನೇರಿ ।
ಇರ್ವರು ಸಾರುವ ರಣಗಾಳೆ ಸಂಭ್ರಮದೊಳು
ಸಾಗಲು ಜಟ್ಟಂಗೀಶನ ಗುಡಿಗೆ ||೯೧||

ಮುಂಗಾರ ಸಿಡಿಲಂತೆ ಬಂದು ಪಾದಕೆ ಎರಗಿ
ಕೊಂಡಾಡಿ ಶಿವಮಹಿಮೆ ಸ್ತುತಿಯ।
ಕಂದನ ಅಪರಾಧ ಮುಂದೆ ನಿಮ್ಮದು ಎಂದು
ಚಂದ್ರಧರನೆ ದೃಷ್ಟಿ ಇರಲಿ ||೯೨||

ಛಲಕೆ ಪೋಗುವೆ ಸ್ವಾಮಿ ದಯವಿರಲಿ ಪಾದವ
ತೊಳೆವ ಸೇವಕರೊಳಗೆ ಕೃಪೆಯ।
ಛಲದಂಕನಹುದೆಂದು ನಿಗಮಲೋಚನ ಪುಷ್ಪ
ಒಗೆಯಲು ಬಲದಿಂದ ತೆಗೆದು ||೯೩||

ಅಭಯವಾಗಲು ರಾಮ ನಲಿದು ಹಿಗ್ಗುತ ಬಂದು
ತುರಗವೇರಿದನು ಗೆಲವಿನಲಿ ।
ಹೊಡೆಯಲು ರಣಭೇರಿ ನಡೆಯಲು ದಂಡೆದ್ದು
ಗುಡುಗುಡಿಸಿ ಈಶಾನ್ಯದೆಸೆಗೆ ||೯೪||

ಮೂರಾರು ಪಯಣಕ್ಕೆ ಹೋಗಿ ಗುತ್ತಿಗೆ ಇಳಿದು
ರಾಯ ಚಾಮಯ್ಯನ ಕರೆಸಿ ।
ಸಾಗುವ ಕಾರ್ಯ[ದ] ಸುಳುಹು ಸೂಚನೆ ಪೇಳಿ
ಮೀರಿದರೆ ಬಲ ತುರುಗ ಕಳುಹೋ ||೯೫||

ಒಳ್ಳೆಯದು ಎನಲವ[ನು] ಬೆಳ[ಗಿನಲಿ] ದಂಡೆದ್ದು
ಕಲ್ಲತೋಟಕೆ ಹೋಗಿ ಬಿಡಲು ।
ನಿಲ್ಲದೆ ನಿಂತಲ್ಲಿ ಮೆಲ್ಲನೆ ನಡೆಯದೆ
ಮತ್ತಲ್ಲಿ ದಾಂಟಲು ಕೃಷ್ಣವೇಣಿ ||೯೬||

ಮೂರು ತಿಂಗಳ ದಾರಿ ಮೂವತ್ತು ದಿವಸಕೆ ನಡೆದು
ಭಾರಂಗಿ ಬಳ್ಳಾರಿಗಿಳಿಯೆ ।
ತೋರಿತು ಇದಿರಾಗಿ ಓರುಗಲ್ಲನೆ ಕಂಡು
ಹಾರಲು ರಾಮನ ಎದೆಯು ||೯೭||

ನೋಡಯ್ಯ ಕಾಟಣ್ಣ ಜೋಡುಂಟೆ ಈ ಪುರಕೆ
ರಾವಣನ ಲೆಂಕೆಗೆ ಪೋಲುವುದು ।
ಹೇಳಬಹುದು ನಮ್ಮ ರಾಯ ಕಂಪಿಲ ಭೂಪ
ಓಡಿಬಂದುದು ನಿಜವುಂಟು ||೯೮||

ಮಣಿಯಬಲ್ಲನೆ ಇವ ಮೊಗಲ ಪಾಚ್ಛಾಯಗೆ
ಅದರಿಂದ ತೇಜಿ ನಿಂತಿಹುದು ।
ಕಡಿಮೆಯ ದೊರೆಗಳು ಇವನ ದೃಷ್ಟಿಗೆ ಉಂಟೆ
ಬಡವ ಕಂಪಿಲಗೆ ಬೆದರುವನೇ ||೯೯||

ನೋಡುವ ಮುಂದಣ ಯೋಗ ಹೋಗಿಹುದೆಂದು
ಹೋಗಿ ಬ್ರಹ್ಮಯ್ಯನ ಗುಡಿಗೆ ।
ಬೇಗದಿ ಬಲವಂತ ನಿಯೋಗಿ ಜಾಣರ ಕರೆಸಿ
ಹೇಳಿರೊ ರುದ್ರಗೆ ಬಂದ ಸ್ಥಿತಿಯ ||೧೦೦||

ಮಾತಾ ಪಿತರೊಳು ಮುನಿದು ಮಗನು ಬಂದನು ಎಂಬ
ಮಾತಿಗೆ ಮೊದಲಕ್ಷರವು ।
ಭೂಪ ನಿಮ್ಮಯ ಬಳಿಯ ಚಾಕರಿಯ ಧರ್ಮಕ್ಕೆ
ಬೇಕಾಗಿ ತಾನಿರುವನಿಲ್ಲಿ ||೧೦೧||

ಮಾತಿಲಿ ಒಳಪೊಗುವ ಮರಳುವ ಕಾಲಕ್ಕೆ
ಹಾಕುವ ಬಿರಿದು ಬೆಂಕಿಯನು ।

ಪಾಪಕೊಗ್ಗುವನಲ್ಲ ಛಲಕೆ [ಬಂ]ದರೆ ಹೊರಟು
ಹಾಕುವೆ ಕತ್ತಿ ಹೋಗೆನಲು ||೧೦೨||

ರುದ್ರಭೂಪಾಲಕನಿರ್ದನು ತನ್ನಯ
ಒಡ್ಡೋಲಗದ ಸಂಭ್ರಮದಿ|
ಇದ್ದಂಥ ಸಮಯದಿ ಈ ರಾಮನ ಹೆಜೀಬರು
ಬರಲು ಬಾಗಿಲವರು ತಡೆಯೆ ||೧೦೩||

ತಡೆ[ದಿ]ರೆ ಲೇಸೆಂದು ನುಡಿಯಿರೆ ನಿಮ್ಮಯ
ಒಡೆಯ ರಾಜೇಂದ್ರನ ಕೂಡೆ|
ಪಡೆದ ಕಂಪಿಲನೊಳು ದುಗುಡದಿ ರಣರಾಮ
ನಿಮ್ಮೆಡೆಗೆ ಬಂದನು ಎಂಬ ವಿವರ ||೧೦೪||

ಬಾಗಿಲ ಚರ ಬಂದು ರಾಯನಿಗುಸುರಿದ
ದಾಯಾದಿ ಕಂಪಿಲನ ಮಗನು |
ಸ್ವಾಮಿ ನಿಮ್ಮಯ ಬಳಿ ಓಲೈಸ ಬಂದವನೆ
ಯಾವ ಹದನೋ ಕಾಣಲರಿದು ||೧೦೫||

ನುಡಿಯ ಕೇಳುತ ರುದ್ರ ಒಡನೆ ತಾ ಮರನಾದ
ಇದುಯೇನು ಚೋದ್ಯದ ಹೊಳವೊ|
ಧರಣಿಯೊಳವ ಮಾಳ್ಪ ಕಾರ್ಯ ಪೇಳಲು ಮೂರು
ನಯನವುಳ್ಳವಗಸದಳವು ||೧೦೬||

ಆಗಲಿ ಅದಕೇನು ರಾಯನ ಸುತನಾಸೆ
ನಾವು ತಿಳಿವ ಜಾಣರಿಂದ|
ಮುನಿದು ಬಂದಿರಲವಗೆ ಮನ್ನಣೆ ಪೇಳಿ ಕಳುಹುವಾ
ಹಿರಿಯತನವು ನಮಗಹುದು ||೧೦೭||

ಹಗೆಯವನು ಬಂದಲ್ಲಿ ಹಾಲು ಅನ್ನವ ನೀಡಿ
ಹೋಗು ಎಂದರೆ ಶಿವಗೆ ಮೆಚ್ಚು |
ಏನಿರೈ ಮಂತ್ರಿಗಳು ಸನುಮತವೆ ನಿಮಗೆನಲು
ಆಡು[ವರ]ವರು ತಿಳಿದಂತೆ ||೧೦೮||

ಒಳ್ಳಿತಾಗಲು ಭೂಪ ಸುಳ್ಳಿಗೆ ಸುಳ್ಳಾಡಿ ।
ಕಳ್ಳನಾಗಲುವೆಂಬ ಗಾದೆ ।
ಇನ್ನು ಲಾಲಿಸು ರಾಯ ಶ್ರೀರಾಮನ ಮಕ್ಕಳಿಗೆ
ಹೊಲ್ಲಬಾರದೆ ರಾಗದ್ವೇಷ ||೧೦೯||

ಮಂತ್ರಿ ಮನ್ನೆಯರೆಲ್ಲ ಸಂತಸದಿ ಒಪ್ಪಲು
ತಂತ್ರಿ ಲಿಂಗಣ್ಣನ ಕರೆದು ।
ಅಂತರಂಗದಿ ಆಡೊ ವಚನಭೇದವ ತಿಳಿದು
ಮುಂಚೆ[ತಾ]ರಯ್ಯ ಹೇಜಿಬರ ||೧೧೦||

ಸಾಗಿ ಬಂದನು ಲಿಂಗ ಬಾಗಿಲ ಬಳಿಯಿರುವ
ಹೇಜೀಬರ ಒಡನೆ ಕರೆದು।
ಏನಿರೈ ಬಂದಂಥ ಕಾರ್ಯಸ್ಥಿತಿಗಳ ಪೇಳಿ
ರಾಯ ಕಳುಹಿದ ರುದ್ರಭೂಪ ||೧೧೧||

ಬಾಗಿಲ ಬಳಿಯ ಕೇಳಯ್ಯ ಲಿಂಗಣ್ಣ ಹೇಳಲು
ಹುಸಿಯೆಂದು ತೋರುವುದು ನಿಮಗೆ ।
ರಾಯ ರಾಯರ ಗೆದ್ದ ರಾಮಯ್ಯ ಕಂಪಿಲಗೆ
ನ್ಯಾಯ ಬಂದುದು ಒಂದು ಕಥೆಗೆ ||೧೧೨||

ಹೇಳ್ವೆವು ಕವುಲೆಂದು ತೋರುವುದು ಕೆಲಬರಿಗೆ
ಜಾಣ ಬಲ್ಲನು ಅದರ ಸುಳುಹ।
ಸೂಳೆ ರತ್ನಿಯ ತಂದ ಮೂಲ ಬಲ್ಲಿರಿ ನೀವು
ಹೇಳಿದ ಕಥೆಗಿದು ಬಂತು ||೧೧೩||

ಮಾತಿಲಿ ಹೊಳಹನು ಕಾಣನು ಲಿಂಗಣ್ಣ
ಭೂಪರುದ್ರಗೆ ಪೇಳ್ವೆನೆನುತ ।
ಲೋಕನಾಯಕನೆಡೆಗೆ ಬಂದು ಕರಗಳ ಮುಗಿದು
ವಾಕ್ಯದೊಳಗೆ ಹೊಳವಿಲ್ಲ ||೧೧೪||

ಸಹಜವೆಂಬುವದಾಗಿ ತೋರುತಿರ್ಪುದು ರಾಯ
ಪಾದದೊಳೊಮ್ಮೆ ಲಾಲಿಪುದು ।

ಭೇದವ ಪೇಳ್ವರು ಸೂಳೆ ರತ್ನಿಯ ಕಾಲ
ಆದರೂ ನಿಜವೆನ್ನಬಹುದು ||೧೧೫||

ಅಪ್ಪಾಜಿಯೊಳು ಕ್ರೋಧಬಟ್ಟು ಬಂದನು ಎಂದು
ಕಟ್ಟುತ್ರದೊಳಗೆ ಪೇಳುವರು ।
ಮತ್ತಾರು ಬಲ್ಲರು ಅಂತರಂಗದ ಮನವ
ನಿಶ್ಚಯಿಸಿ ನೀವೊಮ್ಮೆ ಕರೆಸಿ ||೧೧೬||

ಬರಹೇಳು ಹೇಜಿಬರ ತಿಳಿದು ನೋಡುವ ಸುಳುಹ
ಕರೆಯೆನಲು ಚರರೋಡಿ ಬಂದು।
ದೊರೆಯ ಅಪ್ಪಣೆಯಾಯ್ತು ಬಿಡಿಯೆನಲು ಬಂದಾಗ
ಕರಮುಗಿಯೆ ರುದ್ರನಿಗೆ ಬೇಗ ||೧೧೭||

ಮಂಡಲೀಶ್ವರನೆ ಮಾರ್ತಂಡ ಭೂಪಾಲನೆ
ಖಂಡೆಯ ಕದನ ಪ್ರಚಂಡ।
ಬಂದೀತು ತೃಣದೊಳು ತಂದೆ ಮಗನಿಗೆ ಜಗಳ
ಕಂಡು ಬಳಲಿ ನಿಮ್ಮೆಡೆಗೆ ||೧೧೮||

ರಾಯರ ಮಗಬಂದು ಪರರಾಯರ ಕಾಯಲ್ಕೆ
ಬೇರೊಂದು ಗಡಿ ಹುಟ್ಟದಿಹನೆ ।
ಭೀಮನ ಸಮಶಕ್ತಿ ಪೇಳುವರು ಈ ಮಾತು
ತೋರುವುದು ಹೊಳವಾಗಿ ನಮಗೆ ||೧೧೯||

ಉಂಟಹುದು ಪ್ರತಿಭೀಮ ಇಲ್ಲೆನಲು ಕಳ್ಳರು
[ದಂ]ಡಿಸಿದ ವೈರಿಗಳ ಮಿಂಡ।
ಕಂಟಕದಿ ದಿವ್ಯಶಾಂತರಿಗೆ ಬಿಡುವಾದೆ
ಬಂದಿತ್ತು ರತ್ನಿ ಮೂಲದಲಿ ||೧೨೦||

ಬೇಡವಳು ಕುಲಗೇಡಿ ರಾಯರಿಗೆ ವರಹೀನ
ನೋಡೆಂದ ಕುಲದೊಳಗಿಂಟ।
ಕೇಳದೆ ಅವರನ್ನ ಮೂಳ ಹಮ್ಮಿನ ಮೇಲೆ
ಕೀಳು ಮೇಲಾಗಿ ಆಡಿದನು ||೧೨೧||

ರತ್ನಾಜಿ ಕುಲವಂಶ ಚಿತ್ತಕ್ಕೆ ತಿಳಿದುಂಟು
ಬಿಚ್ಚಿ ಆಡಲು ಏನು ಹುರುಳು ।
ಪುತ್ರ ರಾಮನು ನೀವು ಈ ಕರ್ತರು ಮಾತಾಡಿ
ಸತ್ಯ ಕಾಬುದು ನಿಮ್ಮ ಮನಕೆ ॥೧೨೨॥

ಆದಡೆ ಆದೀತು ಸಹಜವಾಗಿದೆ ಮಾತು
ಕೇಳಿದಿರೆ ಮಂತ್ರಿ ಮನ್ನೆಯರು।
ಸೂಳೆಯಾದರೆ ಏನು ಶುದ್ಧ ಕುಲದ ಒಳಗೆ
ಮೂಗಾಳ ಸುರೆ ಕುಡಿವ ಜಾತಿ ॥೧೨೩॥

ದೊರೆಯಹುದು ಅದಕೇನು ತರಬಹುದು ಹನ್ನೆರಡು
ಕುಲ ಸಂಗ ಶುದ್ಧವಾದವನು ।
ಕುಲದೀಪವಾಗಲು ಮುನಿದೆದ್ದು ತಾ ಬಂದು
ತಲೆ ಹೊಡೆವ ಮತ್ತೊಬ್ಬನಾಗೆ ॥೧೨೪॥

ಕವಡಿಲ್ಲ ಮಾತಿಲಿ ನಿಜಮಾಡಿತೆಂದೆನುತ
ಕೊಡಿಸಿ ಬಂದವರಿಗುಡುಗೊರೆಯ।
ಕರೆಸುವೆ ನಾಳಿನ್ನು ದಿವಸ ಒಳ್ಳಿದು ಹೋಗಿ
ನಿಮ್ಮರಸಗೆ ಉಸಿರಿ ಹೀಗೆಂದು ॥೧೨೫॥

ಸ್ಥಾನಪತಿಗಳು ಬಂದು ಹೇಳಿದರು ಕರಮುಗಿದು
ಆದುದು ಮನದೊಳಿದ್ದಂತೆ ।
ನಾಳಿನ ಒಳಗಾಗಿ ಕರೆಸುವೆನೆಂದೆಂಬ
ಬಹಳ ಮನ್ನಿಸಿದ ರಣಭೂಪ ॥೧೨೬॥

ಚಂದವಾಯಿತು ಎಂದು ಬಿರಿದಾಂಕ ರಾಮನು ಕಾಟ
ಬಂದು ಗುಂಡಬ್ರಹ್ಮಯ್ಯನ ಗುಡಿಗೆ।
ಹರುಷದಿ ಪೂಜೆ ಪುಷ್ಪವ ಮಾಡಿ ಶರಣೆಂದು
ಆನಂದದಿ ಡೇರ್ಯಕ್ಕೆ ಬರಲು ॥೧೨೭॥

ಅನಿತರೊಳಗೆ ಸೂರ್ಯ ಜನನಿ ಗರ್ಭವ ಸೇರೆ
ಪರಮಾನ್ನ ಸವಿದು ನಿದ್ರೆಯಲಿ ।

ಮಲಗಿರಲು ಸ್ವಪ್ನಕ್ಕೆ ಸುಳಿದನು ಬ್ರಹ್ಮಯ್ಯ
ಅಗಣಿತ ರೂಪವನು ಧರಿಸಿ ||೧೨೮||

ಕಾವಿ ಕಮಂಡಲ ಕರದೊಳು ತ್ರಿಶೂಲ
ಮಾಯದ ಮರುಳ ತಂಡಗಳು ।
ಕಾಮನ ಉರಿಪಿದ ಬೂದಿ ಮೈಯೊಳು ಪೂಸಿ
ಬಾಲ ರಾಮಗೆ ಬಂದು ಸುಳಿಯೆ ||೧೨೯||

ಹರ ರೂಪವನೆ ಕಂಡು ಬೆದರದೆ ಮನದೊಳು
ಕರಮುಗಿದನು ಕನಸಿನೊಳಗೆ।
ತರಳಗೆ ಕೃಪೆಯಾಗಿ ಕರುಣಿಸಿದೆ ಪಾದವ
ಎರಗುವೆ ಸಾಷ್ಟಾಂಗ ಬಿನ್ನ ||೧೩೦||

ವೈನವುಳ್ಳವನೆಂದು ಶರಣನು ತಾ ಮೆಚ್ಚಿ
ಒಲಿವೂದು ತೇಜಿಯು ನಿನಗೆ ।
ಮಾಡು ರಣವ ಗೆಲ್ಲುವೆಯೆಂದು ಶರಣನು ಬಯಲಾಗೆ
ರವಿ ಮೂಡಗಡಿಯಲಿ ಜನಿಸೆ ||೧೩೧||

ವರವನು ಕರುಣಿಸಿ ಶರಣರು ಬಯಲಾಗೆ
ದಿನಕರನು ಪೂರ್ವದೊಳೇರೆ।
ದೊರೆ ರುದ್ರಭೂಪಾಲ ಬಳಿಕ ಸ್ನಾನವ ಮಾಡಿ
ಮದನಾರಿ ಪೂಜೆ ಮಜ್ಜನವ ||೧೩೨||

ರಾಯರುದ್ರನ ಭಕ್ತಿ ದೇವಗಣಂಗಳು
ಲಾಲಿಸಬಲ್ಲ ಸದ್ಭಕ್ತಿ।
ನಾನಾ ಪ್ರ[ಪಂಚ] ಕಾಣದೆ ನಯನದಿ
ದೇವ ಜಂಗಮ ಒಪ್ಪುತಿಹರು ||೧೩೩||

ಪಟ್ಟೆ[ಕಂತಿ]ಯು ಸುತ್ತ ಮುತ್ತು ರತ್ನವ ಬಿಗಿದು
ಖಟ್ವಾಂಗಧರನ ಜಂಗಮವು ।
ಕಟ್ಟಳೆಯಿಲ್ಲದ ಕೌಪು ಕಾವಿಯ ದೋತ್ರ
ದೃಷ್ಟ ಜಂಗಮ ಒಪ್ಪುತಿಹರು ||೧೩೪||

ಇಂತಪ್ಪ ಜಂಗಮಕೆ ಸಂತೋಷದಲಿ ರಾಯ
ಸಂತೈಸಿ ಕರಗಳ ಮುಗಿದು ।
ಕಂತು ಜಂಗಮಪ್ರೇಮಿ ವಾಲಗಕೆ ಬರುವಂಥ
ಪಂಥವನಾರು ಬಣ್ಣಿಪರು ||೧೩೫||

ಹತ್ತುವ ಹಾಜಾರ ಮುತ್ತಿನ ಮೇಲ್ಕಟ್ಟು
ತೆತ್ತಿಯ ಮೇಲ್ ಹೊನ್ನ ಕಳಸ।
ರತ್ನ ವೈಢೂರ್ಯವ ತೆತ್ತಿಸಿ[ದ] ಪೀಠ[ದ]
ವಿಸ್ತರವ ನೋಡುವರಳವೆ ||೧೩೬||

ರಾಯ ರುದ್ರನು ಹೊರಡೆ ಏರಿ ಪಲ್ಲಕ್ಕಿಯ
ಭೇರಿ ಪಾಠಕರು ಉಗ್ಘಡಿಸೆ ।
ಸಾಗಲು ಸಂಭ್ರಮದ ಭೋಗದೊಳಗೆ ರಾಯ
ಏರಿದ ಸದರ ವಾಲಗವ ||೧೩೭||

ಕರಿ ತುರಗ ಕಾಲಾಳು ಮೆರೆಯುತ್ತ ರಣಗಹಳೆ
ಪರಿವಾರ ಮಂತ್ರಿ ಮನ್ನೆಯರು ।
ದೊರೆ ಎಡಬಲದಿ ಕಿರೀಟವರ್ಧನರೆಲ್ಲ
ಎಡಬಲದಿ ಕುಳಿತು ರಾಯನಿಗೆ ||೧೩೮||

ನಾಲಗೆಯ ಪಿಡಿಕೊಂಡು ಮೂಗಿನೊಳ್ ನುಡಿಯುವ
ನಾನಾ ಪ್ರಬಂಧ ಗೀತವರು ।
ತೂಗೇನೆಂಬರು ಗಿರಿಯ ತುದಿ ಬೆರಳ ಕೊನೆಯೊಳಗೆ
ಸಾಧಕ ಶಕ್ತಿ ವಿದ್ಯದವರು ||೧೩೯||

ಭುಜಬಲದ ಶಕ್ತಿಯಲಿ ಮದಗಜವ ನೂಕುವರು
ನುಡಿಸುವರು ಬಂದ ಚಿತ್ರವನು ।
ಕಡಲನು ಧರಣಿಗೆ ಹರಿಸೇನು ಎಂಬಂಥ
ನೆರೆ ಜಾಣರು ಹರಸಿ ವಾಲಗದಿ ||೧೪೦||

ದೇವೇಂದ್ರನಿಗೆರಡನೆಯ ಭೋಗದೊಳಿರುತಲಿ
ಓರುಗಲ್ಲರಸು ರಾಜೇಂದ್ರ।

ಆಗಲೆ ಅರುವಾಗಿ ಅರಸು ಕಂಪಿಲನಾತ್ಮ
ಬಾಲರಾಮನ ಕರೆಸುವರೆ ||೧೪೧||

ಹೋಗಿ ಬಾರೆಲೊ ನೀನು ದೇವಿಶೆಟ್ಟಿಯ ಲಿಂಗ
ಸಾವಿರ ಕುದುರೆ ಮಂದೆಯಲಿ ।
ಶೋಧಿಸಿ ರಾಮನ ಠಕ್ಕು ಟೌಳಿಯ ನಿಜವ
ಭೇದಾಭೇದವನು ತಿಳಿಯೋ ||೧೪೨||

ತಂದೆಯೊಳ್ ಕದನಾಡಿ ಬಂದನೆಂಬರು ಲಿಂಗ
ಸಂದೇಹವಾಗಿದೆ ಮನಕೆ ।
ಮಂದಿ ಕುದುರೆಯ ಕಟ್ಟಿ ಬಂದ ಮನುಜನ ನಂಬಿ
ಇಂಬುಕೊಡುವುದು ಮಹಾಕಷ್ಟ ||೧೪೩||

ಪಾದದಪ್ಪಣೆಯಾಗೆ ಹೋಗಿ ಬರುವೆನು ಭೂಪ
ಶೋಧಿಸುವೆ ರೋಮ ರೋಮಗಳ।
ಸಾವಿರ ಕುದುರೆಯ ಬಲಗೂಡಿ ನಡೆದನು
ರಾಯ ರಾಮನ ಪಾಳ್ಯಕಾಗಿ ||೧೪೪||

ಹತ್ತಿದ ಲಿಂಗಣ್ಣ ಮುತ್ತಿನ ಅಹುದೆಯ
ಎತ್ತಿ ಸಾರುವ ರಣಗಾಳೆ।
ಬೆ[ಕ್ಕಿ]ನ ಬಳಿಗೆ ಬೆನವ ವಾಹನ ಬರುವ ವಿ
ಚಿತ್ರದಿ ಲಿಂಗಣ್ಣ ಪೊಗಲು ||೧೪೫||

ಬರುವ ಲಿಂಗನ ಸುದ್ದಿ ಬಿರುದ ಬಾಲೇಂದ್ರರು ಕೇಳಿ
ಸದರಿನೊಳ್ ಕುಳಿತು ಧೈರ್ಯದಲಿ ।
ಕ್ಷೇಮವೆ ಲಿಂಗಣ್ಣ ರಾಯ ರುದ್ರನು ನಿಮ್ಮ
ಸ್ವಾಮಿ ಕೇಳಿದರು ಪ್ರೀತಿಯಲಿ ||೧೪೬||

ಬಿರಿದಿನೆಕ್ಕಟಿಗರು ಕರಿ ತುರಗ ಕಾಲಾಳು
ಸದರ ವಾಲಗ ಕೊಟ್ಟು ನಿಲ್ಲೆ ।
ಸಾಗಿ ಬಂ[ದನು] ಬೇಗ ದೇವಿಶೆಟ್ಟಿಯ ಲಿಂಗ
ಭೇರುಂಡ ರಾಮಯ್ಯಗೆರ[ಗಿ] ||೧೪೭||

ಪರಿಣಾಮ ಸ್ಥಿತಿಗಳನು ಹರುಷದಿ ಕೇ[ಳುತ್ತ]
ಪರಬಲ ವೈರಿದಲ್ಲಣನೆ ।
ಮುರಿಯಲಿರಿದು ಮತ್ತೆ ಓರುಗಲ್ಲಿಗೆ ಬಂದ
ಪರಿಯ ಪೇಳೆಂದು ಕೇಳಿದನು ॥೧೪೮॥

ಕೆರೆ ಬತ್ತಿ ಭಾವಿಯ ಒರತೆಗೆ ಬಂದಂತೆ
ತೆರನಾಯಿತಲ್ಲೊ ಲಿಂಗಣ್ಣ।
ಊರ ಗೌಡನು ನೆರೆ ಗ್ರಾಮವ ಸೇರಲು
ತುರು ಕಾಯ್ವ ತರಳನಂತಾಯ್ತು ॥೧೪೯॥

ಖಗರಾಜ ಮರಿ ಬಂದು ಗುಡುಕರಿ ಇರುವಾಗ
ಉರಗನು ನಲಿದಾಡಿದಂತೆ ।
ಬಡವನ ಬಿನ್ನಪವು ಬಲ್ಲವನ ಕಿವಿ ಹೊಗಲು
ಹರಿಯಿತ್ತು ರಾಯಗೆ ದೃಷ್ಟಿ ॥೧೫೦॥

ಬಂದು ಮೂರನೆ ದಿವಸ ತುಂಬಿ ಹೋಯಿತು ಲಿಂಗ
ಹರಿಯಿತ್ತೆ ರಾಯಗೆ ಚಿತ್ತ ।
ಶೂರ ಕಂದಿಕೆ ಪಾಲ ಭ್ರಮಿಸಿ ದ್ವಾರಕಿಗೆ ಹೋಗೆ
ಚರರು ನಿಲ್ಲೆಂದ ತೆರಬಂತು ॥೧೫೧॥

ಬಡತನವೆಂಬುದು ಹೊಲೆತನ ಧರೆಯೊಳಗೆ
ಬಲುಮೆಗಳೆ ಲೇಸು ಧರೆಯೊಳಗೆ ।
ವೈರಕ್ಕೆ ಬಂದಿರಲು ಹರುಷಗಾಣುವೆ ಲಿಂಗ ನಿ
ಮ್ಮರಸರ ಕಾಣೆವೆ ಘಳಿಗೆಯಲಿ ॥೧೫೨॥

ರಾಮನಾಡಿದ ಮಾತ ಕೇಳಿ ಲಿಂಗಣ್ಣನು
ಭೂಮಿ ಪಾತಾಳಕ್ಕೆ ಇಳಿದು ।
ಸ್ವಾಮಿ [ನಿ]ಮ್ಮಯ ಶಕ್ತಿ ಕೇಳಿ ಬಲ್ಲೆವು ನಾವು
ಮಾಡಬಹುದು ಬಂದ ಕಾರ್ಯ ॥೧೫೩॥

ಹೇಳ್ವೆನು ಲಿಂಗಣ್ಣ ಲಾಲಿಸು ಕರ್ಣದಿ
ಕಾಣದ ನಿಮಗೆ ನಿಜವಾಗಿ ।

ಏಳಿಗೆ ಅರ್ಥವನು ಬಡತನವ ಪೇಳಲು
ಲೋಕಮಯವೆಂಬರು ಮನದೊಳಗೆ ||೧೫೪||

ಏನ ಹೇಳಲೊ ಲಿಂಗ ಭೂಮಿ ರಾಯರ ಗೆದ್ದೆ
ಕಾಲಗತಿಗಳ ಮೀರಲಳವೆ।
ರಾಯ ಕಂಪಿಲ ಒಬ್ಬ ರಾಣಿ ರತ್ನಿಯ ತಂದ
ಮೂಲದಲಿ ಜಗಳ ಬಂತೆಮಗೆ ||೧೫೫||

ಮೂಲವ ತಿಳಿದೆನೊ ಕುಲಗೇಡಿಯೆಂಬವಳ
ಬೇಡವೆನ್ನಲು ಕಷ್ಟ ಬಂತು।
ಓಡಿ ಬಾರದೆ ಹೆದರಿ ಎತ್ತಿ ಬಡಿವೆನೆ ಪಿತನ
ರೂಢಿಯೊಳಪಕೀರ್ತಿ ಬಹುದು ||೧೫೬||

ಬಾಳಿವೋದುವದ್ಯಾಕೆ ಒಂದೇ ಚಿಂತಕ
ನೂರೆಂಟು ಶಿಖರಿಯ ಕಾದು।
ನೋಡುವೆ ನಿಮ್ಮ ರಾಯ ರುದ್ರನ ಬಳಿಯ
ಸಾಲದಿದ್ದರೆ ಸಂಬಳ ನಡೆವೆ ||೧೫೭||

ಕಡಿದೆನು ಎಂಬಂಥ ಎದೆಯಿರಲು ಇರ ಹೇಳು
ಬಡ ಧೈರ್ಯವಾದರೆ ನಡೆಯೆ।
ಕಡೆ ಲೋಕದ ಮೇಲೆ ಆಳಾಗದಿರಲೆನ್ನ
ನಡೆವೆನು ಸುರಿತಾಳನ ಬಳಿಗೆ ||೧೫೮||

ಮತ್ತೆ ಕೇಳೆಲೊ ಲಿಂಗ ಇಟ್ಟಂಥ ಬಿರಿದನು
ಬಿಟ್ಟು ಬಾಳುವರೇನೊ ಹೆದರಿ।
ಉಪ್ಪುಂಡ ರಾಯನಿಗೆ ಮೋಘ ಕವಿಯಲು ಕಡೆಗೆ
ಕೊಟ್ಟುವೆ ನೋಡೆನ್ನ ಛಲವ ||೧೫೯||

ಮಾರುತನ ಸುತನಂತೆ ಬಲಗಾರನಹುದೆಂದು
ಹೋಗಿ ಬರುವೆನು ರಾಯನೆಡೆಗೆ।
ಶೀಘ್ರದೊಳಗೆ ಬಂದು ಏನೆಂಬ ಪತಿ ಬಿನ್ನಹ
ಪಾದಕ್ಕೆ ಬಂದು ಅರುಹುವೆನು ||೧೬೦||

ಬಂದನು ಲಿಂಗಣ್ಣ ಒಂದೆ ಭರವಸದೊಳು
ರಾಜೇಂದ್ರಗೆ ಕರಗಳ ಮುಗಿದು ।
ಬಂದ ಬಾಲನ ಮಾತ ಬುಡದಿಂದ ನೋಡಿದೆ
ನಿಜವೆಂಬ ರೀತಿಗೆ ತೋರುವುದು ॥೯೧॥

ರತ್ನಿ ಕಾಲಲಿ ಜಗಳ ಹುಟ್ಟಿ ಬಂದುದು ನಿಜವು
ಕುಟ್ಟುವನಿಬ್ಬರನು ಎತ್ತಿ ।
ಸೃಷ್ಟಿಯೊಳಪಕೀರ್ತಿಯೆಂಬ ಭೇದವ ತಿಳಿದು
ಕಟ್ಟಿ ಕಾಯಲು ಬಂದ ನಿಮ್ಮ ॥೯೨॥

ಅಂತಪ್ಪ ಧೀರ ಎಮ್ಮೆಡೆಗೆ ನಿಲ್ಲಲು ರಾಯ
ಭೂಕಾಂತರು ಇದಿರುಂಟೆ।
ಸುಟ್ಟು ಬೂದಿಯ ಮಾಡಿ ಸುರಿತಾಳನ ಬೇರನು
ಪಟ್ಟಕ್ಕೆ ನೀವೆ ಸ್ಥಿರಕರವು ॥೯೩॥

ಬಹಳ ಹೇಳುವುದೇನು ನೋಡಯ್ಯ ರಾಜೇಂದ್ರ
ತಾಯಿ ತಂದೆಗಳೊಳು ಮುನಿದು ಬಂದ ।
ಕಾಣುವುದು ನಿಜವಾಗಿ ಯಾವ ತೆರದೊಳು ನೋಡೆ
ನೀವೊಮ್ಮೆ ಕರೆಸಿ ಕೇಳುವುದು ॥೯೪॥

ಹಾದಿ ಸೂಳೆಯ ನೆಚ್ಚಿ ಮನೆಯ ಹೆಂಡಿರ ಬಿಟ್ಟ
ಗಾದೆ ಬಂದಿತು ರತ್ನಿ ಕಾಲಿಂದ।
ಶೋಧಿಸಿದ ಅಪರಂಜಿ ಕುಮಾರನ ಬಿಡಲವಗೆ
ಮೂದೇವಿ ಹೆಗಲೇರಿ ಬಂದೊ ॥೯೫॥

ಮೋಸ ಕಾಣುವುದಿಲ್ಲ ಅವನಾಡುವ ಮಾತೀಲಿ
ಸೋಸಿದ ದಧಿವಂತೇನೊ ।
ಲೇಸು ಕಂಡರೆ ನಿಮಗೆ ಇರಿಸಿಕೊಂಬುದು ಅವನ
ಎಮ್ಮಯ ಮಾತಿರದಲ್ಲ ॥೯೬॥

ಮತ್ತೆ ಕೇಳೈ ಭೂಪ ಮಡಗಬರದು ಮಾತ
ಸತ್ಯದಿ ಹರಿಶ್ಚಂದ್ರ ರಾಮ ।

ಇಟ್ಟಂಥ ಬಿರಿದೀಗ ಬಿಟ್ಟು ಬಾಳುವನಲ್ಲ
ಪೃಥ್ವಿ ಮುನಿಯಲು ನಿಮ್ಮ ಕೊಡನು ॥೧೬೭॥

ಧರಣಿ ಮೇಘವು ನಿಮಗೆ ಕವಿದು ಬಂದರೆ ಕೊಡನು
ದೃಢವುಂಟು ಅವನ ಮನದೊಳಗೆ ।
ಸರಿನೋಡಿ ನಿಮ್ಮಲ್ಲಿ ಇರುವ ರಾಯರು ಮಂತ್ರಿ
ಹರುಷವಾದರೆ ಕರೆಸಿಕೊಳ್ಳಿ ॥೧೬೮॥

ರಾಯ ಕೇಳಿದ ತನ್ನ ಪ್ರಧಾನಿ ದೊರೆಗಳನೆಲ್ಲ
ಕೇಳಿದಿರಾ ನಿಮಗೆ ಸಮ್ಮತವೆ ।
ಧೀರನಾದವ ಬಂದು ವಾಲೈಸಿ ನಿಂದಲ್ಲಿ
ನಾವು ಬಿಡುವುದು ಘನವಹುದೆ ॥೧೬೯॥

ಹಲವು ಯೋಚನೆ ಯಾಕೆ ಕಲಹ ಬಂದರೆ ನಮ್ಮ
ಹೊಲಬ ದಾಂಟಿಸುವ ಗಳಿಗೆಯಲಿ ।
ಮಲೆತು ನಿಂತರೆ ನಮ್ಮ ಬಲಕೇಸು ಕಡೆಯುಂಟು
ತಲೆಯ ತರುವರು ಪಾದದೆಡೆಗೆ ॥೧೭೦॥

ಸಹಜವಹುದು ಪ್ರಧಾನಿ ದೊರೆಗಳ ಮಾತು
ತೀರುವುದೇನು ಅವನಿಂದ ।
ಸೀಗೆಯಲಿ ಬಾಳೆಯು ಹೊಕ್ಕಡದು ಬಾಳುವುದೆ
ಗೀಜಗ ಗಿಡುಗ ನೀಗಿದಂತೆ ॥೧೭೧॥

ಆಗಲಿ ಲಿಂಗಣ್ಣ ಹೋಗಿ ರಾಮನ ಕರೆಯೊ
ನೋಡುವೆನು ಎದೆ ಧೈರ್ಯವನು ।
ರೂಢಿಂದ್ರ ಮತ್ತಾರ ಕಳುಹಿನ್ನು ಕರೆಸುವುದು
ಚಾಡಿಗರು ಕಡೆಗೆನ್ನ ದೂರುವರು ॥೧೭೨॥

ಸಂದೇಹ ನಿನಗೇಕೊ ಲಿಂಗಣ್ಣ ನಾನಾಗಿ
ನಂಬುಗೆ ನಾನಾಗಿ ಕೊಡುವೆನು ।
ಕೊಂದವನು ಇರುತಿರಲು ಕೋಲೇನ ಮಾಡುವುದು
ತಂದೆ ಇರಲು ಮಗಗೇನೋ ॥೧೭೩॥

ದೊರೆಗಳಾಡುವ ಮಾತು ತಿರುಹಿದ ಕಡೆಗುಂಟು
ಉರಗನ ತೆರ ಗಾದೆಯಂತೆ ।
ಬಡಿದವರ ಬಿಡುವುದು [ಬಡಿಯದರ] ಪಿಡಿದು
ಕಡೆಗೆ[ನಗೆ] ಕೋಪ ಮಾಡುವಿರಿ ||೧೭೪||

ಮೂರು ಅಪ್ಪಣೆ ಕೊಡಲು ದೇವಿಶೆಟ್ಟಿಯ ಲಿಂಗ
ಸಾಗಿದನು ಮನ ಹರುಷನಾಗಿ ।
ಸಾ[ವಿರಾ]ರು ವಾರಣಗಳ ನೂರಾರು ತುರಗದಿ
ರಾಮನ ಡೇರ್‍ಯವ ಪೊಗಲು ||೧೭೫||

ರಾಜೇಂದ್ರ ಕಂಪಿಲ ರಜತಾದ್ರಿ ಶ್ರೀ ಮಲ್ಲಿ
ಕಾರ್ಜುನ ಕೃಪೆಯೊಳು ಪಡೆದ ।
ಭೀಮನ ಸಮಗಾತ್ರ ಭೇರುಂಡನಹುದೆಂದು
ರಾಮಗೆ ಕರವೆತ್ತಿ ಮುಗಿದ ||೧೭೬||

ಅರುಹಿದೆ ಅವನಿಯ ದೊರೆಗಳು ಮಂತ್ರಿಗಳು
ಕಿವಿ ಜೋಲುವಂತೆ ರಾಯನಿಗೆ ।
ಬಿರಿದನು ಬಿಡ[ನ]ವ[ನು] ಹರುಷವಾಗಲು ನಿಮಗೆ
ಕರೆಸಿಕೊಳ್ಳೆಂದು ಪೇಳಿ[ದೆ]ನು ||೧೭೭||

ಹರುಷವಾದನು ರಾಯ ದೊರೆಗಳೆಲ್ಲರು ಮಂತ್ರಿ
ಕರೆಯಲ್ಕೆ ಎನ್ನ ಕಳುಹಿದರು ।
ಹರನೊಲುಮೆ ನಿಮಗುಂಟು ಹನ್ನೆರಡ ಪೇಳುವುದೇನು
ಬಿಜಮಾಡಿ ಪುರಕೆ ಕಳುಹಿದನು ||೧೭೮||

ಚೆಂದವಾಯಿತು ಕೇಳು ಲಿಂಗಣ್ಣ ರಾಯನಿಗೆ
ತಂದೆ ಕಂಪಿಲನ ಹಗೆಯುಂಟು ।
ನಂಬಿ ನಿನ್ನೊಳು ಬರಲು ಮತ್ತೊಂದನೆಣಿಸಲು ಹೇಗೆ
ರಾಜೇಂದ್ರನ ಮನಸ ನೀ ಬಲ್ಲೆ ||೧೭೯||

ರಾಮ ಭೂಪನೆ ಕೇಳು ಆಡಿ ತಪ್ಪುವನಲ್ಲ
ಮೂರು ಅಭಯವ ಎನಗೆ ಕೊಟ್ಟು ।

ಮಾಡಿದರೆ ಮತ್ತೊಂದು ದ್ರೋಹಗಳ ನಾ ಮುನ್ನ
ಪದದೊಳಗೆ ಪ್ರಾಣಗೊಡುವೆನು ||೧೮೦||

ಮೊದಲು ನಂಬಿಗೆ ಕೊಟ್ಟು ಕಡೆಗೊಂದನೆಣಿಸಲು
ಒಡೆಯನೆಂಬೆನೆ ಮರುಳವನ ।
ಸುಡುವೆ ನೋಳ್ಪರವನು ನಡೆವಂತೆ ಕೀರ್ತಿಗಳು
ಹಿಡಿಯೆನ್ನ ದೃಢ ನಂಬಿಗೆಯ ||೧೮೧||

ಅಡಿ ತಪ್ಪುವನಲ್ಲ ಚಾಡಿ ಕೇಳಿದರೆ ಕಾಣೆ
ಹಳೆಬೀಡ ಬಲ್ಲಾಳ ಕೆಟ್ಟಂತೆ ।
ಭೋರಿಡುತ ಇವನೊಳು ತೀರಿಸುವೆ ಲಿಖಿತವನು
ಪಾಲಿಸುವೆ[ನಯ್ಯ] ಕ್ಷಣದೊಳಗೆ ||೧೮೨||

ಬಹಳ ಕಾಲದಿ ಉಂಟು ಬಂದು ನಿಮ್ಮೊಳು ಬಾಳ್ವ
ಪಾದ ದರುಶನದ ಊಳಿಗಕೆ ।
ನಾಳಿನ್ನು ಎನುತಿರ್ಪ ಕಾಲಕ್ಕೆ ಜಟ್ಟಂಗಿ
ರಾಮ ಕೂಡಿಸಿದ ನಿಮ್ಮೊಡನೆ ||೧೮೩||

ಬಾಯ ಮನ್ನಣೆಗಳನಾಡುವನಲ್ಲ ನಾ
ಭೂಪ ಇದಕೆ ಸಾಕ್ಷಿ ಫಿರಂಗಿ ।
ಧೀರನ ಎಡಬಲದಿ ಇದ್ದ ಬಂಟರ ಮುಂದೆ
ಜೋರದೆ ಕೈಯ ಪಿಡಿದು ||೧೮೪||

ಸತ್ಯದೊಳ್ ಹರಿಶ್ಚಂದ್ರ ಮುಕ್ಕಣ್ಣ ನರಪಿಂಡ
ನಿತ್ಯವೆ ಈ ಕಾಯ ಲೋಕದಲಿ ।
ಸತ್ತರೆ ನಿನ್ನೊಳು ಸಾವೆನು ಫಿರಂಗಿ
ಕತ್ತಿ ಸಾಕ್ಷಿಗಳಾಗಿ ನೋಡು ||೧೮೫||

ಲಿಂಗನ ನೀತಿಯ ಕಂಡರು ಇರ್ವರು
ಚೆಂದವಾಯಿತೆಂದು ಮನದೊಳಗೆ ।
ಇಂದು ನಾವು ಬಂದ ಭೇದವನೊರೆವೆವು ಕೇಳು
ತುಂಬಿರಲು ಸಲ್ಲ ಮನದೊಳಗೆ ||೧೮೬||

ತಂದೆ ಮಕ್ಕಳಿಗಿನ್ನು ಹೊಂದುವುದೆ ಕದನಗಳು
ಬಂದಿತು ಛಲ ಪಂಥದೊಳಗೆ ।
ಒಂದಿವಸ ಅಣ್ಣಾಜಿ ಬೇಂಟೆಯ ತರಹೋದ
ಸಂಗಡ ನಾ ಹೋಗಲಿಲ್ಲ ||೧೮೭||

ಏಕೆ ಎನ್ನುತಲೆಮ್ಮ ಭೂಕಾಂತ ಕೇಳಿದ
ಹೋದ ಬೇಂಟೆಯ ನಾನು ಜರೆದೆ ।
ಲೋಕದೊಳಗೆ ರಾಮ ಬಂಟನಂದದಿ ನುಡಿದೆ
ನೀ ತರುವುದು ತೇಜಿಯೆನಲು ||೧೮೮||

ರಾಯ ರುದ್ರನ ಗೆಲಿದು ರಣಧೀರ ತೇಜಿಯ
ತರುವೆ ಹಮ್ಮಿಲಿ ಏನೊ ಎಂದ।
ಏರಲು ರವ ರುದ್ರ ಯಮನ ರೋಮಗಳಾಗೆ
ಆಡಿದ ಪಂಥಕೆ ನಾನು ಬಂದೆ ||೧೮೯||

ಓರುಗಲ್ಲಿಗೆ ನನ್ನ ರೋಮ ಬೆದರದು ಲಿಂಗ
ಬೇರ ಕೀಳುವ ಶಕ್ತಿಯುಂಟು !
ಭೂಮಿ ಗಾತ್ರವ ಮಾಡಿ ರಾಯ ಪೇಳಲು ನಮ್ಮ
ಮಾಡಿದೆ ಕೇಳೊ ಈ ತಂತ್ರ ||೧೯೦||

ಮುತ್ತಿಗೆಯನು ಮಾಡಿ ಮುರಿವೆನು ನಿಮಿಷದಿ
ಮತ್ತೊಂದು ಉಂಟು ಮನದೊಳಗೆ ।
ಹೊಕ್ಕು ರುದ್ರನ ನೋಡಿ ಶಕ್ತಿ ಸಾರವ ತಿಳಿದು
ಇಕ್ಕೋದು ಬಿರುದು ಬೆಂಕಿಯನು ||೧೯೧||

ಬಿರಿದಿನ ಮೂಲಗಳನರುಹಲು ಯಾಕೆಂದೆ
ಇರುವುದು ಜಗಳಕ್ಕೆ ಸೆರಗು ।
ತಿರುಗುವ ಕಾಲದಲಿ ಹೊಗಳಿಸುವೆ ಛಲವೇರಿ
ಬರದೇನು ಲಿಂಗಣ್ಣ ಜಗಳ ||೧೯೨||

ಕದನ ಬಂದರೆ ಲಿಂಗ ಹೆದರಿ ಬಂದೆ[ನೆ] ಕೇಳೊ
ವಿಧಿಯ ತೊಡೆವೆ ಓರುಗಲ್ಲ ।

ಎದೆಯೊಳು ಭಯವಿರಲು ಯಮನ ನಗರಕೆ ಒಟ್ಟಿ
ಬರು[ವೆ]ನೆಂಬುದ ನೀನು ಅರಿಯಾ ॥೯೩॥

ಹೇಳುವ ನುಡಿಗಳನು ಕೇಳಿದ ಲಿಂಗಣ್ಣ
ರೋಗಿ ಬಯಸುವ ಕ್ಷೀರವನ್ನು ।
ಹಾಲನ್ನ ಪಥ್ಯವ ಮಾಡೆಂದ ಪಂಡಿತನು
ಜೋಡಾಯಿತೆನಲು ಲಿಂಗಣ್ಣ ॥೯೪॥

ಬಾರಪ್ಪ ಲಿಂಗಣ್ಣ ಬೇರೊಂದನೆಣಿಸದೆ
ಜೋಡಿನ ಗಿಳಿಯಾಗಿ ಇರುವ ।
ರೂಢೀಶ ಕಂಪಿಲಗೆ ಬಾಲರಿರ್ವರು ನಾವು
ಮೋಹದ ಮಗನಾಗಿ ಇರುವ ॥೯೫॥

ಲಿಂಗ ರಾಮನ ಮನಸು ಒಂದಾಗಿ ದೇಹವು
ಗಂಡಭೇರುಂಡನ ತೆರದಿ।
ಡಿಂಬ ಪ್ರಾಣಗಳೊಂದು ಮಂಡೆಗಳು ಎರಡೆಂಬ
ಕಂಡ ಜನರಿಗೆ ಭೇದವೆನಿಸಿ ॥೯೬॥

ಅಣ್ಣಾಜಿ ಕಾಟಯ್ಯ ಇನ್ನೇಕೆ ತಡವೆಮಗೆ
ಪುಣ್ಯಕಾಲಕ್ಕೆ ಲಿಂಗ ದೊರೆತ।
ಕ[ಣ್ಣಿ]ಲೆ ರುದ್ರಗೆ ಕತ್ತಿಯೊಳ್ ತಪ್ಪಿಲ್ಲ
ಒಮ್ಮೆ ಶೃಂಗರ ಮಾಡು ಬಲವ ॥೯೭॥

ಆಡಿದ ಛಲಪಂಥ ಕೈಗೂಡಿ ಬಂದಿತು ಅಣ್ಣ
ದೇವನ ಮಹಿಮೆ ಬೆರೆದಿಹುದು ।
ಸಾರೆನಲು ತಳವಾರ ಓರಂತೆ ಪೇಳಲು
ಬೇಗ ಶೃಂಗರವಾಗಿ ಬರಲು ॥೯೮॥

ಮಂದಿ ಮಾರ್ಬಲವೆಲ್ಲ ನಿಂದು ಸದರಿಗೆ ಕ[ರೆ]ವ
ವಂದಿಸಿ ರಾಮ ರಾಜೇಂದ್ರಗೆ ।
ಮುಂದೆಮಗೆ ದಯಮಾಡು ಮುತ್ತೇವು ಓರಗಲ್ಲ
ತಿಂದೇವು ಮೂರು ದಿವಸಕ್ಕೆ ॥೯೯॥

ಚಿನ್ನ ಬೆಳ್ಳಿಯ ಕಟ್ಟು ಚೆಲುವ ನೇಜದ ಮಂದಿ
ಬಿಲ್ಲು ಬಾಣದ ಅಂಬಿನವರು ।
ಕೆನ್ನೆ [ಮೀ]ಸೆ ಕೆಂಗರಿಗಣ್ಣು ಕೇಸರಿ ಮುಖದ
ಉರಿಮುಖ ಬಂಟರು ಬಂದು ನಿಲ್ಲೆ ॥೨೦೦॥

ಕರಿತುರಗ ಮಾರ್ಬಲದ ಉರವಣೆಯ ಲಿಂಗನು
ಕಂಡು ತಲೆದೂಗಿ ಮನದೊಳಗೆ ।
ಗೆಲುವರೆ ಈ ಬಲವು ಓರುಗಲ್ಲೊಳು ಮುನ್ನ
ಇಲಿಯು ಮಾರ್ಜಾಲನರಿತಿಹುದು ॥೨೦೧॥

ರಾಯ ಕಂಪಿಲನ ಕುಮಾರರಿರ್ವರು ಏಳೆ
ಭೇರಿ ಕಹಳೆಯ ಆರ್ಭಟದಿ ।
ಆರುತ ಹರಿಣಗಮನದೊಳಗೆ ಮಂದಿ
ಏರಲು ಪೂರ್ವಾನ ತೆರದಿ ॥೨೦೨॥

ಪರಬಲಾಂತಕ ರಾಮ ಬರುವ ದಿಗಿಲಿಗೆ ಪಟ್ಟಣ
ನಡುಗುವಂದದಿ ರಣಗಾಳೆ।
ದಿಗಿಲಿನ ಸ್ವರಕೇಳಿ ಪುರದೊಳು ಜನಜಾತ್ರೆ
ನೆರೆಯಲು ಶೃಂಗಾರವಾಗಿ ॥೨೦೩॥

ನಳಿನಮುಖಿಯರು ಪಲ ಬಗೆಯ ಶೃಂಗಾರವಾಗಿ
ತಳಿರೊಡೆದು ನಗುವ ಲಾವಣ್ಯ
ಮೃಗಮದಗಂಧಿಯರು ಮುತ್ತುರತ್ನಗಳಿಂದ
ಮಿಗಿಲಾಗಿ ಮನ್ಮಥನ ಸತಿಗೆ ॥೨೦೪॥

ಬಾಲೆಯರ ಬಂಧತ್ವ ಲಾವಣ್ಯಗಳ ಕೇಳಿ
ತಾವರೆ ಬಿರಿ ಮೊಗ್ಗೆ ಕುಚವು ।
ಗೋವಿಂದನರಸಿಯ ಲಾವಣ್ಯ ಮುಖಿಯರು
ಏರಿರೆ ಕರುಮಾಡವನು ॥೨೦೫॥

ಇಂತಪ್ಪ ಲಾವಣ್ಯದ ಕಾಂತೆಯರು ಹೊರಟು
ಚಿತ್ತ ಬೆರೆದು ನೋಡುವರು ।

ಮತ್ತೆಲ್ಲಿ ಠಾವಿಲ್ಲ ಕೋಟೆ ಕೊತ್ತಳ ಬೀದಿ
ನೆಟ್ಟ ನೇತ್ರಗಳ ಮುಚ್ಚದಲೆ ॥೨೦೬॥

ಪುರವೆಲ್ಲ ಈ ತೆರದಿ ಮರುಳಾಗಿ ಇರುವಾಗ
ಬರುವ ರಾಮನ ಬೆಡಗ ಕೇಳಿ।
ಕಡೆಯ ಬಾಗಿಲ ಹೊರಗೆ ದಂಡು ಪಾಳ್ಯವನಿಳುಹಿ
ಅರುಹಿದ ಕಾಟಣ್ಣನೊಡನೆ ॥೨೦೭॥

ಹೊಕ್ಕು ಬರುವೆನು ನಾನು ದೃಷ್ಟಿಯೆಮ್ಮೊಳಗಿರಲಿ
ಕಸ್ತಿ ಬಂದರೆ ಎನಗೆ ರುದ್ರ।
ಚಿತ್ತದೊಳ್ ಅರಿವಿರಲಿ ಕೊಚ್ಚುವೆ ಊರೊಳಗೆ
ಹಚ್ಚಣ್ಣ ಹೊರಗೆ ಲೆಗ್ಗೆಯನು ॥೨೦೮॥

ಹೊಗಬಾರದು ಈರ್ವರು ಇರು ನೀನು ಪಾಳ್ಯದಿ
ಭಯ ಬೇಡ ಎನಗೆ ನೀ ಮುನ್ನ।
ಕಳಲೆಯನರಿವಂತೆ ಕೊಂದು ರಕ್ತವ ಹರಿಸಿ
ಬರುವೆನು ಹನುಮನ ತೆರದಿ ॥೨೦೯॥

ಬುದ್ಧಿಯೆನ್ನುತ ಕಾಟ ಮದ್ದು ಬಾಣವು ಬತ್ತಿ
ಹೋದನು ತನ್ನ ಪಾಳೆಯದಿ ।
ಎದ್ದನು ರಣರಾಮ ಎರಡು ಸಾವಿರ ಬಲದಿ
ಎದ್ದ ಮನ್ನೆಯರೊಡಗೊಂಡು ॥೨೧೦॥

ಬಾದೂರ ಬಲವಂತ ವೀರಸಂಗಮ ರಾಯ
ಬಾಣೆಯ ಮುದ್ದ ಎಡಗೈಯ ।
ಮಾದಿಗ ಹಂಪನು ನಾಗರಸು ಮಂತ್ರಿಗಳು
ಪ್ರವೀಣರೊಡಗೊಂಡು ನಡೆಯೆ ॥೨೧೧॥

ಮುತ್ತಿನ ಪಲ್ಲಕ್ಕಿ ಹತ್ತಿ ಚೆನ್ನಿಗ ರಾಮ
ಪಕ್ಷಿವಾಹನ ಸುತನಂತೆ ।
ಎತ್ತಿಸಾರುವ ಕಹಳೆ ಎಡಬಲದಿ ಮಂತ್ರಿಗಳು ಆ
ದಿತ್ಯನ ಪ್ರಭೆಯಂತೆ ನಡೆಯೆ ॥೨೧೨॥

ಬರುತಿರಲು ಭಾಗ್ಯದ ಜಯಲಕ್ಷ್ಮಿ ಸೊಬಗಿಂಗೆ
ಕಡಲಂತೆ ಆತನ ಕಳೆಯೊಳಗೆ ।
ನಡೆಯಲು ಆ ಪುರದ ಜನಕೆಲ್ಲ ರತ್ನದ
ಕಿರಣ ಪ್ರಕಾಶದಿ ತೋರೆ ॥೨೧೩॥

ರಾಯ ರಾಮಗೆ ಲಿಂಗ ತೋರುತ ಆ ಪುರದ
ಆಯ ವರ್ಣದ ಬೀದಿಗಳನು ।
ಧರಣಿಯೊಳಗೆ ಇದು ಗುರುತರ ಸ್ಥಳವಿಹುದು
ಹರಿಹರ ಬ್ರಹ್ಮಗೆ ಮೊದಲು ॥೨೧೪॥

ಮೂರು ಮೂರ್ತಿಗಳೆಲ್ಲ ಸುಳಿಯಲಮ್ಮರು ಮಿಕ್ಕ
ನರರಿಗೆ ಮುಂದೆ ಸಾಧನವೆ ।
ಅದು ಹೇಗೆ ಲಿಂಗಣ್ಣಾ ಇದು ಚೋದ್ಯವೆನಿಸುವುದು
ರಜತಾದ್ರಿ ಒಡೆಯನ ಗೆದ್ದ ॥೨೧೫॥

ಸುರಮುನಿ ದೈತ್ಯರು ಒಳಗಾಗಿ ನಾ ಕಾಣೆ
ನರರೊಳಗಿಹುದೆ ಈ ತ್ರಾಣ ॥೨೧೬॥

ಕುರುಹುಂಟು ರಣರಾಮ ಹರನು ನಾರದ ಕದ್ದು
ಕೊರೆದರು ಕನ್ನ ಈ ಬಳಿಯ
ದೊರೆಗಳ ಒಡವೆಯ ಕದ್ದು ಗುಂಡಯ್ಯಗಳ
ಮೊರೆ ಹೊಗಲು ಶೂಲವೇರಿದನು ॥೨೧೭॥

ಇದು ಹೇಳೊ ಇನ್ನೊಮ್ಮೆ ಶರಣರ ನುಡಿಗಳನು
ಸುಡು ನಿನ್ನ ಊರಿನ ಬಲವ ।
ಗಿರಿಜಾವಲ್ಲಭ ಮೆಚ್ಚಿ ಗುಂಡಯ್ಯ ಒಯ್ಯಲ್ಕೆ
ಧರಣಿಯೊಳ್ ಚೋರನೆನಿಸಿದನು ॥೨೧೮॥

ಕಳವು ಮಾಡಿದ ಸುದ್ದಿ ಕಲಿಯು ದ್ವಾಪರದೊಳು
ತಿಳಿದಲ್ಲಿ ನೀ ಪೇಳೊ ಲಿಂಗ।
ನಲಿದು ಲಾಲಿಸು ಭೂಪ ತಲೆಯೆರೆಡು ಇಲ್ಲಿಗೆ
ಕಳೆಯಲು ರುದ್ರನಿಗೆ ಮೂರು ॥೨೧೯॥

ನಗರದ ಬಲವೇನೊ ತೆಗೆದೊಗೆವ ಅಗಣಿತರುಂಟು
ಪಡೆದ ಲಿಖಿತವು ತೀರಿ ಬರಲು ।
ಕಡಲೊಳು ಕೂರ್ಮನ ನಡು ಬೆನ್ನಿನೊಳಗಿರ್ದ
ಮುಳುಗದೆ ದ್ವಾರಕಪುರವು ॥೨೨೦॥

ಊರಿನ ಘನ ಪಾತ್ರ ಹೇಳಬೇಡಯ್ಯ ಲಿಂಗ
ರೋಮದೊಳಗೆ ಇದು ಎನ್ನ ।
ಆಡಬಾರದು ಮುಂದೆ ನೋಡುವಾ ನಡೆಯಣ್ಣಾ
ರೂಢೀಶನೊಲುಮೆ ಹೋಗಿಹುದೊ ॥೨೨೧॥

ಬರುತಿರ್ಪ ರಾಮನ ತರಳೆ ಸ್ತ್ರೀಯರು ನೋಡಿ
ನಯನ ಮುಚ್ಚದೆ ಬಾಯಿ ತೆರೆದು ।
ಭುವನದೊಳಗೆ ಉಂಟೆ ಇವನ ಪೋಲುವ ಯುವಕ
ನಯನ ಸಾಲದು ನೋಡುವುದಕೆ ॥೨೨೨॥

ಕಣ್ಣೆರಡು ಸಾಲವು ಇನ್ನೊಂದು ತಮಗಿಲ್ಲ
ಹುಣ್ಣಿವೆ ಚಂದ್ರನಂತಿರುವ ।
ನಮ್ಮಂಥ ಪಾಪಿಗಳ ಕಣ್ಣೆತ್ತಿ ನೋಡುವನೆ
ಧರ್ಮಿ ತಾನಾಗಿ ತೋರುವನು ॥೨೨೩॥

ನೋಡಿ ಕಂಡವರೆಲ್ಲ ಓಡಿ ತಮ್ಮಯ ಬಳಗ
ಊರ ಮನೆಗೆಲ್ಲ ಪೇಳಿದರು ।
ಕೇಳಿರೆ ಅಕ್ಕಯ್ಯ ನಮ್ಮಯ ಪುರಕೊಬ್ಬ
ಗೋವಿಂದ ಸುತನು ಬಂದಿಹನು ॥೨೨೪॥

ನೋಡುವ ಬನ್ನಿರೇ ತಾಯಿ ಕೂಡಿದ ಸುಖ ಉಂಟು
ನೋಡನೆ ಎಮ್ಮ ದೃಷ್ಟಿಯಲಿ ।
ಬೇಡ ಹೇಳಿರೆ ಮುಂದೆ ಪುರುಷಯೋಗದ ಪಾಡು
ಮಾತಾಡಿದರೆ ಸಾಕು ಪ್ರೀತಿಯಲಿ ॥೨೨೫॥

ಮುಕುಂದನ ಮಗನು ಸತ್ತನೆಂಬರು ಬರಿದೆ
ಹುಟ್ಟಿ ಬೆಳೆದನು ಈ ಪುರಕೆ ।

ಚಿತ್ತದೊಳ್ತರಳೆಯರು ಮನಮುಟ್ಟಿ ನೆನೆಯಲು
ಪುತ್ರ ಹುಟ್ಟವೇನವನ ತದ್ರೂಪ ||೨೨೬||

ಪಡೆದಾನು ಹರನೊಳು ಹಡೆದಾಕೆ ಎಂತುಂಟು ಕೈ
ವಿಡಿದ ಕಾಂತೆಯ ಭೋಗತಕೆಣೆಯೆ |
ಸುಡು ನಮ್ಮ ನಾರಿತ್ವ ಒಂದಿರುಳು ಇವನೊಳು ಬಾಳಿ
ಅಳಿದರೆ ಗತಿಯುಂಟು ಮುಂದೆ ||೨೨೭||

ಕಾಶಿ ರಾಮೇಶ್ವರ ಶ್ರೀಶೈಲ ಪರುವತ ಗೋ
ಕರ್ಣ ಉಡುಪಿ [ಬ]ನವಾಸಿ |
ಲೋಕತೀರ್ಥವನೆಂದು ಉಪವಾಸ ನಡೆಸಲು ಇಂಥ
ಜ್ಯೋತಿರೂಪನ ಪಡೆಯಲರಿದು ||೨೨೮||

ಕಾಮಿಸಿ ಬಾಲೆಯ ರಾಮಗೆ ಮರುಳಾಗೆ
ಮಾನಾಭಿಮಾನವ ತೊರೆದು |
ಆಲಯವ ಬಿಡುವ ಸ್ತ್ರೀಯರ ನೋಡಿ ರಾಮಯ್ಯ
ತಾಯಿ ತಂಗಿಯರಿಗೆ ಸಮವೆಂದ ||೨೨೯||

ರೂಪ ಪಡೆಯಲು ಪುಷ್ಪ ಕುರುಡಿ ಕುರೂಪಿಯಾಗಲು ಹೀನ
ರೀತಿಗೆಡಲು ಹಾಸ್ಯ ಜನಕೆ ||
ಪಾಪಿಯಾಗಲು ಪುಣ್ಯ ಹೀನನೆಂಬರು ಲಿಂಗ
ಲೋಕ ನೆಚ್ಚಿಸಲು ಹರಗಳವೆ ||೨೩೦||

ಪರನಾರಿಯರ ಸಹೋದರ ಹರಿಶ್ಚಂದ್ರ ಭಲರೆಂದು
ಬಿರಿದಿನ ಕಹಳೆ ಸಾರುತಿರಲು |
ದೊರೆ ರುದ್ರರಾಯನ ಅರಮನೆಯ ಕಾಣುತ ಲಿಂಗ
ಒರೆದನು ರಾಮ ಭೂಪಾಲಗೆ ||೨೩೧||

ರುದ್ರನ ಅರಮನೆಗೆ ವಜ್ರದ ತೊಲೆಕಂಬ
ಇದ್ದ ಕೆಲಸಗಳು ಅಪರಂಜಿ |
ಅರ್ಧನಾರಿಯ ಪೂಜೆ ಆವಲ್ಲಿ ಶಿವಮಯವು
ಹೊದ್ದಲಮ್ಮವು ಪೇತು ಭೂಪ ||೨೩೨||

ಕಾಸಿ ಕೆಲಸದ ಕಲ್ಲು ಸೀಸವೆರಕದ ಕೋಟೆ
ರಣಭೂತಕಾಗಲು ಎಂಟು ಮುಖದಿ ।
ರಾತ್ರಿಯೆ ಹಗಲಾಗಿ ರಾಯ ರುದ್ರನ ಮನೆಯು
ಈ ಕಲಿಗೆ ಹೇಮದ ಗಿರಿಯು ||೨೩೩||

ಮದಗಜದ ಲಾಯಗಳು ಮಣಿವ ನಾಟಕಶಾಲೆ
ಚದುರಂಗ ಬೀದಿ ಚಾವಡಿಯು ।
ಹಡಗಿನೊಳ್ ಬಂದಂಥ ನಡೆ ಘನ ಲಾಯಗಳು
ಹಿಡಿ ಬೇಡಿ ಮೂರು ಸಾವಿರವು ||೨೩೪||

ವಾಣಿ ವೈಶ್ಯರ ಬೀದಿ ಮೇಲೆ ಒಂಟೆಯ ಲಾಯ
ಇದು ಪಾಳೆಗಾರರ ಗೃಹವು ।
ಮೂರು ರಾಯರು ರುದ್ರನ ಕಾದು ಕೊಂಡಿರುವುದು
ಊಳಿಗಕೆ ಕಡೆಯಾಗಿ ಭೂಪ ||೨೩೫||

ನಗರದ ನಡುಮಧ್ಯೆ ಅಘಹರನ ಆಲಯವು
ಶರಭೇಂದ್ರ ಮೂರ್ತಿಯ ನೆಲೆಯು ।
ಪರಿಣಾಮದೊಳು ಪೇಳಿ ದೊರೆ ರುದ್ರನಿರುವಂಥ
ಸದರಿನೆಡೆಗೆ ಬಂದರಾಗ ||೨೩೬||

ಕಾಯ್ದು ವಾಲೈಸುವ ಕರಿ ತುರಗ ಕಾಲಾಳು
ಕಾಣುತ್ತ ರಾಮನಾಶ್ಚರಿಯ ।
ಆನೆಯ ಮೊತ್ತಕ್ಕೆ ಭೇರುಂಡನು ಇಳಿದಂತೆ
ಹಾರಿತ್ತು ಎಲ್ಲರ ಎದೆಯು ||೨೩೭||

ರಾಯ ರಾಮ[ನು ನಿಲೆ] ನೋಡಿ ರುದ್ರನ ಮಂದಿ
ಸೂರ್ಯನೆದುರು ತಾರೆಗಳು।
ತೋರಲಮ್ಮದೆ ಕಳೆಯು ಅಡಗುವಂದದಿ ಇವನು
ದೇವ ಪಿಂಡವು ನರನಲ್ಲ ||೨೩೮||

ವಾಲಗಗೊಡುತಿರ್ಪ ಪರಿವಾರ ಎಲ್ಲವು ಎದ್ದು
ದಾರಿಯ ಬಿಟ್ಟರಾ ಕ್ಷಣಕೆ ।

ಮಾರಿಯ ಕರಕೊಂಡ ಕೊಣಬಿಗನ ತೆರನಂತೆ
ಓರಂತೆ ಕರ[ಗಳ] ಮುಗಿದು ॥೨೬೯॥

ಏರಿದ ಪಲ್ಲಕ್ಕಿ ಇಳಿದು ಚೆನ್ನಿಗರಾಮ
ಮೇಲೆ ಲಿಂಗನ ಕರವಿಡಿದು ।
ಸಾಗಲು ಕಿರಣವು ಏರು ವಂದದಿ ಸದರ
ಲಾಗವ ಹಸ್ತದೊಳ್ ನಡೆಯೆ ॥೨೭೦॥

ಮುತ್ತಿನ ಸತ್ತಿಗೆ ಇತ್ತರದೊಳು ಪಿಡಿದು
ಎತ್ತಿ [ಹಾ]ರಿಸುವ ಚಾಮರವು ।
ಒತ್ತಿನೊಳಗೆ ಬರುವ ಮಂತ್ರಿ ಮನ್ನೆಯರೊಳಗೆ
ಶುಕ್ರನಂದದಿ ರಾಮ ಬರಲು ॥೨೭೧॥

ರುದ್ರನ ಎಡಬಲದಿ ಇದ್ದ ದೊರೆಗಳು ಮಂತ್ರಿ
ಎದ್ದರು ಎದೆಯು ಜಜ್ಜರಿಸೆ ।
ಬಂದಹುದು ಬಹುಕಾರ್ಯ ಗೆದ್ದ ಭೀಮನ ಪೋಲ್ವ
ವಜ್ರಕಾಯದ ಹನುಮಂತ ॥೨೭೨॥

ಇದಿರೆದ್ದು ಬಂದರು ದೊರೆಗಳು ತಲ್ಲಣಿಸಿ
ಹರುಷವೆ ರಣರಂಗ ರಾಮ।
ಕರಗಳೆಲ್ಲವ ಪಿಡಿದು ಕಾಂತ ರುದ್ರನು ಇರುವ
ಸದರು ಸಿಂಹಾಸನಕೆ ನಡೆಯೆ ॥೨೭೩॥

ಬರುವ ರಾಮನ ದಿಗಿಲ ದೊರೆಯು ರುದ್ರನು ನೋಡಿ
ಪಡೆದಳು ಪಾರ್ಥನ ತೆರದಿ ।
ಹಡೆದೇನು ನೂರೆಂಟು ಸಗಣೆಯ ಹುಳದಂತೆ ಗ
ರುಡನಂದದಿ ಸುತನೊಬ್ಬ ಸಾಕು ॥೨೭೪॥

ಗರುಡನ ಕಂಡಂಥ ಫಣಿರಾಜನಂದದಿ ರುದ್ರ
ಶಿರವ ತೂಗುತ್ತ ಮನದೊಳಗೆ।
ದೊರೆ ಕಂಪಿಲಾತ್ಮಜನೆ ಹರುಷವೆ ಮನಪ್ರೀತಿ ನಿ
ಮ್ಮರಸು ರಾಜೇಂದ್ರ ಪರಿಣಾಮವೆ ॥೨೭೫॥

ಪರಿಣಾಮ ಧರಣೀಶ ಗಣ ರುದ್ರ ನಿಮ್ಮಯ ದಿನ
ಚರಿಯ ಕೇಳುವರು ಪ್ರೀತಿಯಲಿ ।
ಹರೆಯ ಹೋಗಲು ಹಣ್ಣು ಉದುರು ಎಲೆಗೆ ಊರು
ದೂರವಾದವರ ಮಾತೇನು ॥೧೪೬॥

ಕರವ ಮುಗಿಯದೆ ರಾಮ ಕೈಯ ಪಿಡಿದು ಬೇರೆ
ಸದರ ಮಾಡಿಸಿ ಬೇರೆ ಕುಳಿತು ।
ಪರಿವಾರ ಮಂತ್ರಿಗಳು ಎಡಬಲದೊಳು ನಿಂದು
ಸಮರಸದ ಮಾತಾಡುತಿರಲು ॥೧೪೭॥

ತರಳ ಪುತ್ರನೆ ಕೇಳು ಹಿರಿಯ ಕಂಪಿಲ ನಿಮ್ಮ
ಗಣಪತಿರಾಯನ ಕಿರಿಯ ತರಳ।
ಮಲೆತವರಿಗೆ ಗಂಡ ಹರಿಮೀಸೆಗ[ಳ]ವಗೆ ಎಮ್ಮ
ನಗರ ಮುತ್ತಿದ ಕಾಲದೊಳಗೆ ॥೧೪೮॥

ಧರೆಗಧಿಕ ಹಂಪೆಯ ವರಪುಣ್ಯಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ದೊರೆ ರಾಮನೋರ್ಗಲ್ಲ ಅರಸು ರುದ್ರನ ಕಂಡು
ಇರುವ ಠಾವಿಗೆ ಸಂಧಿ [ಎಂಟು] ॥೧೪೯॥*

❖❖

* + ಅಂತು ಸಂಧಿ ೮ಕ್ಕಂ ಪದನು ೧೪೯ಕ್ಕಂ ಮಂಗಳ ಮಹಾಶ್ರೀ (ಮೂ).

ಸಂಧಿ : ಒಂಬತ್ತು

❖

ಓರುಗಲ್ಲ ರುದ್ರನ ಆಸ್ಥಾನ ಪ್ರವೇಶ-ಯುದ್ಧ

*ಶ್ರೀ ಗಿರಿಜೇ[ಶನೆ] ಭಾಗೀರಥಿ ಪ್ರಿಯ
ಭೋಗಿಭೂಷಣ ಭಾಳನೇತ್ರ।
ಆಗಮಕೊಡೆಯನೆ ಮೂಜಗ ಸಲಹುವ
ನಾಗಭೂಷಣ ನಗಚಾಪ ॥೧॥

ಅಜನ ಶಿರಗಳನರಿದು ಧರಿಸಿ ಕಪಾಲವ
ಜಗದ ಮಣಿಹವನು ನರಹರಿಗೆ ।
ಮಿಗಿಲಾಗಿ ಕೊಟ್ಟು ಧರೆಯೊಳು ತಿರಿದುಂಡ
ರಜತಾದ್ರಿ ಒಡೆಯ ಕೊಡು ಮತಿಯ ॥೨॥

ಹಿಮಗಿರಿ ರಾಜನ ಮಗಳ ಮೋಹಾಂಗನೆ
ತನುಜನೊಳಗೆ ಲಯವಾದ।
ಮಗಳ ಜೀವರೊಳಗಾದ ಕರಿಮುಖನ
ಪಡೆದವನೇ ಕೊಡು ಮತಿಯ ॥೩॥

ಕಾಶಿ ರಾಮೇಶ್ವರಕೆ ಈಸು ವೆಗ್ಗಳವಾದ
ತ್ರಾಸಿಲಿ ತೂಗಿ ನೋಡಿದರೆ ।
ಶ್ರೀಶೈಲ ಹಂಪೆಯ ವೀರನೆ ವಿರುಪಾಕ್ಷ
ಲೇಸ ಪಾಲಿಪುದು ಈ ಕೃತಿಯ ॥೪॥

---

* + ರುದ್ರರಾಯನ ಭೇಟಿಗೆ ಕರಕೊಂಡು ಹೋದ ಸಂಧಿ । ಶ್ರೀ ವಿರುಪಾಕ್ಷಾಯ ನಮಃ, ಶ್ರೀ ಗುರುವೆ ಗತಿ ಮತಿ, ಶ್ರೀ ಗುರು ಬಸವಲಿಂಗಾಯ ನಮಃ (ಮೂ)

ಮುಂದಣ ಕೃತಿ ಕೇಳಿ ಮಂದಮಾಡದ ಜನರು
ಕಂಡರೆ ನಿಮಗೆ ಧರ್ಮಗಳು।
ಕೊಂದ ರಾಮ[ನು] ಮೋಸದಿಂದಲಿ ಎನಬೇಡಿ
ಮುಂದರಿತು ಪೇಳಿದೆನು ಬಿರಿದ ॥೫॥

ನಂಬುಯೆಂದರೆ ಅಡವಿ ಮೃಗಗಳು ನಿಲುವವು
ಕೊಂದರೆ ಅವಗೆ ಕರ್ಮಗಳು।
ಹಿಂದೆ ಹಾಕಿದ ತನ್ನ ಬಿರುದನು ಬಿಡೆನೆನಲು
ಎಂದ ಬಳಿಕ ತಪ್ಪ ತೋರಿ ॥೬॥

ಅಜಹರಿ ರುದ್ರನು ತ್ರಿಪುರ ಕಾರ್ಯಕೆ ಹೋಗಿ
ಗರುಡಾಹನೆ ಹೊಗಲಿಲವೆ।
ಪರಮ ಪತಿವ್ರತೆಯರ ತಪನಿಷ್ಠೆಯಳಿಯದ ಮುನ್ನ
ಒಳಗ ಮಾಡಿದರೆ ಆ ಪುರವ ॥೭॥

ತಾಯಿ ಪೇಳಲು ತರಳ ಸಂಧಾನಕೆ ಬರಲೊಬ್ಬ
ಭೂರಮಣ ಬಭ್ರುವಾಹನನು ।
ಹೀನ ನುಡಿಯಲು ಪಾರ್ಥ ಛಲವೇರಿ ಪಿತನೊಳು
ಹೊಡೆದ ಮಾನಹೀನವ ತೋರಿಯಿದ್ದಳಗೆ ॥೮॥

ಆಡಿ ತೋರದೆ ಮನದಿ ಇಟ್ಟುಕೊಂಡರೆ ಹೀನ
ಭೀಮ ಕೀಚಕನ ಕೊಂದಂತೆ ।
ನಾರಿವೇಷವ ತೊಟ್ಟು ಬೇರೆ ಕೊಲ್ಲುವನಲ್ಲ
ಸಾರಿದ ಬಿರಿದ ಬಿಡೆನೆಂದ ॥೯॥

ಕೋಟಿ ಬಲದವನೂರ ಸಲ್ವದಿ ತಾ ಪೊಕ್ಕು
ಹಾಕಿದ ಬಿರಿದ ಹೊಗಳಿಸಲು ।
ಭೂತೇಶನೊಲುಮೆಯ ವರಪಿಂಡವಾಗಲು ಹೊರಟ
ವೇಶಿಯಾಗಲು ಸಭೆ ಮಧ್ಯೆ ಜಯಿಸುವೆ ॥೧೦॥

ನಡೆಸುವೆ ಕೃತಿಯನು ಸ್ಥಿತಿಯದನಾಡದೆ
ಗತಿಯನು ಕೇಳೋದಿದಲ್ಲಿ ।

ಮತಿವಂತ ಪ್ರೌಢರು ಮನವೊಲಿದು ಲಾಲಿಸಿ
ಒರೆವೆನು ವೀರನ ಕೃತಿಯ ॥೧೧॥

ಪೇಳುವೆನು ತಿಳಿದಷ್ಟು ಪದದೊಳು ತಪ್ಪಿರಲು
ಕೂಡಿಕೊಂಡು ತಿದ್ದಿ ಹೇಳುವುದು ಬಲ್ಲವರು।
ಮೂಢ ಮರುಳನೆಂದು ಆಡಿದರೆ ಆ ಕರ್ಮ
ಮೂಡುವುದು ನಿಮ್ಮ ಚಿತ್ತದಲಿ ॥೧೨॥

ಕರ್ಮಧರ್ಮಗಳನು ನಿಮ್ಮೆಡೆಗೆ ಒಪ್ಪಿಸಿ ಮುಂದೆ
ನಡೆಸುವೆ ರಾಮನ ಕಥೆಯ।
ಹಡೆದ ತಂದೆಯ ಕೂಡೆ ಕದನವೇತಕೆ ಪುತ್ರ
ನಡೆಯಲ್ಲವೆಂದ ರಾಜೇಂದ್ರ ॥೧೩॥

ಕಷ್ಟವೇತಕೆ ಪುತ್ರ ಪೆತ್ತವರು ಬಯ್ಯಲು
ಇಟ್ಟಂಬಿನಂತೆ ಬರಬಹುದೆ।
ಮುಪ್ಪಿನ ಕಾಲದಲಿ ದುಃಖಕಿಟ್ಟು ಬರಲು ಮುಂದೆ
ಒಪ್ಪುವುದೆ ಸದ್ಗತಿ ಕೈವಲ್ಯ ॥೧೪॥

ತಂದೆ ಮಗನಿಗೆ ಜಗಳ ಬಂದರೆ ಬಲ್ಲವ[ರು]
ಒಂದುಗೂ[ಡಿಸರೆ] ಜ್ಞಾ[ನಿ]ಗಳನು ।
ಮುಂದಲ್ಲಿ ತಿಳಿದಂಥ ಪ್ರಧಾನರಿಲ್ಲದ ಮೇಲೆ
ಚಂದವಪ್ಪುದೆ ರಾಜಾಸ್ಥಾನವು ॥೧೫॥

ಸರ್ವ ವಿವೇಕವ ತಿಳಿದ ಕಂಪಿಲನಿಗೆ
ಕೆಡು ಬುದ್ಧಿ ಅವಗೇಕೆ ಬರಲು।
ಕಡೆಗವನ ನೋಡುವ ಹಡೆದ ಜನನಿಯ ಗರ್ಭ
ಉರಿಯದೆ ನೀನೆದ್ದು ಬರಲು ॥೧೬॥

ಬಾಲನೆ ಬರಸಲ್ಲ ಕಾಲ ತೆಗೆದು ಮುನ್ನ
ಆಡಲು ಹಡೆದವರೊಂದು।
ಬೇರಿಹರೆ ಮಕ್ಕಳು ಮಾಡುವರೆ ಪಟ್ಟವನು
ಜಾಣತನಗಳನೇನೆಂಬೆ ॥೧೭॥

ಮಕ್ಕಳು ಎರಡಿರಲು ಸತ್ತರೆ ಮುನ್ನೊಬ್ಬ
ಒಕ್ಕಣ್ಣಿನೊಳಗೆ ಜೀವಿಪರು ।
ಹುಟ್ಟುತಲೆ ಒಂದಾಗಿ ಎಡೆಬೇಂಟೆಯಲಿ ಹೋದಂಥ
ಅರ್ಥವಾಯಿತ್ತು ಕಂಪಿಲಗೆ ॥೧೮॥

ಜಾಣನಲ್ಲವು ಅರಸು ಗಾಣಕ್ಕೆ ಒಂದು
ಕಾಲನು ಮುರಿದಿಟ್ಟಾಗದೆ ।
ಮೇಲೊಂದು ತರಲಿಕೆ ತ್ರಾಣಿಲ್ಲ ಕೈಗುಂದಿ
ಜೋಳಿಗೆಯ ಬಲಗೊಂಡ ತೆರನು ॥೧೯॥

ಯಾರೆಂಬುದೇನು ಪ್ರಾರಬ್ಧದ ಫಲವಿದು
ಮಾಡದೆ ಕುಂತಿಯ ಸುತರ ।
ಆರಣ್ಯವಾಸಕ್ಕೆ ತಾರದೆ ವಿಧಿ ಮುನ್ನ
ಮೀರಲಾಗದು ಪೂರ್ವಲಿಖಿತ ॥೨೦॥

ನೋಡಿದ ರಾಜೇಂದ್ರ ರಾಯ ರಾಮನ ಮಂದಿ
ಸಾವಿರ ಖಂಡೆ ಕತ್ತಿಹುದು ।
ಜೋಡಹುದು ಎನ್ನ ಪುತ್ರಗೆ ಈ ರಾಮ ಬಲದ
ಭಾಗದ ಭುಜವೆಂದ ಮನದಿ ॥೨೧॥

ರಾಯ ರಾಮನೆ ಕೇಳು ಬೇಕಾದ ಭೂಮಿಯ ಕೊಡುವೆ
ತಾಯಿ ತಂದೆಗಳ ಮರೆಸುವೆನು ।
ಯಾವ ಕಾರ್ಯಗಳನು ನಿನಗರುಹಿ ಮಾಡುವೆ ಎನ್ನ
ಕುಮಾರಗೆ ಹೆಚ್ಚಾಗಿ ಕಾಣ್ವೆ ॥೨೨॥

ತರಿಸಿದನು ಉಡುಗೊರೆಯ ರತ್ನಭೂಷಣವನು
ಮಡಗಿಸಿ ಹೊನ್ನ ತಟ್ಟೆಯಲಿ ।
ತರಳ ರಾಮಗೆ ಕೊಟ್ಟು ಒಡನಿಪ್ಪ ಮಾನ್ಯರಿಗೆ
ಕೊಡಿಸಿದ ರಾ[ಯ]ನುಡುಗೊರೆಯ ॥೨೩॥

ರುದ್ರರಾಯನು ಕರೆದು ಮುದ್ದುಲಿಂಗನ ಬೇಗ
ಶೀಘ್ರದಿ ರಾಮನ ಬಲಕೆ ।

ಉಗ್ರಾಣಗಳನಿತ್ತು ಸಣ್ಣಕ್ಕಿ ಬೇಳೆಯು ಬೆಲ್ಲ
ಹೊರಗಿರ್ದ ದಂಡಿಗೆ ಪಡಿಯ ಹಾಕೊ ||೨೪||

ಅಕ್ಕಿ ಸಕ್ಕರೆ ಜೇನುತುಪ್ಪ ಉಪ್ಪಿನಕಾಯಿ
ಲೆಕ್ಕವಿಲ್ಲದೆ ಹಾಕೊ ಹುರುಳಿ ।
ತಪ್ಪದೆ ಸಾಗಿಸಿ ಲಿಂಗಣ್ಣ ಹೊಕ್ಕನು
ಕಾಟಣ್ಣನ ಹೊರದಂಡ ||೨೫||

ರಾಯ ರಾಮನ ಬಲಕೆ ಈ ಬಗೆಯ ಸನ್ನಹ ಮಾಡಿ
ಲಿಂಗಣ್ಣ ಹೇಳಿದ ಕಾಟಣ್ಣಗೆ ।
ಆದ ವಿವರವೆಲ್ಲ ಸೇರಿತು ಕೈಗಂಟು
ಕಾರ್ಯವುಂಟು ಮುನ್ನ ಮಾಡೋದು ||೨೬||

ರಾಯ ರಾಮನು ರುದ್ರರಾಯರಿರ್ವರು ಇಲ್ಲಿ
[ಆ]ಡುವರು ಸಮಬೆರಸಿ ವಚನ ।
ಮೂಳ ರತ್ನಿಯ ಮೂಗ ಕೊಯ್ಯದೆ ಬಂ[ದೆ]
ಏನೆಂಬೆ ನಿನ್ನ[ನು] ಪುತ್ರ ||೨೭||

ಕೇಳಿರೈ ಮಂತ್ರಿಗಳು ಬಾಲನುದಯ ಶಾಂತಿ
ಸಾಗರಕ್ಕೆ ಸಮವೆನ್ನಬಹುದು ।
ಸೂಳೆಯ ಮಾತಿಗೆ ಮೆಲ್ನುಡಿಯ ಬೀರಲು ಪಿತನು
ಸೈರಿಪನೆ ಇನ್ನೊಬ್ಬನಾಗೆ ||೨೮||

ರಾಯ ಭೂಪನೆ ಕೇಳು ರಾಯರೊಳಿದು ಸಹಜ
ಪೂರ್ವದ ಕಥೆಯ ಕೇಳರಿಯಾ ।
ಆ[ಜ್ಞೆ]ಯ ಮಂತ್ರಿಕುಮಾರರಿಗೆ ಪಿತ ಮುನಿದು
ಮಾಡದೆ ದೇಶಾಂತ್ರವನು ||೨೯||

ಹಿಂದೊಬ್ಬ ವಿಜಯೇಂದ್ರರಾಯನೀ ತೆರದೊಳು
ಕೊಂದುದಿಲ್ಲವೆ ತನ್ನ ಮಗನ।
ಕಂದನು ಜಯಸೇನ ಧರ್ಮಿಷ್ಟನಾಗಲು ಗೆದ್ದು
ಕೊಂಡದೊಳಳಿದು ಪುಟ್ಟುವುದು ||೩೦||

ಹೇಳಬಹುದು ಮಂತ್ರಿ ಕೇಳಿ ಬಲ್ಲೆನು ನಾ ಮದನ
ಮೋಹಿನಿಯ ತಂದ ಜಯಸೇನ।
ನೋಡಲು ಅದಕಿದು ಜೋಡಿನ ಪ್ರತಿಯೆಂದು
ಗಹಗಹಿಸಿ ನಗಲು ರಾಜೇಂದ್ರ ||೩೧||

ವಿಜಯರಾಯನ ಸುದ್ದಿ ಈ ಮುದಿಯ ಕಂಪಿಲನೊಳು
ಒದಗಿತು ಅವಗೆ ಕಡೆಗಾಲ।
ಹೆಡತಲೆಯ ಮೃತ್ಯು ಹೆಣ್ಣು ರಂಡೆರ ಮೆಚ್ಚಿ
ಮಗನ ಬಿಡುವರೆ ಮರುಳ ಅರಸು ||೩೨||

ಬಿಡು ಪುತ್ರ ಕಂಪಿಲನ ಅಡಿ ಆಸೆ ಬೇಡಿನ್ನು
ನಡೆಸುವೆ ಅವಗೆ ಮಿಗಿಲಾಗಿ ।
ಕೊಡುವೆನು ನಂಬಿಗೆಯ ಹಡೆದ ಮಗನಿಗೆ ನಿನ್ನ
ಒಡನೆ ಹೆಚ್ಚಾಗಿ ಕಾಣುವೆನು ||೩೩||

ಮುನಿದು ನೀ ಬರುವಾಗ ಬಲವನೇತಕೆ ತಂದೆ
ಕಳುಹಿ ಬಿ[ಡು] ಹೋ[ಗಲಿ] ಎನುತ।
ಮರಳಿ ಹೋದೆನು ಎಂಬ ಮಮಕಾರವುಳ್ಳೊಡೆ ಪೇಳು
ಬರೆದು ತಿದ್ದುವೆನವನ ಮನವ ||೩೪||

ರಾಜೇಂದ್ರ ಲಾಲಿಸು ಕೈಯಾರೆ ಕಟ್ಟಿದ ಬಲವು
ಪ್ರಾಣವಳಿಯದೆ ತನ್ನ ಬಿಡರು ।
ಸಾವಿರ ವರಹವ ಸಂಬಳವಾಗಿತ್ತ[ರೂ] ಪರರ
ವಾಲೈಸಿ ಕರವ ಮುಗಿ[ಯರು] ||೩೫||

ಆಳುವುಳ್ಳೆ[ಡೆ] ಅರಸು ತಾಯಿವುಳ್ಳೊಡೆ ಸುಖವು
ಪ್ರಾಣ ಹಂಗ್ತರಿದವಗೆ ಕಾರ್ಯ।
ವೀರ ವಿಕ್ರಮನಾಗೆ ತಾನೊರ್ವ ಬರಲು ಅರಸೇ
ವಿಚಾರ ಮಾಡುವರೆ ಅವನಿಯಲಿ ||೩೬||

ಮಂದಿ ಮಾರ್ಬಲಗೂಡಿ ಕಾಣಿಸಿಕೊಳ್ಳಲು ದಯ
ಗೊಂಡು ನೀವೆನ್ನ ಕರೆಸಿದಿರಿ।

ಮುಂಡೆಯ ತೆರದೊಲು ಮತ್ತೊಬ್ಬ ಬಂದಿರಲು
ಗೊಂಬುವದೆ ಗಣನೆ ನೀ ಮೊದಲು ||೩೭||

ಬಂದುದು ವಿಷಗಳಿಗೆ ತಂದೆ ತನುಜಗೆ ಕದನ
ಹೊಂದದೆ ಮುನ್ನೊಂದು ಗಳಿಗೆ ।
ಹಿಂದಕೆ ಕುಶಲವರು ಪಿತನ ದಂಡನೆ ಕೊಂದು
ಒಂದಾಗಲಿಲ್ಲವೆ ಕಡೆಗವರು ||೩೮||

ಮುತ್ತು ಒಡೆಯದೆ ರಾಯ ಹತ್ತುವುದೆ ಬೆಸಗೆಯು
ಸತ್ತಾತ ಮರಳಿ ಜನಿಸುವನೆ।
ಮುಕ್ತಿಯಿಲ್ಲದೆ ರಾಯ ಹೆಪ್ಪೊಡೆದ ಕ್ಷೀರವು
ತಕ್ಕಂತೆ ಆಗುವುದುಂಟೆ ||೩೯||

ಹೇಡಿ ಮಗನಾಗಲು ಹೋಗಬಲ್ಲನೆ ಮುನಿದು
ಕೋಡಿಮಿಗೆವರಿದ ಹರಿ ನೀರು ।
ಕೂಡಬಲ್ಲುದೆ ಮತ್ತೆ ಕೆರೆಯ ಸ್ಥಾನಕೆ ರಾಯ
ಮೂಢರೆನ್ನರೆ ನಿಮ್ಮ ವಾಕ್ಯ ||೪೦||

ಇಷ್ಟು ಬೇಸರವೇಕೆ ತಮ್ಮಿಚ್ಚೆಯಲಾಗದ ಹಣ್ಣು
ಒತ್ತಿ ಮಾಡಲು ರುಚಿಕರವೆ ।
ಮುಪ್ಪಿನ ಕಾಲದಿ ಮಗನಲ್ಲಿ ಬಣ್ಣನು ಕಾಬ
ಪ್ರಾಪ್ತಿಯಿರಲಿಲ್ಲ ಕಂಪಿಲಗೆ ||೪೧||

ಎಮ್ಮ ಬಾಲಗೆ ಇಮ್ಮಡಿಯಿಂದ ಕಾಣುವೆ ಮುನ್ನ
ಮರೆಸುವೆ ತಾಯಿ ತಂದೆಗಳ।
ನಿರ್ಣಯಗಳ ಮಾಡು ಹಿಂದಣ ಯೋಚನೆ ಎನ್ನ
ಕಂದಗೆ ನೀ ಹಿರಿಯನೆಂಬೆ ||೪೨||

ಹೇಳಬಹುದು ಬುದ್ಧಿ ಹಿರಿಯರಲ್ಲವೆ ರಾಯ
ಬಾಲ್ಯದೊಳಿಟ್ಟಂಥ ಬಿರಿದ।
ಕೂಲಿ ಆಸೆಗೆ ಬೆದರಿ ಕಾಲ ಪೆಂಡೆಯ ತೆಗೆಯೆ
ಕೇಳಿ ತಡೆಯಲು ಮಾ ಕಷ್ಟ ||೪೩||

ದೂರ ಶೋಧಿಸಿ ನೋಡಿ ಹೊಳೆದೊಡೆ ಸಲ್ಲದು ಮಾತು
ಸಾರಿದ ಸಕಲರು ತಿಳಿದ।
ಕ್ರೂರ ಕೊಂಡಿಗರಿಂದ ಚಾಡಿ ಕ್ಷುದ್ರಕೆ ಜಗಳ
ಮಾಡಿಕೊಂಡರೆ ಮಣ್ಣ ಕೊಡುವೆ ||೪೪||

ಮುಂದೊಮ್ಮೆ ತಿಳಿ ರಾಯ ಕಂದನ ನಿಜತರವ
ಹಿಂದಾಡೊ ಕೊಂಡೆ ಮಂತ್ರಿಗಳು।
ಹಾಗೀಗೆ ಎನಲವರ ಸೇರಿಸುವೆ ಯಮನೂರ
ಭೂಮಿ ಮುನಿಯಲು ಬಿರಿದ ಬಿಡೆನು ||೪೫||

ಬಿರಿದಿಗೆ ಬಾಳುವೆ ಶರೀರ ಇರುವನಕ
ಬರುವ ಮುಂದಣ ವೈರವ ಒರೆದೆ ।
ಸರ್ವರಿಗು ಮನಹರುಷ ಹರಣ ಕಂಡರೆ ಎನ್ನ
ಇರಿಸಿಕೊಳ್ಳುದು ಮೂರು ದಿವಸ ||೪೬||

ಹಿಡಿದಂಥ ವ್ರತ ಛಲವ ಮತ್ತಾರು ಬಿಡರೆಂದು
ನುಡಿದನು ಒಬ್ಬ ನಿಜಮಂತ್ರಿ।
ಪ್ರಹುಡವತಿಯೆಂಬ ವೇಶಿ ಬಿಟ್ಟಳೆ ಹಿಂದೆ
ಗುರುಭಕ್ತ ರಾಜೇಂದ್ರ ಕರೆಯೆ ||೪೭||

ಬಿರಿದನು ಬಿಡೆ ಅರಸೆ ದೊರೆ ರುದ್ರಭೂಪಾಲ
ಧರಣಿ ಭೂಪಾಲಕನು ಹರಿಶ್ಚಂದ್ರ।
ಸುಡುಗಾಡ ಕಾಯನೆ ಒಡೆಯನ ನೆಲ ಹಾಗ
ಮಡದಿಯಾ[ದರು] ಬಿಡಲಿಲ್ಲ ||೪೮||

ನೃಪನಿಗೆ ಮಂತ್ರಿಯು ಉಚಿತ ಪೇಳಲು ಮನಸು
[ಸ್ವಚಿತ್ತ]ವಾಗಿಯೆ ಮೇಲೇಸು।
ಹೆಚ್ಚು ಕಡಿಮೆಯ ನಡೆಸೆ ಮೂರ್ತಿಗೊಂಡಲ್ಲಿಗೆ
ಮಸ್ತಕವ ತರುವರು ಉಂಟೇ ||೪೯||

ಲೇಸು ಒಳ್ಳೆದು ಪುತ್ರ ನಡೆಯಿಂದು ಪಾಳೆಯಕೆ
ಮಾತನಾಡುವ ನಾಳೆ ದಿವಸ ।

ಭೂಪಾಲ ಬಹು ಲೇಸು ಸೋಸಿ ಎಲ್ಲರ ಮಾತ
ಲೇಸು ಕಂಡರೆ ನೋಡುವಂತೆ ||೫೦||

ಎಡಬಲದ ಮನ್ನೆಯರ ಮುಖನೋಡಿ ರಾಮನು ಏಳೆ
ಕಿಡಿಗರೆದು ಮಂದಿ ಕೈ ಮುಗಿಯೆ ।
ಕಡಿಕಡಿ ಓರ್ಗಲ್ಲ ಲಯಕರ್ತ ಹೊರಡೆಂದು
ಹಿಡಿಯಲು ಬಿರಿದಿನ ಕಹಳೆ ||೫೧||

ಕುಂಜರದ ಮೊತ್ತದಿ ಕಂಠೀರವನು ನಡೆವಂತೆ
ಬಂದು ಏರಿದ ಪಲ್ಲಕ್ಕಿಯನು ।
ಗುಂಡಿಗೆ ಗೂಟವನು ಬಲಿವಂತೆ ಭಟರು
ಬಿರಿದನು ಕೊಂಡಾಡಿ ಹೊಗಳೆ ||೫೨||

ದನುಜರ ಹೊಳಲ್ಹೊಕ್ಕ ದಿನಕರನು ಹೊರಟಂದು
ಭಲರೆ ಭೇರುಂಡ ಮಾರ್ತಂಡ।
[ಹಲ]ವಾಡಿ ಒಳಹೊಕ್ಕು ಆಳಿಕ್ಕಿ ಹೋಹರ ಗಂಡ
ಕಡೆಗೊಂಡ ನಾಡೋರ ಮಿಂಡ ||೫೩||

ಮಾರಿ ಮಲೆವರ ಗಂಡ ಮೊರೆ ಬಿದ್ದವನಿಗೆ
ಭೂಮಿ ಮುನಿಯಲು ಕೊಡದ ಬಿರಿದು।
ಬಲವಂತ ಸುರಿತಾಳ ಹಮ್ಮಿರಖಾನರ ಗಂಡ
ರಣವಿಜಯ ರಾಮಭೂಪಾಲ ||೫೪||

ಚಪ್ಪನ್ನದೇಶದಿ ಕಪ್ಪವ ಕೊಡೆನೆಂಬ
ದಿಟ್ಟರಾಯರಿಗೆ ಎದೆ ಶೂಲ ।
ಹೊಕ್ಕವನ ಬೆನ್ನಲು ಹರಮುನಿಯಲು ತಾ ಕೊಡನು
ಒಪ್ಪುವು[ದು] ಆ ಬಿರಿದು ತನಗೆ ||೫೫||

ಕಡಿಯಲಾರದೆ ರಣವ ಕದ್ದು ಹೋಹರ ಗಂಡ
ಮಡದಿಯರ ಮುಖ ನೋಡಿ ಮನೆಯ ।
ಬಡವರನು [ಅ]ಣಿ ಮಾಡಿ ಜುಣುಗು ರಾಯರ ಗಂಡ
ಮಡಗುವರ ಮಿಂಡ ಪ್ರಾಣವನು ||೫೬||

ಮೂರು ರಾಯರ ಗಂಡ ಚಾಡಿ ಕೇಳ್ವರ ಮಿಂಡ
ಓರುಗಲ್ಲವಗೆ ಎದೆಶೂಲ ।
ರಾಯ ರುದ್ರನ ಬಳಿಯ ಕಾಯ್ದು ಓಲೈಸುವ
ರಾಯರ ಗಂಡ ರಣರಾಮ ॥೫೭॥

ಹೊಗಳುವ ಬಿರಿದನು ಕೆವಣೆಯರೆಲ್ಲರು ಕೇಳಿ
ಕಿಡಿಗರೆ[ಯೆ] ಕಾಲನಂದದಲಿ ।
ಸಿಡಿಲಿನಾರ್ಭಟದೊಳು ರಾಯ ರುದ್ರನ ಮೀಸೆ
[ಕ]ಡಿದಾಡಿ ನಯನ ಕೆಂಪೇರೆ ॥೫೮॥

ರುದ್ರನ ಕೋಪದ ಆಗ್ರತೆಗಳ ಕಂಡು
ಇದ್ದ ದೊರೆಗಳು ಮೊರೆದೆದ್ದು।
ರುದ್ರಗೆ ಎರಡನೆಯ ಉಗ್ರಕೋಪಿಗಳಾಗಿ ರಾಮನ
ಕೊಬ್ಬಿ ಮುರಿವೆವು ಕೊಡು ವೀಳ್ಯ ॥೫೯॥

ಕೊಡು ರಾಯ ಬೆಸನೆಮಗೆ ಹೊಡೆದೇವು ಮೂಳನ
ನುಡಿಗೇಳಬಹುದೆ ಹೀನಾಯದ।
ಶ್ವಾನಬಲ್ಲುದೆ ಗಂಧ ದಿವ್ಯವಾಸನೆ ಫಲವ
ಚೆಂಡಾಡಿ ತರುವೆವು ತಲೆಯ ॥೬೦॥

ಕೋತಿಯ ಪಿಡಿತಂದು ಪಾಕನ್ನ ನೀಡಿದರೆ
ಸಾಕಾಗಿ ಮರನೇರಿ ಹುಬ್ಬ ।
ಹಾಕಿದ ತೆರಬಂತು ಹಲ್ಲ ಮುರಿವೆವು ರಾಯ
ನೀ ಪಾಲಿಸೆಮಗೆ ವೀಳ್ಯವನು ॥೬೧॥

ಮುನಿದು ಬಂದನು ಎಂದು ನಿಮಗೆ ಶಾಂತಿಯ ಪೇಳಿ
ಘನವ ಮಾಡಲು ಗಂಡನಾದ।
ಹುಡುಗ ಮೂಳನು ಮುಂದೆ ಘನವ ಬಲ್ಲನೆ ತಮ್ಮ
ಕುಲರೀತಿ ಮಾರ್ಗವ ಬಿಡನು ॥೬೨॥

ಧರೆಯ ರಾಯರಿಗೆಲ್ಲ ಗಂಡನೆಂಬವ ಖೂಳ
ಬರಬಹುದೆ ಮಡದಿಯರ ಕೆಳಗೆ।

ಹರಹರ ಶಿವಶಿವ ಎದೆಯ ಗರ್ವಗಳೆಂತು
ನರಿ ಸೊಕ್ಕಿ ಕರಿಗೆ ಬಗುಳ್ದಂತೆ ||೬೩||

ಭೂಪ ರುದ್ರನೆ ನಿಮ್ಮ ಪ್ರತಾಪ ಹೇಳಲು ಹರನು
ಭೀತಿ ಬಡುವನು ಜಗವರಿಯೆ।
ಮೇಕೆ ಕಾಯುವ ಮೂಳ ಈ ಬಗೆಯಾಡುವುದ ಕೇಳಿ
ಯಾಕೆಮ್ಮ ಜನ್ಮ ಹೊರೆವುದು ||೬೪||

ಕಂಡನು ಎಮ್ಮಯ ರಂಡೆ ಬಾಳಿನ ಧೈರ್ಯ
ಗಂಡನು ಎಂದು ಹೊಗಳಿಸಿದನು ।
ಹೆಂಡಿರಾದೆವು ನಾವು ಶಿವನೆಡೆಯ ಬಾಳಿದರೆ
ಕೊಂದೇನು ಕೊಡು ರಾಯ ವೀಳ್ಯ ||೬೫||

ಬಡವನ ಸತಿಗಿಂತ ಬಲ್ಲಿದನ ಮನೆಯೊಳಗೆ
ಗೌಡಿಯಾಗಿರಲು ಉತ್ತಮವು ।
ಪೊಡವಿ ರಾಯರಿಗೆಲ್ಲ ಬಲ್ಲಿದನೆನುತಾ[ನೆ] ನೀವು
ಮಡದಿಯಾದಿರಿ ಹುಡುಗನೆನಲು ||೬೬||

ಉರಿದ ಕಿಚ್ಚಿಗೆ ಎಣ್ಣೆ ಎರೆದಂತೆ ರುದ್ರಗೆ
ಉರಿದೇಳೆ ವೃದ್ಧ ಮಂತ್ರಿ ನುಡಿದ।
ಕೊಡಸಲ್ಲ ನಂಬಿಗೆಯ ತಪ್ಪಬಾರದು ರಾಯ
ದೊರೆಗಳ ಮತಾಚಾರದೊಳಗೆ ||೬೭||

ರಾಯರಿಗಿದುವಲ್ಲ ಆಡಿ ತಪ್ಪರುಯೆಂದು
ಜೀವಣ್ಣ ಮಂತ್ರಿ ಪೇಳಿದನು ।
ಕೇಡಿಗೆ ಮೊದಲಿದು ಕೊಟ್ಟ ಭಾಷೆಗೆ ತಪ್ಪೆ
ಕಾವನು ನಡೆಯೆ ಕರಿಗಳನು ||೬೮||

ಅಂಧಕನ ಕರವಿಡಿದು ಕಂಗಳನು ಪಡೆವಂತೆ
ಅಂದವಾದುದು ಎಲ್ಲರಿಗೆ।
ಮಂದವಾಗಿರ್ದವೆ ಈಗಡೆ ರಾಯನ ಕರ್ಣ ಬಿಡೆ
ಬಿರಿದನೆಂದು ಪೇಳ್ದನಾಗ ||೬೯||

ಹಾವಿನ ಮರಿಗಳನು ಹಾಲೆರೆದು ಸಾಕಲು
ರಾಯ ಹೋಗಲರಿಯದು ಆ ವಿಷವು ।
ದಾಯಾದಿ ಕಂಪಿಲನ ಕುಮಾರನೆಂಬುದ ತಿಳಿದು
ಯಾರೆಂದು ಕರೆದುದು ಇಂದು ||೭೦||

ಆಡಿದ ಅವನೊಳಗೆ ಎಳ್ಳಷ್ಟು ತಪ್ಪಿಲ್ಲ
ದೂರ ತಿಳಿದು ನೋಡಿರೆಂದ।
ಯಾರಿಗೆ ತಿಳಿಯದು ಯಮನ ವಾಹನದಂತೆ
ತೀರಿತು ಅವನಿಗೆ ಬುದ್ಧಿ ||೭೧||

ಮತ್ತೆ ಕೇಳೈ ಬುದ್ಧಿವಂತ ಮಂತ್ರಿಯು ನೀನು
ಕೆಟ್ಟು ಬಂದನುಯೆಂದು ಮನ್ನಿಸಿದೆ ।
ಕುಕ್ಕುಟ ಘನಮಾಡಿ ಪಲ್ಲಕ್ಕಿಯನೇರಿಸಲು
ತಿಪ್ಪೆವಾಸನೆಯ ಮರೆಯುವುದೆ ||೭೨||

ಶ್ವಾನ ಬೊಗಳಲು ಬ್ರಹ್ಮಸ್ಥಾನ ಕೆಡುವುದೆ ಭೂಪ
ಸಾಗಿಸಿ ಬಿಡುವ ಹೋಗೆಂದು।
ಸಾಗರ ಸಮಗಾತ್ರ ಸ್ನೇಹಿತ ನಂಬಿಗೆ ಹೋಗೆ
ಮೂರು ಮೂರ್ತಿಗಳು ಮೆಚ್ಚುವರೆ ||೭೩||

ಹಾಗೆ ಆಗಲಿ ಮಂತ್ರಿ ಸಾಗಿಸುವ ಮುಂದಕ್ಕೆ
ಪಾಲಿಸಿಕೊಂಡೆ ಧರ್ಮದಲಿ ।
ಕೇಳುತಲಿ ಎಡಬಲದ ಪಾಳ್ಯಗಾರರು ಎದ್ದು
ಚಾಡಿ ಗೆದ್ದಿತು ನಮ್ಮದಿನ್ನು ||೭೪||

ಧರಣಿಗೆ ಬಲವಂತ ಮೊನೆಗಾರನೆನುತಲಿ ನಿಮ್ಮ
ಬಳಿಯ ಕಾಯಲು ಬಾಲೆರಾಗಿ।
ನಗರೇನು ರಾಜೇಂದ್ರ ಮನೆಯ ಸತಿಯರು ಮುನ್ನ
ಈ ನುಡಿಯ ಕೇಳಿದರೆ ಹಾಸ್ಯದಲಿ ||೭೫||

ಸಾಕರಸೆ ಚಾವಡಿಯು ನೀ ಪಾಲಿಸು ವೀಳ್ಯ
ಹಾಕಿದ ಬಿರಿದ ತೆಗೆಸುವೆವು ।

ಭೀತಿಯಾಗಲು ನಿಮಗೆ ಬಿಡಿ ಎಮ್ಮ ಕಡೆಗವನ
ಸಾಗು ಮಾಡುವೆವು ಯಮಪುರಿಗೆ ||೭೬||

ಯಾರು ಮಾಡಿದರಿದನು ದೇವಿಶೆಟ್ಟಿಯ ಲಿಂಗ
ಮಾಡಿ ನಮಗವನು ಸ್ತುತಿಯ।
ದಾರಿಯಲಿ ಹೋಗುವ ಮಾರಿಯ ಕರೆತಂದು
ಹೀನದ ನುಡಿಯ ಹೊಗಳಿಸಿದ ||೭೭||

ತಿಳಿಯಬಾರದೆ ಭೂಪ ಹೊಳವು ತೋರದೆ ಲಿಂಗ
ಹೊಗಳಿ ಫಲವನು ಯಾದೆ ಇಷ್ಟು।
ಹಿಡಿತರಿಸಿ ಲಿಂಗನ ಪುಸಿ ಬರಲು ಎಮ್ಮಾತು
ಕೊಡುವೆವು ಅಪರಾಧ ನಿಮಗೆ ||೭೮||

ವಿವರಗಾಣದೆ ರಾಯ ಯಮನಕೋಪಗಳಾಗಿ
ಕಿಡಿಸೂಸಿ ನಯನ ಕೆಂಪೊಡೆದು ।
ಹಿಡಿ ತನ್ನಿ ಲಿಂಗನ ಹೆಡತಲೆಯೊಳು ಬೇಗ
ತೆಗೆಸುವೆ ನಾಲಗೆ ಪರಿದು ||೭೯||

ಅರಸು ಪೇಳಲು ಒಡನೆ ಬಿಡಿಸಿಕೊಳ್ಳುತ ಚರರು
ಸಿಡಿಲಿನ ರವ ಗರ್ಜನೆಯಲಿ ।
ನಡೆಯೊ ಬೇಗದಿ ಲಿಂಗ ಹೊಳಹು ಕಂಡಿತು ನಿನ್ನ
ಕರೆಯೆಂದ ರುದ್ರಭೂಪಾಲ ||೮೦||

ಏಳುವ ಸಮಯಕ್ಕೆ ರಾಮ ಪಾಳ್ಯಕೆ ಬರಲು
ಜೋಡಿಸಿ ಕರಗಳ ಮುಗಿದು ।
ಗಾಢದಿ ಬರಲೆಂದು ಊಳಿಗವನಟ್ಟಿಹನು
ಹೋಗಿ ಬರುವೆನು ದಯವಿರಲಿ ||೮೧||

ಬಂದಿತ್ತು ಜಗಳವು ಅಂಜಬೇಡವೊ ಲಿಂಗ
ಸಂದುಗೊಡದೆ ಮಾತನಾಡೊ।
[ಬಂದ] ರಾಮಗೆಯೆಂದು ಬಂಧನಗಳ ಮಾಡೆ
ತಿಂದೇನು ಅವನ ಶಿರವರಿದು ||೮೨||

ಸಿಕ್ಕಿ ನರಳುವುದೇಕೆ ಕಡಿದೊಟ್ಟುವೆ ಬಂದವರ
ಮತ್ತೇನು ಅವನೆಡೆಯ ಮಾತು।
ಕುಟ್ಟುವೆ ನವಕೋಟಿ ದಂಡೆತ್ತಿ ಬರಲು ಮುನ್ನ
ಸುಟ್ಟು ಬಿಡುವೆನು ಈ ಪುರವ ||೮೩||

ಹಾಗಲ್ಲ ರಣವಿಜಯ ಹೋಗಿ ಬರುವೆನು ತಪ್ಪ
ಕಾಣದೆ ಆಜ್ಞೆ ಮಾಡಿಪನೆ ।
ಚಾಡಿಗರ ನುಡಿಗರಸು ಕೇಡ ಬಗೆಯೆ ರಕ್ತ
ಕೋಡಿಯ ತಿದ್ದಿ ನಾ ಬರುವೆ ||೮೪||

ಒಂದು ಕನಸಿಗೆ ಬೆಳಗೆ ಕಾಣದೆ ರಾಯ
ಕುಂಜರವು ಮಳೆಗೆ ಬೆದರುವುದೆ।
ನಂಬಿಗೆಯನಿತ್ತರಸು ಕರೆಯೆಂದಡವನ ಕೊಟ್ಟಡೆ
ಯೀ ಬುರುಡೆ ಉಳಿಯಲು ಅರ್ಧ ಸುಡುವೆ ||೮೫||

ಹೋಗಯ್ಯ ಲಿಂಗಣ್ಣ ಅವ ಮಾಡಿದ ಬಂಧನಕೆ
ಈ ಕಾಯವ ಕೊಡುವೆ ಕೊಳ್ಳಭಯ।
ಸಾಗಿದನತಿ ಬೇಗ ಆಗ ಮೌನದಿ ಲಿಂಗ
ರಾಯ ರುದ್ರಗೆ ಕರ ಮುಗಿಯೆ ||೮೬||

ಕೆಂಡವನುಗುಳುತ ಕರೆತಂದು ರಾಮನ ಎಮ್ಮ
ಹೆಂಡಿರ ಮಾಡಿದೆಯೊ ಲಿಂಗ।
ತಂಡೇಳ ಹೊಡೆಸುವೆ ತುಂಡಮೂಳನ ಗರ್ವ ಬಡ
ಮಿಂಡಯೆನುತ ಹೊಗಳಿಸಿದ ||೮೭||

ಬಿರಿದಂಕನಾದರೆ ಇರಬೇಕು ಮನದಲ್ಲಿ
ಬರಬಹುದೆ ಪರಹಿತರಿಗೆ ।
ತಡೆದೆನು ಕೊಟ್ಟಂಥ ಅಭಯಕೋಸ್ಕರ ಮುಂದೆ
ನಡೆಯೆನ್ನು ನೀನು ಬಂದಲ್ಲಿ ||೮೮||

ರಾಯ ಎನ್ನಲು ಲಿಂಗ ರೋಮ ಅಳುಕದೆ ಮನದಿ
ಆಡಿದನದಕೆ ಉತ್ರವನು ।

ಹೇಳಲಿಲ್ಲವೆ ರಾಯ ಮೊದಲೆ ಬಿರುದಿನ ಸುದ್ದಿ
ಹಾಳಾಗಿರ್ದವೆ ಕರ್ಣಮೂಲ ||೮೯||

ಚಾಡಿಯ ನುಡಿಗೇ[ಳಿ] ಬಾಣಾಸುರನು ಕೆಟ್ಟ
ಕೇಡುಂಟು ಇವರಿಂದ ನಿಮಗೆ ।
ಆಡಲಿಲ್ಲವೆ ರಾಯ ಸಭೆಯೆಲ್ಲ ಕೇಳ್ವಂತೆ
ನಾಲಗೆ ಹೋಗಿತ್ತೆ ಇವರ ||೯೦||

ಬಲವಂತನಾಗಲು ಹೊಗಳಿಸಿದನಾ ಬಿರಿದ
ಬಡವ ಗಳಿಸಿಕೊಳ್ಳಬಲ್ಲನೆ ।
ತಿಳಿದು ನೋಡೈ ಭೂಪ ಬೇಡವೆಂದರೆ ನಡಿ ಪೇಳೊ
ಸುಡು ಇವರ ಚಾಡಿಮಾತಗಳ ||೯೧||

ಮುಂಗಾರ ಸಿಡಿಲಂತೆ ದೊರೆಗಳೆಲ್ಲರು ಎದ್ದು
ಕಂಡಿರೆ ರಾಯ ಉತ್ರವನು ।
ಸಂದುಗೊಡದೆ ಅವನ ಮಾತು ಛಲವನೆ ಗೆಲಿಸಿ
ಕೊಂಡೆಯರ ಮಾಡಿದ ನಮ್ಮ ||೯೨||

ಬಾಲೆಯರ ಚಾ[ರ]ತ್ವ ನೋಡುವ ನಯನದಿ
ಕಾಣಲಾಗದೆ ಬಲ್ಲವರು।
ಜೋಡು ಈರ್ವರ ಮಾತು ಒಂದಾದ ಕಾರಣ
ಕೊಂಡಾಡುವ ರಾಮನ ಘನವ ||೯೩||

ರುದ್ರರಾಯನೆ ನಿಮಗೆ ಪ್ರಸಿದ್ಧ ಕಂಡುದೆ ವಾಕ್ಯ
ಎದ್ದರು ಮೊರೆದು ಗರ್ಜಿಸುತ।
ವಜ್ರಕಾಯವ ಪಡೆದ ಹನುಮನಿಗೆ ಘನ ಪೇಳ್ವೆ
ಸುದ್ದಿ ಮರಸುವೆವೊ ಕೊಡು ವೀಳ್ಯ ||೯೪||

ರಾಮನ ಎದೆಗರ್ವ ಹೋಗಾ[ಡುತಿ]ರೆ
ಕೇಳೇವು ಲಿಂಗ ಪೇಳ್ವಂತೆ ।
ಬಾಲನೆನ್ನುತ ಅವನ ತಾಯಿ ಪಡೆದಳು ಎಮ್ಮ
ಸ್ತ್ರೀಯರಿಗೆ ಕಡೆಮಾಡಿ ನುಡಿದ ||೯೫||

ಊರಿದೇಳ್ವ ದೊರೆಗಳನು ಕರವಿಡಿದು ರಾಜೇಂದ್ರ
ಸೈರಿಸಿ ನೀವೊಂದು ಗಳಿಗೆ ।
ಹರುಷದಿ ನೀವೆಲ್ಲ ಕರೆಸೆನಲು ಬರಿಸಿದೆ
ಕೆಡಿಸಲು ಧರ್ಮ ತಮಗಲ್ಲ ||೯೬||

ಇರಬೇಡ ಎಮ್ಮಲ್ಲಿ ನಡೆಯೆಂದು ಹೇಳಿಸುವ
ಕಡೆಗಾಲ ಒದಗಿ ಮಥನಿಸಲು।
ಕೊಡುವೆನು ವೀಳ್ಯವ ನಾ ಕೊಟ್ಟ ದೃಢ ನಂಬಿಕೆ
ಕಳೆದು ಮಾಡಲು [ಕಾರಣ]ವಿಲ್ಲ ||೯೭||

ರಾಯರಿಗೀ ಬಗೆಯಾಚಾರ ಶಾಂತಿಯ ಪೇಳಿ
ದೇವಿಶೆಟ್ಟಿಯ ಮಗನೆ ಕೇಳು ।
ಲಿಂಗ ನಿನ್ನಯ ತಪ್ಪನೊಂದು ಪಾಲಿಸಿಕೊಂಡೆ
ಮೇಲಾದ್ರು ಮುಂದರಿತು ನಡೆಯೊ ||೯೮||

ರಾಯ ಲಿಂಗನ ಮೇಲೆ ಕ್ರೋಧವ ತಾನಿಟ್ಟು
ಸಾಗಲದಕೇನು ರಾಮಗಳ।
ಸಾಲ ಶೂಲವ ನಡೆಸಿ ಪೀಳಿಗೆಯ ಬಿಡದಂತೆ
ಮಾಡದಿರಲು ರುದ್ರನಹುದೆ ||೯೯||

ರಾಯರಿಗೆ ಬಾಯಾರು ದಾದೆಯರ ಮೊಲೆಯನುಂಡ
ಮಾಡುವುದಿನ್ನೇನು ಲವುಡ।
ತೀರಿತ್ತು ಓರ್ಗಲ್ಲ ಅನ್ನದ ಋಣವೆಂದಾಡಿ
ಮನದೊಳು ಲಿಂಗ ನಡೆದ ||೧೦೦||

ಬಂದನು ಲಿಂಗಣ್ಣ ಭೇರುಂಡ ರಾಮನ ಬಳಿಗೆ
ಚಂದ್ರನೆಪವೊದಗಿದಂತೆ ।
ವಂದಿಸಿ ಕರಮುಗಿದು ರಾಜೇಂದ್ರ ಲಾಲಿಸಬಹುದು
ರಂಡೆ ರುದ್ರನ ಬಿನ್ನಹವನು ||೧೦೧||

ಬಿರಿದುಗಳ ಬಿಟ್ಟರೆ ಇರಲೆಂದ ರಣಹೇಡಿ
ಕಡೆಗೆನ್ನ ಮಾಡಿದವನೆನಲು ।

ಪಡೆಯೆಲ್ಲ ಮೊರೆದುದು ನುಡಿಯಲೆನಗೆ ಚಾಡಿ
ಮಡಗಿದ ವಿಷವ ಮನದೊಳಗೆ ॥೧೦೨॥

ಬಿರಿದನು ಬಿಡಲೆಂಬ ನುಡಿ ಬೀಳೆ ಕರ್ಣದಿ
ಅಡರಲು ಕೋಪ ಸಿಡಿಲಂತೆ।
ತೊಡೆವೆನು ಲಿಖಿತವನು ನುಡಿದವನ ನಾಲಗೆಯ
ಹೆಡತಲೆಯೊಳು ಮುನ್ನ ತೆಗೆವೆ ॥೧೦೩॥

ಹಾಕಿದ ಬಿರಿದನು ಹರನು ಪೇಳಲು ಬಿಡೆನು
[ಸ] ರಿನೃಪಗಂ[ಜಿ] ಬಿಡುವವನೆ ।
ಅರುಹಲಿಲ್ಲವೆ ಮುಂದೆ ಬರುವ ಕಷ್ಟಗಳನ್ನು
ಕುರಿಕಾಯ್ದು ಬಿದ್ದರೆ ಎಲ್ಲ ॥೧೦೪॥

ಮಾಡಿದ ಲಿಂಗೆಂಬ ಭೇದವಾರೊಳಗುಂಟು
ಬೇರ ತಿನ್ನದೆ ಬಿಡನು ನಿನ್ನ ।
ಬಾರಯ್ಯ ಲಿಂಗಣ್ಣ ಕುಟ್ಟೆಂಬ ಪಾಳೆಯಕೆ ಕಳುಹೋ
ತೋರುವೆ ಬೆಳಗಾಗಿ ಜಗಳ ॥೧೦೫॥

ಸುಳುಹುಗಾಣದ ರೀತಿ ಇರುಳು ದಂಡಿಗೆ ಕಳುಹು
ತಡಮಾಡೆ ಕೆಡುವುದು ಕಾರ್ಯ।
ಒದಗಿಲ್ಲಿ ತಾ ಬಂದ ಶುಭದ ಲಗ್ನದ ಫಲವು
ಬಲಿಗೊಡುವೆ ಭೂತಗಣಕೆಲ್ಲ ॥೧೦೬॥

ನಾನಾಗಿ ಜಗಳವ ಮೊದಲಾಗಿ ಕೆಣಕಲು ಬೇಕು
ಒದಗಿತು ನಿನ್ನ ಮೂಲದಲಿ ।
ಬೇಡಿದ ಬಯಕೆಯ ಅನಾಥಗೆ ಒಲಿದಿತ್ತ
ರಾಯ ಜಟ್ಟಂಗಿ ರಾಮೇಶ ॥೧೦೭॥

ಹೋಗಯ್ಯ ಲಿಂಗಣ್ಣ ರಾಯ ರುದ್ರನ ಬಳಿಗೆ
ಹೋಗುವೆನೇನೊ ತೃಣಕೆ।
ಅಡಿ ತಪ್ಪುವರೆಡೆಯ ಅರಗಳಿಗೆ ನಿಲ್ಲನು ಮರಳಿ
ನೀರ ಮುಟ್ಟನು ಎಂದು ಪೇಳೋ ॥೧೦೮॥

ತಿರುಗಿ ಬಂದನು ಲಿಂಗ ದೊರೆ ರುದ್ರರಾಯನ ಬಳಿಗೆ
ಇರನೆಂದ ತರಳ ರಾಮಯ್ಯ।
ಹರುಷವಾಯಿತು ನಿಮ್ಮ ಇರ್ವರ ಮನಸಿಗೆ
ತಿರುಗಿದ ಲಿಂಗನರಮನೆಗೆ ॥೧೦೯॥

ತಿಂಗಳಿಗೊಂದಿವಸ ಒಂದಾಗಿ ನಡೆವವ
[ನಂ]ದದಿಂದಿಳಿಯೆ ತಾಯೊಡಲ।
ಮುಂದವರು ಹೇಮಾದ್ರಿ ಒಡೆಯನ ದರುಶನವಾಗೆ
ಲಿಂಗ ಪೇಳ್ದನು ಪಿತನೊಡನೆ ॥೧೧೦॥

ಆದ ವಿವರಗಳನು ತಾಯಿ ತಂದೆಗೆ ಪೇಳೆ ನೀ
ಕಂಡ ಬುದ್ಧಿಯ ಮಾಡೆನಲು।
ಆಲಸ್ಯವಿಲ್ಲದೆ ಆಭರಣಗಳ ಸಾಗಿಸಲು
ಆಪ್ತಜನರೊಡನೆ ॥೧೧೧॥

ಮನೆಯ ಲಾಯದ ತುರಗ[ಗಳ]ನು ಶೃಂಗರಮಾಡಿ
ಹೊರಡಿಸಿದ ಮುನ್ನೂರು ತೇಜಿ।
ಬದುಕು ಭಾಗ್ಯವನೆಲ್ಲವ ಎತ್ತು ಒಂಟೆಗೆ ತುಂಬಿ
ಬಿಡದಂತೆ ತೃಣ ಬದುಕನೆಲ್ಲ ॥೧೧೨॥

ಕಾಲ ಕಡಗ ಕಂಠಮಾಲೆ ಗೆಜ್ಜೆಗಳನು
ಧ್ವನಿಯ ಕಾಲ ವಿಚಾರಗಳ ।
ತೊಡಿಸಿ ಸ್ತ್ರೀಯರಿಗೆಲ್ಲ ....
ಬಾಲರೆಂಬಂತೆ ಕಳುಹಿದನು ॥೧೧೩॥

ತನ್ನ ಕೈರಾಜೀನ ಹಮ್ಮೀರ ಮಂದಿಯ ಕರೆದು
ನಿಮ್ಮ ಮಾತೇನೆಂದು ಕೇಳೆ ।
ನಿರ್ಣಯ ನನದಂತು ಅನ್ನ ನೀರಿನ ಋಣವು
ಪುಣ್ಯ ದೊರೆಯಲು ರಾಮನೆಡೆಯ ॥೧೧೪॥

ಕೇಳಯ್ಯ ಲಿಂಗಣ್ಣ ರಾಯ ರುದ್ರನ ಉಪ್ಪ
ನಾವಂತು ಉಂಡವರಲ್ಲ।

ಏಳಾರು ತಲೆಯಿಂದ ಸೇರಿದ ಬಲ ನಿಮ್ಮ
ಪೀಳಿಗೆ ಪುತ್ರ ಸಂತಾನ ||೧೫||

ತಾಯಿಗೆ ಋಣ ತೊಲಗೆ ತರಳಗೆ ಆಸೆಯೇನು
ತೀರಿತ್ತು ಎಮಗೆ ಈ ಕ್ಷಣವೆ ।
ಮೂರು ಸಾವಿರ ಮಂದಿ ಕರಮುಗಿದು ನಿಮ್ಮಯ
ರೋಮ ಬಿದ್ದಲ್ಲಿ ಅಳಿವೆವು ||೧೬||

[ಸಾ]ಗಿಸಿ ಬಂಟರ ಕುಟುಂಬ ದಂಡಿಗೆ ಲಿಂಗ
ತಾ ಹೊರಟೆಯೆಂಬ ಸಮಯದಲಿ ।
ಮೂಡ ಕೆಂಪಡರಲು ರಣಧೀರ ರಾಮನು ತನ್ನ
ಊಳಿಗನೊಡನ್ನೇಳಿ ಕಳುಹೆ ||೧೭||

ಶೀಘ್ರದೊಳಗೆ ಬನ್ನಿ ರುದ್ರರಾಯಗೆ ಉಸುರಿ
ಕದ್ದು ಹೋದನೆಂದಾನು ಕಡೆಗೆ ।
ಬದ್ಧವಿಲ್ಲ ದೊರೆಯಲ್ಲಿದಾವ ಕಳ್ಳೆಂದು
ಕ್ಷುದ್ರ ಕೇಳುವ ರಾಯನೆಡೆಯ ||೧೮||

ಊಳಿಗ ಪರಿತಂದು ರಾಯ ರುದ್ರನ ಸದರ
ಪೇಳುತ್ತ ಕರಗಳ ಮುಗಿಯೆ।
ಭೇರುಂಡ ಗಜದೋರಿ ಸಾಗುವ ಅಡಿಗಳ
ಕೇಳುವರೆಡೆ ಇರೆನೆಂದ ||೧೯||

ಪೇಳುತಾಕ್ಷಣ ಸುದ್ದಿ ಸಾಗಿ ಪೇಟೆಗೆ ಬಂದು
ಏಳಣ್ಣಾ ಲಿಂಗ ತಡವೇಕೆ।
ಕೇಳುತ ಮದ್ದಿನ ಚೀಲಗಳ ಮನೆಗೆಳೆದು
ಸಾಗುವವನ ತಾ ಕೋರಿ ||೨೦||

ದೇವಿಶೆಟ್ಟಿಯ ಲಿಂಗ ಹೋದಪನೆಂದು
ರಾಯಗೆ ಸುದ್ದಿಯ ಕೊಡಲು।
ನೋಡಯ್ಯ ರಾಜೇಂದ್ರ ನಾವಾಡಿದ ದೃಷ್ಟಗಳ
ತೋರಿತ್ತು ಮಾತು ಮಾತಿನಲಿ ||೨೧||

ಸರಿಬಂತೆ ಇನ್ನಾರು ಕರಿಯ ಬುದ್ಧಿಯ ರಾಯ
ಹಿಡಿತರಿಸಿ ಹಲ್ಲ ತೆಗೆಸಯ್ಯ।
ನುಡಿಯಲು ಚರರೊಡನೆ ಸಿಡಿಲಂತೆ ಗರ್ಜಿಸಿ
ಹಿಡಿತನ್ನಿ ಎನಲು ನೃಪವರನು ॥೧೨೨॥

ಅರಸು ಪೇಳಲು ಬೇಗ ಅರಿವಾಯ್ತು ಊಳಿಗ ಬಂದು
ಕಡೆ ಬಾಗಿಲ ಕಟ್ಟಿ ತಡೆಯೆ।
ಧರಣೀಶ ನಿನ್ನನು ಮನೆ ಮುಂದಿರಿಸಿಕೊಂಡು
ಎಡಗಟ್ಟಿನೊಳಗೆ ತರಲೆಂದ ॥೧೨೩॥

ಮನೆಯ ಕೊಂಬರೆ ನೀನು ಮಡದಿ ಹಾದರ ಉಂಟೆ
ಬಡವನೆ ಲಿಂಗ ಕಟ್ಟುವರೆ।
ಹೊಡೆ ಇವರ ತಲೆಯೆಂದು ಒಡನೆ ಗರ್ಜಿಸಿ ಲಿಂಗ
ಹೆಡಕಟ್ಟಿ ಹಾಕಿ ಕಳುಹಿದನು ॥೧೨೪॥

ಮೊರೆಯಿಡುತ ಚರರಾಗ ನೃಪನ ಸಮ್ಮುಖ ನಿಂದು
ಎಮಗಾಯಿತವನಾಜ್ಞೆ ಭೂಪ।
ಗುರುಮರಗುಟ್ಟಿರಲು ತಲೆಯ ಚೆಂಡಾಡುವ
ಕರೆಯಲ್ಕೆ ಈ ಪಾಟು ಬಂತು ॥೧೨೫॥

ಕಾಲನಾರ್ಭಟದೊಳು ರಾಯನು ಉರಿದೆದ್ದು
ಪ್ರಧಾನಿ ಲಿಂಗರಸಿಗೆ ಪೇಳೆ ।
ಬಲ ಸಹಿತ ಹೋಹನ ಹಿಡಿ ತಾರೋ ರಾಮುಗನ
ತಲೆಯನು ಹಿಡಿ ಚೆಂಡಾಡೋ ॥೧೨೬॥

ಕರಿ ತುರಗ ಕಾಲಾಳು ಒದಗಿತ್ತು ನಿಮಿಷಕ್ಕೆ
ಹದಿನಾರು ಸಾವಿರ ಫೌಜ।
ಹಿಡಿಯೆನ್ನ ಲವುಡವ ಎನುತಲಿ ಲಿಂಗಣ್ಣ
ನಡೆಯಲು ಪೇಟೆಯ ದಾಟಿ ॥೧೨೭॥

ಹೋಗಬೇಡವೊ ಲಿಂಗ ಎಂದು ಏರಲು ಬೆನ್ನೊಡನೆ
ಭೂಮಿ ಹೊಕ್ಕರು ಬಿಡೆವು ಎನುತ ।

ಕಡಿ ಕಡಿ ಎನುತಾಗ ಮುಂಗಟ್ಟಿ ತಡೆದಾಗ
ನಡೆವುದೆಲ್ಲಿಗೆ ಲಿಂಗ ಎನಲು ||೧೨೮||

ಯಾಕೆ ಪೋದೆಲೊ ಲಿಂಗ ಏನು ನಿನ್ನಯ ಕಷ್ಟ
ಮಾತಾಡೊ ಎಮ್ಮೊಳು ನಿಂದು ।
ಭೀತಿಗೊಳ್ಳಲಿ ಬೇಡ ಭೂಪಾಲ ರಾಯಗೆ ಪೇಳಿ
ಮಾತ ತಿದ್ದುವೆವೊ ಕೊಲ್ಲದಂತೆ ||೧೨೯||

ತಿದ್ದುವ ಹದನ ತಂದಿದ್ದರೆ ಪುಸಿಯಲ್ಲ
ಇದ್ದರೆ ಇನ್ನೆರಡು ಗಳಿಗೆ।
ಗೆದ್ದೇನು ಮೇಲ್ಹರಿದು ದೂರದಿ ಮಾತಾಡು
ದುಬ್ಬೊಡಲ ಹರಿಗಡಿಯೊ ಮಂತ್ರಿ ||೧೩೦||

ಅರಿಯದವನೆ ನೀನು ಯಮರಾಜ ರುದ್ರನು
ದಂಡೆತ್ತಿ ಕಳುಹಲು ಮರಳಿ ।
ಜಯಿಸಿ ಹೋಗುವರುಂಟೆ ....
.... ||೧೩೧||

ಎಲೆಯ ಕೊನೆಗಳ ನೆಚ್ಚಿ ಬಲು ಮರನ ಬಿಡಲೇಕೆ
ಪಡಿ ತೀರಿತೇನೊ ಲಿಂಗಣ್ಣ ||೧೩೨||

ಆಳಿದೊಡೆಯಗೆ ಎರಡ ಎಣಿಸಿ ಹೋಗಲು ಲಿಂಗ
ಭೂಮಿ ಮುನಿಯದೆ ಹೋದ ಬಳಿಯಾ।
ಹಾದಿ ಸೂಳೆಯ ನೆಚ್ಚಿ ಮನೆಯ ಹೆಂಡತಿ ಬಿಟ್ಟ
ಗಾದೆಯ ತೆರಬಂತು ಲಿಂಗ ||೧೩೩||

ನಿಮ್ಮ ರಾಯನ ಮಾತ ನಿನ್ನೆ ತಿಳಿದೆನು ಮಂತ್ರಿ
ತನ್ನ ರಾಮಯ್ಯನ ಕರೆಯೆಂದು।
ನಿಮ್ಮ ಚಾಡಿಯ ಕೇಳಿ ಕೊಲ್ಲ[ಲೆ]ಣಿಸಿದ ಬಳಿಯ
ಇನ್ನು ಬರುವುದಕೆ ನಾ ಮರುಳೆ ||೧೩೪||

ಬೇಡ ಮುಂದಕೆ ನಿನ್ನ ಸಾಗಗೊಡೆವೋ ಲಿಂಗ
ಹೇಳಿದೆವು ನಾವು ಕಂಡಷ್ಟು ।

ಕೇಳಿ ಬಾರೆಲೋ ನಿನ್ನ ಪ್ರಾಣಕ್ಕೆ ನಾ ಹೊಣೆಯು
ಚೆಂಡಾಡೆವು ಈ ಮೇಲೆ ತಲೆಯ ॥೧೩೫॥

ಕಡಿವೆನೆಂಬುವ ನಿನ್ನ ಬಗೆಯ ಬಲ್ಲೆನು ಬೇರೆ
ಸುಡು ನಿನ್ನ ಪೌರುಷವ ಮೂಳ ।
ಕೆಡಬೇಡ ಮುಂದಕ್ಕೆ ಇಡು ನಿನ್ನ ಹೆಜ್ಜೆಯ
ಮಡಗುವೆ ತಿಳಿ ತಿರುಗಾಡದಂತೆ ॥೧೩೬॥

ಕೆಟ್ಟ ಮಾತುಗಳಾಡಿ ಕೆಡಬೇಡ ಲಿಂಗರಸೆ
ಎಚ್ಚರ ತೆಕ್ಕೊ ಎದೆಯೊಳಗೆ ।
ಜುಟ್ಟ ನೇವರಿಸುಂಡಾದುಂಬೊಡಲನೊಡೆಯದ ಮೇಲೆ
ಸೆಟ್ಟಿ ಲಿಂಗನು ಎನ್ನಬೇಡ ॥೧೩೭॥

ಮಾತಿನ ಧರಣೆಯಲಿ ನೂಕುವನು ಮುಂದಕ್ಕೆ
ಝೋಂಕರಿಸಿ ಮತ್ತೆ ಬಲ ತುರಗ।
ಮೇಕೆಯ ಹಿಂಡಿಗೆ ರೊಪ್ಪವ ಬಡಿದಂತೆ
ರೀತಿಯಾಗಲು ನಡೆವೆ ಲಿಂಗ ॥೧೩೮॥

ಮುಂದಕ್ಕೆ ಬಿಡದಂತೆ ಬಂಧಿಸಿ ತರುಬಲು
ಕಂಡನು ಲಿಂಗ ಕೋಪದಲಿ ।
ಮಂದಿಗಭಯವ ಕೊಟ್ಟು ಮದಗಜವೆದ್ದಂತೆ
ಚಂದ್ರಾಯುಧವ ತಾ ಕಿತ್ತ ॥೧೩೯॥

ಸೆಟ್ಟಿ ಲಿಂಗನ ಮಂದಿ ಹೊಕ್ಕರು ಬಲವಂತ
ದಿಟ್ಟ ಉಳ್ಳವರು ತೊಡೆ ಬಡಿದು ।
ಕಚ್ಚಲು ರಣರಂಗ ಕಾಲನಾರ್ಭಟದೊಳು
ಹೊಕ್ಕನು ಲಿಂಗ ಸವರುತಲಿ ॥೧೪೦॥

ಗುಡುಗಿನಾರ್ಭಟದೊಳು ರಣಧೀರ ಲಿಂಗನ ಮಂದಿ
ಪ್ರಾಣದಾಸೆಗಳನು ತೊರೆದು ।
ತೋಳನು ಕುರಿಹಿಂಡ ಖಾಲಿಮಾಡುವ ತೆರದಿ
ಮೂರಾರು ಬೀದಿಗಳ ಕಡಿದು ॥೧೪೧॥

ಬೇಡ ನಿನ್ನಯ ಪಡೆಯು ತೀರಿ ಬಂದಿತು ಎಂದು
ಹೆಗಲೇರಿಸಿ ಲಿಂಗಣ್ಣ ಹೊಡೆಯೆ ।
ಕಾಗೆಯ ಬಳಗಕ್ಕೆ ಕಲ್ಲನು ಹೊಡೆದಂತೆ
ಬಿಗಿಸಿ ಪೌಜನು ಹೊಡೆದನು ||೧೪೨||

ಮಿಕ್ಕು ಹೋಗುವನವನು ಮೀನಾಂಕ ರಾಮನ ಎಡೆಗೆ
ಮುತ್ತಲು ಮರಳಿ ಭೋರ್ಗರೆದು।
ಉಕ್ಕಡವ ಕಾಯ್ವಂಥ ಚರನು ರಾಮನ ಬಳಿಗೆ
ಕೊಟ್ಟನು ಸುದ್ದಿ ಪರಿದೋಡಿ ||೧೪೩||

ಕಾಲಭೈರವ ರಾಯ ಏರಿದನು ತುರಗವನು
ವೀರಸಂಗಯ್ಯ ಕಾಟಣ್ಣ ।
ಹರಿಸಿ ತುರಗವ ಗಿಡುಗನಾರ್ಭಟೆಯೊಳು
ಮೂರು ಬೀದಿಯಲಿ ಹೋಗಲೇರಿ ||೧೪೪||

ಕಡಿಕಡಿ ಎನುತಲಿ ಸಿಡಿಲಿನಾರ್ಭಟದೊಳು
ಸವರಲು ಸಪ್ಪೆ ಕೊರೆದಂತೆ।
ತುರಗವ ರಾಹುತನು ಬಿರಿಸಿಂದ ಎಳೆಯಲು
ಹೋಗಲು ನಾಲ್ಕು ಹೋಳಾಗಿ ||೧೪೫||

ವೀರಸಂಗಮರಾಯ ಹೊಗಲೇರಿದನು ಜೀಬಿಯ
ಬಾಗಿಲ ಕಟ್ಟಿ ಸವರುತಲಿ ।
ತಾರು ಮಾರಿನ ಮೇಲೆ ಹೇರನುರುಳಿಸಿದಂತೆ
ತೋರಲು ಮಾಯದ ಬುರುಡೆ ||೧೪೬||

ಬಿರಿದನು ಬಿಡಲೆಂದು ಮೊನೆಗಾರ ರಾಯರ ಮಂದಿ
ವಿಳರಾಸವಾಗಿ ವಿಪರೀತ ।
ಉಳಿದವರು ಒಂದಾಗಿ ಹುತ್ತ ಹುಲ್ಲನೆ ಕಚ್ಚಿ
ಕರಮುಗಿದು ಕಾಯಬೇಕೆನಲು ||೧೪೭||

ಮುತ್ತಿದ ದಂಡೆಲ್ಲ ಮಂಜೇರಿ ಹರಿದಂತೆ
ಸತ್ತುದು ಸರಿ ಮೂರು ಪಾಲು।

ರಕ್ತದ ಮಳೆ ಸುರಿದ ಅರ್ಥದಿ ತೋರ್ಪುದು
ಸುತ್ತೊಂದು ಬಾಣದ ಎಸೆಗೆ ||೧೪೮||

ರಾಯ ರುದ್ರನ ದಂಡು ಸಾಯುಜ್ಯ ಸೇರಲು
ಊದಿಸಲು ಧರ್ಮಗಹಳೆಯನು ।
ದೇವಿಸೆಟ್ಟಿಯ ಮಗನ ಕರೆದು ಕೈಯನೆ ಪಿಡಿದು
ಸಾಗಿದರು ತಮ್ಮ ಪಾಳೆಯಕೆ ||೧೪೯||

ರಾಯ ರಾಮನು ಹೋಗಿ ಆನಂದದೊಳಗಿರಲು
ಪೇಳುವೆನು ರುದ್ರನ ದುಃಖ।
ಲಾಲಿಸಿ ಪ್ರೌಢರು ಮತ್ತೇನೆಂದು ಪೇಳುವೆ
ಓರ್ಗಲ್ಲ ಆರ್ಭಟೆಯ ಶಿವ ಬಲ್ಲ ||೧೫೦||

ಹಳ್ಳ ಕೊಳ್ಳದಿ ಇರ್ದ ಜಳ್ಳು ಬಂಟರು ಎದ್ದು
ಕಳ್ಳರಂದದಲಿ ನೋಡುವರು ।
ಅಲ್ಲೊಮ್ಮೆ ಸರಕೆನಲು ಆಕರಿಸಿ ಏಳುತಲವರು
ಇಲ್ಲಿ ಬಂತೆನುತ ಓಡುವರು ||೧೫೧||

ಮೂಳ ಪ್ರಧಾನಿಯು ಬೂದಿ ಮೈಲೊಳು ಪೂಸಿ
ಜೋಗಿ ಸನ್ಯಾಸಿ ರೂಪಾಗಿ ।
ಕಾರೆಯ ಮೆಳೆಲೊಳು ಅಡಗಿರ್ದು ನಡೆದನು
ಓರುಗಲ್ಲೆಂಬ ಪೇಟೆಯಲಿ ||೧೫೨||

ಉಳಿದವರು ಒಂದರೆಯು ಬಳಲ್ವ ಗಾಯದ ಮಂದಿ
ಕೊರಗುತ ಸೊರಗಿ ಸೊಪ್ಪಾಗಿ ।
ಧರಣಿಯೊಳಗೆ ತನ್ನ ಹಗೆಯವಗೆ ಬೇಡಯ್ಯ
ಹಿಡಿವುದು ಕತ್ತಿ ಕೋವಿಯನು ||೧೫೩||

ಬೇಡೆಮಗೆ ಸಂಬಳ ಏಳೇಳು ಜನ್ಮದಿ
ಜೇನ ಹುಳುಗಳಿಗೆ ಬೇಗೆಯನು ।
ತೋರಿದ ತೆರನಾಗಿ ಸಾಗುವದು ಯಮಪುರಕೆ
ಕೂಳು ಹುಟ್ಟದೆ ಕೂಲಿ ಮಾಡೆ ||೧೫೪||

ಬಂದನು ಮತ್ತೊಬ್ಬ ಬಳಲು ಗಾಯದ ಮನುಜ
ವಂದಿಸಲು ರುದ್ರನಿಗೆ ಕರವ ।
ಚೆಂದವಾಯಿತು ಸ್ವಾಮಿ ಚರಣಕಮಲವ ಕಾಬ
ಪುಣ್ಯಯೋಗದಿ ಉಳಿದು ಬಂದೆ ॥೧೫೫॥

ಏನ ಹೇಳಲಿ ಹಗೆಯಾದ ಬಲವನು
ಮೀನಕೊಂದಂತೆ [ಬಲಿಯಾಗಿ] ।
ತಾರ ಮಲಗಿತು ರಾಯ ಹದಿನಾರು ಸಾವಿರದೊಳು
ನೂರಾರು ಉಳಿದಿರಲು ಹೆಚ್ಚು ॥೧೫೬॥

ಅನಿತರೊಳಗೆ ಬರಲು ಮಂತ್ರಿ ಲಿಂಗರಸನು
ಘನ ಋಷಿಯ ವೇಷವನು ಧರಿಸಿ ।
ತರವ ಕಾಣದೆ ರಾಯ ಚರಣಕೆರಗುವೆನೆಂಬ
ಸಮಯಕ್ಕೆ ಮಂತ್ರಿ ಕೈಮುಗಿದ ॥೧೫೭॥

ಯಾಕಯ್ಯ ಎಲೆ ಮಂತ್ರಿ ಸನ್ಯಾಸಿ ರೂಪನೆ ತೊಟ್ಟೆ
ಹಾಸ್ಯದೊಳಗೆ ರಾಯ ನಗಲು।
ಒಲಿದು ಲಾಲಿಸು ಭೂಪ ಉಳಿಯಗೊಡುವರೆ ಎನ್ನ
ತಲೆಯ ಕಾದಿತು ಬೂದಿ ಮುನ್ನ ॥೧೫೮॥

ಮೂಳ ಲಿಂಗ[ಗೆ] ಹೆದರಿ ಓಡಿ ಬಂದನು ಮಂತ್ರಿ
ಹದಿನಾರು ಸಾವಿರ ಬಲ ಒಯ್ದು ।
ಹೋಳಿಗೆ ತುಪ್ಪಕ್ಕೆ ಅಧಿಕಾರರಲ್ಲದೆ ನೀವು
ಕಾಯ ಬ್ರಹ್ಮರಿಗೆ ಸಾಧನವೆ ॥೧೫೯॥

ಬಣಜಿಗ ಮೂಳ[ನನು] ಮುರಿಯ ಬಲ್ಲೆನೆ ಭೂಪ
ತರುಬಿ ನಿಲ್ಲಿಸಿದೆ ಲಿಂಗನನು ।
ಹಿಡಿವಂಥ ಸಮಯಕ್ಕೆ ಹುಡುಗ ರಾಮನು ಬಂದು
ಕಡಿದನು ಮೋಸಗತಿಯಲಿ ॥೧೬೦॥

ಲಿಂಗನ ಕಡೆಯೆಂಬ ನಂಬಿಗೆಯ ತೊಟ್ಟಿರಲು
ಕಂಡ ಗಳಿಗೆಯಲಿ ತೀರಿಸುವೆ ।

ತಂದು ಪಾದವ ತೋರ್ವ ಒಡಂಬಡಿಕೆ ಹೆಚ್ಚುತಲಿರಲು
ಹುಡುಗ ರಾಮನು ಮೋಸ ಮಾಡೆ ||೧೬೧||

ಮೋಸ ಗತಿಗಳ ಮಾಡೆ ಮುರಿಯಬಲ್ಲನೆ ಅವಗೆ
ಮೀಸೆಗಳ ನಂಬಿಸುವೆ ನಿಮಗೆ ।
ತಾಸಿನಲಿ ಹದಿನಾರು ತಲೆಯ ಪಾದಕೆ ತರುವೆ
ಪೊಕ್ಕು ರಾಮನ ಹಿಡಿತರುವೆ ||೧೬೨||

ಬಲ ಸ್ವಲ್ಪವಾಗಲು ಕಡಿದನಲ್ಲದೆ ಮಂಗಳ
ದಳವ ಮತ್ತಷ್ಟನೊಯ್ದಿರಲು ।
ಬಲೆಯ ಬೀಸಿದ ತೆರದಿ ತುಳಿದು ಕೊಲ್ಲುವೆ ದಂಡ
ಪಿಡಿತರುವೆ ಲಿಂಗ ರಾಮುಗನ ||೧೬೩||

ಅಂಥವನಹುದೆಂದು ಅತಿ ಮೆಚ್ಚಿ ಮಂತ್ರಿಯನು
ಸಂತೈಸಿ ಬೂದಿಯನು ತೊಳೆಸಿ ।
ದುಸ್ತಾನು ಉಡಗೊಟ್ಟು ಧೂಮವೇಳಲು ಅಗ್ನಿ
ಬಿದ್ದಂತೆ ಮನೆಗೆ ಕೋಪದಲಿ ||೧೬೪||

ಆಗಲೈ ಎಲೆ ಮಂತ್ರಿ ರಾಮ ಲಿಂಗನ ತಂದು
ಕೀಳಿಸುವೆ ಹಲ್ಲ ಹದಿನಾರ।
ಮೂಳನ ಮಾತೇನು ಮತ್ತೊಂದು ಲೇಖನವ
ನೋಡುವ ಬರೆಸಿ ಅವನೆಡೆಗೆ ||೧೬೫||

ಬರೆಯಲು ರಾಮನ ಎದೆ ಒಡೆದು ಸಾವಂತೆ
ಕೊಡುವೆ ಲಿಂಗನ ಮೂಲದೊಳಗೆ
ಹಿಡಿಕಟ್ಟಿ ಕೈಯೊಳು ಬುಡವ ಕೀಳುವೆ ನಿಮ್ಮ
ಕುಲವಂಶ ಜಾತಿ ಬಿಡದಂತೆ ||೧೬೬||

ಲೇಖನದೊಳಗಿಂಥ ಕಾಕು ಯೋಚನೆ ಬರೆದು
ತಾ [ಕಟ್ಟು] ಕಡೆಯ ಕಾಗದವ ।
ಲೋಕಾಧಿಪತಿ ರಾಯ ರುದ್ರ ಕಳುಹಿದ ದಿಟ್ಟ
ಮಾತ ಬಲ್ಲಂಥ ಮಂತ್ರಿಗಳ ||೧೬೭||

ಸ್ಥಾನಪತಿಗಳು ಬೇಗ ಏರಲು ಪಲ್ಲಕ್ಕಿ
ಆ ತೇಜಿದಂತರಲಿ ಇಳಿದಂಥ।
ನೂರಾರು ತುರಗದಲಿ ಒಡನೆ ದಂಡನು ಹೊಕ್ಕು
ರಾಮನ ಕಂಡು ಕರಮುಗಿದು ॥೧೬೮॥

ಇಟ್ಟು ಲೇಖನವನು ತಥ್ಯವ ನುಡಿದರು
ಕಪ್ಪೆಗೆ ಉರಗನ ಹಗೆಯೇ ।
ಬಿಟ್ಟರೆ ಲಿಂಗನನು ಬದುಕುವೆ ನೀ ಪಡೆದ
ಲಿಖಿತ ತೀರಿತ್ತು ಬಿಡದಿರಲು ॥೧೬೯॥

[ಹರಣಿ ವ್ಯಾಘ್ರನ] ಕೂಡೆ ಛಲಗೊಂಡು ಬದುಕುವುದೆ
ತಿಳಿಯದೆ ಬುದ್ಧಿ ತರಳನಿಗೆ ।
ಹಿಡಿ ಕಡಿ ಕೈಯೊಳು ಪಡೆದರೆ ಮರೆಯಂತೆ
ಕುರುಹು ಕಾಣದೆ ಮರಣಗೊಂಬೆ ॥೧೭೦॥

ತಟ್ಟವರ ಬಾಯಿಗಳ ಹೆಚ್ಚುತ್ತ ನಡೆಸುವರು
ಸಿಟ್ಟಿನೊಳಗೆ ಗರ್ಜಿಸಲು।
ಬಿಚ್ಚಿ ಕಾಗದ ನೋಡಿ ಕಿಚ್ಚಿನ ಕಾಲಾಗ್ನಿ
ನೇತ್ರದೊಳ್ ಕಿಡಿಯ ಸೂಸುತಲಿ ॥೧೭೧॥

ಮೋಸಗಾರರ ಗಂಡ ಮಾತಾಡಿ ಹೋಹನ ಮಿಂಡ
ಓರುಗಲ್ಲವಗೆ ಎದೆಶೂಲ ।
ಹಾಕಿದ ಬಿರಿದನು ಬಿಡಲೆಂ[ದ] ರುದ್ರನ ಗಂಡ
ನೂಕಿವರ ಬಾಯ್ಮೇಲೆ ಹೊಡೆದು ॥೧೭೨॥

ನುಡಿಯಲಾಕ್ಷಣ ಚರರು ಶಿರವಿಡಿದು ದಂಡನು ನೂಕಿ
ಸುಡು ನಿನ್ನ ಪಲ್ಲಕ್ಕಿ ಓಡು ।
ಪಡೆದಿಂದು ಪ್ರಾಣವನು ನೀ ನುಡಿವ ಮಾತಿಲಿ ರಾಮ
ತಡೆದು ಸೈರಿಸಲು ಶಿವ ಬಲ್ಲ ॥೧೭೩॥

ಬರಲಾಗ ಹೇಜೀಬರು ಕಿರಿ ಕಾಂತಿ ಮುಖದೊಳು
ರಾಯ ರುದ್ರಗೆ ಕರ ಮುಗಿದು ।

ಸೋರುತ ಜಲಗಳ ಹೀನಾಯ ಅಪಕೀರ್ತಿ
ಏನ ಪೇಳಲು ತೀರದರಸೆ ||೧೭೪||

ಆಡಿದನು ತನ್ನ ಬಾಳ ಗರ್ವದ ಮೇಲೆ
ಮಾಡಿಕೊಂಡನು ನಿಮ್ಮ ಸತಿಯ।
ಕೇಳಲಾರದೆ ನಾವು ಕರ್ಣ ಬೆರಳಲಿ ಮುಚ್ಚಿ
ಮೂಗನಂದದಿ ಬಂದೆವೆದ್ದು ||೧೭೫||

ಸ್ಥಾನಪತಿಗಳ ಮಾತ ಕೇಳುತ್ತ ರಾಜೇಂದ್ರ
ಭೇರುಂಡನಂತೆ ಭೋರ್ಗರೆದ।
ಭೇರಿಯ ಹೊಡೆಯೆಂದು ಸಾರಿಸಲು ಪಟ್ಟಣಕೆ
ಕೂಡಿತು ಬಲ ತುರಗ ಬಂದು ||೧೭೬||

ಕರೆಯೆಂದ ಬಲವಂತ ದೊರೆಗಳನು ಮಂತ್ರಿಯನು
ಗುರುತಾದ ವೀರ ಮನ್ನೆಯರ।
ಸದರಿನೊಳಗೆ ಕುಳಿತು ಶರಭನಂದದಿ ರಾಯ
ಪರಿವಾರಕಿತ್ತ ವೀಳೆಯವ ||೧೭೭||

ಕರಿ ತುರಗ ಕಾಲಾಳು ಮೊರೆದು ಆರ್ಭಟಿಸುತ್ತ
ಕೊಡು ರಾಯ ಬೇಗದೊಳಭಯ।
ಹುಡುಗ ರಾಮನ ಕಡಿದು ತರುವೆವು ಲಿಂಗನ
ತೊಡೆಯ ತಟ್ಟುತಲಿ ರಾವುತರು ||೧೭೮||

ರಾಯ ಮುಮ್ಮೊಜಿಗ ಪಾಂಡುವ ರಂಗರಸ
ಹೋಗೇಳಿ ಲಿಂಗರಸು ಸಹಿತ।
ಮೂರು ಮಂದಿಗೆ ಕೊಟ್ಟ ಸಮನಾಗಿ ಉಡುಗೊರೆಯ
ನೇಮಿಸಿ ಬಲವ ಕೈಯೊಳಗೆ ||೧೭೯||

ಹತ್ತು ಸಾವಿರ ತುರಗ ಮೂವತ್ತು ಸಾವಿರ ಮಂದಿ
ಸೊಕ್ಕಿದ ಕರಿಗಳೇಳೆಂಟು।
ಚಿಕ್ಕ ಪ್ರಾಯದ ಚದುರ ಮೂವರಿಗು ಧಣಿ ಮಾಡಿ
ಹೊಕ್ಕರೆ ಬಿಡಬೇಡಿ ಕುಮ್ಮಟವ ||೧೮೦||

ನಾಯ ಮೂಳನ ಮಾತ ಭೂಮಿ ಗಾತ್ರವ ಮಾಡಿ
ಹೇಳುವರೆ ಈ ಬಗೆಯ ಭೂಪ।
ಕಾಲನ ಪಡೆದಂಥ ಸೂರ್ಯನ ಮೊರೆ ಬೀಳೆ
[ಓ]ಡಲೀಸದೆ ನಿಲಿಸಿ ತರುವೆ ॥೧೮೧॥

ಆಡುವ ಪಂಥಗಳ ಕೇಳುತ ರಾಜೇಂದ್ರ
ಬಾಲನಿಗೆ ಪ್ರತಿಯೆಂಬೆ ನಿನ್ನ।
ಸಾಗಿ ಶಿಸ್ತಿಲಿ ಒಳ್ಳೆ ಕಾರ್ಯ ಲಗ್ನವ ನೋಡಿ
ಭೋರೆನುತ ನಡೆಯಲು ದಂಡ ॥೧೮೨॥

ಭೇರಿನಾದಗಳಾಗೆ ಭೂಮಿ ಜರ್ಝರಿಪಂತೆ
ಸೂರ್ಯನೆ ಪ[ರಿ]ದು ಓಡ್ವಂತೆ ।
ಓರುಗಲ್ಲನೆ ಹೊರಡೆ ಕಾಳ ಮೇಘದ ತೆರದಿ
ಮಾರಿ ಬಯಲಿಗೆ ಜಂಡೆ ಹೊಡೆಯೆ ॥೧೮೩॥

ದಂಡ ಕಾಣುತ ಎದೆಗುಂದಿ ರಾಮನ ಮಂದಿ
ಬಂದು ಪೇಳ್ದರು ರಾಮನೊಡನೆ ।
ಮುಂಗಾರು ಮಳೆ ಮೇಘ ಎಂಬ ರೀತಿಗೆ ತೋರೆ
ಬಂದಿಹರು ಧಣಿಗಳು ಮೂರು ॥೧೮೪॥

ಬಂದರೆ ಬರಲೇಳಿ ಮುಂದನ ಮಗ ರಾಮ
ಅಂಜಿದರೆ ವೈರಿ ಪಾಲಿಪನೆ ।
ಹೊಂದುವ ಸದ್ಗತಿಯ ಪ್ರಾಣಿರಲು ನಿಮ್ಮನು ಕೊಡೆನು
ತಾನಳಿವ ಕಾಲಕೆ ದಂಡು ಮುಗಿವೆ ॥೧೮೫॥

ಬಿರಿದಿನ ಬಂಟರಿಗೆ ಈ ಬಗೆಯ ಧೈರ್ಯವ ಕೊಟ್ಟು
ಕರೆಸಲು ಅಣ್ಣ ಕಾಟಣನ।
ಬರಹೇಳು ಬಾದುರನ ಲಿಂಗಣ್ಣ ಸಂಗಯ್ಯ
ಗುರುತಾದ ಮಂತ್ರಿ ಮನ್ನೆಯರ ॥೧೮೬॥

ಕಾಳಗಕೆ ಅನುಮಾಡಿ ಚಾಳು ರುದ್ರನ ಬಗೆಯ
ಕಾಗೆ ಬಳಗವು ಬಂದುದಂತೆ ।

ಏರಲು ಶೃಂಗರಿಸಿ ಭೀಮಾರ್ಜುನರಂತೆ।
ಏರಿತ್ತು ಪೌಜು ಮುಂಗಡೆಯ ॥೧೮೭॥

ಹಿಡಿಯೆ ಬಿರಿದನ ಕಹಳೆ ಕಡಿಕಡಿ ಎನುತಲಿ
ತೊಡೆ ಹೊಡೆದು ಸಿಡಿಲಿನಾರ್ಭಟದಿ।
ಬೆದರಿ ರುದ್ರನ ದಂಡು ಬಂದ ರಾಮನು ಎಂದು
ಬಿಡಿಸಿಕೊಂಡು ತಮ ತಮಗೆ ॥೧೮೮॥

ಕಚ್ಚಲು ರಣರಂಗ ಕೊನೆಯ ಮಂದಿಗೆ ಜಗಳ
ಉತ್ರವಾಡುತ ಹಾಸ್ಯರಸವ।
ಒತ್ತಿ ಮುಂದಕೆ ಬನ್ನಿ ಈ ಹೊತ್ತು ರಾಮನ ಮಂದಿ
ಇಕ್ಕೇವು ಗೋರಿ ಗುಮ್ಮಟವ ॥೧೮೯॥

ನಾರಿ ಮೂಳ ಲಿಂಗನಾ ಹಿಡಕೊಡದೆ ನಿಮ್ಮಯ ರಾಮ
ಬುಡಕೆ ತಂದನು ಕೊಡಲಿಯನು।
ಬಡವ ಬಲ್ಲಿದನೊಳು ಸೆಣಸಿ ದವಡೆಯ ಪೆಟ್ಟ
ಬಡಿಸಿಕೊಂಡ್ಹೋಗುವ ತೆರನು ॥೧೯೦॥

ಧಣಿಗಳಿಲ್ಲದೆ ಮೈಲಗೆಲಯಿದೆಯೆಂಬುತ
ಮೊನೆಗಾರರಾಗಿ ಬರಬೇಡಿ।
ಹನುಮನ ಸಾಹಸದ ಮುಮ್ಮೋಜಿರಾಯ
ತುಳಿಸುವರು ನಿಮ್ಮ ರಾಮುಗನ ॥೧೯೧॥

ನೀವೆಲ್ಲಿ ಜನಿಸಿದ ತಾವೆಲ್ಲಿ ಮರಣಾದ
ಪೂರ್ವದ ಲಿಖಿತ ಪ್ರಾರಬ್ಧಾ।
ರಾಯನು ಮುಮ್ಮೋಜಿ ಹೋಗಲೇರಿದ ಹನ್ನೆರಡು
ಸಾವಿರ ಕುದುರೆ ಬಲದಿ ॥೧೯೨॥

ಕತ್ತಿಗಳು ಕೂಡಲು ಇತ್ತರದೊಳು ಭೇರಿ
ಮತ್ತೆ ಕಾಳೆಗಳು ನೇಪೂರಿ।
ಹಚ್ಚುವ ಪರಿಬಾಣ ಹೊಡೆವ ಸಿಂಗಾಡಿಯು
ಚಿತ್ತಿಯ ಮಳೆಯಂತೆ ಸೋರೆ ॥೧೯೩॥

ಮೂರು ಭಾಗದ ಮೇಲೆ ಏರಲು ಮೂವರು
ರಾಯ ಮುಮ್ಮೋಜಿ ತುಳಸಿದನು।
ತಾಳಲಾರದೆ ಮತ್ತೆ ರಾಮನ ಬಲ ಮುರಿದು
ಬೆನ್ನಾಗಲು ಬೆದರಿದ ತೆರಕೆ ||೯೪||

ಯಾರು ಈ ಪರಿಯೊಳು ಕಡಿವನು ಲಿಂಗಣ್ಣ
ರಣಧೀರನಹುದು ಕಾರ್ಯದೊಳಗೆ।
ಲಾಲಿಸು ರಣಭೂಪ ರುದ್ರನ ಬಲಭುಜದ
ಪಾಳೆಗಾರನು ಮುಮ್ಮೋಜಿ ||೯೫||

ಹೊಕ್ಕು ಕಡಿವವನಾರು ಹತ್ತಿ ಬೆಳೆಯಿತು ರೋಗ
ಚಿಕ್ಕ ಪ್ರಾಯದ ಛಲಧೀರ।
ಕತ್ತಿಯೊಳ್ ರಣವಿಜಯ ಕಾಳಿಂಗದೇಶದ
ಕ್ಷತ್ರಿ ಕುಲದ ಪಾಂಡುರಂಗ ||೯೬||

ಇವರು ಮಾಡುವ ಕಾರ್ಯ ಶಿವನಿಗೆ ಮೆಚ್ಚುವುದು
ಹಿಡಿದು ಹೊಂಚುವನಾರೊ ಹಳ್ಳ।
ಕೊಳ್ಳದಲಿ ಹಾರುವನು ನಿನ್ನೆ ಮುರಿದೋಡಿದ
ಕಳ್ಳ ಮೂಳ ಲಿಂಗರಸು ||೯೭||

ನಕ್ಕನು ರಣವಿಜಯ ಪುತ್ರ ಚೆನ್ನಿಗರಾಮ
ಹತ್ತಿದ ಕುಂಜರವನಿಳಿದು।
ಉತ್ತಮದ ತುರಗವ ಕುಮಾರರಿರ್ವರು ಏರೆ
ಹೊಕ್ಕನು ಲಿಂಗ ಬಾದುರನು ||೯೮||

ವೀರ ಸಂಗಮರಾಯ ಹೊಗಲೇರಿ ಮುಮ್ಮೋಜಿ
ರಾಯಗೆ ಇದಿರಾಗಿ ದಳವ ।
ಏರಗೊಡದೆ ಒಂದು ಎಂಟು ಸಾವಿರ ಬಲವ
ನೀರ ಕುಡಿಸುತ ನಿಲ್ಲಿಸಿದರು ||೯೯||

ಬಾದುರ ಬಲವಂತ ದೇವಿಸೆಟ್ಟಿಯ ಲಿಂಗ
ಧೀರ ಪಾಂಡುವಿಗೆ ಎದುರಾಗಿ ।

ಮೀರಿ ಮುಂದಕೆ ಬರೆ ಪ್ರಾಣದೊಡೆವೆನು ಎಂದು
ಹದಿನಾರು ಸಾವಿರ ಪೌಜ ಕಡಿಯೆ ॥೨೦೦॥

ಕಾಲಭೈರವನಂತೆ ಕನಕಗಿರಿ ನಾಯಕ
ಹಮ್ಮೀರ ಬಾಣೆಯ ಮುದ್ದ।
ಏರಗೊಡದೆ ಮಿಕ್ಕ ತುರುಗ ಕಾಲ್ಬಲವನು ಒಳ
ಸೇರಿ ಬಂದವರ ಸೆಳೆಯುತಲಿ ॥೨೦೧॥

ಹತ್ತಲು ರಣರಂಗ ಕಿಚ್ಚಿನಾರ್ಭಟದೊಳು
ಮುಚ್ಚಲು ಧೂಳು ಮಂದುಲವ ।
ಚಕ್ರವು ಸರಳಂಬು ಬತ್ತಿ ಬಾಣಗಳಿಂದ
ಕತ್ತಲೆಗವಿಯೆ ರಣಭೂಮಿ ॥೨೦೨॥

ಆರು ಸಾವಿರ ಕುದುರೆ ಹದಿನಾರು ಸಾವಿರ ಮಂದಿ
ಝೋರಿಸಿ ಸಂಗಯ್ಯ ಮುತ್ತೆ ।
ರಾಯ ರಾಮನ ಭಾವ ವೀರ ಸಂಗಯ್ಯ ಕಡಿದ
ಮೂರೆರಡು ಬೀದಿಯ ಒಳಗೆ ॥೨೦೩॥

ತಾವರೆ ಸಖನಾದ ಕೊಮಾರನ ಕೋಪದಲಿ
ಏರಲು ಮುಮ್ಮೋಜಿ ನೂಕಿ ।
ಸೋರಿಸಿ ಅಂಬಿನ ಮಳೆ ಏಳು ಕಣುಗೆಡದೆ ನಿ
ಸ್ತ್ರಾಣದೊಳಗೆ ಕಾದುತಿರಲು ॥೨೦೪॥

ಪರಿದೋಡಿ ಬಂದಾಗ ಚರನೋರ್ವ ಸುದ್ದಿಯ ಕೊಡಲು
ಮುಳುಗಿದ ಸ್ವಾಮಿ ಸಂಗಯ್ಯ।
ನುಡಿಯು ಕರ್ಣಕೆ ಬೀಳೆ ಆರ್ಭಟಿಸಿ ಇರ್ವರು ಏಳೆ
ಸಿಡಿದೆರಗುವ ಸಿಡಿಲಂತೆ ॥೨೦೫॥

ಹೊಕ್ಕರು ಇರ್ವರು ದಿಕ್ಕೆರಡು ಭಾಗದಲಿ
[ಕೊ]ಚ್ಚಿ ಕೊರೆಯುತ ಇಕ್ಕೆಲವ ।
ಸೊಪ್ಪೆಯನರಿದಂತೆ ಸವರುತ ತುರಗವ
ನೊತ್ತುವರು ಬೀದಿಗೋಲುಗಳ ॥೨೦೬॥

ಹಸಿದಿರ್ದ ಕರಿಗಳು ರಸದಾಳೆ ಕಬ್ಬಿನ
ಹಸನಾದ ಹೊಲಗದ್ದೆ ಹೊಕ್ಕು ।
ಅಶನ ತುಂಬಲು ಮುಟ್ಟಿ ಗ್ರಾಸವನು ಕೊಂಬಂತೆ
ತೃಷೆಗಡಿದು ಕರ ಮನದಣಿಯೆ ॥೨೦೭॥

ಅಗಡಿನಬ್ಬರದೊಳೆ ಭೋರ್ಮೊರೆದು ಇರ್ವರು ಏಳೆ
ಸದೆಯುತ ಆನೆಯಶ್ವಗಳ।
ಹದಿನಾರು ಬೀದಿಯ ಕಡಿದು ಮುಮ್ಮೋಜಿಯು
ಹಿಡಿದನ ಕೈಸೆರೆಯೊಳಗೆ ॥೨೦೮॥

ಇತ್ತ ಮುಮ್ಮೋಜಿಯ ಕೊಟ್ಟು ಪಾರದ ಒಡನೆ
ಹತ್ತಲು ಪಾಂಡುರಂಗನಿಗೆ ॥೨೦೯॥

ರಾಯ ಪಾಂಡುರಂಗ ಬಾದುರ ಲಿಂಗನ ಮುತ್ತಿ
ಝೇರಿಸಿ ಜೇನ್ನೊಣದಂತೆ।
ವೀರ ಸಂಗಯ್ಯ ಕಾಟ ಕುಮಾರರಾಮ ಹೋಗಿ
ಮೂರು ಬೀದಿಯ ತಾರ ಕಡಿಯೆ ॥೨೧೦॥

ಕಡಿಯಲು ಕದಳಿಯ ವನದೊಳು ಕರಿಹೊಕ್ಕು
ಸದೆಬಡೆದು ಸದರಿ ಕುಳಿತಂತೆ ।
ಬೆದರಲು ಜೊಳ್ಳೆದ್ದು ಬಾದುರ ಲಿಂಗನು ಏರಿ
ಹೊಡೆಯಲು ಮೂರಾರು ಬೀದಿ ॥೨೧೧॥

ಬಿಡಿಸಿಕೊಂಡರು ಮತ್ತೆ ಗಡಣೆ ರಾಮನ ಮಂದಿ ಸುತ್ತ
ಬಳಸಿತು ಬಳೆಯ ಬಿಟ್ಟಂತೆ ।
ಬೆದರೋಡು ಮಂದಿಯ ಶಿರವರಿದು ಕಟ್ಟಿಹಾಕಿ
ತುರಗ ಹಿಡಿವರು ಕಡಿಮೊದಲೆ ॥೨೧೨॥

ರಾಮ ಕಾಟನು ಹೊಕ್ಕು ಪಾಂಡುರಂಗನ ಮೇಲೆ
ವೀರಸಂಗಯ್ಯ ಬಾದುರನು ।
ನೂರಾರು ತಲೆ ಹೊಡೆದು ರಣಧೀರ ಪಾಂಡುರಂಗ
ಭೇರುಂಡನಂದದಿ ಹೆಣಗೆ ॥೨೧೩॥

ಕತ್ತಿಯೊಳ್ ಕದನಪ್ರಚಂಡನಹುದು ಎಂದು
ಇತ್ತ ರಾಮಯ್ಯ ಸಾಗಿಬರಲು ।
ಕ್ಷತ್ರಿಯ ಕುಲವಂಶ ಕೀರ್ತಿಮಾಳ್ಪವನಹುದು
ಮತ್ತೊರ್ವನಾದೆ ಬಿಡು ಛಲವ ||೨೧೪||

ಬಾಲ ಪ್ರಾಯದ ತರಳ ಕೂಲಿ ಜಗಳಕೆ ಬಂದು
ಸಾಯಲೇತಕೆ ಕೈಯ ನಿಲಿಸು।
ಜೀವದ ಭಯ ಕೊಟ್ಟು ರಾಯ ರಾಮನು ಬೇಗ
ಬಾರೆನುತ ಕರಗಳ ಪಿಡಿಯೆ ||೨೧೫||

ಬಾಣೆಯ ಮುದ್ದನು ಪ್ರಧಾನಿ ಲಿಂಗರಸನು
ಜೋಡಿಸಿದ ಮೂರು ಲೌಡಿಯನು ।
ಮೇಗಣ ಕೆನೆ ಜುಟ್ಟು ನೆಗೆದು ಪಿಡಿದೆಳೆತಂದು
ರಾಯ ರಾಮನು ಇದ್ದ ಬಳಿಗೆ ||೨೧೬||

ದಣಿಗಳಾದರು ಮೂರು ಕೈಸೆರೆಯ ಸೇರಲು
ಮಿಕ್ಕವರು ಗಿಡ ಮೆಳೆಯ ಬೀಳೆ ।
ಹೆಣಗಳನೆಳಕೊಂಡು ಮಡಗಿ ಇಪ್ಪರು ಕೇಳಿ
ಜಲ[ವನು] ಹೊಕ್ಕು ಕರಮುಗಿಯೆ ||೨೧೭||

ಶ್ರವಣನ ಪರಿಯಾಗಿ ಕೆಲರು ಬೆತ್ತಲೆ ನಿಂದು
ಕರಮುಗಿದು ಬುಡಕೆ ನಾನೊಬ್ಬ।
ಬಿಡಿ ನಿಮಗೆ ಬಹುಧರ್ಮ ಬಿಟ್ಟಿ ಬಂದವರೊಂದು
ದೈನ್ಯಬಡುವರು ಕಡೆಮೊದಲೆ ||೨೧೮||

ರಣವೆಲ್ಲ ಕೆಸರೆದ್ದು ಸೆಣಸುವರಿಲ್ಲದೆ
ಹಿಡಿಸಿದ ಧರ್ಮ ಕಹಳೆಯನು ।
ರಣವನು ಸೋಸುತ್ತ ಬರುವಾಗ ಒಬ್ಬನ
ಪಣೆಗೆ ನಾಮವ ಬರೆದು ಕಳುಹೆ ||೨೧೯||

ರಾಯ ರುದ್ರಗೆ ಒಂದು ಕುಮಾರಗೆ ಎರಡೆಂದು
ಸಾರಿ ಪೇಳಲು ಭಯ ಬಿಡದೆ ।

ಯಾರಾರು ತಮ್ಮೊಳಗೆ ಅಳಿದ ಮಂದಿಗೆ ಅಗ್ನಿ
ಮಾಡಿಸಿ ಪಾಳ್ಯಕೆ ನಡೆಯೆ ||೨೨೦||

ಸತ್ತವರ ಮಕ್ಕಳಿಗೆ ಹೆಚ್ಚು ಸಂಬಳ ಮಾಡಿ
ತಮ್ಮಪ್ಪಾಜಿ ಬಳಿಗಾಗ ಬಂದು।
ಮತ್ತೇನು ಭಯವಿಲ್ಲ ಈ ಹೊತ್ತಿಗೆ ನಮಗೇನು
ರಕ್ತದ ಹಳ್ಳ ಹರಿಸಿದೆನು ||೨೨೧||

ರಾಯ ಕಂಪಿಲನಾತ್ಮಜ ಪಾಳ್ಯದೊಳಿರುತಿರೆ
ಆನಂದ ಪರಿಪೂರ್ಣದೊಳಗೆ ।
ಭೂಪರುದ್ರನ ಮಂದಿ ಉಳಿದವರು ಓಡುವ ಪ್ರ
ತಾಪವ ಕೇಳಿ ಬಲ್ಲವರು ||೨೨೨||

ಸಾಕಿನ್ನು ಸಂಬಳ ಯಾಕೆ ಮಾಡಿದೆ ಶಿವನೆ
ಲೋಕದೊಳುಂಟೆ ಈ ಕರ್ಮ।
ಭೂತಗೆ ಕಡಿವಂಥ ಕುರಿ ಮೇಕೆಗೆ ಕಡೆಯಾಗಿ
ಹಾಕಿದನೆ ಬ್ರಹ್ಮ ನರಜನ್ಮ ||೨೨೩||

ಕಾಂತ ರುದ್ರನ ನೋಡಿ ಕರುಮಾಡವನು ಹತ್ತಿ
ರಕ್ತದ ಮಳೆ ಸುರಿದಂತೆ ।
ನೇತ್ರವು ಹೆಚ್ಚಲು ಎದೆ ಎರಡು ಪಾಲಾಗಿ
ಚಿತ್ತದೊಳಗೆ ಜ್ಞಾನ ಮರೆದ ||೨೨೪||

ಸರಸ ಬೆರೆಸಿತು ಎಂಬ ತೆರಬಂತು ಎಲೆ ಮಂತ್ರಿ
ಎಮ್ಮ ಬಲವೆಲ್ಲ ಅಡಗಿತು ಶಿವನೆ।
ತೃಣವೆ ಪರ್ವತವಾಗಿ ಬಲವುಳ್ಳ ಕಾಲಕ್ಕೆ
ನರಿಯು ಹೆಬ್ಬುಲಿಯಾದ ಗಾಥೆ ||೨೨೫||

ಎಲ್ಲಿ ರಾಮನು ಇವ ಎಲ್ಲಿ ಜಗಳವು ಎಂದು
ಕಲ್ಯಾಣದೊಳಗೆ ಬಿಜ್ಜಳನು ।
ಅಲ್ಲಿ ಮೈಲಿಗೆಯಿಂದ ವೀರ ಮಡಿವಳ ಕೊಂದ
ಇಲ್ಲಿಗೆ ತನಗಾಯಿತೆಂದ ||೨೨೬||

ಧರೆಗಧಿಕ ಹಂಪೆಯ ವರಪುಣ್ಯಕ್ಷೇತ್ರದ
ಪುರಕಧಿಕ ವಿರೂಪಾಕ್ಷಲಿಂಗ।
ತರಳ ರಾಮನು ಎರಡು ಜಗಳ ರುದ್ರನ ಗೆಲಿದು
ಹೊರಡುವಲ್ಲಿಗೆ [ಗೊಂಬತ್ತು] ಸಂಧಿ ॥೧೧೭॥*

❖❖

* + ಅಂತು ಸಂಧಿ ೯ಕ್ಕಂ ಪದನು ೧೮೧೫ಕ್ಕಂ ಮಂಗಳ ಮಹಾಶ್ರೀ (ಮೂ).

ಸಂಧಿ : ಹತ್ತು

❖

ಓರುಗಲ್ಲ ರುದ್ರನ ಪರಾಭವ

---

*ಶ್ರೀ ಗಿರಿಜೇ[ಶ] ಭಾಗೀರಥಿ ವಲ್ಲಭನೆ
ನಾಗಭೂಷಣ ನಂದೀಶ।
ಆಗಮಕೊಡೆಯನೆ ಮೂಜಗವ ರಕ್ಷಿಪನೆ
ಶ್ರೀಗಿರಿ ಮಲ್ಲ ಕೊಡು ಮತಿಯ ॥೧॥

ಮಾವನ ಶಿರವಧಿಸಿ ಕಪಾಲವ ಧರಿಸಿದನೆ
ನಾಡ ಮಣಿಹವ ನರಹರಿಗೆ ।
ಮಾಡಿ ಮನ್ಮಥಸುತನ ಮಾವನ ಮನೆಯ
ದ್ವಾರ [ಕಾಯ್ದ] ಕೊಡು ಮತಿಯ ॥೨॥

ಕಾಶಿ ರಾಮೇಶ್ವರಕೆ ಈಸು ವೆಗ್ಗಳವಾದ ಶ್ರೀ
ಶೈಲ ವರ ಹಂಪೆ ವಿರುಪಾಕ್ಷ।
ಲೇಸಾಗಿ ಪಾಲಿಪುದು ಮುಂದಣ ಕೃತಿಯ
ಸೂಸುವುದೆನ್ನ ಹೃದಯಕ್ಕೆ ॥೩॥

ಗಜಮುಖ ಗಣನಾಥ ಒಡಗೂಡು ಹೃದಯದಿ
ನಡೆಸೆನ್ನ ಮುಂದಕ್ಕೆ ಪದವ ।
ನುಡಿಯುವ ಜಿಹ್ವೆಯ ಸ್ವರಕೆ ಶಾರದೆ ಬಂದು ಪ್ರತಿ
ಕೆಡದಂತೆ ಮತಿಯ ಪಾಲಿಪುದು ॥೪॥

---

* ರುದ್ರನ ಯರಡನೆ ಸಂಧಿ, ಶ್ರೀ ವಿರುಪಾಕ್ಷಲಿಂಗಾಯ ನಮಃ ।ಪದನು(ಮೂ).

ವರನಲ್ಲವೊ ಚಿತ್ತ ಪರಜ್ಞಾನಮೂರ್ಖರಿಗೆ
ಪರಸ್ತ್ರೀಯ ಕಳ್ಳ ಸುಳ್ಳರಿಗೆ ।
ಹರನಿತ್ತುದಲ್ಲದೆ ಧರೆ ನಾರಿಯರು ತನ್ನ
ಗುರು ತಾಯಿ ಎಂದು ಕಾಣ್ಬರಿಗೆ ॥೫॥

ಅಂತಪ್ಪನಾಗಲು ರಾಮನ ಬೆನ್ನಲೆ
ಕಂತು ಹರನು ಕಾದಿಹನು ।
ವಂಚನೆ ಪರವಿಷಯ ಕರ್ಮಿಗಳ ಎಡಬಲನ ಲ
ಕ್ಷಾಂತ್ರ ಯೋಜನವನು ಪೊದ್ದವರೆ ॥೬॥

ಕೇಳಬಹುದು ಸತ್ಯ ಬಾಲರಾಮನ ಕೃತಿಯ
ಆಲಸ್ಯ ಮಾಡದೆ ಪ್ರೌಢರು ।
ಮೂಢರಿಗೆ ಮುಂದರ್ಥ ಒಡೆದು ಪೇಳಲು ಕುರುಡಗೆ
ಪಟ ಪಿಡಿದಂತೆ ಕಾಣುವುದು ॥೭॥

ಎತ್ತುವೆ ರಾಮನ ಸತ್ಯಸಾಗರ ಕಥೆಯ
ಚಿತ್ತ ಬೇಸರದೆ ಕೇಳುವುದು ।
ಕತ್ತಿಗೆ ಹೊರತಾಗಿ ಕಳ್ಳನ ವಿಷಯ ಗ್ರಹಿಸದೆ
ಶಿವಶಕ್ತಿ ಆದವನ ಕೃತಿಯನು ॥೮॥

ತಿಳಿಯದೆ ನುಡಿವನು ಮರುಳು ಮಾನವನು ಮೇಲೆ
ಗರುಡನಂದದಿ ಹೋನಲ್ಲ।
ದೊರೆಯದು ಹೊರಗಿರಲು ಇದಕುಂಟು ಕೃತಿ ದೃಷ್ಟ
ಜಯಲಕ್ಷ್ಮಿ ಒಲಿದ ಮನುಜರಿಗೆ ॥೯॥

ಹರನೊಲಿದ ಕಾಲದಲಿ ಬರಡೆಲ್ಲ ಹಯನಕ್ಕು
ಧರಣಿಗೆ ಸೋತೊಮ್ಮೆ ಬರುವೆ ।
ಹಿರಿಯ ಲಕ್ಷ್ಮಿಯು ಬಂದು ಹೆಗಲೇರೆ ರುದ್ರಗೆ
ಹಿಡಿಯದೆ ಆ ತೇಜಿ ನೆಲನ ॥೧೦॥

ದೂರಲ ಮಾತೇಕೆ ಲಾಲಿಸಿ ಬಲ್ಲವರು
ಸೋಮಶೇಖರನ ರಾಣಿಯನು।

ಮೇಲೊಬ್ಬ ಕರೆದೊಯ್ಯೆ ತರುವುದಕೆ ನರಕಪಿಯ
ನೀರು ದೊರೆಯದೆ ಚಿತ್ರರಥಗೆ ||೧೧||

ಶಾಲಿವಾಹನ ಮಣ್ಣೊಳ್ ಆನೆ ಕುದುರೆ ಮಾಡಿ
ನೂರಾರು ಲಕ್ಷ ಅಕ್ಷೋಣಿಯನು ।
ಸಹಾಯವಾಗಲು ಹರನು ನವಕ್ಷೋಣಿ ವಿಕ್ರಮನು
ಪ್ರಾಣವಾಗವೆ ಮಣ್ಣ ಬೊಂಬೆ ||೧೨||

ದೇವೇಂದ್ರನ ಬಿಳಿಯಾನೆ ಭೂಮಿಗೆ ಇಳಿಯದೆ
ಶ್ರೀ ಮಹಾದೇವನೊಳಗಿರಲು ।
ಏರೋ ಬೊಲ್ಲನು ಎಮ್ಮ ಪ್ರಾರಬ್ಧ ತಮಗಿರಲು
ಸೇರದೆ ತನ್ನಿಂದ ತಾನೆ ||೧೩||

ಆರಾರ ಲಿಖಿತದಿ ಪೂರ್ವದಿ ಪಡೆದಂಥ
ಹಾನಿ ಸುಖ ಕಷ್ಟ ತಪ್ಪುವುದೆ ।
ಲಾಲಿಸೈ ಮುಂದೊಮ್ಮೆ ನರರ ಮಾತುಗಳೇನು
ಕೇಳಿರ್ರೆ ರುದ್ರನ ಕೋಪ ||೧೪||

ಗಣಪತಿರಾಯನ ಮಗ ರುದ್ರಭೂಪಾಲ
ಮೆರೆವ ಹಜಾರದಿ ಕುಳಿತು।
ಕರೆಸಿದ ತನ್ನಯ ಹಳೆಯ ಮಂತ್ರಿಯ ಬೇಗ
ಧರಣಿಪಾಲಕರ ಹರುಷದಲಿ ||೧೫||

ಕರಿತುರಗ ಕಾಲಾಳು ಪರಿಚರರು ಪಾತಕರು
ಸದರಿಗೆ ನಿಂತು ಕರಮುಗಿದು ।
ಇರುವಂಥ ಸಮಯದಿ ರಾಯನ ವರಪುತ್ರ
ಮೊರೆವಾವೇಶದಿ ಸಾಗಿ ಬರಲು ||೧೬||

ಧೀರನು ಎಪ್ಪತ್ತುರಾಯನು ಬರಲಾಗ
ಬೇರವನ ಮಂತ್ರಿ ಮನ್ನೆಯರು।
ಭೇರುಂಡನಂದದಿ ಹದಿನಾರು ಸಾವಿರದೊಳು
ರಾಯಗೆರಗಿ ಕರಮುಗಿದು ||೧೭||

ರಾಯ ರುದ್ರನು ಪೇಳೆ ಜೀವಣ್ಣ ಮಂತ್ರಿಯ ಕೂಡೆ
ಹೀನಾಯ ಬಂತೆಮಗೆ ಮಂತ್ರಿ ।
ನಾಯಿ ಹೋಗಿ ಹುಲಿಯಾಗಿ ಆನೆಯ ಗುಟುಕನು ಪೋವ
ಭೇರುಂಡನಂದದಿ ರಾಮ ॥೧೮॥

ಹರನೊಳು ಕಾದಿದ ನರನ ಅಣ್ಣನ ಪಿತನ
ಹೊರುವ ವಾಹನದಂತೆ ನಾವು ।
ಹೊರಗೆ ಹೋಗುವ ಮಾರಿಯ ಮನೆಗೆ ಕರಕೊಂಡಂತೆ
ತೆರ ನಮಗೆ ಕೊಡಲಾದ ಲಿಂಗ ॥೧೯॥

ಲಿಂಗನ ಬಿಡು ಎಮಗೆ ಬಂದುದು ಹೀನಾಯ
ಪಾಂಡುರಂಗಯ್ಯ ಮುಮ್ಮೋಜಿ।
ಇಂದಿವನ ಕೈಸೆರೆಯ ಸೇರಲು ಧರೆ ಭೂಮಿ ರವಿ
ಚಂದ್ರರುಳ್ಳನಕ ಅಪಕೀರ್ತಿ ॥೨೦॥

ಹಲವು ಚಿಂತೆಗಳನು ಗ್ರಹಿಸುವ ಸಮಯಕ್ಕೆ
ಕವಲು ನಾಮದ ಬಂಟ ಬರಲು।
ಕರ ಮುಗಿದು ಕೈಕಾಲು ನಡುಗುತ್ತ ರಾಜೇಂದ್ರ
ವಿವರಿಸಿ ಕಾರ್ಯದ ಸ್ಥಿತಿಯ ॥೨೧॥

ಹೇಳುವರಳವಲ್ಲ ಜೀವ ಬೆಚ್ಚುವುದರಸೆ
ಮಾರಿಗೆ ಹೊಡೆದ ಕುರಿಯಂತೆ ।
ತಾರು ಮಾರಿನ ಮೇಲೆ ಹೆಣವನು ಒಗೆದಂತೆ
ಸಾಲು ಮಲಗಿತ್ತು ದಂಡೆಲ್ಲ ॥೨೨॥

ಅಳಿದವರಲ್ಲದೆ ಉಳಿದವರು ಬಂದರೆಯು
ಕಳಲೆಯ ಕೊರೆದ ತೆರನಾಗಿ ।
ಹರಿಯಲು ಹಳ್ಳದ ರಣರಕ್ತ ಭೂಮಿಯು
ಕೆಸರಾಗಿ ಹೋದುದು ಭೂಪ ॥೨೩॥

ರಾಯನು ಮುಮ್ಮೋಜಿ ಪಾಂಡುರಂಗಯ್ಯನು
ಮಾಡಿದ ಒಳ್ಳೆ ಕಾರ್ಯವನು ।

ಸೇರಿದರು ಕೈಸೆರೆಯ ಮಂತ್ರಿ ಲಿಂಗರಸನ
ಸೇರಿಸಿ ಹೆಡಗಟ್ಟಿನೊಳಗೆ ||೨೪||

ಗುರಿಕಾರರನೆಲ್ಲ ಹೆಸರಿಗೆ ಬಿಡಲಿಲ್ಲ
ಸರದಾರರೆಲ್ಲ ಸಾಗಿದರು ।
ಉರಿಕೊಂಡ ಜೇನಿನ ಹುಳಕಿಂತ ಕಡೆಯಾಗಿ
ಯಮನ ಕಂಡರು ತುರಗಮಂದಿ ||೨೫||

ಲಿಖಿತ ಶರ ಗಚ್ಯಾಗಿ ಶತಕದೊಳೈವರು
ಮುಖದೋರೆ ಕಾಣೆ ನಿಮ್ಮೆಡೆಗೆ ।
ಭಸಿತ ಧರಿಸಿದ ನಯಕೆ ಕಾಣಿಸುವುದೆ ಅರಸೆ
ತಿಳಿಕೊಳ್ಳಿ ಇದರೊಳು ಅರ್ಥ ||೨೬||

ಹರನ ವ್ರತದವ ನೀನು ಹರಿಯ ನಾಮವನಿಟ್ಟ
ಪರಿಯೇನು ಎನುತರಸ ಕೇಳೆ ।
ಪರಬಲಾಂತಕ ಕೇಳು ಧರಿಸಿದ ರಣರಾಮ
ನಿಮಗೊಂದು ನಿಮ್ಮಗಗೆ ಎರಡು ||೨೭||

ಚರನು ಆಡುವ ಮಾತ ಧುರಧೀರ ರುದ್ರನು ಕೇಳಿ
ಬರ ಸಿಡಿಲಂತೆ ಭೋರ್ಗರೆದು।
ಹುಲಿ ಬಡವನಾದರೆ ನರಿ ಬಂದು ನಂಟತ್ವ
ಕೊಡು ಹೆಣ್ಣನೆಂಬ ತೆರಬಂತು ||೨೮||

ರಾಯ ರುದ್ರನು ಏಳೆ ಶರಭನಗ್ರದ ಒಳಗೆ
ಕಾಲನಂದದಿ ಕಿಡಿಸೂಸಿ।
ಕೂಡಲಿ ಚತುರಂಗ ಬಲವು ಭೇರಿಯ ಹೊಡೆಸೆ
ಜೀವಣ್ಣ ಮಂತ್ರಿ ಪೇಳಿದನು ||೨೯||

ರಾಯ ಸೈರಿಸಬಹುದು ಕೇಳುವುದು ಜನಮಾತ
ಮೇಲೆ ನೀ ಹೋಗುವುದು ಬಲು ಕಷ್ಟ।
ನಾವೆಲ್ಲ ಇದ್ದೇನು ನೀವಿಂದು ಹೋಗುವುದು
ಮಾಡಿಸುವ ತಂತ್ರ ಯುಕ್ತಿಯಲಿ ||೩೦||

ತಾನು ಮಾಡುವ ಕಾರ್ಯ ತಾನು ಮಾಡದೆ ಮಳೆಯು
ಆಗುವವೆ ಮಂತ್ರಿ ಧರೆಯೊಳಗೆ ।
ಹೀನಾಯ ತಮಗೆಂದು ಎರಡು ಜಗಳವ ಮುರಿಯೆ
ಭೂಮಿ ಇರಲು ಅಪಕೀರ್ತಿ ॥೩೧॥

ರಾಯನಾಡುವ ಮಾತ ಕೇಳಿ ಎಪ್ಪತ್ತು ರಾಜ
ಪಾಲಿಸೈ ಎನಗೆ ವೀಳ್ಯ।
ನಾಮವಿಟ್ಟನ ತಲೆಯ ಚೆಂಡಾಡದಿದ್ದರೆ ನಿಮ್ಮ
ಕುಮಾರನೆನ್ನಬಹುದೆ ರಣಹೇಡಿ ॥೩೨॥

ಮುನ್ನ ಮೂವರ ಕಳುಹೆ ಮುವತ್ತು ಸಾವಿರ ಬಲವು
ಮಣ್ಣ ಕಂಡರು ಯಮನೂರ।
ಸಣ್ಣವನು ನೀ ಹೋಗಿ ಅಪ್ಪ ಹಾನಿಯಾಗಲು ಮೂಗು
ಒಮ್ಮೆಲೆ ಹೋದ ತೆರ ಬಂತು ॥೩೩॥

ಸ್ವಾಮಿ ನಿಮ್ಮೊಳು ಉತ್ರ ಆಡಲಿಕೆ ಅಂಜುವೆನು
ಬೀಳು ಉತ್ರವನು ನೀನಾಡೆ।
ಪಾಳೆಗಾರನ ಮೇಲೆ ಮೂವರಿರಲು ಕ್ಷತ್ರಿ
ರಾಯ ಪೀಳಿಗೆಯ ಸಂತತಿಯೆ ॥೩೪॥

ಹೇಳಿಕೊಂಬರೆ ರಾಯ ಕುನ್ನಿಯವನೆ ನಾನು
ಬಾಲನ ಸಾಹಸ ನೀವು ।
ಕಾಣದಾದಿರೆ ತನ್ನ ವಾಹನಕೆ ನವಕ್ಷೋಣಿ
ತಾಳಲಾನುವುದೆ ರಾಜೇಂದ್ರ ॥೩೫॥

ಹುಲಿಯ ಗರ್ಭದಿ ಹುಲ್ಲೆ ಮರಿ ಮುನ್ನ ಜನಿಸುವುದೆ
ಖಗರಾಜಗೆಣೆಯೆ ಕಾಗೆಗಳು।
ಹಗಲೊಡೆಯ ಬರುವಾಗ ತಿಮಿರ ನಿಲ್ಲುವುದುಂಟೆ
ಮಗನ ತೇಜಕೆ ರಾಮನಿದಿರೆ ॥೩೬॥

ಪುತ್ರನ ಛಲಪದಕೆ ಮೆಚ್ಚಿ ರಾಜೇಂದ್ರನು
ಮತ್ತೆ ಭೇರಿಯನು ಹೊಡೆ ಎನಲು ।

ಕಟ್ಟಿಗೆ ಚರರಾಗ ಕೇರಿ ಬೀದಿಯ ಮೇಲೆ
ಪುತ್ರ ಹೊರಡುವನು ಕೂಡೆನಲು ||೩೭||

ಬಂದುದೆ ಬದಲೋಲೆ ಯಮನಿಂದ ಮಿಕ್ಕವರಿಗೆ
ತುಂಬಲಿಲ್ಲವೆ ಪಾಪಿಪುರವು ।
ಮುಂಡೆಯಾದರು ನಿನ್ನೆ ಮೂವತ್ತು ಸಾವಿರವ
ಸಂಬಳವು ಸುಡಲಯ್ಯ ಎಮಗೆ ||೩೮||

ಕಾಲಗೆಯಿಲು ರುದ್ರರಾಯಗೆ ಪೂರ್ವದ
ಸ್ನೇಹಗಳು ರಾಮ ಮೂವರಿಗೆ ।
ಆಗದೆ ಇವ ಕಳೆವ ಸೇವಾಗದೆ ಕಡಿಯನು
ಹಾಗೆ ತೋರುವುದು ನೋಡಿದರೆ ||೩೯||

ಮೊದಲ ಕಾಳಗದೊಳು ಗೆಲು ತೋರದ ಬಳಿಕ
ಜಯಿಸುವುದೆ ನವಕ್ಷೋಣಿ ಬಳಿಕ ।
ವಿಧಿವಾಸ ಒದಗಿತು ತರಳನೇರುವ ಬೊಲ್ಲ
ಕಳಕೊಂಬ ತೆರ ಕೂಡಿ ಬಂತು ||೪೦||

ಕೆಲಬರು ತಲೆಬೇನೆ ಕೆಲಬರು ಚಳಿಜ್ವರ
ಕೆಲಬರು ಗಾಯ ಸಾಯದಲಿ ।
ಅಳಿವನೆನ್ನುತ್ತ ಮಡದಿ ಜಲವನೊರಸುತಲಿಪ್ಪ
ಬಡಿದು ಹೊರಡಿಸಲು ಬಂಧನದಿ ||೪೧||

ಬಂದರು ಪತಿಯಳಿದ ರಂಡೆಯ ತೆರದೊಳು
ಹಿಂಡ ಕೂಡಿಸಿ ತಮ್ಮನೆಂದ।
ಮುಂದಾಗಿ ನಡೆದಿರುವ ತಂದೆ ತಾಯಿಗಳೆಡೆಯ
ಇಂಬುಗೊಳಿಪ ಸ್ವರ್ಗ ಗತಿಯ ||೪೨||

ಕಂಡವರು ಈ ಬಗೆಯ ನೊಂದುಕೊಳ್ಳುತ ಬರಲು
ಕಾಣದವರು ಶೌರ್ಯ ಕೇಳಿ ।
ಹಾರುತ ಹರಣವ ಹಸನಾಗಿ ರಾಜೇಂದ್ರ
ರಾಮನ ಬಿಡಿಯೆಮ್ಮ ಕಡೆಗೆ ||೪೩||

ಬಂದರು ಬಲವಂತ ಲಂಬೋಜಿಖಾನರು
ಎಂಬತ್ತು ಸಾವಿರ ತುರಗ।
ಕೊಂಬು ಸಾಳವ ಪಿಡಿದು ಕುಂಜರವ ಕಳುಹಿದರು
ಹನ್ನೆರಡು ಸಾವಿರ ಬಂಟರೆಡೆಗೆ ||೪೪||

ಶಕ್ತಿ ಸಾಹಸದೊಳು ಕಿತ್ತಿಡುವರು ಗಿರಿಗಳನು
ಕತ್ತಿ ಕೊಂಬುವರು ಒಂದೂರ।
ಮೆಟ್ಟಿ ತುಳಿವರು ಒಂದು ಸಾವಿರ ಬಲವ
ದಿಟ್ಟರೊರಗಿದರು ವಾಲಗಕೆ ||೪೫||

ತೇಜಿಯ ತರಹೇಳಿ ರಾಯ ರುದ್ರನು ತಮ್ಮ
ಮಲ್ಲಯ್ಯ ಸಾಣಿಯೆಂಬವಗೆ।
ಜಲ್ಲನೆ ಹೊರಟರು ಸಾಣಿಗರು ಮುತ್ತು
ಬೊಲ್ಲನು ಇರುವ ಅರಮನೆಗೆ ||೪೬||

ಜಂತ್ರದ ಕೆಲಸದ ಜಾಳಿಂದ್ರರ ಮನೆ
ಅಂತರಂತರದಿ ಕದಮುದ್ರೆ।
ಕಂತುಹರನೆ ಬಲ್ಲ ಕಾವಲ ಪರಿಠವಣೆ
ಮುಚ್ಚಲು ನೊಣ ಹೋಗದಂತೆ ||೪೭||

ಲಾಳಮುಂಡಿಗೆ ಬೀಗ ಬಾಗಿಲ ತೆಗೆಯಲು
ತೇಜಿ ಹೂಂಕರಿಸಿ ಕಾಲ್ಕೆರೆ।
ಹಾಯೆಂದು ಗರ್ಜಿಸಿ ನೇವರಿಸಿ ಮೈಯನು
ಜೋಡ ತೊಡಿಸಿದರು ಬೆನ್ನ ತಟ್ಟಿ ||೪೮||

ನವರತ್ನ ಖಚಿತವ ಬಿಗಿಲ್ಲಿ ಅಪರಂಜಿ
ರವಿಕಿರಣ ಪ್ರಭೆ ಮುಚ್ಚುವಂತೆ।
ಅಳವಡಿಸಿ ಜೀನನು ಹೊಳೆವ ಕುಂದಣ ಜಲ್ಲಿ
ಬಿರಿಯ ಭಟರ ಟ[ವು]ಳಿಯ ||೪೯||

ಮುತ್ತಿನ ಹಲ್ಲಣವು ರತ್ನದ ಎದೆ ಡಾಬು
ಇತ್ತರದ ಸಿಂಗಾಡಿ ಜೋಡು।

ಉತ್ತಮದ ತೇಜಿಯನು ಮತ್ತವರು ಶೃಂಗರಿಸಿ
ದೃಷ್ಟಿ ಆರತಿಯನು ಬೆಳಗಿ ॥೫೦॥

ಕಣಬಾಗಲಿಕ್ಕೆ ತಕ್ಕ ಕಡಗ ಹೊಕ್ಕಳ ಗಂಟೆ
ಜಡೆಗೆ ಕುಂದಣದ ಕುಪ್ಪಿಗೆಯ।
ಕೊನೆಗೆ ಮುತ್ತಿನ ಕುಚ್ಚು ಕುಣಿವ ಪಾದಕೆ ಗೆಜ್ಜೆ
ಪಣೆಗೆ ಸೂಡಿದ ಬಾಸಿಂಗ ॥೫೧॥

ಹಕ್ಕರಿಕೆ ಹಲ್ಲಣ ಇಕ್ಕಿದ ದೆಸೆ ಹಗ್ಗ
ಚಪ್ಪಳೆ ಗತಿಗಿನ್ನು ಕುಣಿಯೆ ।
ಕುಪ್ಪಳಿಸಿ ಹಾರುವ ಕುದುರೆಯ ಕಾಲಿಗೆ
ಕಿತ್ತರು ಮೊಳೆಯ ಸಂಕೋಲೆ ॥೫೨॥

ಕೀಲ ಕಡಿಯಲು ಆಕ್ಷಣವೇರಿ ಗಗನಕೆ ತುರಗ
ಮಾರಪಿತನ ವಾಹನ ವೇಗದಿ ।
ಏರಗೊಡದೆ ಪಿಡಿದು ಎಡಬಲದಿ ತಂತಿಯ ಹಗ್ಗ
ಝೇರಿಸಿ ನಿಂದಲ್ಲಿ ತರುತಿಹರು ॥೫೩॥

ಹೊರಟ ಗಳಿಗೆಲಿ ತುರಗ ತುಡುಕುತ್ತ ನಭವನು
ದಿಗಿಲಿಗೆ ನೆಲವು ಜಝ್ಝರಿಸಿ।
ಕೆಡೆದು ಮುಗ್ಗುತಲವರು ತಡವು ಮಾಡದೆ ತರಲು
ಪಿಡಿದ ಸಾಣೆಗರ ನೀರ್ಗುಡಿಸಿ ॥೫೪॥

ಸಿಡಿಲಿನಾರ್ಭಟದೊಳು ಭೋರ್ಮೊರೆವ ತೇಜಿಯ ಕಂಡು
ಧರಣೇಂದ್ರನಡಿಗೆ ಒಪ್ಪಿಸಲು।
ಕೊಡಿಸಿದ ರಾಜೇಂದ್ರ ಉಡುಗೊರೆ ಉತ್ಸವ
ತುರಗವ ನೋಡಿ ಸಂತಸದಿ ॥೫೫॥

ತುರಗದ ರಾಣಿಗೆ ಇದಿರುಂಟೆ ನವಕ್ಷೋಣಿ
ತುಳಿದು ಕೊಲ್ಲುವುದೆ ಧರಣೇಂದ್ರ।
ಪೂಜಿಸಲು ನೆಗೆದೊದೆಯೆ ಹೊಕ್ಕಳಗಂಟೆ
ಹದಿನಾರು ತುಂಡು ಚೂರೇಳೆ ॥೫೬॥

ಬಿರಿದಿನ ಗಂಟೆಯು ನೆಗೆದು ಬೀಳಲು ರಾಯ
ಕಿರಿ ಮುಖವಾದ ಛಲವಿಳಿದು ।
ಅರುಹಿದನಲ್ಲೊಮ್ಮೆ ಜೀವಣ್ಣ ಮಂತ್ರಿಯು
ಶುಭ ಆಯಗಳ ಕಾಣಲರಿದು ||೫೭||

ಕಾಣಕೂಡದು ರಾಯ ಪಾದಕ್ಕೆ ಹೇಗಹುದು
ತೋರುವುದಿಲ್ಲ ಜಯಪ್ರದವು ।
ಹೋದ ಕಿವಿಗಳೆ ಸಾಕು ಬದಲಾಗಿ ಮೂಗನು
ಕೊಡುವು ತಪ್ಪದು ಕುದುರೆ ಶಕುನ ||೫೮||

ಆಡಬಾರದ ಮಾತ ಹೇಗೆ ಬರುವುದು
ರಾವಣನ ತಮ್ಮ ಪೇಳಿದರೆ ।
ಜೋಡುಗಾರನು ಎಂದು ಬಡದಾಸನೊದ್ದರೆ
ಎಂದ ಗಾದೆಯಾಯ್ತು ಮಂತ್ರಿ ||೫೯||

ಮುರಿದೆರಡು ಜಗಳವು ಗೆಲವುದೋರದ ಮೇಲೆ
ಮಗನು ಹೋಗುವುದು ಕರಕಷ್ಟ ।
ಕಳುಹು ಇಂದವಗೆ ಸರ್ವಮನ್ನಣೆ ಮಾಡಿ
ಹೊಡೆವ ನಮಗೊಂದು ದಿನ ಬರಲು ||೬೦||

ಜೀವಣ ಮಂತ್ರಿಯ ಮಾತ ಕೇಳಿ ಎಪ್ಪತ್ತುರಾಯ
ಭೇರುಂಡನಂತೆ ಗದ್ದಲಿಸಿ ।
ಮೂಳ ರಾಮನ ಮಾತ ಆಡಬೇಡವೊ ಮಂತ್ರಿ
ತಾಳಿಗೆ ಹಿರಿವೆನೆಂದೆನುತ ||೬೧||

ಅಪ್ಪಾಜಿ ಇರಲಿಕ್ಕೆ ಪ್ರಾಣ ಮಿಕ್ಕದು ಮಂತ್ರಿ
ರಾಯನಿಲ್ಲದ ಬಳಿಯ ನೀನಾಡೆ ।
ನಾಲಗೆ ಕೊರೆಸುವೆ ನಯನ ಕೋಪಗಳಾಗೆ
ರಾಯನು ಮಗನ ಸಂತಯಿಸೆ ||೬೨||

ಮಂತ್ರಿಯಾಡುವ ಮಾತು ಅಸತ್ಯವಲ್ಲವೊ ಪುತ್ರ
ಇಂತು ಮಾಡುವರೆ ಕೇಣವನು ।

ಸಂತಯಿಸು ಕೋಪವ ಸರ್ವರಾಯರು ಹಿಂದೆ
ಪಂಥವನಾಡಿ ಕೆಟ್ಟವರು ॥೬೩॥

ಸಿಟ್ಟೇಕೆ ಮಂತ್ರಿಯು ತಪ್ಪು ನುಡಿಯಲು ಇಲ್ಲ
ಮತ್ತೊಮ್ಮೆ ಶಾಸ್ತ್ರಿಕರ ಕರೆಸಿ ।
ದೃಷ್ಟವ ತಿಳಿವನು ಜಯತು ಶುಭಗಳ ಒಮ್ಮೆ
ಕಷ್ಟ ಕಂಡರೆ ತಿಥಿ ಪೇಳುವರು ॥೬೪॥

ಕರೆಸಿದ ಬಲವಂತ ಹಿರಿಯ ಶಾಸ್ತ್ರಿಕರನು
ಪರಿಗಣಿಸಿ ನೋಡಿ ಶುಭಗಳನು ।
ಪರಿಣಾಮ ಕಂಡರೆ ಹೊರಡುವಾ ಜಗಳಕ್ಕೆ
ಕೊರತೆ ಕಂಡರೆ ರೊಕ್ಕ ಕೊಡುವಾ ॥೬೫॥

ವಾರ ತಿಥಿಗಳ ಮೇಲೆ ಶೋಧಿಸಿ ಪಂಚಾಂಗ
ಜಾರಿದ ಗಂಟೆಯ ಬಳಿಗೆ।
ರಾಜೇಂದ್ರ ಲಾಲಿಸು ತೀರಿತ್ತು ತಿಥಿ ಪುಣ್ಯ
ಕಾಲ ತುಂಬಲು ರಾಮನಿಗೆ ॥೬೬॥

ಕುರುಡ ಬಯಸುವುದೇನು ನಯನ ದೃಷ್ಟಿಗಳನ್ನು
ಮನವಿಹುದು ರಾಮನ ಮೇಲೆ।
ಮನದ ಚಂಚಲ ಕಳೆದು ಮುಂದೆ ಭೇರಿಯ ಹೊಡೆಸಿ
ತುರಗವ ಮತ್ತೆ ಪೂಜಿಸಲು ॥೬೭॥

ರಾಯ ರುದ್ರನ ಮಡದಿ ಸೋಮಲಾಂಬಿಕೆ ಬಂದು
ಬೆಳಗಿದಳು ಮುತ್ತಿನಾರತಿಯ ।
ಬಾಲಗೆ ಯಶವಾಗಿ ನಿಮ್ಮ ಕಾರ್ಯ ಗೆಲಿಸುವುದೆಂದು
ಪಾದಕೆರಗಿದಳು ತುರಗದ ॥೬೮॥

ರಾಯನು ಎಪ್ಪತ್ತುರಾಜ ಶೃಂಗರವಾಗಿ
ತಾಯಿ ತಂದೆಗೆ ಒಮ್ಮೆ ಎರಗಿ ।
ಏರಿದ ತುರಗವ ಎಡಬಲ ಚಾಮರ ಪಿಡಿಯೆ
ಭೇರಿ ಕಹಳೆಗಳು ಒದರುತಲಿ ॥೬೯॥

ಬಾಗಿಲ ನಾಲ್ಕನು ಹಾರೊಡಿಸಿ ಹೊರಡಲು
ಕಾಲಾಳು ತುರಗ ಕರಿ ಘಟೆಯ।
ವಾರಿಧಿ ಕಡಲುಕ್ಕಿ ಮೇರೆದಪ್ಪಿದ ತೆರದಿ
ಏರಲು ಲಕ್ಷವರೆ ಪೌಜು ||೭೦||

ಕರಿಯಿಂದ ತುರಗದ ಭರದಿಂದ ಕಾಲಾಳ
ಮೆರೆದಿಂದ ಕೂರ್ಮನ ಎದೆಯು ।
ಬಿರಿಯಲು ಕುಂಜರ ತಲೆದೂಗೆ ಧರಣಿಯು
ಒದರಲು ಶೇಷನು ಕುಣಿದು ||೭೧||

ಬಂಟರು ಬಲವಂತ ಒಂಟಿ ಕತ್ತಿಯ ಹೊಡೆವ
ಪಂಥವಾಡುತ ತೊಡೆ ಬಡಿದು।
ಮುಂಚಾಗಿ ಕೊಡು ನಮಗೆ ಮೂಳ ರಾಯನ ತಲೆಯ
ಅಂತರ ಮಾರ್ಗದಿ ತರುವೆವು ||೭೨||

ರಾಯ ರುದ್ರನ ಮಂದಿ ಹಾರುತ ಹರಿಣನ
ಮೀರಿ ಪೌರುಷವ ಆಡುತಲಿ ।
ತೋರಯ್ಯ ರಾಮನ ತಲೆಯ ಚೆಂಡೆದ ತುದಿಗೆ
ಏರಿಸಿ ಲಿಂಗನ ತರುವೆವು ||೭೩||

ಆದಿತ್ತು ಅರೆಗಳಿಗೆ ಜೀವ ಸೈರಿಸಿ ನಿಮ್ಮ
ಬಾಯಲಾಡಿದ ಮಾತು ಬಿಡದು ।
ನಾವು ಈ ತೆರದೊಳು ಆಡಿ ಜಗಳಕೆ ಹೋಗಿ
ಬೇಲಿ ಹಳ್ಳವ ಹಿಡಿದು ಬಂದು ||೭೪||

ಓರುಗಲ್ಲರಸಿನ ಕುಮಾರ ಎಪ್ಪತ್ತುರಾಜ
ಹೋಗಿಳಿಯೆ ಮಾರ್ನವಮಿ ಬಯಲ।
ಮೇಗಳಾಗವು ಜೇರಪುರಕ್ಕೆ ಜೆಂಡೆವ ಹೊಡೆದು
ಪಾಳ್ಯಾವಿಳಿಯಲು ಹರದಾರಿ ||೭೫||

ಕಂಡರು ಕಲಿಯುಗದ ಮಾರ್ತಂಡ ಭೀಮನ ಮಂದಿ
ಈ ದಂಡ ಕಾಣುತ ಎದೆ ಒಡೆಯೆ ।

ಕೊಂದುದು ಕಡೆಯಿಲ್ಲ ಕಾಗೆ ಬಳಗದ ತೆರದಿ
ಬಂದೀತು ಈ ನಗರ ಸುಡಲಿ ||೭೬||

ರಾಯ ರಾಮನ ಬಳಿಗೆ ಹೋಗಿ ಸುದ್ದಿಯ ಕೊಡಲು
ಭೂಮಿ ಹಿಡಿಯದು ಬಹುದಂಡ।
ಕಾಣಗೊಡದು ಸ್ವಾಮಿ ಪಾದಕೆ ತಿಳಿದಂತೆ
ನೋಡಬಹುದು ಹೊರಟು ನೀವು ||೭೭||

ಭಯಬೇಡಿ ಬಂದುದನುಣಲೊಲ್ಲೆ ಎಂದರೆ ಹರನು
ಹೆಚ್ಚುವನೆ ಸ್ವರ್ಗದಲಿ ।
ಮೃಡಮೂರ್ತಿ ತನ್ನಯ ಪಟ್ಟದ ಕಂಟಕವ
ಕಡಿದು ನೂಕುವನಂಜಬೇಡಿ ||೭೮||

ಬಡವನೆ ಬಲವಂತ ಗಣಪತಿಯ ಮಗ ರುದ್ರ
ಗುರು ತೊಡೆದ ಕೈಲಾಸ ಪುರಕೆ ।
ಬಲವೇನು ಕಡಿದವಗೆ ಲಯ ಮಾಳ್ಪ ಭೇರಿಯನು
ಹೊಡೆವೆನು ನೋಡಿ ನಯನದಲಿ ||೭೯||

ರಾಯ ಕಂಪಿಲ ಸುತನು ಹೀಗೆನುತ ಧೈರ್ಯವ ಪೇಳಿ
ತಾನು ಶೃಂಗರಿಸಿ ಆಭರಣ ।
ಏರಲು ತುರಗವ ಲಿಂಗ ಕಾಟಣ್ಣನು
ಏರಿತು ಪೌಜು ಒಡೆದು ||೮೦||

ರಾಯ ರುದ್ರನ ಸುಕುಮಾರ ಎಪ್ಪತಿರಾಯ
ತಾನು ಕರೆಸಿದನು ಮನ್ನೆಯರ ।
ಕಾಲಾಳು ಕುದುರೆ ಪರಿವಾರ ವೀಳ್ಯವನಿತ್ತು
ಮಾಡಿ ಇದಿರಾಗಿ ಕಾರ್ಯವನು ||೮೧||

ಕಡಿದವಗೆ ಕೊಟ್ಟೇನು ಇಡಿ ಗ್ರಾಮನೊಂದೊಂದು
ಪೊಡವಿ ಇರಲು ಶಿಲೆಯ ಹೊಡೆಸಿ ।
ಹೊಡೆದಾಡಿ ಸತ್ತವನ ಮಡದಿ ಮಕ್ಕಳಿಗನ್ನ
ನಡೆಸಿ ಬರುವೆನು ಸಂಬಳವ ||೮೨||

ಹುಡುಗ ರಾಮನ ಕಡಿದು ಮೊರೆ ಬಿದ್ದವನ ತಂದವಗೆ
ನಡೆಸುವೆ ಮಂತ್ರಿಪಟ್ಟವನು ।
ಹಡೆದಾತ ರಾಯನಿಗೆ ಸಮನೆಂದು ಕಾಣುವೆನು
ಹಿಡಿಸಿದ ತರಳ ಕಹಳೆಯನು ||೮೩||

ಹತ್ತು ಪೌಜನೆ ಮಾಡಿ ಲಕ್ಷವರೆಯ ದಂಡ
ಕೊಟ್ಟನು ಬಲವಂತರೊಡನೆ ।
ಹತ್ತಲು ರಣರಂಗ ಹಗಲು ಕಾವಳ ಕವಿಯೆ
ಬತ್ತಿ ಬಾಣದ ಹೊಗೆ ಎದ್ದು ||೮೪||

ನಡೆಯಲು ಮುಂಗಳ ಕಿಡಿಕಿಡಿ ಮಸಗುತ್ತ
ಕಡಿಕಡಿಯೆಂಬ ಆರ್ಭಟದಿ।
ಜಡೆಮಳೆಯಂದದಿ ಸುರಿವ ಅಂಬಿನ ಸರಳ
ಹಿಡಿಯಲು ಭೂಮಿ ಧೂಳೆದ್ದು ||೮೫||

ರಣರಂಗಾರ್ಭಟಕೆ ಧರಣಿಯು ಜಜ್ಝರಿಸಿ
ಮುಳುಗಿದನು ಸೂರ್ಯನೆಂಬಂತೆ ।
ಪ್ರಭೆ ಮುಚ್ಚಿ ಅಡಗಲು ಪರ್ವತ ಗಿರಿಗಳು
ಕವಿಯಲು ಮಂಜು ಕಾವಳವು ||೮೬||

ರಾಯನು ರಣವಿಜಯ ಕಾಲಭೈರವ ಕಾಟ
ವೀರ ಸಂಗಮನು ಲಿಂಗಣ್ಣ।
ಜೋರಾಗಿ ನಾಲ್ವರು ಏರಿ ಕುಂಜರಗಳ
ನೋಡುವರು ರಣದ ಉತ್ಸವವ ||೮೭||

ಲಿಂಗನು ಪೇಳಿದನು ರಾಜೇಂದ್ರ ರಾಮನ ಕೂಡೆ
ಬಂದಿಹನು ಎಪ್ಪತ್ತುರಾಯ।
ಮುಂದರಿತು ಕಾರ್ಯಗಳ ಮಾಡಯ್ಯ ರಣವಿಜಯ
ಹೆಣತಿಂಬ ತೇಜಿ ಬಂದಿದೆಕೋ ||೮೮||

ಹರಿಯ ವಾಹನದಂತೆ ಮೇಲ್ಮಸಗಿ ಬರುವುದು
ನರರ ತಿಂಬುವುದು ಪುಲಿಯಂತೆ ।

ಗಿರಿಜೆಯ ರಮಣನ ವರದಿಂದ ಧರೆಗಿಳಿದು
ನಮಗೆ ಸೇರುವುದ ನಾ ಕಾಣೆ ||೮೯||

ಧರೆಯೊಳು ಉರಿಹಸ್ತ ಪಡೆದವನು ಲಯವಾದ
ಇದು ಏನು ಉಗ್ರ ಮಾಡಿದೆಯೆ ।
ಹನುಮನು ಮೊದಲಾಗಿ ರವಿಯ ಕಿರಣಕೆ ಎರಗಿ
ಅಳಿಯನೆ ಕಡಲೊಳು ಲಿಂಗ ||೯೦||

ಸುತನಳಿಯೆ ಮಾರುತನು ಸುಳುಹುದೋರದೆ ಅಡಗೆ
ಕ್ಷಿತಿಯು ಬ್ರಹ್ಮಾಂಡ ವಡಬಾಗ್ನಿ ।
ಮತಿಗೆಡಲು ಸುರರೆಲ್ಲ ಮೂರು ಮೂರ್ತಿಗಳು
ಮಥನಿಸಿ ಕಡಲನು ಕಡೆಯೆ ||೯೧||

ಪುಸಿಯಲ್ಲ ಈ ಮಾತು ಇದಕೆ ಸಾಕ್ಷಿಯು ಲಿಂಗ
ಸಕಲ ಜೀವವ ತಿಂದಂಥ।
ಮುಕ್ತಿಕಾಲ ಬಂತೆಂದು ತಂದು ಕೊಡಲು ಏಡಿ
ಶಿರ ಹೋಗೆ ನಯನವಿತ್ತೂದೆ ||೯೨||

ತಾ ಮೊದಲು ಲೋಕದೊಳಾರಾರು ಪಡೆದವರು
ಏನಾದರೆಂಬುದನರಿಯಾ।
ಶ್ರೀ ಗುರು ತೊಲಗಲು ಬಾಣ ಕೆಟ್ಟುದನರಿಯಾ
ಸಾವಿರ ಹಸ್ತ ಪಡೆದವನು ||೯೩||

ತುರಗದ ಭಯಭೀತಿ ಎನಗೆ ಪೇಳಲಿ ಬೇಡ
ಮೊದಲವಗೆ ಹೇಗೆ ಬಂತಣ್ಣ।
ಜನಿಸಿತೆ ಇವನೊಳಗೆ ದ್ವೀಪಾಂತ್ರದಿಂದಲಿ ಬಂತೆ
ಹರನೊಲುಮೆಯಿಂದ ಸೇರಿದುದೆ ||೯೪||

ಬಂದ ವೃತ್ತಾಂತವ ಕೇಳು ಚೆನ್ನಿಗರಾಮ
ಹಿಂದೊಬ್ಬ ಚೇರಮರಾಯ।
ಶಂಭುಲೋಕದಿ ದಾಳಿಮಾಡುವ ಕಾಲದಲಿ
ನಾಕ ತುಂಬಲು ಅಶ್ವಮೇಧದಲಿ ||೯೫||

ರುದ್ರಲೋಕದ ದಾಳಿ ಎದ್ದು ಪೋಗುವ ಸಮಯ
ನಡುಮಾರ್ಗದಿ ಮರಿ ಹಾಕಿದರೆ।
ಬಿದ್ದರೆ ಅವ ವಾಯುಮಾರ್ಗದಿ ತಂದು
ರಾಯ ಮುಂಗುಲಿ ಲಾಯಕ್ಕೆ ಇಡಲು ||೯೬||

ತೇಜಿ ಗರ್ಭದಿ ಚೊಕ್ಕ ಕಲ್ಯಾಣಿ ಇಳಿಯಲು ತಂದು
ತೋರಲು ರಾಯ ಮುಂಗುಲಿಗೆ।
ತೂಗುತ ಶಿರವನು ಈ ತುರಗದ ಗುಣದಿಂದ
ಕಾರ್ಯ ತೋರಲು ಸ್ಥಿತಿಗತಿಗೆ ||೯೭||

ಕರೆಸಿದ ಬಲವಂತ ಹಿರಿಯ ಶಾಸ್ತ್ರಿಕರನು
ತುರಗದ ಶುಭವ ನೋಡೆನಲು ।
ಜನಿಸಿತು ರಾಯ ಹಾಳಿರಲು ಲಾಯಕೆ ಕೋಟಿ
ಎನಲು ಡಿಳ್ಳಿಯ ಪಾಶ್ಚಯಗೆ ||೯೮||

ಇರಸಲ್ಲ ಎನಲವರು ಕಳುಹಲು ಸುರಿತಳಗೆ
ನೆರೆ ಜಾಣರೆಲ್ಲ ನೋಡಿದರು ।
ನೃಪವರನೆ ಲಾಲಿಸು ಕರುಗಾಲ ತುರಗವು
ಹೊರಗಿಟ್ಟು ಕಾರ್ಯ ಮಾಡೆನಲು ||೯೯||

ಭೂಪ ರಾಮನೆ ಕೇಳು ಆ ಕಾಲಕ್ಕೆ ರುದ್ರನು
ವ್ಯವಹಾರ ಮಾಡಿದ ತುರಗವನು ।
ಲೋಕ ರಾಜ್ಯದಿ ಕೊಂಡ ಡಿಳ್ಳಿಗೆ ಬರಲಾಗ
ಈ ಕುದುರೆ ದೊರೆ ಮೆಚ್ಚಿದನು ||೧೦೦||

ಹೇಳಿದರ್ಥ[ವನಿತ್ತು] ಚದುರರು ತರಲಾಗ
ರಾಯನು ತಾ ಬೆರಗಾದ।
ಯಾವಲ್ಲಿ ಜನಿಸಿತ್ತು ನವ ಚೊಕ್ಕ ಕಲ್ಯಾಣಿ
ಹೀನಗಾಣದೆ ಕೊಡರು ಇದನು ||೧೦೧||

ಕರೆಸಿದ ತಮ್ಮೊಳು ಇರುವ ಶೋಧಕರನು
ಕುದುರೆ ಲಕ್ಷಣವ ನೋಡೆನಲು।

ಸುಳಿ ಸುದ್ದಗಳ ನೋಡಿ ಹೀನ ತುರಗವು ಕಡೆಗೆ
ಪರರಿಗೊಲಿವುದು ಸಿದ್ಧಾಂತ ||೧೦೨||

ಪಾದಕ್ಕೆ ತಿಳಿದಂತೆ ನಾವು ಕಂಡುದ ಪೇಳ್ವೆ
ಮಾಡುವುದೆ ಲೇಸು ಎಂದ ಮಂತ್ರಿಯು ।
ತಾ ಕಂಡ ಅನಿತದಿ ರಾಯನ ಸುತ ಬಂ[ದು]
ತೇಜಿಯ ನೋಡಿ ಒಪ್ಪಿದನು ||೧೦೩||

ಎನ್ನ ನಾಮಕೆ ಇರಲಿ ನಿಮಗೇಕೆ ಸಂಕಲ್ಪ
ಎನುತಾಗ ಒಪ್ಪಿ ಏರಿದನು ।
ತುಡುಕುತ ಮೇಘದ ಖಗಮನದಿ ಚಾರಿಸಲು
ಅದರ ಮೂಲಗಳು ಹೀಗೆನಲು ||೧೦೪||

ಕುದುರೆಯ ಸ್ಥಿತಿಗತಿಯ ಚದುರ ರಾಮನು ಕೇಳಿ
ಈ ಕುದುರೆ ಘನವೇನು ಬಿಡುಯೆನಲು ।
ಮದನಾರಿ ಕೃಪೆಯೊಳಗೆ ಪಡೆದಿರಲು ಪರರಿಗೆ
ಒಲಿವುದೆಂಬುವುದು ಅದು ಸಹಜ ||೧೦೫||

ಏರಿದ ಅಹುದೆಯ ಇಳಿಯಲು ರಣರಾಮ
ಭಾವ ಸಂಗಯ್ಯ ಕಾಟಣ್ಣ ಏರಿದರು।
ಮೂಜಗಳ ಬಾಣೆಯ ಮುದ್ದನು ಲಿಂಗ
ಅಡಿಗೆ ವೇಗ ನಡೆವಂತೆ ||೧೦೬||

ಕೂಡಲು ರಣರಂಗ ಭೂಮಿಯು ತಲ್ಲಣಿಸಿ
ಮೇಘದಿ ಸುರಗಣವು ನೆರೆಯೆ ।
ದೇವೇಂದ್ರ ಮೊದಲಾದ ಸುರರು ಅಷ್ಟದಿಕ್ಪಾಲರು
ನಾಗಕನ್ನೆಯರು ನಾಟ್ಯದಲಿ ||೧೦೭||

ಸೂರ್ಯನು ರಥಗಳ ಕೀಲ ಸಡಿಲಿಸಿ ಮತ್ತೆ
ನೋಡಬೇಕೆಂದು ರಣ ವಾರ್ತೆ ।
ಪೂರ್ವ ಭಾಗದಲಡರಿ ಮಧ್ಯಾಹ್ನ ಕಾಲದಿ ನಿಂದು
ಸಾಗುವ ರಣವ ನೋಡುತಲಿ ||೧೦೮||

ನೋಡುವರೆ ನಮಗಿನ್ನು ಅನುಭವವಿಲ್ಲದ
ತರ ತೋರದಾಗಲು ಭಾನು ಬರಲು ।
ಸೋಮನು ರುದ್ರನ ಕೇಡ ನೋಡುವೆನೆಂದು
ಸಾರಿದ ನಾಗಲೋಕವನು ॥೧೦೯॥

ಆನೆ ಇರುವೆಗೆ ಜಗಳ ಹೂಡಿದ ಪರಿಯೆಂದು
ನೋಡಿ ನಗುತಿಹರು ಸುರಗಣರು।
ಭೂಮಿಯು ಹೊರಲರಿದು ಬಲದೊಡನೆ ಈ ರಾಮ
ಹದಿನಾರು ಸಾವಿರದಿ ಹೆಣಗುವನು ॥೧೧೦॥

ಲಕ್ಷಾಂತ್ರ ಬಲದೊಡನೆ ಕತ್ತಿ ಗೆಲ್ವುದು ಕಷ್ಟ
ಒಟ್ಟಿಸು ತುಪಾಕಿಯ ರಾಮನೆಂದು ।
ನಕ್ಕರೆ ಸುರಗಣವು ನಾರದನವರಿಗೆ
ಉತ್ರ ಪೇಳುವನು ಧರ್ಮವನು ॥೧೧೧॥

ಚಕ್ರಧರನ ಕೇಳಿ ಸಾಕ್ಷಿಯಿಲ್ಲವೆ ಇದಕೆ
ಪಾರ್ಥ ಭೀಮನ ಕೈಯೊಳಗೆ ।
ಮುಕುಂದ ಕೊಲ್ಲಿಸನೆ ಮೂರು ಕ್ಷೋಣಿಯ ಬಲವ
ಯುಕ್ತಿಯಲಿ ಇರ್ವರ ಒಡನೆ ॥೧೧೨॥

ರಾಮನ ಬಲ ಜೊತೆಗೆ ಹೊಣೆಗಾರನಾಗಿ ಹರ
ಕಾದಿರುವ ಬಗೆಯ ಕಾಣದಿಹನೆ ।
ಹಾನಿಯಾಗಲು ತಮಗೆ ಹೀನಾಯ ಬಿಡದೆಂದು
ಬಲಭಾದೊಳ್ನಿಂದಿಹನು ॥೧೧೩॥

ನಿಜವಾಕ್ಯವಹುದೆಂದು ಸುರರೆಲ್ಲ ಕೊಂಡಾಡೆ
ಕರಮುಗಿಯೆ ನಾರದಮುನಿಗೆ ।
ಇರುತಿರೆ ಸುರರಿತ್ತ ರಣ ಅದ್ಭುತವ ಕೇಳಿ
ಕಡಿದಾಡಿ ಮಡಿವ ಸಂಭ್ರಮದಿ ॥೧೧೪॥

ಹೂಡಲು ಜಗಳವು ಭೇರಿ ಕಹಳೆಯ ನಾದ
ಭೂಮಿ ಮಂಡಲವ ತುಡುಕುತಲಿ ।

ತೀರಲು ಲಿಖಿಸಾರ ರಾಮ ಬಂದನು ಎಂದು
ಏರಲು ರುದ್ರನ ಮಂದಿ ||೧೫||

ಒಡೆಯನಿಲ್ಲದ ಜಗಳ ಗೆಲುವುದೆಂದೆನುತ ಬಹಳ
ಹದಮೀರಿ ಬರಬೇಡಿರೆಂಬೆ ।
ತೊಡೆವನು ಲಿಪಿಯನು ನಿಮ್ಮರಸು ರಾಮುಗನನ್ನು
ನಮ್ಮೊಡೆಯನ ಸುತನು ಬಂದಿಹನು ||೧೬||

ನರಿ ಮನುಜನ ಮತ್ತ ಮದಕರಿ ಏಕೋ ಮಾಡಿದರು
ನುಡಿದು ನಿಮ್ಮರಸಿನ ಬಲುಹ।
ಕರಿಯನು ಗುಟ್ಟು ಕೊಯ್ಯು ಭೇರುಂಡಗೆ ವೈರಾದೆ
ಮರಿಸಿಂಹ ರಾಮ ಬಂದಿಹನೆ ||೧೭||

ಕತ್ತೆಯ ಬಾಲವನು ಹತ್ತಿದ ಮೂಳನ
ಹತ್ತು ತಲೆಯವನಾಗಿ ಪೇಳುವಿರಿ ।
ಮಸ್ತಕವಂತ ಮುಕುಂದನವತಾರದ
ಲಕ್ಕು ರಾಮುಗನು ಬಂದಿಹನು ||೧೮||

ನೋಡಿವರು ಆಡುವ ಘನ ಮೋಡಿ ಬಿಂಕಗಳ
ಭೇರುಂಡನೆಂದು ಬಿಂಕಗಳ।
ರೂಢಿಸಿ ಕೋಪಾಗ್ನಿ ರುದ್ರನ ಬಲ ಮುನಿದು
ಏರಲು ಮುಂಗಯ್ಯ ಕಡಿದು ||೧೯||

ತಡೆದಿರ್ದ ಮಳೆ ಬಂದು ಸುರಿವಂತೆ ಬಾಣಗಳು
ಸರಳಂಬು ಸವಲಕ್ಷದೊಳಗೆ ।
ಹೊಡೆಯ[ಲು] ಇತ್ತರದಿ ಹೊಳಕೆ ರುದ್ರನ ಮಂದಿ
ಕಡಿದು ನುಗ್ಗಲು ಒಡ್ಡುಗಳ ||೨೦||

ಬಾದುರಖಾನನು ದೇವಿಸೆಟ್ಟಿಯ ಲಿಂಗ
ವೀರಸಂಗಮನು ವಿರುಪಣ್ಣ।
ನೀರನು ನಿಲಿಸಿದ ಏರಿಯಂದದಿ ತಡೆದು
ಮೀರಿ ಬಂದವರ ನೂಕುವರು ||೨೧||

ಹುಚ್ಚ ಕೋಣನ ತೆರದಿ ಹೊಕ್ಕು ಬಾಣೆಯ ಮುದ್ದ
ಮುಂದಿಕ್ಕಿ ಬಡಿವ ನೂರಾರ।
ಸೆಟ್ಟಿಯ ಮಗ ಲಿಂಗ ಸವರುತ ಒಳ[ಬಂದು]
ಒತ್ತಿ ಬಂದವರ ಇಕ್ಕುತಲಿ ॥೧೨೨॥

ವೀರಸಂಗಮರಾಯ ಬಾದೂರ ನಾಲ್ವತ್ತು
ಸಾವಿರ ಪೌಜ ಕಡಿಕೊಂಡು।
ಹೋರುವ ಬಗೆಯನು ರಾಯ ರುದ್ರನ ಬಳಿಯ
ಪಾಳೆಗಾರರು ಕಂಡು ಏರೆ ॥೧೨೩॥

ಸಿಂಗಳ ದ್ವೀಪದ ರಂಗನಾಯಕ ಮುನಿದು
ಬಂಗಾರದ ಪೇಟೆ ತುಂಬರಸು ।
ಮುಂಗಾರ ಸಿಡಿಲಂತೆ ಬಂದು ಮುತ್ತಲು ಮೋಡ
ಅಂಗಾರತನಲೆದ್ದಂತೆ ॥೧೨೪॥

ಮುತ್ತಿದ ಕುರಿಗಳಿಗೆ ರೊಪ್ಪವ ಬಡಿದಂತೆ
ಮಕ್ಷಿಕ ಇರುವೆ ಹೊಗದಂತೆ।
ಸಿಕ್ಕಲು ನಡುಮಧ್ಯ ಲಿಂಗನು ಸಂಗಯ್ಯ
ಮತ್ತೆ ಬಾದುರ ಬಾಣಿ ಮುದ್ದ ॥೧೨೫॥

ಇರುಬಿನ ಗಜದಂತೆ ಹೆಣಗುವರು ಎಡಬಲನ
ಜೀವದಾಸೆಗಳನು ತೊರೆದು ।
ಕವಿಯಲು ಕಾಗೆಯ ಬಳಗದಂದದಿ ರಂಗ
ತುಳಿಸುವ ತಿಮ್ಮ ನಾಯಕನು ॥೧೨೬॥

ಪರಿದೋಡಿ ಬಂದೊರ್ವ ಚರನು ಸುದ್ದಿಯ ಕೊಡಲು
ಧುರಧೀರ ರಾಮ ಕಾಟಯಗೆ ।
ಮುಳುಗಿದರು ಭಾವಾಜಿ ಲಿಂಗ ಬಾದುರ ಮುದ್ದ
ಘುಳಿ ಏಳೆ ಮನ ಕಾಣುವರು ॥೧೨೭॥

ಎಲ್ಲಿಹನು ಕಲಿ ಕಾಟ ಯಮನಾರ್ಭಟದೊಳು ಮ
ತ್ತೆಲ್ಲಿ ತುರಗವನು ನೂಕಿದನು ।

ಕಲ್ಲಿಗೆ ಎರಗುವ ಸಿಡಿಲಿನಂದದಿ ರಾಮ ಮ
ತ್ತೆಲ್ಲಿ ಹೊಕ್ಕನು ರೋಷದಲಿ ||೧೨೮||

ಕಡಿಕಡಿ ಎನುತಲಿ ಕೇಕ್ಕೊಡೆದು ಇರ್ವರು ಪೊಗಲು
ರಸದಾಳಿಯೊಳಗೆ ಮದಕರಿಯು ।
ಹಸಿದಿರ್ದು ಕಾಂಬುವ ಗ್ರಾಸವನು ಕೊಂಬಂಥ
ಮೂಷಕನ ಬಡಿದಂತೆ ಕೊಲ್ಲೆ ||೧೨೯||

ಲವಕುಶರ ತೆರದೊಳು ಹದಿನಾರು ಬೀದಿಯ ಕಡಿಯೆ
ಇದಿರಾದ ತಿಮ್ಮ ನಾಯಕನ।
ಹೊಡೆದಾಡಿ ಸಮರಂಗ ಜಗಳದಿ ಕಾಟಣ್ಣ
ಈರ್ವರು ಮೂರಾರು ಗಳಿಗೆ ||೧೩೦||

ಮುತ್ತಿದ ಪೌಜನು ಕೊಚ್ಚಿದ ರಣರಾಮ
ಸಿಕ್ಕಿದವರ ಬಯಲ ಮಾಡಿ।
ಶಕ್ತಿಲಿ ಕಾದುವ ಕಾಟಣ್ಣನ ನೋಡುತ
ಹೊಕ್ಕನು ರಣವಿಜಯ ರಾಮ ||೧೩೧||

ರಾಯ ರಾಮನು ಬರಲು ಜಾರಿದ ತಿಮ್ಮರಸ
ಭೋರೆಂದು ಕೆರೆ ಒಡೆದಂತೆ ।
ಏರಲು ಬೆನ್ನೊಡನೆ ದೇವಿಶೆಟ್ಟಿಯ ಲಿಂಗ
ಬಾದೂರ ಬಾಣೆಯ ಮುದ್ದ ||೧೩೨||

ಹೊಮ್ಮಿರಿದು ಏರಲು ಅಗ್ರಗಣ್ಯ ರಾಯನ ಮಂದಿ
ಅಲ್ಲಿ ಒಲೆಯುತ ಶಿರಗಳನು ।
ಹುಲ್ಲೆಯ ಹಿಂಡೊಡೆದು ಬೆದರಿದಂದದಿ ಓಡೆ
ತೇಜಿನೇರಲು ರಾಜಪುತ್ರ ||೧೩೩||

ಸಿಡಿಲಿನ ಮರಿಯಂತೆ ಹೆಣತಿಂಬ ತೇಜಿಯು
ತುಳಿದು ಕೊಲ್ಲುತ ತಲೆ ಬುರುಡೆ।
ಸೆಳೆವನು ಹೊಳೆವ ಎಪ್ಪತುರಾಯನ ಕಂಡು
ಮುರಿಯಲು ರಾಯನ ಮಂದಿ ||೧೩೪||

ಮುರಿದು ಬೆನ್ನಾಗಲು ಗರುಡನಂದದಿ ತೇಜಿ
ಎರಗುವುದು ಸು[ಳಿವ] ಕಂಡದಲಿ ।
ಇದಿರಾಗಿ ನಿಲ್ಲಲು ದೊರೆ ಕಾಟ ಸಂಗಯ್ಯ
ಎದೆ ಕೊಟ್ಟು ಬರುವ ತೇಜಿಗೆ ||೧೩೫||

ಎದೆಯಾಗಿ ನಿಲ್ಲಲು ಬಲ ನಿಲ್ಲೆ ಬೆನ್ನೊಡನೆ
ಜಗಳ ಕಚ್ಚಿತು ಮಸಗುತಲಿ ।
ಕಿಡಿಕಿಡಿ ಸೂಸುತ್ತ ಬಾಣಬತ್ತಿಯ ಸರಳು
ಸುರಿಯಲು ಸೋನೆ ಮಳೆಯಾಗಿ ||೧೩೬||

ಹಗಲು ಕಾವಳ ಕವಿದು ಜಗವೆಲ್ಲ ಪಂಜಡರೆ
ಹಗಲೊಡೆಯ ಪ್ರಭೆ ಮುಚ್ಚಿ ಅಡಗೆ ।
ದಿಗಿಲುಗುಟ್ಟುತ ಭೂಮಿ ಹಿಡಿದು ಕುಂಕುಮವಾಗೆ
ನಡುಗಲು ಕೂರ್ಮ ಕುಂಜರವು ||೧೩೭||

ಮುಂದಣ ಹೆಜ್ಜೆಯ ಹಿಂದಕೆ ತೆಗೆಯದೆ
ಲಿಂಗಣ್ಣ ವೀರಸಂಗಯ್ಯ ।
ಕುಂಜರವು ನಿಂದಂತೆ ಕಾಟಣ ಬಾಣೆಯ ಮುದ್ದ
ಚಂಡನಾಡುತ್ತ ತಲೆಗಳನು ||೧೩೮||

ಯಾಕೆ ಕೆಟ್ಟಿರೊ ಎಂದು ಎಪ್ಪತ್ತುರಾಯನ ಭಾವ
ನೂಕಿದ ತುರಗವನು ಚಂದ್ರಾಂಗ।
ಈಶ್ವರನ ಮೊರೆ ಬೀಳೆ ಬಿಡುವಾನೆ ಎಲೆ ಕಾಟ
ನೀ ತಕ್ಕೊ ಎದೆಯೊಳು ಧೈರ್ಯ ||೧೩೯||

ಚಂದ್ರಾಂಗ ನಿನಗ್ಹೆದರಿ ಹಿಂದಕೆ ಹೆಜ್ಜೆಯಿಟ್ಟರೆ
ಮುಂಡೆಯ ಹೆಸರ ಇಡು ಎನಗೆ ।
ಮುಂದಕ್ಕೆ ನಡೆ ನಿನ್ನ ಬುರುಡೆ ತೆಗೆಯದ ಮೇಲೆ
ಬಿರಿದಾಂಕ ಕಂಪಿಲನಾತ್ಮಜನೆ ||೧೪೦||

ರೂಢಿಸಲು ಕೋಪಾಗ್ನಿ ರಾಯ ಚಂದ್ರಾಂಗನು
ಹಾರಿಸಿದ ತನ್ನ ತೇಜಿಯನು ।

ಮೂರು ಬೀದಿಯ ಕಡಿದು ಮರಳ್ವ ಸಮಯದಿ ಲಿಂಗ
ಹಾರಿಸಿದ ತಲೆ ಬುರುಡೆ ನೆಗೆಯೆ ||೧೪೧||

ಭಾವನು ಅಳಿಯಲು ಕುಮಾರ ಎಪ್ಪತುರಾಯ
ತಾರ ಕೆಂಡವನು ತುಳಿದಂತೆ ।
ಏರಿದ ತುರಗವನು ಚಬುಕಿನಾಗ್ರವನಾಡೆ
ಮಾಮಾರಿಯಂದದಿ ಬರಲು ||೧೪೨||

ಕಾಲೊಳು ತುಳಿಯುತ್ತ ಬಾಯೊಳು ಕಚ್ಚುತ್ತ
ಮೇಲವನು ಸೆಳೆದು ಕೊಚ್ಚುತಲಿ ।
ಯಾವಲ್ಲಿ ಅನುಸಾರ ಠಾವರಿದು ನೂಕಿದರೆ
ಏರಿ ಒಡೆದಂತೆ ಓಡುವರು ||೧೪೩||

ತೇಜಿಯ ಬಲವಿಂಗೆ ನಿಲ್ಲಲಾರದೆ ಕಾಟ
ಬೆನ್ನಾಗೆ ತಮ್ಮ ನಿರ್ದೆಡೆಗೆ ।
ನಿಲ್ಲಿ ಓಡುವುದೇಕೆ ಹುಲ್ಲರಾಯನ ಮಗನ
ತೇಜಿ ಸಹವಾಗಿ ಪಿಡಿವೆನು ||೧೪೪||

ಕಡಿಕೊಂಡು ಬರುವಂಥ ತರಳಗೆ ಇದಿರಾಗಿ
ಎದೆಗೆಡದೆ ರಾಮನು ನಿಂದು ।
ಬಿಡು ನಿನ್ನ ಕಾರ್ಯವ ಸುಡಲಯ್ಯ ಎಲೆ ಪುತ್ರ
ಗಹನಮುಳ್ಳೊಡೆ ಫಲವೇನು ||೧೪೫||

ಕೋಡಗನ ಪರಿಯಲಿ ಮೇಲೆ ನೆಗೆದಾಡಲು
ರೋಮ ಬೆದರದು ಕೇಳಣ್ಣ ।
ತ್ರಾಣವಿಲ್ಲದ ಬಳಿಕ ಕಾರ್ಯಕೇತಕೆ ಬಂದೆ
ರಾಯವಂಶದ ಮಾತಲ್ಲ ||೧೪೬||

ಕ್ಷತ್ರಿಯ ಮತದವರು ನಿಂತಲ್ಲಿ ಹೆಣಗಲಿ ಬೇಕು
ಸತ್ತರೆ ಕೀರ್ತಿ ತಪ್ಪುವರೆ ।
ಉತ್ರಕುಮಾರನಪಕೀರ್ತಿ ತೋರುವುದೆನಗೆ
ಕತ್ತಿ[ಯಾ]ಡಲು ತರಳ ನಿಲ್ಲು ||೧೪೭||

ಲಕ್ಷಬಲದೊಳು ಬಂದು ಗೊತ್ತೇನೆಂದು ಕೇಳ್ವರೆ
ಹಕ್ಕಿಯ ತೆರದೆ ಹಾರಾಡೆ।
ಶಕ್ತಿಯುಂಟಾದರೆ ಬೆನ್ನೊಳ್ಬಾಳದೋರದೆ ಕತ್ತಿ
[ಯಾ]ಡಯ್ಯ ನಿಂತು ಕಾರ್ಯವನು ||೧೪೮||

ಯಾತರ ಮಾತಿದು ಜಾತಿವಂಶಕೆ ಹೀನ
ಭೂಕಾಂತೆ ಇರಲು ಬಿಡಲಹುದೆ।
ಪಾಪಿಯೆ ಛೀ ಹೋಗು ಹಡೆದರಿಗೆ ಹೀನಯೆನಲು
ಕೋಪವಡೆಯಲು ಆ ಸುತಗೆ ||೧೪೯||

ಇನ್ನೊಮ್ಮೆ ನುಡಿಯಲು ಸಂಪನ್ನನ ಮಗ ರಾಮ
ಬ್ರಹ್ಮಲಿಖಿತವನು ತೀರಿಸುವೆ।
ನಿನ್ನೊಡನೆ ತಲೆವಾಗಿ ಬೆದರಿ ಹೋಗಲು ಎನಗೆ
ಹೆಣ್ಣುಗಳ ನಾಮವನು ಕರೆಸು ||೧೫೦||

ಆಡಬೆಡವೊ ರಾಮ ಬಾಯಿ ಹಿಡಿಯದ ಮಾತ
ತೀರಿಸುವೆ ತಿಥಿ ಪುಣ್ಯಕಾಲ।
ರೂಢಿಸಲು ಕೋಪಾಗ್ನಿ ಏರುವ ತುರಗವನು
ಭೂಮಿ ಮಾರ್ಗದಿ ಇಳಿಸಿದನು ||೧೫೧||

ಹೀನ ಕಳೆದೆನು ರಾಮ ತೋಡುವೆ ನಿನ್ನದೆಯನು
ಮೂರೈದು ಅಂಬಿನ ಒಳಗೆ।
ಆಡಿದ ಮಾತಿನ್ನು ಹುಸಿಯಾಗೆ ಕ್ಷತ್ರಿಯ
ರಾಯ ಪೀಳಿಗೆಯ ಸಂತತಿಯೆ ||೧೫೨||

ಮೆಚ್ಚಹುದು ಈ ಮಾತು ಕ್ಷತ್ರಿಯ ಕುಲದೊಳಗೆ
ರತ್ನವೆನಿಸುವ ಶಿಖಾಮಣಿಯೆ।
ಇತ್ತರಕೆ ಬಲ ನಿಲ್ಲೆ ಬೆಪ್ಪಾಗಿ ನೋಡುತ್ತ
ಕಿತ್ತರು ಎದೆಯ ಅಂಬುಗಳ ||೧೫೩||

ಗಣಪತಿರಾಯನ ಮೊಮ್ಮಗನು ಧನಪತಿ
ಕಿಡಿಯಿಂದೇರಿಸಿದ ಸರಳಗಳ।

ನೋಡಯ್ಯ ಕಂಪಿಲನ ಕುಮಾರ ಉಳಿಯಲುಯೆಂದು
ಸೇದಿದ ಕರ್ಣವರೆ ಮುಟ್ಟಿ ||೧೫೪||

ಬಿರುಗಾಳಿಯಂದದಿ ಬರುವ ಸರಳನು ನೋಡಿ
ಹೊಡೆದನು ಹದಿನಾರು ತುಂಡ।
ದೊರೆ ಪುತ್ರನಹುದೆಂದು ನಗುತ ಚೆನ್ನಿಗರಾಮ
ಹೊಡೆವೆನು ನಾನೊಮ್ಮೆ ಸರಳ ||೧೫೫||

ಕಲಿಯುಗದ ರಣರಾಮ ತೆಗೆದೈದು ಶರವನು
ಬಿಗಿದು ಏರಿಸಲು ಧನುವನು।
ತೆಗೆವೆ ನಿನ್ನಸುವನು ತರಳ ತಾಳೆಲೊ ಎಂದು
ಒಗೆದನು ನೃಪ ಶಕ್ತಿಯಲಿ ||೧೫೬||

ಇಂತಪ್ಪ ಶರಗಳಿಗೆ ಎದೆ ಬೆಚ್ಚದೆ ರುದ್ರನ
[ಪೌ]ತ್ರ ತರಿಗಡಿದ ಹತ್ತಾಗಿ।
ಶಕ್ತಿ ಸಾರವನೆಲ್ಲ ಕಂಡು ಚೆನ್ನಿಗರಾಮ
ಮತ್ತಿಡುವೆ ನೀ ಕಾಯ್ದುಕೊಳ್ಳೊ ||೧೫೭||

ರಣಹೇಡಿ ಎನುತಲಿ ಜರಿದೆಲೊ ಎಲ ರಾಮ
ಮುರಿವೆನು ಎದೆಯ ಗರ್ವವನು।
ಬಲುಮೆಯ ಸರಳನು ತೆಗೆದು ಹತ್ತನು ಹೂಡಿ
ಒಗೆದನು ಗರುಡನಾರ್ಭಟದಿ ||೧೫೮||

ತ್ರಾಣಗಾರನು ಅಹುದು ಆಡಿದ ಧರೆಯೊಳಗೆ
ಭೀಮನ ಶಕ್ತಿ ಇರುವಂಥ।
ಹಾರಿಸಿ ತುರಗವ ಹದಿನಾರು ತುಂಡಿಗೆ ಸರಳ
ಚೂರು ಮಾಡಿದನು ರಾಮುಗನು ||೧೫೯||

ತಟ್ಟಿಕೊಂಡನು ಎದೆಯ ಸುಟ್ಟಿನೊಳಗೆ ಪುತ್ರ
ತೊಟ್ಟನು ಕೊಕ್ಕೆ ಸರಳಂಬ।
ಇಟ್ಟುಕೊಳ್ಳೆಲೊ ರಾಮ ತಾಯಿಗೆ ಮಗನೆಂದು
ಬಿಟ್ಟನು ಭೂಮಿ ಒದರ್ವಂತೆ ||೧೬೦||

ಕತ್ತರಿ ಕಡಿಯಲ್ಕೆ ತಪ್ಪಿ ಒಂದು ಶರ
ನಟ್ಟಿತು ರಾಮನ ಎದೆಗೆ।
ಮೆಚ್ಚಿದ ಭಾನಾಬ್ಧಿ ಪುತ್ರನೀನಹುದೆಂದು
ಎಚ್ಚರವಿರಲಿ ನಾ ಹೊಡೆವೆ ||೧೬೧||

ನೋಡಿದ ಅಣ್ಣಾಜಿ ಬಾಲನ ಸಾಹಸವ
ಆಡಿದ ಮಾತು ಪುಸಿಯಲ್ಲ।
ರೂಢಿಸಲು ಅತ್ಯಂತ ಕೋಪವು ಲಿಂಗಗೆ ರೋಮ
ವೆಲ್ಲ ಏದಿನ ಮುಳ್ಳಾಗೆ ||೧೬೨||

ಸಿಟ್ಟಿಲಿ ಹೂಡಿದ ಹತ್ತು ಸರಳಂಬನು
ತೀರಿಸುವೆ ಇವನ ಲಿಪಿಯನು।
ಅತಿ ಸಾಹ[ಸ]ದೊಳು ಧನುವ ಸೇದಿ ಬಿಡಲು ತೇಜಿ
ಕಚ್ಚಿತ್ತು ಭೂಮಿಗೆ ಹುದುಗಿ ||೧೬೩||

ಯಮನ ಉಗ್ರದಿ ರಾಯ ಸರಳ ಸೇದಲು ರಾಮ
ನಾ ಧನುವ ಮುರಿಯುವೆನೆಂಬ
ರೋಷದಲಿ ಬಲವೆಲ್ಲ ಜಜ್ಜರಿಸಿ ಎದೆಯಲ್ಲಿ
ನಡುಗಲು ಚಳಿ ಬಂದ ತೆರದಿ ||೧೩೪||

ಮೀನಿನ ಮರಿ ಮುನ್ನ ಅಂಜುವದೆ ಕಾಲ್ಹೊಳೆಗೆ
ಕಾವಳಕೆ ಗಿರಿಯು ಬೆದರುವುದೆ।
ಓಡಬಲ್ಲನೆ ರಾಯವಂಶದ ಪುತ್ರ
ಮೂರು ತುಂಡಿಗೆ ಸರಳ ಕೊರೆವ ||೧೬೫||

ಬರುವಂಥ ಸರಳನು ತರಿಗಡಿವೆನೆಂದು
ತುರಗ ಹಾರಿಸಲು ಕುಮಾರ।
ಹಿಡಿಯಲು ನೆಲವನು ಕಡಿಯಲು ಮುಂದಕ್ಕೆ
ಇಡದೆ ಹೆಜ್ಜೆಯನು ಮರನಾಗಿ ||೧೬೬||

ಚೆಂಡಿ ಹೋರಲು ತೇಜಿ ಚಬಕ ಹೊಡೆಯಲು ನೂರ
ಗುಂಡಿನಂದದಿ ನೆಟ್ಟ ಕಾಲು।

ಕಂಡೆನೊ ಲಿಂಗಣ್ಣ ತಾಯಿ ಹಿಂದೆ ಹೇಳಿದ ಮಾತು
ಕಂಡುದೆ ಮನಕೆ ದೃಷ್ಟಗಳ ||೧೬೭||

ಸಿರಿ ಕೊಲ್ವ ಕಾಲದಿ ನೇಣು ಮುನಿವುದು ಲಿಂಗ
ಒಲಿದ ಕಾಲದಿ ಲಕ್ಷ್ಮಿ ಮನೆಯ ।
ಕಡೆಯ ಬಾಗಿಲು ಕಾಯ್ದು ಇರುವುದು ಸಹಜ
ನಡೆದನು ರಾಮ ಮೂರು ಹೆಜ್ಜೆ ||೧೬೮||

ನಡೆಯಲು ರಣರಾಮ ಬೆದರುತ ಬಲ ಕುದುರೆ
ದೊರೆ ರುದ್ರರಾಮನ ಮಂದಿ ।
ರಣರಂಗವಾಗಲು ರಾಮ ಕಾಟಣ್ಣನು
ಹೊಗಲೇರಿ ಕಡಿದೆರಡು ಬೀದಿ ||೧೬೯||

ಎಪ್ಪತ್ತುರಾಯನು ಬಿಟ್ಟು ತೊಲಗದೆ ಒಳ್ಳೆ
ದಿಟ್ಟತನದಿ ಹೆಣಗುವನು ।
ಮುಂಗಾರ ಸಿಡಿಲಂತೆ ರಾಮನು ಹೊಗಲೇರಿ
ದಿಂಡ ಕೊರೆವಂತೆ ಸವರುತಲಿ ||೧೭೦||

ಕಡಿಕಡಿಯೆನುತಲಿ ಕಾಟಣ್ಣ ಹೋಗಲೇರಿ
ಎರಡು ಭಾಗದಲಿ ಸವರಿದರು ।
ಒಂದೊಂದು ಕಡೆಯೊಳು ಲಿಂಗ ಬಾದುರ ಬಾಣೆಯ ಮುದ್ದ
ಸಂಗಯ್ಯ ಹೊಗಲೇರಿ ಕಡಿಯೆ ||೧೭೧||

ಅಳಿಯಲು ಅರ್ಧವು ಉಳಿದವರು ಕರಮುಗಿದು
ಹೊಳವರಿದು ಮುಂದೆ ಜಾರುವರು ।
ಬಳಸಿ ಮುತ್ತಲು ಬಂದು ರಾಯ ರುದ್ರನ ಸುತನ
ಕುರಿಯ ರೋಪವನು ಬಡಿದಂತೆ ||೧೭೨||

ಏರಿದ ತೇಜಿಯ ಇಳಿಯದೆ ಸವಳಂಬ
ಸುರಿಸುತ ನೂಕಿ ಬಂದೆರಗೆ ।
ಮೂರೆಂಟು ಸಾವಿರ ಮೈಗಾವಲ ಬಂಟರು
ಪಾಚರಿಸಿ ಹೊಡೆದಾಡುತಿರಲು ||೧೭೩||

ಸಿಂಗಳ ದ್ವೀಪದ ರಂಗನಾಯಕನ ಮಂದಿ
ಬಂಧಿಸಿ ಜಗಳವಾಡುವರು ।
ಹೊಂದಗೊಡದೆ ತಮ್ಮ ಒಡೆಯ ರುದ್ರನ ಸುತನ
ಮುಂದೆ ಕಡಿದಾಡಿ ಒರಗುವರು ||೧೭೪||

ತಾರ ಮಲಗಲು ಅಲ್ಲಿ ಆರು ಸಾವಿರ ಮಂದಿ
ಏರಿದ ರಂಗನಾಯಕನು ।
ವೀರಸಂಗಯ್ಯನು ಓರೆ ಭಾಗದಿ ಬಂದು
ಹಾರಿಸಿ ತಲೆಯ ಕುಟ್ಟಿದನು ||೧೭೫||

ಬಮ್ಮರಾಜನ ಪೇಟೆ ತಿಮ್ಮರಾಯನು ಹೊಕ್ಕು
ಹನ್ನೆರಡು ಬೀದಿ ಮುರಿಗಡಿದ ।
ಬಾಣಿ ಮುದ್ದಗೆ ಚೆನ್ನರಾಮನು ಹೇಳಿ
ಒಮ್ಮೆ ಹಿಡಿಯಲು ಕೈಸೆರೆಯ ||೧೭೬||

ಕಡಿವನು ರಣಧೀರ ರಾಮ ರಣಮಯ ಮಾಡಲು
ಹೊಲ್ಲ ದೊರೆಗಳನು ಇವನು।
ಮರಳುವ ಸಮಯದಿ ಮಾದಿಗ ಹಂಪನು
ಕೊನೆ ಕಾಲ ಹಿಡಿದು ಕೆಡಹಿದನು ||೧೭೭||

ಏಳಗೊಡದೆ ಒದಗಿ ಬಾಣಿಯ ಮುದ್ದನು
ಜಾಡಿಸಿ ಜುಟ್ಟನೆ ಹಿಡಿದು ।।
ಪಾರದೊಡನೆ ಕೊಡಲು ರಾಯನ ಸುತನೊರ್ವ
ಮೇಲೆ ಹೆಣಗುವ ತ್ರಾಣ ಕೇಳಿ ||೧೭೮||

ಮುತ್ತಲು ಎಪ್ಪತ್ತುರಾಯಗೆ ರಾಮನ ಮಂದಿ
ಹುಟ್ಟಿಗೆ ಜೇನು ಕವಿದಂತೆ ।
ಶಕ್ತಿಹೀನನ ಮಾಡಿ ಸ್ವಾಮಿದ್ರೋಹಿಯು ಅಶ್ವ
ಇಕ್ಕದು ಪಾದವನು ತೆಗೆದು ||೧೭೯||

ಎದೆ ಎರಡು ಅಂಬನು ಹೊಡೆಹೊಡೆದು ಬೆರಳೆಲ್ಲ
ಒಡೆದು ಜೋರಿಡಲು ರಕ್ತವನು ।

ತುರುಗದ ಎಡಬಲದಿ ಉದುರಿದ ತಲೆಬುರುಡೆ
ಕುರಿಗಳಂದದಿ ಒರಗಿರಲು ||೧೮೦||

ಅಂಬು ತೀರಲು ಬೇಗ ಚಂದ್ರಾಯುಧವ ಕಿತ್ತು
ಬಂದು ಒತ್ತುವರ ನೂಕುವನು ।
ಕೊಂದನು ಬಲ ಬಹಳ ಕೊಡು ಅಪ್ಪಣೆಯೆನುತಲಿ
ಸಂಗಯ್ಯ ಬಾದುರ ಕೇಳೆ ||೧೮೧||

ಮರುಳಾಟ ನಿಮಗೇನು ಒಳಗಾಗಬಲ್ಲನೆ ಅವನು
ಯಮನ ಕಾಣಿಸುವ ಗಳಿಗೆಯಲಿ ।
ಹೊಳವರಿತು ಕೈಸೆರೆಯ ಹಿಡಿಯ ಬೇಕಲ್ಲದೆ
ಕೊಲಬಹುದೆ ರಣವಿಜಯನಾದವನ ||೧೮೨||

ಕ್ಷತ್ರಿಯ ಕುಲದವರು ತಲೆಗೊಟ್ಟು ಸಾವಿರ ಬುರುಡೆ
ರಕ್ತದ ಹಳ್ಳ ಹರಿದ್ಹೋಗೆ ।
ಯುಕ್ತಿಯಲಿ ಇಳಿಸುವೆನೆಂದು ಚೆನ್ನಿಗರಾಮ
ಮತ್ತವನ ಸನ್ನಿಧಿಗೆ ಬರಲು ||೧೮೩||

ಯಾತಕ್ಕೆ ಹೆಣಗುವುದು ಎಪ್ಪತ್ತುರಾಯನೆ ಭೀಮ
ಪರಾಕ್ರಮಿಯಹುದು ರಣದೊಳಗೆ ।
ಪಾಪಿ ತುರಗವು ನಿನ್ನ ತೊಲಗು ಕಾಲವು ಬರಲು
ಅಪಕೀರ್ತಿ ಮಾಡಿತು ಧರೆಯೊಳಗೆ ||೧೮೪||

ಜಗಳವು ಇನ್ನೇಕೆ ಬಲವೆಲ್ಲ ಲಯವಾಗೆ
ತಿಳಿಯದೆ ಸುಮ್ಮಗೆ ಬುದ್ಧಿ ।
ಹುಲಿ ಬಂದು ಬೋನೊಳಗೆ ಬಿದ್ದು ಹೆಣಗುವ ಗಾದೆ
ಹಗೆ ಜನ್ಮ ಈ ತುರಗ ನಿನಗೆ ||೧೮೫||

ಹಿಂದಾದ ಕಥೆಗಳ ಕವಿಯಿಂದ ಕೇಳ್ದರಿಯಾ
ಧರಣೇಂದ್ರನಾದ ಶೂದ್ರಿಕನು ।
ಬಂದಿದ್ದ ವಿಧಿವಾಸ ತುರಗವಾಗಿಯೆ ಜನಿಸಿ
ಕೊಂಡೊಯ್ಯೆ ನೀನರಿದೆ ಕಂಚಿಯಲಿ ||೧೮೬||

ರಣವಿಜಯನಹುದಯ್ಯ ನವಖಂಡ ರಾಯರ ಒಳಗೆ
ಬಡವರಿಗೆ ಮುನ್ನ ಮುರಿವವನೆ ।
ಬಿಡು ನಿನ್ನ ಛಲವೇಕೆ ಹೆಡತಲೆ ಮೃತ್ಯಾಗಿ
ಹಿಡಿಯಿತು ತೇಜಿ ನೆಲ ಚಂಡಿ ॥೧೮೭॥

ತಡೆದೆನು ನಾ ಕೈಯ ನೀ ಹೊಡೆವ ಕಾರ್ಯಕೆ ಮೆಚ್ಚಿ
ಮನಸಿಡಲು ಬಿಡುವೆನೆ ಮರುಳರಸೆ ।
ಪಡೆದವರ ಬುಡಕೊಬ್ಬ ಕೆಡಿಸಬಾರದು ಎಂದು
ಧೃಡದಿ ನಾ ಸೈರಿಸಿದೆ ಕೈಯ ॥೧೮೮॥

ಹಡೆದವರ ಬಳಿಗೊಮ್ಮೆ ಕಳುಹಿಕೊಡುವೆನು ಪುತ್ರ
ಬಿಡು ನಿನ್ನ ಛಲಪಂಥ ಸುಡಲಿ ।
ಹಡೆದಾಕೆ ಹರಿಯಮ್ಮ ಜಟ್ಟಂಗಿ ಸಾಕ್ಷಿಯ ಕೊಳ್ಳೊ
ಹರನಡಿಯ ತಪ್ಪಿದ ಹಾಗೆನಲು ॥೧೮೯॥

ರಾಯ ಕಂಪಿಲನಾತ್ಮಜ ಕೇಳಯ್ಯ ನೀ ಮುನ್ನ
ಹೀನಾಯ ಬಿಡದು ಧರೆಯೊಳಗೆ ।
ನಾ ಬೇರೆ ನಿನಗಂಜಿ ಊರ ಹೊಗುವೆನೆ ಮರುಳೆ
ಹಾಳು ತುರಗದಿ ಹೀಗೆ ಬಂತು ॥೧೯೦॥

ಕೊಡಲಾಗ ನಂಬಿಗೆಯ ತರಳ ಒಪ್ಪಿದ ಮುನ್ನ
ಹಿಡಿದ ಪಿರಂಗಿಯ ಕಡೆಗಿಡಲು ।
ದೊರೆ ರಾಮ ಕಾಟಣ್ಣ ಹರುಷದಿಂದಲಿ ಕರ
ವಿಡಿದು ತುರಗ ಇಳಿಸಿದರು ॥೧೯೧॥

ರಕ್ತದ ಕರಗಳನು ಅಕ್ಷದೊಳು ತೊಳಿಸಿ
ಉತ್ತಮದ ದೇವಾಂಗ ಹೊದಿಸಿ ।
ಮುತ್ತಿನ ಪಲ್ಲಕ್ಕಿ ಕೊಟ್ಟು ರಾಯನ ಸುತಗೆ
ಮತ್ತೆ ಪಾಳೆಯಕೆ ಸಾಗಿಸಲು ॥೧೯೨॥

ಭಾವಾಜಿ ಸಂಗಯ್ಯ ಬಾದುರಖಾನನ
ಮೈಗಾವಲ ಹಾಕಿ ಕಳುಹಿದನು ।

ಏರುವ ತೇಜಿಯ ರಾಮನು ಹರುಷದಿ
ಪೂಜೆ ಮಾಡಿಸಲು ತೇಜಿಯನು ||೯೩||

ಒಲಿವ ಸಾರಥಿ ಇರಲು ನಲಿದು ಮುಂದಕೆ ಸಾಗಲು
ಕಲಹ ಹೋಗಲು ಚೆಂಡಿ ಹೋರು ।
ಮಲಹರನೆ ಗತಿಯೆಂದು ಸ್ಮರಿಸಿ ತೇಜಿಯ ಏರೆ
ಮನ ಹರುಷವಾಗಲು ತೇಜಿ ||೯೪||

ಪೂರ್ವಜನ್ಮದ ಶಾಪ ಕೈಸೇರಿ ಬಂದಿತು ಮುನ್ನ
ಭೇರಿಯನು ಹೊಡೆಯೆಂದೆನುತ ।
ಗೋವಿಂದನೇರುವ ಗರುಡನಾರ್ಭಟದೊಳು
ನಿಜ ಛಲಶಕ್ತಿ ಬಂತು ||೯೫||

ಪಿಡಿದ ಭೂಮಿಯ ಬಿಟ್ಟು ನಡೆಯಲ್ಕೆ ನೆಲನೊದರೆ
ಅಡರಲು ಮೇಘಮಾರ್ಗದಲಿ ।
ಹರಿಣನ ಹಿಮ್ಮೆಟ್ಟಿ ಮಾರುತಕೆ ಮುಂದರಿದು
ಏರಗಲು ಗರುಡನಾರ್ಭಟದಿ ||೯೬||

ಹರಷವಾದನು ರಾಮ ವರಗುರುವಿನ ಕೃಪೆಯಿಂದ
ಬರೆದುದಲ್ಲದೆ ಬೇರೆ ಬದಲೆ ।
ಮುರಿದೋಡು ಹಂದಿಯು ಬೆದರಿಸಲು ಹುಲ್ಲೆಯ
ಮರಿಯಂತೆ ಗಿಡಕೊಬ್ಬರಾಗೆ ||೯೭||

ಹೋಗಗೊಡದೆ ರಾಮ ಊರ ಬಾಗಿಲ ಕಟ್ಟಿ
ಮಾಡಿರೆ ಜಗಳ ಹೂಡುವರೆ ।
ಆಯದ ಕೈಬಿಟ್ಟು ತಾಯಿ ತಂದೆಗೆ ಒಬ್ಬ
ಮುಂದಾದ ಮಕ್ಕಳು ನಿಮ್ಮ ಹೆಸರು ||೯೮||

ಕಡಿಯದೆ ಒಬ್ಬರ ಮುಗುಳು ನಗೆಯೊಳು ನಗುತ
ಹಿಡಿಸಿದ ಧರ್ಮ ಕಹಳೆಯನು ।
ಉಳಿದೆವಿಂದಿಗೆ ಪ್ರಾಣ ಯಮರಾಜ ವಾಲೆಯ
ಕಳುಹಿದನು ಪುರ ತುಂಬಿತೆನುತ ||೯೯||

ಗೆದ್ದೆವು ಮಾರಿಯ ಹಬ್ಬವ ಕುರಿ ಕಳದು
ಬಿದ್ದು ಓಡುವರು ಉಳಿದವರು ।
ಬುದ್ಧಿಗಲಿಸಿದ ರಾಮ ಸತ್ತು ಬಂದೆವು ಮರಳಿ
ಹಿಡಿದೀ ವಾಲೆ ಕಾರ್ತಿಕೆಯ ॥೨೦೦॥

ರಣವ ಶೋಧಿಸಿ ರಾಮ ಪ್ರಳಯ ಕಾಲದ ಭೀಮ
ಅಳಿದ ಮಂದಿಯ ಲೆಕ್ಕ ನೋಡಿ ।
ಸುಡು ಸಾವು ಏಳ್ನೂರು ಗಾಯ ಒಂದು ಸಾವಿರ
ಸುಡಿಸಿದ ಅತ್ತವರ ಬೇಗ ॥೨೦೧॥

ನೊಂದು ಕೊಳ್ಳುತ ರಾಮ ಸಂದವರ ಮಕ್ಕಳಿಗೆ
ಇಂದಿನ ಮೇಲೆ ಸಂಬಳವ ।
ತಂದೆಯ ಬಳಿಗಿನ್ನು ವಾಲೆಯ ಕಳಿಸುತ್ತ
ಬಂದನು ತನ್ನ ಪಾಳೆಯಕೆ ॥೨೦೨॥

ರಾಯ ರುದ್ರನ ಮಂದಿ ಗಾಯದೊಡನೆ ಪೋಗಲು
ಏಳೆಂಟು ಸಾವಿರ ಬಲವು ।
ಮೋರೆಯ ತೋರದೆ ಓಡಿದೆಕ್ಕಟಿಗರು
ಗೂಬೆಯಂದದಿ ಮನೆಯ ಸೇರೆ ॥೨೦೩॥

ಅದರೊಳಗೊಬ್ಬನು ದೊರೆಯ ಸದರಿಗೆ ಬರಲು
ಕರಮುಗಿದು ವಾರ್ತೆ ಪೇಳಿದನು।
ಅಳಿದವರ ಪೇಳುವರೆ ಎನಗೆ ಸಾಗದು ರಾಯ
ಉಳಿದವರು ನಾಲ್ಕೆಂಟು ಸಾವಿರವು ॥೨೦೪॥

ದಂಡೆಲ್ಲ ಮುಳುಗಿದರೆ ಮತ್ತೊಂದು ನೋಡಬಹುದು
ಕಂದ ಸೇರಿದ ಕೈಸೆರೆಯ।
ಸಿಂಗಳದ್ವೀಪದ ರಂಗನಾಯಕನಳಿದನು
ತಿಮ್ಮರಸು ಸೆರೆಹೋದ ಭೂಪ ॥೨೦೫॥

ಬೊಲ್ಲನು ಕೈಸೆರೆಯ ಸೇರಿದನೆಂಬುದ ಕೇಳಿ
ರಾಯ ತಲ್ಲಣಿಸಿ ಶೋಕದಲಿ।

ಜೀವದೊಳ್ಗುಡಿಯೆಲ್ಲ ಹಾರಿತು ಪರಮಾತ್ಮ
ಭೂಮಿ ಪಾತಾಳಕ್ಕೆ ಇಳಿಯೆ ||೨೦೬||

ರಾಯ ರುದ್ರನು ಹೀಗೆ ಪ್ರಳಾಪದೊಳಿರುವಾಗ
ಗೋಳ ಲಾಲಿಪು[ದು] ಈ ಪುರದ।
ಸಾರಿ ಹೆಣ್ಣುಗಳೆಲ್ಲ ಕೇರಿ ಬೀದಿಯ ಒಳಗೆ
ಸಾರಿಸಿ ನೆಲನ ಗೋಳಿಡಲು ||೨೦೭||

ಬಾಲೆಯರು ಚಿಕ್ಕ ಪ್ರಾಯದ ಲಲಿತೆಯರು
ಕಾಣದಿಹರು ಕಾಮ ಕಲೆಯ।
ನೂರಲ್ಲ ಆರಲ್ಲ ಹದಿನಾರು ಸಾವಿರ
ಹೆಣ್ಣುಗಳ ಗೋಳ ಶಿವ ಬಲ್ಲ ||೨೦೮||

ನಾರಿಯ ನಖ [ದಂತ] ದಾಳಿಂಬದ ಬೀಜವು
ತಾವರೆಯ ಬಿರಿ ಮೊಗ್ಗೆ ಕುಚವು।
ಗೋವಿಂದನಾತ್ಮಜನ ಭಾ[ವ]ಕಿಂಚದ ಗಂಡ।
ಮೂರೆರಡು ದಶಕ ಗೋಳಿಡಲು ||೨೦೯||

ಹೇಳಿ[ರೆ] ನಿಜವಾಗಿ ಲಯವಾದನೆ ಎನುತೆ
ತೊಟ್ಟಿರುವ ಬಳೆಗಳ ಒಡೆವೆ।
ಬಾಲರಿಗೆ ಗತಿಯೇನು ಕೂಡಿದ ಸತಿ ಮುಂದೆ
ಯಾವ ರೀತಿಯಲಿ ಬದುಕೆಂದ ||೨೧೦||

ಹೊರಳುತ ಉರುಳುತ ತಲೆ ಬಿಚ್ಚಿ ಕೆದರುತ
ಗಿರಿಜಾವಲ್ಲಭಗೆ ಮೊರೆಯಿಡುತ।
ಅರೆ ಬಾಳು ತನಗೆಂದು ವಿಧಿ ಮುಂಡೆ ಬರೆ[ದಂ]ತೆ
ಪುರುಷನ ತಾ ಕೂಡೆ ಮುಂದೆ ||೨೧೧||

ಆಯಿತ್ತೆ ನಮಗಿಷ್ಟು ಭೋಗದ ಬಾಳೆಮ್ಮ
ತಲೆ ಬಾಚಿ ಹೂಮುಡಿದ ದಿನವು।
ಕಾಂತನು ಇರುವಾಗ ಕಳಸ ಕನ್ನಡಿಗೆಮ್ಮ
ಬಾರೆಂಬುವುದಿನ್ನು ಉಂಟೆ ||೨೧೨||

ಸಾಯದೆ ಸ್ಥಿರಂಜೀವಿ ಕಾಲಪಡೆದವರಾರು
ಬದುಕಲಿಲ್ಲವು ಅರ್ಥ ಪ್ರಾಯ।
ಜೀವವ ಬಿಡಲಿಕ್ಕೆ ಗೃಹ ಅಡವಿ ಕಾಡಾಗೆ
ಕಾಡ ಹೆಣನಾಗಿ ಒರಗುವರೆ ||೨೧೩||

ಅವ ಜಾಣನೇನಕ್ಕಯ್ಯ ರಾಯ ರುದ್ರನ ಜಗಳ
ಲಯವಾಗಿ ಬರಲು ಎರಡು ವೇಳೆ।
ಬಾಲನ ಕಳುಹದೆ ಬದಲಾಗಿ ಮೇಕೆಯ ಕಾಯ್ವ
ಮೂಢ ಮಾಡುವನೆ ಈ ಕಾರ್ಯ ||೨೧೪||

ಅಳಲೇಕೆ ಅವನುಪ್ಪ ಕಡೆತನಕ ನಾ ಉಂಡು
ಕಡಿಯದಿರಲು ಮಿಂಡ ಬಿಡನು।
ಅರಸ ಕೇಳಲು ನಿಮ್ಮ ಕೊರೆಸ್ಯಾನು ಕಿವಿ ಮೂಗ
ಹಲವಾಡಿ ರಂಡೇರ ನಡೆ ಮನೆಗೆ ||೨೧೫||

ನಗರದ ನಾರಿಯರು ಅಳಲಿ ಆರ್ಭಟಗೊಂಡು
ಬಳಲಿ ಮನೆಗಳನು ಸೇರಿದರು।
ತೈಲವು [ಸು]ರಿಯದ ಜ್ಯೋತಿಯಂದದಿ ಬಂದು
ಕುಳಿತನು ರುದ್ರ ಸದರಿಗೆ ||೨೧೬||

ಬೇಗದಿ ಕರೆಯಿರೊ ಜೀವಣ್ಣ ಮಂತ್ರಿಯನು
ರಾಯ ಪೇಳಲು ಊಳಿಗಕ್ಕೆ।
ಹೋಗಿ ಪೇಳಲು ಮಂತ್ರಿ ವಾಯುಗಮನದಿ ಬಂದು
ರಾಯಗೆ ಕರ ಮುಗಿದು ಎರಗೆ ||೨೧೭||

ಬಾರಯ್ಯ ಮಂತ್ರಿಗಳರಸನೆ ನಿನ್ನಯ ಮಾತು
ವಾರಿಜೋದ್ಭವನ ಲಿಖಿತಗಳು।
ಹೂಡಿದರು ಕದನವ ಹೇಡಿ ದೊರೆಗಳು ಎನ್ನ
ಬಾಲಗೆ ಬಡಿಕಲ್ಲು ಬಂತು ||೨೧೮||

ಕರಿತುರಗ ಮುಳುಗಿದರೆ ಜಯವಿಲ್ಲವೆಂಬುವುದು
ತರಳ ಕೈಸೆರೆಯ ಹೋದಲ್ಲಿ।

ಬಿಡಲಾರದಪಕೀರ್ತಿ ರವಿ ಶಶಿ ಉಳ್ಳನಕ
ತಾನು ಮರೆಯಬಹುದೆ ಪ್ರಾಣವನು ||೨೧೯||

ಆದಂಥ ಅಪಜಯದ ಕೇಡ ಮುರಿಯಲು ಸೀಳಿ
ಮಾಡಿದ ಸುತನು ಕೋಪವನು।
ಮಾಡಿದ ಅಪರಾಧ ಪಾದದಿಂದಲೆ ಉಳಿದು
ಹಮ್ಮಿಡಿದ ಬ್ರಹ್ಮನು ಕೆಡಿಸಿ ||೨೨೦||

ಹೋಗಯ್ಯ ಎಲೆ ಮಂತ್ರಿ ಹಲವಾಡಲು ಏನುಂಟು
ನೀ ಹೋಗಿ ರಾಮನ ಬಳಿಗೆ।
ಏನ ಬೇಡಲು ಕೊಟ್ಟು ಸಂತಾನವ ತರುವಂಥ
ದಿಟ್ಟತನವ ಮಾಡೆನಲು ||೨೨೧||

ಪಾದದಪ್ಪಣೆಯಾಗೆ ಹೋಗಿ ಬರುವೆನು ಭೂಪ
ಸಾಗಿಸಲು ತಕ್ಕ ಉಡುಗೊರೆಯ।
ಕಾಣಿಕೆ ಉಲುಪೆಯ ದ್ವೀಪಾಂತ್ರ ವರಚೋದ್ಯ
ಸಾವಿರ ಸಂಖ್ಯೆ ಸಾಗಿಸಲು ||೨೨೨||

ನಡೆಯಲು ಮಂತ್ರೀಶನಡರಿ ಪಲ್ಲಕ್ಕಿಯ
ಎಡಬಲದಿ ನೂರಾರು ಕುದುರೆ।
ತಡವ ಮಾಡದೆ ಬಂದು ರಾಯ ರಾಮನ ಕಂಡು
ಕಡೆ ಉಕ್ಕುಡದೊಳು ತಡೆಯೆ ||೨೨೩||

ತಡೆದವರ ಒಡನೆ ನುಡಿದನಾಕ್ಷಣ ಮಂತ್ರಿ
ಕೊಡಿ ಸುದ್ದಿ ಹೋಗಿ ರಾಮಯಗೆ।
ಚರರಾಗ ಕರಮುಗಿದು ವಿಸ್ತರ ಪೇಳಲು
ಬರಹೇಳಿ ಅಪ್ಪಣೆ ಕೊಡಲು ||೨೨೪||

ಪ್ರಳಯಕಾಲದ ರಾಮ ಸದರ ಮಾಡಿಸಿ ಕುಳಿತ
ದೊರೆ ಸುತನು ಎಡದಲ್ಲಿಹನು।
ಬಲದೊಳು ಕಾಟಣ್ಣ ತಿಮ್ಮರಸು ಸಹವಾಗಿ
ನಡುಮಧ್ಯೆ ರಾಮನು ಒಪ್ಪೆ ||೨೨೫||

ಕರಿ ತುರಗ ಕಾಲಾಳು ಕಾಯ್ದು ಓಲೈಸುತ
ಹೊಗಳುತ ಭಟ್ಟರು ಬಿರಿದುಗಳ।
ಇರುತಿರಲು ದೇವೇಂದ್ರ ಪದವಿಗೆ ಮಿಗಿಲಾಗಿ
ಎಡಬಲದಿ ಮನ್ನೆಯರು ನಿಂದು ||೨೨೬||

ಅಂತಪ್ಪ ಸಮಯದಿ ಹೊಕ್ಕು ಜೀವಣ ಮಂತ್ರಿ
ಇಟ್ಟ ಕಾಣಿಕೆಯ ಕರಮುಗಿದು।
ಪೃಥ್ವಿರಾಯರ ಗಂಡ ಮಲೆತವರಿಗೆ ಮಿಂಡ
ಒಪ್ಪಿಕೊಳ್ಳೆನುತ ಕರ ಮುಗಿಯೆ ||೨೨೭||

ರಾಮನೆ ರಣಧೀರ ಭೇರುಂಡನೆ ವಾರಿಧಿ
ಗುಣರಾಯನೆ ರಾಮಚಂದ್ರ।
ಪಾಲಿಸಬಹುದೆಮ್ಮ ಕುಮಾರನ ದಯಮಾಡಿ
ನಿಂ ಪಾದ ಕಂಡು ನೆನೆವೆವು ||೨೨೮||

ಬಂದೀತು ಎಲೆ ಮಂತ್ರಿ ಅಂಬಿಗೆ ತೆಳುವಾಗಿ
ಮಂದರಗಿರಿಯ ಮಾಡಿದೆ।
ಒಂದೊಂದು ಛಲಪದವ ಹೇಳಿಕೊಂಡರೆ ಮಂತ್ರಿ
ಪಿಂಡ ನಡುಗುವುದು ತಲ್ಲಣಿಸಿ ||೨೨೯||

ಸಿಕ್ಕಿದ ದೊರೆ ಮಗನ ಕೊಟ್ಟೊರುಂಟೆನೊ ಮಂತ್ರಿ
ನಾ ಸಿಕ್ಕಲು ನೀವು ಬಿಡುವಿರೆ।
ಕೃಷ್ಣನ ಮೊಮ್ಮಗನ ಬಾಣನು ಸೆರೆವಿಡಿದು
ಬಿಟ್ಟನೆ ಹೆದರಿ ಎಲೆ ಮಂತ್ರಿ ||೨೩೦||

ಮಾಡಿರೊ ಜಗಳವು ಸಾಲದಿರಲು ಮತ್ತೆ
ಬಾಣ ಬತ್ತಿಗಳ ಕೊಡುವೆನು।
ತ್ರಾಣವಿರಲು ನಾಳೆ ಮಾಡೇಳು ಕತ್ತಿಯು
ಸಾಲದೆಂದರೆ ಮಾಡಿ ಕೊಡುವೆ ||೨೩೧||

ಹಿಂದುಳಿದ ಕಪ್ಪವು ದಂಡಿನ ವೆಚ್ಚಗಳು
ಬಂದ ಮಂದಿಗೆ [ಊಟ]ಗಳು।

ಕಂದನು ಬೇಕೆಂದು ರಾಜೇಂದ್ರ ಬಂದರೆ
ಅಂದಿಗೆ ನೋಡುವಾ ಮಂತ್ರಿ ||೨೩೨||

ಕೇಳಯ್ಯ ಎಲೆ ಮಂತ್ರಿ ಆಡಿ ತಪ್ಪೊರ ಗಂಡ
ನೋಡುವೆ ದಿನ ಇಂದು ಬೆಳಗು।
ಬಾರದಿರಲು ಹೋದ ನಾಳೆ ಓರುಗಲ್ಲ
ಕೈಯ್ಯಲ್ಲಿ ಕಡ್ಡಿಯ ಕೊಳ್ಳೊ ||೨೩೩||

ಭಾಪುರೆ ರಣವಿಜಯ [ಪು]ರದಲ್ಲಿರುವರ ಕರೆ ತರುವೆ
ನೀ ಪಾಲಿಸೆನಗೆ ನಂಬಿಗೆಯ।
ಮಾತಾಪಿತರ ಅಭಯ ನೀ ಕೊಳ್ಳೊ ಮನೆದೈವ
ಜಟ್ಟಂಗಿ ಭೂತೇಶನಭಯ ||೨೩೪||

ಕೊಡಲಾಗ ನಂಬಿಗೆಯ ದೃಢಚಿತ್ತದೊಳು ಮಂತ್ರಿ
ನಡೆಯಲು ಅಡಿಗೆರಗಿ ಪುರಕೆ।
ಒಡೆಯ ರಾಜೇಂದ್ರಗೆ ಕರ ಮುಗಿದು ಹೇಳುವನು
ನುಡಿದ ವಿವರವ ರಣರಾಮ ||೨೩೫||

ಪುತ್ರನ ಬಿಡಲಿಕ್ಕೆ ಹೆತ್ತವರು ಬರಲೆಂದು
ಕೊಟ್ಟರು ನಂಬಿಗೆ ಅಭಯ।
ಹೆತ್ತಯ್ಯನ ಕಾಲದಿ ನಿಂದ ಪೌದಿಯ ವೆಚ್ಚ
ಮುಟ್ಟದಿರಲು ಪುರ ಮುತ್ತುವೆನು ||೨೩೬||

ಕೊಡಬಹುದು ರೊಕ್ಕವ ಕೊಟ್ಟೆನಾದರು ನಾಳೆ
ತರಬಹುದು ಮನ ಮುರಿದ ಕಾಲ।
ತರಳಗೋಸ್ಕರ ನಾವು ಹೋದರೆ ಎಲೆ ಮಂತ್ರಿ
ಕೆಡು ಕಾರ್ಯವಾಗಲು ಕಷ್ಟ ||೨೩೭||

ನಂಬಿಗೆಯಿತ್ತನು ಜಟ್ಟಂಗಿದೇವನ ಅಭಯ
ತಂದೆ ತಾಯಿಗಳ ಕದ ನೀಡಿ।
ಬಂದಳು ಅನಿತದಿ ರಾಯ ರುದ್ರನ ಮಡದಿ
ಗೋಳೆನ್ನುತ ಮಂತ್ರಿಯೆಡೆಗೆ ||೨೩೮||

ಸುತನು ಶರೀರವು ಮಿಕ್ಕಿ ಹೋದ ಎಲೆ ಮಂತ್ರಿ
ಕುಟ್ಟಿಕೊಳ್ಳುತ ಎದೆ ಬಾಯ।
ದುಃಖ ಯಾತಕೆ ತಾಯಿ ಲೋಲಾಪಿಲಿ ಇಹನಮ್ಮ
ಒಪ್ಪಿರುವೊಂದು ಸಾವಿರೊಳಗೆ ॥೨೩೯॥

ಏಳಯ್ಯ ಎಲೆ ಮಂತ್ರಿ ನಾ ಬರುವೆ ಮೊದಲಾಗಿ
ಪೋಗಿ ಕರೆತರುವ ಬಾಲಕನ।
ಕಾಣುತ್ತ ರಾಜೇಂದ್ರ ಪ್ರಾಣಕಾಂತೆಯ ದುಃಖ
ಹೊರಿಸಿಕೊಡುವ ಪೌದಿ ಹೊನ್ನುಗಳ ॥೨೪೦॥

ಮುತ್ತಿನ ಪಲ್ಲಕ್ಕಿ ಹತ್ತಿದ ರಾಜೇಂದ್ರ
ಹತ್ತೆಂಟು ಸಾವಿರ ಬಲದಿ।
ಸಾಗಲು ಚರರಾಗ ಬೇಗ ಸುದ್ದಿಯ ಕೊಡಲು
ರಾಮ ಶೃಂಗರಿಸಿ ವಾಲಗವ ॥೨೪೧॥

ದೇವೇಂದ್ರ ಭೋಗದಿ ಇವರು ಇರುತಾಗ
ರಾಯ ರುದ್ರನು ದಂಡ ಪೊಗಲು।
ರಾಯನ ಸುತ ರಾಮ ಕರವಿಡಿದು ಕಾಟಣ್ಣ
ಕ್ಷೇಮವೆನ್ನುತ ಹಸ್ತ ಪಿಡಿಯೆ ॥೨೪೨॥

ಆನಂದ ಪರಿಪೂರ್ಣ ಧೀರ ಚೆನ್ನಿಗರಾಮ
ಪ್ರೇಮವೆನ್ನುತ ರಾಯನ ಪಿಡಿದು।
ನಾಲ್ವರು ಸಮನಾಗಿ ಸದರಿನೊಳಗೆ ಕುಳಿತು
ಆಡುವರು ಪಲ ಬಗೆಯ ಮಾತ ॥೨೪೩॥

ಉಡುಗೊರೆ ಉಲುಪೆಯ ಕೊಡತಕ್ಕ ಹೊನ್ನನು
ಸುರಿಸಿದ ಸದರಿನೊಳು ಅರಸ।
ರಣವಿಜಯಭೇರುಂಡ ರಾಯ ರಾಮನೆ ಎಮ್ಮ
ತನುಜನ ಪಾಲಿಸು ಹರಸು ॥೨೪೪॥

ತಡೆದೆನು ನಾ ಕೈಯ್ಯ ತಾಯಿಗೊಬ್ಬನೆ ಎಂದು
ಕಡಿದನು ಕೊಲೆಯ ಬಹು ಬಲವ।

ಸೈರಿಸಿದೆ ತನ್ನಯ ರವರುದ್ರ ಶಾಂತಿಯ ಮಾಡಿ
ಕರೆಸಿದ ತಿಮ್ಮರಸನನ್ನು ॥೨೪೫॥

ರಾಯ ಮುಮ್ಮೋಜಿಯ ಪಾಂಡುರಂಗಯ್ಯನ
ಮೂಳ ಮಂತ್ರಿಯು ಲಿಂಗರಸ।
ಓರಂತೆ ಎಲ್ಲರಿಗೆ ಉಡುಗೊರೆ ತೇಜಿ ಕೊಟ್ಟ
ರಾಯ ರುದ್ರಗೆ ಗೆಲುವಾಗಿ ॥೨೪೬॥

ಇನ್ನೇನು ನುಡಿ ರಾಯ ಧರ್ಮಸೆರೆಗಳ ಬಿಟ್ಟೆ
ಎಮ್ಮೊಳಗೆ ಗರ್ವ ನಡೆಸದೆ ।
ನಿನ್ನೊಳು ಇನ್ನೊಬ್ಬ ಎತ್ತೆಣಿಸಿ ಬರಲು ಪೇಳು
ಬ್ರಹ್ಮಲಿಖಿತವ ತೀರಿಸುವೆ ॥೨೪೭॥

ಪುತ್ರನ ಸೆರೆ ಬಿಟ್ಟು ಕೀರ್ತಿಯ ಪಡಕೊಂಡೆ
ಹತ್ತುವ ತೇಜಿಯ ಕೊಡಿಸು।
ಪೆತ್ತ ಮಗನಿಗೆ ಮೂರು ಹೆಚ್ಚಾಗಿ ಸಲಹಿದೆ
ಸೆಟ್ಟಿ ಲಿಂಗಣ್ಣನ ಕಳುಹು ॥೨೪೮॥

ಲಿಂಗ ತೇಜಿಯ ಸುದ್ದಿ ಇಂದಿಗೆ ಮರೆ ರಾಯ
ನಾ ಬಂದುದೇತಕೆ ನಿಮ್ಮ ಪುರಕೆ।
ತಂದೆ ಕಂಪಿಲ ಭೂಪ ಛಲವ ಮಾಡಲು ಕಲ್ಲು
ಬಂದು ಬಡೆಯಿತು ತೇಜಿಯಿಂದ ॥೨೪೯॥

ತುರಗದ ಆಸೇಕೆ ಗೆಲಬಹುದು ಪುರಕಾಗಿ
ತನಗಿರಲೆಂದು ಪೇಳಿದನು।
ಬಲು ಮಾತನಾಡಿದರೆ ಬರಲೀಗ ನ[ಗರ]ದೊಳು
ನಡೆಯಯ್ಯ ರುದ್ರಭೂಪಾಲ ॥೨೫೦॥

ಪ್ರೀತಿಗಳು ಇರಲೆಂದು ರಣಭೂಪ ಚೆನ್ನಿಗರಾಮ
ತಾ ಪೊಕ್ಕ ರುದ್ರಪಟ್ಟಣವ।
ಲೋಕಾಧಿಪತಿ ರಾಮ ಬಂದು ಗುಂಡಯ್ಯನ
ಕ್ಷೇತ್ರ ಎಲ್ಲೆಯಕೆ ಪಾಳ್ಯೆ ಇಳಿಯೆ ॥೨೫೧॥

ಗುಂಡಬ್ರಹ್ಮಯ್ಯಗೆ ಘನ ಪರ್ವಗಳ ಮಾಡಿ
ಉಂಡು ದಣಿಯಲು ಓರುಗಲ್ಲು।
ಕಂಡನು ತಾಯೊಡಲ ರವಿಯು ಪೂರ್ವಾದ್ರಿಗೆ
ಬಂದು ಸೋಮನು ಮುಖದೋರೆ ॥೨೫೨॥

ಉದಯವಾಗಲು ರಾಮ ನಡೆದನು ಅಲ್ಲಿಂದ
ಎಡಬಲದ ದೊರೆಗಳು ಬೆದರೆ।
ಕುದುರೆ ಮಂದಿಯು ಸಹ ಕಪ್ಪ ಕಾಣಿಕೆ ಹೇರಿ
ನಡೆಯೆ ಮುಂ ದಂಡು ರಾಮನಿಗೆ ॥೨೫೩॥

ಏಳೆಂಟು ಪ[ಯ]ಣಕೆ ಹೋಗಿಳಿದ ಹಂಪೆಯ
ಭಾಗೀರಥಿ ಎಂಬ ಹೊಳೆಗೆ।
ಕೂಡಿತು ಅಲ್ಲಿಗೆ ಎಂಬತ್ತು ಸಾವಿರ ಕುದುರೆ
ಹದಿನಾರು ದಿವಸಕೆ ಗುತ್ತಿಗಿಳಿದು ॥೨೫೪॥

ಚಾಮಯ್ಯನು ಭೆಟ್ಟಿಯಾಗೆ ಚೆನ್ನಿಗರಾಮ
ಸಾಗಿದ ಬಳ್ಳಾರಿಪುರಕೆ।
ಸೂರ್ಯ ಉದಯಕೆ ಎದ್ದು ಆನೆಗೊಂದಿಗೆ ಇಳಿಯೆ
ರಾಯ ಕಂಪಿಲ ಸುದ್ದಿ ಕೇಳಿ ॥೨೫೫॥

ಹೊರಡಲು ಮಗ ಬರುವ ಸಡಗರವ ನೋಡಲ್ಕೆ
ಒಡಗೊಂಡು ಮಂತ್ರಿ ಬೈಚಪ್ಪ।
ತೇಜಿ ಮಂದಿಯು ಕೂಡಿ ಬರಲಾಗ ಇದಿರಿಗೆ
ಚರರು ಹೇಳಿದರು ರಾಮನಿಗೆ ॥೨೫೬॥

ಏರಿದ ತುರಗವನಿಳಿದು ಕಾಲ್ನಡಿಗೆಯೊಳು
ಕಾಣಿಕೆ ಇಟ್ಟು ಕರಮುಗಿದ।
ದೇವಿಸೆಟ್ಟಿಯ ಲಿಂಗ ಪಾಳೆಗಾರರು ಸಹ
ಓರಂತೆ ದಂಡು ಕರಮುಗಿದು ॥೨೫೭॥

ರಾಯ ರಾಯರಿಗೆಲ್ಲ ಬೇಗ ಉಡುಗೊರೆ ಮಾಡಿ
ಸಾಗಿಸಿ ಅವರವರ ಪುರಕೆ।

ರಾಯ ತೇಜಿಯ ನೋಡಿ ಭೂಮಿ ನಿಲ್ಲದು ಇವಗೆ
ಏನಾಯಿತಂತ ಓರ್ಗಲ್ಲ ||೨೫೮||

ಸಂಭ್ರಮದೊಳಗವರು ಬಂದು ನಗರವ ಪೊಗಲು
ಆನಂದದೊಳು ಬಾಳುತಿರಲು।
ಹಿಂದೆ ರಾಮನ ಜನನದ ಅಡಿಗೆ ಹಂಪೇಳ್ದ
ಬಂದುದು ಕಂಟಕ ಒದಗಿ ||೨೫೯||

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ತರಳ ಚೆನ್ನಿಗರಾಮ ತಂದ ತೇಜಿಯ ಮುಂದೆ
ನಡೆದ ಚೆಂಡಿಗೆ ನವಮ [ದಸಮ] ಸಂಧಿ ||೨೬೦||*

* + ಅಂತು ಸಂಧಿ ೧೦ ಕ್ಕಂ ಪದನು ೨೦೩೫ ಕ್ಕಂ ಮಂಗಳ ಮಹಾಶ್ರೀ (ಮೂ).

ಸಂಧಿ : ಹನ್ನೊಂದು

❖

ಬಾಲರಾಮನ ನೀರಾಟ-ಚೆಂಡಿನಾಟ

*ಶ್ರೀ ಗಿರಿಜೇಶನೆ ಭಾಗೀರಥೀಶನೆ
ಭೋಗಿಭೂಷಣ ಭಾಳನೇತ್ರ।
ಆಗಮಕೊಡೆಯನೆ ಮೂಜಗವ ರಕ್ಷಿಪನೆ
ನಾಗಭೂಷಣ ನಂದೀಶ ||೧||

ಚಕ್ರಧರನ ಸುತನ ಶಿಕ್ಷಿಸಿ ಭಸಿತವನು
ಮತ್ತೆ ಸರ್ವಾಂಗದೊಳು ಧರಿಸಿ।
ಭಕ್ತರ ಭಾವಕ್ಕೆ ಮೆಚ್ಚಿ ಬಾಗಿಲ ಕಾಯ್ದ
ಭಿಕ್ಷುಕದೇವ ಕೊಡುಮತಿಯ ||೨||

ಕಾಶಿರಾಮೇಶ್ವರ ಶ್ರೀಶೈಲ ಗೋಕರ್ಣ
[ಕೀ]ಸು ವೆಗ್ಗಳವಾದ ಹಂಪೆ।
ಪ್ರಾಸು ಬೀಳದ ತೆರ ಪಾಲಿಸು ಕೃತಿ ಪರ
ಮೇಶ್ವರ ವಿರುಪಾಕ್ಷಲಿಂಗ ||೩||

ನಡೆಸುವೆ ಗಣನಾಥ ಒಡಗೂಡು ಮತಿಯಿತ್ತು
ಕಡಬು ಕಜ್ಜಾಯದ ಭೋಗಿ।
ಮೊದಲ ಪೂಜೆಯ ಕರ್ತ ಮೂಷಕವಾಹನ
ತಗಡೂರ ಬೆನವ ಕೊಡು ಮತಿಯ ||೪||

---

* + ಶ್ರೀ ಗುರು ಬಸವಲಿಂಗಾಯೆಂನ್ನಮಃ (ಮೂ)

ಬರಬೇಕು ಅಕ್ಷರದ ಮೊದಲು ದೇವಕ[ರ್ತೆ]
ನುಡಿ ಜಿಹ್ವೆಯಲಿ ಶಾರದೆಯ।
ನುಡಿ ತಪ್ಪು ಕರ ತಪ್ಪು ಪ್ರಾಸು[ಬಿ]ದ್ದರೆ ಮುಂದೆ
ನೆರೆ ಜಾಣರುಗಳು ತಿದ್ದುವುದು ॥೫॥

ಹಲವಂಗ ಮನ ಚಿತ್ತ ಹಳಿಯ ಬೇಡೆನ್ನನು
ತಿಳಿದಂತೆ ಮುಂದೆ ಒರೆವೆನು।
ಅಳಿದವರ ಕಥೆಯೆಂಬ ಆಲಸ್ಯ ಮಾ[ಡ]ದೆ ರಾ[ಮ]
ಹರನಿಂದ ಜನಿಸಿದ ಪಿಂಡ ॥೬॥

ಪೇಳುವೆನು ಪರಚಿತ್ತವಾಗದೆ ಕೇಳಿ
ಶ್ವಾನನಂದದಿ ಮನಸು ಹರಿಯೆ।
ಹೇಳಲು ಫಲವಿಲ್ಲ ಕೇಳಲು ಗತಿ ನಷ್ಟ
ಶ್ವಾನಗೆ ಕ್ಷೀರವೆರೆದಂತೆ ॥೭॥

ರಾಮನು ಚೆಂಡಾಡಿ ತಾನು ಕೆಟ್ಟನು ಎಂದು
ಆಡುವರು ಮೂಢರಾದವರು।
ಕೇಳಿದರೆ ಕಷ್ಟವಾ ಭೂಮಿಪ ಹರಿಶ್ಚಂದ್ರ
ಚೆಂಡು ಲೆಗ್ಗೆಗಳ ಮಾಡದರಾರು ॥೮॥

ವಿಧಿವಾಸ ಬಿಡಲರಿದು ಮೃಡನಿಗೆ ಮುಂತಾಗಿ
ತಿರಿದು ಉಣ್ಣನೆ ಮನೆ ಮನೆಯ।
ಸತ್ತು ಹೋದಳೆ ಸೀತೆ ಶ್ರೀರಾಮನನು ಬಿಟ್ಟು
ಇವನು ಮಾಡಿದ ಪ್ರಾಪ್ತಿಯೇನು ॥೯॥

ಹರಿಹರ ಮುಂತಾಗಿ ಅಲ್ಲಾಡಿಹುದು ವಿಧಿವಾಸ
ನರಜನ್ಮದ ಪಾಡಿನ್ನೇನು।
ಧರಣಿಯೊಳು ಜನಿಸಿದ ನರಜೀ[ವೆ]ಲ್ಲರಿಗುಂಟು
ರವಿ ಶಶಿ ಗ್ರಹ ಕಂಟಕವು ॥೧೦॥

ಕಂಟಕ ಬಂದಡೆಯು ಕೊಲ್ಲಲಾಪುದೆ ಕೇಳಿ
ಬೇಕಾದಡೆ ಹರಿಶ್ಚಂದ್ರ ಭೂಪತಿಗೆ।

ಸತ್ಯವಿರಲು ಅವಗೆ ಯಶವಾಗಿ ಶಿವಬಂದು
ಗೊತ್ತ ಸೇರಿಸದೆ ಬಿಡನು ||೧೧||

ಕಂಡಿರೆ ದೃಷ್ಟವನು ಮುಂದೊಮ್ಮೆ ಲಾಲಿಪುದು
ಮಂದಮತಿ ರಾಯ ಕಂಪಿಲನು।
ಅಂಗನೆಯಾದಂಥ ರತ್ನಿಯ ಮನ್ನಣೆ
ಮುಂದೆ ಬೇಂಟೆಯ ಸೊಬಗ ಕೇಳಿ ||೧೨||

ರಾಯನು ಮೈದಡವಿ ಅಭಿಮಾನವೆಲ್ಲವ
ನೊಕ್ಕಗದೆಯ ಮಾಡಿಕೊಂಡಿರುವ।
ಪಾದರಕ್ಷೆಗೆ ಇನ್ನು ಕಡೆಗಾಣ್ಬ ಸತಿ ಮುಂದೆ
ಮೇಲೆ ಮಡಗಲು ಮಾಣಿಪಳೆ ||೧೩||

ನಾರಿ ರನ್ನಳೆ ಬಾರೆ ಮೋಹನಾಂಗಿಯೆ ಬಾರೆ
ಪ್ರಾಣಪದಕವೆ ರತ್ನಾಜಿ।
ವಾರಿಜಮುಖಿ ಮೃಗನಯನೆ ಮದನನ ತೇಜಿ
ಬಾರೆಂದು ತೊಡೆಯೊಳ್ ಕುಳ್ಳಿರಿಸಿ ||೧೪||

ಸರಸ ಸಲ್ಲಾಪದ ಸವಿನುಡಿ ಸಮರಸದೊಳ್
ಗಲ್ಲವ ಪಿಡಿದು ಅರುಹಲು।
ಬೇಡವು ನಾ ಬರುವೆನು ನಾಳಿಗೆ ನೀ
ಬೇಡಿದ ಮೃಗವ ತರುವೆನು ||೧೫||

ಬಾಲೆ ಕೇಳೆಲೆ ನಿನ್ನ ಪ್ರಾಣಕಾಂತನ ಬಿನ್ನಹ
ಬಹಳ ದಿನಬಂತು ಬ್ಯಾಟ್ಯಾಡಿ।
ಹೋಗಿ ಭರ್ರನೆ ಹೋಗಿ ಹೊಸಮಲೆ ಗಿರಿಯೊಳಗೆ
ಕೈಕಾಣಿಕೆ ತರುವೆ ಹೊಂಮೃಗವ ||೧೬||

ಬಾಲೆಯರ ಜಾಲಗಳು ಮೂದೇವರಿಗೆ ತಿಳಿಯದು
ತೋಡುವಳು ಜಲನೇತ್ರದಲಿ।
ಕಾಣದೆ ಇರಲಾರೆ ಕಾಂತ ನಿನ್ನರಗಳಿಗೆ
ಹೋಗಿ ವಾಲಗದಿ ಕುಳ್ಳಿರಲು ||೧೭||

ಜಾಣನೆ ನವಪಂಚ ಬಾಣನೆ ಎಂಥ
ಪ್ರಾಣಕಾಂತೆಯನು ನೀನಗಲಿ।
ಹೋಹೆನೆಂಬುದು ಎನ್ನ ಪ್ರಾರಬ್ಧ ಫಲವಿದು
ಬೇಡೆಂದರೆ ತಾ ಖೋಡಿ ರಂಡಿ ||೧೮||

ಅರಮನೆಯತ್ತವರ ಅಡ್ಡಾಡಗೊಡಬೇಡೆಂದು
ಸರಿಯ ಸವತಿಯರು ನಗುವಂತೆ।
ನರೆ ಬಂದ ಮುದಿಯನ ಮರಳು ಮಾಡಿದಳೆಂದು
ಹೊರಲೇನೋ ಅರಸ ಈ ದೂರ ||೧೯||

ತರಳೆಯೊರ್ವಳ ಬಿಟ್ಟು ರಮಣ ನೀ ಬರುವನಕ
ಉಳಿವುದೆ ಎನ್ನಯ ಪ್ರಾಣ।
ನಯನ ದೃಷ್ಟಿಯ ತೆಗೆದು ಪರರ ನೋಡದ ಸತಿಯ
ನಗಲಿ ಹೋಗಲು ನಿಮಗೆಣೆಯೊ ||೨೦||

ಕೋಟಿ ಚಂದ್ರನ ಕಳೆಯ ರೂಪಿನ ಸತಿ ಕೇಳು
ಪ್ರಾಣಾತ್ಮ ನಿನ್ನೊಳಗಿರುತಿಹುದು।
ಶೋಕವ ಬಿಡು ನಾರಿ ಈ ರಾತ್ರಿಯ ದಯಮಾಡೆ
ಬೇಸರ ಕಳೆದು ನಾ ಬರುವೆ ||೨೧||

ಬಡನಡುವಿನ ಬಾಲೆ ತಡೆಯ ಬಲ್ಲೆನೆ ನಿನ್ನ
ಮುಖವ ಕಾಣದೆ ಮರುದಿವಸ।
ಶುಭದೊಳು ನೀ ಪೋಗೆನಲು ತಾ ನಡೆದ ಕಾರ್ಯದ
ಲೇಸು ಪಿಡಿದನು ಗಲ್ಲ ಬಿಂಬಗಳ ||೨೨||

[ವೃತ್ತ] ಕುಚದ ಮೇಲೆ ನೀ ಚಿತ್ತ ಸ್ಥೈರಿಸು ಎಂದು
ಮುತ್ತ ಕೊಟ್ಟನು ಗಲ್ಲ ಪಿಡಿದು ।
ಚಿತ್ತೈಸು ರಾಜೇಂದ್ರ ತನ್ನ ನೇತ್ರಗಳ ಪೊರೆದಂತೆ
ತಪ್ಪದೆ ಬನ್ನಿ ನಾಳೆನಲು ||೨೩||

ಬಾರೆನ್ನ ಭಾಗ್ಯದ [ಮಾ]ಲೆಯೆ ಕೋಕಿಲ ಗಾನೆ
[ಸೈರಿ]ಸು ಎರಡು ರಾತ್ರಿಯ[ನು]

ಮೇಲೆ ಹೆಚ್ಚಾಗಿಯು ತಡೆದರೆ ಮುಖ ನೋಡದೆ
ಅಭಿಮಾನವ ಕಳೆವೆ ಸಭೆಯೊಳಗೆ ||೨೪||

ಒಪ್ಪಿತೆ ಮನಸಿನ್ನು ಚಿತ್ರದ ಪ್ರತಿಬೊಂಬೆ
ಉತ್ತಮದ ಗಿಳಿಯು [ಪಂ]ಜರದ।
ತೊತ್ತು ದಾಸಿಯರೊಡನೆ ಲೆತ್ತ ಪಗಡೆಯಾಡಿ
ಹೊತ್ತವು ಕಳೆ ಎರಡು ದಿವಸ ||೨೫||

ನಾರಿಯ ಸಂತೈಸಿ ರಾಯ ಶೃಂಗರವಾಗಿ
ಆ ಮಂದಿರವನು ಪೊರಡೆ।
ಸಾರಲು ರಣ ಕಹಳೆ ಪರಿವಾರ ಭೋರೆನೆ ಬಂದು
ವಾಲಗದ ಚಾವಡಿಗೆ ಕುಳಿತ ||೨೬||

ದಿನಕರನುದಯದಿ ನಗರದ ಪತಿ ಬಂದು
ಸದರಗಾರೊಡನೆ ಮಂತ್ರಿಗಳು।
ಪರಿದೋಡಿ ಬರಲಾಗ ಕರಿ ತುರಗ ಕಾಲಾಳು
[ಎ]ದುರಿಲಿ ಬಂದು ವಾಲೈಸೆ ||೨೭||

ಹಡಪ ಕಾಳಂಜಿಯು ಪಿಡಿವ ಚಾಮರ ಗಿಂಡಿ
ಎಡೆ ಎಡೆಗೆ ನಿಂದು ವಾಲೈಸೆ।
ಎರಡನೆ ದೇವೇಂದ್ರ ಹೊ[ಗಳಿ]ಕೊಳ್ಳುತ ರಾಯ
ನುಡಿದ ಮಂತ್ರೀಶನೊಡನೆ ||೨೮||

[ಕೇಳ]ಯ್ಯ ಬೈಚಪ್ಪ ಬಹಳ ಕಾಲದಿ ನಾವು
ಹೋಗಿಲ್ಲ ಬೇಂಟೆ ಹೊಸಮಲೆಗೆ।
ಬೇಗದಿ ಕರೆಸಯ್ಯ ಬಲವು ಬೇ[ಹಿ]ನ ಮಂದಿ
ಚರಿಸಾಡಬಹುದೆರಡು ರಾತ್ರಿ ||೨೯||

ಕರೆಸಯ್ಯ ಬಾದುರಖಾನ ನಾಗರಸನ
ವೀರ ಮಾನ್ಯರ ಹಲಬರನು।
ರಾಜೇಂದ್ರ ರಾಮಯ್ಯಗೆ ಊಳಿಗವನು ಕಳುಹಿ
ಪೇಳಿ ವಾರ್ತೆಯನು ಕರೆತನ್ನಿ ||೩೦||

ಬಾದುರಖಾನನು ನಾಗರಸ ಮೊನೆಗಾರರು
ಧೀರ ಮನ್ನೆಯರು ಶೃಂಗರಿಸಿ।
ಸುಳುಹು ಹೆಜ್ಜೆಯ ತೆಗೆದು ಎಳೆದು ಮೃಗವನ ಕೊಲ್ವ
ಹಳೆಯ ಪೈಕದ ಮಂದಿ ಒದಗೆ ॥೩೧॥

ಪ್ರಳಯಕಾಲದ ರಾಮನರಮನೆಗೆ ಊಳಿಗ ಬಂದು
ಕರಮುಗಿದು ಕಾರ್ಯವನು ಪೇಳೆ।
ಬರಹೇಳಿದನು ನಿಮ್ಮ ಧರಣಿ ಕಂಪಿಲಭೂಪ
ಹೊರಡು ಬೇಂಟೆ[ಗೆ] ಹೊರ ಪಯಣ ॥೩೨॥

ಗಹಗಹಿಸಿ ನಕ್ಕನು ರಣಧೀರ ಚೆನ್ನಿಗರಾಮು
ಪ್ರಾಯವೆ ತಮಗೆ ಬೇಂಟ್ಯಾಡೆ।
ಕಾಮ ತಾ ಯೌವನಗೆ ಸ್ತ್ರೀಯರ ಭ್ರಮೆ ಚಿತ್ತ
[ಮುದಿ]ಯಾದ ಕಾಲದಿ ಬೇಂಟೆ ಬೇಹರೆ ॥೩೩॥

ಸಾವಾಗ ಶನಿ ಬಂದು ಕಾಡುವ ತೆರ ಕಾಣೊ
ರಾಯಗೆ ಭ್ರಮೆ ಹುಚ್ಚು ಮರಳು।
ನೋಡಯ್ಯ ಕಾಟಣ್ಣ ಮೊದಲಿಗೆ ಹೊರಟಾರು
ಹೋಗಲು ನಾವೆ ಕರೆದಿಹೆವೆ ॥೩೪॥

ಕೋಡಗವು ಮುದಿ ಆಗೆ ಹಬ್ಬೋದ ಬಿಡುವುದೆ
ಹಾದರ ಕಲಿತ ಮಾಯಜಾಲೆ ।
ಮೂಗು ಮುಂದಲೆಗೊರೆದರೆ ಹೇಸಳು ತಮ್ಮ
ಹೋಗಿ ಬರುವನು ಏಳಪ್ಪ ॥೩೫॥

ಅಣ್ಣಾಜಿಗೀ ಮಾತು ಬ್ರಹ್ಮಾಂಡಕ್ಕೆ ಸರಿಯಹುದು
ಕಣ್ಣಿಲ್ಲದವಗೆ ಕನ್ನಡಿಯು ।
ಪುಣ್ಯ ಜವ್ವನನಾಗಿ ಪುತ್ರರ ಸಹವಾಸವ
ಒಮ್ಮೆ ನೋಡುತ ವೀರ ಬರದೆ ॥೩೬॥

ಕರೆಸಿದ ಬಿರುದಿನ ಎಕ್ಕಟಿಗಾರರ
ಹರುಷದಿ ವೀರಸಂಗಯ್ಯನ ಕರೆಸಿ।

ಕರೆಸಿದ ಲಿಂಗನ ಹಮ್ಮೀರ ಖಾನರ ಎಲ್ಲ
ಶೃಂಗಾರವಾಗಿ ಮಾರ್ಬಲವು ||೩೭||

ರಾಮ ಲಕ್ಷ್ಮಣರಂತೆ ತಾವು ಶೃಂಗರವಾಗಿ
ಏರಿದರು ತುರಗ ಓರಂತೆ।
ಅರ್ತಿಲಿ ಬರುವಾಗ ಅವಶಕುನದೋರುವುದ ಕೇಳಿ
ಸತ್ಯಸಾಗರರು ಮನ ಒಲಿದು ||೩೮||

ವಾಯಸ ಕಟ್ಟಿತು ಒರ್ವ ಬ್ರಾಹ್ಮಣ ಇದಿರಾದ
ಪೂರ್ವದಿ ಪಲ್ಲಿ ಸ್ವರವಿಡಿದು।
ವಾಮಭಾಗದಿ ಗರುಡ ಬಲನಾಗಿ ನಡೆಯಲು ನೋಡಿ
ಹಾನಿಹುದು ಹೋದ ಕಾರ್ಯಗಳು ||೩೯||

ಏನು ಕಾರಣವೆಂದು ರಾಮ ಮನದೊಳು ಕರಗಿ
ಹಾನಿ ಯಾರಿಗೆ ತೋರುವುದೊ।
ಹೇಳಿರೊ ರಾಯಗೆ ಆದಂಥ ಅಪಶಕುನ
ಬರಹೇಳು ಎಂದರೆ ಸಾಗಿ ಬರುವೆ ||೪೦||

ಚರರು ಆ ನುಡಿತಂದು ಅರಸಿನೊಡನೆ ಪೇಳೆ
ಗರುಡಪಲ್ಲಿಯ ವಾರ್ತೆಗಳು।
ಮೀರಿ ಬರಲು ವಾಯಸ ಕಟ್ಟಿತ್ತು
ಶಕುನವಲ್ಲೆಂದು ತಿರುಗಿದನು ||೪೧||

ಅವಶಕುನವಾದಲ್ಲಿ ಬರಸಲ್ಲ ಪಯಣವಿದು
ಇರಲವರು ಪುರದೊಳು ಸುಖದಿ।
ಹೊಡೆಯಲು ರಣಭೇರಿ ನಡೆಯೆ ಕಂಪಿಲರಾಯ
ದಿಗಿಲು ಆರ್ಭಟಿಸಿ ಪಟ್ಟಣವ ||೪೨||

ರಾಯನು ಕಂಪಿಲ ಹೋಗಿ ಹೊಸಮಲೆಯೊಳು
ಕಾನಾಂತರಕೆ ದೊರೆ ಹೋಗಲು।
ಏನಯ್ಯ ಕಾಟಣ್ಣ ತಾ ಹೊರಟು ಬಂದುದು
ಕೂಡಿದವರಿಗೆ ನಗೆಪಾಟ ||೪೩||

ಪೇಳಿದೆ ಮನೆಯೊಳು ಉಳಿದಿರಲು ಘನ ನಮಗೆ
ನಡೆದರು ಲೇಸು ಪಿತನೊಡನೆ।
ಮರನೇರಿ ಕೈ ಬಿಟ್ಟ ತೆರನಾಗಿ ಬಂದು
ನಡುಬೀದಿಯೊಳು ನಿಂದ ಬಗೆಯ ||೪೪||

ಬರಬಾರದಣ್ಣಾಜಿ ಬಹಳ ಪೌರುಷದೊಳು
ಹಿರಿಯಬಾರದು ಬಾಣವನು।
ಮರಳಿ ಹಾಕುವರೆ ಛಲದಂಕರಾದವರು
ನದಿಗಳಿಗೆ ಸ್ವಾಮಿ ಹೋಗುವನು ||೪೫||

ಮತ್ತೆ ಒಳ್ಳಿತು ಭೂಪ ಚಿತ್ತೈಸು ಈ ಮಾತ
ಅಸತ್ಯವೆಂಬವರಾರು ಇಲ್ಲ।
ಜಕ್ಕನೆ ತೇಜಿಯನೇರಿ ನಡೆಯಲು ರಾಮ
ಎಪ್ಪತ್ತು ಮನ್ನೆಯರು ಎಡಬಲದಿ ||೪೬||

ಹೊರಡಲು ಕುಮ್ಮಟ[ದ] ಹರಿದಾರಿ ಬಯಲಿಗೆ ಬಂದು
ತೇಜಿಗೋಲುಗಳ ಮಾಡಿದರು।
ಶರೀರವು ಬೆಮರೊಡೆದು ಮಾತಂಗಿ ಹಂಪೆಯ
ನದಿಗೆ ಬಂದರು ಹರುಷದಲಿ ||೪೭||

ಕಂಡನು ಗಂಗೆಯೊಳ್ ತುಂಬಿದ ಹರಿಗೋಲ
ಚೆಂದವಾಯಿತ್ತು ಅಣ್ಣಾಜಿ।
ಮುಂದೀಗಾನಿದನೊಮ್ಮೆ ಆಡಿನೋಡುವೆನೆಂದು
ಅಂದಿಳಿದ ತೇಜಿಯನಲ್ಲಿ ||೪೮||

ಊರೊಳಗಿರುವಂಥ ಹರಿಗೋಲು ದೋಣಿಯ ತಂದು
ನೂರಾರ ತರಿಸಿ ಹಾಕಿಸಿದ।
ಭಾಗೀರಥಿಯ ಪೂಜೆ ಪುಷ್ಪಕದಿ ಮಾಡಿ
ಏರಿದನು ಬೇಗ ದೋಣಿಯನು ||೪೯||

ವೀರ ಮನ್ನೆಯರೆಲ್ಲ ಏರಿದರು ತ[ಮ]ಗೊಮ್ಮೆ
ಬೇಕಾದ ದೋಣಿ ಹರಿಗೋಲ।

ನೀರನು ತುಂಬಿದ ಕಾರಂಜಿ ಕೊಳವೆಯ
ವೀರ ಮನ್ನೆಯರೆಲ್ಲ ಚೆಲ್ಲಿ ॥೫೦॥

ಹರಿಗೋಲು ನೂಕುವ ತುರಗದ ಭರವಿಂಗೆ
ಮುರಿದೋಡುತಿರಲು ಮನ್ನೆಯರು।
ಪರಿಬಳಸಿ ನೀರನು ಮಳೆಗಾಲದಂತೆ ಸುರಿದು
ಮರಳಿ ಓಡುವ ಸಿಕ್ಕದಂತೆ ॥೫೧॥

ಕಂಡನು ರಾಮನ ದಿಂಡೆಯ ತನಗಳ
ಕೊಂಡು ಮುಳುಗುವ ಇವ ನಮ್ಮ।
ಕಂಡಲ್ಲಿ ಇಳಿದಿಳಿದು ಕಡೆಗೋಡುವರ ಕಂಡು
[ಶಿ]ಖಂಡಿಗಳೆನುತ ತಾನಿಳಿದ ॥೫೨॥

ಇಳಿಯಲು ಹರಿಗೋಲ ಬಳಿಕ ಸ್ನಾನವ ಮಾಡಿ
ಬರಲು ಭೂಷಣವನೆ ತೊಡಲು।
ನಡೆದ ತೇಜಿಯನೇರಿ ನಡೆಯಲು ಪುರಕಾಗಿ
ಸಡಗರದೊಳು ಸಂಭ್ರಮದಿ ॥೫೩॥

ಬಾಲರು ನೂರಾರು ಕೂಡಿ ಲೆಗ್ಗೆಯ ಹೂಡಿ
ಹೊಡೆದಾಡುವ ಸೊಗಸ ತಾ ನೋಡಿ।
ಧೀರರಿಗೆ ದಿಟ್ಟತ್ವ ವಜೀರರಿಗೆ ತಕ್ಕಂಥ
ಕಡಿದಾಡುವ ಪಂಥವುಂಟು ॥೫೪॥

ಏರಿದ ತೇಜಿಯನಿಳಿದು ಆ ಕ್ಷಣದೊಳು
ಬಾರಯ್ಯ ಮನ್ನೆಯರು ನಿಲ್ಲಿ।
ಆಡುವ ಇವರಂತೆ ಜೋಡಿಗೆ ಸಮನಾಗಿ
ಹೊಡೆದಾಡಿ ನೋಡುವನರಗಳಿಗೆ ॥೫೫॥

ಚೆಂದವಾಯಿತು ಕಾಣೋ ಬಿರಿದಿನ ಚೆನ್ನಿಗರಾಮ
ದಂಡ ಕಡಿದವನೆ ಲಕ್ಷಾಂತ್ರ।
ತುಂಡು ಹುಡುಗರಾಡುವ ಚೆಂಡಾಡೆ ವೈರಿಗಳು
ಕುಂಡೀಲಿ ನಗರೇನು ತಮ್ಮ ॥೫೬॥

ನಾಡಾಡಿ ಮಕ್ಕಳು ಆಡುವುದು ಚೆಂಡನು
ರಾಯ ಸುತರು ಆಡಸಲ್ಲ।
ಕೂಡಿದ ಸತಿಯರು ನಗರೇನು ಮನೆಯೊಳಗೆ
ಆಡಲು ಹಳೆ ಅರಿವೆ ಚಂಡ ||೫೭||

ಸತಿಯರು ನಗಲಿಕ್ಕೆ ಸುತರಾ ಬಲ್ಲವೆ
ಮತಿಗೆಟ್ಟು ನುಡಿವೆ ಕಾಟಣ್ಣ।
ತಪಯೋಗವಳಿವ ಮನ್ಮಥನ ಯೌವನವುಂಟೆ
ಸಕಲರಲ್ಲದೆ ಮದಪ್ರಾಯವುಂಟೆ ||೫೮||

ಮದುವೆಯಾಗದ ಸುತನು ಅಳಿಯ ಋಣಭಾರದಿ
ಜನವಾಕ್ಯ ಧರೆಯ ಶಾಸ್ತ್ರಗಳು।
ಅದರಿಂದ ಅಣ್ಣಾಜಿ ಅರಸು ಬಾಲೆರ ತಂದು
ವಿವಾಹ ಮಾಡಿದ ಬಗೆಯರಿಯಾ ||೫೯||

ಹೇಳಿದನಣ್ಣಗೆ ನಾಲಗೆಯ ಪಿಡಿದಂತೆ
ಬದಲಾಡಲು ಉತ್ರ ತಾವಿಲ್ಲ।
ಬೇಡಯ್ಯ ಚೆಂಡು ಆಡುವ ಪ್ರೀತಿರಲು
ಬೇರಿಹುದು ಮುತ್ತಿನ ಚೆಂಡು ||೬೦||

ಮುತ್ತಯ್ಯ ಮುಮ್ಮಡಿ ಪೆತ್ತಯ್ಯನಾಡಿದ
ಹಿಂದಿನ ಮುತ್ತಿನ ಚಂಡಿದೆ ತಮ್ಮ।
ಹೆತ್ತಮ್ಮ ಹರಿಹರದೇವಿಯ ಬಳಿಯಲ್ಲು
ಸಿಕ್ಕಿದರೆ ತಂದು ನೀನಾಡೊ ||೬೧||

ಮುತ್ತಿನ ಚೆಂಡೆಂಬ ವಾಕ್ಯ ಕರ್ಣದಿ ಬೀಳೆ
ಹತ್ತು ಭುಜವಾದ ಮನದೊಳಗೆ।
ಹೆತ್ತಮ್ಮನೊಳಗಿರಲು ಶಕ್ತಿಯಾತಕೊ ಅಣ್ಣ
ಹಸ್ತ ಪಾದವ ಪಿಡಿದು ತರುವೆ ||೬೨||

ತಾಯೊಡನೆ ತರುವುದಕೆ ನ್ಯಾಯವೇತಕೊ ಅಣ್ಣ
ಏರಿದ ತೇಜಿ ತವಕದಲಿ।

ತಾವರೆಸಖ ಬಂದು ತಾಯೊಡಲ ಹೊಗುವಂಥ
ಠಾವಿಲಿ ಕುಮ್ಮಟವ ಹೊಗಲು ||೬೩||

ಹೊತ್ತು ಹುಟ್ಟುವ[ವ] ಸಾಗೆ ಪಶ್ಚಿಮದ ಕಡಲಿಗೆ
ಮತ್ತೆ ಸ್ನಾನವನು ಮಾಡುವರೆ ।
ಮರ್ತ್ಯಲೋಕವು ಮುನ್ನ ಕತ್ತಲಾಗವನು
ಮೃಗಪಕ್ಷಿಗಳು ಬಹುವಾಗಿರಲು ||೬೪||

ರಾಯ ರಾಮನು ತ[ನ್ನ] ಪರಿವಾರಕೆ ವೀಳ್ಯವ
ಕೊಟ್ಟು ಸಾಗಿದ[ನು] ಅರ್ತಿಲರಮನೆಗೆ।
ಸ್ನಾನ ಪಾನಗಳಾಗಿ ಸವಿದು ಮೃಷ್ಟಾನ್ನವ
ಭಾನು ಯಾವಾಗ ಮೂಡುವನೊ ||೬೫||

ಹೇಮಾದ್ರಿ ಗಿರಿಯನು ಸೂರ್ಯನು ಪರಿಬಳಸಿ
ಸಾಗಿ ಪೂರ್ವದ ಕಡಲಿಂಗೆ।
ಏರಲು ರಥಕೀಗ ಭೂಮಿಗೇರಲು
ಚೂಡ ತೋರಿದ ಮೂಜಗಕ್ಕೆ ||೬೬||

ಉದಯವಾಗಲು ಎದ್ದು ದೊರೆ ರಾಮ ತನ್ನಯ
ಕ್ರೀಯದಾಗಮವ ತೀರಿಸಿದ।
ತವಕದಿ ಸವಿದು ಪರಮಾನ್ನ ಭೋಜನವ
ಧರಿಸಿದ ವಸ್ತು ಆಭರಣ ||೬೭||

ಶೃಂಗಾರವಾಗುವುದ ಮಡದಿ ಅಂಗನೆ ಕಂಡು
ತಮ್ಮತ್ತೆಗೆ ಸುದ್ದಿಯ ಕೊಡಲು।
ಮತ್ಯಾವ ಕಾರ್ಯವೊ ಗೊತ್ತು ತಿಳಿಯದು ನಿಮ್ಮ
ಪುತ್ರನ ಕಳೆ ಕಾಂತಿ ಸಿರಿಯು ||೬೮||

ಪ್ರಾಣ ಸ್ನೇಹಿತನಾದ ಪ್ರಧಾನಿಯ ಮಗ ಬಂದ
ದೇವಿಸೆಟ್ಟಿಯ ಲಿಂಗಣ್ಣ।
ಕಾದಿಹರು ಭಾವಾಜಿ ಕಾಟಯ್ಯ ನೇಮಿಸಲು
ದೂರಲ ಮನ್ನೆಯರ ಕರಸೆಂದು ||೬೯||

ಸೊಸೆಯರಾಡುವ ಮಾತ ಹರುಷದಿಂದಲಿ ಕೇಳಿ
ಕರಗುತ ತಾಯಿ ಮನದೊಳಗೆ।
ಯಾರು ಪೇಳಿದರೆಂದು ಬಿಡುವ ಬಾಲಕನಲ್ಲ
ಇದಕೇನ ಮಾಡಲಿಯೆಂದು ||೭೦||

ಅಣ್ಣಾಗರುಹಿದ ಅಗ್ರಗಣ್ಯ ಚೆನ್ನಿಗರಾಮ
ಮನ್ನೆರಿಗೆ ಉತ್ರವಾಲೆಯನು।
ಬ್ರಹ್ಮಾಂಡದೊಳಗುಳ್ಳ ಪುಣ್ಯಪುರುಷರ ನೋಡ ಬಾ
ರೆಂದೆನುತ ಬರುವಂಥ ಜನರು ||೭೧||

ಅಡಿಗೆಯಾಗದ ಮುನ್ನ ಎಲೆಯನು ಹಾಸಿದ
ತೆರಬಂತು ಕಾಣೋ ತಮ್ಮ।
ಕೊಡುವಳು ಚೆಂಡನು ಕಾಣೆನೆಂಬಳು ಕಡೆಗೆ
ಹುಡುಗಾಟವಾಗಲು ಹೀನ ||೭೨||

ಯಾಕಣ್ಣಾ ಬಲು ಜೊಳ್ಳು ಮಾತುಗಳಾಡುವೆ
ಮಾತೆ ಕೊಡದಿರೆ ಮರಳಿ ಬರೆನು।
ಸೇಕರನ ಪ್ರೀತಿಲಿ ಚರಣ ಹಿಡಿದು ಕೇಳ್ವೆ
[ಸೇವಕ] ತೋರಲು ಪ್ರಾಣ ಬಿಡುವೆ ||೭೩||

ತರುವುದಕೆ ಹುಸಿಬೇಡ ಬರೆಸಯ್ಯ ಲೇಖನವ
ಕರೆಸಯ್ಯ ವೀರ ವಿಕ್ರಮರ।
ಹೊರಡಲು ರಣವಿಜಯ ಕಿರಣದ ಪ್ರಭೆಯಂತೆ
ನುಡಿಯಲು ಬಿರಿದಿನ ಕಹಳೆ ||೭೪||

ಕಹಳೆಯ ಸ್ವರವನು ಪರಿವಾರವೆಲ್ಲವು ಕೇಳಿ
ರಣಭೀಮ ಹೊರಡುವನೆಂದೆಲ್ಲ।
ಕಾಲಾಳು ಕರಿತುರಗ ಗುರಿಕಾರ ವಜೀರರು
ಬೀದಿ ಬೀದಿಗಳು ತಟ್ಟೈಸೆ ||೭೫||

ಇತ್ತಲು ಕಾಟಣ್ಣ ಸುತ್ತಲ ರಾಯರಿಗೆ
ಉತ್ರ ಊಳಿಗ ಬರೆದು ಕಳುಹಿ।

ಚಿತ್ತಗಮನದಿ ಬನ್ನಿ ಮೂರನೆ ವಾಯಿದಿಗೆ
ಮುತ್ತಿನ ಚೆಂಡಾಡೊದೆಂದು ||೭೬||

ಕಾಗದವ ಬರೆದು ಹದಿನಾರು ಮೂಲೆಗೆ ಕೊಟ್ಟ
ಸಾಗಿದ ತಮ್ಮನ ಬಳಿಗೆ।
ಮುತ್ತಿನ ಪಾಗು ಬಿಗಿದು ಚಿಮ್ಮುರಿ ಸುತ್ತಿ
ಒತ್ತಿಟ್ಟ ಸಣ್ಣ ನಾಮವನು ||೭೭||

ನಿಲುವುಗನ್ನಡಿ ಹಿಡಿದು ನೋಡಿದ ರಾಮಯ್ಯ
ಬಳಿಕಿಟ್ಟ ಊಳಿ ಪದಕವನು।
ಭೂಮಿಯಾರ್ಭಟಿಸುತ್ತ ಬರಲು ಚೆನ್ನಿಗರಾಮ
ಪಲ್ಲಕ್ಕಿ ಇಳಿದು ಒಳಹೊಗಲು ||೭೮||

ಬಾಲರ ಕಾಣುತ್ತ ಭಾನು ತನ್ನಯ ಸಖನು
ಮೂಡಲು ತಾವರೆಯಂತೆ।
ಬಾಯನು ಬಿಡುತಿರ್ಪ ಲಾವಣ್ಯದೊಳಗಿರಲು
ಹೋಗಿ ಸಾಷ್ಟಾಂಗವ ಎರಗಿ ||೭೯||

ಚಂದ್ರನ ಪ್ರಭೆ ಕಂಡು ಅಂಬುಧಿ ನಲಿವಂತೆ
ಸಂಭ್ರಮದೊಳು ಬಾಲಕ[ನ] ।
ಮುಮ್ಮುಡಿ ಮುಖ ಗಲ್ಲವಿಡಿದು ಎಡಬಲದೊಳು
ರಂಭೆ ತೊಡೆಯೊಳು ಕುಳ್ಳಿರಿಸಿ ||೮೦||

ಹೊಳೆವ ಕನ್ನಡಿಯಾಗಿ ಬಲ ತುರಗ ಶೃಂಗರಿಸಿ
ಪರುಟವಣೆಯಾಗಿ ಬಂದಿಹುದು।
ಮಲೆತರ ಎದೆಗರ್ವ ತೊಲಗಿಸದೆ ಇನ್ನಾರು
ವೈರಿಯ ಮೇಲೆ ಈ ಗಮನ ||೮೧||

ಕಾರ್ಯ ಕಾಳಗವಿಲ್ಲ ಕಂದರ ಬಿನ್ನಪ್ಪವ
ಕೇಳೆನಲು ಪೇಳಲು ಬಹುದು।
ಬಾಯಿವೊಡೆಯ[ದು] ಮಾತು ಬರಲರಿದು ದಯ
ಮಾಡೆನೆಂದರೆ ಉಸುರುವೆನು ||೮೨||

ಕೊಡುವೆನು ತನ್ನೊಳಗೆ ಇರುವ ಒಡವೆಯ ಬಾಲ
ನಿಮಗಲ್ಲದೊಸ್ತು ಇನ್ನೇಕೆ।
ಕೆಡಲೇನೊ ಹಣಹೊನ್ನ ಕೊಳಗವನು ಅಳೆತರಲೆ
ಇನ್ನೈದು ಹೆಣ್ಣ ತರಲೇನೊ ||೮೩||

ಹಣ ಹೊನ್ನು ಹೆಣ್ಣಿಗೆ ನಿಮಗೆ ಬರುವೆನೆ ತಾಯೆ
ಬಡ ಬಿನ್ನವುಂಟು ಸೇವಕನ।
ಬಡ ಮಾತ ಭ್ರಮೆ ಹತ್ತಿ ಕಳೆಯಲ್ಕೆ ಬೇಸರ
ತರುವೆ ನಿಮಿಷ ಮಾತ್ರದಲಿ ||೮೪||

ಕಾರ್ಯಭಾರವು ಎಲ್ಲ ಆರು ತಿಂಗಳು ಮೊದಲು
ನೀರಾಟಮಾಡಿ ನೋಡಿದೆನು।
ತೀರಲಿಲ್ಲವು ತಾಯೆ ಹಾಳಾದ ಬೇಸರವು।
ಆಡಿದರು ಚದುರಂಗ ಪಗಡೆ ||೮೫||

ಲೆತ್ತ ಪಗಡೆಯನಾಡಿ ಮತ್ತೆ ಬೇಸರವಾಯ್ತು
ಹೊತ್ತು ಹೋಗದು ಮನೆಯಲ್ಲಿ ಕುಳಿತು।
ಮತ್ತೊಂದು ವಿದ್ಯೆವ ನೋಡಿ ಒಪ್ಪಿದೆವಮ್ಮ
ನೀ ನೋಡಿ ಒಪ್ಪಿ ಕೊಡಮ್ಮ ||೮೬||

ಮೂರಾರು ತಲೆ[ಯಿಂ]ದ ಮೂಲೆಯೊಳಿರಲೇಕೆ
ಯಜಮಾನರು ಪಡೆದಂಥ ಚೆಂಡು।
ಆಡಿ ನೋಡುವ ಅಮ್ಮ ಲಯವಾಗಬಾರದುಯೆಂದು
ಉದ್ಧಾರ ಮಾಡಿದುದು ಚೆಂಡು ತಾಯೆ ||೮೭||

ಚೆಂಡಿನ ನುಡಿ ಬಂದು ಕರ್ಣಕ್ಕೆ ಬೀಳಲು
ಬಿಲ್ಲುಕೊಂಡಂತೆ ಎದೆಯೊಳು।
ದೆಸೆಯು ಹೊಂದದೆ ಜೀವ ಡಿಂಬ ಸ್ಮರಣೆ ಮರೆತು
[ಕುಂದಲು] ಮಿಕ್ಕಿದ ಕಳೆ ಕಾಂತಿ ||೮೭||

ಕರಗುತ ಪಡೆದ ಜನನಿ ಉರಿಗೆ ಬೆಣ್ಣೆಯಿಟ್ಟ
ತೆರದೊಳು ಹರಿಣಲೋಚನೆಯು।

ಮುರಿಯುತ್ತ ಕೈಬೆರಳ ಮುಂದೊಂದು ಹಾನಿಯ ಪೇಳೆ
ಮುರಿದಾಡಿ ನೋಡುವೆನೆನುತ ||೮೮||

ಯಾರು ಹೇಳಿದರಪ್ಪ ಚೆಂಡಿನ ಸುದ್ದಿಯ
ಇದರ ಮೋರೆಯನು ನಾನರಿಯೆ।
ಸೇರದವರು ನಿನ್ನ ಪ್ರಾಣ ಕೊಲ್ವ[ರು] ಮುನಿದು
ಈ ಕಾರಣ ಎನಗೆ ತೋರುವುದು ||೮೯||

ಕೇಳಿ ಕಂಡವರಾರು ಹೇಳಿದವರ ಮಾತು ಸುಡಲಿ
ತೋರಬಾರೆಂದು ಪಿಡಿತರದೆ।
ತಾಯಿ ಮಗನಿಗೆ ಜಗಳ ನ್ಯಾಯ ಮಾಡರೆ ನಿನಗೆ
ಆಡಿ ಪೇಳಿದರೆ ಹಿತವಾಗಿ ||೯೦||

ಚೆಂಡಾರು ಬಲ್ಲರು ನಾ ಕಣ್ಣೇಲಿ ಕಂಡಿಲ್ಲ
ಇಂದು ಕೇಳಿದೆ ನಿನ್ನ ಸ್ವರದಿ।
ಕಂಡುದುಂಟಾಗಲು ಚಿಕ್ಕಂದಿಲಿ ತಾ ಕೊಟ್ಟು
ಆಡಿಂದೆ ನೋಡುವೆ ನಯನದಲಿ ||೯೧||

ಕೇಳದೆ ಕೊಡುವರೆ ತಾಯಿ ಮಕ್ಕಳಿಗೊಮ್ಮೆ
ಬೇರಾಡದೆ ಹಾಲನೆರೆ[ಯುವ]ರೆ ।
ಬೇಡಿದ ಕ್ಷಣದೊಳು ಚಂಡ ಕೊಡುವರೆ ಮುತ್ತ
ಜೋಡಿಸಿ ಬಿಗಿದಿರುವ ಚಂಡ ||೯೨||

ಪುಣುಗು ಇರಲು ಮೂಗಿನ ಸೆಲೆ ಗಿನ್ನು ಒಡೆಯದೆ
ಅಡಗುವುದೆ ಆನೆ ಹುಲ್ಲೊಳಗೆ।
ಮಡಗಿರುವ ಸ್ಥಾನದ ನೆಲೆಯ ಬಲ್ಲವರೊಳು
ಹೊಳವಾಡೆ ತಾಯೆ ನಡಿಯುವುದೆ ||೯೩||

ಬಾರಮ್ಮ ಹಾದಿಗೆ ಪಾದ ಸೇವಕನೊಳು
ಆಡದೆ ಹುಸಿ ಸುಳ್ಳು ಹೇಳ[ದೆ] ।
ನಾಳೆ ಅರಸು ಬರುವನಕ ಪ್ರಾಣ ಯಾರಿಗೆ ನೆಲೆಯು
ನೀರ ಗುಳ್ಳೆಯು ನರಜನ್ಮ ||೯೪||

ಬಾಲನ ನುಡಿಗಿನ್ನು ನಾಲಗೆಯ ಪಿಡಿದಂತೆ
ತಾವಿಲ್ಲ ಬದಲನಾಡುವರೆ।
ಸ್ತ್ರೀಮಾತು ಗಂಭೀರ ಮಾಡದಿರಲು ಸಿಟ್ಟು
ತೋರಲು ಎದ್ದು ಸಾಗುವನು ||೯೫||

ಉತ್ತಮದ ಚಂಡಲ್ಲ ಪುತ್ರ ಲಾಲಿಸು ಕೇಳು
ಕಷ್ಟ ಕೊಡುವುದು ಮುಟ್ಟಿದವರ।
ಎಷ್ಟು ಹೇಳಲಿ ಮಗನೆ ನಿಮ್ಮಜ್ಜಯ್ಯನು ಆಡೆ
ಕೊಟ್ಟುದು ಕರಕೆ ಜೋಳಿಗೆಯ ||೯೬||

ಹುಟ್ಟಿದ ಸ್ಥಾನವ ಗತಿ ನಷ್ಟ ಎಲ್ಲರ ಮಾಡಿ
ಮತ್ತೆ ಸೇರಿತು ನಿಮ್ಮೊಳಗೆ।
ಮುತ್ತಜ್ಜ ಕೆಟ್ಟಂಥ ಕೇಡ ಮುಮ್ಮಡಿ ಕಂಡು
ಕೊಠಡಿಗೆ ಹಾಕಿ ಇಟ್ಟಿಹರು ||೯೭||

ಹುಟ್ಟಿದ ನೆಲೆಯವನು ಅಪ್ಪಣೆ ಕೊಡಬಹುದು
ಚಿತ್ತಕ್ಕೆ ತಿಳಿದಷ್ಟು ತಾಯೆ।
ಸತ್ಯದ ಹರಿಶ್ಚಂದ್ರ ರಾಯನ ಕೆಡಿಸಲ್ಕೆ
ಪುಟ್ಟಿಹುದು ಪುತ್ರ ಕೇಳೆನಲು ||೯೮||

ನೃಪನು ಬೇಂಟೆಗೆ ಪೋಗೆ ಮುನಿಯಿಂದ ಜನಿಸಲ್ಲಿ
ಬಿನುಗು ಸೂಕರವಾಗಿ ಸುಳಿಯೆ।
ಧನುವನು ಪಿಡಿಕೊಂಡು ಹರಿಶ್ಚಂದ್ರ ತಾ ಎಸೆಯಲು
ಕುಲಗೇಡಿ ಸ್ತ್ರೀಯರು ಬರಲು ||೯೯||

ನಾನಾ ವಿದ್ಯೆಂಗಳನು ತೋರೆ ನೃಪವರ ಮೆಚ್ಚಿ
ಬೇಡೆನಲು ಸಕಲ ಸಂಭ್ರಮವ।
ಮಾನಾಭಿಮಾನವ ಕೇಳಲ್ಕೆ ಕೋಪಿಸಿ
ಛೀಯೆಂದು ಬಡಿದು ನೂಕಿಸಲು ||೧೦೦||

ತನುಜೆಯರ ಮೊರೆಯನು ಮುನಿನಾಥ ಕೇಳುತ್ತ
ಕನಲಿ ಕಾಳ್ಗಿಚ್ಚಿನೊಳಗೆ।

ಹಿಡಿಯಲು ಶಾಪವ [ಮಡಿಲೊಡ್ಡಿ] ಹರಿಶ್ಚಂದ್ರ
ಸುಡುಗಾಡ ಕಾಯ್ದನು ಮೂಲ ||೧೦೧||

ಅದರಿಂದಲಾಚೆಗೆ ನಡೆದ ಸ್ಥಾನವ ಕೇಳು
ನಯನ ಪಡೆದವನ ಮೈಯೊಳಗೆ।
ಬಳಿಯೊಳು ಇರುತಿರ್ದ ಹಾಲ್ಮುಕ್ಕಿಯ
ದಿನದಿನಕೆ ಬಂದು ಕಾಡುವುದು ||೧೦೨||

ನೇತ್ರವಿಲ್ಲದ ಮುನಿಯು ಮತ್ತೊಂದು ದೇವಾಲ್ಯ
ಪ್ರತಿಷ್ಠೆಯಾಗಿ ನಿಲ್ಲಿಸಿದ।
ಭುಕ್ತವ ತರುವಾಗ ಚಂಡಾಲ ಕಾಗೆಯು ಆಗಿ
ಕೃತ್ಯವ ಕೆಡಿಸಿ ಹೋಗುವುದು ||೧೦೩||

ಸೀತೆಯು ಮತ್ತೊಂದು ಕಲಾಪದೊಳಗೆ ಜನಿಸೆ
ಮುನಿನಾಥನ ಸೇರೆ ಸಲಹುವನು।
ಜ್ಯೋತಿಯ ಪ್ರಭೆಯಂತೆ ರೂಪ ಯೌವನವಾಗೆ
ಲೋಕದ ಒಳಗೆ ಸಾರಿಸಲು ||೧೦೪||

[ನೇ]ರಿದ ಕಾಗೆಯನಾರು ಕೊಂದವರಿಗೆ ಈ
ನಾರಿಯ ಕೊಡುವೆ ಧರ್ಮಾರ್ಥ।
ಕೂಡಿತು ಶತಕೋಟಿ ಭೂಮಿ ತೂಕದ ಧನುವು
ಏಳದೆ ಮಕುಟವರ್ಧ[ರಿಗೆ] ||೧೦೫||

[ಭಾ]ರಾಗಿ ಇರುವಾಗ ಈ ರಾಮಲಕ್ಷ್ಮಣ ಬಂದು
ನೋಡಿದರು ಬಾಲಕಿಯ ಇರವ।
ವ್ಯಾಳವ ಪಿಡಿದಲ್ಲಿ ವಾಲೆ ಅಂ[ಬ]ಕೆ ಬರೆದು
ದೇವಲೋಕವ ಹೊಕ್ಕರು ಬಿಡದೆ ||೧೦೬||

ಅನುಜನು ಧನುವನು ತುದಿ ಪಾದದಿಂದಲಿ ತುಳಿಯೆ
ಒದರಲು ಭೂಮಿ ತಲ್ಲಣಿಸಿ।
ಕಿಡಿಗ[ಣ್ಣಿ]ನಭವನ ಮೊರೆ ಬೀಳೆ ಗುರುತೆಂದು
ಗರಿ ಬರಬೇಕೆಂದು ಇಡಲು ||೧೦೭||

ತಲ್ಲಣಿಸಿ ದೇವೇಂದ್ರ ಬಲ್ಲಿದರಹುದೆಂದು
ಅಲ್ಲಿ ಲೇಖನವನು ನೋಡಿ।
ಇಲ್ಲಿಂದ ಈಚೆಗೆ ಬ[ರೆ]ದೊಂದು ಗರಿಗಿತ್ತು
[ಸ]ರಳಿಲಿ ಕೊಟ್ಟು ಕಳುಹಿದನು ॥೧೦೮॥

ಬಾಲನೆ ಲಾಲಿಸು ಜಾನಕಿಯ ಶ್ರೀರಾಮ
ಮಾಲೆಯ ಧರಿಸಿ ಕರೆದೊಯ್ದು।
ಆ ಮೂಲ ಬಿಡಲಿಲ್ಲ ರಾವಣನ ತಂಗಿಯಾಗಿ
ಗ್ರಾಮ ಲೆಂಕೆಯಲಿ ಪುಟ್ಟಿತು ॥೧೦೯॥

ಆರಣ್ಯ ವಾಸದಲಿ ಸಾಲೆ ಪರ್ಣವ ಕಟ್ಟಿ
ರಘುರಾಮರು ವನವಾಸ।
ಮಾಡುವ ಸಮಯದಿ ಹೊಂಮೃಗವಾಗಿ
ಸುಳಿಯೆ ರಾಮರಿದ್ದೆಡೆಗೆ ॥೧೧೦॥

ಕೂಡಿದವರ ಬೆನ್ನಟ್ಟೆ ಕೊಂಡೊಯ್ದು ಸೀತೆಯ
ಹಾಳುಮಾಡಿತ್ತು ಲೆಂಕೆಪುರವ।
ತೀರಲು ಅಲ್ಲಿಂದ ಮಾರಿಯಾಗಿ ಎಮ್ಮ ಬುಡಕೆ
ಸೇರಿತ್ತು ಕಾಣಪ್ಪ ರಾಮ ॥೧೧೧॥

ಬ್ರಹ್ಮ ಚೆಟ್ಟಿಗನೆಂಬ ಬೆನ್ನ ಕಾವಲು ಅದಕೆ
ಮುನ್ನೂರು ಭೂತ ಬಾಗಿಲಿಗೆ।
ಧರ್ಮದ ಹರಿಶ್ಚಂದ್ರ ದಶಶಿರನ ಕಾಡಿದ ಪಾಪಿ
ನಿನ್ನ ಕೆಡಿಸದೆ ಬಿಡದೇನೊ ॥೧೧೨॥

ಹಡೆದ ಜನನಿಯೆ ಕೇಳು ಚೆಲ್ವು ವಾಕ್ಯಗಳಹುದು
ಕುರುಡಗೆ ಕೋಲಿಕ್ಕ ತೆರನು।
ಅದರಿಂದ ಗತಿಯಿಲ್ಲವೆನುತಿರ್ದೆ ಅದ ಕಡೆಗೆ
ಆಡಿ ನೋಡುವೆನು ॥೧೧೩॥

ಪಾಪಲ್ಲ ಆ ಚೆಂಡು ಪರಕೆ ಲಾಲಿಸು ತಾಯಿ
ಕಲಾಪವ ನೋಡಿ ಕಡೆಗವರು।

ಭೀತಿಗೊಳದೇ ತಂದು ವ್ರತಿನಿಷ್ಠೆಯೊಳು ನಡೆಯೆ
ಏಕೋದೇವನು ಮೆಚ್ಚ[ದಿಹನೆ] ||೧೧೪||

ಕಂದನ ಬಿನ್ನಪವ ಇನ್ನೊಂದು ಲಾಲಿಸು ತಾಯೆ
ಬಂದೇನೆಂಬುವ ಗ್ರಹಗತಿಯು।
ಚಂದ್ರಧರನ ಮೊರೆಕೊಂಡರೆ ಬಿಡದಮ್ಮ ಮರಳಿ
ಇಂಬಿಟ್ಟುಕೊಂಬ ಗರ್ಭದಲಿ ||೧೧೫||

ಆಡಬಹುದು ನೀವು ಅಲ್ಲವೆಂಬುವರಾರು
ಹಿಂದಾದ ಮಾತುಗಳು ಇವಷ್ಟೆ।
ಕಾಣಲು ನಿಜತರವು ಮುಂದಾಡಿದಲ್ಲದೆ ಎನಗೆ
ಪಾಲಿಸಬಹುದು ದಯದೊಳಗೆ ||೧೧೬||

ರಾಯ ಶೂದ್ರಿಕನು ಕರಚರಣ ನಯನವ ತೆಗಿಸಿ
ಮೇಲೆ ವಿಧಿಯ ಗೆದ್ದು ಇರಲಿವನು।
ಮಾಯದ ತೇಜಾಗಿ ಬಂದು ಒಯ್ಯದೆ ಕಂಚಿ
ಆಲದ ಮರಕೆ ಶಿರ ಬೀಳೆ ||೧೧೭||

ಅರಿಯದಾಡುವೆ ತಾಯೆ ಬರೆದ ಲಿಖಿತವು ಬೇರೆ
ಮರಣವಾಗದೆ ಚಿತ್ರದ ಹುಲಿಗೆ।
ಅಳಿಯಲಿಲ್ಲವೆ ಅಮ್ಮ ಕತ್ತಲೆರಾಯನ ಮಗನು
ಕಾಳಿಂಗನೆಂಬುವ ಪುತ್ರ ||೧೧೮||

ರಾಯನೂರೊಳಗಿಲ್ಲ ಸೇರಳು ಸತಿ ರತ್ನಿ
ಕಾಣಕೂಡದು ಅವಳ ಮನಸು।
ರಾಯನೂರಿಗೆ ಬರಲು ಕರೆದು ಕೈಯೊಳು ಕೊಡುವೆ
ಮೀರಬೇಡವೊ ಎನ್ನ ಮಾತ ||೧೧೯||

ಸುತ್ತಣ ರಾಯರು ಹಗೆಯಾಗಿ ಇಹರಪ್ಪ
ಹಿಡಿದಿಹರು ತಮಗೊಂದು ಕಲ್ಲ।
ಹೆಚ್ಚಿನ ಬಲ್ಲಾಳನ ಎದೆ ಗರ್ವವ ಮುರಿದೆ
ನಿತ್ಯ ಸಂಧಿಸುವ ಸರ್ಪನಂತೆ ||೧೨೦||

ಭುವನಕ್ಕೆ ಕರ್ಣಾದ ಸುರಿತಾಳನ ಬಂಟನ ಕೊಡದೆ
ಮೊರೆಯಾಗಲು ನೀ ಕಾದಿ ಕಡಿದೆ।
ಪಡೆದವನ ಛಲಕ್ಕೊೀಗಿ ಪಾಪಿ ತೇಜಿಯ ತಂದೆ
ಹಗೆಯ ಮೀವನು ರುದ್ರರಾಯ ||೧೨೧||

ಹಾಕಿ[ದೆ] ಬಿರಿದನು ಹರಿಹರರು ಹೊರತಾಗಿ
ಮೂರುಲೋಕದ ಗಂಡನೆಂದು।
ಪಾಪಿ ಚೆಂಡಾಡಲು ಅಪಜಯ ತೋರಲು ಮಗನೆ
ಮುದಿ ಪಾಪಿ ಕಂಪಿಲನ ಬಿಡುವರೆ ||೧೨೨||

ಮುನ್ನ ಮಾಡಿದ ಧರ್ಮ ಕರ್ಮಗಳೆಲ್ಲವು
ಬೆನ್ನಟ್ಟಿ ಬಿಡವು ಕಾಣಮ್ಮ।
ಪನ್ನಂಗಧರನಾಣೆ ವಿಧಿಬೆನ್ನ ಬಿಡುವುದೆ
ನನ್ನಾಣೆ ಚೆಂಡ ಕೊಡಮ್ಮ ||೧೨೩||

ಮರೆದಿರ್ದ ಚಂಡ ನಿನಗರುಹಿ ಕೊಟ್ಟವರಾರು
ಮರಿಯಾನೆ ಚೆನ್ನಿಗರಾಮ।
ಕೊರತೆ ಕುಮಾರರು ಚೆಂಡನಾಡುವರೆಂದು
ಹರಕೆಯ ಮಗಗೆ ಹೇಳಿದಳು ||೧೨೪||

ಮರೆಯ ಮಾತೇತಕ್ಕೆ ಕೇಳವ್ವ ಹರಿಯಮ್ಮ
ಹಿರಿಯ ಕಾಟಣ್ಣ ಹೇಳಿದನು।
ಹರುಷದಿ ಆ ಚೆಂಡ ಆಡಿ ನೋಡುವೆ ತಾಯಿ
ತರಿಸಿಕೊಡಮ್ಮ ಬೇಗದೊಳು ||೧೨೫||

ಬಟ್ಟ ಕಂಗಳು ಉದಕವ ಸುರಿಸಲು ರಾಮ
ಕೆಟ್ಟನೆನುತ ಹರಿಯಮ್ಮ।
ಬುದ್ಧಿಯ ಹೇಳಲು ಅಡ್ಡ ಮೋರೆಯನಿಟ್ಟ
ಬಿದ್ದವು ಕಂಗಳಲಿ ಉದಕ ||೧೨೬||

ಎಂದಳು ಹರಿಯಮ್ಮ ಹೀಗೆ ಯಾತಕೆ ಎಂದು
ಮುದ್ದಾಡಿ ಮಗನ ಸಂತೈಸಿ।

ತೆಗೆದಪ್ಪಿ ಕಂದನ ಕಣ್ಣೀರ ತೊಡೆದಳು
ಬಿಗಿಯಪ್ಪಿ ಮುಂಡಾಡಿ ಬೇಗ ||೧೨೭||

ಅಗಜೆಯರಸ ನಿನ್ನ ಸಲಹಲಿ ಎನುತಾಗ
ಸುಗುಣ ರಾಮಗೆ ಇಂತೆಂದೊ।
ಮುತ್ತಯ್ಯ ಮೂವರು ಸ್ವತಂತ್ರದೊಳೀ ಚೆಂಡ
ಎತ್ತಿ ಆಡಲು ಸುಖವಿಲ್ಲ ||೧೨೮||

ಇತ್ತ ನೀನಾಡಲು ದತ್ತಿ ಬಲಿಯ ಕೊಟ್ಟು
ಮುತ್ತಿನ ಚೆಂಡೊಯ್ಯೊ ಮಗನೆ।
ಏನು ಬಲಿಯು ಇದಕೆ ತಾಯಿ ನೀ ಹೇಳೆಂದ
ನಾನು ಈ ಕ್ಷಣ ತರಿಸುವೆನು ||೧೨೯||

ಮೂರಾರು ತಲೆಯಿಂದ ಕಾಣದು ಪೂಜೆಯನು
ಬಾಗಿಲ ತೆಗೆದು ಪೂಜಿಸಲು।
ಕಾದಿಹವು ಬಲು ಭೂತ ಆಹುತಿಯನು ಕೊಟ್ಟು
ನೀ ಒಯ್ಯೋ ಮಗನೆ ಸಿಟ್ಟೇಕೆ ||೧೩೦||

ಕೊಡುವೆನು ಎಂಬಂಥ ನುಡಿ ಕಿವಿಗೆ ಬೀಳಲು
ರವಿ ಕಿರಣ ಕಾಂತಿ ಮುಖವಾಗೆ।
ಮರಳೊಮ್ಮೆ ಪಾದಕ್ಕೆ ಎರಗಿ ನಿಮ್ಮಣುಗಗೆ
ದಯಮಾಡಿ ಕೊಡುವ ಶಾಂತಿಗಳ ||೧೩೧||

ಕುರಿ ಕೋಣ ಮುನ್ನೂರು ಇಡಿ ಕಾಯಿ ಸಾವಿರವು
ಕದಳಿಯ ಫಲವೊಂದು ಲಕ್ಷ।
ಕೊಡು ಮಗನೆ ದಣಿವಂತೆ ಬಲು ಶಾಂತಿಯಾಗಲು
ಕಡೆ ಶಾಂತಿ ಸಲಹದೇ ನಮ್ಮ ||೧೩೨||

ಅರುಹಲು ಚರರಾ[ಗ] ಹೊಡೆತಂದು ಮುನ್ನೂರು
ಕುರಿ ಕೋಳಿ ಕೋಣ ನಿಲ್ಲಿಸಲು।
ಬಂದಳು ಹರಿಹರನ ದ್ವಂದ್ವ ಮಂಟಪಕಾಗಿ
ಗಾಂಭೀರ್ಯ ಗುಣದ ಭೂದೇವಿ ||೧೩೩||

ಬಂದಳು ಬಾಲ[ಕರ] ಕರವೆರಡರಿಂದಲಿ ಪಿಡಿದು
ಚೆಂಡಿರುವ ಗೃಹದ ಬಳಿಗೆ।
ತಂದಂಥ ಕುರಿಕೋಣ ಕೊಂದು ಪೂಜೆಯ ಮಾಡಿ
ಬಂಧಿಸಿದ ಬೀಗವನು ತೆಗೆಯೆ ||೧೩೪||

ಬಾಗಿಲು ಏಳಂತ್ರ ಬೀಗ ಮುದ್ರೆಯ ತೆಗೆದು
ಪೋಗಲು ಚಂಡಿರುವ ಬಳಿಗೆ।
ಪೂಜೆ ಪುಷ್ಪ ಮಾಡಿ ಬೆಳ್ಳಿ ಪೆಟ್ಟಿಗೆಯನು
ಬೀಗವ ತೆಗೆದು ಕರಮುಗಿದು ||೧೩೫||

ಯುಗ ಮೂರರೊಳಗಾಗಿ ಮಲೆತವರ ಮರ್ದಿಸಿದೆ
ಒಲಿದೆಮ್ಮ ಪಿತಗೆ ಬಡತನ।
ಬಯಲ ಮಾಡಿಯುದ್ಧರಿಸಿದೆ ಜಗಕೆಲ್ಲ
ಕಡೆಹಾಸು ನಿಮ್ಮ ಬಾಲಕರ ||೧೩೬||

ಸತ್ಯದ ರಾಮನ ಅಪಕೀರ್ತಿ ಮಾಡುವ ತೆರಕೆ
ಹುಟ್ಟಿದೆ ಕುಮ್ಮಟಕೆ [ಯಿಂ]ದು।
ಸತ್ಯವ ಬಿಡಲಾರ ಸಾಯದುಳಿವನೆಯೆಂದು
ಈಲು ಗೌಳಿ ಲೇಖನ ||೧೩೭||

ಮುತ್ತಿನಾರತಿ ಬೆಳಗಿ ಪುತ್ರರಿರ್ವರ ಕೈಯಲಿ
ಕೊಟ್ಟಳು ಹರಿಯಮ್ಮ ಹರಿಸಿ।
ದೃಷ್ಟದ ಚೆಂಡಿದು ಎಚ್ಚರದೊಳಗಾಡಿ
ಹುಟ್ಟದೆ ವೈರಾಗ್ಯ ನಿಮಗೆ ||೧೩೮||

ಜನನಿಗೆ ವಂದಿಸಿ ಕಿರಣದ ಕಳೆಯಂತೆ
ನಗುತ ಪಲ್ಲಕ್ಕಿ ಏರಿದನು।
ಎತ್ತಿತ್ತು ರಾಮಗೆ ಮುತ್ತಿನ ಸತ್ತಿಗೆ
ಮತ್ತೆ ಪಾಠಕರು ಉಗ್ಘಡಿಸೆ ||೧೩೯||

ಅರಿರಾಯಮರ್ದನ ಮೂರು ರಾಯರ ಗಂಡ
ಪರರಾಯ ಮಸ್ತಕ ಶೂಲ।

ಧುರಧೀರ ಶರಭಭೇರುಂಡನೆ ಸ್ಥಿರಬಾಳು
ಪರಿವಾರ ಭಟ್ಟರು ಕೊಂಡಾಡೆ ||೧೪೦||

ಮಣಿವ ರಾಯರ ಗಂಡ ಮಲೆವ ರಾಯರ ಮಿಂಡ
ಸೆಣಸುವ ವೈರಿ ಮಾರ್ತಂಡ।
ಡಣಡಣರೆಂಬ ಗಂಟೆಗಳೊಪ್ಪುತಿರ್ದವು
ಕಣಕಾಲಿನೊಳಗೆ ರಾಮನಿಗೆ ||೧೪೧||

ಖಂಡೆದ ಕೈಯ್ಯಲ್ಲಿ ಧರ್ಮಜೀವವ ಕೊಂಬ
ಹಂದೆ ಕುಮಾರರ ಗಂಡ।
ಚಂದದಿಂದಲಿ ಬಿರಿದನು ಹೊಗಳಿಸಿಕೊಂಬ
ಅಂದ ಕುಮಾರ ರಾಮನಿಗೆ ||೧೪೨||

ಸೂಳೆಯರಂತೆ ಶೃಂಗರಿಸಿ ರಣಾಗ್ರದೊಳ್
ಆಳು ಕಳುಹಿಸಿ ತಾನು ಜಣುಗಿ।
ಬಾಳುವ ಸುರಿತಾಳನ ಗಂಡ ರಾಮಯ್ಯ
ಕಾಳೆಗಳೆತ್ತಿ ಸಾರಿದವು ||೧೪೩||

ಪಟ್ಟಸಾಲಿಗೆ ನಡೆತಂದನು ರಾಮಯ್ಯ
ಕಟ್ಟಿಗೆಯವರನು ಕರೆಸಿ।
ಪಟ್ಟಣದೊಳಗುಳ್ಳ ಮಂದಿ ಮನ್ನೆಯರನು
ಉಟ್ಟು ಶೃಂಗರವಾಗ ಹೇಳೊ ||೧೪೪||

ಎಂದ ಮಾತನು ಕೇಳಿ ಕಟ್ಟಿಗೆಯವರಾಗ
ಬಂದರು ಕೇರಿ ಕೇರಿಯಲಿ।
ಹಿಂದಣ ಕಾಲದ ರಾಯರಾಡುವ ಚೆಂಡು
ಇಂದು ರಾಮಯ್ಯಾಡುತಿಹನೆ ||೧೪೫||

ಮಂದಿಯ ಕರೆಸಿ ಹೇಳಲು ಶೃಂಗರವಾಗಿ
ಅಂದು ಕಾಲಾಳು ಮುಂಚಿದವು।
ಚಂದದಿಂದಲಿ ಶೃಂಗರವಾಗಿ ಹೊರಟ[ರು]
ಅಂದು ರಾಮಯ್ಯನ ಬಳಿಗೆ ||೧೪೬||

[ಕ]ಲೆಯ ವೇಶಿಯರೆಲ್ಲ ಹೊರಡೆಂದು ಸೇವಕರು
ಹೇಳಿದರು ಕೇರಿ ಕೇರಿಯಲಿ।
ಚೆಲುವ ರಾಮಯ್ಯ ಚೆಂಡಾಡುವ ಬಯಲಿಗೆ
ಲಲನೆಯರೆಲ್ಲ ಶೃಂಗರಿಸಿ ||೧೪೭||

ಕಾಮನ ರೂಪನ ನೋಡಬೇಕೆನುತಲಿ
ಕಾಮಿನಿಯರು ತವಕದಲಿ।
ಕೋಮಾಲೆ ಬಗೆಬಗೆ ಬಣ್ಣ ನಾಣ್ಯವನುಟ್ಟು
ಸೀಮೆಯಿಂದವರು ಹೊರವಂಟು ||೧೪೮||

ಓರುಗಲ್ಲಿಂದ ಸೂಳೆ ಯಲ್ಲಾಜಿಯು
ಭೋರನೆ ತಾ ವಿಟರೊಡನೆ ।
ಸೇರಿಸುವಳು ಸುರತದಿ ಸೂಜಿಗಳನು
ನೀರೆಯು ನಡೆದಳರ್ತಿಯಲಿ ||೧೪೯||

ಕುಂಭಕೋಣೆಯಿಂದ ವಿರುಪಾಯಿ ಬಂದಳು
ಬೊಂಬೆ ಸರಪಳಿ ಕಾಲಲಿಟ್ಟು।
ಸಂಭ್ರಮದಿಂದ ವೇಶಿಯ ಪಡೆ ಬಂದಿತು
ಅಂಬು ತಾಕಿಯೆ ವಿಟರೆದೆಯು ||೧೫೦||

ಹಿಡಿದ ಮಾತ್ರಕೆ ಹಿಡಿ ಹೊನ್ನ ಕೈಕೊಂಬಳು
ಸುರತದ ಸುಗ್ಗಿ ಎಂಬವಳು।
ಹೊರಟಳು ಬೇಗದಿ ಪೆನಗುಂಟೆ ಯಲ್ಲಾಜಿ
ಭರದಿಂದ ಚೆಂಡ ನೋಡುವರೆ ||೧೫೧||

ವಿಜಯನಗರದ ಭದ್ರಾಜಿ ತಾ ಹೊರಟಳು
ರುದ್ರಾಕ್ಷಿ ಸೀರೆಯನುಟ್ಟು।
ಮುದ್ದು ರಾಮನ ಚೆಂಡಿನಾಟಕ್ಕೆ ಸತಿಯರು
ಪದ್ಮಿನಿಯರು ತೆರಳಿದರು ||೧೫೨||

ತಿದ್ದಿದ ಗಂಧ ಕಸ್ತುರಿಯಿಟ್ಟು ತಿಲಕದ
ಮುದ್ದು ಮುಖದ ನಗೆ ನುಡಿಯು।

ನಿದ್ದೆಗೆ ಸಾವಿರ ಹೊನ್ನ ಕೊಂಬವಳೊಬ್ಬ
ಉದ್ದಗಿರಿಯ ಸಿದ್ದಿಯಿವಳು ||೧೫೩||

ಭೇದವಿಲ್ಲದ ರತಿಗಲೆಗಳೊಳು ಲೆಗ್ಗೆಯ
ಆಡುವ ಚೆಂಡಿನಂಥವಳು।
ಅಂದವಾಗಿಯೆ ನಾಗಾಜಿ ತಾ ಬಂದಳು
ಬೇಗದಿ ತಾ ವಿಟರೊಡನೆ ||೧೫೪||

ವಾಲಗದೊಳಗೆ ಸಂದಣಿಸಿದ ಸತಿಯರು
ಮೇಲೆ ಡವುಡೆಯ ಹೊಯ್ಸಿಕೊಳುತ।
ಬೇಲೂರ ಚೆನ್ನಿ ಬೇಗದಿ ತಾ ಬಂದಳು
ಲೋಲ ರಾಮನ ನೋಡುವರೆ ||೧೫೫||

ಚಿನ್ನದ ಬರೆಹದ ಸೀರೆಯನುಟ್ಟಳು
ಹೆಣ್ಣುಗಳನು ಒಡಗೊಂಡು।
ಹೊನ್ನೂರ ನಾಂಟ್ಯ[ದ] ವಿರುಪಾಯಿ ಬಂದಳು
ಚೆನ್ನರಾಮನ ವಾಲಗಕೆ ||೧೫೬||

ಅಂದಣದೊಳಗೆ ಸಂದಣಿಸಿದ ಸತಿಯರು
ಚಂದ್ರಗಿರಿಯ ಚೆನ್ನೆ ಚೆಲುವೆ।
ಚಿಕ್ಕ ಪ್ರಾಯದ ವಿಟರನು ಸೋಲಿಸುವಳು
ದಿಕ್ಕಿಗೆ ಸುಪ್ರತಿಯೆನಿಸಿ ||೧೫೭||

ಕಲ್ಲುಕೋಟೆಯ ಚಿಕ್ಕಾಜಿ ತಾ ಬಂದಳು
ಕಕ್ಕಸ ಕುಚ ಅಲಗುತಿರಲು।
ಚೆನ್ನಿಗ ರಾಮನ ನೋಡಬೇಕೆನುತಲಿ
ಕನ್ನೆವೆಣ್ಣುಗಳೈದಿದರು ||೧೫೮||

ಹಟ್ಟಿಕಾರರು ಹಳ್ಳಿಕಾರರು ಹನುಮರು
ದಿಟ್ಟ ಗಾಣಿಗ ಬೊಮ್ಮನವರು।
ಕಟ್ಟಾಳು ರಾಮನೆಡಬಲದಲ್ಲಿ ನಿಂದರು
ಒಟ್ಟಾಗಿ ಸಕಲ ಮನ್ನೆಯರು ||೧೫೯||

ಗಡಿಯಂಕ ಬೇಡರು ದಿಟ್ಟ ಕಲಿಗಾರರು
ಒಡನೆ ಮಾದಿಗ ಹಂಪನವರು।
ಕಡುಗಲಿ ಅಕ್ಕಸಾಲೆಯ ಚೆನ್ನಣ್ಣನು
ಗಡಣದಲ್ಲಿರುವ ಮನ್ನೆಯರು ॥೧೬೦॥

ಎಪ್ಪತ್ತುರಾಯನ ಬೊಲ್ಲನೇರಿಯೆ ರಾಮ
ಒಪ್ಪುವ ನಡುಬೀದಿಯೊಳಗೆ।
ಇತ್ತರದಲಿ ಚಾಮರವ ಡಾಳಿಸಿಕೊಂಡು
ಅರ್ತಿಲಿ ನಡೆದ ರಾಮಯ್ಯ ॥೧೬೧॥

ಪಟ್ಟಣದೊಳಗುಳ್ಳ ಸ್ತ್ರೀಯರೆಲ್ಲರು ಕೂಡಿ
ಇಟ್ಟು ಶೃಂಗರವಾಗುತಿರಲು।
ದಿಟ್ಟ ರಾಮಯ್ಯನ ನೋಡಬೇಕೆನುತಲಿ
ಮಿತ್ರೆಯರೊಂದು ಸಾವಿರವು ॥೧೬೨॥

ರಾಜಬೀದಿಯಲಿ ರಾಮಯ್ಯನು ಬರುವಾಗ
ಮೂಜಗದೊಳು ಕಲಿವೀರ।
ರಾಜ ಕಾಮಿಯರು ಕಂಡು ಕಾಮಿಸಿದರು
ಧಾತುಗೆಟ್ಟರು ಮನದೊಳಗೆ ॥೧೬೩॥

ಕಾಮನ ಕಳೆಗಿಂದ ಹೆಗ್ಗಳಿಸಿಪ್ಪನೆ
ಭೂಮಿಗೆ ಚೆಲುವನೆ ರಾಮ।
ಸಾಮಜಗಮನೆ ನಿನ್ನ ಪೆತ್ತಳೆಯೆಂದು
ಕೊಮಾಲೆಯರು ಕೊಂಡಾಡಿದರು ॥೧೬೪॥

ಅಲರುವಿಲ್ಲನು ಜೋಡಿಸಿ ತೆಗೆದೆಸೆಯಲು
ಚೆಲುವೆಯರೆಲ್ಲ ತುಟಿ ಕಚ್ಚಿ।
ತಲೆಬೇನೆ ಕೆದರಿತ್ತು ಕೆಲವು ಸ್ತ್ರೀಯರಿಗೆಲ್ಲ
ಚೆಲುವ ರಾಮನ ಮುಖ ನೋಡಿ ॥೧೬೫॥

ನಿಲ್ಲಲಾರದೆ ಎಡಬಲದ ಸತಿಯರೆಲ್ಲ
ಸಲೆ ಮೋಹಿಯರೆಲ್ಲ ಒರಗಿದರು।

ಹಲವು ಪರಿಯಲಿ ಕೊಳ್ಳಲು ತಮ್ಮೊಳು ತಾವು
ಇವನೊಲಿಸುವುದು ಹೇಗೆನುತ ॥೧೬೬॥

ಬ್ರಹ್ಮನೆಂಬವ ಪಾಪಿ ಇಂತಪ್ಪ ಚೆಲುವನ
ನಮ್ಮ ಗಂಡನ ಮಾಡದ್ಹೋದ।
ಹೆಮ್ಮೆಕಾತಿಯರಾಗ ಉರ್ಮಳಿಸುತಲಾಗ
ತಮ್ಮೊಳು ತಾವೆ ಮಾತಾಡಿ ॥೧೬೭॥

ನುಡಿ ಮರೆದು ಮೋಹಿ[ಪ] ಹೆಣ್ಣುಗಳಿಗೆ
ಒಡೆದವು ಮಾನಕೆರೆಯು।
ಕಡುಗಲಿ ರಾಮನ ಕಾಣುತ್ತ ಸತಿಯರು
ಮಿಡುಕುತ್ತ ತಮ್ಮೊಳು ತಾವು ॥೧೬೮॥

ಒಮ್ಮೆ ಇವನ ನಾವು ಒಲಿಸಬೇಕೆನುತಲಿ
ತಮ್ಮ ಪಣೆಗೆ ಮದ್ದ ಪೂಸಿ।
ಗಮ್ಮನೆ ರಾಮನ ಕಾಣುತ ಸತಿಯರು
ತಮ್ಮೊಳು ತಾವು ಮಾತಾಡಿ ॥೧೬೯॥

ಜನವಶ್ಯದ ತಿಲಕವನಿಟ್ಟು ರಾಮನ
ಮನವನು ಸೂರೆಗೊಂಬೆವೆನುತ।
ವಿನಯದಿಂದಲಿ ನೆರೆದರು ಬನವರಸುತ
ಅನುವಾಗಿ ನಿಂದಳೊಬ್ಬ ಮತ್ತೆ ॥೧೭೦॥

ಕಾಮನರೂಪನ ಯೌವನ ಮದವೆಂತು
ಭೂಮಿಗೆ ಚೆಲುವನೆ ರಾಮ।
ಸಾಮಜಗಮನೆ ನಿನ್ನ ಪೆತ್ತಳುಯೆಂದು
ಕೋಮಲೆಯರು ಕೊಂಡಾಡಿದರು ॥೧೭೧॥

ಕಂತು ಸನ್ನಿಭ ಚೆನ್ನರಾಮನ ಕಾಣುತ್ತ
[ಇಂತಿ]ವನೊಲಿಸಬೇಕೆನುತ।
ನಿಂತೊಬ್ಬ ಮುದಿವೇಶಿ ರಾಜಬೀದಿಗಳೊಳು
ಮಂತ್ರಿಸಿಟ್ಟಳು ಏಳು ಹರಳ ॥೧೭೨॥

ನೆತ್ತಿಯ [ಕೊಡ]ಗಳ ಮರೆದು ಕೈಬಿಟ್ಟರು
ಹುಟ್ಟಿದ ವಿರಹ ತಾಪದಲಿ।
ಎತ್ತಿದ ಮ[ಕ್ಕ]ಳ ಮರೆದು ಕೈಬಿಟ್ಟರು
ಚಿತ್ತದಿ ಭ್ರಮಿಸಿ ನೋಡಿದರು ||೧೭೩||

ನೋಡಿದ ರಾಮನ ರೂಪಯಿರೆ ಹೀಂಗಾದೆ
ಕೂಡುವ ಬಗೆ ಹೇಂಗೆಂದೆನುತ।
ಗೋಡೆಯೊಳ್ ಚಿತ್ರವ ಬರೆದಂತೆ ಸತಿಯರು
ಗಾಡಿಕಾತಿಯರು ಸಂತಯಿಸಿ ||೧೭೪||

ನೋಡಿದ ರಾಮಯ್ಯ ವಿರಹದ ಸತಿಯರ
ಆಡಿದ ತನ್ನೊಳು ತಾನು ।
ನೋಡುವ ಸತಿಯರು ಹರಿಯಮ್ಮನೋಪಾದಿ
ಕೂಡೆ ಕಾಳೆಯ ಹಿಡಿಸಿದನು ||೧೭೫||

ಹೆತ್ತ ತಾಯಿಗಳು ಮನ ನೋಡುತ್ತಿಹರೆಂದು
ಚಿತ್ತದೊಳತಿ ಹರುಷದಲಿ।
ಮತ್ತೆ ಮನ ಹರುಷದಿ ರಾಮಯ್ಯ ನಡೆದನು
ಚಿತ್ತ ಉಮ್ಮಳಿಸಿತಾ ಕ್ಷಣದಿ ||೧೭೬||

ಮತಿಗೆಟ್ಟ ಪುರಜನ ಇರಲಿತ್ತ ಕಂಪಿಲನ
ಸುತ ರಾಮ ನಡೆದನರ್ತಿಯಲಿ।
ಅತಿಶಯದಿಂದ ಕಾಟಣ್ಣನು ಸಹವಾಗಿ
ಹಿತವಾಯಿತೆಂದು ಚೆಂಡಾಟ ||೧೭೭||

ಆವ ಠಾವಿಲಿ ಆಡುವ ಚೆಂಡ ಕಾಟಣ್ಣ
ಆವ ಬಯಲು ದೆಸೆಮುಖವು।
ಆವ ಬಯಲು ಹಸನಾಗಿದೆ ಕಾಟಣ್ಣ
ಕೋವಿದ ರಾಮ ಕೇಳಿದನು ||೧೭೮||

ರಾಮನ ಕೂಡೆ ಇಂತೆಂದನು ಕಾಟಣ್ಣ
ಉರ್ವಿಗೆ ಪೂರ್ವದಿಕ್ಕುಗಳು ।

ಕಿರಿಯಮ್ಮ ರತ್ನಾಜಿಯರಮನೆ ಪವುಳಿಲಿ
ತೆರವಿದೆ ರಾಜಬೀದಿಯಲಿ ||೧೭೯||

ಒಳಿತಾಯಿತು ನಡೆ ಚಿಕ್ಕಮ್ಮ ನೋಡಲಿ
ಅಲ್ಲಿ ಮಕ್ಕಳ ಅರ್ತಿಯನು।
ಬೆಳ್ಳಿಯಲೇಳು ಚಿನ್ನದಲೇಳು ಹಲಗೆಯ
ಕೊಳ್ಳಿಯ ನಾಗ ಹೂಡಿದನು ||೧೮೦||

ಬಂದು ನಿಂದರು ರತ್ನಾಜಿಯ ಪೌಳಿಲಿ
ಮಂದಿ ಮಕ್ಕಳು ಸಹವಾಗಿ।
ತಂದು ಹಾಕಿದರು ಚಿನ್ನದಲೇಳು ಹಲಗೆಯ
ಕೊಳ್ಳಿಯ ನಾಗ ಹೂಡಿದನು ||೧೮೧||

ಅಂಬುಧಿಯ ಹೇಳಿ ಚೆಂಡ ಪುಟಿಸಿದನು
ಚೆನ್ನಿಗ ರಾಮನು ಆಗ।
ಇರವಂತಿಗೆ ಶಾವಂತಿಗೆ ಮುಡಿವಾಳ
[ಅದಿರ್ಮು]ತ್ತೆಸೆವ ಕೆಂಜಾಜಿ ||೧೮೨||

ಪಿರಿದೆನಿಸುವ ನಾಗವಳ್ಳಿಯ ವನದಲ್ಲಿ
ಹರುಷದಿ ಚೆಂಡ ಪೂಜಿಸಿದ।
ಬಿರಿ ಮುಗುಳಾದ ಸಂಪಗೆ ವನ ಬನದೊಳು
ಸರಸದಿ ಚೆಂಡ ಪೂಜಿಸಿದ ||೧೮೩||

ಹೊನ್ನ ಮಾಲೆಯ ಕಟ್ಟಿದ ಎಕ್ಕಟಿಗರು
ನಿನ್ನ ಕಡೆಯೊಳು ಕಾಟಣ್ಣ।
ಮನ್ನಣೆಯಿಂದ ಉಂಡುಟ್ಟ ಎಕ್ಕಟಿಗರು
ನನ್ನ ಕಡೆಯೊಳು ಕಾಟಣ್ಣ ||೧೮೪||

ಅಗಸರ ತಿಪ್ಪನು ನಾಯಿಂದ ನಾಗನು
ವಸ ಜಾಡರ ಕೆಂಪಯ್ಯ।
ಮುಸುಕಿಲಿ ವಲು ಮೇಲೇರಿ ಕಡಿವಂಥ
ಹೆಸರುಳ್ಳ ಬಾದುರಖಾನ ||೧೮೫||

ಹರಿಗಣ್ಣ ಉರಿಗೊಳ್ಳಿ ಬೈಚಪ್ಪ ಮುದ್ದಣ್ಣ
ಧುರಧೀರ ಬೇವಿನ ಸಿಂಗ।
ಧುರವ ಜಯಿಸುವ ಧುರಧೀರ ರೇವಂತ
ನೆರೆಗಲಿ ಅಗ್ಗದ ಮಲ್ಲ ||೧೮೬||

ಹರಡೆಯ ಸಿಂಗನು ಕೊರಡಲ್ಲಿ ಖಾನನು
ನೆರೆಗಲಿ ಕೊಟ್ಟಿಗರ ದೇವ।
ಪರಬಲ ವೈರಿ ದಳವಾಯಿ ಮಾದಣ್ಣನು
ನೆರೆಗಲಿ ದೇವಿಶೆಟ್ಟಿ ಲಿಂಗ ||೧೮೭||

ಲಿಂಗ ಮೋಗದ ಮಲ್ಲ ಕಲ್ಲಕೋಟೆಯ ಚಿಕ್ಕ
ಸಿಂಗನು ಕ್ಷೌರದ ಗಂಗ।
ವಂಗಾಲದೇಶದ ಹನುಮ ರಾಜಯ್ಯನು
ಸಿಂಗಳದೇಶದಿರುಪಾಕ್ಷ ||೧೮೮||

ನಲ್ಲೆಯ ನಾಗನು ಕಲ್ಲಿಕೋಟೆಯ ಚಿಕ್ಕ
ಬಲ್ಲಿದ ಸೋಮಿದೇವಯ್ಯ ।
ನಿಲ್ಲದೆ ರಣಸೂರೆಗೊಂಬ ಮಲ್ಲುಕಖಾನ
ನೆಲ್ಲರ ತಾ ಹಂಚಿಕೊಂಡ ||೧೮೯||

ನಲ್ಲೆಗಲ್ಲ ಗತಿಯ ಎಕ್ಕಟಿ ಬೋವನು
ಕುಲಕೆ ಜೋಕೆಯ ಕೆಂಪನವರು।
ಕುಲಕಕ್ಕೆ ಸಲೆ ಬೇವಿನ ಸಿಂಗಣ್ಣನು
ಕೊರಳಿಲಿ ಶಿವದಾರ ಎಸೆಯೆ ||೧೯೦||

ಕಲಿಕ ಬಿಲ್ಲರ ಸಿಂಗಣ್ಣನು ತೆಲುಗರ
ನಲ್ಲರ ನಾಯಕನು।
ಮಲ್ಲರ ಗಂಡನು ಮಲ್ಲಿದೇವಯ್ಯನು
ಚಲದಂಕರಾಮ ಕರೆಸಿದನು ||೧೯೧||

ಅಕ್ಕಸಾಲೆಯ ಚಿಕ್ಕ ಒಕ್ಕಲಿಗರ ಮುದ್ದ
ಮಿಕ್ಕ ಮೀನಿಗ ಬೊಮ್ಮನವರು।

ಹೊಕ್ಕು ಹೊಯ್ದು ಹೆಸರಿನ ಗಾಳಿನಾಯ್ಕನು
ಎಕ್ಕಟಿಗರ ಹಂಚಿಕೊಂಡ ||೯೨||

ಕಬ್ಬಲಿಗರ ನಾಗ ಬೊಬ್ಬಲಿ ಚಿಕ್ಕನು
ಅಬ್ಬಣ್ಣನಾಯಕನವರು।
ತಬ್ಬಿಬ್ಬಗೊಳಿಸುವ ಬೊಲ್ಲಿದೇವನು
ಗಬ್ಬಿ ರಾಮಯ್ಯ ಹಂಚಿಕೊಂಡ ||೯೩||

ಬೆಲಗೂರ ಖಾನನು ಹಲಗೆಯ ಲಕ್ಕಣ್ಣ
ಮಿಗಿಲೆನಿಸುವ ಕಂಪನರು।
ಜಗದೊಳು ಅರಿಬಿರಿದಿನ ಮನ್ನೆಯರನು
ನಗೆಮುಖ ರಾಮ ಹಂಚಿದನು ||೯೪||

ಸರಿಯಾಗಿ ಹಂಚಿಕೊಟ್ಟನು ಕಾಟಣ್ಣಗೆ
ಮರಿಯಾನೆ ಚೆನ್ನಿಗರಾಮ।
ತರಿಸಿದನಾಕ್ಷಣ ಅರಮನೆಯಿಂದಲಿ
ಪರಿಪರಿ ಪಟ್ಟೆ ನಾಣ್ಯಗಳ ||೯೫||

ಕರೆಸಿದ ರಾಮಯ್ಯ ಅಣ್ಣ ಕಾಟಣ್ಣನ
ಸರಿಯಾಯಿತೆಂದು ಮನ್ನೆಯರು।
ಸರಿತೂಕ ಬಂಗಾರ ಉಡುಗೊರೆಯನು ಕೊಟ್ಟು
ಪರಿವಾರಕೆ ವೀಳ್ಯ ಕೊಡಲು ||೯೬||

ಪಟ್ಟೆ ಪಟ್ಟಾವಳಿ ಪವಳ ದೇವಾಂಗವು
ಉಟ್ಟು ಚಿಮ್ಮುರಿಗಳ ಸುತ್ತಿ।
ಕಟ್ಟಾಳು ರಾಮನೆಡಬಲದಲ್ಲಿ ನಿಂದರು
ನೆಟ್ಟನೆ ರವಿ ಶಶಿಯಂತೆ ||೯೭||

ಒಗ್ಗೊಡೆಯದೆ ಪರಿವಾರವು ಕೂಡಿತ್ತು
ಗಂಭೀರ ರಾಮನ ಪರಿವಾರ।
ತಗ್ಗು ಮುಗ್ಗಿಲ್ಲದ ಠಾವಿಲಿ ಕಾಟಣ್ಣ
ಲೆಗ್ಗೆಯ ಮಾಡ ಹೇಳಿದನು ||೯೮||

ಬೆಳ್ಳಿಯಲೇಳು ಚಿನ್ನದಲೇಳು ಲೆಗ್ಗೆಯ
ಕೊಳ್ಳಿಯ ನಾಗ ಹೂಡಿದನು
ಒಳ್ಳೆ ಒಳ್ಳೆಯ ಮನ್ನೆಯರನು ರಾಮಯ್ಯ
ಅಲ್ಲಿ ನಿಲ್ಲಿಸಿ ಬೇಗದಲಿ ||೧೯೯||

ಹಿಡಿದನು ಮೊದಲಾಗ ನಿಡುಗಲ್ಲ ರಂಗರಸು
ಹೊಡೆವೆನು ಲೆಗ್ಗೆ ನೋಡೆನುತ।
ಹಿಡಿಯಲು ಕೊಡೆ ನಿಮಗೆ ಇದು ದೇವರಾಟೆಂದು
ನಗುತಿರಲು ಕೊಡಿರಣ್ಣ ಚೆಂಡ ||೨೦೦||

ಈ ಮೇಲೆ ತನ್ನಾಟ ಕಾಣೆಯೆಂದರೆ ಬಿಡೆನು
ಓಡಿರೊ ರಾಮಯ್ಯನ ಮಂದಿ।
ತೋರಯ್ಯ ಹರುಷವನು ಹಿಡಿಯದಿರಲು ಹೆದರಿ
ಓಡುವೆ ಕಾಣೊ ಗಂಗರಸೆ ||೨೦೧||

ಬೊಬ್ಬೆಯಾರ್ಭಟ ಮಾಡಿ ಜಗ್ಗಿಸಿ ಮುಂದಕೇರಲು
ರೌದ್ರದೊಳಗೆ ಚಂಡನಿಡಲು।
ಬಿದ್ದ ಲೆಗ್ಗೆಯ ಪುಟವು ಎದ್ದಿತು ಗಗನಕ್ಕೆ
ತಬ್ಬಿ ಹಿಡಿದನು ಕಲ್ಲಣ್ಣ ||೨೦೨||

ಹಾರಿದನು ಗಂಗರಸು ತೀರಿದನು ಮೊದಲಾಗಿ
ಸಾಗಿದ ಶಿವಗಂಗೆ ಯಾತ್ರೆ।
ತೋರಿರೊ ಮುಖವನು ಮೊರೆನೋಡವು ಎಂದು
ಹಾರಿಸಿಟ್ಟರು ಚಂಡ ಮರಳಿ ||೨೦೩||

ಜೆಟ್ಟಿಯ ಮಗ ಲಿಂಗ ಸಿಟ್ಟಿಲಿ ಚೆಂಡನು
ತಕ್ಕೊಂಡು ಕೋಪಾಗ್ನಿಯೊಳಗೆ।
ಎಚ್ಚರು ಇರಲಣ್ಣ ಎದೆಯ ಮುರಿವೆನುಯೆಂದು
ಇಟ್ಟನು ಲೆಗ್ಗೆ ಚೆಂಡೇಳೆ ||೨೦೪||

ತುಂಡಾಗಿ ಲೆಗ್ಗೆಯು ಭೂಮಂಡಕೆ ಪುಟಿದೇಳೆ
ಪ್ರಚಂಡನಹುದೆಂದು ತಲೆದೂಗೆ।

ಗುಂಡೊಡೆದು ಬರುವಂಥ ಚೆಂಡಿಗೆ ಎದೆಗೊಟ್ಟು
ನಿಂದು ಪಿಡಿಯಲು ಬಾಣಿ ಮುದ್ದ ||೨೦೫||

ಆರಿದ ಹುರಿಕಡಲೆ ತೂಗಿ ಮಾರುವ ಜಾಣ
ಸೇರಿದನೆ ಮುನ್ನೂರನವನು।
ಮೇಲಾರು ಇಡುವರು ಮುಖವ ತೋರೆನುತಲಿ
ಹಾರಿಸಿ ಚೆಂಡನು ಇಡಲು ||೨೦೬||

ಬಂದನು ಚಾಮಯ್ಯ ಭೇರುಂಡನ ರವದೊಳು
ಚೆಂಡನು ಪಿಡಿದು ಕರದೊಳಗೆ।
ಮುಂದಕ್ಕೆ ಅಡಿಯಿಟ್ಟು ಹನುಮೇಂದ್ರನಂದದಿ
ಹೊಡೆದನು ಲೆಗ್ಗೆ ಪುಟವಂತೆ ||೨೦೭||

ಲೆಗ್ಗೆ ಬೀಳಲು ನೋಡಿ ಎದೆ ಬಿದ್ದು ರಾಮನ ಮಂದಿ
ಬಿದ್ದು ಓಡುವರ ಕಣುಗೆಟ್ಟು।
ಲೆಗ್ಗೆ ಎನುತ ಬಂದು ನೆಗೆದು ಹಾರಲು ಬರಲು
ಕೋವಿದ ಎಡಗಯ್ಯ ಬಂಟ ||೨೦೮||

ನೋಡಿದ ಚಾಮಯ್ಯ ಹಾರುತ ಬರುವುದ ಕಂಡು
ಹೋಯಿತು ತಮ್ಮಾಟವೆನುತ ।
ಹಾರಿಸುವೆ ಸ್ಥಿತಿಯವನ ಎದೆ ಹಾರಿ ಹೊಡೆಯಲು
ಓರ್‍ಯಾಗಿ ಗೋಡೆಗೆ ಬಡಿಯೆ ||೨೦೯||

ಚೆಂಡು ತಪ್ಪಲು ಬೇಗ ಪ್ರಚಂಡ ರಾಮನ ಮಂದಿ
ಒಂದೆ ಆಟಕೆ ನಿಂತಿರಲು।
ಕುಂಭಿನಿ ಒಡೆದಂತೆ ಕೋಳಾಹಳ ಮಾಡುತ್ತ ಬರಲು
ರಂಭೆ ರತ್ನಾಜಿ ಕೇಳಿದಳು ||೨೧೦||

ಭೋರೆಂಬ ಸ್ವರವನು ಲಾಲಿಸಿ ಕೇಳಿಯೆ
ಏನಿದು ಗಲಭೆ ಊರೊಳಗೆ।
ಬಾರದು ನಿದ್ರೆನಗೆ ತಲೆ ಭಾರಗೊಡುವುದು
ಮುಂಡೆ ನೋಡೆನ್ನ ಪ್ರಾಣದ ಸಂಗಿ ||೨೧೧||

ರಾಯ ಬೇಂಟೆಯನಾಡಿ ಊರ ಹೊಗುವನು ಕಾಣೆ
ಭೇರಿ ಕಾಳೆಯು ನೀರ ಬರಲು।
ನಾರಿ ಮರೆದನು ಪ್ರಾಣಕಾಂತಗೆ ಒಂದು
ಆಳು ಹುಟ್ಟಿದೆ ತನ್ನ ಬಳಿಯ ॥೨೧೨॥

ಆದರೆ ಅದಕೇನು ನೋಡಮ್ಮ ಸಂಗಾಯಿ
ಸೇರಲು ಮನೆ ಮುಂದೆ ಮುದಿಯ।
ಹಾರುವೆ [ತೊಂ]ಡನೂರ ರಾಕ್ಷಸಿಯಂದದಿ ಎನ್ನ
ನಾಲ್ವರ ತೆರನಾಗಿ ಕಂಡ ॥೨೧೩॥

ಒಡತಿ ಪೇಳಲು ಸಂಗಿ ಕರುಮಾಡವನು ಹತ್ತಿ
ಬೆರಗಾಗಿ ನೋಡೆ ಜನಜಾತ್ರೆ।
ಕಿರಣದ ಪ್ರಭೆಯಂತೆ ಧರಣಿಯ ರಾಯರು
ನೆರೆದು ಆಡುವ ಲೆಗ್ಗೆಯನ್ನು ॥೨೧೪॥

ಊರ ಮುಂದಣ ಹೊನ್ನ ಅರಳಿಯ ಮರದಡಿ
ವೀರ ರಾಮನ ಚೆಂಡಿನಾಟ।
ಸೇರಿತು ನಿನ್ನ ಮನದ ಬಯಕೆಯು ಎಂದು
ವಾರಿಜಮುಖಿಗೆ ಹೇಳಿದಳು ॥೨೧೫॥

ರಾಜನಿಲ್ಲದ ಹಿಂದೆ ಪಟ್ಟಣದೊಳಗೆಲ್ಲ
ಜೂಜಿನ ಪಗಡೆಗಳಿಹವೆ ।
ತೇಜಿಪನಾರೆಂದು ಲೆಗ್ಗೆಯನಾಡುವ
ರಾಜಪುತ್ರನ ಪೇಳೆ ರಮಣಿ ॥೨೧೬॥

ಏನ ಹೇಳುವೆನಕ್ಕ ರಾಮನ ರೂಪಿಗೆ
ಮಾನಿನಿಯರು ಬರುತಿಹರೆ।
ಭಾನು ಕಳೆಯವನ ಸೋಲಿಸುತಿಹರೆಂದು
ತಾನು ಹೇಳಿದಳು ಸಂಗಾಯಿ ॥೨೧೭॥

ಚೆನ್ನಿಗ ರಾಮನ ನೋಡಬೇಕೆನುತಲಿ
ತನ್ನರಮನೆಗೈದಿದಳು।

ಪನ್ನೀರ ತಕ್ಕೊಂಡು ಕೈಕಾಲು ಮುಖವನು
ಚೆನ್ನಾಗಿ ತೊಳೆದಳು ರತ್ನಾಜಿ ||೨೧೮||

ಅಂಗನೆ ನಡೆದು ಬಂದಳು ಸಜ್ಜೆ ಗೃಹಕಾಗಿ
ಬಂಗಾರ ಪತ್ರಗಳ್ಹರಹಿ।
ಭೃಂಗಕುಂತಳೆಯರು ಶೃಂಗಾರವನೆ ಮಾಡೆ
ಅಂಗಜನ ಸತಿಯು ಹೊಳೆವಂತೆ ||೨೧೯||

ಒತ್ತುವರು ಕಸ್ತೂರಿ ಪುನುಗು ಕಮ್ಮೆಣ್ಣೆಯನು
ಒಪ್ಪಕ್ಕೆ ಬಾಚಿ ಮುಡಿಗಟ್ಟಿ।
ಹಸ್ತ ಕಡಗವು ಹರಳೋಲೆ ಮುತ್ತಿನ ಸರವ
ಇಟ್ಟರು ಸ್ಥಾನಸ್ಥಾನಕ್ಕೆ ||೨೨೦||

ಕೊಪ್ಪ ಚಿಂತಕ ಕೊರಳಹಾರ ರತ್ನದ ಪದಕ
ಇಟ್ಟರು ರಾಮನ [ತ]ಣಿಸುವಂತೆ।
ಕಾಲಲಂದುಗೆ ಪಿಲ್ಲಿ ಮೇಲೆ ಪಾಗಡ ಗೆಜ್ಜೆ
ವೀರಮಿ ಟೀಕೆ ಬಿಲ್ಲೆ ಸರವು ||೨೨೧||

ಸೂರ್ಯನ ಪ್ರಭೆ ಮುಂಜ್ಯೋತಿರೆ ಗಟ್ಟಿಯು ಅಪರಂಜಿ
ಮೀನ ಗೆಜ್ಜೆಗಳು ಕಾಲ್ಕಡಗ।
ಮುಡಿಯ ಭಾರವ ಶಿರದೊಲವು ತಡೆಯದುಯೆಂದು
ಪೊಡೆಯ ಚಿತ್ತಕವನು ಧರಿಸಿ ||೨೨೨||

ಎದೆ ಕಳಸ ಕುಚದೊಲವ ಪಿಡಿ ನಡುವು ತಾಳದು ಎಂದು
ಚೌಕುಳಿ ಡಾಬು ಇಟ್ಟರು ದಾದಿಯರು।
ಇಟ್ಟರಾಭರಣವ ಮತ್ತವಳು ದಣಿವಂತೆ
ಕತ್ತಿಗೆ ಹೇರು ಸಮನಾಗಿ ||೨೨೩||

ಗಚ್ಚಿನ ಅಪರಂಜಿ ಕೆತ್ತಿದ ಸೀರೆಯನು
ನೇತ್ರಮುಖಿಯರು ಉಡಿಸಿದರು।
ನೋಡುವ ವಿಟರೆದೆ ಮೂಡಿದ ಮಾಲೆಯೆಂಬ
ಬಾಳೆಯ ತಳಿರಂತೆ ರವಿಕೆ ||೨೨೪||

ಜಾಣ ಮೋಹನದ ಪ್ರವೀಣ ಬರೆಯಲು ಚಿತ್ರ
ಭಾವಕ್ಕೆ ಮಿಗಿಲಾಗೆ ರತ್ನಿ।
ಕಸ್ತೂರಿ ತಿಲಕವನಿಟ್ಟರು ನಯನದ
ಒತ್ತಿಗೆ ಕಪ್ಪು ಕಾಡಿಗೆಯ ॥೨೨೫॥

ಒಪ್ಪದಿಂದಲಿ ಧರಿಸಿ ನಿಲುಗನ್ನಡಿ ಕೊಡಲು
ನಕ್ಕಳು ನೋಡಿ ಲಾವಣ್ಯ।
ಸಂಗಾಯಿ ನೀ ನೋಡೆ ಎನ್ನಂಗಕೆ ಆಭರಣ
ಹೊಂದಿಕೆಯಾಗಿ ತೋರುವುದೆ ॥೨೨೬॥

ಚಂದ್ರವದನೆ ಕೇಳು ಮುಕುಂದನ ಸುತನರಸಿ
ಗಿಂದಲು ರೂಪದೋರುವುದು ॥೨೨೭॥

ಬಾಗುತ ಬಳಕುತ ಜಾಗಿಸಿ ನಡೆವುತ
ದಾದಿಯರ ಕರಗಳ ಪಿಡಿದು ॥೨೨೮॥

ಏರಲು ಕರುಮಾಡವ ತೋರುತ ಕಿರಿಬೆವರು
ನಾರಿಯರು ಬೀಸೆ ಚಾಮರವ।
ಘಲ್ಲುಘಲ್ಲೆನುತಲಿ ಗಮಕದಿ ನಡೆಯಲು
ಕೆದರುತ ನೀರೆ ಶೃಂಗಾರ ॥೨೨೯॥

ನಿಲ್ಲುತ ಅಡಿಗಡಿಗೆ ನೀರಜಮುಖಿ ಬಂದು
ಮೆಲ್ಲನೆ ಕರುಮಾಡನೇರಿ।
ಏಳು ನೆಲೆಯ ಹತ್ತಿ ಬಾಲೆ ರತ್ನಾಜಿಯು
ಸುಳ್ಳಲ್ಲ ಸಂಗಿ ನಿನ ಮಾತು ॥೨೩೦॥

ಕಾಲ ಮಣಿಗಳ ಮೇಲೆ ಹಾಸಿ ಗದ್ದುಗೆ ಹಾಕಿ
ಬೆಪ್ಪಾಗಿ ಕುಂತಳು ಸಂಗಿ।
....
ಚೆದುರ ರಾಮನ ತೋರೆ ಎನಗೆ ॥೨೩೧॥

ಕಾಣಗೊಡದು ಕಾಣೆ ಆಳ್ಯಾರೊ ಅರಸಾರೊ
ಕೀಳು ಮೇಲಿಲ್ಲ ನೋಡಿದರೆ।

ತೋರುವರು ರವಿ ಶಶಿಯು ಮೂಡಿಪ್ಪ ತೆರದೊಳು
ಬಾಲತ್ವದೊಳು ಕಂಡ ಮಾತು ॥೨೩೨॥

ಮೋಹನಾಂಗಿಯೆ ಕೇಳು ಪ್ರಿಯವಾದರೆ ನಿನಗೆ
ಅಹುದಾದರೆನ್ನವ ರಾಮನೆಂಬೆ।
ತೋರಲು ಮುಂದಾಗಿ ಹಾರುವುದು ಸ್ಥಿತಿ ನಿನ್ನ
ಕಾಮಾಗ್ನಿ ಕಾತರ ಪುಟ್ಟಿ ॥೨೩೩॥

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಹರ ಶಂಭು ವಿರುಪಾಕ್ಷಲಿಂಗ।
ತರಳ ರಾಮನ ರತ್ನಿ ಕುರುಹ ಕೇಳುವ ಬಳಿಗೆ
ಮೂರೇಳು [ಮೂರೆಂಟು] ಸಂಧಿ ಪದ ಮುಗಿಯೆ ॥೨೩೪॥*

❖❖

* ಅಂತು ಸಂಧಿ ೧ಂಕ್ಕಂ ಪದನು ೨೩೪ಕ್ಕಂ ಪದನು ಮಂಗಳ ಮಹಾಶ್ರೀ(ಮೂ).

ಸಂಧಿ : ಹನ್ನೆರಡು

❖

ಬಾಲರಾಮನ ಚೆಂಡಿನಾಟ-ರತ್ನಾಜಿಯ ವ್ಯಾಮೋಹ

---

*ಶ್ರೀ ಗಿರಿಜೇಶನೆ ಭಾಗೀರಥೀಶನೆ
ಭೋಗಿಭೂಷಣ ಭಾಳನೇತ್ರ।
ಆಗಮಕೊಡೆಯನೆ ಮೂಜಗವ ರಕ್ಷಿಪನೆ
ನಾಗಭೂಷಣನೆ ನಂದೀಶ ॥೧॥

ನೀಲವರ್ಣನ ಸುತನ ನೇತ್ರದಿ ಉರುಹಿದೆ
ಪಾಲಿಸಿದೆ ರತಿಗೆ ಮನಸಿಜನ।
ಕೊಲಿಸಿದೆ ಅಜಶಿರವ ಉಗುರಿಂದ ಕಪಾಲ
ಧರನೆ ಕೊಡು ಮತಿಯ ॥೨॥

ಬಿಟ್ಟಿಯ ಬತ್ತವನು ಕೊಟ್ಟಣಕೆ ಶರಣರಿಗೆ
ಒಕ್ಕಲು ಹೇ[ಳೆ] ಕಲ್ಯಾಣಕೆ।
ಅಚ್ಚು ಮೆಚ್ಚಿನ ಹೊರೆಯ ಮತ್ತೊಂದು ಬಳಸಿದ
ಕಪ್ಪಿನ ಮಲ್ಲ ಕೊಡುಮತಿಯ ॥೩॥

ಕಾಶಿರಾಮೇಶ್ವರಕೆ ಈಸು ವೆಗ್ಗಳವಾದ
ತ್ರಾಸಿಲಿ ತೂಗಿ ನೋಡಿದರೆ।
ಲೇಸನು ಪಾಲಿಸು ನಡೆಸುವೆ ಕೃತಿಯನು
ಪರಮೇಶ ವಿರುಪಾಕ್ಷಲಿಂಗ ॥೪॥

---

* + ಶಾರದಾಂಬಾಯ ನಮಃ (ಮೂ)

ರತ್ನಾಜಿ ರಾಮನ ನೆಪ್ಪನು ಕಾಣದೆ
ಚಕ್ರಪಾಲಕರ ಕೇಳಿದಳು।
ಒಪ್ಪಗಳ ಲಾಲಿಸಿ ತೊತ್ತು ಸಂಗಿಯು ಪೇಳ್ವ
ಬಿತ್ತರದ ನಾಮಗಳನಿಟ್ಟು ||೫||

ಸಂಗಾಯಿ ಬಿಡಿಸೆನ್ನ ಅಂಗಜನ ತಾಪವ
ತಂದು ತೋರಿದೆ ನಯನಕ್ಕೆ।
ಕುಂಬಾಂಢ ಮಂತ್ರಿಯ ಮಗಳ ಮನ್ಮಥಸುತನ
ಒಂದುಗೂಡಳೆ ಉಷೆ[ಯೊ]ಲಿದು ||೬||

ಚಿತ್ರಲೇಖೆಯು ಹಿಂದೆ ಮೊದಲು ತರ್ಕಕೆ ತೋರಿ
ಮತ್ತೆ ಅಗಣಿತ ರೂಪಗಳ।
ಲೆಕ್ಕವಿಲ್ಲದೆ ತೋರೆ ಒಪ್ಪಿ ಇರಲು ಕಡೆಗೆ
ಚಿ[ತ್ರ]ಪ್ರಿಯನ ತೋರೇಳೆ ||೭||

ಕೇಳಮ್ಮ ನಯನಕ್ಕೆ ಪ್ರೀತಿದೋರುವ ವಿಟರ
ತಾಯೆ ಪೇಳುವೆನು ಕಡೆಗವನ।
ರಾಯ ರಾಮಗೆ ಮಿಕ್ಕ ಕುಮಾರ ದೊರೆಗಳು ಉಂಟು
ವೀರ ಮನ್ನೆಯರು ಮೋಹನರು ||೮||

ಎದ್ದ ಸತ್ತಿಗೆ ಮೇಲೆ ವಜ್ರದ ಕಳಸವು
ರುದ್ರನ ಭಾವ ಮುಂಗೋಪ।
ಗದ್ದಲಿಸಿ ಕರುವಾಡ ಎದ್ದು ಹಾರುವನಮ್ಮ
[ಮಂ]ದಲೋಚನ ಸಂಗಿಯಾರೆ ||೯||

ರತ್ನಾಜಿ ಲಾಲಿಸು ಪೃಥ್ವಿಗೆ ಹೆಸರಾದ
ಗುತ್ತಿಯ ನಾಡನಾಳುವನು।
ಕಸ್ತುರಿಯ ಚಾಮಯ್ಯ ಕಮಲದಳ ನಯನೇ
ಶಕ್ತಿಲಿ ಸರಿಯಿಲ್ಲ ಜಗದಿ ||೧೦||

ನೀಲಸತ್ತಿಗೆ ಜಲ್ಲಿಗಳು ಅಪರಂಜಿ
ಕಾಲನಾರ್ಭಟದಿ ನಿಂದಿಹನು।

ಪ್ರಿಯದೊಳಿರುವುದೆನ್ನ ಮನಸು ಮಮಕಾರ ಪುಟ್ಟಿ
ಯಾವ ರಾಯನೆ ಸಂಗಾಯಿ ||೧೧||

ಭಾವೆ ಕೇಳೆಲೆ ಬಾಲೆ ಮಾನದ ರತ್ನಿ ಜಾಣೆ
ಹೆಡಿ ನಾಗರದಂತೆ ಮೊಳದುದ್ದ ಚುಂಗ।
ಸಾದು ತಿಲಕ ಕಾದು ವೈರಿಯ ಕಡಿವಂಥ
ಮಾದಿಗ ಹಂಪ ಕೇಳಮ್ಮ ||೧೨||

ಚೊಕ್ಕ ವರ್ಣದ ಸತ್ತಿಗೆ ಇಕ್ಕಿದ ಸರ ಗುಚ್ಛೆ
ಚಿಕ್ಕ ಮನ್ನೆಯನಾರೆ ಸಂಗಿ।
ಸಕ್ಕರೆ ಚೆಂದುಟಿ [ಉ]ಕ್ಕುವ ಜವ್ವನೆ
ಗಂಗಪಾಟಿಯ ಗಂಗರಾಜ ||೧೩||

ಸಾಲುವಣ್ಣಿಗೆ ಮೇಲೆ ನೀಲದ ಸತ್ತಿಗೆ
ಲೋಲ ಮನ್ನೆಯನಾರೆ ಸಂಗಿ।
ಪಾಲುಕುರಿಕೆಯ ಹನುಮರಾಜನು ಎಂದು
ಲೋಲಜಮುಖಿಗೆ ಹೇಳಿದಳು ||೧೪||

ತುರಗವನೇರುತ್ತ ಕರದಲ್ಲಿ ಬಿಲ್ಲನು
ಮರೆಯದ ಮನ್ನೆಯನಾರೆ ಸಂಗಿ।
ಧರೆಯೊಳು ತೊರಗಲ್ಲ ಲಿಂಗರಾಜನುಯೆಂದು
ಸರಸಿಜಮುಖಿಗೆ ಹೇಳಿದಳು ||೧೫||

ಕಮಲದ ಸತ್ತಿಗೆ ಮೀರಿದ ತುರಗವು
ಕಮಲಸಖನೊಲು ಮೆರೆವಾರಿವ।
ಕೊಮಾರಮಡುವಿನ ಕಾಟನಾಯಕನೆಂದು
ಭ್ರಮರಕುಂತಳೆಗೆ ಹೇಳಿದಳು ||೧೬||

ಕನಕದ ಸತ್ತಿಗೆ ನೆಳಲೊಳಗೊಪ್ಪುವ
ಘನತರದ ಸತ್ತಿಗೆನಾರೆ ಸಂಗಿ।
ವನಿತೆ ಕೇಳವನು ಆಡುವ ಕಾಟಣ್ಣ
ಜನಪತಿ ವೀರ ವಿಕ್ರಮನು |೧೭||

ಗಂಟೆಯು ಕೊರಳಲ್ಲಿ ಎಂಟು ದಿಕ್ಕಿನ ಮೇಲೆ
ನೂರೆಂಟು ಬಾರೇರಿ ತುರಗವನು।
ಗುಂಟನೂರ ರಾಜಯ್ಯನು ಅವ
ಮಟ್ಟಿ ಕಾಲ ರತ್ನಿ ಕೇಳು ॥೧೮॥

ಬಣ್ಣದ ಸತ್ತಿಗೆ ಗೋಣಿತುಂಬಿದ ಮುತ್ತು
ಜಾಣನಾಯಕನಾರೆ ಸಂಗಿ।
ಪ್ರಾಣದೊಳಾಸೆ ಮಾಡುವನಲ್ಲ
ಗಾಣಿಗ ಚೆನ್ನ ಕಾಣಮ್ಮ ॥೧೯॥

ಪಟ್ಟೆ ಸತ್ತಿಗೆ ಮೇಲೆ ಮುತ್ತಿನ ಕಳಸವು
ಎತ್ತಣ ನಾಡ ಮನ್ನೆಯನೆ।
ಅರಸು ನೇಮಿಯ ಗಂಡ ಚೆನ್ನಿಗ ರಾಮನ
ರಸಿಕ ಮೈದುನ ಮಲ್ಲನಮ್ಮ ॥೨೦॥

ಹಸಿರ ಸತ್ತಿಗೆ ಮೇಲೆ ಹೊಸ ಹೊನ್ನ ಕಳಸವು
ದೇಸಿಗೆ ಮನ್ನೆಯನಾರೆ ಸಂಗಿ।
ದೆಸೆಗೆಡಿಸಿ ತುರುಕರ ಕಾದಿ ಕೊಲ್ಲುವನಿವ
ಹೆಸರಾದ ಬಾದುರಖಾನ ॥೨೧॥

ವಸವಂತ ಸತ್ತಿಗೆ ನೆಳಲೊಳಗೊಪ್ಪುವ
ಹಸನಾದ ಮನ್ನೆಝಾರೆ ಸಂಗಿ ।
ವಸುಧೆಯೊಳಗೆ ಯಾರು ಸರಿಯಿಲ್ಲ ಇವನಿಗೆ
ಮಾಚದ ಮಲ್ಲ ಕಾಣಮ್ಮ ॥೨೨॥

ಬೆಳ್ಳಿಯ ಸತ್ತಿಗೆ ನೆಳಲೊಳಗೊಪ್ಪುವ
ಒಳ್ಳೆಯ ಮನ್ನೆಯನಾರೆ ಸಂಗಿ।
ಡಿಳ್ಳಿಯಿಂದಲಿ ಬಂದ ಬಾದುರಖಾನನ
ಮಲ್ಲುಕಖಾನ ಕಾಣಮ್ಮ ॥೨೩॥

ಗುಂಪಿನ ಸತ್ತಿಗೆ ಹಬ್ಬಿದ ಸರಮಾಲೆ
ಗಬ್ಬನಾಯಕನಾರೆ ಸಂಗಿ।
ಹೆಬ್ಬುಲಿ ಗಜಸಿಂಹ ಜಾಡರ ಚೆನ್ನಣ್ಣ
ಸರ್ವದಳಕೆ ಸುರಿತಾಳ ॥೨೪॥

ಪಟ್ಟೆಸತ್ತಿಗೆ ನೆಳಲೊಳಗೆ ಒಪ್ಪುವ ಇವ
ಎತ್ತಣ ನಾಡ ಮನ್ನೆಯನೆ।
ಬಿಟ್ಟುರಂಜಿಯನಾಡನಾಳುವ ಈ
ರಾಯರ ಶೆಟ್ಟಿ ಕಾಣಮ್ಮ ॥೨೫॥

ಹೇಮದ ಸತ್ತಿಗೆ ನೆಳಲೊಳಗೊಪ್ಪುವ
ಹೇಮದಾಸೆಯನಾರೆ ಸಂಗಿ।
ಭೀಮನ ಸಮತೂಕ ಬಂಟನು ಇವನೀಗ
ಕೋಮಟಿಗರ ಮಲ್ಲನಮ್ಮ ॥೨೬॥

ಕೆಂಪಿನ ಸತ್ತಿಗೆ ಗುಂಪಿನ ಮನ್ನೆಯನು
ಇಂಪಾಗಿ ಬಹನಾರೆ ಸಂಗಿ।
ಕಂಪಿಲ ರಾಯನ ಮೋದಬಂಟನು
ದೊಣ್ಣೆಯ ಬಸವ ಕಾಣಮ್ಮ ॥೨೭॥

ಅನುವಾದ ತೇಜಿಯನೇರಿ ದುವ್ವಾಳಿಪ
ಚೆಲುವ ಚೆನ್ನಿಗನಾರೆ ಸಂಗಿ।
ಸನುಮಾನಿ ಹಾರುವ ಕುಲದೊಳಗಿವನು
ಚಿನಿವಾರ ರಾಮ ಕಾಣಮ್ಮ ॥೨೮॥

ಎದ್ದ ಸತ್ತಿಗೆ ಮೇಲೆ ಹದ್ದಿನ ಗರಿಯಿಕ್ಕಿ
ರೌದ್ರ ಮನ್ನೆಯನಾರೆ ಸಂಗಿ।
[ಗೆ]ದ್ದು ನೇಮಿಯ ದಂಡ ಕಾದು ಕೊಲ್ಲುವನಿವ
ಸಿದ್ಧರಾಜನ ಬಸವಯ್ಯ ॥೨೯॥

ದುಗುಲಿನ ಸತ್ತಿಗೆ ಅಗಲಸುರು ವಾಲೆ
ಸೊಗಸು ಮನ್ನೆಯನಾರೆ ಸಂಗಿ।
ಜಗದೊಳು ತುರುಕರ ಕಾದಿ ಕೊಲುವನಿವ
ಮುಗಲೂರ ಕಾಮ ಕಾಣಮ್ಮ ॥೩೦॥

ಕೊಳಲು ತಂಬಟೆ ಬೊಬ್ಬುಳಿಯಲ್ಲಿ ಬರುತಿಹ
ಇಳೆಗೆ ಮನ್ನೆಯನಾರೆ ಸಂಗಿ।

ಚೆಲುವಾಡಿಯ ಚಿಕ್ಕರಾಹುತನೆಂದಳು
ಲಲನೆ ರತ್ನಾಜಿಗೆ ಮುಖದಿ ||೩೧||

ಬೆಳ್ಳಿಯ ಸತ್ತಿಗೆ ನೆಳಲಡಿಯ ನಿಂದಿಹ ಒಳ್ಳೆ
ಮನ್ನೆಯ ನಾರೆ ಸಂಗಿ|
ವಸುಧೆಯೊಳಗೆ ಇವ ರಾಯದುರ್ಗದ ರಾಯ
ಗುರವೆ ಕೇಳಮ್ಮ ರತ್ನಾಜಿ ||೩೨||

ಹಕ್ಕರಿಕೆಯ ಮೇಲೆ ಇಕ್ಕಿದ ಸರಗುಬ್ಬಿ
ಚಿಕ್ಕ ಮನ್ನೆಯನಾರೆ ಸಂಗಿ|
ಲೆಕ್ಕವಿಲ್ಲದೆ ನೇಮಿಯ ದಂಡ ಕಡಿವಂಥ
ಅಕ್ಕಸಾಲೆಯ ಚಿಕ್ಕನಮ್ಮ ||೩೩||

ಅಂಚಿನ ಸತ್ತಿಗೆ ಮಿಂಚಿನ ಚೌಲವು
ಮಿಂಚಾಗಿ ಬಹನಾರೆ ಸಂಗಿ|
ಹಂಚಿದ ಮ್ಯರಿಯ ಮಿಂಚಾಗಿ ಕಡಿವಂಥ
ಕಂಚಗಾರರ ಕೆಂಚನಮ್ಮ ||೩೪||

ಕೂಡಿದೆಕ್ಕಟಿಗರ ಮೀಟಾದ ಸತ್ತಿಗೆ
ಘಾಟದಿ ಬಹನಾರೆ ಸಂಗಿ|
ಪಾಟಿಯಾದರೆ ನಿನ್ನ ಹಿರಿಯ ಕುಮಾರನು
ಕಾಟನಾಯಕನು ಕಾಣಮ್ಮ ||೩೫||

ಕಾಗಿನ ಸತ್ತಿಗೆ ತೂಗುವ ಚೌರವು
ಭೋಗದೊಳಿಹನಾರೆ ಸಂಗಿ|
ಸಾಗಿಸಿ ಸಮರದೊಳಗೆ ಹೊಗಲೇರುವ
ಬಿರಿದುಳ್ಳ ಗಿಂಡಿಯ ಸಂಗ ||೩೬||

ಮುತ್ತಿನ ಚೌರಿಯ ಎರಡ ಢಾಳಿಸಿಕೊಂಬ
ಇವನೆತ್ತಣ ನಾಡಮನ್ನೆಯನೆ|
ಎತ್ತಿ ಬರುವ ಸುರಿತಾಳನ ಗಂಡನು
ಗುತ್ತಿಯ ನಾಡ ಗಂಗಣ್ಣ ||೩೭||

ಗೀರು ಗಂಧವು ಮೈಯಲ್ಲಿ ಚಿಮ್ಮುರಿ ಸುತ್ತಿ
ಧೀರ ಮನ್ನೆಯನಾರೆ ಸಂಗಿ।
ಜೀವವೊಂದಾದ ರಾಮನಗೆಣೆಗೆಕಾರ
ಜಂಗಮ ಬಸವ ಕಾಣಮ್ಮ ||೩೮||

ಭಸಿತವು ಪಣೆಯಲ್ಲಿ ಎಸೆವ ರುದ್ರಾಕ್ಷಿಯು
ವಿಷಕಂಠ ರೂಹನಾರೆ ಸಂಗಿ ।
ವಸುಧೆಯೊಳಗೆ ನೇಮಿಯ ದಂಡ ಕಡಿವಂಥ
ಹೆಸರುಳ್ಳ ಸಿಂಗಿರಾಜಯ್ಯ ||೩೯||

ಬೆಕ್ಕಿಗೆ ಚೆನ್ನಾಟ ಇಲಿಗೆ ಕಷ್ಟಗ[ಳಂತೆ]
ವ್ಯರ್ಥವಾದುದು ಎನ್ನ ಬದುಕು।
ತೊತ್ತು ಸಂಗಿ[ಯೆ] ಮೂಗ ಹತ್ತೆ ಕೊಯ್ಯುವೆ ಈಗ
ಸಿಕ್ಕಿದೆ [ನನ್ನ] ಕರದೊಳಗೆ ||೪೦||

ಹೋಗದೆ ಉಳಿವು[ದು] ಯಾವ ತೆರದೊಳು ಮೂಗು
ನಾಡ ಮಿಂಡರ ಬಯಸುವ[ಳೆ]।
ರೂಢಿಪರಲ್ಲದೆ ತೋರಿ[ದೆ]ನೆ ಗಾರ್ದಭನ
ಹಲ್ಲಾವಿದಳೆ ಕೇಳಮ್ಮ ||೪೧||

ಕತ್ತೆಗೆ ಕಡಿವಾಣ ಇಕ್ಕಿ ಜೀವನ ಮಾಡೆ
ಉತ್ತಮ ತೇಜಿ ಎನಿಸುವುದೆ।
ತೊತ್ತು ರೂಪಾಗಿರಲು ರಾಯ ಮುಟ್ಟಲು ಅವಳು
ಪ[ಟ್ಟ]ದ ರಾಣಿಯಾಗುವಳೆ ||೪೨||

ಕರಿಯ ಸತ್ತಿಗೆ ಮೇಲೆ ಒರಗಿದ ಶ್ರೀಗಂಧ
ಧುರಗಲಿ ಇವನಾರೆ ಸಂಗಿ।
ಕರಿಘಂಟೆಗಳ ಮೇಲೆ ಹೊಗಲೇರಿ ಕಡಿವಂಥ
ಬಾಗೂರ ನರಸ ಕಾಣಮ್ಮ ||೪೩||

ಕೋವಿನ ಸತ್ತಿಗೆ ನೆಳಲೊಳು ನಿಂದಿಹ
ರೂಪುಳ್ಳ ಮನ್ನೆಯನಾರೆ ಸಂಗಿ।

ಗೋಪತಿ ರಾಮಗೆ ಸೋವತಿದೋರುವ
ಗೋಪಿದೇವಿಯ ಕಂದನಮ್ಮ ||೪೪||

ಕಲಹವೆಂದರೆ ಮುಂದೆ ಉಲಿದು ಬೊಬ್ಬಿಡುವನು
ಬಲಗೈಯ ಧೀರನಾರೆ ಸಂಗಿ।
ಧರೆಯೊಳು ಜಗಳವೆಂದರೆ ಹಾ[ಯು]ವನಿವ
ಕರಿಯ ಸಂಗಣ್ಣ ಕಾಣಮ್ಮ ||೪೫||

ಇವರ ಸತ್ತಿಗೆ ನಿಂದುರಿಯಲೆ ಸಂಗಾಯಿ
ಇವರಗೊಡವೆ ನಮಗೇಕೆ।
ಇವರ ಸತ್ತಿಗೆ ಹಾಗಿರಲಮ್ಮ ಸಂಗಾಯಿ
ಚೆಲುವನ ತೋರೆ ರಾಮುಗನ ||೪೬||

ರಾಮನ ತೋರು ತೋರೆಂದರೆ ಸಂಗಾಯಿ
ನಾಡುಮನ್ನೆಯರ ತೋರಿದೆಯಾ।
ರೂಢಿಗಧಿಕ ಚೆನ್ನ ರಾಮನ ತೋರೆಂದು
ನಾರಿ ಸಂಗಿಯ ಕೂಡೆ ನುಡಿದೊ ||೪೭||

ನೀಲಸತ್ತಿಗೆ ನಡುವೆ ಚೌಲ ಡಾಳಿಸಿಕೊಂಬ
ಲೋಲ ಮನ್ನೆಯನಾರೆ ಸಂಗಿ।
ಭೂಲೋಕಕಧಿಕ ಬಲ್ಲಾಳನ ಗಂಡ
ಬಾಲ ರಾಮಯ್ಯ ಕಾಣಮ್ಮ ||೪೮||

ಎಡಬಲದೊಳಗೆಲ್ಲ ಹಿಡಿದ ಸತ್ತಿಗೆಗಳು
ನಡುವೆ ಬರುವನಾರು ಸಂಗಿ।
ಪೊಡವಿಯೊಳಗೆ ನಾಲ್ಕು ದಿಕ್ಕಿನ ರಾಯರ ಗಂಡ
ಕಡುಗಲಿ ಚೆನ್ನಿಗ ರಾಮ ||೪೯||

ರಾಮನೆಂಬುವ ಮಾತ ಕೇಳುತ್ತ ಮನದೊಳು
ಬಾಲೆ ಹರುಷವನು ತಾಳಿದಳು।
ಪ್ರೇಮದಿಂದಲಿ ಆಗ ತರಹರಿಸಲಾರದೆ
ಕಾಮ ಹುಟ್ಟಿತ್ತು ಮನದೊಳಗೆ ||೫೦||

ದೃಷ್ಟಿಸಿ ನೋಡಿ ರಾಮನ ಕಂಡು ಮನದೊಳು
ಹುಟ್ಟಿತು ತಾಪ ವೆಗ್ಗಳಿಸಿ।
ಕಟ್ಟಾಳು ರಾಮನ ಸಂಗವ ಹೊಕ್ಕು ಸವಿವೆನು
ದಿಟ್ಟೆಯಾಡಿದಳು ಸಂಗಿಯೊಡನೆ ||೫೧||

ಧರೆಯೊಳಗಾಡುವ ಬರಿಮಾತು ಮನ್ಮಥನ
ಉರುಹಿ ಕೊಂದುದು ಸಟೆಯಾಯ್ತು।
ಭರದಿಂದ ಬಂದನು ಸ್ತ್ರೀಯರ ದುರ್ಗವ
ಇರದೆ ಸೂರೆಗಳ ಮಾಡುವರೆ ||೫೨||

ಬ್ರಹ್ಮನೆಂಬವ ಪಾಪಿ ಇಂತಪ್ಪ ಪುರುಷನ
ನಮ್ಮ ಗಂಡನ ಮಾಡದ್ಹೋದ।
ಕಮ್ಮಗೋಲನ ಬಾಧೆ ಘನವಾಗಿ ಸತಿಯ[ಳು]
ಹೆಮ್ಮೆ ಕಾತಿ[ಯು] ಜ್ಞಾಪಿಸುತ ||೫೩||

ನಿಶ್ಚಯವಹುದೆನೆ ಮುಚ್ಚದೆ ನಯನವನು
ಬೆಚ್ಚಿನೋಡಲು ಎರಳೆಯಂತೆ।
ಚಿತ್ತವುಕ್ಕಲು ಅವನು ತೆಕ್ಕೆಯೊಳು ಬರ[ಲಂ]ತೆ
ಆತ್ಮದ ಸ್ಮರಣೆ ಮರೆದಳು ||೫೪||

ಕಾಮನ ಬಾಣವು ಪೂರೈಸಿತ್ತು ರತ್ನಿಗೆ
ಗಾಯವಡೆದ ಮೃಗದಂತೆ।
ಮಾನಾಭಿಮಾನವ ತೊರೆದಳು ರತ್ನಾಜಿ
ಕಾಮನ ಬಾಧೆ ಘನವಾಗೆ ||೫೫||

ಕಾತರವೆಂಬುದು ಪಾಪಿ ಮನ್ಮಥ ಜಗವ
ಹಾಕದೆ ಹಗ್ಗ ಕೊಲ್ಲುವನು।
ಏಕಾಂತವಾದಂತೆ ಒಡೆದು ಕಾಮ ಕೇಳಿ
ಭೂಮಿಯೊಳೊರಗಿದಳು ರತ್ನಿ ||೫೬||

ಕಾಮಜರೂಪನು ಮಾಯದುಮ್ಮನು ಕೊಟ್ಟು
ಆಯತ ಮನವ ತಾಗಲೆಸೆಯೆ।

ಬಾಯ ತಾಂಬೂಲವು ಹುಡಿಯಾಗಿ ರತ್ನಾಜಿ
ತಾಯ ಕಾಣದ ಹುಲ್ಲೆಯಂತೆ ||೫೭||

ನಿಡುಮುಡಿ ಸಡಿಲಿರೆ ಕಡೆಗಣ್ಣು ಮುಚ್ಚಿತ್ತು
ಪಿಡಿದೆಲೆ ಕೈಯ್ಯಲ್ಲಿ ಬಾಡಿ।
ಹುಡಿಯಾಯ್ತು ತಾಂಬೂಲ ರಸ ಬಾಳು
ಬಿಡದೆ ಬಿದ್ದಳು ಬೆರಗಾಗಿ ||೫೮||

ಒಡತಿ ಬೀಳಲು ನೋಡಿ ಹಡಪದ ಸಂಗಿಯು
ಹೊಡೆಯಿತೆ ಬ್ರಹ್ಮರಾಕ್ಷಸನು।
ನುಡಿಸಿ ನೋಡುವ ಬನ್ನಿ ಕಳ್ಳ ರಂಡೆಯನೆಂದು
ಪಿಡಿದು [ತ]ಟ್ಟಲು ಬಾಯಿ[ಯಿ]ಲ್ಲ ||೫೯||

ಎಡಬಲದ ಗೌಡಿಯರು ಹೊಡೆದುಕೊಳ್ಳಲು ಬಾಯಿ
ಅಳಿದಳು ಅಮ್ಮ ರತ್ನಾಜಿ।
ಉಸುರು ಹೋ[ಗಿ]ದೆ ರತ್ನಿ ಅರಸು ಊರೊಳಗಿಲ್ಲ
ಮುರಿದು ಬೆರಳುಗಳ ಬೊಬ್ಬಿಡಲು ||೬೦||

ಅಳುವುದೇತಕೆ ನಿಲ್ಲಿ ಜನರು ಹೊರಗೆ
ಹಲವು ಮಿಂಡರ ಸೂಳೆ ಇವಳು।
ಅಲರಂಬ ರೂಪನ ತನುವ ದೃಷ್ಟಿಸಿ ನೋಡಿ
ಮಲಗಿಹಳು ಮೂರ್ಚೆ ತಾಪದಲಿ ||೬೧||

ಸಾಯಬಲ್ಲಳೆ ಸರ್ವದ್ರೋಹಿ ಪಾತಕ ಮೂಳಿ
ಗೊಲ್ಲಕುಲದ ಹೊಲೆರಂಡೆ।
ಮೋಹ ಮಗನೊಳಗಿಡಲು ಮಾರನ ಸರಳಂಬು
ಏರಿದಂದದಿ ಮಲಗಿಹಳು ||೬೨||

ಕಾಯವಿಲ್ಲದ ಕಾಮ ಕಾಡುವನೀ ಬಗೆಯ
ಭೂಮಿ ಮಧ್ಯದಿ ತಾನು ಇರಲು।
ಸ್ತ್ರೀ ಪುರುಷರೆಂಬವರ ಗೋವಿನ ತೆರಮಾಳ್ಪ
ತಾ ಕಂಡು ಹರ ಶಿಕ್ಷಿಸಿದ ||೬೩||

ರತ್ನಾಜಿ ಮೂ[ರ್ಛೆ]ಯ ಅರ್ಥ ಎಲ್ಲರು ಪೇಳಿ
ಮತ್ತಿಲ್ಲಿ ಬಂದು ರತ್ನಿಯ[ಳು]।
ಕಟ್ಟಾಳು ರಾಮಗೆ ಇಟ್ಟಾಳು ಮನವನು
ನೆಟ್ಟುಕೊಂಡುದು ಬಾರದಿರಲು ||೬೪||

ಮಾರುತನ ಸುಳಿವಾಗಿ ಬೆಮರೊಡೆದ ರತ್ನಿಗೆ
ತೀರಿತು ಮೂರ್ಛೆ ಕಿಂಚಿತವು।
ಸೂರ್ಯಗೆ ಅಡರಿದ ಗ್ರಹವಿಳಿದು ಬರುವಂತೆ
ತೀರಲು ನಯನವ ತೆರೆದು ||೬೫||

ಮೃದು ಬಾಲನಂದದಿ ತೊದಲುತ ನುಡಿದಳು
ಕುಣಿಯುತ ತುಟಿ ಬಾಯಿ ಹಲ್ಲು।
ಸುಖಸಾರ ಕೂಡಿದೆನು ಕಾಣ್ಬಂತೆ ಎಲ್ಲರು
ಮತಿಗೆಟ್ಟು ನಾಚಿದಂತಿಹಳು ||೬೬||

ಏತಕ್ಕೆ ನಾಚಿಯೆ ಈ ರೀತಿಯ ಸುಡು ನಿನ್ನ
ಜಾತಿಯೊಳು ಗಾರ್ದಭನ ಕುಲವೆ।
ನೀ ಕಾದೆ ಸತಿ ಅರ್ಥಭೋಗಾನ್ವಯಗಳ
ಕಾತರ ಯಾಕೆ ಈ ಬಗೆಯ ||೬೭||

ಪುರುಷನುಳ್ಳವಳಿಗೆ ತರವೇನೆ ಇಂತಪ್ಪ
ಮಮಕಾರದ ಮೂರ್ಛೆ ತಾಪಗಳು।
ಅರಸು ಕೇಳಲು ನಿನ್ನ ಕೊರೆಸನೆ ಕಿವಿಮೂಗ
ತರಹರವಿರಬೇಕು ಮನದಿ ||೬೮||

ದೊರೆ ರಾಯ ಕಂಪಿಲಗೆ ಬೆದರಬಲ್ಲೆನೆ ಸಂಗಿ
ಇರಲಮ್ಮ ನಿನ್ನ ಎದೆಯೊಳಗೆ।
ಧರೆಯೊಳಗೀ ಕಾಯ ಸ್ಥಿರರಾಜ್ಯ ಪಡೆದಿಹುದೆ ಒಂದರ
ಗಳಿಗೆ ಕಾಮನ ಭೋಗ ಸಾಕು ||೬೯||

ಜಾಣಬಲ್ಲನೆ ತನ್ನ ವೀಣೆಯ ಸ್ವರವನು
ಗೋವ ಬಲ್ಲನೆ ಕುರಿ ಕಾಯ್ವ।

ಕೋಮಲಾಂಗಿಯ ಮದವ ಮುರಿಯಬಲ್ಲನೆ ರಾಯ
ಮುದಿಜೀವಿ ಬಲ್ಲನೆ ಒಣ ಮೋಹ ||೭೦||

ಬಾಲೆ ನಿನ್ನಯ ಬಸುರೊಳು ನಾ ಬಂದೇನು
ಹೇಳಬಾರದೆ ಒಂದು ಮಾತ।
ಮೋಸದಿಂದಲಿ ಆ ಸತಿಯರ ಹೊರಡಿಸಿ
ಸೂಸುತ ಕಣ್ಣೀರ ತೊಡೆದು ||೭೧||

ಗಾಸಿಯಾಗಿರುವ ರತ್ನಿಗೆ ಭಾಷೆಯ ಕೊಟ್ಟು
ಓಸರಿಸಿದಳು ನೀನೇಕೆ।
ಚಿಂತಿಸುವೆ ಲೋಕಮಂತ್ರವ ಬಲ್ಲೆ
ನಾ ಕರೆತರುವೆ ರಾಮುಗನ ||೭೨||

ಬೇಕಾದರು ಒಂದು ಗಳಿಗೆ ಸೈರಿಸು ತಾಯೆ
ನಾ ಕರೆತಹೆ ಅಂಜಬೇಡ।
ನಿಲ್ಲು ಸೈರಿಸು ನೀನು ತಲ್ಲಣಗೊಳಬೇಡ
ಬಲ್ಲೆನು ನಾನೊಂದು ಪರಿಯ ||೭೩||

ಕಲ್ಲು ಮನದ ರಾಮ ಬಲ್ಲಿದ ಬಗೆಯೇನು
ಒಳ್ಳೆಯ ಮಂತ್ರವ ಬಲ್ಲೆ।
ಎಲ್ಲಿಗಾದರು ಹೋಗಿ ನಾನೊಂದು ತಿಲಕವ
ಒಲ್ಲದವನ ಒಲಿಸುವುದು ||೭೪||

ಮಂತ್ರಿಸು ಗುರುವ[ವ]ನು ಕೊಟ್ಟು ಕಳುಹಿಸಿದರೆ
ಅವನತ್ತ ಹರುಷದಿ ತೆಕ್ಕೊಂಡು।
ಕಂತು ಸನ್ನಿಭ ಚೆನ್ನರಾಮ ಎನಗೊಲಿದರೆ
ಮಂತ್ರ ಒಳ್ಳೆಯದೆ ಸಂಗಾಯಿ ||೭೫||

ಉಂಗುರವನು ಕೊಟ್ಟು ಕಳುಹಿದರೇನೆಂಬನೊ
ಕಂಗಳ ಚೆಲುವ ಯೌವನವು।
ಶೃಂಗಾರ ಸುಗುಣೆ ನೀ ಕೊಡುಯೆಂದು ಕಳುಹಲು
ಪಿಂಗಾಣಿಯ ತರಿಸಿದಳು ||೭೬||

ಗಂಧ ಕಸ್ತುರಿ ಪುಣುಗು ಕದಂಬ ಮಾಡಲು ರತ್ನಿ
ತಂದಿಟ್ಟು ಹೊನ್ನ ತಟ್ಟೆಯಲಿ।
ಚಂದ್ರಗಮನೆ ತನ್ನ ಉಂಗುರ ಅದರೊಳು ಮಡಗಿ
ಕೊಂಡೊಯ್ಯೆ ಸಂಗಿ ನೀ ಬೇಗ ॥೭೭॥

ಪಟ್ಟೆ ವಸ್ತ್ರಗಳನು ಮುಚ್ಚಿದಳು ಸಂಗಿಯು
ತಟ್ಟನೆ ನಡೆಯೆ ಅವರೆಡೆಗೆ।
ತಂದಳು ರಾಮ ಚೆಂಡಾಡುವ ಬಯಲಿಗೆ
ಚಂದನ ಪರಿಮಳಗಳನು ॥೭೮॥

ಹಸ್ತಿನಿ ಚಿತ್ತಿನಿ ಶಂಖಿನಿ ಪದ್ಮಿನಿ
ಮೊತ್ತದ ನಾಲ್ಕು ಜಾತಿಗಳು।
ಚಿತ್ತಜರೂಪ ರಾಮಯ್ಯನ ಕಾಣುತ್ತ
ಎತ್ತಿ ಕರಂಗಳ ಮುಗಿದಳು ॥೭೯॥

ತಾಯಿ ಕಳುಹಿದ ಚಂದನ ಪರಿಮಳಗಳ
ನಾಯಕ ಮಕ್ಕಳಿಗಿತ್ತು।
ಆಯತದಿಂದಲಿ ಕೊಡುವೂತ ರಾಮಯ್ಯ
ಪ್ರಿಯದಿಂದಲಿ ಕರೆಸಿದನು ॥೮೦॥

ಬಾರಯ್ಯ ಧುರಧೀರ ಅಣ್ಣ ಕಾಟಣ್ಣನೆ
ಬಾರಯ್ಯ ಕೊಳ್ಳೊ ಗಂಧವನು।
ಈ ರೀತಿ ಹಂಚಿದರೆ ಮುಂಚೆ ವೀಳ್ಯವ ಕೊಂಬ
ಧುರಗಲಿ ಜಂಗಮ ಬಸವ ॥೮೧॥

ಎಡಬಲದೆಕ್ಕುಟಿಗರಿಗೆ ರಾಮಯ್ಯನು
ಬಿಡದೆ ಕೊಟ್ಟನು ಗಂಧವನು।
ಕಡುಗಲಿ ತಾನು ತಕ್ಕೊಳ್ಳುವ ಸಮಯದಿ
ತಡಕಿ ಕಂಡನು ಉಂಗುರವ ॥೮೨॥

ಕಂಡನು ಕಮಲಾಕ್ಷಿಯ ಉಂಗುರವನು
ಮಂಡೆಯ ಮೇಲಿಟ್ಟುಕೊಂಡ।

ಮಂಡಲದೊಳಗಿನ್ನು ಹೊಸಪರಿಯಾಯಿತ್ತು
ನೊಂದುಕೊಂಡನು ಮನದೊಳಗೆ ||೮೩||

ಹರಹರ ಏನು ಕಾರಣ ಬಂತು ಉಂಗುರ
ಹರಿಹರ ಗುರುವೆ ತಾ ಬಲ್ಲ।
ಹರಿಹರದೇವಿ ಆಡಿದ ಮಾತು ಬಂತಿಲ್ಲಿ
ಭರದಿ ತೋರಿತ್ತು ಸೂಚನೆಯ ||೮೪||

ಹಡಪದ ಸಂಗಿ ಉಂಗುರ ಬಂದ ಪರಿಯೇನೆ
ನಿಜವಾಗಿ ಪೇಳು ಎನ್ನೊಡನೆ।
ಕಂಡುದಿಲ್ಲವು ಸ್ವಾಮಿ ನಿಮ್ಮಾಣೆಯ[ಲ್ಲಿ]
ಪ್ರಚಂಡ ರಾಮಗೆ ಹೇಳಿದಳು ||೮೫||

ತಡೆಯದೆ ಗಂಧವ ಹದಮಾಡುವಾಗಲು
[ಸಡಿ]ಲಿ ಬಿದ್ದಿತು ಉಂಗುರವು।
ಮಡದಿ ರತ್ನಾಜಿ ಉಂಗುರವನು ತಾ ಕಂಡು
ನುಡಿದನು ರಾಮ ಇಂತೆಂದು ||೮೬||

ತಕ್ಕೊಂಡು ಹೋಗಿ ಚಿಕ್ಕಮ್ಮಗೆ ಕೊಡು ಎಂದು
ಉದ್ದಂಡ ರಾಮನು ಕೊಟ್ಟನಾಗ।
ತಕ್ಕೊಂಡು ಬಂದಳು ಹಡಪದ ಸಂಗಿಯು
ಬಂದು ರತ್ನಾಜಿಗೆ ಕೊಡಲು ||೮೭||

ಒಲ್ಲದೆ ಹೋದ ಉಂಗುರವನೆಂದೆನಲಾಗ
ತಲ್ಲಣಿಸುತ್ತ ಮನದೊಳಗೆ।
ಫುಲ್ಲಶರನಟ್ಟುಳಿಯನು ತಾಳಲಾರದೆ
ಎಲ್ಲ ದೇವರನು ನೆನೆದಳು ||೮೮||

ಕೊನೆ ಬೆರಳುಗುರ ಮೂಗಿನ ಮೇಲೆ ಇಟ್ಟಳು
ಮನಿಸಿಜರೂಪನ ಬಯಸಿ।
ಮನದೊಳಗಿನ್ನೊಂದು ಅನುವ ನಿಶ್ಚಯಿಸುತ
ನೆನೆದಳು ಕುಟಿಲ ದೇವತೆಯ ||೮೯||

ಹರಸಿಕೊಂಡಳು ಹರಿಹರನೆಂಬ ಲಿಂಗಕ್ಕೆ
ಹರಕೆಯ ಮಾಡಿ ಹೊನ್ನುಗಳ।
ಇರದೆ ಇಕ್ಕಿಸುವೆನು ನಾ ಹೊನ್ನ ಕಳಸವ
ತರಿಸಿಕೊಟ್ಟರೆ ಲೆಗ್ಗೆ ಚಂಡ ||೯೦||

ಹಗ್ಗದ ಹುರಿ ಬಾಯಿ ಬೀಗ ಬೆನ್ನಿನ ಸಿಡಿ
ಬಗ್ಗಿ ಹರೆಯ ಹೊ[ಯಿ]ಸುವೆನು।
ಹುಗ್ಗಿ ಕೂಳನು ಗಂಗಳದಿ ಹೊತ್ತು ನಡೆವೆನು
ನಮ್ಮಗಳ ಕುಲದೇವತೆಗೆ ||೯೧||

ಹರಿಹಬ್ಬ ಮಾಡುವೆ ನಾ [ಗುತ್ತಿ] ಅಮ್ಮಗೆ
ಹರಿದಲೆಗಳ ಹೊತ್ತು ನಡೆವೆ।
ಕುರಿದಲೆಗಳ ಕುಟ್ಟಿಸುವೆ ದುರ್ಗಿಯ ಮುಂದೆ
ಧುರಧೀರ ರಾಮ ಸಿಕ್ಕಿದರೆ ||೯೨||

ಹಿಡಿಹೊನ್ನ ಕಳಿಸುವೆ ನಾ [ಗುತ್ತಿ]ಯಮ್ಮಗೆ
ಹಿಡಿವೆನೊಪ್ಪತ್ತಿನೂಟವನು।
ತಡೆಯದೆ ನನಗೊಂದು ಶಿಶು ಜನಿಸಿದರೆ
ಬಿಡುವೆನು ಒಲಿದು ಜೋಗತಿಯ ||೯೩||

ಕಾಣಿಕೆಯಿಕ್ಕುವೆ ನಾ ಗುತ್ತಿಯಮ್ಮಗೆ
ಕೋಣವ್ಯೆನೂರ ಹೊಯಿಸುವೆನು।
ಮಾಣಿಕದಾರತಿ ಎತ್ತುವೃ[ನ]ಮ್ಮ
ಕ್ಷೋಣಿಪ ರಾಮ ಸಿಕ್ಕಿದರೆ ||೯೪||

ಧರೆಯೊಳು ವರವುಳ್ಳ ತಿರುಮಲದೇವರೆ
ಕೊಟ್ಟರೆ ಲೆಗ್ಗೆಯ ಚಂಡ।
ಸುರತದೊಳಗೆ ಒಂದು ಶಿಶುವು ಜನಿಸಿದರೆ
ತಿರುಜೋಗಿಯ ಬಿಡಿಸುವೆನು ||೯೫||

ಗುಜ್ಜಾರಿ ಮಂಚವ ಮುನ್ನೂರು ಕಳುಹುವೆ
ಉಜ್ಜಯಿನಿ ಮಲ್ಲಪ್ಪ ನಿನಗೆ।

ಸರಸಿಜ ರಾಮನು ಇಟ್ಟ ಮುತ್ತಿನ ಚೆಂಡು
ಹರುಷದಿ ಬರಲೆನ್ನ ಮನೆಗೆ ||೯೬||

ಊರ ಮುಂದಿರುವಂಥ ಮಾರಮ್ಮ ದೇವತೆಗೆ
ಹಾರುಗೋಳಿಯ ಬಿಡಿಸುವೆನು।
ಧೀರ ರಾಮಯ್ಯನು ಇಟ್ಟ ಮುತ್ತಿನ ಚೆಂಡು
ಬೇಗದಿ ಬರಲೆನ್ನ ಮನೆಗೆ ||೯೭||

ಅರುವತ್ತು ಚಿನ್ನದ ಕಂಬಿಯ ಕಳಹುವೆ
ಪರ್ವತ ಮಲ್ಲಯ್ಯ ನಿನಗೆ।
ಸರಸಿಜ ರಾಮನು ಇಟ್ಟ ಮುತ್ತಿನ ಚೆಂಡು
ಹರುಷದಿ ಬರಲೆಂದು ಮನೆಗೆ ||೯೮||

ಬೇಲೂರ ಚೆನ್ನಪ್ಪನ ಬೇಡಿಕೊಂಡಳು
ಲೋಲ ರಾಮನ ಚೆಂಡು ಬರಲಿ।
ವಾಲಗ ಪಾ[ತ್ರ] ಭೋಗಕ್ಕೆ ಐನೂರು
ಬಾಲಕಿಯರ ಕಳುಹುವೆನು ||೯೯||

ಅಕ್ಕರೆಯಿಂದಲಿ ಹರುವೆ ಲಕ್ಕಮ್ಮಗೆ ಹೊತ್ತು
ನಾ ನಡೆವೆ ದೀಪವನು।
ಅಕ್ಕನ ಮಗ ರಾಮ ಸಿಕ್ಕಿದ[ನಾ]ದರೆ
ನಿತ್ಯದಿಂದಲಿ ದೀಪವನು ||೧೦೦||

ಚಿನ್ನದ ಕದಪು ರನ್ನದ ಕುಂದಣವನು
ಮನ್ನೆಯ ಹನುಮಗಿಕ್ಕಿಸುವೆ।
ಚೆನ್ನಿಗ ರಾಮಯ್ಯನಿಟ್ಟ ಮುತ್ತಿನ ಚೆಂಡು
ಎನ್ನರಮನೆಗೆ ಬರಲು ||೧೦೦||

ಹಸ್ತಪಾದವ ತೊಳೆದು ಮತ್ತೊಮ್ಮೆ ದುಸ್ಸಾಗಿ
ನೇತ್ರಲೋಚನನ ಭಜಿಸುವಳು।
ಸತ್ಯಮಾರ್ಗಗಳೆಲ್ಲ ಸುಟ್ಟವನ ತಲೆ ಕಾಮ
ಹತ್ತಿ ರಾಮನ ಬಯಸುವೆನು ||೧೦೨||

ಹರಸಿಕೊಂಬಳು ರತ್ನಿ ಹರಿಹರ ಲಿಂಗನ
ಅವರ ಜಟ್ಟಂಗಿ ರಾಮೇಶ್ವರಗೆ।
ದೊರೆ ರಾಮನಾಡುವ ಚೆಂಡೆನ್ನ ಮನೆಗೆ ಸೇರೆ
ಹೊರ ಪೌಳಿ ಹಜಾರ ಹೊಡೆವೆನು ॥೧೦೩॥

ಅರುವತ್ತು ಚಿನ್ನದ ಕಂಬಿಯನೆ ಕಳುಹುವೆ
ಪರ್ವತದ ಗಿರಿಯ ಮಲ್ಲನಿಗೆ।
ಭ್ರಮೆ ಬಿದ್ದ ಮನುಜನ ಬರಿಸಿಕೊಡಲು ನಿಮ್ಮ
ಗಿರಿಯ ಕಾಣುತ ಮಂಡೆಗೊಡುವೆ ॥೧೦೪॥

ಪಂಪಾಪತಿ ಹರನೆ ಹಂಪೆ ವಿರುಪಾಕ್ಷನೆ
ಕಂಪಿಲನ ಸುತನಾಡು ಚೆಂಡು ।
ಅಂತ್ರಮಾರ್ಗದಿ ಬಂದು ಅರಮನೆಯ ಸೇರಲು ನಿಮಗೆ
ಶ್ಯಾಲೆ ತೇರುಗಳ ನಡೆಸುವೆನು ॥೧೦೬॥

ಸೋಮವಾರದುಪವಾಸ ಪ್ರಾಣೆರಲು ನಡೆಸುವೆ
ರಾಮಗಿರಿಯ ಸಿದ್ಧೇಶ್ವರಗೆ।
ರಾಮನ ಸುಖದೊಳು ಬಲನಾಗಲು ನಿಮಗೆ
ಕೋರನ್ನದ್ಹೈನ ಬಡಿಸುವೆ ॥೧೦೭॥

ಮೂಡಲಗಿರಿವಾಸ ನಾಡ ಕಾಣಿಕೆ ಕೊಂಬೆ
ರಾಮನ ತನಗೊಲಿಸಿಕೊಡಲು।
ಕೂಡಿದ ಫಲದೊಳು ತೋರಿದರೆ ಶಿಶುಬಾಲ
ವಾರದ ದಾಸಯ್ಯನ ಬಿಡುವೆ ॥೧೦೮॥

ಯಲ್ಲಮ್ಮ ಎಕನಾತಿ ಹುಲ್ಲ ಮನೆಯಳೆ ಕೆಂಚು
ಕಲ್ಲ ಮಾಳಿಗೆಯ ಕಟ್ಟಿಸುವೆ।
ಒಲ್ಲೆನೆಂಬುವ ರಾಮ ಒಲಿದು ಬಂದರೆ ನಿಮಗೆ
ಮತ್ತಲ್ಲಿ ಹೊರುವೆ ಹಡ್ಡಲಿಗೆ ॥೧೦೯॥

ಕುಂಭಿನಿಯಮ್ಮಗೆ ಕೊಡುವೆನು ಕುರಿಕೋಣ
ಹಿಡಿವೆನೊಪ್ಪತ್ತಿನೂಟಗಳ।

ನಡೆವೆನು ನಿಮ್ಮೆಡೆಗೆ ಬೇವಿನುಡುಗೆಯನುಟ್ಟು
ಸುಗುಣ ರಾಮನ ಕೂಡಿದರೆ ||೧೦೯||

ಹರ[ಣ]ದಿಂದದಿ ಜನಿಸಿ ನಿರ್ವಾಣದಿ ನೆಲೆಗೊಂಡೆ
ಹಿರಿಯ ಕೆಂಚೆಡೆಯ ಭೈರವನೆ।
ಕರುಣಿಸು ರಾಮಗೆ ಮೊದಲಾದ ಬಾಲಗೆ
ಬಿಡುವೆನು ಜೋಗಿಯ ನಿನಗೆ ||೧೧೦||

ನಾಡದೇವರ ಮಾತು ಕಾಣಗೊಡುದು ಸಂಗಿ
ವಾಯುದೇವರು ಒಂದು ತೆರದಿ।
ಮಾಯದ ಗಾಳೆದ್ದು ಹಾರಿಸಿ ತಂದರೆ
ಭೀಮ ಹನುಮಗೆ ನಾಮ ಕೊಡುವೆ ||೧೧೧||

ಹರಕೆಯ ಕೊಡುವುದು ಸರಿ ಕಾಣೆ ರತ್ನಮ್ಮ
ಪುರುಷ ಕಂಪಿಲನು ಕೇಳಿದರೆ।
ಅದಕೇನು ಗತಿ ಪೇ[ಳ್ವೆ] ತಾನು ಕಾಣದ ಮುನ್ನ
ಧರಣಿದೈವಗಳ ಪ್ರಾರ್ಥನೆ[ಯೆ?] ||೧೧೨||

ಹಾದರವ ಬಲ್ಲಾಕೆ ಈ ಜಾಲನರಿಯಳೆ ಸಂಗಿ
ಓದಬಲ್ಲಾತ ಅರ್ಥವನು।
ಭೇದಗಾಣನೆ ಮುದಿಜೀವಿ ಕಂಪಿಲಗೊಮ್ಮೆ
ಅಹುದಾಗಿ ತೋರಿಸುವೆ ಹರಕೆಯನು ||೧೧೩||

ಒಡನೆ ಬರುವೆನು ಎಂದು ತಡೆಯಲು ದಿನ ಮೂರು
ಮನದಿ ಕಂಗೆಟ್ಟು ದೈವಗಳ।
ಕಡವೆ ಶಾರ್ದೂಲದೊಳು ಜಯಿಸಿ ಬಳೆ ಉಳಿಯಲು
ಧರಣಿ ದೈವವ ಬೇಡಿಕೊಂಡೆ ||೧೧೪||

ಮುದಿರಾಯನ ಮನಸು ಕರಗುವಂದದಿ ಪೇಳ್ವೆ
ಮರಳು ಆಗುವನು ನಿಜವೆಂದು।
ಗರತಿಯೊಳ್ ಪತಿವ್ರತೆ ಪುರುಷಮೋಹಿನಿಯೆಂದು
ಇರ[ನೇ]ನ ಮೂಳ ನಾಯಾಗಿ ||೧೧೫||

ಕಳ್ಳ ಸತಿಯರ ಮಾತು ಕರ್ಣಕ್ಕೆ ಹಿತ ಕಾಣೆ
ಸುಳ್ಳಿನ ಮುಂ[ದೆ] ನಿಜ ತರವೇ।
ನಿಲ್ಲದು ಕಲಿಯೊಳು [ನನ್ನಿಯದೇನಿ] ದಯವಿರಲು
ಹಲ್ಲು ಹೋದವಗೆ ಹೆದರುವೆನೆ ||೧೧೬||

ಕಂಪಿಲನ ಮಾತೆನ್ನ ಅಂತರಂಗದಿ ಎಲ್ಲ
ಮುಂದೆ ಹಾರಿಸುವೆ ಮೇಘದಲಿ।
ಕಂತುಸನ್ನಿಭ ರಾಮ ಬಂದು ನೆರೆದರೆ ಸಾಕು ಮುದಿ
ಕಾಂತನ ಮೂಲೆ ಹೊಗಿಸುವೆನು ||೧೧೭||

ಆಳಿದ ಕಂಪಿಲ[ನು] ಕಾಲವಶಕೆ ಸಂಗಿ
ಕೋವಿದ ಪುರುಷ ದೊರೆಯದೆ।
ಹಾಲ್ಹಣ್ಣು ಸವಿದ ಜಿಹ್ವೆಗೆ ಒಣಗೂಳು
ಸೇರುವುದೆ ಸಂಗಿ ನೀ ಪೇಳು ||೧೧೮||

ಲಾಯದೊಳಗಣ ತೇಜಿ ಪೋದಂತೆ ಮುದಿಯಾಗಿ
ಸಾಣೆಗ ಸಮರ್ಥನಿಲ್ಲದೆ।
ಏಳಲಾರದ ಪುರುಷ ನೀರೆಯ ಒಡಗೂಡೆ
ತೀರುವುದೆ ಕಾಮನ ಕಲೆಯು ||೧೧೯||

ಹಸ್ತಿನಿ ಜಾತಿಯ ರತ್ನಿ ತನ್ನಯ ಮನ
ಚಿತ್ತ ಹರಿ[ದಂ]ತೆ ಆಡುತಿರಲು।
ಮತ್ತಲ್ಲಿ ಶೃಂಗಾರ ತೋಟದೊಳಗೆ ಕುಳಿತು
ಕಂದ ರಾಮನ ನೆನೆ ನೆನೆದು ||೧೨೦||

ಶೃಂಗಾರ ತೋಟದೊಳು ರಂಭೆ ರತ್ನಿಯು ಕುಳಿತು
ಚೆನ್ನಿಗ ರಾಮನ ನೆನೆದು।
ಎಂದಿಗೆ ಮುಖ ಕಾಣ್ವೆ ಚಂದ್ರಗೆ ಪ್ರತಿಯಾದ
ಕಂದರ್ಪರೂಪ ಬರನೆನುತ ||೧೨೧||

ನೆರೆ ಪಾಪಿ ರತ್ನಾಜಿ ಈ ತೆರದೊಳು ಇರುವಾಗ
ಬಿರಿದಂಕರಾಡೆ ಲೆಗ್ಗೆಯನು।

ಒಲಿದು ಲಾಲಿಸಿ ಕೇಳಿ ಸುಗುಣ ಮೋಹನರೆಲ್ಲ
ಹೊಡೆದಾಡು ಲೆಗ್ಗೆ ಛಲ ಪದವ ||೧೨೨||

ಭೇರಿ ಕಹಳೆಯ ಸ್ವರವು ಭೂಮಿಯಾರ್ಭಟಿಸುವ
ಸಡಗರವ ಶಿವ ತಾನೆ ಬಲ್ಲ।
ಕಿಡಿಕಿಡಿ ಮಸುಗುತ ಛಲ ಪಂಥಗಳು ಪುಟ್ಟಿ
ಹೊಡೆದಾಡೆ ಹೀನ ಭಾಷೆಯಲಿ ||೧೨೩||

ರಾಯ ಕಾಟನ ಕಡೆಗೆ ಮೊನೆಗಾರ ಎಕ್ಕಟಿಗರು
ಭೇರುಂಡ ಪುಲಿ ಸಿಂಹದಂತೆ।
ಬಾಯ ಧರಣಿಗೆ ಭೂಮಿ ತಾನದುರುವಂದದಿ
ಹೂಡೇನು ಲೆಗ್ಗೆ ಚಂಡೆನುತ ||೧೨೪||

ಹಿಡಿಯಲು ಚಂಡಾಗ ನಿಡುಗಲ್ಲ ಗಂಗರಸ
ಹೊಡೆವೆನು ಲೆಗ್ಗೆ ಹೂಡೆನಲು।
ಇದು ನಿನ್ನ ಪುಟಿಗಳನು ಹಿಡಿಯದಿದ್ದರೆ ತಮಗೆ
ಇಡಿಸಣ್ಣ ಮೂಗಿಗೆ ಸುಣ್ಣ ||೧೨೫||

ಕಾಲನಾರ್ಭಟದೊಳು ನೋಡಿಸುತ ಗಂಗಯ್ಯ
ಭೂಮಿ ಜಜ್ಝರಿಪಂತೆ ಇಡಲು।
ಹೂಡಲು ಲೆಗ್ಗೆಯ ಹದ್ದಿನಂದದಿ ಚೆಂಡು
ಎರಗಲು ಗನನ ಮಾರ್ಗದಲಿ ||೧೨೬||

ರಾಯ ರಾಮನ ಮಂದಿ ನೋಡಿದರು ಬರುತಿರ್ಪ
ಭೋರೆಂದು ಬರಸಿಡಿಲ ತೆರದಿ।
ಓರ‍್ಯಾಗಲೆಲ್ಲರು ಎಡಗೈಯ ಹಂಪನು
ಬಾಗಿ[ಯೆ] ಪಿಡಿದನು ಚಂಡ ||೧೨೭||

ಗಂಗರಸು ನಡೆದನು ಗಾಳಿಪೂಜೆಗೆ ಮುನ್ನ
ಇನ್ನಾರು ಇಡುವ ತಕ್ಕೊಳ್ಳಿ।
ಎದ್ದು ಬಂದನು ಮದ್ದಾನೆ ಮಲೆನಾಡ
ಮುದ್ದು ಮಲ್ಲಯ್ಯ ಚೆಂಡ್ಹಿಡಿದ ||೧೨೮||

ಕಿಡಿಕಿಡಿ ಹಾರುತ ಹೊಡೆಯಲು ಮಲ್ಲಯ್ಯ
ನೆಗೆದು ಲೆಗ್ಗೆಯು ಪುಟಿದೇಳೆ।
ಬಿಡದಿರಿ ಚೆಂಡನು ಹಿಡಿಯೆನಲು ರಾಮಯ್ಯ
ನೆಗೆದಿಡುವ ಜಂಗಮ ಬಸವ ||೧೨೯||

ಸಾಗಿದ ಮಲ್ಲರಸು ಬೋನದ ಗಂಜಿಗೆ
ಯಾವನು ಬನ್ನಿ ಇನ್ನೊಬ್ಬ।
ಭೇರುಂಡನಂದದಿ ಬಂದು ಚಂಡನು ಪಿಡಿಯೆ
ಸೀರ‍್ಯದ ರಂಗನಾಯಕನು ||೧೩೦||

ಆತುಕೊಂಡರು ತಮ್ಮ ಹಮ್ಮೀರ ಭಟನೆಂದು
ರೂಢಿಸಿ ಕೋಪಾಗ್ನಿ ಮನದಿ।
ನೋಡಿ ಲೆಗ್ಗೆಯನಿಡಲು ಮೂರೆರಡು ತುಂಡಾಗಿ
ಹಾರದೆ ಪುಟವು ಸುಳಿದಿರುಗಿ ||೧೩೧||

ಬೀಳಲು ಲೆಗ್ಗೆಯು ಓಡಿ ರಾಮನ ಮಂದಿ
ತೋರುವರು ನಾಲ್ಕು ಮುಖದೊಳಗೆ।
ಏರಿದನು ಮತ್ತೊಬ್ಬ ಬಾಣ ರಂಗಯ್ಯನು
ವಾರ‍್ಯಾಗು ಲೆಗ್ಗೆ ಬಿತ್ತೆನುತ ||೧೩೨||

ಹಿಡಿವ ಲೆಗ್ಗೆಯ ನಮ್ಮ ಹೊಡೆಯಲು ರಂಗಯ್ಯ
ಕದುಬಿಡಲವನು ಕಾತರದಿ।
ಬಡಿಯಲು ಬಲಭಾಗ ತುದಿ ಅಂಗಿ ಒರಗನು
ನೆಗೆದು ಓಡಲು ಬಾಣ ದೆಸೆಗೆ ||೧೩೩||

ಗೆಲಿದರು ಒಂದಾಟ ಗೆಲವುಳ್ಳ ಕಾಟನ ಮಂದಿ
ಹಿಡಿಯಲು ಬಿರಿದಿನ ಕಹಳೆ।
ನಡುಗದೆ ಲೆಗ್ಗೆಯ ಕನಕಗಿರಿಯ ನಾಯ್ಕ
ಹಿಡಿಯಲು ಚೆಂಡ ಕೋಪದಲಿ ||೧೩೪||

ತಟ್ಟನೆ ಇಡು ಬೇಗ ಎಷ್ಟೊತ್ತು ನಾಯಕರೆ
ಪಟ್ಟಕ್ಕೆ ಲೇಖ ರತ್ನ ಮಣಿಯೆ।

ಕೊಟ್ಟೇನೆ ಪುಟಿಗಳನು ದಿಟ್ಟರೆ ಬಳಸಿರೆ
ಕೊಟ್ಟು ಕಳುಹಯ್ಯ ಈಗೆಮಗೆ ॥೧೩೫॥

ಗಮಕದ ನುಡಿಗೇಳಿ ಕನಕಗಿರಿನಾಯಕ
ಕನಲಿ ಕೋಪಾಗ್ನಿಯಿಂದ್ಹೊಡೆಯೆ।
ಜಗಳವು ಕರುವಾಡ ಮುರಿದು ಲೆಗ್ಗೆಯ ಪುಟಿಯು
ನೆಗೆದಾಡುತಿರಲು ಮೇಘದಲಿ ॥೧೩೬॥

ತಪ್ಪಲ್ಲ ಕೈಯೊಳಗೆ ಎದೆಗೆಟ್ಟು ಓಡಲಿ ಬೇಡಿ
ಕೊಟ್ಟವಗೆ ಪುಟಿಯ ಹಮ್ಮೀರ।
ಕಿಚ್ಚಿನಾರ್ಭಟದೊಳು ಬರುವ ಚಂಡನು ಕಂಡು
ಹಿಡಿದನು ಬಾಣೆಯ ಮುದ್ದ ॥೧೩೭॥

ಸಾಗಿದ ಕನಕಯ್ಯ ಕಾಲನ ಪುರಕಾಗಿ
ವಾಲಿ ಬಂದೆ ಕೊಳ್ಳಿ ಚೆಂಡ।
ಯಾರಣ್ಣ ಇಡುವರು ಮೋರೆ ನೋಡುವ ಬನ್ನಿ
ಆತುಕೊಂಬೆವು ಬೆಲ್ಲದಂತೆ ॥೧೩೮॥

ನೋಡಿವರ ಮಾತಿನ ಮೋಡಿ ಸಿಟ್ಟಿವನೆಂದು
ರೂಢಿಸಿಕೋಪ ಚಾಮಯಗೆ।
ಆಡುವ ನುಡಿ ಗರ್ವ ಮುರಿವೆನೆನ್ನುತ ಬಂದು
ನೀಡುವೆ ಚೆಂಡ ಕರದೊಳಗೆ ॥೧೩೯॥

ಹೆಚ್ಚಿನ ನುಡಿಬೇಡ ಗುತ್ತಿಯ ಚಾಮಯ್ಯ
ಮುಚ್ಚಿಕೊ ನಿನ್ನ ಪೌರುಷವ।
ಕೆಟ್ಟರು ಕೆಲಬರು ದಿಟ್ಟ ಚಲಗಳನಾಡಿ
ಎಷ್ಟೊಂದು ಮಾತು ಇಡು ನೀನು ॥೧೪೦॥

ಹೀನ ವಚನಗಳನು ಕೇಳುತ ಚಾಮಯ್ಯ
ಭೀಮನಾರ್ಭಟದ ಕೋಪದಲಿ।
ಮೇಗಕ್ಕೆ ಕೈ ನೀಡಿ ಆರ್ಭಟಿಸಿ ಹೊಡೆಯಲು
ಲೆಗ್ಗೆ ಜೋರಾಗಿ ಪುಟಿಯೇಳೆ ಚೆಂಡು ॥೧೪೧॥

ಓಡಬೇಡಿರೊ ನಿಲ್ಲಿ ಮೇಗಳ ಪುಟಿ ಹಿಡಿದು
ಸಾರದಿರಲು ನಡೆವನಂತೆ।
ಬಾಣ ಪ್ರಯೋಗದಿ ಬರುವ ಚೆಂಡನು ಕಂಡು
ಜಾಡರ ಬಸವನು ಪಿಡಿದ ||೧೪೨||

ಆಡಿದ ಚಾಮಯ್ಯ ಭೂಮಿ ತೂಕದ ಮಾತ
ಜಾಡನ ಕರದೊಳು ನಡೆದ।
ಯಾರಿನ್ನು ಇಡುವರೆ ಮೋರೆ ನೋಡುವ ಬನ್ನಿ
ಹಾರಿಸಲು ಚೆಂಡು ಹಿಮ್ಮರಳಿ ||೧೪೩||

ಸಿಟ್ಟಿನೊಳ್ ನಡೆತಂದ ಚಿನ್ನನ ಗಿರಿದುರ್ಗದ
ಚಿಕ್ಕಣ್ಣನಾಯ್ಕನೆಂಬವನು।
ಗಟ್ಯಾಗಿ ಇರಿರಣ್ಣ ಎದೆಗೆಚ್ಚ ಮುರಿವೆನು ನಿಮ್ಮ
ಹೊತ್ತುಣುತೆ ಓಡಿಸಿ ಹೊಡೆವೆನು ||೧೪೪||

ಹೊಡೆದ ಚಿಕ್ಕಣ್ಣನ ಬಗೆಯ ಬಲ್ಲೆವು ಬೇರೆ
ಕುರುಹ ಬಲ್ಲವಗೆ ಎಲೆ ಯಾಕೊ।
ಸುಡು ನಿನ್ನ ಮಾತುಗಳ ಕೊಡು ನೋಡು ಪುಟಿಯನು
ಎಡದ ಕೈಯೊಳಗೆ ಪಿಡಿವೆನು ||೧೪೫||

ನರಿಗಿಂದ ಕಡೆಯಾಗಿ ತೃಣಕರಿಸಿ ಆಡುವರೆಂದು
ಮೆರೆಯುತ [ಮೇಘನ] ಭರದಿ।
ಹೊಡೆಯಲಾಕ್ಷಣ ಲೆಗ್ಗೆ ನೆಗೆದು ಚೆಂಡಿನ ಪುಟಿಯು
ಗಗನ ಮಾರ್ಗವ ತುಡುಕುತಿರಲು ||೧೪೬||

ಸಿಟ್ಟ ಮಾಡಿದರೇನು ತಪ್ಪಲ್ಲ ಚಿಕ್ಕಣ್ಣ
ಕೊಟ್ಟನು ಕುಶಲತ್ವ ಪುಟವ।
ಬಿಟ್ಟರೆ ಬಹುಜೋಕೆ ಕಟ್ಟು ಮಾಡಲು ರಾಮ
ಎದೆಗೊಟ್ಟು ಪಿಡಿದನು ಮಡಿವಾಳ ||೧೪೭||

ಅಣ್ಣಾಜಿ ಚಿಕ್ಕಣ್ಣ ಮಾಡಿದ ಛಲಪದಕೆ
ಜನ್ಮದ ಪಿಂಡ ತಲ್ಲಣಿಸಿ।

ಮುನ್ನುಳಿದ ಹಳೆ ಅರಿವೆ ತೊಳೆವ ಮಾಚನ ಕರೆದು
ಎನ್ನುತ ರಾಮ ನಗುತಿರಲು ||೧೪೮||

ಕಾಟನ ಕಡೆಯೊಳು ಮೀಟಾದ ಮನ್ನೆಯರು
ಸೋತು ಕುಳಿತರು ಚಿಂತಿಸುತ।
ಚಿಂತೆ ಯಾತಕೆ ಬೇಡ ತಾನೊಬ್ಬ ಬಡವ ಬಂದೆನುಯೆಂದು
ಹಾಕೆನಲು ಚೆಂಡ ಹಮ್ಮೀರ ||೧೪೯||

ಖಾನರು ಬಂದರೆ ಮಾಡೆವು ಸಲ್ಲಾಮ
ನೋಡೇವು ಇಡು ನಿನ್ನ ಕೈಯ।
ಗೋಡೆಗಳನೆ ಏರಿ ನಾಡ ಸುಲಿದಂತಲ್ಲ
ಹಾಸ್ಯಾಡಲು ರಾಮನ ಮಂದಿ ||೧೫೦||

ಹಾಸ್ಯವಾಯಿತು ನಿಮಗೆ ಸೋತರೆನ್ನವರೆಂದು
ಮೀಸೆಯ ಮುರಿದು ಹಮ್ಮೀರ।
ಕೇಸರಿ ಕೆರಳಿದ ರೋಷಾಗ್ನಿಯಿಂದಲಿ ಒಡೆಯೆ
ಹಾಸರು ಮಲಗಲು ಲೆಗ್ಗೆ ||೧೫೧||

ಹಮ್ಮೀರಖಾನನ ಜರಿದೊಮ್ಮೆ ನುಡಿದೆವು
ಮುನ್ನ ತಮ್ಮ ಓಡಿಸಿ ಗೂಳ್ಯವನು।
ಇನ್ನು ನೋಡಿರಿ ಎದೆಯ ಮುರಿವುದು ಚೆಂಡು
ನಿಲ್ಲದೆ ಓಡೆ ಬಯಲಾಗಿ ||೧೫೨||

ಹೊಡೆದಾಟ ಬರಿಸಿದ ಬಾದೂರನ ಮಗನಹುದೊ
ಹೀನರೊಳಗೆ ಸರ್ಜಮೀಯ।
ರಾಯ ಕಾಟನು ಮೆಚ್ಚೆ ನಗುತ ಮನ್ನೆರನೆಲ್ಲ
ನೋಡಿದೆವು ಈ ಮೇಲೆ ಒಂದ ||೧೫೩||

ನೋಡುವುದು ಇನ್ನೇನು ಬಾಣಿ ಮುದ್ದನು ದೌಡ
ಬೀಳುವ ಲೆಗ್ಗೆ ಬಂತೆನಲು।
ತೋರಿದ ಮದಬಂದ ಮಾರಿ ಕೋಣನ ತೆರದಿ
ನೋಡಿಡಲು ಹಮ್ಮೀರ ನೆಗೆದು ||೧೫೪||

ಇಟ್ಟನು ತನ್ನಯ ಶಕ್ತಿ ಸಾಹಸದೊಳು
ತಪ್ಪಲು ಚೆಂಡ ಇಬ್ಬರೊಳು।
ಬಿಟ್ಟಂತೆ ಕಡೆ ಸಿಡಿಲು ಆರ್ಭಟ ಮಾಡಲು ಬಂದು
ಹೊಕ್ಕುದು ಮನೆ ಮಠಗಳೆಲ್ಲ ||೧೫೫||

ಕಂಡರು ನೋಡುವ ಗಣಗಳು ಜನಸ್ತೋಮ
ಬೆಂಗಾಡ ಬಿದ್ದೋಡುವರು।
ಚೆಂಡಲ್ಲ ಇದು ಪಾಪಿ ತಿಂಬೋರೆ ನರ ಪಡೆಯ
ಬಂದು ಸೇರಿಹುದು ಕುಮ್ಮಟದಿ ||೧೫೬||

ನೋಡಿರೈ ಜಾಣರು ಹಾರಿದವು ಮನೆಯೆಂಟು
ಕೋಣ ಮುದ್ದಣ್ಣ ಸಿಕ್ಕಿರಲು।
ಚೂರಾನೆಯರು ಮಾಂಸ ಕೂಡಿದರಂದಿಗೆ
ತೋರೆನಲು ಗುರುತು ನಿಲ್ಲುವುದೆ ||೧೫೭||

ಆಡುವರು ವಿಪರೀತ ಪ್ರಾಯ ಮದಗಳ ಮೇಲೆ
ಜೀವದಾಸೆಗಳನು ತೊರೆದು।
ತಾವು ಸಾಯಲು ಪೂರ್ವ ಲಿಖಿತವೆಯೆಂದು
ದೂರನೆ ನಿಂದು ನೋಡುವರು ||೧೫೮||

ಚೆಂಡು ತಪ್ಪಿತು ಎಂದು ಛಲದಂಕ ರಾಮನ ಮಂದಿ
ಕಂದನಂದದಿ ಹಾರಿ ನಗುತ।
ಹೂಡಿದ ಮದುವೆಗೆ ಮರುಳಿ ಮಾಡೆವು ನಿಮ್ಮ
ತೊಟ್ಟದ ಎದೆಯ ಮುರಿದೇವು ||೧೫೯||

ನೀವೇನು ಮುರಿವಿರಿ ಸೂಳೆಯರ ಮನಗುಡಲಿ
ಭೀಮ ರಾಮಯ್ಯ ಹೊರತಾಗಿ।
ರೋಮ ಅಳುಕದೆ ನಮಗೆ ಈ ಊರ ವೇಶಿಯರ ಮನೆಗೆ
ನೀ ಹೊರಿಸಿರೋ ಮನ್ನೆಯರು ||೧೬೦||

ಆಟ ಗೆದ್ದರೆ ಸಾಕು ಈ ಮಾತಿರಲಿ ನಿಮ್ಮೊಳಗೆ।
ಸೋತರೆ ನೀವೆ ಹೊರುತಿಹರು ।

ಹಾಕಿರೊ ಚೆಂಡಿತ್ತ ಹೂಡಿ ಲೆಗ್ಗೆಯ ಬೇಗ
ಘನಭೂಪರಿದ್ದರೆ ನಿಮಗೇನು ||೧೬೧||

ಆಡಲು ಲೆಗ್ಗೆಯ ರಾಯ ಕಾಟನ ಮಂದಿ
ಊದಿಸಲು ರಾಮ ಕಹಳೆಯನು।
ಮೂರು ರಾಯರಗಂಡ ಮುರಿವನೆದೆಗಳನೆಂದು
ಭೋರಿಡಲು ಭೂಮಿ ಒದರ್ವಂತೆ ||೧೬೨||

ಚೆಂಡನು ಹಿಡಿದನು ಜಂಗಮ ಬಸವಯ್ಯ
ಗಂಗೆ ರಮಣನಿಗೆ ಮೊದಲಾಟ।
ಉಂಡವರು ಮನೆಗೊಂದು ಭೋಜ್ಯ ಭಿಕ್ಷದಸ್ವಾಮಿ
ಕಂಡ ಕೈಯಲು ಹುದು ಕೊಡುವೆವು ||೧೬೩||

ತಿರುಕ ಜಂಗಮರೆಂದು ಅಣಕಬೇಡಿರಿ ನೋಡಿ
ಹುಡುಕಿರೊ ಓಡುವರೆ ನೆಲನ।
ಫುಲ್ಲಶರನ ವೈರಿ ನೆನೆದು ಹೊಡೆಯಲು ಲೆಗ್ಗೆ
ಚೆಲ್ಲಾಡಿ ಪುಟವೇಳದಿರ[ವೆ] ||೧೬೪||

ನೋಡಯ್ಯ ಲಿಂಗಣ್ಣ ವೀರ ಸಂಗಮರಾಯ
ಭೂಮಿ ಪಾಲಕರು ನೃಪರೆಲ್ಲ।
ಆಡಿದೆವು ಹಾಸ್ಯವನು ಓಡಿಸಿದ ಒಡೆಯರ
ಭೋರನೆ ಎಲ್ಲ ಹೆದರೋಡೆ ||೧೬೫||

ಬರುವೆವು ಲೆಗ್ಗಿಗೆ ಉರುಬುವೆವು ನಾಕು ಮುಖದಿ
ಬರುವರು ಒದಗಿ ಸನ್ನಿಧಿಗೆ।
ಹಿಡಿದ ಲೆಗ್ಗೆಯನೆಂದು ಹನುಮನಾಯ್ಕನು ಬರಲು
ಹೊಡೆದಾನು ಎಡಗಾಲು ಮುರಿಯೆ ||೧೬೬||

ತೀರಿತು ನಮ ನಿಮಗೆ ಸಾಲವೆಂಬುವುದಿಲ್ಲ।
ಏರಿದಾಟಗಳು ಇಳಿದಾವು।
ಸಾರುತಿರಲು ಕಹಳೆ ರಾಯ ರಾಮನ ಕಡೆಯ
ಹಮ್ಮೀರರು ಬಂದು ಚೆಂಡಾಡೆ ||೧೬೭||

ಕಲ್ಲುಕೋಟೆಯ ಚಿಕ್ಕ ಕಾಕ್ಹೋಡೆದು ಚೆಂಡನು
ಪಿಡಿದ ಬಲ್ಲಿದ ಮದದಾನೆಯಂತೆ।
ಪಲ್ಲಸನ ಪಿತನಳಿಯೆ ಭೀಮನಂದದಿ ಹೊಡೆಯೆ
ಅಲ್ಲಿಗೆಯು ಹಾರಿ ಬೀಳೆ ॥೧೬೮॥

ಅಣ್ಣಾಜಿ [ಕಾಟ]ನ ಮನ್ನೆಯರು ತಲೆದೂಗೆ
ಕುಳ್ಳನ ಮರಿಯಂಥ ಚಿಕ್ಕ।
ಎಲ್ಲಿಹುದೊ ಈ ಶಕ್ತಿ ಯಮನಿಗೆ ಮಿಗಿಲಾದ
ಹುಲ್ಲೆಯಂದದಿ ಬೆದರಿ ಓಡೆ ॥೧೬೯॥

ಓಡಬೇಡಿರೊ ನಿಲ್ಲಿ ಆಡದಿರಿ ಭಲ ಪದವ
ಸೂಳೆಯರ ಮನೆಗೆ ನೀರಿಲ್ಲ।
ಕೂಡಿ ಬಂದೆವೊ ಕಾಣೊ ಓಡಿದರೆ ಏನಣ್ಣ
ಏರಲು ಗುತ್ತಿ ಚಾಮಯ್ಯ ॥೧೭೦॥

ಲೆಗ್ಗೆ ಬಿದ್ದನು ಎಂದು ನೆಗೆದು ಹೊಡೆಯಲು ಚಿಕ್ಕ
ಬೊಗ್ಗಲು ಚಾಮಯ್ಯ ಗೋಣ।
ಅವ ಬಾಯ ಬಡಕೊಂಡು ಕಡೆಗೆ ಓಡಲು ಚೆಂಡು
ಮುದ್ದು ರಾಮನ ಕಹಳೆ ಸಾರೆ ॥೧೭೧॥

ಆಟ ಉತ್ತಮವೆಂದು ರಣಭೂಪ ಕಾಟಯ್ಯ
ಝೇಂಕರಿಸೆ ಕಹಳೆ ಭೇರಿಗಳು।
ಭೋರನೆ ಬಂದಲ್ಲಿ ರಾಯ ಕಾಟನ ಮಂದಿ
ಹೂಡಲು ಲೆಗ್ಗೆ ಪ್ರತಿಯಾಗಿ ॥೧೭೨॥

ಬಂದನು ದೇವಾಂಗ ಗೊಂಬೆ ಬರಹವ ನೆಯ್ವ
ಚೆಂಡ ಪಿಡಿಯಲು ರೋಷದಲಿ।
ಬಂದನು ಬಸವಣ್ಣ ಬಲುಜಾಣ ಲಾಳಿಯ
ತುಂಬಲಿಟ್ಟಿಹನು ತಟಹಾಯೆ ॥೧೭೩॥

ಇರಲಣ್ಣ ಎಚ್ಚರು ಜರಿದರೆ ತನಗೀಗ
ಕೊರತೆಯಾದಡೆ ಕುಲವಂಶ।

ಹನುಮನ ತರಹದಿ ನೆಗೆದು ಹೊಡೆಯಲು ಲೆಗ್ಗೆ
ತರಗೆಲೆಯಂದದಿ ಹಾರೆ ||೧೭೪||

ಮಗ್ಗದವನು ಎಂದು ಅಗ್ಗ ಮಾಡಿದೆವಲ್ಲ
ತಿದ್ದಿದ ಬಿಸಿನೀರ ಬುಡಕೆ।
ಬಿದ್ದು ಓಡಲುಗೊಡ ಬೆದರಿದ
ಓಡಲಮ್ಮದೆ ಎಡಬಲನ ||೧೭೫||

ತೋರುವರು ಅಣಿ ಮೊನೆಯ ನಾನಾ ಮುಖದೊಳು ಅವ[ರು]
ಏರಿದ ಲೆಂಕೆಯ ಹನುಮ।
ಭೇರುಂಡನಂದದಿ ನೆಗೆದು ಹೊಡೆಯಲು ಬಸವ
ಹಾರಲು ಎಡಗೈಯ ಬೆರಳು ||೧೭೬||

ಅಣ್ಣಾಜಿ ಕಾಟಮಗೆ ಆಟೆರಡು ಹೊತ್ತವು
ಒಮ್ಮೆ ರಾಮನ ಕಹಳೆ ಸಾರೆ।
ವರ್ಮಗಳು ಮಸಗುತ ಧರ್ಮಜನ ಪಿತನಂತೆ
ಖಿನ್ನನಾದನು ಕಾಟಣ್ಣ ||೧೭೭||

ಲೆಂಕೆಯ ಹನುಮನು ನೊಂದನೆಂಬುದ ಕೇಳಿ
ಕಂದಲು ಕಾಟಣನ ಮುಖಕಾಂತಿ।
ಕಂಡಿಕೆ ಭನವನು ಗುಂಡಿಗೆಯ ಮುರಿವೆನು
ಹೊಂದದೆ ಆಟ ತಮ್ಮೊಳಗೆ ||೧೭೮||

ಏನಯ್ಯ ಕಾಟಣ್ಣ ಯಾರೊಡನೆ ಈ ಸಿಟ್ಟು
ರಾಜಪುತ್ರಿಯಗೆ ಕರ ಮುಗಿಯೆ।
ಬೇರೊಮ್ಮೆ ಮುಗಿದೆವು ಆಡುವ ಎಡೆಯೊಳು
ತೋರುವರೆ ನಿಮ್ಮ ಕೋಪಗಳ ||೧೭೯||

ಹೊಡಲು ಲೆಗ್ಗೆಯ ರಾಯ ಕಾಟನ ಮಂದಿ
ಬಾಣೆ ಮುದ್ದನು ಚೆಂಡ ಹಿಡಿದ।
ಹೊಡೆಯಲು ಲೆಗ್ಗೆಯ ಪರಿಯಾಗಿ ಚೆಂಡೇಳೆ
ಹಿಡಿಯಲು ಮಿಗಿಲೇನೂ ರಾಯ ||೧೮೦||

ಬಾಣಿಯ ಮುದ್ದನ ಸಾಗಿಸಿರೊ ಮನೆಗಾಗಿ
ಹೂಡಲು ಆರಂಭ ಭಯ।
ಯಾರೊಮ್ಮೆ ಹಿಡಿಕೊಳ್ಳಿ ಮೊನೆಗಾರ ಭಟರುಯೆಂದು
ಹಾರಿಸಿಟ್ಟರು ಚೆಂಡನವರು ॥೧೮೧॥

ಮಡಿವಾಳ ಮಾಚನು ಹಿಡಿದ ಚೆಂಡನು ಬೇಗ
ಶರಣನಂದದಿ ಚೆಂಡ ಇಡಲು।
ಮುರಿದು ಲೆಗ್ಗೆಯು ಹಾರೆ ನೆಗೆದ ಪುಟಿಯನೆ ಕಂಡು
ಒಡನೆ ಹಿಡಿದನು ಲಿಂಗಣ್ಣ ॥೧೮೨॥

ಸಾಗಿದ ಮನೆಗಾಗಿ ಹೋಗಲಿ ಮಾಚಣ್ಣ
ಮೂಳಗತ್ತಿಯ ಕಿರುಬ ಕಿರಿದೇ।
ಘುಡುಘುಡಿಸಿ ಬಂದನು ಬಡಗಿ ಗಂಗಯ್ಯ
ಸಿಡಿಲ ಕೋಪಾಗ್ನಿಯ ಒಳಗೆ ॥೧೮೩॥

ಕೊಡು ಚೆಂಡ ಎನುತಲಿ ಎಡಗಾಲ ಮುಂದಿಟ್ಟು
ಹೊಡೆಯಲು ಲೆಗ್ಗೆ ಪುಟವೇಳೆ।
ಬರಸಿಡಿಲಂತೆ ಭೋರ್ಮೊರೆವ ಚೆಂಡನು ಕಂಡು
ಹಿಡಿಯಲು ವೀರಸಂಗಯ್ಯ ॥೧೮೪॥

ಜಾಣ ಪಂಚಾಳನು ಸಾಗಿದ ನವಪುರಿಗೆ
ಕಾಲನ ವಾಲೆ ಬಂದಿದೆಕೋ।
ಮೇಲಾರು ಇಡುವರು ಮೋರೆ ನೋಡುವ ಬನ್ನಿ
ಹಾರಿಸಿಟ್ಟರು ಚೆಂಡ ನಗುತ ॥೧೮೫॥

ಬಂದನು ಚಂಡಿಗೆ ಗುಂಡಯ್ಯನ ಕುಲವಂಶ
ಕುಂಬಾರ ಮಲ್ಲನೆಂಬವರು।
ಹಂಡಿ ಕಟ್ಟಿದ ಜಾಣ ಚೆಂಡ ಪುಟಕೆ ಕೊಂಡು
ಕಂಡಾಗ ಮನ್ನೆಯರು ನಗಲು ॥೧೮೬॥

ಹಂಡಿ ಕಟ್ಟಿದ ಬಳಿಕ ಉಂಬವರೆ ಗತಿಯಿಲ್ಲ
ಕುಂಬಾರ ಹೊಡೆಯೆ ಕೋಪದಲಿ।

ಕೋಡಿ ಮೇಲಾಗಲು ಚೆಂಡು ಗಗನಕೆ ಏಳೆ
ರಂಗನಾಯಕನು ತಾ ಪಿಡಿದ ||೧೮೭||*

ಸಾಗಿದ ಕುಂಬಾರ ಆವಿಗೆ ಮನೆ ಬೆಂದು
ಕೂಗುವಳು ಮಾಳಿ ಕುಂಬರನ।
ತೋರಿ ರೊಕ್ಕ ಪದ್ಮ ಇಡುವ ಮನ್ನೆಯರೆಂದು
ಹಾರಿಸಿಟ್ಟರು ಚೆಂಡ ನಗುತ ||೧೮೮||

ಕುಂಬಾರ ಸೋತರೆ ಮಂದ್ಯಾರು ಇಲ್ಲವೇನೊ
ಬಂದನು ಕೊಮಟಿಗ ಎಂಕ।
ಚೆಂಡು ಹಿಡಿಯಲು ನೋಡಿ ಚೆಂದ ಕಾಟನ ಮಂದಿ
ಮುಂದವರು ನಗಲು ತೊಡೆಬಡಿದು ||೧೮೯||

ನಗಲೆದ್ದು ನಾಸಯ ಬಗೆಯನು ಚೆಂಡೆನುತ
ಹೊಡೆಯಲು ಕಡುಗೋಪದೊಳಗೆ।
ಪುಡಿಯಾಗೆ ಲೆಗ್ಗೆಯು ಪುಟವೇಳದೆ ಚೆಂಡಲ್ಲಿ
ತಿರುಗುತಿರಲು ನೆಲದೊಳಗೆ ||೧೯೦||

ಸೆಟ್ಟಿ ವೆಂಕನ ಕಂಡು ನಕ್ಕರೆಂದೆನುತಲಿ
ಕುಟ್ಟಿದ ಪುಡಿ ಹಾರುವಂತೆ।
ದಿಕ್ಕಾಗಿ ಓಡಲು ರಾಯ ಕಾಟನ ಮಂದಿ
ಹಕ್ಕಿ ಬೆದರಿದ ಪರಿಯಾಗಿ ||೧೯೧||

ತೋರುವರು ಒಂಬತ್ತು ಬೀದಿ ಗೊಂದಿಯ ಹಿಡಿದು
ಏರಿದ ಜರಿಮಲೆಯ ಅರಸು।
ಸೇರುವ ಲೆಗ್ಗೆಯೆಂದು ಮೆಕ್ಕ ಹೊಡೆಯಲು ಚೆಂಡ
ಗೋಡೆ ಬಡಿಯಲು ಬಗ್ಗಲಿಲ್ಲ ||೧೯೨||

ತಪ್ಪಲು ಚೆಂಡಲ್ಲಿ ಚದುರ ಕಾಟನ ಮಂದಿ
ಮತ್ತೆ ಹಾರುತ್ತ ತೊಡೆ ಬಡಿದು।

---

* ೧೮೮-೨೨೦ ಒಳಗೊಂಡಂತೆ ೩೩ ಪದ್ಯಗಳು 'ಆ' ಪ್ರತಿಯಲ್ಲಿ ಇಲ್ಲ.

ಎತ್ತಿ ಸಾರಲು ಕಹಳೆ ಪೃಥ್ವಿ ತಲ್ಲಣಿಪಂತೆ
ಮತ್ತವರು ಚೆಂಡನು ಪಿಡಿಯೆ ||೧೯೩||

ಹೂಡಿ ಲೆಗ್ಗೆಯ ಬನ್ನಿ ರಾಯ ರಾಮನ ಮಂದಿ
ಮೀರಿದ ಮದವ ಮುರಿವೆವು|
ಆಡಿದರೆ ಅದಕೇನು ಮುರಿವ ತ್ರಾಣಗಳನು
ಬೇರ ಬಲ್ಲೆವು ಮೊದಲಾಗಿ ||೧೯೪||

ಆಡಿರೊ ಅದಕೇನು ನಾಡ ಮಾತುಗಳೇಕೆ
ಓಡೆಲೊ ಜೊಳ್ಳು ಬೆದರಿಂಗೆ|
ಮೇಘದ ಗುಡುಗಿಗೆ ಕಾಲುಗೆಡುವವರಲ್ಲ
ಭೇರುಂಡ ರಾಮನ ಮಂದಿ ||೧೯೫||

ಹೂಡಿ ಲೆಗ್ಗೆಯನೆನುತ ಹಿಡಿಯೆನುತಲಿ ಚೆಂಡ
ಪಾಗೊಂಡೆ ನಾಯಕನು ಪಿಡಿಯೆ|
ಸೂರ್ಯನ ಮಗನಂತೆ ಕಾಲನಂದದಿ ಇಡಲು
ಹಾರಲು ಲೆಗ್ಗೆ ಪುಟಿವೇಳೆ ||೧೯೬||

ಲೆಗ್ಗೆ ಬೀಳಲು ಬೆದರಿ ಕದ್ದು ಓಡಲಿ ಬೇಡಿ
ಮುದ್ದಾದ ಪುಟವ ಕೊಟ್ಟಿಹನು|
ದುರ್ಗವು ಒಡೆವಂತೆ ಆರ್ಭಟಿಸಿ ಇಳಿವ ಚೆಂಡ
ಮಗ್ಗದ ಬನವನು ಪಿಡಿದ ||೧೯೭||

ಪಾಗೊಂಡೆನಾಯ್ಕನು ಸಾಗಿದ ಯಮನಿಂದ
ವಾಲೆ ತಂದನು ಬನವಶೆಟ್ಟಿ|
ಮುಂದಾರು ಹಿಡಿವರು ಮೋರೆ ನೋಡೆವು ಎಂದು
ಹಿಂದಕಿಡಲು ಚೆಂಡ ನಗುತ ||೧೯೮||

ಬಂದನು ಕಾಟಣ್ಣ ಬಿರಿದಂಕ ಚೌಡಿಗೆ
ದಂಡಧರನ ಕೋಪದೊಳಗೆ|
ಕಂಡರು ರಾಮನ ಮಾರ್ತಂಡ ಮನ್ನೆಯರೆಲ್ಲ
ಬಂದುದು ಮೃತಕಾಲ ತಮಗೆ ||೧೯೯||

ರಾಯ ರಾಮನು ಕಂಡು ಹೊಡೆದಾಡುವ ಮನ್ನೆಯರ
ತೋಳು ನಾಲ್ಕಹವೆ ಅಣ್ಣಯಗೆ।
ನಾ ಬರುವೆ ಭಯ ಬೇಡ ರಾಮ ನಡೆಯಲು ಎದ್ದು
ಧೀರ ಮನ್ನೆಯರು ಕಲಿಯಾಗೆ ॥೨೦೦॥

ಸರಸದಾಟವು ಪೋಗಿ ವಿರಸವೆಗ್ಗಳವಾಗಿ
ನುಡಿವ ವಚನವು ಹೆಚ್ಚು ಕಡಿಮೆ।
ಮೃಡನ [ಮೋಹ]ದ ಕಂದ ಶರ[ಭ]ಭಕ್ತಿಯ ತಾಳಿ
ಹೊಡೆಯಲು ಲೆಗ್ಗೆ ಚೂರೇಳೆ ॥೨೦೧॥

ಹೊಡೆಯಲು ಕಾಟಣ್ಣ ನಡುಗುತ ಉಪ್ಪರಿಗೆ
ಸಡಿಲಲು ತೊಟ್ಟಿಯ ಲೋವೆ।
ಎಡಬಲನ ನೋಡದೆ ಚೆಲುವ ರಾಮನ ಮಂದಿ
ಪುಲಿಗಂಡ ಗೋವಿನಂತೋಡೆ ॥೨೦೨॥

ಓಡುವರು ಕಾಲ್ತೊಡರಿ ಹದಿನಾರು ಮಂದಿಯು ಬಿದ್ದು
ಓಡಿದರು ಬಾಣದೆಸಗೆಯನು।
ನೋಡಲಮ್ಮರು ಇತ್ತ ಹೊಂ[ಚಿ]ಡುತ ಮಾನ್ಯರು
ಗೋಡೆ ಹಳ್ಳವ ನು[ಗ್ಗುವ]ರು ॥೨೦೩॥

ಹಿರಿಯಣ್ಣ ಹೊಡೆಯಲು ತಡೆಯಬಲ್ಲುದೆ ಲೆಗ್ಗೆ
ತಲೆದೂಗಿ ರಾಮರಾಜೇಂದ್ರ।
ವಿಧಿವಾಸ ತೀರದೆ ಮರಣ ಮಾನವರಿಗಿಲ್ಲ
ಒದಗಿ ಲೆಗ್ಗೆಯ ಎನಲು ರಾಮ ॥೨೦೪॥

ಏರುವರು ನಾಕಾ ಮುಖದಿ ಆಲೆ ಬೊಬ್ಬೆಯ ಹೊಡೆದು
ತಾ ಪರಿದು ಪ್ರಾಣದಾಸೆಗಳ।
ವೀರಮಾಸ್ತಿಗಳಾಗಿ ಇರುವರು ಅವರೊಡೆಯೆ
ಗಾಯವಡೆಯಲು ಮೂರೆರಡು ॥೨೦೫॥

ಕಾಲೊಡೆಯೆ ಕಲ್ಲಯನ ಮೂಗೊಡೆಯೆ ಮಲ್ಲಯನ
ಹಾರಲು ಕಿವಿಯು ವಿರುಪಯನ।

ಜೋರುಗಾಯವು ಸಾಮಿ ವೀರ ಹನುಮಯ್ಯಗೆ
ತಾರ ಮಲಗಿದ ಮಾಯಣ್ಣ ||೨೦೬||

ಏರು ಬೀಳಲುತನ ಆದುದು ಹೀನಾಯ
ರಾಮ ಕರಗುವ ಮನದೊಳಗೆ|
ಕಾಹಳೆ ಹೊಲೆಯಾಗೆ ಬಿರಿದು ತನ್ನಯದೆಂದು
ಆಗಲು ಅದಕೇನು ಅನ್ಯಾಯ ||೨೦೭||

ಮಂದಿ ನೋಯಲು ಬಹಳ ನೊಂದುಕೊಂಬರೆ ತಮ್ಮ
ಹಿಂದೆ ನೋಯರೆ ಎನ್ನ ಕಡೆಯ|
ತಂದುಕೊಳ್ಳದೆ ಸಿಟ್ಟು ಸರಿಗುಡಿಯಾಡದ ಮೇಲೆ
ತಾ ಅಂದ ಮಾತಿಲ್ಲಿ ಸರಿ ಬಂತು ||೨೦೮||

ಆಗಲಿ ಅಣ್ಣಯ್ಯ ಸೋಲುಗಳು ಉಂಟು
ನೋಡುವ ಬರಲೊಂದು ಆಟ|
ಕೈಲಾಸಪುರಕವರು ಹಾದಿ ತೋರುವರೆಂದು
ಬಡಿದಾಟ ಯಾತಕೆ ಆಡೆನಲು ||೨೦೯||

ಹಿಡಿಯಲು ಚೆಂಡಲ್ಲಿ ಜರಿಮಲೆಯ ಮುಮ್ಮಯ್ಯ
ಗಿರಿಗೆ ಎರಗುವ ಸಿಡಿಲಂತೆ|
ಹೊಡೆಯಲಾಕ್ಷ[ಣ] ಲೆಗ್ಗೆ ಮುರಿದು ಪೋಪವನು ಏಳೆ
ಗಗನ ಮಂಡಲವ ಸೊಂಕಿಸುತ ||೨೧೦||

ಪುಟಿಯ ಕೊಟ್ಟನು ನಿಲ್ಲಿ ಹೆದರಿ ಓಡಲಿ ಬೇಡಿ
ಒದಗಿ ಎಲ್ಲರು ಬಿಡದಂತೆ|
ಎದೆಗೊಟ್ಟು ಕುರುಬರ ಮಲ್ಲನು ಹಿಡಿಕೊಂಡು
ತಲೆ ಕೆಳಗಾಗಿ ಮಲಗಿದನು ||೨೧೧||

ಸಾಗಿದ ಮುಮ್ಮುಯ್ಯನ ಲವಣವನ ಕಳೆದಿರಿ
ಹೋಗಿ ಬರಲು ಸತಿಯ ನೋಡಿ|
ಯಾರಿನ್ನು ಇಡುವವನ ಮೋರೆ ನೋಡುವೆ ಕೇಳಿ
ಹಾರಿಸಿಟ್ಟರು ಚೆಂಡ ನಗುತ ||೨೧೨||

ಬಂದು ಹಿಡಿಯಲು ಚೆಂಡ ಸಂಗಯ್ಯ ಕೋಪದಲಿ
ಗಂಗೆ ರಮಣನೆ ಗತಿಯೆಂದು।
ಹಿಂದಕೆ ತೆರೆದಿಡಲು ತುಂಡಾಗಿ ಲೆಗ್ಗೆಯು
ಚೆಂಡೇಳೆ ಪುಟಿಯು ಚೆನ್ನಾಗಿ ||೨೧೩||

ಬರುವ ಪುಟಿಯನು ನೋಡಿ ಏಳಲ್ಕೆ ಕುರುಬರ
ಮರಿಮಲ್ಲ ಹೋಗಿ ಎದೆಗೊಡಲು।
ಲಗಡನು ಎರಗಿದ ರವದೊಳು ಭೋರ್ಮೊರೆದು ಚೆಂಡನು
ಮರನಾಗಿ ಬಿದ್ದ ತಳಕೆಳಗ ||೨೧೪||

ಹಿಡಿಯಲಾರದೆ ಬಿಟ್ಟ ಬಡಯೆದೆಯ ಪಾಪಿಯೆಂದು
ಕೆಡೆದು ಓಡಲು ರಾಮನಾಳು।
ಹಿಡಿಯಲು ಹಳ್ಳವನು ಬಲ್ಲಿದರು ಗೋಡೆಯ
ಹಿಡಿದು ಇಗೊ ಬಂದೆನೆಂದೆನಲು ||೨೧೫||

ಗರಳ ಬೊಬ್ಬೆಯ ಮಾಡೆ ಉರುಬುವರು ಮುಂದಕ್ಕೆ
ಮದವೆದ್ದು ಕರಿಗಳಂದದಲಿ।
ತೋ[ರೆದಲು]ಗಲು ಮುದ್ದು ಹೊಡೆಯೆ ಸಂಗಮನಾಥ
ನಡೆಯಲು ತಪ್ಪಿ ಇಬ್ಬೆರಳ ||೨೧೬||

ಚೆಂಡು ತಪ್ಪಿತು ಸ್ವಾಮಿಯೆಂದು ರಾಮಗೆ ಪೇಳೆ
ದಂಡನಾಗ್ರದಲಿ ತಾ ನಡೆಯೆ।
ಕಂಡು ಕಾಟನ ಮಂದಿ ಮನ್ನೆಯರೆಲ್ಲ
ಬಂದುದು ವಿಧಿಕಾಲ ತಮಗೆ ||೨೧೭||

ಮೂರು ರಾಯರ ಗಂಡ ರಾಮನೋಡುವನೆಂದು
ಸಾರಲು ಕಹಳೆ ಶೋಕದಲಿ।
ಪೂರಿತು ಇಲ್ಲಿಗೆ ರಾಣಿ ರತ್ನಿಯ ಮನೆಯ
ಸೇರುವುದು ಚೆಂಡೆಂದು ನುಡಿಯೆ ||೨೧೮||

ಹೊಡಲು ಲೆಗ್ಗೆಯ ರಾಯ ಕಾಟನ ಮಂದಿ
ಆ ಧೀರರು ರಾಮನ ಮುಂಡಾಡುತಿರಲು।

ಭೇರುಂಡನಂದದಿ ಅಕ್ಕಸಾಲೆಯ ಚಿಕ್ಕ
ಹಾರುವಂದದಿ ಲೆಗ್ಗೆ ಇಡಲು ||೨೧೯||

ಲೆಗ್ಗೆ ಬೀಳಲು ಚೆಂಡು ಎದ್ದು ಮೇಗಕೆ ಹಾರೆ
ಅಬ್ಬಣ್ಣನೆಂಬವ ಪಿಡಿದ।
ಎದ್ದನು ಚಿಕ್ಕಣ್ಣ ಯಮನೂರ ಒಡೆಯಗೆ
ಉದ್ಯೋಗ ಮಾಡುವರೆ ಕೊಳ್ಳ ||೨೨೦||

ಹೋದರೆ ಏನಣ್ಣ ಬಂದೆನು ಬಡಮಗನು
ವೀರ ರಾಮಯ್ಯನ ಬಲ ಭುಜವು।
ತಾರೆನುತ ಎಡಗೈಲಿ ಚೆಂಡ್ಹಿಡಿದು ಹಂಪ
ಹಾರುವಂದದಿ ಇಡಲು ಲೆಗ್ಗೆ ||೨೨೧||

ಲೆಗ್ಗೆ ಬೀಳಲು ನೋಡಿ ನೆಗೆದು ಕಾಟನ ಮಂದಿ
ಎದ್ದರು ಎರಳೆಯಂದದಲಿ।
ಒಬ್ಬೆ ಓಣಿಯ ಪಿಡಿದು ಹಮ್ಮೀರಖಾನರು ಬರಲಿ
ನಿರ್ಝರದೊಳು ಹೊಡೆಯೆ ಹಂಪ ||೨೨೨||

ಎದ್ದ ಗಳಿಗೆಯ ಫಲ ನೋಡುವರಾಗಿ
ಅರ್ಧವ ಪಿಡಿಯೆ ಚಿಂದಿಯನು।
ರುದ್ರಭೂಮಿಯ ಕಾಟೆ ವಿಧಿಯು ಅಳಿವುದುಯೆಂದು
ಇದ್ದ ಮನ್ನೆಯರು ತಲೆದೂಗೆ ||೨೨೩||

ರಾಯ ರಾಮನು ಬಂದ ತಾನೊಮ್ಮೆ ನೋಡುವೆ
ಭೀಮನಣ್ಣಯ್ಯನ ತ್ರಾಣವನು।
ತಾರೆನುತ ಚೆಂಡನು ಹಿಡಿಯಲಾಕ್ಷಣದೊಳು
ನಡುಗಲು ಕಾಟನ ಮಂದಿ ||೨೨೪||

ಕಂಡನು ಕಾಟಣ್ಣ ಪ್ರಚಂಡ ರಾಮನ ಕೋಪ
ಗುಂಡಿಗೆ ಒಡೆದು ತಲ್ಲಣಿಸಿ।
ಇಂದಿಗೆ ಸರಿ ನಮ್ಮ ತಂದಂಥ ಪಡಿಸಾರ
ಹೊಂದಲಮ್ಮರು ಲೆಗ್ಗೆ ಬಳಿಯ ||೨೨೫||

ಬೇಡವೊ ಸಿಟ್ಟುಗಳು ಮೂರು ರಾಯರ ಗಂಡ
ಯಾರಿಲ್ಲಿ ನಿನ್ನ ತಡೆವವರು।
ಈಡುಂಟೆ ನರಿ ಲಕ್ಷ ಆನೆ ತೆರಳಲು ಮುಂದೆ
ಹೀನಾಯ ಬರದೇನೊ ಕಡೆಗೆ ॥೨೨೬॥

ತನ್ನನೊಳಕೊಂಡನೆಂದು ಹಮ್ಮೇನೊ ಕಾಟಣ್ಣ
ಬ್ರಹ್ಮಾಂಡದೊಳಗೆ ಮೊನೆಗಾರ।
ಮುಂದೆನಗೆ ಅಪಕೀರ್ತಿ ಸೋತರೆ ಬರಬಹುದೆ
ಭ್ರಮೆಯೇನೊ ನಿಲ್ಲು ಅಣ್ಣಾಜಿ ॥೨೨೭॥

ಮೊದಲಾಟ ಮೊನೆಗಾರ ಚದುರರೆಲ್ಲರು ಕೊಟ್ಟ
ಬಗೆಯಾವುದಣ್ಣಯ್ಯ ನಿನಗೆ।
ಬೆದರಲೇತಕೆ ನಿಲ್ಲಿ ಎದೆಗೆಡಲು ತಾ ಬಿಡೆನು
ಹಿಡಿದನು ಮುತ್ತಿನ ಚೆಂಡ ॥೨೨೮॥

ಹೂಡಿರೊ ಲೆಗ್ಗೆಯ ಆಡುವೆನೊಂದಾಟ
ರಾಯ ಮನ್ನೆಯರ ಸಾಹಸವ।
ಹೇಡಿಯಾಗಲು ಬೇಡಿ ಭೀಮನ ನಾ ಮುನ್ನ
ಮೂಡಿ ಇರುವವೆ ಕರ ನಾಲ್ಕು ॥೨೨೯॥

ಅಂಜಲೇತಕೆ ಎರಡು ಕೊಂಬುಂಟೆ ತಲೆಯೊಳು
ನಾವುಂಬ ಊಟ ಬೇರೆ ಬದಲೆ।
ಬಂದುದಿಲ್ಲವೆ ನರನೆಂಬ ಜನ್ಮದಿ ಒಯ್ಯುತ
ಬಂಧದೊಳಗೆ ಜನಿಸಿದನೆ ॥೨೩೦॥

ಭಯ ಬರುವುದಾರಿಗೆ ಈ ಬಗೆಯ ಛಲವನು ಮಾಡೆ
ಹೆದರುತ ಮೆಲ್ಲನೆ ಬರಲು।
ಎದೆಯೊಳು ಪರಮಾತ್ಮ ಹೊಡೆದುಕೊಳ್ಳುತ ಬಂ[ದ]
ಬೆದರುತ ಲೆಗ್ಗೆಯಾಡುವರು ॥೨೩೧॥

ಹಿಡಿಯಲು ಕೊ[ಟ್ಟೆ]ನು ಮೊದಲಾಟ ಹರ ಶಂಭು
ಪುರದ ಜಟ್ಟಂಗಿರಾಮಯಗೆ।

ಈ ಮೇಲೆ ತನ್ನಾಟ ಕಾಣೆನೆಂದರೆ ಬಿಡೆನು
ಭೀಮನಾರ್ಭಟದೊಳು ನಿಲಲು ||೨೩೨||

ಎತ್ತಿದ ಬಲದೊಳು ಮೆಟ್ಟಿದ ಎಡಗಾಲ
ಸಿಟ್ಟಿಲಿ ಹನುಮ ಕೋಪದಲಿ।
ಇಟ್ಟನು ಲೆಗ್ಗೆಯ ಪೊಟ್ಟರು ಉಪ್ಪರಿಗೆ
ನಿಟ್ಟೋಡಲು ಚೆಂಡು ಪುಟವೇಳೆ ||೨೩೩||

ಪುಟವನು ಸುಡು ನಮ್ಮ ಘಟಗಳುಳಿಯವೆಂದು
ಉಸುರಲಮ್ಮದೆ ಒಬ್ಬಗೊಬ್ಬ।
ಪಶು ಹಿಂದೆ ವ್ಯಾಘ್ರನ ಹೊಸಗಾಳಿ ಬಂದಂತೆ
ದೆಸೆಗೆಟ್ಟು ಓಡೆ ನೃಪರೆಲ್ಲ ||೨೩೪||

ತೂರಾಡಲು ಮೂರು ಬಾಣ ದೆಸೆಗಲಿ ತಮ್ಮ
ಮೋರೆಗಳ ಸುಳುಹು ಸೂಚನೆಯ।
ನೋಡಿದ ರಾಮ ಇನ್ನಾರೊಡನೆ ಆಡುವೆನೆಂದು
ತೋರುವರಿಲ್ಲ ಬಂದೆನುತ ||೨೩೫||

ಯಾತರ ಬಂಡಾಟ ರಣಭೀತಿ ಕಳ್ಳರ ಕೂಡೆ
ಬೇಟೆಗಾರನ ಎರಳೆ ಕಂಡಂತೆ।
ಸೋತಾಟಯೆನ್ನರೆ ರಣಭೂತನೆ ನಾ ಮುನ್ನ
ಮಾತಲ ಬನ್ನಿ ಮನ್ನೆಯರೆ ||೨೩೬||

ಹೆದರ ಬೇಡಿರೆ ಬನ್ನಿ ಹಿಡಿದುಕೊಂಬೆನು ಕೈಯ
ಹೊಡೆಯಲು ತನಗೆ ಮರುಳುಂಟೆ।
ನಡೆಯದೆ ಅಪಕೀರ್ತಿ ಧರಣಿಯಿರಲು ಪ್ರಾಣ
ಮಡಿದರೆ ರಾಮನ ಚೆಂಡಿನೊಳಗೆ ||೨೩೭||

ಅಣ್ಣಾಜಿ ಇಡಲದು ಕಣ್ಣಗಾಣದ ಬುದ್ಧಿ
ಬ್ರಹ್ಮಾಂಡದೊಳಗೆ ಅಪಕೀರ್ತಿ।
ತನ್ನೊಳಗೆ ಬಾ ಬುದ್ಧಿ ಮುನ್ನಿಲ್ಲ ಬರಲೆಂದು
ಧರ್ಮ ನಂಬುಗೆಯ ಕೊಡಲಾಗಿ ||೨೩೮||

ಆಡಿ ತಪ್ಪುವನಲ್ಲ ಮೂರು ರಾಯರ ಗಂಡ
ದೇಹದ ಹಂಬಲ ತೊರೆದು।
ಏರಿದನಲ್ಲೊಬ್ಬ ವೀರ ಸಂಗಮನಾಥ
ಸಾರುತ ಲೆಗ್ಗೆ ಬಂತೆನುತ ॥೨೩೯॥

ಮಿಕ್ಕು ಹಿಡಿವನು ಲೆಗ್ಗೆ ಮೀನಾಂಕ ಚೆನ್ನಿಗರಾಮ
ಪಕ್ಷಿಗೆರಗುವ ಲಗಡನಂತೆ।
ತರ್ಕೈಸಿ ಪಿಡಿಕೊಂಡು ಅಕ್ಕನ ರಮಣನ
ನಕ್ಕನು ರಾಮ ಹಾಸ್ಯದಲಿ ॥೨೪೦॥

ಹೂಡಿರೊ ಲೆಗ್ಗೆಯ ನೋಡುವ ಇನ್ನೊಮ್ಮೆ
ಜೋಡಾಟದೊಳು ಸೋಲು ಗೆಲುವು।
ಕೂಡಿತ್ತು ಹಿಂದಣ ಹರನಾಡಿದ ಕಂಟಕ ಮಾ
ತಾಡಲು ಚೆಂಡ ಕರದೊಳಗೆ ॥೨೪೧॥

ಹಿಡಿಯಲು ಚೆಂಡಲ್ಲಿ ನುಡಿಯಲು ಗೌಳಿಯು
ಹಿಡಿಸುವದು ರತ್ನಿ ಕೈಯೊಳಗೆ।
ಹೊಡೆಸುವಳು ತಲೆಯಾಕೆ ಪಡೆದವನ ಕರದೊಳಗೆ
ಕಡೆಗೊಬ್ಬರಿಂದ ಉಳಿವೆನಲು ॥೨೪೨॥

ಹಿಡಿಸುವ ಬಳಿಮೂಲ ತಿಳಿದು ನೋಡಲಿ ಬೇಕು
ಬರೆದಿಹುದೆ ಚೆಂಡು ಪಣೆಯೊಳಗೆ।
ಮೃಡವಾಸ ಎಡವಾಸ ಎಡದಿನ್ನು ಕೊಲ್ಬುದೆ
ಹೊಡೆದೆ ನೋಡುವೆನು ಈ ಸಾರಿ ॥೨೪೩॥

ಚೆಂಡಿನ ಛಲಪದವ ಕಂಡುನೋಡಲಿ ಬೇಕು
ದಂಡಧರನ ಕೋಪದೊಳಗೆ।
ಮುಂದಕ್ಕೆ ಅಡಿಯಿಟ್ಟು ಹನುಮೇಂದ್ರನಂದದಿ ಹೊಡೆಯೆ
ಕಂಡವರಿಲ್ಲವೆ ಲೆಗ್ಗೆ ಕುರುಹ ॥೨೪೪॥

ಹಾರಿದ ಲೆಗ್ಗೆಯ ನೋಡದೆ ಎಲ್ಲರು
ಓಡುವರು ಎಡವಿ ಬೀಳುತಲಿ।

ನೋಡಲಮ್ಮರು ತಿರುಗಿ ದೂರದೃಷ್ಟಿಯ ಮೇಲೆ
ರಾಮ ಹೊಡೆಯಲು ಶಕ್ತಿಯಲಿ ||೨೪೫||

ಬಿರಿಗೋಪದೊಳು ಹೊಡೆಯೆ ಗಗನ ಮಂಡಲಕಡರಿ
ಇಳಿಯುತಿರಲು ರತ್ನಿ ಮನೆಗೆ।
ಹರಹರ ಪಲ್ಲಿಯ ನುಡಿ ಮುನ್ನ ನಿಜ ಬಂತು
ಬೆರಳಿಟ್ಟ ರಾಮ ನಾಸಿಕ[ಕೆ] ||೨೪೬||

ಬೀಳುವ ಚೆಂಡನು ಕಾಣುತ್ತ ರಾಮನು
ತಾಯಿ ಹೇಳಿದ ಮಾತು ಬಂತು।
ಸ್ವಾಮಿ ದ್ರೋಹಿಯು ಅಹುದು ಸಟೆಯಲೆನ್ನುತಲಿರ್ದೆ
ಭೂಮಿ ಪಾಲಕರ ಕೆಡಿಸಿಹುದು ||೨೪೭||

ತಣ್ಣಗಾದುದು ಆಟ ತಿನ್ನಿ ಹುರುಳಿಯ ಕಾಳ
ನಿರ್ಮಳವಾಯಿತ್ತೆ ನಿಮಗೆ।
ಇನ್ನೇನು ಆಡುವಾ ಅಮ್ಮ ರತ್ನಿಯ ಸೇರಿ
ಹಣ್ಣುವುದು ಇನ್ನೊಂದು ಕಥೆಯು ||೨೪೮||

ಧರೆಗಧಿಕ ಹಂಪೆಯ ವರ ಪುಣ್ಯಕ್ಷೇತ್ರದ
ಕರುಣೆಸು ವಿರುಪಾಕ್ಷಲಿಂಗ।
ತರಳ ರಾಮನ ಚೆಂಡು ದುರುಳ ರತ್ನಿಯ ಸೇರೆ
ಬಳಿಗೆ ಏಳು ನಾಲ್ಕು [>ಐದು]ಸಂಧಿ ||೨೪೯||*

❖❖

* + ಅಂತು ಸಂಧಿ [೧೨] ಕ್ಕಂ ಪದನು ೨೫೫ಲಕ್ಕಂ ಮಂಗಳ ಮಹಾಶ್ರೀ(ಮೂ).

ಸಂಧಿ : ಹದಿಮೂರು

❖

ರತ್ನಾಜಿಯ ಅರಮನೆಗೆ ಚೆಂಡು ಬೇಡಲು ಹೋದುದು

---

*ಶ್ರೀಗುರು ಹರ ಶಂಭು ಭಾಗೀರಥೀಶನೆ
ನಾಗಭೂಷಣನೆ ನಗಚಾಪ।
ಭೂಮಿ ಬ್ರಹ್ಮಾಂಡಗಳಿಗೆ ಆಧಾರ ಕರ್ತನೆ
[ವೃಷಭ]ವಾಹನ ಕೊಡು ಮತಿಯ ॥೧॥

ಮತಿಯನು ಪಾಲಿಸು ಮೊರದಗಲ ಕರ್ಣ[ನೆ]
ಸುಖದೋ[ರು] ಕರಿಮುಖದವನೆ।
ಅಖಿಳ ಬ್ರಹ್ಮಾಂಡಕ್ಕೆ ಅಧಿಕಾರಿ ವಿದ್ಯದ
ಗಣಪತಿಯೆ ಕೊಡು ಎನಗೆ ಮತಿಯ ॥೨॥

ಬಾಯೊಳು ಇರುವಾಕೆ ನಿಜವೆ ಅಕ್ಷರದ
ರಾಣಿಯೆ ವನಜಸಂಭವಗೆ।
[ಸತಿಯಾಗಿ] ಬಂದೆನ್ನ ಜಿಹ್ವೆ ಭಾಗದಿ ನಿಂದು
ಸಾಗಿಸು ಮುಂದಣ ಕೃತಿಯ ॥೩॥

ಕಾಶಿ ಕೈಲಾಸಕ್ಕೆ [ಲೇಸು]ವೆನಿಸುವ ಹಂಪೆ
ಗೌರೀಶ ವಿರುಪಾಕ್ಷಲಿಂಗ।
ಲೇಸನು ಕರುಣಿಸು ಪ್ರಾಸ ಬೀಳದ ತೆರದಿ
ರಾಮನ ಕೃತಿಯ ಪೇಳುವೆನು ॥೪॥

---

* + ಶ್ರೀ ಗುರು ಬಸವಲಿಂಗಾಯ ನಮಃ (ಮೂ)

ಸತ್ಯರಾಮನ ಕೃತಿಯ ಲಾಲಿಸಿ ಕೇಳಿ[ರಿ]
ಉತ್ತಮರು ಭಕ್ತಿಜ್ಞಾನಿಗಳು।
ತಪ್ಪಲ್ಲ ತರಳನು ಸತ್ಯಕ್ಕೆ ನಡೆದಾನು
ಕತ್ತಲೆ ಬೆಳಕೆಂದು ತಿಳಿದು ||೫||

ಹಾಲನು ಕುಡಿ[ಸನು] ಮೂ[ಳ] ಎನ್ನಲಿ ಬೇಡ
ಹೀನಗಾಣಲು ನಿಮ್ಮ ಮನಕೆ।
ದ್ರೋಹಿಯ ವಚನಾರ್ಥ ಕೇಳಿ ಫಲವಿಲ್ಲೆಂದು
[ಆ]ಡಲು ನಿಂದೆ ತನಗೇನು ||೬||

ಸತ್ಯದಲಿ ನಡೆದವ[ರು] ಪೃಥ್ವಿಯೊಳ್ ಶರಣ[ರು]
ಹುಟ್ಟಬಾ[ಹರು] ಪ್ರತಿಯಾಗಿ।
ಲಕ್ಷ ಉಳಿ ಕೊಡತಿಯ ಪೆಟ್ಟು ನಿರ್ವಹಿಸದೆ
ಸೃಷ್ಟಿಯೊಳ್ ಲಿಂಗವೆನಿಸುವುದೆ ||೭||

ಹರನಾಗೆ ಹರಿಯಾಗೆ ಪರಬ್ರಹ್ಮ ಋಷಿಯಾಗೆ
ಧರೆಯಾ[ಗ] ನರಕ ಭಯ ಪಡೆದು।
ಪರ[ಸತಿ]ಯ ತನ್ನಯ ಹೃದಯದಲ್ಲಿ[ಯೆ] ನೆರೆಯೆ
ಸ್ಮರಣೆ ಕೇಳಲು ಫಲವುಂ[ಟೆ] ||೮||

ಬಾಯೊಳು ಬ್ರಹ್ಮತ್ವ ನಡೆಯೊಳು ನೀಚನ
ನುಡಿಗೇಳಿ ಎಡಬಲ ಸುಳಿಯೆ।
ತೊಡರದೆ ಭವಕರ್ಮ ತ್ರಿಶಂಕು ಹೊಲತಿಗೆ ಮೆಚ್ಚಿ
ಸುಡಗಾಡ ಕಾಯ್ದು ಅಭವ ಕಂಡ ||೯||

ಕೀರ್ತಿಗಳು ಅಪಕೀರ್ತಿ ಭೂಮಿಯಲಿ ಸ್ಥಿರತರವು
ಹೊದರ ಮಾತು ತನಗೇಕೆ।
ಆಡಿದ ಚೆಂಡ್ಹೋಗಿ ಅರಮನೆಯ ಸೇರಲು
ಚೆನ್ನಿಗ ರಾಮ ಚಿಂತೆ ಮಾಡುತಲಿ ||೧೦||

ತಾಯಿ ಹೇಳಿದ ಮಾತು ತಲೆಯ ತಾಕಿತು ಅಣ್ಣ
ಮಾಯದ ವಿಧಿಯಂಥ ಚೆಂಡು।

ಹೋಗಿ ಬಾ ಅಣ್ಣಯ್ಯ ತಾಯಿ ರತ್ನಿಯ ಮನೆಗೆ
ಕೇಳಯ್ಯ ಚೆಂಡ ದೈನ್ಯದಲಿ ||೧೧||

ಹೋಗಲು ತನಗೇನು ಅನುಮಾನ ಬಡುವೆನೆ ತಮ್ಮ
ರಾಯನಿಲ್ಲದ ಅರಮನೆಯು।
ಬಾಲೆಯರ ಮನಚಿತ್ತ ಕಾಣದು ಹೋಳವ
ಆವ ಕಡೆಗಾಡುವಳೊ ಕಡೆ ಮಾತ ||೧೨||

ಅರಸಿರಲು ಚೆಂಡಲ್ಲಿ ಬೀಳ್ವ ಸಮಯದಿ ಪೋಗಿ
ಘಳಿಲಸೆ ತರುವೆ ನಿಲ್ಲುವೆನೆ।
ಕುಲವಲ್ಲ ಅದರೊಳು ಕಲೆಗಾತಿ ಭುವನದ
ಹಲವರೆಂಜಲನು ತಿಂದವಳು ||೧೩||

ವಿಭೂತಿ ಧರಿಸಿದ ಮೂಲವೇತಕೆ ತರುವೆ
ಬಾಲರೆಂಬುದ ಅರಿಯವದಳೆ।
ಮಾಡಿದ ಫಲಪದವ ಯಾರು [ಉಂ]ಬರು ಅಣ್ಣ
ವಿಚಾರಕರ್ತನೆ ಅದಕೆ ಬೇರೆ ||೧೪||

ತಾಯೊಡನೆ ಅನ್ಯಾಯ ನಾವು ಹುಡುಕಲು ಸಲ್ಲ
ಭಾವಿಸದೆ ಸತ್ಯಭಾವೆಂದು।
ನೀ ಹೋಗಿ ಕರಮುಗಿದು ಪ್ರಿಯದಿಂದಲಿ ಕೇಳು
ದಯಮಾಡಿ ನೀ ತರಲಿ ಬೇಕು ||೧೫||

ಅನುಜರಿರ್ವರು ಆಡುವ ನುಡಿಯ ವಚನವ
ನಾಡ ಮನ್ನೆಯರೆಲ್ಲ ಕೇಳಿ।
ಏನು ಒಳಗಣ ಗಾತ್ರ ಪಾಲಿಸೆಮಗೆ ವೀಳ್ಯ
ಬಾಯ ಮೇಲ್ಹೊಡೆದು ತರುವೆವು ||೧೬||

ಸತಿಯ ಮಾತಿಗೆ ರಾಯ ಮಥನಿಸಿ ಬರುವನ
ಹೊಸಮಲೆ ಕುಂಭಿನಿಯಲ್ಲಿ।
ಮತಿಭ್ರಮೆ ತಿಳಿವನ ಮಡ[ಗಿ]ನ್ನು ಸೆರೆಯೊಳಗೆ
ಹೊಸಪಟ್ಟ ನಿಮಗೆ ಮಾಡುವೆವು ||೧೭||

ಸ್ನೇಹಿತರ ನುಡಿಗೇಳಿ ಕರ್ಣದಿ ರಾಮಯ್ಯ
ಗಹಗಹಿಸಿ ನಗಲು ಶಿವಯೆನುತ।
ಯಾವಲ್ಲಿ ಈ ಕರ್ಮ ತಾ[ನು] ಕಳೆಯಲಿಬಹುದು
ಮೂ[ಲ]ಕರ್ತನ ಕೊಂದರುಂಟೆ ॥೧೮॥

ಲಾಲಿಸಿ ಎಲ್ಲವರು ಪೇಳುವೆ ಧರ್ಮವಾಕ್ಯ
ಮೀರಿದರೆ ಹಾಗೆ ಮಾಡುವುದು।
ಹಾಲ ಕುಡಿಸಲು ಕಷ್ಟ ರೋಗವು ಬಂದಲ್ಲಿ
ಸ್ನೇಹದಿ ವಿಷವ ಮೆಲ್ಲಿಸರೆ ॥೧೯॥

ತೃಣ ಮಾತ ಪರ್ವತಕೆ ಸಮನೇಕೆ ಮಾಡುವಾ
ನವತಂತ್ರಮಾಡಿ ತರಿಸುವೆನು।
ಕಳುಹುವೆನು ಅಣ್ಣಯನ ತಿಳಿವುದಕೆ ಈ ಭೇದ
ಕೊಡುವಳೊ ಕಲಹ ಮಾಡುವಳೊ ॥೨೦॥

ರಾಯ ರಾಮನು ಹೀಗೆ ಉಪಾಯ ತಂತ್ರಗಳನು
ಪೇಳುತಿರುವನು ಎಲ್ಲರಿಗೆ।
ಗಾಡಿಕಾತಿಯು ರತ್ನಿ ತಾ ಬರಲು ಅಂಗಳಕೆ
ಉರುಳಾಡುವ ಚೆಂಡ ಕಂಡು ॥೨೧॥

ಕಂಡಳು ಕಾತರದಿ ರಂಭೆ ಪ್ರಿಯನ [ಚೆಂಡ]
ಸಂಭ್ರಮದ ಶರಧಿಗೆ [ಚಂದ್ರ] ।
ಬಂದಂಥ ಒಲವಾಗಿ ಬಾಚಿ ತಬ್ಬಿ[ದಳ್ ತನ್ನ]
ಕುಂಭಕುಚದ ನಡು ಮಧ್ಯೆ ॥೨೨॥

ಬೇಡಿದ ಹರಕೆಯ ದಯಮಾಡಿದ ಹರ ಶಂಭು
ಶ್ರೀ ಗೌರಿಪ್ರಾಣದೊಲ್ಲಭನು।
ತಾವರೆ ಸಖ ಬರಲು ಬಾಯ ಬಿಡುವಂದದಿ
ಮುಂದಾಡುತ ಚೆಂಡ ಮೋಹಿಪಳು ॥೨೩॥

ಬಾಡಿದ ವೃಕ್ಷಕ್ಕೆ ಮಳೆಗಾಲವಾದುದು ದೇವ
ಸತ್ಕೃಪೆಯು ತನಗೆಂ[ದಳು] ರತ್ನಿ।

ಜೀವಳಿವ ಕಾಲದಿ ಮರುಜೆವಣಿ ದೊರೆತಂತೆ
ಪ್ರಿಯಗಾರನ ಚೆಂಡು ಬಂತು ||೨೪||

ಸಾಯಬೇಕೆನುತಿರ್ದೆ ತಾಯೆ ಕೇಳೆಲೆ ಸಂಗಿ
[ಆ] ದೇವರಿಗೆ ದಯೆ ಬಂತು।
ಪ್ರಾಣ ಅಳಿವಳುಯೆಂದು ರಾಮನ ಮನಹೊಕ್ಕು
ಮುಂದಾಗಿ ಕಳುಹಿದನು ಚೆಂಡ ||೨೫||

ತಂದಳು ಚೆಂಡನ್ನು ಹರುಷ ಶಾಂತಿಗಳಾಗಿ
ಹರ[ಹರ] ಸೆಜ್ಜೆ ಗೃಹದಲ್ಲಿ।
ಹರುಷದಿ ಮಂಚವ ರಚಿಸಿ ಹಾಸಿಗೆ ಮಾಡಿ
ಇರಿಸಿ ಪೂಜಿಸಲು ಪರಿಪರಿಯ ||೨೬||

ಬಾರನೆ ಸಂಗಾಯಿ ಈ ಮೇಲೆ ಚೆಂಡೆನ್ನ
ಸೇರಲು ತಾರಮ್ಮ ಎನುತ।
ಆಳಿಗೆ ಕಡೆಯೇನೆ ಹೋಗೆನಲು ಇಲ್ಲಿಗೆ
ತಾರಾದೇನೆ ತರತರದಿ ||೨೭||

ಜಾಲ ಮಾತುಗಳನು ಆಡಬೇಡವೆ ಸಂಗಿ
ಆಳು ಬರಲವನಾ ಎದೆಯೇಟು।
ತಾರಮ್ಮ ಚೆಂಡನೆಂದರೆ ನಾಲಗೆಯ ತೆಗೆಸುವೆ
ಸೀಳಿ ಹೆಡತಲೆಯ ನೆತ್ತಿಯಲಿ ||೨೮||

ಅರಸಿಲ್ಲದ ಮನೆಗೆ ಬರಲವನ ಈ ಕ್ಷಣವೆ
ಪಣೆಯ ಲಿಖಿತವ ತೊಡೆಸುವೆನು।
ವಿನಯ ರಾಮನು ಬಂದು [ಮು]ಖದೋ[ರೆ] ಒಯ್ಯಲು
ಕಾಣ ಬರಿದೆ ಕೇಳಲು ಕಾಣೆನೆಂಬೆ ||೨೯||

ಬಹದೃಷ್ಟಿಲ್ಲದೆ ಕಳುಹಿ ಕೊಡುವೆನೆ ಚೆಂಡ
ಜನರ ಮೆಚ್ಚಲು ಹೊದಾದೆನಿಸಿ।
ತರುವೆನು ಎನುತಲಿ ಗೆಣೆಯರೊಡನೆ ಪೇಳೆ
ಬರುವುದಕೆ ಹದನ ಮಾಡಿಹನು ||೩೦||

ಆಡುವಳು ತನ್ನಯ ಬಾಯಿಗೆ ತಿಳಿದಂತೆ
ನಾಯಿ ಕೂಗುವ ರೀತಿಯಲಿ।
ದ್ರೋಹಿಯ ಮಾತನು ಲಾಲಿಸಿ ಚೆಂಡಿಗಿ
ವೀರ ಕಾಟಣ್ಣ ಬರುತಿರಲು ||೩೧||

ಹೇಳುವ ಮನ್ನಣೆಯ ರಾಮ ಕಾಟಗೆ ಬುದ್ಧಿ
ಹೋಗಯ್ಯ ಚೆಂಡ ತರುವುದಕೆ।
ಸಾಗಲಿಲ್ಲವೊ ಆಟ ಸಮನಾಗಿ ಅರ್ಧವು
ಕಾಲಗತಿಯೊ ಭೂಮಿ ಲಕ್ಷಣವೊ ||೩೨||

ಹೋಗುತಲೆ ಹುರುಗೆಜ್ಜೆ ಚೋರನು ಕರವಿಟ್ಟ
ಗಾದೆಯಾದುದು ಕಾಟಣ್ಣ।
ದೂರೆಮಗೆ ಬಿಡಲಿಲ್ಲ ಆಡಿದರು ಚೆಂಡೆಂಬ
ಹೊಡೆದಾಡದೆ ಸಮರಸದೊಳಗೆ ||೩೩||

ನಗೆಗೇಡಾಯಿತು ಕಾಣೊ ಸುಗುಣ ಚೆನ್ನಿಗ ರಾಮ
ಹಗೆ ಮುಂಡೆ ಮನೆಗೆ ಚೆಂಡ್ಹೋಗಿ।
ಕುಲಹೀನ ರಂಡೆಯ ಕೈಯೊಡ್ಡಿ ಬೇಡುವ ಹಗರಣವ
ತಂ[ದಿತ್ತೊ] ವಿಧಿಯೆಮಗೆ ||೩೪||

ಬಂದಂಥ ಪಡಿಪಾಟನುಂಡು ತೀರುವುದಣ್ಣ
ಒಲ್ಲೆಂದರೆ ಬಿಡದು ಲಿಖಿತಗಳು।
[ಪಾಂಡುವಿನ] ತನುಜರು ನೊಂದುದ ಅರಿಯೇನೊ ಅಣ್ಣ
ಐವರಿಗಿಂದ ನಾವ್ ದೊಡ್ಡವರೆ ||೩೫||

ತಂದ ಕಂಟಕವನು ಮುಂದೆ ಪರಿಹರಿಸನೆ
ಬಂದು ಕಾಯನೆ ಬೆನ್ನ ಮೇಲೆ।
ಶಿವನು ನಮ್ಮೊಡೆಯ ಅಂಜಲು ಬರುತಿರ್ಪ
ಬಂಧನ ತಪ್ಪುವುದೆ ಪಡೆದು ||೩೬||

ಹೋಗಿ ಬರುವೆನು ಚೆಲ್ವ ರಾಮಭೂಪನೆ ಕೇಳು
ಆಡುವ ಫಲಗಳ ಕಡೆಗೆ।

ತಾನೆದ್ದು ಕೈಮುಗಿದು ರಾಯ ಕಾಟಣ್ಣನು
ಸಾಗಿದ ರತ್ನಿಯ ಮನೆಗೆ ||೩೭||

ಅರಮನೆಯ ಹೋಗಲು ಕಡೆಯ ಬಾಗಿಲ ದಾಟಿ
ನಡುವಣ ತೊಟ್ಟಿಗೆ ಬರಲು।
ಹಡಪದ ಸಂಗಾಯಿ ಕಂಡು ಕರಗಳ ಮುಗಿದು
ಬಿಜಮಾಡಿಯೆನಲು ಪ್ರೀತಿಯಲಿ ||೩೮||

ಸಂಗಾಯಿ ಕೇಳು ಅರಮನೆಗೆ ಸೇರಿತು ಚೆಂಡು
ತಂದು ಕೊಡಮ್ಮ ಹೋಗುವೆನು।
ಕಂ[ಡುದಿ]ಲ್ಲವೊ ಸ್ವಾಮಿ ಕಣ್ಣಿಲಿ ಅಮ್ಮಾಜಿ
[ಗೊ]ಮ್ಮೆ ಕೇಳ್ ಇದನು ನಿಜ ಸಟೆಗೆ ||೩೯||

ತಾಯೆ ಲಾಲಿಸಿ ಕೇಳು ಹಿರಿಯ ಕುಮಾರನು
ಕೇಳುತ್ತ ಬಂದಹನೆ ಚೆಂಡ।
ಭೇದಗಳ ತಿಳಿಯದೆ ಆಡ ಬಂದೆವು ನಾವು
ಕೇಡಿಗಳ ಮಾಡುವರೆ ಅಮ್ಮಾ ||೪೦||

ಕಂಡರೆ ನಿಮ್ಮೆಡೆಗೆ ತಂದು ಕೊಡದಿರುವೆ ತೃಣ
ಚೆಂಡ ತನ್ನೊಳಗೆ ಮಡಗುವರೆ।
ಕಂಡಿಲ್ಲ ನೀವೆನ್ನ ಕಳ್ಳಿಯೆಂಬುವ ಭೇದ
ಏನೆಂಬ ಮಾತುಗಳ ಶಿವ ಬಲ್ಲ ||೪೧||

ಚೆಂಡು ಬಿದ್ದಿದೆಯೆಂದು ಬಂದವನಿವನಾರೆ
ಗಂಡಸಿಲ್ಲದ ಅರಮನೆಗೆ।
ಕಂಡವರು ಬರುವರೆ ಗುಂಡಿಗೆ ಎದೆ ಎಷ್ಟು
ನಾ ಕಂದನೆನುತ ಕರ ಮುಗಿಯೆ ||೪೨||

ಗಂಡ ಮುಪ್ಪಾಗಲು ಕಂಡವರು ಮನೆ ಹೊಕ್ಕು
[ಹೊಂದಿಕೆ ಸ್ನೇಹ] ಮಾಡುವರೆ।
ಮಂಡಲದಿ ಇದು ಸಹಜ ಮಗನಾಗೆ ಮತ್ತೊಬ್ಬ
ಚೆಂಡಿನ ನೆವದಿ ಬರಬಹುದೆ ||೪೩||

ನೋಡಿರೆಲವೊ ಬಂದ ಗಾರುಡದ ಹೊಳ[ಹ]ನು
ಬೇರಬಲ್ಲವಳ ಹಾದರದ।
ಚೋರನ ಕಳತ್ರವ ಒಳಗಾಡಿದವನು ಬಲ್ಲ
ಮೂಢಗೆ ಪೇಳ್ದಂತೆ ಅಲ್ಲವೆ ||೪೪||

ಬೇಟೆ ಹೋಗದೆ ನೀವು ಆಟ ಹೂಡಿದ ಬಗೆಯ
ಬೂಟಕ ತಿಳಿಯದೆ ತನಗೆ ಸಂಗಿ।
ಲೋಕದ ಜನಕೆಲ್ಲ ಚೆಂಡು ಹೋದುದು ಎಂದು
ಒಳಮಾತಿಗೆ ನಿನ್ನ ಕಳುಹಿದನೆ ||೪೫||

ಆಡುವ ಅಪಸತ್ಯ ಚಾಂಡಾಲ ನುಡಿಗಳ ಕೇಳಿ
ರೂಢಿಸಿತು ಕೋಪ ಕಾಟನಿಗೆ।
ಸೂಳೆಯರಮನೆಯೊಳಗೆ ನೀರ ಹೊರುವ ರಂಡೆ
ನೋಡಿ ಮಾತಾಡೆ [ನೆ]ದರಾಗಿ ||೪೬||

ಆಡುವರೆ ಈ ಮಾತ ಅಮಾದಿ ಸಿದ್ಧಿಪನ
ಈ ಭೂಮಿಯೊಳು ಹರಿಶ್ಚಂದ್ರರಾಯ।
ತಾಯೆಂದು ಭಾವಿಸುವ ಪರನಾರಿಯೆಂಬವಗೆ
ಮೂಗನರಿವೆನು ಇನ್ನಾಡೆ ||೪೭||

ಅಪ್ಪಾಜಿಯಿಂದಲು ಮತ್ತೇನು ಬರಲು ಕಾಣೆ
ಎತ್ತಾಕಿ ಮೊಲೆ ಮೂಗನರಿವೆ।
ಕತ್ತೆಯ ಮೇಲಿವಳ ಹತ್ತಿಸಿ ಪುರದೊಳಗೆ
[ಛಿದ್ರ]ವೀಗಳೆ ಮಾಡಿಸುವೆ ||೪೮||

ಕೋಪದಿ ಗರ್ಜಿಸುವ ರಾಯ ಕಾಟನ ಕಂಡು
ತಾ ಬೆದರಿ ರತ್ನಿ ಕಂಗೆಡಲು।
ರಾಯನೂರೊಳಗಿಲ್ಲ ಇವರೇನ ಮಾಡಿದರೆನ್ನ
ತೀರುವುದು ಕಥೆಯು ತನಗೆಂದು ||೪೯||

ತನ್ನಯ ಬುದ್ಧಿಗಳು ಇನ್ನಾವ ಜಾಣ್ಮೆಕೆ
ಮನ್ನಿಸದೆ ಅವ ಬರನು।

ಉನ್ಮಾದ ಕಿಚ್ಚಿಗೆ ತಣ್ಣೀರನೆರೆದಂತೆ
ಒಮ್ಮೆ ಮನ್ನಿಪಳು ಕಾಟಯನ ||೫೦||

ಬಾರಯ್ಯ ಮದಗಜ ಭೀಮ ಕಾಟಯ್ಯನೆ
ಬಾರೆನ್ನ ಭಾಗ್ಯದ ನಿಧಿಯೆ।
ಮಾಡುವರೆ ಕೋಪವ ನಾ ನುಡಿದ ನುಡಿ ನಿನಗೆ
ಕ್ರೋಧಗೊಂಡವೆ ಮನದೊಳಗೆ ||೫೧||

ಮಗನೆ ನೀನಾಗಲು ತಡೆದೆನಲ್ಲದೆ ಕರವ
ಹರನೇಕೆ ಹರಿ ಮುನ್ನ ಬರಲು।
ಸಿಗಿಸಿ ತೋರಣ ಕಟ್ಟಿ ಅರಿಕೆ ಮಾಡುವೆ ಜಗಕೆ
ಪರನೊಬ್ಬ ಪೊಕ್ಕು ಮರಳುವನೆ ||೫೨||

ರಾಯನಿರಲು ಮಗನೆ ಊರೆಲ್ಲ ಬಂದ್ಹೊಗಲು
ಸೋದರರೆಂಬೆ ಮನದೊಳಗೆ।
ತಾನೊಬ್ಬಳಿರುವಾಗ ಯಮರಾಜ ತನ್ನ ಮನೆಯ
ಹೋಗಿ ನೋಡಲು ಪಡೆಯೆ ತೀರಿ ||೫೩||

ಎನ್ನಯ ಸತ್ಯವ ಪರಬ್ರಹ್ಮ ಬಲ್ಲನು ಮಗನೆ
ನಿಮ್ಮಯ್ಯ ಬಲ್ಲನು ಎನ್ನ ದೃಢವ।
ಎನ್ನ ಚಿಂತೆಯಲಾನು ಆಳಿ ಮುಳುಗುತಲಿರುವೆ
ನಿಮ್ಮ ತಂದೆಯ ದಾರಿ ನೋಡಿ ||೫೪||

ಮೂರನೆಯ ದಿನ ತುಂಬಿ ಪೋದುದು ಮಗನೆ
ಏನು ಕಾರಣಕೆ ತಡೆದಿಹರು।
ವಾರಿಜಗಂಧಿಯು ನೀರ ನಯನದಿ ತಂದು
ಏನಪ್ಪ ನೀ ಬಂದ ಕಾರ್ಯ ||೫೫||

ಮಾಯಾ ಜಲದ ಕೂಡೆ ನಾನಾ ವಿದ್ಯವು ಆಡೆ
ಬಹಳ ಮಾತೇಕೆ ಅವಳೊಡನೆ।
ಜಾಣತನದ ಮೇಲೆ ಕೇಳಿ ಹೋಗಲಿ ಬೇಕು
ತಾಯೆ ಕೇಳೆನ್ನ ಬಿನ್ನಪವ ||೫೬||

ಆಡುತಿದ್ದೆವು ಚೆಂಡು ಅರಮನೆಗೆ ಸೇರಿತ್ತು
ಬಂದು ಆಡುವರೆಲ್ಲ ನಿಂದಿಹರು।
ಯಾರನಾದರು ಕಳುಹೆ ನಿಮಗೆ ಬೇಸರುಯೆಂದು
ತಮ್ಮಾಜಿ ಕಳುಹಲು [ನಾ] ಬಂದೆ ||೫೭||

ಆಡುವಳು ಅರಗಿಳಿಯು ಬಾಯನು ತೆರೆವಂತೆ
ಸ್ನೇಹಾರ್ಥವಾಗಿ ಬಾಲನಿಗೆ।
ಹೋದುದು ನಿಜವೇನೊ ಸಹಜವಾಗಿಯೆ ಮಗನೆ
ಹಾಸ್ಯದ ಮಾತು ಎನುತಿರ್ದೆ ||೫೮||

ಮಗನೆ ಕೇಳೈ ಕಾಟ ಗಜನಿಂಬೆ ಗಿಡದಡಿಯ
ಸೋಸಿ ನೋಡುವ ಹತ್ತಿ ಕೆರೆಯ।
ಏನು ಮಾಡಲಿ ಶಿವನೆ ಎಮ್ಮೈ್ವಶ್ಯ ಕಡೆಗಾಲ
ಬರುವುದಕೆ ತಲೆಗಿಹುದೊ ||೫೯||

ಚೆಂಡು ಪೋದ ಲಿಖಿತ ಭೂಮಂಡಲಕೆ ಪೆಸರೊಡೆದು
ಕಂಡ ವೈರಿಗಳು ತಲೆದೂಗೆ।
ಬಂದುದೆಮ್ಮಯ ಭಾಗ್ಯ ಬಲ್ಲ ಹಿರಿಯರು ತಮಗೆ
ಹಿಂದಣ ಪಡಿಪಾಟ ಬಂತೆ ||೬೦||

ಅಳುವಳು ಅಗ್ಘಣಿಯ ತ[ರು]ವಳು ನಯನದಿ
ಮುರಿವಳು ಬೆರಳ ಲಟಿಕೆಯನು।
ಕರೆ ಕರೆಬಡುವಳು ಅರಸಿನ ದುಃಖಕ್ಕೆ
ಇದು ಘನವೆಂದು ಮರಗಿದಳು ||೬೧||

ಆಡುವಳು ಹಲವಂಗ ನೋಡಿದನು ಕಾಟಣ್ಣ
ಮಾಯವೊ ಮತ್ತೆ ನಿಜಕರವೊ।
ಭೂದೇವಿ ಬಲ್ಲಳು ಇವಳಾಡು ವಚನವ
ಕಾಣದು ಟವಳಿ ಹರನಿಗೆ ||೬೨||

ಬಾರಪ್ಪ ಕಾಟಣ್ಣ ರೋಗದಿ ನರಳುವಗೆ
ಚೇಳು ಮುಟ್ಟಿ[ದ] ತೆರ ಬಂತು।

ಹೋಗಿ ನೋಡೂನೇಳು ಹರಮೌಳಿ ಶೃಂಗರದ
ಜಾಜಿ ಮಲ್ಲಿಗೆ ವನದೊಳಗೆ ||೬೩||

ಹೊಕ್ಕಳು ತೋಟವ ತೊತ್ತು ಸಂಗಿಯು ಸಹ
ಪುತ್ರ ಕಾಟಯನ ಕರವಿಡಿದು।
ಸಿಕ್ಕಿದರೆ ಚೆಂಡೆಮಗೆ ಜಟ್ಟಂಗಿ ರಾಮೇಶ್ವರಗೆ
ಉಪ್ಪರಿಗೆಯನು ಕಟ್ಟಿಸುವೆ ||೬೪||

ಹುಡುಕುವಳು ಚೆಂಡನು ಬೆಳೆದಿರುವ ಮಲ್ಲಿಗೆಯ
ವನಗಳನು ಎತ್ತಿ ತರಗೆಲೆಯ।
ಬಗೆ ಮಾಡಿ ಹುಡುಕುತ ಬಳಲುತ ಮರುಗದ
ಮಡಿಯೊಳಗಿಲ್ಲೆಂದು ನೋಡಿ ||೬೫||

ಕಾಟನ ಮನಸು ಕರಗುವಂದದಿ ಹುಡುಕಿ
ನೋಟಕ್ಕೆ ಚೆಂಡ ನೋಡಿದಳು।
ಲೋಕದೊಳಪಕೀರ್ತಿ ಚೆಂಡ ಮಡಗಿದಳೆಂಬ
ಮಾತ ಹೊತ್ತೆನು ಧರಣಿಯಲಿ ||೬೬||

ಎಲ್ಲಿ ಹೋಯಿತು ಕಾಣೆ ಇಲ್ಲಿಗೆ ದಣಿದೆನು
ಮಲ್ಲಿಕಾರ್ಜುನ ಶಿವ ಬಲ್ಲ।
ಎಲ್ಲಿರಲು ಇನ್ನೊಮ್ಮೆ ಹುಡುಕಿ ಮಡಗುವೆ ಪೋಗಿ
ಚೆಲ್ವ ರಾಮನ ಬರಹೇಳು ||೬೭||

ವಾಸನೆಯ ಪರಿಮಳವ ನಾಸಿಕವು ತಿಳಿವವೊಲು
ಗೋಚರಿಸೆ ಕಾಟಗೆ ಸುಳುಹು।
ಈಕೆಯ ಬಳಿಯೊಳು ಚೆಂಡು ಸೇರಿತೆಂದು
ಯಾಕಮ್ಮ ಈ ಠವುಳಿ ನಿಮಗೆ ||೬೮||

ಆಡುವರೆ ಸರಸಗಳ ಕುಮಾರರೊಡನೆ ನೀವು
ಪಾಲಿಸೆಮಗೆ ಚಂಡ ತಾಯಿ।
ಬಾಲರಾಮನ ಮಾತ ಇಡಲಮ್ಮ ಮನಸಿಗೆ
ಭೂಪ ಹರಿಕಾರ ಅವರಿಲ್ಲ ||೬೯||

ಹುಡುಗನ ಮಾತೇನು ಕೊಡು ತಾಯೆ ನಿಮ್ಮೊಡನೆ
ಭಯಭಕ್ತಿ ನುಡಿ ಆಡಲರಿಯ।
ಹಡೆದಾಕೆ ಹರಿಯಮ್ಮ ಕಡೆ ಎಮಗೆ ತೃಣಕಿಂತ
ಘನವ ಬಲ್ಲನೆ ರಣಗೋಪಾಲ ॥೨೦॥

ಪಡೆದವರು ಮಕ್ಕಳು ಬಡಿಯಲು ಬಯ್ಯಲು
ಹಡೆದವರು ಕ್ರೋಧ ಮಡುಗುವರೆ।
ಕೊಡುವೆನು ನಾ ಚಂಡ ಕಂದರ್ಪ ರೂಪನ ನೋಡಿ
ಹುಡುಕಿಸುವೆ ಯಾವಲ್ಲಿ ಇರಲು ॥೨೧॥

ನಾನಾ ಜಾಲಗಳನು ಹೇಳಬೇಡವೆ ತಾಯಿ
ಮೇಲೆ ದುರುಳನು ನಾಚುವನು।
ಕಾಡರೆ ಕಂದಗಳ ಆಡೊ ವಿದ್ಯೆವ ಕೆಡಿಸಿ
ಬೇಡಿಕೊಂಬೆನು ಕೊಡು ತಾಯೆ ॥೨೨॥

ಮಾವನ ಮಗಳೇನೊ ನಾಚುವರೆ
ನೋಡಿರೆ ಇವನ ಗಾರುಡವ।
ತಾಯಿ ರಮಣಗೆ ಬಂದ ತಂಗಿಯೆಂಬವರೆಲ್ಲ
ತಾಯಿಗಳಿಲ್ಲವೆ ನಿಮ್ಮ ಕುಲದೊಳಗೆ ॥೨೩॥

ತಾಯಿ ಮಕ್ಕಳಿಗುಂಟೆ ನ್ಯಾಯ ನಾಚಿಕೆ ಇವನ
ಭೇದವ ಮಾಡೊ ಬಗೆಯನು।
ತಾನರಿಯೆ ಕರ್ಮ ಅನ್ಯಾಯ ನಿಮ್ಮೊಳಗಿರಲು
ಕಾಲನ ಬಲಕೆ ಗುರು ನೀವು ॥೨೪॥

ನೆವದೊಳು ಭವದೊಳು ಮಗನ ನೋಡುವೆನೆಂಬ
ಭ್ರಮೆ ತೊಡಕಿ ಪೋಗಿ ಕಳುಹೆನಲು।
ಇಡಬಹುದೆ ನಯನವ ತರಳ ಸೂರ್ಯಗೆ ಮೆಚ್ಚಿ
ವಿಧಿಲಿಖಿತವು ಇದು ತಮಗೆ ॥೨೫॥

ಕಳ್ಳ ದುಃಖವ ಮಾಡಿ ಕಾಂತ ಮುದಿಯನ ಕೂಡೆ
ಎಲ್ಲರಿಗೆ ಇದು ಎತ್ತಲಿ ಸಾರ।

ಒಳಿತಾಯಿತು ಕಾಟ ಇನ್ನೆಲ್ಲಿ ಪುತ್ರರು ತನಗೆ
ಇಲ್ಲವೊ ಚೆಂಡು ನೀ ಹೋಗು ||೭೬||

ಕೊಟ್ಟರೆ ನಾ ಬೇರೆ ಸತ್ಯವಂತಳೆ ನಿಮಗೆ
ಕೆಟ್ಟವಳೆಂಬುದು ಬಿಡದು।
ತೊಟ್ಟಕಾರನು ಚೆಂಡ ಇಟ್ಟವನು ಬಾರದೆ
ಕೊಟ್ಟೇನೆ ಹೋಗೋ ಕಾಟಣ್ಣ ||೭೭||

ತಮ್ಮ ರಾಮಗೆ ತಾನು ಇಮ್ಮಡಿ ಅಲ್ಲವೆ
ಹರಿಯಮ್ಮನೊಳಗೆ ಭೇದವಿಲ್ಲ।
ಸುಮ್ಮನೆ ಕೊಡು ತಾಯಿ ಸೂಳಿಕೆ ನಿನಗೇಕೆ ಎಮ್ಮಯ್ಯ
ಎನ್ನೊಳಗುಂಟೆ ಕಡೆಗಣ್ಣು ||೭೮||

ಯಾರ ಮುತ್ತಿನ ಚೆಂಡ ಯಾರೊಡನೆ ನಾ ಕೊಡಲೊ
ಸೇರದು ದಾಯಾದ ಜನ್ಮ ।
ಬೇರ ಬಲ್ಲೆನು ಕೇಳೋ ಕಾಡಗೊಲ್ಲರ ವಂಶ
ಭೋಗವಲ್ಲದೆ ಪಟ್ಟ ಸಲ್ಲ ||೭೯||

ಹಾಲಿಗೆ ಹುಳಿಯೆರೆದ ಮೂಳಿ ನೋಡುವುದೇನು
ಸೀಳದೆ ನಾಲಗೆಯ ಪಿಡಿದು।
ರೂಢಿಸಲು ಕೋಪಾಗ್ನಿ ಜ್ಞಾನ ಮನದೊಳು ಗ್ರಹಿಸಿ
ವೇಳೆ[ವ]ಲ್ಲವು ಈಗ ತನಗೆ ||೮೦||

ಜಡೆಮುಡಿ[ಯೆ]ಡೆಯೊಳು ಜಗಳ ಒರ್ವಗೆ ಸಲ್ಲ
ಹೊಳವಾಡಿ ತಲೆಗೆ ತರುವವರು।
ಒಡೆದ ತವಿಯ ಬಲು ಮೆಚ್ಚೆ ಬಾಳುವೆ
ನಡೆಸುವುದೆ ಏಳಿಗೆ ಕಡೆಗೆ ||೮೧||

ಕಳ್ಳ ಸೂಳೆಯ ಕೂಡೆ ಬಲುಮಾತು ತರವಲ್ಲ
ಹೆಣಗಾಡಿದಷ್ಟೆ ವಾದಿಯಲಿ।
ಕೊಡುವುದೊಳಿತು ತಾಯಿ ಕಡೆಗಿದರ ಮೂಲದಲಿ
ಕೆಡು ಬುದ್ಧಿಯೆನುತಲಿ ಹೇಳೆ ||೮೨||

ಆಗಲಿ ಎಲೆ ಕಾಟ ಒಲ್ಲೆನೆಂದರೆ ಬಿಡದು
ಆನೆಯ ಹೊಡೆದು ಔಡಲವ।
ಏರಲು ಉಳಿವನೆ ಕುಮಾರನ ಬರಹೇಳೊ
ಮುಖ ನೋಡಿ ಚೆಂಡ ಕೊಡುವೆನು ||೮೩||

ಚೆಂಡನು ನಿನ್ನಯ ಮಂಡೆಗೆ ಬಡಕೊಳ್ಳು
ಚಂದರೂಪನ ನೋಡೊ ಪ್ರೀತಿ।
ಸಂದೇಹ ನಮಗೇಕೆ ಬಂದ ಗಳಿಗೆಲಿ ಕೊಡುವೆ
ತುಂಬುವುದು ಹನ್ನೆರಡನೆಯ ವರುಷ ||೮೪||

ಪಾಪಿ ನಿನ್ನಯ ಮಾತು ಹಾಕು ಬೆಂಕಿಗೆ ಎಂದು
ತಾ ತಿಳಿದು ಕಾಟನು ನಡೆದ।
ಚಿಂತೆ ಮನದೊಳು ತುಂಬಿ ಶೀಘ್ರದಿ ಹೊರಡಲು
ಪಂಚಬಾಣನು ರಾಮನೆಡೆಗೆ ||೮೫||

ಚಂದವಾಯಿತು ತಮ್ಮ ಚೆಂಡಿನಾಟವು ಸುಡಲಿ
ಬಂದುದು ವಿಧಿಗಾಲ ನಮಗೆ।
ಮಿಂಡರಗಳ್ಳಿಯ ಬಾಯ ನುಡಿ ಕೇಳಿದೆನಪ್ಪ
ಹಲಂಗದ ಮಾತನಾಡಿದಳು ||೮೬||

ಇರುಳು ನೋಡಿದ ಬಾವಿ ಹಗಲು ಬಿದ್ದರು ಎಂಬ
ತೆರನಾದುದೆಮ್ಮ ತಲೆಯೊಳಗೆ।
ಪಡೆದಾಕೆ ಜನನಿಯು ಒಡೆದು ಹೇಳಿದ ಲಿಖಿತ
ಮೀರಿ ಕಲ್ಲ ಹಾಯಿದೆವೊ ||೮೭||

ಒಂಟಿ ಸೀನನು ಮೀರಿ ಆಡಬಂದರೆ ತಮ್ಮ
ಸಂಕಟ ಬೆನ್ನೊಡನೆ ಬಂತು।
ಮಂಟೆಯಾಯಿತು ತಮ್ಮ ಚೆಂಡಿನಾಟವು ಸುಡಲಿ
ಉಂಟು ತೋರಿತು ಅಪಶಕುನ ||೮೮||

ಹಸ್ತ ಪಾದವ ಪಿಡಿದು ಭೃತ್ಯನಂದದಿ ಕೇಳೆ
ಕತ್ತೆ ಸೂಳೆಯು ಕೊಡಳು।

ಕಿಚ್ಚಡರಿ ಕಾಟಗೆ ನೇತ್ರದಿ ಜಲವೂರೆ
ಇಟ್ಟನು ಮೊರೆಗೊಳ್ಳೆನುತ ||೮೯||

ದುಃಖವೇತಕೆ ಅಣ್ಣ ಮತ್ತೆ ಏನೆಂದಳು ಬಹಳ
ಹೆಚ್ಚು ಕಡಿಮೆಯ ವಚನಗಳ।
ಸತ್ಯದಿ ನುಡಿ ಅವಳ ಎತ್ತಿ ಮೂಗನು ಕೊರೆಸಿ
ಉಪ್ಪು ಕಾರಗಳ ತುಂಬಿಸುವೆ ||೯೦||

ಹಳೆಗಾಸ ಹಡೆಯದ ಕುಲಗೇಡಿಯೆಂದು ಪೇಳೊ
ಇಳಿಯ ಕೆತ್ತಿಸುವೆ ಬಾಚಿಯಲಿ ।
ಅಳಬೇಡ ಚೆಂಡಲ್ಲಿ ಇರುವ ಬಳಿಯನು ಪೇಳೊ
ಬಡಿದು ತರುವೆನು ಬಾಯ ಮೇಲೆ ||೯೧||

ಮಡಗಿ ಇರುವಳೊ ಚೆಂಡ ಹುಡುಗ ಮಿಂಡರ ಸೂಳೆ
ಪರವೆಂದು ಎನ್ನ ಆಡಿದಳು।
ಮಗ ನೀನು ಬಾರದೆ ಕೊಡೆನೆಂದಳು ಚೆಂಡನು
ಆಕೆಯ ಬಗೆಯ ಹರಬಲ್ಲ ||೯೨||

ಚಿಂತೆ ಬೇಡಣ್ಣಯ್ಯ ಭೇದಂತ್ರ ಮಾಡಲು ತಾಯಿ
ನಮ್ಮಂತರಂಗವು ಚೆನ್ನಹುದೆ।
ಸಂತಯಿಸಿ ಅಣ್ಣನ ಸನುಮತ ಸ್ಥಿತಿಯ ಪೇಳೆ
ಹೊರಟನು ರಾಮ ಚೆಂಡಿಗೆ ||೯೩||

ತರುವೆ ಚೆಂಡನು ಎಂದು ದೊರೆ ರಾಮ ಹೊರಡಲು
ಪ್ರಧಾನಿಯ ಮಗನು ತಾ ಕಂಡ।
ಹೊರಬೇಡ ನಿಂದೆಯ ಅರಸಿಲ್ಲ ಮನೆಯೊಳಗೆ
ತರುಣಿಯರ ನಂಬುವುದು ಕಷ್ಟ ||೯೪||

ನೀಲಕಂಠನೆ ನಿನಗೆ ಏರಿಹುದೆ ಭ್ರಮೆ ಮರುಳು
ಬೇಡವೆ ತಾಯಡಿಗೆ ಪೋಗೊ।
ದಾಯಾದಿ ಪರ[ಸ]ತಿಯೆ ತಂದೆಗೆ ಬಂದಳು
ಆಡುವರೆ ಅನ್ಯಾಯ ನುಡಿಯ ||೯೫||

ಹಿಂದೆ ಸಾರಂಗನ ಪ್ರಾರಬ್ಧವ ಕೇಳ್ದರಿಯಿರೆ
ಬಂದ ಅಪಕೀರ್ತಿ ಧರೆಯೊಳಗೆ।
ರಂಭೆ ಊರ್ವಸಿಯರು ಪಾರ್ಥಗೆ ದೃಷ್ಟಿಯನಿಟ್ಟು
ಶಿಖಂಡಿಯಾದುದು ಅದೆ ಮೂಲ ||೯೬||

[ವೇದ] ನಾಲ್ಕನು ಬಲ್ಲ ಪ್ರವೀಣ ಪುರುಷರ ಕೂಡೆ
ವಾದಿಸಿದಂತೆ ಅಲ್ಪ ವಿದ್ಯೆ।
ಪೇಳುವೆ ನಾನೊಂದ ಜಾಲ ಸ್ತ್ರೀಯರ ಮನೆಗೆ
ನ್ಯಾಯದೊಳಗಲ್ಲ ಪೋಗುವುದು ||೯೭||

ತರಬಹುದು ಚೆಂಡನು ಅರಸು ಊರಿಗೆ ಬರಲಿ
ತೃಷಿಯೇನು ಅದರಿಂದ ಲಿಂಗ।
ತಂದರೆಂಬರು ಸ್ವಾಮಿ ನೂರೊಂದು ತಲೆಗಂಡವರು
ಕಂಡರೆ ನಿಮ್ಮ ಲಾವಣ್ಯ ||೯೮||

ಹನ್ನೆರಡು ಬಣ್ಣದ ಹೊನ್ನೆಲ್ಲಿ ಹೂಳಿದಡೆ
ಬಣ್ಣ[ಗೆ]ಡುವುದೆ ಎಲೆ ಮಂತ್ರಿ।
ಒಳ್ಳೆಯ ಪತಿವ್ರತೆಯು ಸೂಳೆಗೇರಿಯೊಳಿರಲು
ತನ್ನ ವ್ರತಗೆಟ್ಟು ಬಾಳುವಳೆ ||೯೯||

[ಹಸಿವೆಯು] ಹಂಗಿಹುದೆ ಅಶನವರ್ಜಿತ ಋಷಿಗೆ
ಹಸಿಗೆ ಅಡರುವುದೆ ಕಾಳಗಿಚ್ಚು।
ಸರಸ ಸಲ್ಲಾಪದ ಪರಿಹಾಸ್ಯವಾಡದೆ ಹೆಣ್ಣ
ಮನಸಿಹುದೆ ಪುರುಷರಿಗೊಲಿವುದಕೆ ||೧೦೦||

ಹೊಂದಿಗಿಲ್ಲದ ಮಾತ ತಂದೆಯೊಡನೆ ಪೇಳೆ
ಛೀಯೆಂದು ನಾಲಗೆಯ ಸೀಳಿಸ[ನೆ]
ಕಂಡು ಆಡಲು ಕಷ್ಟ ಕಾಣದೆ ನುಡಿದವಗೆ
ಹಂದಿಯ ಜನ್ಮ ಭವಭವದಿ ||೧೦೦||

ಸಹಜ ಮಾರ್ಗದಿ ನೆಲೆಯು ಹೇಳಬಹುದೇ ಬುದ್ಧಿ
ಪ್ರವೀಣ ಮಂತ್ರಿಯೆ ನೀಲಕಂಠ।

ಮೀನಮರಿಗೆ ಈಜನಾರು ಕಲಿಸುವರುಂಟೆ
ಭೇದಗಾಣದೆ ಆಡಸಲ್ಲ ||೧೦೨||

ತಾಯ ಸೇರಿದ ಚೆಂಡ ತರದೆ ಹೆದರಿದರೆಂದು
ಆಡರೆ ಜನರು ಮನ್ನೆಯರು।
ಕೂಡಿದ ಜನಸ್ತೋಮ ಹೋದ ಬಳಿಕ ನಾವು
ಆಡಲು ತಂದು ಫಲವೇನು ||೧೦೩||

ಸರ್ವ ತಿಳಿದವರಿಗೆ ಮುನ್ನ ಪೇಳುವುದೇನು
ನಿಮ್ಮನಸು ಪಾದ ತಿಳಿದಂತೆ।
ಬ್ರಹ್ಮನ ಬರಹಗಳ ಹ್ಯಾಂಗಿನ್ನು ತಿಳಿವವರು
ಹೋಗೆನುತ ಕರಗಳ ಮುಗಿಯೆ ||೧೦೪||

ತೊಟ್ಟ ಭೂಷಣ ತೆಗೆದಿಟ್ಟು ಕಂಪಿಲನಾತ್ಮಜ
ಇಟ್ಟನು ಲೋಕವಾರ್ತೆಯಲಿ।
ಕಪ್ಪಿನ ಅರಿವೆಯಲಿ ರತ್ನಮಡುಗಲು ತನ್ನ
ಹುಟ್ಟು ಗುಣವ ಮರೆಯುವುದೆ ||೧೦೫||

ಪರನಾರಿ ಸೋದರನೆಂಬ ಬಿರಿದನು ಧರಿಸಿ
ಅರುಹಿದ ತನ್ನ ಗೆಳೆಯರಿಗೆ।
ಇರುತಿರಿ ನಿಮಿಷಕ್ಕೆ ತರುವೆ ಚೆಂಡನು ಬೇಗ
ಹರಿಣಲೋಚನೆಯ ಮನೆಗ್ಹೋಗಿ ||೧೦೬||

ಗಿರಿಜಾವಲ್ಲಭ ಎನ್ನ ಧರೆಗೇಕೆ ನಿರ್ಮಿಸಿದೆ
ವರ ಶೌರ್ಯ ಭರಗಳನಿತ್ತು।
ಶರೀರವಳಿಯಲು ತನ್ನ ಸತ್ಯ ಬಿಡುವವನಲ್ಲ
ಹೊರಗಣ ಅಪರಾಧ ನಿಮಗೆ ||೧೦೭||

ಸತ್ಯಪುರುಷನು ರಾಮ ಸಾಗಲು ಬೆನ್ನೊಡನೆ
ಹತ್ತಲು ಧರ್ಮದೇವತೆಯು।
ಲಿಖಿತವ ಬರೆದಾಕೆ ಪುಸಿಯೆನುತಲಿ ಮುಂದೆ
ಎಸಗುತ ಜಯಲಕ್ಷ್ಮಿಯೊಡನೆ ||೧೦೮||

ರಾಯ ರಾಮನು ಬರಲು ರಾಜೇಂದ್ರ ಕಂಪಿಲನ
ರಾಣಿ ಇರುತಿರ್ಪ ಅರಮನೆಗೆ।
ಕಾಣುತ್ತ ಗೊಲ್ಲರು ಕರಮುಗಿದು ನಿಂದಿರಲು
ತಾಯ ದರುಶನಕೆಂದು ನಡೆಯೆ ॥೧೯॥

ಮೂರಾರು ಬಾಗಿಲ ಬೇಗದಿಂದಲಿ ದಾಂಟಿ
ಗಾಜಿನುಪ್ಪರಿಗೆ ಬಾಗಿಲಿಗೆ।
ಸಾಗಿ ಬರಲು ರಾಮ ಗೂಡಿನ ಗಿಳಿಗಳು
ಇವನಾರೊ ಹೊಗುವ ನಿಲ್ಲೆನುತ ॥೧೦॥

ಗಿಳಿಗಳಾಗಲು ನಿಮ್ಮ ಜನ್ಮ ಉಳಿಯಿತು ಪೋಗಿ
ತಡೆಯಲು ಇನ್ನೊಬ್ಬ ಮನುಜ।
ನಡೆಸುವೆ ಯಮಪುರಕೆ ಹಳೆಬೀಡಿನೊಳು ಹೋಗಿ
ಕೈಗಾಣಿಕೆ ತಂದ ರಣರಾಮ ॥೧೧॥

ಆದರೊಳಿತು ಸ್ವಾಮಿ ಕೇಳಿ ಹೊಗಲಾಗದು ನಿಲ್ಲಿ
ರಾಯನಿಲ್ಲದ ಅರಮನೆಗೆ।
ಯಾವಾಗ ಬರದವನು ಈಗೇನು ಕಾರ್ಯಕೆ ಬಂದೆ
ತಾವ್ಯಾರಿಗಿಲ್ಲಿ ಕಾದಿಹುದು ॥೧೨॥

ಅರಸು ಇಲ್ಲದ ಮೇಲೆ ಬರುವುದೇತಕೆ ಇಲ್ಲಿ
ಕರೆಸಿಕೊಂಡಳೆ ಕಳ್ಳ ರತ್ನಿ।
ಪರನಾರಿ ಸೋದರ ಬಿರಿದ ಸಾರಿಸಿಕೊಂಬೆ
ನೆರೆ ದ್ರೋಹಿ ಮನೆಗೇಕೆ ಬಂದೆ ॥೧೩॥

ಅರಗಿಳಿಯ ವ[ಚ]ನ ಒಲವನೆಲ್ಲವ ಪೇಳೆ
ದಯಭರಿತನಾಗುತ್ತ ಬಂದ।
ಲಾಲಿಸಿ ವಿವರವ ಚೆಲ್ವ ಗಿಳಿಗಳು ಎಲ್ಲ
ಮರುಳ ಬುದ್ಧಿಯಲಿ ಚಂಡನಾಡಿದೆನು ॥೧೪॥

ಹೊಕ್ಕನೆ ಇಲ್ಲೊಬ್ಬ ರಾಕ್ಷಸರ ಪೊಳಲಿಗೆ
ಪುತ್ರನಾಗಲು ಕಂಪಿಲಗೆ।

ಅರ್ತಿಯಲಿ ಚೆಂಡಾಡೆ ಪೊಕ್ಕುದು ಅರಮನೆಗೆ
ಚಿಕ್ಕಮ್ಮನನು ಕೇಳ ಬಂದೆ ||೧೧೫||

ಚಿಕ್ಕಮ್ಮನ ಮಾರಿಗೆ ಕಿಚ್ಚನು ಹಾಕಯ್ಯ
ಸುಟ್ಟು ಹೋಗಲಿ ನಿನ್ನ ಚೆಂಡು।
ರತ್ನಿಯ ಮನದೊಳು ಭ್ರಮೆ ಪುಟ್ಟಿ ನಿನ್ನ ಬಯಸಿ
ಹೊತ್ತಳು ಹರಕೆ ದೈವಗಳ ||೧೧೬||

ಟೌಳಿ ಎನ್ನಲು ಬೇಡ ಗೌ[ಡಿ] ಸಂಗಿಯ ಒಡನೆ
ನುಡಿಯುತಿರಲು ನಾವು ಕೇಳಿ।
ಒರೆದೆವು ನಿನ್ನೊಳು ಒಲಿವ ಪುರುಷನು ಅಲ್ಲ
ತಿರುಗಯ್ಯ ಚಂಡ ಸುಡಲಿ ||೧೧೭||

ಕೇಳರಿಯಾ ರಂಡೆಯ ಮೂಲ ಗತಿಗಳನೆಲ್ಲ
ಹೇಳಲಿಲ್ಲವೆ ಹರಿಯಮ್ಮ।
ನಾಳೆಗೆ ಬಾ ಹೋಗು ರಾಯ ಬರಲು ನಿನಗೆ
ಯಾವ ಭಯಗಳು ಮುನ್ನಿಲ್ಲ ||೧೧೮||

ಗಿಳಿಗಳ ಮಾತೆಂದು ಮನದಿ ಗರ್ವವು ಬೇಡ
ಹಿಡಿಕಟ್ಟಿಕರದೊಳು ಮುನ್ನ।
ಅನುಗ್ರಹಿಸಿ ಕೇಳಿದ ಮನದಿ ಚೆನ್ನಿಗರಾಮ
ಇದು ಸಹಜವಾದೀತೆ ಮಾತು ||೧೧೯||

ಮಕ್ಕಳ ಬಯಸುವರೆ ಹತ್ತಿಹುದು ತಲೆಮೂರು
ನಕ್ಕಾನು ಶಿವ ಬಲ್ಲಯೆನುತ।
ನಿಶ್ಚಯವೆನಬಹುದೆ ನೀಟಾದ ಸ್ತ್ರೀಯರಿಗೆ ಅ
ಗತ್ಯದ ನಿಂದೆ ಹೊರಿಸುವರು ||೧೨೦||

ಆಗಲಿ ಅದಕೇನು ಹೋಗಿ ನೋಡುವ ಕಾರ್ಯ
ಆಡುವ ವಚನಗಳ ಕೇಳಿ।
ಗೂಡಿನ ಗಿಳಿಗರುಹಿ ರಾಮ ಮುಂದಕೆ ಬರಲು
ಗಾಡಿಕಾತಿಯು ಸಂಗಿ ಕಂಡು ||೧೨೧||

ಕಂದರ್ಪರೂಪನ ಸುಳುಹು ಕಾಣುತ ಸಂಗಿ
ಬಂದಳು ರತ್ನಿ ಬಳಿಗೋಡಿ।
ಹಂಬಲ ಬಿಡು ಪಾಪಿ ಬಂದನಾಗಲೆ ಏಳು
ಮುಂದೆ ಕಾಣಿಸಿಕೊಂಬೆ ಪೋಗಿ ॥೧೨೨॥

ನಿಜವೇನೆ ಸಂಗಾಯಿ ನೀಲವರ್ಣನ ಸುತನು
ಬರುವುದು ನಿಶ್ಚಯದಿ ಎನಗೆ।
ಬಳಲಿದ ಪೈರಿಗೆ ಜಲವೃಷ್ಟಿ ಸುರಿದಂತೆ
ಕಳೆಯೇರೆ ಪದ್ಮದ[ಲರಂ]ತೆ ॥೧೨೩॥

ಕಾಣದವಳಂದದಿ [ಚಾ]ಲಕಿಯು ಸಂಗಿ
ಬಾಲರಾಮಗೆ ಇದಿರ ಬರಲು।
ಹೆದರುವವಳು ಪರಿಯಾಗಿ ಎರಗಿ ಸಾಷ್ಟಾಂಗವ
ಕರಮುಗಿಯೆ ರಾಮ ಗದ್ದಲಿಸಿ ॥೧೨೪॥

ಕೆಚ್ಚನೆ ಎದೆಯೊಳು ತೊತ್ತು ಮುಂಡೆಯೆ ಸಂಗಿ
ಒಡಹುಟ್ಟಿದಣ್ಣಯ್ಯ ಬರಲು।
ಕೊಟ್ಟು ಕಳುಹದೆ ಚೆಂಡ ತನ್ನ ಬರಿಸಿದ ಭಾಗ್ಯ
ಮತ್ತೆ ಕೊರೆಸುವೆ ಮೊಲೆ ಮೂಗ ॥೧೨೫॥

ಸಿಡಿಲಂತೆ ಗರ್ಜಿಸಲು ನಡುಗಿ ಹಡಪದ ಸಂಗಿ
ಅಡಗಲು ಆತ್ಮದ ಉಸಿರು।
ಸಿದ್ಧವು ಬಂದುದು ಅಮ್ಮಾಜಿ ಆಡಿದ
ಸುದ್ದಿಯ ನಾ ಕಂಡುದಿಲ್ಲ ॥೧೨೬॥

ಅಮ್ಮನವರ ಕೇಳಿ ಧರ್ಮರೂಪನೆ ಪೋಗಿ
ಎಮ್ಮ ಕೈಯೊಳು ತೀರುವುದೇನು।
ಮುನ್ನ ಹೇಳಿದ ಮಾತ ನಿರ್ಣಯ ಮಾಡುವರೊಡನೆ
ಕೊಡು ಎನ್ನುವ ಶಕ್ತಿ [ನ]ಮಗುಂಟೆ ॥೧೨೭॥

ಅಡರಿದ ಕೋಪವನು ಒಡನೆ ಶಾಂತಿಯ ಮಾಡಿ
ನಡೆಯಲು ರಾಮ ರಣಭೀಮ।

ತರಳೆ ರತ್ನಿಯು ಕಂಡಳು ಕಿರಣಪ್ರಭೆ ಬಂದು
ಸುಳಿದಂತೆ ನಯನ ತಳತಳಸೆ ||೧೨೮||

ನೋಡಿದಳು ಮನಭ್ರಮೆಯು ತೀರುವಂದದಿ ರತ್ನಿ
ಕಾಮಬಾಣದಲಿ ಕಳವಳಿಸಿ।
ಗಾಯೊಡೆದ ಮೃಗದಂತೆ ಬಾಲೆ ಮೂರ್ಚೆಗಳಾಗಿ
ನೋಡಲಾದಳು ಮರಳಿ ಮುಖವ ||೧೨೯||

ಮನಸಿಜನ ತಾಪದಿ ಜಿನುಗುತಿರುವಳ ಕಂಡು
ಅನುಮಾನ ನಿಜ ಸತ್ಯರಾಮ।
ಜನಿಸಿ ಹರಿಯಮ್ಮಗೆ ವನಿತೆ ಇಮ್ಮಡಿಯೆಂದು
ಚರಣ ಪಿಡಿದು ಭಕ್ತಿಯಲಿ ||೧೩೦||

ಅನಿತರೊಳಗೆ ರತ್ನಿ ತಿಳಿಯೆ ಮೂರ್ಚೆಯ ತಾಪ
ಶಿರವ ಪಿಡಿದು ಹರಸುವಳು।
ಉರಗನ ಒಯ್ಯುವ ವಾಹನವೇರಿದನ
ತರಳ ಪೋಲ್ವನೆ ನೀ ಏಳು ||೧೩೧||

ಚಂದ್ರನ ಕಂಡಲ್ಲಿ ಅಂಬುಧಿ ನಲಿವಂತೆ
ಬಿಂದು ನಾಯಿರಲು ಕಂಡ ತೆರದಿ।
ರಂಭೆ ರತ್ನಿಯು ಅಷ್ಟ ಸಂಭ್ರಮದೊಳು ತಂದು
ಗಂಧಕಸ್ತೂರಿಯು ಪುನುಗ ||೧೩೨||

ಉಡುಗೊರೆಯ ವೀಳ್ಯವನು ಪರಿಮಳವ ಮೊದಲಾಗಿ
ಮಡಗಿ ಮುಂದಿಟ್ಟು ಕರಮುಗಿದು।
ನಂದನೆ ಧರಿಸೆಂದು ಅಂಗನೆ ನುಡಿಯಲು
ಕಂದರ್ಪ ರಾಮನಿಂತೆಂದ ||೧೩೩||

ಜನನಿ ನಿಮ್ಮಯ ಉದರದಿ ಜನಿಸಿದ
ತರಳಗೆ ಕಡಿಮೆಯಾಗಿಹುದೆ।
ನಿಮ್ಮ ದಯದಿ ಪಡೆದೆ ಬಯಲ ಭ್ರಮೆಗಳು ಯಾಕೆ
ದಯಮಾಡಿ ಇರುವೆ ದ[ಣಿ]ವಂತೆ ||೧೩೪||

ಪಟ್ಟಶೇಖರನಾದ ಪುತ್ರನು ಮನೆಹೊ[ಗೆ]
ಕೊಟ್ಟುದರುಂಟೆ ಬರಿ ಚೆಂಡ।
ಸಿಟ್ಟು ಮಾಡಳೆ ಅಕ್ಕ ಚಿಕ್ಕಮ್ಮನ ಮನೆಯೊಳು
ಬಟ್ಟೆಗೆ ಗತಿಯಿಲ್ಲವೆಂದು ||೧೩೫||

ರಾಜಮನ್ನಣೆ ಮಾಳ್ಪ ತರವಹುದು ಧರೆಯೊಳಗೆ
ತಾಯಿ ಮಕ್ಕಳನು ಘನಮಾಡೆ।
ಭೂಮಿಯೊಳ್ ಪೂಜಿತ ಪು[ಷ್ಪ]ಬಾಣನ ರೂಪ
ತಾಯಿಗೆ ನಲಿವ ಆತ್ಮದಲಿ ||೧೩೬||

ಕಂದರು ಎಂದೆಂಬ ಭಾವ ತಾಯೊಳು ಉಂಟು
ಒಂದಾರು ಭುಜವಾದ ರಾಮ।
ಮುಂದುಗಾಣದೆ ಜನರು ಮನಬಂದ ರೀತಿಗೆ ನುಡಿದು
ಯಮಗೊಂಡಕೆ ಗುರಿಯಾಗಿಹರು ||೧೩೭||

ಬಾಯೊಳು ಬಾಲರೆಂದು ಪ್ರಿಯದಿ ಕಾಣುವಳು
ದೇಹದಿ ಕರಗಿ ಕಾತರದಿ।
ಯಮಗೆ ಎದೆಗೆಡುವ ಮಾರನಟ್ಟುಳಿ ಮುರಿದು
ಪೊಗರುವ ಕುಚವ ಮುಚ್ಚುವಳು ||೧೩೮||

ನೋಡಲು ದೃಷ್ಟಿಯ ಪಾವಿಗೆ ಗರುಡನ
ಘೂಳಿ ಬಿದ್ದಂತೆ ಕಡೆ ದೃಷ್ಟಿ।
ಏನಿವಗೆ ಗತಿಯನ್ನು ಕಾಮ ಕೇಳಿಗೆ ಕರೆವ।
ಉಪಾಯವೇನೆಂದು ಜ್ಞಾಪಿಸುತ ||೧೩೯||

ಬಾಗಿಲಂತಸ್ತಿನವ ಬಿಟ್ಟು ಏಕಾಂತ ಸ್ಥಾನಕೆ ಒಯ್ದು
ಪ್ರೀತಿ ಲಲ್ಲೆಗಳ ಪುಟ್ಟಿಸದೆ।
ವಶವಾದನು ಕೈಗೆ ರತಿಕ್ರೀಡೆಯನು ಕಂಡರಿದ
ಬಸಿರ ಬಿಡದಂಥ ವಿಟನು ||೧೪೦||

ಹೊರಗಣ ಬರಿನೋಟ ತನ್ನೊಳಗಣ ಕೂಟ
ಮನಗ್ರಹಿಕೆ ತನು ಸುಖವಿಲ್ಲ।

ನಯನೀತಿಯೊಳಗಿವನ ಕಳುಹುವ ಚೆಂಡಿರುವ
ಸ್ಥಳಕೆ ಹೋಗದೆ ತನಗೊಲಿಯ ||೧೪೧||

ತಾಯ ನೋಂಪಿ[ಗೆ] ಬೇಗ ದೇವೇಂದ್ರನಾನೆಯ ತಂದ
ಭೀಮನನುಜ ನರ ಪಾರ್ಥ।
ಏನಪ್ಪ ನೀ ಬಂದ ಕಾರ್ಯಸ್ಥಿತಿಯನು ಪೇಳು
ಸಾಗಿಸಿಕೊಡುವೆ ಪೋಗೆನುತ ||೧೪೨||

ತಾಯೆ ಲಾಲಿಸಬಹುದು ಕುಮಾರನ ಬಿನ್ನಪವನು
ನಾನು ಮಾನ್ಯರ ಕೂಡಿಕೊಂಡು।
ಆನಂದ ಅರ್ತಿಯಲಿ ಚೆಂಡವಾಡುತಲಿರ್ದೆ
ಸೇರಿತು ಅರಮನೆಗೆ ಬಂದು ||೧೪೩||

ಭೇರುಂಡ ಕಾಟಯನ ಬೆನ್ನೊಡನೆ ಕಳುಹಲು ನೀವು
ಕುವರ ನಾ ಬರಲೆಂದು ಪೇಳೆ।
ಕೇಳುತ್ತ ಜನನಿಯ ಪಾದ ಕಾಬಡೆ ಬಂದೆ
ದಯಮಾಡಿ ವೇಳೆಯಾಯಿತ್ತು ||೧೪೪||

ಕಾಟಗೆ ಎಳ್ಳನಿತು ವಿವೇಕವಿಲ್ಲವೊ ಪುತ್ರ
ಮಾತಿನೊಳೆನ್ನ ಗರ್ಜಿಸಿದ।
ಕೋಪಿಸಿ ಕಳುಹಿದೆ ಕುಲದೀಪ ನಿನ್ನನು
ನೋಳ್ಪ ಪ್ರೀತಿಯ ಬಗೆ ಎಮ್ಮ ಪುತ್ರ ||೧೪೫||

ಮತ್ತೆ ಒಳ್ಳೆದು ತಾಯಿ ಪುತ್ರನ ಮೇಲೆ
ದೃಷ್ಟಿಯಿರಲು ಕೃತಾರ್ಥರಾದೆವು ।
ಪ್ರಜ್ವಲಿಸಿ ಹೊತ್ತು ಹೋಯಿತು ಕಂದ ಪಿತ ಮಲಗೊ
ಪಟ್ಟೆ ಮಂಚದಲಿಟ್ಟಿಹೆನೊ ||೧೪೬||

ತೆಗೆದುಕೊಂಡು ಹೋಗೆನಲು ಹದಿನಾರು ಭುಜವಾದ
ನಡೆದನು ಸಜ್ಜೆಯ ಮನೆಗೆ
ಕರಿಗಜವು ಇರುಬಿನ ಬಲೆಗೆ ಸೇರಿತು ಎಂದು
ನಡೆದಳು ಬೆನ್ನೊಡನೆ ರತ್ನಿ ||೧೪೭||

ಪುತ್ರರಾಮನು ಪೋಗೆ ಹೊಕ್ಕಳು ರತ್ನಿಯು
ಮುಚ್ಚಿಕೊಳುತ ಕದ ಅಗಣಿಯನು।
ಸತ್ಯ ಪುರುಷನು ರಾಮ ತಿರುಗಿ ನೋಡಲು ಬರುವ
ರಕ್ಕಸಿ ತೆರದ ರತ್ನಿಯನು ||೧೪೮||

ಮುಂದಕ್ಕೆ ನಡೆಯಲು ಚೆಂಡ ಧರ್ಮಗಳೆಲ್ಲ
ಪಿಂದಕ್ಕೆ ತಿರುಗೆ ಉತ್ತಮವು।
ಚಂದ್ರ ಪ್ರತಿಗೆ ರಾಹು ಬಂದು ತುಡುಕುವ ತೆರದಿ
ಮುಂಜೆರಗ ಪಿಡಿದಳು ರಾಮುಗನ ||೧೪೯||

ಹಿಡಿಯಲೇತಕೆ ಮಗನ ಬಿಡಿ ತಾಯೆ ಬಾಯೊಳು
ನುಡಿಯಮ್ಮ ಪೇಳುವುದಿರಲು।
ಹಡೆದಮ್ಮ ನಿಮ್ಮಡಿ ಜನನಿಯಲ್ಲವೆ ನೀವು
ದೂರೆಡೆಯ ನಿಂತು ಮಾತಾಡು ||೧೫೦||

ಅಮ್ಮಯ್ಯ ಅಭವನ ಪುಣ್ಯಾಂಗನೆ ಸಮನೆ
ನಿನ್ನೊಳಗಿಹ ಪ್ರೀತಿಯ ಪೇಳು।
ಕರ್ಮದ ಸ್ವರಗಳ ಕರ್ಣನಾತ್ಮದಿ ಕೇಳೆ
ಧರ್ಮಸ್ಥಿತಿಯಾಗಿ ನಡೆಸುವೆನು ||೧೫೧||

ಅತಿ ಮಾತ ಬೇಡವೆ ಬಿಡು ಮುಂದಲೆಯನು
ಸುತನಲ್ಲವೆ ನಾ ನಿನಗೆ।
ಪತಿಯಲ್ಲವೆ ನಮ್ಮ ತಂದೆ [ಕಂಪಿಲ] ನಿನಗೆ
ಅತಿ ಮರವೇಕೆ ಚಿಕ್ಕಮ್ಮ ||೧೫೨||

ರೂಪ ನೋಡಲಿ ಬೇಡವೆ ನೀನು ಚಿಕ್ಕಮ್ಮ
ರೂಪಾದರೆ ನಿನ್ನ ಶಿಶುವು।
ರೂಪಿನಿಂದಲೆ ಪಾತಕಕೆ ಗುರಿಯಾದೀಯ
ಕೋಪವ ಬಿಡು ಎನ್ನ ತಾಯೆ ||೧೫೩||

ಹರಿಯಮ್ಮ ಬೇರಲ್ಲ ಚಿಕ್ಕಮ್ಮ ನೀವೀಗ
ಹಿರಿಯರು ನೀವು ಉತ್ತಮರು।

ಸಿರಿಯುಳ್ಳ ರೂಪಾದರೆ ನಿನ್ನ ಮನಸಿಗೆ
ಸರಸಬೇಡವೆ ಚಿಕ್ಕಮ್ಮ ||೧೫೪||

ಚಿಕ್ಕಂದು ಮೊದಲು ನಿನಗೆ ತಕ್ಕಂಥ ಹೆಣ್ಣನು
ಸೊಕ್ಕಿ ಕಂಪಿಲ ನಗೆ ತಂದ।
ಚಿಕ್ಕಮ್ಮನಲ್ಲವೊ ನಿನಗೆ ಸೋದರ
ಅತ್ತೆಯ ಮಗಳು ಕಾಣಯ್ಯ ||೧೫೫||

ಮಕ್ಕಳ ಬಯಸುವರೆ ಪೃಥ್ವಿಮಧ್ಯದಿ ಉಂಟೆ
ಕತ್ತೆಗಾರ್ದಭನ ಕುಲದೊಳಗೆ।
ಹುಟ್ಟುವುದೆ ಶಶಿಸೂರ್ಯ ಭೂಕಾಂತ ಮುಳುಗದೆ
ತಾಯಿ ಕೆಟ್ಟ ಮಾತ ನುಡಿಯಲು ||೧೫೬||

ಆಡಬೇಡಮ್ಮಯ್ಯ ಅವಧೂತ ಮಾತುಗಳ
ಕಾಲ ಕೋಪಾಗ್ನಿ ರೂಢಿಸಲು।
ಕೇಳವು ಕಿವಿಯೆನ್ನ ತಾಯಿಗೆ ಸಮನೆಂಬ
ಭಾವ ಎನ್ನೊಳಗುಂಟು ರಂಡೆ ||೧೫೭||

ಆಸೆಬಟ್ಟವಳನು ನಿರಾಶೆ ಮಾಡಲು ಬೇಡ
ಶ್ವಾನ ಮುಖದಿ ಬಂದವಳಲ್ಲ।
ಮುನಿಸು ಬೇಡವೊ ಮುಂದುಗೆಟ್ಟೆನು ವಿರಹದಲಿ
ಮನಸಿಜನ ರೂಪ ನೀ ಕಾಯೊ ||೧೫೮||

ತಂದೆಯೇರುವ ಅಂದಣ ಪಲ್ಲಕ್ಕಿಯ
ಕಂದರೇರುವರು ಧರೆಯೊಳಗೆ।
ಕುಂದು ಕೊರತೆ ಇಲ್ಲ ಇದಕೆ ಚೆನ್ನಿಗರಾಮ
ಒಂದಾಗಿ ಕೂಡುವ ನಡೆಯೊ ||೧೫೯||

ಅಪ್ಪನ ರಾಣಿ ಚಿಕ್ಕಮ್ಮನಲ್ಲವೆ ತಾಯಿ
ಒಪ್ಪುವರೆ ನೀವು ಪಾಪಗಳಿಗೆ।
ಛಪ್ಪನ್ನ ದೇಶದ ಹೆಮ್ಮಕ್ಕಳು ತಮ್ಮ
ಮಕ್ಕಳ ತಾವೆ ಕೂಡುವರೆ ||೧೬೦||

ತುಪ್ಪ ಸಕ್ಕರೆ ಮಧುರಸ ಉಂಬ ಬಾಯಿಗೆ
ಹಿಪ್ಪೆಗೊಳದು ಸೊಗಸುವುದೆ।
ಮುಪ್ಪಿನ ಗಂಡಗೆ ಒಪ್ಪುವುದೆ ಯೌವನ
ಪುಷ್ಪಬಾಣಗೆ ಸರಿಯುಂಟೆ ||೧೬೧||

ಪೊಡವಿಯೊಳಗೆ ಗೋವಿನ ಜನ್ಮ ಉತ್ತಮ
ನಡೆವಂತೆ ತಾವೆ ವರ್ತನೆಯು।
ಒಡಹುಟ್ಟಿದವರೆಂದು ಕೂಡದಿಹುದೆ ಕೇಳು
ಕಡುಗಲಿ ಚೆನ್ನಿಗ ರಾಮ ||೧೬೨||

ಭೋಗದ ಸತಿಯರ್ಗೆ ವಾವೆ ವರ್ತನೆಯಿಲ್ಲ
ಸಾಗರದಿ ಪರಿ ನೀರು ಕೇಳು।
ಬಾಗಿಲೊಳಗೆ ತಿರುಗಾಡರೆ ಜನರೆಲ್ಲ
ಹೀಗೆ ನೋಡಿಕೊ ಚೆನ್ನರಾಮ ||೧೬೩||

ಪರನಾರಿ ಸೋದರ ಬಿರಿದುಂಟು ಕಾಲೊಳು
ಕರ್ಮದ ನುಡಿಯಾಡಬೇಡ।
ನವಕೋಟಿ ಮಾರ್ಬಲಕೆ ಎದೆಗೊಡುವ ಛಲವುಂಟು
ಪರಸತಿಗೆ ಭಯಕಾಂತ ನಾನು ||೧೬೪||

ಬ್ರಹ್ಮಮಾಲೆಯ ಪಿಡಿದು ಬಂದ ಸತಿಯರು ಹೊರತು
ವರ ಚೆನ್ನೆಯಾಗೆ ಧರೆಯೊಳಗೆ।
ಪನ್ನಂಗಧರನಾಣೆ ಪುಸಿಯನಾಡುವನಲ್ಲ
ಹಡೆದಮ್ಮಗೆ ಸಮನೆಂಬೆ ತಾಯೆ ||೧೬೫||

ಸುಡು ರಾಮ ನೀತಿಯ ಕಡು ಚೆಲ್ವನಾಯಕಿ ಬಂದು
ಒಡಬಡಿಸಿ ದೈನ್ಯ ಹೊರಳಿದರೆ।
ಒಲ್ಲೆನೆಂಬುವ ಬುದ್ಧಿ ನಿನ್ನಲ್ಲಿ ಕಂಡೆನು ರಾಮ
ಕಲ್ಲಾಗಿ ಕರಗಿ ಹರಿವವದು ||೧೬೬||

ಮಾತಿನಿಂದಲಿ ಪೇಳೆ ಮಣಿಯನು ಇವ ತನಗೆ
ಕಾತರ ಬರುವಂತೆ ಕಲೆಯು।

ನೇತ್ರಕೆ ಕಾಣಿಸದೆ ಕೂಟಕ್ಕೆ ಮನವಿಡನು
ಪೀತಾಂಬರ ಸೀರೆಗಳನು ಕಳೆಯೆ ||೧೬೭||

ಉಟ್ಟ ಸೀರೆಗಳನು ಕಳೆದಿಡಲು ಕುಚಗಳ
ರವಿಕೆ ಹದಮೀರಿತೆನಲಾಗ।
ಹರನ ರಾಣಿಯ ಸಮ ಹರಿಯಮ್ಮಗೆ ಮಿಗಿಲೆಂದು
ಅಡರಲು ರಾಮನ ಕೋಪಾಗ್ನಿ ||೧೬೮||

ಕರ್ಮದ ಮೂಳಿಯ ಗುಣಧರ್ಮ ನೋಡುವುದೇನು
ತಡೆ[ದ]ನು ಕರವ ತಾಯೆನುತ।
ಸಿಡಿಲಿನ ಮರಿಯಂತೆ ಕೋಪಡರಿ ಚೆನ್ನಿಗರಾಮ
ಒಗೆದನು ಕೊನೆ ರಟ್ಟೆ ಹಿಡಿದು ||೧೬೯||

ತೆಗೆದಿಟ್ಟ ಭರವಿಗೆ ಹದಿನಾರು ಮಾರಿಲಿ ಬಿದ್ದು
ಹೊಡೆದಂತೆ ಗ್ರಹವು ಮೂರ್ಚೆಗಳು।
ಮರುಳಾಗಿ ಎಚ್ಚತ್ತು ಮಾರಿಯಂದದಿ ಕುಳಿತು
ನುಡಿವಳು ರಾಮ ಕೇಳೆನುತ ||೧೭೦||

ಸತ್ಯವಲ್ಲವೊ ರಾಮ ಸತಿಯರಿಗೊಲಿಯದೆ
ಕೆಟ್ಟೋದನರಿ ಆ ಪಾರ್ಥ।
ದೃಷ್ಟಿ ಇಡಲು ಹಿಂದೆ ದೇವೇಂದ್ರನ ಸತಿಯಿಂದ
ತೊಟ್ಟನು ಬಳೆಯ ಶಾಪದಲಿ ||೧೭೧||

ಕೊಂದು ಹೋಗೆಲೊ ರಾಮ ತುಂಬಿತು ವಿಧಿ ನಿನಗೆ
ಹಿಂದಣ ಗಮನ ಕೇಳರಿಯಾ।
ಗಂಡನಿಲ್ಲದ ಮನೆಗೆ ಬಂದ ತಪ್ಪಿಲಿ ನಿನಗೆ
ಸಾರಂಗಧರನ ತೆರ ಮಾಳ್ಪೆ ||೧೭೨||

ಬಾಲೆಯರ ಕಲಹದಿ ಮುನಿಯಾಗಲುಳಿವನೆ
ಕೇಳಲಿಲ್ಲವೆ ಕಲ್ಯಾಣಪುರದಿ।
ಚೋರ ಚಿಕ್ಕಯ್ಯನ ತಳವಾರನ ಸತಿ ಭ್ರಮಿಸಿ
ಜಾರಿಹೋದಲ್ಲಿ ತಲೆಯನರಿಸಿದಳು ||೧೭೩||

ಹೆಣ್ಣುಗಳ ಹಗೆ[illegible]ಳು ದಾನವರು ಕೆಟ್ಟರು
ಕೇಳು ಮುನ್ನ ರಾಮನ ಸತಿಯಿಂದ।
ಮಣ್ಣು ಕೂಡಿದ ರಾಮ ಉತ್ರಕುಮಾರತಿಯ
ಅಣ್ಣನ ಮಾವ ಭೀಮನಲಿ ॥೧೭೪॥

ಮೂರು ಶಂಕುವನಾಳ್ವನ ಕುಮಾರನ ಕೇಳ್ದರಿಯಾ
ಮುನಿರಾಯ ನಿರ್ಮಿಸಿದಂಥ ಸತಿಯ।
ತಾವೊಲ್ಲೆ ಪರಸತಿಯ ದ್ರೋಹವೆನ್ನಲು ನಮಗೆ
ಸುಡುಗಾಡ ಕಾದುದನು ನೀನರಿಯಾ ॥೧೭೫॥

ಹೆಣ್ಣಿನ ಕಾಮತ್ವಕೊಲ್ಲ[ದ] ಮುನಿವರಗೆ
ತೊನ್ನು ಆದುದನು ಕೇಳ್ದರಿಯಾ।
ನುಸುಳುವೆ ಮನದೊಳು ಚೆಲ್ವ ಲಾಲಿಸಿ ಕೇಳೊ
ನಿನ್ನಂತೆ ಹಿಂದೊಬ್ಬ ಮುನಿಯು ॥೧೭೬॥

ಯೋಗದ ಮದವಿಡಿದು ಯತಿಯಾಗಿ ವರ ಶೌರ್ಯ
ಲಾವಣ್ಯ ಮದ ಪ್ರಾಯದೊಳಗೆ।
ಭೂಮಿ ಬ್ರಹ್ಮಾಂಡವು ಚರಿಸುತ ಸೂರ್ಯಾಂಗ
ಗ್ರಾಮ ವನಾಂತರಕೆ ಬರಲು ॥೧೭೭॥

ನಗರದ ನೃಪ ಸಡಗರದೊಳು ಬಂದು ಮುನಿವರಗೆ
ಎರಗಲು ಸಾಷ್ಟಾಂಗದೊಳಗೆ।
ಬಿಜಮಾಡಬಹುದೆನ್ನ ಪುರಕೆ ನಿನ್ನಯ ಪುತ್ರ
ಬಡ ಮಗನ ಬಿನ್ನಹ ಕೈಕೊಂಡು ॥೧೭೮॥

ಒಪ್ಪಿಕೊಳ್ಳಲು ಮುನಿಯು ಅಷ್ಟಭೋಗದಿ ಹೋಗಿ
ಹೊಕ್ಕ ರಾಜೇಂದ್ರನರಮನೆಯ।
ಮುತ್ತಿನ ಪೀಠದಿ ಮುನಿ ಮುಹೂರ್ತವ ಮಾಡೆ
ತಕ್ಕ ಉಪಚಾರಗಳ ಮಾಡಿ ॥೧೭೯॥

ರಾಯನ ರಾಣಿಯರು ಜೋಡಿಲಿರ್ವರು ಬಂದು
ಪಾದಕೆರಗಲು ಹರಸಿದನು।

ಭೂಮಿ ರಾಜ್ಯವ ಪಡೆದೆ ಅನುಭವ ಕರ್ತರು ಇಲ್ಲ
ದೇವ ಮುನಿವರನೆ ಸಂತತಿ[ಯು] ||೧೮೦||

ಕೊ[ಟ್ಟಾ]ನು ಬ್ರಹ್ಮಾಂಡ ಸೃಷ್ಟಿ ಪರಶಿವ ಒಲಿದು
ನೇತ್ರ ಪಾವಕನು ಪರಮೇಶ।
ಮಸ್ತಕದಿ ಕರವಿ[ಟ್ಟ] ಅಸ್ತಮಾನಕೆ ಬರಲು
ರಾತ್ರಿಯಲಿ ಹೊರಗೆಮ್ಮ ಸ್ಥಳವು ||೧೮೧||

ನವಕೋಟಿ ಪಂಜಿನ ಬೆಳಕಿನೊಳಗೆ ಪೋಗಿ
ಕಡೆಗಂಡ ಹೇಮಾದ್ರಿ ಗಿರಿಯ।
ಮೃಡರೂಪ ಸೂರ್ಯಾಂಗ ಮುನಿವರನು ತಾ ಬಂದು
ಒರಗೊಂಡ ಶಕ್ತಿಗೃಹದಲ್ಲಿ ||೧೮೨||

ಇರುವಲ್ಲಿ ಕಿರಿಯಾಕೆ ಹಿರಿಯಕ್ಕ ಮುನಿರವನು
ಮನ್ಮಥಗೆ ಪ್ರತಿ[ಯಹನು]।
ಭ್ರಮೆ ಬಿಡದು ಆತನ ದಯವಿಡಲು ನಾ ಪೋಗಿ
ಬರುವನು ನಿಮಿಷ ಮಾತ್ರದಲಿ ||೧೮೩||

ನಗರದ ಬಂಧತ್ವ ಯಮನ ಕಾವಲು ತಂಗಿ
ಮಿಗುವ ತ್ರಾಣಿಹುದೆ ನಿನ್ನಲ್ಲಿ।
ಅಭಯವಾಗಲು ನೀನು ಅಂತ್ರಮಾರ್ಗದಿ ನಡೆವೆ
ಅರಸಿಲ್ಲ ಈ ರಾತ್ರಿಯೊಳಗೆ ||೧೮೪||

ಅನುಜೆ ಪೋಗಲಿ ಸುಖ ಗೆಲಿದು ಬಂದರೆ ಸಾಕು
ನಾ ಮುನಿವಳಲ್ಲವೆ ಅಡ್ಡಲಾಗಿ।
ನಡೆದಳು ಬಂಧತ್ವದಗಳು ಕೋಟೆಯ ದಾಟಿ
ಮುನಿಯಿರುವ ಗೃಹಕೆ ಬರಲು ||೧೮೫||

ನಾನಾ ವಿನಯತ್ವದಲಿ ಮುನಿವರ ಬೋಧಿಸಲು
ಆಗದೆನುತ ಚೆಂಡಿಸಲು।
ನಾಗರ ಮರಿ ಕಡಿದು ಬರಿ ಭಯದ ತೆರಬಂತು
ಹೋಗುವರೆ ಮುನಿಯೆನ್ನ ಕಳುಹು ||೧೮೬||

ಪಾಪ ಹರಿದುದು ಎನ್ನ ಪಿಶಾಚಿ ಬಿಟ್ಟಿತುಯೆಂದು
ಆಕೆಯ ಒಡನೆ ಮುನಿ ಬರಲು।
ಕೋಟೆಯ ನೆಗೆವೆ ನಾ ದಾಂಟಿ ಪೋಗುವೆನೆನಲು
ಅತುಕೊಳ್ಳಲು ಶಿವಕವಳ ॥೧೮೭॥

ಅತ್ಯಂತ ಪ್ರೀತಿಯನಿಟ್ಟು ಬಂದಳು ಮನೆಯ
ಹತ್ತೇರು ಸಮಯದಿ ಬಿರಿದ।
ತೊಟ್ಟು ಬೇಸರವಾಗೆ ಹತ್ತದೆ ಮೈತೊನ್ನು
ಧರ್ಮಾಂತ್ರದ ನುಡಿ ಕೇಳು ರಾಮಾ ॥೧೮೮॥

ಸೂರ್ಯಂಗಮುನಿಗಾದ ಭವರೋಗ ಕಂಡೇನೋ
ರಾಮ ಕೇಳೆನ್ನ ಮಾತ ವಿನಕರಿಸಿ।
ಮೈಲಿವಗೆ ಹರಿದಂಥ ಕಷ್ಟ ವಿಧಿಯ ಕೇಳು
ಬಹಳಾಶ್ರಮ ಬಿಟ್ಟುಬಹುದ ॥೧೮೯॥

ಆಮೇಲೆ ಮತ್ತೊಂದು ಗ್ರಹಿಸಿ ತೊನ್ನನು ರೂವಿನ
ವೇದವ್ಯಾಸನ ಬಳಿಗೆ ನಡೆಯೆ।
ಆದ ವಿವರವ ಪೇಳಿ ಪಾದಕೆರಗಲು ಮುನಿಯು
ಧ್ಯಾನಿಸಿ ಪೇಳಿ ನುಡಿವವನು ॥೧೯೦॥

ತಾನಾಗಿ ಬಂದುದನು ಹೋಗೆನಲು ಬಲು ಕರ್ಮ
ಕಾಲಹಾನಿಗೆ ಗುರಿ ಬಿಡದು।
ತೀರದು ನಮ್ಮಿಂದ ಈ ಮೇಲೆ ಆಕೆಯ ನೆರೆಯೊ
ಸುವರ್ಣಾತ್ವವು ಬಹುದೆನಲು ॥೧೯೧॥

ಬಂದನು ಸೂರ್ಯಾಂಗ ಉತ್ತುಂಗನ ಪುರಕಾಗ
ರಂಭೆಯನೊಡಂಬಡಿಸಿ ಕರೆಯೆ।
ಎಂದಿನನ್ವಯ ಬಂದುದು ಎಲೆ ರಾಮ
ನೊಂದೆಯೋ ಇದರಿಂದ ಕಡೆಗೆ ॥೧೯೨॥

ಧರೆಯ ನಾರಿಯರ್ಗೆಲ್ಲ ವೈರಾಗಿ ಬಾಳುವೆ
ಕರಿಗೆ ಭೇರುಂಡನಿದ್ದಂತೆ।

ಹೊರಬೇಡ ಅಪಕೀರ್ತಿ ಕಿರಿತಾಯ ಕೈಮೈಯ
ಪಿಡಿದನೆನಿಸಿ ತಲೆ ತರಿಸುವೆನು ||೯೩||

ನಾಯಿ ಕೂಗಲು ತಲೆಯ ತೋರುವನೆ ದಿನಕರನು
ತಾಮ್ರಚೂಡನು ಸ್ವರವಿಡದೆ।
ನೀರು ನಿಲ್ಲದೆ ಕೆಸರೆ ನಿಜಭಕ್ತಿ ಇರುವಲ್ಲಿ
ಕಾಯನೆ ಹರ ಸಹಾಯವಾಗಿ ||೯೪||

ಕರ್ಮಕ್ಕೆ ಗುರಿಯಲ್ಲ ಧರ್ಮದೇವತೆ ಬಲ್ಲ
ನಿರ್ಮಾಣವಿರಲು ವಿಧಿಯಿಂದ।
ಅನ್ಯಾಯ ಮಾಡದೆ ಅಳಿಯೆನು ತಾ ಬರದಿರಲು
ಮುನ್ನ ಕಾಯನೆ ಗಿರಿಜೇಶ ||೯೫||

ಸಪ್ತೇಳು ಲೋಕವ ಕುಕ್ಷಿಯೊಳಿಟ್ಟು
ರಕ್ಷಣಕರ್ತ ನಂದೀಶ।
ಮರ್ತ್ಯಲೋಕದಿ ಮಾಳ್ಪ ಗರ್ವದ ವಾರ್ತೆ
ಇತ್ತಲಾರೈದು ಬರುವಾಗ ||೯೬||

ರಾಮನ ನಿಜಭಾವ ಕಾಣುತ್ತ ಧವಳಾಂಗ
ಏರಿದ ವೃಷಭವ ಪಿಡಿಯೆ।
ಮೂಗಿನೊಳು ಬೆರಳಿಟ್ಟು ತೂಗಲು ಶಿರಮುಂಡ
ಗಿರಿಜೆ ನುಡಿದಳು ಭ್ರಮೆ ಬಂದು ||೯೭||

ಹಾಸ್ಯ ಹಾಸ್ಯಗಳೇಕೆ ಚಿರಂತರ ಮಾರ್ಗ
ಗೋಚರದುದೋ ಪೂರ್ವಲೀಲೆ।
ಮೂಷಕವಾಹನ ಪಿತನೆ ಪೇಳಿರಿಯೆಂದು
ಮಂದಾಕಿನಿ ಅಗಜೆ ಕೇಳಿದಳು ||೯೮||

ಮರೆದೇನೆ ಪಾರ್ವತಿ ಭುವನಾಲಯದಿ ಇವನ
ನರನ ಸುರನೆಂದು ಕೇಳಿದುದ।
ಮುಂದಲ ಸ್ಥಿತಿಗತಿಯ ತೋರುವೆ ನಾನೆನಲು
ತುಂಬ ಲಾಲಿಸು ಕರ್ಣದೊಳಗೆ ||೯೯||

ನಿನ್ನ ಮಾಯವ ಗೆಲಲು ನಮ್ಮಗೆ ಅಸದಳವು
ಅಲ್ಲಮಪ್ರಭು ತಾನೆ ಬಲ್ಲ।
ಮುನ್ನೂರ ಅರುವತ್ತು ಸುರಮುನಿ ನರಜೀವಿ
ಯನ್ನೊಪ್ಪಿ ಬರಲು ಬಿಡಲುಂಟೆ ॥೨೦೦॥

ನವಮೋಹ ಯೌವನದ ಕಳೆಗಾತಿ ಸತಿಬಂದು
ಸಾಂಗೋಪಾಂಗದಲಿ ಒಡಂಬಡಿಸೆ।
ಶಿವ ಮೊದಲು ಹರಿ ಬ್ರಹ್ಮ ಒಲಿಯದಿರುವರೆ ಕೇಳು
ತರಳ ರಾಮನ ನಿಷ್ಠೆ ಫಲವ ॥೨೦೧॥

ಅಲ್ಲಯ್ಯ ನಿನ್ನನು ಒಲ್ಲದೆ ನಡೆವಂತೆ
ಇಲ್ಲೀಗ ಇವನೊದೆದು ನಡೆದ।
ಎಲ್ಲರು ತಲೆದೂಗೆ ಹರಿಯಜ ಪ್ರಮಥರು
ನಲ್ಲೆ ಪಾರ್ವತಿಯು ಮೆಚ್ಚಿದಳು ॥೨೦೨॥

ಸಲ್ಲದೀ ಮರ್ತ್ಯ ಕೈವಲ್ಯಕೆಯ್ಯಲು ಬೇಕು
ವಲ್ಲಭಗೆ ಅಗಜೆ ಪೇಳಿದಳು।
ವಲ್ಲಭೆ ಲಾಲಿಸು ತೀರಿಲ್ಲವು ಲಿಪಿ ಮುಂದೆ
ಡಿಳ್ಳಿ ಕಾರ್ಯಗಳ ಭಲ ಪದವ ॥೨೦೩॥

ಹರನ ವರದೊಳು ಬಂದು ಜನಿಸಿ ಮರ್ತ್ಯಕೆ ಬರಲು
ಕಳೆದನು ಮೊದಲ ಕಂಟಕವ।
ಪಡೆ ಮೂರು ಕ್ಷೋಣಿಯ ಸದೆ ಬಡೆದು ಸತಿಯಿಂದ
ತನುವಳಿದು [ನ]ಮ್ಮ ಕಾಬವನು ॥೨೦೪॥

ರಾಮನ ನಿಜಸತ್ಯ ರಾಣಿಯೊಡನೆ ಪೇಳಿ
ಪ್ರೇಮದಿ ರಶ ಶಕ್ತಿಯಿತ್ತು।
ಮೂರು ನಯನದ ದೇವ ಸಾಗಲು ರಜತಾದ್ರಿ
ರಾಮ ಹೊರಡುವನರಮನೆಯ ॥೨೦೫॥

ಕರ್ಮವ ಮೊದಲ ಕಂಟಕವನು ಕಡೆಯ
ಬಾಗಿಲ ದಾಂಟಿ ಬರಲು।

ನಗೆ ಕಾಂತಿ ಲಾವಣ್ಯ ಬಗೆಗುಂದಿ ಬರುವನ ಕಂಡು
ಬೆದರಿದ ಕಾಟ ತನ್ನೊಳಗೆ ॥೨೦೭॥

ತರದೆ ಚೆಂಡನು ರಣಧೀರ ಬರಿದೆ ಬರಲು
ಕೇಳುವರೆಲ್ಲ ಮನ್ನೆಯರು।
ಭೀಮ ಮಾರ್ತಂಡನೆ ನೀ ಉಸುರು ರತ್ನಿಯ
ಮೂಗನರಿದೀಗ ತರುವೆವು ॥೨೦೭॥

ಪೇಳುವದಿನ್ನೇನು ಮೂಗ ಕನಸನು ಕಂಡ
ಗಾದೆಯಾದುದು ತಮ್ಮ ಬದುಕು।
ಮೇಘವಾಡಿದ ಮಳೆಯು ಆಗದೆ ಪೋಗುವುದೆ
ಮೂಜಗವೆಲ್ಲ ಕಂಡಿತಷ್ಟೇ ॥೨೦೮॥

ಹೋದ ಕಾರ್ಯದ ಸುದ್ದಿ ನಾಳೆ ಕಾಬಿರಿ ನೀವು
ರಾಯನೂರಿಗೆ ಬಂದ ಬೆಳಗೆ।
ಹೋಗಿ ಇಂದಿಗೆ ನಿಮ್ಮ ಗ್ರಾಮ ಸೀಮೆಗೆಯೆಂದು
ಮಾಡಿ ಉಡುಗೊರೆಯ ಕಳುಹಿದನು ॥೨೦೯॥

ಬರಿಮಾತು ಎನಬೇಡಿ ಉಳಿವೆ ಕಂಟಕವೆಲ್ಲ
ಹರಿದುದು ಲೋಕದಾಟ।
ಕಿರಿಯ ಜನನಿಯಿಂದ ಯಮನ ಪಟ್ಟಣದೊಳು
ಸ್ಥಳವೆಂದು ಎನಗೆ ತೋರುವುದು ॥೨೧೦॥

ಏನು ಬರಲು ಸ್ವಾಮಿ ಕಾಣಬಹುದು ಭೂಪ
ನೀ ಕಂಗೆಡದೆ ಎದೆಯೊಳಗೆ।
ರಾಯ ಜಟ್ಟಂಗಿಯ ಸ್ವಾಮಿ ಕಾಯ್ವನು ಎನ್ನ
ದೇವಿಯಿದ್ದಳು ಎನ್ನ ಮೇಲೆ ॥೨೧೧॥

ನಡೆ[ಯೆ]ಡೆಯು ಇರುವನಕ ಮೃಡಬೇರೆ ಕೊಲ್ಲನು
ಧೃಡವ ಬಲ್ಲಳು ಧರ್ಮದೇವತೆಯು।
ಕುಡಿವೆನು ಕಡಲೇಳನೊಡೆವೆನು ನಭ ಮುನಿಯೆ
ಕವಿಯಲು [ತ]ಳತ್ರಯ ನಿಲ್ಲುವುದೆ ॥೨೧೨॥

ಬಂದ ಪರಿವಾರಕೆ ಗಂಧವೀಳ್ಯವ ಕೊಡಿಸಿ
ಸಂಭ್ರಮದಿಂದವರ ಕಳುಹಿ।
ಸಂಗಯ್ಯ ಭಾವಾಜಿ ಲಿಂಗಣ್ಣ ಕಾಟಣ್ಣ
ಒಂದಾಗಿ ನಡೆಯೆ ಅರಮನೆಗೆ ||೨೧೩||

ಹೊಡೆವ ತಂಬಟೆ ಭೇರಿ ಕುಡುಮು ವಾದ್ಯಗಳಿಂದ
ಸಿಡಿಲಂತೆ ಭೋರಿಡುವ ಕಹಳೆಗಳು।
ತುರಗ ಮಂದಿಗೆ ಎಲ್ಲ ಕರೆದು ವೀಳ್ಯೆವ ಕೊಟ್ಟು
ಚತುರಂಗ ಮಾರ್ಬಲದಿ ಬರಲು ||೨೧೪||

ಮಂತ್ರಿಯ ಮಗ ನೀಲಕಂಠಗ ಕರೆವಾಗ
ಪಂಥದ ಲಿಂಗ ಸಂಗಯ್ಯ।
ಸಂತೋಷದೊಳು ಪೋಗಿ ಮನ್ನೆಯರು ನೀವು ಭೂ
ಕಾಂತೆ ಮುನಿಯಲು ನಿಮ್ಮ ಕೊಡೆವು ||೨೧೫||

ರಾಮ ಲಕ್ಷ್ಮಣರಂತೆ ತಾವಾಗಲಿರ್ವರು
ಪೋಗಲು ತಮ್ಮ ಅರಮನೆಗೆ।
ಜಾವ ನಾಲ್ಕಾಗಲು ಭಾನು ಬ್ರಹ್ಮಾಂಡಕ್ಕೆ
ಕಾವಳ ತೋರಿನ್ನು ನಡೆಯೆ ||೨೧೬||

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ತರಳ ರಾಮನು ಚೆಂಡು ತರದೆ ರತ್ನಿಯ ಮನೆಯ
ಹೊರಟು ಬಂದಲ್ಲಿಗೆ ದ್ವಾದಶ [>ತ್ರಿಯೋದಶ] ಸಂಧಿ ||೨೧೭||*

❖❖

* + ಅಂತು ಸಂಧಿ [>೧೩]ಕ್ಕಂ [ಪದನು] ೨೭೭೫ಕ್ಕಂ ಮಂಗಳ ಮಹಾಶ್ರೀ ಶ್ರೀ (ಮೂ).

ಸಂಧಿ : ಹದಿನಾಲ್ಕು

❖

ಬಾಲರಾಮನ ಮೇಲೆ ಆರೋಪ

---

*ಶ್ರೀ ಗಿರಿಜೆ ಅರಸನೆ ಭಾಗೀರಥೀಶನೆ
ಮೂಜಗವ ಪೊರೆದು ರಕ್ಷಿಪನೆ।
ವಾಸವ ಹರಿಯಜರು ಪಾದ ಶಿಖೆ ಕಾಣದ
ದೇವ ಕೊಡೆನಗೆ ಸನ್ಮತಿಯ ||೧||

ಕಿವಿಯೆರಡು ಇಲ್ಲದೆ ನಯನದಿ ಕೇಳುವನ
ಆಭರಣ ಮಾಡಿ ಧರಿಸಿದನೆ।
ಹೊದೆಯಲ್ಕೆ ಇಲ್ಲದೆ ಗಜಚರ್ಮ ಪೊದ್ದಂಥ
ಅಭವ ಕೊಡೆನಗೆ ಸುಮತಿಯ ||೨||

ಕರವಿರ್ದು ಮೂಗಿನೊಳ್ ತೆಗೆದು ಸವಿಯನುಂಬ
ವರಚಿಗ್ರಾಸದರು ಭೋಜನಕೆ।
ಸತಿಯರು ಇನವಲ್ಲದೆ ಸಲಹುತ ಕುಕ್ಷಿಯ
ಮೂಷಕದೊಡೆಯ ಕೊಡುಮತಿಯ ||೩||*

ವಾಣಿಯೆ ಸುಗುಣ ಪ್ರವೀಣೆಯೆ ವಿದ್ಯೆಗೆ
ಭಾರತಿಯೆ ಬಂದು ಒಡಗೂಡು।
ತೋರಿದ ಮತಿಯೊಳು ಕೊಂಡಾಡುವೆ ರಾಮನ
ಕಾವ್ಯ ಕಥೆಯ ಸಾಗಿಸುವೆ ||೪||

---

* + ಶ್ರೀ ಗುರು ಬಸವಲಿಂಗಾಯ ನಮಃ (ಮೂ)

ಕಾಶಿ ಕೈಲಾಸಕ್ಕೆ ವಿಶೇಷವೆನಿಸುವ ಹಂಪೆ
ಗಿರಿಜೇಶ ವಿರುಪಾಕ್ಷಲಿಂಗ।
ಲೇಸನು ಕರುಣಿಸು ಪ್ರಾಸ ಬೀಳದ ಹಾಗೆ
ನಾಲ್ಕು ರಾಷ್ಟ್ರಕದಿ ನಡೆವಂತೆ ||೫||

ರಾಮನ ಕೃತಿಯನು ಪೇಳ್ವೆನು ಲಾಲಿಸಿ
ಆಡದೆ ಕಲಹ ಮಾತುಗಳ।
ಮೋಹ[ನಿರಾಸಕ್ತ]ರಾಗಿ ಕೇಳದೆ ಬಲ್ಲವರು
ಪೇಳುವುದು ಮೂಢ ಮೂರ್ಖರಿಗೆ ||೬||

ಚೆಂಡನಾಡಲು ರಾಮ ಕಂದನೇನೆ ಮನೆಯೊಂದು
ಮುಂದುಗಾಣದೆ ಜನರು ನುಡಿಯೆ।
ಪಾಂಡವರ ಪುತ್ರರಿಗೆ ವನವಾಸ ತಂದವರಾರು
ವೊಂದರೆ ಅರಗಿನ ಮನೆಯ ||೭||

ಪ್ರಾರಂಭ ಫಲವನು ಆರು ಮೀರುವರಳವೆ
ಯೋಗೇಂದ್ರನಾಗಲು ಬಿಡದು ।
ಮೂರು ಮೂರ್ತಿಗೆ ಉಂಟು ಹಾನಿ ಅಪರಾಧಗಳು
ವಾಣಿಪತಿಯ ಶಿರಮುರಿ[ಯ]ದೆ ||೮||

ಹಾನಿಯನರಿಯನೆ ಹಲವು ಜೀವರಾಶಿ
ಮಾಡುತನು ತನ್ನ ಕೇಡ ||೯|| *

ರಾಮನು ಚೆಂಡಾಡಿ [ಕೆಡೆ]ದನೆಂಬುವರು
ಭೇದವ ತಿಳಿಯದ ಲೋಕ।
ಮಾದೇವ ಮುಂತಾಗಿ ಮನೆಮನೆ ತಿರಿದುಂಡ
ಪಾಡೇನು ನರರ ಪಾಟುಗಳು ||೧೦||

ಜಾನಕಿಯ ಕಾಲಿಂದ ರಾವಣನಳಿದನೆಂದು
ಆಡುವ ಜನ ವಾಕ್ಯವೆ[ಲ್ಲ]
ಬೇರವರ ಕಥೆಯಿಂದ [ರಾಮ ರಾವಣ] ಕೊಂದು
ನ್ಯಾಯ ತೀರಿತು ಲಂಕೆಯೊಳಗೆ ||೧೧||

ರಾಮಗೆ ವಿಧಿವಾಸ ಈಗ ಆದುದು ಅಲ್ಲ
ಪೂರ್ವದ ಹಗೆ ಜನ್ಮ ರತ್ನಿ।
ನಾಯಕಿ ಬಂದಿವನ ಕಾಡುವ ಪರಿಯೆಂದು
ನೋಡುವರು ಬಲ್ಲ ಜ್ಞಾನಿಗಳು ||೧೨||

ಅಳಿದವನು ಇಂದ್ರಗೆ ನಡೆಯೆ ಕುಕ್ಕುಟವೆಂದು
ತಿರುವಿಡಿದು ರವಿ ಪ್ರಕಾಶ।
ತರಳೆ ರತ್ನಿಯು ಎದ್ದು ತಡವರಿಸಿ ಎಡಬಲವ
ಮಾರ ರೂಪನೆ ಹೋದೆಯೆನುತ ||೧೩||

ಮಾರಿಯಾಕಾರಕ್ಕೆ ಸೀರೆ ಇಲ್ಲದೆ ಕುಳಿತು
ತೀರಲಿಲ್ಲವು ತನ್ನ ಮೋಹ।
ಮಾರನ್ನೋದನು ಓಡಿ ತೋರಿ ಬಯಲಾದಂತೆ
ಹೋದನೆ ಚೆನ್ನಿಗ ರಾಮ ||೧೪||

ಸಿಕ್ಕಿದ ಸೆರಗನು ಒತ್ತಿಕೊಳ್ಳಲು ಬಿಗಿದು
ಬಿಟ್ಟುದು ತನ ಮಾತು ಹೊದ್ದು ।
ಕುತ್ತಿಗೆ ಕೊರೆಯೆಂದು ಬಿಗಿ ಅಪ್ಪಿಕೊಳ್ಳದೆ
ಬೇಗ ಕುತ್ತಿಗೆಯನ್ನು ಬುದ್ಧಿ ||೧೫||

ಹರನೊಳು ಪಡೆಯದೆ ದೊರೆಯಬಲ್ಲನೆ ತನಗೆ
ಮರುಳಾಟವಾಡುತ ಬೊಗಳುತಲಿ।
ನೆರೆ ನೋಂಪಿ ಪಾರ್ವತಿಯ ತಪಸಿರದೆ ಬಯಸಿದರೆ
ಕಡು ಪಾಪಿಗವನು ಸಿಕ್ಕುವನೆ ||೧೬||

ಮಿಕ್ಕು ಮಾತಿಗೆ ಇನ್ನು ದುಃಖಮಾಡಲು ಸಲ್ಲ
ನಕ್ಕಾರು ಎನ್ನ ಸರಿಯವರು।
ಸಿಕ್ಕದೆ ಹೋದವನ ಶಿರವ ತರಿಸದ ಮೇಲೆ
ಹೊತ್ತ ಮೊಲೆಗಳು ಮೆಕ್ಕೆ ಕಾಯಿ ||೧೭||

ಕಾಮನ ತಾಪವ ತಾಳಲಾರೆನೆ ಸಂಗಿ
ಹೇಳಿಕೊಂಡಳು ದೈನ್ಯ ಬಿಟ್ಟು।

ಸೇರದೆ ಗಂಡಗೆ ಬೇರೆ ಮನಗಳು ಬಿಡಲು
ಕಾಲಿಲೊದ್ದಂತಾಯ್ತು ಬದುಕು ||೧೮||

ಇನ್ನವನ ಬಿಡಲಿಕ್ಕೆ ಹೆಣ್ಣುತನಕೆ ಹೀನ
ತನ್ನ ಶಿಕ್ಷಿಸುವ ಪಿತಗ್ಹೇಳಿ।
ಹಣ್ಣ ಮುದಿಯನು ಅರಮನೆಯ ಹೊಗುವುದರೊಳಗೆ
ಹಣ್ಣಬೇಕೆನ್ನ ಕಾರ್ಯವನು ||೧೯||

ಇನ್ನೇಕೆ ಬಿಡುವುದಕೆ ರಾಮನ ಅತಿ ಆಸೆ
ಕೊ[ಲ್ಲು]ವ ಬುದ್ಧಿಯ ಗ್ರಹಿಸು।
ಕಳ್ಳ ದುಃಖವ ಮಾಡಿ ಕಂಪಿಲಗೆ ಛಲ ಬರುವಂತೆ
ಬಣ್ಣಗೆಡಿಸಬೇಕು ಭಾವಗಳ ||೨೦||

ನಾನಾ ಟೌಳಿಯ ಮಾಡಿ ಪ್ರಾಣ ಕೊಲ್ಲದೆ ಬಿಡೆನು
ಮೇಲಿಹುದು ಬಡಿಗಲ್ಲು ತನಗೆ।
ತಾ ಮುಂದುವರಿಯಲು ತೀರುವುದು ಹಗೆತನ
ನಾ ಗರತಿ ಭಾರ ತಪ್ಪುವುದು ||೨೧||

ಇಟ್ಟ ಆಭರಣವ ಕಿತ್ತಳು ಮುರಿದಿನ್ನು
ಇಟ್ಟಳು [ಮಂಚ]ದೆಡ ಬಲಕೆ।
ಪಟ್ಟೆಯ ಸೀರೆಯ ಜಾಗಿಸಿ ತಾ ಹರಿದು
ತೊಟ್ಟ ರವಿಕೆಯ ಪುಡಿಮಾಡಿ ||೨೨||

ಪೊಗರುವ ಕುಚಗಳನು ಉಗುರಿಂದ ಸೀಳಿದಳು
ಸುಗುಣ ವಿಟಬಂದು ನೆರೆದಂತೆ।
ಕದಪು ಗಲ್ಲವ ತುಟಿಯ ಕಡಕೊಂಡು ಮಂಡೆಯ
ಕೆದರಿ ಕಿತ್ತಳು ಕೇಶಗಳ ||೨೩||

ಮನ್ಮಥ ಬಂದು ಕಂದಿದ ತೆರದೊಳು
ಕರಗಿಸಿ ಕಳೆಯ ಕಾಂತಿಯನು।
ಹರಣ ನೀಗುವಳಂತೆ ಕೊರಗುತ ಮಂಚದಲಿ
ಒರಗಿದಳು ಉರಿಮಾರಿಯಾಗಿ ||೨೪||

ರಾಯನ ಬಳಿಯಿಂದ ಆಳು ಬಂದರೆ ಸಂಗಿ
ಹೇಳಮ್ಮ ಹರುಷವಿಲ್ಲೆಂದು।
ರಾಯ ಕಂಪಿಲಭೂಪ[ನ] ಬೇಂಟೆ ಸಂಭ್ರಮವ
ಲಾಲಿಸಿ ಬಲ್ಲ ಜ್ಞಾನಿಗಳು ॥೨೫॥

ಬೆಟ್ಟವನೇರಿ ಬೆಟ್ಟದಿ ಕಂಪಿಲ[ರಾಯ]
ಬಿಟ್ಟನು ಮೊಲಕೆ ನಾಯಿಗಳ।
ಅಟ್ಟಲು ಮೊಲನೆದ್ದು ನಾಯಿ ಮುರಿದೋಡಲು
ಮತ್ತೆ ಕಂಪಿಲನು ಬೆರಗಾದ ॥೨೬॥

ಕೇಡಿಗೆ ಮೊದ[ಲಿದು] ಹಾಳು ಬೇಟೆಗೆ ಬಂ[ದೆ]
ಏನೆಂದು ಶಿವ ತಾನೆ ಬಲ್ಲ।
ನಾರಿಗೆ ತೋರ್ವುದೊ ತನಗೆ ತೋರ್ವುದೊ ರತ್ನಿ
ಪ್ರಾಣವಳಿದಳೊ ನಾನು ತಡೆಯೆ ॥೨೭॥

ಬಾರಗೊಡದೆ ಶೋಕದಿ ನಳಿನಾಕ್ಷಿ ಪೇಳಿದಳು
ಬಲುಮೆ ಸಾಧನದಿ ನಾ ಬಂದೆ।
ದಿನ ಎರಡು ಅಪ್ಪಣೆಯ ಕರೆಕರೆಯಿಂದಲಿ ಇತ್ತೆ
ಮರೆದೆನು ಮಂದಮತಿಯೊಳಗೆ ॥೨೮॥

ಸಾಯದೆ ಉಳಿಯಳು ಕೋಣನಾದೆನು ನಾನು
ಪ್ರಾಣಮಿಕ್ಕಿ ಮೋ[ಹಿ]ತ[ಕೆ] ।
ಹೇಳಿದ ಅಪರಾಧ ಕೊಟ್ಟು ದೈನ್ಯಗಳಿಂದ
ಪಾಲಿಸೆನುತ ಪೇಳುವೆನು ॥೨೯॥

ಗಡ ಮುಗಿಸಿದ ಬೇಂಟೆ ರಾಣಿರತ್ನಿಯ ನೆನೆದು
ಜೀವಂತ ಮೃಗವನ್ನು ಹಿಡಿಸಿ ।
ಪ್ರಾಣದ ಕಾಂತೆಗೆ ಕೈಗಾಣಿಕೆ ಕೊಟ್ಟು
ಮಾನಿನಿಯ ಮುನಿಸ ತಿಳುಹುವೆನು ॥೩೦॥

ಕಸ್ತುರಿಯ ಮೃಗಗಳು ಕಡವೆ ಕೋರಂಗಿಯ
ಉತ್ತಮದ ಪುಣಗಿನ ಬೆಕ್ಕು।

ನೆಟ್ಟನೆ ಇವನೊಯ್ದು ಮುಂದಿಟ್ಟು ಎನ್ನಯ
ತಪ್ಪನೊಪ್ಪಿಕೊ ಎನುತ ಪೇಳುವೆನು ||೩೧||

ಕರಿ ತುರಗ ಕಾಲಾಳು ಮೆರೆದು ಆರ್ಭಟಿಸುತ್ತ
ತಿರುಗಿದ ತನ್ನ ಪಟ್ಟಣಕೆ।
ಗಡಿ ರಾಜ್ಯ ಸೀಮೆಗಳ ದಾಂಟಿನ್ನು ನಡೆದನು
ಮುಂದಕೆ ನಡೆದ ಹ[ರುಷ]ದಲಿ ||೩೨||

ಹೊಡೆವ ತಂಬಟೆ ಭೇರಿ ಭೋರಿಡುವ ಬಿರಿದಿನ ಕಹಳೆ
ಅಡಿಗಡಿಗೆ ಸಾರುವ ಭಟರು।
ಪಡುವಣಾದ್ರಿಯ ಸೂರ್ಯ ತಾಯೊಡಲಿಗೆ ಇಳಿವಂತೆ
ಒಡನೆ ಹೊಕ್ಕನು ತನ್ನ ಪುರವ ||೩೩||

ಬಂದು ಹಜಾರದ ಮುಂದೆ ನಿಂದನು ರಾಯ
ಮಂದಿ ಮಾರ್ಬಲವ ನೋಡಿದನು।
ಇಂದು ಬೇಂಟೆಯನಾಡಿ ಬಳಲಿ ಬಂದಿರಿ ಪೋಗಿ
ಎಂದು ಎಲ್ಲರ ಕಳುಹಿದನು ||೩೪||

ಹೋಗಯ್ಯ ಬೈಚಪ್ಪ ಬಾದುರಖಾನ ಬಳಲಿದಿರಿ
ಹೋಗಿರ್ರೈ ಸರುವ ಮನ್ನೆಯರು।
ಉಡುಗೊರೆ ವೀಳ್ಯವ ಕೊಡಿಸಿ ರಾಜೇಂದ್ರನು
ಅಹುದೆ ಕುಂಜರವನು ಇಳಿಯೆ ||೩೫||

ರಾಯಗೆ ರತ್ನಿಯ ಪ್ರಳಾಪವು ಘನವಾಗಿ
ಸಾಗಿದ ದೊಡ್ಡರಮನೆಗೆ।
ರಾಣಿ ಹರಿಹರದೇವಿ ಕಮಲಾಜಿ ಇರ್ವರು
ಮಾಣಿಕದಾರತಿಗಳ ತರಲು ||೩೬||

ಭೋಗ ವಿಷಯಕೆ ತಂದ ಆರತಿ ತಿಮ್ಮರಸಿ
ಪಳದಾರತಿಯನು ಬೆಳಗೆ।
ಉಡುಗೊರೆ ಬಂಗಾರ ತರತರದಿ ಒರೆದಿತ್ತು
ಗಿಳಿಹಂಸೆ ಯಾಕೆ ಬರಲಿಲ್ಲ ||೩೭||

ರಾಣಿಯರೊಳಗೆಲ್ಲ ಕಾಣದೆ ತನ್ನಯ
ಪ್ರಾಣಪದಕದ ರತ್ನಿಯನು।
ಏಣಾಂಕಧರ ಬಲ್ಲ ಯಾವ ಮೂಲದ ಸಿಟ್ಟೊ
ತಾನು ತಡೆದ ದುಗುಡದ ಸಿಟ್ಟೊ ||೩೮||

ಚಂದ್ರನ ಕಳೆಯುಳ್ಳ ರಂಭೆ ಯಾತಕೆ ತಡೆದಳು
ಅಂಗದಿ ಕುದಿದು ಕರಗುವನು।
ಸಂಗಿಯ ಕೇಳಲು ಕೊರಡಾಗಿ ಇರುವಳು
ಚಂಡ ಮನ್ಮಥನ ಬಾಧೆಯಲಿ ||೩೯||

ಕಾಯ್ದು ಇರು[ವ]ಳು ನಿಮ್ಮ ಕಾಬನಕ ಜೀವನವ
ಮರೆಯಾಗಿಹಳು ಮತ್ಸರದಿ।
ಹೋಗಿ ನೋಡಲು ರಾಯ ಪಾದಕ್ಕೆ ತಿಳಿವುದು
ಬೇಡಿದ ಉತಿಯ ಕೊಡದಿರಲು ||೪೦||

ತೊರೆದುಕೊಂಬಳು ಪ್ರಾಣ ಉಳಿಯ ಬಲ್ಲೆ[ನೆ] ನಾನು
ಎದೆಗೆಟ್ಟು ರಾಯ ಅಡಿಯಿಡಲು।
ಯಮನ ಭಾಗದಿ ಪಲ್ಲಿ ನುಡಿಯೆ ಮಗನನು ಕೊಲ್ವ
ತೆರಬಾರು ಬೆಂದು ಕಲಹವನು ||೪೧||

ಪತಿಯಳಿದ ಸತಿಯಂತೆ ರಸಗುಂದಿ ರಾಜೇಂದ್ರ
ತವಕದಿ ಪೊಗಲು ಅರಮನೆಯ।
ಯುವತಿ ನಾಯಕಿ ಇರುವ ಸಜ್ಜೆಗೃಹಕೆ ಪೊಗಲು
ಹೊಸ ಪರಿಯಾಗಿ ಎಸೆದಿರಲು ||೪೨||

ಕಂಡನು ಕಮಲಾಕ್ಷಿಯ ಕಡಗ ವಾಲೆಯು ಬಂದಿ
ತುಂಡು ತುಂಡಾಗಿ ಬಿದ್ದಿಹುದ।
ತೊಂಡನೂರೊಳು ದೈತ್ಯ ಕರಿಯ ಬಂಟನ ಕೊಂದ
ಅಂಗಕ್ಕೆ ಮಿಗಿಲಾಗಿ ಇರಲು ||೪೩||

ಮುತ್ತಿನ ಸರವರಿದು ಇತ್ತರದೊಳು ಚೆಲ್ಲೆ
ಹಸ್ತ ಕಡಗ ಹವಳ ಸರವು।

ಕಿತ್ತ ಮಂಡೆಯ ಕೇಶ ಕುರಿಯ ಬೋಳಿಸಿದಂತೆ
ಸುತ್ತಲು ರಾಯನೆದೆಗೆಟ್ಟ ||೪೪||

ರಾಯನ ಕಾಣುತ್ತ ಏಳುವಳು ಕೈಯೂರಿ
ಬೀಳುವಳು ತ್ರಾಣವಿಲ್ಲೆನುತ।
ಏನಾದೆ ಸಂಗಾಯಿ ತೋಳನಾದರು ಪಿಡಿಯೆ
[ಸ್ವಾ]ರಿ ಬಂದಿಹುದು ಸನ್ನಿಧಿಗೆ ||೪೫||

ಮಡದಿಯ ಕಾಣುತ್ತ ಒಡಲೊಳು ಕಿಚ್ಚೆದ್ದು
ಸುರಿಸುತ ಕಣ್ಣೊಳು ಜಲವ।
ಬರುವುದೆನುತ ಹೀಗೆ ತಿಳಿಯದೆ ಹೋದೆನು
ಕೊಡಲೇನೆ ನಾರಿ ಅಪರಾಧವ ||೪೬||

ನಾರಿ ನೀನಳಿಯಲು ತಾ ಬೇರೆ ಉಳಿಯುವೆನೆ
ಜೋಡಿನೊಳಗೆ ಸಾಗಿ ಬರುವೆ।
ಕೋಗಿಲೆ ಸ್ವರದವಳೆ ಬಾಯಿದೆರೆದು ನುಡಿಯೆ
ರೋಗವೆ? ಮುನಿಸಿನ ಬಗೆಯೆ? ||೪೭||

ಕಾಣ ಬಂದುದು ಕೇಡ ಹೊಸಬೇಂಟೆಯ ಸ್ಥಳದಿ
ನಾಯಿ ಮೊಲನ ದಾಟಲು ಸುಖವೆ।
ಯಾರಿಗೆ ತೋರುವುದೆಂದು ಕೋಣಬುದ್ಧಿಯ ತಾನು
ಬೀಳಲು ಮುಖವಡಿಯಲರಸು ||೪೮||

ಅಳಲೇಕೆ ರಾಜೇಂದ್ರ ಮರುಳಯೆನ್ನರೆ ನಿಮ್ಮ
ಸೊರಗುತ ರತ್ನಿ ಕರವಿಡಿದು।
ಕಡೆಯ ಲೋಕದಿ ಹೆಣ್ಣು ಪಾದಗಳಿರಲು
ಹಳೆ ಜೋಡು ಪೋಗೆ ಹೊಸದಿರದೆ ||೪೯||

ಅಳಿವಳು ನಿಶ್ಚಯಿಸಿ ತನಗೆ ಗತಿ ಮುಂದೆ
ಹೊರಳುತ ರಾಯ ಶೋಕದಲಿ।
ಕುಜಜಾತಿ ಸ್ತ್ರೀಯರ ತೊರೆದು ಬಿಟ್ಟೆನು ಮುನ್ನ
ಗುಣ ಭಾವ ರೂಪ ಚೆಲ್ವಿಕೆಯ ||೫೦||

ಉತ್ತಮದ ತೇಜಿಗೆ ಕತ್ತೆಗಳು ಸರಿಯಹುದೆ
ರತ್ನಕೆ ಮುತ್ತು ಜೋಡೆ।
ಕಸ್ತುರಿಯ ಮೃಗಕಿನ್ನು ಮಾರ್ಜಾಲ ಸರಿಯಹುದೆ
ಮತ್ತೊಬ್ಬಳ ಮುಖವ ನೋಡುವೆನೆ ॥೫೧॥

ನೋಡಿದಳು ರಮಣನ ಅವನ ತಾಪವನೆಲ್ಲ
ಮೇಲೆನ್ನ ಕಾರ್ಯ ಸಾಗುವುದು।
ತೋಳ ಪಿಡಿಯೆಲೆ ಸಂಗಿ ಗೋಡೆ ಒತ್ತಿಲಿ ಕುಳಿತು
ಹೇಳಿ ಅಳಿವೆನು [ನ]ನ್ನ ತಾಪ ॥೫೨॥

ಎದ್ದು ಕುಳಿತಿರೆ ರಾಯ ಅರ್ಧ ಪ್ರಾಣವು ಬರಲು
ಮುದ್ದಿಸಿ ಗಲ್ಲವ ಪಿಡಿದ।
ಅಗ್ರದ ರೋಗವೊ ಸವತಿಯರ ಕದನವೊ
ಸುದ್ದಿ ಪೇಳೆ ಮನಗಾಣಿಸುವೆ ॥೫೩॥

ಬಂದ ಮೂಲವ ಪೇಳು ಚಂಡಿಕೆಯ ಹೊಡೆಸುವೆನು
ಮಂದಿ ಪಿಡಿಸುವೆ ನಿನ್ನ ಬ[ಳಿಯೆ]।
ನಂಬಿಗೆ ಕೊಡು ಇದಕೆ ಕೊಂದೆನೆಂಬುದು ದಿಟ
ಗಂಡಹುದು ಪ್ರಾಣವ ತೊರೆವೆ ॥೫೪॥

ಹಿಡಿ ಅಭಯವ ಲೋಲು ಪಡೆದವನಾಗಲು
ಹೊಡೆವೆನು ತುಂಡೇಳು ತಲೆಯ।
ದೃಢ ಸಿದ್ಧ ಈ ಮಾತು ತಪ್ಪಿದರೆ ಹರನಡಿಗೆ
ಹೊರ[ಗೆಂ]ದು ಭಾವಿಸೆ ನಾರಿ ॥೫೫॥

ಮತ್ತೇಕೆ ಹಣೆಯೊಳು ಬಿದ್ದವೇತಕೆ ವಾಲೆ
ಮುದ್ದುಮೋಹನ ಮಾಲೆ ಚೆಲ್ವೆ।
ಗದ್ದದ ಕಲೆಯೇನು ವಿಟಗಾರ ಪುರುಷನು
ಗುದ್ದಾಡಿದಂತೆ ತೋರುವುದು ॥೫೬॥

ಹೇಳುವುದಿನ್ನೇನು ಬೇರ ಬಲ್ಲವರೊಡನೆ
ಕಾಣದೆ ಬಲ್ಲರಿಗೆ [ನೆ]ಲೆಯು।

ಮೇಗಯ್ಯ ಹುಣ್ಣಿಗೆ ನೋಡುವರೆ ಕನ್ನಡಿಯ
ನೀವಾಡಿದ ಮಾತು ನಿಜಕರವು ||೫೭||

ಒಡೆದರೆ ಮನೆಹಾಳು ಮಡಗಿದರೆ ಯಮ ಬಾಧೆ
ನುಡಿಯದಿರಲು ತಾನು ಕಳ್ಳಿ।
ಕ[ಡೆಗೇ]ನ ಮಾಡುವುದು ಕಂದನ ಮೇಲೊಂದು
ಮುದುಕನ ಕೂಡುವುದು ಸುಡಲಿ ||೫೮||

ಮಗನ ಜೀವಕೆ ಮುಂಡೆ ಹಗೆಯಾದೊ ಎನುತಲಿ
ಉಗಿವರು ಸರಿಯ ಸವತಿಯರು।
ರಮಣನ ಹಿತವೇನು ಮಗನ ಕೊಲ್ಲಲಿ ಎಂದು
ನಗೆ ಸರಸ ಮಾಡೆ ನಾಚಿಕೆಯು ||೫೯||

ಹೇಳಲು ನೀ ಮಾಡೆ ಕಾರ್ಯಶಕ್ತಿಗಳೇನು
ಭೂಮಿಯೊಳಿದಿರುಂಟೆ ಅವಗೆ।
ಬಾಳುವ ಫಲಪ್ರಾಪ್ತಿ ತನಗೆ ಇಲ್ಲದ ಮೇಲೆ
ಹೇಳೇಕೆ ತಲೆದೂರು ಇರಲಿ ||೬೦||

ಯಾವಾಗ ತಲೆ ಬುರುಡೆ ಇಳಿಸುವೆ ಗಳಿಗೆಯಲಿ
ಪಡೆದ ಕೋಟಲೆಯ ಶಿವಬಲ್ಲ।
ಯಮನಿಗೆ ನಾ ಗುರಿಯು ಅಳಿದುಕೊಂಬೆನು ಪ್ರಾಣ
ಸ್ಥಿರ ಪಟ್ಟ ನೀವಾಳಿಯೆನಲು ||೬೧||

ಬೇಟೆಗೆ ಬಾರದೆ ಆಟವ ಕೈಕೊಂಡು
ನೋಟಕೆ ಚೆಂಡನಾಡಿದನು।
ಲೋಕ ಮೆಚ್ಚುವ ತೆರಕೆ ಚೆಂಡ ಮನೆಗೆ ಇಟ್ಟು
ಈ ಮಾಟವ ಮಾಡಿದ ಮಗನು ||೬೨||

ತಂದೆ ಮಗನಿಗೆ ನೀನು ಹೆಂಡಿರಾಗೆನುತಲಿ
ಮುಂಡೆ ಬರೆದಳು ಹಣೆಯೊಳಗೆ।
ಮಿಂಡ ಪ್ರಾಯದ ಹೆಣ್ಣ ಮುದಿಯ ಮೂಳಗೆ ಕೊಟ್ಟು
ಕಂದನಿಗೆ ಸೆರಗ್ಹಾಸು ಎನುತ ||೬೩||

ಕಳೆಕೊಂಬೆ ಪ್ರಾಣವ ಸುಳುಹುದೋರದೆ ನಿಮಗೆ
ಗ್ರಹಿಸಿ ಮನದೊಳಗೊಂದ।
ಬಲು ದುಃಖ ಮಾಡುವರು ಬಂಡಾಟ ಎಲ್ಲವ ಪೇಳೆ
ಅಳಿಯಬೇಕೆಂದು ನಾ ತಡೆದೆ ॥೬೪॥

ನಗುವ ಸವತೆರ ಮುಂದೆ ಎಡಹಿದ ತೆರನಾಯ್ತು
ಹೊರೆವೆ ಪ್ರಾಣವನು ಹೊಲೆ ಬಾಳು।
ಶಕ್ತಿ ಸಾಲದ ಮೇಲೆ ತರಳಗೆ ಇತ್ತೆನ್ನ
ಇರಬೇಡ ಎಂದರೆ ಸುಖದಿ ॥೬೫॥

ಚಿಕ್ಕಂದು ಮೊದಲಾಗಿತೇಕೆ ಬಾಳಿದೆ ನಿಮ್ಮ
ಮತ್ತೊಂದು ಬುದ್ಧಿ ಕಂಡುಂಟೆ।
ಕೆಟ್ಟಿತ್ತು ಇಂದಿಗೆ ಎನ್ನ ಪತಿವ್ರತೆ ನಿಷ್ಠೆ
ಸತ್ತ ಮುದಿಯನ ಮೀಸೆ ಸುಡಲಿ ॥೬೬॥

ಎಂದು ಬಾರದ ಮಗ ಬಂದನೆನ್ನುತ ನಾನು
ಸಂಭ್ರಮದಿ ಹೆಚ್ಚಿ ಹಿಗ್ಗಿದೆನು।
ಗಂಧ ಕಸ್ತುರಿ ಪುಣುಗು ಮುಂದಿಟ್ಟು ಪೂಸೆನಲು
ಕಂಡೆನ್ನ ರೂಪ ಕಾಮಿಸಿದ ॥೬೭॥

ತಾಯಲ್ಲವೇ ಎಲೆ ಪಾಪಿ ಬೇಡವೆಂದರೆ ನಾನು
ರಾಯ ಭೀಮನಂದದಿ ಬಾಚಿ ತಬ್ಬಿ।
ತೀರುವುದೇನರಸೆ ಬಾಲೆಯರ ಕೈಯೊಳಗೆ
ಮಾನಾಭಿಮಾನವ ಕೊಂಡ ॥೬೮॥

ನೆರೆ ಪಾಪಿ ಪೋಗೆನಲು ಕರವೆರಡ ಪಿಡಿಕೊಂಡು
ಮುಗುಳು ಮೊಲೆಗಳನು ಪಿಡಿದೊತ್ತಿ।
ಒದರಿಟ್ಟ ತೆರದೊಳು ಉಗುರಿಂದ ಒತ್ತಿದರೆ
ರತುನವೆ ಚೆಲ್ಲಾಡಿ ಹೊಯ್ತು ॥೬೯॥

ರಾಯನ ಸತಿಯಿಂದ ಹೇಗೆ ತೋರಲಿ ಮುಖವ
ಜೋಗಿ ಮುದಿಯನ ಬಾಳು ಸುಡಲಿ।

ಮಾಡುವುದಿನ್ನೇನು ಮೆಚ್ಚಿಬಂದವಳೆಂದು
ತೀರಿಸಿದ ಅವನ ಶಾಸ್ತ್ರವನು ||೭೦||

ಮಂಡೆ ಕೂದಲ ನೋಡೊ ರಂಡೆ ಬಾಳಿನ ಮುದಿಯ
ಗಂಡಿಗೆ ಹೆಣ್ಣು ಈ[ಡವು]ದೆ ।
ಚಂದವಾಯಿತು ರಾಯ ಸಂಸಾರ ತಗ್ಗಿದ ಬಳಿಕ
ಕಂದಗೆ ಕೊಡುವ ಮನಸುಂಟೆ ||೭೧||

ಕೀಚಕನು ದ್ರೌಪದಿಯ ಮೋಸದಿಂದಲಿ ಪಿಡಿಯೆ
ಬಾಣಸಿಗ ಭೀಮನಿಗುಸುರೆ।
ರೋಷದಿಂದಲಿ ಪೋಗಿ ಸ್ತ್ರೀವೇಷದೊಳಗೆ ಕೊಂದ
ರಣಹೇಸಿಗಳುಂಟೆ ನಿನ್ನಂಥ ||೭೨||

ಹೇಳಲು ಈ ಬಗೆಯ ಮೋರೆಯಲಿ ಸಿಟ್ಟಿಲ್ಲ
ನೀಗಲೆ [ನ]ನ್ನ ಪ್ರಾಣವನು।
ಮೂಡಲಿಲ್ಲವೆ ಮೀಸೆ ಮುಖದೊಳು ರಂಡೆಯರ
ಬಾ[ಳನು] ನಾ ಮಾಡಿದೆನು ||೭೩||

ಕೂಡಿದ ಸತಿಯ[ಳ] ಊರೆಲ್ಲ ಪಿಡಿವಾಗ
ಸಾಯಬಾರದೆ ಮೂಗೆನಲು।
ಮಾಡುವುದು ದೊರೆತನ ಮಡದಿಯರು ಕ[ಳ್ಳಿ]
ನಕ್ಕಾಡರೆ ನಿನ್ನ ಸಮದವರು ||೭೪||

ಹೇಳಲಾರೆನೊ ಪಾಪಿ ಜೀವೆಲ್ಲ ಸೊರಗಿತ್ತು
ರಾಮನೊಳಗೆ ಹೆಣಗಾಡಿ।
ಕಾಣದಿರ್ದರೆ ನಿಜವು ನೀನೋಡು ಕುಚಗಳನು
ಮೇಲು ಮುಸುಕನು ಹಾರ್ದೊಡೆದು ||೭೫||

ಕುಂಭಕುಚಗಳ ತೋರೆ ತಿಂಗಳ [ಮ]ರೆಯಂತೆ
ಕಂಗೊಳಿಸುತ್ತಿರಲು ನಿಜವಹುದು।
ಸಂಗಿಯ ಕೇಳಿದಕೆ ಸಟೆದಿಟವು ಎಂಬುವದ
ಅಂದಿ ಹೊರೆಯದು ಈ ಬಾಳು ||೭೬||

ಹುಸಿಯ ಸಟೆಗಳ ಪೇಳಿ ಸುಳಿಯ ಮುರಿವೆನು ಇದಕೆ
ಗುರುತಿದೆ ಚೆಂಡು ಮಂಚದಲಿ।
ಕೊಡು ಸಂಗಿ ಕೈಯೊಳಗೆ ಅರಷ್ಮವಾಗಲು ಮನಕೆ
ಕೊರತೆ ಕಂಡಿಟ್ಟಳು ಬೇಗ ||೭೭||

ಕಂದನ ಕೊಂದರೆ ಭೂಮಂಡಲದಿ ಅಪಕೀರ್ತಿ
ಇಂದೆನ್ನ ನೀ ಕೊಲ್ಲು ರಾಯ।
ರಂಡೆ ನಾನಳಿಯಲು ನಾಲ್ವರು ನಿನಗುಂಟು
ಹೇಗಿರಲಿ ಗರತಿಯೆಂದೆನುತ ||೭೮||

ರಾಮನ ಮುಖ ನೋಡಿ ನಾನು ಬಾಳುವಳಲ್ಲ
ಮೇಲವನ ಕೊಂದು ತಲೆ ಬರಲು।
ಪ್ರಾಣ ಉಳಿದರೆ ಕಾಣೆ ಸಾರಿದೆ ಕಡೆ ಮಾತು
[।ಸಾ]ಯುವೆನು ಎರಡು ಗಳಿಗೆಯಲಿ ||೭೯||

ಸಾಯಬೇಡವೆ ನಿನ್ನ ಜೀವಕೆ ಬಾಲನ
ಆಹುತಿಯ ಕೊಡುವೆ ನಿಮಿಷದಲಿ।
ಕಾಲಾಗ್ನಿ ಕೋಪದಿ ರಾಯನೇಳಲು ರತ್ನಿ
ಏರಿಸಿದೊ ಛಲವದೀಕ್ಷಣದಿ ||೮೦||

ಊರು ಸೂರ್ರೋಗಲು ಅಗಸೆ ಹಾಕಿದ ಗಾದೆ
ತೀರಿ ಹೋಯಿತು ಕೆಲಸ ನಿನ್ನೆ।
[ತಾ]ಯ ತಬ್ಬಿದ ಮೂಳ ತಂದೆ ಕೊಳ್ಳದೆ ಬಿಡನು
ಸಾಯುವೇತಕೆ ಎನಗಾಗಿ ||೮೧||

ಮಗನು ಮಾಡಿದ ಕರ್ಮ ಜನರು ಕಾಣದು ರಾಯ
ಭುವನ ಕಾಣದು ತಲೆಯ ಹೊಡೆಸಿ।
ಹೊರಬೇಡ ಅಪಕೀರ್ತಿ ವರ ಸೂಳೆ ತಾನಷ್ಟೆ
ತರಳಗೆ ಮಾಡೆ ತಣ್ಣಗಿಹುದು ||೮೨||

ಅಪಕೀರ್ತಿ ಹೊರಬೇಡ ಅವನಿಗೆನ್ನನು ಕೊಟ್ಟು
ಸುಖದೊಳು ಮಗನ ನೋಡರಸೆ।

ಶಕ್ತಿಗುಂದಿದ ಹೆಣ್ಣ ಮುದಿಯ ಮುಪ್ಪಿನ ಕಾಲ
ಸತ್ತರೆ ಮುಂಡೆಯಾಗುವೆನು ||೮೩||

ನಾರಿಯಾಡುವ ಮಾತ ಕೇಳಿ ಕಂಪಿಲರಾಯ
ಕಾಲನಾರ್ಭಟದೊಳು ಪೊರಡೆ।
ಏರಲು ತಲೆ ಮರುಳು ಎದ್ದನು ಗರ್ಜಿಸಿ
ಮಾರಿಯಂದದಿ ಪೊರಟು ಬರಲು ||೮೪||

ಬಂದು ಸದರಿನ ಮೇಲೆ ಕುಂಡಿ ಊರದೆ ಕುಳಿತು
ಹೆಂಡಿರು ಅಳಿದವರ ತೆರದಿ।
ಭಂಡಾರಿ ಬುಕ್ಕನ ಕರೆದು ಬೇಗದಿ ಹೋಗಿ
ಬರಹೇಳೊ ಮಂತ್ರಿಯ ಬೇಗ ||೮೫||

ಪರಿದೋಡಿ ಬಂದನು ಪ್ರಧಾನಿಯ ಬಳಿಗಾಗಿ
ಬರಲೆಂದ ಅರಸ ಬೇಗದಲಿ।
ಅದು ಏನೊ ಇಂತಪ್ಪ ತುರುತದವರ ಅಗ್ರ
ಅಳಿದಲ್ಲಿ ಮನೆಯನು ಹೊಕ್ಕೆ ||೮೬||

ತಿಳಿಯಬಾರದು ಸ್ವಾಮಿ ತರವಾಗಿ ಕಾಣುವುದು
ಒಡೆಯ ಎನಲು ಎನಗೆ ಭೀತಿಗಳು।
ಆಡುವುದೆ ಆನೆಗಳು ಹುರಳಿಯ ಗಿಡದೊಳು
ನುಡಿಯಣ್ಣ ನಿನಗೆ ತಿಳಿದುದನು ||೮೭||

ರಾಯ ರಾಮನು ಚಂಡನಾಡಿದೆಂಬೊರು ನಿನ್ನೆ
ಹೋಗಿ ಬಿತ್ತಂತೆ ಅರಮನೆಗೆ।
ಕೇಳುವರೆ ಕಂದರ್ಪ ರಾಯ ರಾಮನು ಹೊಡೆಮರಳಿ
ಗಾದ ವಿವರವನು ತಿಳಿದಿಲ್ಲ ||೮೮||

ಮುಂಡೆ ರತ್ನಿಯ ಮೂಲವೆಂಬುವುದು ತನಗುಂಟು
ಕಂಡಿವನ ರೂಪ ಸೈರಿಸದೆ।
ಬಂಡಾಟ ಮಾಡದೆ ಬಿಡುವ ಜಾತಿಯು ಅಲ್ಲ
ಬಂದರೆ ನಿಮಗೆ ಕಾಬುವದು ||೮೯||

ಆದರಾದಿತು ದುಃಖ ಕುಲಗೇಡಿ ರಂಡೆಯು
ಹಿಂದೆ ಸೇರಿದಾಗಲೆ ಗುರು ಮುನಿಯು।
ಪೇಳಿದ ವಾಕ್ಯವು ಕೂಡಿಬಂದುದು ಕಥೆಯು
ತೂಗಿದ ಶಿರವ ಚಿಂತಿಸುತ ||೯೦||

ರಾಮನ ನಿಜಸತ್ಯ ಕಾಣಲಾರದೆ ರತ್ನಿ
ಲಾವಣ್ಯಕವಳು ಮನಸೋತು।
ನಾನಾ ವಿವರವ ಮಾಡಿ ದೊರೆ ಕಂಪಿಲರಾಯಗೆ
ಚಾಡಿಯ ಹೇಳಿದಳು ರತ್ನಿ ||೯೧||

ಮಂದಮತಿರಾಯಗೆ ಎಲ್ಲ ಮಾತನು ಹಣ್ಣೆ
ತಂದಳು ಕಂದಗೆ ಕೊಲೆಯ।
ಹಿಂದವಳ ತಂದಾಗ ನಾವೆಲ್ಲರಾಡಿದ ಮಾತು
ಕಂಡಂತಾಯಿತು ಕೈಯೊಡನೆ ||೯೨||

ಆದರಾಗಲಿ ಇನ್ನು ಶೋಧಿಸು ಗುಣಧರ್ಮ
ಭೂದೇವಿ ರಾಮ ಸತ್ಯದಲಿ।
ತೋರುವುದು ತಮಗೆಲ್ಲ ಈರ್ವರ ಮನಚಿತ್ತ
ಏಣಾಂಕಧರನೆ ತಾ ಬಲ್ಲ ||೯೩||

ಬಂದನು ಭಯಭಕ್ತಿಯಿಂದಲಿ ಮಂತ್ರಿಯು
ವಂದಿಸಿ ರಾಯಗೆ ಕರವ।
ಮುಂದೇನು ದಯಮಾಡಿ ಭೂಮೀಂದ್ರನೆನುತಲಿ ಮಂತ್ರಿ
ವಂದಿಸಿ ಕೇಳೆ ವಿನಯದಲಿ ||೯೪||

ಹೇಳಲಾರೆನು ಮಂತ್ರಿ ಹೀನಾಯದ ಅಪಕೀರ್ತಿ
ಭೂಮಿಯೊಳ್ ನಡೆಯದ ಕರ್ಮ।
ತೋರಿತ್ತು ಕುರುಹೆನಗೆ ಬೇಟೆಯಾಡುವ ಸಮಯದಿ
ರಾಣಿ ರತ್ನಿಯ ಸೂಚನೆಯು ||೯೫||

ಕೇಳುಂಟೆ ಕರ್ಣದಿ ನೋಡುಂಟೆ ಯಾವಲ್ಲಿ
ತಾಯಿಗಳ ಸುತರು ಮೋಹಿಪುದ।

ನಾವು ಬೇಟೆಗೆ ಹೋದ ಭೇದವನೆ ನೋಡಿ
ಪಾರ ಮಾಡುವುದು ರತ್ನಿಯನು ||೯೬||

ಬೇಟೆಗೆ ಬಾರದೆ ಯಾಕೆ ಉಳಿದೀ ರಾಮ
ರತ್ನಿಯ ಮೇಲೆ ದೃಷ್ಟಿಯನು।
ಲೋಕವು ಅರಿವಂತೆ ಚೆಂಡಾಡಿದ ನೆವದೊಳು
ಮಾತ ಮುಗಿಸಿದ ರತ್ನಿಯನು ||೯೭||

ಹರಹರ ಎನುತಲಿ ಕರಮುಗಿದು ಮಂತ್ರಿ
ಶಿರದೂಗಿ ಕರ್ಣವನು ಮುಚ್ಚಿ।
ಗಿರಿಜೆಯ ರಮಣನೆ ಬಲ್ಲ ಎನಗೆ ಪೇಳುವುದೇನು
ತಿಳಿದಂತೆ ಪಾದ ಚಿತ್ತದಲಿ ||೯೮||

ಹಿರಿಯನಲ್ಲವೆ ಮಂತ್ರಿ ತಿಳಿದಿನ್ನು ನೀ ಪೇಳು
ವಿನಯಳ ನೋಡು ಮನವಿಕ್ಕುವೆನೆ।
ಹೊಳವೊಂದು ಕಾಣದೆ ಮಲವ ತಿಂಬನು ತಾನು
ಟೌಳಿ ಪೇಳಿದಳು ಅರಸನಿಗೆ ||೯೯||

ರಾಮನ ಸತ್ಯವ ಭೂಮಿ ಬಲ್ಲುದು ಮುಂದೆ
ಆಯ ನೋಡರಸೆ ಜ್ಞಾನದಲಿ।
ಮೂಗನ ತಲೆ ಹೆಣ್ಣು ಮಾಡಿಲ್ಲ ಬಲ್ಲಾಳ
ಜಾಲಿ ಬೆಳೆಸಿದರವನು ಈ ಕುರುಹ ಕಂಡು ||೧೦೦||

ಹೇಳಬಹುದು ಉತ್ರ ಸೋದರಳಿಯನ ಮಾತ
ಬೀಳು ಮಾಡದೆ ಬಂದನೆಂಬೆ।
ನಾರಿಯರ ಮನವನು ಮೂದೇವ[ರು] ತಿಳಿಯ[ರು]
ಭೂಮಿಯೊಳು ವಿಜಯ ಕೆಟ್ಟಂತೆ ||೧೦೧||

ಹಿಂದೊಬ್ಬ ಚಂದ್ರರಾಯನ ಕಥೆ ಸಾರ
ಬಂದಂತೆ ಇರುವುದೀ ಮೂಲ।
ತುಂಡ ಸೂಳೆಯ ಮಾತ ಅರಸು ತಿಳಿಯದೆ ಮುನ್ನ
ಕಂದನ ಜೀವ ಕೊಲಿಸುವನು ||೧೦೨||

ಕಾಣದೆ ಕಳವನು ಬಾಲಗೆ ಮುನಿವನೆ
ಜಾಣ ಮಂತ್ರಿಯೆನುತ ನೀ ನುಡಿಯೆ।
ಹೇಳಯ್ಯ ವಿಜಯೇಂದ್ರ ರಾಯನಂದದಿ ಎನ್ನ
ಮಡದಿಯ ವಂಚವಿದ್ದಂತೆ ॥೧೦೩॥

ತಿಗುಳಾಣ್ಯದೇಶದಿ ಪುರವಿಹುದು ಚಂಪಕ
ನಗರದ ನೃಪನು ವಿಜಯೇಂದ್ರ।
ಸುದತಿಯೊಬ್ಬಳು ಅವಗೆ ಸೂಳೆಯೊಬ್ಬಳುವುಂಟು
ಅಗಲದೆ ಬಾಳುವನರಗಳಿಗೆ ॥೧೦೪॥

ಪಟ್ಟದ ಸತಿಗೊರ್ವ ಪುತ್ರನು ಜಯಸೇನ
ಲಕ್ಷ್ಮಿಯ ವರತನಯನಂತೆ।
ಶಕ್ತಿ ಸಾಹಸದೊಳು ಪೃಥ್ವಿಲಿ ಸರಿಕಾಣೆ
ಸತ್ಯದಿ ಸದ್ಗುಣ ಸ್ಥಿತಿಯ ॥೧೦೫॥

ಇಂತೊಂದು ದಿವಸದಿ ತರಳನು ಜಯಸೇನ
ತುರಗ ಮಾರ್ಬಲದೊಳು ಹೊರಟು।
ಗಿರಿಯು ಗಂಹರದೊಳು ಬೇಟೆಯಾಡುತ ಬಂದು
ಕಾಡ[ಲಿ] ಮುನಿವರನಾಶ್ರಮದಿ ॥೧೦೬॥

ಅನಿತರೊಳಗೆ ಒಂದು ಹರಿಣ ರಾಯನ ಮುಂದೆ
[ಹ]ರಿಯಲು ತುರಗ ಮೀಟಿದನು।
ಹಿಡಿಯೊಳಗಾದಂತೆ ಪರಿದುದು ಸಿಕ್ಕದೆ
ಹೊಡೆಯಲು ನಾಲ್ಕು ಯೋಜನದಿ ॥೧೦೭॥

ಕಡಿದ ಗಾಯದಿ ಬಂದು ಕಂಸಿಕ ಮುನಿಯೊಡೆಯ
ಮೃಗ ಹೋಗಿ ಅಸುವನು ಬಿಡಲು।
ಕನಲುತ ಮುನಿವರನು ಕಾಲನಂದದಿ ಇರಲು
ಜಯಸೇನ ನೋಡಿ ತಲ್ಲಣಿಸಿ ॥೧೦೮॥

ಅಳಿವ ಕಾಲವು ಬಂತು ತಿಳಿಯದೆ ಮದ ಬುದ್ಧಿ
ಎಳೆತಂತು ವಿಧಿ[ವಶ]ವಾಗಿ।

ಅಳುಕಲು ವಾಣಿಯ ಪತಿಯ ಬರಹವು ಬಿಡದು
ದೃಢವ ನಿಶ್ಚಯಿಸಿ ಧೈರ್ಯದಲಿ ||೧೦೯||

ತಪ್ಪಿದ ಕಾರ್ಯಕ್ಕೆ ತಲೆ ಮುಂದೆ ಅಪರಾಧ
ಇತ್ತಲಿ ಇನ್ನೇನು ಭಯವು।
ಹತ್ತಿದ ತುರಗವನೊಪ್ಪಿಸಿ ಕೀರ್ತಿಸುತ
ಸಾಷ್ಟಾಂಗದಿಂದಲಿ ಎರಗಿ ||೧೧೦||

ಕರುಣಿಸಬಹುದೆನ್ನ ಶರಧಿಗಂಭೀರವುಳ್ಳ
ಉರಗಭೂಷಣ ಯತಿವರನೆ।
ಅರಿಯದೆ ಮಾಡಿದೆ ಶಿರ ನಿಮಗ ಅಪರಾಧ
ಸರ್ವದ್ರೋಹಿಗಳ ನೋಡುವೆನು ||೧೧೧||

ಕಂಸಿಕಮುನಿಗಾಗ ಘನಶಾಂತಿ ನುಡಿ
ಛಲವೆಲ್ಲ ಸ್ಯೆರಣೆಯ ಪುರುಷ।
ಕರವಿಡಲು ಮಸ್ತಕದಿ ಕಂದ ಏಳೇನಲಾಗ
ಭಕ್ತಿಯೊಳು ಎದ್ದು ನಿಲ್ಲೆ ||೧೧೨||

ಗರ್ವದಿ ನಡೆದಿರಲು ಹಿಡಿ ಶಾಪವೆಂಬುವೆ
ಫಲಪ್ರಾಪ್ತಿ ಇದು ಎಂತು ಕಾಣೊ।
ಹರಿಣನ ಕೊಲಬಹುದೆ ಹಸುಮಗ ಮೆಚ್ಚಿದೆ
ತುರಗವ ಮೀರಿ ಪೋಗೆನಲು ||೧೧೩||

ಪಾದಕೊಪ್ಪಿಸಿ ತುರಗ ಏರಲು ಮೂಲೋಕ
ಬಾಧಕ ಬಿಡದೆನಗೆ ಗುರುವೆ।
ಕಾಲನೆಡೆಯೊಳು ಪೋಪ ಪಾಲಿಸಿದೆ ಪರಮಾತ್ಮ
ಸೋಧರ್ಮಿಯೆಂದು ಮೆಚ್ಚಿದನು ||೧೧೪||

[ಜಯಸೇನ]ರಾಯನ ತಳತಂತ್ರ ಮಾರ್ಬಲವು
ಹುಡುಕಿ ಅರಣ್ಯ ಬೇಸತ್ತು।
ಪುರಕೆ ಹೋಗಲು ಆದ ವಿವರ ಪಿತನಿಗೆ ಹೇಳೆ
ಘನ ಶೋಕದೊಳಗಿರುತಿಹನು ||೧೧೫||

ರಾಯಕುಮಾರನ ಹಾಗೆ ಕಳುಹಲು ತಮಗೆ
ಯೋಗ್ಯವಲ್ಲೆಂದು ಮುನಿವರನು।
ಮೇಘ ಮಾರ್ಗದಿ ನಡೆವ ಮಂತ್ರ ತುರಗವ ರಚಿಸಿ
ಪೋಗೆನಲು ಮುನಿಯು ಪ್ರೀತಿಯಲಿ ||೧೧೬||

ಮೇಘದಿ ನಡೆವ ವಾಹನವೇರಿ ಜಯಸೇನ
ಸಾಗಲು ತನ್ನಯ ಪುರಕೆ।
ತಾಯಿತಂದೆಗಳೆಲ್ಲ ಇರುವಂಥ ಸಮಯದೊಳ್
ಮೇಘಮಾರ್ಗದಿ ಬಂದು ಇಳಿಯೆ ||೧೧೭||

ಬಾಲನ ಕಾಣುತ್ತ ತಾಯಿ ತಂದೆಗಳೆಲ್ಲ
ಹೋದ ನಯನಗಳು ಬಂದಂತೆ।
ತಾವೆಲ್ಲ ಸುಖದೊಳಗಿರಲು ವಿಜಯೇಂದ್ರ
ರಾಯಪೋದನು ಬೇಂಟೆಯನು ||೧೧೮||

ಹುಲಿಯ ಬಣ್ಣಕೆ ಕಂಕನರಿಯು
ಮೈಯೆಲ್ಲ ಸುಟ್ಟಂತೆ।
ಪಡೆದರಿಗೆ ಪಡೆದ ಹರೆಗಳು
ತನಗೆ ಕಡೆ ನಿಮ್ಮ ಬಾಳು ||೧೧೯||

ಉದರದಿ ಜನಿಸಿದ ತರಳ ಬೇಂಟೆಯ ಹೋದ
ತರಬಹುದು ಮೇಘವಾಹನವ।
ಧರಣಿಗೆ ಗುರುತಾದೆ ನರಿ ಬಾಳಿ ಅಳಿದಂತೆ
ನೋಡುವೆ ನಿಮ್ಮ ಸಾಹಸವ ||೧೨೦||*

ನಿತ್ಯ ಈ ಬಗೆಯೊಳು ಪ್ರಳಾಪಿಸುವಳ ಕಳೈ
ಮತ್ಯಾಕೆ ಎಂದು ನೀ ಕೇಳು।
ಮೆಚ್ಚಿಕೊಂಡಿರುವಳು ಮಂತ್ರಿಯ ಮಗನನು
ಸಿಕ್ಕದೆ ಸಮಯವೆಂದೆನುತ ||೧೨೧||

* 'ಅ' ಪ್ರತಿ ಇಲ್ಲಿಗೆ ನಿಂತಿದೆ. ಇಲ್ಲಿಂದ ಮುಂದೆ 'ಬ' ಪ್ರತಿಯಿಂದ ಪದ್ಯವನ್ನು ಸ್ವೀಕರಿಸಲಾಗಿದೆ(ಸಂ)

ರಾಯ ವಿಜಯೇಂದ್ರ ತಾನೊಂದು ದಿನದೊಳು
ಹೋದನು ಬೇಂಟೆ ಸಂಭ್ರಮದಿ।
ಕೂಡಲು ಕುಮುದಿನಿಗೆ......... ।
ಹೊಳಲೊಳು ಗೃಹ ತಾ ಹೊಕ್ಕ ||೧೨೨||

ರಾಯನು ಜಯಸೇನ ಹಜಾರದೊಳಗೆ ಕುಳಿತು
ವಾಲಗಗೊಡುವ ಸಂಭ್ರಮದಿ।
ಸೇರದೆ ಸಖಿವೊಬ್ಬ ದಾಸಿಯು ಪರಿತಂದು
ಕುಮಾರನ ಕರ್ಣಕ್ಕೆ ಉಸಿರೆ ||೧೨೩||

ಕೇಳಲು ಬಹು ಕರ್ಮ ಭವಗೆ ಬರದಂತೆ
ನಿರ್ಣಯ ಮಾಡಿಸುವೆ ಇರ್ವರನು।
ಮೂರಾರು ಬಾಗಿಲ ದಾಂಟಿ ಬರಲು ಕರ್ಮ
ಜ್ಞಾನ ಕೂಡಲು ಪುತ್ರನಿಗೆ ||೧೨೪||

ಹಸು ಹಾಲು ಕೊಡುತಿಹುದು ಶಿಶು ಕೃಪೆಬಡುವುದು
ಮುಸುಡಿ ಮೂಳಿಗೆ ಯಾಕೆ ಕರ್ಮ।
ಹೆಸರನ್ನ ಜಯಸೇನ ಹೊರಸಲ್ಲ ಕರ್ಮವನು
ಅಸದಳವವರಿಗೆ ತರುಗೆ ||೧೨೫||

ಕಂಡ ಗೌಡೆರು ಬಂದು ಮುಂದಕ್ಕೆ ಕುಮುದಿನಿಗೆ ಪೇಳೆ
ಕಂಡಿರ್ದ ಅಲ್ಲಿ ಯಮಪುರವ।
ಕಂಡಯ್ಯ ಇರಿಕೊಂಡ ಬಂದ ಕುಮಾರನು ದಯ
ಬಂದು ಮರಳಿದನು ಹಿಂದಕ್ಕೆ ||೧೨೬||

ಕೆಟ್ಟೆ ಬೆಂದೆನು ಎಂದು ಕುಟ್ಟಿಕೊಳ್ಳುತ ಎದೆಯ
ಇಟ್ಟುಕೊಂಬೆನು ಕೊರಳಾಗುರುಳ।
ಸೃಷ್ಟಿಪಾಲಕ ಬಂದು ಹೊಕ್ಕು ಗಳಿಗೆಯನ್ನು
ಸುಟ್ಟರು ಎಣ್ಣೆ ಸೀಗೆಯಲಿ ||೧೨೭||

ಅಳಿಯಬ್ಯಾಡೆಲೆ ನಿನ್ನ ಉಸುರೋದ ಬಳಿಯಲ್ಲಿ
ಕೊಡುವೆ ಪ್ರಾಣವ ಎನಲು ಮಂತ್ರಿ।

ಹಗೆಯಿಟ್ಟು ದೊರೆಮಗನ ಹಲವು ತಂತ್ರವ ಮಾಡಿ
ಯಮನ ಪಟ್ಟಣಕೆ ಸಾಗಿಸುವೆ ||೧೨೮||

ಬಡವನ ಹಗೆಯೊಳು ನರರಿಗೆ ಉಳುವೇನೊ
ಹೆದರಬ್ಯಾಡೆಂದು ಎದೆ ಧೈರ್ಯ।
ದೊರೆ ಬರುವ ಸಮಯಕೆ ಗರಗಾಳಿ ಪಿ[ಡಿ]ದಂತೆ
ಹೊರಳಿದರೆ ಮಗನ ಕೊಲ್ಲುವನು ||೧೨೯||

ವಿಜಯೇಂದ್ರರಾಯ ಬೇಂಟೆ ತೀರಿ ಊರಿಗೆ ಬರಲು
ಭೇರಿ ಕಹಳೆ ರಭಸದಲಿ।
ರಾಣಿಗೆ ಸರಿದೋರೊ ಗಾನವುಗಳೆಂದು
ಓಡಾಡುತಿರಲು ರಾಯನೆಡೆಗೆ ||೧೩೦||

ಇರವೇನು ಪಾಪಿಷ್ಠೆ ಎನುತ ನದರುಗೆಡುತಲಿ ರಾಯ
ಒದಗಿ ಬರಲು ಅರಮನೆಗೆ।
ರಮಣನ ಕಾಣುತ್ತ ಹೊರಳುತಿರಲು ರಂಡೆ
ಅಳಿದಂತ ಸ್ವರವ ತಪ್ಪಿದಳು ||೧೩೧||

ಕೃತಕವೆಂದರಿಯದೆ ಮತಿಗೇಡಿ ರಾಯನು
ಅತಿ ಅಳಿದಳೆಂದು ಮುಖವಡಿಯ।
ಅತಿದುಃಖಗೊಳುವಾಗ ಬಂದನು ಮಂತ್ರೀಶ
ಸನ್ಮತ ಪೇಳುವ ರಾಯನಿಗೆ ||೧೩೨||

ನಾಯಳಿಯೆ ಶೋಕವ ಮಾಡಸಲ್ಲದು ರಾಯ
ಬಾರಳೆ ಬೇಕೆನಲು ಹೆಣ್ಣು।
ಏ ನನ್ನ ಇಂತಪ್ಪ ಪ್ರಾಣಪದಕವು ಹೋಗೆ
ನಾ ಬೇರೆ ಉಳಿಯೆನು ಇಲ್ಲಿ ||೧೩೩||

ಬೇಡಯ್ಯ ಚಂದ್ರ ಪೋಗಿಲ್ಲ ಪರಮಾತ್ಮ
ಮಾಡೇನು ಮದ್ದು ಮಂತ್ರವನು।
ಕೇಳಿದಾ ಮಂತ್ರಿಯು ಕುಮುದಿನಿ ಕೇಳು
ಬೇಡಿದೊಸ್ತುವ ತರಿಸಿ ಕೊಡುವೆ ||೧೩೪||

ಎದ್ದಳು ರಣಮಾರಿ ದುರ್ಗಿಯಂದದಿ ಕುಳಿತು
ದೊಡ್ಡ ನಯನಗಳನು ತೆರೆದು।
ದೇವೇಂದ್ರ ಲೋಕದ ಪಾರಿಜಾತದ ಹೂವು
ಇತ್ತರೆ ಹೋಗುವೆ ಸಂದುದು ಗಹವು ||೧೩೫||

ಅಳಿದಳೆನುತಲಿ ರಾಯ ಅಳುತಿರ್ದ ನೀ ಬೇಗ
ತರಿಯಯ್ಯ ಪಾರಿಜಾತವನು।
ಸುರಲೋಕದ ಹೂವನು ತಂದವಗೆ ನಾನಾಳ್ವ
ಧರಣಿಯೊಳರ್ಧವ ಕೊಡುವೆ ||೧೩೬||

ಸುರಲೋಕ ಕಾಂಬರೆ ನಮಗೆ ಸಾಗದು ಎಂದು
ಪರಿವಾರವೆಲ್ಲ ಕರಮುಗಿಯೆ।
ಮರಳಿ ಪೇಳಿದ ಮಂತ್ರಿ ಮಗ ಹೊರತು ಮಿಕ್ಕವರು
ತರುವದಕೆ ಮೇಘವಾಹನವೆ ||೧೩೭||

ರಾಯನು ಕರೆಸಿದ ಕುಮಾರನ ಬೇಗದಿ
ಬೇಡುವುದು ಪಾರಿಜಾತವನು।
ತಾಯಿತಂದೆಯ ಪ್ರಾಣ ಕಾಯಬೇಕೆಂದರೆ
ಹೋಗಬೇಕೆಂದನಾ ಪಿತನು ||೧೩೮||

ಜನನಿಯ ಅನುವಿಂಗೆ ತನುವ[ನೀಯದ] ಮಗ
ನಿರ್ದು ಫಲವೇನೋ ಭೂಪ।
ಕರಮುಗಿದು ತರುವೆನು ದಿನವೇಳರೊಳಗಾಗಿ
ನಡೆಯಲು ಜಯಸೇನರಾಯ ||೧೩೯||

ತಿಳಿದೇನೊ ಕರಬಲ ಮಾಡಿದ ಬುದ್ಧಿಯ ರಾಯ
ತರಳೆ ಮಾಡಿದ ಕಾಲಗತಿಯ।
ನರಲೋಕ ಯಾವಲ್ಲಿ ಸುರಲೋಕ ಕಂಡವರು
ಮರಳುವರೆ ಮರ್ತ್ಯದ ಜನರು ||೧೪೦||

ಪಾರಿಜಾತದ ದೇವೇಂದ್ರಲೋಕದಿ ತರಲು
ಕೋಟಿ ರಾಕ್ಷಸರು ಆ ವನಕೆ।

ಹೊಲವನು ಹೋಗುವ ಮೇಲ್ಗೆಯ ಲಾಲಿಸು ಭೂಪ
ಕುಮಾರಗೆ ಬರುವ ಸಂಪದವ ॥೧೪೧॥

ರಾಯನು ಜಯಸೇನ ಏರಿದ ವಾಹನವ
ವಾಯುಗಮನದಿ ಬರುತಿರಲು।
ದಾರಿಯೊಳು ಮತ್ತೊಂದು ಮಂದಾಕಿನಿ ಪಟ್ಟಣವುಂಟು
ಹಾಳಾಗಿ ಸುವರ್ಣಮಯವು ॥೧೪೨॥

ಲಯವಾದ ಕತೆ ಬೇರೆ ಮುನಿಯ ಶಾಪದಿ ಒಬ್ಬ
ದನುಜನು ಜನಿಸಿ ಆ ಪುರವ।
ನರರನು ಸಂಹರಿಸಿ ಮದಸೂದರಾಯನ
ತನುಜೆಯ ಒಳಕೊಂಡಿಹನು ॥೧೪೩॥

ಪುರವನು ಕಾಣುತ ಶಿರತೂಗಿ ಕುವರನು
ಹರವಿಹುದು ಹೊನ್ನ ಬೆಳ್ಳಿಗಳು।
ನರರ್ಯಾಕೆ ವರ್ಜಿತವು ಪರಿಯ ನೋಡುವೆನೆಂದು
ಒಳಹೊಗಲು ಸ್ತ್ರೀಯು ಶೋಕದಲಿ ॥೧೪೪॥

ಕರುವಾಡದೊಳು ನಾರಿ ಸ್ವರದಿ ಕೋಗಿಲೆಯಂತೆ
ಹರನಿಗೆ ಮೊರೆಯಿಡುತಿರಲು।
ಪುರದ ಲಕ್ಷ್ಮಿಯು ಈಕೆ ಮರುಳು ಪಿಡಿಯೆ ಇಂದು
ಶಿರದೂಗಿ ನೋಡೆ ಗೃಹದೊಳಗೆ ॥೧೪೫॥

ಮದನಮೋಹಿನಿ ಕಂಡು ಬಿದಿಗೆ ಚಂದ್ರನ ಪೋಲ್ವ
ಜಯಸೇನರಾಯ ಕುವರನ।
ಮರೆದಳು ಶೋಕವ ಕಿ[ಟ]ಗೆ ಒತ್ತಿಗೆ ಬಂದು
ತರಳೆ ನೋಡಿದಳು ನಯನದಲಿ ॥೧೪೬॥

ಹರಿಬ್ರಹ್ಮ ಹರನೋ ಈತ ಉರಿಗಣ್ಣನೊಳ್ಳಿದ
ತರಳ ಬಂದನೊ ಮನಸಿಜನೊ।
ನೆರೆ ನಾಚಿದಂದೆ ನೋಡುವ ನಾರಿಯ ಕಂಡು
ನುಡಿಸಿದ ಜಯಸೇನರಾಯ ॥೧೪೭॥

ದುಃಖ ಯಾತಕೆ ಮಾಳ್ಪೆ ನೀ ವೃತ್ತಾಂತವಡೆ ಎನಗೆ
ಹೊತ್ತು ಹೋಯಿತು ಮುಂದೆ ಪಯಣ।
ಪಕ್ಷಿವಾಹನನಾತ್ಮ ಎತ್ತಿಗೊಂಡರು ಬೆಳಗು
ಮುಟ್ಟಿಕೊ ತುಸು ಮಾತ್ರ ಪೇಳ್ವೆ ||೧೪೮||

ಮಧುಸೂಧನ ರಾಯನ ತನುಜೆಯು ನಾನು
ಮದನಮೋಹಿನಿಯೆಂದು ಪೆಸರು।
ದನುಜನ ಕಾಲಿಂದ ಲಯವಾಗಿ ಈ ಪುರವು
ಎನಗಾಗಿ ಕಾಯ್ದುಕೊಂಡಿಹನು ||೧೪೯||

ರಕ್ಕಸನ ಕೈಯೊಳಗೆ ಸಿಕ್ಕುವಳಾ ವ್ರತಭಂಗ
ಕೆಟ್ಟುದು ಎನುತ ತೋರುವುದು।
ಸೃಷ್ಟಿ ಪಾಲಕ ಕೇಳೊ ಶ್ರೀ ಗೌರಿಯೊಪ್ಪಿದಳೆಂದು
ಗೊತ್ತು ಮಾಡಿದೆ ಆರು ವರುಷ ||೧೫೦||

ಉಪಚಾರದಿಂದವನ ಆತ್ಮ ನೆಲೆಗಳ ಕೇಳೆ
ಪಿತ ಹೇಳಿದ ವಾಕ್ಯ ಕೈಗೂಡೆ।
ಹತ ಮಾಳ್ಪೆ ದನುಜನ ಇಂದಾರು ದಿವಸಕೆ ಬರುವೆ
ಕಡೆಹಾಯಲೆನ್ನಾಸೆ ಬೇಡ ||೧೫೧||

ಗೆಲಬಹುದು ಕುಂತಿಯ ಹಿರಿಯ ಬಾಲನ ಪೋಲ್ವ
ಧರ್ಮಜನೆ ಎನ್ನ ಪುಣ್ಯದಲಿ।
ಗೆಲುಶ್ರಯವ ನಯನದಿ ಜಲ ತುಂಬಿ ಕಳುಹಲು
ಹೋಗೆನುತಾ ಅವಳು ||೧೫೨||

ಒಂದೆರಡು ಪಯಣಕೆ ಬಂದನು ಜಯಸೇನ ದೇ
ವೇಂದ್ರನ [ವ]ನದ ಆಶ್ರಮಕೆ।
ಕಂಡ ಭಾಸ್ಕರರಾಯ ಹೆಂಗಳರಸೆರ ಕೂಡಿ
ಬಂದ ಜಲಕ್ರೀಡೆಯಾಡಲ್ಕೆ ||೧೫೩||

ಕಾದಿರಲು ಆ ಸಮಯ ತನಗಾಗಬಲ್ಲದೆ
ಎಂದು ಹೋಗಿ ಎರಗಲು ಸಾಷ್ಟಾಂಗ।

ರಾಯ ಭಾಸ್ಕರ ಕಂಡು ಹೇಳಯ್ಯ ನೀ ಬಂದ
ಕಾರ್ಯ ಸ್ಥಿತಿಗಳನು ಪೇಳೆನಲು ||೧೫೪||

ಪಾರಿಜಾತದ ಹೂವು ತಾಯಿ ತಂದೆಗೆ ಬೇಕಾಗೆ
ನಿಮ್ಮ ಪಾದದರುಶನಕೆ ನಾ ಬಂದೆ।
ಗಹಗಹಿಸಿ ನಗುತಲಿ ಪಾರಿಜಾತದ ಹೂವ
ಸಾಗುವ ಪರಿ ಹೇಗೆ ನಿನಗೆ ||೧೫೫||

ಮರುಳ ಪುತ್ರನೆ ಕೇಳು ನಿನ್ನ ಬಿಡುವರೆ ದೈತ್ಯರು
ಪರಿಮಳ ಸೂಸೆ ಜೀವನವು।
ಧರೆಯೊಳಗೊಯ್ದುಂಟೆ ಶರೀರಕ್ಕೆ ಮುನಿದಿನ್ನು
ಕಳುಹಿರ ಬಗೆಬೇಡ ಹೋಗು ||೧೫೬||

ಹೋಗೆನಲು ಜಯಸೇನರಾಯ ಕಿರಿಮುಖವಾಗೆ
ಶ್ರೀಯತಿರ್ದ.... ನಮಸ್ಕರಿಸಿ।
ಪ್ರಾಣಕಾಂತನೆ ನಿಮಗೆ ಘನಬಹುದೆ ನಿಮಗಿನ್ನು
ಜಯಪಾಲನ ಬರಿದೆ ಕಳುಹಿದರೆ ||೧೫೭||

ಯಾವಾಕ್ಷತು ಕರೆ ಮುನ್ನ ಕುಮಾರನ ಕಳುಹಿದರೆ
ನೀವಿಂತು ಇವನ ಸಾಗಿಸಲು।
ಪೇಳಿದ ಬಾಯೊಳು ಧೂಳು ಬೀಳದ ಸ್ವಾಮಿ
ಪಾದಕ್ಕೆ ಕೀರ್ತಿಯು ಬಹುದು ||೧೫೮||

ಸತಿಯರ ಮಾತಿಗೆ ಅತಿಮೆಚ್ಚಿ ಭಾಸ್ಕರನು
ತರಿಸಿದ ಪಾರಿಜಾತವನು।
ಭರಣಿಯೊಳಗೆ ತುಂಬಿ ಬಾಯ ತೆಗೆಯಲು ಬೇಡ
ಪುರವ ಸೇರುವ ಪರಿಯಂತ್ರ ||೧೫೯||

ಅಂ ಬುದ್ಧಿಯೆನ್ನುತ್ತ ಅಡ್ಡಬಿದ್ದನು ಜಯಸೇನ
ಇದ್ದನು ತನ್ನ ಪಥವಿಡಿದು।
ಮೋಡ ದನುಜಗೆ ಮುನ್ನ ಮದನ ಕಾಮಿನಿ ಮಾಳ್ಪ
ಸ್ವರ್ಗದುಪಚರಗಳ ಕೇಳೆ ||೧೬೦||

ಒತ್ತುವ ಎಣ್ಣೆಯ ಎರೆವಳು ನೀರನು
ಕಸ್ತುರಿ ಪುಣಗು ಪೂಸುವಳು।
ಉತ್ತಮ ಭೂಷಣವ ಹೊದಿಸಿ ವೀಳ್ಯವ ಕೊಡಲು
ಚಿತ್ತದಿ ದನುಜ ಹಿಗ್ಗಿದನು ॥೧೬೧॥

ಕಂಡರೆ ಸೇರದ ಕಾಮಿಗೆ ಕರೆಗೂಡಿ
ಹಂಬಲಾಯಿತು ದನುಜನಿಗೆ।
ರಂಭೆ ನೋಡಲು ಎನ್ನ ವುತ ನೀರಿ ಬಂತೀಗ
ಒಂದುಗೂಡದೆ ಮೂರರೊಳಗೆ ॥೧೬೨॥

ಹಗೆ ಬಾಳ ದನುಜರು ಮರಣಕಂಡರೆ ಮುಂದೆ
ತೆರ ನೀನು ನಾ ಬಾಳುವುದಕೆ।
ಜೀವರತ್ನದ ನೆಲೆಯ ಇರುವ ಸ್ಥಳವನು ಪೇಳೆ
ಇರುವೆನು ಯೋಕಾವದಲ್ಲಿ ॥೧೬೩॥

ನಿಜವಹುದು ಎನುತಲಿ ಸರಿಗೂಡಿ ದನುಜನ
ಪರದೊಳು ನೀನಾಡಬೇಡ।
ಕರು ಮಾಡ ಮಧ್ಯದ ಕಳಸದೊಳಿರುವುದು
ತಾ ಮಲಗೆ ಗುರುತು ಇರುವುದು ॥೧೬೪॥

ಮದನಮೋಹಿನಿಯೊಳು ನೆಲೆದೋರಿ ದನುಜನು
ನಡೆಯಲು ತನ್ನ ಹಾರಕ್ಕೆ।
ಈ ಕೇತಿ ರೂಪನ ಜಯಸೇನ ಬರಲು ಪೇಳೆ
ಜೀವರತ್ನದ ಕಳಸದೊಳಗೆ ॥೧೬೫॥

ಅನಿತದಿ ಸೂರ್ಯನು ಕಡಲಿನ ಸ್ಥಾನಕೆ ನಡೆಯೆ
ದನುಜ ಸೇರಲು ಮನೆಯ।
ತನು ನಿದ್ರೆ ಮಾಳ್ಪಾಗ ಕಳಸ ತುಂಡಿಗೆ ಹೊಡೆದು
ತೆಗೆದನು ಜೀವರತ್ನವನು ॥೧೬೬॥

ಮರಣವಾಗಲು ದೈತ್ಯ ಕರಕೊಂಡು ನಾರಿಯನು
ನಡೆಯಲು ತಮ್ಮ ಪಟ್ಟಣಕೆ।

ಹಡೆದ ತಂದೆಗೆ ಹೂವ ತಂದಿತ್ತು ಸ್ತ್ರೀಯನು ತೋರಿ
ಇರುತಿರಲು ಮದಿವಾಗಿ ಸುಖದಿ ||೧೬೭||

ಕೇಳಯ್ಯ ಕಂಪಿಲಕುಮಾರನ ಸಾಹಸವ
ಮಾಡಿದ ಕುಹಕ ಕುಮುದಿನಿಯ।
ಹೇಳೆ ತನ್ನಯ ಪ್ರಧಾನಿಯೊಡನೆ ಮತ್ತೆ
ನೀಗಿಕೊಂಬೆನು ಪ್ರಾಣವನು ||೧೬೮||

ದೇವೇಂದ್ರಲೋಕದ ಪಾರಿಜಾತವ ತಂದು
ಲಾವಣ್ಯ ಲಲಿತಾಂಗಿ ಸಹಿತ।
ಮೇಲೆನಗೆ ಉಳಿವುಂಟೆ ಜೀವಬಿಡುವೆನೆನಲು
ತಿಳಿದವಗೆ ಜೋಡಿಸುವೆ ನಾನೊಂದ ||೧೬೯||

ಹಿಂದಳ ಪರಿಯಾಗಿ ಮುಂದೆ ವೇಷವ ಮಾಡಿ
ಸಂದವರ ಸುರಧೇನು ಬೇಡು।
ದಿಂಡುರುಳು ಹೊರಳಲು ವಿಜೇಂದ್ರನು ಕಣುಗೆಟ್ಟ
ಮುಂದೇನು ಬೇಕೆನುತ ಪೇಳೆ ||೧೭೦||

ಯಮನಲ್ಲಿ ಇರುತಿರ್ದ ಸುರಧೇನು ತಂದರೆ
ಉಳಿವುದು ಎನ್ನಯ ಪ್ರಾಣ।
ಕರೆಸಿದ ಜಯಸೇನರಾಯಗೆ ಪೇಳಲು
ತರುವೆನು ಮೂರು ದಿನದೊಳಗೆ ||೧೭೧||

ಮದನಮೋಹಿನಿಯೊಡನೆ ಹದನವೆಲ್ಲವ ಪೇಳೆ
ಹಡೆದ ತಂದೆಯು ಹಗೆ ನಿನಗೆ।
ಹೊಗೆ ಕೊಂಡವ ಮಾಡಿ ಜನಜಾತ್ರೆ ಕಾಂಬಂತೆ
ಮಡಿಯಲು ಜಯಸೇನ ಹೋಗೆ ||೧೭೨||

ಹರಜನರು ಪುರಜನರು ದೊರೆ ಪುತ್ರನಳಿದನೆಂದು
ಅಳಲುತ ತಮ್ಮ ಮನದೊಳಗೆ।
ಬರೆಯಲು ಲೇಖನವ ಮದನಮೋಹಿನಿ
ತಂದೇನಂದಾ ಕುಮುದಿನಿಯ ||೧೭೩||

ಎರಡೆಂಬ ದಿವಸದಿ ದಿವರಾತ್ರಿಯೊಳಗೆ ಬಂದು
ಮಲುಹಣಿ ಮಾಂಸಗಳ ಕೋಡಿ।
ಮದನಮೋಹಿನಿಯಾಗ ಜೀವರತ್ನವನಿಡಲು
ಹೊರಡಲು ಜಯಸೇನರಾಯ ||೧೭೪||

ಸುರಧೇನು ಕರಕಿತ್ತು ಬರೆದ ಲೇಖನವ
ಕೊಡು ನಿಮ್ಮ ಪಿತನಿಗೆ ಎನಲು।
ಸಡಗರದೊಳು ಬಂದು ಕುಮಾರನು ಕೊಡವಾಗ
ಬೆರಗಾದರಾಗ ಸಭೆಯೊಳಗೆ ||೧೭೫||

ಓದಲು ಲೇಖನವ ಮಾವ ಅತ್ತೆಯ ಹೆಸರು
ನಾವು ಕ್ಷೇಮದಲಿರುತಿಹೆವು।
ನಾನು ಕಳುಹಿದೆನು ಕುಮಾರರೊಡನೆನ್ನಲು
ಮಂತ್ರಿಯು ಕುಮುದಿನಿಯು ಸಹಿತ ||೧೭೬||

ದಿನ ಮೂರರೊಳಗಾಗಿ ಕಳುಹಲು ಹಿಂದಕ್ಕೆ
ಕಳುಹಯ್ಯ ವಿಜಯರಾಜೇಂದ್ರ।
ಸೊಸೆಯು ಮಂತ್ರಿಯ ನೋಡಿ ಬಹುಕಾಲ ತುಂಬಿತು
ಇಂತಿದು ನಿಮಗೆ ಶರಣಾರ್ಥಿ ||೧೭೭||

ಕೇಳುತ ಕುಮುದಿನಿ ಹೋಗಿ ಬರುವೆನು ಬೇಗ
ಜೋಡಿಗೆ ಮಂತ್ರಿ ಇರುತಿಹನೆ।
ರಾಯ ವಿಜಯೇಂದ್ರನು ತನುಜ ಬಾ ಎನುತಲಿ
ಬೇಡೆನಲು ಕುಮಾರನ ಪಿತನು ||೧೭೮||

ಅಷ್ಟರಲಿ ಬಂದವರು ಸತ್ಯ ಹೋಗುವ ಮಾತು
ಉತ್ತರವ ಕೊಡುವ ಹೀಗೆನುತ।
ಮತ್ತೊಮ್ಮೆ ಕರೆದೊಯ್ಯಲೆ ಬಿಟ್ಟುಕೋ ಆ ಮಾತ
ಹೊಕ್ಕು ಬರಲು ಇವರು ಹೋಗಿ ||೧೭೯||

ಕೆಂಡಕೊಂಡವ ಮಾಡಿ ಮುಂದೆ ಕುಮುದಿನಿ ಮಂತ್ರಿ
ಮಿಂದುಟ್ಟು ಮಡಿಯೊಳು ಹೊಗಲು।

ಕಂಡರು ಯಮಲೋಕ ಕತ್ತೆಸೂಳೆಯು ಕೆಟ್ಟು
ಚೆಂದವ ನೋಡೊ ಕಂಪಿಲನೆ ||೧೮೦||

ನಾರಿಯರ ಮನ ಚಿತ್ತ ಹೀಂಗೆ ಇರುವುದು ಸ್ವಾಮಿ
ರಾಮನೊಳಗೆ ಆಗಲರಿದು।
ಹೀಗಲ್ಲ ಎಲೆ ಮಂತ್ರಿ [ನಾಡ] ಮಾತು ಸುಡಲಿ
ಹೋಗಿ ನೋಡವಳ ಕುಚಕಾಯ ||೧೮೧||

ಕೋಣನ ಮುಂದೊಮ್ಮೆ ವೀಣೆ ಸ್ವರ[ವ]ನು ಮಾಡೆ
ಪೇಳೆಂದ ಗಾದೆ ಆ ಕ್ಷಣಕೆ।
ಓದಿದ ಗಿಳಿ ತನ್ನ ಅಮೇದ್ಯವ ತಿನುವಂತೆ
ಆಡಿ ಮಂತ್ರಿಯು ಮನದೊಳಗೆ ||೧೮೨||

ಇನ್ನೇನು ಪೇಳಯ್ಯ ನಿನ್ನ ಆತ್ಮದ ಭಾವ
ಎನ್ನ ಮಾತುಗಳು ಕಿವಿ ಹೊಗದು।
ಕಳ್ಳೆಯರ ನಡೆವಳಿಯ ಕ[ಥೆ] ಮೂಲದಿ ಪೇಳೆ
ನಿನ್ನ ಬುದ್ಧಿಗಳು ಮರೆದಿಲ್ಲ ||೧೮೩||

ಭೇದವ ತಿಳಿಯದೆ ಆಡುವೆ ಎಲೆ ಮಂತ್ರಿ
ಹೋಗುವ ಒಳಮನೆತನಕ।
ನೋಡವಳ ಇರತಿಯ ಪ್ರವೀಣನಲ್ಲವೆಯೆಂದು
ಜೋಡಿನೊಳವರು ಐತರಲು ||೧೮೪||

ಬಾರೆನ್ನ ಬೈಚಪ್ಪ ಸೋದರ ಬಳಗವೆ
ಸೇರುವೆ ಸ್ವರ್ಗದ ಪದವ।
ನೀನೆಲ್ಲ ಇದ್ದು ನಾ ಸಾಯಲ್ಕೆ ತೆರಬಂತು
ಹೋಗಿನ್ನು ಪತಿವ್ರತ ಭಾವ ||೧೮೫||

ನೋಡಯ್ಯ ಮಂತ್ರಿ ಅಣ್ಣಾಜಿಯಲ್ಲವೆ ನೀನು
ಮಾಡಿರುವ ಕುಚದ ಗಾಯವನು।
ಈಡೆ ರಾಮಗೆ ನಾನು ಇಲಿಯು ಬೆಕ್ಕಿಗೆ ಸಿಕ್ಕಿ
ನೋಡೋರು ಫಲವಿತ್ತ ನಿಮ್ಮ ||೧೮೬||

ನರ ಮನುಜ ಎನುತಿರ್ದೆ ಕರ ಚೆಲ್ವ ಭಾವಿರಲು
ಅರಿಯದೆ ನಾ ಮರುಳರಂಡಿ।
ತೆಗೆದಪ್ಪಿ ತಬ್ಬಲು ಹುದುಗಿ ಹಲ್ಲಿಯ ತೆರದಿ
ಮರನಾದೆ ಸ್ಮರಣೆಯ ಮರೆದು ॥೧೮೭॥

ತೋರಲೆ ಎಲೆ ಮಂತ್ರಿ ಸೀರೆ ಸೆರಗನು ತೆಗದು
ಸಾಲದು ನಿನಗೆ ನಿಜಕರವು।
ಆಗಲೊ ಈಗಲೊ ಕಳಲೇರಿ ಬರುತಿದೆ ಜೀವ
ಮೋರೆ ನೋಡದೆ ಅಳಿಯಲೇನೊ ॥೧೮೮॥

ಕಂಡದು ಇದು ತಾಯಿ ಕಳವಿನ ಠೌಳಿಯ
ಪುಸಿಯೆಂಬರೆ ಶಿಶು ಬಾಲ ಮೊದಲು।
ಮುಂದೇನು ಅವನಿಗೆ ಮಾಡೊ ಆಜ್ಞೆಯ ಪೇಳಿ
ಗಂಡ ಹೆಂಡಿರು ಸರಿಗೂಡಿ ॥೧೮೯॥

ದೃಷ್ಟ ಕಂಡೆಯೊ ಮಂತ್ರಿ ಬೆಪ್ಪು ಮಾಡಿದೆ ಎನ್ನ
ಮುಕ್ಕು ಮೂಳಗಳ ಕಥೆ ಹೇಳಿ।
ತಪ್ಪೇನೊ ಇದು ಮಂತ್ರಿ ಅಪರಾಧ ಆಜ್ಞೆಯ ಮಾಡಿ
ಹುಚ್ಚು ಜಾಣ ಕೈಲಿ ಕೇಳ್ವೆ ॥೧೯೦॥

ತಪ್ಪಿ ನಡೆಯಲು ಮಂತ್ರಿ ಪೃಥ್ವಿಯೊಳಪರಾಧ
ಒಪ್ಪೀತೆ ಈ ಕರ್ಮ ನಿನಗೆ।
ಹೆತ್ತ ತಂದೆಯ ಸತಿಯ ತಕ್ಕೈಸಿದ ಮೂಳನ
ಕುಟ್ಟಿ ಹಾಕಯ್ಯ ತಲೆಯನು ॥೧೯೧॥

ಚೆಂದವಾಯಿತು ಎಂದು ಚದುರ ಮಂತ್ರಿಯು ತನ್ನ
ಮಂಡೆಯ ತೂಗಿ ಮನದೊಳಗೆ।
ಹಿಂದಿವನಾ ಗುರು ಮುನಿಯು ಬಂದು ಹೇಳಿದ ಮಾತು
ಕಂಡರಿತಾಯಿತು ಲಿಖಿತವನು ॥೧೯೨॥

ಮಗನ ಕೊಲ್ಲಲು ತಾಯಿ ಮಾತೆಲ್ಲಿ ನಡೆವುದು
ಅಡಗೂದೆ ಶಶಿ ಸೂರ್ಯರುಳ್ಳನಕ।

ಕಡೆಗೆ ತಿಳಿವುದು ಬುದ್ಧಿ ಗಗನ ಮುಟ್ಟಲಿ ದುಃಖ
ಅಳಿದವನು ಬೇರೆ ತಿರುಗುವನೇ ||೧೯೩||

ಕಂದ ಬೇಡವೊ ಮಂತ್ರಿ ನಿಂದೆಗಳ ಹೊರಬಹುದೆ
ಹಿಂದಣಾಗಮವ ಕೇಳಿಲ್ಲವೆ।
ಒಂದು ಯೋಗ್ಯದ ತುರಗ ಬಂದು ಸೇರಲು ಪಾರ್ಥ
ಕೊಂದು ಕಳೆವ ನೃಪರೆಲ್ಲ ||೧೯೪||

ಕುದುರೆಯ ಪಣೆಯೊಳು ಬರೆದ ಲೇಖನಗಳ
ನಡೆಯೋನೆ ಕದನ ಕಾಳಗಕೆ।
ಪೊಡವಿಗೆ ಗುರುತಾದ [ಚಂಪಕ]ಪುರಕಾಗಿ
ನಡೆದೂದು ಆ ಅಶ್ವ ||೧೯೫||

[ಚಂಪಕ]ಪುರದ ಭೂಕಾಂತ ಹಂಸಧ್ವಜನು
ಇಂತು ವರ್ಣಿಪರು ಸಾಹಸವ।
ಸಂತಾನ ಈರ್ವರು ಭೂಕಾಂತ ಕೇಳಿವನೆಂಬ
ಬಳಿಕವರು ಅಶ್ವನ ನಡೆಯೇ ||೧೯೬||

ಬರೆದ ಲೇಖನ ಓದಿ ತುರಗವ ಕಟ್ಟಿಸಲು
ಹೊರಗಿಳಿಯೆ ಪಾರ್ಥನ ಬಲವು।
ಹೊಡೆಯಲು ರಣಭೇರಿ ದನುಜೇಂದ್ರ ಹಂಸಧ್ವಜನು
ಬಿಡಲಿನ್ನು ಹೊರಪಾಳ್ಯ ದಂಡ ||೧೯೭||

ಸಾರಲು ಪುರದೊಳು ರಣಭೂಪನಿಂದಿಳಿದ
ಮರಳಿ ಕಾದ ಕೆಲದಲಿ ನೂಕಿಸುವೆ।
ಶ್ರೋಣಿತಕುಳಿಯದೆ ವೀರ ಏಕ್ಕಟಿಗರು
ಕಾದಲವರ ಭೂಮಿಯಲಿ ||೧೯೮||

ಕಂಡನು ಸುಧನ್ವ ಪೊರಮಡುವ ಸಮಯದಲಿ
ಅಂಗನೆ ತಡೆದು ನಿಲ್ಲಿಸಲು।
ಮುಂದೆಮಗೆ ಋತು ಸಮಯ ಕಂಡವರಾರು ಅಪಜಯವ
ಕಂಡಿಲ್ಲ ಫಲಸಾರ ತನಗೆ ||೧೯೯||

ತರಳೆ ನೀ ಪೇಳುವುದು ಚೆಲುವ ಮಾತುಗಳಹುದು
ತನಗಿದು ಸಮಯ ಕಾಲಲ್ಲ।
ಹೊರಗ್ಹೋಗಿ ಪಿತನಿಹನು ಹಿಂದುಳಿದವರ ಕೆಲದಲಿ
ಮುಳುಗಿತೇನೆನುತ ಸಾರಿಹನು ॥೨೦೦॥

ಕಾಂತನೆ ಕಾತರದ ಪ್ರಿಯವ ಸ್ತ್ರೀಯರ ಭ್ರಮೆಯ
ನಿಸ್ಕರಿಸಿ ಹೋಗಲು ಕಾರ್ಯ।
ನೀಕಾರ ಬಂದಪುದೆ ಅನೇಕ ತೆರದೊಳು ಪೇಳೆ
ಆಕೆ ಭೋಗದಿ ಸಂಗ್ರಹಿಸಿ ॥೨೦೧॥

ರಣಭೂಮಿಯನು ಕೇಳಿ ಹಂಸಧ್ವಜನು ತನ್ನ
ಉಳಿದಿಲ್ಲವೆನುತ ನಗರದಲಿ।
ನುಡಿದನು ಅಲ್ಲೊರ್ವ ಸುಧನ್ವನು ಇಲ್ಲೆನಲು
ಪಿಡಿತನ್ನಿರೆನಲು ಆರ್ಭಟಿಸಿ ॥೨೦೨॥

ಯಮನ ದೂತನ ತೆರದಿ ಚರರಾಗ ಪರಿತಂದು
ಪಿಡಿದು ಹೆಡಗೂಡಿನೊಳು ತರಲು।
ಸಿಡಿಲಂತೆ ನೃಪನು ಏನೆಲವೊ ಎನ್ನಾಜ್ಞೆ
ತೃಣವಾಯ್ತೊ ಎನುತ ಕನಲಿ ॥೨೦೩॥

ಕೇಳಲು ತನ್ನಯ ಪ್ರಧಾನಿಕರನೆಲ್ಲ
ಮಾಡುವೆ ಆಜ್ಞೆ ಉಸುರೆನಲು।
ಮಗನುಳಿಯೆ ಮಡಗುವುದು ಬಡವರ ಹಾಕಿಸಲು
ಮೃಡ ಮೆಚ್ಚನದಕೆ ನಿಮ್ಮೆಸಲು ॥೨೦೪॥

ಖೂಳನ ಮಾತನು ಕಾದ ಎಣ್ಣೆಗೆ ಇವನ
ಹೋಗಿ ನೂಕೆನಲು ಆ ದನುಜ।
ಕಾಯ್ದು ತೈಲದಿ ಕಂಡು ಚರರು ಹಾಕಲು ಹರಿಯು
ಕಾಯ್ದನು ಕೇಳೊ ಬೈಚಪ್ಪ ॥೨೦೫॥

ಮಗ ಮಾಡಿದ ಹಾದರವ ಮಡಗಿ ಮತ್ತೊಬ್ಬನು
ಬಡವ ಮಾಡಲು ಕೊಲ್ಲಬೇಕೊ।

ಗಿರಿಜೆ ರಮಣನು ಮೆಚ್ಚ ಹೊಡೆ ಮಂತ್ರಿ ತಲೆಯೆಂದು
ನುಡಿಯಲು ಭೂಪ ವಾಕ್ಯದಲಿ ||೨೦೬||

ಸತ್ಯವಾಡಲು ನಾನು ಕತ್ತೆ ಬುದ್ಧಿಗೆ ನಡೆವ
ಲಿಖಿತದ ಫಲವೆಂದ ಮಂತ್ರಿ।
ಅಪರಾಧವಿರ್ದಡೆ ಅಳಿವ ರಾಮನು ಧರ್ಮ
ಪಥವಿರಲು ಸುಧನ್ವನಂತುಳಿವ ||೨೦೭||

ಗಟ್ಟಿ ವಾಕ್ಯವ ಪೇಳು ಸತ್ತಾಗ ಮತ್ತೊಂದು
ಕೆಟ್ಟಾಡುವಾ ದುಃಖದೊಳಗೆ।
ನಿಶ್ಚಯದಿ ಕೊಲಬೇಕೆ ನಂಬಿಕೆ ಕೊಡು ರಾಯ
ನಿಮ್ಮಪ್ಪಣೆಯಾಗೆ ತನಗೇನು ||೨೦೮||

ಕೊಂದ ಮಗನನೆಂದು ನೊಂದುಕೊಳ್ಳುವಿ ಕಡೆಗೆ
ಇಂದಿನ ಸಿಟ್ಟು ನಾಳಿರದು।
ಕಂದ ನಿನ್ನಯ ಬಸುರ ಪುಟ್ಟಲಿಲ್ಲವೊ ಅಭಯ
ನಂಬಿಕೆ ಕೊಳ್ಳೊ ಬಲದ ಹಸ್ತ ||೨೦೯||

ತಲೆಯನು ಹೊಡೆಯೆಂದು ವೀಳ್ಯ ಅಪ್ಪಣೆಯಿತ್ತು
ತಿರುಹಿದ ಕಪಿಯಂತೆ ಮುಖವ।
ಅಳಿಯನು ಎಂದೆನುತ ತಜುಬಿಜಿಯ ಮಾಡಲು
ನಿನ್ನ ತೆಗಸುವೆ ಹಸಿಯ ಶೂಲದಲಿ ||೨೧೦||

ಆಡುವ ಕಡಕಿಲೆ ನೋಡಿದ ಮಂತ್ರಿಯು
ಏರಿತು ತಲೆ ಮದವು ಇವಗೆ।
ತಾವರೆ ಸಖ ಭಾನು ಕಳೆಯಗುಂದಿದ ತೆರದಿ
ಪ್ರಧಾನಿ ಬಂದನು ತನ್ನ ಮನೆಗೆ ||೨೧೧||

ಬರುವಂಥ ಸಮಯದಿ ಮನದೊಳು ಗ್ರಹಿಸಿದ
ಹಲವು ಯುಕ್ತಿಯ ತಂತ್ರವನು।
ಇಡಬೇಕು ಮತ್ತೊಂದು ನೆಲಮಾಳಿಗೆಯೊಳು ಮಡಗಿ
ಕುರುಹಾಗೆ ಕಳ್ಳ ರಾಮನೊಯಿವಾ ||೨೧೨||

ಪುತ್ರ ರಾಮನು ಮತ್ತೆ ಸತ್ತನೆಂಬುವ ಸುದ್ದಿ
ಹುಟ್ಟದೆ ಡಿಳ್ಳಿ ಪಟ್ಟಣದಿ।
ಮುತ್ತನೆ ದಂಡನು ಸುರಿತಾಳ ಬರಲು ಇಲ್ಲಿ
ಅಟ್ಟುವರುಂಟೆ ಜಗಳದಲಿ ॥೨೧೩॥

ಪಟ್ಟಣ ಸಲುವನ ಮಡಗಿರಲು ಕಾರ್ಯಗಳುಂಟು
ಮುತ್ತದೆ ತನಗುಳಿಯೆ ಪುರವು।
ಸೃಷ್ಟಿಗೆ ಅಳಿದಂತೆ ತಂದು ತಲೆಯನು ತೋರಿ
ಹುಟ್ಟಿದನೆನಿಸಿ ತೋರುವೆನು ॥೨೧೪॥

ಅನಿತರೊಳಗೆ ಸೂರ್ಯ ನಡೆಯಲು ಋಣಸಾರ
ಕಡಲ ಸ್ನಾನವನು ಮಾಡುವರೆ।
ಚದುರ ಮಂತ್ರಿಯು ತನ್ನ ಮನೆಯೊಳಗಿರುತಿರೆ
ಕಳವಳಿಸುತ ಮನದೊಳಗೆ ॥೨೧೫॥

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷ ಲಿಂಗ।
ತರಳ ರಾಮನ ಮಡಗಿ ಕಳ್ಳ ರಾಮನ ತರುವ
ಹೊಳವಿಗೆ ಹದಿಮೂರು [>ಹದಿನಾಲ್ಕು] ಸಂಧಿ ॥೨೧೬॥*

❖❖

* + ಅಂತು ಸಂಧಿ ೧೩[>೧೪]ಕ್ಕೆ ಪದನು ೨೯೬೪ಕ್ಕೆ ಮಂಗಳ ಮಹಾಶ್ರೀ ಶ್ರೀ ಶ್ರೀ. (ಮೂ)

ಸಂಧಿ : ಹದಿನೈದು

❖

ಕಳ್ಳರಾಮನ ಬಲಿದಾನ - ಬಾಲರಾಮನಿಗಾಗಿ ಪ್ರಳಾಪ

---

*ಶ್ರೀ ಗಿರಿಜೆಯ ಶಂಭು ಭಾಗೀರಥೀಶನೆ
ನಾಗಭೂಷಣ ನಂದಿಕೇಶ ।
ಆಗಮದೊಡೆಯನೆ ಮೂಜಗವ ರಕ್ಷಿಪನೆ
ಪಾಡುವೆ ನಿಮ್ಮ ಮಹಿಮೆಯನು ||೧||

ಉರುಗಶಯನ ನಾಭಿಕಮಲದಿ ಜನಿಸಿದ
[ಶಿರವನು] ಧರಿಸಿ ಧರೆಯೊಳಗೆ।
ತಿರಿದುಂಡೆ ನವಕೋ[ಟಿ] ಸುರಮುನಿಗೆ ನಿಲುಕದ[ನ]
ಪರಮ ನಿರಂಜನ ಕೊಡು ಮತಿಗೆ ||೨||

ಅಂಗಾಲಲ್ಲದೆ ನುಂಗುವೆನ ಬೆನ್ನ ಮಾರುತನ
ಆಹಾರವ ಮೇಲ್ಮೈದನಾ ಸುತನ।
ಸೋದನೆಯ ಮಾಡಿದನ ರಾಣಿಯ ಪಿತಗವನ ಮಾಡಿದರೆ ಸುತನಿಂದ
ಲಯಮಾಡಿದ ದೇವ ಕೊಡು ಮತಿಯ ||೩||

ಕುಕ್ಷಿಯೊಳಧಿಪತಿ[ಯ] ಮಸ್ತಕವ ಬದಲಾಂತು
ಅಕ್ಷಿ ಮೂರುಳ್ಳನ ವರಪುತ್ರ।
ರಕ್ಷಿಪುದು ಮುಂದೆಮಗೆ ರಸಸಾರ ಮತಿಯನು
ಅರ್ಥಪ್ರಾಸಿಗೆ ಸಮನಾಗಿ ||೪||

---

* + ಶ್ರೀ ವಿರೂಪಾಕ್ಷಲಿಂಗಾಯನಮಃ(ಮೂ)

ಕವಿಗಳ ಜಿಹ್ವಾಗ್ರ ಕೊನೆಯೊಳು ಇರುತಿರ್ಪ
ಕಮಲಜನ ರಾಣಿ ಕಟ್ಟಾಣಿ।
ಯಶವಾಗಿ ಮುಂದಣ ತರಳರಾಮನ ಉಳುಹಿ ನಡ
ಸಮ್ಮ ಮುಂದೀ ಕೃತಿಯ ||೫||

ಕಾಶಿ ರಾಮೇಶ್ವರಕೆ ಈಸು ವೆಗ್ಗಳವಾದ
ಶ್ರೀಶೈಲ ವರಕ್ಷೇತ್ರ ಹಂಪೆ।
ಈಶನೆ ಪರಮಪ್ರಕಾಶನೆ ಕೃತಿಯನು
ಪ್ರಾಸು ಬೀಳದ ಹಾಗೆ ನಡಸು ||೬||

ಕೇಳುವುದು ಪರ ವಿಷಯ ನಾಯಿ ಮಾಂಸವು ಎಂಬ
ಕಾಣುವ ವ್ರತನಿಷ್ಠ ಜ್ಞಾನಿಗಳು।
ಓದಲು ಫಲವಿಹುದು ಕೇಳಲು ಗತಿ ಮುಂದೆ
ರಾಮನಂದದಿ ನಡೆವವಗೆ ||೭||

ನಡೆಸುವೆ ಮುಂದಣ ಕೃತಿಯ ಲಾಲಿಸಿ ನಿಮ್ಮ
ಪ್ರೌಢ ಚಿತ್ತಗಳೊಂದುಗೂಡಿ।
ಮಕರಬುದ್ಧಿಗಳಿಂದ ಮಾತ ನುಡಿಯಾಡಲು
ಗತಿಯೇನು ತಿಳಿದು ಪೋದಲ್ಲಿ ||೮||

ಸತ್ಯದಿ ನಡೆವವರ ಸ್ಮರಣೆ ಕರ್ಣಕೆ ಬೀಳೆ
ಹತ್ತದೆ ತಮಗೆ ಕಿಂಚಿತವು।
ಭಕ್ತಿಯಿಲ್ಲದ ಶ್ವೇತ ಊರ್ವಶಿಯ ಬೋಧನೆ ಕೇಳೆ
ಹತ್ತನೆ ಶಿವಲೋಕ ಪದವ ||೯||

ತಿಂಗಳಿಗೊಂದಿವಸೊಂದಾಗಿ ಚರಿಸುವನು
ಕಂಡನು ಬಿದಿಗೆ ತದಿಗೆಯಲಿ।
ತುಂಬಿದ ಪೌರ್ಣಮಿ ದಿವದಿವದೋರೆ
ಇಂದ್ರಭಾಗದೊಳು ರಾಜಿಸುತ ||೧೦||

ಸೋಮನ ಕಳೆಯೊಳು ರಾಜಮಂತ್ರಿಯು ಬಂದ
ರಾಮ ರಾಯನ ಅರಮನೆಗೆ।

ಆಳು ಮಂದಿಯನೆಲ್ಲ ಅಂತ್ರದಿಂದಲಿ ಇಟ್ಟು
ಕುಮಾರನ ಬಳಿಗಾಗ ನಡೆದ ॥೧೧॥

ಪುತ್ರನ ಕಾಣುತ ಸಾಷ್ಟಾಂಗವೆರಗಲು
ಎತ್ತಿ ರಾಮನು ಕರವಿಡಿಯೆ।
ಮತ್ತೇನು ಕಾರ್ಯವು ಇಷ್ಟೊತ್ತು ಬರುವುದಕೆ
ರತ್ನಿ ಮಾಯೆಗಳೆಂದ ಮನದಿ ॥೧೨॥

ಚಂದವಾಯಿ[ತೆ] ಬೇಂಟೆ ರಾಜೇಂದ್ರನು ಬಂದರೆ
ಹೊಂದದೊ ಇರೆ ಪ್ರಾಪ್ತಿ ತಮಗೆ।
ಬಂದರೆ ಕ್ಷೇಮದಿ ಪರಿಣಾಮ ಕ್ಷಿತಿಯೊಳು
ಮಂಡಿಸಿವೆನಲು ಪ್ರತಿಯಿಲ್ಲ ॥೧೩॥

ಬೇಂಟೆಯ ಸುಡು ನಮ್ಮ ಕಲಾಪದೋರಿತು
ಸ್ವಾಮಿ ತಾಕಿತು ಮೊಲ ನಾಯಿ ಮೇಲೆ।
ಸಾಕ್ಷಿಗಳಲ್ಲವೆ ಶಕುನಶಾಸ್ತ್ರಗಳಿವು
ಕಲಾಪದೋರಲು ಕುಮ್ಮಟದಿ ॥೧೪॥

ಹಾಳು ರಂಡೆಯ ಮನೆಗೆ ಹೋಗುವರೇ ಪುತ್ರ
ಹಾಳು ಚೆಂಡಾಟವು ಸುಡಲಿ।
ಹಾಳು ಮಂದಿಯರೊಡನೆ ಕೇಳಿಸಿಕೊಡದಿರಲು
ರಾಯ ಬಂದಾಗ ಹೊಗದಿಹುದೆ ॥೧೫॥

ಕತ್ತೆ ಸೂಳೆಯುಯೆಂದು ಕಡೆಗು ಬಲ್ಲೆನು ನಾನು
ಇಟ್ಟಳು ಅಪಕೀರ್ತಿ ನಿಮಗೆ।
ಹೊಕ್ಕರೆ ಹೋಗಲಿ ಹೊಲಸು ರಂಡೆಯ ಮೋಡಿ
ಸಿಕ್ಕವರೆ ಮೂಳಿಯ ಬಲೆಗೆ ॥೧೬॥

ಪರನಾರಿ ಸೋದರ ಬಿರಿದೆಲ್ಲಿ ಹೋಯಿತು
ಹರನ ವರವೇನಾಯಿತು ಭೂಪ।
ಇರಲಿಲ್ಲ ಮತ್ತಾರು ಪುರದೊಳು ರತ್ನಿಯ
ತಲೆಯ ಮೆಟ್ಟಿದ ಸತಿಯರುಗಳು ॥೧೭॥

ಸಿಟ್ಟು ಬರುವುದು ಮಂತ್ರಿ ಸರಸವನಾಡು
ಏಕಾ[ತು] ಈ ಕರ್ಮ ನುಡಿಯ।
ಮುಚ್ಚಿ ಆಡಲಿ ಬೇಡ ಅಪ್ಪಾಜಿ ಹೊಳಮಾತು
ತಪ್ಪದೆ ಹೇಳಿದ ಮಂತ್ರಿ ॥೧೮॥

ರಾಯನಾಡಿದ ಮಾತ ಹೇಳುವರೆ ಭಯವೇನೊ
ದೇವರಿಗೆ ಹೇಗೆ ತೋರುವುದೊ।
ಸಾರಂಗಧರನಂತೆ ಮಾಡೆಂದು ಅಭಯವ
ಹೇಳಿರುವದೆ ಸರಿಯಷ್ಟೇ ॥೧೯॥

ಇನ್ಯಾಕೆ ಎಲೆ ಮಂತ್ರಿ ಅಮ್ಮಾಜಿ ಹೀಗೆನಲು
ಎನ್ನಾಸೆಗಳು ಸುಡಲಿ।
ಬಯಲ ಕತ್ತಲಿದು ಬಡಧೈರ್ಯನಿಗೆ
ಕೊಳ್ಳಯ್ಯ ಬಲಗೈ ಭಾಷೆಯನು ॥೨೦॥

ನೀನೇಕೆ ಬರಬೇಕು ತಾಯಿ ಸೇರದವನು
ಆಳಿಲ್ಲವೇನೊ ಕಂಪಿಲಗೆ।
ಓರಂತೆ ಸದೆಬಡಿದು ರಾಯನ ಮುಂಗಡೆಯೆ
ನೀಗುವೆ ತನ್ನಯ ತನುವ ॥೨೧॥

ಕೇಳಿ[ದ]ನು ತನ್ನಯ ಸೂಳೆ ಮುಂಡೆಯ ಚಾಡಿ
ಬಾಲನ ಸತ್ಯ ತಿಳಿದಿಲ್ಲವೆ।
ಕೋಳಿಯ ಬಡಿದಂತೆ ಕಾಲ್ಹಿಡಿದು ಬ[ಡಿ]ವೆನು ಮಂತ್ರಿ
ಹೀನಾಯ ಬಿಡದು ಧರೆಯೊಳಗೆ ॥೨೨॥

ಕಾಲನಾರ್ಭಟವಾಗೆ ಕಂಡಾಗ ಮಂತ್ರಿಯು
ಜೀವದೊಳಗೆ ಬೆಚ್ಚಿ ಬೆದರುತಲಿ।
ಆವಾಗ ರಾಮಗೆ ಧರ್ಮದೇವತೆ ಬಂದು
ಕೂಡಿದ ಪುತ್ರನಾತ್ಮದಲಿ ॥೨೩॥

ನೀನೇಕೆ ಬೆದರುವೆ ಚದುರ ಮಂತ್ರಿಯೆ ನಿಮ್ಮ
ದೊರೆ ಪೇಳಿದ್ಹಾಗೆ ಮಾಡೆನಲು।

ನರಕದ ಸೂಳೆ[ಯ] ನುಡಿಗೇಳ್ವ ಮಾತಿಂಗೆ
ಬರುತಿದೆ ಎನಗೆ ಮಂತ್ರಿ ಸಿಟ್ಟು ||೨೪||

ಧರೆಯ ನಾರಿಯರೆಲ್ಲ ಮುಂದವನು ಕಡೆಯೆಲ್ಲಿ
ಮುದಿಯಗೆ ಹೆದರಬೇಕಾಯ್ತು।
ಹಡೆದಾಕೆ ಒಬ್ಬಳ ನೋಡಿ ತಡೆದೆನು ಮಂತ್ರಿ
ಕೊಡುವೆನು ದೃಢವಾಗಿ ತಲೆಯ ||೨೫||

ಜಗವೆ ಬಲ್ಲದು ಸ್ವಾಮಿ ಕೊಲುವಾತನಹುದೆಂದು
ತೃಣಕಿಂತ ಕಡಿ ನರಜೀವ।
ಎಲುವಿಲ್ಲದ ನಾಲಗೆ ಹಲವಂ[ದ] ನುಡಿಯದೆ
ಕಳವಿರಲು ಪಿತನ ಕೊಂದೆಂದು ||೨೬||

ದೃಢವಿರಲು ತನ್ನಯ ತಲೆಗೊಡುವ ಹರ ಮೆಚ್ಚ
ಕೊಡದಿಹನೆ ಎಂದು ಆಡುವರು।
ಸರಿ ಮಂತ್ರಿ ಈ ಮಾತು ಶತ ವರುಷ ತುಂಬಿತು
ಮುನ್ನವೆ ಹೊಡಕೊಳ್ಳೊ ತಲೆಯ ||೨೭||

ಕಂಪಿಲರಾಯನ ಪಂಥ ಗೆಲಿದರೆ ಸಾಕು ಭೂ
ಕಾಂತಲಿ ಸ್ಥಿರವುಂಟೆ ಕಾಯ।
ಸಂತೆನ್ನ ಲಿಖಿತವು ತಂದೆ ಕರದೊಳು ಅಳಿಯೆ
ಹೊಂದುವುದು ಸದ್ಗತಿಯ ಫಲವು ||೨೮||

ನಂಬಲಾರದೆ ಮಂತ್ರಿ ಭಯಗೊಂಡು ದೂರದಿ ಇರುವೆ
ನಂಬುಗೆ ಕೇಳ್ವೆ ಬಲಗೈಯ।
ಚಂದ್ರಾಯುಧ ಪಿಡಿಯೆ ಕಳವೆಂಬುದು ತನಗಿಲ್ಲ
ಪಿತನೆಂದ ಆಜ್ಞೆಯ ಮಾಡಿಕೊಳ್ಳೊ ||೨೯||

ಸತ್ಯಪುರುಷನ ಮಾತು ಸತ್ತರೆ ಅಡಗದು
ಪೃಥ್ವಿಯುಳ್ಳನಕ ನಿಶ್ಚಿತವು।
ಚಿತ್ರಾಂಗಿ ಕೊಲ್ಲಳೆ ತಪ್ಪಿಲದ ಸಾರಂಗ
ಪುತ್ರನ ವಾಕ್ಯ ಪೊಲ್ಲಪುದೇ ||೩೦||

ಆಯುಧವ ಕೊಡಲಾಗಿ ನೋಡಿದ ಮಂತ್ರಿಯು
ಹೋಗಿಲ್ಲ ಕರ್ಮಕೆ ಇವನು।
ಹಾದರಗಿತ್ತಿಗೆ ಒಳಗಾಗದಿರಲು ಇಷ್ಟು
ಮೂಲವನು ತಂದು ಹಣ್ಣಿದಳು ॥೩೧॥

ಆರನೆಂಬುವುದೇನು ಪೂರ್ವದ ಫಲವಿದು
ಹೇಳಿದ ಗುರು ವಾಕ್ಯ ಹುಸಿಯೇ।
ಕೇಡಿರಲು ಇವನೊಳಗೆ ಕೊಡುವವನೆ ಪಿರಂಗಿಯ
ಕಾರಗಡಿವನು ಲಕ್ಷ ಬಲವ ॥೩೨॥

ತಪ್ಪನು ಪರಸತಿಗೆ ಕಟಕಿಯ ಮಾತೇನು
ಒಪ್ಪದಿರಲು ಕಂಡ ಹದನ ।
ಮುಪ್ಪಿನ ಕಾಲಕೆ ಮುದಿಯಗೆ ಶ್ವಾನ
ಬುದ್ಧಿ ಹುಟ್ಟಿತು ಕಂಪಿಲಗೆ ॥೩೩॥

ಪುತ್ರ ರಾಮಗೆ ಹೋಗಿ ಮತ್ತೆ ಕರಗಳ ಮುಗಿದು
ಒತ್ತಿನೊಳಗೆ ಕುಳಿತು ಪ್ರಧಾನಿ।
ಸತ್ಯದೊಳು ಹರಿಶ್ಚಂದ್ರ ವಾಕ್ಯ ಪೇಳುವೆ ನಿಮಗೆ
ಚಿತ್ತಕ್ಕೆ ಹೇಗೆ ತೋರುವುದು ॥೩೪॥

ಹೇಳಯ್ಯ ಪ್ರಧಾನಿ ಹಿರಿಯರಲ್ಲವೆ ನೀವು
ಕೇಳದಿರಲು ತಾನು ಮರವೇ।
ಜಾಣ ಮಂತ್ರಿಯ ಮಾತ ಮೀರಿನ್ನು ನಡೆವವಗೆ
ಬಹಳ ಕೇಡುಂಟು ಧರೆಯೊಳಗೆ ॥೩೫॥

ಇದಕೊಂದು ಕಥೆಯುಂಟು ಹೃದಯದಿ ಲಾಲಿಸಿ
ಮದನವತಿಯೆಂಬ ಪಟ್ಟಣದಿ।
ಸೊಗಸಾಗಿ ಆಳುವಂಥ ಚಕ್ರವರ್ತಿಗೆ
ಭಾನುಮತಿಯೆಂಬ ಸ್ತ್ರೀ ಮದುವೆ ॥೩೬॥

ಹಗಲಿರುಳು ಆಕೆಯ ಅಗಲಿ ಜೀವಿಸಲಾರ
ಸದರಿನೊಳು ಕುಳಿತು ಸಮನಾಗಿ।

ಇರುತಿರಲಾತನ ವರಮಂತ್ರಿ ಪೇಳಿದ
ದೊರೆ ರಾಣಿ ಬರಸಲ್ಲ ಹೀಗೆ ||೩೭||

ಹೇಗೆ ಮಾಡಲಿ ಮಂತ್ರಿ ಕಾಣದೆ ಅರಗಳಿಗೆ
ಜೀವಿಸಲಾರೆ ನಾನವಳ।
ಭೂಮಿಕಾಂತನೆ ಕೇಳೊ ಈಕೆ ಲಾವಣ್ಯಕೆ
ಕಾಗದದೊಳು ಬರೆಸಿಕೊಡುವೆ ||೩೮||

ಹಾಗೆ ಮಾಡೈ ಮಂತ್ರಿ ನೋಡಿನ್ನು ತಾ ಮರೆತು
ಜೀವ ಕುಳ್ಳಿರುವೆ ಸದರಿನಲಿ।
ಜಾಣ ಚಿತ್ರಕನಿಗೆ ಪೇಳಲಾಕ್ಷಣದೊಳು
ಭಾವಕ್ಕೆ ಮಿಗಿಲಾಗಿ ಬರೆಯೊ ||೩೯||

ಬರೆವಂಥ ಸಮಯದಿ ಕರದ ಕಪ್ಪಿನ ಕಡ್ಡಿ
ಉದುರಿ ಬೀಳಲು ಒಳದೊಡೆಗೆ।
ಒರೆಸುವ ಸಮಯದಿ ವರರುಚಿಯು ಬಂದಾಗ
ಇರುವುದಾಕೆಗೆ ಬೇಡವೆನಲು ||೪೦||

ಹರುಷದಿ ಕೊಡಲಾಗ ರಾಯ ಭಾವಕೆ ಮೆಚ್ಚಿ
ಒಳದೊಡೆಯ ಮಚ್ಚೆ[ಯ] ಕಂಡ।
ಪುರುಷ ಬಲ್ಲನೆ ಹೊರತು ಬರೆದಾತ ಬಲ್ಲನೆ
ಹಿಡಿತರಿಸಿ ಕೇಳವನನೆಂದ ||೪೧||

ಬರೆವಾಗ ಲೆಕ್ಕಣಿಕೆ ಕೈಜಾರಿ ಬೀಳಲು
ನಿಲಿಸಿದ ವರರುಚಿಯು ಉಂಟೆನುತ।
ಭಾನುಮತಿ ವರರುಚಿಗೆ ಸ್ನೇಹಗಳು ಅಹುದೆಂದು
ಬೇಕಾದವನ ಪಿಡಿದು ಕೊಲ್ಲೆನಲು ||೪೨||

ದೇವಾ[ಈ] ವರರುಚಿಯು ಅಲ್ಲ[ವು] ಕರನು ಅಲ್ಲ
ರಾಯಗೆ ಮಂತ್ರಿ ಬಲು ಹೇಳೆ।
ಕೇಳ[ದೆ] ಆ ಮಾತ ತಳವಾರನ ಕರಕಿತ್ತು
ಪ್ರಾಣವ ತೆಗೆಯೆಂದು ಪೇಳೆ ||೪೩||

ತೆಳವಾರನೊಳು ಉಸುರೆ ಪ್ರಧಾನನು ಅವನಿಂದ
ಬಹುಕಾರ್ಯವುಂಟು ಮಡಗೆನಲು।
ಇಡಲಾಗ ಮತ್ತೊಂದು ದಿವಸದಿ ರಾಯನೆ
ತರಳ ಮೃಗ ಬೇಟೆಗೆ ಹೋದ ||೪೪||

ಚತುರಂಗ ಬಲದೊಳು ಬೇಟೆಯಾಡುವ ಸಮಯ
ದೊರೆ ಸುತಗೆ ಹರಿಣನು ಸುಳಿಯೆ।
....
ಹರಿಣನ ಎಡಬಿಡದೆ ನಡೆದ ||೪೫||

ಕಡಲ ಸಾರಲು ಸೂರ್ಯ ಗಾಹುಡಿಸಲು ಕತ್ತಲೆ ಕು[ವರ]
ಭಯ ಹುಟ್ಟಿ ವೃಕ್ಷ ಅಡರಿದನು।
ಕುರಿಗೊಂಡು ಕರಡಿಗೆ ವೈರಿ ವಾಹನಗಳಾಗಿ
ಮರದ ಮೇಲಿರಲು ಆ ಜಾಂಬ ||೪೬||

ಅನಿತದಿ ವ್ಯಾಘ್ರನು ಬರಲು ಕಂಡು ಮರನ
ಅಡರುತ ಕಂಡ ಕರಡಿಯನು।
ತನುವಳಿವ ಕಾಲವು ತನಗಾಯ್ತು ಲಯಕಾಲ
ಕುವರ ಚಿಂತಿಸೆ ಜಾಂಬ ಬಾರೆನುತ ||೪೭||

ಕಡಿವೆನು ನಿನ್ನನು ತನಗೊಂದು ಗ್ರಹಿಸಿದೆ
ಹಿಡಿಯೆನಲು ನಂಬಿಗೆ ಕರಡಿ।
ದೊರೆಯ ಮಗನು ನಿದ್ರೆ ಎಲೆಯ ಮುಚ್ಚಲು
ನೋಡಿ ಮಲಗೆನಲು ||೪೮||

ಹುಲಿ ಬಂದು ಎಲೆ ಕರಡಿ ಮನುಜನ ಸ್ನೇಹಗಳೇನೊ
ಪಿಡಿದು ನೂಕುವನ ಭಕ್ಷಿಸುವೆ।
ಅನುದಿನ ಈರ್ವರು ವನದೊಳು ಬಾಳುವ
ವೈರ ತೀರದೊ ಇದರೊಳಗೆ ||೪೯||

ನಂಬಿದವನ ಕೆಡಿಸೆ ಶಂಭು ಮೆಚ್ಚನು ಎಂದು
ಕರಡಿ ನುಡಿಯಲು [ಹುಲಿ] ಪೋಗೆ।

ದೊರೆ ಮಗ[ನೊಳು] ಕರಡಿವನ ನೋಡುವರೆ
ಮಲಗಲು ಇವನಡಿಯೊಳಗೆ ||೫೦||

ಹುಲಿ ಬಂದು ಎಲೆ ಮನುಜ ಬೆಳಗಾಗಿ ತಿಂಬುವದು
[ಒದೆ]ದು ನೂಕೆನಲು ಕರಡಿಯನು।
ಬಡಿದು ಹಾಕುವೆನೆನಲು ಉದಯಕ್ಕೆ ನೀ ಪೋಗು
ಅಹುದೆನುತ ಮೆಲ್ಲನೆ ನೂಕೆ ||೫೧||

ದಿಗಿಲನೆ ತಾನೆದ್ದು ಪಿಡಿ ಶಾಪ ಮರನೊಳು
[ಸಸೇಮಿರಾ] ಎನುತಲಿ ತಿರುಗೆ।
ಬೆಳಗಾಗಲವ ತಾನು [ತಳರಿ] ಪೋಗಿ
ಬಲ ಕುದುರೆ ಹುಡುಕುತ ಬರಲು ||೫೨||

ರಾಯನ ಕುವರನ ಕಾಣುತ್ತ ಕರಕೊಂಡು
ಹೋಗಲು ತಮ್ಮಯ ಪುರಕೆ।
ಯಾರಾರು ಕೇಳಿದರು [ಸಸೇಮಿರಾ]ನೆಂಬುವ ಶಬ್ದ
ಆಡನು ಬದಲು ವಾಕ್ಯವನು ||೫೩||

ರಾಯ ಚಿಂತಿಸಲಾಗಿ ಯಾರು ಬಿಡಿಸಲಾಗಿ ಅರ್ಥ
ಭೂಮಿಯ ಕೊಡುವೆ ನಾನವಗೆ।
ದೇವವತರಿಸಿಯಡಿ ಬಿಡುವದಲ್ಲದೆ ಮತ್ತೆ
ಯಾರೊಡನೆ ತೀರದು ಎನಲು ||೫೪||

ಕೊಲುವರೆ ತಳವಾರ ಮಾಡಬಾರದೆಯೆಂದು
ನುಡಿಯಲು ರಾಯ ದುಃಖದಲಿ।
ತೆಗೆದವನ ಕರೆತಂದು ದೊರೆಯ ಮಗನ ತೋರೆ
ಮೂರು [ಗ್ರಂಥ]ದಲಿ ಬಿಡಿಸಿದನು ||೫೫||

ವರರುಚಿಯಿಂದಲ್ಲಿ ಅರಸನ ಸುತನಳಿದ
ಧುರಧೀರ ರಾಮ ನೋಡೆನಲು।
ಮಡಗುವೆ ಅವನಂತೆ ಮುದಿಯ ಕಂಪಿಲನ
ಭ್ರಮೆ ತಾರೊ ತನಕ ಪೇಳೆನಲು ||೫೬||

ಮಡಗಲು ವರರುಚಿಯ ಘನ ಬಾರದೆ ಮಂತ್ರಿಗೆ
ಉಳಿಯನೆ ರಾಯನ ಸುತನು।
ಬರುವುದೆ ಬೆನ್ನೊಳು ಅರಿಯ ಲೆಗ್ಗೆಯ ಸುದ್ದಿ
ಬಾರನೆ ಸುರಿತಾಳ ದಂಡೆತ್ತಿ ||೫೭||

ಅಳಿಯನು ಎನುತಲಿ ಹಿತಗೊಳಿಸಿ ಪೇಳುವನಲ್ಲ
ಉಳಿಹಿಕೊಂಬರೆ ಮಾನವನು।
ಮನವೊಪ್ಪಿ ಚಿತ್ತದೊಳು ರಾಮ ಒಪ್ಪಿದರೆ
ಮಡಗುವೆನು ತಿಳಿದ ಬುದ್ಧಿಯಲಿ ||೫೮||

ಆಗಲೈ ಎಲೆ ಮಂತ್ರಿ ಸಾವಿಗಂಜುವನಲ್ಲ
ನೀ ಪೇಳುವ ನುಡಿಯ ಒಳಗಹೆನು।
ತಾನುಳಿಯೆ ನಿನ್ನಯ ಬೇರ ಕಿತ್ತದೆ ಬಿಡನು
ಆ ದ್ರೋಹವು ಎನ್ನ ಬಾಧಿಸದೆ ||೫೯||

ಮಾಡುವೆ ಅದಕೆಂದೆ ಮೂರ್ತ ಈಗಳಾನು
ಪಾಲಿಸು ವರ ಮಾಸಕೆಂದ।
ವಾಯು ಗಮನದಿ ಬಂದು ಪ್ರಧಾನಿ ನೆಲಮಾಳಿಗೆ
ಬೀಗಮುದ್ರೆಯ ತೆಗೆದನು ||೬೦||

ಅಟವಿಯಲು ಮಡಗುವೆ ರಾಮನಾಥನ
ತಾ ವಿವೇಕದಲಿ ನೋಡಿದನು।
ದೇವ ಜಟ್ಟಂಗಿಯ ರಾಮೇಶನ ಗುಡಿಯೊಳು
ತಾವ ಮಾಡಿದನು ರಾಮನಿಗೆ ||೬೧||

ಹುಲು ಅಡಗ ನೆಲಮಾಳಿಗೆ ತೋಡಿಸಿ
ಕಲಿ ರಾಮನ ಸತ್ಕರಿಸಿ ।
ಕಲ್ಲು ಮನದ ರಾಮ ತುರುಕ ನೇಮಿಯ ಗಂಡ
ನೆಲಮಾಳಿಗೆಯೊಳಿರಲೆಂದು ||೬೨||

ಆರು ತಿಂಗಳು ಗ್ರಾಸ ನೀರು ಎಣ್ಣೆಯು ಸಹ
ಬೇಳೆ ಬೆಲ್ಲ ಉಪ್ಪು ಮೆಣಸು।

ಹಾಲು ಮಜ್ಜಿಗೆ ಘೃತವು ಅಕ್ಕಿ ಸಕ್ಕರೆ ತುಂಬಿ
ತೂಗು ಮಂಚಗಳ ಉಯ್ಯಾಲೆ ||೬೩||

ಕಾಯ ತಮ್ಮನ ತಂದು ಮಡಗಿ ಜೋಡಿಗೆ ಮತ್ತೆ
ನಾಲ್ವರ ಕರದೊಳಗಟ್ಟಿ।
ಲಿಂಗ ಕಾತಣ್ಣ ಕೌಳಿಯ ನಾಗ ಲಿಂಗಣ್ಣ
ಲಿಂಗಯ್ಯ ಮುಮ್ಮಡಿ ಎನಿಪ ||೬೪||

ಭಾವಜರೂಪನ ಮಡಗಿ ಬೈಚಪ್ಪ
ನೋವ ತಾಳಿದ ಮನದೊಳಗೆ।
ಆವ ಕಾಲಕೆ ತುರುಕರ ದಂಡು ಬರುವುದೊ
ಕೋವಿದ ರಾಮನ ತೆಗೆವೆ ||೬೫||

ಕೂಗಲು ಆರ್ಭಟಿಸಿ ಗವಿಯ ಬಾಗಿಲ ಮುಂದೆ
ಜ್ಞಾನವಾಗಲು ನಿದ್ರೆ ಹರಿದು।
ತಾರ ಕಡಿಯೆನು ಎಂದು ಹಿಡಿದು ಕಂಡೆಯ ಹೊರಡೆ
ಮಂತ್ರಿಯ ಧ್ವನಿಗೇಳಿ ನಿಂತನು [ಕಳ್ಳ]ರಾಮ
ಸಂತೋಷ ಕೈಯಲೆಂದೆನುತ ||೬೬||*

ಕುಂತು ಈರ್ವರು ಏಕಾಂತ ಮಾಡುತ ಪೇಳೆ ಭೂ
ಕಾಂತ ರಾಮಗೆ ಬಂದ ಸ್ಥಿತಿಯ।
ರಾಯನಿಲ್ಲದ ಮನೆಯ ರಾಮ ಚೆಂಡನು ಆಡೆ
ಹೋಗಿ ಬೀಳಲು ರತ್ನಿ ಮನೆಗೆ
ಕೇಳುವರೆ ಹೋದಲ್ಲಿ ನಾನಾ ಗಾರುಡವ ಮಾಡಿ
ದ್ರೋಹಿ ಪಿಡಿಯಲು ಒಲ್ಲೆನೆನಲು ||೬೭||*

ಸತ್ಯವುಳ್ಳವ ರಾಮ ಮುಟ್ಟನು ಪರಸತಿಯ
ಮರ್ತ್ಯಬಲ್ಲುದು ನೀನು ಬಲ್ಲೆ।
ಸಿಕ್ಕದೆ ಬರುವನು ತೊತ್ತು ಗಂಡಿಗೆ ಹೇಳಿ
ಮುಟ್ಟಿಕೊಂಡೆನುತ ಕೌಳಿಯನು ||೬೮||

---

* ಹಸ್ತಪ್ರತಿಕಾರನ ಅನವಧಾನದಿಂದ ಬಹುಶಃ ಮೂಲದ ೩ ಪದ್ಯಗಳು ಇಲ್ಲಿ ಎರಡು ಪದ್ಯ (೬೬,೬೭)ಗಳಾಗಿ ಲಿಖಿಸಲ್ಪಟ್ಟಿವೆ (ಸಂ)

ಹಲವಾಡಿಯ ಮಾತನು ನೆಲೆಯೆಂದ ಕಂಪಿಲ
ಕೊಲುಯೆಂ[ದು] ಎನ್ನ [ಕಳಿಸಿದ]।
ಮಡಗಿದೆ ಕುಮ್ಮಟವನುಳುಹಿ ತೋರುವೆ ತಾನು
ಕೊಡಬೇಕು ನಿನ್ನಯ ತಲೆಯ ||೧೯||

ರಾಮನಿರಲು ರಾಜ್ಯ ಭೂಮಿಯನುಳುಹುವ
ನಾ ಸಾವ ಶಂಕೆ ನಾವಿರಲು।
ಏನುಂಟು ಕಳ ರಾಮ ತಲೆಗೊಡಲು ನಿನ್ನ
ಪ್ರಾಣಕ್ಕೆ ಬೆಲೆಯೆ ಲೋಕದಲಿ ||೨೦||

ಪರಹಿತಕೆ ತಲೆಗೊಡಲು ಗುರುಪಾದ ಕಂಡೆಲ್ಲ
ಶರಣರಲ್ಲದೆ ನರಕವುಂಟೆ।
ಬರಲೊರ್ವ ಜಂಗಮವು ಮಗನ ಬೇಡಲು ಕೊಂದು
ಉಣಿಸಲು ಹರನೊಲಿದ ಧರೆಯ ||೨೧||

ಪರಹಿತಕೆ ಶೂಲದ ಮರನೇರಿ ಗುಂಡಯ್ಯ
ರಜತಾದ್ರಿ ಕಂಡುದನರಿಯಾ!
ಬಲುಮೆ ಸಾಧನದೊಳಗೆ ಕೊಲಬೇಕೆಂದು ಬಂದವನಲ್ಲ
ನಿನಗಿಲ್ಲಿ ಸದ್ಗತಿಯುಂಟು ||೨೨||

ಹರಹರ ಎನುತಾಗ ಕಳರಾಮ ಕರ್ಣವ
ಬೆರಳಿಂದ ಮುಚ್ಚೆ ಶಿರದೂಗೆ।
ಪರನಾರಿ ಸೋದರ ಹರಿಚಂದ್ರ ರಾಮಯಗೆ
ಬರಬೇಕೆ ಇಂಥಪಕೀರ್ತಿ ||೨೩||

ಮುದಿಮೂಳ ತನ್ನಯ ಒಡೆಯನ ಕೊಲಬೇಕೆ
ಕೊಡುವೆನು ತನ್ನ ಪ್ರಾಣವನು।
ಪೊಡವಿಯೊಳಗೆ ಕಾಯ ಸ್ಥಿರವಾಗಿ ಪಡೆದಿಹುದೆ
ದೃಢದೊಳು ತಲೆಗೊಡುವೆ ಮಂತ್ರಿ ||೨೪||

ಸತಿಯ ರತಿಗಲೆಗಿನ್ನು ಒಡಗಾರ ಸತಿಯಾಕೆ
ಪಿತನ ಮೀರುವ ಪುತ್ರ ಶತ್ರು।

ಹತಗಾಲ ಬಂದಾಗ ಒಡೆಯಗೆ ತಲೆಗೊಡದ
ಬಂಟಗೆ ನರಕ ತಪ್ಪುವುದೆ ||೭೫||

ಬಲುಮೆ ಮಾಡುವದೇಕೆ ಬಲ್ಲವಗೆ ಮೇಲವನು
ಕೊಡಬೇಕು ಎಂಬ ದೃಢವಿರಲು।
ಪಿಡಿದು ಕೊಂದರೆ ನಮ್ಮ ಒಡೆಯ ರಾಮಗೆ ಕೊಂದು
ತಮಗೆ ನರಕದ ಪುಳುಗೊಂಡ ||೭೬||

ನಿತ್ಯವಿಲ್ಲದ ಕಾಯ ನರಜನ್ಮ ಸಾಕೆನಗೆ
ಮುಕ್ತಿಗೇರುವ ಇಂದಿನೊಳಗೆ।
ಹೊಕ್ಕು ಗಂಗೆಯ ಮುಳುಗಿ ಹರನ ಸ್ಮರಣೆಲಿ ಬಂದು
ಉತ್ತರ ಮುಖವಾಗಿ ಕುಳಿತ ||೭೭||

ಹರಹರ ಶಂಕರ ವರದ ಜಟ್ಟಂಗಿಯ
ಸ್ಮರಣೇಲಿ ಮನವಿಕ್ಕಲಾಗ ।
ಕರಿಕಂಠ ಒಡೆಯಗೆ ಅರಿವಾಗೆ ಪುಷ್ಪಕವ
ಕಳುಹಲು ಅವನ ತರಹೇಳೆ ||೭೮||

[ಮೇಘ ಗಮನದಿ] ಬಂದು ದೇವದುಂದುಭಿ ನಿಲ್ಲೆ
ರಾಮನ ಸ್ಮರಣೆ ನಿಲ್ಲಲಾಗ।
ಕಾಣುತ್ತ ಮಂತ್ರಿಯು ಖಡ್ಗವ ಝಳಪಿಸಿ
ತಾ ಹೊಡೆಯಲು ಮಂಡೆಯ ಪಿಡಿದ ||೭೯||

ಅವನ ಹೊಂದಿರುವ ನಾಲ್ವರು ಕಳ್ಳರನು ಪಿಡಿದು
ಬೇಗದಿ ಶಿರಗಳನು ತಂದು।
ನಾ[ಕ]ಲೋಕಕೆ ಸುರರು ಒಯ್ದು ಕಳ ರಾಮನ
ಶ್ರೀ ಗುರುವಿನಡಿಯ ಕಾಣಿಸಲು ||೮೦||

ಗಿರಿಜೆಯು ಕೇಳ್ದಳು ಗೀರ್ವಾಣಮೂರ್ತಿಯ
ಫಲವೇನು ಈಗಾದ ಸ್ಥಿತಿಯು ।
ರಮಣಿ ಕೇಳೆಲೆ ಹಿಂದೆ ಕುರುಹ ತೋರಿದೆವಲ್ಲೆ
ತರಳೆ ಪಿಡಿಯಲು ಜರೆದು ಬರನೆ ||೮೧||

ಒಲಿಯಲು ನಾರಿ ಒಲೆಯದಿದ್ದರೆ ಮಾರಿ
ಎನುವುದು ಸಹಜ ಪಾರ್ವತಿಯೆ।
ಕಡೆಗವಳು ಮಾಡಿದ ಕಲಾಪವಿಧಿ ಬಂದು
ಒಡಿದುದು ಒಡವನ ತಲೆಗೆ ||೮೨||

ರಮಣಗೆ ಆರಲಿಡೆ ಒಳಗಾಗಿ ಉಸುರಾಳಿ
ಕೊಲವೆಂದ ತನ್ನ ಬಾಲಕನ।
ಮಡಗಿ ಮಂತ್ರಿಯು ಅವನ ಕುರುಹಾಗೆ
ತಲೆಯ ವರ ತಾಗಿ ಇವ ಅವಗೆ ||೮೩||

ಅವನೆಲ್ಲಿ ಇವನೆಲ್ಲಿ ಶವುಳಿ ಎನ್ನಲು ಗಿರಿಜೆ
ಅವನ ಶಾಪದಲಿ ಇವನಾದ।
ಫಲಸಾರವಿಲ್ಲದೆ ವರ ಜಟ್ಟಂಗಿಯ
ಭಜನೆ ಮಾಡಿದರು ಕೇಳಗಜೆ ||೮೪||

ಹರ ಮೆಚ್ಚಿ ಕೊಡಲಾಗ ಅಭಯದ ಪುಷ್ಪವನು
ಕದಳಿ ಫಲದೊಳು ಸೇವಿಸಲು!
ಶೂಲದ ಪುಷ್ಪವ ತಂದು ತಮ್ಮಡದಿಗೆ ಕೊಟ್ಟ
ಜನಿಸಿದ ಅರ್ಧ ರೂಪ ಇವಗೆ ||೮೫||

ನಗರದಿ ಕಳವನು ಹಗಲಿರುಳು ಮಾಡಲು ಇವನು
ಪಿಡಿದು ಬಂಧಿಸಿದಾ ಸ್ವಪವನು।
ಸಿಡಿದೋಡಿ ಬಂದೊಬ್ಬ ಮೊಗವೀಯೊಳಿರುತಿರಲು
ತಿಳಿದೇನೆ ಭೇದವ ಸತಿಯೆ ||೮೬||

ರಾಮನ ಮಡಗಿ ಪ್ರಧಾನನು ಉಳಿಯಲ್ಕೆ
ಉಪಾಯ ಕಾಣದೆ ಬಿರಿದಿವನ ಕೇಳೆ।
ಪ್ರೀತಿಯಿಂದಲಿ ಕೊಟ್ಟ ಪರಹಿತಕೆ ಪ್ರಾಣವ
ಸೇರಿದ ಕೈವಲ್ಯ ಗತಿಯ ||೮೭||

ಅವಗೆ ಇವನಿಗಬ್ಯಾಂತ್ರ ಬಹು ಹೆಚ್ಚು ಕಡಿಮೆದ್ದು
ಗಿರಿಜೆ ಪಾರ್ವತಿಯು ಮೆಚ್ಚಿದಳು।

ಪರಹಿತಕೆ ತಲೆಗೊಡಲು ಹರ ನಿಮಗೆ............
ಸುರಿಯಲು ಪುಷ್ಪದ ಮಳೆಯು ||೮೮||

ತಲೆಗಳ ಶೃಂಗಾರ ಪಲಬಗೆಯ ಮಾಡಿಸಿ
ಮಂತ್ರಿ ಕೆಲಸ ಪನ್ನೆಗಳನು ತಿದ್ದಿ।
ತಿಲಕ ಕಸ್ತುರಿ ಇಟ್ಟು ಸಿದ್ಧನಾಮವ ಕೊನೆಗೆ
ಜಡೆಯ ಹಣ್ಣಿಸಿ ಜುಟ್ಟುಗಳ ||೮೯||

ಕಳ್ಳ ರಾಮನ ತಲೆಯ ಬೆಳ್ಳಿ ತಟ್ಟೆಲಿ ಇಟ್ಟು
ಒಳ್ಳೆಯ ವಸ್ತ್ರದಿ ಮುಚ್ಚಿ।
ತಾಳಾನೆ ಉದಯಕೆ ತರಲಾಗ ತಲೆಗಳ
ಕಣ್ಣೊಳು ಜಲವ ಸೂಸುತಲಿ ||೯೦||

ಸದರಿಗೆ ಬರಲಾಗ ದೊರೆಯು ಕಂಪಿಲರಾಯ
ಅನಿತದಿ ಮಂತ್ರಿ ಕರ ಮುಗಿದು।
ಉಳಿತ ನಯನದಲಿ ಕೆರೆಕೋಡಿ ಬಿದ್ದಂತೆ
ತರಳನ ತಲೆ ಕೊಳ್ಳೊ ಭೂಪಾ ||೯೧||

ಸತಿಯ ಭಂಗವ ಮಾಡಿದ ಸುತನ ತಲೆಯ ಕೊಳ್ಳೊ
ಮತಿಗೇಡಿ ಕಾಟನ ಶಿರವಿಡಿಯೊ।
ಜೊತೆಗಾರ ಲಿಂಗನ ನಾಗನ ತಲೆಯಿದು
ಸುಖಕರದ ಹನುಮನ ತಲೆಯು ||೯೨||

ಕೊಳ್ಳೊ ಕೊಳ್ಳೆನಲು ಎಲ್ಲರನೇತಕೆ ಕೊಂದೆ
ಸಲ್ಲದು ಮಂತ್ರಿ ಇದು ನಿನಗೆ।
ಬಲ್ಲಿದ ಮಗನಳಿದ ಬೀಳುವ ಮರನನು
ನಿಮ್ಮೊಳಗಾಯಿತೆ ದೊರೆಪಟ್ಟ ||೯೩||

ಮರುಳು ಏರಲು ರಾಯ ಮರ ನೀರ ಕುಡಿವವಳ
ಒಡನಾಡೆ ಮದವೆದೆ ಬಂತು।
ಬಿಡು ನಾಯಿ ಮಾತಿನ್ನು ಸುಡು ರಾಯನಿವರಿಂದ
ನಡೆದ ಅಪರಾಧವ ಕೇಳೋ ||೯೪||

ಕಾಣದೆ ಕಳತ್ರಯವ ಕುಮಾರನ ಕೊಲ್ಲಿಸಿದೆ
ಕೇಣನೆ ನಿಮಗಿಂದ ಹಿಂಡಿ ।
ದೇವರಾಜ್ಞೆಯವಿದ ಮಾನಪಡಿಯಲು
ಮೂರು ಮಲೆತವರು ಇವರೊಳಗೆ ॥೯೫॥

ಧರ್ಮ ಮಾತುಗಳಿಂದ ಕೈ ಹಿಡಿದು ಪೇಳಿದ
ರಾಯ ಕಡಿಗಾರುನೂರು ಜನವ।
ಪಿಡಿಯಲು ತ್ರಾಣೆಲ್ಲ ಕಡಿಗೊಂದು ನಿನಗಾಗಿ
ಹೊಡೆಸಿದೆ ಬಾಣ ಸರಲೊಳಗೆ ॥೯೬॥

ಧರಣೇಂದ್ರ ನಿಮ್ಮಯ ಚರಣಕಂಜುವೆ ಹೊರತು
ಮಳದೊಳಗುಂಟೆ ರಾಮುಗನು।
ತಿಳಿದಿಲ್ಲ ರಾಜೇಂದ್ರ........ ನಾಲ್ವರು
ಕಳುಹಿದ ರತ್ನಿಯ ಮನೆಗೆ ॥೯೭॥

ಬಿಡು ಅವರ ಮಾತುಗಳ ಹಿಡಿ ನಿನ್ನ ಹಗೆಯಾದ
ಮಗ ಮುದ್ದು ಚೆನ್ನಿಗರಾಮನ ಶಿರವ।
ತೆಗೆದಿಡಲು ಮುಸುಕನು ಚಂದ್ರಮುಖವನು ಕಂಡು
ಬೊಂಡುತ ಬೀಳಲು ಸದರ ಕೆಳಗೆ ॥೯೮॥

ಬಾಲನ ತಲೆಯನ್ನು ಕಾಣುತ್ತ ಕರಿಗಳಿಗೆ
ಮಾಡಿದಂತಾದ ಉದಸಿಯು।
ಗಾಯೊಡೆದ ಮದದಂ[ಬೇ] ತೆವುತ ಒಡಲೊಳಗೆ
ಈಡಾಡುತಲು ಜಲ ಉದಕ ॥೯೯॥

ಸರಳೇರಿದಂದದಿ ಕುದಿವುತ್ತ ರಾಜೇಂದ್ರ
ಉರಿವ ಗಾಯದಿ ನೊಂದಂತೆ।
ಉರಿವ ಅಗ್ನಿಗೆ ಎಣ್ಣೆ ಸುರಿದಂತೆ ಕಂಪಿಲನು
ಹೊರಳುತ್ತ ಹುಡಿಯ ಮಣ್ಣೊಳಗೆ ॥೧೦೦॥

ಕೊಲಬಹುದೆ ಎಲೆ ಮಂತ್ರಿ ಕಡು ಜಾಣ ನೀನಿನ್ನು
ಕಳುಹದೆ ಬರಲು ಅಪ್ಪಣೆಯ।

ತಂಡವು ಮಾಡದೆ ಕೈಯ ಹಗೆಯಾಯ್ತು ರಾಮನು
ಕಳೆಯಬೇಕೆಂಬ ದುಃಖದಲಿ ॥೧೦೧॥

ಮೂರು ಅಪ್ಪಣೆಯನು ಕಾಯಲಿ ಬೇಕು ಮಂತ್ರಿಗಳು
ಭಾಗೀರಥಿಯು ಮೂರು ವ್ಯಾಳೆ।
ತೋರದೆ ಮೂರು ವ್ಯಾಳೆ ಮ್ಯಾಲಕ್ಕೆ ಒಳಕೊಳ್ಳೊ
ಮದನಂಗೆ ಚೆಲ್ವ ಬಾಲಕನು ॥೧೦೨॥

ಕೊಲ್ಲೆಂದ ಮಾತಿಗೆ ಕೊಲ್ವರೆ ಬೈಚಪ್ಪ
ನಿಲ್ಲಲಾರದೆ ಕಾಲ ಗಳಿಗೆ।
ಬಲ್ಲವರು ಅದಕೊಂದು ತಂತ್ರಭಾಗವ ಮಾಡಿ
ನಿಲ್ಲಿಸಿ ನೃಪನನೆಚ್ಚರಿಸಿ ॥೧೦೩॥

ನಂಬುವರೆ ರಾಯರ ಮಾತನು ಗೆಲುಹದಕೆ
ಕುಂಭ ಕುಚದ ಹಾಲನುಂಡು।
ಕೊಂದವನ ತಲೆಯನು ತಾರದಿರಲು ಎನ್ನ
ಅಂಗವ ಕೊರೆವ ಲೇಸಿಂದೆ ॥೧೦೪॥

ಸೋದರ ಅಳಿಯನು ಎಂದು ಕಾಯ್ದುದುಂಟಾದರೆ
ಸೂಲಕೆ ತೆಗೆಸು ಲೇಸಿಂದೆ।
ಮೂರು ಅಭಯವ ಕೊಟ್ಟು ಮುಖವನು ತಿರುಹಿದೆ
ಕೋಡಗ ಕೊನೆಗೆ ನೆಗೆವಂತೆ ॥೧೦೫॥

ಸುರಿಗೆಯ ಜಡಿದೆತ್ತಿ ಹೊಡೆದಾಗ ರಾಮನು
ತನಗೇನು ಬುದ್ಧಿಯ ಪೇಳಿದನು।
ಇಡಬೇಡ ಮನದೊಳು ನುಡಿಯೆನಗೆ ಬೈಚಪ್ಪ
ಇರಿಕೊಂಡು ಸಾವೆನೀಕ್ಷಣದಿ ॥೧೦೬॥

ತಂದೆ ರಾಜೇಂದ್ರ ಸ್ಥಿರಪಟ್ಟವಾಳಲಿಯೆಂದ
ಬಂಧು ಬಳಗವು ಸುಖದೊಳಗೆ।
ಮಂದಗಮನೆ ಹರಿಯಮ್ಮ ಇಟ್ಟೋಲೆ
ಕುಂದದೆ ಸ್ಥಿರವೆಂದ ರಾಮ ॥೧೦೭॥

ಸಾವಾಗ ಸಂಜೀವ ಯಾರಾರ ನೆನೆದನು
ಕೊಂದನೆ ಹಳೆಯ ಮರನಾಗಿ।
ದಾಯಾದಿ ಸುರಿತಾಳ ಬಂದರಿನ್ನು
ಊರಿಗೆ ತ್ವರ ನೀನು ಎಂದ ||೧೦೮||

ಹೆಸರೆಲ್ಲ ಅಡಗಿತೆ ದೆಸೆವುಳ್ಳ ರಾಮನ
ವಿಜಯ ಕೊಟ್ಟನು ಮುಪ್ಪಿನಲಿ।
ಅಸುರರ ತೆರದೊಳು ಸುರಿತಾಳ ಖಾನರು ಬರಲು
ಪಿತನಿಗೆ ಗತಿಯೇನು ಎಂದ ||೧೦೯||

ದುಃಖ ಸಲ್ಲದು ರಾಯ ನಕ್ಕಾರು ಕೇಳ್ದವರು
ಗಟ್ಟಿಯಾಗಿ ಇರ ಹೇಳು ರತ್ನಿಯನು।
ಹತ್ತೆಂಟು ಮಿಂಡರಿಗೆ ಉಂಬಾಕಿ ಆಡುವಳು
ಪಟ್ಟಕ್ಕೆ ಸಲುವಂಥ ಮಗನ ||೧೧೦||

[ತ]ಡಿ ರಾಯ ಅಳಲ್ಯಾಕೆ ಹಿಡಿ ನಿನ್ನ ಪುತ್ರನ
ಬಿರುದು ಬಾವಲಿ ಒಡವೆಯ।
ತೆಗೆದಿಡಲು ಕಂಡಾಗ ಅಡರಿತು ದುಃಖವು
ಒಡಕೊಂಬ ತಲೆ ಮಂಡೆ ರಾಯ ||೧೧೧||

ಮಾತು ಮುಗಿಯಿತು ರಾಯ ಯಾತಕ್ಕೆ ಬರಿ ದುಃಖ
ಪಾತಕ ದ್ರೋಹಿ ಮೂಳನಿಗೆ।
ಆತಗೆ ಮಿಗಿಲಾಗಿ ರತ್ನಾಜಿ ಇರುವಳು
ಯಾತರ ಭಯ ನಿನಗೆ ಭೂಪ ||೧೧೨||

ಅತ್ತರೆ ಬರಲರಿಯ ಬೆಟ್ಟದ ತುದಿಗಡರಿ ಕೈ
ಬಿಟ್ಟು ಬೀಳ್ವವ ಬಾರರಿಯ।
ದುಃಖಗಳು ಬಿಡದರಸೆ ತಲೆಯಿಲ್ಲ ಇರುವವಳ
ನೀ ಕ್ಷೇಮ ಮಾಳ್ಪೆ ಪೇಳೆನಲು ||೧೧೩||

ಕರೆಸಯ್ಯ ಎಲೆ ಮಂತ್ರಿ ತರಳೆ ರತ್ನಾಜಿಯ
ಹದಿಯಲಿ ಅವಳ ಭ್ರಮೆ ಈಗ।

ಚರರಾಗ ಪರಿತಂದು ಬಿಜಮಾಡೆ ರಣದುರ್ಗಿ
ಮಗನ [ತಲೆ] ಬಂದುದೆ ಮುಖ ನೋಡೆ ||೧೧೪||

ತಂದಾರೆ ತಲೆಯೆಂಬ ಸ್ವರವು ಕರ್ಣಕೆ ಬೀಳೆ
ಒಂದಾರು ಭುಜವಾದೊ ರತ್ನಿ।
ಗಂಡಹುದು ಕಂಪಿಲ ರಂಡೆ ಬಾಳೆನುತಿರ್ದೆ
ಸಂಗಿಯನೊಡಗೊಂಡು ನಡೆಯೆ ||೧೧೫||

ಅಡಿ ಇಡಲು ಕಾಲಿಲ್ಲ ಪಿಡಿಯೆ ಸಂಗಿ ಕರವ
ನಿಜವೋ ಸಟೆಯೊ ನೋಡಿ ಬರುವ ।
ವಿಗಡ ವೇಷವ ತಾಳಿ ಜನರು ಮೆಚ್ಚುವ ತೆರದಿ
ಉದುರುತ ನಯನದಿ ಉದಕ ||೧೧೬||

ನಿಲ್ಲುವಳು ಅಡಿಗಡಿಗೆ ಮೆಲ್ಲನೆ ನಡೆವುತ
ತಲೆ ಕಂಡು ಮುಸುಕ ಜಾರಿಸಿದೊ।
ಗಲ್ಲದ ಮೇಲೊಂದು ಬೆರಳಿಟ್ಟು ಕೈಚಾಚಿ
ಚೆಲ್ವ ಮಂತ್ರಿಯನು ಕೇಳಿದಳು ||೧೧೭||

ಕಾಮನ ಬಾಧೆಗೆ ಗುರಿಮಾಡಿ ಹೋದಂಥ
ರಾಮನ ತಲೆ ಹೌದೆನಲು।
ಹೋದವೆ ಕಣ್ಣೆಂದು ಹುಣ್ಣಿಮೆ ಚಂದ್ರನು
ಮೂಡಿದಂದದಿ ತೋರುವುದು ||೧೧೮||

ಕಂಡಳು ಮುಖವನು ಹಿಂದಕ್ಕೆ ಮುಖವಾಗಿ
ಮಂಡೆಯ ಪಿಡಿದು ನಸುನಗುತ।
ಬಂದುದೆ ವಿಧಿ ನಿನಗೆ ಬಾಳುವರೆ ಫಲವಿದೆ
ನೊಂದೇನೋ ಎನ ಮಾತ ಮೀರಿ ||೧೧೯||

ಪಿಡಿಕೊಂ[ಡು] ತಲೆಯನು ಕರವೆರಡ ಭುಜತುಂಬ
ನಡೆದಳೊ ತನ್ನ ಅರಮನೆಗೆ।
ತೊಳೆದಾಗ ಮುಖವನು ಬದಲಾಗಿ ಶೃಂಗರಿಸಿ
ಕರುಹಿನ [ರೇಖೆ] ನೋಡಿದಳೋ ||೧೨೦||

ಗಲ್ಲದ ರೇಖೆಲ್ಲೆ ಸಲ್ಲ ನಾಯ್ಕನ ಸಂಗಿ
ಕಲ್ಲಾಂತೆ ಕುಮಾರ ನೋಡಿ।
ಎಲ್ಲಿವನ ಮಡಗಿಟ್ಟು ಎರವಿನ ಶಿರತಂದು
ಇಲೆನ್ನ ಭ್ರಮೆಯ ಬಿಡಿಸಿದನೆ ॥೧೨೧॥

ಭ್ರಾಂತು ಹಿಡಿಯಿತೆ ರತ್ನಿ ಬದಲು ಮಂಡೆಗಳೆಂದು
ಎಂತು ನೀ ಕಂಡೆ ಪೇಳೆನಗೆ।
ಮಚ್ಚೆ ಇಲ್ಲೆಂದೆ ನುಡಿಯೇನು ಚಿಕ್ಕಂದು
ಕಚ್ಚಲು ಕಾತರಕೆ ಗಲ್ಲ ॥೧೨೨॥

ಮೂಳಿಯೆನ್ನರೆ ನಿನ್ನ ಕೇಳಿದರೆ ಹೊರಗ್ಯಾರು
ಬಾಲನೊಳಗಾದಂಥ ಕಲಮು।
ಮಾಯವೆ ಮದಪ್ರಾಯವಾದ ಕಾಲಕೆ ಸಂತೆ
ಸೂಳೆಯೆನ್ನನೆ ರಾಜೇಂದ್ರ ॥೧೨೩॥

ಕಳ್ಳ ಕಳ್ಳಿಗೆ ನೆಂಟು ಕಡಲೆ ಬೆಲ್ಲಕೆ ಜೋಡು
ಬೆಳ್ಳುಳ್ಳಿ ಜೋಡು ಒಗ್ರಣಿಗೆ।
ಸುಳ್ಳು ಬದ್ಧವ ಮಾಡಿ ಸಂಗಿ ಹೇಳಲು ಆಗ
ಒಳ್ಳೆದೆಂದಳು ಹಲವಾಡಿ ॥೧೨೪॥

ಮುಖದೊಳು ಮುಖವಿಟ್ಟು ಮುತ್ತನು ಕೊಡುವಳು
ಬಿಗಿದೊತ್ತುವಳು ಕಕ್ಕಶ ಕುಚಕೆ।
ನುಡಿಯಲಿಲ್ಲವೆ ನಿನ್ನ ತಲೆಯ ಹೊಡೆಸುವೆನೆಂದು
ಒಲಿದರೆ ಈ ಪಾಡು ಬರದು ॥೧೨೫॥

ನಿನ್ನಯ ಬುದ್ಧಿಯಲಿ ನೀನೆ ಅಳಿದೆಯೊ ರಾಮ
ಎನ್ನಯ ತಾಪಗಳ ನೀ ತೋರೊ।
ದಮ್ಮಯ್ಯ ಎಂದರೆ ಕೈಹಿಡಿದು ತಿರಿವಿಟ್ಟೆ
ಹೆಣ್ಣುಗಳ ಹಗೆಯೊಳು ಉಳಿದ್ಯಾ ॥೧೨೬॥

ನೀರ ಮೀವೆನು ಸಂಗಿ ರಾಮನ ತಲೆಯನು
ಈಗೆನ್ನ ಒಳದೊಡೆಯಲಿಟ್ಟು।

ಕೇಳಿದ ಬೈಚಪ್ಪ ಮೂಳಿ ಹೋಗೆನುತಲಿ
ತಾನಾಗ ಕಿಚ್ಚ ಕಾಣಿಸಿದ ||೧೨೭||

ರಾಮನ ಕೋಳಾಹಳದೊಳಗೆ ಅಡಗಿತೆ
ಭೂಮಿ ಬ್ರಹ್ಮಾಂಡ ಕುಮ್ಮಟದಿ।
ರಾಯಗೆ ರತ್ನಿಗೆ ಸಂತೋಷವಾಯಿತೆಂದು
ದೇವ ಮಂತ್ರಿಯು ನಡೆದ ಅರಮನೆಗೆ ||೧೨೮||

ಹರಿಯಲು ಸುದ್ದಿಯು ನೆರೆಮನೆ ಮುಮ್ಮನೆ
ಹರದರಂಗಡಿ ಬೀದಿಯೊಳಗೆ।
ದುರುಳೆ ಮುಂಡೆಯು ರತ್ನಿ ತರಳ ರಾಮನ ಕೊಂದು
ಪುರವೆಲ್ಲ ಬೊಬ್ಬಿಟ್ಟು ಮೊರೆಯೆ ||೧೨೯||

ಇತ್ತ ಕೇಳಿದಳಾಗ ಸತ್ತ ಸುದ್ದಿಯ ರಾಮ
ಹೆತ್ತವಳು ಹರಿಹರದೇವಿ।
ಬೆಟ್ಟಕೆ ಬೇಗೆಯು ಹತ್ತಿದಂತುರಿದಳು
ಕುಟ್ಟಿಕೊಳ್ಳುತ ಬಂದಳಾಗ ||೧೩೦||

ಏನ ಮಾಡಿದ ತಪ್ಪ ಎನ್ನಯ ಮಗ ಮಂತ್ರಿ
ಹೇಳದೆ ಎನಗೆ ಕೊಲ್ಲುವರೆ।
ಸೂಳೆಯ ಚಾಡಿಗೆ ಸುತನ ಕೊಂದನೆ ಮನೆಯ
ಹಾಳು ಮಾಡಿದನೆನಲಾಗ ||೧೩೧||

ತೋರದೆ ಇರುಳೆನಗೆ ಹಾಳಾದ ಸ್ವಪ್ನವ ಕಂಡೆ
ಯಾರಿಗಾಯಿತೆ ಎನುತಿದ್ದೆ।
ಏರುವ ತೇಜಿಯನು ತೊಡರಿ ಬೀಳ್ವುದ ಕಂಡೆ
ತೋರಿತು ಭೀಮ ಬಾಲನಿಗೆ ||೧೩೨||

ಕೊಂದುದು ನಿಜವೇನೊ ಕುಹಕದ ಮಾತುಗಳೇನೊ
ಕಂಡ ಸ್ಥಿತಿಯ ಪೇಳೊ ಮಂತ್ರಿ।
ಮುಂಡೆಯ ಗಂಡನ ಮುಂದಲೆಗಳ ಪಿಡಿಕೊಂಡು
ಬೀಳುವೆ ಕೊಂಡ ಬಳಿಯ ||೧೩೩||

ನಿಜವೆಂದು ಕೊಂದದ್ದು ಅವನೆಡದಲಾವನ ಪೇಳೊ
ಧರೆ ಹೊರದ ಭೂಕಾಂತೆ ಕಾಯ।
ಕೊಡುವಾಗ ಚೆಂಡನು ಇರಲಿಲ್ಲವೆ ಈ ದುಃಖ
ಹೊಡೆಯದೆ ದವಡೆಯ ಮೇಲೆ ||೧೩೪||

ನಾ ಮೊದಲು ಕಂಡಿಲ್ಲ ನೀ ತೆಗೆದು ಕೊಡುವಾಗ
ಆಡೆಂದು ಮಗನ ಪುಗಲಾಸಿ।
ಭೂಮಿ ಕೆಡಿಸಿದ ಚೆಂಡು ಸೇರಲಾಕೆಯ ಮನೆಯ
ನಾನು ಕಂಡೆನೆ ನೀನರಿಯಾ ||೧೩೫||

ಬೇಡುವರೆ ನಿನ್ನಯ ಬಾಲ ಹೋದನಂತೆ
ನೋಡಿ ಸೈರಿಸದೆ ರತ್ನಾಜಿ।
ಕೂಡಿದನೆನುತಲಿ ದೂರಿದಳು ರಾಯನಿಗೆ
ಯಾರ ಸ್ವಂತಳು ನೀ ಪೇಳು ||೧೩೬||

ನಿಜವೊ ಸಟೆಯೊ ಕಾಣೆ ಹೊಡೆದಿನ್ನು ತಲೆಯ ತಂದೆ
ಈ ನಿನ್ನ ಮಾತೇನು ಕಾಣೆ।
ಮಾಡಬಹುದು ಆಜ್ಞೆ ರಾಯನೊಳು ತಪ್ಪಿಲ್ಲ
ಹೋಗಮ್ಮ ಅಳಲೇಕೆ ಇಲ್ಲಿ ||೧೩೭||

ಕಂದ ರಾಮನೆ ನಿನ್ನ ಕೊಂದು ಹಿಂಡಿಯ ಕೂಳ
ತಿಂದನೆ ನಿಮ್ಮಯ್ಯನೆನುತ।
ಮಂಡೆಯನೊಡಕೊಂಡು ಮಣ್ಣೆತ್ತಿ ಹೊಯ್ಕೊಳುತ
ಬಂದಳು ಕಂಪಿಲನಿದ್ದೆಡೆಗೆ ||೧೩೮||

[ಕಂಡೆನು] ತೊಂಡನೂರ ರಕ್ಕಸಿ ಕರಿಬಂಟನ
ತಿಂದು ತೇಗಿದಳು ಆ ನಾರಿ।
ನಾನಾ ತಂತ್ರವ ಮಾಡಿ ಬಾಲನ ಕೊಂದಡವ
ಬೀಳುವೆ ಕಿಚ್ಚನು ಅಲ್ಲಿ ||೧೩೯||

ಕೊಲಬಹುದೆ ಬಾಲನ ಹಲವು ಮಿಂಡರ ಸೂಳೆ
ಹೇಳಿದರೆ ಹೀಗೆ ಕೊಲುವರೆ।

ತರಗನ ಸತಿಯನು ಚಿಕ್ಕಯ್ಯನು ಒಲಿಯದಿರಲು
ಮತ್ತಲ್ಲಿ ಕೊಲ್ಲಿಸಲಿಲ್ಲವೆ ||೧೪೦||

ಚೋರನ ಹೆಜ್ಜೆಯ ತಳವಾರ ಬಲ್ಲನು ಮಿಕ್ಕ
ಊರನಾಳ್ವನಿಗೆ ಗೋಚರವೆ।
ನಾರಿಯ ಕುಟಿಲತ್ವ ಸೀರೆನುಟ್ಟವಳೆ ಬಲ್ಲರೆ
ಆಳುವ ಮೂಳಗೆ ಅರಿವೇ ||೧೪೧||

ಕೆಟ್ಟರೆ ಸೂಳೆಯ ಎತ್ತಿ ಮುಂದಲೆ ಕೊರೆದು
ಬಿಟ್ಟಿಲ್ಲವೆ ಹಲ[ವು] ಜನರು।
ಸುಟ್ಟರೆ ನಿನ್ನಂತೆ ಸೂಳೆಗೆ ಕಿಚ್ಚನು ಹಾಕಿ
ಬಿಟ್ಟರೆ ಗತಿಯೇನೊ ಮುದಿಯಾ ||೧೪೨||

ರಾಯ ರಾಯರ ಗೆದ್ದ ಭೀಮನ ಸಮಶಕ್ತಿ
ಏನಾಗಿ ಹೋಯಿತೊ ಮಗನೆ।
ಸೂಳೆ ಮಿಂಡನ ತರಹ ಕಾಲು ಕರಗಳ ಮುರಿದು
ಸಾಯುವರೆ ಸರಿ ರಾತ್ರಿಯೊಳಗೆ ||೧೪೩||

ಸತ್ತರೆ ನಾ ಬೇರೆ ದುಃಖ ಮಾಡುವಳಲ್ಲ
ಕಡಿದಾತಲುಪರದವರ ಅಹುದೆಂಬೆ।
ಹೊಟ್ಟೆ ಹೊರೆವ ಮೂಳ ಬೈಚಪ್ಪನಿಗೆ
ಹತ್ತದೆ ಕಿಚ್ಚಿನ ಉಬ್ಬ ||೧೪೪||

ರಾಣಿಯ ಒಡಲುರಿಯ ಕಾಣುತ್ತ ಕಂಪಿಲನು
ಭೋರಿಡುತ ಬಿದ್ದು ಉರುಳಿದನು।
ಶ್ವಾನಗೆ ಕಡೆಯಾದೆ ಸೂಳೆ ಮಾತಿಗೆ ಬಂದು ಕೊಂದು
ಸೀಳಿಕೊಳಲೆ ಬಗೆದು ಒಡಲು ||೧೪೫||

ಅಳಿದನೆಂಬುವ ಸುದ್ದಿ ಕಡೆಗೆ ಕೇಳಿದರಾಗ
ರಾಮನ ತಂಗಿ ಲಿಂಗಮ್ಮ।
ಕಮಲಾಜಿ ಕಿರಿತಾಯಿ ಬಂದು ಬಿದಿಗಳೊಳಗೆ
ಹೊರಳಿದಳು ಹುಡಿಯ ಹೊಯ್ಕೊಂಡು ||೧೪೬||

ಅಕ್ಕನು ಮಾಯಕ್ಕ ತಂಗಿ ಸಿಂಗಮ್ಮ[ರ]
ದುಃಖವ ಜಗದೀಶ್ವರ ಬಲ್ಲ।
ಬಿಚ್ಚಿದ ದಂಡೆಯ ಕಟ್ಟದೆ ಅಲ್ಲಿಂದ
ಕುಟ್ಟಿಕೊಳ್ಳುತ ಎದೆ ಮಂಡೆ ||೧೪೭||

ಅಳಿ[ದ]ನೆ ಒಡಹುಟ್ಟಿ ಹರನ ತನುಜನ ಹೋಲ್ವ
ಧರಣಿ ರಾಯರಿಗೆ ಎದೆಶೂಲ।
ನೆರೆ ಪಾಪಿ ನಮ್ಮಂಥ ಕರ್ಮದ [ಬಾ]ಲೇ
ರಿರಬಹುದೆ ಧರೆಯೊಳಗಿನ್ನಾ ||೧೪೮||

ಇಟ್ಟರು ನೆಲನ ಸಾರಿಸಿ ಎಕ್ಕೆಗೂಳವು
ಹುಟ್ಟಿಲಿ ಕುಮ್ಮಟದೊಳಗೆ।
ದಿಟ್ಟ ರಾಮಯ್ಯಗೆ ಮುನಿವವರ ಮಕ್ಕಳಿಗೆ ಒಡ
ಹುಟ್ಟಳಿಯಲಿ ನಮ್ಮಂತೆ ||೧೪೯||

ಅಂಬಲಿಗಾಗಿ ಅಮೃತವ ಚೆಲ್ಲಿದೆ
ಡೊಂಬಿತಿಗಾಗಿ ಅಣ್ಣಯನ।
ತಿಂಬೋರೆ ಅಪ್ಪಾಜಿ ಮಿಂಡರ[ಗಳ್ಳಿ]ಯ
ದೊಂದಿಯ ಕಟ್ಟಿ ನುಡಿಸರೆ ||೧೫೦||

ಎಕ್ಕೆಯ ಗಿಡಕಾಗಿ ಕಲ್ಪವೃಕ್ಷವ ಕಡಿವರೆ
ತೊತ್ತು ಮುಂಡೆಯ ಮಾತ ಕೇಳಿ।
ಚಕ್ರಧರನ ಸುತನ ಮರೆಸಿಪ್ಪ ಚೆನ್ನನ ಕೊಂದೆ
ದಿಕ್ಕಾರು ಮುದಿಯ ಮನೆತನಕೆ ||೧೫೧||

ಸುರಿವ ನಯನದಿ ನೀರು ಹರಿವ ಹಳ್ಳದ ತೆರದಿ
ಕೆಂಪೊಡೆಯೆ ಚೆಂದುಟಿ ಮುಖವು।
ಮರನಾಗಿ ಬೀಳುತ ತಂಗಿ ಲಿಂಗಮ್ಮನು
ಹಡೆದ ತಂದೆಯ ಮುಂಗಡೆಯು ||೧೫೨||

ಇಟ್ಟ ಆಭರಣಗಳು ಸುತ್ತಲು ಚೆಲ್ಲಾಡಿ
ಮುತ್ತು ಮಾಣಿಕ ಹಸ್ತ ಕಡಗ।

ಹುಟ್ಟಿದಳೆ ಮಾರ‍್ಯಾಗಿ ರತ್ನಿ ಮುಂಡೆಯು ಎಂದು
ಹತ್ತಿಹುದೆ ಮುದಿಯಗೆ ಮರುಳು ||೧೫೩||

ಅಣ್ಣ ನಮ್ಮಣ್ಣನ ನೋಡುವ ನಯನದಲಿ
ಸುಣ್ಣವನಿಟ್ಟ ಕಂಪಿಲನು।
ಹೆಣ್ಣು ಮಕ್ಕಳ ನೋಡಿ ಕಣ್ಣಾರ್ತಿಲಿ ಕಳುಹುವ
ನಮ್ಮಣ್ಣನು ತಿಂದ್ಯಾ ರತ್ನಾಜಿ ||೧೫೪||

ಬಾರಣ್ಣ ಎನುತಲಿ ಯಾರ ಕರೆ[ವೆ]ನು ನಾನು
ಬಾಯಾಗ ಹುಗ್ಗಿಯ ಹೊಯ್ದು।
ನಾಳೆ ದೀವಳಿಗೆ ಕರೆತರುವನೆನುತಲಿರ್ದೆವು
ಇನ್ನೆಂದಿಗೆ ಕಂಡೇವು ನಾವು ||೧೫೫||

ಶೂಲದ ಹಬ್ಬಕ್ಕೆ ಯಾರು ಕರೆವರು ನಮ್ಮ
ಮೊಲೆ ನೂಲ್ಹುಣ್ಣಿವೆಗೆ ಕರೆಯಾ।
ತಾಯಿ ಮಾತಿಲ್ಲದೆ ತಂಗಿಯ ಕರೆತರುವ
ಹಾಳಾಯಿತೆನ್ನ ತವರೂರು ||೧೫೬||

ಆರಿನ್ನು ಮಾಡುವ ಶಿವಪೂಜೆ ಅರಿದೆವು
ಬೇಗೆ ಇಟ್ಟವೊ ಬೆಟ್ಟಕ್ಕೆ।
ಧಾರುಣಿ ಏಕಾಗಿ ಕಡಿತೊಲಿ ಉಳಿದೆವೊ
ತೀರಿತೆ ಎಮ್ಮ ಐಶ್ವರ್ಯ ||೧೫೭||

ಬೇಟೆಯನಾಡುತ ಬಿಟ್ಟೆವು ಮಂಡೆಯ
ಕಟ್ಟುವ ಕೆರೆ ಕಲ್ಯಾಣಿ।
ಕೆಡಿಸಿದೆವು ಹೊಕ್ಕೆವು ಕೆರಹುಗಾಲಿಂದಲಿ ಗುಡಿಯನ್ನು
ತಪ್ಪಿದ ಒಡಹುಟ್ಟಿ ತಮ್ಮಗೆ ||೧೫೮||

ಬಂದರು ರಾಮನ ಸತಿಯರು ಐವರು
ಕಿರಣದ ಪ್ರಭೆ ಸೂಸುವಂತೆ।
ಮೊರೆಯಿಡುತ ಮನ್ಮಥನು [ಉ]ರಿದಾಗ ರತಿದೇವಿ
ಹರನೆಡೆಗೆ ಹೋದಂತೆ ಶೋಕದಲಿ ||೧೫೯||

ಮಾವನೆ ಮತಿಗೇಡಿ ಕುಮಾರನ ಕೊಲುವೆ
ಸೂಳೆಯ ಒಲುಮೆ ತಲೆಗೇರಿ।
ಹಾಳು ಮಾಡಿ[ದೆ] ಮನೆಯ ನಾವಿದ್ದು ಫಲವೇನು
ಮಾಡಿಸಿಕೊಡೆಮಗೆ ಕೊಂಡವನು ||೧೬೦||

ಕನಕಾಲಾಪವ ಕಾಣದ ಬಾಲೆಯರು
ಗೋಳಿಡಲು ಕೋಗಿಲೆ ಸ್ವರದಿ।
ನೋಡುತ ಕಂಪಿಲ ಭೂಮಿಗೆ ಮುಸುಕಿಟ್ಟು
ರೂಢಿಸಿ ಇಮ್ಮಡಿ ದುಃಖ ||೧೬೧||

ತಣ್ಣಗಾಯಿತೆ ಮಾವ ತರಳೇರರ್‍ಯೆಗು ನಿಮಗೆ
ಉಣ್ಣುವದು ಕ್ಷೀರಾನ್ನ ಒಲಿದು।
ಹಣ್ಣಿದೊ ಹತಕಾತಿ ಹಲವು ಮಿಂಡರ ಸೂಳೆ
ನಿನ್ನ ತನುಜನ ಸತ್ಯ ಅರಿಯಾ ||೧೬೨||

ಹೆತ್ತ ಮಗನ ಮಾವ ಕುತ್ತಿಗೆ ಅರಿಯಲ್ಕೆ
ದೈತ್ಯನಂದದಿ ಜನಿಸಿದೆಯಾ।
ತೊತ್ತಿನ ಮೋರೆಯ ಕಣ್ಣೆತ್ತಿ ನೋಡದ
ಪುತ್ರ ಹರಿಶ್ಚಂದ್ರ ಸತ್ಯದಲಿ ||೧೬೩||

ಹಾದರಗಿತ್ತಿಗೆ ಒಳಗಾಗದಿರಲು ಇವನು
ಮಾಡಿದಳೆಂಬುದನರಿಯಾ।
ಸಾರಂಗಧರನು ಚಿತ್ರಾಂಗಿಯ ಕೂಡಿದನೆ
ಕಾಲನರಿವರೆ ಬೆಪ್ಪ ಮಾವ ||೧೬೪||

ನುಂಗಿದ ತುತ್ತಿಗೆ ರುಚಿಯಾಕೆ ಮಾಮಾಜಿ
ಗಂಡನಿದ್ದರೆ ಮಾತು ಎಮಗೆ।
ಮುಂಡೆಗೂಳಲಿ ನಾವು ಮುನ್ನ ಬಾಳುವರಲ್ಲ
ಭಂಡ ಕೊಡೆಮಗೆ ಕಿಚ್ಚನು ||೧೬೫||

ಗಂಡನೆ ಗತಿ ಮತಿ ಗಂಡನೆ ಮನೆದೈವ
ಗಂಡನೆ ಪ್ರಾಣದೊಲ್ಲಭನು।

ಗಂಡರ ಗಂಡ ಉದ್ದಂಡ ರಾಮನ ಬಿಟ್ಟು
ರಂಡೆಯ ಬಾಳು ಬಾಳುವರೆ ||೧೬೬||

ಸೊಸೆಯರಾಡುವ ಮಾತ ಕೇಳಿ ಕಂಪಿಲರಾಯ
ಬಿಸಿಗೆ ಕಬ್ಬಿಣದಂತೆ ಕರಗಿ|
ವಿಷಗೊಂಡು ಸಾಯಲೆ ವಿಪರೀತ ಧರೆಯೊಳು
ಶಶಿಸೂರ್ಯರುಳ್ಳನಕ ಬಿಡದು ||೧೬೭||

ಶೋಕವ ಮಾಡುತ ರಾಯ ಸೊಸೆಯರಿಗೆ ಪೇಳಿಸಿ
ರಸಿಕ ಮಂತ್ರಿಯ ಬಳಿಗೆ ಹೋಗಿ|
ಹಸು ಬಾಲ ನಾನಾದೆ ಸತಿಯ ಮಾತನು ಕೇಳಿ
ವಿಷಕೊಟ್ಟ್ಯೋ ರಂಡೆ ಮುಪ್ಪಿನಲಿ ||೧೬೮||

ಕಲಿಯಾಗಿ ರಾಮನ ಲಲನೆಯರೈವರು
ಹರಿದರು ಮಂತ್ರಿಯಡಿಗೆ|
ಕಳುಹೆಮ್ಮ ಕಾಂತನ ಅಲರಂಬ ಬಾಣ[ನ] ಅಗಲಿ
ಇರುವರಲ್ಲವೊ ಕಿಚ್ಚ ಬೇಗ ||೧೬೯||

ತಿಳಿದು ನೋಡಲು ಮಂತ್ರಿ ಮನಧ್ಯಾನದೊಳು ತನ್ನ
ಕೊಲದೆ ಕಾದಿರುವೆ ರಾಮುಗನ|
ಅಳಿಯಬೇಡೆಂದರೆ ಬಳೆಯ ತೆಗೆಯಬೇಕು
ಮರಳಿ ಕೂಡಲು ಮುಂಡೆ ರಾಹು ||೧೭೦||

ಕಿಚ್ಚನು ಕೊಡಲವರ ಉತ್ತಮ ನೆಲಮಾಳಿಗೆ
ಒತ್ತಿಲಿ ಕೊಂಡವ ಮಾಡಿ|
ಕತ್ತ[ಲೆ] ತೆರದೊಳು ಒಳಗಿಟ್ಟು ಜನಕೆಲ್ಲ
ಸತ್ತರೆನ್ನಿಸಿ ಬಿಡು ಯುಕ್ತಿಯಲಿ ||೧೭೧||

ಅಳಿಯಲೇತಕೆ ತಾಯಿ ಹೊರೆಯಿರೆ ಪ್ರಾಣವ
ದೂರೆಯಿರುವ ಮಾವಾಜಿ ನಿಮ್ಮ|
ಕಿರಿಯತ್ತೆ ರತ್ನಮ್ಮ ಇರುವಳು ಭಯವೇನು
ಜನಮೆಚ್ಚುವಂತೆ ಕೇಳಿದನು ||೧೭೨||

ಸಾಕಯ್ಯ ಮಂತ್ರೀಶ ನಿಮ್ಮುತ್ರದೊಳಗೆ ಜನಿಸಿ
ರಣಭೂಪಗೆ ಕರವ ನೋಡಿದೆವು।
ಹಾಕಿದ ಹರಿಕಲ್ಲ ಇನ್ನ್ಯಾಕೆ ಲೋಕದ ಬಾಳು
ಆತನ ಅಡಿಗೆ ಹೋಗುವೆವೊ ||೧೭೩||

ಒಳ್ಳೇದ ಇರಿ ನೀವು ತಿರುಗಿ ಬರುವೆನು ಬೇಗ
ರಾಯ ಕಂಪಿಲಗೆ ಅರುಹಿ।
ವಾಯುಗಮನದಿ ಬಂದು ರಾಯನಿಗೆ ಕರಮುಗಿದು
ಪೇಳಿದ ನರತಂತ್ರದೊಳಗೆ ||೧೭೪||

ರಾಯ ರಾಜೇಂದ್ರನೆ ಕೇಳೆನ್ನ ಬಿನ್ನಪವ
ಬಾಲರಾಮನ ಸತಿಯರು।
ಕೇಳುವರು ಕಿಚ್ಚನ್ನು ಏನಿದಕೆ ಸ್ಥಿತಿಗತಿಯು
ಪೇಳೆಮಗೆ ಬುದ್ಧಿ ಗಲಿಸೆಮಗೆ ||೧೭೫||

ಮಾರನ ಮರೆಸುವ ಕುಮಾರನು ಲಯವಾದ
ನಾರಿಯರ ಅತಿ ಆಸೆಯೇನು।
ಶೋಕವಲ್ಲದೆ ನಿತ್ಯ ಅರೆಸುಖವಿಲ್ಲ ರಾಜೇಂದ್ರ
ನೂಕುವುದು ಲೇಸು ಅವನೊಡನೆ ||೧೭೬||

ಚೆಲ್ವ ಬಾಲೆ ನೋಡಿ ತರಬೇಕಲ್ಲದೆ
ಬರಲರಿಯನಳಿದಾತ ಮರಳಿ।
ಇರುವ ಪ್ರಾಯಗಳೆಷ್ಟು ಹಾನಿ ಹೀರು ಬರಲು
ಹೊರಬೇಕು ತುಂಬ ಅಪಕೀರ್ತಿ ||೧೭೭||

ಆಡಿದೆ ನಿಮ್ಮೊಳಗೆ ತೋರಿದ ಬುದ್ಧಿ
ದೇವರ ಚಿತ್ತ ಹ್ಯಾಗಿಹುದೊ।
ಏನು ಹೇಳಲಿ ಮಂತ್ರಿ ಕಳೆದು ನಿನ್ನಯ ಮಾತ
ಮೂಳ ಶ್ವಾನಗೆ ಕಡೆಯಾದೆ ||೧೭೮||

ಮನಬಂದ ರೀತಿಗೆ ಮಾಡಿಸೊ ಪ್ರಧಾನಿ
ಘನ ಇರುವ ರೀತಿ ಇದರೊಳಗೆ।

ಮೊದಲೆ ನಿನ್ನಯ ಮಾತ ಕಳೆಯದೆ ನಡೆದಿರಲು
ಮಗನುಳಿವ ಈಗ ಮಣ್ಣ ತಿಂದೆ ||೧೭೯||

ನೃಪನ ಒಪ್ಪಿಸಿ ಮಂತ್ರಿ ಅತಿ ಬೇಗದೊಳು ಬಂದು
ಸತಿಯರೆ ಬನ್ನಿ ರಾಮಯನ|
ಪತಿಯೊಡನೆ ನಡೆವಂಥ ಕಿಚ್ಚ ಹುದು ನಾ ಕೊಡುವೆ
ನೃಪನ ಮಾತೇನು ಅಗ್ನಿಯನು ||೧೮೦||

ಕೋಟಿ ಸೂರ್ಯನ ಪೋಲ್ವ ಕಾಂತ ತೊಲಗಿದ ಮೇಲೆ
ಜಾತಿ ಸತಿಯರು ಇರಸಲ್ಲ|
ಇತರ ಸುಖಭೋಗ ಇರುವನಕ ಅರೆ ಬಾಳು
ಹಾಕುವುದು ದೊರೆತನ ಲಕ್ಷಣವು ||೧೮೧||

ಪಡೆದವನೆ ಎಲೆ ತಂದೆ ನಿನ್ನೊಡಲೊಳಗೆ ಜನಿಸಿ
ಹೊರೆವರಲ್ಲವೊ ಭಂಡ ಬಾಳ|
ದೃಢವಾಗಿ ನಡೆವೆವೊ ಕಮಲಾಕ್ಷನ ಮಗನ
ಪೋಲ್ವನ ಬಿಟ್ಟು ಇರುವವರೆ ||೧೮೨||

ಮೆಚ್ಚಿದನು ಮಂತ್ರಿಯು ಪತಿವ್ರತ ಭಾವ ಇವರೊಳಗೆ
ಹೊಕ್ಕಾರು ಕೊಂಡ ನಿಜವೆಂದು|
ದಟ್ಟಿಚಲ್ಲಣ ಉಟ್ಟು, ಶೃಂಗಾರವಾಗಿ ಬರಲೆಂದು
ಪುತ್ರಿ ಬಾಲೆಯರನು ಕಳುಹೆ ||೧೮೩||

ರಂಭೆಗೆ ಸಾಟಿ ರತಿದೇವಿಗಿಮ್ಮಡಿಯಾದ ಬೆಳ
ದಿಂಗಳ ಪೋಲ್ವ ನಾರಿಯರು|
ಶೃಂಗಾರವಾಗಲು ಉಂಗುಷ್ಠ ತುದಿ ಮುತ್ತು
ರಂಗು ಮಾಣಿಕ್ಯ ರತ್ನದಲಿ ||೧೮೪||

ತೊಟ್ಟು ಚಲ್ಲಣ ದಟ್ಟಿ ಬಿಗಿದುಟ್ಟಿ ಹಳದಿಯ ಸೀರೆ
ಕಟ್ಟಿದ ಮಲಕು ಕಾಣಿಗಳು|
ಕಿತ್ತ ಕಠಾರಿ ಕೈಯೊಳು ಬಾಕು ಗಜನಿಂಬೆ
ಉತ್ತಮ ಚಂದ್ರಾಯುಧವ ಪಿಡಿದು ||೧೮೫||

ಎಡಗಯ್ಯ ದರ್ಪಣ ಮುಡಿದ ಹೂವಿನ ಮಾಲೆ
ಹೊಡೆದು ಬೊಬ್ಬೆಗಳು ಪುರದೊಳಗೀ।
ಗೆಡೆಯೆಡೆಗೆ ಬಾಗಿನವ ಮುತ್ತೈದೆಯರು ಕೊಡುತಲಿ
ಬರುವಾಗ ನಗರ ಗೋಳೋ ಎನುತ ॥೧೮೬॥

ಹಿರಿಯರು ಕಿರಿಯರು ತರಳರು ಪತಿವ್ರತ
ತರುಣಿಯರು ಬಾಲ ಕಾಂತೆಯರು।
ಎಡದೆರನಿಲ್ಲದೆ ಇಡುವರು ಹಣ ಹೊನ್ನು
ನಡೆವರು ಕೋಟಿ ಯಾತ್ರೆಯಲಿ ॥೧೮೭॥

ಹರಿಹರ ದೇವಿಯ ಅರಮನೆಯನು ಹೊಕ್ಕು
ಶರಣೆನುತ ಒಡನೆ ಎರಗಿದರು।
ತರಳೆಯರ ಕಾಣುತ್ತ ಭೋರಿಡಲಾಗ ಅತ್ತೆಗೆ
ವರ ಶಾಂತಿಗಳ ಪೇಳುತಿಹರು ॥೧೮೮॥

ದುಃಖವ್ಯಾತಕೆಯಮ್ಮ ಕಾಂತನೆಡೆಗೆ ಪೋ[ಗೆ]
ನೀವತ್ತರೆ ನಮಗೆ ಗತಿಯುಂಟೆ।
ಹತ್ತೇಳು ಜನ್ಮದಿ ಸೊಸೆಯರಾಗಿ ಬರುವೆವು ನಿಮ್ಮ
ಪುತ್ರನ ಬಿಡದೆ ನಾವಿನ್ನು ॥೧೮೯॥

ಎಳೆಯ ಬಾಲೆರ ನೋಡಿ ಕರಗೂದಲ್ಲದೆ ನೀವು
ಹರೆಯವು ನಾವು ಅಪಹಾನಿ।
ಬರೆದ ಲಿಖಿತವ ಯಾರು ತಿಳಿದಿಲ್ಲ ಶೋಕವ
ಮರೆದೆಮ್ಮ ನೀವು ಕಳುಹುವುದು ॥೧೯೦॥

ಮುತ್ತಿನ ಬಾಗಿನವ ಮಡಿಲಲ್ಲವರು ತುಂಬಿ
ಕಚ್ಚಿ ಗಲ್ಲಗಳ ಮುಂಡಾಡಿ।
ಪುತ್ರ ರಾಮಯ್ಯನ ಪುಣ್ಯ ಸತಿಯರಾಗಿ
ಸತ್ಯಲೋಕದಿ ಬಾಳಿಯೆನಲು ॥೧೯೧॥

ಅತ್ತೆಯ ಚರಣಕ್ಕೆ ಮತ್ತೊಮ್ಮೆ ಅಡಿಗೆರಗಿ
ಕಿಚ್ಚಿನ ಮಾಸ್ತಿಯರು ಹೊರಡೆ।

ಒತ್ತಿಲಿ ಹರಿಯಮ್ಮ ಕಮಲಾಜಿ ಪರಿವಾರ
ಹೊಕ್ಕರು [ಮಾ]ವಾಜಿ ಸದರ ||೧೯೨||

ವೀರಮಾತೆಯರಾಗ ಕಾಣುತ್ತ ಕಂಪಿಲನ
ಪಾದಕ್ಕೆ ಎರಗಿ ಐವರು।
ಆನಂದ ಸುಖದೊಳು ಸ್ಥಿರರಾಜ್ಯ ಬಾಳರಸ
ರಾಣಿ ರತ್ನಿಯ ಸುಖದೊಳಗೆ ||೧೯೩||

ಕೋಮಲೆ ಕಾಂತೆಯರ ಕಾಣುತ್ತ ಕಂಪಿಲಗೆ
ಏರಲು ಬಡಬಾಗ್ನಿ ಶೋಕ।
ಬೀಳುವ ಇವರೊಡನೆ ಕೊಂಡ ಮನದೊಳು ಗ್ರಹಿಸಿ
ಭೂನಾಥ ಹೊರಡೆ ಸೊಸೆಯರೊಡನೆ ||೧೯೪||

ತಾಳಮೇಳದ ಘೋಷದಲಿ ಕಹಳೆ ಭೇರಿಗಳಿಂದ
ಭೂಮಿಯ ಭೇದಿಸುತ ಬರಲು।
ತೋರಣ ಮೇಲ್ಕಟ್ಟು ಎಡೆಯೆಡೆಗೆ ಕುರುಚುಗಳು
ಸಾರಲು ಸೂರ್ಯ ವರುಣದಲಿ ||೧೯೫||

ಇತ್ತ ನೆಲಮಾಳಿಗೆ ಒತ್ತಿಲಿ ಮಂತ್ರಿಯು
ಮತ್ತೆ ಕೊಂಡನು ಮಾಡಿಸಿದ।
ಲೆಕ್ಕವಿಲ್ಲದೆ ಶ್ರೀಗಂಧದ ಕೊರಡಿಂದ
ಒಟ್ಟಿಸಿ ಕೊಂಡ ಮಾಡಿರಲು ||೧೯೬||

ರಾಯ ಬರುವುದ ಕಂಡು ಪ್ರಧಾನಿ ಬೈಚಪ್ಪನು
ಕಾರ್ಯ ನಿಲ್ಲುವುದು ಇವನಿಂದ।
ಬೇಗದಿ ಕರಮುಗಿದು ರಾಮನರಸಿ
ಬೀಳುವ ಕೊಂಡ ಬಳಿಯ ||೧೯೭||

ನೋಡಲಾಗದು ರಾಯರು ಗದ್ದುಗೆಯ ಸಾಗಿ ಮಲೆ
ನಿಮ್ಮೆಡೆಗೆ ಹೆಚ್ಚು ಹೋಗೆನುತ।
ಹಿಂದಕ್ಕೆ ರಾಣಿಸಹಿತ ಕಳುಹಿಸಲು
ಸಾಲು ದೀವಟಿಗೆ ಹಿಡಿಸಿದನು ||೧೯೮||

ಕೊಂಡವಂ ಬಳಸಿ ಶೃಂಗಾರ ಚಪ್ಪರ ಹಾಕಿ
ಪವಳ ಮುತ್ತಗಳ ಮೇಲ್ಕಟ್ಟು।
ಚೆಲುವಾಗಿ ತೋರಣ ಝಲ್ಲಿ ಪರದಿ ಸುತ್ತಲು ಬಿಡಿಸಿ
ಚೋದ್ಯವೆನಿಸಿ ಭೂಮಿಯಲಿ ||೧೯೯||

ಕೊಂಡವ ಏರಿ ಬಳಸಿ ಬಂದು ಐವರು
ಕೊಂಡವ ಕಾಣುತ್ತ ಹಿಗ್ಗಿ।
ಕೊಂಡಾಡಿ ಮಂತ್ರಿ[ಯೆ] ಕೊಟ್ಟೆಮಗೆ ಸದ್ಗತಿಯ
ಬಂಧುಬಳಗದಿ ಸುಖಬಾಳು ||೨೦೦||

ಹಾಳಾಗಿ ಕುಮ್ಮಟ ಹುಟ್ಟಲಿ ಗಿಡ ಮೆಳೆಯು
ರಾಮನ ಸತಿಯರಂದದಲಿ।
ವಾಲಿಗಳಳಿಯಲಿ ನಮ್ಮಂತೆ ಕೊಂಡವ
ಬೀಳಲಿ ಎಂದು ಹಾರೈಸಿದರು ||೨೦೧||

ಮೆಟ್ಟಿ ಬಂದರು ನಿಂದು ಸ್ವಾತಿ ಕಲ್ಲಿನ ಮೇಲೆ
ಪಟ್ಟಣವ ದೃಷ್ಟಿಸಿ ನೋಡಿ।
ಬಟ್ಟಲೊಳೆಣ್ಣೆಯ ತಂದಿತ್ತರೆ ಬೈಚಪ್ಪ
ಮತ್ತೆ ಐವರು ನೋಡಿ ನೆರಳು ||೨೦೨||

ತೈಲದೊಳಗೆ ತಮ್ಮ ಇನಿಯ ಕಾಣುವುದಿಲ್ಲ
ಹರಿಹರನೆ ಬಲ್ಲ ಈ ಮಾಯ।
ಮರಣ ಕಾಣುವುದಿಲ್ಲ ಮಡಗಿರು[ವಿರಿ] ಏನು
ಮಂತ್ರಿ ಅರುಹು [ಎ]ಮಗೆ ||೨೦೩||

ಹಾಳು ಮಾಡುವರಿವರು ಮಾಡಿದ ತಂತ್ರವನು
ದೂರುವರು ಪುರಜನರು ಕೇಳ್ವಂತೆ।
ಕೊಡುವೆ ಸೈರಿಸಿ ಮಾರಸನ್ನಿಭನೆಂದು
ಹೇಳಿದ ಕರ್ಣಿಕೆ ಮಂತ್ರಿ ||೨೦೪||

ಕೊಂಡವರು ಕಾಣುತ್ತ ಮನಮೆಚ್ಚಿ ರಂಡೆಯರ
ಗಂಡ ಹೇಳೆಂದು ಆಡುವರು।

ಹಿಂದಕ್ಕೆ ತಿರುಗಿದರೆ ಪುರಕಿನ್ನು ಮರಳವು
ಮುಂಡೆಯರ ಹಿಡಿದು ನೂಕಿಸುವೆ ||೨೦೫||

ಜನರಿಗೆ ಹೀಗೆಂದು ಅರುಹುತ್ತ ಎಲ್ಲರನು
ತಡೆಸಿದ ಸರಳ ಎಸಗೆಯಲಿ।
ಹಿಡಿಸಿದ ತೆರೆಯನು ಕೊಂಡದವಂ ಬಳಸಿ
ತನ್ನೊಡ ಬಳಸಿ ಒಬ್ಬೊಬ್ಬರಿಗೆ ||೨೦೬||

ಸುಳುಹು ಕಾಣದ ರೀತಿ ತೆಗೆಸಿ ನೆಲಮಾಳಗೆ
ಬಲಿದಿರ್ದ ಬೀಗ ಮುದ್ರೆಯನು।
ತೆಗೆದಾಗ ಸತಿಯರ ಕಳಿಸಿ ವಿವರವ ಪೇಳಿ
ತಿರುಗಿದ ಕರಮುಗಿದು ಮಂತ್ರಿ ||೨೦೭||

ಎಂದಿನ ಪರಿಯಂತೆ ಬಂಧಿಸಿ ಬಾಗಿಲನೆ
ನಿಂದನು ತೆರೆಯೊಳು ಮಂತ್ರಿ।
ಕೊಂಡಕೆ ಹಾಕಿಸಲು ಕುರಿ ಕೋಳಿ ನೂರೆಂಟು
ಮಂಡಲಕೆ ಹೊಡೆದೇಳೆ ಸೊಡರು ||೨೦೮||

ಹಿಡಿಹಿಡಿದು ಹಾಕುವದು ಹೊಡೆವರು ಬೊಬ್ಬೆಗಳು
ಕೆಡೆವುತ ಎಣ್ಣೆ ತುಪ್ಪಗಳ।
ಅಡರಲು ಉರಿ ಮೇಘ ಸೊಡರು ಪುರವನು ಮುಚ್ಚೆ
ಪೊಡವಿಯ ಜನರು ಗೋಳೋ ಎನಲು ||೨೦೯||

ಸಂದರು ಶರಣೆಯರು ಗಂಡನ ಸನ್ನಿಧಿಗೆ
ಹಂದಿಯಂತಿರಲಿ ರತ್ನಿ ಮುಂದೆ।
ಚಂದ್ರಧರನ ಪಾದಾಂಬುಜವ ಕಂಡರು ಅವರು
ಬಂಧಬಡದೆ ನರಕದಲಿ ||೨೧೦||

ಮರೆದನು ಜಯಲಕ್ಷ್ಮಿ ನಾವಿಂತು ಇರುವುದು
ಹೊದು...... ಇದರೊಳಗೆ।
ತರಳನ ಕೊಂದವಗೆ ಪ್ರಜೆ ಬೇರೆ ಇದಿರುಂಟೆ
ತಿಳಿದವಗಿದು ಸ್ಥಳವಲ್ಲ ||೨೧೧||

ಭೀಮಗೆ ಹೆಚ್ಚಾದ ಕುಮಾರ ರಾಮನ ಕೊಂದ
ಭೂಮಿಯೊಳಿದಿರೆ ರತ್ನಿಗೆ।
ಊರನೆ ಸುಡು ಸಾಕು ಯಾರ್ಯಾರ ಕೊನೆ ಬುಡಕೆ
ನೀರನಿಡುವಳೊ ಮೂಳೆ ಸುಳ್ಹೇಳಿ ||೨೧೨||

ಆಡಿಕೊಳ್ಳುತ ಜನರು ಬಾಯಿಗೆ ತಿಳಿದಂತೆ
ಹೋದರು ತಮ್ಮ ಮನೆಗೆ।
ಕಾಳಿಂಗ ತನ್ನಯ ಸಂತಾನವ ತಿಂದಂತೆ
ರಾಮನ ತಿಂದ ಕಂಪಿಲನು ||೨೧೩||

ಮೂರು ತಾಸುಳಿಯದೆ ಮರದಂತೆ ಪುರವಿರಲು
ಮಾಗಿಯ ಕೋಗಿಲೆಯ ಸ್ವರದಿ।
ರಾಯ ಕಂಪಿಲ ರತ್ನಾಜಿ ಇರುವಳು
ತಾವರೆ ಸಖಿನ ಕಂಡಂತೆ ||೨೧೪||

ಧರೆಗಧಿಕ ಹಂಪೆಯ ವರ ಪುಣ್ಯಕ್ಷೇತ್ರದ
ಕರುಣಿಸು ವರ ವಿರುಪಾಕ್ಷ।
ತರಳ ರಾಮನ ಮಡಗಿ ಸುರಿತಾಳನು ದಂಡೆತ್ತಿ
ಬರುವುದಕೆ ಹದಿನಾಲ್ಕು [>ಹದಿನ್ನೈದು] ಸಂಧಿ ||೨೧೫||*

❖❖

* + ಅಂತು ಸಂಧಿ [>ಹದಿನ್ನೈದು] ಪದವು ೩೧೭೬ ಮಂಗಳಮಹಾಶ್ರೀ ಶ್ರೀ.(ಮೂ)

ಸಂಧಿ : ಹದಿನಾರು

❖

ನೇಮಿಯ ಎರಡನೆಯ ದಾಳಿ

---

*ಶ್ರೀ ಗಿರಿಜೆಯ ಶಂಭು ಭಾಗೀರಥೀಶನೆ
ನಾಗಭೂಷಣ ನಂದಿಕೇಶ।
ಭೂಮಿ ಬ್ರಹ್ಮಾಂಡಕ್ಕೆ ಆಧಾರ ಕರ್ತನೆ
ಯೋಗಿಜನಂಗಳ ಒಡೆಯ ||೧||

ಕೊಟ್ಟಣದ ಬತ್ತವ ಕುಟ್ಟದೆ ಶರಣರು
ಒಕ್ಕಲು ನಡೆಯೆ ಕಲ್ಯಾಣಕೆ।
ಮೂಟೆ ಗಂಟನು ಹೊತ್ತು ಬಳಲ್ದ ಸೊನ್ನಲಿಪುರ
ಕಪಿಲಮಲ್ಲ ಕೊಡು ಮತಿಯ ||೨||

ಮುಂದಣ ಶ್ರುತಿ ಕೇಳಿ ಮಂದಮಾಡದೆ ಜನರು
ಕಂದ ರಾಮಯ್ಯನ ಕೃತಿಯ।
ಸಂದವರ ಮಾತುಗಳು ಮುಂದಿನ್ನು ಅಡಗದೆ
ಒಂದಾರು ಗಾವುದ ಎಸೆಯೆ ||೩||

ಸತ್ತ ರಾಮನು ಎಂದು ದಿಕ್ಕು ದೇಶಕೆ ಸುದ್ದಿ
ಹತ್ತೆಂಟು ಗಾವುದ ಹರಿಯೆ।
ದೊರೆಯು ಕಂಪಿಲರಾಯ ಕೊಂದನೆಂಬುವ ಸುದ್ದಿ
ಹರಡಿತು ಮೂರು ಲೋಕದೊಳು ||೪||

---

* + ಗುರುಬಸವಲಿಂಗಾಯ ನಮಃ (ಮೂ)

ಅರಿ[ಭಯಂ]ಕರನು ಪ್ರಚಂಡ ಚವುಪಟಮಲ್ಲ
ಧುರಧೀರ ರಾಮ ಸತ್ತುದಕೆ।
ಕನಲಿ ದುಃಖವ ಮಾಡುತ ಊರ ಪ್ರಜೆಯೆಲ್ಲ
ಅನುದಿನದಲಿ ಇರುತಿಹರು ॥೫॥

ಅಳಿದ ರಾಮನು ಎಂದು ದೊರೆಗಳೆಲ್ಲರು ಕೇಳಿ
ಹರಿಯಿತು ಎಮ್ಮ ರೋಗ।
ಬರುವನು ಡಿಳ್ಳಿಯ ಸುರಿತಾಳ ದಂಡೆತ್ತಿ
ಹಿರಿವ ಬೇರನು ಕುಮ್ಮಟದ ॥೬॥

ಪಾಳೆಗಾರರು ಎಲ್ಲ ಕೂಡಿ ಮಾತಾಡುತ್ತ
ತೀರಿತೆ ಕಂಪಿಲನ ಭೋಗ।
ಏಳಿಗಿನ್ನೆಲ್ಲಿಯದು ಬಹಳ ಬೆಳೆದವರಿಗೆ
ಲಯವಾಗೊ ಕಾಲ ಬಂತು ॥೭॥

ಮೂರು ದಿನದ ಬಾಳ್ವೆಗೆ ಭೂಮಿ ರಾಯರನೆಲ್ಲ
ಆಳಿನಂದದಿ ಕಾಯಿಸಿದ।
ಹೋದನು ಇನ್ನೇಕೆ ಮೂಳ ಕಂಪಿಲ ಕೆಟ್ಟ
ಕಾಗದ ಬರೆ ಸುರಿತಾಳಗೆ ॥೮॥

ತರತರದೊಳು ಬರುವ ಉಲುಪೆ ಕಾಗದ ನೋಡಿ
ಸುರಿತಾಳ ಬೆರಗಾಗಿ ಇರುವ।
ಮರಗಯಾನೆಂಬರು ಮೂಲ[ಕೆ] ತಿಳಿಯದು
ತಲೆದೂಗಿ ಇದು ಚೋದ್ಯ ತಮಗೆ ॥೯॥

ಪ್ರಳಯಕಾಲದ ರಾಮನಳಿದನೆಂಬುವ ಸುದ್ದಿ
ತಿಳಿಯದು ಭೇದದ ನೆಲೆಯು।
ಹೊಳವಾಗಿ ಇರುವುದು ನೆಲೆಗಳ ತಿಳಿಯದು
ಕರೆಸೆನಲು ತನ್ನ ಮಂತ್ರಿಯನು ॥೧೦॥

ಮುತ್ತು ಮಾಣಿಕ ರತ್ನ ಕೆತ್ತಿದ ಸದರನು
ಹತ್ತಿದ ಪಾಶ್ಚಾಯ ಬರೀದ।

ಹಸ್ತಿ ತುರಗವು ಹಸಾದವೆನುತಲಿ
ಇತ್ತರು ದೇವೇಂದ್ರ ಭೋಗ ||೧೧||

ಹೊರಮಾತು ಹೊರಟಿತು ಬರಹೇಳಿ ನೇಮಿಯ
ಉಸಿರಲು ಪರಿಚರರೊಡನೆ।
ವಸುಧೀಶ ರಾಜೇಂದ್ರ ವಾಯುಗಮನದಿ ಬಂದು
ಕುಳಿತರು ರಾಜೇಂದ್ರ ಸದರಿಗೆ ||೧೨||

ಬರಲಾಗ ಮಂತ್ರಿಯು ಹರಿಣಗಮನದಲಿ
ಕರ ಮುಗಿದು ಪಾಶ್ಚಯಗೆರಗಿ।
ಸದರಿನ ಮುಂಗಡೆ ನಿಂದು ಕೇಳಿದನಾಗ
ದಯಮಾಡಿ ರಾಯನ ಸೂಚನೆಯ ||೧೩||

ಪರಿಚೋದ್ಯವಾದಂಥ ಸ್ವರವ ಕೇಳಿದೆ ಮಂತ್ರಿ
ಗರಿ ಮುರಿದು ಬಿತ್ತು ಎಂಬುವರು।
ಮರೆಮಾತು ಇನ್ನೇಕೆ ನಿಜ ಸಟೆಯೆ ಕುಮ್ಮಟದ
ಅರಸು ರಾಮನು ಸತ್ತನಂತೆ ||೧೪||

ಕೇಳುತ ನೇಮಿಯು ಬಾಯ ವೀಳ್ಯವನುಗಿದು
ತೂಗುತ ತಲೆಯ ಮನದೊಳಗೆ।
ಭೀಮನು ಸಾಹಸದಿ ಗೋಲಂದನ ತನುಜನೆ
ಲಾವಣ್ಯ ಬಿಂಕದಲಿ ||೧೫||

ಬಾಲನು ಹಸಮಗ ಏಳೆಂಟು ವರುಷದ
ಯಾವ ಹದನೊ ಕಾಣಲರಿಯೆ।
ರಾಯರೊಳಿದು ಸಹಜ ಸಂದ ವಿಘ್ನವ ಕಂಡು
ಭೂಮಿಯೊಳಗೆ ಅರಸುವುದು ||೧೬||

ಕಂಡು ಬಂದವರಾರು ಸ್ಥಳದಿಂದ ಬಂದಿರೆ ಸುದ್ದಿ
ತುಂಡು ದೊರೆಗಳು ಬರೆದ ಲಿಖಿಯೊ।
ಮಂಡಲಪತಿಗಳ ಗಂಡನೆನಿಸಿಕೊಂಬ ಅದರಿಂದ
ಹರಿಸಿಹರೊ ಈ ಕೌತುಕ ||೧೭||

ಅಷ್ಟ ದಿಕ್ಕಿನ ಒಳಗೆ ಕುಟ್ಟಿ ಡಂಗುರ ಹೊಯ್ಸಿ
ನೆತ್ತಿಯೊಳು ಮೊಳೆಯು ಬಲಿದಿಹುದೆ।
ಸತ್ತವನೊ ಹಗೆ ಮಾತೊ ಸಟೆಯ ಅರುಹದೆ ಮಂತ್ರಿ
ಕೋಟೆಗಾರರ ವಾಲೆ ನೋಡೊ ||೧೮||

ಹಾಸ್ಯವಲ್ಲದೆ ವಾಲೆ ಲೇಸುಗಾಣದೆ ಭೂಪ
ದೋಷ ಕಳೆಯಲ್ಕೆ ಮಾಡಿಹರೊ।
ಈ ಸುದ್ದಿ ಅವನೊಳಗೆ ಹೊಂದಿದ ನರ ನಂಬಿ
ಲೇಸು ಬರುವುದೆನಲು ನಡೆಯೊ ||೧೯||

ತಿಳಿದು ನೋಡುವ ಭೂಪ ಬೆಳಗೊಂಡೆ ಕನಸಿಗಿ
ಬರುವುದು ಭೂಪ ನೆಲೆಯಾಗಿ।
ಮಲಗಿರುವ ಸಿಂಹವ ಮೈದಡವಲು ಮುಂದೆಮ್ಮ
ಬೇರ ಕೀಳದೆ ರಾಮ ಬಿಡನು ||೨೦||

ಬೆನವನಂದದಿ ನೀನು ಒಡಲ ಬೆಳೆಸಿದೆ ಮಂತ್ರಿ
ಸರಿಪಾಲು ಒಡವೆಯ ಗಳಿಸಿ।
ಪರಕಾರ್ಯವೆಂದರೆ ಚಳಿಜ್ವರ ಬರುವುದು
ಹೆಣ ಮೋರೆ ಮೀಸೆ ಸುಡು ನಿನ್ನ ||೨೧||

ಕೇಳಿದನಾಡುವ ರಣಹೇಡಿ ಮಾತಿನ ಭೇದವ
ಕಾಣದೆ ಕಾಗದವ ಬರೆಯುವರೆ।
ಸೀಳಲು ತನ್ನಯ ಸಿಟ್ಟು ಹೋಗದು ಎಂದು
ಭೂನಾಥ ಗರ್ಜಿಸಿ ನುಡಿದ ||೨೨||

ಕೋಪ ಎನ್ನೊಳಗೇಕೆ ಪ್ರತಾಪ ಅಳಿದ ಸುದ್ದಿ
ಕ್ಷಣಮಾತ್ರದೊಳಗೆ ತರಿಸುವೆನು।
ಹತ್ತುವನವ ಗಜವ ಹನ್ನೆರಡು ದಿವಸದ ಮೇಲೆ
ನಾ ಕಳುಹಿ ಒಳಸಂಚ ತರುವೆ ||೨೩||

[ಆಗ] ಕರೆಸಿದನಲ್ಲಿ ಜಾಣ ಪ್ರವೀಣರ
ಜೋಗಿ ವೇಷಗಳನು ಧರಿಸಿ।

ಬೇಗದಿಂದಲಿ ಅವರು ಡಿಳ್ಳಿಯ ಕಡೆಗಂಡು
ಸಾಗಿ ಬರುವರು ಕುಮ್ಮಟಕೆ ||೨೪||

ನಿಲ್ಲದೆ ನಿಂದಲ್ಲಿ ಬಂದರು ದಿನದಿನಕೆ
ತಿಂಗಳಾದರೊಂದು ಪಕ್ಷ।
ಮುಂದಿನ್ನು ತುಳಿದರು ಕುಮ್ಮಟದ ಕೊನೆರಾಜ್ಯ
ಬಂದು ಹೊಕ್ಕರು ತಿಳುಹುತಲಿ ||೨೫||

ಕೇಳುವರಲ್ಲಲ್ಲಿ ಕಾಣದವರಂದದಿ
ಬಾಲನೊ ರಣವಿಜಯ ಪಾಲ।
ಎಲ್ಲ ತಿಳಿದರೆ ಒಂದೆ ನಿರ್ಧರವಾಗದೆ
ತಾವಾಗಿ ಹೊಕ್ಕರು ಕುಮ್ಮಟವ ||೨೬||

ಬೇಡುವರು ಭಿಕ್ಷವ ನೋಡುವರು ಜಾತಿಗೆ
ಜೋಗಿಗಳೆಂದುಕೊಂಬುವರು।
ಕೇಳುವರು ಮನೆಮನೆಯ ಬಾಲೆಯರ ಕೇಳುವರು
ಪೇಳುವರು ರಾಮನ ಸ್ಥಿತಿಯ ||೨೭||

ಏನಾಗಿ ಅಳಿದನು ಬಾಲನು ಅನುಮಾನ
ಯಾವ ಕಾಲಕೆ ಹುಟ್ಟಿ ಬೆಳೆವ।
ಸಾಯ್ವ ಪ್ರಾಯವೊ ಶಿವನೆ ಭೇರುಂಡನಂಥವನು
ತಾಯಿ ತಂದೆ ಎಂತು ಸೇರುವರು ||೨೮||

ತಂದೆಯ ಮೋರೆಯು ನಿಂದು ಉರಿಯಲಿ ಜೋಗಿ
ತಂದಿಹರು ಒಬ್ಬ ರಂಡೆಯನು।
ಕಂದನ ಭ್ರಮಿಸಲು ಒಲ್ಲೆಂದರೆ ಚಾಡಿಯ
ಗಂಡಗೆ ಹೇಳಿ ಕೊಲ್ಲಿಸಿದೊ ||೨೯||

ಸತ್ತುದು ಸರಿ ಜೋಗಿ ನಿಸ್ತ್ರೀಯರ್ರೈವರು
ಹೊಕ್ಕಾರು ಅಗ್ನಿ ಕುಂಡವನು।
ಪಟ್ಟಣಜನರೆಲ್ಲ ಕಂಡ ಕಾರ್ಯವು ಎಂದು
ದಿಟ ಹೇಳಿದರು ಬಾಲೆಯರು ||೩೦||

ಗಟ್ಟಿ ಸುದ್ದಿಯ ಕೇಳಿ ಬಿಟ್ಟರು ಕುಮ್ಮಟವ
ತಿರುಗಿದರು ಡಿಳ್ಳಿಯಪುರಕೆ।
ಹೊಕ್ಕಾರು ಪಟ್ಟಣವ ರಾಯಗೆ ಹೇಳಿದರು
ಈ ಹೊತ್ತ ತೆಗಸಯ್ಯ ದಂಡೆಲ್ಲ ||೩೧||

ಯಾಕೆ ಅಳಿದನೆಂಬ ಮಾತ ವರ್ಣಿಸಿ ನೀವು
ರಾಮನು ಹೊಕ್ಕ ರತ್ನಿಯು ಪಿಡಿಯೆ।
ಛೀ ಕರ್ಮಿ ಎನುತಲಿ ಬಂದರೆ ರಂಡೆ
ಭೂಪಗೆ ಹೇಳಿ ಕೊಲ್ಲಿಸಿದೊ ||೩೨||

ಮಂದಿ ಕುದುರೆ ಕೂಡಿ ಬಂದು ಪ್ರಧಾನನು
ಕೊಂದು ತಲೆ ತರಲು ನಿಜಕರವು।
ಹೆಂಡರೈವರು ಹೋಗಿ ಕೊಂಡ ಮುಳಿಗದರೆಂದು
ಕಂಡು ಬಂದೆವು ಬೀದಿ ಸುತ್ತಿ ||೩೩||

ರಾಮ ಅಳಿದನು ಎಂದು ಕೂಗೋರು ಸ್ವಾಮಿ
ಬಾಲರು ಬಲ್ಲ ಹಿರಿಯರು।
ಮೇಲಾದ ಅಪಜಯವ ನಾವು ಕಂಡವರಲ್ಲ
ಹೇಳಿ ಕೇಳಿದ ಮಾತು ಸರಿಯಾ ||೩೪||

ಇಳಿಯಿತು ಈಗ ಎನ್ನ ಎದೆಯ ಮೇಲಿನ ಗುಂಡು
ಕಳೆಯಿತು ಕಾಲ ಮುಳ್ಳುಗಳ।
ಮನೆಹೇಡಿ ಎಲೆ ಮಂತ್ರಿ ನಿನಗೆ ನಿರ್ಧರವೇನು
ನಡೆಸಯ್ಯ ಈ ಮೇಲೆ ದಂಡ ||೩೫||

ಮಣ್ಣ ಮಡಕೆಯ ಮೆಚ್ಚಿ ದೊಣ್ಣೆಯಲಿ ಹಗೆಗೊಂಡೆ
ತನ್ನಯ ಮೂಗನು [ಕೊ]ರೆವೆ।
ಹಣ್ಣು ಮುದಿಯನ ಕೊಂದು ಕುಮ್ಮಟಕೆ ಠಾಣ್ಯವ ಹಾಕಿ
ಮುನ್ನ ಬಾದುರನ ಹಿಡಿತಾರೊ ||೩೬||

ಸಾಧಿಸುವ ಸರ್ಪನ ಹುತ್ತಕೆ ಶಿರವಿತ್ತು
ತಾ ಮಲಗಿದಂತಾಯಿತು ಮಂತ್ರಿ।
ಕಾದಿರವು ಈ ಸಮಯ ಕೂಡಬಲ್ಲುದೆ ನೇಮಿ

ವಜೀರ ಖಾನರನು ಕರೆಸೆನಲು ||೩೭||

ಬರೆದು ಕಾಗದ ಕಳುಹು ಅಮರಂಗಿ ಧೀರರು
ಬರುವಂತೆ ಸಕಲರು ಎಲ್ಲ।
ತೊರಗಲ್ಲು ಬಾದಾಮಿ ಊರಿವ ಮುಂಜುವ
ಬರಲಾಗ ಧುರಧೀರ ಬಲ್ಲಿ ರಾಚೂರ ||೩೮||

ಖಾನಖಾನರಿಗೆಲ್ಲ ವಾಲೆ ಕಾಗದ ಬರೆದು
ರಾಮ ಮೃತವಾದ ಕುಮ್ಮಟದ।
ನೋಡಿಕೊಳ್ಳುತ ಎಲ್ಲ ಮೂಗಿನಲಿ ಬೆರಳಿಟ್ಟು
ಸಾಯಬಹುದೆ ಇಷ್ಟರೊಳಗೆ ||೩೯||

ಹಣೆಬರದಾಸೆಯು ಎಡದ ಕಂಟಕ ಬಂದುದೊ
ನಿಜದೋರದೆಮಗೆ ಈ ಮಾತು।
ಹದಕೊಮ್ಮೆ ಮಾಡಿದ ಕುಟಿಲ ಕಾಣುವುದೆಂದು
ಅಮರಂಗಿಖಾನ ಆಡುವನು ||೪೦||

ಆದರಾಯಿತು ಮುನ್ನ ಯಾರಿಗೆ ಸ್ಥಿರವುಂಟು
ತೀರಲು ತಂದಂಥ ಪಡಿಯು।
ಕಾಯಾಗೆ ಹಣ್ಣಾಗೆ ಸೋಲು ಗೆಲುಹಾದಾವ
ಮೀರಿ ಬಾಳುವರೆ ಲೋಕದಲಿ ||೪೧||

ನೆಲೆಯ ತಿಳಿಯದೆ ಮುನ್ನ ಸುರಿತಾಳ ಬರೆಯನು ಎಂದು
ಹೊರಡಲು ಹೊರಪಾಳ್ಯವೆಲ್ಲ।
ಅರುವತ್ತು ಸಾವಿರ ತುರಗದಿ ಅಮರಂಗಿ
ನಡೆಯಲು ತುಮರೋಜಖಾನ ||೪೨||

ಒಡನೆ ನಡೆಯಲು ಒಬ್ಬ ಪಡೆಯ ಪಂಡಿತಖಾನ
ಬಲ ತುರಗ ಹತ್ತು ಸಾವಿರ।
ಕರೆ ಕರೆ ಕಾಲಾಳ ಗುಜ್ಜಳ ಗೌಳ ಪಾಂಡವರಿಗೆ
ಬರೆದು ಕಾಗದವ ಕಳುಹಿದರು ||೪೩||

ಒಂದಾಗಿ ಖಾನರೆಲ್ಲರು ಕೂಡಿ ನಡೆಯಿತು
ಎಂಟು ಸಾವಿರ ವೀರ ಪಡೆಯು।

ಕಾಣಲು ಕ[ಪ್ಪೆ]ಯ ಆನವದಿರ ಖಾನನು ನಡೆದ
ಹನ್ನೊಂದು ಸಾವಿರ ತುರಗದಲಿ ||೪೪||

ಹತ್ತು ಸಾವಿರ ಕುದುರೆ ತುಕ್ಕೋಜಿಖಾನನು
ಒತ್ತಿಲಿ ಬಿಬ್ಬರಖಾನ।
ಬತ್ತಿದ ಮೋರೆ ರಸದುಲ್ಲ ಖಾನನು
ಒತ್ತಿಯೊಳು ಕೋಪರ್ದಿಖಾನ ||೪೫||

ಖಾನರಿಗೆ ಬಲವಂತ ಕಮದುಮ್ಮ ಖಾನನು ಹೊರಟ
ಹದಿನಾರು ಸಾವಿರ ತುರಗದಲಿ।
ನೋಡುವರಳವಲ್ಲ ಖಾನರ ಪಡೆಬಂದು
ಕೂಡಿತು ಮೂರುವರೆ ಲಕ್ಷ ||೪೬||

ಚೂರು ಕಬಾಯಗಳ ಬಿಸಿಗಣ್ಣ ಖಾನರು ಬಂದು
ಹೊಸೆದುಕೊಳ್ಳುತ ಮೀಸೆಗಳನು।
ಸುರಿತಾಳ ಕೊಡು ಎಮಗೆ ವೀಳ್ಯವ ಕುಮ್ಮಟದ ಬೇರು
ಕಿತ್ತು ಎಸೆವೆವು ಡಿಳ್ಳಿಯಪುರಕೆ ||೪೭||

ಏಳಯ್ಯ ಸುರಿತಾಳ ಗಾಳಕೆಂಜಡವ್ಯಾಕೆ
ವೀಳ್ಯವ ಕೊಡು ಈಗ ನಮಗೆ।
ಕಿತ್ತೆವೊ ಹೊಸಮಲೆಯ ಕಲ್ಲನೆ ಪುಡಿಮಾಡಿ
ಬೂದಿ ಮಾಡೇವು ಕುಮ್ಮಟವ ||೪೮||

ಖಾನರಾಡುವ ಮಾತ ಕೇಳಿ ಸುರಿತಾಳನು
ಗಹಗಹಿಸಿ ನಗುತ ಮನದೊಳಗೆ।
ಬಾದುರನ ತಂದರೆ ನೀವೆನ್ನ ಬಂಧುಗಳು
ನಾ ಬೇರೆ ಹೇಳುವದೇನು ||೪೯||

ಉಡುಗೊರೆಯ ಕೊಡಲಾಗ ವಜೀರ ಖಾನರಿಗೆಲ್ಲ
ಸಂಬಳವ ಕೊಟ್ಟ ಬಲಕೆಲ್ಲ।
ಚೇಂಡೆವ ಹೊಡೆಯಲು ಯಮನ ಮೂಲಿಗೆ ಬೇಗ
ಮಂಡಲ ಪುರದಂತೆ ಇಳಿಯೆ ||೫೦||

ದಂಡಿನ ಸಾಮಗ್ರಿ ಬಂಡಿಯದೊಯ್ವವು
ಬಂಗಿಯ ಹೇರೊಂದು ಲಕ್ಷ।
[ಕಂ]ಬಾರ [ಬೈ]ರೂಪ ಕುದುರೆ ಗೂಟವು ಹಗ್ಗ
ಕಾಲಂಬು ಲಕ್ಷಣ ಒಂಟೆಗಳಿಗೆ ||೫೧||

ಆಹಾರಗಳ ಕೊಂಡು ಖಾನರು ತಮ್ಮಯ
ಆನೆಯ ಮೇಲೆ ಹೇರುವರು।
ಗೋದಿ ರೊಟ್ಟಿಯು ತುಪ್ಪ ಕಲಿಸಿ ವಂದಿಗೆ ತುಂಬಿ
ಮೂರಾರು ಸಾವಿರ ಹೊರಡೆ ||೫೨||

ಗಂಗಾ ಸಾರಾಯವನು ತುಂಬಿ ಕೊಟ್ಟಿಗೆ ಎತ್ತು
ಇಂಗು ಜೀರಿಗೆ ಮೊದಲಾಗಿ।
ಅಂಬು ಸಿಂಗಾಡಿಯ ಆನೆ ಮೇಲಕೆ ತುಂಬಿ
ಕಡೆಯಿಲ್ಲವೆಂಬಂತೆ ತುಂಬಿ ||೫೩||

ಅಕ್ಕಿ ಸಕ್ಕರೆ ಜೇನುತುಪ್ಪ ಉಪ್ಪಿನಕಾಯಿ
ಪತ್ರೆ ಲವಂಗ ಹಿಪ್ಪಲಿಯು।
ಸುಂಟಿ ಬಂಗಿಯ ರೊಟ್ಟಿ ಮದಕಿಕ್ಕೊ ಮಾರಾಟ ಮಗ್ಗ
ಇಟ್ಟಿಯ ಕೊರಡು ಎಲೆ ಸುಣ್ಣ ||೫೪||

ನಿಂಬಿನ ಬೀಜವು ನಾನಾ ವರ್ಣದ ಕವಳ
ತುಂಬಲು ಉರುಳಿ ಮುಂತಾಗಿ।
ಒಂದಿಲ್ಲೆನಿಸದೆ ಹುಲಿಹಾಲು ಮೊಳಗಿನ್ನು
ಚೆಂದ ರೊಟ್ಟಿಗಳ ಜಾಕಾರಿ ||೫೫||

ಜರಿಯ ಕಾಪಿನ ಕುದುರೆ ಅರುವತ್ತು ಸಾವಿರ
ಸರಿಯಾಗಿ ಸುರಿತಾಳ ನಡೆಯೆ।
ಎರಡು ಕಲ್ಪವಡೆದ ತುರಗ ಖಾನರು ಎಸೆಯೆ
ಎರಡು ಲಕ್ಷದ ಎಂಟು ದಶಕ ||೫೬||

ಜೀವ ಒಂದಕೆ ನಡೆವ ಖಾನರ ದಂಡಿಳಿಯೆ
ಭೂಮಿ ಬ್ರಹ್ಮಾಂಡ ಒದರ್ವಂತೆ।

ನೇಮಿ ಸಹಿತ ಹೊರಡೆ ಸುರಿತಾಳ ಪಲ್ಲಕಿಯ
ಏರಿ ದೇವೇಂದ್ರ ಭೋಗದಲಿ ||೫೭||

ಹೊರಪಾಳ್ಯ ಸದರಿನೊಳು ಸುರಿತಾಳ ಮಂಡಿಸಿ
ಕರೆಸಲು ವಜೀರ ಖಾನರನು।
ಎಲ್ಲರ ಕರವಿಡಿದು ನೇಮಿ ಕರದೊಳು ಇತ್ತು
ಬರಮಾಡಿ ಎನ್ನ ಮೀಸೆಯನು ||೫೮||

ಭೀಮಗೆ ಸಮನಾದ ರಾಮನು ಲಯವಾದ
ಬಾರಾ ಹನ್ನೆರಡಾಗೆ ಮುತ್ತಿ।
ಮೂರು ಲಕ್ಷದ ಪೌಜು ಮುಳುಗಲು ಬಲನೆಂಬೆ
ಬಾದುರನ ಕೈಸೆರೆಯ ಹಿಡಿತನ್ನಿ ||೫೯||

ಆದುಲಪಾಶ್ಚಯ[ನ] ಬೀಳು ನುಡಿಗಳ ಕೇಳಿ
ಖಾನರು ಕಡು ರೋಷದೊಳಗೆ।
ಚಾನಾಬು ಡಿಳ್ಳಿಗೆ ಮೊಘು ಮಾರ್ಗದಿ ಬರಲು
ಸಾರುವೆಯ ಕಟ್ಟಿ ಕಡಿದೇವು ||೬೦||

ಹೇಳ ಬೇಡಿಷ್ಟೊಂದ ಬಹಳ ಬರುವುದು ನಿಷ್ಠ
ಏಳೊಂದಿನಕವನ ಪುರವನು।
ಬೂದಿಮಾಡಿದ ಸುದ್ದಿ ಪಾದಕ್ಕೆ ಬರೆದೇನು
ಸೂಳೇರ ಕೂಡೆಮ್ಮ ಹೊಡೆಸು ||೬೧||

ಬಾಯಲ್ಲಿ ಆಡಿ ಪಂಥ ಕಾಯದೆ ಹಿಂದಾಗೆ
ಖಾನರೆನ್ನಲಿ ಬೇಡ ನಮ್ಮ।
ತೇಜಿಯ ಹಿಡಿವ ಗುಲಾಮಗೆ ಕಡೆಗಾಣು
ರಾಮ ಶಿರವು ತರದೆ ಬಿಡೆವೊ ||೬೨||

ಆಡುವ ಛಲ ಪಂಥ ಕೇಳುತ್ತ ಸುರಿತಾಳ
ಮುಗುಳು ನಗೆಯಲಿ ನಗುತ ಅಂಥ।
ಸಾವಿರ ಜನಕೋಟಿ ಇಡಲು ಫಲವೇನು
ನೇಮಿ ತಾನೆಂದು ಭಾವಿಪುದು ||೬೩||

ಹತ್ತು ಬಾರಿಗೆ ನಿಮಗೆ ಹೆಚ್ಚಾಗಿ ನಡೆವೆನು
ಚಿತ್ತೈಸಿ ಡಿಳ್ಳಿಗೆ ನೀವು।
ಮತ್ತೊಮ್ಮೆ ವೀಳ್ಯವ ಇತ್ತು ಖಾನರಿಗೆಲ್ಲ
ಹೊಕ್ಕನು ನೃಪನು ನಗರವನು ॥೬೪॥

ವಾರ ನಕ್ಷತ್ರವ ನೋಡಿ ಖಾನರು ಬೇಗ
ರಣಭೇರಿಯ ಸನ್ನೆ ಮಾಡಿಸಲು।
ಸಾಗಲು ದಂಡೆದ್ದು ಭೂಮಿ ಭೋರ್ಗರಿಸಲು
ಕಾವಳಗವಿಯಲು ಧರಣಿ ॥೬೫॥

ಗಿಡಮುಳ್ಳು ಸೆಣಬೆದ್ದು ಕೆರೆಬಾವಿ ಜಲಬತ್ತಿ
ಕದಡಲಿ ನದಿ ಹಳ್ಳ ಬಸಿದು।
ಹಿಡಿಗಲ್ಲು ನುಗ್ಗಾಗಿ ಪೊಡವಿಯುಬ್ಬರಿದ ಹಾಗೆ
.... ॥೬೬॥

ನಡೆವ ದಂಡಿನ ಭರಕೆ ಪೆಡೆ ಬಾಗಿ ಕೂರ್ಮನ
ಎದೆ ಬಿರಿದು ಕರಿಯು ಘೀಳಿಡಲು।
ಹರ ಬಲ್ಲ ರಾಮೊರ್ವ ಅಳಿದನೆಂಬುದ ಕೇಳಿ
ಬರುವ ದಂಡಿನ ಖಾನರ ಭರವ ॥೬೭॥

ಹಿಂದಿನ ದಂಡಿಗೆ ಮುಂದಿನ ಪಾಳ್ಯಕೆ
ಒಂದೆರಡು ಯೋಜನೆ ಇಳಿಯೆ।
ಮುಂದಲ ತುರಗಕ್ಕೆ ಪಾಣಿ ಅಚ್ಚದ ಹುಲ್ಲು
ಹಿಂದಣ ತುರಗಕ್ಕೆ ಲದ್ದಿ ॥೬೮॥

ವಿಪರೀತಮಯವಾಗಿ ನೇಮಿಖಾನರ ದಂಡು
ನಡೆಯಲು ನೂರಾರು ಪಯಣ।
ಯಮನ ನದಿಯ ದಾಂಟಿ ತೊರಗಲ್ಲ ನಿಧಿಗಿಳಿದು
ಹದಿನೈದು ಪಯಣವ ಕಳೆದು ॥೬೯॥

ಧರಣಿಯು ಮೊರೆದಂತೆ ಬರುವ ದಂಡಿನ ಮುಂದೆ
ಅಪಶಕುನ ತೋರುವುದ ಕೇಳಿ।

ಮದಮುಖದ ಖಾನರಿಗೆ ವಿಧಿವಾಸ ಕಡೆಯದು
ಒದಗೂ ಸೂಚನೆಯು ಕೇಳಿ ||೨೦||

ಕಾಗೆ ಹದ್ದುಗಳಾಡೆ ಏಳು ಲಕ್ಷದ ಮೇಲೆ
ತೀರಿತು ಛಲ ನಿಮ್ಮದೆನುತ।
ಸೇರರು ಹಿಮ್ಮರಳಿ ಮನೆಯಾಗಿದೆ ಯಮಪುರದಿ
ಸೇರುವರು ಒಂದಿನದೊಳಗೆ ||೨೧||

ಹೋರು ಮಾಡಿದ ಖೂಳ ದಕ್ಷ ಕೋಟಿಯ ಕೂಡಿ
ಕಾಳದೈತರ ಕೂಡಿಕೊಂಡು।
ರೂಢೀಶನೊ ಪುತ್ರ ಗರಭನಂದದಿ ರಾಮ
ನೀಗುವ ಲಕ್ಷ ಜೀವರನು ||೨೨||

ಕೌರವ ನವಕ್ಷೋಣಿ ಐವರೊಳು ಹತವೆಂದು
ವನಜಸಂಭವನ ಅಂಕಿತವು।
ನರ ರಾಮನ ಕರದೊಳು ಲಯ ಮೂರು ಲಕ್ಷೆಂದು
ಯಮನ ಭಾಗದ ಪಲ್ಲಿ ನುಡಿಯೆ ||೨೩||

ಜಾನಕಿಯ ಪ್ರಿಯನಿಂದ ರಾವಣನ ನವಕೋಟಿ
ಹಾನಿಯಾದಂತೆ ದೈತ್ಯರು।
ಖಾನ ತನುವೆಲ್ಲ ರಾಮನೊಳು ಹತವೆಂದು
ಕೂಗಲು ಬಳ್ಳ ಇಂದ್ರದೊಳಗೆ ||೨೪||

ಯಮನ ವಾಹನದಂತೆ ಮದಮುಖದ ಖಾನರು
ದಂಡ ನಡೆಸಬೇಕೆನಲು।
ಆ ನೇಮಿ ಮೊದಲಿವರು ಕಂಡಿಲ್ಲ ರಾಮನ ಸುದ್ದಿ
ಇದಕೊಂದು ದೃಷ್ಟಗಳ ನೋಳ್ಪ ||೨೫||

ಕರೆಸಿದ ಖಾನರ ಸದರಿಗೆ ನೇಮಿಯು
ಹರುಷದಿಂದೆಲ್ಲ ಕುಳ್ಳಿರಿಸಿ।
ಸನುಮಾನ ಬಿಡುವಿರೊ ಹೊರಡೆದ್ದು ನುಡಿವಿರೊ
ತನಗೆ ತಿಳಿದದನೊಂದ ಪೇಳೆ ||೨೬||

ಆಡಯ್ಯ ಎಲೆ ಮಂತ್ರಿ ರಾಮನ ಕೊಂದುಂಟು
ಪ್ರಾಣ ಮಿಕ್ಕುಳಿದು ಬಂದವನು।
ಭೇದಿಸುವುದು ಕೆಳಗೆ ರಾಮನ ಕುಮ್ಮಟದ
ಹಾದಿ ಎಂದರೆ ಪೇಳು ಎನಗೆ ॥೭೭॥

ಗಹಗಹಿಸಿ ನಗುವರು ಖಾನರು ಕರ ಹೊಡೆದು
ಮೂಳ ರಾಮನ ಘನವೇನು।
ರಾವಣನ ಸಾಹಸದಿ ತರಿಸಿದ ಜಾನಕಿಯ
ಪ್ರಾಣಕಾಂತಗೆ ಮಿಕ್ಕವನೆ ॥೭೮॥

ತಿಳಿದಿಲ್ಲ ನರ ಚಂದ ಜನಸ್ಥಾನದ ಬಗೆಯ
ಹರನಿಂದ ಪಡೆದು ಬಂದಿಹನು।
ಅಳಿದಿಹನೊ ಇಲ್ಲವೊ ಸುಳಿವ ನೋಡುವ ಬನ್ನಿ
ಟಗರು ಹುಂಜಗಳನು ತರಿಸಿ ॥೭೯॥

ತರಿಸೆಂದು ಖಾನರು ಸನುಮತಬಡಲಾಗ
ಹಿಡಿತನ್ನಿ ಎನಲು ಚರರೊಡನೆ।
ಮದಪ್ರಾಯವಾದಂಥ ಜಗಳದ ಟಗರಿಗೆ
ಇಡಿಸಿದರು ಸುರಿತಾಳನ ಹೆಸರು ॥೮೦॥

ತರಿಸಲು ಮತ್ತೊಂದು ಎಡವಿ ಬೀಳುವ ಕುರಿಯ
ಕರೆಸಲು ರಾಮನ ಹೆಸರ।
ಅದಕಿದು ಜೋಡೆಂದು ನಗುತ ಖಾನರು ಆಗ
ಟಗರನು ಕಾಳಗಕೆ ನಿಲಿಸಿದರು ॥೮೧॥

ಆಂತಿದ ಕಾಳಗಕೆ ಎರಡು ಟಗರನು ನೂಕೆ
ಜಗ್ಗಿಸಿ ಹಿಂದಕೆ ಪಿಡಿದು।
ಬೊಬ್ಬೆ ಆರ್ಭಟದೊಳು ಭೋರ್ಗರೆದು ಟಗರನು ನೂಕೆ
ನಗುತಿರ್ದ ಖಾನರು ಬೆರಗಾಗಿ ॥೮೨॥

ನಾಲ್ಕು ಸನ್ನೆಯ ಮೇಲೆ ಹೂಂಕರಿಸಿ ರಾಮನ ಟಗರು
ಹಾಕಿತು ಎದೆ ಮುರಿವಂತೆ।

ಕೋಪ ಬಂದಿತು ತಮ್ಮ ಭೂಪನಳಿವನು ಎಂದು
ಆ ಟಗರು ಆ ಕಡೆಗೆ ಎಳೆದೆಯೋ ||೮೩||

ಏನು ಚೋದ್ಯವೊ ಕಾಣೆ ಏಳೂರದ ಬಕರಿ
ಕೋಣನಂದದ ಟಗರ ಕೊಂದು।
ಖಾನರ ಕಳೆ ಕಾಂತಿ ಸಾವು ಮೋರೆಗಳಾಗಿ
ಮಾತಾಡುವ ನೂರರು ನಿರದಿಹರು ||೮೪||

ನೂರಾರು ಕೋಳಿಯ ಈಡಾಡಿದ ಹುಂಜನ
ರಾಯ ಸುರಿತಾಳನೆಂದು।
ಕಾಳಗನರಿಯದ ಕೊಚ್ಚೆ ಹುಂಜನ ತಂದು
ರಾಮನ ಹೆಸರ ಕರೆಸಿದರು ||೮೫||

ಸಾಣೆಯ ಹಿಡಿಸಿ ತಿದ್ದಿದ ಚೂರಿ
ಸುರಿತಾಳನ ಹುಂಜಕ್ಕೆ ಕಟ್ಟಿ।
ಮಸೆಯದ ಮೊಂಡಾದ ಕಿಲುಬು ಚೂರಿಯ ತಂದು
ರಾಮನೆಂಬುವದಕೆ ಕಟ್ಟಿ ||೮೬||

ಹುಂಜ ಎರಡನು ರಾಯರು ಬಂಧಿಸಿ ಬಿಡಲಾಗ
ಮಂಡೆಯ ಕೂದಲು ಕೆದರಿ।
ಒಂದೆರಡು ಸನ್ನೆಯ ಮುಂದಲೆಯನಿತ್ತಾಡಿ
ಲಂಗಿಸಿ ಹರಿವಾದವು ತಲೆ ||೮೭||

ಏರಲು ರಾಮನ ನಾಮದ ಹುಂಜಿಗೆ
ರೋಮ ರೋಮಗಳು ಸರಳಾಗೆ।
ಹಾರಲು ಬಂದರೆ ಜಾಡಿಸಿ ಎದೆ ಕೊಟ್ಟು
ಸೀಳುವಂದದಿ ಒಡೆದು ಕೆಡಹೆ ||೮೮||

ಕೋಳಿಯ ಕಾಳಗವ ಖಾನರೆಲ್ಲರು ನೋಡಿ
ಆನೆಯ ಮದವಿಳಿದ ತೆರದಿ।
ಧ್ಯಾನಿಸುತ ಮನದೊಳು ಪ್ರಾಣನಕ ಪೋಗಿನ್ನು
ರಾಣಿಸುತರೊಳಗೆ ಸಂಚರಿತೆ ||೮೯||

ಮರಳುವ ಬಗೆಯಲ್ಲಿ ಇಟ್ಟುದಾಕ್ಷಣ ನೋಡೆ
ಇರುವನು ರಾಮನೆಂಬುವರು।
ಬರಬಾರದಾಗಿತ್ತೆ ಸುರಿತಾಳನೆಡೆಯೊಳು
ಘನ ಪಂಥವಾಡಿದೆವೆನುತ ||೯೦||

ಮೌನದಿ ಇರುವಂಥ ಖಾನರ ಮುಖ ನೋಡಿ
ನೇಮಿಗೆಲ್ಲ ಕುಡಿಸಿದನು।
ಹೋಗಿಲ್ಲ ರಾಮನ ಕಾಣದೆ ಕಾಯವ ತಾ
ಭೇದಿಸಿದೆ ನಿಮಗೆಲ್ಲ ಕೆಳಗೆ ||೯೧||

ಕುಣಿಯಲರಿಯದಂತೆ ತೋರದವನ ಕಂಡು
ಬೆದರಿದರೆ ನಾವೆಲ್ಲ ಟಗರು।
ಮುರಿದ ಬಗೆಯನು ನೋಡಿ ತವಸಿಗಳಾದವರು
ತಡೆವುದು ದಿಟವೆ ಅವನಿರಲು ||೯೨||

ಟಗರ ಹುಂಜನು ಮುರಿದ ಬಗೆಯ ನೋಡೈ ನೇಮಿ
ನಗೆಗೀಡಾಗದೆ ಬ್ಯಾರೆ ಬಿಡದು।
ಗಿರಿಜೆಯ ರಮಣನ ವರಕೃಪೆ ಅವಗುಂಟು
ಮರಣವಾದುದು ಹೇಗೆ ಕಾಯ ||೯೩||

ಪೇಳಯ್ಯ ಇದಕೆಂದು ಏನು ಕಷ್ಟವ ಮಾಳ್ಪ
ಪ್ರಧಾನಿಗಳರಸ ಗಂಭೀರ।
ಹೋಗುವದೆ ಘನ ನಮ್ಮ ಮಾನಾಭಿಮಾನವನು
ಕಾಣುವ ತೆರ ನಮ್ಮ ಕೀರ್ತಿ ||೯೪||

ಆಗಲೆ ಇದ ನೀನು ತೋರಿರಲು ಸುರಿತಾಳ
ನೋಡವ ಮನಕೆ ಸಂತೈಸಿ।
ಈಗ ಬರೆಸಲು ನಾವು ಹೇಡಿಗಳು ಎಂದೆಂಬ
ಮೋರೆಯ ನೀರನಿಳಿಸುವನು ||೯೫||

ಹೆದರಿ ಹೋಗಲು ಭಾವಿ ಮುಂದೆ ಹೋಗಲು ಡೊಗರು
ತಂದ ಕಂಟಕ ಮೊದಲು ನಮಗೆ।

ಸಂದೇಹಗೊಳಬ್ಯಾಡಿ ಬರೆಸಿ ನೋಡುವೆ ಜಿತ್ತಿ
ರಾಜೇಂದ್ರ ಸುರಿತಾಳ ತಿಳಿವಂತೆ ||೯೬||

ಬರೆಯಲು ಕಾಗದವನು ಸುರಿತಾಳ ಬಿರುದಿಟ್ಟ
ತೋರಿದ ನತದೃಷ್ಟನೋಲೆಯ।
ನಾನಾವ ನರದ ಮೇಲೆ ಹಲವು ಜಿತ್ತಿಯ ಮಾಡಿ
ಜೋಡೆರಿಗಿತ್ತು ಹೋಗೆನಲು ||೯೭||

ಬಂದಾಗ ಜೋಡೇರು ತಂದು ಕಾಗದವಿತ್ತು
ರಾಜೇಂದ್ರಗೆ ಕರಗಳ ಮುಗಿಯೆ।
ಕಾಗದವನು ಒಡೆದು ನೋಡುತ ಸುರಿತಾಳ
ರೂಢಿಸಲು ಕಾಲಾಗ್ನಿ ಕಿಚ್ಚು ||೯೮||

ನೇಮಿ ಮಾಡುವ ಬಿನ್ನಹ ಹರುಷದಿ ಪಾಶ್ಚಯಗೆ
ನೋಡಿದೆವು ಒಂದು ಶಾಸ್ತ್ರಗಳ।
ಹೇಡಿಯೆಂಬಾ ಕುರಿ ತಂದು ರಾಮನ ಹೆಸರಿಡಲು
ಓಡಿಸಿತು ಗಂಭೀರ ಟಗರ ||೯೯||

ಅಳಿದು ಇಲ್ಲವು ರಾಮ ಮಡಗಿನ್ನು ಲೋಕದಿ
ಹರಿವಂತೆ ಮಾಡಿ ಸುದ್ದಿಗಳ।
ಬರಮಾಡಿ ಕರಸೆಮ್ಮ ಕುರಿಗಳನರಿವಂತೆ
ಕೊರೆಯಬೇಕೆಂದು ಮಾಡಿದರು ||೧೦೦||

ವಿವರವನು ಪಾದಕೆ ಬರೆಸಿದೆವು ಮಾಡೆನಲು
ತಾ ಬೇರೆ ಹೆದರೆ।
ಹೀನಾಯ ಅಪಕೀರ್ತಿ ಪಾದಕಲ್ಲದೆ ಶ್ವಾನ
ಮೊಳ ನೋಡದೆ ಮುರಿದಾನೆಂದು ||೧೦೧||

ಛಲಪಂಥವಾಡಿದ ಮೊನೆಗಾರ ಕಾಣರು
ಎಲ್ಲ ಇಳಿದರು ಭೂಮಿಗೆ ರಾಯ।
ಬೊಗಳಲಮ್ಮದ ನಾಯ ಬೇಂಟೆಯ ಕರೆದೊಯ್ಯೆ
ಹುಲಿಯ ಕಾಣಲು ನಿಲ್ಲುವುದೆ ||೧೦೨||

ಹೆಂಬೇಡಿ ನೇಮಿಗೆ ಹೆಸರೊಂದು ಕೆಡಿಸಿತು
ಹಂದಿಯಂದದಿ ಒಡಲ ಬೆಳೆಸಿ।
ದಂಡೆದ್ದ ಪಾಶ್ಚಾಯ ಬೆದರಿ ಓಡಿದನೆಂದು
ನಿಂದೆ ಬಿಡದು ಧರೆಯೊಳಗೆ ॥೧೦೩॥

ನಡೆ ಮುಂದೆ ದಂಡನು ಹೊಡೆಸುವೆ ತಂದೇಳೆ
ಸುಡು ನಿಮ್ಮ ಖಾನರ ಜನ್ಮ।
ಬರೆದು ಲೇಖನವನು ಬದಲು ಊಳಿಗ ಬಂದು
ಹೊಡೆದು ಎಬ್ಬಿಸು ಬೇಗ ದಂಡ ॥೧೦೪॥

ಖಾನ ಖಾನರನೆಲ್ಲ ನೀರ ಮುಖದಿಂದಿಳಿಸಿ
ಹೀನ ಸ್ವರದ ಕಾಗದ ಕಳುಹಿ।
ಕಾಗದವನು ಓದಿ ಹೇಳಲು ಎಲ್ಲರು
ಥಲಪಂಥ ರೂಢಿಸಿ ಕೋಪಾಗ್ನಿ ॥೧೦೫॥

ಹೊಡೆಯಲು ಗಜಭೇರಿ ಗುಡುಗಿ ಆರ್ಭಟದೊಳು
ನಡೆಯಲು ದಂಡು [ಅಬ್ಬರಿ]ಸಿ।
ವಡಬಾಪೂರ್ವದ ತೆರದಿ ಕಡೆಗಂಡ ದಾಳಿಯೊ
ಸುಡುತ ಭೂಮಿಗಳ ನಡೆಯೆ ॥೧೦೬॥

ಕಡೆ ಮೊದಲಿಲ್ಲದೆ ನಡೆದ ದಂಡಿನ ಸೊಬಗ
ಒಡೆಯ ಬಲ್ಲನು ಲೋಕನಾಳ್ವ।
ಭಯಗಳು ಇನ್ನಿಲ್ಲ ಮನಬಂದಲ್ಲಿಳಿಯುತ
ಮದುವೆ ಮುಂಜಿಗಳ ಮಾಡುತಲಿ ॥೧೦೭॥

ದಂಡಿನೊಳು ಇರುತಿರ್ಪ ಪ್ರಚಂಡ ಸೂಳೆರು ಕೇಳಿ
ಅಂದಣ ಪಲ್ಲಕ್ಕಿ ತುರಗ।
ರಂಭೆಯ ಘನವೇನು ರತಿದೇವಿ ಹಿರಿದೇನು
ಎಂದರು ಉಂಗುಷ್ಠ ಹೊರಳುವರೆ ॥೧೦೮॥

ಕೋಗಿಲೆ ರಾಗದ ಕೋಮಲದ ವೇಶಿಯರು
ಮೇಳದ ಹೆಣ್ಣು ಏಳ್ನೂರು।

ಸೋಗೆಯ ನವಿಲಂತೆ ಮೇಲೆನಿಪ ಕಸಬೆಯರು
ಪಾಚ್ಛಾ ಇಳಿಯಲು ಹರಿದಾರಿ ||೧೦೯||

ಪಿಡಿನಡುವು ಚಂದ್ರನ ಮಿಗಿಲೆನಿಪ ಕಳೆನೀತಿ
ಕರುವಿಟ್ಟು ಎರೆದಂಥ ಭಾವ।
ಮುಗುಳು ಮೊಲೆಗಳ ತೊಟ್ಟು ಸುಗುಣರ ಎದೆ ಸೋಂಕೆ
ಉಗಿವ ತೆರದೊಳು ಬೆನ್ನೊಳಗೆ ||೧೧೦||

ರಾಮಗೆಟು ನಾವಾರೆ ತಲೆಯಕ್ಕ
ಕಾನರು ಶಿರಗಳು ಸುಡಲಿ।
ತೋರದೆ ತನ್ನಯ ಸುಖಸಾರವ ರಾಮ
ಶ್ವಾನನ ಮಾಡಿ ಕರೆದೊಯ್ಯೆ ||೧೧೧||

ಹೆಣ್ಣು ಗೆಲಿದವನಾರು ಅಲ್ಲಮಪ್ರಭು ಹೊರತು
ಹರಿಬ್ರಹ್ಮ ರುದ್ರರು ಗೆಯಿವವರೆ।
ಬಿಲ್ಲಮರಾಯರನು ಗುರು ಲೇಸು ಕಾಂಕ್ಷೆಯನು
ನಲ್ಲಳೆ ಕೇಳರಿಯೆನಲ್ಲಿ ||೧೧೨||

ಗಿರಿವಾಸದೊಳಗೊಂದು ಗವಿಯ ಸ್ಥಾನದೊಳಿರಲು
ಮುನಿಯಲ್ಲಿ ತಪಸಮಾಡುತಿರಲಿ।
ದಿನಕೊಮ್ಮೆ ರಾಯನ ದರುಶನವಾಗದೆ
ಕೊಳಲಿಲ್ಲ ಆಹಾರ ಉದಕ ||೧೧೩||

ಇರುತಲು ಈ ತೆರದಿ ದಿನಚರಿಯಲಾರಭ್ಯ
ಇರಲಾಗ ಡೊಂಬರು ಪುರಕೆ।
ಮಾಡುವ ಶಿವಪೂಜೆ ಮಧ್ಯಾಹ್ನ ಮೂರ್‍ಹೊತ್ತು
ಆಮೇಲೆ ಗುರುವಿನ ಎಡೆಗೆ ||೧೧೪||

ಹರಿದಾರಿ ಹೋಗಿನ್ನು ಗುರುವಿನ ಉಪದೇಶ
ಕೈಕೊಂಡು ಬರಲು ದಿನಕರನು।
ಕಡಲಸ್ಥಾನಕೆ ನಡೆವ ಕಾಯ್ದು ಡೊಂಬರ ಚೆನ್ನಿ
ಇದಕೇನು ಗತಿಯೆಂದು ಚಿಂತಿಪಳು ||೧೧೫||

ಇಷ್ಟೆಲ್ಲವು ಕಾಯೆ ವ್ಯರ್ಥವಲ್ಲದೆ ನಮಗೆ
ಪೃಥ್ವಿದೊರೆಯನು ಕಾಣಲರಿದು।
ಇಂಥವನ ಗುರುವನು ಕತ್ತೆ ಕಾಯ್ಸಿದ ಮೇಲೆ
ಇತ್ತ ಡೊಂಬರ ಚೆನ್ನಿ ಅಲ್ಲ ||೧೧೬||

ಇಟ್ಟಿಳಾಭರಣವನು ಉಂಗುಷ್ಮದಿ ನಡು ನೆತ್ತಿ
ಮುತ್ತು ಮಾಣಿಕ ರತ್ನಗಳ।
ಹೊತ್ತು ರಾತ್ರಿ ನಡೆದಳು ಬಿದ್ದು ಸಾವುತಲಿವಳು
ಬೆಟ್ಟದೊಳಿರುವ ಗವಿಗಾಗಿ ||೧೧೭||

ಮಾಡುವ ಜಾತೊಡೆಯ ಉಗ್ರ ತಪಸನು ನೋಡಿ
ಹೂಡಿದೊ ತನ್ನ ವಿದ್ಯೆಗಳ।
ಆಡುವ ರಚನೆಯೂ ಮೋಡಿಯಿಂದಲಿಯೆ ನವ
ನಾರಿಯ ನೋಡೆ ಮುನಿನರನ ||೧೧೮||

ಯೋಗದ ಜಪತಪ ಹಾರಿಹೋದವೆ ಅಕ್ಕ
ರಾಮನ ಘನವೇನು ಬಿಡು ಎನಲು।
ಬ್ಯಾಡೆನಗೆ ಜಪತಪವು ಕೇಳಿರೆ ಬಿಟ್ಟಿದನು
ಜಾತೊಡೆಯ ಹೋಗನೆ ಚೆನ್ನಿಯೊಡನೆ ||೧೧೯||

ಭೂಮಿ ಸಾಹಸವಿರಲು ಬಾಲೆಯರಗಲುವುದು
ಯೋಗೀಂದ್ರನಾಗೆ ಮುನಿವರನು।
ಕೇಳಿರೈ ಖಾನರು ರಾಮನಿರಲು ನಿಮಗೆ
ಮಣಿಯದಿರಲು ಎಮಗಿರಲಿ ||೧೨೦||

ಸೂಳೆರಾಡುವ ಮಾತು ಕೇಳಿ ಖಾನರು ನೇಮಿ
ಛೇ!ನಮ್ಮ ಬಾಳುಗಳು ಸುಡಲಿ।
ಬಾಳು ರಂಡೆರಿಗಿನ್ನು ಕಡೆಯಾಗಿ ಹೋದೆವು ಎಂದು
ತೋರಲು ಎಲ್ಲರಿಗೆ ಛಲವು ||೧೨೧||

ಈಗ ಆಡಿದ ಮಾತ ಇನ್ನಾಡಬೇಡೆಲೆ ಲೌಡಿ
ಹೋಗಿ ಮುಟ್ಟಲು ಪಾಶ್ಚಯಗೆ।

ಛೇ! ಎಂದು ಏರಲು ದಕ್ಷಿಣದ ಮೂಲೆಗೆ
ಭೂಮಿ ದೊರೆಗಳು ಎದುರು ಬರಲು ||೧೨೨||

ರಾಯ ರಾಮನ ಕಾಯ್ದು ವಾಲೈಸುವ ದೊರೆಗಳ
ನೇಮಿ ಕಂಡು ಕರ ಮುಗಿದು।
ಏನಿರೈ ದೊರೆಗಳು ರಾಮನಳಿದುದು ನಿಜವೆ
ತೋರುತಿಹುದು ನಿಜಕರವು ||೧೨೩||

ಛಂದವಾದುದು ಕೇಳು ಮಂದಿ ಪಾಶ್ಚಯ ನಿಮ್ಮ
ಕುಂದಿ ಬಿಡುವುದು ತಲ್ಲಣಿಸಿ।
ಇಂದಿಗೆ ತಿಂಗಳು ಕಂಡನು ಯಮನೂರು
ಹೊಂದಿದ ಮುದಿಮೂಳ ಮನೆಯ ||೧೨೪||

ದಂಡ್ಯಾಕೆ ಈ ಬಗೆಯ ರಂಡೆ ಕಂಪಿಲನಿಗೆ
ಒಂದು ದಿನ ಬ್ಯಾಡ ತುಂಬೆನಗೆ।
ನಿಂದು ನೋಡೈ ನೀನು ನಿಮಿಷ ಮಾತ್ರಕೆ ಪುರವ
ತಂದು ಇಡುವೆ ನಿಮ್ಮ ಬಳಿಗೆ ||೧೨೫||

ದಾರಿ ಕಾವೆವೆ ನಿಮ್ಮ ಬೇರ ಕೀಳ್ವೆವು ಅವನ
ಪಾಶ್ಚಗೆ ಹೆದರಿ ತಡದೇವು।
ರೂಢಿಯ ನೃಪರಾಡೊ ಬೀರ ಬಿಂಕವ ಕಂಡು
ಖಾನರು ಎದ್ದು ಕಲಿಯಾಗಿ ||೧೨೬||

ಮುನ್ನೂರು ಗಾವುದವ ಮೂರು ತಿಂಗಳೊಳಗೆ
ವಾರುಧಿ ಭೀಮರತಿಗಿಳಿಯೆ।
ಯಾವಲ್ಲಿ ರಾಮನ ಸೀಮೆ ಹೊಲಬನೆ ಕಂಡು
ಹೊಕ್ಕು ಹಿಡಿಯಲು ದನ ಕುರಿಯ ||೧೨೭||

ಭೀಮ ರಾಮನು ಅಳಿಯೆ ನೇಮಿ ಮೂಳನು ಬಂದ
ಓಡುವ ಫಲಬಂತೆ ತಮಗೆ।
ಸಾಯಬಹುದೆ ಮುನ್ನ ಧರಣಿಪಾಲರ ಮಿಂಡ
ನಮ ಗೋಳು ತಟ್ಟಲು ಕಂಪಿಲಗೆ ||೧೨೮||

ಏಳು ಗೂಳ್ಯವು ಭೂಮಿ ಭೂಮಿಗಳು ತಲ್ಲಣಿಸೆ
ಇವರಿಪ್ಪ ಪುರವನು ಬಿಡುವ।
ಜೀವೊಂದು ಉಳಿದರೆ ಸಂಪಾದಿಸಬಹುದೆಂದು
ನಾಡ ರಾಜ್ಯಗಳೆಲ್ಲ ನಡೆಯೆ ||೧೨೯||

ವಾಣಿಜರು ವೈಶ್ಯರು ಜೋಗಿಗಳು ಕೊಂಕಣರು
ನಾನಾವರ್ಣದ ಜಾತಿಗಳು।
ಏನು ಬಂದುದೆ ನಮಗೆ ಕಾಲನ ಸುತನನುಜ
ಭೀಮ ರಾಮಳಿಯಲು ಗೂಳ್ಯ ||೧೩೦||

ಕಾಡ ಹಾಲೆಯ ಸೊಪ್ಪ [ಓ]ಡಿಲಿ ಹುರಿತಿಂಬ
ಬ್ಯಾಡ ನಾಯ್ಕರ ಗೂಳ್ಯೆ ನಡೆಯೆ।
ನಾಯಿ ಹಕ್ಕಿಯ ಗೂಡು ಕೋವಿ ಈಟಿಯ ಹೊತ್ತು
ಭಯ ಬಿದ್ದು ಕೆಡೆದು ಓಡುವರು ||೧೩೧||

ನೇಮಿಖಾನನ ದಂಡು ಬರುವಂಥ ರಭಸಕ್ಕೆ
ರಾಮನ ಸೀಮೆಯ ಒಳಗೆ।
ಹೆಬ್ಬಲೆ ಕಾವಲೆ ಮರವಲೆ ಕೈಯ್ಯಲ್ಲಿ
ಗುಬ್ಬಿಯ ಹಕ್ಕಿಯ ಬಲೆಯ ||೧೩೨||

ಅಡಿಗಲ್ಲು ತಿದಿಮುಟ್ಟು ಹಿಡಿವಾಯಿ ಕುಳಚಾನ
ಹೊಡೆವ ಚಮ್ಮಟಿಗೆ ಸುತ್ತಿಗೆಯ।
ಜಡಿವ ಮೊಳೆಗಳು ಗುಜ್ಜ ಕಡೆವ ಬೈರಿಗೆ ಹೊತ್ತು
ನಡೆಯಲು ಕಮ್ಮಾರ ಗೂಳ್ಯೆ ||೧೩೩||

ಕೊಡತಿಗಳು ಕೈಬಾಚಿ ತೆಳುವಾಯಿ ಚೀರ್ಣದ
ನಯನಾರ ಮಾಡಿ ಕೈಬಾಚಿ।
ಕಡಿವ ಕೆಲಸದ ಮಟ್ಟು ಹರಿವ ಗರಗಸ ಹೊತ್ತು
ಕಡೆಗೆ ಪಂಚಾಳರು ನಡೆಯೆ ||೧೩೪||

ನಾಲ್ಕು ದೇಶವ ಹೊಕ್ಕು ವ್ಯಾಪಾರ ಮಾಡುವ
ಬೇಕಾದ ದಿನಿಸ ತರುವರಿಗೆ।

ಹಾಕಿದ ಕನ್ನಡಿ ಹಸುಬೆ ಚೀಲವ ಹೊತ್ತು
ದೇಶದವರ ಗೂಳ್ಯೆ ನಡೆಯೆ ||೧೩೫||

ಹಲಗೆ ಹಲವು ಕುಂಟೆ ಎಳೆವ ಕುಂಚಿಗೆ ಉಳಿ
ಮಗ್ಗದ ಅಚ್ಚು ಬಡಿಗೋಲು।
ಎದ್ದರು ಮೊದಲಾಗಿ ಬುದ್ಧಿಯೆಂಬುದ ಕೇಳಿ
ಮಗ್ಗದವರು ಗೂಳ್ಯೆ ನಡೆಯೆ ||೧೩೬||

ಕುರಿಯ ಹಿಂಡನು ಮುಂದೆ ಕರೆವುತ ಗೊಲ್ಲರು
ಮರಿಗಳ ಹೊತ್ತು ತಲೆ ತುಂಬಿ।
ಮರಿಕಾಷ್ಠ ನಡೆಮುಂದೆ ಹೆದಕಲ್ಲ ಹಳೆಗೆರವು
ಬರುತಿದೆಂಬರು ನೇಮಿಯ ||೧೩೭||

ಅಚ್ಚೇರು ಅರೆಪಾವು ಒಚ್ಚೆ ಸೇರಿಕ ಚಿಟ್ಟೆ
ಪೂರ್ವವು ದುಡ್ಡಿನ ಸೊಲಿಗೆ।
ಹೊತ್ತು ಎಣ್ಣೆಯ ಬುರುಡೆ ದಿಕ್ಕುದೇಶವ ಬಿಟ್ಟು
ಮತ್ತೆ ಗಾಣಿಗರು ಓಡುವರು ||೧೩೮||

ರಾಟಿ ಕದರನು ಹಂಜಿ ಊಟದ ಹರಿವಾಣ
ಸಕಲಾಪುಗೂಡೆ ಬತ್ತಿಗಳು।
ಕೋಟಲೆಯ ಕಾಣದ ಕುಡಿಕೆ ರೊಕ್ಕವ ಹೊತ್ತು
ರಾಟಿ ಮಂಡೆರ ಗೂಳ್ಯೆ ನಡೆಯೆ ||೧೩೯||

ಲಕ್ಷದಾಜವನೆಲ್ಲ ಇಟ್ಟು ಒಡಲೊಳು ತಮ್ಮ
ಉಟಿಗೆ ಕೊಡಮ್ಮ ಬಳವು।
ಕೋಟಲೆಯ ಕಾಣದೆ ಸುಖದ ಭೋಜನವುಂಡು
ಜಾತಿ ಬ್ರಹ್ಮರು ಗೂಳ್ಯೆ ನಡೆಯೆ ||೧೪೦||

ಕಾನಮ್ಮ ಕೂನಮ್ಮ ತಾವರೆ ಲಿಂಗಮ್ಮ
ನೇಮಿ ದಂಡಿದು ಬಹುದಂತೆ।
ದಾರು ಮುಟ್ಟಿರೆ ಕಾಣೆ ಶ್ಯಾನುಭಾಗರ ಸತಿಯು
ವಾರ್‍ಯಾಗಿ ಎಂದು ಓಡುವರು ||೧೪೧||

ಶಂಖು ಜಾಗಟೆ ಝಲ್ಲಿ ಕಂಕುಲೊಳು ಭವನಾಶಿ
ಲೆಂಕ ಹನುಮನ ತಾಳಿ ಶಿರದಿ।
ವೆಂಕಟೇಶ್ವರ ಬಲ್ಲ ಯಮನ ಕಾಟಗಳನು
ರಂಗ ಕಾಯೆನುತ ಓಡುವರು ॥೧೪೨॥

ಮನೆಯ ಬದುಕನು ಎಲ್ಲ ಮೂಳ ಕತ್ತೆಗೆ ತುಂಬಿ
ಚವುಳು ಬಾನಿಯನು ತಾ ಹೊತ್ತು।
ಒಡಿಯವನು ಮಡಿ ಮನೆಗೆ ಗುರುತ ತಾ ತೆಗೆದಿಡುವಂಥ
ಅಗಸರ ಗೂಳ್ಯೆವು ನಡೆಯೆ ॥೧೪೩॥

ಜಂಗು ಜೋಳಿಗೆ ಬಿಟ್ಟು ಉಲಿರಿಗೆ ಮಾಲಿಕೆ ಜಪದ
ದಂಡದ ಕೋಲು ಬಲಗೈಯ್ಯ।
ಸಂಗಮೇಶ್ವರ ಬಲ್ಲ ಸಾವುದೆ ಸುಖವೆಂದು
ಜಂಗಮದ ಗೂಳ್ಯೆವು ನಡೆಯೆ ॥೧೪೪॥

ಕುರುಬರ ವಿಪರೀತ ಬೀರಯ್ಯ ತಾ ಬಲ್ಲ
ಹರನೆಯಿದ ಕಂಬಳಿ ತುಬುಟಿ।
ಸುಡು ನಮ್ಮ ಬಾಳನು ಹೊಡ ಕುರಿಯ ಕೋಳಿಯ ಇಂಥ
ಪಡಿಪಾಠ ಕಂಡವರಿಲ್ಲ ॥೧೪೫॥

ನಾಡ ಸೂಳೆಯರೆಲ್ಲ ನೋಡಾ ತಾ ಒಬ್ಬನ
ಕೂಡದೆ ಕೆಟ್ಟೆವೆಂದೆನುತ।
[ಮಿಂ]ಚಾಗಿ ಇರುವಾಗ ಊರೆಲ್ಲ ನಂಟರು
ಆಗ ಮಾತಾಡುವರೆಲ್ಲ ॥೧೪೬॥

ಪೋದೇಮಿ ಲೇದಯ್ಯ ಪಡಾಯ ಭೂಮಂತಾ
ನೇಮಿ ವಂಚಮಿಂದ ಕೊಡಕೂ।
ನಾಡೆಲ್ಲ ಬಂಡಾಗಿ ಅಭಿಮಾನ ಉಳಿಬೇಕೆನುತವು
ಪಡಾಯ ಬಡುಕಂತ ಪೋಗಿ ॥೧೪೭॥

ವೇದದ ಪೆಟ್ಟಿಗೆ ಓದುವ ಪುರಾಣ
[ನೋಡು]ವ ಪಂಚಾಂಗ ಸುಡಲಿ।

ಜೋಡಿಸಿಕೊಂಬೋಣ ಜೀವ ಉಳಿದರೆ ನಮ್ಮಯ
ಗ್ರಾಮ ಮನೆಗಳ ಸೇರಿದಲ್ಲಿ ||೧೪೮||

ಬಂಡಿ ಬಲಗೋಲನ್ನು ತುಂಬಿನ್ನು ಮನೆ ಬದುಕ
ಹಿಂಡು ಎಮ್ಮೆಗಳನು ಹೊಡೆದು।
ಹೆಂಡರು ತಲೆ ತುಂಬ ಹಂಡಿಗೂಡೆಯ ಹೊತ್ತು
ಹಿಂದೆ ಸಾಗಲು ಗೌಡ ಪ್ರಜೆಯು ||೧೪೯||

ಮಾಡದ ಮನೆ ಬದುಕು ಕೋಣ ಕೊಂಕಿಗೆ ತುಂಬಿ
ಸಾಗಲು ಅನ್ನ ಚೊಕ್ಕಡಿಗೆ।
ಬೀರು ಹಲ್ಲಿನ ಮಲೆಯೋಳೆ ಬಂದನು ನೇಮಿ
ಮೇಲು ಸಕ್ಕರೆ ಗೂಳ್ಯೆ ನಡೆಯೆ ||೧೫೦||

ತೆಲುಗರು ತಿಗುಳರು ಎಡಗಯ್ಯ ಹರಳರು
ಬಡವರು ಭಾಗ್ಯ ಕೊಂಕಣರು।
ಗಿಡ ಮೆಳೆಯನು ಬಿದ್ದು ಅಡವಿಗೊಬ್ಬರು ಆಗಿ
ಕೆಡೆದೋಡಿ ಮಲೆದೇಶ ಬಿದ್ದು ||೧೫೧||

ಓಡಲು ಗೂಳೆವು ಕಾಡು ಕಮ್ಮರಿ ಬಿದ್ದು
ಜೀವೆಲ್ಲಿ ಉಳಿವುದೆ ತಮಗೆ।
ತೀರಿತೆ ಗಳಿಸಿದ ದನ ಕೂಡೆ ಆನೆ
ಸೇರಿತೆ ಖಾನರ ಕೈಯ್ಯ ||೧೫೨||

ಹಟ್ಟಿ ಕಣಜ ಹಗೆಯಾದ ರಸವ ಬಿಟ್ಟು
ಹೊತ್ತೇವೊ ಗೂಡೆ ತಲೆ ತುಂಬ।
ನಿತ್ಯವು ತಮಗೆಂದು ಭಿಕ್ಷ ನೀಡದೆ ಗಳಿಸಿ
ಕೊಟ್ಟರು ಬರುವಾ ಭಾವನಿಗೆ ||೧೫೩||

ಭೂಮಿ ಚಂದ್ರುಳ್ಳನಕ ಕಾಯಗಳು ಸ್ಥಿರವೆಂದು
ನಾವು ಉಣ್ಣದೆ ಗಳಿಸಿದೆವು।
ಹಾಲು ಬೆಣ್ಣೆಯ ಮಾರಿ ಹಳೆಯ ನಾಣ್ಯವನಕ್ಕ
ಮೂರು ಪಡಿ ಆಗೋವು ಅಳದಾರೆ ||೧೫೪||

ನಿತ್ಯವೆಂಬುತ ನಾವು ಉಪ್ಪು[ಸ]ದಪ್ಪೆಯನುಂಡು
ತುತ್ತಿಗೆ ತುತ್ತು ಅರೆಮಾಡಿ।
ಬೆಟ್ಟಕ್ಕೆ ಜೇನಿಟ್ಟು ವ್ಯಾಧನು ತಿಂದಂತೆ
ಅರ್ಥವ ಗಳಿಸಿನ್ನು ಹಾಳು ॥೧೫೫॥

ಕೊಟ್ಟೇವೆ ಮನ[ವಾರೆ] ಮನಮುಟ್ಟಿ ಧರ್ಮಕೆ ನಾವು
ಇಕ್ಕಿ ಎರೆದೇವೆ ಪರಹಿತಕೆ।
ಸತ್ತರೆ ಸ್ವರ್ಗದ ಫಲಪ್ರಾಪ್ತಿ ದೊರೆವುದ ಕಾಣೆ
ಕುಟ್ಟಿಕೊಂಬರು ಬರಿ ಬಾಯ ॥೧೫೬॥

ಕಡಲುಕ್ಕಿ ಬರುವಂತೆ ನಡೆಯಲು ರಾಮನ ಪಡೆ
ರಾಜ್ಯವೆಲ್ಲ ಭೋರೆನುತ।
ತುರಕರ ದಂಡೆಲ್ಲ ಹಿರಿಯ ಶರಧಿಯ ದಾಂಟಿ
ಕಪ್ಪತರ[ಳ್ಳಿ]ಗೆ ಬಂದು ಇಳಿಯೆ ॥೧೫೭॥

ಬಂದೆವು ರಾಮನ ಹೊಂದಿ ರಾಜ್ಯ[ದ] ಬುಡಕೆ
ಕಂಡ ಬಟ್ಟೆಯಲಿ ಹೋಗಬೇಡಿ।
ಕಂಡಿಲ್ಲ ನೆಲೆಯಾಗಿ ಸಂದ ಮಾತಿನ ನಿಜವ ಹೀ
ಗೆಂದು ಹೇಳಿಸಿದ ಎಲ್ಲರಿಗೆ ॥೧೫೮॥

ಖಾನರ ಗಡಣೆಯನು ಪೇಳುವರೆ ಅಳವಲ್ಲ
ತೂಗುತ ಮದದ ಜಯದೊಳಗೆ।
ಅಚ್ಚಾರೇ ಮರಗಯಾ ರಾಮ ಲವಡವ ತಿಂದ
ಏರಲು ದೌಡಿನ ತುರಗ ॥೧೫೯॥

ಏರಲು ಎಂಬತ್ತು ಸಾವಿರ ತುರಗವು
ರಾಮನ ರಾಜ್ಯಕ್ಕೆ ದಾಳಿ।
ಯಾವಲ್ಲಿ ಗೂಳ್ಯವ ತಾವು ಹೆಚ್ಚಲು ಹೋಗಿ
ಕೊಳ್ಳೆ ಹೊಡೆಯಲು ಒಂದು ಕೋಟೆ ॥೧೬೦॥

ಗಡಿಯ ಕಾವಲು ಮಂದಿ ಕಣಿವೆ ಕಂಡಿಯ ಹಿಡಿದು
ತಡೆಯಲು ಬರುವಂಥ ಕೇಳಿ।

ಕಡಿ ಕಡಿಯೆನುತಲಿ ಇತ್ತ ರಾಜ್ಯ .... ಕಟ್ಟಿ
ಹೊಡೆಯಲು ನೂರಾರು ಕುದುರೆ ||೧೬೧||

ರಾಮ ಅಳಿದನು ಎಂಬ ಪ್ರೇಮದಿಂ ಬಂದರೆ
ಅ[ತು]ಕೊಂಬೆವು ಇಕ್ಕಿ ಹೆಜ್ಜೆ।
ಲಾಯದ ಮಲ್ಲಣ್ಣ ಲಗಡನಂದದಿ ಹೊಕ್ಕ
ಸಾವಿರ ಕುದುರೆಯ ಹಿಡಿದ ||೧೬೨||

ಕಾಣದೆ ತುರುಕರು ಹಾದಿಯ ಹೊಲಬನು
ಕಾ[ನನಕ್ಕೆ] ಬಿದ್ದು ಕಣ್ಣೆಟ್ಟು।
ಯಾವಲ್ಲಿ ತಲೆದೋರೆ ಎಸೆವ ಪೆಟಲು ಅಂಬು
ಕೋಳಬಟ್ಟರು ಹೋಗಗೊಡದು ||೧೬೩||

ನೇಮಿ ಹೇಳಿದ ಮಾತ ಕೇಳದೆ ಬರಲೆಮಗೆ
ಗೋರಿಯಾದೆವು ಗಿಡಕೊಬ್ಬ।
ಏರಿದ ತುರಗವ ಬಿಟ್ಟು ಕಾಲೆಡೆಯೊಳು
ಕಾನನವ ಬಿದ್ದು ಕೆಲವೋಡಿ ||೧೬೪||

ಸತ್ತ ರಾಮನು ಎಂದು ಕೊಟ್ಟ ರವುಡೆರ ಸುದ್ದಿ
ಎತ್ತ್ಯಾಕಿ ಮೂಗ ಕೊಯ್ಸೇಕು।
ಹತ್ತು ಸಾವಿರ ಕುದುರೆ ಹಿಡಿದರು ಕೊನೆಗಡಿಯ
ನುಚ್ಚು ಮಾಡರು ಅವನಿಲದೆ ||೧೬೫||

ತಂದ ಕೋಳನು ಎಲ್ಲ ಕೊಂಬು ಜವಗಳ ಬಿಡದೆ ಹ
ನ್ನೊಂದು ಸಾವಿರ ಕುದುರೆ ಹಿಡಿದು।
ಇಂದಿಗೆ ಮೋಸ ಉಳಿದುದು ಇಷ್ಟೆ ಸಾಕೆನುತಲಿ
ತಂದು ಒಪ್ಪಿಸಲು ಕುಮ್ಮಟಕೆ ||೧೬೬||

ಗೋಡೆಯ ಕಳಕೊಂಡು ಗಾಯೊಡೆದು ಹತವಾಗಿ
ಹೋದರೆ ಭಾಗ್ಯ ಉಳಿಯುವುದು।
ನೇಮಿ ಖಾನರೆಲ್ಲ ಹೇಳಿ ಸುದ್ದಿಯನವರು
ಬೇಟಚೋದಲ್ಲಿ ತೋರೆನಲು ||೧೬೭||

ಸತ್ತವರ ಮನೆಯಲ್ಲಿ ಕೆಟ್ಟವರು ಯಾರೆನಲು
ಹೊಕ್ಕವನೆ ಕೆಟ್ಟ ಯಮನೂರ।
ಹತ್ತ್ತೋ ತುರಗವು ಹೋಗಿ ಹಲ್ಲಗಿರಿವ ಬಟೆ
ತಪ್ಪೋದೆ ಮುಂದೆ ಎಲ್ಲರಿಗೆ ॥೧೬೮॥

ಕಂಡಿಲ್ಲ ಕುಮ್ಮಟವ ಹನ್ನೊಂದು ಸಾವಿರ ಲಯವು
ಹೊಂದಿ ಸೇರುವರೊಳಗಾಗಿ।
ತಿಂಬರು ಅರ್ಧಾಯ ಗಡಿಯ ಬ್ಯಾಡರುಯೆಂದು
ನೊಂದವರು ಮೊರೆಯಿಡಲು ನೇಮಿ ॥೧೬೯॥

ಹೀಗಲ್ಲ ಹೋಗುವುದು ರಾಜಸ್ಥಾನದ ಬಗೆಯು
ಆತುಕೊಂಬರು ಬಕನಂತೆ।
ಮೂರಾರು ಲಕ್ಷದ ಪೌಜು ಒಡೆಯದೆ ಪೋಗಿ
ಕಾಣಬೇಕಿನ್ನು ಕುಮ್ಮಟವ ॥೧೭೦॥

ವಾರುಧಿ ಕಡಲುಕ್ಕಿ ಮೇರೆದಪ್ಪಿದ ತೆರದಿ
ಏರಲು ದಂಡು ಕುಮ್ಮಟಕೆ।
ಚೋರಗಂಡಿಯ ಕಾದಿರ್ದ ಬ್ಯಾಡರು
ಊರ ಹೊಕ್ಕರು ಕುಮ್ಮಟವ ॥೧೭೧॥

ಹಿಂದು ಮುಂದುಳಿಯದೆ ದಂಡೊಂದು ಫೌಜಾಗಿ
ಬಂದು ಇಳಿಯಲು ಎದುರಿಗೆ।
ಕೆಂಧೂಳಿ ಮುಸುಕಲು ಮಂಡಲವು ಚೆದರಿ
ಕಂಡನು ರವಿಯು ಪಶ್ಚಿಮವ ॥೧೭೨॥

ದಿವರಾತ್ರಿ ಬೆಳತನಕ ಹುಬುಗಣ್ಣ ಹಾಕುತ್ತ
ಭಯ ಬಹಳ ಬಡುತಲಿ ದಂಡು।
ಕೋಳಾಹಳ ಮಾಡುತ್ತ.... ಕಾವಲ ತುರಗ
ದನಿದೋರೆ ಚರಣಾಯುಧನು ॥೧೭೩॥

ದಿನಕರನು ಪೂರ್ವಾದ್ರಿ ತಲೆದೋರೆ ಖಾನರು
ಕಳೆದೆವು ಇರುಳೊಂದು ಯುಗವ।

ಇಳಿವನು ಈ ದಿನ ಒಳಗಾಗಿ ಕುಮ್ಮಟದ
ಬಳಿಗೊಂದು ಯೋಜನ ಸುತ್ತ ||೧೭೪||

ರಾಜೇಂದ್ರ ಕುಮ್ಮಟದ ಹೊರ ಸಾರಿ ಉಕ್ಕಡದವರು
ಪೇಳುವರು ರಾಯ ಕಂಪಿಲಗೆ।
ಮೂದೇವಿ ಹಿಡಿದಂತೆ ನೀನ್ಯಾಕೆ ಕುಂತಿರುವೆ
ಭೂಮಿ ಹಿಡಿಯದ ದಂಡು ಬಂತು ||೧೭೫||

ರಾಯ ಕಂಪಿಲ ಕೇಳೊ ಆರು ಲಕ್ಷವು ದಂಡು
ಭೂಮಿಯು ಎಂತು ತಡೆದಿಹುದೊ।
ನೋಡುವರಳವಲ್ಲ ಗಾವುದ ದಾರಿ
ಹಾರಲಾರವು ಹದ್ದು ಕಾಗೆ ||೧೭೬||

ಜಾಂಡೆವು ಎಪ್ಪತ್ತು ನೇಮಿದು ಹೊರತಾಗಿ
ಶೌರ್ಯವ ಹೇಳುವರಳವಲ್ಲ।
ದೇವೇಂದ್ರ ಕಡೆಯೆನಿಸಿ ನೇಮಿಯ ಸದರಿನ
ವಾಲಗವನಾರು ಬಣ್ಣಿಪರೊ ||೧೭೭||

ನೇಮಿಯ ಡೇರ್ಯದ ಭಾವವ ವರ್ಣಿಪಡೆ
ಸೋಮಶೇಖರಗೆ ಅಗಮ್ಯ।
ಮಾರಸುತನ ಪೆತ್ತ ತಾಯೆಲ್ಲಿ ಇರುತಿಹಳು
ಸಾವಿರದ ಮೇಲೆ ಹೊನ್ನ ಕಳಸ ||೧೭೮||

ಹಸಿರು ಕೆಂಪು ಹಳದಿ ಎಸೆವ ಬಿಳಿದಿನ ಹಲವು
ಮಿಸುನಿ ಅಲತೆಯ ಹೂವಿನಲಿ।
ಎಸೆಯಲು ಎಪ್ಪತ್ತು...............
ಬಿಸಗಣ್ಣು ಫಲವಾಗಿಹುದು ||೧೭೯||

ಕಡಿವರು ಮೊದಲಿಲ್ಲ ಎಡೆ ಎಡೆಗೆ ನಿಂದಿಲ್ಲ
ನಯನದಿ ನೋಡುವರುಂಟೆ।
ಮಡದಿ ರತ್ನಮ್ಮನು ಹೊಡೆದರೆ ನಾ ಕಾಣೆ
ಹರಿಹರನೊಳು ತೀರದೆಂದ ||೧೮೦||

ದಂಡೆಲ್ಲ ಕೇಳರಸೆ ಗಂಡಾಂತ್ರ ಬಂದುದು ಈಗ ಭೂ
ಮಂಡಲ ಇದ್ದಂತೆ ತಮಗೆ।
ಡೊಂಬ ಮೂಳಿಯ ಸೇರಿ ಪ್ರಚಂಡ ರಾಮನ ಕೊಂದೊ
ಮುಂ[ಡೆ] ಮಾಡರೆ ನಮ್ಮ ಸತಿಯ ||೧೮೧||

ಪೌಲಸ್ತ್ಯ ಬ್ರಹ್ಮನ ತಲೆಯ ವೈರಿಯ ಬಂಟ
ಹನುಮನ ಹೋಲ್ವ ರಾಮಿರಲು।
ಸುಳಿಯಬಲ್ಲನೆ ನೇಮಿ ಸೂಳೆ ಮಾತಿಗೆ ಕೊಂದು
ನಗರಕ್ಕೆ ಬಡಿಗಲ್ಲ ತಂದಿ ||೧೮೨||

ಚಕ್ರಧರನ ಸುತನ ಸುಟ್ಟುರುಹಿ ಬೂದಿಯ
ನಿಟ್ಟವನ ಬೆವರಿಂದಲಾದ।
ಹುಟ್ಟಿದ ಶರಭನ ಶಕ್ತಿ ಪೋಲುವನಿರಲು ತಲೆ
ಇಕ್ಕುವನೆ ಈ ಕಡೆಗೆ ನೇಮಿ ||೧೮೩||

ಬ್ಯಾಡರಾಡುವ ಮಾತ ಕೇಳಿ ಕಂಪಿಲರಾಯ
ಭೂಮಿಪಾತಾಳಕ್ಕೆ ಇಳಿದು।
ಶ್ವಾನಬುದ್ಧಿಗೆ ಕಡೆಯಾಗಿ ಮಗನ ಕೊಂದೆ
ಪ್ರವೀಣ ಮಂತ್ರಿಯ ಕರೆಯೆನಲು ||೧೮೪||

ಚರರಾಗ ಪೋಗಲು ಪ್ರಧಾನಿ ಭೋರನೆ ಬಂದು
ಕರ ಮುಗಿದು ಭೂಪಾಲ ಪೇಳೆನಲು।
ಕಿರಿಮುಖದೊಳು ಲಯ ಹದನಿದು ತಾ
ಮರಣದ ತೆರ ಬಂತು ನನಗೆ ||೧೮೫||

ಬಾರದೆ ರೋಗವು ಹೋಗುವುದೆ ಈ ಕಾಯ
ಜಾಲಿಯ ಕೊರಡಾಗಿ ಇದ್ದ।
ರಾಮಗೆ ಬಂದಂಥ ಮಾಯದ ಮರಣಗಳ
ಮಾಡುವರ್‍ಯಾರೊ ಮುಪ್ಪಿನಲಿ ||೧೮೬||

ಭೇರಿಯ ನಾದಕ್ಕೆ ಕಾಲುಗೆಡುವರೆ ಭೂಪ
ನೋಡಿಲ್ಲ ದಂಡಿನ ಮೋರೆ।

ಹೇಳುವ ಅನುತನುವ ಕೇಳದಿದ್ದರೆ ಕತ್ತಿ
ಮಾಡುವಾ ಇದಕ್ಯಾಕೆ ಭಯವು ||೧೮೭||

ಯಾರಯ್ಯ ಕಡಿವವರು ಕುಮಾರನ ನಾ ತಿಂದು
ಕೋಡಗ ಕಪಿಯಾಗಿ ಕುಂತೆ।
ಮಾರಿಯೆಂದರಿಯದೆ ಮಗನ ಕೊಲ್ವರೆ ಬಂದು
ಸೇರಿದೊ ತಲೆ ಹಿಡುಕಿ ರತ್ನಿ ||೧೮೮||

ಮಾರೆಮ್ಮ ಇರಲೆಮಗೆ ಏನು ಭಯಗಳು ಉಂಟೆ
ಹಾಳು ಮಾಡಲು ಅರುಹಿಸಿ।
ಹೇಳಿ ಕಳುಹುವನ ನೆರೆಯ ನೇಮಿಯ ಬಳಿಗೆ
ಹೋಗಿ ಹೆಮ್ಮಾರಿ ಬಿಡಲೆನುತ ||೧೮೯||

ಮಾರ್ಜಾಲಗೆ ಸರಸಗಳು ಮೂಷಕಕೆ ಪರಮಾತ್ಮ
ಹೋಗದೆಂಬುವ ಗಾದೆ ಬಂತು।
ನಗೆ ನುಡಿಯ ಮಾತಿಲಿ ಮೂಗರಿಯ ಬೇಡವೊ ಮಂತ್ರಿ
ಕೊಡಬೇಡ ಅವರಿಗೆ ಎನ್ನ ||೧೯೦||

ಬರುವ ದಂಡಿಗೆ ರಾಯ ಎದೆಯೊಡೆದು ತಲ್ಲಣಿಸಲು
ಈ ದಂಡಿಗೆ ಇನ್ನು ಬಲವಿಲ್ಲ।
ಹೆದರಬೇಡೆನುತಲಿ ಕಡಿ ಬಡಿ ಹೊಡಿಯೆಂಬ ಚಿಲ್ಲಾ
ಮಾಡುವರಸೆ ನೋಡುವನು ||೧೯೧||

ಎತ್ತು ಹರಿದ ಮೇಲೆ ಗೋಣಿ ಹರಿದ ಗಾದೆ
ರತ್ನಾಜಿ ನಗಳೆ ಕೇಳಿದರೆ।
ಪುತ್ರನ ಕೊಲುವಾಗ ಹುಟ್ಟದೆ ಈ ಬುದ್ಧಿ
ಎದೆಗೆಟ್ಟರೆ ನಾ ಮಾಡುವದೇನು ||೧೯೨||

ವೈರಿ ಬಂದೆಡೆಯೊಳು ಧೈರ್ಯ ಮಾಡಲು ರಾಯ
ಸೇವಕರು ಹೆದರಬೇಡೆನುತ।
ಮಗನಳಿದ ಬೆಳದಾಗಿ ಪವುದಿ ಕೊ[ಳ್ಳ]ನು ಎಂದು
ನಗರೇನು ರಾಯ ಸರಿಯವರು ||೧೯೩||

ಹುಚ್ಚೇನೊ ಎಲೆ ಮಂತ್ರಿ ಹುಲಿಯ ಬಣ್ಣಕೆ ನರಿಯು
ಸುಟ್ಟುಕೊಂಡರೆ ಬರುವುದೇ।
ಪುತ್ರನ ಸಹ ಶಕ್ತಿ ಪಾಂಡುರಾಯಗೆ ಇತ್ತೆ
ಎತ್ತಣ ಮಾತೆಂದು ನುಡಿವೆ ॥೧೯೪॥

ಎನ್ನ ತ್ರಾಣವ ನೀನು ಬಲ್ಲೆಯಲ್ಲದೆ ಮಂತ್ರಿ
ನಿನ್ನ ಧೈರ್ಯದಲಿ ನಾನಿರುವೆ।
ಎನ್ನ.... ಪ್ರಾಣ ಬಿಡುವಂತೆ ನೀ ಮಾಡೆ
ಚನ್ನಿಗ ರಾಮಗೆ ಮಿಗಿಲು ॥೧೯೫॥

ರಾಮನ ಸಮಶಕ್ತಿ ಪ್ರಧಾನ ವಿನಯದಿ ನೋಡಿ
ಸ್ವಾಮಿ ಅರಮನೆಗೆ ಬಿಜಮಾಡಿ।
ನೋಡುವೆ ನಾಕ ಮುಖದ ತ್ರಾಣ ಪ್ರಾಣವ ಮಾಡಿ
ಹದಮೀರಲು ಕಾರ್ಯ ತಿದ್ದುವೆನು ॥೧೯೬॥

ಹರ ಶಿವನು ಎನ ಬ್ಯಾಡ ಮರಣವಾದವನನು
ತಿಳಿದಂತೆ ಮಾಡು ಬುದ್ಧಿಯಲಿ।
ನಡೆಯಲು ರಾಜೇಂದ್ರ ಪರಿವಾರ ಮಂತ್ರಿಯ ಕರೆಸಿ
ಕೊಡಿಸಿದನುಡುಗೊರೆ ವೀಳ್ಯ ॥೧೯೭॥

ಹುಶಾರಾಗಿ ಇರಿ ನೀವು ನಿಮ್ಮ ಕಾಲಮೇಲೆ
ಅಗಳು ತುಂಬುವ ಅರ್ಥ ದಂಡ।
ಮಿತಿಮೀರಿ ಬಂದರೆ ಪವುದಿ ವಾಸವ ಕೊಟ್ಟು
ಅಭಿಮಾನ ಉಳಿಸುವೆ ಕಡೆಗೆ ॥೧೯೮॥

ಹರಿಮುರಿಯ ಕಟ್ಟೆಗಳ ರುಜುವು ಮಾಡಿ ಫಿರಂಗಿ
ತೊಳಸಿ ಕುರಿಕೋಣಗಳ ಕಡಿಸಿ।
ಮೊನೆಗಾರ ಮನ್ನೆಯರ ಗುರಿಕಾರರಿಗೆ ಕೊಟ್ಟ
ತರತರವರಿದು ಹಾಕಿದನು ॥೧೯೯॥

ನಗರವ ಕಲಿಮಾಡಿ ಅಗಳು ಆಲರಿದವ
ಅಮರಾವತಿಗೆ ಮಿಗಿಲೆನಿಸಿ।
ಜಗಳನು ದಿನಕರನಂದದ ಲೋಕದೊಳಿಪ್ಪ
ಸುರರಿಗೆ ಬೆಳಗಾದ ತೋರುವರೆ ॥೨೦೦॥

ಪುರದ ಕಾಲವ ಕೇಳಿ ಪಗಲೆನಿಸಿ ಪಟ್ಟಣವು
ಹಗಲು ಬತ್ತಿಗಳುಡಿಯರಿಗೆ।
ಇದು ತಮಗೆ ಕಂಗಳಿಗೆ ವೀರ ಕುಮ್ಮಟವಾಗೆ
ಅಳಿದವ ಮರಳಿ ಜನಿಸುವನು ||೨೦೧||

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷ ಲಿಂಗ।
ತರಳ ರಾಮನ ತೆಗೆದು.................
ದಂಡ ಕಡಿವಲ್ಲಿಗೆ ಸಂಧಿ ||೨೦೨||*

❖❖

* + ಅಂತು ಸಂಧಿ ೧೫ಕ್ಕಂ [>೧೬ಕ್ಕಂ] ಪದವು ೩೩೮ಂಕ್ಕೆ ಮಂಗಳ ಮಹಾಶ್ರೀ (ಮೂ)

ಸಂಧಿ : ಹದಿನೇಳು

❖

ನೇಮಿ-ಬಾಲರಾಮರ ಯುದ್ಧ

ಶ್ರೀ ಗುರುವರ ಶಂಭು ಭಾಗೀರಥೀಶನೆ
ನಾಗಭೂಷಣ ನಂದಿಕೇಶ।
ಭೂಮಿ ಬ್ರಹ್ಮಾಂಡಕ್ಕೆ ಆಧಾರ ಕರ್ತನೆ
ಶ್ರೀ ಗೌರಿ [ಗಂಗೆ] ವಲ್ಲಭನೆ ॥೧॥

ಕಾಯವೆ ಮೂರು ಕಾಲಾರು ಮಸ್ತಕ ನವ
ಬಾಯಿ ಒಂಬತ್ತು ಬಾಲವೆರಡು।
ಕರಗಳು ನಾಲ್ಕು ಕಂಗಳೆನಲು ಹದಿನೆಂಟು
ಆನೆ ಮುಖದವನೆ ಕೊಡು ಮತಿಯ ॥೨॥

ಕಮಲಜಪಿತ ತನುಜನ ಕೊಂದವನೆ
[ಇನಿ]ಯಳು ರತಿ ಮೊರೆಯಿಡಲು।
ಮನಸಿಜನ ಲೋಕಕ್ಕೆ..................
ಕನಕಾದ್ರಿವಾಸ ಕೊಡು ಮತಿಯ ॥೩॥

ಲಾಲಿಸಿ ಭಕ್ತಿಯಲಿ ಜ್ಞಾನವುಳ್ಳವರೊಲಿದು
ಬಾಲರಾಮನ ಚರಿತೆಯನು।
ಹಾಲೊಳಮೃತ ಜನಿಸಿ ಮೇಲಾದ ತೆರದೊಳು
ಕೇಳುವರ ಕರ್ಣಕಿಂಪಹುದು ॥೪॥

ಕರ್ಮಕ್ಕೆ ಒಳಗಾಗಿ ನೆಲಮನೆಯ ಸೇರಿದನಲ್ಲ
ಧರ್ಮವ ಗ್ರಹಿಸಿ ಇದ್ದವನ।
ವೈರಿ ಸುರಿತಾಳನ ಲಯಮಾಡುವ ತೆರಕೆ
ಹರನು ಮಾಡಿದನು ಕಂಟಕವ ॥೫॥

ಸತ್ಯದಿ ನಡೆದವಗೆ ಹತ್ತುವದೆ ಕರ್ಮವು
ವಾಕ್ಯ ಕರ್ಣದಿ ಕೇಳಿದವಗೆ।
ಮುಟ್ಟುವುದು ಮತ್ತಲ್ಲಿ ಫಲ...... ಮನೆಯೊಳು
ಲಕ್ಷಕ್ಕೆ ಬೆಲ್ಲವಾಗದಿಹುದೆ ॥೬॥

ನಡೆಸುವೆ ಮುಂದಣ ಕೃತಿಯ ಲಾಲಿಸಿ ಸೂರ್ಯ
ರಥವೇರಿ ಮುಖವ ತೋರ್ಪಂತೆ।
ಅಸುವಳಿದ ಖಾನರು ಏಳೆ ನೇಮಿಯು ಬಂದು
ಕುಳಿತನು ಸದರ ವಾಲಗಕೆ ॥೭॥

ಖಾನರು ನವದೇಶ ಪಾಳೇಗಾರರು ಬಂದು
ನೇಮಿಗೆ ಕರಗಳ ಮುಗಿದು।
ವಾಲಗ ನೋಡಲು ದೇವೇಂದ್ರ ಭೋಗಕ್ಕೆ
ಮೂರು ಇಮ್ಮಡಿಯಾಗಿ ಇರಲು ॥೮॥

ಕೇಳಿರೈ ಎಲ್ಲರು ಹೋಗಿ ಮುತ್ತಲು ಪುರವ
ಕಾಗದ ಬರೆದು ನೋಡುವನು।
ಮೂಗ ಕಾರ್ಯಗಳನು ಮಾಡಬಾರದು.......
ಪೇಳಲು ನೇಮಿ ಎಲ್ಲರಿಗೆ ॥೯॥

ಕಾನರೆಲ್ಲರು ಮರೆದು ಏಳುವ ಸಮಯದಿ
ಕೋಳಿ ಕೇಳಿ ಸಾಂಬಾರವ ಮಾಡುವರೆ?
ಊರ ಕಾಣದ ಮುನ್ನ ಎದೆಗೆಟ್ಟು ಎಲೆ ನೇಮಿ
ಪಾಲಿಸೈ ಸುರಿತಾಳ ಲಗ್ಗೆ ॥೧೦॥

ರಾಮನು ಉಂಟಿಲ್ಲವೊ ಭೇದ ತಿಳಿಹಿಸು ನಿನ್ನ
ಜಾಣತನದ ಯುಕ್ತಿಯೆಲ್ಲಿ।

ಲಹರಿ ಮನದೊಳು ಕಾಣರು ನಿಮಗಿನ್ನು
ಹಾಸ್ಯೆಗೆ ಹೀನಾಗೆ ತಮಗೆ ||೧೧||

ಬರೆದರೋಲೆಗಳೆಮಗೆ ಕೊರತೆ ಬಂದುದು ತಾನು
ಹರುಷದಿಂದಲಿ ಬರೆಸಿದನು।
ನೆರೆ ಜಾ[ಡಿನ]ವರ ಒಡನೆ ಕಳುಹಲು ಬಂದು
ಕಡೆಬಾಗಿಲ ಹೊರಗೆ ತಡೆವೆ ||೧೨||

ಪೇಳಿ ನಿಮ್ಮರಸಿಗೆ ಜಾಡಿನವರ ಸುದ್ದಿ
ಕಾಗದ ಬಂದಿದೆಯೆನುತ।
ರಾಮ ಮಂತ್ರಿಗೆ ಬಂದು ಪೇಳಲು ಚರರಾಗ
ಪೇಳಿದ ಬರಲೆಂದು ಮಂತ್ರಿ ||೧೩||

ಹೊಕ್ಕರು [ಜಾ]ಡೆಯರು ಬೆಚ್ಚುತ ಎದೆಯೊಳ
ದೈತ್ಯರ ಹೊಳಲು ಇದು ಎನುತ।
ಇಟ್ಟ ಕಾಗದವನು ಮಂತ್ರಿಗೆ ಕರ ಮುಗಿದು
ಬಿಚ್ಚಿ ನೋಡಿದನು ಲೇಖನವ ||೧೪||

ಕೆಡಬೇಡ ಕಂಪಿಲ ಮುದಿಯಾದ ಕಾಲದಿ
ಕೊಡು ನಮ್ಮ ಬಾದುರನ ಹಿಡಿದು।
ಪೊಡವಿರಾಯರನೆಲ್ಲ ಮನೆ ಮುರಿದು ರೊಕ್ಕವ ಕೊಟ್ಟು
ಉಳುಹಿಕೋ ನಿಮ್ಮ ಪುರವನು ||೧೫||

ಊರ ಮುತ್ತಿದ ಬಳಿಕ ಬೇರ ಕೀಳುವೆ ನಿಮ್ಮ
ಹೋಗರೆಂಬರು ನೀ ತಿಳಿದು ।
ನೋಡುತ ಪೃಥಿವಿ ಕಾಲಾಗ್ನಿ ಕಿಚ್ಚಾಗಿ
ರೋಡಿಸಿ ಯಮನ ಆಜ್ಞೆಗಳು ||೧೬||

[ಜಾಡೆಯ]ವರ ಮಾತೇನು ಗುಡಿಗುಡಿಸಿ ಮಂತ್ರಿಯು
ಹಿಡಿದು ನೂಕಿವರ ನಗರವನು।
ಕೊಡುವುದಕೆ ಬಾದುರ ನಿಮ್ಮೊಡೆಯನಾ ಬರಹೇಳಿ
ನಡೆಯೆಂದು ದೂಡಿಸಲು ಹೊರಗೆ ||೧೭||

ಹೋದ [ಜಾ]ಡೆರು ಬಂದು ನೇಮಿಗೆ ಕರ ಮುಗಿದು
ಹೇಳುವರು ಜಲವ ಸೂಸುತಲಿ।
ಹೋದ ತಪ್ಪಿಗೆ ಎಮಗಾದುದು ಅಪರಾಧ
ಜೋಡಿಸಲು ಶಿರಕೆಂಟು ಗುದ್ದ ॥೧೮॥

ಮಾತಿನ ಬಿಂಕ[ದ] ಮೂಲವ ಶಿವಬಲ್ಲ
ಸಾಕಯ್ಯ ನಿಮ್ಮ ಮನದ ಗಾತ್ರ।
ನೂಕಿಸಿ ಬಿಡಿಸಿದ ಪ್ರಧಾನ ಕಂಪಿಲನೆಡೆಗೆ
ಕಳುಹಿದಿರಿ ನಮ್ಮ ಬಗೆಯ ॥೧೯॥

ಏನಯ್ಯ ಎಲೆ ನೇಮಿ ನಾವು ಹೇಳಿದ ಮಾತಿಗೆ
ತಾರಸ ಸರಿ ಬಂತೆ ನಿಮಗೆ।
ಭೂಮಿ ಆರ್ಭಟಿಸುತ್ತ ಎದ್ದ ಹಮ್ಮಿರಖಾನ
ಪಾಲಿಸು ನಮಗೆ ವೀಳ್ಯಯವ ॥೨೦॥

ಮತ್ತ ಹಮ್ಮಿರಖಾನ ಲಕ್ಷ ಪೌಜಿಗೆ ನೀನು
ಕತ್ರಿಗೆ ಹೊರಡಲಿ ಅವರು।
ಮುತ್ತಿಕೊಳ್ಳೆವು ನಾವು ಮೂರು ಲಕ್ಷದಿ ಬಂದು
ಕೊಚ್ಚುವೆ ಊರ ಒಗೆದಂತೆ ॥೨೧॥

ಸುಳಿವ ಕಾಣದೆ ಮುತ್ತಿ ಅಳಿಯ ಸಲ್ಲದು ಬನ್ನಿ
ಬಿಡು ನಿನ್ನ ಪೌಜನು ಲಗ್ಗೆ।
ಹೊರಡುವ ರಾಪುರಲು ಕೊಡುವರೆ ಸುದ್ದಿಯ
ಇರದೆ ಊಳಿಗದ ಆರ್ಭಟದಿ ॥೨೨॥

ಸುದ್ದಿ ಕೊಡುವರೆ ನಿಮಗೆ ಬಣ್ಣವನೆ ನಾನು
ಯುದ್ಧ ಹಮ್ಮೀರ ಯಮನಂತೆ।
ವಜ್ರಾಂಗಿ ತುರಗವು ಒಂಬತ್ತು ಸಾವಿರದೇಳು
ಆರ್ಭಟಿಸಿ ನಡೆವರು ಕುಮ್ಮಟಕೆ ॥೨೩॥

ಹೊಡೆವ ಭೇರಿಗಳಿಂದ ಹಿಡಿವ ಕಹಳೆಯ ಸ್ವರದಿ
ಒದರ್ವಂತೆ ಭೂಮಿ ಜರ್ಝರಿಸಿ।

ಕಡಿಕಡಿ ಎನುತಲಿ ಕವಿದು ಖಾನರ ಪೌಜು
ಅಡರುವ[ದು] ನಾಲ್ಕು ಭಾಗದಲಿ ||೨೪||

ಸುಡುವ ಬಾಣವು ಬತ್ತಿ ಭೋರಿಡುವ ಅಂಬಿನ ಮಳೆಯು
ಸುರಿವುತ್ತ ಖಾನರು ಹೊರಗೆ।
ಕೊಡು ಲೌಡಿ ಕೋಟೆಯ ಬಿಡುವ ಹಮ್ಮೀರನೆ
ಬುಡಮೇಲು ಮಾಡುವೆ ಊರ ||೨೫||

ಬುಡಮೇಲು ಮಾಡುವ ಕಡು ಸಮರ್ಥರು ಅಹುದು
ಇಡು ನಿಮ್ಮ ಹೆಚ್ಚೆಯ ಮುಂದೆ।
ತೊಡೆವೆವು ಲಿಪಿಗಳನು ನೊಣಕಿಂತ ಕಡೆಮಾಡಿ
ನಡೆಸೇವು ಯಮನ ಪಟ್ಟಣಕೆ ||೨೬||

ನಕರಿ ಮಾಡುವೆ ಲೌಡಿ ಮುಖಕೆ ತಾ ಕಡಿಸುವೆವು
ತುಕಡಿ ಮಾಡುವೆ ನಿಮ್ಮ ಹುಡೆಯ।
ತಾಪಹ..... ತಲೆಯ ಕೆದರುತ ಬಂದು
ಮುಖಮಾಡೆ ನೂಕಿ ಆರ್ಭಟಿಸಿ ||೨೭||

ಕತ್ತಿ ಬಲ್ಲೆಹಗಳನು ಕಿತ್ತರು ಖಾನರು
ಹೊಕ್ಕರು ಹೊರಪಾರ ಬೇಲಿ।
ಮತ್ತವರ ಕರೆಯುತ ಲಕ್ಷ ಬಾಣದ ಸರಳ
ಕುತ್ತಿಗೆ ಕೊರೆದೇವು ನಿಲ್ಲಿ ||೨೮||

ಹೇಳಿ ಬಂದಿರೆ ನಿಮ್ಮ ಕೂಡಿದ ಹೆಂಡಿರಿಗೆ
ಮಾಡಿ ಹಿಂಡಿಯ ಕೂಳನೆಂದು।
ಬ್ಯಾಡರ ಹುಡುಗರ ಕೈನೋಡಿ ಎನುತಾಗ
ಚಾರ ಜಿಡ್ಡಿಯ ಕಿತ್ತು ಏರೆ ||೨೯||

ಹೊಕ್ಕನು ಬಲವಂತ ಒಕ್ಕಲಿಗರ ಮುದ್ದ
ಭುಕ್ಕರಿ ಕೊಮಾರ ನಂದಯ್ಯ।
ಕೊಚ್ಚುತ ಹೋದರು ಕಂಬನು ಕೊರೆದಂತೆ
ಹತ್ತೆಂಟು ಬೀದಿಯ ಬಿಡಿಸಿ ||೩೦||

ಯಮನ ಭಾಗದ ಜಿಡ್ಡಿ ತೆರೆಸಿ ಹೊಕ್ಕನು ಒಬ್ಬ
ಎಡಗಯ್ಯ ಹಂಪ ರೋಷದಲಿ।
ತುರುಕರ ಜುಲವಿಡಿದು ಕೆಡಹಿ ಎದೆಯನು ಮೆಟ್ಟಿ
ಅರಿದಾನು ನೂರಾರು ಶಿರವ ||೩೧||

ಮಂತ್ರಿಯ ಮಗ ನೀಲಕಂಠನು ಹೊರಹೊರಟು
ಇಕ್ಕೆಲದೊಳಗೆ ಸವರುವನು।
ಲೆಂಕೆಯ ಹನುಮನು ನೀರ ಜಿಡ್ಡಿಯ ಮುಂದೆ
ಅಂಕದಾಳಿಗೆ ಸಾವಿರವ ಹೊಡೆದ ||೩೨||

ನಗರದ ಪರಿ ಬಳಸಿ ಹೆಣಮಯವಾಗಲು
ಬೆದರಲು ತುರುಕರ ಬಲವು।
ಬಿಡು [ಭಾ]ಯಿ ನಿಮ್ಮಯ ಗೊಡವೆ ಹೋಗೆವು ನಮ್ಮ
ಹುಡುಗ ಬುದ್ಧಿಯನು ನೋಡುವೆನು ||೩೩||

ಹೊಡೆ ಇವ[ನ] ಕೋಟೆಯ ಕೊಡುಯೆನುತ ಬಂದ[ನು]
ಎದೆಗೆಡಲು ಅರೆ [ಅ]ಲ್ಲಾ ಎನುತ।
ಕಡೆ ಮೊದಲಿಲ್ಲದೆ ಕೋಟೆಯ ಎಡೆಬಳಸಿ
ಮಲಗಲು ಹತ್ತು ಸಾವಿರವು ||೩೪||

ಹೊರಕೋಟೆ ಅಗಳಿಗೆ ಚೆದುರ ಸಂಗಯ್ಯ ಹೊಕ್ಕು
ಕುರಿಗಳ ಕಡಿವಂತೆ ಕಡಿಯೆ।
ನಡಿ ಜಾವೋ ಊಟೋ ಭಾಯಿ ರಾಮ ಬಿದ್ದನು ಎಂದು
ಬೆದರಿ ಓಡಿದರು ಹಲಕೆಲವು ||೩೫||

ಕಂದಕದ ಅಗಳಿನೊಳು ಒಂದೆರಡು ಸಾವಿರ ಬೀಳೆ
ಅಂಬಿನಲಿ ಇತ್ತು ಕಲ್ಲೊಳಗೆ।
ಎಂದಿಗೆ ಬರೆವಿನ್ನು ಬಿಡು ಭಾಯಿ ಮನೆತನಕೆ
ಮುಂದೆ ಗತಿಯಿಲ್ಲ ತಾನಳಿಯೆ ||೩೬||

ಇಡಬ್ಯಾಡ ಮಾಡಿದ ಲವುಡೇರೊಬ್ಬರುಂಟು
ಬರೆದು ಕಾಗದವನೆ ಕಳುಹಿದರು।

ಅಳಿದ ರಾಮನು ಎಂ[ಬ] ಪಾಳೇಗಾರರ ಮಾತು
ಸುರಿತಾಳ ಕೇಳಿ ಕಳುಹಿದನು ||೩೭||

ಇದಿರಾಗಿ ಕಂಡವನ ಹೊಡೆಯಲು ಕರ್ಮಿಲ್ಲ
ಕೈಮುಗಿದವರ ಕೊಂದರೆ ಬಿಡದು|
ಸುಡು ನಮ್ಮ ನೇಮಿಯ ಹುಡುಗ ಬುದ್ಧಿಯ ಮುಂದೆ
ನಗೆಗೇಡಾಗದೆ ಹೋಗಲರಿಯ ||೩೮||

ಕಾದರೆ ಕೈಯನು ಆರ ಮಕ್ಕಳು ನಿಮ್ಮ
ರಾಮಭೂಪಾಲನ ಹೆಸರು|
ಗಹಗಹಿಸಿ ನಗುತಾಗ ವೀರ ಸಂಗಮರಾಯ
ಸಾರಿಸಿದ ಧರ್ಮ ಕಹಳೆಯ ||೩೯||

ಕಿವಿಯೊಳು ಕೇಳುತ್ತ ಧರ್ಮಕಹಳೆಯ ಸ್ವರವ
ಕೈ ನಿಲಿಸಿ ಕಡಿವ ಮಾನ್ಯೆಯರು|
ಮೋಚಿಗಾಲೊಂದೆಸೆಯು ಗಾಯೊಡೆದ ತುರುಕರು ಎಲ್ಲ
ಎಳೆದಾಡಿಕೊಂಡು ಹೋಗುವರು ||೪೦||

ಹಮ್ಮನಾಡುತ ಬಂದು ಹಮ್ಮೀರಖಾನನು ಕಂಡು
ತನ್ನಯ ಬಲವಳಿದ ಕೇಡ|
ಖಿನ್ನನಾಗುತ ಮುಖವ ಹಿಂದುಳಿ ಪೌಜನು
ಕುಂದುರಹಳ್ಳಕ್ಕೆ ಇಳಿಯೆ ||೪೧||

ಅನಿತದಿ ದಿನಕರನು ಕಡಲಸ್ಥಾನಕೆ ಇಳಿಯೆ
ಹೊಡೆಸಿದ ಬ್ಯಾಂಟೆ ಹಮ್ಮೀರ|
ಬರೆಸಿದ ಕಾಗದವ ನೇಮಿಖಾನರಿಗೆಲ್ಲ
ಕೆಡೆದುದು ತನ್ನ ಬಲವೆಂದು ||೪೨||

ಸುರಿತಾಳ ಹಮ್ಮೀರ ಇರುಳು ಕಾಳಗ ನೋಳ್ಪ
ಕಿರಣ ತಾರೆಗಳು ಮೂಡಿದವು|
ದೊರೆಯು ಕಂಪಿಲರಾಯ ಹಜಾರಕ್ಕೆ ಬಂದಾನು
.... ||೪೩||

ತಾವರೆ ಎಲೆಯೊಳು ನೀರಿನಂದದಿ ಕುಳಿತು
ಆಡುವ ಮಂತ್ರಿಯ ಒಡನೆ।
ದಾಳಿಯ ಕುದುರೆಯಲಿ ಬೇರೆ ಬೇಲಿಯ ಸುಡಲಿ
ನೇಮಿ ಬಂದರೆ ಉಳಿಯುವನೆ ||೪೪||

ಧಣಿ ಬರದೆ ದಂಡನು ಹೊಡೆದನು ಪುರವನು
ಎದೆಗೆಡಿಸಿ ತಲ್ಲಣಿಪ ತೆರದಿ।
ಪಡೆಸಹಿತ ಬಂದವನು ಜನಕೊಂದು ಕಲ್ಲಿಡಲು
ಸದರ ತುಂಬದೆ ಎನ್ನ ಮಂತ್ರಿ ||೪೫||

ಬಾಲರಾಮನ ಕೊಂದು ಕೂಲಿಯ ಹೆಣಗಿದೆ
ಸೂಳೆ ಮುಂಡೆಯ ಮಾತ ಕೇಳಿ।
ಭಯವನು ಬಿಡು ನೀನು ರಾಯ ಕಂಪಿಲ ಧೀರ
ನಿಜಗಲಿಗಳಾದ ಶ್ರವದಂತೆ ||೪೬||

ಕೆಟ್ಟೆನೆನುತಲಿ ರಾಯ ಅತ್ತರೆ ಬರುವನೆ
ಎತ್ತ್ಯಾಕಿ ತಲೆಯನು ಹೊಡೆಸಿ।
ಇಷ್ಟ್ಯಾಕೆ ಭಯಬಡುವೆ ಇನಿಯಳಿರುವಳು
ರತ್ನಿ ಪಟ್ಟಣ ಮುಳುಗೊ ಕಾಲದಲಿ ||೪೭||

ಆಡಬೇಡವೊ ಮಂತ್ರಿ ನಾಯಿ ಮುಂಡೆಯ ಮಾತ
ಹೇಳಿ ಕೊಲಬ್ಯಾಡ ಮಾತಿನಲಿ।
ಪ್ರಾಣ ಉಳಿದರೆ ಈಗ ಹಮ್ಮೀರನ ಕೈಯೊಳಗೆ
ಸೀಳಿಸುವೆ ಚತುರ್ಭಾಗಕವಳ ||೪೮||

ಕೊಲ್ಲೆನುತ ಕೊಡಲು ಎಲ್ಲಾರೆ ಮಡಗಿದ್ದು
ಇಲ್ಲೀಗ ಎನಗೆ ತೋರಿದರೆ।
ಎಲ್ಲರು ಉಳಿವೆವು ಕಳ್ಳರಂಡೆಯ ಪಿಡಿದು
ಕಲ್ಲಗಾಣದಲಿ ಅರೆಸುವೆನು ||೪೯||

ಅರಸುಗಳು ನಾಯಾಗೆ ಮಂತ್ರಿ ಹೆಬ್ಬುಲಿಯೆಂದು
ಬರಿದೆ ಆದುದೆ ಲೋಕದಲಿ।

ಇರಿಸಿರ್ದು ಬೆಳಗಾಗಿ ಮುಖತೋರಿ ಜೀ ಎನಲು
ಅಹುದೆಂಬೆ ಮಂತ್ರಿ ಕುಲತಿಲಕ ||೫೦||

ಸಾಕಯ್ಯ ಹಿಂದಲೆ ಮಾತಾಡಿ ಫಲವಿಲ್ಲ
ನೂಕುವಾ ಬಂದ ಭಾರವನು।
ಯಾಕಿಲ್ಲಿ ನೀ ಬಂದೆ ಎಲ್ಲರನು ಎದೆಗೆಡಿಸಿ
ಸಾಕಯ್ಯ ಮನೆಗೆ ಬಿಜಮಾಡಿ ||೫೧||

ರಾಯನ ಸಾಗಿಸಿ ಪ್ರಧಾನಿ ಬೈಚಪ್ಪನು
ರಾಯ ಮಾನ್ಯರ ಬೇಗ ಕರೆಸಿ।
ಮಾಡಬೇಕೀ ರಾತ್ರಿ ರಾಜಕಾರ್ಯವ ಒದ್ದು
ಓಡಿಸಬೇಕು ಹಮ್ಮೀರನ ||೫೨||

ದಯಮಾಡಿ ನನ ತನಗೆ ತೊಡೆಯ ತಟ್ಟುತ ಅವರು
ಆನಂದದಿ ವಾಲಗದೊಳಗೆ।
ಕೊಡಲಿಯ ಹನುಮಣ್ಣ ಪೇಗುಂಡೆ ನಾಗಯ್ಯ
ಹಿಡಿದರು ವೀಳ್ಯವನಾಗ ||೫೩||

ಮನಗಂಡ ಮಂದಿಯ ಹದಿನಾರು ಸಾವಿರ ಬಲವ
ಚದುರರಿರ್ವರು ಆತುಕೊಂಡು।
ನಡೆಯಲು ಕೆಳಜಿಡ್ಡಿ ಕಿತ್ತು ಕತ್ತಲೆಯೊಳು
ಇಳಿದಾರು ಪಾಳ್ಯದ ಬುಡಕೆ ||೫೪||

ಗುಡಾರವ ಆರೊಯ್ದು ಎದೆಯ ಮೇಲೆ ಹೂಡಿ
ಕಠಾರಿಯಿಂದಿರಿದು ರೂಢಿಯೊಳಗೆ।
ಕಡು ಧೈರ್ಯದಿಂದಲಿ ಆಗ ....
ಏರಿ ಬಂದರು ಕಂಪಿಲನವರು ||೫೫||

ಕಾಡು ಕಟ್ಟಿಗೆ ಬಿದಿರು ಎದೆಯ ಮೇಲೆ
........ದಿರಿಯುತಲಿ।
ಕಡಿದು ಶಿರವ ಈಡಾಡುತಲಿರ್ದರು
ದಿಟ್ಟ ಕಂಪಿಲರಾಯನವರು ||೫೬||

ಹಿಡಿದೆಳೆದು ಮುಂದಲೆಯ ಕಠಾರಿಲಿ ಹೊಯ್ದರು
..........ತಲೆಯನಾಕ್ಷಣದಿ।
ತೋಳು ತೊಡೆಯ ಮೆಟ್ಟಿ ಕೊರಳು ಕೊಯ್ದುಕೊಂಡು
ಕೋಳಾಹಳದಿ ಬೊಬ್ಬಿಡುತ ॥೫೭॥

ಕತ್ತಲೆಯೊಳು ಮುಂದುಗಾಣದೆ ತುರುಕರು
ಎತ್ತಿ ಶಿರಗಳ ಚಂಡಾಡಿ।
ನಿದ್ರೆಯ ಸೊಕ್ಕನು ಮುರಿದರು ಖಾನರು
ಕಡ್ಡಾಯಿಸದೆ ಕಡಿಯುತಲಿ ॥೫೮॥

ಸಾಲಾಗಿ ಕಟ್ಟಿದ ಆನೆಯ ಸಾಲನು
ಬೀಳಲಿರಿದು ಕೆಡಹಿದರು।
ಕಾಲಾಳು ಕಡಿದು ಹೊಗಲಿರಿದು ಬೇಗದಿ
ಮೇಲಾಳು ಇರಿದು ಕೆಡಹಿದರು ॥೫೯॥

ಭಂಗಿಯ ತಿಂದು ಮೈಮರೆದರು ತುರುಕರು
ಗುಂಡಿಗೆ ತಿವಿತಿವಿದಾಡಿ।
ದಿಂಡುರುಳಿದ ಹಾಗೆ ಬಿದ್ದ ಖಾನರ ತಲೆಯ
ಚೆಂಡಾಡಿದರು ಕಂಪಿಲನವರು ॥೬೦॥

ತಮ್ಮೊಳು ತಾವು ಮಾತಾಡಿಕೊಳ್ಳುತಲಾಗ
ವಾಯದಲಿ ತಿರುಗಿದರು।
ಖಾನರ ದಂಡೆಲ್ಲ ಓಡಲು ಬಯಲಾಗಿ
ತೋರಲು ಬೆಳಗು ಇಂದ್ರನಲಿ ॥೬೧॥

ರವಿ ಮೂಡೆ ಪೂರ್ವದಿ ಹಿಡಿದು ಮನ್ನೆಯರಾಗ
ತುರುಗ ಹದಿನಾರು ಸಾವಿರವ।
ಹಿಡಿದ ಕಹಳೆಯ ಪೋಗಿ ಪುರವ ಹೊಕ್ಕರು ತಂದು
ತುರಗವ ದೊರೆಗೆ ಒಪ್ಪಿಸಲು ॥೬೨॥

ಬಂಟರ ಸಂತಯಿಸಿ ಮಂತ್ರಿ ಬೈಚಪ್ಪನು
ಕೊಟ್ಟನು ತೇಜ ಭೋಗವನು।

ಮುಂಡೆಯರಂದದಿ ಮುಖಮುಖವ ನೋಡುತ್ತ
ಬಂದುದಕೆ ಬಹು ಚೆಂದವಾಯ್ತು ||೬೩||

ಗಿಡಕೊಬ್ಬರಾದವರು ಜಮೆಯಾಗಿ ಒಂದೆಡೆಯ
ನಡೆಯಲು ನೇಮಿಯ ಬಳಿಗೆ।
ಕಿರಿಮುಖದಿ ಹಮ್ಮೀರ ಸರಿಯಖಾನರ ಒಳಗೆ
ನಗೆಗೆಡೆದೆವುಯೆಂದು ಬರಲು ||೬೪||

ನೇಮಿಗೆ ಕರ ಮುಗಿದು ಹೋಗಿ ಹಮ್ಮೀರಖಾನ
ಯೋಕಾದಳಲಿ ಕಾರ್ಯಸ್ಥಿತಿಯ।
ಏರಿದಾಲಿಗದಂತೆ ಎದೆಗೆಡಿಸಿ ಕೋಟೆಯ
ಜೇಬಿ ಬಾಕಲ ತನಕ ಕಡಿದೆ ||೬೫||

ಅಲ್ಲದ ಸಮಯಕ್ಕೆ ಹೊರಟು ಲವುಡೇರು ಬಂದು
ಹುರುಡಿಸಲು ಹೆಣದ ವಾಲೆನವ।
ಹನ್ನೆರಡು ಸಾವಿರವ ಕಳೆದು ಹರಿದಕೆ ನಡೆಯೆ
ಇರುಳು ಕಡಿದರು ವಿಪರೀತ ||೬೬||

ಕಳವಿನೊಳು ಬರುವಂಥ ಸುಳುವ ತಿಳಿದರೆ ಅವರ
ಯಮನ ಕಾಣಿಸುವೆ ಇನ್ಯಾಕೋ।
ನುಡಿಯಲು ಬಲವಿಲ್ಲ ರಣಹೇಡಿ ಹೋಗೆಂದು
ಸರಿಯುವರು ನಗುವ ಬಗೆಯಾಯ್ತು ||೬೭||

ಅಂತವನು ನಿಜವೆಂದು ಸಂತೈಸಿ ನೇಮಿಯು
ಚಿಂತೆ ಬೇಡೆಂದು ಹಮ್ಮೀರನ।
ಪಂಥವ ಮುರಿವೆನು ಕಂಪಿಲನ ತಲೆ ಹೊಡಿಸಿ
ಮುಂಚೆ ಬ್ಯಾಡರನು ಹರಸುವೆ ನಾ ||೬೮||

ಕಾಲನ ತೆರದೊಳು......... ಅತಿ ಕೋಪ
ಭೇರಿ ನಾದವನು ಮಾಡಿಸಿದ।
ಧುರಧೀರ ಹಮ್ಮೀರ ತನಗೊಂದು ಬ್ಯಾಡಯ್ಯ
ಮುರಿದವನು ನಾನು ನೀನಲ್ಲ ||೬೯||

ಹೊಡೆಯಲು ರಣಭೇರಿ ಸಿಡಿಲಿನಾರ್ಭಟದೊಳು
ಕಲಕುವಂತೆ ದಂಡೇಳೆ।
ಕರಗಳ ಕಡಕೊಂಡು ಉದುರುವುದು ಸರಿಯದೆ
ಕವಿಯಲು ಮೇಘ ಮುಸುಕುವಂತೆ ॥೭೦॥

ಕಬ್ಬಕ್ಕಿ ಮುಸುಕಿದ ಅಬ್ಬರದೊಳು ಬಂದು
ಮಬ್ಬುಗವಿಯಲು ಕುಮ್ಮಟಕೆ।
ಜಗ್ಗದೆ ಬೈಚಪ್ಪ ಜಾಡಿಸುತ ಎಡಬಲವ
ಹೊಂದಗೊಡದೆ ಹರದಾರಿ ॥೭೧॥

ನೋಡಿದರು ನಗರದ ಮೋಡಿಯನು ತಲೆದೂಗಿ
ವೀರ ಕುಮ್ಮಟವೆನ್ನಬಹುದು।
ಬ್ಯಾರಿಲ್ಲಿ ಗೋರಿಯು ನಮಗೆ ಸಹಜವೆಂದು
ನಾರಿಯರ ಆಸೆ ಇನ್ಯಾಕೋ ॥೭೨॥

ನಗರದ ಏರಿ ಬಳಸಿ ಹರದಾರಿ ಅಡ್ಡಗಲ
ವಾರುವಿಗಿಲ್ಲದೆ ದಾರಿಗಿಳಿಯೆ।
ಕರೆಸಿದ ನೇಮಿಯ ತುರುಕರ ಬಲವನು
ಸುರಿತಾಳ ಲಗ್ಗೆ ಹುಲ್ಲೆನಲು ॥೭೩॥

ಏರಲು ನಾಲ್ಕು ಮುಖದಿ ವಜೀರ
ಖಾನರು ದೇಶ ಪಾಳ್ಯಗಾರರು।
ಕಾಲ ಜನರುಗಳ ಏರಿಸುತ ಎಡಗೈಯ
ಬಾಯಿ ವೆಗ್ಗಳ ಮಾಡುತಲೆ ॥೭೪॥

ಕತ್ತಿ ಬಲ್ಲೆಹ ಕಿತ್ತು ಹೊಕ್ಕರು ತುರುಕರು
ಲಕ್ಷಬಾಣ ಸೆಳೆಯುತಲಿ।
ನೆತ್ತಿ ಚುಂಗನು ಕೆದರಿ ನೆಗೆದು ಹಾರುತ ಬಂದು
ಮುತ್ತುವರು ಕಿರಿಯಿಂಡಿನೊಳಗೆ ॥೭೫॥

ಅರೆ ಬಾಡಬೇಕೆಂದು ಕಾಲಿ ತಡವದೆ ಗೌಡೆ
ಕೆಡಬೇಡಿ ಮೀಸಿ ಮಣ್ಮಾಡುವೆವು।

ಹೊಡೆವ ತ್ರಾಣಗಳುಂಟೆ ನೇಮಿ ಬಲವನು ನೋಡಿ
ಪೇಚ್ಯಾರ ಇಡಲು ತುಂಬುವುದು ||೭೬||

ಕಾಲ ಕೋಟಲು ಬನ್ನಿ ಜೇರಿಸಿದರಿಗೆ ಸಾಗಿತವ
ಮಾಡಿಸಿ ಗೋರಿ ಸ್ಥಳವ।
ಲಾಹಾರಿ ಮದದೊಳು ತೂಗುತ ಬರಲವರು
ಹಾರಿ ಬೀಳ್ವಂತೆ ಹೊಡೆವವರು ||೭೭||

ಕುಮ್ಮಟವನು ನಂಬಿ ಸುಮ್ಮನೆ ಕೆಡಬೇಡಿ
ನಮ್ಮ ಬಾದುರಖಾನ ಕೊಡು ಲವುಡಿ।
ಇಮ್ಮಡಿ ಈ ಪಾಶ್ಚಾಗೆ ನೇಮಿಖಾನನು ಬಂದ
ಸುಮ್ಮನೆ ಕಳುಹಿ ಕೆಡಬೇಡಿ ||೭೮||

ಬಾದುರನ ಕೊಟ್ಟೇವು ಸಾಗಿ ಮುಂದಕೆ ಬನ್ನಿ
ಕೇಳು ಬಾಯಿಗೆ ಒಂದು ಗುಂಡ।
ಏನಾರೆ ಎನುತಲಿ ಇದಿರಾಗಿ ಬರಲಾಗ
ಚಂಬಾರು ವಂದದಿ ಕಲ್ಲಿಡಲು ||೭೯||

ಮಂಜು ಮುಸುಕಲು ಬೆದರಿ ಅಂಜುವದೇನು ಕುಲಗಿರಿ
ಹುಂಜನು ಹೇಂಟೆಗಂಜುವದೆ।
ಹೆಂಬೇಡಿ ನೇಮಿಯ ಬೇರ ಬಲ್ಲೆವು ಹಿಂದೆ
ಗಂಗೆಯ ಹೊಕ್ಕ ಧೀರನೊ ||೮೦||

ಕತ್ತಲೆಗೆ ಬೆದರುವವೆ ಕರಿ ಸಿಂಹ ಶಾರ್ದೂಲ
ಮುದಿಗತ್ತೆಗಂಜುವವೆ ವ್ಯಾಘ್ರಗಳು
ಎತ್ತ ಮುಂದಕೆ ಚೆಲ್ಲಿ ಮೂಳ ನೇಮಿಯ ಬಲದಿ
ತಿಕ್ಕೇವು ಬ್ರಹ್ಮಲಿಖಿತವನು ||೮೧||

ಹೀನಮಾನದ ನುಡಿಯ ಕೇಳುತ ಖಾನರು
ತುಮಾರೆ ಚೋರಕು ಬೇದು।
ಕೀಳುತ್ತ ಸೂರೆಗಳ ರಕ್ತ ಒರೆಯುಗಳ
ಏರುವರು ನಾಲ್ಕು ಭಾಗದಲಿ ||೮೨||

ಅಡರಲು ಲಗ್ಗೆಯ ಭೂಮೆಲ್ಲ ಜರ್ಝರಿಸಿ
ಹೊಡೆವರು ಬಾಣಂಬು ಲಕ್ಷ।
ಕಡಿಕಡಿಯೆನುತಲಿ ಮುಖವ ನೋಡದೆ ನುಗ್ಗಿ
ಹಿಡಿದರು ಅಗಳು ಸಾರೆಯನು ||೮೩||

ಜೋಡುಸತ್ತಿಗೆ ಹಿಡಿಸಿ ಪ್ರಧಾನಿ ಬೈಚಪ್ಪನು
ಪೌಜೇರಿದ ಮುಖಕೆ ಅವರವರು।
ನೂರಾರು ಮುಖಮಾಡಿ ಕಳ್ದ ಭವಾನಿಯ
ಸುರಿಸುವ ಬೆಂಕಿಯ ಮಳೆಯ ||೮೪||

ಹರಡಿದರು ಕಲಿಗಳು ಕಲಿಗೊಂಡಂಬರವ
ಕುರಿಗೆ ತೋಳನು ನುಗ್ಗು ತೆರದಿ।
ಬರುವ ಖಾನರ ನೋಡಿ ಹೊಡೆಯಲು ಬೀಳುತ
ಅರೆ ಅಲ್ಲಾ ಖಿದಾ ಎನುತಿರಲು ||೮೫||

ಅಲ್ಲಾ ಮುಲ್ಲನುಯೆಂಬ ಅಕ್ಷರವು ನಾಲ್ಕು ಮುಖದಲಿ
ಅಲ್ಲಲ್ಲಿ ನೋಡಿ ಈ ತೆರದಿ।
ಹುಳ್ಳಿಯ ಹುರಿದಂತೆ ಬಾಣ ಪೆಟಲು ಅಂಬು
ಉರುಡಾನ ತರಲು ತುರುಕರನು ||೮೬||

ಅಗಳ ಹಾರಿದರು ಕೋಟೆ ನೆಗೆದು ಹೊಕ್ಕರೆಂದು
ತೆಗೆಸಿ ಸಂಗಯ್ಯ ಜಿಡ್ಡಿಯನು।
ಪರದೇಶ ಹರೆಯೆಂದು ಇತ್ತರದಿನವರು
ಹೋಗಲು ಧರಣಿ ಬಿಡದಂತೆ ||೮೭||

ಯಮನ ಜಿಡ್ಡಿಯ ಕಿತ್ತು ಎಡಗೈ ಹಂಪನು ಹೊಗಲು
ಬಡಿವನು ಕೈಕಾಲು ಪಿಡಿದು।
ಇದಿರಾಗಿ ನಿಂತವರು ಎದೆಯೆದೆಯನು ಮೆಟ್ಟಿ
ಕೊರೆವರು ಕತ್ತಿಯೊಳೆ ಶಿರವ ||೮೮||

ಬಾಣೆ ಮುದ್ದನು ಹನುಮ ಪೂರ್ವ ಜಿಡ್ಡಿಯ ಹೊರಟು
ಹೋರಿದರೆ ತಲೆಯ ಚಿಪ್ಪುಗಳು।

ಮೂರು ಪಾಲುಗಳಾಗೆ ಮಾರಿ ಕೋಣನು ಎಂದು
ಓಡುವರು ಖಾನರು ಬೆದರಿ ||೮೯||

ಹಾಕುವ ಇಡಿಗಲ್ಲು ಸುರಿವ ಅಂಬಿಲ ಮಳಲು
ಒರೆದ್ಹಾಕುವ ಕೆಳಗೆ ಮಂಡೆಯನು।
ಏಕೊದಾರನೆ ಬಲ್ಲ ಅಗಳ ತುಂಬಿದ ಹೆಣನ
ಸಾಕೆಂದು ಕುಮ್ಮಟವು ಓಡೆ ||೯೦||

ರಣಮಯವಾಗಲು ಎಡಬಳಸಿ ಕುಮ್ಮಟದ
ಕಡಿವ ಬಾಣವ ಎಸಗೆಯಲಿ।
ಹುರಿಗಾಳು ಕೆಡೆದಂತೆ ತಲೆ ಬುರುಡೆ ಬಿದ್ದವು
ಹದಿನೆಂಟು ಸಾವಿರ ಶಿರವು ||೯೧||

ಅಗಳ ಹೊಕ್ಕುವರೊಳಗೆ ಹಿಮ್ಮರಳಲಿಲ್ಲವೊ ಒಬ್ಬ
ನೆಲನುಂಗಿತೇ ಶಿವ ಬಲ್ಲ।
ಬೆದರವು ಪೌಜೆಲ್ಲ ತೆಗೆದು ಹಿಂದಕೆ ತಿರುಗಿ
ಹಿಡಿಯವು ಧರ್ಮ ಕಹಳೆಗಳು ||೯೨||

....
ಎತ್ತವು ಕುಮ್ಮಟದ ಹೆಸರ।
ಬೆತ್ತಲೆ ಹರಿದಾಡಿ ಕಚ್ಚಿ ಹುಲ್ಲನೆ ಕಟ್ಟು
ಕತ್ತಿಗಳ ಬಿಸುಟು ಓಡುವರು ||೯೩||

ಹೇಳಬಹುದಾ ಇದನು ವೀರ ಕುಮ್ಮಟವೆಂದು
ನೋಡಿರೈ ಖಾನರಹುದೆಂದು।
ಆಡಿದಿರಿ ಛಲ ಮಾತ ಸುರಿತಾಳನ ಎಡೆಯಲ್ಲಿ
ನೇಮಿ ಎಲ್ಲರನು ಹಂಗಿಸಿದ ||೯೪||

ಬೇರ ಕೀಳುವನೊಬ್ಬ ಬೆಂಕಿ ಹಾಕುವನೊಬ್ಬ
ಬೂದಿ ಮಾಡುವನೆಂಬರೆಲ್ಲ।
ಪಾಳೆಗಾರರು ಅಷ್ಟೆ ಪೂರಾ ಯಮಗೆ ಬರೆದು
ಗಾಣ ಹಾಕಿಸುತೆಲ್ಲರನು ||೯೫||

ಯಮನ ಸೇರಿತು ತನ್ನ ಬಲವೈದು ದಾಳವು
ಬಗೆಗುಂದಿ ನೇಮಿ ಮನದೊಳಗೆ।
ತೆಗೆದು ಹಿಂದಕೆ ಬಿಡಲು ಇರುವೆ[ಯ] ತೆರದೊಳು
ಕಂಡಿರೆನುತ ನೇಮಿ ಹೆದರಿ ॥೯೬॥

ರಾಮನ ಹೆಸರಾಳೆ ಭೂಮಿ ಕಲಿಯಾಗದು
ಸಾಯದೆ ಉಳಿದು ಇರುತಿಹನು।
ಗಾಯ ಸಾಯಧ ಮಂದಿ ನೋಡಿಸಿ ನೇಮಿಯ
ಆರೈಕೆಯೊಳಗೆ ಉಪಚರಿಸೆ ॥೯೭॥

ಇತ್ತ ಕಂಪಿಲರಾಯ ಉಪ್ಪರಿಗೆಯ ಹತ್ತಿ
ನೇತ್ರ ತುಂಬಲು ದಂಡನೋಡಿ।
ದೃಷ್ಟಿ ತಳಕೆಳಗಾಗಿ ಹೊಟ್ಟೆ ಗಲ್ಲವ ಬಡಿದು
ಕೆಟ್ಟೆನೆನುತಲಿ ತಲೆದೂಗೆ ॥೯೮॥

ಯಾವ ಧರೆ ಉಳಿವುದು ಹಾಳು ದಂಡನು ಸುಡಲಿ
ನಾನಂತು ನಾಳೆ ಹೋರುವೆನು।
ಜೀವಳಿದ ಶ್ರವದಂತೆ ರಾಯ ಮೆಲ್ಲನೆ ಬಂದು
ವಾಲಗ ಸಭೆಯೊಳು ಕುಂತ ॥೯೯॥

ರಾಯ ಕಂಪಿಲ ಇರಲು ಕುಮಾರನ ಚಿಂತೆಯಲಿ
ನೇಮಿ ಬಳಿಯಿಂದೋಲೆ ಬರೆದು।
ನೇಮಿಯ ಬಳಿಯಿಂದ ಸ್ಥಾನಪತಿಗಳು ಬರುವ
ಬಾಗಿಲವರು ಸುದ್ದಿ ಕೊಡಲು ॥೧೦೦॥

ರಾಯನ ಬಳಿಯಿಂದ ಊಳಿಗ ಪರಿತಂದು
ರಾಯನೆಡೆಗೆ ಕರೆದೊಯ್ಯೆ।
ಸ್ಥಾನಪತಿಗಳು ಬಂದು ರಾಯಗೆ ಕರಮುಗಿದು
ಯಾವ ಬುದ್ಧಿಯು ನಿಮ್ಮ ಘನವ ॥೧೦೧॥

ರಾಯ ಪಾಶ್ಚಯನ ಪ್ರಧಾನಿ ನೇಮಿಯ ಬರವು
ಕಾರ್ಯ ಮಾಡುವುದು ಕಡೆಗಾಲ।

ಕರಿಯೊಳು ನರಿ ಸೆಣಸಿ ಬದುಕುವುದೆ ನೀನರಿಯಾ
ಗರುಡನೊಳು ಉರಗದ ಹಗೆಯೇನು ||೧೦೨||

ಪರಬಲ ವೈರದ ಮನಸಿರಲು ತೆಗೆದೊಯ್ಯೆ
ಕಡಿಸಯ್ಯ ನೇಮಿ ಬೇಡುವನು।
ಮಣ್ಣ ಗೋಡೆಯ ನಂಬಿ ಬಲ್ಮೆ ತೋರಬೇಡ
ತಿನ್ನೋರು ಒಂದು ಘಳಿಗೆಯಲಿ ||೧೦೩||

ಮುನ್ನ ತಿಳಿದು ನೋಡು ಮುಕುಂದನೊಳು ಸೆಣಸಿ
ನಿರ್ನಾಮವಾದನು ಬಾಣ।
ಬಾಳ ತೊಲಗಿದ ಮೇಲೆ ಕಾದಾರು ಬಲವುಂಟು
ಹೇಳಯ್ಯ ಹೊರಜಗಳ ಮಾಡು ||೧೦೪||

ಸಾಲದಿರ್ದರೆ ಧೈರ್ಯ ಬಾದುರನ ಹಿಡಿಕೊಟ್ಟು
ಈ ನಮ್ಮ ಪವುದಿಯ ಹೊನ್ನ।
ಆರು ಲಕ್ಷದ ಪೌಜು ಏರುವುದು ಬೆಳಗಾಗಿ
ಸಾರಿಸಿರ್ದರು ಲೆಗ್ಗೆ ಎನುತ ||೧೦೫||

ಹೇಳಿಕೊಂಡೆವು ನಿಮ್ಮ ಮಾತಿಗೆ ಸ್ವಯಗೂಡಿ
ಹೇಳರಸ ಮನದ ಭೇದವನು।
ಬಾದುರನ ಕೊಡೆ ನೇಮಿ ರೋದನ ಹರಿವುದು
ಸಾಲ ಬಡ್ಡಿಯ ಕೊಡು ರೊಕ್ಕ ||೧೦೬||

ಸಾಗಿಸಿ ಕೊಟ್ಟರೆ ನೀ ಎನ್ನ ಸಂತೈಸಿ
ಬಾಳಯ್ಯ ಸುಖರಾಜ್ಯನಾಳಿ।
ಹೇಜಿಬರ ನುಡಿಗಳ ಕೇಳುತ್ತ ಕಂಪಿಲ
ಭೂಮಿ ಮಂಡಲಕಿನ್ನು ಇಳಿದ ||೧೦೭||

ಬಾದುರನ ಕೊಡುವುದಕೆ ತಾನೊಪ್ಪಿ ಮನದೊಳಗೆ
ತೀರುವುದು ಕ್ಷಣ ಮಾತಿನೊಳಗೆ।
ಛಲದಂಕ ರಣರಾಮ ತೊಲಗಿದ ಎನ್ನೊಳಗೆ
ಉಳುಹಿಕೊಳ್ಳಲು ತ್ರಾಣವಿಲ್ಲ ||೧೦೮||

ಅ[ಗ್ರ]ಣಿ ನೇಮಿಯ ಬಳಿಗೆ ಇದಕೆ ಒಪ್ಪಿದನೆಂದು
ಅಭಯ ನಂಬಿಗೆಯು ಬರುವಂತೆ।
ಖಾನನ ಕೊಡುವುದಕೆ ಹೇಡಿ ಕಂಪಿಲನೊ[ಪ್ಪೆ]
ತಳವಾರ ಬಮ್ಮನೋಡಿ ಬಂದ ||೧೦೯||

ಸ್ವಾಮಿ ಲಾಲಿಸು ಮಂತ್ರಿ ಹೇಡಿ ಕಂಪಿಲರಾಯ
ಬಾದುರನ ಪಿಡಿದು ಒಪ್ಪಿಸುವ।
ಯಾರಿಗೆ ಕೊಡುವನು ತೋರಿ ಪೇಳೆನಲು ಬಮ್ಮ
ಕಾಲಾಗ್ನಿ ಕೋಪದ ಮಂತ್ರಿ ||೧೧೦||

ನೇಮಿಯ ಬಳಿಯ ಹೆಜೀಬರು ಬಂದರಸನ
ಕಾಲಗೆಡಿಸಿದರು ಭಯದೋರಿ।
ಕಾಲನ ಗತಿಗೊಂಡು ಪ್ರಧಾನಿ ಬೇಗನೆ ಬಂದು
ರಾಯಗೆ ಕರಗಳ ಮುಗಿದು ||೧೧೧||

ವಾರೆಹದರದೊಳು ಇವರ ನೋಡುತ ಮಂತ್ರಿಯು
ಸಾವಿನಂದದಿ ವಿಷವ ಮೆಟ್ಟಿ ತಾ।
ರಾಯನುಸುರಿದನಾಗ ಪ್ರಧಾನಿಯೊಡನೆ ಇವರು
ನೇಮಿಯ ಬಗೆಯ ಹೇಜಿಬರು ||೧೧೨||

ಬಾದುರನ ಕೊಡುವಂಥ ಸಾಲ ಬಡ್ಡಿಯ ರೊಕ್ಕ
ಸಾಗಿಸಿ ಎನುತ ಕೇಳುವರು।
ಒಪ್ಪಿದೆ ಕಾಣಯ್ಯ ಸತ್ಯ ವಚನಗಳೆಂದು
ಚಿತ್ತಕೆ ನಿನಗೆ ಸಮ್ಮತವೆ ||೧೧೩||

ಉಕ್ಕುತ ಕಾಲಾಗ್ನಿ ಊರು ಉಳಿದರೆ ಸಾಕೆಂದು
ಒಪ್ಪಿದೆನೆಂದು ಆಡಿದನು।
ಕುರುಡ ಬಯಸುವದೇನು ನಯನೇಂದ್ರಿಯಗಳಷ್ಟೆ
ಉಳುಹಿದೆಯಲ್ಲ ಅಭಿಮಾನ ||೧೧೪||

ಮೊರೆಯ ಬಿದ್ದನ ಕೊಡಲು ಮಾತೆಲ್ಲಿ ಹೋದುದು ಸ್ವಾಮಿ
ಮಡದಿ ಇತ್ತುದಕೆ ಮಿಗಿಲಲ್ಲವೆ।

ಬೆನ್ನ ಬಿದ್ದನ ಕೊಡಲು ಕೊಡುವೆ ರೊಕ್ಕವ ಪೋಗಿ
ಎನ್ನಲು ಮಂತ್ರಿ ಅವರೊಡನೆ ||೧೧೫||

ಏಳಿನ್ನು ಘನದೊಳಗೆ ತೋರುವುದು ಅತಿಕೋಪ
ದೂಡಿಸು ಲೆಗ್ಗೆಯನು ಹೊಡಿಸಿ।
ಕರೆದವರು ಸಮ್ಮಾನ ಮಂತ್ರಿಯು ನೀ ಮುನ್ನ
ಬೆನ್ನ ಗಾಯಗಳು ಮಾಜಿಲ್ಲ ||೧೧೬||

ಬಾದುರನ ಕೊಡುವುದಕೆ ಸುರಿತಾಳನು ಬರಬೇಕು
ಮೂಳ ನೇಮಿಗೆ ಮುನ್ನ ಕೊಡೆನು।
ಹೊಡೆಯಲ್ಕೆ ಪಾಶ್ಚಯ ಬಡವನೆ ಎಲೆ ಮಂತ್ರಿ
ಸುಡು ನಿನ್ನ ಮಾತಿನ ಗರ್ವ ||೧೧೭||

ಸುಡುವೆವು ಕುಮ್ಮಟವ ಕೊಡುವೆ ಲಿಖಿತವ ನಿನ್ನ
ನುಡಿದ ನಾಲಗೆಯ ತೆಗೆಯುವೆವು।
ನಾಲಗೆಯ ತೆಗೆಯಲಿಕೆ ನೇಮಿಯ ಹೆಂಡಿರ
ಹಾದರವುಂಟೆ ನೂಕಿಸುವೆ ||೧೧೮||

ಬಾಯಿ ಬೆನ್ನನು ಹೊಡೆಸಿ ನೂಕಿಸಿ ಹೊರಗವರ
ಮಾಡಿ ಕಾರ್ಯವ ಎದೆಯ ಕೊಡುವೆ।
ಸ್ಥಾನಪತಿಗಳು ಬಂದು ನೇಮಿಗೆ ಕರಮುಗಿಯೆ
ಹೇಳಲಾರೆವು ಹೀನ ಸ್ವರವ ||೧೧೯||

ರಾಣಿಯರ ಅಭಿಮಾನ ಸ್ಥಾನಕ್ಕೆ ಹಾಕಿದ
ಪ್ರಧಾನಿ ಆಡಿದ ಹೀನದಲಿ।
ರಾಯ ನೇಮಿಯ ಸತಿಯ ಆಳುವೆನೆಂದಲ್ಲಿ
ಜೋಡೆಯರು ಕಷ್ಟ ಕೇಳುವರೆ ||೧೨೦||

ಸಾವಿರ ಚಿತ್ರವ ಮಸಿಯು ನುಂಗಿದ ಗಾದೆ
ನೋಡಯ್ಯ ಬೆನ್ನ ಗಾಯವನು।
ಇಂದ್ರನ ವಾಹನಕೆ ಬಂದಂತೆ ಮದವೇರಿ
ತ್ರಿಯಂಬಕ ಸುತನ ಕೋಪದಲಿ ||೧೨೦||

ಮುಂದುವರಿಯಲು ಸಿಟ್ಟು ಭೇರಿಯ ಹೊಡೆಯೆಂದು
ಹಲ್ಲೆಂದು ಸಾರಿಸಿದ ನೇಮಿ।
ಮಾ[ಡು] ಲೆಗ್ಗೆಗಳೆಂಬ ವಾರ್ತೆ ಎಲ್ಲರು ಕೇಳಿ
ನುಗ್ಗಲು ನಾಲ್ಕು ಮುಖದ ಪೌಜ ||೧೨೨||

ಆಕಾಶ ಭೂಮಿ ಏಕವಾಗಿಯೆ ಧೂಳು
ಅನೇಕ ಬೊಬ್ಬೆಗಳ ಮಾಡುವರು।
ಎಳೆಯಲು ಸವಾಲಕ್ಷ ಬಾಣ ಅಂಬಿನ ಮಳೆಯ
ಕರೆಯಲು ನಗರ ಮರುಳ್ವಂತೆ ||೧೨೩||

ಆಗಳಾ ಲೆಗ್ಗೆಯ ಹಿಡಿದು ತೊರೆದು ಜೀವವ
ನುಗ್ಗಿ ದುಮುಕಿದರು ಏಳ್ಕೋಟೆಯನು।
ಏದೆಗೆಡದೆ ಬೈಚಪ್ಪ ಹೊಡೆಯೆನುತ ಬಂಟರಿಗೆ
ಕೊಡುವ ಧೈರ್ಯಗಳ ಕಲಿಮಾಡಿ ||೧೨೪||

ಹೂಡುವ ಪೆಟಲು ಬಾಣ ಸುತ್ತಿ ಈ ಪರಿಯೊಳಗೆ
ಉರಿಯುತೆ ಪೆಣ ತುರುಕರನು।
ಖಾನರ ಕೋಳಾಹಳ ಬಾಣ ಸರಳ ನೋಡಿ
ರಾಯ ಕಂಪಿಲ ತಲ್ಲಣಿಸೆ ||೧೨೫||

ಬಾಯೊಳು ದ್ರವಗುಂದಿ ದೇಹದಿ ನಡಗುತ
ಶಾಂತಿಯಿಂದೆನ್ನ ಸ್ಥಿತಿಯು।
ತಾವರೆ ಎಲೆ ಉದಕ ನೀರು ತಲ್ಲಣಗೊಂಡು
ಭೋರಿಡಲು ಪುರವು ಜರ್ಝರಿಸಿ ||೧೨೬||

ರಾಯ ಕಂಪಿಲ ಕಂಡು ತೀರಲು ಎದೆಗೆಟ್ಟು
ಬೇಗ ಕರೆಯೆನಲು ಮಂತ್ರಿಯನು।
ಪೇಳಲು ಚರರಾಗ ರಾಯನ ಪ್ರತಾಪ
ಹೇಳಿದ ಮಂತ್ರಿ ಎಲ್ಲರಿಗೆ ||೧೨೭||

ಹೋಗಿ ಬರುವನಕ ಊರು ನಿಮ್ಮದು ಜೋಕೆ
ಆಮೇಲೆ ನೇಮಿ ಓಡುವನು।

ಎಂದೋಡಿ ಬಂದನು ಸದರಿಂಗೆ ರಾಯಂಗೆ
ಕರಮುಗಿದು ದಯಮಾಡಿ ಎಂದ ||೧೨೮||

ಬಿಡು ಮಂತ್ರಿ ಇನ್ಯಾಕೆ ಅಗಳ ಸೇರಿದ ಬಳಿಕ
ಮಡಗಯ್ಯ ಎನ್ನ ವಂದನೆಯ।
ಹೇಳುವರೆ ಬಾಯಿಲ್ಲ ಕೇಳೆನ್ನ ಮಂತ್ರೀಶ
ಯೊಂದಸಂತೆ ಹೊರಕೋಟೆ ||೧೨೯||

ರಾಯ ರಾಮನ ಕೊಂದು ಖಾನರ ಕೈಲಳಿವ
ಪೂರ್ವದ ಫಲಸರವಿತ್ತು।
ಸತ್ತ ರಾಮನುಯೆಂದು ಅತ್ತರೆ ತೀರದು
ರತ್ನಿಯ ಕರೆಸಯ್ಯ ಭೂಪ ||೧೩೦||

ಮುತ್ತಿಗೆ ತೆಗಿಸ್ಯಾಳು ಪುತ್ರನ ಕೊಂದವಳು
ಕತ್ತೆ ಸೂಳಿಗೆ ಪೇಳಿ ನೋಡು।
ನಾಡಸೂಳೆಯ ಮಾತ ಆಡಿ ಹಂಗಿಸಬೇಡ
ಜೋಡಿಗೆ ಕಡೆಯಾಗೆ ಮಂತ್ರಿ ||೧೩೧||

ಸಾವಿರ ಮಾತೇಕೆ ಪ್ರಾಣವ ಕಳಕೊಂಬೆ
ಖಾನರ ಕೈಗೆ ಸಿಕ್ಕಿದಂತೆ।
ಭೀಮನ ಕೊಂದವಳಿಗೆ ನೇಮಿಯು ಇದಿರುಂಟೆ
ಓಡಿಸಳೆ ಒಂಟಿ ಕುದುರೆಯಲಿ ||೧೩೨||

ಮೂಳಿಯ ಮಾತಿಗೆ ಬಾಲನ ಕೊಲುವಾಗ
ಕೂಡಲಿಲ್ಲವೆ ಈ ಬುದ್ಧಿ।
ಯಾಕಯ್ಯ ಬೈಚಪ್ಪ ಕಾಕು ಮಾಡಲಿ ಬೇಡ
ಇಡಿಸಯ್ಯ ಮೂಗಿಗೆ ಸುಣ್ಣ ||೧೩೩||

ಭೂಪ ರಾಮನ ಕೊಂದು ಬ[ಯ]ಲಿಗೆ ಬಾಯ್ಬಿಡುವ
ಪ್ರಾಪ್ತಿಯ ತಾ ಮಾಡಿಕೊಂಡಿ।
ಕಪ್ಪವ ಕೊಡುವುದಕೆ ಒಪ್ಪಿದೆ ಎಲೆ ಮಂತ್ರಿ
ಮೊರೆಹೊಕ್ಕ ಬಾದುರನ ಹಿಡಿಕೊಟ್ಟು ||೧೩೪||

ಮುತ್ತಿಗೆಯ ತೆಗೆಸಲೆ ಇಕ್ಕಿದೆ ಬೆಂಕಿಯ
ಪಟ್ಟದ ದೊರೆಯು ನೀನಾದೆ।
ಕಡಿವ ತ್ರಾಣಿಲ್ಲದೆ ಮಡದಿ ಬೇಡಲು ಕೊಟ್ಟು
ಉಳುಹಿಕೊಂಬರೆ ಹಾಯಗೊಡದೆ ||೧೩೫||

ಕಡಿಸಬೇಕೆಂಬ ಛಲವ ತೊಟ್ಟವ ನೀನು
ಬಿಡು ಬಲ ಮಾಡಿಕೊಳ್ಳಯ್ಯ।
ಮಾತಿಗೆ ಬಂದವರ ಭಂಗಿತವ ಮಾಡಿಸಿ ಬಿಟ್ಟೆ
ಮಾತಿಗೆ ಗು[ರಿ]ಯು ತಾನಾದೆ ||೧೩೬||

ಸಾಕಯ್ಯ ದೊರೆತನ ಸಾವೆನು ವಿಷ ಕುಡಿದು
ಭೂಪತಿಯಾಗಿ ನೀನಾಳು।
ನುಡಿವ ನಿಷ್ಠುರವ ಪ್ರೌಢ ಮಂತ್ರಿಯು ಕೇಳಿ
ಸಯಸ್ವರವ ಮಾಡಬೇಕೆನುತ ||೧೩೭||

ಭೂಪನೆ ಲಾಲಿಸು ಭಯಬೇಡ ಕಡಿವಂಥ
ಬಿರಿದಂಕರಿಲ್ಲವೊ ಧರೆಯೊಳಗೆ।
ರಾಜೇಂದ್ರ ಲಾಲಿಸು ನೀ ಕಾಲಗೆಡಲುಬೇಡ
ನಾನು ಒಬ್ಬನ ಕರೆಸುವೆ ನಾ ||೧೩೮||

ಬೇಡಿದ ಸಂಬಳವ ಕೊಡುವ ನಿರ್ಧರ ಪೇಳು
ರಾಮಗೆ ಮಿಗಿಲಾದರ ತರುವೆ।
ಕರೆಸುವೆನೆನಲಾಗ ಕಲಿಯಾಗಿ ಕಂಪಿಲನು
ಜಗದೊಳಗುಂಟೆ ಅಂಥವನು ||೧೩೯||

ಮರಣ ಕಾಲದಿ ಬಂದು ಬವರವ ಗೆಲಿದವಗೆ
ಇರುವ ರಾಜ್ಯದಿ ಅರ್ಧ ಕೊಡುವೆ।
ಕೊಡುವ ದಾತನು ಇಲ್ಲ ಕಡಿವ ಬಂಟಗೆ ಏನು
ಧರಣಿಯ ಮೇಲೆ ಕಡೆಯುಂಟೆ ||೧೪೦||

ಗಿಡದೊಳು ಮರುಜೆವಣಿ ತೆರನಾಗಿ ಅಡಗಿಹರು
ಕರೆಸೆನಲು ಈಗ ಕರೆಸುವೆನು।

ಕರೆಸುವೆ ನಿಮ್ಮೊಳು ನಿಜ ಕರವು ಉಂಟಾಗೆ
ಪರದೇಶದಿಂದ ರಾಹುತನ ||೧೪೧||

ದೊರೆ ನೇಮಿ ದಂಡನು ಹೆದ್ದೊರೆಯ ದಾಂಟಿಸಿ ಬರಲು
ಸರಿ ಮಾಡು ಅವನ ಸಂಬಳವ।
ಅವನೆ ನನ್ನಯ ಮಗನು ಅವನೆ ಎನ್ನಯ ತಂದೆ
ಅವ ಎನ್ನ ವಂಶಾಬ್ಧಿ ತಿಲಕ ||೧೪೨||

ಅವನೀಗ ಹರಿಹರದೇವಿ ಗರ್ಭದಿ ಬಂದ
ಅವನೀಗ ರಾಮನು ಎಂಬೆ।
ಕರೆ[ಸವೆ] ಪ್ರಧಾನಿ ಕೊಟ್ಟೆ ನಂಬುಗೆ ಮುನ್ನ
ತೆಗೆದಿಡಲು ಬಣ್ಣ ತಿಂಬುವೆಯ ||೧೪೩||

ಬರುವುದೆಂದಿಗೊ ಕಾಣೆ ಹೋದ ಬಳಿಕವು ಊರ
ಫಲವೇನು ಮಂತ್ರೀಶ ಬಂದು।
ಕರೆಸಲೆ ರಾಜೇಂದ್ರ ಗಳಿಗೆ ಮೂರರ ಒಳಗೆ
ಬಿಜಮಾಡಿ ಸೆಜ್ಜೆಯ ಗೃಹಕೆ ||೧೪೪||

ಹರಿದು ಬಂದನು ಮಂತ್ರಿ ಸುಳುಹುಗಾಣದ ರೀತಿ
ನೆಲಮನೆಯ ಬೀಗ ಒಡೆದನು।
ಕದಗಳ ತಟ್ಟಿನ್ನು ಕರೆಯಲು ಮಂತ್ರಿಯು
ಸ್ವರವ ಕೇಳಿದನು ಕಾಟಣ್ಣ ||೧೪೫||

ವರ ಮಂತ್ರಿ ಬಂದಹನೆನುತ ರಾಮಗೆ ಪೇಳೆ
ಹರುಷದೊಳಗೆ ಎದ್ದು ಬರಲು।
ಬಂದೆನೊ ಮಂತ್ರೀಶ ಚೆಂದವೆ ಸ್ಥಿತಿಗತಿಯು
ರಾಜೇಂದ್ರ ಕ್ಷೇಮದೊಳಿಹನೆ ||೧೪೬||

ಕ್ಷೇಮವ ಸುಡು ಪುತ್ರ ಪ್ರಾಣಳಿವ ಕಾಲವು ಬಂತು
ನೇಮಿಯ ಬಲಬಂದು ಮುತ್ತೆ।
ಪುರ ಮುಳುಗು ಕಾಲವು ಬಂತು ಭೂಪ
ನೆಂತು ಅದಳು ಜೀಬಿಯನು ||೧೪೭||

ರಾಮನು ಮುಖ ಅಡಿಯ ಸೇರಿದನು ಅರಮನೆಯ
ಕಾಯಬೇಕೆಂದು ಪ್ರಾಣಗಳ।
ಕಂದನ ಕೊಂದಾಳೆ ಕಡಿಯಲಾರಳೆ ದಂಡವ
ಒಡನೆ ಕರಕೊಂಡು ಗಂಡನ ॥೧೪೮॥

ರಂಡೆ ನೋಡಲು ಬೇಡ ಹಡೆದಾಕೆ ಬೆಳಗಾಗಿ
ಹನ್ನೊಂದನು ಮರೆದು ದಯಮಾಡಿ।
ಬಾಳೊಂದು ಪೇಳುವೆ ವ್ಯಾಳ್ಯವು ತನಗಿಲ್ಲ
ಬಾದುರನ ಹಿಡಿಕೊಡುವನರಸು ॥೧೪೯॥

ಪಾದಕೆ ಹೀನಾಯ ಭೂಮಿಯಿರಲು ಬಿಡೆನು
ಖಾನರ ದಂಡೆಲ್ಲ ನೋಡಿ ಬಂದೆನೆನುತ।
ಮೊರೆಯ ಬಿದ್ದ ಕೊಡಲು ಯಮನ ಭಾಗಕೆ ತನಗೆ
ತೆಗೆಯೆನಲು ಲಾಳ[ಗುಂ]ಡಿಗೆಯ ॥೧೫೦॥

ಸಿಡಿಲಂತೆ ಘುಡುಘುಡಿಸಿ ಶಿರವನರಿವೆನು ನೇಮಿ
ಮರೆದನೆ ಪ್ರಾಣ ಕಾಯ್ದವನ।
ಕಮಲಜನ ಪಿತನ ತನುಜ ರೂಪನು ಪೊರಡೆ
ಎರಗಿದ ಮಂತ್ರಿ ರಾಮನಿಗೆ ॥೧೫೧॥

ಧುರಧೀರ ಕಾಟಯ್ಯ ಕರವ ಗಲ್ಲವ ಪಿಡಿದು
ಹರುಷದಿ ಲಿಂಗ ನಾಗಯನು।
ರಾಮನ ಸರಿಯರು ಪ್ರಧಾನಿಗೆ ನಮಸ್ಕರಿಸೆ
ಪ್ರೇಮದಿ ಪಿಡಿದೆತ್ತಿ ಹರಸಿ ॥೧೫೨॥

ಓರಂತೆ ಎಲ್ಲರ ಒಡಗೊಂಡು ತನ್ನಯ
ರಾಜಮಂದಿರಕೆ ಕರೆದೊಯ್ದು।
ಸ್ನಾನಪಾವನ ಮಾಡಿ ಷಡುರಸಾನ್ನವ ಸವಿದು
ಆಭರಣ ಭೂಷಣಗಳ ಧರಿಸಿ ॥೧೫೩॥

ಕಾಲ ಪೆಂಡೆವು ಕಡಗ ವೀರಕಂಕಣ ಮುದ್ರೆ
ಸ್ಥಾನ ಸ್ಥಾನಕೆ ಧರಿಸಿದನು।

ತರಿಸಿದ ತನ್ನಯ ತೇಜಿಯವನು ನೋಡಿ
ಮತ್ತೆ ಮೈದಡವಿ ನೇವರಿಸಿ ||೧೫೪||

ಒಡೆಯನ ಕುರುಹರಿತು ಕುಣಿಯುತ್ತ ತರದೊಳು
ಕುಡಿಯಲು ನೀರ ಕಳವಳನು।
ತೇಜಿ ಶೃಂಗರವಾಗಿ ರಾಯ ರಾಮನ [ನೋಡೆ]
ರಾಣೆರಾರತಿಗಳ ಬೆಳಗೆ ||೧೫೫||

ನೇಮಿಖಾನರ ಬಲವ ರಣಭೂಮಿಗಾಹುತಿ ಮಾಡಿ
ಭಾ[ವೆ] ರಮಣಗೆ ಶ್ಯಾಸೆ ಇಡಲು।
ಕುರುಹ ಕಾಣದ ತೆರಕೆ ತೊಡಿಸಿ ವಜ್ರಾಂಗಿಯ
ಹೊರಡಲೈವರು ತೇಜಿ ಏರಿ ||೧೫೬||

ಬರಲಾಗ ಪುರಜನರು ಬೆರಗಾಗಿ ಕೇಳಲು
ಇವರಾರು ಎನುತ ಮಂತ್ರಿಯನು।
ಎಲ್ಲಿಂದ ಬಂದನು ಹೊಸ ರಾಹುತನೆಂದು
ಎಲ್ಲರು ಕೇಳೆ ಮಂತ್ರಿಯನು ||೧೫೭||

ಕಲ್ಯಾಣಪುರದಿಂದ ಕರೆಸಿದೆ ಎನುತಲಿ
ಮತ್ತಲ್ಲಿ ನಡೆದರು ಬೀದಿಯಲಿ।
ಆರು ತಿಂಗಳು ಹುಲ್ಲು ನೀರನು ತೊರೆದಿರ್ದು
ಏರುವ ಒಡೆಯನಿಲ್ಲದಲೆ ||೧೫೮||

ಏರಿತು ಶಕ್ತಿಯು ಇಮ್ಮಡಿಯಾಗಿ
ಹಾರಲು ಹುಲ್ಲೆಯಂದದಲಿ।
ಮೂಡಣ ದಿಕ್ಕಿನ ಬಾಗಿಲ ಹುಲಿಮುಖದ
ಮೇಲಣ ಶಶಿಮಾಮಿ ನಡೆಯೆ ||೧೫೯||

ನೋಡುತ್ತ ನಿಲ್ಲಲು ಪ್ರಧಾನಿ ಬೇಗದಿ ಬಂದು
ರಾಯ ಕಂಪಿಲನು ಇದ್ದೆಡೆಗೆ।
ತಂದೆನು ಎಲೆ ಭೂಪ ಎಂದ ಮಾತಿಗೆ ನೋಡು
ಹಿಂದಾಗನೆಂಬುದನರಿಯಾ ||೧೬೦||

ಮುಂದವನು ಎಲ್ಲೆಂದು ರಾಯ ಕೇಳಲು ದಂಡ
ಕೊಂದಲ್ಲದೆ ತಾ ಬರೆನೆಂದ।
ರಾಯ ರಾಮಗೆ ಮಿಕ್ಕ ಧೀರನೆಂಬುವ ಸುದ್ದಿ
ಕೇಳಿಬಲ್ಲನು ಬಹುದಿವಸ ॥೧೬೧॥

ಹೇಳಿ ಕಳುಹಲು ಮುನ್ನ ವಾಯು ಗಮನದಿ ಬಂದ
ಪ್ರಾರಬ್ಧ ಹ್ಯಾಗಿಹುದೊ ನಮ್ಮ।
ರಾಮನ ಪೋಲ್ವರು ಭೂಮಿ ಮಂಡಲಕುಂಟೆ
ಭೀಮನಲ್ಲವೆ ಕಲಿಯುಗಕೆ ॥೧೬೨॥

ತಾಮಸ ಮಾಳ್ಪನೆ ದಂಡನು ಕಾಣಲು
ಮಂತ್ರಿ ಒರೆವ ಸಿಡಿ ಹೊಡೆದಂತೆ।
ಹೆಸರ್ವಡೆದ ರಾಹುತನು ಹಸುಮಗನಾದರು
ಪುಸಿಯುಬಾರವು ರಣದೊಳಗೆ ॥೧೬೩॥

ದಶರಥ ಮಗನೊರಿಯ ನಗರನು ಸುಟ್ಟಂತೆ
ಪ್ರತಿ ಹನುಮನೆಂದು ಕರೆಸಿರುವೆ।
ಆವ ದೇಶದೊಳಿರ್ದ ರಾಯಮಂತ್ರಿಯೊ ನೀನು
ಹೇಳಿದಾಕ್ಷಣ ಬರುವುದಕೆ ॥೧೬೪॥

ಆವ ಕಾಲದೊಳಿವನ ಬೇಹ ಮೂಲವ ಪಡೆದೆ
ರಾಯ ಕೇಳಿದನು ನಸುನಗುತ।
ಪೇಳುವೆ ಬಂದಿರುವ ಬಾಧಕ ಕಳೆದಾಗ
ವ್ಯಾಳ್ಯ ವಿವರವ ಮಾಡುವುದೆ ॥೧೬೫॥

ಹೋಗಿ ಬರುವೆನು ರಾಯ [ಸಾ]ರಂಗ ಸ್ವಾರಿಯನೆಂದು
ಸಾರಿದ ಮಂತ್ರಿ ಸದರಿಂಗೆ।
ಬಾದುರಖಾನನ ಕರ್ಣದೊಳಗೆ ಹೇಳಿ
ಬಾಗಿಲ ತೆಗೆದು ಜಗಳಕೆ ॥೧೬೬॥

ಪ್ರಾಣವ ಕಾಯ್ದುಕೋ ಭೀಮನಿರಲು ತನಗೆ
ಏನು ಭಯವೆಂದು ಏರಿದನು।

ಬಾದುರನ ಬೆನ್ನೊಡನೆ ಹದಿನಾರು ಸಾವಿರ ಮಂದಿ
ಏರಿದರು ಕಾಕ್ಹೊಡೆಯುತಲಿ ॥೧೬೭॥

ರಾಮು ಬಂದನು ಎಂದು ಬೆದರಿ ತುರುಕರ ಪೌಜು
ಏರಲು ಸರಳ [ನೆರೆ] ತೆಗೆದು।
ಹೊಕ್ಕು ಬಾದುರಖಾನ ಕುಟ್ಟುತ ಒಂದೆರಡು
ಹೆಚ್ಚಿಸಿ ತರಿದನು ಕೊರಳ ॥೧೬೮॥

ನಂಪ ಕಂಡರು ಬೇಗ ಬಾದುರಖಾನಂದು
ಲಕ್ಷನು ಕಿತ್ತು ಕಡಿಯೆನುತ ।
ಏರಲು ಎಂಬತ್ತು ಸಾವಿರ ತುರಗವು
ಸುರಿಸಲು ಅಂಬಿನ ಮಳೆಯ ॥೧೬೯॥

ಕಾರ್ಯ ತೀರಿತುಯೆಂದು ಜಾರಿ ಬಾದುರಖಾನ
ಭೋರನೆ ಹಿಂದಕ್ಕೆ ತೆಗೆದ।
ಬಿಡದಿರಿ ಬಾದುರನ ಹಿಡಿಯೆಂದು ಕೈಸೆರೆಯ
ಹೊಡೆಯಲು ಲಕ್ಷ ಪೌಜು ॥೧೭೦॥

ಒಡನೆ ಬಾಗಿಲ ದಾಂಟಿ ಬಿಡಿಕೊಂಡು ಕರಗಳನು
ಹಿಡಿ ನನ್ನ ಲವುಡಿ ನೀನೆನುತ।
ಹೊಕ್ಕರು ಖಾನರು ಹೂಂಕರಿಸಿ ಆರ್ಭಟಿಸುತ್ತ
ಮುತ್ತಲು ಮುನಿದು ಪಲ್ಲಣವ ॥೧೭೧॥

ಕುಟ್ಟಿ ಕೋಳಾಹಳ ಮಾಡೆ ಕಹಳೆ ಭೇರಿಗಳಿಂದ
ಕಿತ್ರನ ಮಳೆಯ ಕರೆಸುತಲಿ।
ಖಾನ ವಜೀರರು ತಾವಲ್ಲದೆ ಮುಖವಾಗಿ
ಬೆರಗಾದ ತುರಗ ರಾಹುತರು ॥೧೭೨॥

ವಾರಂತೆ ಮುಖವಾಗೆ ಜೇನ್ನೊಣ ಕಡಿದಂತೆ
ನೋಡುವನು ರಾಮ ನಗುತ।
ವಸ್ತಿರೆ ಮಾಮಯ್ಯ ಲೆಸ್ತಿ ಅಡಗಲುಗಿ ನಲ್ಲಮ್ಮ
ನೀವು ಮಾಡಿ ಬಂದಿರೆ ಗೋರಿಸ್ಥಳವ ॥೧೭೩॥

ಮಿಸುಕಿಲಿ ಮಾಡೇವು ಬಕರಿಗಳ ಕರಿದಂತೆ
ಮುಸಲಮಾನರು ಏರಿದರು।
ತೂಗುತ ತಲೆಗಳ ನೀಡುತ ಜರ್ಝರಿಯ
ಏನೆಂಬೆ ಕೊಟ್ಟೆಕೊಡು ಬಿಡುವೆ ||೧೭೪||

ಬಿಚ್ಚಿಖಾನನು ಬರಲು ಹದಿನಾರು ಸಾವಿರದೊಳು
ಮೀರಿ ಮದಕರಿಯ ಅಹುದೆಯಲಿ।
ಭೀಮಖಾನರು ಕೊಳ್ಳೆ ಮೊದಲಾಗಿ ಸಲ್ಲಾಮು
ನಾವು ಮಾಡಿ ಬಂದಿರೆ ಗೋರಿ ಸ್ಥಳವ ||೧೭೫||

ಜಾವಿಗೆ ಪೆಟ್ಟಲು ಮೂಡಿ ಎದೆಯೊಳು ಗುಂಡು
ಅಲ್ಲಾ ಖುದಾಯೆಂದು ಒರಗಿದರು।
ಕಾಲನ ಗಗನಕ್ಕೆ ಜಜ್ಜಾರೆ ಜಾಯೆಂದು
ದದ್ದುರಖಾನ ಹೊಗಲೇರಿ ||೧೭೬||

ಕೋಡಾರೆ ಎನುತಲಿ ಮುಖವ ನೋಡದೆ ಸುಗಿದ
ಮೂರಾರು ಸಾವಿರ ಬಲದಿ।
ಕೊಡು ಲವುಡಿ ಕೊಯ ಕಡಿಕಡಿ ಮಾಡುವುದ್ಯಾಕೆ
ತುಟಿ ಸಹಿತ ಮೂಗ ಕೊರೆವೆನು ||೧೭೭||

ಉಳಿದರಲು ಕೊರೆವಂತೆ ಒಡೆಯ ಲೆಂಕೆಯ ಹನುಮ
ಒಡಲೊಳು ಮೂಡಿ ತಾಟಿಯೊ ||೧೭೮||

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ತರಳ ರಾಮನು ಬಂದು ರಣವ ಕಡಿವಲ್ಲಿಗೆ
ಮುಗಿದುದು ಹದಿನಾರು [>ಹದಿನೇಳು] ಸಂಧಿ ||೧೭೯||*

* + ಅಂತು ಸಂಧಿ ೧೬ಕ್ಕಂ[>೧೭ಕ್ಕಂ] ಪದನು ೩೫೫೭ಕ್ಕೆ ಮಂಗಳ ಮಹಾಶ್ರೀ (ಮೂ)

ಸಂಧಿ : ಹದಿನೆಂಟು

❖

ಬಾಲರಾಮನ ಗೆಲುವು-ಪರಿವಾರದ ಹರ್ಷ

ಶ್ರೀ ಗುರುವರ ಶಂಭು ಭಾಗೀರಥೀಶನೆ
ನಾಗಭೂಷಣ ನಂದಿಕೇಶ।
ಭೂಮಿ ಬ್ರಹ್ಮಾಂಡಕ್ಕೆ ಆಧಾರಕರ್ತನೆ
ಶ್ರೀಗಿರಿವರನೆ ಕೊಡುಮತಿಯ ॥೧॥

[ಮ]ರಗಿವಿ ನಾಲ್ಕು ದೇಹಗಳೆರಡು ಮೂರಾಗಿ
ಬಾಲಗಳೆರಡು ಕರ ನಾಲ್ಕು।
ಆವ ಮೃಗವ ಬೇಡುವೆ ನಯನವು ಹದಿನೆಂಟು
ಜಿಹ್ವೆ ಹದಿನಾರರಲಿ ಕೊಡು ಮತಿಯ ॥೨॥

ರಣವ ಕಾಣುತ ರಾಮ ಕಲಿಯಾಗಿ ಮನದೊಳು
ಸರಸಿಜ ರವಿಯ ಕಂಡಂತೆ।
ಮುಗುಳು ನಗೆ ನಗುತ ತುರುಕರ ಕೆಡವುತ್ತ
ಅಲ್ಲಾ ಖುದಾಯೆಂದು ಬೀಳೆ ಕೆಡಹಿ ॥೩॥

ಬ್ಯಾಡರು ಉಪಕಾರಿ ಹೇಳೇಳಿ ಹೋದವರು
ಏರುವರು ನೆಗೆದು ಬೀಳ್ವಂತೆ।
"ಹ ತೇರಿ ಮಾಕಿ" ಬೈದು ಹಾರಿಸಿ ತುರಗವ
ಏರುವರು ಕೋಟೆ ಬುಡಕಾಗಿ ॥೪॥

ರಾಮನಿಲ್ಲದ ಮೇಲೆ ಊರ ನಾವು ಬಿಡುತಿವೆ
ಕೋವಿ ಯಾರಿಗೆ ಇಡುಲಡಿ।

ಸಾಲ ದಾವಣಿ ಕಟ್ಟಿ ಹೊಡೆಯದಿರಲು ನಿಮ್ಮ
ಸುರಿತಾಳನ ಬಂಟರೆ ನಾವು ||೫||

ಆದೀತು ಅರೆಘಳಿಗೆ ಜೀವವ ಸೈರಿಸಿ
ಗೋರಿಗೆ ಗತಿಗಾಣದಂತೆ।
ಸಾರುತ ಬೈಚಪ್ಪ ಆಲಿಂಗದ............
ತಾವು ಒಂದಾಗಿ ನಿಲದಂತೆ ||೬||

ಬಾದುರನಾ ಕೇಡು ಭಾಯಿ ಪ್ರಧಾನ ಒಳ್ಳೆವನಿದ್ದಿ
ಬಾರ ಹನ್ನೆರಡಾಗೆ ಬಿಡೆ ನಿಮ್ಮ।
ಮೇಲೆರಡು ತುಂಬಿದರೆ ಊರ ಕೊಟ್ಟೆವೆ ನಿಮಗೆ
ಆರು ಲಕ್ಷವು ಗೋರಿ ಇಡದೆ ||೭||

"ಹ ತೇರಿಕೆ ರಕ್ಕ ಹತ್ತೆ ಬುಲಾವರೆ"
ಕಿತ್ತು ಒಗೆವೆನು ಇವ[ನ] ಗೋಡೆ।
ಹತ್ತಿಹುದೇ ಯಾ ನೇಮಿ ವಜೀರಖಾನರ ಕರೆಸಿ
ನೀವು ಹತ್ತೀರೆ ತನಗೆ ಬಿಟ್ಟೀರೆ ||೮||

"ಹತ್ತೇರಿ ಬೇರಿಕು ಹತ್ತೆ ಬುಲಾವಾರೆ"
ಕಿತ್ತುವದೇನು ಇವ[ಳ್ಳೊ]ಡೆ।
ವಾಲೆಯ ಬರೆದಂಥ ಪಾಳ್ಯಗಾರರ ಕರೆಸಿ
ನೀರ ನೀಡಿದನು ಮುಖದಿಂದ ||೯||

ಹೊಲೆಯರ ಬಣ್ಣದ ಮೂಳದೊರೆಗಳು ಎಲ್ಲ
ಬೇರಾರೆ ಮಾಡ ಮಲತಿಹನು।
ಹೊಡ[ದೇ]ವು ಗಳಿಗೇಲಿ ಬೇರ ಕೀಳುವೆನೆಂದು
ಆಡಿದರು ಸುರಿತಾಳನೊಡನೆ ||೧೦||

ಹೇಳಲೀಕ್ಷಣವಾಗಿ ಮಂದಲಗಿರಿಯಾಯ್ತು
ಸೇರಿತು ಯಮನೂರ ಲಕ್ಷ।
ಮೋರೆ ತೋರಲು ಪಾಶ್ಯಾ ತಾ ಮೊದಲು ಎಲ್ಲರನು
ಕೀಳಿಸನೆ ಕಣ್ಣು ನಾಲಗೆಯ ||೧೧||

ಮೂಳ ಖಾನರು ಬಂದು ನೋಡುತ ಕುಮ್ಮಟವ
ಜೋಗಿಗೆ ಕಡೆಯಾದರೆನಲು।
ಬಂದುದಕೆ ಬಾದುರನ ಕೊಂಡುಹೋ[ಗ]ರೆ ಎಮ್ಮ
ಮಂಡೇದ ಚಿಂದಿ ಉಳಿವುದಾ ||೧೨||

ದಂಡೆಲ್ಲ ಲಯವಾಗಿ ಮುಂಡೆರಂದದಿ ಹೋಗಿ
ಮುಖತುಂಬ ಉಗಿಸನೆ ಸೂಳೆರೊಡನೆ।
ನೇಮಿ ಆಡುವ ನುಡಿಯ ಹೀನ ಸ್ವರಗಳ ಕೇಳಿ
ಖಾನ ಖಾನರು ಛಲ ಮಸಗಿ ||೧೩||

ಪಾಳೆಗಾರರು ಎಲ್ಲ ಧ್ಯಾನಿಸುತ ಮನದೊಳಗೆ
ಮಾಡಿದೆವು ನಮ್ಮಿಂದ ಮೇಲೆ।
ಹಳೆಯಬೀಡವನಂತೆ ಇರದೆ ಮನೆಯೊಳು ನಾವು
ಬರೆದು ಕೆಟ್ಟೆವು ವಾಲೆಯನು ||೧೪||

ಕಡೆಗೆಮ್ಮ ಕಂಪಿಲನು ಸುಡದೆ ಬಿಡುವನೆ ಬೀರ
ಇದರೊಳಗಿವನು ಮಿಕ್ಕುಳಿಯ।
ಯಾವ ತೆರದೊಳು ನಮಗೆ ಉಳಿಗಾಲ ಕಾಣುವುದಿಲ್ಲ
ಪಾಳೆಯಗಾರರು ಛಲವಿರಿ ||೧೫||

ಆನೆ ಕುದುರೆಯ ಮಂದಿ ವಾರಂತೆ ಶೃಂಗರಿಸಿ
ಮುಂದೇಳಲು ಮುಖಲ್ದಾರರೆಲ್ಲ ||೧೬||

ಕೊಟ್ಟಗಾರನು ಮುದ್ದ ಹತ್ತಲು ಲೆಗ್ಗೆಯನು
ಮಿಕ್ಕ ದಳವೆಲ್ಲ ಭೋರೆನುತ।
ಸತ್ತು ಮುಳುಗುವೆನೆಂದು ಕಡಲುಕ್ಕಿದಂದದಿ ಏರೆ
ಪೃಥ್ವಿ ತಲ್ಲಣಿಸಿ ಒದರ್ವಂತೆ ||೧೭||

ಮಾರುತನರ್ಭಟಿಗೆ ವಾರುಧಿ ತಲ್ಲಣಿಪ
ಮೇರೆಲಿಪುರ ಊದಗಾಪು।
ವೀರ ಮನ್ನೆಯರೆಲ್ಲ ಪ್ರಧಾನಿ ಸಹಿತ ಕಂಡು
ತೀರಿತೆ ಭೋಗದ ಸ್ಥಿತಿಯು ||೧೮||

ಕವಿಯಲು ಮಾರ್ಬಲವು ಭುವನವ ಕಾರ್ಗುಡಿಸಿ
ನೆ[ಲೆ] ಕಾಣದಂತೆ ದಿನಕರನು ।
ಸವಲಕ್ಷ ಬಾಣಗಳನು ಸರಳೊಂದು ಕೊಲೆಯು
ನಗರವ ಜರ್ಝರಿಸುವಂತೆ ॥೧೯॥

ಕತ್ತಿ ಭಲ್ಲೆಯು ಈಟಿ ಕಿತ್ತು ಖಾನರು ಬಂದು
ಸತ್ತ ಹೆಣಗಳನು ತುಳಕೊಂಡು।
ಹೊಕ್ಕರು ಜೀಬಿಯ ಹೊರಸುತ್ತ ಕೋಟೆಯ
ಬಿಟ್ಟು ಓಡಲು ಪುರದ ಮಂದಿ ॥೨೦॥

ಹೊಳರೊಳ ಕೈಯೆಲ್ಲ ಉಡುಗಿ ಬಂದವು ಎಂದು
ನುಡಿಯಲು ಶೆಟ್ಟಿ ಲಿಂಗಣ್ಣ।
ಮೃಡನ ನೆನೆವುತ ಎದ್ದ ಮಗನ ರಕ್ಷಿಸಿಯೆಂದು
ದೃಢಚಿತ್ತವಾಗಿ ಮನದೊಳಗೆ ॥೨೧॥

ರಾಯ ಕಾಟಣ್ಣ ಪೇಳ್ದ ರಣಧೀರ ಇನ್ನ್ಯಾಕೆ
ಹೋಯಿತು ಹೊರಸುತ್ತ ಕೋಟೆ।
ಬ್ಯಾಡರೆಲ್ಲರು ಓಡಿ ಹುಡೆವು ಹೊಕ್ಕರು ಸ್ವಾಮಿ
ಹೋಹುದು ಪೇಟೆ ಗಳಿಗೆಯಲಿ ॥೨೨॥

ಹರ ಶಂಭ ಜಟ್ಟಂಗಿ ವರದ ರಾಮೇಶ್ವರ
ತಾ ಮುನಿಯಲು ಅಪಕೀರ್ತಿ ನಿಮಗೆ।
ಶ್ರೀ ಮಹಾದೇವನೆ ಕಾ[ವನೀ] ಧನ ಮನೆ
ದೇವರ ಸ್ತುತಿಯ ಮಾಡಿದನು ॥೨೩॥

ಮಾಯಮರ್ದನರೂಪ ಮಂಡೆ ಕಂಟಿಕ ಎತ್ತು
ಕಾದೇಯ ಕರುಣ ದೃಷ್ಟಿಯಲಿ।
ಆರು ತಿಂಗಳಿಗಿಂದು ದಯಮಾಡಿದೆ ಕಾರ್ಯವ
ನೋಡುವುದು ಮಗನ ಸಾಹಸವ ॥೨೪॥

ಗಿರಿಜಾವಲ್ಲಭ ಬಂದು ನೆರೆಯಲು ಬಲಭಾಗ
ಶರೀರದ ರೋಮ ಸರಳಾಗೆ।

ತೇಜಿಯ[ನೇ]ರುತ ಕಹಳೆಯ ಹಿಡಿಯೆನಲು
ಬಿರುದನು ಕಡಿಕಡಿಯೆಂದು ಸಾರಿಸಲು ||೨೫||

ನಡೆಯಲು ಮೂರು ತುರಗವೇರಿ ಜೋಡಿನ
ಒಡೆಯವರು ಆಗ ಮುದ್ದಯನು।
ಒದಗಲು ಬಾದುರಖಾನ ಮುದ್ದನು ಹಂಪ
ಆನಂಜೆಯ ರಮಣ ಸಂಗಯ್ಯ ||೨೬||

ತಾರಕದ ಗಳ ಕಿತ್ತು ಹಾರೊಡಿಸಿ ನಡೆಯಲು
ಊರು ಎಚ್ಚರವೆಂದು ಪೇಳಿ।
ಏರಲು ಹೊರಕೋಟೆ ಬೀದಿಸಾಲಿನ ವಾಲೆ
ಗೋವಿಗೆ ವ್ಯಾಘ್ರ ಹೊಕ್ಕಂತೆ ||೨೭||

ಕೋಯೆಂದು ಕೂಗುತ ಕೋಟಿ ಸಿಡಿಲಿನ ಭರಕೆ
ತಾರ ಕಡಿಯಲು ಕೊಂದುಕೊಂಡು।
ಬಾಳೆಯನರಿದಂತೆ ಹದಿನಾರು ಬಾರಿಯ ಹೊಡೆಯೆ
ಮಾರಿ ಬಡಿದಂತೆ ಕುರಿಹಿಂಡ ||೨೮||

ವೀರ ಕಾಟನು ಹೊಕ್ಕು ಜೇಬಿ ಅಗಳೊಳು ಕಡಿದ
ಮೋರೆ ಮುಸುಡಿಯ ಏಕವಾಗಿ।
ವೀರಸಂಗನು ಲಿಂಗ ಕೆರೆ ಬೀದಿಯ ಒಳಗೆ
ತಾರಗಡಿಯಲು ಕುರಿಗಳಂತೆ ||೨೯||

ಹುಚ್ಚುಕೋಣನ ತೆರದಿ ಹೊಕ್ಕು ಬಾಣೆಯ ಮುದ್ದ
ಸಿಕ್ಕಿದವರ ಮೆಟ್ಟಿ ತುಳಿದು।
ರಟ್ಟೆ ಕಾಲ್ಗಳ ಪಿಡಿದು ಒತ್ತಿ ಹಣಿಯುತ ಕೋಟೆ
ಕೋಟೆ ತಿಂದವಳು ಇಲಿ ಹೂಡಿ ||೩೦||

ರಾಯ ರಾಮನು ಹಿಂದೆ ಬಾದುರ ಕಡಿದನು
ಆತುಕೊಳ್ಳುತ ಉಳಿದವರು।
ತಾರ ಮಲಗಲು ಹೊಕ್ಕು ಖಾನರು ಕರಿತುಗರ
ಬೀಜ ಕೊಂಬರು ಇರದಂತೆ ||೩೧||

[ಹೋರುವ] ಕಲಿಯಾಗಿ ರಾಮಗೆ ಪ್ರತಿಭೀಮ
ರಾಯ ರಾಹುತನೆನ್ನಬಹುದು।
ಜೋಕೆನುತ ಹೊರಡಲು ಕಾಲಾಳು ಕರಿತುಗರ
ಮೂರೆಂಟು ಸಾವಿರ ಬರಲು ||೩೨||

ಹೊಡೆವ ತಮ್ಮಟ ಭೇರಿ ನುಡಿವ ಬಿರುದಿನ ಕಹಳೆ
ನಡೆಯಲು ರಾಮ ಬಯಲಿಂಗೆ।
ಎಡಬಳಸಿ ನಿಂದಿರಲು ಪವುಜು ಕಾಣುತ ರಾಮ
ಒಡನೇರೆ ತೇಜಿ ಕುಪ್ಪಳಿಸೆ ||೩೩||

ಗಿರಿಗೆರಗು ಸಿಡಿಲಂತೆ ನಡು ಪವುಜವೊಳು ಹೊಕ್ಕು
ಕಡಿವ ಕಾಕ್ಕೊಡೆದು ಆರ್ಭಟಿಸಿ।
ಒರಗಲು ಸುತ್ತೊಂದು ಬಾಣ ದೆಸೆಗೆಯೊಳಗೆ
ಹರಿಯಲು ರಕ್ತದ ಹಳ್ಳ ||೩೪||

ಕದಳಿಯ ವನದೊಳು ಮದಕರಿಯು ಹೊಕ್ಕಂತೆ
ಸದೆಬಡಿದು ಸವರಿದರವರು।
ಬೆದರಿತು ಮಾರ್ಬಲವೆಲ್ಲ ಅರೆ ಅರೆ ಇವರ್‍ಯಾರು
"ಕುಮಟಾ ಉಟೀ" ಬೇಗ ಎನಲು ||೩೫||

ಮುತ್ತಿಗೆಯ ಬಿಟ್ಟೋಡಿ ತಿಟ್ಟ ದಿಬ್ಬವ ಹತ್ತಿ
ಬೆಚ್ಚಿ ಬೀಳುವರ ನೋಡುತಲಿ।
ಹತ್ತು ಬಾರ್‍ಯಗೆಹುದು ಅಲ್ಲಾಯೆಂಬುವರ್‍ಯಾರು
ಕೆಟ್ಟಗೊಂಡೆವು ನೀ ನೋಡು ||೩೬||

ಅಹುದು ಎಂಬರು ಕೆಲರು ಅಲ್ಲ ಎಂಬರು ಅರ್ಧ
ತಮತಮಗೆಲ್ಲ ಜೂಜಾಡಿ।
ಬಿಡು ನಿಮ್ಮ ಮಾತುಗಳ ಸುಡಲೇಳಿ ತಿಳಿದವರು
ಒಳವರಿದು ಹಿಂದೆ ಜಾರುವರು ||೩೭||

ಕಾಣಬಾರದು ಎ[ಚ್ಚು] ಕಡಿವ ಮೋಡಿಯ ಬಗೆಯ
ತಾರ ಬಲಗಾಲು ಬಾಣದೆಸೆಗೆ।

ಪಾಳೆಗಾರರು ನೋಡಿ ಕೇಡು ಬಂದಿತು ನಮಗೆ
ಯಾವ ಕಡೆಯೊಳು ಮುಳುಗು ತೆರನೊ ||೩೮||

ಸತ್ತ ರಾಮನು ಎಂದು ಹುಟ್ಟಿಸಿ ಸುದ್ದಿಯ
ಯುಕ್ತಿ ಮಾಡಿದರು ಕೆಡಿಸಲ್ಕೆ।
ನೆಟ್ಟಗಾಣದ ಹಾಗೆ ಮುಚ್ಚಿ ಮೋರೆಯ ಸೆರಗ
ದಿಕ್ಕು ದೆಸೆಗೆ ಓಡುವರು ||೩೯||

ಕೆಡಿಸಿಕೊಂಡೆವು ತಮ್ಮ ಇರುವ ಗೂಡಿನ ನೆಲೆಯ
ಎರಡಕ್ಕೆ ಬಿಟ್ಟಿ ತೆರವದು।
ಸುರಿತಾಳನೊಡನೆ ನಾವು ಬರಿದೆ ಸುದ್ದಿಯ ಪೇಳಿ
ಬಡಿಕಲ್ಲ ಮಾಡಿ ಕೊಂದಂತೆ ||೪೦||

ದೇಶದ ನೃಪರೆಲ್ಲ ಈ ಪರಿಯ ಗರ್ಜಿಸಿ
ವಸ ಸ್ಥೈರ್ಯಗಳ ಬಿಟ್ಟವರು।
ಮಸುಕು ಮಾಜಲನವ ಸೋನೆಯ ಕಂಡಂತೆ
ವಾಸ ಗ್ರಾಮಗಳ ಕಂಡಂತೆ ||೪೧||

ನೋಡಿ ಖಾನರು ಎಲ್ಲ [ಓ]ಡಿದರು ಬಂದಂತೆ
ಪಾಳೆಗಾರರ ದಂಡು ಎಲ್ಲ।
ಓಡಿದರು ಎನಲಾಗ ನೇಮಿ ಕೋಪವ ತಾಳೆ
ಪ್ರಾಣವುಳಿಯಲೆನ್ನ ನೋಡುವೆನು ||೪೨||

ಕಾಣದ ಸುರಿತಾಳಗೆ ವಾಲೆ ಕಾಗದ ಬರೆದು
ರಾಮನ ಮಡಗಿಟ್ಟ ಇವರು।
ತಾವು ಬಂದವರಾಗಿ ಸ್ನೇಹಗಾರನು ಬರಲು
ಗೇರಾಹಳರಂತೆ ತೊಲಗಿದರು ||೪೩||

ಆಗಲಿ ಅದಕೇನು ಕಾಳಗದಿ ಕಳೆದುಳಿದು
ಹೋದಾಗ ಯಾವ ಮಾತುಗಳು।
ಜೋಳಿಗೆಯ ಕೊಡದಿರಲು ತಾ ನೇಮಿ ಅಲ್ಲವೆಯೆಂದು
ವಾರಂತೆ ಏರಿರೆ ಪೌಜಾಗಿ ||೪೪||

ಬೆದರಗೊಡದೆ ದಂಡ ಎದುರಾಗಿ ಕಾವರು
ಕದನ ಸಂಗ್ರಾಮಕ್ಕೆ ನಿಲಲು।
ಹದಿನಾರು ಸಾವಿರ ಬಲವ ಬೆನ್ನಿಗೆ ಕಟ್ಟಿ
ದೊರೆ ರಾಮ ನಿಂದ ಪೂರ್ವದಲಿ ||೪೫||

ರಾಮನೆ ನಿಜವಾಗಿ ನೋಡಿರೆ ಬಲ್ಲವರು
ನಾವಂತು ಅವನ ಕಂಡಿಲ್ಲ।
ಈಗೇನು ಮಾಡುವುದು ಮೇಲುಗೋಟೆಯ ಮಿಂಡ
ಓಡಿದರೆ ಬ್ಯಾರೆ ಬಿಡುವನೆ ||೪೬||

ಮಲಗಿದ್ದ ವ್ಯಾಘ್ರಕೆ ಕೆಣಕಿದ ಬಳಿಕಿನ್ನು
ಹೆದರಿ ಓಡಲು ಬಿಡುವವನೆ।
ಕಡಿದಾಡಿ ಸಾಯಲು ಧರೆಯೊಳು ಕೀರ್ತಿಗಳು
ಹರನೆಡೆಗೆ ಗೋಚರಿಸುವರು ||೪೭||

ಕಾಯವಳಿಯಲು ತಮ್ಮ ಕೀರ್ತಿ ನಡೆಯವೆ ಕೇಳಿ
ಖಾನಖಾನರು ಛಲವೇರಿ।
ಮೂರು ಲಕ್ಷದ ದಂಡು ಮೂರು ಪೌಜನೆ ಮಾಡಿ
ಭೇರಿ ನಗಾರಿ ಮೊಳಗುತಲಿ ||೪೮||

ರಾಮ ರಾಮನು ಎಂದು ಭೂಮಿಗಾತ್ರವ ಮಾಡಿ
ರಾವಣನೆ ದೇವೇಂದ್ರಸುತನೆ।
ಭೀಮನೆ ಮಾರುತನ ಕುವರರಂದದೆ ದಶರಥನ
ಕುಮಾರನೆ ನೀವು ಪೇಳೆಮಗೆ ||೪೯||

ನಿತ್ಯವ ಪಡೆದಿಹನೆ ಸತ್ಯಹರಿಶ್ಚಂದ್ರನೆ
ಕ್ಷಾತ್ರವ ತೆರದೊಳಗಿಹನೆ।
ಬತ್ತಿ ತೀರಿದ ಬೆಳಗು [ಹತ್ಯ]ವಾದನೆ ಅವನು
ಮುಂದಿವನ ಮಾತೇನು ಎನಲು ||೫೦||

ಬಿಡುವೆನು ಸಂತೋಜಿ ಗೋಲ್ಪಡೆಯ ಕತ್ತಿಗೊಂಡು
ಹೊಡೆವೆ ರಾಮನ ಬಿಡಿಯೆನಲು।

ಒಡೆಯನುಪ್ಪಿಗೆ ಎರಡುಂಟು ಮಾಡುವಗೆ
ಯ[ಮ]ರಾಜನಾಜ್ಞೆ ಮಾಡುವನು ||೫೧||

ಹೆಚ್ಚಲು ಉರಿಗಿಚ್ಚು ಬಿದ್ದಂತೆ ಬತ್ತಿ
ಬಾಣವನು ಸುರಿಸುತ್ತ।
ಸತ್ತನೆನಿಸಿಕೊಂಡು ಹುಟ್ಟಿಬಂದರೆ ನಿನ್ನ
ಬಿಟ್ಟೇನೆ ಗೋಲ್ಪಡನೆ ರಾಮ ||೫೨||

ಬಿಡುವನಲ್ಲದ ನಿಮ್ಮ ಒಡೆಯ ರಾಮನ ಬಂಟ
ಎಡಗೈಯ ಹಂಪ ಸವರಿದನು।
ಕಡೆಗೆ ನಿನ್ನನು ಹಿಡಿದು ಕೊಡುವವನು ನಾನೇ
ಇಡು ನಿನ್ನ ಹೆಜ್ಜೆಯ ಮುಂದೆ ||೫೩||

ಅರೆ ಲವುಡಿ ಸಕರಿಯಾ ಗಡಣೆ ಮಾಡುವೆನೆಂದು
ಕಡಿಕಡಿಯೆನುತ ಬೊಬ್ಬಿಡುತ।
ಅಡರಲು ಮೇಘದ ವದನೆಯೆಂದದಿ ಬಂದು
ಸುರಿ[ವ]ರಂಬಿನ ಮಳೆಯನು ||೫೪||

ಬಾದುರ ಬಲವಂತ ಗೋವಿಂದ ನಾಯಕನು ಹೊಕ್ಕು
ವೀರ ಸಂಗನ ಲಿಂಗಣ್ಣ।
ಮಾರಿಯ ಕೋಣನ ತೆರದ ಮುದ್ದನು ಹೊಕ್ಕು
ಚಿಮ್ಮುವರೊಂದು ಕಡೆಗೆ ||೫೫||

ಮಾಚನು ಮಡಿವಾಳ ರಾಚೂರ ಮಲ್ಲನು
ಕಾಕೊಡದು ಲೆಂಕೆಯ ಹನುಮ।
ಏಕಾಂಗಿ ವೀರರು ಏರಿದರು ಏಳ್ನೂರು
ಭೂಪ ರಾಮನ ಮನ್ನೆಯರು ||೫೬||

ಸಮರಂಗ ಜಗಳಕೆ ಬಗೆಯ ವರ್ಣಿಪರಾರು
ನಿಗಮಗೋಚರನೆ ತಾ ಬಲ್ಲ।
ಹೊಗಲೇರಿ ತುರುಕರು ಒಗೆವ ಸರಳಿನ ಗಾಯ
ಮಿಗುವರಿಯೆ ಬಂಟ ರಾಮಯಗೆ ||೫೭||

ಸರಳಿನ ಮಳೆಯನು ನಿರ್ಣಯಿಸಲಾರದೆ ಎಲ್ಲ
ಮುರಿದರು ಹೆದರಿ ಹಿಮ್ಮೆಟ್ಟಿ।
ಮೇಘದಾರ್ಭಟದೊಳು ತರಗ ನೂಕಲು ಕಂಡು
ಪರಬಲದ ಭೇರುಂಡ ರಾಮ ||೫೮||

ಹತ್ತಿದ ಬೊಲ್ಲನ ತಟ್ಟಿ ಸವಮಾಡಿ ಹೊಕ್ಕರು
ಬರುವರು ಮತ್ತೆ ಜಗಳಕ್ಕೆ।
ಎತ್ತಿ ಹೊಡೆಯಲು ತುರಗ ಏರಿದ ರಾವುತನು
ಬೆಚ್ಚಿ ಬೆದ[ರಿತು] ನಾಲ್ಕು ಪೌಜು ||೫೯||

ಏರಿದ ಮುಖದೊಳು ಮೂರಾರು ಬೀದಿಯ ಹೊಡೆಯೆ
ಪಾರಾಗಿ ಓಡೆ ತುರುಕರು।
ಏರಲು ಹಿಂದೆಗೆದು ರಾಯ ರಾಮನ ಮಂದಿ
ಗೋಣನರಿವುತ್ತ ಉಳಿದವರ ||೬೦||

ಕಾಟಣ್ಣ ಕೋಪದ ಕಾಲನಾರ್ಭಟದೊಳು
ಕೊರೆದ್ಹಾಕುವರು ಕಳಿಲೆಯಂದದಲಿ।
ತಾಕಲು ಸಂತೋಜಿ ಗೋಲ್ವಡೆಯ ಕಾಟನ ಮೇಲೆ
ನೂಕಿದನೊಂಟಿ ಕುದುರೆಯಲಿ ||೬೧||

ಹೊಡೆಯಲು ಗೋಲ್ವಡೆಯ ಎದೆಯ ಅಂಬನು ಕಿತ್ತು
ಜಗಳ ಸಂದಿರಲು ಯುವಕರಿಗೆ।
ಎದುರ ಸರಳನೆ ಕೊಟ್ಟು ಎಂಬತ್ತು ಕೋಲ್ಗಳ ಕಿತ್ತು
ಒಗೆದನು ಕೈಚಳಕದಲಿ ||೬೨||

ಇತ್ತೊಂದು ಗಾಯದ ಸೊಕ್ಕಿಗೆ ರಾಮನ
ಮತ್ತಾರು ಬಂದು ಮುತ್ತೆ।
ಸಿಕ್ಕಿದ[ನೆ] ಗೋಲ್ವಡೆಯ ಎಡಗೈಯ ಹಂಪನು
ರಟ್ಟೆಯ ತೆಗೆದು ಮೂಗರಿದು ||೬೩||

ಆಡಿದ ಛಲಪದಕೆ ಮೂಗರಿದು ಪಡೆಯನು
ಇನ್ನಾರು ಇದ್ದಿರಿ ಹೊರಟು ಬನ್ನಿ।

ಅಚ್ಟಾ [ಅರೆ] ಮರ[ಗಯಾ] ರಣಧೀರ ಗೋಲ್ಪಡೆಯ
ಬೆದರೋಡಲು ಉಳಿದ ರಾವುತರು ||೬೪||

ಮುಳುಗಿದ ಮೂವತ್ತು ಸಾವಿರದ ಗೋಲ್ಪಡೆಯ
ಖಾನರು ಶಿರಮಂಡೆ ತೂಗೆ।
ರಾಯ ಸುರಿತಾಳಗೆ ಮೋಹದ ಅಳಿಯನ ಕೊಂದು
ಹೋದರೆ ಎಮ್ಮ ಸಿಗಿಸು[ವ]ನು ||೬೫||

ನೇಮಿಖಾನಗೆ ಸುದ್ದಿ ಪೇಳುವರು ಸಂತೋಜಿ
ಗೋಲ್ಪೊಡೆಯ ಮರಗಯಾ ಎಂದು।
ಇದ್ದವಗೆ ಇದ ಮಾರ್ಗ ಪ್ರಸಿದ್ಧಯೆಂಬುದನರಿದು
ಜಗ್ಗಲು ನೇಮಿಯ ಮನಸು ||೬೬||

ರಾಯ ಸುರಿತಾಳನ ಸೋದರಳಿಯ[ನು] ಗಯಾ
ಹೋದರೆ ತಮಗೇನು ಉಳುವಿ।
ಶೂಲವಲ್ಲದೆ ಮುಂದೆ ಅಪರಾಧ ಸಾಧನವುಂಟೆ
ಖಾನರು ಚಿಂತೆಯೊಳು ಇರಲು ||೬೭||

ಚಿಂತೆಮಾಡಲು ಅಳಿದ ಸಂತೋಜಿ ಬರಲರಿಯ
ಇಂತೆಂದರು ಇಲ್ಲಿ ಉಳಿದವರು।
ಪಂಥಾಡಿ ಎನ್ನಾಳಿ ಅನವರ್ದಿಖಾನನ ಕೋಪ
ಎಂಥವರಿಗು ಪೇಳುವರಳವೆ ||೬೮||

"ಕೋಣ ಅರೆ ಕರೆಯದೆ ಕುದಮುಲ್ಲ" ಅವನಂಥ
ಖಾನರೆಲ್ಲಿಹರು ಸಾಹಸದಿ।
ಬಂದಬಂದದ ನೋಡು ಮಕರ ಶಾಸ್ತ್ರವು ಎಂದು
ಎದ್ದನು ಗೋಲ್ಪಡೆಯ ||೬೯||

ಸೋದರಳಿಯನ ಅಲ್ಲ ಮಾವನಳಿಯಲು ಮತ್ತೆ
ಮಾಡುವುದೇನು ಫಲ ತೀರಿದರೆ।
ಜಾಡರಂದದಿ ಕುಳಿತು ಸಂಪಾದನೆಯ ಮಾಡಲು
ಮತ್ತೆ ಭಾವ ಬರುವನು ರಾಮನೊಳೆ ||೭೦||

ರಾಚೂರ ಮುದಿಗಲ್ಲ ರಸದುಲ್ಲಖಾನನು ಎದ್ದು
ಕೋಪದಿ ಕಿಡಿಗರೆಯುತಲಿ।
ಹಾಕುವೆ ರಾಮನ ಹಣೆಯಬರಹವ ಕಿತ್ತು
ನೂಕಲು ತನ್ನಯ ಪೌಜು ॥೭೧॥

ಅನವರ್ದಿ ರಸದುಲ್ಲ ಯಮನ ಕೋಪಗಳಾಗಿ
ಗುಡಿಗುಣಿಸಿ ಮದಗಜದೊಳಗೆ।
ನಡೆಯಲು ಎಂಬತ್ತು ಸಾವಿರ ತುರಗದಿ
ಜೀರಿಯ ಮುಸ್ತಾಪಿನ ತೇಜಿ ॥೭೨॥

ಕರಿಯಿಂದ ತುರಗದ ರವದಿಂದ ಭೇರಿಯ
ಭರದಿಂದ ಭೂಮಿ ಜರ್ಝರಿಸಿ।
ದೊರೆ ರಾಮ ತನ್ನಯ ಬಲವ ಬೆನ್ನಿಗೆ ನಿಲಿಸಿ
ಎದೆಗೆಡದೆ ನಿಂದು ನೋಡಿದನು ॥೭೩॥

ಗಾಯೊಡೆದ ಮನ್ನೆಯರ ಕಾಲಿಯಾದವರನು
ಸುಡಿಸಿ ಮೇಲಾಗಿ ಮತ್ತೆಂಟು।
ಸಾವಿರ ಕರಿ ತುರಗ..............
ಕಾಲಾಳು ಬಂದು ಕೂಡಿದವು ॥೭೪॥

ಇತ್ತರದ ಭೇರಿಗಳು ವೀರದ ಕೋಳಾಹಳ
ಎತ್ತಿ ಸಾರುವ ರಣ ಕಹಳೆ।
ಮುತ್ತಲು ರಣಧೂಳು ಅನವರ್ದಿ ರಸ್ತು[ಲ]ಖಾನ
ಕಿಚ್ಚು ಹರವುತ ಜಾಣವನು ॥೭೫॥

"ಮಾರು ಮಾರೆ"ನುತಲಿ ಏರಿಸಿ ಸರಳನು
[ಸೂ]ಸಿ ಸೋನೆ ಮಳೆಯಂತೆ।
ರಾಮನು "ಯಾ ಅಲ್ಲಾ ಅರೆ ಜೋಕು ಬೋದು" ನಮ್ಮ
ಗೋಲ್ಪಡನ ಮೂಗರಿದ ಲೌಡಿ ॥೭೬॥

ಬಾರಣ್ಣ ಸಾಕೀಗ ರಣದ ಲಾಲಾವರ್ಧಿಯಖಾನ
ಮಾದಿಗರ ಹಂಪನೆಂದರಿಯಾ।

ಜೋಡೆಳೆದ ಮುಗಿಲೇನು ಬಹಳ ಚಿಂತಿಸುತಿರ್ದೆ
ನಾ ಬೇರೆ ಉಳಿದೆನೊ ಬಾರೊ ||೭೭||

ಸತ್ಯವರೆ ನಾವಿತ್ತ ಲವುಡಿ ಮಾರೆನುತಲಿ
ಏರಲು ಫೌಜು ಫಲ ಮಸಗಿ।
ಓಡಲು ಕಾರ್ಗುಡಿಸಿ ಭೂಮಿ ನುಂಗುವ ತೆರದಿ
ರಾಮ ನೂಕಲು ಬೆದರುವರು ||೭೮||

ಮಳೆಯೊಲು ಬಾಣವ ಸವಲಕ್ಷ ಅಂಬನು
ಮೊಗವಿಡಿಯರಂತೆ ಮಾನ್ಯಯರ।
ತುಕುಡಿ ಮಾಡದೆ ನಿಮ್ಮ ರಾಮನ ನಾ ಹೋಗೆ
ರಸ್ತುಲಖಾನನು ಅಹುದೆ ||೭೯||

ಆಗುವದು ಗಳಿಗೆಯಲಿ ಹೋದಿಯೆ ರಸ್ತುಲ
ಗೋರಿಗೆ ಹತ್ತಿಗಾಣದಂತೆ।
ಬಾದುರಖಾನನು ಭೇರುಂಡ ಕಾಟನು
ಹಾರಿಸಿ ತುರಗ ನೂಕಿದರು ||೮೦||

ವೀರಸಂಗನು ಹೊಕ್ಕು ಪ್ರಾಣದಾಸೆಯ ತೊರೆದು
ಬಾಣಿ ಮುದ್ದನು ಹಂಪ ಸಹಿತ।
ಬಾಣರ ಬಡಗಿ ಪಂಚಾನರ ಗಂಗಯ್ಯ
ನಾಗ ರಾಹುತನು ಲಿಂಗಣ್ಣ ||೮೧||

ಜಗಲೂರ ಮಾರಚೆಟ್ಟಿ ಹಗಲು ಪಂಜಿನ ಹನುಮ
ಬಿರಿದಂಕ ಜಂಗಮ ಬಸವ।
ನೆಗೆದು ಹಾರುತ ಬಂದ ಲೆಂಕೆ ಹನುಮನು ಒಬ್ಬ
ಸರದಾರ ಖಾನನ ಒಗೆಯೋ ||೮೨||

ಮುತ್ತಿದ ಫೌಜನು ಮುರಿದೊತ್ತಲು ಕಡಿಕೊಂಡು
ಸುತ್ತ ಬಾಣದ ಎಸಗೆಯನು।
ಮತ್ತೊಬ್ಬ ಖಾನನು ಬಂದು.............
ಮುತ್ತಿಕೊಳ್ಳಲು ಹೊರಡದಂತೆ ||೮೩||

ಮುತ್ತಲು ನಾಲ್ಕು ಮುಖದಿ ಪೌಜೆಲ್ಲ ಒಂದಾಗಿ
ಲವುಡಿ ಲಡೆರಾಬ್ಬಾಡೆ ಇವರ।
ಇರುಬಿನ ಗಜದಂತೆ ಹೆಣಗುವರು ಒಂದಾಗಿ
ಒಡೆಯದೆ ಕಾಟಣ್ಣ ಗುಂಪ ||೮೪||

ಹೇಳುವರಳವಲ್ಲ ಖಾನರ ಛಲಪದವ
ಬಾದೂರ ಬಂದು ಸಿಕ್ಕಿದನು।
ಸೇರಿಸಿ ಅಂಬಿನ ಮಳೆಯ ಮೊತ್ತಗಳಿಂದ
ರೋಸಿ ಮುತ್ತಲು ನಾಕು ಮುಖದಿ ||೮೫||

ಹರಹರ ತನ್ನಯ ಬಲವೆಲ್ಲ ಲಯಗಾಲ
ಒದಗಿತು ಎತ್ತಣ ರಾಮ।
ಪಡುವಗಡೆ ತುರಗವ ಮುಂಗಾರ ಸಿಡಿಲಂತೆ
ಒದವುತಿರಲು ರಣಮುಖಕೆ ||೮೬||

ಗರುಡನು ಒಗೆವಂತೆ ತಲೆಗಳನು ಮೆಟ್ಟುತ
ಒಗೆಯುತ ಬಾಯಿಂದ ಪಿಡಿದು।
ಕೊರೆಯುತ್ತ ಕಣಿಕೆಯನರಿದಂತೆ ಕೊರೆದ
ಕರದಿಂದ ರಾಮನು ಭೀಮ ||೮೭||

ತೃಷೆಯಾದ ಕರಿಗೊಂದು ರಸದಾಳೆ ಕಬ್ಬಿನ
ಹಸನಾದ ಹೊಲನು ದೊರೆತಂತೆ।
ಬಿಸಿಗಣ್ಣನಭವನ ಬೆಮರ ಸುತನು ದಕ್ಷ
ಅಸುರರ ಕಡಿದಂತೆ ಕಡಿವ ||೮೮||

ನುಗ್ಗಲು ರಾಮನ ಜಗ್ಗು ಜಾಳಿನ ಮಂದಿ
ಬಿದ್ದು ಎದ್ದವರ ಗೋಣ ಹರಿದು।
ಸದನಕ್ಕೆ ನಡೆವವರ ತಿರುಗುವಂದದಿ ಪೋಗಿ
ಕವಿದಿರ್ದ ಪೌಜನೆ ತರಿಗಡಿದ ||೮೯||

ಮೆಳೆಯನು ತರಿದಂತೆ ಹೊಳವರಿತು ಕೊಲ್ಲುತ ರಾಮ
ದುಮುಕಿದ ಕಾಟಯನ ಬಳಿಗೆ।

ಮರಳಿ ಪಡೆದೆವು ತಮ್ಮ ಶರಿರವೆನುತಲಿ ಅವರು
ಬಿಡಿಸಿಕೊಂಡರು ತಮತಮಗೆ ||೯೦||

ಹೋಗುವ ಒಳಿಕೆಯ ವೀರರುಪಚರಿಸಿ
ತಿರುಹಿ ಒಗೆಯುತಲಿ ತುರಗವನು।
ಎಡಗೈಯ ಹಂಪನ ಪಿಡಿದು ಕಾಲ್ಗೆರೆಯುತ ಒಗೆದು
ಅರಿವುತ ಮೂಗು ಮುಸುಡಿಯನು ||೯೧||

ಕಾಟಣ್ಣ [ಕಲಿ] ಉಗ್ರ ಕೋಪಾಗ್ನಿಯೊಳು ಹೊಕ್ಕು
ಅಕ್ಕಿದ ಹಮ್ಮೀರನ ಮೇಲೆ।
ನೂಕಿ ಕಡಿದ ಬಂದು ಬಾದುರ ಬಾಣೆಯ ಮುದ್ದ
ಕಾಲನಾರ್ಭಟದೊಳು ಕಡಿಯೆ ||೯೨||

ಜೇರಿಯ ಭಕ್ತರಾದ ತುರಗ ರಾಹುತರು ಕೇಳಿ
ಮುಂದಾಗಿ ನಾಯಿಗೆ ಕಡೆಯಾ।
ಹರುಷದಿ ಕಡಿದರು ಹನುಮ ಬಾಣೆಯ ಮುದ್ದ
ದನಗಳ ಬಡಿದ ರೀತಿಯಲಿ ||೯೩||

ಸಂದುದು ಅರ್ಥ ಎಂಬತ್ತು ಸಾವಿರದೊಳು
ಹೊಂದಲು ಯಮನ ಸಂಬಳವ।
ಕುಂಜರದ ಪೌಜಿಗೆ [ಕಂದ] ರಾಮನು ಹೊಕ್ಕು
ಸುಂಡಿಲ ಸೆಳೆಯೆ ನೂರಾರು ||೯೪||

ಕಂಡನು ರಸ್ತುಲ ಅನವರ್ದಿ ಖಾನನ ಮುಖವ
ಚೆಂಡಿಕೆ ಹೊಡೆದು ಹಾಕುವರು।
ಬಂದೆನಗೆ ದಯಮಾಡಿ ಇವ[ನಂ]ದ ಮಾತಿಗೆ ಮೂಗ
ಮಂಡಗತ್ತಿಯನು ಮುಟ್ಟಿಸುವೆ ||೯೫||

ಹಂಪನ ಮಾತಿಗೆ ಛಲದಂಕ ರಾಮನು ನಗುತ
ತುಂಟ ಹಮ್ಮೀರಗೆ ಏರೆ।
ಸವರಲು ಎಡಬಲದ ಪುಡಿಪುಳ್ಳೆ ಖಾನರನೆಲ್ಲ
ಹಿಡಿಯಲು ಹಮ್ಮೀರನ ಸೆರೆಯ ||೯೬||

ಕೊಡಬೇಕು ಎನ್ನೊಡೆಯ ಕುಮ್ಮಟಕೆ ಪ್ರೇಮದಿ ಬರಲು
ಹೊಗಲೆಂದ ಲವುಡಿ ಮಗನೆ।
ಘನವಲ್ಲ ಎಲೆ ಹಂಪ ಕೈಸೆರೆಯ ಪಿಡಿದನ ಕೊಳ್ಳೆ
ಮುನಿವನು ನನಗೆ ಮಹದೇವ ||೯೭||

ಮುತ್ತಿದ ಬಲವೆಲ್ಲ ಮುಕ್ತಾಯವಾಗಲು ಭೂಮಿ
ರಕ್ತದ ಮಳೆ ಬಂದಂತೆ।
ಸುತ್ತೊಂದು ಬಾಣದ ಪ್ರಯೋಗದ.........ಲದಿ
ಮತ್ತೆ ಒಪ್ಪುವುದು ಹೆಣಮಯದ ||೯೮||

ಹತ್ತುವರಲ್ಲದೆ ಹಾರುವರ ಮನೆಯನು
ಕತ್ತೆಯಂದದಿ ಮೆಲುತಿರಲು।
ಲಕ್ಷದೊಳರ್ಧಯ ತಿಟ್ಟ ತೆವರನು ಹತ್ತಿ
ಆಸ್ತರಿಲ್ಲದೆ ಚೆರಿಸ್ಯಾಡೆ ||೯೯||

ಅನವರ್ದಿ ರಸ್ತೂಲು ಯಮನ ಸೇರಲು ಒಬ್ಬ
ಅಮರಂಗಿಖಾನನು ಏಳೆ।
"ತುಮೆ ಆವು" ತುಕ್ಕೋಜಿ ರಣದುಲ್ಲ ಕಾಫರಖಾನ
ಮದಗಳ ಕೊಂಡು ಮೇಜಾಗಿ ||೧೦೦||

ಹೋದವರು ಜಗಳಕೆ ಮೋರೆ ತೋರರು ಮರಳಿ
ಭೂಮಿ ನುಂಗುವುದೊ ಶಿವಬಲ್ಲ।
ರಾಮಗೆ ತಲೆಯೆಷ್ಟು ಬಾಣಾಸುರನ ತೆರದಿ
ಸಾವಿರ ತೋಳ ಪಡೆದಿಹನೆ ||೧೦೧||

ಮರಗಯಾ ಅಂತವನು ಇವನು ಮಿಕ್ಕುವನೆಂದು
ಯಮನ ರೋಷದಲಿ ನಡೆಯುವರು।
ಕರಿತುರಗ ಕಾಲ್ಬಲದಿ ಅರುವತ್ತು ಸಾವಿರದೊಳು
ಧರಣಿ ಜರ್ಝರಿಪಂತೆ ಬರಲು ||೧೦೨||

ಭೇರಿ ಆರ್ಭಟೆಯೊಳು ಭೂಮಿಯನೊದರಿಸಿ
ಕಾರಮೇಘವು ಕವಿವಂತೆ।

ದೂರಿಯನಾಡುತಲಿ ಹಾರಿಯ ಮದದೊಳು
ತೋರಿದೆ ರಾಮನೆಂಬವನ ||೧೦೩||

ಸಿಂಗಾಳದ್ವೀಪದ ಕುಂಜರ ಲೌಡಿಯ ಕುಂತು
ಮಂಜುಲ ಕಾಫರಖಾನ।
ಸಾಂಬ್ರಾಣಿ ತುರಗದ ಮೇಲೆತ್ತು ಕೋಚಿಯು
ಸಂಗ್ರಾಮ ಅಪವಕ್ಕೆ ನೂಕಿದರು ||೧೦೪||

ಸರಳದ ಬಾಣದ ಭರದಿಂದ ಕೂಗುವ
ಗಗನಕ್ಕೆ ಏರುವ ಭರದೊಳಗೆ।
ತುಳಿಸುತಿರ್ಪರು ನಾಲ್ಕು ಕಡೆಯವರು ಬಂದು
ಕೊಡು ಲವುಡಿ ಬಾದುರನ ಬೇಗ ||೧೦೫||

ಕಾಫರಖಾನನ ಕುಕ್ಷಿ ಗಾತ್ರವ ಕೇಳಿ
ಚಿಕ್ಕದು ಕಪುಳೆಯೋ ಬಾನಿ।
ಹತ್ತಿದ ಮದಕರಿಗೆ ಹವಣಾಗಿ ವರನದು
ನಕ್ಕನು ಬಾಣೆಯ ಮುದ್ದ ||೧೦೬||

ಬಾದುರನ ಕೇಳುವಕ್ಕನಕ ತರನಹುದು
ದೋಣಿ ಸಂತೊಡಪಲನೊಡೆದು।
ಕೆಂಬಾಣೆಯ ಗುಡಿಗೆಯನು ನೋಡಿ ಸಾಬರು ಮತ್ತೆ
ಬಾದುರನ ಹೆಸರನ ಹಡಿಯೆನಲು ||೧೦೭||

ಏನೆಂಬೆ ಲವುಡಿ ನೀ ಕುಣಿಬಿ ಮಾರೆನುತಲಿ
ಏರುವರು ಪವುಜ ಹಮ್ಮೀರರು।
ಮಾರೊರು ಮನೆಯನು ಬಿಬ್ಬಿಯಿನ್ನೊಬ್ಬಗೆ
ನೀ ಹೋದನೆಂಬಾಸೆ ಬೇಡ ||೧೦೮||

ಕುಣಿಬಿನ ಕರಿಯ ಮಾಡಿ ಎದೆಗರ್ವ ನುಡಿವ[ನು]
ಕಡಿ ಇವ[ನ] ಕೈಕಾಲು ಮುರಿವಂತೆ ।
ಕಡಿಯಲು ನಿಮ್ಮವ್ವ ಹಡೆದಾಳೆ ಗಂಡೆಂದು
ಬಡಿದರು ಮುಂದೆ ಬಂದವರ ||೧೦೯||

ಶಾಭಾಸು ಲವುಡಿಯ ಹೋರಾ ಹಚ್ಚನುಯೆಂದು
ಏರಲು ತುಕ್ಕೋಜಿ ಮುನಿದು।
ಝೇರಿಸಿ ಬರುವರು ಕೂರ್ಗಣೆಯ ಸೂಲಂಗಿಯ
ನೂರಲು ಬಡಿದು ಕಣ್ಗೆಡಲು ॥೧೧೦॥

ಬಾದುರಖಾನನ ಮಗನು ಹಮ್ಮಿರಖಾನ
ನೀಲಕಂಠನು ಸಂಗಯ್ಯ।
ಏರಲು ಕಡಿಕೊಂಡು ವ್ಯಾಘ್ರನು ಉಗ್ರದಿ
ಗೋವ ಹೊಕ್ಕಂತೆ ಮುರಿದಿಡುತ ॥೧೧೧॥

ಮುತ್ತಿದ ಫೌಜನು ಕೊಚ್ಚಿ ಬಯಲು ಮಾಡಿ
ಒತ್ತಿಗೆ ಮುದ್ದನ ತೆಗೆದು।
ಹತ್ತಲು ಬೆನ್ನೊಡನೆ ಕಾಫರ ಮಂಜುಲಖಾನ
ಉಕ್ಕಿನ ಮಳೆಯನು ಸುರಿಸುತಲಿ ॥೧೧೨॥

ಅಂಬಿನ ಮಳೆಯೊಳು ಓಕುಳಿಯನಾಡುವರು
ಒಂದರೆ ಗಾಯ ಸಂಧಿಸಲು।
ಕಂಡನು ಕಲಿಪಾರ್ಥ ಕುಂಜರವ ತಾನಿಳಿದು
ತಂದ್ಬಿಡಿಯೆ ಬೊಲ್ಲನ ಏರೆ ॥೧೧೩॥

ಉರಗಗೆ ಎರಗುವ ಸಿಡಿಲಂತೆ ಕಾರ್ಮಿಂಚು
ಹೊಳೆವಂತೆ ಖಡ್ಗ ಕರದೊಳಗೆ।
ರಣದುರ್ಗಿ ಹಸಿವಾಗಿ ಕುರಿಹಿಂಡ ಬಡಿತಿಂಬ
ತೆರದಿ ಕೊಂದರು ಈರ್ವರು ॥೧೧೪॥

ಮದವೆದ್ದು ಗಜಬಂದು ಕದಳಿಯ ಹೊಕ್ಕಂತೆ
ಸದೆವುತ ಸಪ್ಪೆ ಕೊರೆದಂತೆ।
ಕಡು ದೋಷದೊಳಗವರು ಎತ್ತಿ ಹೊಡೆಯಲು
ಎಚ್ಚತ್ತು ಭಾಗವಾಗಿ ಮಲಗುವರು ॥೧೧೫॥

ಹೆಣನ ತಿಂಬುವ ತೇಜಿ ತುಳಿದುಕೊಂದುದು ಒಂದು
ಎರಡೆಂಟು ಸಾವಿರ ತಲೆಯ।

ಇದಿರಾಗಿ ಒದಗಲು ತುಕ್ಕೋಜಿಖಾನನ ಹೊಡೆದು
ನಡೆಯಲು ಕಾಫರನಿದಿರ ||೧೧೭||

ಎದೆಯ ಅಂಬನು ಕಿತ್ತು ರಣಧೀರ ಕಾಫರನ
ಎಡೆಬಿಡದೆ ಒಗೆದ ಮುನ್ನೂರ।
ತಿಳಿದಿಲ್ಲವೆ ಹರೀರಾ ಕಾಫರಖಾನನ ಸುದ್ದಿ
ಕೊಡವೆ ಲಿಖಿಯನು ನಿನ್ನ ನೋಡು ||೧೧೭||

ಹೇಳುವದ ಕೇಳಿರಿವ ಭೇರಿವಡಲೆಂಬುವುದ
ಮೋರೆ ಶಕ್ತಿಯ ಕಂಡುದೀಗ।
ತಾರಿಕೆ ಹಾರ್‍ಯಾಡೆ ಗುಂಗುರದ ಸರಳಂಬು
ನೋಡೆನಲು ವಾಹಕ ಕೊಡುವೆ ||೧೧೮||

ಏರಿಸಿದ ಪಂಚೇರು ಮೂರಕೊಂದದ ಸರಳ
ಭೀಮನಂದದಿ ಹೊಡೆಯೆ ತೆಗದು।
ಸೇರಿದ ಕಪ್ಪರನ ಕೀಲುಂಟೆಗೆ ಎರಡ
ಭೇರಿ ಒಡಲಿಗೆ ಮೂರು ಕೊಡಲು ||೧೧೯||

ಅರೆ ಮುಲ್ಲ ಖಿದಾ ಎನುತ ಒರಗಲು ಕಪ್ಪರನು
ಉರಿವ ಮಂಜುಲಖಾನ ಬೆದರಿ।
ಕರಿಯ ಮೆಲ್ಲನೆ ಇಳಿದು ತುರಗ ಏರುತಲೋಡೆ
ಹೊಡೆದ ಬಾದುರಖಾನ ಬಿಡದೆ ||೧೨೦||

ಬಯಲಾಗೆ ಬಲವೆಲ್ಲ ಒಡನೆ ಬಬ್ಬರಖಾನ
ನಡೆಯಲು ತುಂಬುರ ಸಹಿತ।
ತುಂಬೆ ರಾಮನ ಊರ ಹೋಗಲು ಬಿಡದೆ
ಎಂಬತ್ತು ಸಾವಿರ ಬರಲು ||೧೨೧||

ಸತ್ತನೆನ್ನಿಸಿಕೊಂಡು ಹುಟ್ಟಿ ಜಗಳಕೆ ಬರಲು
ಬಿಟ್ಟರೆ ತುರಗ ಬಬ್ಬುರನೆ।
ಕೊಟ್ಟನು ಸರಳನು ಪೆಟಿಗೆ ಪಂಚೈ ತಾ ಸೇ
ದಿಟ್ಟನು ಮೂರು ಸಾವಿರವ ||೧೨೨||

ಏನೆಲವೊ ಎಲೆ ಮರುಳೆ ಕೇಳರಿಯ ಬಬ್ಬುರನ
ಸಾಹಸದ ಪರಮಶಕ್ತಿಯನು।
ಹೇಳುವದ ನಾ ಬಲ್ಲೆ ತುಂಬುರ ಸಹ
ರಾಮನ ಕರದಿ ಹತವೆನುತ ||೧೨೩||

ಮರೆಯದೆ ಗರ್ವ ತೋರುವ ಮತ್ತೊಂದು
ಸಾವಿರ ಸರಳ ಕೀಳಿಸಲು।
ಪಾರ್‍ಯಾಗೆ ಪರಮೇಶ ದೂರ ತೊಲಗುವೆನೆಂದು
ಮೂರು ತುಂಡಾಗಿ ಸರಳುರಿವ ||೧೨೪||

ಬರುವ ಸರಳಿಗೆ ಎದೆಯ ತೊಲಗದೆ ರಣರಾಮ
ತರಿಗಡಿವ ಸಮಯದೇಳೆಂದು।
ಅರೆಶಕ್ತ ಆದಂಥ ಸರಳು ಅಂಗಕೆ ನೆಡಲು
ಜನಿಸಲು ಕನಲಿ ಕೋಪಾಗ್ನಿ ||೧೨೫||

ಶಕ್ತಿ ಸಾಹಸಗಳನು ಕಂಡೆ ತುಂಬುರ ನಿನ್ನ
ಹೆಚ್ಚೆಂದು ಈ ಖಾನರೊಳಗೆ।
ಅಕ್ಷಿ ಮೂರುಳ್ಳನ ಸುತನ ಉದರದಿ ಹೊಕ್ಕು
ಕುಟ್ಟಲು ಬುರುಡೆ ನೆಗೆವಂತೆ ||೧೨೬||

ತುಂಬರನಳಿಯಲು ಬಂದು ಬಾಣೆಯ ಮುದ್ದ
ಚಂಡಿಗೆ ಹೊಡೆಯೆ ಬಬ್ಬರನ।
ಕಂಡರು ಕಡಿಮೆಯ ಲಂಡಖಾನರು ಎಲ್ಲ
ಸಂದಿಗೊಂದಿಯನು ಹುಡುಕುವರು ||೧೨೭||

ತುಮುರ ಬಬ್ಬರನು ಲಯವಾಗೆ ಇವರೆಲ್ಲ
ಕಡಿ[ಯೆ] ಖಾನರು ತಲೆದೂಗಿ।
ಉಳಿದವರ ಮಾತೇನು ನೊಣಕಿಂತ ಕಡೆಯೆಂದು
ಬೆದರಾಡಿ ದಿಕ್ಕು ಪಾಲಾಗೆ ||೧೨೮||

ಕಲಿಯಾಗಿ ರಾಮನ ಬಲವೆಲ್ಲ ಹೊಗಲೇರಿ
ಕೊರೆವರು ಶಿರವ ತುಳಿತುಳಿದು।

ಕಡೆಯೊಳು ನಿಂತಿರ್ದ ನೇಮಿಖಾನನು ಕಂಡು
ಕೆಡೆದೋಡೆ ಒಂಟಿ ಕುದುರೆಯಲಿ ||೧೨೯||

ಮುರಿದೋಡಿ ಕೆರೆಭಾವಿ ಗಿಡ ಮೆಳೆಯ ಬೀಳಲು
ಬಿಡದೆ ಹರಿಸ್ಯಾಡಿ ಕಡಿದ ತುರಗವನು।
ಹೊಡೆವರು ಕುಮ್ಮಟಕೆ ಕರಿಗಿಂತ ಕಡೆಯಾಗಿ
ತರತರದ ಮೇಲೆ ಹಿಂಡುಗಳ ||೧೩೦||

ಗೂಡಾರ ಗುಮ್ಮಟ ಡೇರೆವು ಜಾಂಡೆವು
ಆದಡಿಗೆ ಬೆಂದ ರೊಟ್ಟಿಗಳ।
ನೋಡದೆ ಹಿಂದಿರುಗಿ ಭಂಡಾರ ಬೊಕ್ಕಸ
ಬಿಟ್ಟು ಓಡಿದರು ಹಲಕೆಲವು ಹೀಗೆ ||೧೩೧||

ಮುಂಗಾರ ಮಳೆ ಬಂದು ಕೆನ್ನೀರು ಹರಿವಂತೆ
ತೂರಿತೂರಿ ಹಳದಲಿ ರತ್ನ।
ಒಂದಾಗಿ ಒಡನಾಡಿ ಶರಧಿಯಂದದಿ ಹರಿಯೆ
ಮುಂಡ ತಲೆಗಳು ತೇಲುತಲಿ ||೧೩೨||

ಮುಸುಕಿದ ಮಂಜದು ಬಿಸಿಲೇರೆ ಹರಿದಂತೆ
ದೆಸೆದಿಕ್ಕು ಬಿದ್ದು ಉಳಿದವರು।
ಉಸುರಿಲ್ಲ ಬಾಯೊಳು ಬೆದರಿ ಬೆಚ್ಚುತ ಓಡೆ
ಬಿಸುಗಾಯ ರಕ್ತ ಜೋರಿಡುತ ||೧೩೩||

ಕಾಲ್ಬೋಗೆ ಕೊಳ್ಹರಿದು ಮೇಲೆರಡು ಕಿವಿ ಹೋಗಿ
ಮೂಗ್ಹರಿದು ಮುಸುಕೆ ಮೋರೆಗಳು।
ಈ ಬಗೆಯ ಪ್ರತಾಪ ಹೇಳುವರಳವಲ್ಲ
ತಾರಾಗಲು ಮೂರು ಪೌಜು ||೧೩೪||

ಲಯವಾಗಿ ಹೋದವರು ಜಮೆಯಾಗಿ ಒಂದೆಡೆಯ
ತುಮ್ ಭೀ ಉಳಿದಿರೆ ಎನಲು।
ಅಮರೇ ಸಾಬುಳಿದೆವು ಎಂದು ಒಬ್ಬಿಗೆ ಒಬ್ಬ
ಕರಗಳ ಮುಗಿದು ಓಡುವರು ||೧೩೫||

ನಿಲಬೇಡಿ ಗುಂಪಾಗಿ ತಲೆಯ ಕಂಡರೆ ಬಿಡನು
ಹಿಡಿದಿಲ್ಲ ಧರ್ಮ ಕಳಹೆಯನು।
ಕೆಡೆಹಾದು ಹೆದ್ದೊರೆಯ ಗಡಿಯ ದಾಂಟಿದ ಮೇಲೆ
ಹಡೆದ ತಿಂಬುವ ತಾಯಿ ಬರಲು ||೧೩೬||

ಹತ್ತಿ ಹಾರುತ [ಒ]ದರಿ ಬೆಚ್ಚಿ ಬೀಳುತ ಕಡೆಗೆ
ಕತ್ತಿಗಳ ಬಿಟ್ಟು ಓಡುವರು।
ಮತ್ತೊಬ್ಬ ತಮ್ಮವನು ಕಣ್ಣಿಟ್ಟು ಓಡುತ ಬರಲು
ಹೊಕ್ಕರು ಕೆರೆಹಳ್ಳ ಮಡುವ ||೧೩೭||

ಸಂಬಳವ ಮಾಳ್ಪುದಕೆ ಸನ್ಯಾಸಿ ಆಗಲುಬೇಕು
ಕುಂದೇನು ತಿರಿದುಣ್ಣ ಹೀನ।
ಮುಂದೇಳು ಜನ್ಮದಿ ಜನಿಸಿ ಬಂದಡೆ ಮುಲ್ಲ
ರಂಡೆ ಊರಿನ ಹಾದಿ ಬೇಡ ||೧೩೮||

ಜಾಣನಲ್ಲವು ನಮ್ಮ ರಾಯ ಸುರಿತಾಳನು
ಭೂಮಿಯೊಳು ಶಾಸ್ತ್ರ ಸುಳ್ಳಹುದೆ।
ಓಡಲು ಹುಂಜನು ಟಗರು ಮುರಿಯಲು ಕಂಡು
ಮೂಢಾತ್ಮನಾಗಿ ನಡೆಸುವನೆ ||೧೩೯||

ಜಗಳವಾಗಿರೆ ಹಿಂದೆ ಜಂಬೂದ್ವೀಪದ ಮೇಲೆ
ಕುರಿಗಿಂತ ಕಡೆಯೆ ನರಜನ್ಮ।
ಸುರಿತಾಳ ದಿನಕೊಂದು ಹಿಡಿಹೊನ್ನು ಕೊಟ್ಟರು ಬೇಡ
ಯಮನೂರ ಕುಮ್ಮಟದ ದಾರಿ ||೧೪೦||

ಕತ್ತಿಯ ಬೆಳಕಿನ್ನು ಕರದೊಳು ಸುಳುಹಾಯೆ
ಬೆಚ್ಚಿ ರಾಮನು ಬಂದನೆನುತ।
ಅತ್ತಿತ್ತ ಓಡಾಡಿ ದಣಿದು ಪಾಕೆಯ ಹೊಕ್ಕು
ಹೊಟ್ಟೆ ತುಂಬಲು ಕಡಿದ ಸಾವ ||೧೪೧||

ನೂರಾರು ಜನ ಹೋಗಿ ಪಾಕೆಗೆ ಬಗ್ಗಲು
ತೋರಲು ತಮ್ಮ ಪ್ರತಿರೂಪ।

ಜಾ ಹಾರೆ ರಾಮನು ಪಾಕೆ ಆಯಾ ಎಂದು
ಭೋರನೆ ಬೆದರಿ ಓಡುವರು ||೧೪೨||

ನೇಮಿಖಾನರು ಹೋಗಿ ಹೆದ್ದೊರೆಯ ತಿಟ್ಟಿಗೆ ನಿಲ್ಲೆ
ಹೋಗಿ ಕೂಡಲು ಒಂದು ಒರೆಯು|
ವೀರ ಚೆನ್ನಿಗ ರಾಮ ಧರ್ಮದ ಕಹಳೆಯ ಹಿಡಿಸೆ
ನೋಡುತ್ತ ರಣವ ತಿರುಗಿದರು ||೧೪೩||

ಇವನೊಳು ಕಳೆದುಳಿದೆ ಎರಡು ಕಂಟಕವೆಂದು
ನಡೆತರಲು ನೇಮಿ ಡಿಳ್ಳಿಗೆ|
ಧುರಧೀರ ಖಾನರ ದಂಡು ಕೊಂದನು ಸಾವ
ನಗೆಗೇಡಾದುದು ಲೋಕದೊಳಗೆ ||೧೪೪||

ಶೋಧಿಸಿ ಭೇರುಂಡ ರಣರಾಮ ರಣವನು
ಲಯವಾದ ಬಂಟರ ಸುಡಿಸಿ|
ಪಡೆಯು ಬಂದುದು ಒಂದು ಕೋಟಿ ಮರುಳಿನ ಹಿಂಡು
ದೊರೆ ರಾಮನನ್ನು ಪೊಗಳುತಲಿ ||೧೪೫||

ಹೊತ್ತು ಕವಿಯಲು ಮರಳು ಸುತ್ತ ಯೋಜನ ದಾರಿ
ಹಾಕೋರುಷ ಗ್ರಾಸವರ್ಜಿತವು|
ಕೊಟ್ಟನು ರಣವಿಜಯ ಪಾರ್ಥ ರಾಮೇಂದ್ರನು
ಕತ್ತಿಗೆ ಜಯ ಕೊಡಲಿ ಹರನು ||೧೪೬||

ತಂಡ ತಂಡದ ಭೂತ ಕೊಂಡಾಡಿ ಸವಿಸವಿದು
ಒಂದಕೊಂದೊಂದು ಕೊಡುತಿಹವು
ಉಂಡು ನೋಡೆಲೆ ಮಗನೆ ರುಚಿಯುಂಟು ಇದರೊಳು
ಕೆಡವನು ಸವಿಯಾದ ಅನ್ನ ||೧೪೭||

ಕೊಬ್ಬಿನ ನೆಣ ಮಾಂಸ ಕೊಳ್ಳೆನುತ ಶಿಶುಗಳ
ಹಲ್ಲ ತೆರೆದು ಹಾಕುವರು|
ಒಲ್ಲೆವು ಇವ ಕರ್ಮಿ ಧರ್ಮಜೀವನನಲ್ಲ
ಬಾಯಿ ನಾರುವುದೆಂದು ಉಗಿಯೆ ||೧೪೮||

ಉಪ್ಪಿದು ಸಪ್ಪಲ್ಲ ಬಾಯೊಳಿತು ನೋಡುತಲಿ
ಮತ್ತೊಂದು ಮರುಳ ತಾ ಕೊಡಲು।
ಸಿಟ್ಟಿನಿಂದಲಿ ಕೊಡಲು ಹುಟ್ಟಿದ ಮೊದಲಿವನು
ಭಿಕ್ಷೆ ನೀಡಿದ ಕರ್ಮಿ ಅಲ್ಲ ||೧೪೯||

ಕುಣಿಯುತ್ತ ಗತಿಗತಿಗೆ ನೆಗೆದು ಹಾರುತ ಮರುಳ
ದಣಿವುತ್ತ ಡರ್ರನೆ ತೇಗೆ।
ಕರಿಕಂಠನ ರಕ್ಷೆ ಸ್ಥಿರವಾಗಿ ರಾಮೇಂದ್ರ
ವರುಷಕೊಂದು ವ್ಯಾಳ್ಯೆ ಉಣಬಡಿಸಿ ||೧೫೦||

ಭೂತ ತಿಂತಿಣಿಗಳು ಈ ರೀತಿಯೊಳು ಹೊಗಳಲು
ಏಕಾಂಗಿ ರಾಮ ಬರುತಿಹನು।
ಹಾಕಿಸಿದ ದಂಡಿನ ಪಾಳೆದ ಸಾರಣೆಯ
ಲೋಕದ ಪ್ರಜೆಯೆಲ್ಲ ಹೊತ್ತು ||೧೫೧||

ನೋಡಿದ ಕಂಪಿಲರಾಯ ಕರುಮಾಡನೇರಿ
ನೋಡಿದ ದಂಡಿನ ಬಗೆಯ।
ಸೂರ್ಯನ ಸಖನಂತೆ ಕಳೆಯೇರಿ ಮಂತ್ರಿಯ ಕೂಡೆ
ಆಡುವ ವಿನಯ ವಚನದಲಿ ||೧೫೨||

ಬಾರೆನ್ನ ಮಂತ್ರಿಯೆ ನೀಲಪಚ್ಚೆಗೆ ಮಿಕ್ಕ
ಮೇಲೆ ನವರತ್ನ ಮಾಣಿಕವೆ।
ರಾಮರ ಬಲವೆಲ್ಲ ಲಯವಾ[ಗೆ] ಹನುಮಂತ
ಸಂಜೀವಿನಿ ತಂದ ತೆರನಾಯ್ತು ||೧೫೩||

ತ್ರಾಣವುಳ್ಳವನಹುದು ಧರಣಿಪ್ರಧಾನರಿಗೆ
ಮೇಲಿರು ಶಿಖದ ಮಣಿಯಂತೆ।
ರಾಯ ರಾಹುತನೆಂಬ ನಾಮ ಸಲುವದು ಇವಗೆ
ಜೀವ ಕೊಡಿತು ಎನ್ನ ಡಿಂಬ ||೧೫೪||

ಬಂದ ನೇಮಿಯ ದಂಡ ಬಯಲು ಮಾಡಿದ ಮಂತ್ರಿ
ಸಂಬಳ ಕೊಡೆ ಶಕ್ಯವಲ್ಲ।

ಕಂದ ರಾಮಯ್ಯಗೆ ಪ್ರತಿಯೆಂದು ಕಾಣಲುಬಹುದು
ಹಿಡಿಂಬನ ಮುರಿದ ಭೀಮನಹುದೊ ॥೧೫೫॥

ಅರಸು ನಾಯಾಗಲು ಮಂತ್ರಿ ಹೆಬ್ಬುಲಿಯೆಂದು
ಬರಿದೆ ನಗೆ ನಡೆಯರು ಲೋಕದಲಿ।
ಗಿರಿಯನು ತೃಣದೊಳು ಹಾರೊಡೆದು ಪುರವನು ಕಾಯ್ದಿ
ಎಣೆಯಾರು ನಿನಗೆ ಲೋಕದೊಳು ॥೧೫೬॥

ಎಷ್ಟು ಪೇಳಲಿ ಈಗ ಶ್ರೇಷ್ಠತರವಾದುದು
ಬಿಟ್ಟಿದ್ದೆ ಕೈಸಾರಿ ನಾನು।
ಸೃಷ್ಟಿ ಭಾರಗಳನು ಒಪ್ಪಿಸಿ ಮಂತ್ರಿಗೆ
ಕೊಟ್ಟು ಸೇರಕ್ಕಿಯೊಳಿರುವೆ ನಾನು ॥೧೫೭॥

ಕೊಡಬಾರದುಡುಗೊರೆಯ ಕೊಡಗಿ ಕಂಪಿಲರಾಯ
ಬರಹೇಳು ನಿನ್ನ ರಾಹುತನ।
ಮರಣಕಾಲದಿ ಬಂದು ಮಂಡೆ ಕಾದನ ಹೆಸರ
ಕರೆಯಬಹುದು ಕೋಟಿರಾಜ ॥೧೫೮॥

ಕತ್ತಿಯೊಳು ಕಲಿ ಪಾರ್ಥ ಶಕ್ತಿಯೊಳು ರಣಭೀಮ
ಇಟ್ಟುಕೊಂಬೆನು ಎನ್ನ ಬಳಿಯೆ।
ಪುತ್ರರಾಮಗೆ ಮುನ್ನ ಹೆಚ್ಚೆಂದು ನಾ ಕಂಡು
ಲಕ್ಷ ರಾಜ್ಯವ ಧಾರೆಯೆರೆವೆ ॥೧೫೯॥

ನೋಡುವೆ ಕರೆಸಯ್ಯ ಬಾಲೆಯರ ಮುತ್ತೈದೆ
ಓಲೆ ಬಳೆ ಮಣಿಯ ಕಾದವನ।
ಕಾಂತ ಸೈರಣೆ ಮಾಡು ಕರೆತರುವೆ ನಾ ಪೋಗಿ
ಮಂತ್ರಿ ನಡೆಯಲು ಕಾಲ್ನಡೆಯ ॥೧೬೦॥

ರಾಮ ರಾಹುತನೆಡೆಗೆ ಪ್ರಧಾನಿ ಹರುಷದಿ ಬಂದು
ಜೋಡಿಸಿ ಕರಗಳ ಮುಗಿದು।
ಕಾಯಲು ನವಕೋಟಿ ದೇಹಗಳ ರಕ್ಷಿಸಿದೆ
ಬಿಜೆ ಮಾಡಬಹುದು ದೊರೆಯಡಿಗೆ ॥೧೬೦॥

ಆದೀತು ಮಂತ್ರಿಗಳರಸೆ ಶಿರೋಮಣಿಯೆ
ಏರಯ್ಯ ನೀವು ಪಾಲಿಕೆಯ।
ವೀರ ಎಕ್ಕಟಿಗರು ವಾರುವ ಕರಿ ತುರಗ
ವಾಲಗ ಕೊಡುತ ರಾಮನಿಗೆ ||೧೬೨||

ಕಡಿಕಡಿಯೆನುತಲಿ ಸಿಡಿಲಿನಾರ್ಭಟದಿ
ಹೊಗಳುವ ಭಟರು ಭೇರಿಗಳು।
ಕುಣಿವ ಪಾತ್ರದ ಮೇಳ [ಪೊರ]ಜುಗಳು ಎಡೆಯೆಡೆಗೆ
ಬರುಪಾರ್ಥಿಗಳು ಎಡದೆರನೇ ||೧೬೩||

ನಳಿನಾಕ್ಷಿ ಬಾಲೆಯರು ಪಲಬಗೆಯ ಶೃಂಗಾರವಾಗಿ
ಹವಳ ಮುತ್ತಿನ ಆರತಿಯ।
ಬೆಳಗುವರು ಪ್ರಧಾನಿ ಹಣ ಹೊನ್ನುಗಳ ನೀಡಿ
ಎಡೆಯೆಡೆಗೆ ಕುರಿಕೋಣ ಹೊಡೆಸಿ ||೧೬೪||

ನೋಡುವರು ಬೆರಗಾಗಿ ಕಾಯ್ದೆ ಎಮ್ಮಯ ಪ್ರಾಣ
ಆದ ಮಕ್ಕಳು ನಿನ್ನ ಹೆಸರು।
ನೋಡಿರೆ ಈ ಕಾಯ ಮೂಡಿರುವ ಅಂಬುಗಳ
ಏದಿನ ಪರಿಯ ವಜ್ರಾಂಗಿ ||೧೬೫||

ಕಾಣದು ಮುಖಪದ್ಮ [ಮುಖ]ಭಾವ ನೋಡಿದರೆ
ರಾಮಭೂಪಾಲನಾಗಿಹುದು।
ಆದರಾದಿತು ಕೆಲವು ಅಲ್ಲಯೆಂಬರು ಕೆಲವು
ಸಹಜಯೆಂಬರು ಅರ್ಧ ಪುರವು ||೧೬೬||

ಮುತ್ತೈದೆತನಗಳ ಇತ್ತೆಮ್ಮ ಪಾಲೆಗಳ
ಶ್ರೇಷ್ಠ ರಾಯರ ಗಂಡಭೇರುಂಡ।
ದಿಟ್ಟ ಮಂತ್ರಿಯು ಇನ್ನು ಯಾವ ಬಗೆಯಲಿ ಮಡಗಿ
ಪಟ್ಟಣವ ಕಾದ ಕೈಯೊಡನೆ ||೧೬೭||

ದುಃಖ ಮಾಡಲಿ ಬ್ಯಾಡ ಅಕ್ಕ ತಂಗೆರು ಹೋಗಿ
ಹಸ್ತದಿಂದೆಲ್ಲಕ್ಕು ಅರುಹಿ।

ಪುತ್ರರೀರ್ವರು ತಮ್ಮ ತೇಜಿವಾಹನವಿಳಿದು
ಹತ್ತಲು ರಾಯನ ಸದರ ||೧೭೮||

ಕಾಣುತ್ತ ಪಿತನನು ಕರವ ಜೋಡಿಸಿ ಮುಗಿದು
ಭೂಪಗೆ ಇದಿರಾಗಿ ನಿಲ್ಲೆ।
ಧ್ಯಾನಿಸುವ ಮನದೊಳಗೆ ಕುಮಾರರಹುದೆಂದು
ದಿನಿಸ ನೋಡಲು ಅಲ್ಲೆಂದ ||೧೭೯||

ರಾಯರಾಹುತರೆ ಬನ್ನಿ ಪ್ರಾಣ ಕಾಯ್ದಿರಿ ಎನ್ನ
ಯಾವ ಸ್ಥಳದೊಳಗೆ ಮನೆಯವರು।
ಸೇರಕ್ಕಿ ಎನಗಿತ್ತು ಭೂಮಿ ನಿಮ್ಮದು ಇಲ್ಲಿ
ದಯಮಾಡಬಹು[ದೆ]ನಲು ರಾಯ ||೧೮೦||

ಬಾಲನ ಕೊಲಿಸಿದ ರಾ[ಜ]ಯೆಂಬರು ನಿನ್ನ
ಪರದಿ ಇದ್ದಲ್ಲಿ ಉಳಿವವರೆ।
ಆಡುವ ವಚನವ ಸ್ವರಭೇದ ತಿಳಿದು
ಕುಮಾರನಹುದೆನಲು ನಿಶ್ಚೈಸಿ ||೧೮೧||

ಪುತ್ರನ ಧ್ವನಿಗೇಳಿ ಉಕ್ಕುತ ಜಲಗಳನು
ತೊಟ್ಟಂಗಿ ಮೂರು ಪಾಲಾಗೆ।
ದಿಟ್ಟುಳ್ಳವ ಮಂತ್ರಿ ತಲೆಯ ಠವುಳಿಯ ತೆಗೆಸು
ಕೃಷ್ಣನ ಸುತನ ಮುಖ ನೋಳ್ಪೆ ||೧೮೨||

ತೊಟ್ಟ ವಜ್ರಾಂಗಿಯ ಇಟ್ಟ ಠೌಳಿಯ ತೆಗೆದು
ಕಟ್ಟಿದ ಕರಖಡ್ಗ ಪಿಡಿಸಿ।
ಉತ್ತಮದ ದೇವಾಂಗ ಈರ್ವರಿಗೆ ಅಳವಡಿಸಿ
ಕೊಟ್ಟ ಮಂತ್ರಿಯು ಪಿತನ ಕರಕೆ ||೧೮೩||

ಪಲಬಗೆಯ ದೃಷ್ಟಿಯ ನಿವಾಳಿಸಿ ದಾನಕೊಟ್ಟು
ಬಾಲರಿರ್ವರನು ಕರ ಪಿಡಿದು।
ಆನಂದ ಹರುಷದಿ ಗಲ್ಲವ ಪಿಡಿದು
ಪೇಳುವರಳವೆ ಆಶ್ಚರಿಯ ||೧೮೪||

ಕಾಲನು ಕರೆದೊಯ್ದ ಜೀವವನು ಕಳುಹಿದ
ಹಾವಿನ ಪರಿಯು ಕಳೆದಂತೆ।
ಹೋಗಿದ್ದ ನಯನಗಳು ಎಲ್ಲವು ಬಂದಂತೆ
ಕುಮಾರರ ನೋಡಿ ಹಿಗ್ಗಿದನು ||೧೭೫||

ಸೋಮನು ತಲೆದೋರೆ ಶರಧಿಯು ಸರಿದೇಳೆ
ಬಾಲನು ತಾಯ ಕಂಡಂತೆ।
ಕಾಮದ ಸ್ತ್ರೀಯಳಿಗೆ ಪ್ರಿಯನು ಮುಖದೋರೆ
ಭಾವದೊಳು ಬೆಚ್ಚಿ ಬೆದರುವಳು ||೧೭೬||

ಕಂದನ ಮನಸಿನ ನಿರ್ಧಾರವ ತಿಳಿಯದೆ
ಪಾಪಿ ಕೊಂದೆನು ರಂಡಿ ಮಾತಿನಲಿ।
ತಂದೆಗೆ ಮಿಗಿಲಾಗಿ ಪ್ರಧಾನಿ ಕೊಲ್ಲದೆ ಕಾದ
ಮುಂದೆನಗೆ ಬುದ್ಧಿಗಲಿಸಿದನು ||೧೭೭||

ಆರು ತಿಂಗಳು ನಿಮ್ಮ ಮುಖವ ಕಾಣದೆ ನಾನು
ಸ್ವಾನಂದದಿ ಬಸ[ವ]ಳಿದೆನು।
ಸೂಳೆ ಮುಂಡೆಯ ನೆಚ್ಚಿ ಹಾಳು ಮಾಡಿದೆ ಮನೆಯ
ಪ್ರಧಾನಿ ನೆಟ್ಟನು ಸಸಿ ಕೊನೆಯ ||೧೭೮||

ಕೊಂದಂತೆ ತಲೆಯನು ತಂದ ರಂಡೆಗೆ ತೋರುವ
ನಿಜವ[ನು] ನಾನು ಗ್ರಹಿಸಿದೆ।
ಕಿಚ್ಚ ಕಾಣಬಿಟ್ಟು ಪುಣ್ಯಸ್ತ್ರೀಯರ ಮಂತ್ರಿ
ಇಟ್ಟಿರಲು ಬ್ಯಾಡವೆಂಬವನೆ ||೧೭೯||

ಹುಟ್ಟದೆ ನಿಮ್ಮಯ ಪುತ್ರರು ಬಂದಂತೆ
ಅತ್ತೆ ಮಾವಗಳ ದಯವಿರಲು।
ಹತ್ತು ಸಾವಿರ ಹೊನ್ನ ಧರ್ಮಮಾಡಿ ಈ
ಹೊತ್ತು ಜನಿಸಿದ ಬಾಲನೆಂದು ||೧೮೦||

ರಾಯನು ಬಾಲರ [ಪ್ರಾಪ್ತಿ]ಯೊಳಗಿರಲು
ತಾಯಿ ಹರಿಯಮ್ಮ ಚಿಂತಿಪಳು।

ಭೇರುಂಡ ಧೈರ್‍ಯದ ಕುಮಾರರಿರಲು ನೇಮಿ
ಮಾಡ ಮುತ್ತಿಗೆಯ ಹೆಸರ್ಬಿಡಿಯ ||೧೮೧||

ಅನಿತರೊಳಗೆ ಒರ್ವ ನೆರೆಮನೆಯ ಸಖಿ ಬಂದು
ಕರಮುಗಿದು ಸ್ಥಿತಿಯ ಪೇಳುವಳು।
ಮರುಳೇನೆ ಅಮ್ಮಯ್ಯ ಕರೆಸುವರೆ ಕಲಿಪಾರ್ಥ
ಜನಿಸಿ ಓಡಿಸಿದ ಮುತ್ತಿಗೆಯ ||೧೮೨||

ಏನೇನು ಇನ್ನೊಮ್ಮೆ ಪೇಳ್ವುದು ಎಲ್ಲಿಯ
ತಾಯಿ ದುಃಖದಲಿ ನಾನಿರುತಿರ್ದೆ।
ಜಾಣನಲ್ಲವೆ ನಿಮ್ಮ ತಮ್ಮ ಮಂತ್ರಿಯು ಮಡಗಿ
ಉಳಿಗಾಲ ಬರಲು ತೆರತಂದ ||೧೮೩||

ಬಿದ್ದಾವೆ ಬೊಲ್ಲನ ಪ್ರಸಿದ್ಧದಿ ಕಂಡುದು
ನಿರ್ಧರವಮ್ಮ ನಿನ್ನಾಣೆ।
ಎದ್ದಳು ಹರಿಯಮ್ಮ ಎಳೆಗರುಳಿಗೆ ಮಗ ಬರುವ
ಆಗ್ರದಿ ಎಡವಿ ಮುಗ್ಗುತಲಿ ||೧೮೪||

ಅಂದಣವನೇರದೆ ಹಿಂದೊಬ್ಬರಿಲ್ಲದೆ
ಅಂಗಾಲು ಬೆವರುದರೊಳಗೆ।
ಕಂದನ ಮುಖನೋಡಿ ಹಿಂದೆ ಅಳಿಯಲಿ ಲೇಸು
ಮುಂಗುಡಿಯ ಗೌಲಿ ಅಂದದಲಿ ||೧೮೫||

ಕೇಳಿದ ಕಮಲಾಕ್ಷಿ ಬಾಲ ಜನಿಸಿದ ಸುದ್ದಿ
ಕಾಲ ನಡೆಯಿಂದೋಡಿ ಬರಲು।
ಮಾಯಕ್ಕ ಲಿಂಗಮ್ಮ ಮಂಡೆಯ ಕಟ್ಟದೆ
ಸೋದರ ಬಾಲೆಯರು ಬರಲು ||೧೮೬||

ಪುರದೊಳಗೆಲ್ಲೆಲ್ಲಿ ಹರಿಯಲು ಸುದ್ದಿಗಳು
ಕೆರೆ ಒಡೆದಂತೆ ಬಾಲೆಯರು।
ಬರುವರು ಕಡೆಯಿಲ್ಲ ಸದರ ಚಾವಡಿ ಬಳಿಯ
ಮಡದೇರು ಎಲ್ಲ ನೋಡುವರೆ ||೧೮೭||

ಜನಸಿ ಬರುವ ಸುದ್ದಿ ಅರುಹಲು ಊಳಿಗ ಬಂದು
ಮೆಲ್ಲನೆ ಹಜಾರವನಿಳಿದು।
ಮುಖವ ಕಾಣುತ ರಾಮ ಇರ್ವರಿಗೆ ಜಲವುಕ್ಕಿ
ಶರಣಾಗತರಾಗಿ ಎರಗಿದರು ॥೧೮೮॥

ತಾಯಿ [ಗೆ ಈ]ರ್ವ[ರು] ಪ್ರೇಮದಿ ನಮಸ್ಕರಿಸೆ
ಕುಮಾರರ ಪಿಡಿದೆತ್ತಿ ಹರಸಿ।
ಯಾವಲ್ಲಿ ಇವರನು ಅಡಗಿಸಿದ್ದರು ಎಂದು
ಅಮ್ಮಾಜಿ ಮಕ್ಕಳನು ಬಿಗಿದಪ್ಪಿ ॥೧೮೯॥

ಬಂದೇನೋ ಚಂದ್ರನಿಗೆ ಪ್ರತಿಬಿಂಬ ಎನಿಸುವ ರಾಮ
ಕಂದರ್ಪರೂಪ ಕಾಟಯ್ಯ।
ಬಂದೀರೆ ಬಲವುಳ್ಳ ಮಿಂಡ ನೇಮಿಯು ಬರಲು
ರಂಡೆ ಕಂಪಿಲ ಕರೆಸಿದನೋ ॥೧೯೦॥

ಹೇಳದೆ ನೀವಾಗೆ ಹೋಗಬಹುದೆ ಎಮ್ಮ
[ನೋಡೊ] ನಯನಕೆ ಮಣ್ಣ ಹೊಯ್ದು।
ತಾಯೆ ನಿಮ್ಮಯ ಮಾತ ಮೀರಿ ನಡೆಯಲು ಎಮಗೆ
ಗುರುರಾಯ ತಂದ ಕಂಟಕವ ॥೧೯೧॥

ಆರು ತಿಂಗಳು ಮಟ ಯಾವಲ್ಲಿದ್ದಿರೊ
ಸುಳುಹು ಕಾಣಗೊಡದಂತೆ।
ಇರುವುದಕೆ ಬಾರ ಹನ್ನೆರಡೊರುಷ ಪಾಂಡವರ
ಸುತರಂತೆ ನಾವಿರ್ದೆವಮ್ಮ ಮರೆಯಾಗಿ ॥೧೯೨॥

ಅಕ್ಕನು ಮಾಯಕ್ಕ ತಂಗಿ ಲಿಂಗಮ್ಮನ
ದುಃಖವ ಜಗದೀಶ ಬಲ್ಲ।
ಉಕ್ಕುವ ಜಲವನು ತೊಡೆದು ಸಮ್ಮತ ಮಾಡಿ
ಪಟ್ಟೆ ಪೀತಾಂಬರ ಉಡಿಸಿ ॥೧೯೩॥

ಅಂಧಕನಿಗೆ ಕಣ್ಣು ಬಂದಂತೆ ಪುರಜನರು
ತುಂಬಲು ನಯನದಿ ಜಲವ।

ಬಂದ ಕಂಟಕವನು ಕಳೆದುಳಿದೆ ಅಳಬ್ಯಾಡಿ
ಮುಂದರ ಸಂತೈಸಿ ಕಳುಹೆ ||೧೯೪||

ಕರೆಸಿದಾಗಲೆ ಮಂತ್ರಿ ಸೊಸೆಯರನು ಬೇಗದಿ
ಹರಿಯಮ್ಮನ ಕರದೊಳು ಕೊಡಲು।
ಚರಣಕೆರಗಲು ಮತ್ತೆ ಅತ್ತೆ ಮಾವ ಭಾವ
ಪುರುಷ ಬಳೆಯ ಕಾಯ್ದಂಥ ಮಂತ್ರಿಗೆ ||೧೯೫||

ಮುತ್ತೈದೆತನವನು ಕೊಟ್ಟನು ಮಂತ್ರಿ
ಅತ್ತೆ ಮಗ[ನ] ಕಾಣಿಸಿದ।
ಮರ್ತ್ಯದೊಳಗೆ ಮಂತ್ರಿ ಕೀರ್ತಿಯ ಪಡಕೊಂ[ಡ]
ಚಂದ್ರಾರ್ಕರುಳ್ಳನಕ ||೧೯೬||

ಬಾರೆನ್ನ ಮಂತ್ರೀಶ ಕಾಯಗಳು ಸ್ಥಿರವಲ್ಲ
ಮಾಡಯ್ಯ ಪಟ್ಟ ಕುವರಗೆ।
ವಾಲೆ ಕಾಗದ ಬರೆದು ರಾಯರಾಯರಿಗೆಲ್ಲ
ರಾಯ ರಾಮನ ಶೃಂಗರಿಸಿ ||೧೯೭||

ಶುಭಲಗ್ನ ಗಳಿಗೆಲಿ ಆಭರಣ ಭೂಷಿತ ಕೊಡಿಸಿ
ವರಪೀಠದೊಳಗೆ ಕುಳ್ಳಿರಿಸಿ।
ಕರಿ ತುರಗ ಕಾಲಾಳು ಭರದಿ ಶೃಂಗರಿಸಿ
ಸದರ ವಾಲಗದಲ್ಲಿ ನಿಂದು ||೧೯೮||

ದಾನಧರ್ಮವ ಮಾಡಿ ಭೂಮಿ ದಾನವ ಬಿಡಿಸಿ
ಗ್ರಾಮ ಗ್ರಾಮಕೆ ಲಿಂಗಮುದ್ರೆಗಳು।
ರಾಯನು ಸದರಿಗೆ ತಾನಾಗ ಕರ ಮುಗಿದು
ರಾಹುತ ಅಣ್ಣ ಸಹವಾಗೆ ||೧೯೯||

ಪ್ರಧಾನಿ ಮಗ ನೀಲಕಂಠರಾಯಗೆ ರಚಿಸಿ
ಮಂತ್ರಿಪಟ್ಟಗಳ ಮಾಡಿದನು।
ಸಂತೋಷದೊಳು ಬಾಳಿ ಭೂಮಿರಾಜ್ಯವನಾಳಿ
ಕಂತುಹರನ ಕೃಪೆಯೊಳಗೆ ||೨೦೦||

ಪಟ್ಟದಾನೆಯ ರಚಿಸಿ ಮುತ್ತು ಪವಳಗಳಿಂದ
ಉತ್ಸವ ಒಸಗೆ ಮಾಡೆ।
ಎತ್ತಿ ಸಾರುವ ಕಹಳೆ ಭೇರಿ ಆರ್ಭಟದೊಳು
ರತ್ನಿ ಕೇಳಿದಳು ಆಲಿಸುತ್ತ ||೨೦೧||

ಏನಮ್ಮ ಸಂಗಾಯಿ ಊರಿನ ಕೋಲಾಹಳ
ಕೋಳುಗೊಂಡರು ತುರುಕರು।
ಕೇಳೇ ಎಲೆ ಸಂಗಿ ಏನೆಂದು ತಿಳಿಯದು
ನೋಡಲು ಬೀದಿಗೆ ಬಂದು ||೨೦೨||

ಏನೆಂದು ಕೇಳಿದಳು ಎಲ್ಲರನು ಈ ವಾರ್ತೆ
ಹೇಳಿದರು ತಿರುಗುವ ಜನರು।
ವಾಯು ಗಮನದಿ ಬಂದು ವ್ಯಾಳೆ ಒದಗಿತು ಕಾಣೆ
ರಾಮ ಬಂದನು ಅಳಿದವನು ||೨೦೩||

ಏನ ಹೇಳಲಿ ತಾಯೆ ವ್ಯರ್ಥವಾದೆವು ನಾವು
ರಾಯ ಮಾಡಿದ ಭತ್ರಿ ನೋಡೆ।
ಬಾಲನ ಮಡಗಿಟ್ಟು ಬದಲು ತಲೆಯನು ತೋರಿ
ಮಾಯಮಾಡಿದ ಮುದಿಯ ನಮಗೆ ||೨೦೪||

ಏನೇನು ಇನ್ನೊಮ್ಮೆ ಹೇಳೆಲೆ ಸಂಗಾಯಿ
ಕಾಲನೊಳಗುಂಟೆ ದಯ ಧರ್ಮ।
ಬುಡಕೆ ಸೇರಿದ ಬಳಿಕ ಪಾಲಿನ ಬಿಡುವನೆ
ಹೇಳಿದವರ್‍ಯಾರೆ ಈ ಮಾತ ||೨೦೫||

ಕುರಿಯ ಜನ್ಮದ ರತ್ನಿ ತಿಳಿಯಬಾರನೆ ಹೆಳವ
ಎರವಿನ ತಲೆಯನು ತಂದು।
ಬಿಡಿಸೆನ್ನ ಮನಸಿನ ದುಃಖವ ಎನುತಲಿ
ಇನ್ನಿರಿಸಲ್ ಹೇಗೆ ಆಗುವದೊ ||೨೦೬||

ಏಳಲಾರದ ಮುದಿಯ ಏನು ಗಾರುಡ ಮಾಡಿ
ನೋಡಲು ಎನಗಾಪ್ತನಾಗಿ।

ನೋಡಬಹುದೆ ಮುಖವ ಛಲಗಾರ ಸತಿ ಏಳು
ಸರಳ ಹೂಡಿಕೊಂಡಳು ಕೊರಳ್ಗೆ ||೨೦೭||

ಸತ್ತರು ಮರುಳೊಮ್ಮೆ ಬಿಟ್ಟರೆ ರಾಮನ
ರತ್ನೆಲ್ಲ ನಾನವನ ಮಡದಿ|
ಗಟ್ಟ್ಯಾಗಿ ಕೊರಳಿಗೆ ಬಿಲುಕೊಂಡು ಸೇದಲು
ವಸ್ತು ಹೋಗಲು ಯಮಪುರಿಗೆ ||೨೦೮||

ಒಡತಿ ಸಾಯಲು ಕಂಡು ಹಡಪದ ಸಂಗಾಯಿ
ಸಿಡಿಲು ತಪ್ಪದು ಮುಂದೆ ಎನಗೆ|
ಇದಿರಾಗಿ ಮತ್ತೊಂದು ಬದಲು ಉರುಳನೆ ಮಾಡಿ
ಸಾಯಲು ಅವಳೊಡನೆ ಗೌಡಿ ||೨೦೯||

ಓಡಿ ಬಂದಳು ಒಬ್ಬ ಬೇರೆ ದಾಸಿಯು ಅರಸೇ
ರಾಣಿ ಅಳಿದಳು [ದಿ]ಟವಾಗಿ|
ಪರಿಹಾಸ್ಯವನು ಮಾಡಬೇಡಿ ಉರುಳಿಂದ
ಮೃತವಾದೊ ಒಡತಿ ಸಂಗಿಯು ಒಂದಾಗಿ ||೨೧೦||

ಹೋಗಲಿ ಹೊಲೆರಂಡೆ ಮೇಲ್ವರಿದು ಮುಂಚಿದಳು
ನಾನೊಂದ ಗ್ರಹಿಸಿದ್ದೆ ಮನದಿ|
ಮೂಳ ಕತ್ತೆಯ ಮೇಲೆ ಬೀದಿ ಮೆರವಣಿಗೆ ಮಾಡಿ
ಆನೆ ಕಾಲಿಂದ ಎಳಸುವರೆ ||೨೧೧||

ಕುಳುವಾಡಿ ಕೈಯಿಂದ ಎಳೆದು ಹಾಕಿಸು ಮಂತ್ರಿ
ಈ ಗಳಿಗೇಲಿ ಹೆಣ ಹೊಲತಿಯನು|
ಹಿರಿಯ ತಾನಗಳಲ್ಲಿ ಶ್ರುತಯೋನ ಕಾಬುದು
ತಳವಾರರಿಂದ ಹೂಳೆನಲು ||೨೧೨||

ರಾಯ ರಾಮನು ಕೇಳಿ ತಾಯಳಿದ ಸುದ್ದಿ[ಯ]
ಏನಾಗಿ ಇದೆ ಕಠಿಣತ್ವ|
ಭೂಮಿರಾಯರ ಗಂಡ ಬಂದನೆಂಬುದ ಕೇಳಿ
ನೇಣಿಂದ ಮೃತವಾದೊ ಎನಲು ||೨೧೩||

ಹರಹರ ಪರಮೇಶ ತಮಗೇನು ಬಂದುದು
ಧರೆ ನಿಂದೆಯನು ಹೊತ್ತೆ ನಾನು।
ಕರ್ಣದಿ ಕೇಳಲು ಕರದಿ ಚರಣವ ಪಿಡಿದೊ
ಉಳುಹಿಕೊಂಬೆನು ಚಿಕ್ಕ ತಾಯ ॥೨೧೮॥

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ತರಳ ರಾಮನು ದಂಡ ಕಡಿದು ಬಂದನು ರತ್ನಿ
ಅಳಿದಲ್ಲಿಗೆ ಹದಿನೇಳು [>ಹದಿನೆಂಟು] ಸಂಧಿ ॥೨೧೯॥*

❖❖

* + ಅಂತು ಸಂಧಿ ೧೭ಕ್ಕಂ [>೧೮ಕ್ಕಂ] ಪದ ೩೭೭೧ ಮಂಗಳ ಮಹಾಶ್ರೀ (ಮೂ).

ಸಂಧಿ : ಹತ್ತೊಂಬತ್ತು

❖

ಮಾತಂಗಿಯ ದಾಳಿ - ತೆಲುಗು ಸೈನಿಕರ ಸಂಚು

ಶ್ರೀ ಗುರುವೆ ವರಶಂಭು ಭಾಗೀರಥಿಯ ವರನೆ
ನಾಗಭೂಷಣ ನಂದೀಶ ।
ಭೂಮಿ ಬ್ರಹ್ಮಾಂಡದ ಅಧಿಪತಿಯಾದಂಥ
ಶ್ರೀ ಗಿರಿಜೆವಲ್ಲಭ ಜಯತು ||೧||

ಹರಿ ನೇತ್ರ ಧರಿಸಲ್ಕೆ ಪರಮ ಪದವಿಯನಿತ್ತೆ
ತರಳ ಕೊಂದು ಗರ್ವಿಸಲು।
ಭಕ್ತಗೆ ನೀ ಒಲಿದೆ ಭೃತ್ಯ ಭಾವದೊಳಿರ್ದೆ
ಕತ್ತಿಗೆ ವೈರಿ ಕೇಳಿದರೆ ||೨||

ಚಕ್ರಧರನ ಕೈಲಿ ಭಕ್ತನಾಲಯ ಮಾಡಿಸಿ
ಸರ್ಪಭೂಷಣ ಕೊಡು ಮತಿಯ।
ಮೊರೆಯಿಡಲು ರತಿ ಬಂದು ಪುರುಷನ ಕರಕಿತ್ತೆ
ಕರಿಮುಖ ಪಿತನೆ ಕೊಡು ಮತಿಯ ||೩||

ಮುಂದಣ ಕೃತಿ ಕೇಳಿ ಮುದದಿಂದ ಸುಜನರು
ಆಲಸ್ಯ ಮಾಡದೆ ಮನದೊಳಗೆ।
ಚಂದ್ರರೂಪಿನ ರಾಮ ದೇವೇಂದ್ರ ಭೋಗದೊಳಿರಲು
ರಾಜ್ಯವನು ಆಳುತ್ತ ಸುಖದಿ ||೪||

ಮುಂದ ನೇಮಿಯ ಸುದ್ದಿ ಕಡಿಗೇನಾದನು ಕೇಳಿ
ನುಡಿಯ ಬಲ್ಲಂಥ ಪ್ರೌಢರನು।

ಎರಡೆಂಟು ಮಾಸಕ್ಕೆ ಪುರಕೆ ಸೇರಲು ಡಿಳ್ಳಿ
ಅರಸು ಪಾಶ್ಚಯಗೆ ಪೇಳುವನು ||೫||

ಜೋಡಿನವರು ಬಂದು ಪೇಳುವರು ಪಾಶ್ಚಯೆ
ಕೇಳಯ್ಯ ಧರಣೇಂದ್ರ ಭೂಪ।
ಮೀರಿದ ಖಾನರು ಸೋದರ ಅಳಿಯನು ಸಹ
ಸೇರಿದರು ಯಮನ ಸಂಬಳವ ||೬||

ಪೇಳುವರಳವಲ್ಲ ರಾಮನ ಕಾರ್ಯವ
ಮೂರು ಲಕ್ಷದ ದಳದೊಳಗೆ।
ಗಾಯ ಸಾಯಗಳೆಲ್ಲ ಕೊಡುಕೊಂಡರೆ ರಾಮ
ಆಗ ಮಾತ್ರದಿ ಉಳಿದಿಹುದು ||೭||

ರಾಮನ ಮಡಗಿರ್ದು ಪ್ರಧಾನಿಯೆಂಬುವ ರಾಯ
ಜೋರು ಮುತ್ತಿಗೆಯನು ಕೂಡೆ।
ಸುಳುಹುದೋರದೆ ಇರ್ದು ಏರುವ ಸಮಯದಿ
ತೆಗೆದು ಹೊರಡಿಸಲು ರಾಮುಗನು ||೮||

ಕಂದಕದ ಅಗಳಲಿ ಎಂಬತ್ತು ಸಾವಿರ
ಮಂದಿ ಸಂದುದು ನೆಲೆ ಕಾಣದಂತೆ।
ತುಂಬಲಿ ಹೊರಟಿದ್ದ ದಂಡ ಕೊಂದುದು ಸೀಳಿ
[ರುಂ]ಡ ಮುಂಡಗಳು ಚೆಲ್ಲಾಡಿ ||೯||

ಉಳಿದ ಖಾನರು ನೇಮಿ ಕಿರಿ ಮುಖದೊಳು ಬಂದು
ಎರಗಲು ಪಾಶ್ಚಯನಡಿಗೆ।
ನುಡಿಯಲು ಎದೆ ವಚನ ಇರುವ ಮಂತ್ರಿಯ ರಾಯ
ದರವೇಸಿ ಮುರಿದೇನೊ ನೇಮಿ ||೧೦||

ಬುದ್ಧಿ ಎನುತಲಿ ನೇಮಿ ದೀರ್ಘದಂಡ ನಮಸ್ಕಾರ ಮಾಡಿ
ಅಬದ್ಧವೆ ಲೋಕದ ಶಾಸ್ತ್ರ।
ಸುಳುಹುದೋರದೆ ಇರಲು ಬರೆದು ಕಳುಹಲು ಪಾದ
ಅಜ್ಞೆ ಮಾಡೆಂದು ಕಳುಹಿದಿರಿ ||೧೧||

ಸತ್ತನೆಂಬುವ ಸುದ್ದಿ ತಲುಪಿಸಿ ಜಗಕೆಲ್ಲ
ಸಿಪ್ರದೊಳಗೆ ಮಡಗಿ।
ಯುಕ್ತಿಯುಳ್ಳವ ಮಂತ್ರಿ ಮುತ್ತಿಗೆ ಹಾಕೆಂದು
ಕೊಟ್ಟುಬಿಟ್ಟು ರಾಮನ ಕಾಣಿಸಿದನು ॥೧೨॥

ಶಾಬಾಸು ಬೈಚಪ್ಪ ಪ್ರಧಾನಿಗಳರಸನೆ
ರಾಜೇಂದ್ರ ಸುರಿತಾಳ ಮೆಚ್ಚೆ।
ರೂಢಿಯೊಳಿಂತಪ್ಪ ಪ್ರಧಾನರು ನಮಗಿಲ್ಲ
ಭೂಮಿಯ ಸರ್ವ ಒಪ್ಪಿಸುವೆ ॥೧೩॥

ಬಲವೆಲ್ಲ ಮುಳುಗಿರಲು ಲೌಡಕು ಬಾಲೆಂಬ
ಹೊಡೆದು ಬಾದುರನ ತಂದಿರಲು।
ಪಡೆಯು ಗೊಲ್ವಡೆಯಾನ ಲಯಮಾಡಿ ಬಂದೆಲ್ಲ
ನುಡಿಯಲು ನಾಲಗೆ ಬಹುದೆ ॥೧೪॥

ರಾಮನೆಂದರೆ ರಾಯ ಭೂಮಿಗಳು ನಿಲ್ಲವು
ಆನೆಯೆಂಬುವ ರಾಯ ಆಡು।
ಗೋಡೆಯೆಂಬುವು ಕುರಿಯು............
ಮಾನ್ಯರು ನೊರಜಿಗೆ ಕಡೆಯೆ ॥೧೫॥

ರಾಮ ರಾಮನು ಎಂದು ಭೂಮಿ ಗಾತ್ರವ ಮಾಡೆ
ಕಾಯ ವಜ್ರವನು ಪಡೆದಿಹನೆ।
ಏನವನ ಘನ ಘನ............
ಮಾಡಿ ಇರುವವೆ ಎಂತು ಎನಲು ॥೧೬॥

ಸಾಕಯ್ಯ ಬಿಡು ನೇಮಿ ನಾಚಿಕೆ ತೋರ್ವುದು
ಭೂಕಾಂತನೆನಿಪ ಸುರಿತಾಳ।
ನಾಕೆಂಟು ಸಾವಿರದ ಪಾಳೆಗಾರರ ಮೇಲೆ
ಸೋತನೆಂಬಪಕೀರ್ತಿ ಬಂತು ॥೧೭॥

ಆರು ಲಕ್ಷ ದಂಡ ಒಬ್ಬನೆ ಕಡಿವಾದ
ಸೀರೆಗಳಿದ್ದಂತೆ ನಿರುಗೆ।

ರಾಯರ ಪಿಂಡೆಂಬ ನಾಮ ಸಲುವುದು ಅವಗೆ
ಬಾದುರನ ಕೊಡಲಿಲ್ಲ ಧೀರ ||೧೮||

ಒಂದೆರಡು ಖಾನರು ಬಂದು ಕರಗಳ ಮುಗಿದು
ಕಂಡೆವು ನಿಮ್ಮ ಪಾದವನು।
ಕಳುಹೆಮ್ಮ ಸೈನ್ಯವ ಮಲೆತ ರಾಯರ ಮೇಲೆ
ಕಡು ಪಾಪಿ ಕುಮ್ಮಟಕೆ ಬೇಡ ||೧೯||

ಎಲ್ಲಿಗಾದರು ಕಳುಹು ಒಲ್ಲೆ ಎಂಬುವರಲ್ಲ
ಮಲ್ಲ ರಾಮನ ಮೇಲೆ ಬೇಡ।
ಅಲ್ಲಿ ಅಳಿವದು ಏನು ಇಲ್ಲಿಯೆ ಹೊಡಿಸಯ್ಯ
ಒಲ್ಲೆವು ಯಮನೂರ ಹಾದಿ ||೨೦||

ರಾಜೇಂದ್ರ ಸುರಿತಾಳ ಇವರಾಡುವ ವಚನ ಕೇಳಿ
ಧ್ಯಾನಿಸುತ ಮತ್ತವನು ಇರಲು।
ಬ್ಯಾರೊಂದು ಕಥೆ ಬಂತು ಲಾಲಿಸಿ ಬಲ್ಲವರು
ಹೋದಳೆನಬೇಡಿ ರತ್ನಿಯನು ||೨೧||

ಸತ್ತಳೆಂಬುವ ಮಾತು ಜಗವೆ ಕಂಡುದು ಸಹಜ
ಹುಟ್ಟುವಳು ಕೇಳಿ ಹೊಲೆರಂಡೆ।
ಚಿತ್ರಗುಪ್ತರು ಒಯ್ದು ಯಮನೆಡೆಗೆ ಒಪ್ಪಿಸಲು
ಅತ್ತ ಲೇಖನವ ನೋಡಿಸಿದ ||೨೨||

ಲಿಖಿಸಾರ ತೀರದೆ ಮೃತವನೈದಿದಳೀಕೆ
ಕಥೆಗಾಗಿ ಒಂದು ಛಲದಿಂದ।
ಸುತನನೆ ಕೊಲುವಂತೆ ಲಿಖಿತಯಿರುವುದು ಮುಂದೆ
ಹತವಾದೊ ಬಲುಹಾದ ಪ್ರಾಣ ||೨೩||

ರವಿತನಯನೆ ಕೇಳು ಬರಲಿಲ್ಲ ಸರಿಟವಣೆ
ಇರುವುದು ಹೀಗೆ ಮಾತ್ರದಲಿ।
ಉರುಳಿಗೆ ಶಿರಕೊಟ್ಟು ವೈರಕೋಸ್ಕರ ಬಂದು
ಸರಿ ಮುಂದೆ ತಿಳಿದಂತೆ ಮಾಡು ||೨೪||

ಆದಾಯವಿಲ್ಲದೆ ಹಾದಿ ಮನುಜನು ಬೇಡ
ಸಾಗಿಸಿ ಶ್ರೇಷ್ಠಿ ನಾ ನಡೆಯೊ।
ಹೊಗಲಾಳವವನು ನೋಡಿ ಬ್ರಹ್ಮನು ಇವಳಿಗಿ
ಕಾಲವಾಸನದ ಲೇಖನವ ॥೨೫॥

ಸಂದಿಲ್ಲ ದಿನಮಾನ ಮುಂ[ದೊಂದು] ಜನ್ಮವು
[ಹೊಂ]ದದೆ ಹೋಗೆ ತೀರದೆನುತ।
ರಂಭೆಗೆ ರಾಮನ ಕೊಲ್ವ ಶಕ್ತಿಯನಿತ್ತು
ಮಾತಂಗಿಯ ಕುಲದಿ ಜನಿಸೆನಲು ॥೨೬॥

ಸತ್ತೇಳು ದಿನಕವಳೆ ಹುಟ್ಟುದು ಪುಸಿಯೆಂದು
ಧಾತ್ರಿಯೊಳಾಡರೆ ಜನರು।
ಸೃಷ್ಟಿಪ ಅಜ ನಿರ್ಮಾಣದೊಳಗೆ ಬಂದು
ಹುಟ್ಟಿದಳು ಡಿಳ್ಳಿಪುರದೊಳಗೆ ॥೨೭॥

ಹರಳರ ಕುಲದೊಳು ಜನಿಸಿದಳು ವರರೂಪ
ಧರೆಯೊಳು ಸರಿಯಿಲ್ಲವೆನಿಸಿ।
ರತ್ನಿ ರಂಭೆಗೆ ತ್ರಿಲೋಕ ಸರಿಬಾರದೆಂದೆನಿಸಿ
ಬೆಳೆದೊಂದು ರೂಪಾಗಿ ನಡೆಯೆ ॥೨೮॥

ಮಾತಂಗಿ ಮಗಳೆಂಬ ಪ್ರತಿನಾಮವನಿಟ್ಟು
ಮಾತಾಪಿತರು ಸಲಹುವರು।
ಮಾಸೊಂದು ದಿವಸಾಗಿ ವರುಷೊಂದು ಮಾಸಾಗಿ
ಲಲಿತಾಂಗಿಯಾಗಿ ಚರಿಸುವಳು ॥೨೯॥

ಎದೆಯ ಕುಪ್ಪಸಗಳ ಮೂಗುತಿಯ ಮುದದಿಂದ
ತಕ್ಕ ಸ್ನಾಮಾಶನ ಜೋಡು ।
ತುರುಳರ ರೂಪಿಗೆ ನೆರೆವೊಲ್ಲ ಸ್ತ್ರೀಯಳು ಆಗಿ
ಪಿಡಿದಳು ಹರಿಗೆ ಖಡ್ಗವನಾ ॥೩೦॥

ತುಂಬಿ ಗುರುಳ್ಗಳು ಮಾತಂಗಿಯ ಲಾವಣ್ಯ
ಇಂಬಿನ ಜಡೆಯ ಸುಲಿಪಲ್ಲ।

ಬಿಂಬಾಧರವು ಕುಚವು ನಡುವು ಕಂಠಿಕೆ ಭಾವ
ಚಂದ್ರನ ಕಿರಣ ಕಳೆ ಕಾಂತಿ ||೩೧||

ಹೋದ ದಂಡನು ಎಲ್ಲ ಗೋರಿ ಮಾಡಿದ ರಾಮ
[ಲಾ]ಲಿಸು ಭೂಪಾಲ ಎನುತ।
ಮಾದಿಗರ ಕುಲರಂಭೆ ಮಾತಂಗಿ ಕರ ಮುಗಿಯೆ
ನೋಡಲು ಪಾಶ್ಚ ಬೆರಗಾದ ||೩೨||

ರಾಮನ ತಲೆ ತರುವೆ ಪಾಲಿಸು ವೀಳ್ಯವ
ಪಾದಕೆರಗಲು ಸುರಿತಾಳ।
ಹೋದ ಖಾನರನೆಲ್ಲ ಗೋರಿ ಮಾಡಿದ ಮಗಳೆ
ಬಾಲತ್ವವದು ಪುಸಿ ಮಾತು ||೩೩||

ಹೀನಾಯ ತರುವಂಥ ನಾರಿ ಅಲ್ಲವೊ ರಾಯ
ರಾಮನ ಮರಣ ಹೆಣ್ಣೊಳಗೆ।
ಕೇಳಲಿಲ್ಲವೊ ಸುದ್ದಿ [ಕೊಲೆಯೊಮ್ಮೆ] ಮರೆಮಾಡಿ
ಠವುಳಿ ಮಾಡಿದನು ಕಂಪಿಲನು ||೩೪||

ಇಟ್ಟಂಥ ಛಲಪದವ ಬಿಟ್ಟು ಬಾಳ್ವೆನೆ ರಾಯ
ಕೊಟ್ಟೆನುರುಳಿಗೆ ಪ್ರಾಣವನು।
ಸೃಷ್ಟಿಕರ್ತನು ಬ್ರಹ್ಮ ಕಾ[ಲದಿಂ]ದಲಿ ಬಂದು
ಪುಟ್ಟಿದೆ ನಿಮ್ಮಯ ಪುರದಿ ||೩೫||

ರಾಮನ ಕೊಲಿಸದೆ ರತ್ನಾಜಿಯು ಬಿಡಬಹು[ದೆ?]
ಹೀನಾಯ ಹೊರಬಹುದೆ ಬರಿದೆ।
ಹ್ಯಾಗಾಗೆ ಅಪಕೀರ್ತಿ ಸಾಧನಕೆ ಗುರಿಯಾದೆ
ಚಂಡಾಡುವೆ ಕೊಡು ರಾಯ ವೀಳ್ಯೆ ||೩೬||

ಮಾತಂಗಿ ಪೂರ್ವದ ಕಾಲ ಸೂಚನೆ ಪೇಳೆ
ಈಕೆಯ ವಿಧಿಯು ರಾಮನಿಗೆ।
ಆತ್ಮವನು....... ಯೊಳಗೆ ಬಂದು
ಕಲಹ ಗೋಚರವ ಪೇಳುವುದು ||೩೭||

ಬಾಲೆಯಿಂದಲಿ ಎನ್ನ ಹೋದ ಮೀಸೆಯು ಬಂದು
ಕೂಡ್ಯಾವು ಎಂದ ಸುರಿತಾಳ।
ಪ್ರಾಯ ಸಾಲದು ಮಗಳೆ ನೀ ಎನ್ನ ಮಗಳೆಂದು
ಮೂರಾರು ವರುಷ[ವ]ನೆ ಕಳಕೋ ||೩೮||

ಮಾತಂಗಿ ಈ ತೆರದಿ ಡಿಳ್ಳಿಯೊಳಿರುತಿರೆ
ಭೂಪ ರಾಮನ ಭೋಗ ಕೇಳಿ।
ದೇವೇಂದ್ರಭೋಗದಲಿ ಭೂಮಿಯನಾಳ್ವನು
ಹಾಳು ರಾಜ್ಯವನು ರುಜುಮಾಡಿ ||೩೯||

ಸದರಿನೊಳಗೆ ಕುಳಿತು ದೊರೆ ಮಕ್ಕಳೀರ್ವರು
ಪ್ರಜೆ ಪರಿವಾರವ ಕರೆಸಿ।
ಉಡುಗೊರೆ ಉತ್ಸವ ಕೊಡಿಸಿ ಹೋಗಿದ್ದಂತೆ
ಗೌಡ ಒಕ್ಕಲನೆಲ್ಲ ಕರೆಸಿ ||೪೦||

ರಾಯನ ಮಾತೆನ್ನ ರಾಜ್ಯಕೆ ಕವುಳಿಟ್ಟು
ಮೂರೊರುಷ ದಂಡನು ತೊರೆದು।
ಆಮೇಲೆ ಮುತ್ತ್ಯೆನ ಕಾಲದ ರೊಕ್ಕವ
ನೀವಿತ್ತ ಸುಖದೊಳು ಬಾಳೆ ||೪೧||

ಎಂದಿಗೆ ಮಿಗಿಲಾಗಿ ಬಂದು ರಾಜ್ಯವ ತುಂಬಿ
ಚಂದ್ರನ ಶಾಂತಿ ಎಲ್ಲರಲು।
ಭಂಗಬಿಟ್ಟುರೆ ಹರಿಶ್ಚಂದ್ರನಂದದಿ ರಾಮ
ಬಂದು ಪಟ್ಟದಲಿ ಕುಳಿತಾಗ ||೪೨||

ದುಡ್ಡಿಗೆ ದುಡ್ಡಿತ್ತು ಬಡ್ಡಿಗೆ ಬೆಳೆದುದು
ಹಣವಿದ್ದವನ ಮನೆಗೆ।
ಹೊತ್ತು ದಬ್ಬೇಳು ರಾಯರ ಗಂಡನಾಳಿಕೆಯೊಳಗೆ
ಹೊತ್ತವು ಒಡವೆ ಏಕಮುಖದಿ ||೪೩||

ರಾಯ ರಾಮನ ರಾಜ್ಯ ಮೂರುವರೆ ಕೋಟಿಯು
ಹಾಲ್ಹಳ್ಳವಾಗಿ ತಮ್ಮನೆಯ।

ಮೋರ ಜಾತಿಗಳ ಹೇಳುವನಲ್ಲ ಹೊನ್ನೆಲೆಯಲಿ
ಹೊಕ್ಕಿ ತೂಗಾಡಿ ||೪೪||

ರಾಯ ರಾಮನ ಸದರ ಠೀವಿಯ ಪೇಳುವರೆ
ದೇವೇಂದ್ರನಂಥವ ರಾಮ|
ಕಾಲಾಳು ಕರಿ ತುರಗ ವಾಲ್ಯೆಸಿ ಪರಿಚರರು
ಸಂಬಂಧಿಕರು ಇರುತಿಹರು ||೪೫||

ರಾಮ ಕಂಪಿಲ ತನ್ನ ಪ್ರಧಾನಿಯೊಡನೆ ನುಡಿವ
ಬಾಲರಾಳಿಕೆ ನೋಡಿದೆನು|
ಈ ಮೇಲೆ ನಾವೀಗ ಕೈವಲ್ಯ ಕಂಡರೆ ಲೇಸು
ಮರಿ ಬಾಲ[ರ್‍ಹುಟ್ಟಿ]ದರೆ ಪ್ರತಿ ಲೇಸು ||೪೬||

ಅನಿತರೊಳಗೆ ಬಂದ ಗುರುವೆಂಬ ವರಮುನಿಯು
ಅರಮನೆಯ ಪೊಗಲು ಕಂಪಿಲನು|
ಕರ್ಮ ಹಿಂಗಿತು ಎಂದು ಸಾಷ್ಟಾಂಗವೆರಗಲು ರಾಯ
ಸ್ಥಿರಪಟ್ಟವಾಳೆಂದು ಹರಸಿ ||೪೭||

ಅಳಿದಾತ ಉಳಿಯಲು ಮಾಡಿದೆ ಮೃತಿ ಬಂದು
ಒದಗಿತ್ತು ಕಡೆಗಾಲ ಸುತಗೆ|
ಕಡುಪಾಪಿ ರತ್ನಾಜಿ ಡಿಳ್ಳಿಯೊಳಗೆ ಜನಿಸಿ
ಬರುವಳು ದಂಡೆತ್ತಿ ಮರಳಿ ||೪೮||

ತಿಳಿದೆನು ರಾಜೇಂದ್ರ ಅವಳ ಮೂಲದ ಬಗೆಯ
ನಿಜಕರವೆಂದು ತಿಳಿ ನೀನು|
ಬರುವಳು ಭವ ವೈರಿ ಮರಣ ತಪ್ಪದು ಸುತಗೆ
ನಡೆಯಲು ಮುನಿಯು ವಾಲಗಕೆ ||೪೯||

ರಾಮಭೂಪಾಲಗೆ ಪೇಳಲು ಚರರಾಗ
ಸ್ವಾಮಿ ಗುರುಮುನಿಯು ಬರುತಿಹರು|
ಭೇರುಂಡನಂದದಿ ಕುಮಾರರೀರ್ವರು ಎದ್ದು
ಪ್ರೇಮದಿ ಸಾಷ್ಟಾಂಗವೆರಗಿ ||೫೦||

ಶಿರಗಳ ಪಿಡಿದೆತ್ತಿ ಹರಸುತ ಗುರುಮುನಿಯು
ಇರುತಿರ್ಕು ಸ್ಥಿರರಾಜ್ಯವಾಳು ||೫೧||

ವರರತ್ನ ಗದ್ದುಗೆ ಪೀಠದಿ ಕುಳ್ಳಿರಿಸಿ
ಕರಗಳ ಮುಗಿದು ನಿಂದಿಹರು|
ಮಗನೆ ಲಾಲಿಸು ಮುಂದೆ ಸ್ಥಿರವಲ್ಲ ನರಕಾಯ
ನೆರೆಮನೆಗೆ ಹೋಗಿ ಕುಳಿತಂತೆ ||೫೨||

ಬರಲರಿದು ನೆರವಿಂಗೆ ಬಲ ಕುದುರೆ ಚತುರಂಗ
ಧರ್ಮ ಸಾಧನವೆ ನಿಜ ಸಾಕ್ಷಿ|
ಏಕಚಕ್ರವನಾಳೆ ಇರುವನಕ ಸಿರಿಭೋಗ
ಬರುವುದೆ ಬೆನ್ನೊಡನೆ ಕ್ಷಣವು ||೫೩||

ಹರಿಶ್ಚಂದ್ರ ಪಿತನಾಳ್ದ ಧರೆಯ ಭೋಗವ ಪೇಳ್ವೆ
ಉರಗಭೂಷಣಗೆ ಅಳವಲ್ಲ|
ಗೊತ್ತಿಗೆ ಬರಲಿಲ್ಲ ಸತ್ಯದಿ ನಡೆಯದೆ
ಕೀರ್ತಿ ಸಾರಗಳ ಗಳಿಸದೆ ||೫೪||

ಚಿಕ್ಕ ಮನುಜಗೆ ಮುನ್ನ ಕಡೆಯಾದ ಪುಣ್ಯದ
ಕ್ಷೇತ್ರಧರ್ಮಗಳ ಮಾಡದಲೆ|
ಮಾಡಯ್ಯ ಮಗ ರಾಮ ಭೂಮಿಯೊಳು ಕೆರೆಭಾವಿ
ದಾನಧರ್ಮಕೆ ಬಾವಿಯನ್ನು ||೫೫||

ಮಾಡಿಹುದು ಮಠಮಾನ್ಯ ದೇವಾಲ್ಯ ಜಾತ್ರೆಯನು
ಸೂರ್ಯಚಂದ್ರರು ಇರುವನಕ|
ಇರು ಮಗನೆ ಸುಖದೊಳು ಬಿಡಬೇಡ ಧರ್ಮವ
ಕೊಡಬೇಡ ಬೆನ್ನ ಬಿದ್ದವರ ||೫೬||

ಕಡೆಯ ಕಾಳಗದೊಳು ಸದ್ಗತಿಯ ಹೊಂದುವೆ ಮಗನೆ
ಕಡಿಯದಿರು ಹೆಣ್ಣ ಜನ್ಮವನು|
ಸುಳುಹು ಬುದ್ಧಿಯ ಪೇಳಿ ನಡೆಯಲು ಗುರು ಮುನಿಯು
ಹೃದಯದಿ ನಡಲು ರಾಮನಿಗೆ ||೫೭||

ಕರೆದಾಗ ಮಂತ್ರಿಯ ಮಗ ನೀಲಕಂಠನ್ನ
ಉಡುಗೊರೆ ಉತ್ಸವ ಮಾಡಿದನು।
ಲಾಲಿಸು ನವರತ್ನ ನೀಲಕಂಠನೆ ಮಂತ್ರಿ
ರೂಢಿಯೊಳು ಕೆರೆಬಾವಿ ರಚಿಸು ||೫೮||

ದೇವಾಲ್ಯ ಮನೆಮಠ ಮಾಡಿಸು ನಾಲಾಸ್ಥಾಪ್ಯ
ಭೂಮಿಯುಳ್ಳನಕ ನಡೆವಂತೆ।
ಗುರುಪೂಜೆ ಹರಪೂಜೆ ಮಾಡಿನ್ನು ಸುಖದೊಳು
ಪರಿಹರಿಸುವುದು ಅಧರ್ಮ ||೫೯||

ಎಡೆ ಎಡೆಗೆ ಅರವಟಿಗೆ ಕೈವಲ್ಯ ಕ್ಷೇತ್ರಗಳ
ನಡೆಸಯ್ಯ ಎರಡು ಸಮನಾಗಿ।
ಬುದ್ಧಿ ಎನುತಲಿ ಮಂತ್ರಿ ಎದ್ದು ಕರಗಳ ಮುಗಿದು
ಇದ್ದಂತೆ ಮಾಳ್ಪೆ ಚಿತ್ತೈಸು ||೬೦||

ದಿನಕರನು ತನ್ನಯ ಗಣಿತ ಒಪ್ಪಿಕೆಯೆಂದು
ಇಳಿಯಲು ಜನನಿ ಗರ್ಭದಲಿ।
ವಾಲಗ ಹರಿಸಿ ಕುಮಾರರೀರ್ವರು ತಮ್ಮ
ರಾಜಮಂದಿರಕೆ ಸಾಗಿದರು ||೬೧||

ಷಡುರಸಾನ್ನವ ಸಲಿಸಿ ಸುಖನಿದ್ರೆ ಮಾಳ್ಪಾಗ
ಹರಬಂದು ಸುಳಿದ ಸ್ವಪ್ನದಲಿ।
ರಾಮನ ಲಯಗಾಲ ಸೇರಿ ಬಂದುದು ತುದಿಗೆ
ಆಳಿವನಳಿಯಲು ಶಂಭೂ ||೬೨||

ಸಾಗುವ ತೆರ ಮಾಳ್ಪ ಶ್ರೀ ಗೌರಿ ಪ್ರಾಣೇಶ
ತೋರಲು ರೂಪ ಸ್ವಪ್ನದಲಿ।
ಬಡವ ಜಂಗಮನಾಗಿ ಒಡಲು ಅಸ್ಥಿಯ ಸೇರಿ
ಪಿಡಿವರೆ ಪ್ರಾಣ ತೊರೆವಂತೆ ||೬೩||

[ಗುಜ್ಜು]ಗೂಡಿ ಶರೀರವ ಊದುವ ತನಿವಣ್ಣು
ಪಿಡಿದ ಕಪ್ಪರವು ತ್ರಿಶೂಲ।

ಉರಗನು ಮೈಯೆಲ್ಲ ಮರಿಯ ಬಟ್ಟೆ ಸಹವಾಗಿ
ನೂರಾರು ಹೊತ್ತು ಅಂಗದಲಿ ||೬೪||

ಧುರಧೀರ ರಾಮನ ತನುವ ಸೋಂಕುವ ತೋರೆ
ಬೆದರದೆ ರಾಮ ಕರಮುಗಿದು।
ಸಪ್ತೇಳು ಭೂಮಿಯ ರಕ್ಷಣ್ಯ ಕರ್ತನೆ
ಕೊಟ್ಟನೆ ಬಡ ಪ್ರಾಣ ಬ್ರಹ್ಮ ||೬೫||

ಕೊಚ್ಚಲು ಉಗುರೊಳು ವನಜಸಂಭವನ ಶಿರವ
ಕಚ್ಚಿ ಹಿರಿದ ಆವ ತರವು।
ಮಾಧವನ ಸುತನಾದ ಬಾಲನ ಮಾವಗೆ
ಮಾಡುವ ಭಕ್ತಿಗೆ ಒಲಿದು ||೬೬||

ದ್ವಾರಪಾಲಕನಾದ ಭವ ಬಡತನವೆಂದು
ರಾಮ ಕುವರನು ಸ್ವಪ್ನದಲಿ।
ಮಗನೆ ಮೆಚ್ಚಿದೆ ಕೊಳ್ಳು ಬುಡಕೊಂದು ಬೀಜವನು
ಒದಗಿತು ಕೈವಲ್ಯ ನಿನಗೆ ||೬೭||

ತರಳನ ಫಲವಾ[ದ] ಕರವ ಮಂಡೆಯೊಳಿಟ್ಟು
ಮರುಳುತಲೆ ಮತ್ತೊಂದು ವಾಕ್ಯ।
ಆರು ಮಾಸವ ಕಳೆದು ಮನವಾಗೆ ಮಠಗಳ
ನಾಮ ಇಡು ಜಟ್ಟಂಗಿ ಎನುತ ||೬೮||

ಆಮೇಲೆ ಮಾತಂಗಿ ಕಾರ್ಯಬಹುದು ನಿನಗೆ
ಮೃತಗಾಲದಿ ಬರುವೆವು ಎನಲು।
ಹರನು ಹರಶರಣರು ತೋರುವರು ಸ್ವಪ್ನದಲಿ
ರಾಣಿಗೆ ಫಲಸಾರವಿಟ್ಟು ||೬೯||

ಮಾಯವಾಗಲು ಮಂಜು ಹರಿದು ಸೂರ್ಯನು ಬಂದು
ಏರಿದ ರಥವ ಪೂರ್ವದಲಿ।
ಉದಯವಾಗಲು ಎದ್ದು ದೊರೆ ರಾಮ ತನ್ನಯ
ವ್ರತನೇಮವ ಕೈಕೊಂಡ ||೭೦||

ಧರಿಸಲು ಭೂಷಣ ಭೂಷಣಾದಿಗಳಾಗಿ
ಬರುವರು ಸದರ ಚಾವಡಿಗೆ।
ಪರಿವಾರ ಕರಿ ತುರಗ ಮಂತ್ರಿಗಳು ಬಿರಿದಾಂಕ
ರಾಹುತ ಮಾನ್ಯೆಯರು ಬರಲು ॥೭೧॥

ಮೆರೆಯುತ ಕಹಳೆಗಳು ಉಗ್ಗಡಿಸುವ ಭಟರಿಂದ
ಸರಿಯಿಲ್ಲವೆಂದು ಬರುತಿಹರು।
ಮುತ್ತಿನ ಪಲ್ಲಕ್ಕಿ ಪುತ್ರರೀರ್ವರು ಏರಿ
ಒತ್ತಿಲಿ ಮಂತ್ರಿಯ ಮಗಳು ॥೭೨॥

ಶುಕ್ರನ ಪ್ರಭೆಯಂತೆ ಬಂಟರು ಎಸೆಯುತ
ಹತ್ತಲು ರತ್ನದ ಸದರ।
ವಾಲಗದಿ ಕುಂತನು ದೇವೇಂದ್ರ ಭೋಗದಿ ರಾಮ
ರಾಜ್ಯಭಾರವನು ಪಾಲಿಸುತ ॥೭೩॥

ಮೇಲೊಂದು ಗ್ರಹಿಸದೆ ಪಾಳ್ಯಗಾರರಿಗೆಲ್ಲ
ತಾ ಮಾಡಿದ ಕನಿಕಷ್ಟವೇನು।
ಕೇಳಯ್ಯ ಕಾಟಣ್ಣ ಮೇಲೆ ಮಂತ್ರಿಯ ಮಗನೆ
ಬಾದೂರಖಾನ ಲಿಂಗಣ್ಣ ॥೭೪॥

ರಾಮ ಸತ್ತನು ಎಂದು ನೇಮಿಗೋಲೆಯ ಬರೆದ
ಮೂಳ ದೊರೆಗಳ ನಂಬಬಹುದೆ।
ಇತ್ತಲೆಯ ಹಾವಿನವರು ಕಿತ್ತು ಒಗೆಯದೆ ಬಿಟ್ಟು
ಇತ್ತವು ತನಗಾಗಿ ಒಡ್ಡು ॥೭೫॥

ಸತ್ತಿರಲು ನಾ ಮುನ್ನ ತಂದೆ ಕಂಪಿಲನನು
ಉಪ್ಪು ಕಂಡನು ತಿನಿಸುವರು।
ಒಡನುಂಡು ಕಡೆಯೊಳು ಕರದೊಳು ಕರವಿಡಿದು
ಇನ್ನಡದರೆ ದೋಷ ತನಗುಂಟೆ ॥೭೬॥

ನಡೆಯಣ್ಣ ಕಾಟಣ್ಣ ಕರಿ ತುರಗದೊಳು ಪೋಗಿ
ಪುಡಿಮಾಡು ಪಾಳ್ಯಗಾರರನು।

ಹೊಡೆಯಲು ರಣಭೇರಿ ಸಿಡಿಲಿನಾರ್ಭಟದೊಳು
ಕುದುರೆ ಕಾಲ್ಬಲ ಬಂದು ಕೂಡೆ ||೭೭||

ಬಿರಿದಂಕರಾದ ಮಾನ್ಯರಿಗುಡುಗೊರೆ ಇತ್ತು
ನಡೆಯಲು ದಂಡು ಗುತ್ತಿ[ಳೆ]ಗೆ।
ಆರು ದಿವಸಕೆ ಹೋಗಿ ಏರಲು ಗುತ್ತಿಯ
ಘೋರ ಮುತ್ತಿಗೆಯ ಮಾಡಿದರು ||೭೮||

ಸುಟ್ಟು ಸೀಮೆಯನೆಲ್ಲ ಸೂರೆ ಮಾಡಿ ಕಾಟಣ್ಣನು
ಬಿಟ್ಟನು ದುರ್ಗ ಲೆಗ್ಗೆಯನು।
ಕುಟ್ಟಿ ಕೋಳಾಹಳ ಮಾಡಿ ಹತ್ತಿ ಬೇಡರು ಕಲ್ಲ
ಅಟ್ಟಿದರು ಮಾರು ಗುತ್ತಿಯನು ||೭೯||

ಕೆಟ್ಟೆವೆನುತಲಾಗ ಗುತ್ತಿ ಚಾಮಯ್ಯನು
ಅಟ್ಟಲು ಮಂತ್ರಿ ಹೇಜಿಬರ।
ರಾಯ ಕಾಟಣ್ಣಗೆ ಹೋಗಿ ಕರಗಳ ಮುಗಿದು
ಕಾಯಬಹುದು ಎಮ್ಮ ತಪ್ಪ ||೮೦||

ಭೂಮಿ ಚಂದ್ರುಳ್ಳನಕ ಮೀರಿ ನಡೆಯಲು ನಮ್ಮ
ವಾಲೆ ಬರೆಯಲು ತಮ್ಮ ನೆಡೆಗೆ।
ದೈನ್ಯಬಡಲು ಪವುದಿ ತೆಗೆದುಕೊಂಬುದು ಎಂದು
ಬರಲು ಲೇಖನ ಆಗ ಬರಲು ||೮೧||

ತೆಗೆದು ಮುತ್ತಿಗೆಯನು ಕರೆಯೆ ದೊರೆಗಳ ಮೇಲೆ
ನಡೆಯಲು ರೊಕ್ಕವನು ಹೇರಿಸುತ।
ಬಲ ಬಂದು ಕೂಡಲು ಕಡೆ ಮೊದಲಿಲ್ಲದೆ
ದೊರೆಗಳು ಹೊರಟು ಬಂದಾರು ||೮೨||

ನಡೆಯಲು ಮುಂ ದಂಡು ಡಿಳ್ಳಿಯ ಸೀಮೆಯ
ಸುಡುತ ಕಾಟಣ್ಣನು ಇರಲು।
ಹರ ಬಂದು ಸ್ವಪ್ನದಿ ಅರುಹಿದ ಸಂತಾನ
ಕುರುಹುದೋರಲು ಸುಭದ್ರೆ ||೮೩||

ಮೂರು ನಾಲ್ಕೊ[ಸಗೆ] ಮಾಡಿಸಿ ಕಂಪಿಲನು
ತಾನು ಅತ್ಯಂತ ಸಂಭ್ರಮದಿ।
ರಂಭೆ ಸುಭದ್ರೆಗೆ ಹೊಂದಲು ಸಂತಾನ
ಒಂದೊಂದು ಬಗೆಯ ಒಸಗೆಯನು ||೮೪||

ಸಂಭ್ರಮದಿ ಹರಿಯಮ್ಮ ಸುತರ ಕಂಡೆನು ಎಂದು
ಅಂಬುಧಿಯಂದದಿ ಹಿಗ್ಗಿ।
ಮನದೊಳಗಿದ್ದಂತೆ ಹರನಿತ್ತ ಎನುತಲಿ
ಅರಸು ಕಂಪಿಲನು ಪ್ರಧಾನಿ ||೮೫||

ಒದಗಲು ನವಮಾಸ ವನಿತೆ ಸುಭದ್ರೆಗೆ
ಜನನದ ಸ್ಥಿತಿಯ ಲಾಲಿಪುದು।
ಆಷಾಢ ಮಾಸದ ಆದಿತ್ಯವಾರದ
ಸೂಸುವ ವ್ಯಾಳ್ಯ ದಿನಕರನು ||೮೬||

ಕೇಶವ ಸುತನಂತೆ ಕುಮಾರನ ಬೆಸಲಾಗಲು
ದಾಸಿಯರು ಕಂಪಿಲಗೆ ಪೇಳೆ।
ರೋಗಿ ಬಯಸುವ ಊಟ ವೈದ್ಯ ಹೇಳಿದ ಪಥ್ಯ
ಮಾಡಿದ ಶಿವ ಎನಗೆ ಪುಣ್ಯ ||೮೭||

ರಾಯ ಜಟಂಗಿಯು ಎಂಬ ನಾಮವನಿಟ್ಟು
ದಾನ ಧರ್ಮಗಳನು ಕೊಡಿಸಿ।
ಬಾಲನ ಸಲಹುತ ತಾಯಿ ಹರಿಹರದೇವಿ
[ಉ]ಬ್ಬಿ ಸುಖದೊಳಗಿರಲು ||೮೮||

ಆರೇಳು ಮಾಸವು ರಾಯ ಕಾಟನು ಹೋಗಿ
ಹಾಳು ಮಾಡಲು ಡಿಳ್ಳಿ ಸೀಮೆ।
ಕಟ್ಟಿಸಿ ಗೂಳ್ಯವ ಹತ್ತೆಂಟು ಗಾವುದ ದಾರಿ
ದಿಕ್ಕಿಲ್ಲದ ಕೇಳನು ಹೊಡೆಸಿ ||೮೯||

ಕಪ್ಪ ಕಾಣಿಕೆ ರೊಕ್ಕ ಕಡೆಮೊದಲಿಲ್ಲದೆ
ಹೊಕ್ಕು ಸಾಗುವುದು ಕುಮ್ಮಟಕೆ।

ಕಡೆ ಸೀಮೆ ಡಿಳ್ಳಿಯ ಎಡೆಗೆ ಗೂಳ್ಯವ ಕಟ್ಟಿ
ಕೆಡಿಸಿದ ಹೋಗಿ ನೇಮಿಯನು ||೯೦||

ಕಡುವುದು ತಾ ಹೋಗಿ ಅಡಗು ವ್ಯಾಳ್ಯೆವು ಬಂತು
ನಡೆಯಲು ದಿಕ್ಕು ದೇಶಾಗಿ।
ಬೂದಿ ಮುಚ್ಚಿದ ಕೆಂಡಗಳನು ಕೆದರಿದ ಗಾದೆ
ಮಾಡಿದೆ ನೇಮಿ ನೀ ಹೋಗಿ ||೯೧||

ಮೂರು ಲಕ್ಷದ ಪೌಜು ಗೋರಿ ಮಾಡಿದ ಹೋಗಿ
ಸೀಮೆಗೆ ಬಡಿಕಲ್ಲ ತಂದ।
ಬಡವನೆ ಡಿಳ್ಳಿಯ ಬುಡಕಾಗಿ ಕಾಟನು
ಲಗುವ ಕಂಡನು ನೇಮಿಯನು ||೯೨||

ಕುರಿಗಳಂದದಿ ಹೋಗಿ ಮರಣವಾಗಲು ಕಂಡು
ತುಳಿಸಿದ ಮಿಂಡ ಬೆನ್ನೊಡನೆ।
ಇಬ್ಬರು ಕೆಡಲಿಲ್ಲ ಹಬ್ಬವು ಪ್ರಜೆಗಿನ್ನು
ಗುದ್ಯಾಡೆ ಸತಿಪತಿಯು ಕೂಡಿ ||೯೩||

ಬಿದ್ದ ಮಗುವಿನ ಪ್ರಾಣ ಹೋದ ಈಗಳು ಎಂದು
ಬಿದ್ದು ಓಡಲು ಬಾಯಿ ಬಿಡುತ ।
ಕಾಗದ ಬರೆಯಲು ರಾಯ ಕಾಟಣ್ಣನು
ಸಾಗಲು ಹಿಂದಕ್ಕೆ ಬರಲು ||೯೪||

ನೋಡುವ ಅಲ್ಲಿಂದ ಬರಹೇಳಿ ಬರೆಯಲು
ಭೂಮಿ ಆರ್ಭಟಿಸುತ್ತ ತಿರುಗೆ।
ಎರಡು ಲಕ್ಷದ ದಂಡು ನಡೆಸುತ್ತ ಕಾಟಣ್ಣ
ಗಡಿಮನೆಯ ಮುಂತಾಗಿ ಬಡಿದ ||೯೫||

ನದಿ ಹೊಳೆ ಮುಂತಾಗಿ ಕಡಿದು ತಮ್ಮಯ ಸೀಮೆ
[ನ]ಡು ರಾಜ್ಯಕೆ ಬಂದು ಇಳಿಯೆ।
ಸಾಗಿ ಬರಲು ಅಣ್ಣ ರಾಯ ರಾಮನು ಹೊರಟು
ಮಹರ್ನಾಮಿ ಬಯಲಿಗೆ ಭೇಟಿ ||೯೬||

ರಾಯ ರಾಯರನೆಲ್ಲ ನೋಡಿ ಮೋರೆಯ ರಾಮ
ಜ್ಞಾನ ಹರಿಯಿಕೆ ಸತ್ತವನೆ।
ಬಂದ ದೊರೆಗಳನೆಲ್ಲ ಮುಖದಿಂದ ನೀರನು ಇಳುಹಿ
ನಂಬೋರೆ ನಕರ ಧರೆಯೊಳಗೆ ॥೯೭॥

ಸಂದರೆ ಬಂದೆಮ್ಮ ತಂದೆ ನುಡಿಸುವರುಂಟೆ
ತಾ ಬೇರೆಣಿಸಿದರೆ ಕಂಪಿಲನ।
ಬೇರ ಕೀಳುವೆನೆಂದು ಮಾಡಿದೆ ನಾ ಛಲಪದವ
ನೋಡಿ ಗ್ರಹಿಸಿದೆನು ಮತ್ತೊಂದು ॥೯೮॥

ಕಾಯಗಳು ಸ್ಥಿರವಲ್ಲ ಭೂಮಿ[ಗ]ಳು ಸ್ಥಿರವಹುದೆ
ಕೂಡಿದೆ ಧರ್ಮದೇವತೆಯ।
ಕಾಯಬಹುದು ತಪ್ಪ ಕೂಡಿದ್ದು ಕೆಡು ಬುದ್ಧಿ
ಬೇರೊಂದನೆಣಿಸಲು ನಿಮಗೆ ॥೯೯॥

ರೂಢಿಗಧಿಕವಾದ ಸುರಿತಾಳನೇ ಬರಲಿ
ಹೋಗೆವು ಕೂಟ ಭೇಟಿಗಳ।
ರಾಯ ದೊರೆಗಳಿಗೆಲ್ಲ ಆಗ ಉಡುಗೊರೆ ಮಾಡಿ
ಸಾಗಿಸಿ ಅವರವರ ಪುರಕೆ ॥೧೦೦॥

ರಾಮನು ತನ್ನಯ ಭೂಮಿಯನಾಳುತ್ತ
ಆನಂದ ಸುಖದೊಳಗಿರಲು।
ಧರಣಿಯೊಳು ಕೆರೆ ಬಾವಿ ಆದವೆನುತ ಮಂತ್ರಿ
ಮಗ ನೀಲಕಂಠನು ಉಸಿರೆ ॥೧೦೧॥

ಗಾವುದಕೆ ಮೂರೆರಡು ರಾಮನಾಥನು ಎಂಬ
ದೇವಾಲಯವ ನಿರ್ಮಿಸಿದೆ ॥೧೦೨॥

ಕೆರೆಗಳಾದವು ಸ್ವಾಮಿ ಶರಧಿಗೆ ಸಮನೆನಿಸಿ
ಉದುರದೆ ಮಳೆಯು ಮೂರು ವರುಷ।
ಸುಡುವದೇವುದು ಕಾವು ಹುಣಸೆಯ ಎಲೆಯಷ್ಟು
ರಚಿಸಿದೆ ಏಳ್ನೂರು ಕೆರೆಯ ॥೧೦೩॥

ಊರು ಊರಿಗೆ ಮಠವು ಮಾಡಿಸಿ ಶಿಲೆ ಮುದ್ರೆ
ಭೂಮಿ ಕೊಡುಗೆಗಳನು ಬಿಡಿಸಿ।
ದಾನಕ್ಕೆ ಅಗ್ರಾರ ಭೂಮಿ ಧಾರೆಯನೆರೆದು
ಮೇಲೆ ಶಾಸನಗಳ ಬರೆಸಿ ||೧೦೪||

ದೇವರ ಪೂಜೆಯ ನಿತ್ಯ ಕಟ್ಟಳೆ ನಡೆವ
ಸೂರ್ಯ ಚಂದ್ರರುಳ್ಳನಕ।
ಊರು ಉಂಬಳಿ ಬಿಡಿಸಿ ಹಿರಿದು ಕಿರಿದಿನ ಮೇಲೆ
ಕೆರೆ ಜಾತ್ರೆಗಳು ನಡೆವಂತೆ ||೧೦೫||

ಮನೆದೈವ ಜಟ್ಟಂಗಿ ರಾಮೇಶನ ಭೋಗವ
ನರರಿಗೆ ಪೇಳುವರಳವೆ।
ರಜತಾದ್ರಿ ಅಲ್ಲಲ್ಲಿ ಇರುತಿಹುದು ಕುಮ್ಮಟ
ದಾದಿ ಗಿರಿಜೇಶನೋಲಗವು ||೧೦೬||

ಹರಪೂಜೆ ಹ[ರ]ಭಜನೆ [ಪ]ಕ್ಷ ಕ್ರಿಯೆ ಭಕ್ತರು
ನಡೆಸುವರಲ್ಲದೆ ಮಿಕ್ಕುವರು।
ನುಡಿಯ ಕರ್ಮಗಳೆಂಬ ಸ್ಮರಣೆಯ ಕೇಳಲು
ಧರೆ ಬೇಡ ಹರಳರ ಕುಲದಿ ||೧೦೭||

ಸಿರಿಯಿಂದ ಸುಖದಿಂದ
ಸಮವೆನಿಸಿ ಕಲ್ಯಾಣಪುರಕೆ।
ಮರಣವೊ ರಾಮಗೆ ದುರುಳಾಗೆ ಈ ಭಕ್ತಿ
ದೊರೆಯದು ಬಲ್ಲವರು ಆಡೆ ||೧೦೮||

ಕೆಟ್ಟವಗೆ ಶುಭಗುಣವು ಹುಟ್ಟಲು ಲಯಕಾಲ
ನಿಷ್ಫಳವಾಗದು ಬುದ್ಧಿ।
ಹುಟ್ಟಿದ ಬಳಿಕವರ ನೆಚ್ಚ ಕಾಣುವುದಿಲ್ಲ
ತಪ್ಪಾದ ಶಾಸ್ತ್ರವಿಧಾನ ||೧೦೯||

ಪುಣ್ಯಪುರುಷನು ಜನಿಸಿ ಪಾಪ ಹಿಂಗಿತು ಎಂದು
ಎನ್ನುತ್ತ ಆಡಿ ಹರಸುವರು।

ಧರ್ಮದೊಳಾಳಿದ ಮೂರಾರು ವರುಷಕ್ಕೆ
ಸನ್ನಿಧಿಯಾಗೆ ಲಿಖಿತವೂ ||೧೧೦||

ರಾಮನು ಇಂತಪ್ಪ ಭೋಗದಿ ಆಳುವನು
ಕೇಳುವನು ಡಿಳ್ಳಿಯ ಪಟ್ಟ|
ಗೋಳೆನುತ ಮೊರೆಯಿಡಲು ರಾಯ ಸುರಿತಾಳಗೆ
ಸೀಮೆ ರಾಜ್ಯದ ಪ್ರಭೆ ಬಂತು ||೧೧೧||

ರಾಮ ಸತ್ತನು ಎಂದು ನೇಮಿ ಕಳುಹಲು ನೀನು
ಕೇಡು ಬಂದುದು ನಿನ್ನ ಬುಡಕೆ|
ಹಾಳು ಮಾಡಿದ ರಾಜ್ಯ ಮೂಳು ಕಲ್ಲನೆ ಬಿಟ್ಟು
ಯಾವ ಕಾಲಕೆ ಏಳದಂತೆ ||೧೧೨||

ಹೆದರಬೇಡಿರೆ ಹೋಗಿ ಬುಡವ ಕೀಳುವೆನವನ
ಪ್ರಜೆಗೆಲ್ಲ ನಂಬಿಗೆ ಇತ್ತು|
ಕೇಳುತ್ತ ಮಾತಂಗಿ ಕರೆದು ಎನ್ನಯ ಮಗಳು
ಮುರಿಯ ಬೇಕಮ್ಮ ರಾಮುಗನ ||೧೧೩||

ಬಾಲೆ ಮಾತಂಗಿಯ ಕರವಿಡಿದು ಸುರಿತಾಳ
ಏನಮ್ಮ ಆಡಿದ ಮಾತು|
ಸೀಮೆಯೆಲ್ಲವ ಸುಟ್ಟು ಮೂಳ ರಾಮನು ಬಂದು
ಮರಳಿ ಬಂದರೆ ಡಿಳ್ಳಿ ಬಿಡನು ||೧೧೪||

ಕೊಡು ಭೂಪ ವೀಳ್ಯವನು ಹೊರಡಿಸಿ ದಂಡನು
ತರುವೆನು ರಾಮನ ತಲೆಯ|
ಹರುಷವಾಗಲು ಪಾಶ್ಚ ಕರೆಸಲು ನೇಮಿಯ
ಒದಗೀತೆ ಯಮನೂರ ಬಿಟ್ಟಿ ||೧೧೫||

ವಾಲೆ ಬಂದಿದೆ ಬನ್ನಿ ನೇಮಿಖಾನರೆ ನಿಮಗೆ
ಕಾಲನ ಬಳಿಯಿಂದ ಸಿಡಿದು|
ಬೋರಿ ಮುಂಡೆಯು ಒಬ್ಬ ಮಾತಂಗಿ ಎಂಬವಳು ಬಂದು
ರಾಮನ ತರುವೆನೆಂಬುವಳು ||೧೧೬||

ಅರ್ಜುನಗಿಂತ ಮಿಗಿಲಾದ ಖಾನರು ಎಲ್ಲ
ಹಾರಿಹೋದರು ಗುಂಗ್ರದಂತೆ।
ಮಾದಿಗಿತ್ತಿಯು ಬಂದು ವಿಧಿಯಾಗಿ ಉಳಿದರಿಗೆಲ್ಲ
ಮಾಡುವದೇನೆಂದು ಬರಲು ॥೧೧೭॥

ಬಂದನು ಕಿರಿಮುಖದಿ ಹೆಂಡಿರು ಮೃತರಾದ
ಅಂದದಿ ಪಾಶ್ಚಾಯಗೆರಗೆ।
ಭಂಡ ನೇಮಿಯೆ ಹೇಗೊ ಬಾಲೆ ತರುವಳು ನಿಮ್ಮ
ಗಂಡನಾದವನ ತರುವಳು ॥೧೧೮॥

ಖಾನಖಾನರಿಗೆಲ್ಲ ವಾಲೆಯ ಕಳುಹಲು
ನಾಳೆ ಕುಮ್ಮಟವ ಕಡಿಯಲ್ಕೆ।
ಮೋರೆ ಮೇಗಳ ಗಾಯ ಮಾಜಿಲ್ಲ ಮತ್ಹೋಗಿ
ಸೇರುವೆ ಯಮನ ಸಂಬಳವ ॥೧೧೯॥

ಬರುವುದು ಸಾಕಿವನ ಬಳಿಯ ಚಾಕರಿದ್ದು ಮನೆ
ಕಳಕೋಬೇಕೆಂದು ಡಿಳ್ಳಿಯನು।
ಮಡದಿ ಮಕ್ಕಳ ಆಸೆ ತೊರೆಕೊಂಡು ಬಂದರು
ದಾಡಿಯ ಖಾನರು ಒಂದು ಲಕ್ಷ ॥೧೨೦॥

ಖಾನರ ಕೈವಿಡಿದು ಸುರಿತಾಳ ಎಲ್ಲಕು ಪೇ[ಳೆ]
ರಾಣಿ ಹೊಡೆವಳು ಭಯಬೇಡಿ।
ಆರು ಲಕ್ಷದ ಪೌಜು ಮರಗಯ ಮಾಡಿದ ರಾಮ
ಮೂಗು ಮುಂದಲೆ ಕೊಯ್ವನಿವಳ ॥೧೨೧॥

ಬಹಳ ಸಾಹಸಗಳ ಹೇಳಿಕೊಂಬಳು ತಂಗಿ
ನೋಡಿರಿ ಇವಳ ಶಕ್ತಿಯನು।
ನಾವಂತು ಬರುವುದಿಲ್ಲ ಮಾಯಿಯಲ್ಲವೆ ಇವಳು
ಯಾವ ತೆರದೊಳು ಉಳಿವಳು ॥೧೨೨॥

ಸಾಗಿಸಿ ಸವಲಕ್ಷ ದಂಡ ಪಾಶ್ಚಯನು
ಹೋಗಮ್ಮ ಮಾತಂಗಿ ಮಗಳೆ।

ಯಾವ ತೆರದೊಳು ಎನ್ನ ಮೀಸೆಯ ಬರಮಾಡು
ನಾನಾಳೊ ರಾಜ್ಯವು ನಿನ್ನದಮ್ಮ ॥೧೨೩॥

ಎದ್ದಳು ಮಾತಂಗಿ ಎದೆಯ ತಟ್ಟುತ ಆಗ
ಬಿದ್ದಳು ಸುರಿತಾಳನಡಿಗೆ।
ಇದ್ದಂತೆ ಮನದೊಳು ಮಾಡದಿರಲು ನಿಮ್ಮ
ಪೈಚಾರ ಹಿಡಿವವಗೆ ಕೊಡಿಸುವೆನು ॥೧೨೪॥

ಕ[ರ್ಕ]ಸ ಸಿಂಗಾಡಿ ಹೊಂಗಲಸರ ಮೈಜೋಡು
ತುರಗ ಏರಿದಳು ಜೀನವನು।
ಅಂಗಿ ಇಜಾರವ ಮುಂಡಾಸು ನೋಡಲ್ಕೆ
ಗಂಡೆಂದು ನಡೆಯೆ ಮಾತಂಗಿ ॥೧೨೫॥

ಬರುವಳು ಮಾತಂಗಿ ಎರಡು ಲಕ್ಷದ ದಂಡ
ನಡೆದು ತಾ ನಿಂದಲ್ಲಿ ನಿಲದೆ।
ವೈರ್ಯಾದ ರಾಮನ ಶಿರನರಿಯದೆ ನಾ ಮತ್ತೆ
ಬಾರೆನೆಂದು ನಿರ್ಧರ ಮಾಡುತಲಿ ॥೧೨೬॥

ದಿನದಿನಕೆ ಬಂದಾಗ ಹಿರಿಯ ಹೊಳೆಯನು ದಾಂಟಿ
ಕರಿಯ ನದಿಗೆ ಬಂದು ಇಳಿಯೆ।
ದೊರೆ ನೇಮಿ ಬಳಿಯೊಂದು ಜೋಡಿನವರು ಹೋಗಿ
ಕರೆಯಲು ಪಾಳ್ಯಗಾರರನು ॥೧೨೭॥

ಸಾಕೆಮಗೆ ಸುರಿತಾಳ ನಿಮ್ಮ ಘನಕಾರ್ಯ ಮಾಡಲಿನ್ನು
ಕಿತ್ತಿಕು ಬೇರುಗಳ ರಾಮ।
ನಾಚಿಕೆ ಬರುವುದು ನೆನೆಸಿಕೊಂಡರೆ ಬಂದು
ಪಾಪಾಸ ಎಲ್ಲ ತುಂಬುವರು ॥೧೨೮॥

ವೀರ ಕುಮ್ಮಟದೊಳಗೆ ರಾಯ ಸುರಿತಾಳನ
ಜಾಂಡ್ಯಾಯೆಂದರೆ ಬರುವೆವು ।
ಆಗ ಬಂದುದು ತಮಗೆ ಬೋಳಿಸಿದ ತಲೆ ಬುರುಡೆ
ಹೋಗೆಂದು ಜಾಡೇರ ಕಳುಹೆ ॥೧೨೯॥

ಬಡವರ ಕೆಡಿಸುವುದು ತಮಗೆ ವಿರಹಿತವಲ್ಲ
ಉಳಿಗಾಲ ಮೊದಲೆ ನಮಗಿಲ್ಲ।
ಕಡೆಗೆ ನೋಡುವ ನಮ್ಮ ಬುರುಡೆ ಡಿಳ್ಳಿಗೆ ಹೋಗಲಿ
ನಡೆಸೆಂದ ನೇಮಿಯ ದಂಡ ||೧೩೦||

ಆರು ತಿಂಗಳ ದಾರಿ ಮೂರು ತಿಂಗಳಿಗವನು
ಸೇರಲು ಕೊನೆ ಗಡಿಯ ಸೀಮೆ।
ಯಾವಾಗ ಕಾಣುವ ರಾಮನ ಕುಮ್ಮಟವ
ಮಾರಿಯಂದದಿ ಬರುತಿಹಳು ||೧೩೧||

ರಾಯ ರಾಮನ ಬಳಿಗೆ ವಾಲೆ ಕಾಗದ ಬರೆದು
ಮಾದಿಗ ರಂಡೆ ಬರುತಿಹಳು ।
ಸಾಗಿಸಿ ಗಡಿಗಡಿಗೆ ಮದ್ದು ಬಾಣಗಳನು
ಹೊಡೆದಾಡಿ ಎನುತ ಬರುತಿಹಳು ||೧೩೨||

ರಾಯ ರಾಮನ ಸೀಮೆ ಗೂಳ್ಯೆವು ಪಡೆಯಲು
ಗ್ರಾಮ ಗಡಿ ಮನೆಯನು ತುಂಬಿ।
ನೇಮಿ ಮಾತಂಗಿಯ ಒಡಗೊಂಡು ರಾಮನ ರಾಜ್ಯ
ಕೋಳು ಹಡೆಯಲು ದನ ಕುರಿಯು ||೧೩೩||

ಮರಳಿ ಬಂದಿರೆ ಮತ್ತೆ ಮರೆದು ಹಿಂದಿನ ಪೆಟ್ಟು
ಹೊರಟು ಗಡಿ ಮನೆಯ ಮಂದಿಗಳು।
ಬಿಡದೆ ಗಂಡಿಯ ಘಟ್ಟು ಹೊಡೆವ ಕೋಳನು ತಿರುಹಿ
ಹಿಡಿದರು ತುರಗ ನೂರಾರು ||೧೩೪||

ಬಂದಿರೆ [ಉ]ಳಿದವರ ಹಿಂಡಿ ಕೂಳನು ಹಾಕಿ
ಹೆಂಡಿರ ಬಳೆಯ ಕುಕ್ಕುವರು।
ಮುಂದಕ್ಕೆ ಇಡು ಹೆಜ್ಜೆ ಮಂಡೆ ಲಿಪಿಯನು ತೊಡೆದು
ಮುಂಡೇರ ಮಾಡ್ಯೆ ಒಬ್ಬೊಬ್ಬರನು ||೧೩೫||

ಮುಂಗಡೆಯ ಪೌಜನು ಹೊಡೆದು ಭಂಗಿತ ಮಾಡೆ
ಹಿಂದೆ ನೂಕಲು ರಾಯ ಪವುಜ।

ಚಂವರ್ಗೆ ಏನುತಲಿ ಇಮ್ಮರಳಿ ಬೇಡರು ತಮ್ಮ
ಹೊಂದಿ ಗಡಿ ಮಾನೆಯ ಕಾದಿರಲು ||೧೩೬||

ಗಡಿದುರ್ಗವೆಂಬೋದು ಗೊಡವೆ ಹೋಗದೆ ನೇಮಿ
ನಡೆಯಲು ಕುಮ್ಮಟಕೆ ಪೌಜು।
ನಿಡಿಗಟ್ಟಿ ಕೆರಳುತ ಸಿಡಿಲ ಮರುಡೆಯ ಕಟ್ಟಿ
ಉಳಿಯಲು ಮಾತಂಗಿ ದಂಡು ||೧೩೭||

ಕಳೆದೈದು ರಾತ್ರಿಯ ಬೆಳಗಾಗಿ ದಂಡೆದ್ದು
ಹೊಡೆವ ಭೇರಿಗಳು ಆರ್ಭಟಿಸಿ।
ಅಡರುವ ಮೇಘವು ಧರಣಿಗೆ ಕವಿದಂತೆ
ಅಡರಲು ನಾಲ್ಕು ಮುಖದೊಳಗೆ ||೧೩೮||

ಬಂದಿರೆ ತುರುಕರು ಚಂದವೆ ತುರುಕರ
ಗಂಡ ರಾಮನ ವಾಲೆ ಬಂತು।
ಕಂಡ್ಯಾಕೆ ಬಲವಿಲದೆ ಉಸುರೆಂಬುವದೆನುತಲಿ
ತಂದಿರೆ ತಲೆಯ ಕಾಣಿಕೆಯ ||೧೩೯||

ಕೆಡಬೇಡ ಎಲೆ ಲೌಡಿ ಮುರಿದೆವು ಎದೆಗರ್ವ
ನುಡಿ ಬಾಯಿ ಒಳ್ಳೆ ಮಾತುಗಳ।
ಹೊಡೆವಳು ಮಾತಂಗಿ ನಿಮ್ಮೊಡೆಯ ರಾಮನ ತಲೆಯ
ಇನ್ನು ನುಡಿಯಲು ಹಲ್ಲ ಮುರಿವೆ ||೧೪೦||

ಬ್ರಹ್ಮಲಿಖಿ[ವ ತೊ]ಡೆವೆ ಹೆಣ್ಣ ಮೂಳಿಯ ನಂಬಿ
ಬಂದ ತುರುಕರು ಹೋಗಿ ಎನಲು।
ಹಾಗೆ ಮರಳಿದು ಆರ್ಭಟಿಸುತ್ತ ತುರುಕರು
ರೋಷ ಮಚ್ಚ[ರ]ವು ತಲೆಗಡರೆ ||೧೪೧||

ಸಾಸಿರದ ಲಕ್ಷ ಬಾಣಂಗಳನು ಎಳೆದು
ಮೇಘನೊ[ಡೆದು] ನುಗ್ಗಿ ಬರುತಿರಲು।
ಮಾರುಮಾರೆನುತಲಿ ಜೇರಿಸಿ ಬರುತಿಹರು
ಗಾರೆ ಬೇಲಿಗಳನು ಹಿಡಿದು ||೧೪೨||

ಏರಲು ಹೊಸತಾಗಿ ಬಂದ ಖಾನರು ನುಗ್ಗಿ
ಮೇಘನೊ[ಡೆದು] ಬರುತಿಹರು।
ಚತುರಂಗನಾಡುತ್ತ [ರಾಮ] ಕುಂತಿರಲು
[ಹ]ರಿದು ಬಂದನು ಒಬ್ಬ ಚರನು ||೧೪೩||

ಕರ ಮುಗಿದು ಎನ್ನಯ ಬಡ ಬಿನ್ನ[ಹ] ಲಾಲಿಸು
ಭರಭಾರ ದಂಡು ಬಂದಿದೆಕೊ।
ದಂಡಿಗೆ ಧಣಿಗಾತಿ ಮಾತಂಗಿ ಎಂಬವಳಂತೆ
[ಹಾ]ಕ್ಯಾರೆ ಒಳ ಮುತ್ತಿಗೆಯ ||೧೪೪||

ನೂಕಿರುವರು ಭೂಪ ಬಳಿಗೋಡೆಯ ಪುರಕೆ
ಹಾಕಿದರು ಬೆಂಕಿ ಹೊರ[ಬೇ]ಲಿ।
ಹೆಣ್ಣು ಬಾಲೆಯ ಮೇಲೆ ಹೆಸರೊಡೆದ [ಮೊನೆ]ಗಾರ
ಧರ್ಮವೆ [ಕೈಯ] ಮಾಡುವದು ||೧೪೫||

ಅಣ್ಣಾಜಿ ಕಾಟಯ್ಯ ಮಾನ್ಯರನೊಡಗೂಡಿ
ಹೆಣ್ಣರಂಡೆಯನು ಬೆದರಿಸು।
ಹೊಡೆಯಲು ರಣಭೇರಿ ಹಿಡಿಯೆ ಬಿರುದಿನ ಕಹಳೆ
ನಡೆಯೆ ಕಾಟಣ್ಣ ಮಾನ್ಯಯರು ||೧೪೬||

ನಗರದ ಬಾಗಿಲ ತೆಗೆಯಲು ರಣಭೂತ
ಬರುವದೆಂದು ಬೆದರಿದರು।
ಮೊದಲ ಕಾಳಗದೊಳಗೆ ತಿಳಿದವರು ಹಿಂದಕ್ಕೆ
ಜುಣಗುತ ಫಣಿಗಳ ಸೆವದಿ ||೧೪೭||

ತುದಿ ತೋರ[ಲು] ಕಾಣದೆ ತುರುಕರು ಅಗಳಿನ
ಬುಡವ ಹಿಡಿದು ಹೆಣಗಿದರು।
ಕಡಿಕಡಿ ಎನುತ ಕಾಕೊಡ್ಡೆದು ಕಾಟಣ್ಣನು
ಸಿಡಿಲಿನಂತಾಗೆ ಸವರುವನು ||೧೪೮||

ಒಡನೆ ಬಾದುರಖಾನ ಒಂಟಿ ಕತ್ತಿಯ ಹಂಪ
ತಿರಿತಿರಿಗಾಡಿ ಒಗೆವರು।

ಮೂಡಲ ಬಾಗಿಲ ಹಾರ್‍ದೊಡೆದು ಅರಿದರಿವನು
ಮಾರಿಯಂದದ ಬಾಣೆ ಮುದ್ದ ॥೧೪೯॥

ತೀರುಗಾಲವು ತುಂಬಿ ಬಂದೀರೆ ಮರಮರಳಿ
ಹೋರುವನು ದೊಣ್ಣೆಯ ಮುದ್ದ।
ಕತ್ತಿಗುರಾಣಿಗಳ ಕಟ್ಟಿದರೆ ನುಗ್ಗಾಗಿ
ನೇತ್ರದಿ ತಲೆ ಮೂರು ಹೋಳು ॥೧೫೦॥

[ಹತೇ]ರೆ ಲೌಡಿಯ ದೈತ್ಯ ಬರುವನು ಎಂದು
ಬಿಟ್ಟು ಓಡುವರು ಆಯುಧವ।
ಬಾಗಿ ಬಾಗಿಲ ತೆಗಿಸಿ ಹಮ್ಮೀರರೆಲ್ಲರು ಹೊರಟು
ತಾರಗಡಿಯಲು ಕಣ್ಣಬಿಟ್ಟು ॥೧೫೧॥

ಊರ ಮುತ್ತಿಗೆ ಬಿಟ್ಟು ಹೋಗಿ ತಿಟ್ಟಿಗೆ ನಿಂದು
ಜಾ ಭಾಯಿ ಕುಮ್ಮಟ ಸುಡಲಿ।
ಮಾತಂಗಿ ದಂಡೆಲ್ಲ ಮುರಿದು ಹಿಂದಕೆ ಇಳಿಯೆ
ಹಾಕಲು ಜಾಂಡ್ಯ ಪೂರ್ವದಲಿ ॥೧೫೨॥

ರಾತ್ರಿಗೆ ರಣವನು ನೋಡಬಾರದು ಎಂದು
ಮಾತೆ ಗರ್ಭಕೆ ಸೂರ್ಯ ನಡೆಯೆ।
ಮುತ್ತಿಗೆ ಎಂಬವನೆ ನೆಪ್ಪ ಕಾಣದೆ ಇರುವ
ಪುತ್ರನ ಬಲುಮೆಯಲಿ ಪಿತ ನನ್ನ ॥೧೫೩॥

ಇತ್ತಲ ಗಲಗೆಂದು ಹತ್ತಿ ನೋಡಲು ದಂಡು
ನೇತ್ರ ಕಾಬ [ಳತೆ] ಇಳಿದಿಹುದು ।
ಯಾವಲ್ಲಿ ಇರುವದೊ ಹಳದ ಡಿಳ್ಳಿಯೆನುತಲಿ
ಆಡಿಗೆ ಕಡೆಯೆನುತ ತುರಗಗಳು ॥೧೫೪॥

ಹೋದದ್ದು ಕಡೆಯಿಲ್ಲ ಬರುವುದು ಕಡೆಯಿಲ್ಲ
ಊರೆಲ್ಲ ಮೆರೆವನ ದಂಡು।
ಕರೆಸಿದ ಕಂಪಿಲ ಬಿರಿದಿನೆಕ್ಕಟಿಗರ
ಇರುಳೊಳಗೆ ದಂಡ ಲಯ ಮಾಡಿ ॥೧೫೫॥

ದೊರೆ ಭೂಪ ರಾಮೇಂದ್ರಗರುಹಿ ಕಾರ್ಯವ ಮಾಡಿ
ಅರುಹಿದ ರಾಯನು ಎಂದು।
ಬಿರಿದಿನೆಕ್ಕಟಿಗರು ಕರ ಮುಗಿದು ರಾಮಯಗೆ
ಅರಸೆಂದು ವಾಕ್ಯವನುಸುರೆ ||೧೫೬||

ಹಿರಿಯರ್ಹೇಳಿದ ಮಾತು ತೆಗೆದು ಹಾಕುವರಲ್ಲ
ಇರುಳಿನ ಕಾರ್ಯ ತನಗಿಲ್ಲ।
[ಮೊ]ನೆಯ ರಾಯರ ಗಂಡ ಮುರಿದುವೋದರ ಮಿಂಡ
ಹಾಕಿದ ಬಿರುದೀಗ ಹೋತೇ ||೧೫೭||

ಈಶ್ವರನು ಮರೆದನೆ ಪರಮೇಶ್ವರನು ಹೋದನೆ
ಪರಮಾತ್ಮ ಹೋದರೆ ಬಿಡೆನು।
ಈ ಮಾತು ಎನ್ನೊಳು ಹೇಳಬೇಡ
ಧರ್ಮದೇವತೆಯು ತೊಲಗುವಳು ||೧೫೮||

ನಿಮ್ಮ ರಾಯನು ಹೇಳ್ದ ಕಟ್ಟಳೆಯಿಂದಲಿ ಪೋಗಿ
ಎನ್ನ ಕಾರ್ಯ ನಾಳೆ ಉದಯ।
ಹತ್ತು ಸಾವಿರ ದಂಡ ಜಾಣದಿಪ್ಪಯ ತೆಗೆದು
ಹೊಕ್ಕನು ಸಮರಾತ್ರಿಯೊಳಗೆ ||೧೫೯||

ದಿಕ್ಕುದಿಕ್ಕಿಗೆ ಬಿಟ್ಟಿರುವ ಪವುಜಿಗೆ ಹೊಕ್ಕು
ಕುಟ್ಟಿ ಕೋಳಾಹಳ ಮಾಡಿದರೊ।
ಕಾಣರು ಹಗಲೆಲ್ಲ ಹೊಡೆದಾಡಿ ಮುತ್ತಿಗೆಯ
ಏರಿಸಿ ಎದ್ದ ಭಂಗಿಯನು ||೧೬೦||

ತೂಗುತ್ತ ಮದನಿದ್ರೆ ಇರುವ ಸಮಯದಿ ಹೊಕ್ಕು
ಏಳಗೊಡದೆ ಕಡಿವುತ್ತಿರಲು।
ಜಾ ಅರೆ ಆ ಆರೆ ಯಾವಲ್ಲಿ ಓಡ್ಯಾರೆ
ತಾವೆಲ್ಲ ಕುಮ್ಮಟದುರ್ಗ ||೧೬೧||

ಗೌಡಾಯಿ ಸುಡುಮೊರೆ ಜೀನಲ್ಲ ಹಾಗಿಲ್ಲ
ಓಡಲು ದಿಕ್ಕುದಿಕ್ಕಾಗಿ।

ಚೋರ ರಾಮನು ಆಯೆ ಬೀಗಿರೆ ಊಟ ಸಾಬು
ರಾಣಿ ಮಾತಂಗೆಲ್ಲಿ ಕಡಿವ ||೧೬೨||

ಖಾನರು ಹೀಗೆನುತ ಕಾಡುತ್ತ ಮರೆಯ ಬಿದ್ದು
ಡೇರ್ಯ ಗೂಡಾರಗಳ ಬಿಟ್ಟು।
ತಾವರೆ ಸಖ ಬಂದು ಏರಲು ರಥವನು
ಪಾರ ಎಕ್ಕಟಿಗರು ನಡೆಯೆ ||೧೬೩||

ನೋವಿಗೆ ಕಡೆಯಾಗಿ ತುರಗವ ಹೊಡಕೊಂಡು
ಊರ ಹೊಕ್ಕರು ಕುಮ್ಮಟವ।
ತಂದಂಥ ತುರಗವ ರಾಜೇಂದ್ರಗೆ ಒಪ್ಪಿಸಲು
ಒಂದಾರು ಭುಜವಾದ ರಾಯ ||೧೬೪||

ಮಂದಿಗೆ ಅಭಯವ ಬಿರುದು ಬಾವಲಿ ಕೊಟ್ಟು
ಮುಂದೆ ನೋಡುವದೆಂದು ಕಾರ್ಯ।
ದಿನಕರನು ಪ್ರಭೆ ಸೂಸೆ ತುರುಕರು ಭಯಗೊಂಡು
ಹುಡುಕುತ್ತಿಹರು ತಾಯ ಗೂಡ ||೧೬೫||

ದಿಂಡುರುಳಿ ಹೆಣಮಯ ಒಂದರೆ ಕೊರೆದವರ
ಕಂಡು ನೀರೆರೆದು ಬಾಯಿಗೆ।
ಇರುಳು ನೋಡಿದ ಬಾವಿ ಹಗಲೆ ಬಿದ್ದುದು ನ[ಮ್ಮ]
ಒಡೆಯ ಸುರಿತಾಳನ ಬುದ್ಧಿ ||೧೬೬||

ನಗೆಗೀಡಾಗಲು ತನಗೆ ಪಡೆಯು ತಾರಿತು ನಮಗೆ
ಹಿಡಿತನ್ನಿ ಮಾತಂಗಿ ರಂಡಿ।
ಖಾನಖಾನರು ಎಲ್ಲ ಏಳಲು ಉರಿದೆದ್ದು
ಸೂಳೆಯ ಕೊಡ ನಮಗೆ ನೇಮಿ ||೧೬೭||

ರಾಮಗೆ ಹಿಡಿಕೊಟ್ಟು ಮಾಡಿದಳು ಹೊಲತೆಂದು
ಹೋಗುವದು ಸಾವದು ಯಾಕೆ।
ನಿಲ್ಲಿ ಸೈರಿಸಿ ತಾವು ನಿಮಿಷಮಾತ್ರದಿ ನಡೆದು
ಮತ್ತಲ್ಲಿ ಮಾತಂಗಿಯ ಕರೆದು ||೧೬೮||

ಅಲ್ಲಿ ಹಿಡಿದ ಪಂಥ ಎಲ್ಲಿ ಹೋಯಿತು ರಂಡೆ
ಕಳ್ಳ ಹೊಲತಿ ಕತ್ತೆ ಸೂಳೆ।
ಗಾಲಿಖಾನನು ಇವಳ ಮೂಗು ಮೊಲೆಯನು ಕೊಯ್ದ
ಚಾರಿದೀವೆನುತ ಉರಿದೇಳೆ ॥೧೯೯॥

ಹೇಡಿ ಎಮ್ಮನು ಮಾಡಿ ಕಾಣದರಸಿನ ಮುಂದೆ
ರಣಮಯವ ಮಾಡಿದ ಮಿಂಡ ಬಂದು।
ರಾಮನು ಬಂದಿರಲು ತಾರಿ ಹೋಗದ ಕಥೆಯ
ಆಳಿಗೆ ಈ ಬಗೆಯ ಕೇಡು ॥೧೭೦॥

ರಾಯನಾರ್ಯಾಕಿಲ್ಲದೆ ಸೀಳಿಸುವೆ ಕೈಕಾಲು
ಕಾದೆನು ನೋಡೆಂದ ತಪ್ಪು।
ನೋಡಿ ಕಾರ್ಯವ ಮಾಡು ಮೂಗು ಮೊಲೆಗಳನರಿದು
ಹೀನಾಯ ಹೊರಬೇಡ ತಂಗಿ ॥೧೭೧॥

ಈಗಲಾದುದು ಏನು ರಣಭೀಮ ಬಂದನೆ ನೋಡು
ಯೋಧನಂದದಲಿ ಕೊಂದಿಡುವೆ।
ಖಾನರ ಗರ್ಜನೆಯ ಕೇಳಿ ಮಾತಂಗಿಯು
ಭೂಮಿ ಪಾತಾಳಕೆ ಇಳಿದು ॥೧೭೨॥

ಆಡಿದೆ ಪಂಥವ ಸುರಿತಾಳನೆಡೆಯೊಳು
ಹೀಗೆ ಬರುವುದೊ ನಾ ಕಾಣೆ।
ಕೀಳಾಗಿ ಖಾನರು ನುಡಿಯೆ ಮಾತಂಗಿಯು
ಓಡುವ ತೆರ ಗ್ರಹಿಸಿ ಮನದಿ ॥೧೭೩॥

ತೋರುತಿರಲು ಜಲವು ಕಣ್ಣೊಳು ಸಮಯಕ್ಕೆ
ಕೂಡಿ ಬಂದಿತು ಒಳವಿನೋಲೆ।
ಕುಮ್ಮಟದೊಳಗಿರುವ ಕುಲಗೇಡಿ ತೆಲುಗರು ಎಲ್ಲ
ವಾಲೆ ಕಾಗದವನು ಬರೆದು ॥೧೭೪॥

ನಿಲ್ಲು ಹೋಗಲು ಬೇಡ ಇಂದಿನೊಳಗೆ ಊರ
ನಿಮ್ಮ ವಶವನು ಮಾಡುವೆವು।

ಎದೆಗೆಡದೆ ಇಂದೊಮ್ಮೆ ಹಗಲು ಲೆಗ್ಗೆಯ ಬನ್ನಿ
ತೆಗೆದುಕೊಡುವೆವು ಬಾಗಿಲನು ||೧೭೫||

ಉಣಲಿ ಬಂದನೆ ಅವನು ನೋಡ ಬಂದೆವೆ ನಾವು
ಜಿನಿಸಲಿಲ್ಲವೆ ಕಂಪಿಲಗೆ।
ತೆಲುಗರಸಿಯ ಮಗನು ಯಲ್ಲರಸನು
ಹಗೆಯ ರಾಮನ ಕೊಲುವೆನೆನುತ ||೧೭೬||

ಕಡಿಕರ್ತ ಕುಮ್ಮಟಕೆ ತಾನೆ ಒಡೆಯನು ಎಮ್ಮ
ಹೊಲೆಯರ ಕಡೆಯಾಗಿ ಕಾಣ್ಬ।
ನಡೆಯೆ ಕಾಡಿಗೆ ನಾವು ಕಾಡಗೊಲ್ಲನ ಸಾಕಿ
ನಡೆಸನೆ ಸಕಲ ಬೇಹದಲೆ ||೧೭೭||

ಕಡಿಸಿದೆ ರತ್ನಾಜಿ ಹಡೆದವನ ಕೈಯೊಳಗೆ
ಮನವಿಂತು ಮಂತ್ರಿ ಕಡಿಸಿದನು।
ಬಾರಿ ಬಾರಿಗೆ ಬಂದು ಹೋಗಬೇಡವೊ ನೇಮಿ
ಊರ ಕೊಡುವುದು [ಎಮ್ಮ] ಭಾವ ||೧೭೮||

ಮೂಳ ರಾಮನ ಕಡಿದು ಮುಂದೆನಗೆ ಪಟ್ಟವ
ಮಾಡುವ ನಂಬಿಗೆ ಕಳುಹೋ।
[ಓಡುವ] ಮಾತಂಗಿ ಕ್ಷೀರಾಬ್ಧಿ ಉಕ್ಕುವ
ತೆರದಿ ಮನದೊಳು ಹರುಷ ||೧೭೯||

ನೇಮಿಖಾನರಿಗೆಲ್ಲ ವಾಲೆ ತೋರಲು ನೋಡಿ
ಮೂಗಿನೊಳು ಕರವಿಡಲು ಎಲ್ಲ।
ನಂಬಿಗೆ ಬರೆಸಿದ ಸುರಿತಾಳನ ಬಿರಿದಿಟ್ಟು
ಈ ತಂದು ರಾಯನ ಕೊಟ್ಟವಗೆ ||೧೮೦||

ಬಂದು ಪಟ್ಟವ ಮಾಡಿ ದಂಡ ಡಿಳ್ಳಿಗೆ ತೆಗೆವೆ
ರಾಜೇಂದ್ರ ಅಭಯೆಂದು ಬರೆಯೊ।
ನೇಮಿ ಕೇಳಿದನಾಗ ಮಾತಂಗಿ ನಾ ಬಂದ
ವ್ಯಾಳ್ಯವು ಒಳ್ಳೆಯದೆನುತ ||೧೮೧||

ಯಾರಮ್ಮ ಯಲ್ಲರಸನೆಂಬ ಸುದ್ದಿಯು ಬಂದು
[ಓ]ದೆ ಕೇಳಿದೆ ಕರ್ಣದೊಳಗೆ।
ಲಾಲಿಸಿ ಕೇಳಿನ್ನು ನೇಮಿಖಾನನು ಮತ್ತೆ
ಐದು ಮಂದಿಯು ಕಂಪಿಲಗೆ ||೧೮೨||

ಯಾರ್‍ಯಾರು ಎನುತಲಿ ರಾಣಿ[ಯ] ಕೇಳಲು
ಹೇಳುವಳು ಕುಲಸಾರಿಗವಾಗಿ।
ಕಮಲಾಜಿ ಹರಿಯಮ್ಮ ಮೊದಲಾದ ಸತಿಯರು
ಎಡ ಮಧ್ಯ ಬಂದಿಹರೆರಡು ||೧೮೩||

ಅದರಿಂದ ಆಚಿಕೆ ಮತ್ತೆ ಓರ್ವಳು ಕೇಳಿ
ನಗೆಗೆಡದಿರು ನೇಮಿ ಎನಲು।
ನಾಲ್ವರನಾಳುತ ರಾಯ ಕಂಪಿಲ ಮುದಿಯ
ಕಾದ ಕಾಲಕೆ ಒಬ್ಬ[ಳುಂ]ಟು ||೧೮೪||

ಸೂಳೆಯೆಂಬರು ಲೋಕ ಭೇದಗಾಣದೆ ಹಿಂದೆ
ಆದಿ ಅವಳು ರತ್ನಾಜಿ ಬನ್ನಿ।
ಅವಳ ಮಗನು ಯಲ್ಲರಸನೆಂಬುವನೆಂದು
ಕಂಡೆಯ ನೇಮಿ [ಬರೆದುದನು] ||೧೮೫||

ಎಂದಿಗೆ ಸಲ್ಲದು ಪಟ್ಟ ಅವನಿಗೆ ಎಂದು
ಛೀ ಎಂದು ನಕ್ಕರು ಎಲ್ಲ।
ಆಗಲಿ ಅದಕೇನು ನೋಡುವ ಅವನ ಮಾತ
ಮಾಡುವ ಊರ ಮುತ್ತಿಗೆಯ ||೧೮೬||

ಭೇರಿ ನಾದವ ಮಾಡಿ ಊರ ಹ[ಲ್ಲೆ]ಗಳೆಂದು
ಏರಲು ಚತುರ್ಭಾಗದೊಳಗೆ।
ಕಡಿಕಡಿ ಎನುತಲಿ ಕತ್ತಿ ಭಲ್ಲೆವ ಕಿತ್ತು
ಹೊಕ್ಕರು ಬಿದ್ದೆಣನ ತುಳಿದು ||೧೮೭||

ಮುತ್ತಿ ಜೇನೊಣದಂತೆ ಹ[ಚ್ಚಿ]ಕೋಟೆಯ ಬುಡಕೆ
ಹೊಕ್ಕರು ಪಿಳ್ಳಿ ಕೋಟೆಯನು।
ದೊರೆ ಚೆನ್ನರಾಮಗೆ ಗಣನೆಯಿಲ್ಲದೆ ಸುದ್ದಿ
ಚದುರಂಗನಾಡುತಲಿದ್ದ ||೧೮೮||

ಹಾರಿ ನಿಲ್ಲುತ ಬಂದ ತರಳ ಮಂತ್ರಿಯ ಮಗನು
ಕರಮುಗಿದು ಹೊರಕೋಟೆ ಲೆಗ್ಗೆ।
ಎಂ[ದ]ನು ಏಕಾಂಗಿ ರುದ್ರನವತಾರದಿ
ಜಗ್ಗನೆ ಪಲ್ಲಕ್ಕಿ ಏರಿ ॥೧೮೯॥

ಶೀಘ್ರದೊಳಗೆ ಬರುವೆ ಶಿವನ ಆಲಯ ಹೊಕ್ಕು
ನುಗ್ಗುಮಾಡುವೆ ತುರಕರನು।
ರಾಯ ರಾಮನು ಎದ್ದು ನಡೆದ ಜಟ್ಟಂಗಿಯ
ದೇವರ ಆಲಯಕಾಗಿ ॥೧೯೦॥

ಭೂಮಿಗೆ ಮೈಯಿಕ್ಕಿ ದೀರ್ಘದಂಡ ನಮಸ್ಕರಿಸಿ
ಸ್ವಾಮಿಯ ಸ್ತುತಿ ಮಾಡಿದನು ॥೧೯೧॥

ಹರಹರ ಗುರು ಶಂಭು ಪರಮ ಪಾವನಮೂರ್ತಿ
ಉರಗಭೂಷಣನೆ ಕೊಡು ಮತಿಯ।
ನಡೆಸುವೆ ಮಾತಂಗಿಯೊಡನೆ ಕಾರ್ಯಕೆ ಅಭಯ
ಕೊಡುಯೆಂದು ರಾಮನು ಎರಗಿ ॥೧೯೨॥

ಮೂರು ರಾಯರ ಗಂಡ ಜಟ್ಟಂಗಿಯ ವರಪಿಂಡ
ತೀರಿತು ಆಳಿಕೆ ನಿಮಗೆ।
ಸೇರುವೆ ಕೈವಲ್ಯ ಶಿವನ ಪಾದವ ನೆನೆದು
ವಾಮ ಭಾಗದ ಹೂವ ತೆಗೆದಿಡಲು ॥೧೯೩॥

ಬದುಕಿದೆ ನಿಮ್ಮಯ ಕೃಪೆಯು ಆದುದು ಎಂದು
ಕಿರಣದ ಕಳೆ ಕಾಂತಿ ಸೂಸೆ।
ಅಂದಣದೊಳು ಕುಳಿತು ತಾಯಿ ಮನೆಗೆ ಬಂದು
ಪಾದಂಗಳಿಗೆ ಸಾಷ್ಟಾಂಗವೆರಗಿ ॥೧೯೪॥

ಎರಗಿದ ಪುತ್ರನ ಪಿಡಿದೆತ್ತಿ ಹರಿಯಮ್ಮ
ಸ್ಥಿರಪಟ್ಟವಾಳೊ ರಾಜೇಂದ್ರ।
ಬರವೇನು [ಹೇ]ಳಪ್ಪ ಕಳೆಕಾಂತಿ ತೋರುವುದು
ಬಿಗಿಯುಪ್ಪಿ ಮುಂಡಾಡಿ ಕೇಳೆ ॥೧೯೫॥

ಕಡೆಯ ಕಾಳಗದೊಳು ಕಾಣಗೊಡದು ಕಾರ್ಯ
ಮದದಿ ಮಾತಂಗಿ ಹೆಣ್ಣೊಳಗೆ।
ನಡೆಯದು ಕತ್ತಿ ಕಡೆಗೆ ರಾಮನು ಸ್ತ್ರೀಯ
ಕಡಿಯನು ಹೀನಾಯ ಬಿಡದು ||೧೯೬||

ನವಕ್ಷೋಣಿ ಬಲ ಬರಲು ಸಂಹರಿಸುವ ತ್ರಾಣ
ದಯಮಾಡಿ ಇರುವುದು ಎನಗೆ।
ಧರೆಯೊಳು ಸ್ತ್ರೀಹತ್ಯೆ ಬಹು ನರಕ ಎಂಬುದು
ಹೊಡೆವೆನೆಂದರೆ ಎತ್ತಿ ಬಿಡುವೆ ||೧೯೭||

ನಡೆವ ಸೂಚನೆ ಪೇಳ್ವೆ ಭಯ ಬೇಡಿ ಮನದೊಳಗೆ
ಲಯ ಶುಭವ ಕಾಣಲು ಅರಿದು।
ಬಂದ ನೇಮಿಯ ದಂಡ ಕೊಂದು ಗೋರಿಯ ನಿಡುಪಿ
ರಂಡೆ ಕೊಲ್ಲಲು ಬಿರಿದೆನಗೆ ||೧೯೮||

ಕರೆಸಿದಾಗಲೆ ರಾಮ ಪಡೆದ ರಾಜೇಂದ್ರನ
ಕರೆಸಿದ ಮಂತ್ರಿ ಮನ್ನೆಯರ।
ತರಳ ತನ್ನಯ ಪುತ್ರ ಜಟಂಗಿರಾಮಗೆ ಪಟ್ಟ
ಧರಿಸಲು ಸರ್ವ ಸಂಭ್ರಮವು ||೧೯೯||

ರಾಯ ಮಂತ್ರಿಯು ತಿಳಿದ ಸಾವಿನ ಬಗೆಯನು
ಆಗ ಕರೆಸುತ ಮನದೊಳಗೆ।
ಮೂರೆರಡು ವರುಷದ ಬಾಲಗೆ ಸದರಿಟ್ಟು
ತಾನಿಳಿದು ಕರಮುಗಿದು ನಿಲ್ಲೆ ||೨೦೦||

ರಾಹುತ [ರಾ]ಣುವೆ ಪ್ರಧಾನಿ ಪ್ರಜೆಗಳು ಸಹ
ಮಾಡಲು ದೀರ್ಘದಂಡವನು।
ಏನೆಮಗೆ ಗತಿ ಮುಂದೆ ಆಗ ಮಂತ್ರಿಯು ಕೇಳೆ
ಬೋರಿಡಲು ಪಾದಗಳ ಪಿಡಿದ ||೨೦೧||

ಹೆದರಬೇಡವೊ ಮಂತ್ರಿ ತರಿಗಡಿವೆ ದಂಡನು
ಬುಡಕೆ ನಿಲ್ಲಿಸಿದಾವೆ ಅವರ।

ತಡೆಯರು ಕಾರ್ಯಕ್ಕೆ ಇಡದೆ ಪಟ್ಟಕೆ ಧಣಿಯ
ಪಡೆದಿಹೆನೆ ವಜ್ರಕಾಯವನು ||೨೦೨||

ಪುತ್ರನ ನುಡಿಯ ದೃಷ್ಟಾಂತ ವಚನವ ಕಂಡು
ಹತ್ತಲು ರಾಯಗೆ ದುಃಖ।
ಕಿತ್ತು ಸೂರ್ಯಾಡುತ್ತ ಗಲ್ಲಗಳ ಪಿಡಿದೆತ್ತಿ ಬಿಗಿಯಪ್ಪಿ
ಮತ್ತೆನಗೆ ಗತಿಯೇನು ಎನಲು ||೨೦೩||

ರಾಜೇಂದ್ರ ರಣಭೂಪ ಏನೀಗ ಬಂದಿಹುದು
ಹಾಳು ಮಾಡುವೆ ಬಂದ ದಂಡ।
ಬಾಲನ ಮುಂದಿಟ್ಟು ಸುಖದಿ ರಾಜ್ಯವನಾಳು
ಕಾಯ ನಿಶ್ಚಿತವೆ ಧರೆಯೊಳಗೆ ||೨೦೪||

ಅಕ್ಕ ತಂಗೆರ ಕರೆದು ಬಿಗಿಯಪ್ಪಿ ಗಲ್ಲವ ಪಿಡಿದು
[ಕೊ]ಟ್ಟ ದಣಿವಂತೆ ಬಂಗಾರ।
ದುಃಖ ಮಾಡಲಿ ಬೇಡಿ ಮಿಕ್ಕು ಮೀರಲು ಕಾರ್ಯ
ಸತ್ತರೆ ಸ್ವರ್ಗ ಸಲಿದಂತೆ ||೨೦೫||

ಮುತ್ತೈದೆತನಗಳು ಹೆಚ್ಚಾಗಿ ಬಾಳಿನ್ನು
ಇಟ್ಟೋಲೆ ಸ್ಥಿರವಾಗಿ ಬಾಳಿ।
ಸತ್ತನೆಂಬುವ ಚಿಂತೆ ಇಟ್ಟುಕೊಳ್ಳಲಿ ಬೇಡ
ಲೋಕದ ವಾರ್ತೆ ಪೇಳುವೆನು ||೨೦೬||

ರಾಯ ರಾಮನು ಕರೆಸಿ ರಾಣಿಯರೈವರ
ಬಾರೆನ್ನ ರಂಭೆ ಊರ್ವಸಿಯೆ।
ಬಾರೆನ್ನ ರತಿ ಭಾಗ್ಯದ ಸ್ತ್ರೀ ಲಕ್ಷ್ಮಿ[ಯೆ]
ಬಾರೆನ್ನ ಚಂದ್ರನ ಕಳೆಯೇ ||೨೦೭||

ಮಡದಿಯರೈವರ ತೋಳೆಡೆಯೊಳು ಕುಳ್ಳಿರಿಸಿ
ಪರಿವಾರ ಸಮೇತ ಮಧ್ಯದಲಿ।
ಪಿಡಿದು ಗಲ್ಲಗಳನು ಲಯಗಾಲ ಕೇಳಲು ನೀವು
ಬರಬೇಕು ಎನ್ನೊಡನೆ ಎನಲು ||೨೦೮||

ಮಲೆವ ರಾಯರ ಗಂಡ ರಣವಿಜಯ ಕಲಿಪಾರ್ಥ
ಹಿಡಿ [ನ]ಮ್ಮ ಅಭಯ ಹಸ್ತವನು।
ಎದೆಗೆಡದೆ ವೈರಿಯ ಕಡಿ ನಾವು ಬರುವುದಕೆ
ಎರಡೆಂಟು ಬೇಡ ಬೆನ್ನೊಡನೆ ॥೨೦೯॥

ಹರಸಿ ಸೇಸೆಯನಿಟ್ಟು ಲಯಮಾಡು ನೇಮಿಯ
ಅನಿತದಿ ಹರಸು ಸರಿಮಾಡೆ।
ಸೆರೆಯ ಕೊಟ್ಟುರೆ ನಿಮ್ಮ ಪರಸ್ತ್ರೀಯ ಭೋಗಕ್ಕೆ
ಅರುಹಲು ನಿಮ್ಮೆಡೆಯ ಮುಂದೆ ॥೨೧೦॥

ಸತಿಯರ ವ್ರತನಿಷ್ಠೆ ಪತಿಗೆ ಇಮ್ಮಡಿಯೆಂದು
ನಗುತ ನಾರಿಯರ ಕಳುಹಿ।
ಮತಿವಂತ ಮಂತ್ರಿಯ ಒಡನೆ ಹೇಳಿದ ರಾಮ
ಇಡು ಒಯ್ದು ಅರಸ ದುರ್ಗದಲಿ ॥೨೧೧॥

ಹರಿಯಮ್ಮ ಕಮಲಾಜಿ ತರಳ ಮೊಮ್ಮಗನೊಯ್ದು
ಇ[ಡು] ನಿಮ್ಮ ಕುಟುಂಬ ಸಹಿತ।
ಇದಕೆ ದುಃಖವ ಮಾಡೆ ಕಡಿ ಮಗನೆ ದಂಡೆಂದು
ಹರಿಯಲೆ ಮಗನ ಬಿಗಿಯಪ್ಪಿ ॥೨೧೨॥

ಪುತ್ರ ನೀನಳಿಯಲು ಧಾತ್ರಿಯು ಉಳ್ಳನಕ
ಕೀರ್ತಿ ಮೆರೆಯದೆ ಕಾವ್ಯದಲಿ।
ಬೆಚ್ಚದೆ ರಣದೊಳು ಸತ್ತರೆ ಕೈವಲ್ಯ
ವಪ್ಪುವುದು [ಈ]ವ ಗಣಪದವ ॥೨೧೩॥

ತಾಯೆ ಲಾಲಿಸಬಹುದು ಆನು ಕೊಂಬೆನು ದಂಡ
ಬೀಜಕ್ಕೆ ಬಿಡುಗೆ ಏಳ್ನೂರಾ।
ನಾಗಮ್ಮ ದುರ್ಗದ ಮೇಲೆ ಮೂರ್ತವ ಮಾಡಿ
ಕುಮಾರನ ಬಗೆಯ ನೋಡಮ್ಮ ॥೨೧೪॥

ಇದ್ದ ತಾವಕೆ ಬಾಲೆಯರ ನಡೆಸಿ ದುರ್ಗಕೆ
ರಾಮ ಅರುಹಿದ ಮಂತ್ರಿಯೊಡನೆ।

ಕೊಡಬೇಡಿ ಬಾದುರಖಾನ ಕೈಸೆರೆ ಎನ್ನ
ಶರೀರ ನೀಗುವೆನು ಎಲೆ ಮಂತ್ರಿ ||೨೧೫||

ವೀರ ಕಾಸೆಯ ಹಾಕಿ ಗೀರು ಗಂಧವ ತೊಡೆದು
ಆಭರಣ ಬಿರಿದನು ಧರಿಸಿ।
ಕ್ಷೀರಾನ್ನ ಸವಿದಿನ್ನು ಏಳುವ ಸಮಯದಿ ಕಾಟ
ಓಡಿ ಬಂದನು ಎಡವಿ ಮುಗ್ಗಿ ||೨೧೬||

ಏನಯ್ಯ ಅಣ್ಣಾಜಿ ಬಹಳ ಭರದೊಳು ಬಂದೆ ನೀ
ನೀನಿರಲು ನಾನು ತಡೆದಿರ್ದೆ।
ಏನ ಹೇಳಲಿ ಕಾರ್ಯ ಒಳಗಾಗಿ ತೆಲುಗರ ಯಲ್ಲ
ಬಾಗಿಲ ತೆಗೆ[ದೆ]ಡೆಗೊಟ್ಟ ||೨೧೭||

ಇದಕೆ ಬರುವರೆ ಅಣ್ಣಾ ಸುಡು ನಿನ್ನ ದಾರಿದ್ರ್ಯ
ಹೊಡೆಸದೆ ತೆಲುಗರ ತಲೆಯ।
ಸಿಡಿಲಿನಾರ್ಭಟದೊಳು ಏರಿ ತೇಜಿಯ ರಾಮ
ನಿಜವೇನೊ ಅಣ್ಣಾ ಈ ಮಾತು ||೨೧೮||

ಬಿದ್ದವು ರಣಭೂಪ ಗಿಡ್ಡ ಯಲ್ಲರಸಗೆ
ದುರ್ಗವನು ಪಟ್ಟವ ಮಾಡಿ।
ಎದ್ದು ಓಡುವ ಭರಕೆ ವಾಲೆ ಕಳುಹಲು ಬಂದು
ನುಗ್ಗುವರು ಒಳಸಂಚಿನಿಂದ ||೨೧೯||

ವಾಯು ಗಮನದಿ ಬಂದು ಏರಲು ಹುಲಿಮುಖವ
ಬಾಗಿಲ ಹಾರ್‍ಹೊಡೆದು ಇರಲು।
ರೋಮ ರೋಮಗಳೆಲ್ಲ ಏದಿನ ಮುಳ್ಳಾಗಿ
ಭೇರಿ ಕಹಳೆಯನು ಹೊಡೆ ಎನಲು ||೨೨೦||

ತರಿಸಿದ ತೆಲುಗರ ಜವಮಾತ್ರ ಉಳಿಯದೆ
ಕಡಿಸಿದ ರಣದುರ್ಗಿ ಮುಂದೆ।
ಹಿಡಿಸಿ ಯಲ್ಲರಸನ ಹೊಡೆದು ಕೇಳಲು ಬಿದ್ದ
ಎನುತ ನುಡಿಯಲು ತಲೆವಾಗಿ ||೨೨೧||

ಹೊಡೆದು ಯಲ್ಲರಸ[ನ] ತಲೆಯ ನೇಮಿಗೆ ಕಳುಹಿ
ಬಿಡಬೇಡ ಹಿಡಿದವನ ಕೈಯ।
ಒಡವನ ಭಾಷೆಗೆಡಿಸಿ ಹೋಗಲು ಪುಣ್ಯ
ಸುಡುಗಾಡಿಗೆ ಪಟ್ಟವ ಮಾಡಿ ॥೨೨೨॥

ಕಂಡೇನೇ ಮಾತಂಗಿ [ಚಂ]ಡನು ಯಲ್ಲರಸ
ಗಂಡೀದ ಕರ ನೆಚ್ಚಿದೆಮ್ಮ।
ಮುಂದೇನು ಗತಿ ನಮಗೆ ಮಾಡಿದ ಬದುಕ ಹೀಗಾಗೆ
ಬಂದೆಲ್ಲೆ ವಿಧಿಯಾಗಿ ನಮಗೆ ॥೨೨೩॥

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ತರಳ ರಾಮನ ಮುಂದೆ ಮರಣವಾಗುವ ಬಗೆಗೆ
ಒದಗಿತು ಹದಿನೆಂಟು [>ಹತ್ತೊಂಬ] ಸಂಧಿ ॥೨೨೪॥*

❖❖

---

* + ಅಂತು ಸಂಧಿ ೧೮ಕ್ಕೆ [೧೯ಕ್ಕೆ] ಪದನು ೩೯೯೮ ಮಂಗಳ ಮಹಾಶ್ರೀ(ಮೂ).

ಸಂಧಿ : ಇಪ್ಪತ್ತು

❖

ಬಾಲರಾಮನ ವೀರಮರಣ

ಶ್ರೀ ಗುರುವೆ ವರಶಂಭು ಭಾಗೀರಥೀಶನೆ
ಭೋಗಿಭೂಷಣ ಭಾಳನೇತ್ರ।
ಆಗಮದೊಡೆಯನೆ ಮೂಜಗವ ರಕ್ಷಿಪನೆ
ನಾಗಭೂಷಣ ನಂದಿಕೇಶ ॥೧॥

ನಂದಿವಾಹನ ಜಯ ಭೃಂಗಿನಾಥನೆ ಜಯತು
ಕಂದರ್ಪಮರ್ದನ ಜಯತು।
ಚಂದ್ರಶೇಖರ ಜಯತು ಮುಕುಂದಪ್ರಿಯನೆ ಜಯತು ವಾರ
ಣೇಂದ್ರನ ಪಿತನೆ ಜಯ ಜಯತು ॥೨॥

ಕಾಯವೆ ಮೂರು ಕಾಲಾರು ಮಸ್ತಕ ನವ
ಬಾಯಿ ಒಂಬತ್ತು ಬಾಲವೆರಡು।
ಕರಗಳು ನಾಲ್ಕು ಕಂಗಳು ರವೆ ಹದಿನೆಂಟಕ್ಕೆ
ಮೈಯಿಕ್ಕಿ ಮುನ್ನ ಎರಗುವೆನು ॥೩॥

ರಾಮನ ಆಳಿಕೆ ತಾರಿಕೆ ಫಲಸಾರ
ಲಾಲಿಸಿ ಲಲಿತ ಯೋಗಿಗಳು।
ಶ್ರೀ ಗುರುವಿನ ಕಲ್ಪನೆ ತೀರಬರ ಗಳಿಗೆ
ನೀರ ಕುಡಿಯಲು ಅವಕಾಶ ॥೪॥

ಭೇದಗಾಣದೆ ಜನರು ಆಡುವರು ಲೋಕದಿ
ಹೋದನು ಹೆಣ್ಣಿಂದ ಅಳಿದು।

ಆದಿಯಲಿ ಅವಳ [ಇ]ವನು ಹೊಡೆದಿರಲು ಮಾತಂಗಿ
ರಾಮನ ತಲೆಯ [ಕೊ]ಯಿಸುವಳು ||೫||

ಕೊಂದಲ್ಲದೆ ಕೊಲೆಗಳು ಎಂದಿಗೆ ತಪ್ಪದು
ಬಂದರೇಳೇಳು ಜನ್ಮದಲಿ|
ಅಂದಿಗೆ ರೇಣುಕಿಯ ಪರಶುರಾಮನು ಕೊಂದ
ಇಂದಿಗೆ ರಾಮನ ಕೊಲಿಸುವಳು ||೬||

ಖಾನರ ಕೋಳಾಹಳ ನೋಡುವರಳವಲ್ಲ
ಭೂಮಿ ಆರ್ಭಟಿಸುತ್ತಲಿಹರು|
ನೋಡಿದ ರಣರಾಮ ಹೊರಕೋಟೆ [ಒ]ಳಹೊಕ್ಕು
ಜೇನಿನಂದದಲಿ ಕವಿದಿರಲು ||೭||

ನಡೆಯಲು ಸಿಡಿಲಂತೆ ನುಡಿಯಲು ಪಲ್ಲಿಯು
ಬಲಕೆ ಹಾರಲು ಕ್ಷೇಮಕಾರಿ|
ಒಡನೆ ಕಾಣುತ ರಾಮ ಹೊಡೆದು ನಗುತಲಿರೆ
ತಿಳಿದು ಹೋಗುವೆ ಮರಣ ಸ್ಥಿತಿಯ ||೮||

ತೆಗೆಯೆನಲು ಬಾಗಿಲ ಹಿಡಿಯೆ ಬಿರಿದ ಕಹಳೆಯ
ರಣವಿಜಯ ಬರುವನೆಂದೊದರೆ|
ಕಡಿಕಡಿ ತುರಕರ ಪಡೆಯೆಂದು ಹೊರಡಲು
ಕುರಿಹಿಂಡು ಬೆದರಿದಂತಾಗೆ ||೯||

ಯಾತಕೆ ಹೋ[ಗುವಿರಿ] ರಣಭೂತ ಬರುವುದೆಂದು
ಕೈಬೀಸಿ ಖಾನರು ಕರೆವುತಲಿ|
ಭೀತಿಗೊಳ್ಳುತ ಅವರು ಬಿಟ್ಟು ಮುತ್ತಿಗೆಯನು
ಏಕ ಬಯಲಾಗಿ ಓಡುವರು ||೧೦||

ಬರುವನು ಬಾಯಾರಿ ಹಿಡಿಂಬ ರಾಕ್ಷಸನಂತೆ
ಬಿಡು ನಿಮ್ಮ ಕೋಟೆಯನು ಸುಡಲು|
ಕಡಿವನು ಕದಳಿಯ ಕುರಿಗೆ ತೋಳು ಬಂದಂತೆ
ಇದಿರಿಗೆ ನಿಲಬೇಡ ಖಲಭಾಯಿ ||೧೧||

ಊರಿನ ಎಡ ಬ[ಲಗ]ಳಿಗೆ ನಿಲ್ಲದೆ ಪೌಜು
ಕೂಡಿತು ಮುಂದೆ ಜಮೆಯಾಗಿ।
ಬಾರಮ್ಮ ಮಾತಂಗಿ ಬಂದ ನಿನ್ನಯ ವೈರಿ
ತೋರಳೆ ರಂಡೆ ಭಲಪದವ ॥೧೨॥

ವೀರ ಕಂಕಣ ಕಟ್ಟಿ ಹಮ್ಮೀರ ಮಾನ್ಯರು ಹೊರದೆ
ಸಾವಿರ ತಲೆ ನಿನಗೊ ನನಗೊ।
ಹಾರಿ ಪವುಜುಗಳು ಹಗಲ ಪಂಜಿನ ಮಂದಿ
ಮೂರೈದು ಸಾವಿರ ಕೂಡಿ ॥೧೩॥

ನಾಳೆ ಸಾವರ ಮಿಂಡ ಉಳಿದೆನೆಂಬರ ಮಿಂಡ
ಸಾರಿ ಹೊಗಳುತ ಭಟರು ಅಲ್ಲಿ।
ಮಾರಿಕೋಣಗಳಂತೆ ಮುದ್ದ ಹಂಪನು ಹೊಕ್ಕ
ರಾಯ ರಾಮನ ಅಡಿಗೆರಗಿ ॥೧೪॥

ಹಾಕಿದ ಮುತ್ತಿಗೆಯ ತೆಗೆದು ಓಡ್ವನ ಮಿಂಡ
ಹೊಡೆಯವಳ ಮೇಲೊಂದು ಕಾಕ।
ಬಡವ ರಂಗನು ಲಿಂಗ ಬಸವ ಜಂಗಮ ಹೊರಟು
ಒಡೆಯ ರಾಮಯಗೆ ಕೈಮುಗಿದು ॥೧೫॥

ಮುಂಡೆ ಮಾತಂಗಿಯ ಮರೆಮಾಡಿ ಜಗಳಕೆ ಬಂದ
ಹೆಂಬೇಡಿ ಖಾನರ ಗಂಡ।
ಗಂಡಿನೊಳಭಯ ಎಮಗೆ ಪಾಲಿಸು ಭೂಪ
ಸಂಗಯ್ಯ ಬಾದುರ ಎರಗೆ ॥೧೬॥

ಜೀವ್ಗಳ್ಳರಂತೆ ಬಾಳ್ವೆನೆಂಬರ ಮಿಂಡ
ವೀರ ರಾಮಯ್ಯ ಉಪ್ಪುಂಡ।
ಆರು ಸಾವಿರ ತುರಗ ಇನ್ನೊಬ್ಬಗೆ ಬಿಡುಯೆಂದು
ವೀರ ಬಂದನು ಲೆಂಕ ಹನುಮ ॥೧೭॥

ಮನೆಯ ಹಂಬಲ ಮಾಡಿ ಮಡದೇರ ನೆನೆಕೊಂಡು
ಹಿಂದಿರುಗಿ ನೋಡುವರ ಮಿಂಡ।

ಕೊಡಲಿ ಭರ್ಚಿಯ ಕಡಿಯೆ ಹನುಮ ನಾಯ್ಕರು ಬಂದು
ದೊರೆ ರಾಮನಡಿಗೆರಗಿದರು ॥೧೮॥

ಕರೆಯದೆ ಬರಲಾಗ ಕಾಯ್ಕದ ಚೆನ್ನಮಲ್ಲ
ಸುರಿತಾಳನ ತಲೆ ಮೇಲೆ ಕತ್ತಿ।
ಬಿಡು ಮೂಳ ಖಾನರನು ಮಾತಂಗಿಯೆಂಬಳ ತೋರಿ
ಹೊಡೆವೆನು ಕೊಚ್ಚಿ ತಲೆಬುಡಕೆ ॥೧೯॥

ಬಡಬದ ಹಣ್ಣಿಗೆ ಕಡೆಯೆ ಬಾಳೆಯಹಣ್ಣಿನ ಸಿಪ್ಪೆ
ಕಡಿಯದಿರಲು ತಂತ್ರದೊಳಗೆ।
ಸುಡುವೆನು ದಂಡನು ಶಕ್ತಿಯುಕ್ತಿಯ ಮಾಡಿ
ನಡೆಯಲು ಪಂಚಾನ ಗಂಗ ॥೨೦॥

ಕತ್ತಿ ಖಂಡ್ಯಕೆ ಮುನ್ನ ಸೃಷ್ಟಿಕರ್ತನು ನಾನು
ಕತ್ತಿ ಹಿಡಿವವನು ಕುಮಾರ।
ಬಕ್ಷಗೋಲಲಿ ಹೊಡವ ಲಕ್ಷ ದಂಡನು ಎಂದು
ಮತ್ತೆ ಚಿಕ್ಕಣ್ಣನು ಬರಲು ॥೨೧॥

ಪೂರಾ ಎಲ್ಲರ ಒಗೆವೆ ಖಾನರಿಗೆ ಬೆದರುವೆನೆ
ಮಾಣಿಕ ಜಟ್ಟಿ ಬಡಿದಂತೆ।
ಗ್ಯಾರೆ ಹಿಡಿದು ಒಗೆವೆ ಮುನ್ನೂರು ಖಾನರನೆಂದ
ಮೀರಿದ ಮಡಿವಾಳ ಮಾಚ ॥೨೨॥

ಮಂದರಗಿರಿಯಂತೆ ಮೋಸ ಕೂರ್ಮನ ತೆಗೆವೆ
ಬಂಧಿಸಿ ಬಲೆಗಳ ಬಿಡಿಸಿ।
ಹೆಂಬೇಡಿ ಖಾನರಿಗೆ ಹೆದರಬಲ್ಲೆನೆ ಎಂದು
ಗಂಗೆಯ ಮಗ ನಾಗ ಬರಲು ॥೨೩॥

ಅಂಬು ಸಿಂಗಾಡಿಯ ಹೆಂಬೇಡಿ ಪಡಿಯಲು ಬೇಕು
ಕೈ ಅಂಬಲಿ ಅರಿವೆ ನೂರೆಂಟು।
ಮುಂಗಾರ ಸಿಡಿಲಂತೆ ಮರಚೆಟ್ಟಿ ಬಂದಾಗ
ರಾಮೇಂದ್ರಗೆ ಕರಗಳ ಮುಗಿಯೆ ॥೨೪॥

ಕಂಡೇನೆ ಮಾತಂಗಿ ಕಲಿಪಾರ್ಥ ಭೀಮನ ತೆರದಿ
ಬಂದು ನಿಂದರು ಕುಮಾರಕರು।
ಹೊಂದಿ ಎಡಬಲದೊಳು ಏಳ್ನೂರ ಇಪ್ಪತ್ತು
ನಿಂದ ಮಾನ್ಯರ ನೋಡು ಬಿಡುವೆ ॥೨೫॥

ಹಳದಿ ಹಸಿರು ಪಟ್ಟೆ ಬಿಳಿದು ಕೆಂಪಿನ ಮೇಲೆ
ಎಳೆಗಾವಿ ಚಂದ್ರ ಸೂರ್ಯ ಪಟವ ।
ಹಿಂದೆ ಸತ್ತಿಗೆ ನೋಡೆ ಹಿರಿದು ದೇವೇಂದ್ರನ
ಸಭೆಯೊಳಗುಂಟೆ ಈ ದಸ್ತು ॥೨೬॥

ರಾಯ ರಾಮನ ಪವುಜು ಮಹರ್ನವಮಿ ಬಯಲೊಳು ನಿಲ್ಲೆ
ಖಾನಖಾನರು ಶಿರದೂಗೆ।
ಏನಂತೆ ಶಿವಬಲ್ಲ ತ್ರಾಣವಾಡಿದೆ ರಂಡೆ
ರಾಮನಲ್ಲವನು ಘಟಪುತ್ರ ॥೨೭॥

ಆನೆ ಮಸಗಲು ಅಶ್ವ ನಿಲುವ ಸ[ಲ್ಲ]ದೆ ಇರಿತ
ಜಾಳು ಮತ್ಯಾಕೆಂದು ಕನಲಿ।
ಗಾಲಿಖಾನರು ಘಟೆಯು ಇಬ್ರಸಾಬರು ಮಿಕ್ಕು
ವಿಲಾಲಮೀಯಗೆ ಕೋಪ ಅಡರಿ ॥೨೮॥

ಮರಗಯಾ ತಾಡಕ್ಕು ಜಾ ಅರೆ ತುಮೆ ಜಾವು
ಮುರಿದೋಡೆ ಪಾಶ್ಚಯಗೆ ಹಿಂದೂ।
ತುಳಿಸುತ ಬರಲಾಗ ಎಂಬತ್ತು ಸಾವಿರ ಕುದುರೆ
ಸುರಿವುತ್ತ ಸೋನೆ ಮಳೆ ಅಂಬ ॥೨೯॥

ಮುಂಗಾರು ಮಳೆ ಮೇಘ ಕಾರ್ಗುಡಿಸಿ ಬರುವಂಥ
ಲಂಭೋಜಿಖಾನರು ಮುತ್ತಿ।
ಮುಂಗೈಯ ಕಡಿಯುತ್ತ ಮೀಸೆಗಳ ಮುರಿಯುತ್ತ
ತುಂಬುರನ ಕೊಂದನು ಅಲ್ಲಿ ॥೩೦॥

ಕೊಂದವನು ನಾನೀಗ ಮಿಂಡ ಗಾಲಿಯಖಾನ
ತುಂಡು ದೊಣ್ಣೆಯ ಮುದ್ದನರಿಯಾ।

ಚೆಂಡಿಗೆ ತೊಲಗಿಸುವೆ ಮುಂದಕ್ಕೆ ಇಡು ಹೆಜ್ಜೆ
ಹೊಂದಿಸುವೆ ತುಂಬುರನ ಬಳಿಗೆ ||೩೧||

ಮರೆಮಾತ ಕುಣುಬಯ ಇಬ್ರಖಾನನು ಕಳಿಸೆ
ಏರಲು ಹಂಪ ಬಾದುರನ।
ಮಾರ್‍ಯಾರು ಮರೆಯಾಗೆ ಕೊಡೆ ಬಿಬ್ಬಿಯನೆಂದು
ಗೋರಿಲ್ಲಿ ಆಗುವುದು ನಾಳೆ ||೩೨||

ಕಡಿಯೆನುತ ಚೆಂಡಾತಿ ತುಡುಕಿ ಲಾಲನಯೆಂದು
ಕುಡಿಸುವೆ ನೀರ ಕಾಲ್ಗೆಡಗಿ।
ಮುಳುಗಿದರೆನುತಾಗ ಮಲ್ಲಾರಂದದ ಲಿಂಗ
ಕಡಿದುಕೊಂಡ್ಹೋಗಲು ಸಾವಿರವ ||೩೩||

ಮುತ್ತರು ಆರ್ಭಟಿಸಿ ಎಂಬತ್ತು ಸಾವಿರವ ತುರಗ
ಕತ್ತಿಯ ಬೆಳಕ ಮಿಂಚೆಂದು।
ಸಿಕ್ಕಿ ಹೋದರು ಸ್ವಾಮಿ ಮೊನೆಗಾರ ಬಂಟರುಯೆಂದು
ಮತ್ತೆ ಕಾಟಯ್ಯ ಕರ ಮುಗಿಯೆ ||೩೪||

ಎದ್ದನು ವ್ಯಾಘ್ರನಂತೆಲ್ಲೆಂದು ರಣರಾಮ
ರುದ್ರನವತಾರದಲಿ ಎದ್ದು।
ಇಬ್ಬರು ಸವರುತ ಎಡಕೊಬ್ಬ ಬಲಕೊಬ್ಬ
ಕಬ್ಬ ಮುರಿದಂತೆ ಹೊಕ್ಕರು ||೩೫||

ಕಡಿಕಡಿಯೆನುತಲಿ ಕಾಕ್ಹೊಡೆದು ಸಿಡಿಲಿನ ಭರದಿ
ಸವರುತ ಸಪ್ಪೆನರಿದಂತೆ।
ಕದಳಿಯ ಉರುಳಿಸಿದಂತೆ ಹದಿನಾರು ಸಾವಿರ ಕಡಿಯೆ
ಬೆದರಿದರು ಮುತ್ತಿದ ಪೌಜು ||೩೬||

ಹೊಕ್ಕರು ಆಮೇಲೆ ದಿಟ ಸಾಹಸವುಳ್ಳ
ಕೊಚ್ಚಿ ಕೊರೆಯುತಲಿ ಮನ್ನೆಯರು।
ಕಿಚ್ಚಿಡಿಯ ಒಂದಾಡಿ ಇಕ್ಕಿದರು ಬೆರಸಿ
ಕುಟ್ಟಿ ಎಳೆಯುತಲಿ ಖಾನರನು ||೩೭||

ಸಿಕ್ಕಿದ ಬಾದುರ ಸಂದು ಬೀಳಲು ನೋಡಿ
ಕೊಚ್ಚುವ ಕಳಲೆಯಂದದಲಿ।
ಒಕ್ಕಲಿಗರ ಮುದ್ದ ಲಿಂಗ ಹಂಪನು ಹೊರಟು
ಕೆತ್ತಿ ಕಡಿದರು ಮುಖ ಮೋರೆ ॥೩೮॥

ಕುದುರೆ ಹಲ್ಲಣವನು ಹಿಡಿದು ಬೇಡರ ನಾಯ್ಕ
ನೆಗೆನೆಗೆದು ಹರಿಗಡಿವವ[ನು] ।
ಇವಳಲವೆ ಕೋಟೆಯ ಕೊಡುಯೆಂದು ಬಂದವಳು
ಒಡಲಿಗೆ ನರಕೊಂದು ಕಡಿಯೆ ॥೩೯॥

ತಿರುಹುತ್ತ ಬರಲಾಗ ತುರಗವ ರಣರಾಮ
ಇದುರಾದ ಬಾಲಿಯಖಾನ।
ಎದೆಯ ಅಂಬನು ಕಿತ್ತು ಹೊಡೆಯಲು ನೂರೆಂಟು
ಕಡುಗೋ[ಪಿ] ಚೆನ್ನಿಗರಾಮ ಅಡರಿ ॥೪೦॥

ಹಚ್ಚಿಸಿ ತೇಜಿಯ ಒತ್ತಲು ಆರ್ಭಟಿಸಿ
ಮೆಟ್ಟಲು ತಯ ಪಡೆವಂತೆ।
ಒತ್ತಿನೊಳಗೆ ಇದ್ದು ಲಾಲಮೀಯನ ಹೊಡೆಯೆ
ಬಿಚ್ಚಲು ಉರಗ ಸಹವಾಗಿ ॥೪೧॥

ಬೆದರಲು ಪೌಜೆಲ್ಲ ಮುರಿದು ಇಬ್ರಮಖಾನ
ತೆಗೆಯಲು ಉಳಿದಂಥ ತುರಗ।
ದೊರೆ ರಾಮ ಕಾಟಯ್ಯ ಮರದ ನೆರಳಿಗೆ ನಿಂದು
ಅಳಿದ ಬಂಟರನು ಕೇಳಿದನು ॥೪೨॥

ನಲ್ಲೆ ಸಂಗಯ ಬಿದ್ದ ಬಿಲ್ಲ ರಂಗನು ಬಿದ್ದ
ಬಲ್ಲನಾಯ್ಕಗೆ ಹಸಿಗಾಯ।
ಕಲ್ಲಿಕೋಟೆಯ ಚಿಕ್ಕ ಕಡಪೆ ರಂಗನು ಸತ್ತ
ಬಳ್ಳಾರಿ ಹನುಮನು ಬದುಕೆ ॥೪೩॥

ಮಾದಿಗರ ಹಂಪಗೆ ಮೂರು ಅಂಬಿನ ಗಾಯ
ವೀರ ಬಿದ್ದನು ಕಾಳೆ ಹೊಲೆಯ।

ಆದೀತು ಐನೂರು ಗಾಯ ಸಾ[ವೀ]ಕಡಿ
ರಾಮಭೂಪ ಲಾಲಿಪುದು ||೪೪||

ಗಾಯೊಡೆದ ಮಂದಿಯ ಊರಿಗೆ ಸಾಗಿಸಿ
ಕಾಲ ರೋಷವ ಮಾಡಿ।
ಕಾಳಿಯವನು ಬೀಳೆ ಲಯಗಾಲವಲ್ಲದೆ
ಮುಂದೆ ಏಳಿಗೆ ಕಾಣದು ಎನಗೆ ||೪೫||

ನೆನೆದ ಮನದೊಳು ಹರ ಶಂಭು ಜಟ್ಟಂಗಿ
ಕಿಡಿಗಣ್ಣ ಪಡೆದ ಪರಶಿವ[ನ]
ಪಡೆದ ತರಳನು ಮಾಳ್ಪ ಕಾಳಗವನಿಂದೊಮ್ಮೆ
ದಯಕರಿಸಿ ನೋಡು ಸಾಹಸವ ||೪೬||

ಭೂಮಿ ಬ್ರಹ್ಮಾಂಡದ ಆಧಾರ ಕರ್ತನೆ
ಮಾಡಿದಾತನು ನೀನು ಎನ್ನ।
ನೋಡಯ್ಯ ವಿನಯದಲಿ ಕುಮಾರ ಮಾಡುವ ಕಾರ್ಯ
ಸಾಯಲು ಮುಕ್ತಿ ಪಾಲಿಪುದು ||೪೭||

ರಾಮನ ಮೃತಿಯೋಗ ಮಹದೇವಗೆ ಅರುಹಾಗೆ
ಏರಲು ಧವಳ ನಂದಿಯ।
ವಾರಿಜೋದ್ಭವ ಹರಿಯು ನಾರದನು ಭೃಂಗಿಯು
ದೇವೇಂದ್ರ ದಿಕ್ಪಾಲರೆಲ್ಲ ||೪೮||

ರಾಮನು ಕೈವಲ್ಯ ಕೇರೋನಿಂದಿನ ದಿವಸ
ನೋಡುತ್ತ ಸೂರ್ಯ ಚರಿಸುವನು।
ಚಂದ್ರಧರನು ಬಂದು ಮಂಡೆಯ ಮಧ್ಯದಿ ನಿಲ್ಲೆ
ಅಂಬಿನ ಸರಳಾಗೆ ರೋಮ ||೪೯||

ಗಾಲಿಖಾನನು ಮರಗಯಾ ಎಂಬುದ ಕೇಳಿ
ಖಾನರೆಲ್ಲರು ಶಿರದೂಗಿ।
ಎಲ್ಲವಳ ಹಿಡಿತನ್ನಿ ಕಳ್ಳ ಕತ್ತೆಯ ಸೂಳೆ
ಹಲ್ಲು ಕಾಣಲು ಮೂಗನರಿಯಾ ||೫೦||

ಆಡಿದ ಮಾತೆಲ್ಲೆ ನಾಡ ಮಿಂಡರ ಸೂಳಿ
ಹಮ್ಮೀರನಳಿದನು ಗಾಲಿಖಾನ।
ಲಾಲಮೀಯನು ಹೋದ ನಲವತ್ತು ಸಾವಿರ ದಂಡ
ಕೂಡಿದೆವು ಯಮನ ಪಟ್ಟಣವ ||೫೧||

ಸಪ್ಪೆ ಮೋರೆಯ ನೇಮಿ ಹುಟ್ಟಬಹುದೆ ನೀನು
ಕತ್ತೆ ಸೂಳೆಯೆ ನೋಡು ನಮಗೆ।
ಕುಟ್ಟೇವು ತಲೆಯನು ಕೊಟ್ಟು ರಾಮಗೆ ಹೋಗಿ
ಇವರಪ್ಪನೊಡನೆ ಹೇಳಿಕೊಂಬ ||೫೨||

ನೋಡುವ ಸೈರಿಸಿ ಮಾಡುವದೆಷ್ಟೊತ್ತು
ಬಾಳ ಹಗೆಯುಂಟು ಅವ ತನಗೆ।
ಮಾಡಿಸುವ ಕಾರ್ಯವ ಇವಳ ಮುಂದಕೆ ಬಿಟ್ಟೆ
ತೀರಿಸಿ ನಮಗಿಂದಲವನೆ ||೫೩||

ಯುಕ್ತಿಯಲಿ ಕೊಂದ್ಹೋಗೆ ಪಾಶ್ಚಯಗೆ ಸಿಟ್ಟಿಲ್ಲ
ಸತ್ಯವೆ ನಾವು ಮಾಡುವುದು।
ತೋಟಿಗಾತಿಯು ಅಹುದು ಓಡಿ ಬಂದೆವು ಎಂಬ
ಅರ್ಥ ತೀರುವುದು ಕುಶದೊಳಗೆ ||೫೪||

ಮರೆದೇಳ್ವ ಖಾನರಿಗೆ ಸೆರಗ ಉದ್ದಕೆ ಹಾಸಿ
ಕೆಡೆದಳು ಸಾಷ್ಟಾಂಗ ಅಡಿಗೆ।
ಗೆಲಿಸುವೆ ಛಲಪದವ ಹೊಗಲೇರಿ ಇನ್ನೊಮ್ಮೆ
ಅರೆ ಶಕ್ತಿಗವನ ನಿಲ್ಲಿಸುವೆ ||೫೫||

ಖಾನರ ಕಲಿಮಾಡಿ ಮಾದಿಗಿತ್ತಿ ಇನ್ನಾ
ಲೀಲೆ ತೇಜಿಯನೇರಿದಳು।
ಜೋಡು ಸಿಂಗಾಡಿಯ ಸಾವಿರದ ಎದೆ ಅಂಬು
ಏರಿದೊ ರಣಕೆ ಕಲಿಯಾಗಿ ||೫೬||

ಬಡ ಮನಸ ಮಾಡದೆ ಎನ್ನೊಡನೆ ದಳವ ನೂಕಿ
ಬಿಡುವೆ ರಾಮನ ಮೇಲೆ ಪ್ರಾಣ।

ಧರಣಿಗಳು ಮುನಿದಂತೆ ಕವಿಯಲು ಲಕ್ಷವು
ತುರಗ ಆರ್ಭಟಿಸಿ ಹೊಗಲೇರಿ ||೫೭||

ಖಾನರ ಬರವಿಗೆ ಭೂಮಿಗಳು ತಲ್ಲಣಿಸಿ
ಸವೆದು ಕುಂಕುಮವಾಗೆ ಧರಣಿ।
ಅಡರಲು ಧೂಮವು ನಭದೊಳು ದಿನಕರನ
ಪ್ರಭೆ ಮುಚ್ಚಿ ತಿಮಿರವಾದಂತೆ ||೫೮||

ರಾಮನ ದಂಡಿಗೆ ಜೀವ ಉಬ್ಬಸವಾಗಿ
ಸೋರುವ ಅಂಬಿನ ಮಳೆಯ।
ಮೂರು ಕಣ್ಣಯ್ಯನ ಮಗನ ಅವತಾರ ಬಂದು
ರಾಮ ಮೀಟಿದ ತೇಜಿಯನ್ನಾ ||೫೯||

ಹೆಣ ತಿಂಬುವ ತೇಜಿ ಸಿಡಿಲಿನಾರ್ಭಟದೊಳು
ಕಡಿದ್ಹೋಗುತ ತುಳಿಕೊಂಡು ಬರಲು।
ಸೆಳೆಯುತಲಿ ರಾಮನು ಕದಳಿಯ ಕೊರೆದಂತೆ
ತರಗಡಿಯೆ ಮೂವತ್ತು ಬೀದಿ ||೬೦||

ಕಾಟಣ್ಣ ಸಂಗಯ್ಯ ಅವರೊಂದು ಮೂತಿಯ
ಹಾಕುವರು ದನವ ಬಡಿದಂತೆ।
ಭೀಕರ ಮಡದಂತೆ ಮೊನೆಗಾರ ಲಿಂಗನು ಹಂಪ
ಹಾಕುವರು ತಲೆಹೊಡೆದಕ್ಕಟ ||೬೧||

ಮಲ್ಲರಡ್ಡಿಯ ಹನುಮ ಮತ್ತಲ್ಲಿ ಬಾದುರಖಾನ
ಚೆಲ್ಲಾಡುವಂತೆ ಹಲ್ಲುಗಳು।
ಮಲ್ಲರಡ್ಡಿಯ ಹನುಮ ಮಾರಿಕೋಣನ ತೆರದಿ
ಪುಳ್ಳೆಖಾನರನು ನೂರಾರ ||೬೨||

ಲೆಂಕ ಹನುಮನು ಕಪಿಯಂತೆ ಹಾರುತ ಬಂದು
ಜುಲುಪ ನೆಗೆನೆಗೆದು ಹಿಡಕೊಂಡು।
ವಂಕಿ ಚೂರಿಗಳಿಂದ ಒಡಲನು ಸೀಳಿದರು
ಹಲಕಾಲಾದಂತೆ ಆಗುತಲಿ ||೬೩||

ರಾಮನ ಭಟರು ಈ ಬಗೆಯಲಿ ಕೊಲುತಿರೆ
ಗಾಯೊಡೆದು ಸಾಯುವರು ಸುತ್ತ।
ಸದಮದದೊಳು ಕಲಸೆ ಗುಡುಗಾಡುವಂದದಿ
ಹೊಡೆದಾಡುತಿರಲುಪಚರಿಸಿ ||೬೪||

ಅಮರಂಗಿಖಾನನ ಮಗನು ಮಲ್ಲಿಕಸಾಬು
ತಗುಲಿದ ಮಲ್ಲರಡ್ಡಿಗೆ।
ಕಡಿದಾಡಿ ಲವುಡಿಯ ಎನುತಾಗ ತುಡಕಲು
ಏಳ್ನೂರು ಇಪ್ಪತ್ತು ತುರಗ ||೬೫||

ರಾಮನ ಮನ್ನೆಯರ ಬರವಿಗೆ ನಿಲಲಾರದೆ
ಕೊಡಾಳಿ ನಾಯಕನು ಎದೆಗೆಡದೆ।
ನಿಲ್ಲೊ ನೇಮವಾದೆ ನೀಮಲ್ಲು ಗ್ರಾಮನಕ
ಚಲ್ಲ ಬಡಿವಂತ್ಹೊಡೆವೆ ಹಲ್ಲ ||೬೬||

ಖಾನರ ಕುದುರೆಯ ಬಾಲವನು ತಿರುವಿಡುತ
ಮೇಗಳ ರಾಹುತರನೆಳೆದು।
ನೂರಾರ ಸದೆಬಡೆದು ಸಾಬುಮಲ್ಲುಖಾನನು
ಭೂಮಿಗಿಳಿವಂತೆ ಗುದ್ದಿದನು ||೬೭||

ಬೆರಳು ಐದಕೆ ಸರಳ ತೆಗೆದು ಒಗೆವನು ಹತ್ತಿ
ಬಗೆಗುಂದೆ ಗಾಯದಲಿ ರಡ್ಡಿ।
ಮರಣ ತಪ್ಪದು ಎಂದು ಅರೆಗಾಯದೊಳು ಹೊಕ್ಕು
ತರಿಗಡಿದ ಮುನ್ನೂರು ತಲೆಯ ||೬೮||

ಗಾಯ ಸಂಚಲವಾಗೆ ಭೀಮ ರಾಮನ ನೆನೆದು
ಸೇರಿದ ವೈಕುಂಠ ಸರಳ।
ಎಲ್ಲನಾಯ್ಕನು ತಿಮ್ಮ ಎಂಬತ್ತು ತಲೆಗಳ ಹೊಡೆದು
ಅಲ್ಲೆ ಗಾಯೊಡೆದು ಒರಗಿದನು ||೬೯||

ರಡ್ಡಿ ಅಳಿದನು ಎಂಬ ಸುದ್ದಿ ಹಂಪನು ಕೇಳಿ
ನುಗ್ಗಲು ವ್ಯಾಘ್ರನ ತೆರದಿ।

ಮುದ್ದಣ್ಣ ಬಾದುರ ಲಿಂಗರಸ[ರು] ಹೊಕ್ಕು
ಕಬ್ಬು ಮುರಿವಂತೆ ತರಿಗಡಿಯೆ ||೭೦||

ಬು[ಲ್ಲಹ]ಸಾಬನು ಹಿಂದಡಿಸಿ ಅವರಾಗ
ಹನ್ನೆರಡು ಸಾವಿರ ಹೊಡೆದು।
ಒಳ್ಳೆ ರಡ್ಡಿಯ ಕೊಂದ [ಆ ಸಾಬ] ನಿಲ್ಲೆನುತಲಿ
ದೊಣ್ಣೆಡಲ ಕಡಿಯಲು ಹಂಪ ||೭೧||

ಯಮನ ಪಟ್ಟಣ ತುಂಬಿ ಎಂಬತ್ತು ಸಾವಿರ ಪೌಜು
ರಣರಾಮ ಮುಖವಾಗೆ ಮೂಢ।
ಇದಿರಾಗಿ ಮಾತಂಗಿ ಹದಿನಾರು ಸಾವಿರದೊಳು
ತಗಲಿದೊ ಪ್ರಾಣವ ಮೆರದೊ ||೭೨||

ಮುಂಚಿಸಿ ತುರಗವ ಹದಿನೆಂಟು ಬೀದಿಯ ಕಡಿಯೆ
ತೊತ್ತು ಬಂದಳು ಇದಿರಾಗಿ।
ಎತ್ತಿದ ಖಡ್ಗವ ಇಳುಹುವ ಸಮಯದಿ
ಇತ್ತ ಕಂಡನು ಮೂಗುತಿಯ ||೭೩||

ಕಡಿಯದೆ ಬಿಡನೆಂದು ಎದೆಯ ಸೆರಗನು ತೆಗೆದು
ಕಳಸಕುಚಗಳನು ತೋರಿದಳು।
ರಣಧೀರ ನಿನ್ನಂಥ ರಾಣಿ ಕಡಿಯಲು ಮತ್ತೆ
ಬಹುದೂರ ಉಂಟು ನೋಡೆಂದು ||೭೪||

ಅಂತರಿಸಿ ಆಯುಧವ ಹರಹರ ತನ್ನಯ
ಪಂಥ ಬಿರುದಿಗೆ ಹೀನ ಬಂತು।
ಭೂಕಾಂತೆ ಉಳ್ಳನಕ ಕ್ಯಾಕ್ಕೊಡೆದು ಬಾಳುವ
ಕಾಯ ಮಾತು ನಿಲ್ಲುವುದು ಮಧ್ಯದಲಿ ||೭೫||

ಮಾಡಿದ ಕಾರ್ಯ ಕಲಿಯುಗಕೆ ಇದು ಹೆಚ್ಚು
ಮೂರು ಕೋಟಿಯ ಬಲವ ಕೊಂದೆ।
ತೀರುವ ಸಮಯದಿ ಸ್ತ್ರೀಯ ಕಡಿದನು ಎಂದು
ಸೂರ್ಯರುಳ್ಳನಕ ಮಾಜುವುದೆ ||೭೬||

ಮದಿವ್ಯಾದ ಸತಿಯಳು ಮಾರ್ಗದಿ [ತಪ್ಪಿ] ನಡೆಯೆ
[ಮಾ]ಡಿದನೆ ಆಜ್ಞೆ ಮಚ್ಛೇಂದ್ರ।
ಹೋಗುತವ ಹೊಲತಿ ಕಾಶಿಯಾತ್ರೆಗೆ ಹೋದ
ಯೋಗಿಯಾದನು ಮಚ್ಛೇಂದ್ರ ॥೭೭॥

ಭೂಮಿ ಶಕ್ತಿಯು ಬಂದು ಕುಮಾರನಿದಿರಿಲಿ ನಿಂದು
ಕೇಳಲು ಮಹಲಕ್ಷ್ಮಿಯಾಗಿ।
ಮಾಡಿದ ಆದರವ ಮನಹಾರ ಪುರುಷರು
ಕಂಡು ಪಾಲಿಪುದುಂಟೆ ಸತ್ಯೇಂದ್ರ ॥೭೮॥

ಲಾಲಿಸುಜ್ಜನಿ ಪೊಳ[ಲ]ಲಿ ರಾಯ ರಾಮಚಂದ್ರ
ಆಳುತಿರಲು ಸಂಭ್ರಮದಿ।
ದಾರಿದ್ರನಾಗಿರಲು ಅಮರಾದಿ ಓರ್ವನು ವಿಪ್ರ
ಆಣಿಕ್ಕುವನು ದಿನಚರಿಯ ॥೭೯॥

ರಾಯರನು ಮೆಚ್ಚಿಸುವ ತ್ರಾಣವು ಎನಗಿಲ್ಲ
ದೇವತಾ ಸ್ತುತಿಯ ಮಾಡೆ।
ಈ ವ್ಯಾಳ್ಯೆ ಹೋಗೆನಲು ಭೂಸುರನು ಶುಚಿಯಾಗಿ
ಮಹಂಕಾಳಿಯ ಸ್ತುತಿಯ ಮಾಡಿದನು ॥೮೦॥

ಆದಿಶಕ್ತಿಯು ಮೆಚ್ಚಿ ಚೂತಫಲಗಳ ಕೊಡಲು
ಆದೀತು ಹೋಗು ಅಮರತ್ವ।
ಸ್ತ್ರೀಯಳ ಕರಕಿಡಲು ಆರು ತಿಂಗಳು ಹೋಗಿ
ಮಾವಿನೋಟೆಯನು ಸುಡಲೆಂದು ॥೮೧॥

ಮಾವಿನ ದೃಷ್ಟವ ಪೇಳಲು ರಾಜೇಂದ್ರ
ಬ್ರಹ್ಮರು ಹೊರುವಂತೆ ಹೊನ್ನ।
ವೀಯಲು ಮ[ತ್ತವ] ಸ್ತ್ರೀಯ[ಳ] ಮಧ್ಯ
[ನೀಲಲೋಚನೆಗಿತ್ತನು] ॥೮೨॥

ಈ ಹಣ್ಣ ತಾ ಮೆಲ್ಲೆ ಕಾಯ ಸಿದ್ಧಿಗಳಹುದು
ರಾಣಿ ಅಳಿವಳು ತಾನು ಉಳಿಯೆ।

ಈ ಎಲ್ಲಕ್ಕೆಯೆ ಒಬ್ಬ ಸಾ[ಹ]ಣಿನ ಸ್ನೇಹವ
ಮಾಡಿ ಇರುವಳು ಮಹತಾಯಿ ||೮೩||

ತಾನುಳಿಯೆ ತನ್ನಯ ಸ್ನೇಹಿ ಅಳಿವನು ಎಂದು
ಗೋವಿಗೆ ಕೊಡಲಾಗ ಅವಳು।
ಮೇವನು ಮತ್ತೊರ್ವ ಗವುಡಿ ಅವನಿಗೆ ಉಂಟು
ದಾಸಿಗಿತ್ತನು ಆ ಹಣ್ಣ ||೮೪||

ಸವಿಯಲು ಸಮಯದಿ ದೊರೆಯದೆ ಮತ್ತವಳು
ಸಗಣಿಯ ಪಿಡಿವ ಸಡಗರದಿ।
ಮಡಗಿಹತಗೆಯ ಮೇಲೆ ಬರುವ ರಾಯನ ದಾರಿ
ಬರುತ ಕಂಡನು ತುರುವಿನ ಹಣ್ಣ ||೮೫||

ದಾಸಿಯ ಪ್ರಾರ್ಥಿಸಲು ಗೋವಿನ ತೋರಿದಳು
ಗೋವನು ಪಿಡಿದು ಬಾಧಿಸಲು।
ದೇವರಾಣೆಯು ಪ್ರಜಾಪತಿಗೆ ಎನಗೆ ಸ್ನೇಹ
ವಾಗಲು ಕೊಟ್ಟಳೀ ಹಣ್ಣ ||೮೬||

ಸತಿಯರ ನಂಬುವನು ಮತಿ ಹೆಡ್ಡನೆನುತಲಿ
ಸುಖ ಫಲವ ನೀನುಣ್ಣು ಎಂದು।
ಕ್ಷಿತಿಯೊಳು ಚರಿಸೆಂದು ಕಾಶಿಯಾತ್ರೆಯವಡೆದು
ಮಚ್ಛೇಂದ್ರ ಮುನಿಯಾದನಮ್ಮಾ ||೮೭||

ಮೆಚ್ಚಲು ಭೂಕಾಂತೆ ಸತ್ಯೇಂದ್ರ ರಾಮನ ನುಡಿಗೆ
ಕೀರ್ತಿಯ ಪಡೆವೆ ಲೋಕದಲಿ।
ಕತ್ತಿ ಮಾಡಲು ಬೇಡ ಸಂತೆ ರಂಡೆಯ ಮೇಲೆ
ಸೃಷ್ಟಿಗೀಶನಿಂದು ನೋಳ್ಪ ||೮೮||

ಭೂಮಿಶಕ್ತಿ[ಯು] ತೊಲಗಿ ಮಾಯವಾಗಲು ರಾಮ
ನಾಯ ಕಡಿವನೆ ರಣಧೀರ।
ಥೀ ಎನುತ ಹಿಂದಕ್ಕೆ ತಿರುಗುವ ಸಮಯದಿ
ಮೂಳಿ ಮಾತಂಗಿ ನುಡಿಸಿದಳು ||೮೯||

ಹಿಂದೊಮ್ಮೆ ಕರೆದರೆ ಒಲ್ಲೆಂದೆ ರತಿ[ಕ]ಲೆಗೆ
ಇಂದಿನ್ನು ಮನಸು ಒಪ್ಪದೆ।
ಕೊಂದೆನೆಂಬುವ ಕೈಯ ನಿಲಿಸಿ ನೇಮಿಯ ಕಳುಹಿ ಆ
ನಂದದಿ ಸುಖದೊಳು ಬಾಳ್ವಾ ||೯೦||

ಮೂಳಿಯ ಮಾತನು ಆಡಬೇಡೆಲೆ ಮೂಗ
ಮಾದಿಗನಿಂದ ಕೊರೆಸುವೆನು।
ಏಣಾಂಕಧರನೊಲುಮೆ ಆಗಿ ಇರುವುದು ಕಾಣೆ
ಪರಸ್ತ್ರೀಯರು ತಾಯಿ ಹೋಗಮ್ಮ ||೯೧||

ಪಾಪಿ ಹೋಗೆನುತಲಿ ಭೂಪ ರಾಮನು ತಿರುಗೆ
ಚಾಪ ಏರಿಸಿ ಸರಳುಗಳ।
ಮಾತು ಮಾತಿದ್ದಂತೆ ಮುನ್ನೂರು ಸರಳನು ಕರೆಯೆ
ತಾತ ತೂತಾಗಿ ವಜ್ರಾಂಗಿ ||೯೨||

ಮೂರಾರು ಸರಳೊಳಗೆ ಹನ್ನೆರಡು ಅಂಬಿನ ಗಾಯ
ಉನ್ನಂತವಾಗೆ ರಾಮನಿಗೆ।
ಬ್ರಹ್ಮಲಿಖಿ ಇರುವನಕ ಕಲ್ಲು ಮಾನ್ಯರ ದೇಹ
ಪಣೆಯಲ್ಲಿ ತೀರಲು ಗಾಯವಡೆಯೆ ||೯೩||

ಗಾಯ ಮೂಲೆಗಳಾಗೆ ರಾಮನ ಕರ ನಿಂದು
ಸೇರಲು .... ತರಳಂಗೆ।
ಖಾನರು ತಲೆದೂಗಿ ತ್ರಾಣಹುದು ಮಾತಂಗಿ
ರಾಮನ ಕರವ ನಿಲ್ಲಿಸಿದೆ ||೯೪||

ಈ ಮೇಲೆ ನೋಡುವ ಭೀಮಗೆ ಹೆ[ದ]ರಿದ್ದು
ಖಾನರು ಏರಿ ಬರುತಿಹರು।
ವೀರ ರಾಮನ ಮಂದಿ ಅಡ್ಡಾಡಗೊಡದೆ ಕೆಡಹಿ
ಮೋಜು ಲಾಲಿಸಿ ಬಲ್ಲವರು ||೯೫||

ಮಿಕ್ಕು ಬಂದವರನು ಅಪ್ಪಳಿಸಿ ಹೊಡೆವನು ಮುದ್ದ
ನೆತ್ತಿ ಚಿಪ್ಪುಗಳ ಕಳೆವಂತೆ।

ಕತ್ತಿ ಗುರಾಣೆಯ ತಲೆಯ ಮುಚ್ಚಿ ಖಾನರು ಬಂದು
ಕುಕ್ಕಿ ಹೋದವರು ಬೆದಬೆದರಿ ||೯೬||

ಬರುವ ಖಾನರ ನೋಡಿ ಎದೆಗೆಡದೆ ಬಾದುರಖಾನ
ಕದಳಿಗೆ ಕರಿಯು ಬರುವಂತೆ।
ಎಡಬಲನ ನೋಡದೆ ತರಿಗಡಿಯೆ ಮುನ್ನೂರು ತಲೆಯ
ಬೆದರಿ ಓಡುವರು ಚೆನ್ನಾಗಿ ||೯೭||

ಕಾಟಣ್ಣ ತಾನೊಂದು ತಲೆ ಪೌಜಿನ ಮೇಲೆ
ಹೊಡೆದಾಡುತಿರ್ದ ಅನುಜಾಣ।
ಸುಳುಹು ಕಾಣದು ಎಂದು ಮುರಿಗಡಿದು ಮುತ್ತಿದ
ಹರಿದು ಬಂದನು ತಮ್ಮನೆಡೆಗೆ ||೯೮||

ಗಾಯೊಡೆದು ಮೂರ್ಛಾದ ಕುಮಾರ ಚೆನ್ನಿಗನ ಕಂಡು
ಭೋರಿಡುತ ಬಿಗಿಯಪ್ಪಿದನು।
ಊರಿಗೆ ನಡೆ ಭೂಪ ಮೂಗು ಮೊಲೆಯನು ಕೊಯಿದು
ಓಡಿಸುವೆ ಮಾದಿಗಿತ್ತಿಯನು ||೯೯||

ಬಾರಯ್ಯ ಅಣ್ಣಾಜಿ ಆಡಬಹುದೆ ನೀನು
ಹೀನಾಯವಾಗದೆ ಸ್ವರ್ಗದೊಳಗೆ।
ಓಡೋ ರಾಯರಗಂಡ ಸಾ[ವಿ]ಗಂಜೊರ ಮಿಂಡ
ಕಾಲಪೆಂಡೆವು ಹೋಯಿತೇನು ||೧೦೦||

ಮುರಿದು ಮನೆಗೆ ಓಡೆ ಬಿರಿದನಿಟ್ಟೆನೆ ಅಣ್ಣ
ಸ್ಥಿರವೇನೊ ನರಕಾಯವಿಲ್ಲ।
ಮಡಗಲು ಇರದಣ್ಣ ಮುಂದೆ ಬರಹತ್ತಿರೆ
ಪಡೆದವರು ಕೊಡಲಾಪರೆ ಹುಚ್ಚಾ ||೧೦೧||

ಬಾರಯ್ಯ ಕಾಟಣ್ಣ ಪೋಗಿ ನಗರಕ್ಕೆ
ತಾಯಿ ತಂದೆಗೆ ಸುದ್ದಿ ಪೇಳೊ।
ದೇವೇಂದ್ರನಾತ್ಮಜನೆ ನಿನ್ನಗಲಿ ಪೋಗುವನಲ್ಲ
ಸಾಗಿಸು ಮತ್ಯಾರ ನೀನು ||೧೦೨||

ಇಟ್ಟೆಡೆಯು ಬಂದಾಗ ಒಡಹುಟ್ಟಿದವನ ಬಿಟ್ಟು
ಪಟ್ಟಣಕೆ ನಾ ಹೋಗೋನಲ್ಲ।
ಕುಟ್ಟಿ ಖಾನರ ತಲೆಯ ಕಡಿದು ಪ್ರಾಣವ ಬಿಡುವೆ
ಹೊಟ್ಟೆ ಹೊರೆವೆನೆ ಊರ ಹೊಕ್ಕು ||೧೦೩||

ಬಿರುದಿನ ಪೆಂಡೆಯು ತುರುಕರಿಗೆ ಸೇರೋದು
ಪಡೆದ ರಾಜೇಂದ್ರಂಗೆ ಕುಂದು।
[ನ]ಡೆಯಣ್ಣಾ ತಲೆಯನು ಛಳಿಸಿ ನುಡಿಯಲು ಬೇಡ
ಪಿಡಿದನು ಗಲ್ಲವ ರಾಮ ||೧೦೪||

ಕಡೆಯವ ಕೊಂಡ್ಹೋಗಿ ಒಡಲ ಹೊರೆಯಲೆ ನಾನು
ಸುಡು ನಮ್ಮ ಜನ್ಮ ಇನ್ನ್ಯಾಕೆ।
ಅಡವಿ ಗೊಲ್ಲನ ತಂದು ಅಣ್ಣಾಜಿ ಎನಿಸಿದ ಋಣವ
ಕಡಿದಾಡಿ ಅಳಿವೆ ನಿನ್ನೆಡೆಯ ||೧೦೫||

ಅಳಿಯಬಲ್ಲೆನೆ ಪೋಗಿ ಬೆದರು ಗಾಯಕೆ ದಂಡ
ಮುಗಿಯದೆ ಖಾನರ ತಲೆಯ।
ಕಡಲಂತೆ ರಕ್ತವ ಹರಿಸದೆ ಯೋಜನವ
ಮಾಡುವನೆಂಬುದು ನೀನರಿಯಾ ||೧೦೬||

ಕಲಿಯುಗದ ಪಾರ್ಥನೆ ದಯಮಾಡಿ ಪೇಳುವ
ವಿವರವೆಲ್ಲವನು ಅರುಹುವೆನು।
ಬರುವೆನು ಬೆನ್ನೊಡನೆ ನೆನಹು ಮಾತ್ರಕೆಯೆಂದು
ಮನದೊಳು ಗ್ರಹಿಸಿ ಪೇಳೆನಲು ||೧೦೭||

ಹಡೆದ ಹರಿಯೆಲದೇವಿಗೆ ಪೇಳಯ್ಯ
ಕೊಡುವಂತೆ ಹರಕೆ ದೃಢವಾಗಿ।
ಒಡನೆ ಚೆನ್ನಿಗರಾಮ ಚರಣಕೆರಗಿದನೆನ್ನೊ
ಮೊಲೆವಾಲ ಸವಿದ ಮಗ ರಾಮ ||೧೦೮||

ಎಡದ ಪಾದದಿ ಇದ್ದ ಕಡೆಯವನು ಕಳೆದನು
ಉಡುದಾರ ಮುದ್ರೆ ಉಂಗುರವ।

ಪೊಡವಿ ರಾಯರ ಗಂಡನೆಂಬ ಬಿರಿದನು ತೆಗೆದು
ದೊರೆ ಕಿತ್ತು ಎರಗಿದನೆನ್ನೊ ||೧೦೯||

ಪಟ್ಟಶೇಖರನಾದ ಜಟ್ಟಂಗಿರಾಯಗೆ [ಸು]ತನು
ಸಾಷ್ಟಾಂಗ ಎರಗಿದನೆನ್ನೊ।
ಮುಪ್ಪಿನ ಕಂಪಿಲ ಹರಿಯಮ್ಮ ಬೈಚಪ್ಪ
ಉತ್ರವೀಗಲೆ ಬಾಳೆನುತ ||೧೧೦||

ಚಾಡಿ ಕ್ಷುದ್ರರ ಮೇಲೆ ಪ್ರಧಾನಿ ಬೈಚಪ್ಪನು
ಜೀವ ಉಳ್ಳನಕ ದಣಿಸದೆ।
ಏರಿದವೆಲ್ಲಕ್ಕೆ ಇಳಿಸದೆ ನಡೆಸಲು
ಸೀಮೆ ರಾಜ್ಯವು ತಣ್ಣಗಿಹುದು ||೧೧೧||

ಊರು ಒಕ್ಕಲು ಪ್ರಜೆಯ ಸೀಮೆ ರಾಜ್ಯವನೆಲ್ಲ
ತಾನಿತ್ತ ಒಕ್ಕಲು ತೆಗೆಯದೆ।
ಆಳಿದರೆ ಅವರೆಲ್ಲ ಕೊಂಡಾಡುವರು ರಾಮಗೆ
ಭೂಮಿಯುಳ್ಳನಕ ಘನವುಂಟು ||೧೧೨||

ಬಾರಯ್ಯ ಮಂತ್ರಿಯ ಮಗ ನೀಲಕಂಠರಸೆ
ಹೋಗಯ್ಯ ನೀನು ಕುಮ್ಮಟಕೆ।
ರಾಯ ಜಟ್ಟಂಗಿಯು ಜಲತ್ರ ಹಸುಮಗನು
ನಾನಾ ಭಾಗ್ಯವು ನಿನ್ನದೆಂದು ||೧೧೩||

ಆಳಿದೊಡೆಯನ ಬಿಟ್ಟು ಓಡಿದ ಪ್ರಧಾನಿ
ಮೂರು ಶಂಕೊರುಷ ಬಾಳುವನೆ।
ಬಹಳ ಕಟಕಟಿಯನು ಆಡುವ ಹೊತ್ತಲ್ಲ
ಸಾಗೆನಲು ಸುದ್ದಿಯೆನಬೇಕು ||೧೧೪||

ಹೋಗು ಬಾದುರಖಾನ ಮೇಲು ದುರ್ಗಕೆ ನೀನು
ಪ್ರಾಣ ಕೊಡುವೆನು ನಿನಗಾಗಿ।
ತಾನಳಿದ ಗಳಿಗೆಲಿ ಖಾನರೊಯ್ಯರು ನಿನ್ನ
ಕಾಲನ ಬಾಧೆ ಬಿಡದೆನಗೆ ||೧೧೫||

ಮರೆಯ ಬಿದ್ದನ ಕೊಡದೆ ಏರಿದರು ಆಗಲೆ
ಗುಂಡಯ್ಯ ಶರಣ ಯಾವ ಕಾಲ।
ಧಾತು ಭೂಮಿ ಇರಲು ಬಿಡದು
ತಾನಳಿದು ಪರರುಳಿಸಿದರೆ ||೧೧೬||

ಅಳಿದ ಕಾಯವ ಭೂಪಾಲನುಳುಹಿದೆ ಪ್ರತಿಯಾಗಿ
ಯಮನಿಂದ ಬಿಡಿಸಿ ತಂದಂತೆ।
ಹೊಡೆದಾಡಿ ನಿಮ್ಮೆಡೆಯೆ ತರಿಗಡಿದು ದಂಡನು ಅರ್ಧ
ಕೊಡುವೆ ಪ್ರಾಣವ ಪರರಡಿಯೆ ||೧೧೭||

ಬೇಡ ಬಾದುರಖಾನ ರಣಧೀರನೆಂಬುದ ಬಲ್ಲೆ
ನೀನಳಿದು ತಲೆ ಡಿಳ್ಳಿ ಸೇರೆ।
ಭೂನಾಥ ಸುರಿತಾಳನ ಛಲಪಂಥ ಏಳದೆ ತನಗೆ
ತಡವಾಗದೆ ಕೈವಲ್ಯ ಪದವಿ ||೧೧೮||

ಭಾವಾಜಿ ಸಂಗಯ್ಯ ಬಾರೆಂದು ಕರಗಳ ಪಿಡಿದು
ಹೋಗೆನುತ ಗಲ್ಲವ ಪಿಡಿದು।
ಏಳು ಜನ್ಮದಿ ನಿಮ್ಮಂಥ ಭಾವ ದೊರೆಯನು ಸ್ವಾಮಿ
ಕಡಿದಾಡಿ ಮಡಿವೆ ನಿಮ್ಮೆಡೆಯೆ ||೧೧೯||

ಅಣ್ಣ ತಮ್ಮನು ಅಳಿಯೆ ಮರೆದೆನ್ನ ದುಃಖದ ಮಾತು
ಕನ್ನೆ ಪ್ರಾಯದಲಿ ಬಳತೊಲಗೆ।
ಜನ್ಮ ಇರಲು ದುಃಖ ಮನದೊಳಗೆ ಸರವಾಗೆ
ಪಡೆದಮ್ಮಗೆ ದುಃಖ ಎಣೆ ಪ್ರತಿಯೂ ||೧೨೦||

ಸೋದರರದ ಬಾಲೆಯರು ಶೋಕಮಾಡಲು ಎನಗೆ
ಬಾಧೆ ಬಿಡದು ಯಮನೊಳಗೆ।
ಹೋಗೆನುತ ಎಲ್ಲರನು ಸಾಗಿಸಿ ಕಳುಹಲು
ಮೇಘದಿ ಸುರರು ನೋಡಿದರು ||೧೨೧||

ಅಳಿವ ಕಾಲಕೆ ತನ್ನ ಮರೆಯ ಬಿದ್ದರೆ ಕೊಡದೆ
ಕಳುಹುದೆ ನಿಜ ನಿಷ್ಠೆಯಹುದು।

ಹರಿಹರ ಬ್ರಹ್ಮರು ತಲೆಯ ನಲಿದಾಡುತ್ತ
ನರಕಲಿಗೆ ಸತ್ಯ ಹರಿಶ್ಚಂದ್ರ ||೧೨೨||

ಕರೆಸಿದಾಗಲೆ ರಾಮ ಮಾರ್ಬಲದ ಮನ್ನೆಯರ ಕೂಡ
ನುಡಿವೆ ಧರ್ಮದ ಕಾಶವನು।
ಮಡದಿ ಮಕ್ಕಳು ಆಸೆ ತೊರೆದ ಬಂಟರು ಎನ್ನ
ಒಡನೆ ಮದತು ಇರಲೆಂದ ||೧೨೩||

ಅಂಜಿ ಭಯ ಬಡಬೇಡಿ ಸಂಬಳವನುಂಡು
ಹೊಂದುವೆ ಸದ್ಗತಿಯ ನಾನು।
ಮುಂದೆನಗೆ ದೋಷಿಲ್ಲ ಸಂದನೆಂಬರು ಬನ್ನಿ
ಬಡ ಆಸೆಯುಳ್ಳವರು ನಡೆಯೆನಲು ||೧೨೪||

ನೂರೊರುಷ ಬಾಳಲು ಸಾವ ಕಾಲವು ಬಿಡದು
ಕಾಯವಳಿಯಲು ಕೀತಿಯುಂಟು।
ಆಸೆಯೆಂದೂ ರಾಯ ಎಳ್ಳಿನಷ್ಟು ತಮಗಿಲ್ಲ
ಮೂರು ಸಾವಿರ ಮಂದಿ ಎರಗೆ ||೧೨೫||

ಮೇಲಾದ ಮಂದಿಯ ಊರಿಗೆ ಕಳುಹಿದ
ರಾಮಭೂಪಾಲ ಏಕಾಂಗಿ।
ಊರು ಎಚ್ಚರು ಎಂದು ವೀರ ಸಂಗಗೆ ಪೇಳಿ
ನೀಲಕಂಠಗೆ ಬಾದುರಗೆ ||೧೨೬||

ಬಾರಯ್ಯ ಕಾಟಣ್ಣ ತೀರಿಸಿದೆ ಜಡರನು
ರಾಣಿಯರ ತೊಡಕೊಂಡು ಇಹುದು।
ನಾಲ್ವರ ತಲೆಹೊಡೆಯೆ ಕುಮಾರನ ಪಡೆದಂಥ
ಬಾಲೆಯೊರ್ವಳ ಕಾಯೆನಲು ||೧೨೭||

ಹಗಲಲ್ಲ ಹೇಳುವರೆ ಸೊಗಸು ಬರುವುದು ಎನಗೆ
ನಡೆ ಮುನ್ನ ಬೇಗ ಕುಮ್ಮಟಕೆ।
ಸಾಗದೆ ಇದ್ದರೆ ತಾಯಾಣೆ ನಿನಗೆಂದು
ಹೋಗೆನುತ ಕರಗಳ ಮುಗಿದು ||೧೨೮||

ಸಾಸಿವೆ ಹಿಟ್ಟನು ತನುವಿಗೆ ಮೆ[ತ್ತಂ]ತೆ
ನಯನಕ್ಕೆ ದಸಿಯ ಬಲಿದಂತೆ।
ಹಲವು ದುಃಖದಿ ಕಾಟ ಭೋರ್ಗರೆವುತ ಮನದೊಳು
ಎರಗಿದ ಪಾದದ ಅಡಿಗೆ ॥೧೨೯॥

ಎದ್ದನು ಕಾಟಣ್ಣ ಎರಗಿ ಕರಗಳ ಪಿಡಿದು
ರಾಹು ತುಡುಕಿದ ಶಶಿಯಂತೆ।
ವೀರ ಮಾನ್ಯರಿಗೆಲ್ಲ ಹುಶಾರು ಎನ್ನುತ ಪೇಳಿ
ವಾಯುಗಮನದಿ ಹೋಗಿ ಬರುವೆ ॥೧೩೦॥

ವೀರಸಂಗಯ ಬಂದು ಏರಲು ದುರ್ಗವ
ಬಾದುರಖಾನ ಮಂತ್ರಿ ಕರಮುಗಿದು।
ಸಾವಿಗಂಜಿದ ಬಂದಿ ಲಾವಣ್ಯ ಕಳೆದಂತೆ
ಊರ ಹೊಕ್ಕರು ಕುಮ್ಮಟವ ॥೧೩೧॥

ತುರಗ ಗಮನದಿ ಬಂದು ದುರ್ಗ ಏರಲು ಕಾಟ
ತರಳೆಯರು ಬಂದು ಅಡಿಗಡಿಗೆ।
ರಣವಿಜಯಕಲಿಪಾರ್ಥ ರಾಮ ಏನಾದನು ಎಂದು
ದೊರೆ ರಾಣಿ ಮಂತ್ರಿ ಕೇಳಿದ[ರು] ॥೧೩೨॥

ಅಂಬಿನ ಮಳೆಯಲ್ಲಿ ಓಕುಳಿಯನಾಡಿದ
ತುಂಬಲು ಸರ್ವಾಂಗವೆಲ್ಲ।
ಬಂದುದು ಕಡುತಾಪ ಮೂರ್ಛೆ ಕೈವಲ್ಯವ
ನಂಬುವ ಸಮಯವಾಗಿಹುದು ॥೧೩೩॥

ಬಿರಿದು ಬಾವುಲಿ ಕೊಳ್ಳಿ ಹಡೆದ ರಾಜೇಂದ್ರನೆ
ಉಡಿದಾರ ಮುದ್ರೆ ಉಂಗುರವ।
ಮಡಗಿದ ಕಾಟಣ್ಣ ಎರಗಿದ ರಾಮಯ್ಯ
ಶುಭದಿಂದ ರಾಜ್ಯವಾಳೆನಲು ॥೧೩೪॥

ಅಳಿದನೆಂಬುದ ನುಡಿಯ ಪಡೆದಮ್ಮ ಕೇಳುತಲಾಗ
ಹರನ ಪಾದವ ಕೂಡಲೆಂದು।

ಮರಳೇಳು ಜನ್ಮದಿ ಬರಲೆಮ್ಮ ಗರ್ಭದಿ
ಗಿರಿಜಾವಲ್ಲಭನೆ ಕೊಡು ಕಂಡ್ಯಾ ||೧೩೫||

ರಾಯ ದುಃಖವ ಮಾಡೆ ಪ್ರಧಾನಿ ಬೈಚಪ್ಪನು
ಮಾಯ[ಮ್ಮ] ಲಿಂಗ[ಮ್ಮ] ಕೇಳಿ ।
ರೂಢಿಗೀಶ್ವರ ಮೆಚ್ಚಿ ಕಡೆಗಾಲ ಸ್ವರ್ಗಕೆ
ಸಲ್ಲಬೇ[ಕೆ]ನುತ ಹರಿಯ ನಿಲಿಸಿ ||೧೩೬||

ಗೋಳೆನುತ ಊರೆಲ್ಲ ಆರ್ಭಟಿಸಿ ಶೋಕದಲಿ
ತಾಯಳಿದ ಬಾಲನ ತೆರದಿ।
ಬಾಯ ಬಿಡುತಿರೆ ಪಟ್ಟ ಬಂದು ಕಾಟಣ್ಣನು
ರಾಯ ರಾಮನ ಅರಮನೆಗೆ ||೧೩೭||

ಬಾಲೆಯರ ಕೇಳಿದ ನೀವು ಎನ್ನುವುದೇನು
ಸೇರಿದ ರಾಮಣ್ಣ ಕೈವಲ್ಯ।
ಆಡೋದು ಆಗೊಂದು ಒಡಲೇ ಖಾಜೆ
ಹಾರಿಸು ತಲೆಯೆಂದು ಕುಳಿತು ||೧೩೮||

ಹೊಯ್ಯಲು ನಾಲ್ವರ ನಿಮಿಷ ಮಾತ್ರದಿ ಕಾಟ
ಇರು ತಾಯಿ ಸುಭದ್ರೆ ಸುಖದಿ।
ಮಗನು ಜಟ್ಟಂಗಿಯ ರಾಮನ ಮುಂದಿಟ್ಟು
ನಡೆಸಮ್ಮ ರಾಜ್ಯಭಾರವನು ||೧೩೯||

ಪುತ್ರನ ಸುಡು ನನ್ನ ಪುರುಷನೊಡನೆ ಪೋಗೆ
ಪ್ರಾಪ್ತಿ ಕೊಡಲಿಲ್ಲವೆ ಶಿವ ನನಗೆ।
ಜತಿಯರು ನಾಲ್ವರು ಏಕಾರ್ಥವಾದರು ತೊರೆದು
ಬಿಟ್ಟೇನೆ ಮನ್ಮಥನ ರೂಪ ||೧೪೦||

ತವಕದೊಳಗೆ ಕಾಟ ತನ್ನ ಮನೆಗೆ ಬಂದು
ನಿಮ್ಮ ಮಾತೇನು ಹೇಳೆಂದ।
ತಮ್ಮನ ರಾಣಿಯರ ಯಮಧರ್ಮನ ಕಾಣಿಸಿದೆ
ನಿಲ್ಲಲು ತನಗ್ಯಾಳ್ಯವಿಲ್ಲ ||೧೪೧||

ಯಾಕರಸೆ ನಿಲ್ಲುವುದು ಇದ್ದೆನೆಂಬುವರ್‍ಯಾರು
ಹೊಡೆದ್ಹಾಕಯ್ಯ ಈ ಕ್ಷಣವೆ ನೀನು।
ಜಡಿದೆತ್ತಿ ಖಡ್ಗವ ಹೊಡೆದು ಈರ್ವರ ಮೇಲೆ
ಹೊರಳಿದ ಬಿದ್ದು ದುಃಖದಲಿ ॥೧೪೨॥

ಬಾಲೆಯರ ಲಯಮಾಡಿ ಬೇಗ ಹೊರಡಲು ಕಾಟ
ಕಾಲ ತೊಡರಿಲ್ಲ ನಮಗೆನಲು।
ಭೇರುಂಡ ರಣರಾಮ ಏನಾದನೋ ಎನುತಲಿ
ವಾಯುಗಮನದಿ ಓಡಿಬಂದ ॥೧೪೩॥

ರಾಯ ಕಾಟನು ಬಂದು ಕುಮಾರಗೆ ಕೈಮುಗಿದು
ತೀರಿಸಿದೆ ನಾಲ್ವರ ಸ್ಥಿತಿಯ।
ಜೋಡಿಗೆ ತನ್ನಯ ನಾರಿ ಈರ್ವರ ಹೊಡೆದು
ಸಾಗಿಸಿದೆ ಕಾಲನ ಪುರಕೆ ॥೧೪೪॥

ಕಡಿದಾಡಿ ಕಾಟಣ್ಣ ಬಲದೊಳಗೆ ಅರ್ಧವ
ಲಯವಾಗಿ ಮಾನ್ಯರು ಬಿದ್ದು।
ಇವರಿ[ಗೆ] ಅಳಿವಾಗ ಮೂವತ್ತು ಸಾವಿರ ಪೌಜು
ಯಮನ ಕಾಣಿಸಿ ಒರಗಿದನು ॥೧೪೫॥

ಗಾಯ ತಾಪದಿನೊರಗಿ ತೀರಲು ಕಲಿಯುಗದ
ಭೀಮ ರಾಮಗೆ ಹುಷಾರಾಗಿ।
ಮೇಘವು ಕವಿದಂತೆ ಮುತ್ತಿರುವ ಖಾನರ ನೋಡಿ
ಏರಿಸಿದ ಬೊಲ್ಲನ ಚಬಕ ॥೧೪೬॥

ತುರುಕರ ರೋಷವು ಬರಸಿಡಿಲು ಬರುವಂತೆ
ಕಿಡಿ ಸೂಸುತ್ತೆ ನಯನದಲಿ।
ಕಡಿವುದು ಕಡೆಯಿಲ್ಲ ತುಳಿವುದು ಗಡಿಯಿಲ್ಲವು
ದುರುಗುಟ್ಟಲು ನಾಲ್ಕು ಬೀದಿ ॥೧೪೭॥

ರಾಮನ ಕೋಪಾಗ್ನಿ ಹೇಳುವರಳವಲ್ಲ
ಭೀಮನಂದದಿ ಕೋಪ ತಾಳಿ।

ತಾರುಮಾರಿನ ಮೇಲೆ ಕಡಿಯೆ ತುರುಗ ರಾಹುತ
ಬೀಳುವರು ನಾಲ್ಕು ಪಾಲಾಗಿ ||೧೪೮||

ಕದಳಿಯ ವನದೊಳು ಮದಕರಿಯು ಹೊಕ್ಕಂತೆ
ಕಡಿವರು ಎರಡು ಭಾಗದಲಿ।
ಕಡಿವನು ಕಾಟಣ್ಣ ಕೊಡಲಿ ಹನುಮನು ಹಂಪ
ಕೊರೆವ ರೀತಿಲಿ ಕಣಿಕೆಯನು ||೧೪೯||

ದೇವಿಸೆಟ್ಟಿಯ ಲಿಂಗ ಬಿದ್ದ ಲೆಂಕಿಯ ಹನುಮ
ಬಾಣಿ ಮುದ್ದನು ಮರಚೆಟ್ಟಿ।
ಮೀರಿದ ತುರುಕರ ಹಾರಿಸಿ ತಲೆ ಹೊಡೆದು
ಏರಿಸಿ ಕಲ್ಲ ಕಟ್ಟೆಯನು ||೧೫೦||

ಖಾನಖಾನರ ಮೇಲೆ ಏರಲು ರಣರಾಮ
ಬಾಜಿಖಾನನ ತಲೆ ಹೊಡೆದು।
ವಾರೀಲಿ ಇದ್ದಂತೆ ಮಲ್ಲೋಜಿಖಾನನ ಹೊಡೆಯೆ
ಮಾರಿಗೆ ಕೋಣನ ಹೊಡೆದಂತೆ ||೧೫೧||

ಖಾನ ವಜೀರರ ತೀರಿಸಿದ ಸ್ಥಿತಿಪುಣ್ಯ
ನೂರೆಂಟು ಮಂದಿ ಗಟ್ಟಿಯರನು।
ನೇಮಿ ಮಾತಂಗಿಯು ತಾವರಿದು ಕಡೆಯೊಳು
ನಿಂತು ನೋಡಲು ಬೇರೆ ಪೌಜು ||೧೫೨||

ಕಡಿದು ಖಾನರ ತಲೆಯ ನಿಲ ಬೀಳೆ ಕಾಯವು
ಕರವು ಬಳಲುತ ಬಂದು ಒಂದೆಸೆಯ।
ನೆಳಲೊಳು ನಿಲ್ಲಲು ಕಡು ಬಿಸಿಲ ತವಕಕೆ ಮೋರೆ
ಸೊಗಸುತ್ತಿರಲು ಪ್ರಾಣತ್ವ ||೧೫೩||

ಗಾಯ ಸಂಕಟವಾಗೆ ರಾಮ ನಿಂದನು ಎಂದು
ನೇಮಿ ಮಾತಂಗಿ ಮಾತಾಡಿ।
ಮೀರಿದ ವಜೀರ ಖಾನರೆಲ್ಲರ ಕೊಂದು
ಸೇರಿಸಿದ ದಂಡ ಯಮಪುರವ ||೧೫೪||

ಸವಲಕ್ಷ ಪವುಜನು ಬಲಿಯಿಕ್ಕಿ ಈ ಬಳಿಯ
ಉಳಿದಿಹುದು ಎಷ್ಟೊತ್ತು ಇಲ್ಲಿ।
ಐವತ್ತು ಸಾವಿರದ ಕೆಳಗಲ್ಲದೆ ಮೇಲಿಲ್ಲ
ಇದಕೇನು ಗತಿಯು ಹೇಳಮ್ಮ ||೧೫೫||

ಗಾಯ ಸೊಕ್ಕಲು ರಾಮ ಹೋಗಿ ನಿಂದನು ಕಂಡ್ಯಾ
ಕಾಲಾಳು ಉಂಟು ಸಾವಿರವು।
ರಾಮನ ಕರ ನಿಲ್ಲೆ ಆ ಮೂಳರಿಗೆ ಹೆದರೆನು
ಹೋಗಿ ಮುತ್ತು[ವೆ]ನು ಮರಳೊಮ್ಮೆ ||೧೫೬||

ಆಗಲೆ ಹೋಗೊಮ್ಮೆ ಹೋಗಿ ನಿಂದ ರಂಡೆ
ಉರುವ ಸಿಡಿಲೆರಗಿದಂತೆ।
ರಾಮನ ಬಂಟರು ಸಾಗಲು ಒಬ್ಬೊಬ್ಬ
ಸಾವಿರವಾ[ಗಿ] ನಡೆ ಹಾಯುವರೆ ||೧೫೭||

ಹಿಂದಕ್ಕೆ ನಡೆವನೆ ರಾಮೇಂದ್ರ ಕರಮುಗಿದು
ಬಂದ ತಪ್ಪಿಗೆ ಪಾಲಿಸೆನುತ।
ದಂಡೆಲ್ಲ ಲಯವೆಂದು ಸುರಿತಾಳ ಕೇಳಲು ನೇಮಿ
ಕಂಡ ಸ್ಥಿತಿಯನು ನಾನೊರೆವೆ ||೧೫೮||

ರಾಮನ ಹೊಡೆದೆನು ಅರೆಗಾಯವಡೆದು ಮೂರ್ಛೆ
ಯಾಗಿ ನಿಂದಂಥ ಸಮಯದಲಿ।
ಏರಲಮ್ಮದೆ ನೇಮಿ ಓಡಿಬಂದನು ಎಂದು
ಆಡುವೆ ನಡೆಯೆನಲು ಮೂಳಿ ||೧೫೯||

ಸಂಗಿ ಸಂಗದ ಮೇಲೆ ಗಂಗಾಳ ಚೆಂಬೊದ್ದಂತೆ
ಹಿಂದಣ ಗಾದೆ ತನಗಾಯ್ತು।
ಮುಂದೆ ಹೋಗಲು ಮರಣ ಹಿಂದೆ ಹೋಗಲು ಹೇಡಿ
ಎಂದೆನುತ ಮನದಿ ಧ್ಯಾನಿಸುತ ||೧೬೦||

ಹೆದರಬೇಡವೊ ನೇಮಿ ಎರಡು ಗಳಿಗೆಲಿ ಅವನ
ತಲೆಯ ಕೊಡುವೆನು ನಿನ್ನ ಕರದಿ।

ಲಯಮಾಡಿ ದಂಡನು ಊರಿಗೆ ಹೋಗಲು
ಹೊಡೆಸನೆ ತುಂಡೇಳೆ ಪಾಶ್ಚಾ ||೧೬೧||

ನೇಮಿಯ ಬಲಕೆಲ್ಲ ವಿಧಿಯಾಗಿ ಬಂದವಳು
ನೇಮಿಯ ನಾ ಬೇರೆ ಬಿಡುವಾ।
ಮೂಗನರಿವೆನು ಲವುಡಿ ಈ ಸಾರಿ ರಾಮನ ತಲೆಯ
ತಾರದಿರಲು ಎಂದು ನಡೆದ ||೧೬೨||

ಜಾಳು ಜಗ್ಗನು ಎಲ್ಲ ಕೂಡಿ ಮೂವತ್ತೈದು
ಸಾವಿರ ಕುದುರೆ ಪೌಜಿನೊಳಗೆ।
ಏರಿಸಿ ಸಿಂಗಾಡಿ ಬಾಣ ಬತ್ತಿಯ ಕರೆದು
ಜೋರಿಸಿ ಸುತ್ತಲು ಮುತ್ತೆ ||೧೬೩||

ನೋಡಲು ಕಿರಿನೋಟ ರಾಯ ರಾಮನು ನಗುತ
ನೇಮಿಯು ಹರುಷದಿ ಬರಲು।
ಮುತ್ತಿ ಆರ್ಭಟಿಸುತ್ತ ಹೊಕ್ಕರು ತುರುಕರು
ಕತ್ತಿ ಭಲ್ಲೆಗಳ ಚಿಮ್ಮುತಲಿ ||೧೬೪||

ಸತ್ತ ರಾಮನು ಲವುಡಿ ಮತ್ತೇಕೆ ಹೆಣಗಿರಿಯೆಂದು
ಹೊಕ್ಕರು ನಾಕು ಮುಖದಿ ತುಳಿಸಿ ।
ಎದೆಗೆಡದೆ ನುಗ್ಗಿನ್ನು ಬರುವ ತುರುಕರ ನೋಡಿ
ಹೊಡೆದಾನು ಲಿಂಗಣ್ಣ ಕಾಕ ||೧೬೫||

ಕಡಿಕಡಿ ಎನುತಲಿ ಕಡಿದು ಸಾವಿರ ತಲೆಯ
ಎರಡು ಕೋಟೆಯನು ಹಾಕಿದರು।
ಮರಳುವ ಕಾಲಕ್ಕೆ ಮತ್ತೊಬ್ಬ ಅಲ್ಲಿಯಖಾನ
ಹೊಡೆದನು ಎದೆಯ ಗುಂಡಿಗೆ ||೧೬೬||

ಸೊರಗುತ ಸೊಕ್ಕುತ ಬಂದು ತಮ್ಮೊಡೆಯಗೆ
ಕರ ಮುಗಿದು ನಡೆದ ಯಮಪುರಕೆ ||೧೬೭||

ರಾಮಭೂಪಾಲನ ಮದದಾನೆ ಬಿದ್ದಿತುಯೆಂದು
ಏರಿದನು ಬಾಣೆಯ ಮುದ್ದ।

ಮೂರು ಸಾವಿರ ಬಡಿದ ನೀರ ಕೇಳದ ತೆರದಿ
ಮೀರಖಾನನ ಎತ್ತಿ ಹೊಡೆದ ||೧೬೮||

ಕುಣಬಿ ಮೋರೆನುತಲಿ ರಣದೂಲಖಾನನು ಬಂದು
ಸೇದಿಡಲಾಗ ಹಣೆ ಕಣ್ಣು ಒಡೆಯೆ।
ಅರೆಜೀವದೊಳು ಪೋಗಿ ರಣದೂಲನಪ್ಪಳಿಸಿ
ಒಡನೆ ನಡೆದ ಯಮನಪುರಕೆ ||೧೬೯||

ನೇಮಿಖಾನರಿಗೆಲ್ಲ ಗಂಡನೆನಿಸಿಕೊಂಬ
ರಣಭೂಪಾಲನ ಬಂಟ।
ನಾ ಬಂದೆ ನೋಡೆಂದು ಎಡಗೈಯ ಹಂಪನು ಹೊಕ್ಕು
ಮೂರುಸಾವಿರ ಸದೆ ಬಡೆದ ||೧೭೦||

ಮಾರಿ ಕೋಣನ ತೆರದಿ [ಜಯಭೇರಿ] ಹೊಡೆವೆನು
ಎಂದು ಎದ್ದ ಪಂಡಿತಖಾನ।
ಮೂರಂಬ ಸೇದಲು ತೋರಿ ಬೆನ್ನೊಳು ಮೊನೆ
ಸೇರಲು ಯಮನಪಟ್ಟಣವ ||೧೭೧||

ರಾಮನ ಬಂಟರು ಈ ಬಗೆಯಲು ಎಲ್ಲರು
ಲಯವಾದವರು ಕಾದಿ ದೊಟ್ಟಿ।
ಸೂರ್ಯನ ಮಗನೂರು ತಾವಿಲ್ಲ ದೊರೆಗೆಲ್ಲ
ಹೋಗಿ ನಿಲ್ಲಲು ನರಗುರಿಯ ||೧೭೨||

ನೋಡಿದ ಯಮರಾಜ ಭೂಮಿಯು ಗಜ ಪ್ರಜೆಯು
ಮಾಡಿದನೆ ಮಹಾದೇವ ಮುನಿದು।
ರಾಮನ ರಣಜಗಳ ಪ್ರಧಾನಿ ಗುಪ್ತನು ಪೇಳೆ
ಏನಿವರ ಆದಾಯ ತನಗೆ ||೧೭೩||

ಗುಡುಗುಡಿಸುತಲಾಗ ಯಮನು ಕೋಪದಿ ಎದ್ದು
ಶೃಂಗರಿಸಿದ ತನ್ನ ವಾಹನವ।
ಹರುಷವಿಲ್ಲದೆ ಏರಿ ಬೀಗಮುದ್ರೆಯ ಹೊರಿಸಿ
ಹರನ ವಾಲಗಕೆ ಬರಲಾಗ ||೧೭೪||

ಬಂದನು ಭೂತನ ಇಂಬಿಟ್ಟು ಮುಖದೊಳು ಬ್ರಹ್ಮ
ವೊಂದು ವಾಡಿವನ ವಾಲಗಕೆ।
ಮುಂದಿಟ್ಟು ಮುದ್ರೆಯ ದಿಗ್ ಪ್ರಣಿತನಾಗಿ
ಮುಂದೆನಗೆ ಸಾಗದು ಮಣಿಹ ||೧೭೫||

ಮಡಗಿದ್ಯಾತಕೆ ಉಂಗುರ ಎಡರೇನು ನೀ ಬಂದ
ನುಡಿಯೆಂದು ಶ್ರೀ ಗುರು ಕೇಳೆ।
ಬರುವುದು ಕಡೆಯಿಲ್ಲ ಧರೆಯೆಲ್ಲ ಓರಂತೆ
ನಗರೆಲ್ಲ ತುಂಬಿ ಹೊರಗಿಹುದು ||೧೭೬||

ನರನಿಗೆ ಈ ಬಗೆಯ ಜಯಪ್ರದವನಿತ್ತರೆ ನೀವು
ಹರಿಯದೆ ಬಿಡು[ವ]ನೆ ಜಗವ।
ಸರಿ ಅವನ ಆಳ್ವಿಕೆ ಸಂಪೂರ್ಣ ಹಿಂದಣ
ಹಗೆಗಾಗಿ ಲಯವ ಮಾಡೆ ||೧೭೭||

ಕರೆಸಿಕೊಂಬೆವು ಎಂದು ನೀ ಬೀಕೆಸಲು ಅರೆಗಳಿಗೆ
ನಡೆ ನಿನ್ನ ಪುರಕೆನಲು ಹರನು।
ಕಿಡಿಗಣ್ಣ ರೂಪನ ಹೊಗಳುತ ಕಾಲನು
ಕಲಿಪಾರ್ಥನೆನಬಹುದು ಅವನ ||೧೭೮||

ಕಾಲನೊ ಕೊಲುವೊಡೆ ಭೀಮನೊ ಬಲುಮೆಯಲಿ
ಕಾಲಭೈರವನೊ ಕಾಳಗದಿ।
ವಾಲ್ಮೀಕಿ ತನುಜೆಯ ಕುಮಾರನೊ ಲವಕುಶ
ಶಾಲಿವಾಹನನೊ ಶರಭವನೊ ||೧೭೯||

ಹೀಗೆಂದು ಹರನೊಳು ಕೊಂಡಾಡುತ್ತ ಯಮರಾಜ
ಮೂಲವೆ ನಿಮ್ಮ ಸೂತ್ರಗಳು।
ಮೀರಿದ ವೈರಿಗಳ ತಾನಲ್ಲದೆ ಕೊಲಿಸುವೆ
ಏಳಲು ಶರಮುಗಿದು ಕಾಲ ||೧೮೦||

ಯಮನಾಗ ನಡೆಯಲು ಮೊದಲಿನ ಮಣಿಹಕ್ಕೆ
ಎಡಬಲನ ನೋಡಿ ರಾಮ।

ಮಡಿದರೆ ತಮ್ಮಯ ಹಮ್ಮೀರ ಬಂಟರು ಎಂದು
ಒಡನೆ ನೂಕಿದನು ತುರಗವನು ॥೧೮೧॥

ಸಿಡಿಲಿನಾರ್ಭಟೆ ಮಾಡಿ ತುರಗ ಬೊಲ್ಲನ ನೂಕೆ
ಕಿಡಿಗರೆದು ಪೌಜಿಗೆ ಹೊಗಲು।
ಸದೆ ಬಡಿದ ದಂಡನು ಸೊಪ್ಪೆಯನರಿದಂತೆ
ಒರಗಲು ನೆಲ ಬಿಡೆ ತೆರದಿ ॥೧೮೨॥

ಇಚ್ಚಾರಿ ಪಚ್ಚಾರಿ ಒಕ್ಕಲು ಕಳಲೆಯ
ಉಪ್ಪಿಗೆ ಕೊರೆದಿಡುವ ತೆರದಿ।
ರಕ್ತದ ಹಳ್ಳಗಳು ನಡೆವುತ್ತ ಅಲ್ಲಲ್ಲಿ
[ಕೆ]ಚ್ಚನಾಗಲು ರಣಭೂಮಿ ॥೧೮೩॥

ಕಡಕೊಂಡು ಬರುವಂಥ ಭರದೊಳು ನೇಮಿಯು
ಬಂದು ಇದಿರಿಗೆ ಸಿಕ್ಕಲು ರಾಮುಗನ।
ಮೊದಲೆರಡು ಕಾರ್ಯದಲಿ ಕೈ ತಡೆದು ಪಾಲಿಸಿದೆ
ಪಡಿಯ ತೀರಿಸುವೆ ಇಂದಿವನ ॥೧೮೪॥

ಗಂಡನು ಅಳಿವಾಗ ಹೆಂಡಿರು ಇರಸಲ್ಲ
ತುಂಡೇಳೆ ಹೊಡೆದ ನೇಮಿಯನು।
ಕಂಡಳು ಮಾತಂಗಿ ಕೆಟ್ಟೆ ಬೆಂದೆ ನೇಮಿ
ಕಂಡರು ವೈಕುಂಠವೆನುತ ॥೧೮೫॥

ಜೀವರಾಶಿಯ ಕೊರೆದು ಎದ್ದಳು ಮಾತಂಗಿ
ಸೀಳಿಸುವ ಎನ್ನ ಸುರಿತಾಳ।
ನೇಮಿ ಕೊಂದವ ಎನ್ನ ಕಂಡರೆ ಬದುಕೆನು
ಬಾಗಿದೆ ಶಿರವ ರಾಮನಿಗೆ ॥೧೮೬॥

ಛೀ ರಂಡೆ ಹಗಲೆಲ್ಲ ಹೇಳಬೇಡೆಲೆ ಹೆಣ್ಣ
ನಾ ಬೇರೆ ಕಡಿಯೆ ಶಿವನಾಣೆ।
ವಾರ್‍ಯಾಗಿ ನಡೆಯಲು ಮಾದಿಗಿತ್ತಿಯು ಹೊಡೆಯೆ
ನೂರಾರು ಸರಳು ನಡುವಂತೆ ॥೧೮೭॥

ಗಾಯ ಮಾರಕವಾಗೆ ರಾಮ ತೇಜಿಯ ಮೇಲೆ
ಕುಮಾರನಾಗ ಮೂರ್ಛೆಯಲಿ।
ರಾಯ ಕಾಟನು ಕಂಡು ಹೊಗಲೇರಿ ಖಾನರನು
ಬಾರಿ ಬಾರಿಯಲಿ ಹೊಡೆಯುವನು ||೧೮೮||

ಕಡಿಕಡಿ ಎನುತಲಿ ಕಾಕೊಡೆದು ಖಾನರ ತಲೆಯ
ಹಾಕಿದನು ಜಗಲಿ ಮುನ್ನೂರು।
ಏಕಾಂಗಿ ಎನ್ನೊಡೆಯ ನೀ ನೋಡು ನಿನ್ನಯ
ಋಣವ ಸಾಕಿದ ಸುಖವ ದಕ್ಕಿಸುವೆ ||೧೮೯||

ಕಡಿಯಲು ಖಾನರ ಪಡೆಯ ದಂಡನು ಕಾಲ
ಹೊಡೆದ ನಾಗಯ ಸರಳೊಳಗೆ।
ಎಳೆಯುತ ಮುಂಗಾಲ ದೊರಗಸುಕ್ಕಿಲಿ ಬಂದು
ಒರಗಿತು ತಮ್ಮನ ತುರಗ ||೧೯೦||

ಬೀಳುತೇಳುತ ಬಂದು ಸೇರಿ ಬೊಲ್ಲನು ಕರವ
ನೀಡಿದ ತಮ್ಮನ ಮುಖಕೆ।
ಊರಿಗೆ ಕಳುಹಿದೆ ಉಳಿಯಲೆನ್ನುತ ನಾನು
ಓಡಿ ಬಂದೆಯೆ ಎನ್ನ ಮೇಲೆ ||೧೯೧||

ರಾಮಗೆ ಅತಿ ದುಃಖವೇರಿ ಮೈಯನು ತಡಹಿ
ನೀರ ತರಿಸಿ ಹೃದಯ ಕೊರಗೆ।
ಏಳೇಳು ಜನ್ಮಕ್ಕೆ ಎನ್ನಗಲದೆ ಬಾರೆಂದು
ಸೇರೆನಲು ವೈಕುಂಠ ಸ್ಥಳವ ||೧೯೨||

ಗೊಲ್ಲರ ಮಗನೆಂದು ಊರೆಲ್ಲ ಆಡಲು ಭೇದ
ವಿಲ್ಲದೆ ನಾವು ಬಾಳಿದೆವೊ।
ನೋಡಣ್ಣ ನಿನ್ನಯ ಬೆನ್ನೊಡನೆ ನಿನ್ನೊಡನೆ ಬರುವೆ
ಬೀಡಾರ ಮಾಡಿಸು ಈರ್ವರಿಗೆ ||೧೯೩||

ತಾನಿರುವ ಪರಿಯಂತ್ರ ತಲೆಯ ಖಾನರ ಕರಕೆ
ಹೀನಬಾರದೆ ಕೊಟ್ಟರೆನುತ।

ಹಾರಿಸಿ ಅಂತರದಿ ಎದ್ದರೆ ಕರದೊಳು ಹಿಡಿದು
ಮತ್ತೇರಿದ ತುರುಕರ ಮೇಲೆ ॥೧೯೪॥

ಏರಿದ ಮುಖದೊಳು ಸಾವಿರ ತಲೆ ಹೊಡೆದು
ಬೀಜಕೆ ಏಳ್ನೂರ ಬಿಡಲು।
ಮೀರಲು ಗತಿಸಾರ ಜ್ಞಾನ ತಪ್ಪುತ ಬರಲು
ಸಾಗಲು ಗೂಗಿಕಲ್ಲಿಗೆ ॥೧೯೫॥

ಎಡಬಲದಿ ಕಾದಿರ್ದ ಬಡವ ಬಲ್ಲರನೆಲ್ಲ
ಒಡನೆ ಸಾಗಿಸು ಕುಮ್ಮಟಕೆ।
ಇಳಿದು ತನ್ನಯ ತುರಗ ವೀರಮಂಡಿಯ ಹೂಡಿ
ಹರಕ್ಷತಿಗಳನು ಮಾಡುವರು ॥೧೯೬॥

ಏರಿದ ತುರಗವನಿಳಿದು ನಿತ್ರಾಣದಲಿ
ಕಾರ್ಯಕೆ ನಡೆವಂತೆ ಕುಳಿತು।
ಮೂರು ರಾಯರ ಗಂಡ ತನಗೇರಿ ನೋಡೆ ಯಾರು
ಆಡಲು ಬೊಲ್ಲ ದೈನ್ಯದಲಿ ॥೧೯೭॥

ಕೊಡಬೇಡ ನಿನ್ನಯ ವೈರಿ ಸುರಿತಾಳಗೆ
ಬಿಡದಯ್ಯ ಹೀನಾಯ ನಿಮಗೆ।
ಹೊಡೆ ನಿನ್ನ ಬಳಿಯೊಳು ಬಿಡುವೆ ಪ್ರಾಣವನೆಂದು
ಇಡಲಾಗ ಮೊರೆಯನು ತುರಗ ॥೧೯೮॥

ತುರುಗವ ಕೊಲ್ವರೆ ಬರವೆನಗೆ ಕರಗಳು
ಹರನ ಕೃಪೆಯಿಂದ ಶಿಲೆಯಾಗು।
ಗುರುತಿರಲಿ ಕುಮ್ಮಟದಿ ಎಪ್ಪತ್ತುರಾಯರ ಬೊಲ್ಲ
ನರಪಡೆಯು ಇರುವ ಕಾಲದಲಿ ॥೧೯೯॥

ರಾಮನ ಕದಲ[ದೆ] ತುರಗ ಕಲ್ಲಾಗೆ
ಮೇಲವನು ಪಂಚತ್ವನೆಯ್ದು।
ಕಾಮನ ಕೊಂದವನ ಧ್ಯಾನಮಾಡಲು ಬಂದು
ಮೇಘದಿ ನಿಂದು ನೋಡುವರು ॥೨೦೦॥

ದುಃಖವೆಂಬುವುದಿಲ್ಲ ನೇತ್ರಲೋಚನ ಪೂಜೆ
ಹೆಚ್ಚಾಗಿ ಮಾಡಿರಲು ಈ ಮರಣ।
ಕೊಟ್ಟನಲ್ಲದೆ ಗುರುವು ವ್ರತಭ್ರಷ್ಟಗೆ ಬರದೆಂದು
ನಕ್ಕನು ರಾಮ ನಲಿನಲಿದು ॥೨೦೧॥

ದ್ವಾರಾನುವತಿಯಾಗಿ ಶ್ರೋಣಿತ ಸುರಿಯಲು
ನೋಡಿ ರಾಮಗೆ ಊರೆ ಜಟ್ಟಂಗಿ।
ಯೋಗಿಯಾಗುವೆನು ಸತ್ಯ ನೀಯಾಗೊ
ಮತ್ಯಾಕೆ ಅ[ನ್ಯ]ದ್ವಾರವನು ॥೨೦೨॥

ಕಾಲಭೈರವನಾದ ರಣದೊಳು ತಾನಳಿದು
ಬೇಡಿದ ಮರಣ ತನಗಾಯ್ತು।
ಪನ್ನಂಗಧರನೊಲುಮೆ ಪರಿಪೂರ್ಣ ಇರಲು ತನಗೆ
ಮುನ್ನವೆ ಬಂತು ಈ ಮರಣ ॥೨೦೩॥

ರಾಮಗೆ ಪರಮಾತ್ಮ ಸೇರಿ ಸನ್ನಿಧಿಯಾಗೆ
ಶ್ರೀ ಗೌರಿಕಾಂತನ ನೆನೆದು।
ಪಾಲಿಪುದು ಸರ್ವತ್ರ ದ್ರೋಹಿ ತಪ್ಪನು ಕಾದು
ಹಾದು ಸದ್ಗತಿಯ ತೋರುವುದು ॥೨೦೪॥

ಗುರುದೇವ ಮನೆದೇವ ಜಟ್ಟಂಗಿ ರಾಮನ ನೆನೆದು
ಕಳುಹಿದ ಪರಮಾತ್ಮ ರಾಮ।
ಹರನಡಿಗಳ ಸೇರಿ ಪದ್ಮ ತಾನಾಗಲು
ಸುರರು ಹೂಮಳೆಯನು ಕರೆದು ॥೨೦೫॥

ಕಂಡರು ಮಾತಂಗಿ ಗೂಗಿಕಲ್ಲನು ಹತ್ತಿ
ನೋಡಲು ನಂತರ ಬರುವವೆನುತ।
ಮಾರುತನ ಸುಳುಹಿಗೆ ಹಾರ್‍ಯಾಡೆ ಸರಗಳು
ಓಡುವರು ರಾಮ ಬಂದನೆನುತ ॥೨೦೬॥

ಕಳೆಯುಗುಂದದ ಕಾಂತಿ ಧೈರ್ಯಗುಂದದ ಎದೆಯು
ಹೊಳೆಯುಗುಂದದ ಮೈಬಣ್ಣ।

ತಳತಳಿಸುವ ಮನ್ಮಥನ ರೂಪನು ಕಂಡು
ಗಿಡ ಮರೆಯಗೊಂಡು ಓಡುವರು ||೨೦೭||

ಸುತ್ತಿ ಖಾನರು ಕವಿದು ಜ್ಯೋತಿಗೆ ಕರವಿಡಿದು
ಎತ್ತೆತ್ತಿ ನೋಡುವರು ಶಿರವ।
ಉಟ್ಟಿ ದಟ್ಟಿ ಪಟ್ಟಿ ಚುಂಗ ಹಾರಲು ನೋಡಿ
ದುತ್ತೇರಿ ಛಾಯೆಂದು ಓಡೆ ||೨೦೮||

ಬೆದಬೆದರಿ ಬೀಳುತ ಎದೆ [ಜೀ]ವ ಬಡಕೊಂಡು
ಇರುವರು ಖಾನರಿಗೊಂದು ಕಾಗೆ।
ತಲೆಯೊಳು ಕುಳಿತರೆ ಮರ[ಗಯಾ] ಎನುತಲಿ
ಒದಗಿ ಬಂದಳು ಮಾತಂಗಿ ||೨೦೯||

ಇದಿರಾಗಿ ನಿಲ್ಲಲು ಎದೆ ಧೈರ್ಯ ಸಾಲದೆ
ದೂರದೊಳು ನಿಂದು ನೋಡುವರು।
ಬಿಟ್ಟೇನೆ ಎಲೆ ರಾಮ ಕೊಟ್ಟ ಛಲಪದನೆಂದು
ಕುತ್ತಿಗೆ ಕೊರೆಸಿದಳು ರಂಡೆ ||೨೧೦||

ಶಿರವೆನಲು ಕಳೆದು ಧೂಮಕೇತುವು ಬಂದು
ಶಿರದೊಳು ಪೊಗಲು ಕಳೆ ಸೂಸೆ।
ಮನವೇಗವಾದಂತೆ ತುರಗದ ಮೇಲಿಟ್ಟು
ದಿನ ಎಂಟರೊಳಗೆ ಮುಟ್ಟೆನಲು ||೨೧೧||

ರಾಯ ರಾಮನ ಡಿಂಬ ಮಾದಿಗಿತ್ತಿಯು ಆಗ
ಕಾಣಿಸಲು ಅಗ್ನಿಪ್ರಯೋಗ ।
ರಾಯ ಸುರಿತಾಳನಿಗೆ ಸುದ್ದಿ ತಟ್ಟಿದ ಮೇಲೆ
ಹೋಗುವನೆಂದಲ್ಲಿ ಬೀಡ ||೨೧೨||

ಹತ್ತೆಂಟು ದಿವಸದಿ ತಟ್ಟಲು ತಲೆ ಡಿಳ್ಳಿ
ಪಟ್ಟಣದ ಸದರಿಗೆ ಮಡಗಿ।
ಕೊಟ್ಟರು ಸುದ್ದಿಯ ಸುರಿತಾಳ ಕಮ್ಮಟದ
ಪಟ್ಟಕರನ ತಲೆ ಬಂತು ||೨೧೩||

ಚತುರಂಗ ಬಲ ಸಾರಿ ಲಖಿಯ ತಳುಹೋಪ
ಸುತನೂರ ಸೂರ್‍ಯನ ಮಗನ ಗತವಾಗೆ ।
ಸಮಯದಿ ಬಿಜಿ ಮದಲಿಗೆ ಬಟ್ಟ
ಗತಿಗೆಟ್ಟು ಕತ್ತೆ ಏಳ್ನೂರು ॥೨೧೪॥

ವಜೀರಾನಾರು........ ಇದ್ದರು ಬೇಡ
ಎದ್ದರು ನೇಮಿ ಮಂತ್ರಿಗೆ।
ಸ್ವರ್ಗಕೊಪ್ಪದ ಮೂಳಿ ಮಾತಂಗಿ ಒಬ್ಬಳು ಉಳಿದು
ಚಿತ್ರಮಾಡಿ ದಂಡ ನೆಲಕೆ ॥೨೧೫॥

ರಾಮನ ಕತ್ತಿಗೆ ಭೂಮಿ ನಡುಗೋದು ಪಾಶ್ಚ
ಮಾನವರ ಮಾತು ಇರಲತ್ತ।
ಈ ಪರಿಯೊಳು ಕಡೆಗೆ ಲಯವಾದವೆನ್ನುತ ಕಹಳೆ
ರಾಯ ಸುರಿತಾಳ ಕಲಿ ಬೀರ ॥೨೧೬॥

ದಂಡೆಲ್ಲ ಮೃತವಾಗೆ ಮುಂಡೆ ಮಾತಂಗಿ ನಮ
ಗಂಜಿ ನುಗ್ಗಿದಳು ಇದಿರಾಗಿ।
ಕಂಡೆಯವ ಜಾಡಿಸಿ ತೆಗೆದು ಒಡೆಯುತಿರ್ದನು ಅವಳ
ಭಂಡ ಮೂಳಿಯು ಮಲೆಯ ತೋರೆ ॥೨೧೭॥

ರಣವಿಜಯನಾದವನು ರಂಡೆಯ ಕಡಿಯುವನೆ
ಚಂದ್ರ ಸೂರ್‍ಯರಿರಲು ಅಪಕೀರ್ತಿ।
ಬಂದವಗೆ ಸುಜ್ಞಾನ ಬಿಟ್ಟು ಇಮ್ಮತವಾಗೆ
ಅಂಬ ಸೇದಿದಳು ಮುನ್ನೂರ ॥೨೧೮॥

ಪಡೆದ ಲಿಖಿತವು ಮೀರಿ ಅಳಿದನಲ್ಲದೆ ರಾಯ
ಮಡಿಕೆ ಮೂಳಿಗೆ ಬೇರೆ ಸಾಯ।
ತಿಳಿಯಬಾರದೆ ಸ್ತ್ರೀಯ ಕಡಿಯದೆ ತಲೆಗೊಟ್ಟ
ಕಡಿಯೆ ಮಾತಂಗಿ ದೊ[ಡ್ಡಿ]ತಲ್ಲ ॥೨೧೯॥

ಬಾದುರನೇನಾದ ರಾಮನ ಮಾತಿರಲಿ
ಊರೇನಾಯಿತು ಕುಮ್ಮಟವು।

ರಾವಣನ ಲೆಂಕಿಗೆ ಮಿಗಿಲಾಗಿ ರಾಜಿಸುವುದು
ಗೋರಿ ಬೀಡುವದೊಕಾರಪವು ||೨೨೦||

ಬಾದುರನ ತರುವುದಕೆ ನೀವೆ ನಡೆಯಲು ಕಾಣೆ
ನಿಮ್ಮಂಥರು ಮುಳುಗಿದ ಬಳಿಕ।
ಆರೆರಡು ಲಕ್ಷಗಳ ಗೋರಿ ಸಾಲದು ಎಂದು
ವೀರ ಕುಮ್ಮಟವು ಕುಣಿಯುವುದು ||೨೨೧||

ಬೆನ್ನ ಬಿದ್ದವಗಾಗಿ ತನ್ನ ಪ್ರಾಣವನಿತ್ತ
ಧರ್ಮಾತ್ಮ ಅವನು ಹರಿಶ್ಚಂದ್ರ।
ತಾ ಸಾಯೆ ಘನವಲ್ಲ ಅಭಿಮಾನ ಕೊಂದುದು
ನೀವು ತಿಳಿಯದೆ ಅವನು [ಅಡ]ಗಿದನು ||೨೨೨||

ಮಗಳು ಬಿಬ್ಬಿಯ ಸಹ ಒಡಗೊಂಡು ಸುರಿತಾಳ
ಸದರಿನೊಳಗೆ ಬಂದು ಕುಳಿತ।
ಕಳೆ ಕಾಂತಿಯಿಂದೆಸೆವ ತಲೆಯನು ಕಂಡು ಸುರಿತಾಳ
ಕೊಲಬಹುದೆ ಇಂಥ ಚೆಲುವನ ||೨೨೩||

ತಲೆಯ ಕಾಣುತ ಬಿಬ್ಬಿ ಜಲವೊರತು ನಯನದಿ
ಪಿಡಿದಳು ಗಲ್ಲ ಬಮ್ಮವನು।
ಉಳಿದೊಮ್ಮೆ ಬಂದಿರಲು ಕುಲಗೆಡಲು ಮುಡಿಪಾಗಿ
ಅರಸ ಮಾಡಿಸುವೆ ಡಿಳ್ಳಿಗೆ ||೨೨೪||

ಕೈಸೆರೆಯ ಪಿಡಿ ತರದೆ ಕೊಂದರೆ ಪಾಪಿಗಳು
ಹಿಂದಣ ಹಗೆಯೆ ಮಹವಾಗಿ।
ಕಂದರ್ಪ ಬಾಣನ ಕಲೆ ಹೆಚ್ಚೆ ಬಿಬ್ಬಿಗೆ
ಮಂಡೆಯ ಬಿಗಿಯಪ್ಪುವಳು ||೨೨೫||

ಬಿಡು ಮಗಳೆ ಅಪಕೀರ್ತಿ ಮೂರು ಕಾಲ ಮಾನವರಲ್ಲಿ
ಕಡೆಗಂಡನುವಂತೆ ಎಡಲ।
ಒಡಗೊಂಡು ಬರುವಾಗ ನುಡಿಯೆ ಚರರಿಗೆ ರಾಯ
ತಲೆಯ ಅಗ್ನಿಯ ಕಾಣಿಸೆಂದ ||೨೨೬||

ಕಿಚ್ಚಿಗೆ ಹೊಯ್ವರೆ ಹತ್ತೆಂಟು ಚರರು ಬಂದು
ಕಿತ್ತರೆ ಮಲಕದೆ ಬರಲು।
ಸಿಟ್ಟೆಲ್ಲ ಬರಲಾಗ ಮತ್ತೆ ಸಾವಿರ ಮಂದಿ
ಕಿತ್ತರೆ ನಗುತ ಗರ್ಜಿಸಲು ॥೨೨೭॥

ರಣಭೂತ ಬಂದಿಹುದು ಬೆದರಿ ಓಡುತ ಬಿದ್ದು
ಅಳಿದರು ಹಲ ಕೆಲ ಜನರು।
ಅಗ್ನಿ ಕೂಡಲು ನಿಮ್ಮ ಬಿಬ್ಬಿ ಹಾದರ ಉಂಟೆ
ಬೊಬ್ಬೆಲಿ ಕೊಲುವೆ ಡಿಳ್ಳಿಯನು ॥೨೨೮॥

ಗದ್ದಲಿಸಿ ಕಾಕೊಡೆಯೆ ಬೆದರಿ ಓಡ್ವರು ಬಿದ್ದು
ಎದ್ದರು ಹಲ ಕೆಲವು ಅಳಿದು।
ಹೋಯೆಂದು ಕೂಗಲು ಕೋಟಿ ಸಿಡಿಲಿನ ಭರದಿ
ಕೇಳುತಲೆ ಮೃತವನೈದಿದರು ॥೨೨೯॥

ಸಾಲದೆ ಕುಮ್ಮಟದಿ ಕೋಟಿ ಖಾನರ ತಿಂದು
ಹಾಳೊಡಲು ತುಂಬದೆ ಬಂತು।
ಒಂದಿರುಳು ರಾತ್ರಿಗೆ ಹನ್ನೆರಡು ಸಾವಿರ ತಿಂದು
ಮತ್ತೊಂದು ರಾತ್ರಿಗೆ ಡಿಳ್ಳಿಯನು ॥೨೩೦॥

ಪಟ್ಟಿವ ತಿಂಬುವದು ಪಾಪಿ ತರುವರೆಯೆಂದು
ಕೊಟ್ಟ ರಾ[ಯ]ಗೆ ಸುದ್ದಿ।
ಕರಿಘಟೆಗಳಿಂದಲಿ ತುಳಿಸಿ ಹಾಕು[ವೆ]ನೆಂದು
ಸುರಿತಾಳ ಉರಿದೆದ್ದು ಪೇಳೆ ॥೨೩೧॥

ಏಳುಕೋಟಿ ಆನೆಗಳ ಒತ್ತಿಕೊಳುತಲಿ ಬರಲು
ರಾಮ ನಗುತ್ತಿರಲು ಪಕಪಕನೆ।
ಕುಂಜರಕೆ ವೈರ್‍ಯಾದ ಭೇರುಂಡನೈದಾನೆ ಬನ್ನಿ
ತುಂಬುವುದು ವಿಧಿವಾಸ ನಿಮಗೆ ॥೨೩೨॥

ಮುಂಗಾರ ಸಿಡಿಲಂತೆ ಆರ್ಭಟಿಸಿ ಬೊಬ್ಬೆಯ ಕೊಡಲು
ಒಂದು ಯೋಜನ ಓಡಿದವೊ।

ರಾಮನು ಕಂಡನು ಓಡಿದ ಮದಕರಿಯ
ಸಾವ ಕಾಲವು ಬಂತು ನಮಗೆ ॥೨೩೩॥

ಮಾರಿಯ ತಂದು ಮನೆ ಹೊಗಿಸಿದ ಬಗೆಯೊಳು
ಬೊಬ್ಬಿಟ್ಟು ಕೊಲ್ಲುವ ಪಾಪಿ।
ಹಸ್ತಿಕಾಯದ ಇದಿರೆ ಹುಚ್ಚಾಗ ಬೇಡಯ್ಯ
ಸುರಿತಾಳನೋಲೆಯ ಬರೆದು ಅವನ
ಬಂಟನ ಕರದೊಳು ಕಳುಹೆ ॥೨೩೪॥ *

ವಾಲೆ ಕಾಗದ ಬರೆದು ಸೇರಲು ದಿನ ಎಂಟ
ರೊಳಗೆ ರಾಜೇಂದ್ರ ಕಂಪಿಲಗೆ ।
ಕೊಡುವಲಾಸವನ ಶೀಘ್ರದಿ ಬಂಟನ ಕಳುಹಿ ॥೨೩೫॥

ಬಾಲನ ತಲೆಯನು ಸಾಗಿಸಿಕೊಡುವೆನು
ಮುಖನೋಡಿ ಪಡೆದವರು ಗತಿಮಾಡಿ ॥೨೩೬॥

ಬಂಟರ [ಮ]ಲ್ಲಗೆ ಕೊಟ್ಟು ಉಡುಗೊರೆಯನು
ಪುತ್ರನ ತಲೆಯ ತಾರೆನಲು।
ಹತ್ತೆಂಟು ದಿವಸಕ್ಕೆ ಹೊಕ್ಕು ಡಿಳ್ಳಿಯ ಪುರವ
ಸೃಷ್ಟಿಪತಿಗೆ ಕರವ ಮುಗಿದು ॥೨೩೭॥

ಕಾಣುತ ಬಂಟನ ಸುರಿತಾಳ ಪಾಶ್ಚ
ಶಾಲು ಸಕಲಾತಿಯ ಕೊಟ್ಟ।
ನಾಳಿನ ಮುಂಜಾನೆ ನಿಮ್ಮ ರಾಯನ ತಲೆಯ
ಸಾಗಿಸಿ ಒಯ್ಯೆ ಕೊಡುವುದು ॥೨೩೮॥

ಬುದ್ಧಿ ಎನ್ನುತಲಿ ಬಂಟ ಎದ್ದು [ತಾ] ನೋಡಿ
ಮಬ್ಬಿಗೆ ಸೂರ್ಯನು ತಾಯ।
ಗರ್ಭವ ಪೋಗಲು ....
ನಿದ್ರೆ ಮಾಡುವ ಬಂಟನನು ॥೨೩೯॥

---

* ೨೩೪, ೨೩೫, ೨೩೬ ಈ ಮೂರು ಪದ್ಯಗಳು ಸೇರಿಕೊಂಡಂತಿದೆ(ಸಂ)

ತಲೆ ಬಂದು ಸ್ವಪ್ನದಿ ಎ[ಡೆ]ಯೊಳು ಕುಳಿತಂತೆ
ಸಕಲಾತಿದೊಟ್ಟು ಭಯದೊಳಗೆ।
ತಪ್ಪು [ತಡಿ] ಹೊಗಳಲು ಬಡಿದು ಹಾಕುವೆ ನಿನ್ನ
[ಶಕ್ತಿ]ಯಿಲ್ಲದಿರಲು ನಡೆಯೆನಲು ||೨೪೦||

ರಾಯ ಸುರಿತಾಳನ ಚಾವಡಿಗೆ ಕರೆತರಿಸಿ
ಪೇಳಲು ಬಿರಿದೆತ್ತೆ ಬರುವೆ।
ತೋರಲು ಭಯ ಪೋಗು ಹಾಳು ಮಾಡುವೆ ನಾನು
ಮೂರಾರು ದಿನದೊಳು ಡಿಳ್ಳಿ ||೨೪೧||

ಎದೆಗೆಟ್ಟು ಎಚ್ಚತ್ತು ಪರಿದೋಡಿ ಬಂಟನು
ವಿವರವ ಪೇಳೆ ಸುರಿತಾಳಗೆ।
ಕಿರಿಮುಖ ಮನಸಾಗಿ ಹಳವಾಗಿ ಹೋದರೆ ಸಾಕು
ಬರುವೆನೆನುತ ಸದರ ಅಡರೆ ||೨೪೨||

ಆರು ರಾಯರ ಗಂಡ ಮೂರು ರಾಯರ ಮಿಂಡ
ಪಾಳ್ಯೆಗಾರರಿಗೆ ಎದೆಶೂಲ।
ಧುರಧೀರ ಮಾರ್ತಂಡ ಭಲರೆ ಚಾಂಗುಲ ರಾಮ
ಎನಲಾಗ ಕಿಲಿಕಿಲಿ ನಗಲು ||೨೪೩||

ಕಾಯವಿರಲು ಡಿಳ್ಳಿ ಆ[ಳ]ಬೇಕೆನುತಿರ್ದೆ
ಮೀರಿತು ಮುಂಚಲು ಮರಣ।
ಅಳಿದರೆ ಬಿಡಲಿಲ್ಲ ಲಯವಾದರು ದಿನ ಎಂಟು
ಭೂಮಿ ಆರ್ಭಟಿಸೆದ್ದು ಬರಲು ||೨೪೪||

ಡಿಳ್ಳಿಯ ಹೊರಟನು ಮತ್ತಲ್ಲಿ ಬಂಟರ ಮಲ್ಲ
ನಿಲ್ಲದೆ ನಡೆವ ದಾರಿಯಲಿ।
ಅಲ್ಲೊಂದು ವಿಶಾಲ ಸ್ಥಳಕೆ ಹೋಗಲು ತಲೆಯ
ನೆಲದಲ್ಲಿಡಲು [ಎ]ಡೆಯ ಬಿಟ್ಟ ||೨೪೫||

ಮರನೇರಿಕೊಂಡಿರಲು ಮರಳಿ ಬಂಟನು ಬಂದು
ಕರೆಯಲು ಮದೊಳ್ಳೆ ಎನಲು।
ಅಡಗಲಿಲ್ಲವೆ [ಜಿ]ದ್ದ ಎನಲು ವಾಕ್ಯವ ನಿಂತು
ನಡೆದಾನ ಕಳೆದು ತಾನತ್ತ ॥೨೪೬॥

ಬಂಟನ ಶಾಪದಲಿ ವಚನ ವಾಕ್ಯವು ಅಡಗಿ
ಹೊಕ್ಕನು ತಲೆಗೊಂಡು ಗುಡಿಯ।
ಇಟ್ಟು ಜಟ್ಟಂಗಿಯ ರಾಮನ [ದೇ]ವಾಲ್ಯದಲಿ
ಅಷ್ಟವಿಧಾರ್ಚನೆ ಮಾಡಿದನು ॥೨೪೭॥

ಖಾನರೆಲ್ಲರು ಬಂದು ಕರಮುಗಿದು ಜಟ್ಟಂಗಿ
ಪೂಜೆಯ ಮಾಡಿ ಶೋಕದಲಿ।
ಏನಮ್ಮ ಮಾತಂಗಿ ಹೋಗುವ ಡಿಳ್ಳಿಗೆ
ವಾಲೆ ಬಂದಿತ್ತೀಗೇನಲು ॥೨೪೮॥

ಕೃತಯುಗದಿ ರೇಣುಕಿ ತ್ರೇತಾರದೊಳು ಬಂದು
ರಘುನಾಥನ ಕಡಿ ತಾಟಕಿಯು।
ದ್ವಾಪರದೊಳು ದ್ರೌಪತಿಯಾಗಿ ಜನಿಸಿದೆ
ಈ ಕಲಿಗೆ ರತ್ನಾಜಿಯಾಗೆ ॥೨೪೯॥

ಮಾಡಿದ ಕರ್ಮಕ್ಕೆ ಮಂಡೆ ಹೊಡೆದನು ಎನ್ನ
ರಾಮ ಬಿಡಲಿಲ್ಲ ಸತ್ಯವನು।
ಪ್ರಾಣ ಉಳಿಯಲು ಬಿಡದೆ ತಾಯೆಂದು [ಭಾ]ವಿಸಿದ
ನಾನವನ ಕೊಂದು ಇರಸಲ್ಲ ॥೨೫೦॥

ಬಾಲನ ಒತ್ತಿಲಿ ನಾನಿರುವೆ ಮಾತಂಗಿ
ದೇವಿ ಎಂದೆನಿಸಿ ಹೊರಕುಲದಿ।
ಖಾನರಿಗೆ ಕರಮುಗಿದು ಕೊಂಡದೊಳಗೆ ಮುಳುಗಿ
ಕಾಯ........ಳಿಗೆ ನಡೆವೆ ॥೨೫೧॥

ತಾಯಿ ತಂದೆಗಳೆಲ್ಲ ಊರವರು ಸಹ ಭೇರಿ
ಕಹಳೆಯ ವಾದ್ಯದಲಿ ಆರತಿಯ।
ಪರಿಯ ಕಾಯಿ ಕದಳಿ ಫಲದಿ...........
ಹೀರಾ........... ಬರಲು ॥೨೫೨॥

ಹರಿಹರದೇವಿಯು ತರಳನ ಮುಖ ನೋಡಿ
[ಕು]ಲಕೆಲ್ಲ ದೇವರಾಗೆಂದು।
ಕರ ಮುಗಿದು ದೊರೆಯು ಕಂಪಿಲ ಮಂತ್ರಿ
ಧುರಧೀರ ರ ..... ಯರರ ॥೨೫೩॥

ಹುಟ್ಟು ಬಂಜೆರಿಗೆಲ್ಲ ಮಕ್ಕಳಿತ್ತು ದೃಷ್ಟದೊಳಗೆ
ಪೂಜೆ ಕೊಳ್ಳೆ ಸತ್ಯದಿ।
ನಡದಾನೆ ಮಾತಾಡುತ್ತ ಹೆತ್ತ ಮಕ್ಕಳ ಹೆಸರು
.... ॥೨೫೪॥

ನಾಡೊಳಗಿರುವಂಥ ಬೇಡರ ಕುಲ ಬಂದು
.... ರೆ ಜಾತ್ರೆ ನಡೆಸಿ।
ಬೇಡಿದ ವರಗಳನು ಕೊಡುವ ರಾಮನು
ತಾನುಎನಿಸಿ ಮೆರೆವ ॥೨೫೫॥

ರಾಮಯ್ಯ ತಾ ದೇವರೆನ್ನಿಸಿಕೊಂಡು
ಪೂಜೆಗೊಳ್ಳುತ ನಿರುತದಿ।
ರಾಯ ಕಂಪಿಲ ತನ್ನ ಮೊಮ್ಮಗನ.........
......ಳುವ ರಾಜ್ಯ ಸುಖದೊಳಗೆ ॥೨೫೬॥

ರಾಮನ [ಕಥೆಯನ್ನು] ಕೇಳಿದ ಜನಕೆಲ್ಲ
ಭೂಮಿದಾನವನಿತ್ತ.......ನೆಂದ
ಪರಿಪೂರ್ಣ ಹರನ ಕೃಪೆಯೊಳು
[ಭೃಂ]ಗಿ ಒಲುಮೆಯಲಿ ॥೨೫೭॥


ಹರ ಹರ ಶಿ[ವ ಹರಿ] ಬ್ರಹ್ಮರಿಗೆಲ್ಲ ಜಯ
ಜಯವೆ ಹರಿಸೂದೆ ಭವರೋಗ।
ಉಪಯೋಗ ವಸ್ತುಕವ ಧರಿಸುವೆ
.....ನಡೆಸಿ ಕೈಲಾಸಕ್ಕೆ ॥೨೫೮॥

ಧರೆಗಧಿಕ ಹಂಪೆಯ ವರಪುಣ್ಯ ಕ್ಷೇತ್ರದ
ಕರುಣಿಸು ವಿರುಪಾಕ್ಷಲಿಂಗ।
ತರಳ ರಾಮನು ಈಗ ಡಿಳ್ಳಿಯಿಂದಲಿ ಬಂದು
ಸತ್ಯದಿ ಕೈವಲ್ಯಕೆ ನಡೆಯೆ ॥೨೫೯॥*

❖❖

---

* + ಅಂತು ಸಂಧಿ ೧೯ಕ್ಕಂ [>೨೦ಕ್ಕುಂ] ಪದನು ೪೨೮೩ಕ್ಕಂ ಮಂಗಳ ಮಹಾಶ್ರೀ. [ತ]ಪ್ಪಂ ಬರೆದಾತನೆಂದು ಬೈಯಲು ಬೇಡ ತಪ್ಪಕ್ಕು ಶುದ್ಧಮಕ್ಕಂ । ತಪ್ಪುಳ್ಳೊಡೆ ತಿದ್ದಿಕೊಂಬುದು ಉತ್ತಮ ಪುರುಷರು ॥೨೬೦॥ ಬಾಲಕೊಮಾ[ರ] ರಾಮನ ಸಾಂಗತ್ಯ ಶುಕ್ರೋರ ಅಮೃತಗಳಿಗೆ ಮಧ್ಯಾಹ್ನ ಮುಹೂರ್ತ ಮಂಗಳವು । ಲೀಲೆಯಿಂದಲಿ ಬರೆದ ಚೀಲನಹಳ್ಳಿಯ ಮರುಳಸಿದ್ದಪ್ಪನ ಮಗನು ॥೨೬೧॥ ರುಧಿರೋದ್ಗಾರಿ ಸಂವತ್ಸರದಲ್ಲಿ ಮಾರ್ಗಶಿರ ಬಹುಳ ಐದರಲು । ಬುದ್ಧಿ ಮರಿದೇವರು ಪ್ರಿಯೋಕ್ತಿಯಿಂದಲಿ ದೊಡ್ಡ ತಿಮ್ಮಣ್ಣಗೆ ಬರಕೊಟ್ಟನು ॥೨೬೨॥ (ಮೂ).



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಮಾಜಿ ಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359